ESTD. 1906

ಸ್ವದೇಶಾಭಿಮಾನಿ

SWADESHABHIMANI

ಬ್ರಿಟನಿಗೆ ಜಯವನ್ನೊದಗಿಸಲು ಮಹಿಳೆಯರೂ
ರಣರಂಗಕ್ಕೆ ಹೊರಡುತ್ತಾರೆ

KANNADA ILLUSTRATED WEEKLY

ಅಡಿಕೆಯ ಮಹಾಳಿ ಅಥವಾ ಕೊಳೆರೋಗ

ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಅಡಿಕೆ ವ್ಯವಸಾಯಗಾರರಿಗೆ ಭಯಂಕರ ರೋಗದಿಂದಾದ ಹಾನಿಯು ಈಗ ಚೆನ್ನಾಗಿ ತಿಳಿದುಬಂದಿದೆ. ಕಳೆದ ಕೆಲವು ವರ್ಷಗಳಲ್ಲಾದ ನಷ್ಟವು ಸಾಧಾರಣ ಸೇಕಡಾ ೪೦ರಿಂದ ೫೦ರ ವರೆಗೆ ಆಗಿರಬಹುದೆಂದು ಊಹಿಸಲ್ಪಟ್ಟಿದೆ. 'ಫಂಗಸ್' ಎಂಬ ಅಣುಗಳಿಂದ ಈ ರೋಗವು ಉಂಟಾಗಿ, ಅಡಿಕೆಯು ಅಲ್ಲಲ್ಲಿ ಹತ್ತಿಯಿಂದ ಮುಚ್ಚಲ್ಪಟ್ಟಂತೆ ಕಾಣಿಸಿ, ಕೊಳೆತು ಉದುರಿ ಹೋಗುವುದು. ಮಳೆಗಾಲವು ಈ ಫಂಗಸ್ ಅಣುಗಳ ಜೀವನಕ್ಕೂ ಹೆಚ್ಚುವಿಕೆಗೂ ಬಹಳ ಅನುಕೂಲವಾದ ಸಮಯವು. ಈ ರೋಗದ ನಿವಾರಣೋಪಾಯಗಳು ಕೂಡ ಈ ಜಿಲ್ಲೆಗಳ ರೈತರಿಗೆ ಚೆನ್ನಾಗಿ ತಿಳಿದಿರುವುದು.

ಈ ರೋಗವನ್ನು ತಡೆಗಟ್ಟಲು, 'ಬೋರ್ಡೋಮಿಕ್ಶ್ಚರ್' ಔಷಧಿಯನ್ನು ಎರಡಾವರ್ತಿ ಚಿಮುಕಿಸಬೇಕು. ಮಳೆಗಾಲದ ಮೊದಲು ಒಂದು ಸಾರಿಯೂ, ಸಾಧಾರಣ ಆರು ವಾರಗಳ ನಂತರ ಎರಡನೇ ಸಾರಿಯೂ, ಔಷಧಿ ಪ್ರಯೋಗ ಮಾಡಬೇಕು. ಮಳೆಗಾಲವು ಸಮೀಪಿಸುವಾಗ ತೋಟಗಾರರು ಔಷಧಿ ಪ್ರಯೋಗದ ಬಗ್ಗೆ ಬೇಕಾಗುವ ಚಿಮುಕಿಸುವ ಯಂತ್ರ, ಮೈಲುತುತ್ತು, ಸುಣ್ಣ ಇತ್ಯಾದಿಗಳನ್ನು ಸಿದ್ಧಪಡಿಸಿಟ್ಟುಕೊಂಡು ಮಳೆಬೀಳುವ ಮೊದಲೇ ತಮ್ಮ ಎಲ್ಲಾ ಮರಗಳಿಗೂ ಮದ್ದು ಚಿಮಿಕಿಸಿ ಮುಗಿಸಬೇಕು. ತಮ್ಮ ತೋಟದಲ್ಲಿ ಅಥವಾ ಗ್ರಾಮದಲ್ಲಿ ರೋಗವು ತಲೆದೋರುವ ವರೆಗೆ ಮದ್ದು ಹಾಕುವುದನ್ನು ಮುಂದುವರಿಸುವ ಅಭ್ಯಾಸವು ಕೆಲವು ರೈತರಲ್ಲಿದೆ. ಒಮ್ಮೆ ರೋಗವು ಪ್ರಾರಂಭಿಸಿತೆಂದರೆ ಸಂಪೂರ್ಣ ಬೆಳೆಯನ್ನು ಉಳಿಸಲು ಸಾಧ್ಯವೇ ಇಲ್ಲ. ಮರದ ಶಿಖರದೊಳಗೆ ರೋಗವು ಹೊಕ್ಕಿತೆಂದರೆ ಮರವು ಕೂಡಾ ಸಾಯುವುದು. ಆದುದರಿಂದ ಕಳೆದ ವರ್ಷದ ರೋಗದಿಂದ ಕೆಟ್ಟು ಹೋದ ಗೊನೆಗಳನ್ನೂ, ಉದುರಿ ಹೋದ ಕಾಯಿಗಳನ್ನೂ ಒಟ್ಟುಮಾಡಿ ರಾಶಿಹಾಕಿ ಸುಟ್ಟ ನಂತರ, ಈ ಸಾರಿ ಮದ್ದನ್ನು ಕೊಡಬೇಕು. ಮಳೆಬಿದ್ದ ನಂತರವೇ ಈ ರೋಗವು ಪ್ರಾರಂಭವಾಗುವುದರಿಂದ, ಮಳೆಗಾಲದ ಪ್ರಾರಂಭದ ಮೊದಲೇ ಮದ್ದು ಕೊಡುವುದು ಲಾಭಕರ. ಮಳೆಯ ಪ್ರತಾಪವು ಚೆನ್ನಾಗಿ ತಲೆದೋರಿದ ನಂತರ ಮದ್ದು ಕೊಡಲು ಅವಕಾಶ ಸಿಗದೆ ಅಸಾಧ್ಯವಾಗಬಹುದು. ಮಳೆಯ ಬಿಗುವು ಕಡಿಮೆಯಾಗುವ ವರೆಗೆ ಕಾಯುತ್ತಿದ್ದರೆ, ಅಷ್ಟರೊಳಗೆ ರೋಗವು ತನ್ನ ಆಹುತಿಯನ್ನು ತೆಕ್ಕೊಂಡಿದ್ದು, ಬೆಳೆಯನ್ನು ಉಳಿಸುವುದು ಕೈಮೀರಿ ಹೋಗುವುದು.

ವಿಳಂಬಮಾಡುವುದು ಹಾನಿಕರವು. ಔಷಧಿ ಪ್ರಯೋಗಕ್ಕೆ ಈಗಲೇ ಸಿದ್ಧರಾಗಿ, ಮಳೆಗಾಲದ ಮೊದಲೇ ಒಂದಾವರ್ತಿ ಚಿಮುಕಿಸುವುದನ್ನು ತೀರಿಸಿಬಿಡಿರಿ.

'ಬೋರ್ಡೋಮಿಕ್ಶ್ಚರ್' ಔಷಧಿಯನ್ನು ತಯಾರಿಸುವ ಕ್ರಮವು ಗ್ರಾಮ ಸ್ಥರ ಬೋರ್ಡಿನ ಮತ್ತು ಪಂಚಾಂಗದಲ್ಲಿ ವಿವರಿಸಲ್ಪಟ್ಟಿದೆ. ಅವಶ್ಯಬಿದ್ದರೆ ಸ್ಥಳೀಯ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರೊಡನೆ ಬೇಕಾದುದನ್ನು ಕೇಳಿ ತಿಳಿದುಕೊಳ್ಳಿರಿ.

ವಿಶ್ರಾಂತಿ ಕೊಡುವ ನಿದ್ರೆಗಾಗಿ
ಆರೋಗ್ಯಕರ ಪಾನೀಯ
ಓವಲ್ಟಿನ್‌ನ್ನು
ಉಪಯೋಗಿಸಿರಿ

ಇಡೀ ದಿನದ ಆರೋಗ್ಯಕ್ಕಾಗಿ, ಇಡೀ ರಾತ್ರಿಯ ವಿಶ್ರಾಂತಿಕರ ನಿದ್ರೆಗಾಗಿ 'ಓವಲ್ಟಿನ'ನ್ನು ಕುಡಿಯಿರಿ. ನರಗಳನ್ನು ಸುಖಗೊಳಿಸಲು, ಗಾಢನಿದ್ರೆಯನ್ನುಂಟುಮಾಡಲು, ಮೆದುಳು ಮತ್ತು ಶರೀರಗಳನ್ನು ಸಮಾಧಾನ ಸ್ಥಿತಿಯಲ್ಲಿರಿಸಲು, ಓವಲ್ಟಿನಿಗಿಂತ ಉತ್ತಮ ಪಾನೀಯ ಬೇರೊಂದಿಲ್ಲವೆಂದು ಸಾವಿರಾರು ಮಂದಿ ತಮ್ಮ ಅನುಭವದಿಂದ ಕಂಡುಹಿಡಿದಿರುವರು.

ಹಾಗಾಗಿ ನಿಮ್ಮ ಊಟಹೊತ್ತಿಗೂ, ನಿದ್ದೆ ಮಾಡುವ ಮೊದಲೂ ಬಿಸಿ ಬಿಸಿ ಓವಲ್ಟಿನನ್ನು ತೆಗೆದುಕೊಳ್ಳಿರಿ

ಒಳ್ಳೆಯ ಬಾರ್ಲಿ ಮತ್ತು ಉತ್ತಮ ಧನದ ಹಾಲುಗಳನ್ನು ಸೇರಿಸಿ, ಅನೇಕ ನೈಸರ್ಗಿಕ ವಿಟಮಿನುಗಳಿಂದ ಮತ್ತು ಆಹಾರವಸ್ತುಗಳಿಂದ ಇದು ಕೂಡಿರುತ್ತದೆ. ಓವಲ್ಟಿನ್ ಪ್ರಕೃತಿ ಸಹಜವಾದ ಆರೋಗ್ಯ ಪಾನೀಯವಾಗಿರುತ್ತದೆ. ಇದರ ಕೃತ್ರಿಮ ತಯಾರಿಕೆಗಳನ್ನು ನಂಬಬೇಡಿರಿ

★

ಎಲ್ಲಾ ಮದ್ದು ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕಿದೆ.

ಓವಲ್ಟಿನು ಒಳ್ಳೆಯ ಜೀರ್ಣಕರವಾದ ಆರೋಗ್ಯ ಬಲಕಾರೀ ಔಷಧ. ಇದನ್ನು ಬಿಸಿಯಾಗಿಯೂ ತಣ್ಣಗಾಗಿಯೂ ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಅತ್ಯಂತ ಸುಲಭವಾಗಿರುತ್ತದೆ. ಪ್ರತಿಯೊಂದು ಓವಲ್ಟಿನ್ ಡಬ್ಬಿಯಲ್ಲಿ ತಯಾರು ಮಾಡುವ ಕ್ರಮವು ಬರೆದಿದೆ

'ಓವಲ್‌ಟಿನ್'
OVALTINE

ಓವಲ್ಟಿನ್ ಬಿಸ್ಕುಟುಗಳು—ಆರೋಗ್ಯಕರ, ಹಿತಕರ, ಜೀರ್ಣಕರಗಳಾಗಿವೆ. ನೀವು ಕೊಂಡುಕೊಳ್ಳಬಹುದಾದ ಬಿಸ್ಕಿಟುಗಳಲ್ಲಿ ಓವಲ್ಟಿನ್ ಬಿಸ್ಕುಟುಗಳು ಅತ್ಯುತ್ತಮವಾದವು. ಇವುಗಳಲ್ಲಿಯೂ ಓವಲ್ಟಿನಿನ ಗುಣಗಳು ಇರುತ್ತವೆ. 4 ಔನ್ಸಿನ ಮತ್ತು 8 ಔನ್ಸಿನ ಪೇಕೇಟುಗಳಾಗಿಯೂ 1 ರಾತಲಿನ ಡಬ್ಬಿಯಾಗಿಯೂ ಮಾರಾಟಕ್ಕಿವೆ

ಡಿಸ್ಟ್ರಿಬ್ಯೂಟರ್ಸ್:—
ಗ್ರೇಹಮ್ಸ್ ಟ್ರೇಡಿಂಗ್ ಕಂ. (ಇಂಡಿಯಾ) ಲಿ.
10, ಟೇಂಕ್ ಸ್ಟ್ರೀಟ್, ಬೊಂಬಾಯಿ ಹಾಗೂ ಕಲ್ಕತ್ತ, ಮದರಾಸು, ಕರಾಚಿ ಮತ್ತು ರಂಗೂನ್
OV/34/40

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

4—7—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೪—೭—೧೯೪೧

ರಾಜೇಂದ್ರ ಪ್ರಸಾದರು 'ಶಾಂತಿದಳ'ದ ಸೂಚನೆ ಕೊಡುತ್ತಾರೆ

ಮರಣಪರ್ಯಂತ ಸರ್ವತ್ಯಾಗಕ್ಕೂ ಕಷ್ಟಸಹಿಷ್ಣುತೆಗೂ ಸಿದ್ಧರಿರಬೇಕು!

ಅಹಿಂಸಾ ರೀತಿಗಳಿಂದ ದೊಂಬಿಗಳನ್ನು ನಿಲ್ಲಿಸಲಾಗುವುದಿಲ್ಲವೆ?

"ಮುಂದಿನ ಹೋರಾಟಕ್ಕೆ ಎಲ್ಲರೂ ಸಿದ್ಧರಾಗುವರು"

ಶಾಂತಿ ದಳಗಳನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಲಿದೆ. ಅಹಿಂಸಾ ರೀತಿಯಲ್ಲಿ ಶಾಂತಿ ದಳಗಳು ಕಾರ್ಯವನ್ನು ನಡೆಸಿ ಜನತೆಯಲ್ಲಿ ಶಾಂತಿಯನ್ನು ಏರ್ಪಡಿಸಬಹುದು. ಜಾತೀಯ ದೊಂಬಿಗಳಲ್ಲಿ ಹೊಡೆದಾಡುತ್ತಿರುವ ಎರಡು ಪಂಗಡಗಳ ಮಧ್ಯೆ ಶಾಂತಿ ದಳಗಳು ನಿಂತು, ಪರಸ್ಪರ ಹೊಡೆದಾಟವನ್ನು ತಪ್ಪಿಸಬೇಕು. ಹೊಡೆದಾಡುವ ಎರಡು ಪಂಗಡಗಳನ್ನು ಪ್ರತ್ಯೇಕವಾಗಿ ಮಾಡಬೇಕು. ಶಾಂತಿ ದಳಗಳ ಈ ಕಾರ್ಯಕ್ರಮವು ಈಗಿನ್ನೂ ಆರಂಭಾವಸ್ಥೆಯಲ್ಲಿದೆ. ಶಾಂತಿ ದಳಕ್ಕೆ ಈಗಾಗಲೇ ಹೆಚ್ಚು ಮಂದಿಯನ್ನು ಸೇರಿಸಿಕೊಳ್ಳುವುದು ಸುಲಭ ಕಾರ್ಯವಾಗಿರಲಾರದು. ಆದರೆ ಈ ಮಾರ್ಗದಲ್ಲಿ ಕಾರ್ಯಕ್ರಮವನ್ನು ರೂಪಿಸಿ ಮುಂದರಿಸಿದರೆ, ಅದು ಸಫಲವಾಗಬಹುದು.

ಹೀಗೆಂದು ಬಾಬು ರಾಜೇಂದ್ರ ಪ್ರಸಾದರು ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ. ಅವರು ಮುಂದುವರಿಸಿ ಹೀಗಂದಿರುವರು.

ಈ ಮೂಲಕ ಕಾರ್ಯ ಸಾಧನೆಯಾಗುವುದೆಂದೂ ಶಾಂತಿನೆಮ್ಮದಿಗಳು ನೆಲೆಗೊಳ್ಳುವವೆಂದೂ ದೃಢನಂಬಿಕೆಯುಳ್ಳ ಕೆಲಸಗಾರರು ಅಹಿಂಸೆಯ ಅನುಸರಣೆಯಲ್ಲಿಯೂ, ಮರಣ ಪರ್ಯಂತ ಸರ್ವತ್ಯಾಗಕ್ಕೂ, ಕಷ್ಟಸಹಿಷ್ಣುತೆಗೂ ಸಿದ್ಧರಾಗಿರಬೇಕು. ಶಾಂತಿ ದಳಕ್ಕೆ ಸೇರಿದ ಕೆಲಸಗಾರರು ಹಿಂಸಾಯುತವಾದ ಪ್ರತೀಕಾರ ಭಾವನೆಯಿಲ್ಲದೆ ಅಹಿಂಸೆಯಿಂದ ಶಾಂತಿಸ್ಥಾಪನೆಗಾಗಿ ಸರ್ವ ಪ್ರಯತ್ನ ಪಡಬೇಕು. ಈ ಕಾರ್ಯದಲ್ಲಿ ಮರಣ ಸಂಭವಿಸಿದರೂ ಸಿದ್ಧರಿರಬೇಕು. ಶಾಂತಿ ದಳಗಳ ರಚನೆ ಮತ್ತು ಮುಂದಿನ ಕಾರ್ಯಕ್ರಮ ಇವುಗಳ ಬಗ್ಗೆ ಸರ್ವ ಏರ್ಪಾಡುಗಳು ನಡೆಯುವುದೆಂದೂ, ಇದಕ್ಕೆ ಯಾರದೂ ಅಡ್ಡಿ ಬರಲಾರದೆಂದೂ ನಾನು ಭರವಸೆವುಳ್ಳವನಾಗಿದ್ದೇನೆ.

ಅಹಿಂಸಾ ರೀತಿಯಿಂದ ದೊಂಬಿಗಳನ್ನು ನಿಲ್ಲಿಸುವುದು

ಜಾತೀಯ ದೊಂಬಿಯು ಹಿಂದೂ, ಮುಸ್ಲಿಂ ವೈಷಮ್ಯವೂ ಹೆಚ್ಚುತ್ತಿರುವುದಕ್ಕೆ ಹಿಂದುಗಳೂ ಮುಸ್ಲಿಮರೂ ಬೇರೆ ಬೇರೆ ಜನಾಂಗಗಳೆಂಬ ಪ್ರಚಾರ ನಡೆಯುತ್ತಿರುವುದೇ ಮುಖ್ಯ ಕಾರಣ. ಒಂದು ಸ್ಥಳದಲ್ಲಿ ದೊಂಬಿ ನಡೆದರೆ ಆ ವಿಚಾರಗಳೆಲ್ಲವೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಇವುಗಳನ್ನು ಓದಿ ಜನಮನವು ಭಿನ್ನಾಭಿಪ್ರಾಯವುಳ್ಳದ್ದಾಗುತ್ತದೆ. ಇದರಿಂದ ಇತರ ಕಡೆಗಳಲ್ಲಿ ಸಹಿತ ವೈಷಮ್ಯವು ಹೆಚ್ಚಿ ದೊಂಬಿಗಳು ನಡೆಯುವುದಕ್ಕೆ ಮತ್ತೊಂದು ಕಾರಣ.

ಜಾತೀಯ ದೊಂಬಿಯನ್ನೂ ವೈಷಮ್ಯವನ್ನೂ ಅಡಗಿಸಬೇಕೆಂದು ಎಲ್ಲರೂ ಸೇರಿ ಏಕಮತ್ಯದಿಂದ ಈಗ ಪ್ರಯತ್ನಪಟ್ಟರೆ, ದೊಂಬಿಯ ಭಾವನೆಯನ್ನೂ ವೈಷಮ್ಯವನ್ನೂ ನಿರ್ಮೂಲವಮಾಡುವುದು ಕಷ್ಟವಲ್ಲ. ಭಿನ್ನಾಭಿಪ್ರಾಯಗಳು ಏನೇ ಇರಲಿ ಅವು ಜಾತೀಯ ಕಾರಣದಿಂದಾಗಲಿ, ರಾಜಕೀಯವಾಗಿರಲಿ, ಅಥವಾ ಆರ್ಥಿಕ ಕಾರಣದಿಂದಾಗಲಿ, ಈ ಭಿನ್ನಾಭಿಪ್ರಾಯಗಳೆಲ್ಲವನ್ನು ಪರಸ್ಪರಸಂಧಾನ ಮತ್ತು ಚರ್ಚೆಗಳಿಂದ ಪರಿಹರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಸಂಧಾನ ಮತ್ತು ಚರ್ಚೆಗಳಿಂದ ಸಾಧ್ಯವಾಗದಿದ್ದರೆ ಪಂಚಾಯಿತಿ ಕ್ರಮದ ಮೂಲಕ ಈ ಭಿನ್ನಾಭಿಪ್ರಾಯಗಳನ್ನು ತೀರ್ಮಾನ ಮಾಡಿಕೊಳ್ಳಬಹುದು.

ಎಲ್ಲದಕ್ಕಿಂತಲೂ ಮುಖ್ಯವಾಗಿ ಮೊದಲು ಎಲ್ಲರಿಗೂ ಬೇಕಾದುದು ಶಾಂತಿ ಮತ್ತು ನೆಮ್ಮದಿ. ಇದನ್ನು ಎಲ್ಲರೂ ಗಮನಿಸಬೇಕು. ಈ ಬಗ್ಗೆ ತಕ್ಕ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು. ಇದಕ್ಕೆ ಸಮ್ಮತಿ ಇರುವವರೆಲ್ಲರೂ ಒಪ್ಪಿದರೆ ಮತ್ತು ಈ ಬಗ್ಗೆ ಕಾರ್ಯಕ್ರಮವು ನಡೆದರೆ ಶಾಂತಿಯೇರ್ಪಟ್ಟು, ಇದರ ಪರಿಣಾಮವು ಕ್ಷಿಪ್ರದಲ್ಲಿಯೇ ಕಂಡುಬರುವುದು.

ಕಾಂಗ್ರೆಸಿಗೆ ಈಗ ಹೊಸ ಯಾವ ಕಾರ್ಯಕ್ರಮವೂ ಇಲ್ಲ. ಜಾತೀಯ ಸೌಹಾರ್ದತೆಯೂ ಜಾತೀಯ ಐಕ್ಯಮತ್ಯವೂ ಎಲ್ಲದಕ್ಕಿಂತಲೂ ಮುಖ್ಯವಾಗಿ ಅಗತ್ಯವಾದುದೆಂದು ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಮೂಲಭೂತವಾಗಿ ಇದ್ದೇ ಇದೆ.

"ಮುಂದಿನ ಹೋರಾಟಕ್ಕೆ ಎಲ್ಲರೂ ಸಿದ್ಧರಾಗಬೇಕು"

"ಭಾರತದ ರಾಷ್ಟ್ರೀಯತೆಯ ಶತ್ರುಗಳು ಭಾರತದಲ್ಲಿ ವಿವಿಧ ಜನಾಂಗಗಳು ಮತಗಳು ಮತ್ತು ಸಂಸ್ಕೃತಿಗಳಿರುವುದರ ಕಾರಣದ ಮೇಲೆ ದೇಶವನ್ನು ಒಡೆಯಲು ಯತ್ನಿಸುತ್ತಿರುವರು. ಆದರೆ ಈ ವ್ಯತ್ಯಾಸಗಳೆಲ್ಲಾ ಕೇವಲ ಅಸತ್ಯವಾದುವುಯೆಂದು ಇಡೀ ದೇಶವು ಬಲ್ಲುದು. ಭಾರತ ದೇಶಕ್ಕೆ ಮಹತ್ತಾದ ಪ್ರಾಚೀನತೆಯಿದೆ. ಮಹತ್ತಾದ ಭವಿಷ್ಯವು ಅದರ ಮುಂದಿದೆ" ಎಂಬದಾಗಿ ಡಾ। ರಾಜೇಂದ್ರ ಪ್ರಸಾದರು ವಿಶಾಖ ಪಟ್ಟಣದ ಪೌರಸಭೆ, ಅಲ್ಲಿನ ಜಿಲ್ಲಾ ಬೋರ್ಡು, ಜಿಲ್ಲಾ ಹರಿಜನ ಸೇವಕ ಸಂಘ, ನಿರುದ್ಯೋಗಿಗಳ ಸಂಘ ಮತ್ತು ವಿಶಾಖಪಟ್ಟಣ ಕಾಂಗ್ರೆಸ್ ಕೆಲಸಗಾರರ ಕೂಟ ಇವುಗಳ ಸಂಯುಕ್ತ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

"ನಾವು ಹಿಂದೆ ಒಂದಾಗಿದ್ದೆವು, ಈಗ ಒಂದಾಗಿದ್ದೇವೆ. ಇನ್ನು ಮುಂದೆಯೂ ಒಂದಾಗಿಯೇ ಇರುವೆವು" ಎಂದು ಅವರು ಹೇಳಿದರು.

"ನಮ್ಮ ಪ್ರಾಚೀನ ಇತಿಹಾಸವನ್ನು ನೋಡಿದರೆ ನಾವು ಇನ್ನಾವ ರಾಷ್ಟ್ರಕ್ಕೂ ಯಾವ ಅಂಶದಲ್ಲಿಯೂ ಹಿಂದಿರಲಿಲ್ಲ. ಹಡಗುಗಳ ತಯಾರಿಕೆ ಭಾರತಕ್ಕೆ ಹೊಸದಲ್ಲ. ನಾವು ಈಗ ಕೆಟ್ಟ ಕಾಲದಲ್ಲಿ ಸಿಕ್ಕಿದ್ದೇವೆ. ಅನೇಕ ಅಂಶಗಳಲ್ಲಿ ನಾವೀಗ ಇತರ ರಾಷ್ಟ್ರಗಳಿಗಿಂತ ಹಿಂದಾಗಿದ್ದೇವೆ" ಎಂದು ಅವರು ತಿಳಿಸಿದರು.

ಸತ್ಯಾಗ್ರಹದ ಚಳವಳವನ್ನು ಅವರು ಪ್ರಸ್ತಾಪಿಸುತ್ತಾ ಇದು ಬಹುಕಾಲ ನಡೆಯುವ ಹೋರಾಟವೆಂದರು. "ಪ್ರಪಂಚದ ಇತಿಹಾಸದಲ್ಲಿಯೇ ಬಹಳ ವಿಷಮವಾದ ಕಾಲದಲ್ಲಿ ನಾವಿದ್ದೇವೆ. ನಮ್ಮ ಬಹು ಮಂದಿ ಮುಖಂಡರುಗಳು ಸೆರೆಮನೆಯಲ್ಲಿದ್ದಾರೆ. ಇದು ಸಿದ್ಧತೆಯ ಕಾಲ; ಹೋರಾಟವು ಬರುವಾಗ ಅದಕ್ಕಾಗಿ ನಾವು ಪೂರ್ಣ ಸಿದ್ಧರಾಗಿರಬೇಕು" ಎಂದು ತಿಳಿಸಿದರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸ್ವದೇಶಾಭಿಮಾನಿ

ತಾರೀಕು 4—7—1941

ಮುನ್ಶಿಯವರ ರಾಜಿನಾಮೆ

ಆತ್ಮ ಸಂರಕ್ಷಣೆಯ ಕಾರ್ಯದಲ್ಲಿ ಅಹಿಂಸಾತ್ಮಕ ಪ್ರತಿಭಟನೆಮಾಡುವ ಕಾಂಗ್ರೆಸಿನ ಹಾಗೂ ಗಾಂಧಿಜಿಯವರ ತತ್ವದಲ್ಲಿ ಭಿನ್ನಾಭಿಪ್ರಾಯವುಂಟಾಗಿ ಬೊಂಬಯಿ ಸರಕಾರದ ಮಾಜಿ ಮಂತ್ರಿಗಳಾದ ಮುನ್ಶಿಯವರು ಕಾಂಗ್ರೆಸಿಗೆ ರಾಜಿನಾಮೆಯಿತ್ತ ಸಂಗತಿಯು ಇತ್ತೀಚೆಗೆ ಭಾರತದ ರಾಜಕಾರಣದಲ್ಲಿ ಬಹಳ ಪ್ರಾಮುಖ್ಯವಾದೊಂದು ವಿಷಯವಾಗಿದೆ. ಇದರಿಂದ ಮಹಾತ್ಮಾಜಿಯವರ ಮನೋವಾಕ್ಕಾಯ ಪರಿಪೂರ್ಣ ಅಹಿಂಸೆಗೆ ರಾಜಕಾರಣದಲ್ಲಿ ಸಾಕಷ್ಟು ಪ್ರಾಧಾನ್ಯತೆಯು ಕೊಡಲಾಗುವುದಿಲ್ಲವೆಂಬ ಒಂದು ಭಿನ್ನ ಪಕ್ಷವು ಕಾಂಗ್ರೆಸುಸಂಸ್ಥೆಯಲ್ಲಿ ಒಡಮೂಡಿದಂತಾಗಿದೆ. ಕಾಂಗ್ರೆಸಿನವರಲ್ಲಿ ಗಾಂಧಿಜಿಯವರ ಶುದ್ಧ ಅಹಿಂಸಾ ಪಾಲನೆಯ ವಿಷಯವಾಗಿ ಬಹಳ ಸಂಶಯಾತ್ಮರಿದ್ದರೂ, ಒಂದು ರೀತಿಯ ಶ್ರದ್ಧೆ, ಶಿಸ್ತು ಪಾಲನೆಗಳ ದೃಷ್ಟಿಯಿಂದ ಹಲವರು ಗಾಂಧಿಜಿ ಹಾಕಿಕೊಟ್ಟ ದಾರಿಯಲ್ಲಿಯೇ ಮೂಕ ಮೌನದಿಂದ ಹಿಂಬಾಲಿಸುತ್ತಿರುವಾಗ, ಮುನ್ಶಿಯಂತಹ ಪ್ರಾಮುಖ್ಯ ವ್ಯಕ್ತಿಯು ಈಗ ಗಾಂಧಿಜಿಯ ಅಹಿಂಸಾ ಪಾಲನೆಯ ವಿಷಯ ಭಿನ್ನ ಮತವನ್ನು ಪ್ರಕಟಪಡಿಸಿ ಕಾಂಗ್ರೆಸಿನ ಹೊರ ಬಂದ ವಿಚಾರವು ಹಲವು ಸಂಶಯಾತ್ಮರಿಗೆ ಒಂದು ಖಂಡಿತ ನಿರ್ಧಾರ ಕೈಕೊಳ್ಳುವರೆ ಸಹಾಯಮಾಡಿದಂತಾಗಿದೆ.

ಗಾಂಧಿಜಿಯು ಸಾರುವ ಅಹಿಂಸೆಯು ಮನೋವಾಕ್ಕಾಯಗಳಿಂದ ಪರಿಪೂರ್ಣವಾದ ಶುದ್ಧ ನಿಶ್ಚಲ ಅಹಿಂಸೆಯಾಗಿದೆ. ಅವರ ಸೂತ್ರದಿಂದ ಬಂಧಿತವಾದ ಕಾಂಗ್ರೆಸು ಸಂಸ್ಥೆಯು, ತನ್ನ ಸದಸ್ಯರನ್ನು, ಆ ತರದ ಅಹಿಂಸಾ ಪಾಲನೆ ಮಾಡತಕ್ಕದ್ದೆಂಬ ನೈತಿಕ ನಿಯಮದಿಂದ ಬಂಧಿಸಿದೆ. ಹೀಗಿರಲು ಕಾಂಗ್ರೆಸು ಸಂಸ್ಥೆಯ ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಕೊಡದೆ ಮುನ್ಶಿಯವರು ತನ್ನ ಭಿನ್ನಮತದಂತೆ ಪ್ರವರ್ತಿಸುವುದು ಸಾಧ್ಯವಿರಲಿಲ್ಲ. ಗಾಂಧಿಜಿ ಮತ್ತೆ ಮುನ್ಶಿಯವರೊಳಗೆ ನಡೆದ ಪತ್ರವ್ಯವಹಾರದಿಂದಲೂ ಅದೇ ಅಭಿಪ್ರಾಯವು ವ್ಯಕ್ತವಾಗುತ್ತದೆ. ತನ್ನ ತತ್ವವನ್ನು ಸಾಕಷ್ಟು ಮನಸ್ಸಿಗೊಪ್ಪಿ ಅಂಗೀಕರಿಸದೆ ತನ್ನ ಮೇಲಿನ ಭಕ್ತಿ ಭಾವನೆಯ ಸಲುವಾಗಿ ಅನುಸರಿಸುವಂತಹ ವಿಧೇಯತೆಯು ಗಾಂಧಿಜಿಯವರಿಗೂ ಸಹಿಸಲಾರದುದರಿಂದ, ಮುನ್ಶಿಯವರು ಹೀಗೆ ಭಿನ್ನಮತ ಪ್ರಕಟಿಸಿದ ವಿಷಯದಲ್ಲಿ ಅವರ ಧೈರ್ಯದ ಹಾಗೂ ಸರಲವಾದ ಸೂಚನೆಗಾಗಿ ಗಾಂಧಿಜಿ ಅವರನ್ನು ಕೊಂಡಾಡಿದ್ದಾರೆ. ಮುಂಬಯಿ ನಗರಗಳಲ್ಲಿ ಹೆಚ್ಚಿನ ಪ್ರಭಾವವಿದ್ದು, ಅಲ್ಲಿನ ಪರಿಸ್ಥಿತಿಗಳೆಲ್ಲವನ್ನು ಕೂಲಂಕಷ ತಿಳಿದಿದ್ದ ಅಲ್ಲಿ ಇಂದು ನಡೆಯುತ್ತಿರುವ ಪುಂಡರ ಹಾವಳಿಯನ್ನು ಅಡಗಿಸುವರೆ, ಆತ್ಮ ರಕ್ಷಣೆಗಾಗಿ ಹಿಂಸಾತ್ಮಕ ಪ್ರತಿಭಟನೆಯು ತೀರಾ ಅವಶ್ಯವೂ ನ್ಯಾಯವೂ ಎಂದು ಮುನ್ಶಿಯವರು ನಿರ್ಧಾರ ಮಾಡಿಕೊಂಡಿರುವಾಗ, ಅದೇ ರೀತಿ ಮುಂದೊತ್ತಿ ದೇಶಸೇವೆ ಮಾಡುವರೆ ಗಾಂಧಿಜಿ ಅವರನ್ನು ಹರಸಿದ್ದಾರೆ. ತಾನು ಇಷ್ಟುಕಾಲದ ವರೆಗೆ ಪ್ರೀತಿ ಶ್ರದ್ಧೆ ವಿಧೇಯತೆಗಳಿಂದ ಕೂಡಿಕೊಂಡು ಬಂದ ಕಾಂಗ್ರೆಸ್ ಸಂಸ್ಥೆಯ ತತ್ವವೊಂದರಲ್ಲಿ ತನಗೆ ಭಿನ್ನಾಭಿಪ್ರಾಯ ಹುಟ್ಟಿದಾಗ, ಅಂತಹ ಭಿನ್ನಾಭಿಪ್ರಾಯವಿದ್ದೂ ಅದರಲ್ಲಿ ಇದ್ದುಕೊಂಡು ಆ ಸಂಸ್ಥೆಯ ಕೀರ್ತಿಗೆ ಕಳಂಕ ತರುವುದಕ್ಕಿಂತ ರಾಜಿನಾಮೆಯಿತ್ತು ಹೊರಬಂದು ಕೆಲಸ ಮಾಡುವುದರಲ್ಲಿ ಮುನ್ಶಿಯವರಾದರೂ ತನ್ನ ಸರಲ ಹೃದಯವನ್ನೇ ತೋರಿಸಿರುತ್ತಾರೆ. ಹೀಗಿರುವುದರಿಂದ, ಗಾಂಧಿಜಿ, ಮುನ್ಶಿ, ಕಾಂಗ್ರೆಸು ಇವುಗಳ ವಿಷಯದಲ್ಲಿ, ಯಾರಾದರೂ ವೈಷಮ್ಯ ಹುಟ್ಟಿದೆಯೆಂದು ಅಪಪ್ರಚಾರ ಮಾಡಲು ಏನೂ ಆಸ್ಪದವಿರುವುದಿಲ್ಲ.

ರಾಜಕಾರಣದಲ್ಲಿ ಗಾಂಧಿಜಿ ವಾದಿಸುವಂತಹ ಶುದ್ಧ ಅಹಿಂಸಾಪಾಲನೆಯು ಪ್ರಯೋಗದಲ್ಲಿ ಎಷ್ಟು ಸಾಧ್ಯವಾಗುತ್ತದೆ ಯೆಂಬುದರ ಸ್ಪಷ್ಟ ಉದಾಹರಣೆಯನ್ನು ನಾವು ಕಾಂಗ್ರೆಸು ಮಂತ್ರಿಮಂಡಲಗಳ ರಾಜ್ಯಭಾರದಲ್ಲಿ ನಡೆದ ಗೋಳೀಬಾರು ಮೊದಲಾದವುಗಳಿಂದ ತಿಳಿದುಕೊಳ್ಳಬಹುದಾಗಿದೆ. ಅಹಿಂಸಾ ತತ್ವಕ್ಕೆ ಪಣತೊಟ್ಟಿರುವ ಕಾಂಗ್ರೆಸು ಸಂಸ್ಥೆಯೇ ರಾಜ್ಯಭಾರ ಮಾಡುತ್ತಿರುವಾಗ ಅಲ್ಲಿ ಹಿಂಸೆಗಳಾದ ವಿಷಯದಲ್ಲಿ ಅನೇಕರು ಕಟುತರವಾದ ಟೀಕೆಯನ್ನು ಮಾಡಿದ್ದರು. ಮಹಾತ್ಮಾಜಿಯವರೊಡನೆಯೇ ಅನೇಕರು ಈ ಪ್ರಶ್ನೆಗಳನ್ನು ಕೇಳಿದ್ದರು. ಗಾಂಧಿಜಿಯೂ ಆಗ ವಿಚಾರಗ್ರಸ್ತರಾದಂತೆ ಕಂಡುಬಂದಿದೆ. ಅಂತೂ ರಾಜಕಾರಣದಲ್ಲಿ, ವಿಶೇಷವಾಗಿ, ದೊಂಬಿಗಳೇ ಮೊದಲಾದವುಗಳಲ್ಲಿ ಶುದ್ಧ ಅಹಿಂಸೆಯನ್ನು ಪಾಲಿಸುವುದು ಅಸಾಧ್ಯವೆಂಬ ನಿರ್ಧಾರಕ್ಕೆ ಮುನ್ಶಿಯವರು ಬಂದಿದ್ದಾರೆ. ಅವರ ಅಭಿಪ್ರಾಯವು ಗಾಂಧಿಜಿ ಹಾಗೂ ಕಾಂಗ್ರೆಸಿನ ಅಂಗೀಕೃತ ತತ್ವಕ್ಕೆ ಸರಿಬೀಳದಿರಲು ಇಂದು ತಮ್ಮ ನಿರ್ಧಾರಕ್ಕೆ ರೂಪುಗೊಡುವ ಸಲುವಾಗಿ ಮುನ್ಶಿಯವರು ಈ ರೀತಿ ಬಹಿರಂಗವಾಗಿ ಭಿನ್ನಾಭಿಪ್ರಾಯ ಪ್ರಕಟಿಸಿ ಕಾಂಗ್ರೆಸಿಗೆ ತನ್ನ ರಾಜಿನಾಮೆಯನ್ನು ಒಪ್ಪಿಸಿದ್ದಾರೆ. ಇದರಿಂದ ಅವರಂತೆ ಅಭಿಪ್ರಾಯವಿರಬಹುದಾದವರಿಗೆ ಅವರೊಂದು ರಾಜಮಾರ್ಗವನ್ನು ಮಾಡಿಕೊಟ್ಟದ್ದಾರೆನ್ನಬಹುದು.

ಅಹಿಂಸಾ ತತ್ವವನ್ನು ಅಖಿಲ ಪ್ರಪಂಚವೇ ಮೆಚ್ಚುತ್ತದೆ. ಗಾಂಧಿಜಿಯವರಿಗೆ ಅಹಿಂಸಾತತ್ವದ ವಿಷಯದಲ್ಲಿರುವ ಘನವಾದ ಪ್ರೀತಿ ವಿಶ್ವಾಸಗಳ ಸಲುವಾಗಿಯೇ ಅವರಲ್ಲಿ ಹಲವರು ಪೂಜ್ಯಭಾವನೆಯಿಟ್ಟದ್ದಾರೆ. ಕಾಂಗ್ರೆಸ್ಸೂ ರಾಜಕೀಯ ಸ್ವಾತಂತ್ರ್ಯ ಸಾಧನೆಗೆ ಅಹಿಂಸಾತ್ಮಕ ಹೋರಾಟವು ಯೋಗ್ಯವಾದುದೆಂದು ಅಂಗೀಕರಿಸಿಕೊಂಡಿದೆ. ಆದರೆ ಅಹಿಂಸಾತತ್ವವನ್ನು ಎಲ್ಲಾ ಸಂದರ್ಭದಲ್ಲಿಯೂ ಎಲ್ಲಾ ಕಾಲಕ್ಕೂ ಅನುಸರಿಸಬೇಕೆಂಬ ನಿಯಮದ ಬಗ್ಗೆ ಹಲವರು ಹಲಕಾಲದಿಂದ ಸಂಶಯಗ್ರಸ್ತರಾಗಿಯೇ ಇದ್ದರು. ಕಾಂಗ್ರೆಸಾದರೂ ಪೂನಾನಿರ್ಣಯವನ್ನು ಮಾಡಿ ಶುದ್ಧ ಅಹಿಂಸೆಯಲ್ಲಿರುವ ವಿಶ್ವಾಸದ ಮಟ್ಟವನ್ನು ಕೆಳತಂದಿತು. ಗಾಂಧಿಜಿ ಆಗ ಕಾಂಗ್ರೆಸಿನಿಂದ ಹೊರನಿಂತಿದ್ದರೆಂಬುದೂ ಮರೆಯಬಾರದ ವಿಷಯ. ಮತ್ತೆ ದಂಗೆಗಳೇ ಮೊದಲಾದ ಸಂದರ್ಭಗಳಲ್ಲಿ ಕಾಂಗ್ರೆಸಿನವರಲ್ಲದವರು, ಅಹಿಂಸಾ ರೀತಿಯಿಂದ ಪ್ರತಿಭಟಿಸಲು ಸರ್ವಥಾ ಶಕ್ಯನಾಗದಿದ್ದರೆ, ಹೆದರಿ ಓಡಿಹೋಗುವ ಹೇಡಿತನಕ್ಕಿಂತ, ಹಿಂಸೆಯನ್ನಾದರೂ ಉಪಯೋಗಿಸಿ ಆತ್ಮಸಂರಕ್ಷಣೆಮಾಡಿಕೊಳ್ಳುವುದು, ಹಿತವಾದುದೆಂದು ಗಾಂಧಿಜಿಯೇ ಒಪ್ಪಿದ್ದಾರೆ. ಆದರೆ ಆ ಸಂದರ್ಭದಲ್ಲಿಯಾದರೂ ಕಾಂಗ್ರೆಸಿನವರು ಪರಿಪೂರ್ಣ ಅಹಿಂಸೆಯನ್ನೇ ಪಾಲಿಸತಕ್ಕದ್ದೆಂದು ಗಾಂಧಿಜಿ ಹಾರೈಸಿದ್ದಾರೆ. ಕಾಂಗ್ರೆಸಿನವರು ಆ ಸಂದರ್ಭದಲ್ಲಿಯೂ ಶುದ್ಧ ಅಹಿಂಸೆಯನ್ನೇ ಪಾಲಿಸತಕ್ಕದ್ದೆಂಬ ಗಾಂಧಿಜಿಯವರ ಅಭಿಪ್ರಾಯಕ್ಕೆ ಸಮ್ಮತಿಸಲಾಗದ ನಿಮಿತ್ತ ಮುನ್ಶಿಯವರು ಕಾಂಗ್ರೆಸಿಗೆ ರಾಜಿನಾಮೆಯಿತ್ತಿದ್ದಾರೆ.

ಗಾಂಧಿಜಿ ಉದಾತ್ತ ಧ್ಯೇಯವಾದಿ. ಅವರಿಗೆ ಅಹಿಂಸೆಯು ರಾಜಕೀಯ ತತ್ವಕ್ಕಿಂತಲೂ ಜೀವನ ಧರ್ಮವೇ ಆಗಿದೆ. ಆದರೆ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಅವರ ಅಂತಹ ಅಭಿಪ್ರಾಯಕ್ಕೆ ಸಮ್ಮತಿಸಲೇಬೇಕೆಂದಿಲ್ಲ. ಗಾಂಧಿಜಿಯ ಅಭಿಪ್ರಾಯದೊಡನೆ ತಮ್ಮ ಅಭಿಪ್ರಾಯಗಳು ಜತೆಗೂಡದಿದ್ದರೆ, ಸಂಶಯವೃತ್ತಿಯ ವಿಧೇಯತೆ ತೋರಿಸಿದರೆ ಅದರಿಂದ ಗಾಂಧಿಜಿಗಾಗಲಿ, ಕಾಂಗ್ರೆಸಿಗಾಗಲಿ, ಕಾಂಗ್ರೆಸಿನವರಿಗಾಗಲಿ ಉಪಯೋಗವಿಲ್ಲ. ಈಗ ಕಾಂಗ್ರೆಸಿನವರು ಒಂದು ನಿಶ್ಚಿತ ನಿರ್ಧಾರಕ್ಕೆ ಬರಬೇಕು. ಗಾಂಧಿಜಿ ಹೇಳುವಂತಹ ಅಹಿಂಸೆಯು ಮಾನ್ಯವಾಗಿದ್ದರೆ ಅದರಲ್ಲಿ ವಿಶ್ವಾಸತೋರಿಸಿ ಮುಂದುವರಿಯಬೇಕು. ಗಾಂಧಿಜಿಯವರ ಅಹಿಂಸೆಯ ಅಗ್ನಿಪರೀಕ್ಷೆಗೆ ಒಳಗಾಗಲು ಸಿದ್ಧರಿರಬೇಕು. ಅದಲ್ಲವಾದರೆ ಮುನ್ಶಿಯವರಂತೆ ಧೈರ್ಯದಿಂದ ಸರಳ ಸ್ಪಷ್ಟೀಕರಣದಿಂದ ಕಾಂಗ್ರೆಸಿನಿಂದ ಹೊರಬರಬೇಕು. ಇದರಿಂದ ಸರ್ವರಿಗೂ ಹಿತವಾಗುವುದು. ಕಾಂಗ್ರೆಸಿನವರು ಒಂದು ಖಂಡಿತ ನಿರ್ಧಾರಕ್ಕೆ ಬರುವ

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.—
ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ
ಬಿಡ್ತ ಮೊಡವೆಗಳನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು.— ಕೊರನೇಷನ್ ಟ್ರೇಡಿಂಗ್ ಕಂ.
ಮಹಮ್ಮದಾಲಿ ರೋಡ್, ಮಂಗಳೂರು.

ಸಂಶಯ ಪಡುತ್ತಾ ಗೆಳೆತನ ಮಾಡಿದರು!

ಹಿಟ್ಲರ್ ಸ್ಟಾಲಿನರು ವಿರೋಧಿಗಳಾದರು

ರಷ್ಯ ಜರ್ಮನ್ ಕಲಹದ ಕಾರಣ

ರಷ್ಯದ ಮೇಲೆ ಜರ್ಮನಿಯು ಧಾಳಿಮಾಡಿದ ಸಂಗತಿಯಿಂದ ಇಂದಿನ ಯುದ್ಧದ ಸ್ವರೂಪವೇ ಬದಲಾಗಿದೆ. ಇಂತಹ ಪರಿಸ್ಥಿತಿಯು ಉಂಟಾಗಬಹುದೆಂದು ಹಲವರು ಯೋಚಿಸಿರಲಿಲ್ಲ. ಹಿಟ್ಲರ್ ಸ್ಟಾಲಿನರು ಅನಾಕ್ರಮಣ ಒಪ್ಪಂದ ಮಾಡಿಕೊಂಡುದರಿಂದ ಮುಂದೆ ಯೂರೋಪಿನಲ್ಲಿ ಜತೆಗೂಡಿ ಪ್ರಬಲರಾಗುವರೆಂದಾಗಲಿ, ಅವರೊಳಗೆ ಚಿರಕಾಲ ಸಖ್ಯವಿರಬಹುದೆಂದಾಗಲಿ ಎಲ್ಲರೂ ಯೋಚಿಸಿರಲಿಲ್ಲ. ಆದರೂ ಇತ್ತ ಬ್ರಿಟಿಷರೊಡನೆ ಮಹಾಯುದ್ಧಕ್ಕೆ ತೊಡಗಿ ಸಂಗ್ರಾಮವನ್ನು ಮುಂದುವರಿಸಬೇಕಾಗಿದ್ದ ವಿಷಮ ಸಂದರ್ಭದಲ್ಲಿ ಪ್ರಬಲವಾದ ರಷ್ಯದೊಡನೆ ರಾಜಿಯಿಂದಿರುವುದನ್ನು ಬಿಟ್ಟು ಹಿಟ್ಲರನು ಕಲಹವನ್ನು ಕೆದಕಿಕೊಂಡಾನೆಂದು ಯಾರೂ ಬಗೆದು ಇಲ್ಲ. ರಷ್ಯ ಜರ್ಮನ್ ಯುದ್ಧವು ಆಕಸ್ಮಿಕವೂ ಆಶ್ಚರ್ಯಕರವೂ ವಿಷಮವೂ ಆಗಿ ಪರಿಣಮಿಸಿದೆ.

ಇನ್ನು ಮುಂದೆ ಹಿಟ್ಲರನನ್ನು ಪ್ರಪಂಚದಲ್ಲಿ ಯಾರೂ ನಂಬುವವರಿಲ್ಲ. ಆತನು ಏನು ಮಾಡುವನು ಏನು ಮಾಡಲಾರನೆಂದು ಯಾರಿಗೂ ಹೇಳಬರುವಂತಿಲ್ಲ. ಆತನ ಅಂತರ್ಯದಲ್ಲಿ ಎಂತಹ ಮಹತ್ವಾಕಾಂಕ್ಷೆಯು ಅಡಗಿದೆಯೆಂದಾಗಲಿ ಊಹಿಸಲು ಆಗುವುದಿಲ್ಲ. ಆತನು ಬಹು ವಿಚಿತ್ರ ಭೀಷಣ ವ್ಯಕ್ತಿಯಾಗಿ ಪ್ರಪಂಚವನ್ನು ಬೆದರಿಸುವ ಹೆಜ್ಜೆಗಳನ್ನಿಡುತ್ತಿದ್ದಾನೆ. ಹಿಟ್ಲರನಿಗಾದರೂ ಜಯವೇ ಕಟ್ಟಿಟ್ಟ ಬುತ್ತಿಯಲ್ಲ. ಪ್ರಬಲನಾಗುತ್ತಾ ಬರುವ ಸಂದರ್ಭದಲ್ಲಿ ಇನ್ನೊಂದು ಪ್ರಬಲ ರಾಷ್ಟ್ರವನ್ನು ತನ್ನ ಎದುರಾಗಿ ವಿಜೃಂಭಿಸಲು ಬಿಡುವುದಂತೂ ಆತನಿಗೆ ಸೊಗಸಲಿಲ್ಲ. ಇತ್ತ ಬ್ರಿಟನನ್ನು ಮಣಿಸಿ ಅಧೀನಗೊಳಿಸಬೇಕೆಂದೂ, ಅತ್ತ ರಷ್ಯವನ್ನು ಏಳಗೊಡಬಾರದೆಂದೂ ಇದರಿಂದ ರಷ್ಯ ಮಾತ್ರದ ಒಂದು ನಿಗೂಢ ಆಶೆಯನ್ನು ಸಾಧಿಸಿ ಬಿಡಬೇಕೆಂದೂ ಹಿಟ್ಲರನು ಬಗೆದಂತಿದೆ.

ಅನುಕೂಲಕ್ಕಾಗಿ ಸಖ್ಯ

೧೯೩೯ರಲ್ಲಿ ರಷ್ಯ ಜರ್ಮನಿಗಳೊಳಗೆ ಅನಾಕ್ರಮಣ ಒಪ್ಪಂದವಾಯಿತು. ಇಬ್ಬರು ಸರ್ವಾಧಿಕಾರಿಗಳೂ ತಮ್ಮ ಅನುಕೂಲಕ್ಕಾಗಿ ಇಂತಹ ಸಖ್ಯವನ್ನು ಮಾಡಿದರು. ಆದರಲ್ಲಿ ನಿಜವಾದ ಅಂತರ್ಯ ಪ್ರೇಮ ಸಂಬಂಧವಿರಲಿಲ್ಲವೆಂದು ಹೇಳಲ್ಪಡುತ್ತಿದ್ದ ವಿಷಯವಂತೂ ಈಗ ಜಗತ್ತಿಗೇ ಪ್ರತ್ಯಕ್ಷವಾಯಿತು. ಆದರೂ ಅಂದಿನ ಆ ಸಖ್ಯವು ಚಿರಕಾಲ ಬಾಳಬೇಕೆಂದು ಹಿಟ್ಲರ್ ಸ್ಟಾಲಿನರಿಬ್ಬರೂ ಬಾಯಿತುಂಬಾ ಹೇಳುತ್ತಿದ್ದರು. ಜರ್ಮನಿಯು ಪೋಲೆಂಡನ್ನು ಸದೆಬಡಿದು ಸ್ವಾಧೀನ ಮಾಡಿಕೊಂಡಾಗ ರಷ್ಯವು ಅಲ್ಲಿ ಅರ್ಧಪಾಲನ್ನು ಪಡೆದುಕೊಂಡಿತು. ರಷ್ಯವು ಬಾಲ್ಟಿಕ್ ಬಾಲ್ಕನ್‌ಗಳಿಗೆ ಕೈಹಾಕಿದಾಗ ಜರ್ಮನಿ ಅದಕ್ಕೆ ಒಪ್ಪಲಿಲ್ಲ. ಆಗ ಯಾರೂ ಕಿಸಿಪಿಸಿ ಮಾತನಾಡಲಿಲ್ಲ.

ಕಲಹದ ಕಾರಣ

ಕಳೆದ ೨೦ ತಿಂಗಳುಗಳ ಕಾಲ ಕಳೆದ ಹಿಟ್ಲರ್ ಸ್ಟಾಲಿನರು ಈಗ ತಿರಿಗಿ ಕತ್ತಿ ಕಟ್ಟಿಕೊಳ್ಳಬೇಕಾಗಿ ಬಂದ ಕಾರಣವೇನೆಂಬುದನ್ನು ಯುದ್ಧ ಪ್ರಾರಂಭದಲ್ಲಿ ಹಿಟ್ಲರನೇ ಹೇಳಿದ್ದಾನೆ: ಜರ್ಮನಿಯೊಡನೆ ರಷ್ಯವು ಸಖ್ಯದಿಂದ ನಡೆದುಕೊಳ್ಳದೆ ಬ್ರಿಟನಿನೊಡನೆ ಒಳಸಂಚು ಸಾಧಿಸಿತ್ತೆಂದು ಆತನು ಆರೋಪ ಮಾಡಿದ್ದಾನೆ. ಹೀಗೆ ಹಿಟ್ಲರನು ಆರೋಪ ಮಾಡುವುದಿದ್ದರೂ ರಷ್ಯವು ಅಂದಿನ ಅನಾಕ್ರಮಣ ಒಪ್ಪಂದಕ್ಕೆ ತಪ್ಪಿ ನಡೆದದ್ದಂತೂ ನಮಗೆಲ್ಲಿಯೂ ಕಂಡುಬರುವುದಿಲ್ಲ. ರಷ್ಯದ ಅಂತರ್ಯದಲ್ಲಿ ಬ್ರಿಟನು ಜರ್ಮನಿಗಳಂತಹ ಸಾಮ್ರಾಜ್ಯ ಶಾಹಿಗಳ ಭಂಡವಾಳಶಾಹಿಗಳ ಬಗೆಗೆ ಸಾಹಜಿಕ ವೈಮನಸ್ಸು ಇರಬಹುದು. ಆದರೆ ಅದಕ್ಕೆ ಬೇಕಾದ ಮುಂದಿನ ಜಾಗ್ರತೆಯಲ್ಲಿ ರಷ್ಯವು ಇರಬಹುದಲ್ಲದೆ ವೈರ ಮಾಡಲು ಕಾರಣ ಕೆದಕಲಿಲ್ಲ. ಜರ್ಮನಿ ಬ್ರಿಟನುಗಳೆರಡೂ ಕಲಹವಾಡಿ ಕೈಸೋತ ಸಂದರ್ಭದಲ್ಲಿ ರಷ್ಯವು ಮೇಲೇರಿ ಬರಬಹುದೆಂದು ರಷ್ಯವು ಆಶಿಸಿಟ್ಟದ್ದರೂ ಇರಬಹುದು. ಆದರೆ ಹಿಟ್ಲರನ ಆ ಆರೋಪಣೆಗಳು ಅಷ್ಟೇನೂ ಪುಷ್ಟೀಕರವಾಗಿಲ್ಲ. ಇತ್ತೀಚೆಗೆ ಜರ್ಮನ್ ಸರಕಾರವು ಹೊರಡಿಸಿದ ಪ್ರಕಟಣೆಯೊಂದರಿಂದ ಡಾರ್ಡನೆಲ್ಸ್ ಜಲಸಂಧಿಗಳು ಸಂಪೂರ್ಣ ತನಗೆ ಬೇಕೆಂದು ರಷ್ಯವು ಕೇಳಿತೆಂದೂ, ಜರ್ಮನಿ ಇದನ್ನು ನಿರಾಕರಿಸಿತೆಂದೂ ತಿಳಿದಿದೆ. ಪೂರ್ವ ರಾಷ್ಟ್ರಗಳ ಕಡೆಗೆ ಧಾಳಿಮಾಡಲು ಹೊರಟ ಹಿಟ್ಲರನು ಕಪ್ಪು ಸಮುದ್ರದ ಮೇಲೆ ರಷ್ಯದ ಅಧಿಕಾರ ನಡೆಸಲು ಒಪ್ಪಲಿಲ್ಲವೆಂದು ತೋರುತ್ತದೆ. ಇದರಿಂದಲೇ ಇಂದಿನ ಯುದ್ಧವು ನಡೆಬರಬಹುದೆಂದು ಊಹಿಸಬೇಕಾಗಿದೆ.

ಯಾರು ಗೆಲ್ಲುವರು?

ಹಿಟ್ಲರನಂತೂ ಇಂದು ಪ್ರಬಲ ಶತ್ರುವಿನಿಂದ ರಷ್ಯವನ್ನು ಆಕ್ರಮಿಸಿದ್ದಾನೆ. ವಿಸ್ತಾರವಾದ ರಣಭೂಮಿಯಲ್ಲಿ ಅನೇಕ ಕಡೆ ಯುದ್ಧಗಳಾಗುತ್ತಿವೆ. ಈ ಧಾಳಿಯು ಹತ್ತು ವಾರಗಳಲ್ಲಿ ಮುಗಿವುದೆಂದು ಹಿಟ್ಲರನ ಹೇಳಿಕೆಯಿದೆ. ಜರ್ಮನಿಗೆ ಹೀಗೆ ಭರವಸೆಯಿದ್ದರೂ ಮುಂದೇನಾಗುವುದೆಂದು ನಮಗೆ ಊಹಿಸುವುದು ಕಷ್ಟ. ರಷ್ಯವು ಬಹಳ ವಿಶಾಲವಾದ ರಾಷ್ಟ್ರ. ರಷ್ಯದ ಸೈನ್ಯ ಶಕ್ತಿಯು ಅಪರಿಮಿತವಿದೆ. ಮಿಂಚಿನ ಯುದ್ಧದಲ್ಲಿ ಪ್ರಬಲರಾದ ಜರ್ಮನರನ್ನು ರಷ್ಯನರು ಎದುರಿಸಿ ಗೆಲ್ಲಬಲ್ಲರೇ ಎಂಬುದು ಸಂಶಯ. ಪಿನ್ನರೊಡನೆ ಕಾದಾಡಿ ಬೇಸತ್ತ ರಷ್ಯನರಶಕ್ತಿ ಎಷ್ಟರಮಟ್ಟಿಗೆ ಈಗ ಸಿದ್ಧವಾಗಿದೆಯೋ ಎಂದೂ ಹೇಳಲಾಗುವುದಿಲ್ಲ. ರಷ್ಯನರಲ್ಲಿ ವಿಮಾನ ಬಲವು ಅತ್ಯಂತ ವಿಶೇಷವಾಗಿದೆಯೆಂದು ತಿಳಿದಿದೆ. ಆದರೆ ನೆಲಯುದ್ಧವು ರಷ್ಯದಲ್ಲಿ ಸಾಧ್ಯವಿರುವುದರಿಂದ ಜರ್ಮನರನ್ನು ಎದುರಿಸುವ ಶಕ್ತಿ ರಷ್ಯನರಿಗೆ ಸಾಕಾದೀತೋ ಎಂದೂ ಹಲವರ ಸಂದೇಹ.

ಸಮಾನ ಶತ್ರು

ಬ್ರಿಟನೂ ಅಮೇರಿಕವೂ ಇಂದು ಸಮಾನ ಶತ್ರುವಾದ ಹಿಟ್ಲರನನ್ನು ಸೋಲಿಸಲು ಸಾಧ್ಯವಾದ ಸಹಾಯಗಳನ್ನು ರಷ್ಯಕ್ಕೆ ಒದಗಿಸಿಕೊಡುವವಂತೆ. ಎಷ್ಟರ ಮಟ್ಟಿಗೆ ಈ ಸಹಾಯವು ಸಿಗಬಹುದೆಂದು ತಿಳಿಯುವುದಿಲ್ಲ. ಆದರೂ ಇಂತಹ ಮಹಾ ಸಾಹಸಕ್ಕೆ ಮನಮಾಡಿದ ಹಿಟ್ಲರನು ಸುತ್ತಲೂ ವೈರಿಗಳೊಡನೆ ಕಾದಾಡಬೇಕಾಗಿದ್ದರೆ ಆತನಿಗೆ ವಿಜಯವು ಹೇಗೆ ದೊರಕಬಹುದೆಂಬುದು ಬಹಳ ಸಂಶಯದ ವಿಷಯವೇ ಆಗಿದೆ.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE — ESTD. 1906 — **CANARA BANK LIMITED**

HALFTONE & LINE BLOCK MAKING UNDERTAKEN
Sharada Press, MANGALORE

ಈ ವಾರದ ಕತೆ:

ನಮ್ಮೋಣಿಯಲ್ಲಿ

"ಬಿಡ್"

...ರಾತ್ರೆ ಸುಮಾರು ಕಳೆದಿರಬಹುದು. ಊರಿನ ದೀಪಗಳೆಲ್ಲ ನಂದಿಹೋಗಿದ್ದುವು. ಅಂತೂ ನಮ್ಮ ಓಣಿಯಲ್ಲಿ ದೀಪಗಳು ಇದ್ದರೂ ಅವು ಹೊತ್ತಿಕೊಂಡಿರಲಿಲ್ಲ. ಜಗತ್ತಿನಲ್ಲಿ ಕಗ್ಗತ್ತಲೆ ಮುಸುಗಿಕೊಂಡಿತ್ತೆಂದು ನಿಸ್ಸಂಶಯವಾಗಿ ಹೇಳುವಷ್ಟು ನಮ್ಮ ಓಣಿ ಶಾಂತವಾಗಿತ್ತು. ಹುಟ್ಟುವಾಗಲೇ ತನ್ನ ಪ್ರಕಾಶವನ್ನು ಬೀರಿಯೂ ಹುಟ್ಟಿ, ಬೆಳೆದ ಮೇಲೂ ಸಾಮರ್ಥ್ಯವನ್ನು ಬಿಡಲಾಗದ ಕುನ್ನಿಗಳ ಬೊಗಳಾಟವು ಎಂದೋ ನಿಂತುಹೋಗಿತ್ತು. ನಮ್ಮ ಮನೆಯಲ್ಲಿ ನಾವೆಲ್ಲ ಸುಖವಾಗಿ ನಿದ್ರೆ ಮಾಡುತಿದ್ದೆವು. ಹುಟ್ಟುವ ಮಕ್ಕಳು, ಹುಟ್ಟಿದ ಮಕ್ಕಳು, ಸಣ್ಣ ಮಕ್ಕಳು, ಬೆಳೆವ ಮಕ್ಕಳು, ಬೆಳೆದ ಮಕ್ಕಳು ಮತ್ತು ಬೆಳೆದು ಸಾಯುವ ಮಕ್ಕಳೂ ಸುಖವಾಗಿ ಗೊರಕೆ ಹೊಡೆಯುತಿದ್ದರು.

ಕತೆ ಪುಸ್ತಕವೊಂದನ್ನು ನಿದ್ದೆಗಣ್ಣಿನಲ್ಲಿ ಮಗುಚುತಿದ್ದೆ. ಕತೆಯು ಸ್ವಾರಸ್ಯವಾಗಿತ್ತೆಂದು ಬೇರೆ ಹೇಳುವ ಅವಶ್ಯಕತೆಯೇನೂ ಇಲ್ಲ. ಆಯಿತು, ಇನ್ನೇನು—ಕತೆಯ ಅತ್ಯುತ್ತಮ ಪ್ರಸಂಗ ಬಂದಿತೆನ್ನುವಾಗ—ದೀಪದ ಎಣ್ಣೆ ತೀರಿತು. ಜ್ಯೋತಿಯು ಸಣ್ಣದಾಗುತ್ತ ಬಂತು. ಹೋಗುತಿದ್ದ ನಿದ್ದೆ ಪುನಃ ಕಣ್ಣಿನಲ್ಲಿ ತುಂಬುತ್ತಾ ಬಂತು...

...ಏನೋ ಒಂದು ದೊಡ್ಡ—ಭಾರೀ—ಸದ್ದಾಯಿತು. ಏನೆಂದರೂ ಆ ಸದ್ದಿಗೆ ಸುಮಾರು ಐದು ಬೆಳೆವ ಕೂಸುಗಳಾದರೂ ತಕ್ಷಣ ಪ್ರಾಣಬಿಟ್ಟಿರಬೇಕೆಂದು ನನಗೆನಿಸುತ್ತದೆ. ನಾನು ಇನ್ನೂ ಪ್ರಾಣಬಿಟ್ಟಿಲ್ಲವಾದರೂ ನನ್ನೆದೆ ಹೊರಗೆ ಬರುವಂತೆ ತೋರುತಿತ್ತು. ಕೂಡಲೇ ಎದೆಯನ್ನು ಒಳಗೆ ದೂಡಿ ಕಲ್ಲೆದೆಯವನಾದೆನೆಂದು ನೀವು ಭಾವಿಸಿದುದು ಪೂರ್ಣ ಸರಿಯಲ್ಲವಾದರೂ ಕೆಲವಂಶ ಸರಿಯೇ!

ಆ ಸದ್ದು ದುರ್ದೈವದಿಂದ ನಮ್ಮೋಣಿಯಲ್ಲೇ ಆಗಬೇಕೇ? ಓಣಿಯ ಯಾವುದೋ ಒಂದು ಕೊನೆಯಿಂದ ಬರುವಂತೆ ತೋರಿತು! 'ಅದೂ—ಮೂರು, ಮೂರು, ಮೂರು' ಎಂದು ಯಾರೋ ಗಟ್ಟಿಯಾಗಿ ಹೇಳುತಿದ್ದುದು ಕೇಳಿಬಂತು—ಕೇಳಿಬಂದುದು ಮಾತ್ರವಲ್ಲ, ಶಬ್ದ ಹೆಚ್ಚುಹೆಚ್ಚಾಗಿ ಕೇಳಿಬಂತು. ಅಂತೂ ಆ ಮಹಾರಾಯ ನಮ್ಮೋಣಿಯಲ್ಲಿ ಬರುತಿದ್ದುದು ತಿಳಿದುಬಂತು.

...ತುಂಬಿದ ನಿದ್ದೆಗಣ್ಣು ತಕ್ಷಣ ತಿಳಿದಾಯಿತು. ಪುಸ್ತಕದ ಕಥಾನಾಯಕನು ಒಮ್ಮಿಂದೊಮ್ಮೆಲೇ ಮಾಯವಾದನು. ಇಷ್ಟರಲ್ಲಿ ದೀಪವೂ ನಂದಿಹೋಗಿತ್ತೆಂದು ನಾನು ನಿಮಗೆ ತಿಳಿಸದಿರಲಾರೆ. ಅರ್ಧರಾತ್ರೆ ತನ್ನಿಂದ ತಾನೇ ನಮ್ಮೋಣಿಯಲ್ಲಿ ಯಾರೋ ಒಬ್ಬರು 'ಮೂರು, ಮೂರು, ಮೂರು' ಎಂದು ಬೊಬ್ಬಿಡುವ ಕಾರಣವೇನು? ಮನುಷ್ಯನಾಗಲೀ, ಬದುಕಿರುವ ಬೇರೆ ಯಾವ ಪ್ರಾಣಿಯೇ ಆಗಲೀ ಯಾವ ಕೆಲಸವನ್ನೂ ಕಾರಣವಿಲ್ಲದೆ ಮಾಡಲಾರನೆಂಬುದು ನಿಮಗೆ ತಿಳಿದಿರಬಹುದು. ಅಂತೆಯೇ ಆ 'ಭಯಂಕರ' ಸದ್ದಿನ ಕಾರಣವೂ ತಕ್ಷಣ ನನಗೆ ಹೊಳೆಯಿತು...

...ನಾವು ಹುಟ್ಟಿ ಈ ಲೋಕಕ್ಕೆ ಬಂದಂದಿನಿಂದ ಜಗತ್ತಿನಲ್ಲಿ ಎಷ್ಟೋ ಪ್ರಳಯಗಳು ಆಗಿಹೋಗಿವೆ. ಮಾನವನ ಕುಲವನ್ನೇ ನಾಶಮಾಡುವ, ಅವನ ಹುಟ್ಟನ್ನೇ ಸದೆಬಡಿಯುವ ಎಷ್ಟೋ ವಿಚಿತ್ರವಾದ ಸನ್ನಿವೇಶಗಳು ನಡೆದುಹೋಗಿವೆ. ಎಲ್ಲವೂ ದುಡ್ಡಿನಾಸೆಗಾಗಿ.. ತಾನೊಂದು ಮನೆಯ ಯಜಮಾನನಾಗಬೇಕು, ನಾಲ್ಕೈದು ಕಾಸು ತನ್ನ ಕೈಯಲ್ಲಿ ಕುಣಿಯುತ್ತಿರಬೇಕು. ಚಕ್ಕಂದದ ಹುಡುಗಿಯ ಕೈಹಿಡಿಯಬೇಕು, ಸಂತತಿಯಿಲ್ಲದವರಿಗೆ ಸದ್ಗತಿಯಿಲ್ಲವೆಂದು ಕೇಳಿದುದರಿಂದ ಎರಡು ಮೂರು ಸಂತತಿಯಾಗಬೇಕು ಮತ್ತು ಸಾಧ್ಯವಾದರೆ ತನ್ನ ಮೊಮ್ಮಗನನ್ನು ಮುದ್ದಿ ಅಪ್ಪಿಕೊಂಡು 'ಫುಟ್‌ಬೋಲ್' ಹಾರಿಸಿದಂತೆ ಆಡಿಸಿಕೊಂಡಿರಬೇಕೆಂಬ ಹಿರಿಯಾಸೆಗಳು ಎಲ್ಲರಲ್ಲಿಯೂ ಆಗುತ್ತಿವೆ. ಆದುದರಿಂದ ಎಲ್ಲಕ್ಕೂ ಕಾರಣವಾದ ಮತ್ತು ಅವುಗಳ ಮೂಲಭೂತವಾದ ದುಡ್ಡಿನಾಸೆಯು ಎಲ್ಲರಲ್ಲಿಯೂ ಇದ್ದೇ ಇದೆ. ದುಡ್ಡು ಇದ್ದವನಾಗಲೀ, ಇಲ್ಲದವನಾಗಲೀ ಹುಲಿಯು ಹುಲ್ಲೆಗಾಗಿ ಹೊಂಚು ಹಾಕಿ ಕುಳಿತಿರುವಂತೆ ಮಾನವನು ದಿನನಿತ್ಯ ಹೊಂಚುಹಾಕಿ ಕುಳಿತಿರುವುದು ಅದೇನೂ ಸೋಜಿಗವಲ್ಲ. ನಾವು ದುಡಿದುದಕ್ಕೆ ಪ್ರತಿಫಲವಾಗಿ ನಾಲ್ಕಾರು ಕಾಸುಗಳು ಸಿಕ್ಕಿದರೆ ಅದೇನೂ ದೊಡ್ಡದಲ್ಲ. ಅದರ ಜೊತೆಗೆ ಒಂದೆರಡು ಕಾಸುಗಳೂ ಅಡ್ಡವಾಗಿ ಸಿಕ್ಕಿದರೆ ಅದೂ ಒತ್ತದು ವಿಚಿತ್ರವಲ್ಲವೆನ್ನಿ. ಅವೆರಡೂ ಸಿಕ್ಕದಿದ್ದರೆ ಮಾನವನಿಗೆ ಕಲ್ಪನಾಶಕ್ತಿಯಿದೆ. ಅದನ್ನಾದರೂ ಉಪಯೋಗಿಸಿ ನೀತಿಯಿಂದಾಗಲೀ ಅನೀತಿಯಿಂದಾಗಲೀ ಬದುಕಿ ಬಾಳಲೆತ್ನಿಸುತ್ತಾನೆ... ಇರಲಿ.

ಮಾನವನ ಕಲ್ಪನಾಶಕ್ತಿಯಿಂದ ಉದ್ಭವಿಸಿದ ಒಂದು ವಿಶೇಷ ಪ್ರಳಯವು ಈಗೀಗ ನಮ್ಮೂರಲ್ಲಿ ತಲೆಯೆತ್ತಿದೆ. ನಮ್ಮೂರಲ್ಲಿ ಯಾವ ವಸ್ತುಗಳಾದರೂ ಹೊಕ್ಕಲ್ಲಿ ಆ ವಸ್ತುಗಳು ಸೀದಾ ನೇರವಾಗಿ ನಮ್ಮೋಣಿಗೆ ಸುಳಿಯದಿರಲಾರವು. ಈಗ ಹೊಸದಾಗಿ ಬಂದ ವಸ್ತುವೂ ನಾನು ಹೇಳಿದಂತೆಯೇ ಬಂತು.

ಆ ವಸ್ತು ಮತ್ತಾವುದೂ ಅಲ್ಲ—ಬರೇ ಎರಡಕ್ಷರದ ಊಜಿನ ಮಾರಿ—'ಬಿಡ್' ಹೆಸರಾದರೂ ಎಷ್ಟು ಸುಂದರ? ಇಪ್ಪತ್ತನೆಯ ಶತಮಾನದಲ್ಲಿ ಪ್ರತಿಯೊಂದು ವಸ್ತುವೂ ಶಿಥಿಲವಾಗುತ್ತ ಬಂದಂತೆ ನಮ್ಮ ನಿಮ್ಮ ಹೆಸರೂ ಗಿಡ್ಡವಾಗುತ್ತ ಬಂದಿವೆ. ಸುಮಾರು ಎರಡು ಮೂರು ಮಾರು ಉದ್ದ ಬೆಳೆಯುತ್ತಲೇ ಇದ್ದ ಸುಂದರ ಹೆಸರುಗಳು ಈಗೀಗ ಕಾಲಂಗುಲಕ್ಕಿಂತಲೂ ಸಣ್ಣವಾಗಿವೆ. ಸಾಧ್ಯವಾದಲ್ಲಿ ಒಂದೇ ಒಂದು ಅಕ್ಷರದ ಹೆಸರಿಟ್ಟುಕೊಳ್ಳುತ್ತೇವೆ. ತಪ್ಪಿದಲ್ಲಿ ಎರಡು ಅಕ್ಷರಕ್ಕಿಂತ ಮುಂದೆ ಸುಳಿಯುವ ಹೆಸರುಗಳೇ ಇಲ್ಲ. ಅರ್ಧ ಹೆಸರುಗಳೂ ಇಲ್ಲ. ನಮ್ಮ ಶೀಣೂ, ಸುಬ್ಬೂ, ರಾಮೂ ಮುಂತಾದ ಎರಡಕ್ಷರದ ನಾಮಗಳಂತೆಯೇ ಈ ವಿಚಿತ್ರವಾದ ಆಟ (ಒಂದು ತೆರನ ಆಟವೇ)ಕ್ಕೆ 'ಬಿಡ್' 'ಬಿಡ್' ಎಂದು ಹೆಸರಿಟ್ಟು ಕೊಂಡಾಡುತ್ತಿರುವರಲ್ಲಾ?

ಅರಳೆ ಮಾರ್ಕೆಟಿನಲ್ಲಿ ಬೆಲೆಯ ಏರಿಳಿತಗಳನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ತಮ್ಮ ದುಡಿತವನ್ನು ವ್ಯಯಿಸುತ್ತಾರೆ: ಸಿಕ್ಕಿದರೆ ಎಂಟಾಣೆ; ಹೋದರೆ ಒಂದಾಣೆ—ಈ ಪೀಠಿಕೆಯಿಂದ ಹಿಡಿದು, ಹೋದರೆ ನೂರು ರೂಪಾಯಿವರೆಗಾದರೂ 'ಬಿಡ್'ನ ಹುಚ್ಚು ಬಿಡಲಾಗದೆ ಇನ್ನೂ ಅದರಲ್ಲೇ ಕೊಳೆಯುತ್ತಿರುವವರು ಎಷ್ಟೋ ಇದ್ದಾರೆ ನಮ್ಮಲ್ಲಿ. ಈ 'ಬಿಡ್' ನಮ್ಮೋಣಿಗೆ ಬಂದಂದಿನಿಂದ ಅಲ್ಲಿ ನಡೆಯುವ ಅನಾಹುತಗಳನ್ನು ಒಮ್ಮೆ ಕಣ್ತೆರೆದು ನೋಡಿದರೆ, ತಡೆಯಲಾರದೆ ಪುನಃ ಕಣ್ಣು ಮುಚ್ಚಬೇಕಾಗುವುದು.

ನಾನು ಹುಟ್ಟಿ . . . ನೆ ಹಾಗೆ ಬೆಳೆದು ಇಷ್ಟು ವರ್ಷವಾದರೂ 'ಬಿಡ್' ಮಹಾರಾಯ ನಮ್ಮೋಣಿಗೆ ಬಂದುದನ್ನು ಕೇಳಿದುದು ಮೊನ್ನೆ ತಾನೆ. ಆ ದಿನ ನಿತ್ಯದಂತೆ ನಾನು ಆಫೀಸಿನಿಂದ ಹಿಂತೆರಳುತ್ತಾ ಸುಖವಾಗಿ ಮನೆಯನ್ನು ಹೊಕ್ಕಾಗ ನನ್ನೆದುರಿಗೆ ಕೆಲವು ಸಣ್ಣ ಕಾಗದದ ತುಂಡುಗಳು ತೋರಿಬಂದುವು. ಆ ತುಂಡುಗಳ ಹತ್ತಿರವೇ ನನ್ನ ಚಿಕ್ಕ ತಮ್ಮ ಕುಳಿತುಕೊಂಡು ಪಿಳಿಪಿಳಿ ಕಣ್ಣು ಬಿಡುತ್ತ ಹಿಂದುಮುಂದು ನೋಡುತಿದ್ದನು. ಅವನ ಹಿಂದೆ ಸುಮಾರು ಎಂಟು, ಒಂಭತ್ತು ಮಂದಿ ನಮ್ಮೋಣಿಯ ಮಾನಿನಿಯರು, ಅಕ್ಕುವಿನಿಂದ ಹಿಡಿದು ರುಕ್ಕುವಿನ ವರೆಗೆ; ಎಲ್ಲರೂ ಎರಡಕ್ಷರದ ಹೆಸರಿನವರೇ. ಅಕ್ಕುವಿನ ಕಣ್ಣುಗಳು ಹೊರಸುಳಿದು ಆ ತುಂಡುಗಳನ್ನು ನೋಡುತ್ತಿದ್ದುದನ್ನು ಕಂಡರೆ ಆ ಕಣ್ಣಗೊಂಬೆಗಳು ಎಲ್ಲಿಯಾದರು ಸ್ವಲ್ಪ ಹೆಚ್ಚು ಕಡಿಮೆಯಾದರೆ ಖಂಡಿತವಾಗಿ ಜಾರಿಹೋಗಿ ಬೀಳುತಿದ್ದುವೋ ಏನೋ ಎಂಬಂತೆ ತೋರುತಿತ್ತು. ಅಲ್ಲೇ ನಿಂತಿದ್ದ ದುಗ್ಗುವಿನ ಭಾವಭಂಗಿಯನ್ನಂತೂ ವಿಮರ್ಶಿಸಲು ಅಸಾಧ್ಯವೆಂದೇ ಹೇಳಬಹುದು. ಏಕೆಂದರೆ ಅವಳು ಅಂಗಳದ ಮೇಲೆ ನಿಂತಿದ್ದಳೋ ಕೆಳಗೆ ನಿಂತಿದ್ದಳೋ ಯಾವುದೂ ಹೇಳಬರುವಂತೆ ಇದ್ದಿಲ್ಲ. ರುಕ್ಕುವಂತೂ ನನ್ನ ತಮ್ಮನನ್ನು ಚಿವುಟುತ್ತಾ ಅವನು ಚೀಟು ತೆಗೆದುಕೊಡುವಂತೆ ಬಲಾತ್ಕರಿಸುತಿದ್ದಳು. ಅವನು ಕಣ್ಣು ಬಾಯಿಬಿಡುತ್ತಾ ಮೇಲೆ ಕೆಳಗೆ ನೋಡಿ ಕಡೆಗೆ ಒಂದು ಚೀಟು ತೆಗೆದುಬಿಟ್ಟನು. ಸೈ—ತಿಂಡೀ ಚೂರನ್ನು ರಸ್ತೆಗೆ ಬಿಸುಡಿದರೆ ಕೂಡಲೇ ಅದಕ್ಕೆ ಮುತ್ತುವ ವಾಯಸಗಳಂತೆ ಅಲ್ಲಿ ನೆರೆದ ಕೋಗಿಲೆಗಳೆಲ್ಲವೂ ಅವನನ್ನು ಮುತ್ತಿ ಆ ತುಂಡು ಕಾಗದವನ್ನು ಸೆಳೆದು ಅದನ್ನು ಬಿಚ್ಚಿ ನೋಡಿದವು. ಕೂಡಲೇ ಅವುಗಳಿಂದ ಒಂದು ದೊಡ್ಡ ಆರ್ಭಟವೇ ಹೊರಟಿತು—"ಮೂರು, ಮೂರು" ಎಂದು. ನನಗೆ ದುರ್ದೈವದಿಂದ ತಲೆ ತಿರುಗಿದಂತಾಗಿ ನನ್ನ ಕೈಯಲ್ಲಿದ್ದ ಕೊಡೆ, ಪುಸ್ತಕ ಮತ್ತು ತಲೆಯ ಮೇಲಿದ್ದ ಟೊಪ್ಪಿ ಎಲ್ಲವೂ ಫಸಕ್ಕನೆ ಜಾರಿಬಿತ್ತು. ಬೆವರಿಳಿಯಿತು. ಕೂಡಲೇ ಕಣ್ಣು ಮುಚ್ಚಿ ಆಯಾಸವಾಗಿ ಅಲ್ಲೇ ಕಂಬದ ಬಳಿ ಒರಗಿಬಿಟ್ಟೆ....

ಸ್ವಲ್ಪ ಹೊತ್ತಿನ ನಂತರ ಕಣ್ಣು ತೆರೆದು ನೋಡುವುದೇನು? ನಿಜವಾಗಿಯೂ ನಾನು ಬದುಕಿದ್ದೇನೆಂದು ತಿಳಿದು ಸಹಿಸಲಸದಳವಾದ ಸಂತಸವಾಯಿತು. ನನ್ನ ತಮ್ಮ ಮತ್ತು ಅವನ ಬಳಿಯಿದ್ದ ಕಾಗದದ ಚೂರುಗಳ ಹೊರತು ಬೇರಾರೂ ಇರಲಿಲ್ಲ. ಅವರೆಲ್ಲ 'ಬಿಡ್' ಆಡಲಿಕ್ಕೆ ಹಾರಿಹೋಗಿದ್ದರು.—ನಾನು ಕಣ್ಣು ತೆರೆದುದನ್ನು ನೋಡಿ ನನಗೂ ಒಂದು ಚೀಟು ಕೊಟ್ಟು ನನ್ನ ತಮ್ಮ ಕಿಲಕಿಲನೆ ನಗಲಾರಂಭಿಸಿದ. ಕಾಗದದ ತುಂಡಿನಲ್ಲಿ 'ಎಂಟು' ಎಂದಿತ್ತು.

ನನ್ನ ಮುಂದೆ ನಡೆದ 'ಬಯಲಾಟ'ದ ಕಾರಣವೆಲ್ಲ ತಿಳಿಯಿತು. ಎಲ್ಲವೂ 'ಬಿಡ್'ಗಾಗಿ. ಹೀಗೆ ಸಣ್ಣ ಕೂಸುಗಳಿಂದ ಅಂಕೆ ಬರೆದ ಕಾಗದದ ಚೂರು ತೆಗೆಸಿ 'ಬಿಡ್'ನಲ್ಲಿ ಆ ಅಂಕೆಗೆ ಹಣ ಸುರಿಸಿ ಫಲಿತಾಂಶ ನೋಡುತ್ತಾರೆ. ಕೋಳಿ ಒಂದು ದಿವಸದಲ್ಲಿ ಎಷ್ಟು ಕತ್ತಿಗಳನ್ನಿಡುತ್ತದೆಂದು ಎಣಿಸಿ ಆ ಸಂಖ್ಯೆಯನ್ನು 'ಬಿಡ್'ಗೆ ಜೋಡಿಸುವವರಿದ್ದಾರೆ. ಉಗುರುಗಳಿಗೆ ಮಸಿಯನ್ನು ಸವರಿ 'ಅಂಜನ'ವೆಂದು ಕರೆದು ಹೊಳೆವ ಆ ಮಸಿಯ ಮೇಲೆ ತೋರಬಹುದಾದ ಅಂಕೆಯೂ ಇವರ 'ಬಿಡ್''ಗೆ ಸುಳಿಯುತಿದ್ದೆ. ಕಣ್ಣು ಮುಚ್ಚಿ, ಬಾಯಿ ಸುಲಿದು ಕೈಕಾಲು ಮಡಚಿ ಇಲ್ಲವೆ ಮಾಡಿಸಿ ಮನಸ್ಸಿಗೆ ತೋರಬಹುದಾದ ಅಂಗವಿಕೃತಿಯ ಚಿತ್ರವನ್ನು ಅಂಕೆಗೆ ಹೋಲಿಸಿ ಅದನ್ನು 'ಬಿಡ್'ಗೆ ಬಿಡುವವರು ಎಷ್ಟಿಲ್ಲ? ಕೂಸಿನ ಹತ್ತಿರ ಕಾಗದದ ತುಂಡು ಕೊಡುವ ಬದಲು ಕಾಗದವನ್ನು ತುಂಡು ಮಾಡದೆ ಬಹುಜನರಿಂದ ಬಿಟ್ಟುಗೂ

[...ನೆಯ ಪುಟವನ್ನು ನೋಡಿ]

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರಸಭೆ:— ತಾ. ೨೩ರಲ್ಲಿ ಉಪಾಧ್ಯಕ್ಷರಾದ ಶ್ರೀ. ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಸೇರಿ ಯುದ್ಧ ಸಮಿತಿಯ ಸದಸ್ಯರಿಗೆ ನಗರ ಸಭೆಯ ಛತ್ರಗಳಲ್ಲಿ ಧರ್ಮಾರ್ಥ ಇರಲು ಅವಕಾಶ ಕೊಡಬೇಕೆಂದು ಬಂದಿದ್ದ ಸೂಚನೆಗೆ ನಗರ ಸಭೆಯು ಅಪಾಯ ಕಳಕೊಳ್ಳಲು ಇಷ್ಟಪಡುವುದಿಲ್ಲವೆಂದು ತೀರ್ಮಾನಿಸಲಾಯಿತು.

ಶ್ರೀ ರಾಮದಾಸ ನಾಯ್ಕರ ಬಿಡುಗಡೆ:— ಪಾಣೆ ಮಂಗಳೂರು ಶ್ರೀ. ರಾಮದಾಸ ನಾಯ್ಕರು ಸತ್ಯಾಗ್ರಹ ಮಾಡಿ ಬಂಧಿತರಾಗಿ ತಮ್ಮ ಆರು ತಿಂಗಳ ಸಜೆಯನ್ನು ಅನುಭವಿಸಿ ಆಲಿಪುರಂ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದಿರುವರು.

ಕಯ್ಯೂರು ಪ್ರಕರಣ:— ಕಯ್ಯೂರಿನಲ್ಲಿ ನಡೆದ ಪೋಲೀಸನ ಕೊಲೆಯ ವಿಚಾರದಲ್ಲಿ ವಿಚಾರಣೆ ನಡೆಸಲು ನಿಯೋಜಿತರಾದ ಸ್ಪೆಷಲ್ ತಹಶಿಲ್ದಾರ್ I ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಎಂ ಬಿ. ಶಂಕರರಾವ್ ಬಿ. ಎ. ಇವರು ಇದೇ ಜುಲೈ ತಾ. ೧೪ರಿಂದ ಮಂಗಳೂರಲ್ಲಿ ಆ ವಿಚಾರಣೆಯ ಕಾರ್ಯವನ್ನಾರಂಭಿಸುವರೆಂದು ತಿಳಿದುಬರುತ್ತಿದೆ.

ಶ್ರೀ ಬಿ. ನಾರಾಯಣರಾಯರ ಬಿಡುಗಡೆ— ಶ್ರೀ. ಬೋಳ ನಾರಾಯಣ ರಾಯರು ಕಣ್ಣಾನೂರು ಸೆರೆಮನೆಯಿಂದ ಬಿಡುಗಡೆ ಹೊಂದಿದ್ದಾರೆ.

ಪೋಲೀಸಿನವನಿಗೆ ಚೂರಿ ಹಾಕಿದ ಅಪಾದನೆ:— ತಾ. ೩೦ರಲ್ಲಿ, ಶ್ರೀ ಬಿ ಎಸ್. ರಾಜಾರಾವ್, ಆಸಿಸ್ಟಂಟ್ ಸೆಷನ್ಸ್ ಜಡ್ಜ್, ಇವರಿಂದ ಕಾಸರಗೋಡು ತಾಲೂಕು ಕರ್ಷಕ ಸಂಘದ ಒಬ್ಬ ಸದಸ್ಯನಾದ ಕಯ್ಯೂರು ಮಡಿತ್ತಿಲ್ ಅಪ್ಪು ಎಂಬವನಿಗೆ—ಪಟೇಲರ ಮನೆಯ ಜಗಲಿಯಲ್ಲಿ (ಕಯ್ಯೂರಿನಲ್ಲಿ) ಮಲಗಿದ್ದ ಪೋಲೀಸಿನವನನ್ನು ಕೊಲ್ಲಲು ಪ್ರಯತ್ನಿಸಿ ಪೋಲೀಸಿನವನಿಗೆ ಚೂರಿ ಹಾಕಿದನೆಂಬ ಆಪಾದನೆಯ ಮೇಲೆ ೬ ವರ್ಷ ಕಠಿನ ಶಿಕ್ಷೆ ವಿಧಿಸಿದರು.

ಚೂರಿ ಹಾಕಿದುದು ಆತ್ಮ ಸಂರಕ್ಷಣೆಗೆ:— ತಾ. ೨೮ರಲ್ಲಿ ಶ್ರೀ ಜಿ ಎಸ್. ಗೋಪಾಲನ್, ಸೆಷನ್ಸ್ ಜಡ್ಜ್ ಇವರು, ಕಾಸರಗೋಡು ತಾಲೂಕಿನ ಚಿಕ್ಕಿಲೆ ಪಳ್ಳಿಯ ಉಮ್ಮರ್ ಮತ್ತು ಇಬ್ರಾಹಿಂ—ಚೋಯಿ ಅಂಬು ಎನ್ನುವವನನ್ನು ತಮ್ಮ ಆತ್ಮ ಸಂರಕ್ಷಣೆಯ ಕಾರ್ಯಕ್ಕಾಗಿ ಅವರು ಚೂರಿ ಹಾಕಬೇಕಾಗಿ ಬಂದುದರಿಂದ ಆಪಾದಿತರಲ್ಲವೆಂದು ಬಿಡುಗಡೆ ಮಾಡಿದರು.

ದಕ್ಷ ಪಂಡಿತ ಸಂಘದ ೫ನೆಯ ವಾರ್ಷಿಕೋತ್ಸವವು:— ೨೯—೬—೪೧ರಲ್ಲಿ ಶ್ರೀ. ಹೊಸಬೆಟ್ಟು ರಾಮರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪರೋಡಿ ಶಿವಛಾಮಯ್ಯನವರ ನಿಧನದ ಬಗ್ಗೆ ಸಂತಾಪಸೂಚಕ ಠರಾವು ಪಾಸಾಯಿತು. ಮುಂದಿನ ವರ್ಷಕ್ಕೆ ಶ್ರೀ ಟಿ ನಾರಾಯಣ ಭಟ್ಟರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಸ್. ಎಲ್. ಮೊಂತೇರೋ ಮತ್ತು ಎನ್. ರಾಮದಾಸ ಬಳ್ಳಾಳ ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಕೆ. ಗೋಪಾಲಕೃಷ್ಣ ಶಾಸ್ತ್ರಿ ಮತ್ತು ಪಿ ಗೋಪಾಲಕೃಷ್ಣಯ್ಯ ಇವರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಲಾಯಿತು. ಸಂಘದ ವರ್ಷವನ್ನು ಜುಲಾಯಿ ಒಂದರಿಂದ ಜೂನ್ ಅಂತ್ಯದವರೆಗೆ ಎಂದು ಹಿಂದಿನ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲ್ಪಟ್ಟಿತು.

ಶ್ರೀ ವಿವೇಕಾನಂದ ಸಭೆ:— ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣಮಂದಿರದಲ್ಲಿ ಇದೇ ಜುಲೈ ತಿಂಗಳಲ್ಲಿ ಪ್ರತಿ ಆದಿತ್ಯವಾರ ಬೆಳಗ್ಗೆ ಗಂಟೆ ೮—೩೦ರಿಂದ ೯ರ ವರೆಗೆ ಕೀರ್ತನೆಯೂ ೯ರಿಂದ ೧೦ರ ವರೆಗೆ ಸೂಚಿಸಿದಂತೆ ಪ್ರವಚನಗಳೂ ನಡೆಯುವವು. ಸರ್ವರಿಗೂ ಸ್ವಾಗತವಿದೆ.

ಸಾಯಂ ಸಂಸ್ಕೃತ ಶಾಲೆ:— ಯ ಶ್ರಯದಲ್ಲಿ ಆಯುರ್ವೇದ ಶಿಕ್ಷಣದ ಏರ್ಪಾ

ದನ ಉದ್ಘಾಟನಾ ಕಾರ್ಯವು ಕಳೆದ ತಾ. ೨೬ ರಂದು ಕೊಡಿಯಾಲ ಬೈಲ್ ಪೆರ್ನಾಂಡಿಸರ ಮಾಳಿಗೆಯಲ್ಲಿ ಶ್ರೀ. ಕೃಷ್ಣಪ್ಪನವರ ಅಧ್ಯಕ್ಷತೆಯಿಂದ ಜರಗಿತು. ಆಯುರ್ವೇದ ವಿದ್ವಾನ್ ಶ್ರೀ. ಕೆ. ಎನ್. ಕುಬಣೂರಾಯ ಪ್ರಾಣಾಚಾರ್ಯರು ಉದ್ಘಾಟನೆ ಮಾಡಿದರು. ಸಾಹಿತ್ಯ ಶಿರೋಮಣಿ ಶ್ರೀ. ದೇವದಾಸರು ಹಿಂದೀ ವಿಭಾಗದ, ಮೈಸೂರಿನ ಶ್ರೀ ಗೋಪಾಲ ಅಯ್ಯಂಗಾರರು ಕನ್ನಡ ವಿದ್ವದ್ವಿಭಾಗದ, ಸಭಾಧ್ಯಕ್ಷರು ಸಂಸ್ಕೃತ ದ್ರಾವಿಡ ಹಿಂದೀ ಗ್ರಂಥ ಭಂಡಾರದ ಉದ್ಘಾಟನೆ ಮಾಡಿದರು.

ರೆವಿನ್ಯೂ ಮೆಂಬರರ ಸಂದರ್ಶನ:— ರೆವಿನ್ಯೂ ಮೆಂಬರರಾದ ಮಿ ಜಿ ಡಬ್ಲ್ಯು ಪ್ರೀಸ್ಟ್ಲಿ ಐ. ಸಿ. ಎಸ್., ಸಿ ಐ. ಇ ಅವರು ಮಡಿಕೇರಿ ಮಾರ್ಗವಾಗಿ ಕಳೆದ ಶನಿವಾರ ಮಂಗಳೂರಿಗೆ ಚಿತ್ತೈಸಿ, ಆದಿತ್ಯವಾರ ಕಲೆಕ್ಟರರ ಸಹಿತ ಕೂಳೂರನ್ನೂ, ಸೋಮವಾರ ವೇಣೂರನ್ನೂ ಸಂದರ್ಶಿಸಿದರು.

ಆಪಾದಿತರ ಬಿಡುಗಡೆ:— ಮಂಗಳೂರು ತಾಲೂಕಿನ ಕಲಂಬಿ ಹಳ್ಳಿಯಲ್ಲಿ, ಕೊಲೆಯ ಸಂಬಂಧವಾಗಿ ಒಂದು ಮೊಕದ್ದಮೆಯಲ್ಲಿ ತೀರ್ಪುಕೊಟ್ಟರು. ಅಳಿಯ ಸಂತಾನದ ಒಂದು ಕುಟುಂಬಕ್ಕೆ ಭತ್ತದ ಗದ್ದೆಯ ಹಕ್ಕಿನ ವಿಷಯ ಹೊಡೆದಾಟ ನಡೆದು. ಅದರ ಪರಿಣಾಮವಾಗಿ, ಜೂನ್ ೨೭ರಲ್ಲಿ ಆಸ್ಪತ್ರೆಯಲ್ಲಿ ತಲೆಗೆ ಪೆಟ್ಟು ಬಿದ್ದು ನರಳುತ್ತಿದ್ದ ದೊಡ್ಡ ತ್ಯಾಂಪಣ್ಣ ಶೆಟ್ಟಿಯು ಮೃತಪಡಲು, ಎರಡು ಪಕ್ಷದವರ ಮೇಲೂ ಪೋಲೀಸಿನವರು ಚಾರ್ಜ ಶೀಟು ಹಾಕಿದರು. ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರು, ತನಿಕೆ ನಡೆಯಿಸಿ, ಒಂದು ಪಕ್ಷದವರನ್ನು ಬಿಡುಗಡೆಮಾಡಿ, ಇನ್ನೊಂದು ಪಕ್ಷದ ನೇಮು ಶೆಟ್ಟಿ ಮತ್ತು ಚೀರಿ ನಾಲ್ಕು ಮಂದಿಗಳನ್ನು ಕಮಿಟ್ ಮಾಡಿದರು. ಸೆಷನ್ಸ್ ಜಡ್ಜರು ಭತ್ತದ ಗದ್ದೆಯು ಆಪಾದಿತನ ಪಾರ್ಟಿಯ ಸ್ವಾಧೀನವಿತ್ತೆಂದೂ ಮುದ್ದೈ ಪಾರ್ಟಿಯವರೇ ಬಲಾತ್ಕಾರ ನಡೆಸಿದವರೆಂದೂ ತೀರ್ಪು ಹೇಳಿ ಆಪಾದಿತರನ್ನೆಲ್ಲಾ ಬಿಡುಗಡೆ ಮಾಡಿದರು.

ವರ್ಗ:— ಶ್ರೀ. ಜಿನಾಗಿ ರೆಡ್ಡಿ ಇವರು ಕಾಸರಗೋಡು ಮುನ್ಸಿಫರಾಗಿಯೂ, ಅಲ್ಲಿ ಈಗಿರುವ ಶ್ರೀ. ಎಲ್. ಎ ವೈದ್ಯನಾಥ ಅಯ್ಯರ್, ಬಿ ಎ, ಬಿ. ಎಲ್, ಇವರು ಮಂಗಳೂರು ಎಡಿಶನಲ್ ಮುನ್ಸಿಫರಾಗಿಯೂ ವರ್ಗ ಹೊಂದಿರುವರು.

ನೇತ್ರಮ್ಯನ ಡಿ। ಮೆಡಿಕಲ್ ಆಫೀಸರ್ ಡಾ. ಉಳ್ಳಾಲ ಅನಂತಯ್ಯ, ಇವರು ಉದ್ಯೋಗ ನಿವೃತ್ತಿಗೆ ಪೂರ್ವ ನಾಲ್ಕು ತಿಂಗಳ ರಜೆ ಪಡೆದು (ನೆಲ್ಲೂರಿನಿಂದ) ಅವರ ಸ್ಥಾನಕ್ಕೆ ಕ್ಯಾಪ್ಟನ್ ಬೋಳ ದಯಾನಂದ ರಾಯರೂ, ಇವರ ಸ್ಥಾನಕ್ಕೆ (ದಾವಣಗೆರೆಯಿಂದ) ಡಾ. ಕುದುಪ್ಪರ ಮಾಧವ ಪ್ರಭುರವರೂ ವರ್ಗಹೊಂದಿದ್ದಾರೆ.

ಕ್ಯಾಪ್ಟನ್ ಸಿ ಕೃಷ್ಣ ಸ್ವೇನನರು ನಮ್ಮ ಜಿಲ್ಲಾ ಮೆ। ಆಫೀಸರರಾಗಿ ಉಡುಪಿಯಿಂದ ಇಲ್ಲಿಗೆ ಬಂದು ಚಾರ್ಜು ವಹಿಸಿಕೊಂಡರು.



ನಲವತ್ತು ವರ್ಷಗಳ ಪ್ರಖ್ಯಾತಿ

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಋತುಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವಜ್ವರನಿವಾರಿಣಿ
ಆಹಾರ, ವಿಹಾರ, ಋತು ಭೇದ ದೋಷದಿಂದ ಆಮಾಶಯದಲ್ಲಿ ಕ್ರಿಮಿಗಳು ಸೇರಿ ನಾನಾವಿಧವಾದ ಜ್ವರಗಳು ಸಂಭವಿಸುತ್ತದೆ. ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ನಾಶಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖಿ ಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್

ರಾಯಪೇಟೆ :: ಮದರಾಸು

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

ಪರಂಗಿಪೇಟೆ:— ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಶ್ರೀ ಎ ರಾಮನವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ಬಿ ಜಿ. ಕಾಮತರು ಎರಡನೆಯ ಭಾರಿ ಬಂಧಿತರಾದರು:— ಮೊದಲನೆಯ ಸಲ ಸತ್ಯಾಗ್ರಹ ಗೈದು ನಾಲ್ಕು ತಿಂಗಳ ಬಂಧನವನ್ನನುಭವಿಸಿ ಬಂದು ತಿಂಗಳು ಸತ್ಯಾಗ್ರಹ ಮಾಡಿ ದಕ್ಷಿಣ ಕನ್ನಡದಲ್ಲಿ ಬಂಧಿತರಾಗದೆ ಡಿಲ್ಲಿಯತ್ತ ಕಡೆ ತೆರಳಿದ ಶ್ರೀ. ಬಾರ್ಕೂರು ಗೋಪಾಲಕೃಷ್ಣ ಕಾಮತರು ಹೊಸ್ನಾಪುರದ "ಮುಗುಳ್" ಎಂಬಲ್ಲಿ ೧೮—೬—೪೧ರಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಬಂಧಿತರಾದರು.

ದಕ್ಷಿಣ ಕನ್ನಡ ಫ್ಲಡ್ ರಿಲೀಫ್ ಫಂಡು:— ದಕ್ಷಿಣ ಕನ್ನಡದಲ್ಲಿ ಈ ವರ್ಷದ ನೆರೆಹಾವಳಿಯಿಂದ ಪೀಡಿತರಾದವರಿಗೆ ಕಳೆದ ತಿಂಗಳ ತಾ ೮ ರಿಂದ ೩೦ರ ಅವಧಿಯಲ್ಲಿ ಸೋಷ್ಯಂಡ ನಿಧಿಯಿಂದ ಕೊಟ್ಟ ಸಹಾಯದ ವಿವರ

(೧) ಮಂಗಳೂರು ತಾಲೂಕಿನಲ್ಲಿ—೩೭ ಗ್ರಾಮಗಳು, ೬೮೧ ಕುಟುಂಬಗಳು ೩೨೧೦ ರೂಪಾಯಿ ಮೊಬಲಗು

(೨) ಕಾಸರಗೋಡು ತಾಲೂಕಿನಲ್ಲಿ—೧೭ ಗ್ರಾಮಗಳು, ೬ ಕುಟುಂಬಗಳು, ೨೯ ರೂಪಾಯಿ ಮೊಬಲಗು

(೩) ಕಾರ್ಕಳ ತಾಲೂಕಿನಲ್ಲಿ—೧ ಗ್ರಾಮ, ೬ ಕುಟುಂಬಗಳು, ೨೨ ರೂಪಾಯಿಗಳ ಮೊಬಲಗು

ಮಹಾಜನ ಫ್ಲಡ್ ರಿಲೀಫ್ ಕಮಿಟಿ

ನೆರೆಹಾವಳಿಯಿಂದ ಸಂಕಷ್ಟಗೊಂಡವರಿಗೆ ಕಾಂಗ್ರೆಸ್ ಕಮಿಟಿಯ ಮೂಲಕ ಸಹಾಯ ಮಾಡಿದ ಮಹನೀಯರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದ ಕ ಫ್ಲಡ್ ರಿಲೀಫ್ ಕಮಿಟಿ ರೂ. 1200 ಕೆನರಾ ಮ್ಯೂಚುವಲ್ ರಿಲೀಫ್ ಸೊಸೈಟಿ ರೂ 250 ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ರೂ 100, ಶ್ರೀ ಎಂ. ಕೆ ಕಾರ್ನಾಡ್ ಎಂಡ್ ಸನ್ಸ್ ರೂ 101 ಶ್ರೀ. ಎಂ ವೆಂಕಟೇಶ ಪೈ ರೂ 100, ಶ್ರೀ ಪುತ್ತು ವೈಕುಂಠ ಶೆಟ್ಟಿ ರೂ 100, ಎಸ್ ಕೆ. ಎ. ಡಬ್ಲ್ಯು. ಸೊಸೈಟಿ ರೂ 100, ಶ್ರೀ ಪಿ ಕ್ರಿಸ್ತ್ ಆಫ್ ಪೂಂಜ ರೂ 50 ಜಯಂತಿಲಾಲ ಬ್ರದರ್ಸ ರೂ 51, ದೂರಲ್ ಸಿ. ಸಿ. ಎಸ್ ಪುತ್ತೂರು ರೂ 50, ಲೇಬರ್ ಯೂನಿಯನ್ ರೂ 25 ... ಶ್ರೀ ... ಧರಲಾಲ್ ರೂ 20, ಶ್ರೀ ಕಲ್ಯಾಣಿ ಬಾಯಿ ರೂ 21 ಶ್ರೀ ಸಿ ಮಹಮ್ಮದ್ ರೂ 31, ಪಾಂಡ್ಯ ಜೀವನಲಾಲ್ ಮಾಯಾ ಶಂಕರ್ ಎಂಡ್ ಕಂಪೆನಿ ರೂ 25 ಸಿ ಪಿ ಸಿ ಎಂಪ್ಲೋಯೀಸ್ ರೂ 33-4-0 ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ರೂ. 10—7—0, ಶ್ರೀ ಎಸ್. ರಾಮರಾವ್ ರೂ. 25, ಶ್ರೀ ವಿ. ಎಸ್ ಕುಡ್ವ ರೂ 25, ಶ್ರೀ ಕೊಂಚಾಡಿ ಕೇಶವ ಶೆಟ್ಟಿ ರೂ 11, ಶ್ರೀ ಹಾಜಿ ಕೆ ಅಬ್ದುಲ್ ಖಾದರ್ ಬಾವಾ ರೂ. 15, ಶ್ರೀ ಎಲ್. ಸಿ. ಪಾಯಸ್ ರೂ 25 ಶ್ರೀ ಕೆ ಬಿ. ಜಿನರಾಜ ಹೆಗ್ಡೆ ರೂ 25, ಫ್ರಾಮ್ಜಿ ಭಗವಾನ್‌ದಾಸ್ ಎಂಡ್ ಕಂಪೆನಿ ರೂ. 22, ಶ್ರೀ ಜಯಂತಿಲಾಲ್ ಶೆಟ್ಟಿ ರೂ 11 ಜೊಯಿಂಟ್ ಬುಕ್ಕಿಂಗ್ ಆಫೀಸ್ ರೂ. 3-12-0, ಶ್ರೀ ಎಸ್ ಎಸ್ ರಾವ್, ರೂ. 5, ಕೋಟಿ ಜನಸೇವಕ ಸಮಿತಿ ರೂ. 10 2-0, ಶ್ರೀಮತಿ ಕೆ ಲೀಲಾವತಿ ನಾಯ್ಕ ರೂ. 5 0-0, ನ್ಯೂ ಸ್ಕೂಲ್ ವೀರ ಯೌವನಸ್ಥರ ಸಂಘ ರೂ 10, ಮುದ್ರಾಡಿ ಗ್ರಾಮಸ್ಥರಿಂದ ರೂ. 5, ಇತರ ಮೊಬಲಗು ಜಟ್ಟು ರೂ. 6-12-0 ಈ ಮೊಬಲಗನ್ನು ಕಾಂಗ್ರೆಸ್ ಸ್ವಯಂಸೇವಕರು ನೆರೆಹಾವಳಿಯಿಂದ ಕಷ್ಟನೊಂದ ಜನರಿಗೆ ಹಂಚಿರುವುದಲ್ಲದೆ, ಪ್ರತ್ಯೇಕವಾಗಿಯೂ ಬಟ್ಟೆಗಳನ್ನು ಒದಗಿಸಿಕೊಟ್ಟು ಆಯಾಯ ಕೇಂದ್ರಗಳಲ್ಲಿ ಭಾರಿವ ನೆರೆಯಿಂದ ಕಷ್ಟಗೊಂಡವರಿಗೆ ಸರ್ವವಿಧದ ಸಹಾಯಗಳ ...

ಮಾಸ್ಕೋವನ್ನು ಹಿಡಿಯುವುದು ಜರ್ಮನರ ಗುರಿಯೆ?

ರಶ್ಯ ಜರ್ಮನಿಗಳೊಳಗೆ ವಿಷಮ ಯುದ್ಧವು ನಡೆಯುತ್ತಿವೆ; ಇಕ್ಕಡೆಗಳಲ್ಲಿಯೂ ಅಪಾರ ಹಾನಿಯಾಗಿದೆ. ಜರ್ಮನರು ಒಮ್ಮೆಲೇ ಬಂದು ಮುತ್ತಿದ ಕಾರಣದಿಂದ, ಇದುವರೆಗೆ ಅವರಿಗೇ ಜಯವು ದೊರಕಿದೆಯೆಂದು ರಶ್ಯದ ಪ್ರಕಟಣೆಯಿಂದ ತಿಳಿಯುತ್ತದೆ. ಫಿನ್ಲೆಂಡಿನಲ್ಲಿ ಜರ್ಮನರು ಹಿಮ್ಮೆಟ್ಟಿರುವರಂತೆ. ಬ್ರಿಟನು ಅಮೇರಿಕಗಳು ರಶ್ಯನರಿಗೆ ಸಹಾಯ ಕೊಡಲು ಇಚ್ಛಿಸಿವೆ. ಸ್ಪೈನು ಜರ್ಮನಿಯ ಬೆಂಬಲ ನಿಲ್ಲುವುದಂತೆ. ಇಟೆಲಿ ಇತ್ತರಲ್ಲಿಯೇ ರಶ್ಯದ ವಿರುದ್ಧ ಯುದ್ಧ ಸಾರಿದೆ. ರಶ್ಯರಂತಹ ಮಹಾ ರಾಷ್ಟ್ರದೊಡನೆ ಯುದ್ಧ ಸಾರಿದ ಸಾಹಸಿ ಹಿಟ್ಲರನ ಧೈರ್ಯಕ್ಕೆ ಪ್ರಪಂಚವೇ ಬೆರಗಾಗಿರುವುದಾದರೂ; ಆತನ ಪತನಕಾಲವೂ ಇಲ್ಲಿಯೇ ಒದಗುವಹುದೆಂದು ಹಲವರು ಹೇಳುತ್ತಾರೆ.

೫೦,೦೦,೦೦೦ ಸೈನಿಕರು ಹೋರಾಡುತ್ತಾರೆ

ರಶ್ಯ–ಜರ್ಮನ್ ಘೋರ ಯುದ್ಧ

ರಶ್ಯ ಜರ್ಮನಿ ಯುದ್ಧಭೂಮಿಯಲಿ ೧,೭೦,೦೦೦ ಸೈನಿಕರು ಹೋರಾಡುತ್ತಿರುವ ಘೋರ ಕಾಳಗ ನಡೆಯುತ್ತಿದೆಯೆಂದು ತಿಳಿದುಬರುತ್ತದೆ. ರಶ್ಯದಲ್ಲಿ ಜರ್ಮನಿಗಿಂತ ವಿಮಾನ ಅಧಿಕವಾದರೂ, ಜರ್ಮನರಲ್ಲಿ ಟ್ಯಾಂಕುಗಳು ಅಧಿಕವಿವೆಯಂತೆ.

ರಶ್ಯದ ವಿರುದ್ಧ ಸ್ಪೈನ್

ರಶ್ಯದ ವಿರುದ್ಧ ಸ್ಪೈನೂ ಹೋರಾಡುವುದೆಂದು ತಿಳಿದಿದೆ. ಸ್ಪೈನಿನಲ್ಲಿ ಜೋರಾಗಿ ಸ್ವಯಂಸೇವಕರನ್ನು ಸಂಗ್ರಹಿಸಲಾಗುತ್ತಿದೆಯಂತೆ.

ರಶ್ಯಕ್ಕೆ ಜರ್ಮನರು ಎಂಟು ಕಡೆಗಳಿಂದ ನುಗ್ಗಿದರು

ಪೂರ್ವ ಪ್ರಶ್ಯದಿಂದ ಬೊಕವಿನಾ ಪ್ರಾಂತದ ವರೆಗೆ ಜರ್ಮನರು ಎಂಟು ಕಡೆಗಳಿಂದ ರಶ್ಯಕ್ಕೆ ಮುನ್ನುಗ್ಗಿದರು. ಬಾಲ್ಟಿಕ್ ರಾಷ್ಟ್ರ, ಬೋಕವಿನಾ ಪ್ರಾಂತಗಳನ್ನು ಮೊದಲು ಸ್ವಾಧೀನಪಡಿಸಲು ಜರ್ಮನರು ಬಯಸಿರುವರೆಂದು ಹೇಳಿಕೆಯಿದೆ. ಯುಕ್ರೇನನ್ನು ಹಿಡಿದು ಅಲ್ಲಿನ ಕೃಷಿ ಗನಿಗಳನ್ನು ಸ್ವಾಧೀನಪಡಿಸಲು ಆತುರಪಡುತ್ತಿರುವರಂತೆ. ಜರ್ಮನರ ಧಾಳಿಯು ಅತಿ ವೇಗವಾಗಿದೆ.

ಫಿನ್ಲೆಂಡ್ ಮತ್ತು ಬುಕಾರೆಸ್ಟಿನ ಮೇಲೆ ರಶ್ಯನರ ಧಾಳಿ

ಬುಕಾರೆಸ್ಟಿನ ಮೇಲೆ ರಶ್ಯನ್ ಯುದ್ಧ ವಿಮಾನಗಳು ಧಾಳಿಮಾಡಿದವು. ಫಿನ್ಲೆಂಡಿನ ನೈಋತ್ಯ ಭಾಗದ ಅಬೊ ಬಂದರಿನ ಮೇಲೂ ರಶ್ಯನ್ ಧಾಳಿಯಾಯಿತು.

ಬುಕಾರೆಸ್ಟಿನಿಂದ ರುಮೇನಿಯಾ ಸರಕಾರದ ಪಲಾಯನ

ರಶ್ಯದ ಉಗ್ರ ಧಾಳಿಯಿಂದ ರುಮೇನಿಯಾ ಸರಕಾರವು ರಾಜಧಾನಿಯನ್ನು ಬಿ

ಫಿನ್ಲೆಂಡ್ ಗಡಿಯಲ್ಲಿ ಜರ್ಮನರು ಹಿಮ್ಮೆಟ್ಟಿದರು

ರಶ್ಯ ಜರ್ಮನಿ ಸೈನ್ಯಗಳಲ್ಲಿ ಅಪಾರ ಹಾನಿಯೊದಗಿದೆ

ಟ್ಟು ಓಡಿಹೋಗಿರುವುದೆಂದು ತಿಳಿದಿದೆ. ಲಾಟ್ವಿಯದ ರಾಜಧಾನಿಯೂ ಜರ್ಮನರ ವಶವಾಗಿದೆ.

ಬಾಲ್ಟಿಕ್ ರಾಷ್ಟ್ರಗಳಲ್ಲಿ ಜರ್ಮನರ ಮುನ್ನಡೆ

ಬಾಲ್ಟಿಕ್ ರಾಷ್ಟ್ರಗಳಲ್ಲಿ ಜರ್ಮನರು ಮುಂದಡಿಯಿಡುತ್ತಾರೆ. ರಶ್ಯನರು ಕಲಿತನದಿಂದ ಕಾದಾಡುತ್ತಾರೆ.

ಹಿಟ್ಲರನಿಗೆ ರಶ್ಯನ್ ಪಿತೂರಿಗಾರರ ಸಹಾಯ?

ಸೋವಿಯೆಟ್ ಯೂನಿಯನ ಕೆಲವು ಭಾಗಗಳಲ್ಲಿ ಹಾಗೂ ಬಾಲ್ಟಿಕ್ ಪ್ರಾಂತ್ಯದಲ್ಲಿ ಹಿಟ್ಲರನಿಗೆ ಸ್ಟಾಲಿನ್ ವಿರುದ್ಧ ಬಂಡಾಯ ನಡೆಸುವವರ ಸಹಾಯ ಸಿಗಬಹುದೆಂದು ತಿಳಿಯುತ್ತದೆ. ಈ ಸಹಾಯದಿಂದ ಹಿಟ್ಲರನು ಹೆಚ್ಚಿನ ಕೆಲಸ ಮಾಡಲಿರುವನೆಂದು ಊಹೆ.

ಫಿನ್‌ಲೆಂಡೂ ರಶ್ಯ ವಿರುದ್ಧ

ವಾಗಿ ಯುದ್ಧ ಸಾರಿತು. 'ನಮ್ಮ ತಾಯಿನಾಡಿನ ಸ್ವಾತಂತ್ರ್ಯದ ಸಲುವಾಗಿ ಹೋರಾಡಲು ನಾವು ಸಿದ್ಧರಿದ್ದೇವೆ' ಎಂದು ಫಿನ್‌ಲೆಂಡಿನ ಅಧ್ಯಕ್ಷ ಡಾ. ರೀಟಿರು ಹೇಳುತ್ತಾರೆ.

ರಶ್ಯನ್ ವಿರುದ್ಧ ಇಟಲಿಯನರ ಯುದ್ಧ

ಬುಕೊವಿನದಿಂದ ಕಪ್ಪು ಕಡಲವರೆಗೆ ರಶ್ಯನರ ವಿರುದ್ಧ ಇಟಲಿಯನರ ಯುದ್ಧ ನಡೆಯುತ್ತಿದೆ.

ಮಾಸ್ಕೋದ ಕಡೆಗೆ ಜರ್ಮನ್ ದಂಡುಗಳ ಧಾಳಿ

ಮಿನ್‌ಸ್ಕ್ ಪಟ್ಟಣದ ಆಕ್ರಮಣ

ವಿಲ್ನಾ ಮಿನ್‌ಸ್ಕ್ ಪ್ರದೇಶದಲ್ಲಿ ರಶ್ಯದ ಸೈನ್ಯಗಳು ಹೊಸ ಜಾಗೆಯನ್ನು ಆಕ್ರಮಿಸಿಕೊಂಡಿರುವವೆಂದು ಪ್ರಕಟವಾಗಿದೆ. ಮಿನ್‌ಸ್ಕನ್ನು ಆಕ್ರಮಿಸಿಕೊಂಡ ಜರ್ಮನರು ಮಾಸ್ಕೋದ ಕಡೆಗೆ ಧಾಳಿ ಮಾಡುತ್ತಿದ್ದಾರೆಂದು ತಿಳಿದಿದೆ.

ಜರ್ಮನರಿಗೆ ಇದು ವರೆಗೆ ಯುದ್ಧದಲ್ಲಿ ಜಯದೊರಕಿರುವುದೆಂದು ಜರ್ಮನ್ ಪ್ರಕಟಣೆಯಿಂದಲೇ ತಿಳಿದು ಬರುತ್ತದೆ. ಲಾವು ಪ್ರದೇಶವನ್ನು ಆಕ್ರಮಿಸಿರುವುದಾಗಿ ಜರ್ಮನರ ಪ್ರಕಟಣೆಯಿದೆ.

ರಶ್ಯನರಿಗೆ ಅಪಾರ ಹಾನಿ

೨೫೮೨ ವಿಮಾನಗಳು ಮತ್ತು ೧೪೦೦ ಟ್ಯಾಂಕುಗಳ ನಾಶ

೨೫೮೨ ರಶ್ಯನ್ ವಿಮಾನಗಳೂ ೧೪೦೦ ರಶ್ಯನ್ ಟ್ಯಾಂಕುಗಳೂ ನಾಶವಾಗಿವೆಯೆಂದು ಪ್ರಕಟಣೆ.

ಹೊಟ್ಟೆಯ ಅಸ್ವಸ್ಥತೆ—ತಲೆನೋವು—ಕೆಲಸ ಮಾಡಲು ಸಾಗದೆ—ಅವನು ಕೆಲಸವನ್ನು ಕಳೆದುಕೊಳ್ಳುವುದರಲ್ಲಿದ್ದನು.



ಈಗ—ಉಲ್ಲಾಸಿತ ಆಫೀಸು ಕೆಲಸಗಾರ—ಆರೋಗ್ಯವಂತ ಮತ್ತು ಕೆಲಸದಲ್ಲಿ ಸಮರ್ಥ—ಯಾಕೆಂದರೆ ಆತನ ಅಂತರಂಗವು ನೈರ್ಮಲ್ಯವಾಗಿದೆ.

ಹೊಟ್ಟೆಯ ಅಸ್ವಸ್ಥತೆ, ಪಿತ್ತಬಾಧೆ ಮತ್ತು ಮಲಬದ್ಧತೆಯ ಬಾಧೆಗಳಿಗೆ ಒಂದು ಗ್ಲಾಸು ನೊರೆ ಬರುವ ಗುಣವುಳ್ಳ ತಂಪಾದ ಎಂಡ್ರೂಸ್ ಲಿವರ್ ಸೋಲ್ಟಿನಷ್ಟು ಉತ್ತಮವಾದುದು ಬೇರಾವುದೂ ಇಲ್ಲ. ಇದು ನಿಮ್ಮ ದೇಹದ ಒಳಭಾಗವನ್ನು ನೈರ್ಮಲ್ಯಗೊಳಿಸುತ್ತದೆ—ನಿಮ್ಮ ಅಸ್ವಸ್ಥತೆಗೆ ಕಾರಣವಾದ ಮಲೀನತೆಯನ್ನು ನಾಶಮಾಡುತ್ತದೆ. ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮಸೂತ್ರ. ಎಂಡ್ರೂಸ್ ಲಿವರ್ ಸೋಲ್ಟ್ ಅಂತರಂಗವನ್ನು ನೈರ್ಮಲ್ಯಗೊಳಿಸುತ್ತದೆ. ನಾಲಿಗೆಯನ್ನೂ ಬಾಯಿಯನ್ನೂ ಸ್ವಚ್ಛಗೊಳಿಸುತ್ತದೆ. ಯಕೃತ್ತನ್ನು ಸರಿಗೊಳಿಸುತ್ತದೆ ಮತ್ತು ಹೊಟ್ಟೆಯನ್ನು ನಿಧಾನವಾಗಿ ಪೂರ್ಣ ನೈರ್ಮಲ್ಯಗೊಳಿಸುತ್ತದೆ. ಎಂಡ್ರೂಸ್ ಸದಾಕಾಲ ಅಭ್ಯಾಸವಾಗುವಂತಿಲ್ಲ.

ಅಂತರಂಗ ನೈರ್ಮಲ್ಯಕ್ಕೆ ಕ್ರಮವಾಗಿ ಸೇವಿಸಿರಿ

ANDREWS
LIVER SALT

ಶುಚಿಗೊಳಿಸುತ್ತದೆ – ತಂಪುಗೊಡುತ್ತದೆ – ಆನಂದಪಡಿಸುತ್ತದೆ

ಸ.ಸ್ಕ.11ಅ

ದೊಡ್ಡ ಸೈಜು 1–4–0

NOTICE

In the Court of the District Munsif of Mangalore

O. S. No. 84/1941

Between:—

Joseph Mingel Mendonca ***Plaintiff***

and

1. Parameshri Hengsu, widow of Damarsa. 2. Ulliappa, son of Damarsa, Telegraphic Messenger both are residing at Bolar, Mangalore Thota village, Mangalore Town ***Defendants.***

To the Defendants

Take notice that the Plaintiff has filed the above suit against you for the recovery of Rs. 703-14-4 due by you on account of the two mortgages executed by you on 22-10-1934. The said suit stands posted to 8-7-1941 at 11 a. m. in the above Court for your appearance and in default, will be decided exparte.

(By order of the Court)

Mangalore, 26-6-1941 } (Sd) P. D. Souza B.A.B.L., (Sd) L. C. Pais B.A.B.L., Advocates for Plaintiff.

ಪಟವರ್ಧನರನ್ನು ಬಿಡುಗಡೆಮಾಡಿ ಬಂಧಿಸಿದರು!

ಮುನ್ಶಿಯವರು ರಾಜಿನಾಮೆಯಿತ್ತಿದ್ದಾರೆ

ಮುನ್ಶಿಯವರು ಆತ್ಮಸಂರಕ್ಷಣೆಗೆ ಅಹಿಂಸೆಯನ್ನುಪಯೋಗಿಸಬೇಕೆಂಬ ಗಾಂಧಿಜಿಯ ಅಭಿಪ್ರಾಯದ ವಿರುದ್ಧ ಭಿನ್ನಮತ ಪ್ರಕಟಿಸಿ ಕಾಂಗ್ರೆಸಿಗೆ ರಾಜಿನಾಮೆಯಿತ್ತಿದ್ದಾರೆ. ರಾವ್ ಸಾಹೇಬ್ ಪಟವರ್ಧನರನ್ನು ಬಂಧನದಿಂದ ಬಿಡುಗಡೆ ಮಾಡಿ ಪುನಃ ಬಂಧಿಸಿ ಒಂದು ವರ್ಷ ಶಿಕ್ಷೆವಿಧಿಸಿದ್ದಾರೆ. ಲೋಕಲ್ ಬೋರ್ಡ್ ಸದಸ್ಯರು ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಿದವರು ಸತ್ಯಾಗ್ರಹ ಮಾಡುವ ವಿಚಾರ ಆಚಾರ್ಯ ಕೃಪಾಲನಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಸತ್ಯಾಗ್ರಹವು ಮಂದಗತಿಯಿಂದಲಾದರೂ ಬಿಡದೆ ಸಾಗುತ್ತಿದೆ. ಅಂತರ್‌ರಾಷ್ಟ್ರೀಯ ಗೊಂದಲದಿಂದ ಭಾರತದ ರಾಜಕಾರಣವು ಸ್ವಲ್ಪ ತಟಸ್ಥವಾಗುವ ಪರಿಸ್ಥಿತಿ ತೋರುತ್ತದೆ.

ಎಂ. ಎನ್. ರಾಯಿಗಳ ಸೂಚನೆ

ನಾಗಪುರದಲ್ಲಿ ಸೇರುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕೌನ್ಸಿಲಿನ ಸಭೆಗೆ ಎಂ. ಎನ್. ರಾಯಿಗಳು ಒಂದು ಠರಾವನ್ನು ಕಳುಹಿಸಿರುವರು. ಅದರಲ್ಲಿ ಅವರು, ರಶ್ಯದ ಮೇಲೆ ನಾಜಿ ಧಾಳಿಯಾದುದರಿಂದ ಈ ಯುದ್ಧವನ್ನು ಸಾಮ್ರಾಜ್ಯ ಶಾಹೀಯುದ್ಧವೆಂದು ಹೇಳಬರುವಂತಿಲ್ಲವೆಂದೂ, ಅದ್ದರಿಂದ ಭಾರತೀಯ ಕೂಲಿಗಾರರಿಲ್ಲ ಬ್ರಿಟಿಷ್ ಸರಕಾರಕ್ಕೆ ಸಹಾಯಮಾಡಬೇಕೆಂದೂ ಹೇಳಿರುವರು.

ಆಬ್ದುಲ್ ಗಫರ್ ಖಾನರು

ಸ್ವಾಬಿಯಲ್ಲಿ ಆರಂಭವಾದ ಕೆಂಪಂಗಿಗಳ ಶಿಕ್ಷಣ ಶಿಬಿರದ ಕಾರ್ಯಕಲಾಪಗಳನ್ನು ಮುಗಿಸಿ ಗಾಂಧಿಜಿಯವರ ಸಂದರ್ಶನಕ್ಕಾಗಿ ವರ್ಧಾಕ್ಕೆ ತೆರಳಿರುವರು.

ಮುನ್ಶಿಯವರು ಕಾಂಗ್ರೆಸಿಗೆ ರಾಜಿನಾಮೆಕೊಡಲು ಕಾರಣ

ಅಹಿಂಸೆ ಮತ್ತು ಆತ್ಮಸಂರಕ್ಷಣೆಯ ಕುರಿತು ಗಾಂಧಿ—ಮುನ್ಶಿ ಭಿನ್ನಾಭಿಪ್ರಾಯ

ಮುಂಬಯಿ ಸರಕಾರದ ಹಿಂದಿನ ಮಂತ್ರಿಗಳಾದ ಶ್ರೀ. ಕೆ. ಯಂ. ಮುನ್ಶಿಯವರಿಗೆ ಅಹಿಂಸಾ ರೀತಿಯಿಂದ ಆತ್ಮಸಂರಕ್ಷಣೆ (self defence) ಮಾಡುವ ವಿಷಯದಲ್ಲಿ ಗಾಂಧಿಜಿಯವರ ಅಭಿಪ್ರಾಯದೊಡನೆ ಭಿನ್ನಾಭಿಪ್ರಾಯವುಂಟಾಗಿ, ಕಾಂಗ್ರೆಸಿಗೆ ರಾಜಿನಾಮೆಯಿತ್ತಿರುವರು. ಮುನ್ಶಿಯವರ ಈ ಅಭಿಪ್ರಾಯದ ಬಗ್ಗೆ ಗಾಂಧಿಜಿ ಅವರನ್ನು ಕೊಂಡಾಡುತ್ತಾ, ಅವರ ಅಭಿಪ್ರಾಯದಂತೆ ಕಾರ್ಯಕ್ರಮವನ್ನು ಮುಂದೊತ್ತಿ ಯಶಸ್ವಿಯಾಗಬೇಕೆಂದು ಹಾರೈಸಿದ್ದಾರೆ. ಮುನ್ಶಿಯವರು ತನ್ನ ಈ ರಾಜಿನಾಮೆಯ ಪರಿಣಾಮ ಪ್ರತಿಕ್ರಿಯೆಗಳನ್ನು ನೋಡಿ ತಾನು ಮುಂದಿನ ಮಾರ್ಗವನ್ನು ನಿಶ್ಚಯಿಸಲಿರುವೆನೆಂದು ಹೇಳಿದ್ದಾರೆ.

ರಾಜಕೀಯೇತರ ಕೈದಿಗಳನ್ನು ಬಿಡುವರು

ಮದರಾಸು ಸರಕಾರದ ಪ್ರಕಟಣೆ

ಸತ್ಯಾಗ್ರಹೀ ಕೈದಿಗಳ ಸಂಖ್ಯೆಯು ಹೆಚ್ಚಾದ್ದರಿಂದ ಜೈಲಿನಲ್ಲಿ ವ್ಯವಸ್ಥೆ ಮಾಡಲು, ಸಣ್ಣಪುಟ್ಟ ತಪ್ಪುಮಾಡಿ ಶಿಕ್ಷೆಗೆ ಗುರಿಯಾದ ರಾಜಕೀಯೇತರ ಕೈದಿಗಳನ್ನು ಬಿಡುಗಡೆ ಮಾಡುವ ವಿಚಾರವಾಗಿ ಮದ್ರಾಸು ಸರಕಾರವು ನಿರ್ಧರಿಸಿರುವುದಂತೆ.

ಲೋಕಲ್ ಬೋರ್ಡಿನ ಕಾಂಗ್ರೆಸ್ ಸದಸ್ಯರು ಸತ್ಯಾಗ್ರಹ ಮಾಡುವ ವಿಷಯ

ಕೃಪಾಲನಿಯವರ ಹೇಳಿಕೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಕೃಪಾಲನಿಯವರು ಒಂದು ಪ್ರಕಟಣೆ ಕೊಡುತ್ತಾ ಅದರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮುನ್ಸಿಪಾಲಿಟಿ ಮೊದಲಾದ ಸ್ಥಳೀಕ ಸಂಸ್ಥೆಗಳ ಸದಸ್ಯರು ಬಹುಮತಕ್ಕೆ ತೊಂದರೆಯಾಗದಿದ್ದರೆ ಅವರಲ್ಲಿ ಅಂಗೀಕಾರ ಪಡೆದ ಎಲ್ಲರೂ ಸತ್ಯಾಗ್ರಹ ಮಾಡಬೇಕೆಂದೂ, ಅವರಲ್ಲಿ ಯಾರಿಗಾದರೂ ಸತ್ಯಾಗ್ರಹ ಮಾಡಲು ಸಾಧ್ಯವಾಗದಿದ್ದರೆ ಅವರು ಪ್ರತಿಜ್ಞಾ ಪತ್ರವನ್ನು ಹಿಂತೆದುಕೊಳ್ಳಬಹುದೆಂದೂ, ಆದರೆ ಹಿಂತೆಗೆಯುವಾಗ ಸರಿಯಾದ ಕಾರಣ ಕೊಡದಿದ್ದರೆ ಅಂಥವರ ಹೆಸರನ್ನು ಲೋಕಲ್ ಬೋರ್ಡು ಕಾಂಗ್ರೆಸ್ ಪಾರ್ಟಿಯ ಹೆಸರಿನಿಂದ ತೆಗೆದುಹಾಕಲಾಗುವುದೆಂದೂ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿ ಅವನು ಪಾರ್ಟಿಗೆ ಅಗತ್ಯವಿದ್ದವನಾದರೆ ಅವನಿಗೆ ಆರು ತಿಂಗಳವರೆಗೆ ಅವಧಿ ಮುಂದರಿಸಲಾಗುವುದೆಂದೂ ಪಾರ್ಟಿಯು ತನಗೆ ಯಾರು ಯಾರು ಅಗತ್ಯವೆಂಬುದನ್ನು ನಿರ್ಧರಿಸಬೇಕೆಂದೂ ಬರೆದಿದ್ದಾರೆ.

ರಾಷ್ಟ್ರಪತಿ ಅಜಾದರ ಅಸ್ವಸ್ಥ

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರು ನೈನಿತಾಲ್ ಜೈಲಿನಲ್ಲಿ ಕಾಯಿಲೆಯಿಂದಿರುವರೆಂದು ತಿಳಿದುಬರುತ್ತದೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ, ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಇದುವರೆಗೆ ಬಳಲುವ ಮುಂದಿನೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರೆಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ, ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ.

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್: ... ಕಂಪೆನಿ, ಹಂಪನಕಟ್ಟೆ, ಮಂಗಳೂರು

NOTICE

In the Court of the District Munsif of Mangalore

S. C. Suit No. 72/1941

Between:---

A. R. D'Souza . . . *Plaintiff*,

and

Maurice Moris . . . *Defendant*.

To the Defendant

Take notice that the Plaintiff has filed a suit against for the recovery of Rs. 54-4-5 due by you on account of dealings in cloth carried on by you with him. The said suit stands posted to 4 July 1941 at 11 a. m. for your appearance and, in default, will be decided exparte.

(By order of the Court)

E. GONSALVES.

Advocate for Plaintiff

ಮಂಗಳೂರು ಪೇಟೆಯ ದವಸ ಧಾನ್ಯ ವಸ್ತುಗಳ ಧಾರಣೆಗಳು.

	ರಿಂದ	ವರೆಗೆ
1. (a) ಭತ್ತ ಅವ್ವಲ್ ತರದ ಸುಡ್ಡು ಮುಡಿಗೆ	—	—
(b) ,, ಮಧ್ಯಂ ,, ,, ,,	—	—
2. (a) ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	6—0—0	6—2—0
(b) ,, ಮಧ್ಯಂ ,, ,, ,,	5—12—0	
3. (a) ,, ಅವ್ವಲ್ ,, ಸುಗ್ಗಿ ,,	5—14—0	—
(b) ,, ಮಧ್ಯಂ ,, ,, ,,	5—10—0	5—10—0
4. (a) ತೆಂಗಿನಕಾಯಿ ಸುಲಿದವು 1000ಕ್ಕೆ	32—8—0	37—8—0
(b) ,, ಸಿಪ್ಪೆಯುಳ್ಳವು ,,	35—0—0	40—0—0
5. (a) ಕೊಬ್ಬರಿ ಆಫೀಸು ಖಂಡಿಗೆ	53—12—0	—
(b) ,, ದೇಶಿ	—	—
(c) ,, ದಿಲ್‌ಪಸಂದ್ ,,	—	—
6. ತೆಂಗಿನ ಎಣ್ಣೆ ಮಣಕ್ಕೆ	3—12—0	—
7. (a) ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	3—4—0	3—8—0
(b) ಸುಲಿದ ಅಡಿಕೆ ಖಂಡಿಗೆ (ಹಳ್ಳು)	—0—0	—0—0
(ಹೊಸ್ತು)	90—0—0	100—0—0
8. ಗೇರುಬೀಜ ಮುಡಿಗೆ	4—0—0	4—12—0
9. ಕಬ್ಬಿನ ಬೆಲ್ಲ ಖಂಡಿಗೆ	27—8—0	32—8—0
10. ಒಳ್ಳೆ ಮೆಣಸು ಮೆಂಬ್ರೆಡ್ ವೇಟೀಗೆ	18—0—0	18—8—0
11. (a) ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	6—0—0	7—8—0
(b) ಹುಡಿಯ ,, ,,	5—8—0	7—8—0
12. (a) ಮೈಸೂರಿನ ಹಲಕ್ಕೆ ಮಣಕ್ಕೆ	—0—0	—0—0
(b) ಕೊಡಗಿನ ,, ,,	60—0—0	65—0—0
13. (a) ಕುಮಟೆಯ ಮೆಣಸು ಖಂಡಿಗೆ	72—8—0	82—8—0
(b) ಕಾಸರಗೋಡು ,, ಮಣಕ್ಕೆ	8—0—0	—
(c) ಘಾಟದ	[illegible]	[illegible]

ಶಾಲಾ ಪುಸ್ತಕಗಳು

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ
ಪ್ರಾಥಮಿಕ ಲಘುವಿಜ್ಞಾನ
೬, ೭ ಮತ್ತು ೮ನೆಯ ತರಗತಿಗಳಿಗೆ
ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ
ಮಕ್ಕಳ ಪದ್ಯಮಂಜರಿ
ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ
೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ
ವ್ಯಾಕರಣ ಮತ್ತು ಪ್ರಬಂಧ
೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ.
ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—
೭ನೆಯ 0—2—6 ೮ನೆಯ 0—3—

ಸಿವಿಕ್ಸ್ ಅಥವಾ ಪ್ರಜಾಧರ್ಮ
೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು
೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12-39	ರೂ. 79½ ಕೋಟಿಗಿಂತ ಮಿಕ್ಕಿದ
ಫಂಡುಗಳು	,,	ರೂ. 25¼ ,, ,,
ವಾರ್ಷಿಕ ಆದಾಯ	,,	ಸುಮಾರು ರೂ. 4½ ಕೋಟಿಗೆ ,,

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೊಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

	ಅ	ದಿ ಇನ್‌ಸ್ಪೆಕ್ಟರ್
ಸೌತ್ ಪರೇಡ್,	ಥ.	ಕಾರ್ನಾಡ್ ಸದಾಶಿವರಾವ್ ರೋಡ್,
ಬೆಂಗಳೂರು.	ವಾ	ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

THE CANARA INDUSTRIAL & BANKING SYNDICATE, LIMITED.

Head Office: UDIPI.

(Estd 1925)

(Incorporated in British India. Liability of shareholders limited).

Authorised Capital	Rs. 50,00,000.
Subscribed Capital	Rs. 13,25,000.
Paid-up Capital	Rs. 5,75,000.
Reserves	Rs. 2,10,000.

38 Branches in the important commercial centres of Karnatak, Malabar and Rayalseema Districts and in Bombay.

All kinds of Banking business transacted.

Our new issue of Rs. 40 lakhs of 5% Tax Free Cumulative Preferene Shares of Rs. 10 each is an ideal form of safe and remunerative investment with unique features.

Apply for Prospectus.

22-6-1941



ನೋಟೀಸು

ದಿ ಅತ್ತೂರು ಎಂಡ್ ಜವಾಹರ್ ಬೇಂಕ್, ಲಿಮಿಟೆಡ್, ಮಂಗಳೂರು

ವಹಿವಾಟಿನ ಕ್ಷೇತ್ರವನ್ನು ಮುಂದರಿಸಲು ನಮ್ಮ ಬೇಂಕಿನ ಶಾಖೆಯೊಂದನ್ನು ತಾ. 29—6—'41ಕ್ಕೆ ಕಂಕನಾಡಿ ಮಾರ್ಕೆಟಿನ ಎದುರಿನ ಬಿಲ್ಡಿಂಗಿನ ಮಾಳಿಗೆಯಲ್ಲಿ ತೆರೆಯಲಾಗುವುದೆಂದು ತಿಳಿಸಲು ಅತ್ಯಂತ ಸಂತೋಷಪಡುತ್ತೇವೆ. ಸದ್ರಿ ಆಫೀಸಿನಲ್ಲಿ ಎಲ್ಲಾ ತರದ ಬೇಂಕ್ ವಹಿವಾಟುಗಳು ನಡೆಸಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಅತೀ ಕಮ್ಮಿ ದರದಲ್ಲಿ ಸಾಲಕೊಡಲಾಗುವುದು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

(Sd.) A. VAIKUNTA PRABHU

ನೂರೆಂಬತ್ತು ವರ್ಷ ಪ್ರಾಯದ ತರುಣ ತಪಸ್ವಿಗಳು!

ಕಾಯಕಲ್ಪ ಚಿಕಿತ್ಸೆಯಿಂದ ಪ್ರಸಿದ್ಧರಾದವರು
ತಪಸ್ವೀ ಮಹಾರಾಜರ ಉದಾತ್ತ ಜೀವನದ ಇತಿಹಾಸ

ಪಂಡಿತ ಮದನಮೋಹನ ಮಾಲವೀಯರಿಗೆ ಕಾಯಕಲ್ಪ ಚಿಕಿತ್ಸೆ ಮಾಡಿದ ಮೇಲೆ ತಪಸ್ವೀ ಮಹಾರಾಜರು ಅಖಿಲ ಭಾರತ ಕೀರ್ತಿಯನ್ನು ಗಳಿಸಿದರು. ಕಾಯಕಲ್ಪ ಚಿಕಿತ್ಸೆಯನ್ನು ಸ್ವತಃ ಮೂರು ಸಲ ಮಾಡಿಕೊಂಡು ಇಂದು ೧೮೦ ವರ್ಷ ಪ್ರಾಯದವರಾದರೂ ಅವರು ಕೇವಲ ೫೦ ವರ್ಷದವರಂತೆ ಉಜ್ವಲ ಶರೀರ ಶಕ್ತಿ ತೇಜಸ್ಸುಗಳಿಂದ ವಿರಾಜಮಾನರಾಗಿ ಸರ್ವರ [ಆದ]ರವಕ್ಕೆ ಪಾತ್ರರಾಗಿದ್ದಾರೆ. ಬಹಳ ಸ್ವಾರಸ್ಯವಾದ ಅವರ ಜೀವನೇತಿಹಾಸದ ಕೆಲವು ವಿವರಗಳು ಕೆಳಗೆ ಕೊಡಲಾಗಿವೆ.

ತಪಸ್ವಿ ಮಹಾರಾಜರವರಿಗೆ ೧೮೦ ವರ್ಷ ಪ್ರಾಯವಾಯಿತು ಎಂಬುದಕ್ಕೆ ಕೆಳಗಿನ ಪ್ರಮಾಣಗಳು ಆಧಾರವಾಗಿವೆ:

(೧) ಪಾಟಿಯಾಲದ ಮಹಾರಾಜ ಸಾಹೇಬ್ ಸಿಂಗರ ಕೈಕೆಳಗೆ ಅವರು ಸರಕಾರೀ ನೌಕರಿಯಲ್ಲಿದ್ದರು. ಪಾಟಿಯಾಲದ ಮಹಾರಾಜ ಸಾಹೇಬ್ ಸಿಂಗ್ ಮತ್ತು ಲಾಹೋರಿನ ಮಹಾರಾಜ ರಣಜಿತ್ ಸಿಂಗರ ಭೇಟಿಯ ಕಾಲದಲ್ಲಿ ತಪಸ್ವಿ ಮಹಾರಾಜರೂ ಹಾಜರಿದ್ದರು. ತನ್ನ ನಿವೃತ್ತಿಯ ವರ್ಷದ ಪ್ರಾಯದಲ್ಲಿ ಅವರು ನೌಕರಿಗೆ ರಾಜಿನಾಮೆ ಕೊಟ್ಟರು.

(೨) ಆ ಬಳಿಕ ಅವರು ಸಂಸಾರವನ್ನು ತ್ಯಜಿಸಿ ಹರಿದ್ವಾರಕ್ಕೆ ತೆರಳುವಾಗ ಡಿಲ್ಲಿಯಲ್ಲಿ ಮುಗಲ್ ಬಾದಶಹ ಬಹದ್ದೂರ್ ಶಹ II ನ ದರ್ಬಾರನ್ನು ಸಂದರ್ಶಿಸಿದ್ದರು.

❋

ತಪಸ್ವಿ ಮಹಾರಾಜರು ಬ್ರಹ್ಮಜ್ಞಾನಿಗಳಾಗಿದ್ದಾರೆ. ತನ್ನ ಪ್ರತಿಯೊಂದು ಕ್ರಿಯೆಯಲ್ಲಿಯೂ ಅವರು ಆ 'ಜ್ಞಾನ'ವನ್ನು ವ್ಯಕ್ತಪಡಿಸುತ್ತಾರೆ. ಅವರು ಸದಾ ಕಾರ್ಯನಿರತರಾಗಿರುವವರಾದರೂ ಯಾವುದೇ ಕೆಲಸವನ್ನಾದರೂ ಆ ಕಾರ್ಯದ ಪ್ರಯೋಜನಕ್ಕಾಗಿ ಮಾಡುವುದಿಲ್ಲ. 'ಓಂ' 'ಸಚ್ಚಿದಾನಂದ' 'ಪರಮಾತ್ಮ' ಎಂದು ಅವರು ಸದಾ ಧ್ಯಾನಿಸುತ್ತಾರೆ. ತ್ರಿಗುಣಾತೀತನಾದ ಪರಮಾತ್ಮನೊಡನೆ ತಾನೂ ಅಂತರ್ಗತನಿರುವೆನೆಂದು ಅವರ ನಂಬಿಕೆಯಿದ್ದೆ.

ದೈವಿಕ ಜ್ಞಾನವನ್ನು ಪಡೆಯಲು ಅವರು ಕೊಡುವ ಬೋಧನೆಯೆಂದರೆ ಚಿತ್ತದಿಂದ 'ಭ್ರಮೆ'ಯನ್ನು ಬಿಟ್ಟುಬಿಡಬೇಕೆಂಬುದು. ಅವರು ಉತ್ತಮ ಸಂಸ್ಕೃತ ಭಾಷಾ ಜ್ಞಾನಿಗಳು ಮಾತ್ರವಲ್ಲದೆ ಉಪನಿಷತ್ ವೈದಿಕ ಗ್ರಂಥ ಪಾರಂಗತರೂ ಆಗಿದ್ದಾರೆ. ಅವರ ತ್ಯಾಗವೆಂದರೆ ಪೂರ್ಣವಾದುದು. ಹಣವನ್ನಾಗಲಿ, ಸುಖವನ್ನಾಗಲಿ, ಪ್ರಚಾರವನ್ನಾಗಲಿ, ಅವರು ಹಾರೈಸುವುದಿಲ್ಲ. ಕಷಾಯ ವಸ್ತ್ರ ಮತ್ತು ಕಮಂಡಲುಗಳನ್ನು ಬಿಟ್ಟು ಅವರಿಗೆ ಸ್ವಂತ ಸೊತ್ತೆಂಬುದೇ ಇಲ್ಲ.

❋

ಸ್ವಾಮಿಜಿಗಳಿಗೆ ಈಗ ೧೮೦ ವರ್ಷ ಪ್ರಾಯ. ಆದರೂ ೫೦ ವರ್ಷದವರಂತೆ ತೋರುತ್ತಾರೆ. ಒಳ್ಳೆಯ ಆರೋಗ್ಯವಿದೆ. ಶಕ್ತಿ ಚೈತನ್ಯವಿದೆ. ಅವರ ಮುಖದಲ್ಲಿ ಆನಂದದ ತೆರೆಗಳೇಳುತ್ತವೆ. ಬಡವರನ್ನೂ ಧನಿಕರನ್ನೂ ಅವರು 'ಹರಿ ಓಂ' ಎಂದು ಹೇಳುತ್ತಾ ಸ್ವಾಗತಿಸುತ್ತಾರೆ. 'ತತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಎಂದು ಆಗಾಗ ಅವರು ಉಚ್ಚರಿಸುತ್ತಾರೆ.

❋

ಸ್ವಾಮಿಜಿಯರ ಜೀವನ ಬಹಳ ಸರಳ. ಅವರು ಸದಾ ಮುಂಜಾನೆ ೪ ಗಂಟೆಗೆ ಏಳುತ್ತಾರೆ. ಆ ಮೇಲೆ ಸ್ವಲ್ಪ ಹೊತ್ತು ಕುಳಿತುಕೊಳ್ಳುವುದು ಇಲ್ಲವೇ ನಡೆಯುವುದು ಅವರ ಕ್ರಮ. ೭ ಗಂಟೆಗೆ ಸ್ನಾನ ತೀರಿಸಿ ೭॥ ಅಥವಾ ೮ ಗಂಟೆಯ ಒಳಗೆ ಹಾಲು ತೆಕ್ಕೊಳ್ಳುತ್ತಾರೆ. ಆ ಮೇಲೆ ೧೧ ಗಂಟೆಯ ವರೆಗೆ ಬಂದವರನ್ನು ಸಂದರ್ಶಿಸುತ್ತಾರೆ, ಮದ್ದು ಕೊಡುತ್ತಾರೆ. ಮದ್ದು ಹೆಚ್ಚು ಖರ್ಚಿನದಾಗಿದ್ದರೆ ಪಟ್ಟಿ ಬರೆದು ಕೊಡುತ್ತಾರೆ. ಅವರು ಮದ್ದು ಮಾಡಿ ಅನೇಕರನ್ನು ಗುಣಪಡಿಸುವುದಿದ್ದರೂ ಅದು 'ಭಗವಾನ್‌ಕಾ ಕೃಪಾ' (ಭಗವಂತನ ದಯೆ) ಎಂದು ಹೇಳುತ್ತಾರೆ. 'ಭಗವಾನ್‌ಕಾ ಕೃಪಾಸೇ ಅಚ್ಛಾಹೋಗಾ' (ದೇವರ ದಯೆಯಿಂದ ಒಳ್ಳೆಯದಾಗುವುದು) ಎನ್ನುತ್ತಾರೆ. ೧೨ ಗಂಟೆಗೆ ಭೋಜನ ತೀರಿಸುತ್ತಾರೆ. ೩ ಅಥವಾ ೪ ಚಪಾತಿಗಳನ್ನು ತರಕಾರಿಯೊಡನೆ ಸ್ವಲ್ಪ ಅಕ್ಕಿಯ ಆಹಾರದೊಡನೆ ಊಟ ಮಾಡುತ್ತಾರೆ. ಮಧ್ಯಾಹ್ನದ ಊಟದ ನಂತರ ೩ ಗಂಟೆಯ ತನಕ ವಿಶ್ರಾಂತಿ ತೆಗೆದುಕೊಳ್ಳುವರು. ಆ ಮೇಲೆ ಅನೇಕರು ಸಂದರ್ಶನಕ್ಕೆ ಬಂದವರೊಡನೆ ಮಾತುಕತೆ ನಡೆಯುವುದು. ಸಂಜೆ ೭॥ ಯಿಂದ ೮ರ ಒಳಗೆ ಒಂದು ಅಥವಾ ಎರಡು ಚಪಾತಿಗಳೊಡನೆ ಸ್ವಲ್ಪ ಅನ್ನ ತರಕಾರಿಗಳನ್ನು ಸೇರಿಸಿ ಆಹಾರ ತೀರಿಸುತ್ತಾರೆ. ೯ರಿಂದ ೧೦ ಗಂಟೆಯ ಒಳಗೆ ನಿದ್ರೆಗೆ ಹೋಗುತ್ತಾರೆ. ಒಂದು ಅಥವಾ ಎರಡೇ ನಿಮಿಷಗಳಲ್ಲಿ ಅವರಿಗೆ ನಿದ್ರೆ ಹತ್ತುತ್ತದೆ.

❋

ಸ್ವಾಮಿಜಿಯವರು ಹಿಂದಿ ಅಥವಾ ಪಂಜಾಬಿ ಎರಡು ಭಾಷೆಗಳಲ್ಲಿ ಮಾತ ನಾಡುವರು. ಬೆಂಗಳೂರಿನಿಂದ ೩೦ ಮೈಲು ದೂರದ ದಿಬಿಗಿರಿಯ 'ವಿಷ್ಣು ಆಶ್ರಮ'ದಲ್ಲಿ ಸ್ವಾಮಿಜಿ ವಾಸಿಸುತ್ತಾರೆ. ಆಷಾಢದ ವರೆಗೆ ಅಲ್ಲಿ ಅವರು ಉಳಕೊಂಡು ಮತ್ತೆ ಮಧುರೆಯ ಅವರ ಇನ್ನೊಂದು ಆಶ್ರಮವಾದ 'ವಿಷ್ಣು ಧಾಮ'ಕ್ಕೆ ತೆರಳುವರು. ಯಾವಾಗಲೂ ಕರ್ಮತತ್ಪರನಾದ ಮನುಷ್ಯನೊಬ್ಬನನ್ನು ನೋಡಬೇಕಾಗಿದ್ದರೆ ತಪಸ್ವೀ ಮಹಾರಾಜರನ್ನೇ ನೋಡಬೇಕು.

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್

K.A.2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE

Canara Banking Corporation Limited

(Incorporated in British India)

ESTD: 1906.

HEAD OFFICE: **UDIPI**, *South Kanara.*

SEASON DEPOSITS

ARE now accepted at all our Offices at the following rates of interest :

2 & 3 months	... ...	3% p. a.
4 & 5 "	... ...	3¼% p. a.

These deposits will not be allowed to run beyond September 1941.

ಗಡ್ಡ ಬೆಳೆಸುವುದರಿಂದ ಹಿಟ್ಲರನನ್ನು ಗೆಲ್ಲಬಹುದಂತೆ!

ಸ್ಟೇಟ್ಸ್ ಮೆನ್ ಪತ್ರಿಕೆಯಲ್ಲಿ ಒಂದು ಲೇಖನ

ಯುದ್ಧ ವೆಚ್ಚಕ್ಕಾಗಿ ಎಲ್ಲರೂ ಮಿತ ವ್ಯಯಮಾಡಬೇಕು, ಹಣವನ್ನು ಉಳಿಸಬೇಕು; ಆಗ ಮಾತ್ರ ನಾವು ವಿಜಯಿಗಳಾಗಬಹುದು ಎಂದು ಸರಕಾರವು ಹಿತಬೋಧೆ ಮಾಡುತ್ತಿದೆ. ಆದರೆ ಖರ್ಚನ್ನು ಕಡಿಮೆಮಾಡಿ ಹಣವನ್ನು ಉಳಿಸಲಿಕ್ಕೆ ಅದು ಯಾವದಾದರೊಂದು ವ್ಯವಹಾರಿಕವಾದ ಸೂಚನೆಯನ್ನು ಕೊಟ್ಟಿರುವುದಿಲ್ಲ. ಅದಕ್ಕೆ ಸ್ಟೇಟ್ಸ್‌ಮೇನ್ ಪತ್ರಿಕೆಯಲ್ಲಿ ಯಲ್. ಡಬ್ಲ್ಯು ಕಾರರು ಒಂದು ಉತ್ತಮವಾದ ಉಪಾಯವನ್ನು ಸೂಚಿಸಿದ್ದಾರೆ.

ಯಾರೂ ಕ್ಷೌರಮಾಡಬಾರದು; ಎಲ್ಲರೂ ಗಡ್ಡ ಬೆಳೆಸಬೇಕು ಎಂದು ಅವರು ಹೇಳಿದ್ದಾರೆ. ಕ್ಷೌರ ತೆಗೆಯುವುದೂ, ಮಾಡುವುದೂ ಒಂದು ವ್ಯರ್ಥ ಶ್ರಮವಾಗಿದೆ. ಅದರಿಂದ ತೊಂದರೆ ಬಹಳ. ಖರ್ಚೂ ಆಗುತ್ತದೆ. ಯುದ್ಧ ಕಾಲದಲ್ಲಂತೂ ಈ ರೀತಿ ಸಮಯ ಮತ್ತು ಹಣದ ಅಪವ್ಯಯವಾಗುವುದು ದೊಡ್ಡ ಅಪರಾಧವಾಗಿದೆ.

ಒಬ್ಬನು ತನ್ನ ೧೭ನೆ ವರ್ಷದಿಂದಾರಂಭಿಸಿ ಗಡ್ಡ ತೆಗೆಯಲು ಆರಂಭಿಸುತ್ತಾನೆ ಎಂದಿಟ್ಟುಕೊಂಡರೂ ಅವನಿಗೆ ೭೦ ವರ್ಷ ಪ್ರಾಯವಾಗುವಾಗ ಅವನು ತೆಗೆದ ಗಡ್ಡದ ಉದ್ದವು ೪೩ ಮೈಲು ೭ ಫರ್ಲಾಂಗು ಆಗುವುದು. ಮತ್ತೆ ಈ ಗಡ್ಡ ತೆಗೆಯುವ ಕೆಲಸಕ್ಕೆ ಈ ೫೩ ವರ್ಷಗಳ ಅವಧಿಯಲ್ಲಿ ೭೦೦ರಿಂದ ೭೦೦೦ ರೂಪಾಯಿಗಳ ತನಕ ಖರ್ಚಾಗುವುದು. ತಾನೇ ಮುಖ ಕ್ಷೌರ ಮಾಡುತ್ತಿದ್ದರೆ ಖರ್ಚು ಸ್ವಲ್ಪ ಕಡಿಮೆ; ಕ್ಷೌರಿಕನ ಬಳಿಗೆ ಹೋಗುತ್ತಿದ್ದರೆ ಅದು ಸ್ವಲ್ಪ ಜಾಸ್ತಿ—ಅಂತೂ ಆ ಖರ್ಚು ೭೦೦ ರೂಪಾಯಿಗಳಿಗೆ ಕಡಿಮೆಯಾಗುವುದಿಲ್ಲ!

೫೩ ವರ್ಷಗಳ ಅವಧಿಯಲ್ಲಿ ಒಬ್ಬನು ಕ್ಷೌರಕ್ಕಾಗಿಯೇ ಹಾಳು ಮಾಡುವ ಸಮಯವನ್ನು ಕೂಡಿಸಿದ್ದಾದರೆ ಅದು ಆರು ತಿಂಗಳಿಗೆ ಕಡಿಮೆಯಾಗುವುದಿಲ್ಲ. ಈ ಆರು ತಿಂಗಳುಗಳನ್ನು ಅವನು ಪೂರ್ತಿಯಾಗಿ ವ್ಯಾಪಾರ ವಹಿವಾಟುಗಳಿಗೆ ಉಪಯೋಗಿಸಿದರೆ ಅದರಿಂದ ಎಷ್ಟು ಹಣ ಸಂಪಾದನೆಯಾಗಲಾರದು? ಮತ್ತೆ ಅವನು ಆ ಸಮಯವನ್ನು ಆನಂದ ಭೋಗಕ್ಕಾಗಿಯೇ ಕಳೆದರೂ ಅವನಿಗೆಷ್ಟು ಸುಖಶಾಂತಿ ದೊರೆಯಲಾರದು? ಹೀಗಿದ್ದೂ ಮನುಷ್ಯನು ಆಯುಷ್ಯದ ಅತಿ ಮಹತ್ವದ ಆರು ತಿಂಗಳುಗಳ ಸಮಯವನ್ನು ಕ್ಷೌರದಂಥ ವ್ಯರ್ಥ ಕೆಲಸಗಳಿಗೆ ಉಪಯೋಗಿಸುತ್ತಿದ್ದಾನೆ.

ಕಾಲು ಮಿಲಿಯ ಬ್ಲೇಡುಗಳನ್ನು ತಯಾರಿಸಬೇಕಾದರೆ ಮುಕ್ಕಾಲು ಟನ್ ಉತ್ಕೃಷ್ಟವಾದ ಉಕ್ಕು ಬೇಕೆಂದು ಹೇಳಲಾಗುತ್ತದೆ. ಹೀಗೆ ಪ್ರತಿವರ್ಷ ಕ್ಷೌರಕ್ಕಾಗಿ ಎಷ್ಟು ಮಿಲಿಯ ಬ್ಲೇಡು ಮತ್ತು ಕ್ಷೌರ ಕತ್ತಿಗಳು ಮಣ್ಣು ಪಾಲಾಗುವುದಿಲ್ಲ? ಕ್ಷೌರವನ್ನು ಕಾನೂನು ಮೂಲಕ ನಿಷೇಧಿಸಿದರೆ, ಈ ಎಲ್ಲಾ ಉಕ್ಕನ್ನು ಹಿಟ್ಲರ ಶಾಹಿಯ ಸಮೂಲ ನಾಶಕ್ಕೆ ಯುದ್ಧೋಪಕರಣಗಳನ್ನು ತಯಾರಿಸಲು ಉಪಯೋಗಿಸಬಹುದಾಗಿದೆ.

ಕ್ಷೌರದ ಕೆಲಸವು ಬ್ಲೇಡುಗಳಿಂದಲೇ ಆಗುವುದಿಲ್ಲ. ಅದಕ್ಕೆ ಸಾಬೂನು ಬ್ರಶ್ಶು ಟವೆಲುಗಳೂ ಬೇಕು. ಮತ್ತೆ ಬ್ಲೇಡಿನಿಂದ ಗಾಯಗಳಾದಾಗ ರಕ್ತ ಸ್ರಾವವನ್ನು ನಿಲ್ಲಿಸಲಿಕ್ಕೆ ಸ್ಟಿಕ್ಕಿಂಗ ಪ್ಲಾಸ್ಟರ ಮೊದಲಾದ ಔಷಧಿಗಳೂ ಬೇಕು. ಸಂಕ್ಷೇಪದಲ್ಲಿ ಹೇಳುವದಾದರೆ ಕ್ಷೌರದ ಕೆಲಸವೊಂದನ್ನು ನಿಲ್ಲಿಸಿಬಿಟ್ಟರೆ ಅಪಾರ ಹಣವನ್ನೂ ಸಮಯವನ್ನೂ ಉಳಿಸಬಹುದಾಗಿದೆ.

ಕ್ಷೌರವನ್ನು ನಿಷೇಧಿಸಿದ್ದರೆ ಕ್ಷೌರಿಕರ ಗತಿಯೇನು? ಎಂದು ಯಾರಾದರೂ ಕೇಳಬಹುದು. ಈ ಕ್ಷೌರಿಕರು ವೃದ್ಧರಾಗಿದ್ದರೆ ಅವರಿಗೆ ಮಾಸಾಶನಕೊಟ್ಟು ಮನೆಗೆ ಕಳುಹಿಸಬಹುದು. ಮತ್ತೆ ಅವರು ದೃಢಕಾಯರಾದ ಪ್ರಾಯಸ್ಥರಾಗಿದ್ದರೆ ಅವರನ್ನು ಯುದ್ಧ ಕಾರ್ಯಕ್ಕೂ, ಯುದ್ಧೋಪಕರಣಗಳ ಕಾರ್ಖಾನೆಗಳಿಗೂ ಕಳುಹಿಸಬಹುದು. ಪ್ರಕೃತಿಗನುಕೂಲವಾದ ಜೀವನವನ್ನು ನಡೆಯಿಸಬೇಕೆಂಬುದೇ ದೇವರ ಇಚ್ಛೆ. ಹೇಗಿದ್ದರೂ ಯುದ್ಧಕಾಲದಲ್ಲಿ ಯಾದರೂ ಕ್ಷೌರವನ್ನು ನಿಷೇಧಿಸುವುದರಿಂದ ಲಾಭವಿದೆ; ಪ್ರಯೋಜನವಿದೆ; ಆದರೆ ಎಷ್ಟು ಮಂದಿಗೆ ಈ ಮಹನೀಯರ ಸೂಚನೆಯು ಪಥ್ಯವಾಗಬಹುದು?

ನಮ್ಮೋಣಿಯಲ್ಲಿ 'ಬಿಡ'

[೬ನೆಯ ಪುಟದಿಂದ ಮುಂದುವರಿದುದು]

ಧಿಪ ಜೇನಪನ ಅಂಗಡಿಗೆ ಮಾರಬಹುದಲ್ಲ! ಕೋಳಿಯ ಶಕ್ತಿಯನ್ನು ಎಣಿಕೆ ಮಾಡುವುದಕ್ಕಿಂತಲೂ ಅವನ್ನೇ ಹಿಂದು ಮುಂದು ನೋಡದೆ ನುಂಗಿ ಬಿಟ್ಟರೆ ದೇಹಕ್ಕೂ ಮನಸ್ಸಿಗೂ ಎಷ್ಟೋ ಸುಖವಾಗಬಹುದಲ್ಲ! ಉಗುರುಗಳಿಗೆ ಮಸಿ ಸವರುವುದಕ್ಕಿಂತಲೂ ನರಿತ ಕೂದಲಿದ್ದರೆ ನಷ್ಟವಾಗುವ ಮಸಿಯನ್ನು ಅದಕ್ಕೆ ಸವರಿ ಬಲಿತ ಕೂದಲಿನ ಬಲಭೀಮ[…]ಗಬಹುದಲ್ಲ!

ರಾಮು, ಸುಬ್ಬು, ಮುಂತಾದ ನಾ[…]ಗಳಲ್ಲಿಯಾದರೂ ಒಂದು ಬಗೆ[…] ಅರ್ಥವಿದೆ. ರಾಮುವೆಂದರೆ ಸ್ವಯ[…] ಶ್ರೀ ರಾಮಚಂದ್ರನ ಪುಣ್ಯನಾಮವ[…] ಒತ್ತಿ ತೆಳ್ಳಗೆ ಮಾಡಿಕೊಂಡದ್ದಲ್ಲವೆ[…] ಹಾಗೆಯೇ ಸುಬ್ಬುವಿನ ಹೆಸರೂ ಅ[…]ರೀತಿ ಹುಟ್ಟಿ, ಆದರೆ ಕಾಲವಶದಿಂ[…] ಅದು ಪ್ರೆಸ್ಸಿನಲ್ಲಿ ಒತ್ತಿ ಚಪ್ಪಟೆ ಮಾ[…]ದಂತಿದೆ. ಇದೇ ರೀತಿಯಲ್ಲಿ 'ಬಿಡ[…]' ಎಂಬ ಹೆಸರಿನ ಬರೇ ಎರಡಕ್ಷರದ ಅ[…] ಮಾತಾದರೂ, ನಾವು ಅದನ್ನು ನವ[…]ಕಲೆಯ ಮೇಲೆ ಎತ್ತಿಕೊಂಡಿದ್ದೇ[…] 'ಬಿಡ್' ಎಂಬ ಪದವು 'ಬಿಟ್ಟುಬಿಡ್' ಎಂಬ ಪದದ ಸಂಕುಚಿತ ರೂಪವಾ[…]ರಲೇಬೇಕೆಂದು ನನ್ನ ನಂಬುಗೆ. ಆ[…]ದರಿಂದ ನೀವು 'ಬಿಡ್'ನ್ನು ಬಿಟ್ಟು ಬಿ[…]ಬಾರದೇ? ನಿಜವಾಗಿಯೂ ನಿಮ್ಮ ನ[…] ಮುತ್ತಿಕೊಂಡಿರುವ 'ಬಿಡ್' ಮಂಗಳ[…]ರಿನಿಂದಲಾದರೂ ಮಾಯವಾಗಿ ಹೋ[…]ದೆ ನಿಮಗೂ ನಮ್ಮೋಣಿಯವರಿಗೆ ನಿಸ್ಸಂ[…]ದೇಹವಾಗಿ ಸುಖವಾಗುವುದು.

—ರತ್ನಾಕ[…]

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ|| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿನಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತವೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಜೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ–ಕ್ರೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಈ ವಾರದಲ್ಲಿ ನಿಮ್ಮ ಗ್ರಹಗತಿ ಹೇಗಿದೆ?

4-7-41ರಿಂದ 10-7-41ರ ವರೆಗೆ

ಲೇಖಕ- ಕೆ. ನಾರಾಯಣ ನಂಬಿಯಾರ್, ಜ್ಯೋತಿಷಿ, ಕರ್ನಾಟಕ ಗ್ರಂಥಾಲಯ ಭವಂತಿಕೇರಿ.

ಮೇಷ

ನಿಮಗೆ ಈ ವಾರದಲ್ಲಿ ದ್ವಾದಶದಲ್ಲಿ ಮಂಗಳನು ದ್ವಿತೀಯದಲ್ಲಿ ಶನಿಯೂ ಇರುವ ಕಾರಣ ಅಧಿಕ ಧನ ವ್ಯಯ, ಕುಟುಂಬಜನಾದಿಗಳಲ್ಲಿ ಅಸುಖ, ಸ್ತ್ರೀನೋಬಂಧನ, ಕಾರ್ಯಾಪಜಯ ಮತ್ತು ದ್ವಿತೀಯದಲ್ಲಿ ಗುರುವು, ತೃತೀಯದಲ್ಲಿ ಸೂರ್ಯನೂ ಇರುವುದರಿಂದ ವಾರದ ಆದಿಯಲ್ಲಿ ಮನ ಸಂತೋಷ, ಸ್ತ್ರೀಸುಖಪ್ರಾಪ್ತಿ, ಕೆಲಸ ವಿಷಯಾದಿಗಳಲ್ಲಿ ಸುಖ, ತಾ. ೪, ೫ ಈ ದಿವಸಗಳಲ್ಲಿ ಹೆಚ್ಚಿನ ಲಾಭವೂ ಸುಖವೂ ಉಂಟಾದೀತು ವ್ಯಾಪಾರಸ್ಥರಿಗೂ ನೌಕರರಿಗೂ ಈ ವಾರದಲ್ಲಿ ಹೆಚ್ಚಿನ ದೋಷವಿಲ್ಲ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾಲಾಭ ಮನ ಸಂತೋಷಗಳಾದೀತು

ವೃಷಭ

ಈ ರಾಶಿಯವರಿಗೆ ಏಕಾದಶದಲ್ಲಿ ಮಂಗಳನು ತೃತೀಯದಲ್ಲಿ ಶುಕ್ರನೂ ಇರುವುದರಿಂದ ಈ ವಾರದಲ್ಲಿ ಉತ್ತಮ ಜನರಿಂದ ಬಹುಮಾನ ಪ್ರಾಪ್ತಿ, ಶಯನಶಯನಾದಿ ಸುಖಪ್ರಾಪ್ತಿ ವ್ಯಾಪಾರಾದಿಗಳಲ್ಲಿ ಧನಲಾಭ, ಕಾರ್ಯಜಯ, ತಾ ೫, ೬, ೭ ಈ ದಿವಸಗಳು ಉತ್ತಮ, ತಾ ೮, ೯ ಈ ದಿವಸ ಹೆಚ್ಚಿನ ಕಷ್ಟ ಫಲವೂ ಉಂಟಾದೀತು ನೌಕರರಿಗೂ, ವ್ಯಾಪಾರಸ್ಥರಿಗೂ ಈ ವಾರದಲ್ಲಿ ಮಧ್ಯಮ ಫಲ. ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೆ ಉತ್ತಮ. ಜನಕ್ಲೇಶ, ಮನೋವ್ಯಾಧಿ ಷ್ಟ ಫಲವೂ ಉಂಟು

ಮಿಥುನ

ಈ ರಾಶಿಯವರಿಗೆ ದಶಮದಲ್ಲಿ ಅಂಗಾರಕನು, ಜನ್ಮದಲ್ಲಿ ಸೂರ್ಯನೂ ಇರುವ ಕಾರಣ ಆಯಾಸ, ಪ್ರಾಣಿಪೀಡೆಯು ಮೊದಲಾದ ಕಷ್ಟ, ಕಮಗವ್ಯಾಪಾರಗಳಲ್ಲಿ ತೊಂದರೆ, ನಿಮ್ಮಿಂದಲೇ ನಿಮ್ಮ ಕೆಲಸಕ್ಕೆ ಹಾನಿ, ಮನೋವ್ಯಾಕುಲತೆ ಮತ್ತು ದ್ವಿತೀಯ ಶುಕ್ರನಿರುವುದರಿಂದ ವಾರಾಂತ್ಯದಲ್ಲಿ ಸುಖಫಲವೂ ಉಂಟಾದೀತು. ತಾ. ೬, ೭, ೮ ಈ ದಿವಸ ವಿಶೇಷವಾಗಿ ಉತ್ತಮ ಫಲವೂ ದೊರಕುವುದು.

ಕರ್ಕಾಟಕ

ನಿಮಗೆ ಈ ವಾರದಲ್ಲಿ ಭಯ, ದೇಹಾಲಸ್ಯ, ಕಾರ್ಯಾಪಜಯ, ಮನೋದುಃಖ, ಪ್ರವಾಸಾದಿ ವಿಘ್ನ, ವೈರಿಗಳ ಕಾಟ ಮತ್ತು ಏಕಾದಶದಲ್ಲಿ ಶನಿಯೂ, ಗುರುವೂ ಇರುವುದರಿಂದ ಕಾರ್ಯಸಿದ್ಧಿ, ಧನಲಾಭ, ಉತ್ತಮ ಜನಸ್ನೇಹ, ಮುಂತಾದ ಗುಣಫಲವೂ ಉಂಟಾದೀತು. ತಾ. ೮, ೯ ಈ ದಿವಸವು ವಿಶೇಷವಾದ ಉತ್ತಮ ಫಲ, ನೌಕರರಿಗೆ ಸ್ವಲ್ಪ ಭಯವೂ, ಧನನಷ್ಟವೂ ಉಂಟಾದೀತು ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೆ ಕಾರ್ಯಾಪಜಯವು ಮನೋಚಿಂತಾದಿ ಫಲವೂ ಆಗಲಿವೆ.

ಸಿಂಹ

ಈ ರಾಶಿಯವರಿಗೆ ಈ ವಾರದಲ್ಲಿ ಕರ್ಮ ವ್ಯಾಪಾರ ಸುಖಪ್ರಾಪ್ತಿ, ಧನಲಾಭ, ಕಾರ್ಯ ಜಯ, ರಾಜ ಕಾರ್ಯಾದಿಗಳಲ್ಲಿ ಜಯ ಮತ್ತು ಅಷ್ಟಮ ಮಂಗಳನಿರುವ ಕಾರಣ ಭಯ ಮನೋಚಿಂತಾ, ವಿಚಾರ್ಯಕಾರ್ಯ ಭಂಗಾದಿ ದೋಷಫಲವೂ ಉಂಟಾದೀತು ತಾ ೪, ೫ ಈ ದಿವಸ ಅಧಿಕ ಧನಲಾಭ, ಕಾರ್ಯ ಜಯಾದಿಗಳಿಗೆ ಉತ್ತಮ, ನೌಕರರಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೂ ಈ ವಾರದಲ್ಲಿ ಉತ್ತಮ ಫಲದೊರೆಯುವುದು.

ಕನ್ಯಾ

ನಿಮಗೆ ಈ ವಾರದಲ್ಲಿ ಕಾರ್ಯಸಿದ್ಧಿ, ಅಧಿಕ ಲಾಭ, ದೇಹಸುಖ, ವಸ್ತ್ರಲಾಭಾದಿ ಉತ್ತಮ ಫಲವೂ, ಮಂಗಳನು ಸಪ್ತಮ ಭಾವದಲ್ಲಿರುವ ಕಾರಣ ಇಷ್ಟ ಜನರಲ್ಲಿ ಕ್ಲೇಶ, ಅಧಿಕ ಧನವ್ಯಯ, ಭಯ, ಮನೋದುಃಖಾದಿ ದೋಷಫಲವೂ ಉಂಟಾದೀತು, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರದಲ್ಲಿ ಬಹುಮಾನ, ಕಾರ್ಯ ಜಯಾದಿ ಉತ್ತಮ ಫಲವೂ ದೊರಕುವವು. ತಾ. ೫, ೬, ೭ ಈ ದಿವಸವೂ ಉತ್ತಮ ಫಲ ದೊರಕೀತು

ತುಲಾ

ಈ ರಾಶಿಯವರಿಗೆ ಕಾರ್ಯವಿಘ್ನ, ಧನನಷ್ಟ, ವಿಚಾರಕಾರ್ಯ ಭಂಗ, ದೇಹಾಯಾಸ, ಕುಟುಂಬ ಜನ ಕ್ಲೇಶ ಮತ್ತು ಷಷ್ಠದಲ್ಲಿ ಮಂಗಳನು ದಶಮದಲ್ಲಿ ಶುಕ್ರನೂ ಇರುವ ಕಾರಣ ಅಲ್ಪಸ್ವಲ್ಪ ಲಾಭವೂ, ಮನಃಸಂತೋಷವೂ, ಉಂಟಾದೀತು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಈ ವಾರದಲ್ಲಿ ಅಲ್ಪಸ್ವಲ್ಪ ಕಷ್ಟ ಫಲವೂ ಉಂಟಾಗುವುದು, ತಾ. ೮, ೯ ಈ ದಿವಸವು ಹೆಚ್ಚಿನ ಧನಪ್ರಾಪ್ತಿ, ಕಾರ್ಯ ಜಯಾದಿ ಫಲವಾದೀತು

ವೃಶ್ಚಿಕ

ನಿಮಗೆ ಈ ವಾರದಲ್ಲಿ ಕಾರ್ಯಹಾನಿ ಅಧಿಕ, ಧನವ್ಯಯ, ಮನೋವ್ಯಾಕುಲತೆ, ಉತ್ತಮ ಜನ ವಿರೋಧ, ಶತ್ರುಪೀಡ, ಪುತ್ರ ವಿಷಯ ತೊಂದರೆ, ಮತ್ತು ಸಪ್ತಮದಲ್ಲಿ ಗುರುವಿರುವ ಕಾರಣ ವಾರದ ಮಧ್ಯದಲ್ಲಿ ಅಲ್ಪ ಸ್ವಲ್ಪ ಸುಖವೂ ದೊರಕೀತು ತಾ ೧, ೬, ೭ ಉತ್ತಮ, ನೌಕರರಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೂ ಈ ವಾರ ಉತ್ತಮವಾದುದಲ್ಲ.



ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ ಇದು ನನ್ನ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೆ, ಅಂದವಾಗಿರಿಸುವುದು ಪರಿಮಳ ತನ್ನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತೈಸಿ ವಾಸಿಮಾಡಿ ವಿಷ ವಾರಕ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ನಿಮ್ಮ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡಹುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕೂರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ಒರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಪಿಳ್ಳೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ ಮಾರಲ್ಪಡುತ್ತಿದ್ದು ಸಣ್ಣ ಬಿಲ್ಲೆಯ (ಹಳೆಯ ಸೈಜು) ಆಕಾರದಲ್ಲಿಯೂ ದೊರಕುವುದು.

ಧನು

ಈ ರಾಶಿಯವರಿಗೆ ಗುರುಜನ ಕ್ಲೇಶ, ಪ್ರವಾಸಾದಿ ತೊಂದರೆ, ಕಾರ್ಯಾಪಜಯ, ಇಷ್ಟ ಜನರಲ್ಲಿ ಕಲಹ ಮತ್ತು ಇಷ್ಟ ಬಂಧು ಸಮಾಗಮ, ಸ್ತ್ರೀ ಜನ, ಶಯನ ಸುಖ, ನವೀನ ವಸ್ತ್ರಲಾಭ, ಧನ ಲಾಭ, ಇತ್ಯಾದಿ ಉತ್ತಮ ಫಲವೂ ಆದೀತು. ತಾ. ೪, ೫ ಉತ್ತಮ ಫಲ, ನೌಕರರಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಹೆಚ್ಚಿನ ದೋಷವಿಲ್ಲ.

ಮಕರ

ನಿಮಗೆ ಈ ವಾರದಲ್ಲಿ ಅಧಿಕ ಧನ ಪ್ರಾಪ್ತಿ, ವಿಚಾರ ಕಾರ್ಯಾದಿಗಳಲ್ಲಿ ಜಯ, ಉತ್ತಮ ಜನರಿಂದ ಬಹುಮಾನ ಪ್ರಾಪ್ತಿ, ಶತ್ರುಜಯ, ಮತ್ತು ಪಂಚಮದಲ್ಲಿ ಶನಿ ಇರುವ ಕಾರಣ ವಾರಾಂತ್ಯದಲ್ಲಿ ಅಲ್ಪ ಸುಖ, ಧನವ್ಯಯ, ಮನೋಚಿಂತೆಯೂ ಉಂಟಾದೀತು. ತಾ. ೮, ೯ ಈ ದಿವಸವೂ ಸ್ವಲ್ಪ ಕಷ್ಟಫಲ, ನೌಕರರಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಈ ವಾರದಲ್ಲಿ ಉತ್ತಮ ಫಲ.

ಕುಂಭ

ಈ ರಾಶಿಯವರಿಗೆ ಇಷ್ಟಜನರಿಂದ ಸನ್ಮಾನ, ಕಾರ್ಯಸಿದ್ಧಿ, ಅಧಿಕ ಧನಲಾಭ ಕಾರ್ಯಜಯ, ಮತ್ತು ಚತುರ್ದಶದಲ್ಲಿ ಶನಿ, ಪಂಚಮದಲ್ಲಿ ಸೂರ್ಯನೂ ಇರುವ ಕಾರಣ ವಿಚಾರಕಾರ್ಯಭಂಗ, ಬಂಧು ಮಿತ್ರರಲ್ಲಿ ಕ್ಲೇಶ, ಗೃಹದಲ್ಲಿ ಅಸುಖ, ದುಡ್ಡಿನ ವಿಷಯದಲ್ಲಿ ಹೆಚ್ಚಿನ ತೊಂದರೆ, ವೈರಿಗಳಿಂದ ಹೆಚ್ಚಿನ ಪೀಡೆಯೂ ಉಂಟಾದೀತು, ತಾ ೫, ೬, ೭ ಉತ್ತಮ ನೌಕರರಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಮಧ್ಯಮ ಫಲ.

ಮೀನ

ನಿಮಗೆ ಈ ವಾರದಲ್ಲಿ ಸ್ಥಾನಾಂತರ ಪ್ರಾಪ್ತಿ, ವಿಚಾರ ಕಾರ್ಯಾದಿಗಳಲ್ಲಿ ಅಪಜಯ, ಗುರು ಜನರಲ್ಲಿಯೂ ಮಿತ್ರ ಜನರಲ್ಲಿಯೂ ಕ್ಲೇಶ, ದೇಹಾಲಸ್ಯ ಮತ್ತು ವಾರಾರಂಭದಲ್ಲಿ ಕರ್ಮಸಂಬಂಧವಾಗಿ ಅಲ್ಪಸ್ವಲ್ಪ ಜಯವೂ, ಲಾಭವೂ ಉಂಟಾದೀತು. ನೌಕರರಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ವಾರಾಂತ್ಯದಲ್ಲಿ ಕಷ್ಟಫಲ. ತಾ. ೮, ೯ ಉತ್ತಮ.

ವಿಚಿತ್ರ ಪ್ರಪಂಚ

ಪ್ರಾರ್ಥನೆಯಿಂದ ಸತ್ತವಳು ಬದುಕಿದಳು!

ಹೈದರಾಬಾದಿನ ಕಾಝೀ ಪೇಟೆಯ ಒಬ್ಬ ಹೆಂಗಸಿಗೆ ಸರ್ಪ ಕಚ್ಚಿ ಎಷ್ಟು ಚಿಕಿತ್ಸೆ ಮಾಡಿದರೂ ಫಲವಾಗದೆ ಪ್ರಾಣ ಬಿಟ್ಟಳು. ಮತ್ತೆ ಮರುದಿನ ಅವಳು ಸತ್ತ ವಿಷಯವನ್ನು ರೈಲ್ವೆಯಲ್ಲಿ ನೌಕರನಾಗಿದ್ದ ಮಹ್ಮದ ಅಕ್ಬರನೆಂಬಾತನಿಗೆ ತಿಳಿಸಲು, ಅವನು ಅವಳ ಶವವನ್ನು ದಫನ ಮಾಡಕೂಡದೆಂದು ತಂತಿಕೊಟ್ಟು, ತಾನು ಕೂತಲ್ಲಿಯೇ ಪ್ರಾರ್ಥನೆಗೆ ಆರಂಭಮಾಡಿದ. ಸ್ವಲ್ಪ ಸಮಯ ಕಳೆದು ಹೋದ ಅನಂತರ ಸತ್ತ ಆ ಹೆಂಗಸು ಬದುಕಿಕೊಂಡಳು. ಮಹ್ಮದ ಅಕ್ಬರನ ಪ್ರಾರ್ಥನಾಶಕ್ತಿಯೇ ಅವಳು ಬದುಕಲಿಕ್ಕೆ ಕಾರಣವಾಯಿತೆಂದು ಹೇಳಿ ಜನರು ಅವನನ್ನೀಗ ಬಹಳ ಶ್ರದ್ಧೆಯಿಂದ ಕಾಣತೊಡಗಿರುವರು.

ಸ್ನಾನಮಾಡದ ಗಂಡ ಬೇಡ

ಅಮೇರಿಕದ ಸಣ್ಣ ಪ್ರಾಯದ ಒಬ್ಬ ಯುವತಿ ತನಗೆ ಗಂಡ ಬೇಡವೆಂದು ದಾಂಪತ್ಯ ವಿಚ್ಛೇದನಕ್ಕೆ ಅರ್ಜಿ ಮಾಡಿದ್ದಾಳೆ. ಅದಕ್ಕೆ-ಅವಳು ಕೊಟ್ಟಿರುವ ಕಾರಣವು ಸ್ವಾರಸ್ಯದ್ದಾಗಿರುವುದು. ಆಕೆಯ ಗಂಡ ಒಬ್ಬ ಕೂಲಿ ಅವನು ದಿನನಿತ್ಯ ಸ್ನಾನ ಮಾಡುವುದಿಲ್ಲ. ಎಲ್ಲಿಯಾದರೂ ತಿಂಗಳಿಗೊಮ್ಮೆ ಮೈಮೇಲಷ್ಟು ನೀರು ಚೆಲ್ಲಿ ಬಂದರಾಯಿತು ಮೈ ಎಲ್ಲ ನಾತವಾಗಿದೆ ಎಂದು ಅವಳೆಂದಿರುವಳು. ಇಂಥ ಗಂಡನೊಂದಿಗೆ ಇರುವುದು ಮಹಾಕಷ್ಟವೆಂದು ಜಡ್ಜರೂ ಅವಳ ಪರವಾಗಿ ತೀರ್ಪುಕೊಟ್ಟಿದ್ದಾರೆ. ಆದುದರಿಂದ ಆ ಪ್ರಾಣ್ಯಾತ್ಮ ಈಗ ತನ್ನನ್ನೊಪ್ಪುವ ಇನ್ನೊಬ್ಬ ಹೆಂಡತಿಯನ್ನು ಹುಡುಕಬೇಕಾಗಿದೆ— ಎಲ್ಲಿ ಹೋದರೂ ಎಲ್ಲ ಹೆಮ್ಮಕ್ಕಳು ಮೋರೆ ತಿರುಗಿಸುವರು.

ತಂದ್ರೆ ಮಗ ಒಟ್ಟಿಗೆ ಪಾಸು!

ಕಾಪುರ್ತಲ ರಾಜ್ಯದ ಒಂದು ನೌಕರಿಯಲ್ಲಿದ್ದ ಒಬ್ಬ ತಂದೆ ಮತ್ತು ಅವನ ಹದಿನಾರು ವರ್ಷ ಪ್ರಾಯದ ಮಗ– ಇಬ್ಬರೂ ಈ ಬಾರಿಯ ಪಂಜಾಬು ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾಗಿದ್ದಾರೆ. ತಂದೆ ಕಳೆದ ೨೦ ವರ್ಷಗಳಿಂದ ನೌಕರಿ ಮಾಡಿ ಮುದುಕನಾಗಿರುವನು. ಇಂಥ ಸಂಗತಿಗಳು ನಡೆಯುವುದಲ್ಲ ಪ್ರಾಯ ಹೋದ ವೃದ್ಧರಲ್ಲಿಯೂ ಪರೀಕ್ಷೆಗಳನ್ನು ಕೊಟ್ಟು ಪಾಸಾಗುವ 'ಹುಚ್ಚಿರುವುದು ಬಹಳ ಅಪೂರ್ವವಾಗಿದೆ.

ಗಾಂಧಿಯನ್ನು ನೋಡಲಂಜಿದ ವ್ಯಾಸರಾಯಿ?

ಭಾರತದ ವ್ಯಾಸರಾಯಿಯಾಗಿದ್ದ ಲಾರ್ಡ್ ವಿಲ್ಲಿಂಗ್ಡನ್ನರು ಗಾಂಧಿಯವರಿಗೆ ಹೆದರಿ ಹೋಗಿದ್ದರಂತೆ! ಗಾಂಧಿಯವರಲ್ಲಿ ಯಾರಲ್ಲೂ ಇಲ್ಲದ ಒಂದು ಅದ್ಭುತ ವಶೀಕರಣ ಶಕ್ತಿ ಇದೆ. ಅವರು ತಮ್ಮ ನಯನುಡಿಗಳಿಂದ ಎಂಥ ಕಠಿಣ ಹೃದಯವನನ್ನಾದರೂ ತನ್ನವನನ್ನಾಗಿ ಮಾಡಿಬಿಡುವರು. ಆದುದರಿಂದ ಗವರ್ನರ ಸುಮಾರಿಗೆ ಶ್ರೀ. ಬಿರ್ಲಾರವರೂ, ಆ ಮೇಲೆ ಆ ಕಾಲದ ಭಾರತ ಸಚಿವರೂ ಕೂಡ ಗಾಂಧಿಯವರನ್ನು ಕಂಡು ಸಂಭಾಷಿಸಬೇಕೆಂದು ವ್ಯಾಸರಾಯಿ ವಿಲ್ಲಿಂಗ್ಡನ್ನರನ್ನು ಬಹಳ ಒತ್ತಾಯ ಮಾಡಿದರೂ ಅವರು ಒಪ್ಪಲೆಲ್ಲ. ಅವರು ಗಾಂಧಿಯವರನ್ನು ನೋಡಲಿಕ್ಕೆ ಕೂಡ ಅಂಜುತಿದ್ದರು–ತಾನೆಲ್ಲಿ ಗಾಂಧಿಜಿಯ ಸೂತ್ರದ ಗೊಂಬೆಯಾಗುವೆನೋ ಎಂದು ಅವರ ಅಂಜಿಕೆಯಿತ್ತಂತೆ!

ವಿಜ್ಞಾನಯುಗ

ಆಯುಷ್ಯ ಹೆಚ್ಚಿಸುವ ಹೊಸ ಶೋಧ!

ನ್ಯೂಯೋರ್ಕಿನ ಒಂದು ವೈಜ್ಞಾನಿಕ ಮಂಡಲದ ಆಚಾರ್ಯರಾದ ಡಾಕ್ಟರ್ ವಿಲಿಯಂ ಎಂಬವರು ಮಾಡಿರುವ ಒಂದು ಶೋಧದ ಪ್ರಕಾರ ಮನುಷ್ಯನು ಇನ್ನೂರು ಮುನ್ನೂರು ವರ್ಷಗಳ ತನಕವೂ ಬದುಕಬಹುದೆಂದು ತಿಳಿದಿದೆ ಪ್ರತಿಯೊಂದು ಜೀವಿಯು ಸಾಯಲಿಕ್ಕೆ ರಕ್ತವು ಗಟ್ಟಿಯಾಗುವುದೇ ಕಾರಣ. ಪ್ರಾಯ ಏರುತಿದ್ದ ಹಾಗೆ ವೃದ್ಧಿಯಾಗುವ ಚೊತಿಸ್ಟೆರೊಲ್ ಎಂಬ ಒಂದು ಪದಾರ್ಥವು ಮರಣಕಾಲದಲ್ಲಿ ವಿಶೇಷ ಹೆಚ್ಚಾಗುವದರಿಂದ ರಕ್ತವು ಗಟ್ಟಿಯಾಗುವುದು. ಆದರೆ ರಕ್ತಕ್ಕೆ ಸೋಡಿಯಂ ಥಿಯೊಸ್ಯಾನ್ಯಾಟ್ ಎಂಬ ಪದಾರ್ಥವನ್ನು ಇಂಜೆಕ್ಟ ಮಾಡುವದರಿಂದ ಗಟ್ಟಿಯಾದ ರಕ್ತವು ಪುನಃ ತೆಳುವಾಗಿ ಜೀವಿಯು ಹೆಚ್ಚು ಕಾಲ ಬದುಕುವಂತಾಗುವದೆಂದು ಡಾಕ್ಟರ್ ವಿಲಿಯಂರವರು ಕಂಡುಹಿಡಿದಿರುತ್ತಾರೆ

ಅದ್ಭುತ ಸೂಕ್ಷ್ಮ ದರ್ಶಕ

ಅಮೆರಿಕಾ ರೇಡಿಯೋ ಕಾರ್ಪರೇಶನಿನವರು ಈ ವರೆಗೆ ಎಲ್ಲಿಯೂ ಉಪಯೋಗದಲ್ಲಿಲ್ಲದ ಒಂದು ದೊಡ್ಡ ಸೂಕ್ಷ್ಮದರ್ಶಕಯಂತ್ರವನ್ನು ನಿರ್ಮಿಸಿದ್ದಾರೆ. ಇದು ವಸ್ತುಗಳನ್ನು ಲಕ್ಷಪಾಲು ದೊಡ್ಡದು ಮಾಡಿ ತೋರಿಸುವುದು. ಈ ಯಂತ್ರದ ಬಳಕೆಯಿಂದ್ಲ ರೋಗಕಾರಣಗಳ ಅನೇಕ ಹೊಸ ಶೋಧಗಳು ನಡೆಯಬಹುದು. ಬೆಕ್ಟೀರಿಯಾಗಳ ರಚನೆ, ಗುಣಸ್ವಭಾವಾದಿಗಳ ವಿಷಯ ಹೆಚ್ಚಿನ ಸಂಗತಿಗಳು ನಮಗೆ ಗೊತ್ತಾಗಬಹುದು. ಈಗಾಗಲೇ ಈ ಯಂತ್ರವು ಕ್ಷಯದ ರೋಗಾಣುವಿನ ೪೭೦೦೦ ಪಾಲು ದೊಡ್ಡದಾದ ಚಿತ್ರವನ್ನು ತೆಗೆದಿದೆ. ಈ ಸೂಕ್ಷ್ಮ ಜೀವ್ಯಾಣುವಾಯಲ್ಲಿ ರೋಗಿಯ ಶರೀರವನ್ನು ತಿಂದು ಹಾಕುವ ಸೊಳ್ಳೆಗಳಿವೆಯೆಂದೂ ಆ ಸೊಳ್ಳೆಗಳ ತುದಿಯಲ್ಲಿ ಅಣುಗಳನ್ನ ಶತ್ರುಗಳಿಂದ ಕಾಪಾಡುವ ಒಂದು ಜಾಯ ಮೇಣದ ಹೊದಿಕೆಯಿದೆ ಎಂದು ಗೊತ್ತಾಗಿದೆ. ಚಿಕಿತ್ಸಕರು ಈ ಮೇಣ ಹೊದಿಕೆಯನ್ನು ನಾಶಮಾಡುವ ಬಂದ ಉಪಾಯವನ್ನು ಕಂಡುಹಿಡಿದರೆಂದರೆ ಮತ್ತೆ ಕ್ಷಯರೋಗಾಣುಗಳು ನಿಸ್ಸಂತನವಾಗುವ ದಿನವು ದೂರ ಉಳಿಯಲಾರದು.

ನೋಟೀಸು

ಮಂಗಳೂರು ಡಿಸ್ಟ್ರಿಕ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ಅಮ್ಲಜಾರಿ ನಂಬ್ರ 86/1941

ಯಲ್. ಯಂ. ಕೌಡೊ ವಾದಿ ಅರ್ಜಿದಾರ

ಎದುರಾಗಿ

ರಾಮಚಂದ್ರ ಶ್ಯಾನುಭಾಗ ಕೂಡಾ . . . . . ಪ್ರತಿವಾದಿರು ರೈಪಾಂಡೆಂಟರು

1ನೇ ರೆಸ್ಪಾಂಡೆಂಟು ಜಡ್ಜಮೆಂಟ ಡೇಟರ್ ರನಾದ ರಾಮಚಂದ್ರ ಶ್ಯಾನುಭಾಗ ವಿಟ್ಲ ಶ್ಯಾನಭಾಗರ ಮಗ ಮಂಗಳೂರು ಶಹರು ಪೈನ ಮಾರ್ಕೆಟ್ ಬಳಿ ಇರುವವರು.

3ನೇ ರೆಸ್ಪಾಂಡೆಂಟು ಸುಬ್ರಾಯ ಕಾಮತ್ ಮಂಗಳೂರು ಶಹರು ಪೈಕಿ ಬಂದರದಲ್ಲಿ ಸ್ವಸ್ತಿಕಾ ಕಾಫಿ ವ್ಯಾಪಾರಸ್ಥ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಯಲ್ ಯಂ. ಕವುಡೊನು ಡಿಕ್ರಿಯಲ್ಲಿ ಜವಾಬ್ದಾರಿಯಿದ್ದ ಆಸ್ತಿಯನ್ನು ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1941ನೇ ಇಸವಿ ಜುಲೈ ತಿಂಗಳು 9ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

ಮಂಗಳೂರು 24–6–'41   U. Krishna Shetty, Advocate for Petitioner.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:–

ದಿ ಪೋಪ್ಯುಲರ್ ಸ್ಟೋರ್ಸ್,

ಮಂಗಳೂರು.

Stockists: —

Messrs. Dadha & Co., MADRAS.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.

Apply for particulars–

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE. ESTD. 1901.

Branches:—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	...	5½ per cent
,, 1 ,,	...	...	4½ per cent
,, 6 months	...	...	3½ per cent
,, 3 ,,	...	...	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%.

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 **Regd. No. M. 3460**

ಸ್ವದೇಶಾಭಿಮಾನಿ

[ಸಂಪುಟ 33] ತಾರೀಕು 4—7—1941 [ಸಂಚಿಕೆ 27]

The Bombay Life Assurance Company, Ltd.

(ESTABLISHED 1908)

Death! { is not a matter of supposition, is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut

Car Street, Mangalore.

Central Station Road, Trivandrum.

Gautam Nivas, Charni Road, Bombay No. 4.

Post Box No. 337 Mount Road, Madras.

Visweswarapuram Circle, Bangalore City.

(Regd).

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ: ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, M...

Estd. 1906

ಸ್ವದೇಶಾಭಿಮಾನಿ

SWADESHABHIMANI



ಬ್ರಿಟನಿನಲ್ಲಿ ಯುದ್ಧ ಫಿರಂಗಿಗಳು ತಯಾರಾಗುತ್ತಿವೆ

KANNADA ILLUSTRATED WEEKLY

ಪರದೇಶಗಳಲ್ಲಿ ಪ್ರಯಾಸಪಡುವ ಭಾರತೀಯರು!

ಹೋಗುವವರ ಮೇಲೆ ನಿರ್ಬಂಧವಿದೆ! ಹೋದವರನ್ನು ಗಡೀಪಾರು ಮಾಡುವ ನಿರ್ಣಯವಾಗಿದೆ

ಕೆನಡಾದ ಕೆಲವು ವಿವರಗಳು

ಪ್ರವಾಸೀ ಭಾರತೀಯರ ಸ್ಥಿತಿಗತಿಗಳು ಪ್ರಪಂಚದ ಎಲ್ಲ ಕಡೆಗಳಲ್ಲಿ ಸರ್ವ ಸಾಧಾರಣ ಒಂದೇ ಪ್ರಕಾರ ಬಹಳ ನಿಕೃಷ್ಟವಾಗಿದೆ. ದಕ್ಷಿಣ ಆಫ್ರಿಕ ಮತ್ತು ಕೆನಡ ಈ ಎರಡು ದೇಶಗಳು ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದವುಗಳಾಗಿವೆಯಾದರೂ, ವರ್ಣದ್ವೇಷವು ದಕ್ಷಿಣ ಆಫ್ರಿಕದಲ್ಲಿರುವಷ್ಟು ಕೆನಡದಲ್ಲಿ ಪ್ರಬಲವಾಗಿರುವುದಿಲ್ಲವೆಂದು ತಿಳಿದಿದೆ. ಆದರೂ ಕೆನಡದ ಭಾರತೀಯರ ಸ್ಥಿತಿಗತಿಗಳು ಬಹಳ ಉತ್ತಮವಾಗಿದ್ದವೆಂದು ಯಾರೂ ಭಾವಿಸಬಾರದು. ಭಾರತೀಯರು ಮೊತ್ತಮೊದಲು ಕೆನಡಕ್ಕೆ ಹೋಗಿ ಅಲ್ಲಿ ಮನೆ ಮಾಡಿಕೊಂಡದು ೧೯೦೪ರಲ್ಲಿ ಆಗಿದೆ. ಅಂದಿನಿಂದ ೧೯೦೮ರ ತನಕ ಭಾರತದಿಂದ ಯಾರು ಬೇಕಾದರೂ ಕೆನಡಕ್ಕೆ ಹೋಗಿ ನೆಲಸಬಹುದಾಗಿದ್ದಿತು. ಅದಕ್ಕೆ ಕೆನಡ ಸರಕಾರದ ಯಾವ ನಿರ್ಬಂಧವೂ ಇರಲಿಲ್ಲ.

ನಿರ್ಬಂಧವಾಯಿತು

ಕೆನಡದಲ್ಲಿ ೧೯೦೮ರಲ್ಲಿ ಒಂದು ನಿರ್ಬಂಧ ಕಾನೂನು ಆಯಿತು. ಹಿಂದುಸ್ಥಾನದಿಂದ ನೆಟ್ಟಗೆ ಕೆನಡಕ್ಕೆ ಹೋಗುವವರಿಗೆ ಮಾತ್ರ ಅಲ್ಲಿ ಉಳಕೊಳ್ಳಲಿಕ್ಕೆ ಈ ಕಾಯದೆಯು ಅನುಮತಿ ಕೊಟ್ಟಿತು. ಇತರ ದೇಶಗಳಿಂದ ಬರುವ ಭಾರತೀಯರಿಗೆ ಅಲ್ಲಿ ಪ್ರವೇಶ ದೊರಕದಾಯಿತು. ಈ ಕಾಯದೆಯ ನಿಜವಾದ ಅಂತರ್ಯವೇನಿದೆ ಎಂಬುದರ ಪರೀಕ್ಷೆ ಮಾಡುವದಕ್ಕೋಸ್ಕರ ೧೯೧೪ರಲ್ಲಿ ಪಂಜಾಬಿನ ೬೦೦ ಮಂದಿ ಸಿಖ್ಖರು ಜಪಾನಿನ ಕಾಮುಕಾಟಮಾರು ಎಂಬ ಹಡಗನನ್ನು ಬಾಡಿಗೆಗೆ ತೆಗೆದುಕೊಂಡು ನೆಟ್ಟಗೆ ಕೆನಡಕ್ಕೆ ಪ್ರಯಾಣ ಹೊರಟರು. ಆದರೆ ಕೆನಡದ ಅಧಿಕಾರಿ ವರ್ಗವು ಈ ಪ್ರವಾಸೀ ಭಾರತೀಯರಿಗೆ ಕಾಯದೆಯ ಪ್ರಕಾರ ಕೆನಡದಲ್ಲಿ ಕಾಲೂರಲು ಬಿಡಲಿಲ್ಲ. ಆ ಭಾರತೀಯರು ಬಂದ ಹಾಗೆ ಬಹಳ ಕಷ್ಟಗಳನ್ನು ಅನುಭವಿಸಿ ಹಿಂದಿರುಗಬೇಕಾಯಿತು. ಈ ರೋಮಾಂಚಕಾರಿ ದುರಂತದ ಇತಿಹಾಸವನ್ನು ಭಾರತೀಯರೆಲ್ಲರು ಓದಲೇ ಬೇಕಾಗಿದೆ. ಅಂದಿನಿಂದ ಕೆನಡದಲ್ಲಿ ಯಾವ ಭಾರತೀಯನೂ ಹೋಗಿ ಮನೆ ಮಾಡಿಕೊಂಡಿರುವುದಿಲ್ಲ.

ಹಿಂದೆ ಹೋದವರು

೧೯೧೪ರ ಮೊದಲು ಹೋಗಿ ಮನೆ ಮಾಡಿಕೊಂಡಿದ್ದ ಭಾರತೀಯರು ಕೂಡ ಕೆನಡದಲ್ಲಿ ಸುಖ ಜೀವನವನ್ನು ನಡೆಸುತ್ತಿಲ್ಲ. ಆ ಭಾರತೀಯರಿಗೆ ಕೆನಡದಲ್ಲಿ ಮನೆ ಕಟ್ಟಿಕೊಳ್ಳುವ ಅಧಿಕಾರವಿತ್ತಾದರೂ ತಮ್ಮ ಹೆಂಡತಿ ಮಕ್ಕಳನ್ನು ಭಾರತದಿಂದ ಅಲ್ಲಿಗೆ ಕರೆಸಿಕೊಳ್ಳುವ ಅನುಮತಿ ಅವರಿಗೆ ಇರಲಿಲ್ಲ. ಅವರು ಅಲ್ಲಿ ಅಸ್ವಾಭಾವಿಕ ಜೀವನವನ್ನು ನಡೆಸಬೇಕಾಗಿದ್ದಿತು. ೧೯೨೨ರಲ್ಲಿ ಮಾನ್ಯ ಶ್ರೀನಿವಾಸ ಶಾಸ್ತ್ರಿಯವರು ಕೆನಡ ಸರಕಾರದೊಡನೆ ಈ ವಿಷಯವಾಗಿ ಚರ್ಚಿಸಿದ ಅನಂತರವೇ ಈ ಭಾರತೀಯರಿಗೆ ತಮ್ಮ ಹೆಂಡಂದಿರನ್ನೂ ೧೮ ವರ್ಷ ಮೀರದ ಮಕ್ಕಳನ್ನೂ ಕೆನಡಕ್ಕೆ ಕರೆಸಿಕೊಳ್ಳುವ ಅನುಮತಿ ದೊರೆಯಿತು. ಹೀಗೆ ಇಷ್ಟರ ತನಕ ಕೆನಡದಲ್ಲಿ ಹೋಗಿ ವಾಸವಾಗಿರುವವರೆಲ್ಲರು ಪಂಜಾಬಿನ ಸಿಖ್ಖರೇ ಆಗಿದ್ದಾರೆ. ಅವರೆಲ್ಲ ಬ್ರಿಟಿಷ ಕೊಲಂಬಿಯದಲ್ಲಿ ಮರದ ವ್ಯಾಪಾರ ಮಾಡಿ ಜೀವನ ಮಾಡುತ್ತಾರೆ. ಈಗ ಇವರ ಸಂಖ್ಯೆ ಸುಮಾರು ೧೫೦೦ ಇರುತ್ತದೆ.

ಗಡಿಪಾರು ಮಾಡಿತು

ಕಾಯದೆಯ ಮೇರೆಗೆ ಬಂದವರಲ್ಲವೆಂದು ಹೇಳಿ ೧೯೧೫ರಿಂದ ೧೯೧೮ರ ತನಕ ಕೆನಡ ಸರಕಾರವು ಪ್ರತಿ ವರ್ಷ ೨೦–೩೦ರಂತೆ ಭಾರತೀಯರನ್ನು ಗಡಿಪಾರು ಮಾಡಿತು. ಇದರಿಂದ ಆ ಕಾಲದಲ್ಲಿ ಭಾರತೀಯರು ಬಹಳ ಕಷ್ಟದ ಜೀವನವನ್ನು ನಡೆಸಬೇಕಾಗಿದ್ದಿತು. ಮತ್ತೆ ೨೦ ವರ್ಷಗಳ ತನಕ ಗಡಿಪಾರಿನ ಯಾವ ಸುದ್ದಿಯೂ ಕೇಳಲಿಲ್ಲ. ಆದರೆ ಎರಡು ವರ್ಷಗಳ ಹಿಂದೆ ಕೆನಡ ಸರಕಾರವು ಪುನಃ ಅದೇ ಆ ಹಿಂದಿನ ಕಾನೂನಿಗೆ ವಿರೋಧವಾಗಿ ಪ್ರವೇಶಮಾಡಿದರೆಂದು ಸುಮಾರು ೩೦೦ ಮಂದಿ ಭಾರತೀಯರನ್ನು ಗಡಿಪಾರು ಮಾಡುವ ಆಲೋಚನೆ ಮಾಡಿತು. ಆದರೆ ಸರಕಾರದ ಈ ವರ್ತನವು ಅನ್ಯಾಯಪೂರ್ಣ ಮತ್ತು ತಮ್ಮ ಪ್ರವೇಶವು ಕಾನೂನಿಗನುಸಾರವಾಗಿಯೆ ಆಗಿದೆ ಎಂಬ ಭರವಸೆ ಭಾರತೀಯರಿಗೆ ಇದ್ದುದರಿಂದ ಅವರು ಕೋರ್ಟುಗಳಿಗೆ ಹೋಗಿ ಸರಕಾರದ ವರ್ತನೆಯ ವಿರುದ್ಧ ಬಹಳ ವಾದಿಸಿದರು. ಆದರೂ ಒಳ್ಳೆಯ ಪರಿಣಾಮವಾಗಲಿಲ್ಲ.

ಪಾಂಡ್ಯರ ಉಪಕಾರ

ಇದೇ ಸಮಯ ಲೋಕ ಸಂಚಾರದ ಮೇಲಿದ್ದ ಮದ್ರಾಸಿನ ಡಾಕ್ಟರ ಪಾಂಡ್ಯರು ಕೆನಡಕ್ಕೆ ಬಂದರು. ಅವರು ಕೆನಡದ ಪ್ರಧಾನ ಮಂತ್ರಿ ಮೆಕೆಂಜಿ ಕಿಂಗರ ಭೇಟಿ ತೆಗೆದುಕೊಂಡು ಭಾರತೀಯ ಪ್ರವಾಸಿಗಳ ಕಷ್ಟಗಳ ಕುರಿತು ಅವರೊಡನೆ ಸಂಭಾಷಿಸಿದರು. ಅದರಿಂದ ೧೯೩೯ನೇ ಸಪ್ಟಂಬರ ತಿಂಗಳಲ್ಲಿ ಕೆನಡ ಸರಕಾರವು ಒಂದು ಆಜ್ಞಾ ಪತ್ರವನ್ನು ಹೊರಡಿಸಿ ಆ ೩೦೦ ಭಾರತೀಯರು ಕೆನಡದಲ್ಲೇ ಇರಬಹುದೆಂದು ಹೇಳಿತು ಮತ್ತು ಅದು ಈ ಭಾರತೀಯರಿಂದ ಜಾಮೀನಾಗಿ ತೆಗೆದುಕೊಂಡ ೧೨೦೦೦೦ ರೂಪಾಯಿಗಳನ್ನು ಅವರಿಗೆ ಹಿಂದಕ್ಕೆ ಕೊಟ್ಟಿತು. ಮತ್ತೆ ಪಾಂಡ್ಯರು ಬ್ರಿಟಿಷ ಕೊಲಂಬಿಯ ಪ್ರಾಂತೀಯ ಸರಕಾರದೊಡನೆಯೂ ಸಂಭಾಷಿಸಿ, ಅಲ್ಲಿ ಯೂರೋಪಿಯರಿಗಿರುವ ಅಧಿಕಾರ ಅನುಕೂಲತೆಗಳನ್ನು ಭಾರತೀಯರಿಗೆ ಕೊಡಿಸಿದರು.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು

			ರಿಂದ	ವರೆಗೆ
1	(a)	ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	—	—
	(b)	,, ದುಯಂ ,, ,, ,,	—	—
2	(a)	ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	6—0—0	6—2—0
	(b)	,, ದುಯಂ ,, ,, ,,	5—12—0	
3	(a)	,, ಅವ್ವಲ್ ,, ಸುಗ್ಗಿ ,,	5—14—0	—
	(b)	,, ದುಯಂ ,, ,, ,,	5—10—0	5—10—0
4.	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	32—8—0	37—8—0
	(b)	,, ಸಿಪ್ಪೆಯಿದ್ದದ್ದು ,,	35—0—0	40—0—0
5.	(a)	ಕೊಬ್ಬರಿ ಆಫೀಸು ಖಂಡಿಗೆ	53—12—0	—
	(b)	,, ದೀವಿ ,,	—	—
	(c)	,, ದಿಲ್‌ಪಸಂದ್ ,,	—	—
6.		ತೆಂಗಿನ ಎಣ್ಣೆ ಮಣಕ್ಕೆ	3—12—0	—
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—4—0	3—8—0
	(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	—0—0	—0—0
		(ಹೊಸ್ತು)	90—0—0	100—0—0
8		ಗೇರುಬೀಜ ಮುಡಿಗೆ	4—0—0	4—12—0
9.		ಕಬ್ಬಿನ ಬೆಲ್ಲ ಖಂಡಿಗೆ	27—8—0	32—8—0
10		ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	13—0—0	13—8—0
11	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	6—0—0	7—8—0
	(b)	ಹುಡಿಯ ,, ,,	5—8—0	7—8—0
12	(a)	ಮೈಸೂರು ಏಲಕ್ಕಿ ಮಣಕ್ಕೆ	—0—0	—0—0
	(b)	ಕೊಡಗಿನ ,, ,,	60—0—0	65—0—0
13.	(a)	ಕುಮುಟೆಯ ಮೆಣಸು ಖಂಡಿಗೆ	72—8—0	82—8—0
	(b)	ಕಾಸರಗೋಡು ,, ಮಣಕ್ಕೆ	3—0—0	—
	(c)	ಊರಿನ ,, ,,	4—0—0	—

ಸಮಶೀತಲವಾದ ರುಚಿಕರ ಓವಲ್‌ಟಿನ್

ಬಿಸಿಲು ದಿನಗಳಲ್ಲಿ ಒಂದು ಗ್ಲಾಸ್ ತಣ್ಣನೆಯ ಓವಲ್‌ಟಿನ್ ರುಚಿಕರವಾದ ಪಾನೀಯವಾಗಿರುವದಲ್ಲದೆ ಇದೇ ದೇಹಕ್ಕೆ ಪೋಷಣೆಯನ್ನೂ, ಚೈತನ್ಯವನ್ನೂ ಕೊಡುತ್ತದೆ. ಇದನ್ನು ತಯಾರಿಸುವುದು ಬಹು ಸುಲಭ. ಒಂದು ಗ್ಲಾಸ್ ತಣ್ಣನೆಯ ಹಾಲಿಗೆ ಸುಮ್ಮನೇ ಎರಡು ಟೀ ಚಮಚದಷ್ಟು "ಓವಲ್‌ಟಿನ್" ಅದನ್ನು ಸೇರಿಸಿ ಮತ್ತು ನಿಮಗೆ ಬೇಕಾದರೆ ಸಕ್ಕರೆಯನ್ನು ಬೆರಸಿ, ನಂತರ ಚೆನ್ನಾಗಿ ಕಲಕಬಿಡಿ. ನೆನಪಿನಲ್ಲಿಡಿ, ಬಿಸಿ "ಓವಲ್‌ಟಿನ್" ನಿಮಗೆ ಎಷ್ಟು ಒಳ್ಳೆಯದೋ ತಣ್ಣನೆಯ "ಓವಲ್‌ಟಿನ್" ಅಷ್ಟು ಒಳ್ಳೆಯದು — ಅಷ್ಟೇ ಪೋಷಣೆ ಕೊಡುತ್ತೆ, ಆನಂದದಾಯಕ ಚೈತನ್ಯದಾಯಕವಾಗಿದೆ. ಎಲ್ಲಾ ಔಷಧ ಮಾರುವವರಲ್ಲೂ ಮತ್ತು ಅಂಗಡಿಗಳಲ್ಲೂ ದೊರೆಯುತ್ತದೆ.

ಓವಲ್‌ಟಿನ್

OVALTINE

ಹಂಚುವವರು ಗ್ರೆಹಾಂಸ್ ಟ್ರೇಡಿಂಗ್ ಕಂ. [ಇಂಡಿಯಾ]ಲಿ. ಬಾಂಬೆ, ಕಲ್ಕತ್ತಾ, ಕರಾಚಿ, ರಂಗೂನ್, ಮತ್ತು ಮದ್ರಾಸು.

"ಓವಲ್‌ಟಿನ್" ಬಿಸ್ಕತುಗಳು

ರುಚಿಕರ, ಜೀರ್ಣಕರ, ಮತ್ತು ಪುಷ್ಟಿದಾಯಕ. ನೀವು ಕೊಳ್ಳಬಹುದಾದ ಬಿಸ್ಕತುಗಳಲ್ಲಿ "ಓವಲ್‌ಟಿನ್" ಬಿಸ್ಕತುಗಳು ಶ್ರೇಷ್ಠವಾದವು. ಅವುಗಳಲ್ಲಿ "ಓವಲ್‌ಟಿನ್" ಸೇರಿದೆ. [illegible] ಟಿನ್ಸ್, [illegible] ಟಿನ್ಸ್ ಪೆಕೆಟ್‌ಗಳಲ್ಲಿ ಮತ್ತು [illegible] ಪೌಂಡ್ ಡಬ್ಬಿಗಳಲ್ಲಿ ಮಾರುತ್ತಾರೆ.

OV/18/40

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

11–7–1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೧–೭–೧೯೪೧

ಹಿಟ್ಲರನನ್ನು ಪಟ್ಟಕ್ಕೇರಿಸಿ ಪಶ್ಚಾತ್ತಾಪ ಪಡುತ್ತಾನೆ!

ಥ್ಯಾಸನನ ಜೀವಕ್ಕೆ ಅಪಾಯವೊದಗಿದೆ

ಜರ್ಮನ್ ರಶ್ಯ ಒಡಂಬಡಿಕೆಯ ರಹಸ್ಯ ಬಲ್ಲವನು

ಮೊದಲು ಜರ್ಮನಿಯಿಂದ ಪಲಾಯನ ಮಾಡಿ ಫ್ರಾನ್ಸಿನಲ್ಲಿ ಆಶ್ರಯಪಡೆದ ಅನೇಕ ಮಂದಿ ಜರ್ಮನ್ ನಿರಾಶ್ರಿತರನ್ನು ವಿಚಿ ಸರಕಾರವು ಪುನಃ ಜರ್ಮನ್ ಸರಕಾರಕ್ಕೆ ಒಪ್ಪಿಸಿಕೊಡುವ ನಿರ್ಧಾರ ಮಾಡಿದೆ ಹೀಗೆ ಒಪ್ಪಿಸಲ್ಪಡುವ ನಿರಾಶ್ರಿತರಲ್ಲಿ ಫ್ರಿಜ್ ಥ್ಯಾಸನನೂ ಒಬ್ಬನಾಗಿರುವನು. ಪ್ರಾಯಶಃ ಅವನೀಗ ಕೊಲೆಗಡುಕರ ಕೊಡಲಿಯ ಬಾಯಿಗೆ ತಲೆಕೊಡಲು ಸಿದ್ಧನಾಗಿ ನಿಂತಿರಬೇಕು ಜರ್ಮನ ಗೂಢಚಾರರು ಥ್ಯಾಸನನನ್ನು ಜೀವಸಹಿತ ಜರ್ಮನಿಗೆ ಒಯ್ಯುವ ಮಹಾಪ್ರಯತ್ನ ಮಾಡಿದ್ದಾರೆ. ಯಾಕೆಂದರೆ ಹಿಟ್ಲರನು ಥ್ಯಾಸನನ ಮೇಲೆ ಕ್ರೋಧ ಸಂತಪ್ತನಾಗಿರುವನು; ಅವನೊಡನೆ ಪ್ರಬಲ ಸೇಡನ್ನು ತೀರಿಸಲಿಕ್ಕೆ ಆಲೋಚಿಸಿರುವನು. ಜರ್ಮನ್ ರಶ್ಯ ಒಡಂಬಡಿಕೆಯ ರಹಸ್ಯವೆಲ್ಲವೂ ಅವನಿಗೆ ಗೊತ್ತಾಗಿದ್ದಿತು ಈ ರಹಸ್ಯವನ್ನು ಅವನು ಮಿತ್ರರಾಷ್ಟ್ರಗಳಿಗೆ ಹೇಳಿಕೊಟ್ಟಿರಬೇಕೆಂಬ ಸಂದೇಹವು ಹಿಟ್ಲರನಿಗಿದೆ.

ಕಳೆದ ವರ್ಷ ಥ್ಯಾಸನನು ಫ್ರಾನ್ಸಿನ ಹಲವು ಪತ್ರಿಕೆಗಳಲ್ಲಿ ಹಲವು ಲೇಖನಗಳನ್ನು ಬರೆದು ಈ ಲೋಕ ಯುದ್ಧದಲ್ಲಿ ಜರ್ಮನಿಯ ಪರಾಜಯವು ಖಂಡಿತವೆಂದು ಸ್ಪಷ್ಟಪಡಿಸಿದ್ದನು. ಮಾತ್ರವಲ್ಲ, ರಶ್ಯ ಜರ್ಮನ್ ಒಡಂಬಡಿಕೆಯು ಆದ ಮೇಲೆ. ಅವನು ಒಬ್ಬ ಗಣನೀಯ ಮನುಷ್ಯನೊಡನೆ–"ಇಂದು ಜರ್ಮನಿಯು ರಾಕ್ಷಸೀ ಮಹಾತ್ವಾಕಾಂಕ್ಷೆಯುಳ್ಳ ಒಬ್ಬ ಧೂರ್ತನ ಕೈಯಲ್ಲಿದೆ. ಅವನೊಬ್ಬ ದೇವತಾಪುರುಷನೆಂದು ನಾವು ಎಣಿಸಿದ್ದೆವು. ಆದರೆ ಅಯ್ಯೊ! ಅವನೀಗ ಒಬ್ಬ ಅತಿ ಉನ್ಮತ್ತನಂತೆ ಆಗಿದ್ದಾನೆ" ಎಂದು ಹೇಳಿದ ಮಾತುಗಳು ಸರ್ವತ್ರ ಪ್ರಚಾರವಾಗಿವೆ.

ಥ್ಯಾಸನನ ಅಪರಾಧ

ಹಿಟ್ಲರನನ್ನು ಥ್ಯಾಸನನು ಇಂದು ದೂರುವನಾದರೂ ೧೯೩೩ರಲ್ಲಿ ಹಿಟ್ಲರನನ್ನು ಅಧಿಕಾರ ಪದವಿಗೇರಿಸಿದ ಕಾರ್ಯವು ಈ ಥ್ಯಾಸನನ ಪಾಲಿಗೂ ಇದೆ ಆ ಸಮಯದಲ್ಲಿ ರಶ್ಯದ ಪ್ರಭಾವವು ಜರ್ಮನಿಯಲ್ಲಿ ಹರಡುತ್ತಿರುವುದನ್ನು ಕಂಡು ಥ್ಯಾಸನನು ಕಂಗೆಟ್ಟಿದ್ದನು. ಅವನು ಜರ್ಮನ್ ಕೈಗಾರಿಕೆಯ ದೊಡ್ಡ ಮುಖಂಡನಾಗಿದ್ದ. ಜರ್ಮನಿಯಲ್ಲಿ ಕಮ್ಯೂನಿಷ್ಟರ ಪ್ರಭಾವ ಬೆಳೆಯುವುದರಿಂದ ಭಂಡವಾಳಿಗರ ಸ್ವಾರ್ಥಕ್ಕೆ ಭಂಗಬರುವುದೆಂದು ಎಣಿಸಿ, ಅವನು ಅಷ್ಟರ ತನಕ ಅಜ್ಞಾತನಾಗಿದ್ದ ಹಿಟ್ಲರನಿಗೆ ಆರ್ಥಿಕ ಬೆಂಬಲವನ್ನು ಕೊಟ್ಟು ಮುಂದಕ್ಕೆ ತಂದನು ಆ ಕಾಲದಲ್ಲಿ ಜರ್ಮನಿಯ ರಾಜಕೀಯ ಸೂತ್ರವು ಅಲ್ಲಿಯ ಮಿಲಿಟರಿ ಭಂಡವಾಳಿಗರ ಕೈಯಲ್ಲಿದ್ದಿತು ಅವರ. ಒಬ್ಬರೊಬ್ಬರ ಉನ್ನತಿಯಲ್ಲಿ ಸೇರದ ಉನ್ನತಿಯ ಸವಿಗನಸನ್ನು ಕಾಣುತ್ತಿದ್ದರು ರಶ್ಯದ ಕಮ್ಯೂನಿಜಮು ಈ ಸ್ಪರ್ಧಾಪಕ್ಷೀಯರ ದೊಡ್ಡ ಶತ್ರುವಾಗಿದ್ದಿತು. ಕಮ್ಯೂನಿಜಮನ್ನು ಜರ್ಮನಿಯಿಂದ ಬೇರು ಸಹಿತ ಕಿತ್ತು ಹಾಕಬೇಕೆಂಬುದೇ ಭಂಡವಾಳಿಗರ ಮುಖ್ಯೋದ್ದೇಶವಾಗಿದ್ದಿತು "ತನ್ನ ಪಾರ್ಟಿಗೆ ಆರ್ಥಿಕ ಸಹಾಯವನ್ನೀಯುವುದಾದರೆ ತಾನು ಈ ಭಂಡವಾಳಿಗರಿಗೆ ಶಸ್ತ್ರಾಸ್ತ್ರಗಳನ್ನು ತಯಾರಿಸಲಿಕ್ಕೆ ಕೋಟ್ಯಂತರ ರೂಪಾಯಿಗಳ ಆರ್ಡರುಗಳನ್ನು ಕೊಟ್ಟು ಅವರ ಕೈಗಾರಿಕೆಗಳನ್ನು ಮುಂದಕ್ಕೆ ತರುವೆನೆಂದು ಹಿಟ್ಲರನು ಭರವಸೆಯನ್ನು ಕೊಟ್ಟನು. ಅದನ್ನು ನಂಬಿ ಥ್ಯಾಸನನು ಸಹಾಯವಿತ್ತನು.

ಭಯಂಕರ ಪರಿಣಾಮ

ಹಿಟ್ಲರನು ಅಧಿಕಾರಕ್ಕೆ ಬಂದೊಡನೆ ಜರ್ಮನಿಯ ದೊಡ್ಡ ಕೈಗಾರಿಕೆಗಳ ಬಹಳ ಉನ್ನತಿಯಾದುದೇನೋ ನಿಜ ಆದರೆ ಹಿಟ್ಲರನ ಮತ್ತು ಅವನ ನಾಜಿ ಪಕ್ಷದ ಮಹತ್ವಾಕಾಂಕ್ಷೆಯು ಎಂದಿದ್ದಿರುತ್ತದೆಂಬುದರ ಅನುಭವವಾಗಲಿಕ್ಕೆ ಥ್ಯಾಸನನಿಗೆ ಬಹಳ ದಿನಗಳು ಬೇಕಾಗಲಿಲ್ಲ. ಹಿಟ್ಲರನು ಮೆಲ್ಲಮೆಲ್ಲಗೆ ಜರ್ಮನಿಯ ಭಂಡವಾಳಿಗರನ್ನು ಮೂಲೆಗುಂಪು ಮಾಡಿ ಅವರ ಕೈಗಾರಿಕೆ ಮತ್ತು ಸಂಪತ್ತಿನ ಮೇಲೆ ತನ್ನ ಅಧಿಕಾರ ಮಾಡಿಕೊಳ್ಳಲು ಆರಂಭಿಸಿದನು. ದೇವತಾಪುರುಷನಂತೆ ತೋರಿದ್ದ ಹಿಟ್ಲರನು ಈಗ ಒಬ್ಬ ದುಷ್ಟ ರಾಕ್ಷಸನಂತೆ ಕಂಡನು ಕಮ್ಯೂನಿಜಮಿನ ನಾಶವು ಥ್ಯಾಸನನ ಉದ್ದೇಶವಾಗಿತ್ತು. ಆದರೆ ಅದು ಆಗುವುದರ ಬದಲಿಗೆ ಹಿಟ್ಲರನು ಆ ಕಮ್ಯೂನಿಷ್ಟರೊಡನೆಯೇ ಒಡಂಬಡಿಕೆ ಮಾಡಿಕೊಂಡ ಥ್ಯಾಸನ ಮತ್ತು ಇತರ ಭಂಡವಾಳಿಗರು ಹಿಟ್ಲರನಿಗೆ ಅಧಿಕಾರ ಕೊಟ್ಟು ಮನಸ್ಸಿನ ಮಂದಿಗೆ ತಿಂದುದೇ ಬಂತಲ್ಲದೆ, ಮತ್ತೇನೂ ಪ್ರಯೋಜನವಾಗಲಿಲ್ಲ

ಥ್ಯಾಸನನ ಪಶ್ಚಾತ್ತಾಪ

ಹಿಟ್ಲರನಿಗೆ ಪದವಿ ಕೊಟ್ಟು ಮಹಾಪರಾಧ ಮಾಡಿದೆನೆಂದು ಥ್ಯಾಸನನಿಗೆ ಪಶ್ಚಾತ್ತಾಪವಾಗಿದೆ. ಆದರೆ ಬಿಟ್ಟು ಹೋದ ಬಾಣವನ್ನು ಹಿಂದಕ್ಕೆ ಪಡೆಯಲಾಗುತ್ತದೆಯೆ? ಥ್ಯಾಸನ ತನ್ನ ಜೀವಕ್ಕೆ ಅಪಾಯ ಬಂದಿರವುದನ್ನು ಕಂಡು ಮೊದಲು ಸ್ವಿಜರ್ಲೆಂಡಿಗೆ, ಅನಂತರ ಫ್ರಾನ್ಸಿಗೆ ಪಲಾಯನ ಮಾಡಿದ ಹಿಟ್ಲರನ ಪತನವಾದ ಮೇಲೂ ತಾನು ಜೀವಿಸುವೆನೆಂದೂ, ಹಿಟ್ಲರನಿಗೆ ಅಧಿಕಾರ ಕೊಟ್ಟು ಆದ ದುರಂತದ ಚರಿತ್ರೆಯನ್ನು ತಾನು ಬರೆಯುವೆನೆಂದೂ ಥ್ಯಾಸನ ಆಲೋಚಿಸಿದ್ದ ಆದರೆ ಅವನ ಹಿಂದಿನ ಆಸೆಗಳಂತೆ ಈ ಆಸೆಯೂ ಸಂಪೂರ್ಣವಾಗುವ ಲಕ್ಷಣಗಳು ಕಾಣುವುದಿಲ್ಲ. ಹಿಟ್ಲರನ ಕ್ರೋಧದ ಪ್ರತಿಮೂರ್ತಿಯಾಗಿರುವ ಹಿಮ್ಲರನು ಥ್ಯಾಸನನ ತಲೆ ಕಡಿಯಲಿಕ್ಕೆ ಕೊಡಲಿ ಬಾಯಿಯನ್ನು ಮಸೆಯುತ್ತಾ ಇದ್ದಾನೆ. ಯಾವ ಕ್ಷಣಕ್ಕೂ ಅವನು ಹಿಟ್ಲರನ ಸಿಟ್ಟಿಗೆ ಬಲಿಯಾಗುವನು. ಅವನು ಬದುಕಿ ಉಳಿದರೆ ಅದೇ ಒಂದು ಈ ಲೋಕಯುದ್ಧದ ಆಶ್ಚರ್ಯಕರ ಘಟನೆಯಾಗುವುದು.

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges.

ESTD. 1906. **THE CANARA BANKING CORPORATION, LIMITED**

(Incorporated in Br. India)

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 115/1940.

ತಳಂಗರೆ ಇಬ್ರಾಹಿಮ್ ಅಮ್ಮುಟ್ಟಿ ಹಾಜಿ ಅಳಿಯ ಕೊಡಗ್ರಾಮದ ಪತ್ತಿನೋಟ ಲ್ಲಿರುವವ— ವಾದಿ

ಮತ್ತು

ಕಿಷೂತ್ತ ರಾಮನ್ ಅಡಿಯೋಡಿ ನಾರಾಯಣನ ಮಗ ಅರಿಸಾಡಿನ ಕರ್ಣನ ಮತ್ತು ಮನೇಜರ ಕೊಡಕ್ಕಾಡ ಗ್ರಾಮದಲ್ಲಿರುವವ—ಪ್ರತಿವಾದಿ

ಇವರೊಳಗ

ಸರ್ಕಾರು ವಿಚಾರಣೆಯಿಂದ ಬರಕೊಂಡ ನೋಟೀಸು

ಪ್ರತಿವಾದಿ ಮತ್ತು ಇತರ ಮೃತಪಟ್ಟ ತಮ್ಮ ಕೃಷ್ಣನ್ ಅಡಿಯೋಡಿ ಕೂಡಾ 2 ಜನರು ವಾದಿಗೆ ಬರಕೊಟ್ಟ ಪ್ರೊ. ನೋಟು ಪ್ರಕಾರ ಬರತಕ್ಕ ಐವೇಜು ರೂಪಾಯಿ 149–4–11ನ್ನು ಬಡ್ಡಿ ಸಮೇತ ವಸೂಲು ಮಾಡಿ ದಾಖಲು ಮಾಡಿದ ವ್ಯಾಜ್ಯವು ತಾರೀಕು 21–7–1941ಕ್ಕೆ ತನಿಖೆ ಇಟ್ಟಿರುತ್ತದೆಂತ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

Kasaragod 7–7–41 } C. M. Kunhambu Nair, Vakil for Plaintiff

ಸ್ವದೇಶಾಭಿಮಾನಿ

ತಾರೀಕು 11—7—1941

ರಶ್ಯದ ಮೇಲೆ ಗಂಡಾಂತರ

ರಶ್ಯದ ಸರ್ವಾಧಿಕಾರಿ ಸ್ಟಾಲಿನ್, ತನ್ನ ದೇಶದ ಜನರನ್ನುದ್ದೇಶಿಸಿ, ಪಿತೃಭೂಮಿಯನ್ನು ಸಂರಕ್ಷಿಸಲು ಸರ್ವರೂ ಸಾಧ್ಯವಾದಷ್ಟು ಸಹಾಯಮಾಡಬೇಕಾಗಿಯೂ, ರಶ್ಯದ ಮೇಲೆ ಗಂಡಾಂತರವು ಬಂದೊದಗಿರುವುದಾಗಿಯೂ ವಿನಂತಿಸಿಕೊಂಡನು. ಸ್ಟಾಲಿನನು ತನ್ನ ಆ ಘೋಷಣೆಯಲ್ಲಿ ಜರ್ಮನರು ಬಹಳ ಕಲಿತನದಿಂದ ಕಾದಾಡುತ್ತಿರುವ ವಿಷಯವನ್ನೆತ್ತಿ ಹೇಳಿ, ವೈರಿಯು ಮುಂದೊತ್ತಿ ಬರುತ್ತಿರುವನೆಂದು ಒಪ್ಪಿಕೊಂಡಿದ್ದಾನೆ. ಆದರೆ, ನೆಪೋಲಿಯನನಂತೆ, ಹಿಟ್ಲರನಿಗಾದರೂ ರಶ್ಯವೇ ಕೊನೆಗಾಣುವ ಸ್ಥಳವೆಂದೂ ಭರವಸೆ ಪಟ್ಟಿದ್ದಾನೆ. ಅಂತೂ ಸ್ಟಾಲಿನನ ಆ ಭಾಷಣದಲ್ಲಿ, ರಶ್ಯಕ್ಕೆ ಘೋರ ಗಂಡಾಂತರವು ಬಂದೊದಗಿದೆಯೆಂಬ ವಿಷಯ ಸೂಚನೆಯು ಅಡಕವಾಗಿದೆ.

ರಶ್ಯದ ಮೇಲೆ ಜರ್ಮನಿಯು ಧಾಳಿ ಮಾಡಿ ಇಪ್ಪತ್ತು ದಿನಗಳು ಆಗುತ್ತಾ ಬಂದವು. ಇಷ್ಟರ ವರೆಗಿನ ಯುದ್ಧದಲ್ಲಿ ಜರ್ಮನರಿಗೆ ಬಹಳವಾಗಿ ಹಾನಿಯೊದಗಿದೆ ಆದರೂ ಜರ್ಮನ್ ಸೈನ್ಯವು ಮುಂದೊತ್ತುತ್ತಿದೆ. ಹಿಟ್ಲರನು ಅಕಸ್ಮಾತ್ ರಶ್ಯದ ಮೇಲೆ ಧಾಳಿಮಾಡಿದುದರಿಂದ ಯುದ್ಧಪ್ರಾರಂಭದಲ್ಲಿ ದಿಗ್ಭ್ರಮೆಗೊಂಡ ರಶ್ಯನರಿಗೇ ಹೆಚ್ಚಿನ ಹಾನಿಗಳೊದಗಿದ್ದುವು ಆದರೆ ಈಗೀಗಿನ ಯುದ್ಧದಲ್ಲಿ ಜರ್ಮನರ ಹಾನಿಯೂ ಅಗಣಿತವಾಗಿವೆಯೆಂದು ತಿಳಿದುಬಂದಿದೆ. ಇಷ್ಟರಲ್ಲಿ, ಜರ್ಮನರು ಮಿನ್ಸ್ಕನ್ನು ಹಿಡಿದು ಸ್ಟಾಲಿನ್ ವ್ಯೂಹವನ್ನು ಭೇದಿಸಿ, ಮೋಸ್ಕೋದಿಂದ ಮುನ್ನೂರು ಮೈಲುಗಳ ಅಂತರದೊಳಗೆ ನೆಲೆಸಿರುವರೆಂಬ ಸುದ್ದಿ ಬಂದಿರುತ್ತದೆ. ಜರ್ಮನರು ಈಗಾಗಲೇ ಲಿಥೋನಿಯಾ, ಲಿಟ್ವಾನಿಯಾದ ಬಹುಭಾಗ, ಬಿಳಿರಶ್ಯದ ಪಶ್ಚಿಮಭಾಗ ಮತ್ತು ಪಶ್ಚಿಮ ಯುಕ್ರೇನಿನ ಕೆಲವು ಭಾಗಗಳನ್ನೂ ಸ್ವಾಧೀನಪಡಿಸಿಕೊಂಡಿರುತ್ತಾರೆ.

ರಶ್ಯದ ಯುದ್ಧದಲ್ಲಿ ಜರ್ಮನರು ಇದುವರೆಗೆ ಮುಂದೊತ್ತಿರುವರಾದರೂ, ಅವರ ಮುಂದಿನ ಜಯದ ಕುರಿತು ಏನೂ ನಿಶ್ಚಿತ ಅಭಿಪ್ರಾಯ ಹೇಳಬರುವಂತಿಲ್ಲ. ಅಕಸ್ಮಾತ್ತಾಗಿ ಧಾಳಿ ಮಾಡಿದ ಹಿಟ್ಲರನು, ಅಸಿದ್ಧತೆಯಲ್ಲಿ ರಶ್ಯನರನ್ನು ಬೆರಗುಗೊಳಿಸಿ ಸ್ವಲ್ಪ ಸ್ಥಳಗಳನ್ನು ಕೈವಶಪಡಿಸಿಕೊಂಡಿರಬಹುದಾದರೂ, ರಶ್ಯದಂತಹ ಪ್ರಬಲ ರಾಷ್ಟ್ರವನ್ನು ಬಗ್ಗು ಬಡಿಯುವುದು ಅಷ್ಟೊಂದು ಸುಲಭ ಕಾರ್ಯವೇನೂ ಅಲ್ಲ. ರಾಜಕಾರಣಿಗಳಲ್ಲಿಯೇ ಈ ವಿಷಯದಲ್ಲಿ ಬಹಳ ಸಂಶಯಾಸ್ಪದಗಳಾದ ಬಹುವಿಧದ ತರ್ಕವಿತರ್ಕಗಳು ತಲೆದೋರಿವೆ.

ಹೇಗಿದ್ದರೂ ರಶ್ಯಕ್ಕೆ ಜರ್ಮನರ ಆಕ್ರಮಣದಿಂದ ಬಹಳ ಗಂಡಾಂತರವೊದಗಿದೆಯೆಂಬುದರಲ್ಲಿ ಏನೂ ಸಂಶಯವಿಲ್ಲ. ಈ ಗಂಡಾಂತರದಿಂದ ರಶ್ಯವು ಮೇಲೆ ಬೀಳಲು ಸಮರ್ಥವಾದರೆ, ಹಿಟ್ಲರನ ಕೊನೆಯು, ನೆಪೋಲಿಯನನಂತೆ, ರಶ್ಯದಲ್ಲಿಯೇ ಆಗಬಹುದೆಂದು ಹೇಳಬಹುದು.

ಜರ್ಮನಿಯ ಆಕ್ರಮಣದಿಂದಾಗಿ ರಶ್ಯದ ಮೇಲೆ ಬಂದೊದಗಿದ ಗಂಡಾಂತರವು ಇಡೀ ಪ್ರಪಂಚಕ್ಕೆ ಬಂದ ಗಂಡಾಂತರವೆಂದು ಬ್ರಿಟನು ಸಮತಾವಾದೀ ರಾಷ್ಟ್ರವಾದ ರಶ್ಯಕ್ಕೆ, ಅದರ ತತ್ವದ ಭಿನ್ನತೆಯನ್ನೆಣಿಸದೆ ಸಹಾಯಕೊಟ್ಟು ನೆರವಾಗುವುದಾಗಿ ಹೇಳಿದೆ. ಸಮಾನ ಶತ್ರುವಿನೊಡನೆ ಕಾದಾಡಿ, ಪ್ರಪಂಚದ ಗಂಡಾಂತರವಾಗಿರುವ ನಾಜಿಸಮ್ಮನ್ನು ನಾಶಮಾಡಲು ಬ್ರಿಟನು ರಶ್ಯಗಳು ಒಂದುಗೂಡಿದವುಗಳಾಗಿವೆ. ಇಂತಹ ಸಂದರ್ಭದಲ್ಲಿ ಬ್ರಿಟನು ಕಮ್ಯುನಿಸ್ಟ್ ಹಗೆಯನ್ನು ಮರೆತು ಬಿಟ್ಟು ಕೆಲಸಮಾಡುತ್ತಿರುವುದು ಪ್ರಸಂಗೋಚಿತವಾದುದು. ಈ ಸಮಯದಲ್ಲಿ, ಬ್ರಿಟನಿನ ಆಳ್ವಿಕೆಯೊಳಗೆ, ಭಾರತದಂತಹ ಇತರ ದೇಶಗಳಲ್ಲಿರುವ ಅನೇಕ ಕಮ್ಯುನಿಸ್ಟ್ ಕೈದಿಗಳನ್ನು ಸರಕಾರವು ಬಿಡುಗಡೆ ಮಾಡುವ ಉದಾರ ಮನಸ್ಸು ತೋರಿಸಿದರೆ, ಪ್ರಪಂಚದ ಗಂಡಾಂತರವಾದ ಹಿಟ್ಲರ್ ಶಾಹಿಯ ಪತನ ಕಾರ್ಯದಲ್ಲಿ ಇತರ ಎಲ್ಲಾ ಪಂಗಡದವರ ಸಹಾನುಭೂತಿಯನ್ನೂ ಬ್ರಿಟನು ಗಳಿಸಿಕೊಳ್ಳಲು ಹೆಚ್ಚಿನ ಅನುಕೂಲವಾಗುವುದು.

ಧೀರ ಚೀನರು

ಪ್ರಬಲ ಪರಾಕ್ರಮಶಾಲೀ ರಾಷ್ಟ್ರದ ವಿರುದ್ಧವಾಗಿ, ಹಲವು ಸಮಯಗಳ ತನಕ ಬಿಡದೆ ಹೋರಾಟ ನಡೆಸಿ, ದೇಶದ ಸ್ವಾತಂತ್ರ್ಯ ಕೀರ್ತಿಯನ್ನು ಮೆರೆಯಿಸುತ್ತಿರುವ ಚೀನಿಯರ ಧೀರತೆಯು ಇಂದು ಜಗತ್ತಿಗೆ ಪ್ರಶಂಸೆಗೆ ಪಾತ್ರವಾಗಿದೆ. ಜಪಾನಿನ ಸೇನಾಧಿಕಾರಿಗಳು ಚೀನದ ಯುದ್ಧವನ್ನು ಕೆಲವೇ ದಿನಗಳಲ್ಲಿ ಮುಗಿಸಿ ಬಿಡುವೆವೆಂಬ ಆರ್ಭಟೆಯಿಂದ ಹೊರಟಿದ್ದರು. ಆದರೆ ಯುದ್ಧವು ಆರಂಭವಾಗಿ ನಾಲ್ಕು ವರ್ಷಗಳು ದಾಟಿದವು. ಈ ನಾಲ್ಕು ವರ್ಷಗಳ ನಿರಂತರ ಹೋರಾಟದಿಂದಲೂ ಚೀನೀಯರು ಅಂಜದೆ, ಹಿಂಜರಿಯದೆ ಕಾದಾಡಿ ಕೀರ್ತಿಯುಳಿಸಿದ್ದಾರೆ. ಒಂದು ರಾಷ್ಟ್ರವು, ಅಸಮಾನ ಶತ್ರುವಿನ ಆಕ್ರಮಣವನ್ನು ಇದಿರಿಸಿ ನಾಲ್ಕು ವರ್ಷಗಳ ತನಕ ಸದಾ ಯುದ್ಧ ಹೂಡಿ ತಲೆಯೆತ್ತಿ ನಿಂತಿರುವುದು, ರಾಷ್ಟ್ರಗಳ ಸಮರ ಇತಿಹಾಸದಲ್ಲಿಯೇ ಉಜ್ವಲವಾದ ಕಾರ್ಯವೆನ್ನಲು ಅಡ್ಡಿಯಿಲ್ಲ.

ಜಪಾನಿನವರು, ಈ ತನಕದ ಯುದ್ಧದಿಂದ, ಚೀನದಲ್ಲಿ ಕೆಲವು ಪ್ರಾಮುಖ್ಯ ಬಂದರುಗಳನ್ನು ಹಿಡಕೊಂಡು, ಅರ್ಧ ಮಿಲಿಯ ಚದುರ ಮೈಲಿನಷ್ಟು ಸ್ಥಳವನ್ನೂ ಆಕ್ರಮಿಸಿಕೊಂಡು ನಾನ್ಕಿಂಗಿನಲ್ಲಿ ಒಂದು ‘ಸೂತ್ರಚಾಲಕ’ ಸರಕಾರವನ್ನೂ ಸ್ಥಾಪಿಸಿಬಿಟ್ಟಿರುವರೆಂಬುದೇನೋ ನಿಜ. ಆದರೆ ಚೀನದ ರಾಷ್ಟ್ರೀಯ ಸರಕಾರವು ನಿಲ್ಲದೆ ಹೋರಾಟ ನಡೆಸುತ್ತಿರುವ ತನಕ, ಅಲ್ಲಿ ಬಂದಿಳಿದ ಜಪಾನಿಯರಿಗೆ ನಿಮಿಷಮಾತ್ರವಾದರೂ ವಿಶ್ರಾಂತಿ ಸಮಾಧಾನಗಳಿಲ್ಲವೆಂಬುದನ್ನು ನಾವು ಮರೆಯಬಾರದು. ಚುಂಕಿಂಗ್ ಸರಕಾರವು ಈಗಲೂ ಕೂಡಾ ೨೮೦ ಮಿಲಿಯ ಜನಸಂಖ್ಯೆಯುಳ್ಳ ಸಾಧಾರಣ ಎರಡು ಮಿಲಿಯ ಚದರ ಮೈಲು ಪ್ರಾಂತದಲ್ಲಿ ಅಧಿಕಾರ ನಡೆಸಿಕೊಂಡಿದೆ. ಅದು ಈಗಲೂ ಬಹು ಸಂಖ್ಯೆಯಿಂದ ಸೈನ್ಯಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ಬರುತ್ತಿದೆಯಲ್ಲದೆ, ಹಲವಾರು ಪ್ರಾಮುಖ್ಯ ಕೈಗಾರಿಕೆಗಳನ್ನೂ ಆರಂಭಿಸಿ ನಡೆಸಿಕೊಳ್ಳುತ್ತಿದೆ. ಅವರ ಮುಂದಾಳುಗಳು ಆಕ್ರಮಣಕಾರೀ ಜಪಾನಿನೊಡನೆ ಯಾವುದೇ ಬಗೆಯ ಒಪ್ಪಂದಕ್ಕೂ ಒಪ್ಪಿಕೊಳ್ಳಲಿಲ್ಲ. “ಜಪಾನು ತನ್ನ ಆಕ್ರಮಣಕಾರೀ ಶಕ್ತಿಯನ್ನು ಹಿಂತೆಗೆಯದ ವಿನಾ ಅದರೊಡನೆ ಚೀನಿಯರು ಸಹಕರಿಸುವಂತಿಲ್ಲ” ಎಂಬುದಾಗಿ ಚೀನದ ದಳಪತಿ ಚಿಯಾಂಗ್ ಕೈಶೇಕರು ಒಂದು ವರ್ಷದ ಹಿಂದೆ ಧೀರ ಗಂಭೀರವಾಗಿ ಹೇಳಿದ್ದಾರೆ. ಅಂತಹ ಧೀರ ವಾಣಿಯನ್ನು ಸಾರಿ ಹನ್ನೆರಡು ತಿಂಗಳುಗಳು ಕಳೆದರೂ, ಆ ನಿರ್ಧಾರದಿಂದ ಅವರು ಲವಲೇಶವೂ ಹಿಂದಕ್ಕೆ ಸರಿದಿಲ್ಲ.

ಜಪಾನಿಗೆ ಇದುವರೆಗೆ ದೊರಕಿದ ಜಯವೆಂದರೆ ಬಹಳ ಅಲ್ಪವೇ ಎನಬೇಕು. ಜಪಾನಿಯರ ಇಂದಿನ ಯುದ್ಧವೂ ಬಹು ನಿಶಕ್ತವಾಗುತ್ತ ಬರುತ್ತಿದೆ. ಚೀನೀಯರ ಶಕ್ತಿ ಸಾಮರ್ಥ್ಯವನ್ನು ಜಪಾನೀ ಸೇನಾಧಿಕಾರಿಗಳೇ ಮುಕ್ತಕಂಠದಿಂದ ಹೊಗಳಿದ್ದಾರೆ. ಅವರ ಧೀರತೆಗೆ ಬೆರಗಾಗಿದ್ದಾರೆ. ಇಂದು ಯುರೋಪಿನ ಪರಿಸ್ಥಿತಿ ವಿಷಮತೆಗೇರುತ್ತಾ ಬರುವ ಕಾಲದಲ್ಲಿ ಜಪಾನು ಚೀನದ ಯುದ್ಧದಲ್ಲಿಯೇ ವಿಶೇಷ ಆಸಕ್ತನಾಗಿರಲು ಸಾಧ್ಯವಿಲ್ಲದೆ ಕಲ್ಲಣಗೊಂಡತೆ ತೋರುತ್ತದೆ. ರಶ್ಯ ಜರ್ಮನ್ ಯುದ್ಧವು ಆರಂಭವಾದ ಮೇಲಂತೂ ಜಪಾನು ಇತರ ಕಡೆಗಳಲ್ಲಿ ಪ್ರಾಮುಖ್ಯ ಪಾತ್ರವಹಿಸಬೇಕಾಗಿ ಬರುವ ಸಂದರ್ಭವೇ ಬಂದೊದಗಿದಂತಿದೆ.

ಆದರೆ, ಚೀನದ ರಾಷ್ಟ್ರವೀರರಿಗೆ ಉದ್ದೇಶವೊಂದೇ. ಸಹಾಯವಿರಲಿ, ನಿಸ್ಸಹಾಯವಿರಲಿ, ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡದೆ ಉಳಿಯುವಂತಿಲ್ಲ. ಆಕ್ರಮಣಕಾರೀ ಜಪಾನಿನೊಡನೆ ಕಳೆದ ನಾಲ್ಕು ವರ್ಷಗಳಿಂದ ಕಾದಾಡುತ್ತಿರುವ ಚೀನೀಯರ ಸಂಕಷ್ಟಕ್ಕೆ, ಆಕ್ರಮಣಕಾರೀ ಜರ್ಮನಿಯೊಡನೆ ಬೆನೆಗೊಂಡ ಬ್ರಿಟನು ಅಮೇರಿಕಗಳು ಈಗಲಾದರೂ ಸಮಸ್ತ ಬೆಂಬಲವಿತ್ತು ಹೆಚ್ಚಿನ ಸಹಾಯವೊದಗಿಸಿ, ಜಗತ್ತಿನ ಶಾಶ್ವತ ಶಾಂತಿಗೆ ನೆರವಾಗುವುದು ತೀರಾ ಅವಶ್ಯವಿದೆ. ಯಾವುದೇ ನಿಮಿತ್ತದಿಂದ ಚೀನೀಯರ ಹೋರಾಟವು ಅಪಯಶಸ್ವಿಯಾದರೆ, ಆಶ್ಯಾದ ಶಾಂತಿಗೆ ಅದರಿಂದ ಅಂತರ್ರಾಷ್ಟ್ರೀಯ ಶಾಂತಿಗೂ ತೀರಾ ಭಂಗಬರುವುದೆಂಬುದನ್ನು ಎಲ್ಲರೂ ಅವಶ್ಯ ನೆನಪಿಟ್ಟುಕೊಳ್ಳತಕ್ಕದ್ದಿದೆ. ಚೀನೀಯರ ಸ್ವಾತಂತ್ರ್ಯದ ಹೋರಾಟಕ್ಕೆ ಸಂಪೂರ್ಣ ವಿಜಯವನ್ನು ಹಾರೈಸುವುದು ನಮ್ಮ ಕರ್ತವ್ಯವಾಗಿದೆ.

ದಿವಂಗತ ಚಿಂತಾಮಣಿಯವರು

ಭಾರತದ ಸುಪ್ರಸಿದ್ಧ ಪತ್ರಿಕಾ ಸಂಪಾದಕರೂ, ಮಂದ ಪಕ್ಷದ ರಾಜಕೀಯ ಮುಂದಾಳುಗಳೂ ಆದ, ಸರ್. ಸಿ. ವೈ. ಚಿಂತಾಮಣಿಯವರು ಕಳೆದ ೧ನೆಯ ತಾರೀಕು ಮಧ್ಯಾಹ್ನದ ಹೊತ್ತಿಗೆ ತಮ್ಮ ೬೧ನೆಯ ವರ್ಷದ ಪ್ರಾಯದಲ್ಲಿ ಅಲ್ಲಹಾಬಾದಿನಲ್ಲಿ ದಿವಂಗತರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ.

ಶ್ರೀ ಚಿಂತಾಮಣಿಯವರು ತನ್ನ ಎಳೆವಯಸ್ಸಿನಲ್ಲಿಯೇ ಪತ್ರಿಕೋದ್ಯಮವನ್ನು ಕೈಕೊಂಡು, ಅದರಲ್ಲಿ ಬಂದ ಎಡರುತೊಡರುಗಳೆಲ್ಲವನ್ನೂ ಧೈರ್ಯ ಸಾಹಸಗಳಿಂದ ಎದುರಿಸಿ ಕೀರ್ತಿಯ ಶಿಖರವನ್ನೇರಿದ ಪ್ರತಿಭಾಸ್ಪದ ಪತ್ರಿಕಾ ಸಂಪಾದಕರಾಗಿದ್ದರು. ಕಳೆದ ೩೧ ವರ್ಷಗಳಿಂದ ಅಲ್ಲಾಬಾದಿನಿಂದ ಹೊರಡುವ ‘ಲೀಡರ್’ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದು ತನ್ನ ವಿಚಾರ ಪ್ರತಿಭೆಗಳಿಂದ ಇಡಿಯ ಭಾರತದಲ್ಲಿಯೇ ವಿಶೇಷ ಪ್ರಭಾವವನ್ನು ಮೆರೆಸಿದ ಮಹನೀಯರಿದ್ದರು. ಚಿಂತಾಮಣಿಯವರು ಲೇಖಕರಾಗಿ, ಗ್ರಂಥಕರ್ತರಾಗಿ, ವಾಗ್ಮಿಗಳಾಗಿ ರಾಜಕಾರಣಿಗಳಾಗಿ ಭಾರತದ ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಾಮುಖ್ಯವಾದೊಂದು ಸ್ಥಾನವನ್ನು ಗಳಿಸಿದ್ದರು. ಕಳೆದ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಆಹ್ವಾನಿತರಾಗಿ ಹೋಗಿದ್ದರಲ್ಲದೆ, ಮಂತ್ರಿಗಳಾಗಿಯೂ ಕೆಲಸ ಮಾಡಿರುವರು. ಇಷ್ಟು ಘನತರದ ಪದವಿಯಲ್ಲಿದ್ದು ಭಾರತದ ಸಾರ್ವಜನಿಕ ಕಾರ್ಯದಲ್ಲಿ ವಿಶೇಷ ಗೌರವ ಹೊಂದಿದ ಪತ್ರಿಕಾ ಸಂಪಾದಕರು ಕಣ್ಮರೆಯಾದುದು ಅಖಿಲ ಭಾರತಕ್ಕೆ ವಿಶೇಷವಾಗಿ ಪತ್ರಿಕಾ ಪ್ರಪಂಚಕ್ಕೆ ಒದಗಿದ ಅಪಾರ ನಷ್ಟವಾಗಿದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯುಂಟಾಗುವಂತೆ ನಾವು ಪರಮಾತ್ಮನೊಡನೆ ಪ್ರಾರ್ಥಿಸಿಕೊಳ್ಳುತ್ತೇವೆ.

ನೆರೆಯಿಂದ ನೊಂದವರ ಸಂಕಷ್ಟ ನಿವಾರಣಾ ಕಾರ್ಯಗಳು

ಕಾಂಗ್ರೆಸಿನವರು ಜನತಾಸೇವೆಯಲ್ಲಿ ಶ್ರಮಿಸುತ್ತಿದ್ದಾರೆ

ಕಾರ್ಯಕಲಾಪಗಳ ಕೆಲವು ವಿವರಗಳು.

(ನಮ್ಮ ಪ್ರತಿನಿಧಿಗಳಿಂದ)

ಕಳೆದ ತಿಂಗಳ ಎರಡನೆಯ ವಾರದಲ್ಲಿ ನಮ್ಮ ಜಿಲ್ಲೆಯ ಹಲವು ನದಿಗಳಲ್ಲಿ ನೆರೆ ಬಂದಿದೆಯೆಂಬ ವಾರ್ತೆ ಬಂದಾಗ ನೆರೆಯ ಸ್ಥಳದಿಂದ ದೂರವಿದ್ದವರಿಗೆ ಅಲ್ಲಿನ ವಿಷಮ ಪರಿಸ್ಥಿತಿಯು ಚನ್ನಾಗಿ ತಿಳಿದಿರಲಿಲ್ಲ. ಆದರೆ, ನೆರೆ ಬಂದ ಬಳಿಕ, ದಿನ ದಿನವೂ ಆ ಸ್ಥಳಗಳಿಂದ ಬಂದ ಸುದ್ದಿಗಳನ್ನು ಕೇಳಿ, ಆ ಸ್ಥಳಗಳನ್ನು ಪ್ರತ್ಯಕ್ಷ ಸಂದರ್ಶಿಸಿ, ಅಲ್ಲಿನ ಸ್ಥಿತಿಗತಿಗಳನ್ನು ವಿಚಾರಮಾಡಿದಾಗ ಕಲ್ಲೆದೆಯಾದರೂ ಕರಗುವಂತಹ ಕರುಣಾಜನಕ ಸಂಭವಗಳು ಅಲ್ಲಿ ಆದುದು ತಿಳಿದುಬಂದುವು. ಅನೇಕ ಮಂದಿ ನಿರಾಶ್ರಿತರಾಗಿ, ನಿರ್ಗತಿಕರಾಗಿ, ಅನಾಥರಾಗಿ ಕಂಗೆಡುತ್ತಿರುವರು. ಇಂದು ನಿರ್ಗತಿಕರಾಗಿರುವುದು ಮಾತ್ರವಲ್ಲದೆ, ಮುಂದಿನ ಜೀವನ ವ್ಯವಸ್ಥೆಯ ದಾರಿಯೂ ತೋರದೆ ಕಂಗಾಲಾಗಿರುವರು. ಇಂತಹ ಪರಿಸ್ಥಿತಿಯಲ್ಲಿ ಜಿಲ್ಲೆಯ ಹಲವಾರು ಸಾರ್ವಜನಿಕ ಕೆಲಸಗಾರರು, ಅಧಿಕಾರಿಗಳು, ಹೆಚ್ಚಾಗಿ ಕಾಂಗ್ರೆಸ್ ಕೆಲಸಗಾರರು ಈ ನಿರಾಶ್ರಿತರಿಗೆ ಸರ್ವ ಸಹಾಯಗಳನ್ನೊದಗಿಸಲು ನಿತ್ಯ ಸಾಹಸಪಡುತ್ತಿರುವುದು ಪ್ರಶಂಸನೀಯವಾಗಿದೆ.

ನೆರೆಯ ಸಂಕಷ್ಟದವರಿಗೆ ಸಹಾಯ ಮಾಡಿದ ಇದುವರೆಗಿನ ಕಾರ್ಯಕಲಾಪಗಳ ವಿವರಗಳನ್ನು ಸಾರಾಂಶವಾಗಿ ಇಲ್ಲಿ ಕೊಡಲಾಗಿದೆ.

ಪ್ರಾರಂಭದ ಕಾರ್ಯಗಳು

ನೆರೆಬಂದ ಆರೇಳು ದಿನಗಳ ವರೆಗೆ, ಹೆಚ್ಚಿನ ವ್ಯವಸ್ಥೆಯಿಂದ ಸಹಾಯ ಕೊಡುವುದು ಆಗಲಿಲ್ಲ. ಕಾಂಗ್ರೆಸು ಕಮಿಟಿ ಪ್ರೆಸಿಡೆಂಟರಾದ ಶ್ರೀ. ದಾಮೋದರ ಬಾಳಿಗರು ಶ್ರೀ. ಎಚ್. ಕೆ. ತಿಂಗಳಾಯರು ಶ್ರೀ. ಎನ್. ಶೇಷಗಿರಿರಾಯರು, ಶ್ರೀ. ಗೋಪಾಲಪೈಗಳು ಮತ್ತು ಇನ್ನು ಹಲವು ಮಂದಿ ಕಾಂಗ್ರೆಸ್ ಕೆಲಸಗಾರರು ನೆರೆ ಬಂದ ಸ್ಥಳಗಳಿಗೆ ಕೂಡಲೇ ಧಾವಿಸಿ, ಅಲ್ಲಿನ ಜನರಿಗೆ ಜರೂರಿನ ಸಹಾಯಗಳನ್ನು ಒದಗಿಸಿದರು. ಮನೆಮಾರುಗಳನ್ನು ಆಸ್ತಿಒಡವೆಗಳನ್ನು ಸರ್ವಸ್ವವನ್ನೂ ಕಳೆದುಕೊಂಡವರಿಗೆ ಉಡಲು ವಸ್ತ್ರ, ಉಣಲು ಗಂಜಿಯನ್ನು ಒದಗಿಸಿಕೊಟ್ಟರು. ಈ ಸಂದರ್ಭದಲ್ಲಿ ಮಂಗಳೂರಿನ ಅನೇಕ ಮಂದಿ ಉದಾರಿಗಳಾದ ಸಾಹುಕಾರರು, ಮತ್ತು ಇತರ ಮಹನೀಯರು ವಿಶೇಷ ಸಹಾಯಗಳನ್ನಿತ್ತರು.

ರಿಲೀಫ್ ಕಮಿಟಿ ಸ್ಥಾಪನೆ

ತಾ. ೧೯ರಲ್ಲು ನೆರೆಯಿಂದ ಕಂಗೆಟ್ಟವರಿಗೆ ವ್ಯವಸ್ಥಿತ ರೀತಿಯಿಂದ ಸಹಾಯವನ್ನೊದಗಿಸುವ ಸಲುವಾಗಿ ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಸೇರಿಸಲಾಯಿತು. ಕಾಂಗ್ರೆಸಿನ ವಿನಂತಿಗೆ ಮನ್ನಣೆ ಕೊಟ್ಟು ಅನೇಕ ಮಂದಿ ಸಭೆಗೆ ಹಾಜರಿದ್ದರು. ಮುಸ್ಲಿಂ ಬಂಧುಗಳು ಹಾಗೂ ಹಿಂದೂ ಮಹಾಸಭೆಯ ಅಧ್ಯ ಸದಸ್ಯರು ಮತ್ತು ಇತರ ಎಲ್ಲಾ ಪಂಗಡದವರೂ ನೆರೆಹಾವಳಿಯಿಂದ ಕಂಗೆಟ್ಟವರಿಗೆ ಸಹಾಯ ಕೊಡುವ ಕೆಲಸದಲ್ಲಿ ಕಾಂಗ್ರೆಸ್ ಕಮಿಟಿಯವರು ಮಾಡುವ ಪ್ರಯತ್ನಕ್ಕೆ ಸಹಕರಿಸಿದರು. ಇದೇ ಸಂದರ್ಭದಲ್ಲಿ ಕಲೆಕ್ಟರರು ತಮ್ಮ ಅಧಿಕಾರೀವರ್ಗದ ಮೂಲಕ ನೆರೆಯಿಂದ ನೊಂದವರಿಗೆ ಸಹಾಯಕೊಡುತ್ತಿರುವಲ್ಲಿ ಕಾಂಗ್ರೆಸಿನವರ ನೆರವನ್ನು ಅಪೇಕ್ಷಿಸಿದ್ದು ಮಾತ್ರವಲ್ಲದೆ, ಅವರ ಕಾರ್ಯಕಲಾಪಗಳ ಕುರಿತು ಪೂರ್ಣ ಸಂತೃಪ್ತಿಯನ್ನು ತೋರ್ಪಡಿಸಿರುವರು. ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇರಿದ ಸಭೆಯಲ್ಲಿ ಒಳ್ಳೆಯ ಪ್ರಭಾವಶಾಲೀ ಮಹನೀಯರಿಂದ ಕೂಡಿದ 'ಮಹಾಜನ ಫ್ಲಡ್ ರಿಲೀಫ್ ಕಮಿಟಿ'ಯೆಂಬ ಸಂಸ್ಥೆಯು ಏರ್ಪಟ್ಟು ಮುಂದಿನ ಕಾರ್ಯಕಲಾಪಗಳನ್ನು ತೀವ್ರವಾಗಿ ಕೈಕೊಳ್ಳುವರೆ ನಿರ್ಧರಿಸಿ ಕೆಲಸಮಾಡುತ್ತಲಿದೆ.

ಎಲ್ಲಾ ಕಡೆಗಳಲ್ಲಿಯೂ, ನೆರೆಬಂದ ಸ್ಥಳಗಳಿಗೆ ಕಾಂಗ್ರೆಸ್ ಸ್ವಯಂಸೇವಕರೇ ಹೋಗಿ ಮನೆಮನೆಗೆ ನಗದಿ ಹಣವನ್ನು ಹಂಚುವ ವ್ಯವಸ್ಥೆ ಮಾಡುತ್ತಿದ್ದಾರೆ. ಮಹಾಜನ ಫ್ಲಡ್ ರಿಲೀಫ್ ಕಮಿಟಿ, ದ. ಕ. ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿ ಇವುಗಳೆಲ್ಲಾ ಯಾವುದೇ ಪ್ರತಿಸ್ಪರ್ಧಿ ಭಾವನೆಯಿಲ್ಲದೆ ಅನ್ಯೋನ್ಯ ಸಹಕಾರದಿಂದ ಕಾರ್ಯಕಲಾಪಗಳನ್ನು ಮಾಡುತ್ತಿವೆ.

ಕಳೆದ ನೆರೆಯ ಕಾಲದಲ್ಲಿ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ಶ್ರಮದಿಂದ ಊರ್ಜಿತವಾದ ಫ್ಲಡ್ ರಿಲೀಫ್ ಕಮಿಟಿಯೂ ಕಾಸರಗೋಡು ಮೂಡಬಿದ್ರೆ ಮೊದಲಾದ ಸ್ಥಳಗಳಲ್ಲಿ ಸ್ಥಾಪಿತವಾದ ಕಮಿಟಿಗಳೂ ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಸೇರಿ ವ್ಯವಸ್ಥೆಯಿಂದ ಕೆಲಸ ಸಾಗಿಸುತ್ತಿವೆ.

ಸಹಾಯ ಬಿನ್ನಹಗಳು

ಕಾಂಗ್ರೆಸ್ ಕಮಿಟಿಯ ಕಡೆಯಿಂದ ನೆರೆಯ ಸ್ಥಿತಿಗಳನ್ನು ವಿವರಿಸಿ ಧನ, ಧಾನ್ಯ, ಬೀಜವರಿ ರೂಪಗಳಿಂದ ಮಹಾಜನರು ಉದಾರ ಸಹಾಯ ಕೊಡಬೇಕೆಂಬ ಬಗ್ಗೆ ಮೂರು ಕರಪತ್ರಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸಿ ಎಲ್ಲೆಲ್ಲೂ ಹಂಚಲಾಗಿದೆ. ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಕರಪತ್ರವೊಂದು, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿ ಜಿಲ್ಲೆಯಲ್ಲಿಯೂ ಇತರ ಜಿಲ್ಲೆಗಳಿಗೂ ಕಳುಹಿಸಲಾಗಿದೆ. ಜಿಲ್ಲೆಯ ಹಲವು ಕಡೆಗಳಿಂದ ಅನೇಕ ರೀತಿಯ ಸಹಾಯಗಳು ಕಾಂಗ್ರೆಸು ಕಮಿಟಿಗೆ ಬಂದಿರುತ್ತದೆ ಮಾತ್ರವಲ್ಲದೆ ಕೊಲಂಬೋದಿಂದಲೂ, ಕಾಂಗ್ರೆಸ್ ಕಮಿಟಿ ಮೂಲಕ ನೆರೆಯಿಂದ ಕಂಗೆಟ್ಟವರಿಗೆ ಸಹಾಯ ದ್ರವ್ಯವು ಬಂದಿರುತ್ತದೆ. ದ. ಕನ್ನಡ ಮೆಡಿಕಲ್ ಸಪ್ಲೈಸ್ ಲಿಮಿಟೆಡಿನವರು ನೆರೆಯಿಂದ ಆರ್ತರಾದ ಜನರ ರೋಗಾದಿಗಳ ಶುಶ್ರೂಷೆಗೆ ಮದ್ದುಗಳನ್ನು ಧರ್ಮಾರ್ಥವಾಗಿ ಕೊಡಲು ಒಪ್ಪಿದ್ದು ಮಾತ್ರವಲ್ಲದೆ ಡಾಕ್ಟರರೂ ಅಲ್ಲಿಗೆ ಹೋಗಿ ಉಚಿತ ಕೆಲಸ ಮಾಡುವುದಾಗಿ ಮಹಾಜನ ಕಮಿಟಿಗೆ ತಿಳಿಸಿರುತ್ತಾರೆ. ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾ। ವಿಟ್ಠಲ ಶೆಟ್ಟರು, ತಮ್ಮ ಆಡಳಿತದಲ್ಲಿರುವ ಎಲ್ಲಾ ಶಾಲೆಗಳಿಗೂ ನೆರೆಯಿಂದ ಸಂಕಷ್ಟಗೊಂಡವರಿಗಾಗಿ ಧನಧಾನ್ಯ ಬೀಜವರಿಗಳನ್ನು ಸಂಗ್ರಹಿಸುವ ಬಗ್ಗೆ ಸರ್ಕ್ಯುಲರುಗಳನ್ನು ಕಳುಹಿಸಿರುತ್ತಾರೆ. ದಕ್ಷಿಣ ಕನ್ನಡದ ಮೋಟರು ಕಂಪನಿಗಳು ಬೇರೆ ಬೇರೆ ಸ್ಟೇಶನುಗಳಿಂದ ಬಂದ ಸಾಮಗ್ರಿಗಳನ್ನು ಧರ್ಮಾರ್ಥ ತಂದು ಮುಟ್ಟಿಸುತ್ತಿವೆ. ಹಾಗೆಯೇ ಬೇಂಕುಗಳೂ ಸಹಕರಿಸುತ್ತವೆ.

ನಿರ್ಗತಿಕರಾದವರು

ನೆರೆಯಿಂದ ನಮ್ಮ ಜಿಲ್ಲೆಯಲ್ಲಿ ಬಹಳವಾಗಿ ಕಂಗೆಟ್ಟಿರುವವರು ವೇಣೂರು, ಗುರ್ಪುರ, ಕಯ್ಯೂರು, ಸೀರೆ, ಮತ್ತು ಅಪ್ಪುಗಳ ನೆರೆಕರೆಯ ಊರಿನ ಜನರು. ಈ ಸ್ಥಳಗಳಿಗೆಲ್ಲಾ ಕಾಂಗ್ರೆಸು ಸ್ವಯಂಸೇವಕರು ಧಾವಿಸಿ ಅಲ್ಲಿನ ಜನರಿಗೆ ಮೊತ್ತಮೊದಲು ಗಂಜಿಗೆ ಅಕ್ಕಿ ಮೊದಲಾದವುಗಳನ್ನು ಕೊಟ್ಟು ಬಟ್ಟೆಬರೆಗಳನ್ನು ಒದಗಿಸಿ ಸಹಾಯಮಾಡಿದರು. ಆ ಮೇಲೆ ಫ್ಲಡ್ ರಿಲೀಫ್ ಕಮಿಟಿಯ ಮೂಲಕವಾಗಿ ನಿಶ್ಚಯಿಸಿದ ದ್ರವ್ಯವನ್ನು ಆಯಾಯ ಮನೆಗಳಿಗೆ ಹೋಗಿ ಆ ಆ ಊರಿನ ಪಟೇಲ ಶ್ಯಾನುಭಾಗರ ಸಹಕಾರದಿಂದ ಕಾಂಗ್ರೆಸ್ ಕೆಲಸಗಾರರು ಸರಿಯಾಗಿ ಹಂಚಿರುತ್ತಾರೆ. ಪ್ರತಿಯೊಂದು ಸ್ಥಳಕ್ಕೂ ಎರಡು ಮೂರು ಸಲ ಹೋಗಿ ಅಲ್ಲಿನವರಿಗೆ ತಮ್ಮಿಂದ ಸಾಧ್ಯವಾದ ಸಹಾಯಗಳೆಲ್ಲವನ್ನು ಒದಗಿಸಿಕೊಡುವುದರಲ್ಲಿ ನಿರತರಾಗಿರುವರು. ಕೈಯ್ಯೂರು ಗ್ರಾಮದ ನೆರೆಕರೆಯ ಹತ್ತು ಗ್ರಾಮಗಳಿಗೂ ಹೋಗಿ ಅಲ್ಲಿನ ಬಡ ನಿರ್ಗತಿಕರಿಗೆ ಅನ್ನಬಟ್ಟೆ, ಉಪ್ಪು, ಮೆಣಸು ಮದ್ದು ಮೊದಲಾದವುಗಳನ್ನು ಒದಗಿಸಿರುವರು.

ಹೀಗೆ ಎಲ್ಲೆಲ್ಲಿ ನೆರೆಯಿಂದ ಸಂಕಷ್ಟವಾಗಿದೆಯೋ ಅಲ್ಲಲ್ಲಿಗೆಲ್ಲಾ ಕಾಂಗ್ರೆಸು ಕೆಲಸಗಾರರು ಹೋಗಿ ನೆರವಾಗುತ್ತಿದ್ದಾರೆ. ಹೀಗೆ ಯಾವುದಾದರೂ ಸ್ಥಳಗಳಿಗೆ ಸಹಾಯ ಮುಟ್ಟದಿದ್ದಲ್ಲಿ ಆ ಊರಿನವರು ಅಲ್ಲಿನ ಸಂಗತಿಗಳನ್ನು ತಿಳಿಸಿದರೆ, ತಮ್ಮ ಸಹಾಯ ಸಲ್ಲಿಸುವುದಾಗಿ ಕಾಂಗ್ರೆಸು ಕಮಿಟಿಯ ಅಧಿಕಾರಿಗಳು ತಿಳಿಸಿರುತ್ತಾರೆ.

ಜನತಾಸೇವೆಯಲ್ಲಿ

ಶ್ರೀಗಳಾದ ದಾಮೋದರ ಬಾಳಿಗ, ಎಚ್. ಕೆ. ತಿಂಗಳಾಯ, ಜನಾರ್ದನ ಹೆಗ್ಡೆ, ಕೊಂಚಾಡಿ ಕೇಶವ ಶೆಣೈ, ಶ್ಯಾಮರಾಯ ನಾಯ್ಕ, ಶೀನಪ್ಪ ಹೆಗ್ಡೆ, ಜತ್ತಪ್ಪ ರೈ, ಡಾ। ಪಿ. ಎಸ್ ಶಾಸ್ತ್ರಿ, ಜಗನ್ನಾಥ ರೈ, ದೇವಪ್ಪ ಆಳ್ವ, ಉಳಂತೋಡಿ ಕೃಷ್ಣ ಭಟ್ಟ, ಬಾಬು ಶೆಟ್ಟಿ, ಗೋಪಾಲ ಪೈ, ವೈಕುಂಠ ಬಾಳಿಗ, ಚಂದಪ್ಪ ಇಂದ್ರ, ರಾಮ ಪುದುವಾಳ್, ಕೃಷ್ಣಯ ಶೆಟ್ಟಿ, ವೆಂಕಟೇಶ ಕಾಮತ್, ಅಪ್ಪುರಾಯ ಭಟ್ಟ, ಅನಂತ ಶೆಣೈ, ಎಂ. ಎನ್. ಚೌಟ, ನಾರಾಯಣ ನಾಯರ್, ದಾಮೋದರ ಕಾಮತ್, ಉಗ್ಗಪ್ಪ ಶೆಟ್ಟಿ, ನರಸಿಂಹ ಪ್ರಭು, ಕಣ್ಣನ್, ಸಾಂತಪ್ಪ ರೈ ಮತ್ತು ಇತರ ಅನೇಕ ಮಂದಿ ಮಹನೀಯರು ನೆರೆಯಿಂದ ನಿರ್ಗತಿಕರಾದವರ ಸಲುವಾಗಿ ಬಹಳವಾಗಿ ದುಡಿಯುತ್ತಿರುವರು. ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಕಾಂಗ್ರೆಸಿನವರು ನಿರ್ಗತಿಕರ ಸಹಾಯಕ್ಕೆ ಶ್ರಮಿಸುತ್ತಿರುವರೆಂದು ಜನರಿಗೆ ಸಂಪೂರ್ಣ ಸೂಚಿತವಾಗಿದೆ.

ಮುಸ್ಲಿಂ ಬಂಧುಗಳ ಸಹಾಯ

ಜಿಲ್ಲೆಯ ಮುಸ್ಲಿಂ ಬಂಧುಗಳು ಕೆಲವರು ಕಾಂಗ್ರೆಸ್ ಕಮಿಟಿಯವರು ಇದಕ್ಕಾಗಿ ಸಹಾಯ ಕೇಳಿದಾಗ ಉದಾರ ಬುದ್ಧಿಯಿಂದ ಸಹಾಯ ಕೊಟ್ಟಿರುತ್ತಾರೆ. ಹಿಂದುಸ್ಥಾನೀ ಸ್ಕೌಟ್ ಸಂಘದವರೂ, ಲೇಬರ್ ಯೂನಿಯನಿನವರೂ ಎಲ್ಲಾ ತೆರದಲ್ಲಿಯೂ ಸಹಕರಿಸುತ್ತಿದ್ದಾರೆ.

ಮುಚ್ಚಲ್ ಮಹಮ್ಮದನ್ ಬೋರ್ಡ್ ಎಲಿಮೆಂಟರಿ ಶಾಲೆಯು ನೆರೆಯಿಂದ ಸಂಪೂರ್ಣ ನಾಶವಾಗಿ ಅಲ್ಲಿನ ವಿದ್ಯಾರ್ಥಿಗಳು ಪುಸ್ತಕ ಸ್ಲೇಟುಗಳಿಲ್ಲದೆ ಕಂಗಾಲಾಗಿರಲು ಕಾಂಗ್ರೆಸ್ ಕಮಿಟಿಯವರ ಬಿನ್ನಹದಂತೆ, ಸಂಬಂಧಪಟ್ಟ ಪುಸ್ತಕ ಪ್ರಕಾಶಕರು ಧರ್ಮಾರ್ಥವಾಗಿ ಅವರಿಗೆ ಪುಸ್ತಕಾದಿಗಳನ್ನು ಕೊಟ್ಟಿರುತ್ತಾರೆ.

ಇಲ್ಲಿನ ವರೆಗೆ ಮಾಡುತ್ತಿರುವ ಕಾರ್ಯಕಲಾಪಗಳ ಸೂಕ್ಷ್ಮ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ಜಿಲ್ಲೆಗೆ ನೆರೆಯಿಂದ ಆದ ಅನರ್ಥವು ಅಪಾರವಾದುದು. ಇಲ್ಲಿ ತನಕದ ಸಹಾಯದಿಂದ ನಿರ್ಗತಿಕರಿಗೆ ತಾತ್ಕಾಲಿಕ ಉಪಶಮನವಾಗಬಹುದಲ್ಲದೆ ಹೆಚ್ಚಿನದೇನೂ ಸಿಗುವಂತಿಲ್ಲ. ಉದಾರಿಗಳಾದ ಜನರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಹೆಚ್ಚಿನ ಸಹಾಯವನ್ನು ಒದಗಿಸಿಕೊಟ್ಟಲ್ಲಿ ನೆರೆಯಿಂದ ನಿರ್ಗತಿಕರಾದ ನಮ್ಮ ಜಿಲ್ಲೆಯ ಜನರಿಗೆ ಮರೆಯಲಾರದ ಸಹಾಯಮಾಡಿದಂತಾಗುವದು.

ವಾರದ ಕತೆ:

ಹೊರಟೇ ಹೋಗಿದ್ದ......

[ಶ್ರೀ ಕತೆಗಾರ]

—“ಅಣ್ಣಾ, ನೀನು ಸತ್ಯಾಗ್ರಹ ಮಾಡು ವದಿಲ್ಲವೆ? ಸದಾಶಿವನು ಕಳೆದ ತಿಂಗಳಲ್ಲಿಯೇ ಸತ್ಯಾಗ್ರಹವಮಾಡಿ ಜೈಲಿಗೆ ಹೋದ. ರಾಧೆಯ ಗಂಡ ಮುಂದಿನ ವಾರ ಹೋಗುವನಂತೆ ನೋಡು ಅಣ್ಣಾ! ಅವರಿವರ ಮಾತು ಬಂದಾಗ ನಿನ್ನನ್ನು ಎಣಿಸಿ ನನ್ನ ಮನಸ್ಸಿಗೆ ಬಹಳ ಕಳವಳವಾಗುತ್ತದೆ ನನ್ನ ಅಣ್ಣನೂ ಸತ್ಯಾಗ್ರಹ ಮಾಡಿದ್ದರೆ ನಾನೂ ಗರ್ವದಿಂದ ತಲೆ ಎತ್ತಿ ಇರಬಹುದಾಗಿತ್ತೆಂದು.”

‘ತಂಗಿ! ಕಳವಳಬೇಡ. ನಾನು ಕೂಡ ಸತ್ಯಾಗ್ರಹ ಮಾಡಲು ಆಲೋಚಿಸಿಯೇ ಇದ್ದೇನೆ. ಆದರೆ ಇವು ಪರೀಕ್ಷೆಯ ದಿನಗಳು. ಇವುಗಳಷ್ಟು ಕಳೆದುಹೋಗಲಿ. ಮತ್ತೆ ತಾಯಮ್ಮನವರೂ ಈಗ ಕಾಯಿಲೆಯಾಗಿದ್ದಾರೆ. ಅವರನ್ನು ಹೀಗೆಯೇ ಬಿಟ್ಟು ನಾನು ಹೇಗೆ ಹೋಗಬಹುದು? ಜನರು ಏನಂದಾರು? ಅದನ್ನೇ ನಾನೀಗ ಯೋಚಿಸುತ್ತಿದ್ದೇನೆ.’

“ಅಣ್ಣ! ಸತ್ಯಾಗ್ರಹದ ಮಾತೆತ್ತಿದ ಕೂಡಲೇ ನೀನು ಪರೀಕ್ಷೆ ಮತ್ತು ತಾಯ ಅಸ್ವಸ್ಥದ ಕುರಿತು ಮಾತನಾಡುತ್ತೀ. ಆದರೆ ಜೀವನ ಸಫಲವಾಗುವುದಕ್ಕಿಂತ ನಿನ್ನ ಪರೀಕ್ಷೆ ದೊಡ್ಡದೆ? ಮತ್ತೆ ಹೆತ್ತ ತಾಯಿಗಿಂತಲೂ ಹೊತ್ತ ದೇಶ ಮಾತೆ ಹೆಚ್ಚು ಕಾಯಿಲೆಯಾಗಿರುವಳಲ್ಲವೆ, ಅಣ್ಣ?”

‘ತಂಗಿ! ನೀನು ಬೇಕು ಬೇಕೆಂದೇ ಹಟಮಾಡುತ್ತಿ. ಇನ್ನು ಹತ್ತಾರು ದಿನಗಳಲ್ಲಿ ಖಂಡಿತವಾಗಿಯೂ ಸತ್ಯಾಗ್ರಹ ಮಾಡುವೆನು.’

‘ಬೇಡ ಅಣ್ಣಾ, ನೀನು ಸತ್ಯಾಗ್ರಹ ಮಾಡುವುದೇ ಬೇಡ. ವಿಳಂಬವಾಗಿ ಮಾಡುವುದಕ್ಕಿಂತ ಮಾಡದಿರುವುದೇ ಒಳ್ಳೆಯದು.’

★

ಅದು ಭಾರತೀಯರ ಜೀವನ ಮರಣ ಸಂಗ್ರಾಮದ ಕಾಲವಾಗಿತ್ತು. ಪಾರತಂತ್ರ್ಯದಲ್ಲಿ ನರಳುತ್ತಿರುವ ದೇಶದ ಮಾತೆಯ ಕರೆಯನ್ನು ಕೇಳಿ ಕಲ್ಲೆದೆಯೂ ಕರಗಿ ನೀರಾಗುವಂತಿತ್ತು. ಅದಕ್ಕೋಸ್ಕರ ರಾಷ್ಟ್ರ ವೀರರು ಹಿಂದೊಮ್ಮೆ ಅತುಲ ಬಲಿದಾನ ಮಾಡಿದ್ದರು. ಈಗಲೂ ಮತ್ತೊಂದು ಬಾರಿ ಬಲಿದಾನ ಕೊಡುವ ವ್ಯವಸ್ಥೆ ಸಾಗಿತ್ತು. ಸತ್ಯಾಗ್ರಹೀ ವೀರರ ಸ್ಫೂರ್ತಿ ಉತ್ಸಾಹಗಳು ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತಿದುವು. ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಕೊಂಡು ಬಾಯಲ್ಲಿ ರಾಷ್ಟ್ರ ಸಂದೇಶವನ್ನು ಸಾರುತ್ತ ವೀರದಳವು ಹೋಗುವ ಆ ದೃಶ್ಯವು—ಅಪೂರ್ವವಾಗಿತ್ತು—ಸ್ವರ್ಗೀಯವಾಗಿತ್ತು.

★

ನಗರದ ನಾಲ್ಕನೆಯ ದಳವು ಮುಂದಿನ ವಾರ ಸತ್ಯಾಗ್ರಹ ಮಾಡಬು ಸೂಚನೆಯಾಗಿದೆ. ಎಲ್ಲರಿಗೂ ಸತ್ಯಾಗ್ರಹದ ಆಮಂತ್ರಣಗಳು ಹೋಗಿವೆ. ಸತ್ಯಾಗ್ರಹಿಗಳ ಸಂಖ್ಯೆಯು ದಿನದಿಂದ ದಿನಕ್ಕೆ ಏರುತ್ತಾ ಇದೆ. ಲಕ್ಷ್ಮಿಯು ಪುನ: ತನ್ನ ಅಣ್ಣನ ಬಳಿಗೆ ಬಂದು—‘ಅಣ್ಣಾ! ಒಂದು ಮಾತು ಕೇಳುವೆಯಾ?’ ಅಂದಳು.

‘ಏನದು, ಲಕ್ಷ್ಮಿ?’

‘ನಿನ್ನ ಪ್ರತಿಜ್ಞೆಯನ್ನು ಪಾಲಿಸುವೆಯಾ?’

‘ಯಾವ ಪ್ರತಿಜ್ಞೆ, ತಂಗಿ?’

ಅದೇ—ಹೊತ್ತ ತಾಯ ಕರುಣಾಕ್ರಂದನವನ್ನು ಕೇಳಿ, ಹೆತ್ತ ತಾಯ ಮುಂದೆ ತೆಗೆದುಕೊಂಡ ಪ್ರತಿಜ್ಞೆ?’

‘ಸರಿ!’

‘ಆ ಪ್ರತಿಜ್ಞೆಯನ್ನು ಹಾಗೆ ಇಟ್ಟು ನೀನು ಕಾಲಹರಣ ಮಾಡುವುದು ಸರಿಯೇ ಅಣ್ಣ?’

ಅವನು ಸುಮ್ಮನಿದ್ದನು. ಸ್ವಲ್ಪ ಸಮಯದ ಅನಂತರ—‘ಸರಿಯಲ್ಲ ತಂಗಿ,’ ಅಂದ.

ಅವನ ಆ ಮಾತಿಯಲ್ಲಿ ದೃಢತೆ ಇದ್ದಿತು. ಲಕ್ಷ್ಮಿಯ ತುಟಿಗಳಲ್ಲಿ ನಸುನಗು ಮಿಂಚಿತು. ಅವಳ ಸಂತೋಷಕ್ಕೆ ಪಾರವಿಲ್ಲದಾಯಿತು ಓಡಿ ಓಡಿ ಅವಳು ರಾಧೆಯ ಮನೆಗೆ ಹೋದಳು ಮತ್ತು ಈ ಆನಂದ ಸಮಾಚಾರವನ್ನು ಅವಳಿಗೆ ಹೇಳಿದಳು. ರಾಧೆಯು ಅವನಿಗೆ ಅಭಿನಂದನೆಗಳನ್ನು ಕಳುಹಿಸಿದಳು.

ಈಗ ಲಕ್ಷ್ಮಿ ವಿದಾಯ ಸತ್ಕಾರಕ್ಕೆ ಸಿದ್ಧತೆ ಮಾಡಲು ಆರಂಭಿಸಿದಳು. ಇಪ್ಪತ್ತೈದನೆಯ ದಿನ ಬಂದಿತು. ಬೆಳಗ್ಗೆಯೇ ಎದ್ದು ಹವನಮಾಡಿ ಆರತಿಗೆ ಬತ್ತಿ ಇಟ್ಟಳು. ರಾಷ್ಟ್ರ ಸಭೆಯ ಕಾರ್ಯಾಲಯದಲ್ಲಿ ಸತ್ಯಾಗ್ರಹಿಗಳನ್ನು ಬೀಳ್ಕೊಡುವ ಸಮಾರಂಭವು ನಡೆದಿದ್ದಿತು. ಅದು ಮುಗಿದ ಮೇಲೆ ಹೆಮ್ಮಕ್ಕಳು ಬಲಿದಾನ ಕೊಡಲಿಕ್ಕೆ ಹೊರಟ ಸತ್ಯಾಗ್ರಹಿಗಳಿಗೆ ಆರತಿಯನ್ನು ಬೆಳಗಿ ವಿಜಯಮಾಲೆಗಳನ್ನು ಹಾಕಿದರು. ಲಕ್ಷ್ಮಿಯೂ ತನ್ನ ಕಾರ್ಯವನ್ನು ಪೂರೈಸಿದಳು. ಅವಳು ವೀರರಮಣಿ—ಆದರ್ಶಭಗಿನಿ ಆಗಿದ್ದಳು.

ಜಯ ಜಯಕಾರಗಳು ಪ್ರತಿಧ್ವನಿಸಿದುವು. ಅಣ್ಣನು ತಾಯಿಯ ಬಳಿಗೆ ಬಂದು ಅವಳ ಚರಣಗಳಿಗೆ ಸಾಷ್ಟಾಂಗ ಮಾಡಿದನು. ಆ ವೀರ ಮಾತೆ ‘ಚಿರಾಯುವಾಗು’ ಎಂದು ಅವನನ್ನು ಹರಸಿ ‘ದೇಶದ ಕಲ್ಯಾಣವು ನಿನ್ನ ಜೀವನದ ಲಕ್ಷ್ಯವಾಗಿರಲಿ’ ಎಂದು ತನ್ನ ಸಂದೇಶವನ್ನು ಕೊಟ್ಟಳು. ಅವನನ್ನು ಬೀಳ್ಕೊಡುವಾಗ ಲಕ್ಷ್ಮಿಯ ಕಣ್ಣುಗಳಲ್ಲಿ ಆನಂದಾಶ್ರುಗಳು ತೊಟ್ಟಿಕ್ಕಿದುವು.

★

ಮರುದಿನವೇ ಶ್ರೀಧರನ ಪರೀಕ್ಷೆಯ ಆರಂಭ. ಆದರೆ ಅತನು ಈ ಪರೀಕ್ಷೆಗೆ ಅಲ್ಲ. ಜೀವನದಲ್ಲಿ ಇದಕ್ಕೂ ಹೆಚ್ಚಿನದಾದ ಇನ್ನೊಂದು ಪರೀಕ್ಷೆಯನ್ನು ಕೊಡಲಿಕ್ಕೆ ಹೊರಟೇ ಹೋಗಿದ್ದ. ಮತ್ತೆ ಮೂರು ನಾಲ್ಕು ದಿನಗಳಲ್ಲಿ—ಶ್ರೀಧರನಿಗೆ ಸರಕಾರವು ಎರಡು ವರ್ಷಗಳ ಕಠಿಣ ಶಿಕ್ಷೆಯನ್ನು ಕೊಟ್ಟಿದೆ ಎಂಬ ಸಮಾಚಾರವನ್ನು ಲಕ್ಷ್ಮಿ ‘ಆನಂದ’ದಲ್ಲಿ ಓದಿದಳು. ಅವಳು ಓಡಿ ಹೋಗಿ ಆ ಆನಂದ ಸಮಾಚಾರವನ್ನು ತನ್ನ ತಾಯಿಗೆ ತಿಳಿಸಿದಳು. ದಿವ್ಯಾನಂದದ ಉಬ್ಬಿನಲ್ಲಿ ಆ ವೀರಮಾತೆ ತನ್ನ ಎರಡೂ ಚರ್ಮಚಕ್ಷುಗಳನ್ನು ಮುಚ್ಚಿದಳು!

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE. ESTD 1906 **CANARA BANK LIMITED**

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತರ್ರ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು— ಕೊರನೇಷನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು

'ಬ್ರಿಟಿಷ್' ಸರಕಾರಕ್ಕೆ ತೊಂದರೆ ಕೊಡಲಾರೆ'

ಗಾಂಧಿಜಿಯವರು ಪುನಃ ಹೇಳುತ್ತಾರೆ

ಗಾಂಧಿಜಿ ಸತ್ಯಾಗ್ರಹದ ವಿಷಯ ಒಂದು ಪ್ರಕಟಣೆ ಹೊರಡಿಸಿ ರಚನಾತ್ಮಕ ಕಾರ್ಯಕ್ರಮದ ಮಹತ್ವವನ್ನು ಸಾರಿದ್ದಾರೆ. ವೈಸರಾಯರ ಕೌನ್ಸಿಲಿನಲ್ಲಿ ಬದಲಾವಣೆಗಳಾಗುವವೆಂದು ಸುದ್ದಿಯಿದೆ. ಬೊಂಬಯಿ ಸೂರತ್ ಗುಜರಾತುಗಳಲ್ಲಿ ಭಾರೀ ನೆರೆಹಾವಳಿಯಾಗಿ ಅನೇಕ ಹಳ್ಳಿಗಳು ಕೊಚ್ಚಿಹೋಗಿವೆ.

ಬ್ರಿಟಿಷ್ ಸರಕಾರವನ್ನು ಪೀಡಿಸುವುದು ಈ ಸತ್ಯಾಗ್ರಹದ ಧರ್ಮವಲ್ಲ

ಗಾಂಧಿಜಿ ಹೇಳುತ್ತಾರೆ

"ಬ್ರಿಟಿಷಸರಕಾರವನ್ನು ಪೀಡಿಸುವುದರ ಸಲುವಾಗಿ ಈಗಿನ ಸತ್ಯಾಗ್ರಹವು ಪ್ರಾರಂಭಿಸಲ್ಪಟ್ಟಿಲ್ಲವಲ್ಲದೆ ತೊಂದರೆಗಳನ್ನೆಲ್ಲ ಸಾಧ್ಯವಿದ್ದಷ್ಟು ತಪ್ಪಿಸುವುದಕ್ಕೂ ಪ್ರಯತ್ನಿಸಲಾಗುವುದೆಂದು ನಾನು ಸಾವಿರನೆಯಸಲ ಪುನಃ ಹೇಳುತ್ತೇನೆ" ಎಂದು ಮಹಾತ್ಮಾಗಾಂಧಿಯವರು ಹೊರಡಿಸಿದ ಪ್ರಕಟಣೆಯೊಂದರಲ್ಲಿ ತಿಳಿಸುತ್ತಾರೆ ಸತ್ಯಾಗ್ರಹಿಗಳಿಗೆ ಬೇಗನೆ ಒಪ್ಪಿಗೆ ಕೊಡುತ್ತಿಲ್ಲವೆಂಬ ಇತ್ತೀಚೆಗೆ ಒಂದ ತಕರಾರುಗಳಿಗೆ ಉತ್ತರ ರೂಪವಾಗಿ ಆ ಪ್ರಕಟಣೆ ಪ್ರಸಿದ್ಧಿಸಿದ್ದಾರೆ. ಅವರು ಅದರಲ್ಲಿ ಮತ್ತೂ ಹೀಗೆಂದು ಹೇಳುವರು –

"ಬ್ರಿಟಿಷರು ಜೀವ ಸಾವುಗಳ ಹೋರಾಟದಲ್ಲಿ ತೊಡಗಿರುವಾಗ ಅವರಿಗಾಗುವ ತೊಂದರೆಗಳನ್ನು ಕಡಿಮೆ ಮಾಡುವುದರಲ್ಲಿಯೇ ನಮ್ಮ ಹೋರಾಟದ ಶಕ್ತಿ ಹಾಗೂ ಗುಣಗಳು ಅಡಕವಾಗಿರುತ್ತವೆ. ಮೇಲಾಗಿ ನಮ್ಮ ಹೋರಾಟವು ಅನಿಯಮಿತ ಅವಧಿಯ ವರೆಗೆ ಸಾಗುವುದರಿಂದ-೫ ವರ್ಷವಾದರೂ ನಡೆಯಬಹುದೆಂದು ನಾನು ಹೇಳುತ್ತೇನೆ – ಜೈಲುಗಳನ್ನು ತುಂಬುವುದಕ್ಕೆ ಅವಸರ ಮಾಡಬಾರದು. ಬರಿಯ ಜೇಲುಗಳನ್ನು ತುಂಬಿದರೆ ಸ್ವಾತಂತ್ರ್ಯವು ಸಿಕ್ಕಲಾರದು. ನಿರ್ಭಿಕ ಸತ್ಯಾಗ್ರಹ, ಶಿಸ್ತು ಹಾಗೂ ಸ್ವಾರ್ಥತ್ಯಾಗ ಇವುಗಳ ಮೂಲಕ ಜನರು ಹೆಚ್ಚು ಶಿಕ್ಷಣ ಪಡೆಯುವುದರಲ್ಲಿಯೇ ನಮ್ಮ ಉದಾತ್ತ ಗುಣವಿರುವುದು. ನಿಜವಾದ ಸತ್ಯಾಗ್ರಹದ ಪ್ರತಿಯೊಂದು ಕೃತಿಯಿಂದ ಜನಸಾಮಾನ್ಯರ ಮನಸ್ಸಿನ ಮೇಲೆ ಪರಿಣಾಮವಾಗುವುದು.

"ಪ್ರಾರಂಭದಲ್ಲಿ ಸತ್ಯಾಗ್ರಹಿಗಳ ಪಟ್ಟಿಯನ್ನು ನಾನು ಬೇಕಾಗಿಯೇ ಅಷ್ಟು ಲಕ್ಷ್ಯಪೂರ್ವಕವಾಗಿ ಪರಿಶೀಲಿಸುತ್ತಿರಲಿಲ್ಲ. ಅದರ ಪರಿಣಾಮವಾಗಿ ವಿಧಾಯಕ ಕಾರ್ಯ ಮಾಡದವರು ಮೆಲ್ಲನೆ ನುಸುಳಿದರು. ಅದರಲ್ಲಿ ಅವರಿಗೆ ವಿಶ್ವಾಸವಿಹ ಇದ್ದಿಲ್ಲ. ಅಂಥವರು ಒಂದು ಸಂಘಕ್ಕೆ ಭಾರವಾಗುವರಲ್ಲದೆ ಸ್ವಾತಂತ್ರ್ಯ ಹೋರಾಟವು ಹಿಂದುಳಿಯುವುದು.

"ವಿಧಾಯಕ ಕಾರ್ಯವು ಸತ್ಯಾಗ್ರಹದ ಕಳಹದಿಯೆಂದು ನಾನು ಅನೇಕಲ ಹೇಳಿರುವೆನು. ಅದರಿಂದ ಶಿಸ್ತು ಳಿಯುವುದು, ದಿನಗಳು ಕಳೆದಂತೆ ಕಾರ್ಯಕರ್ತರಲ್ಲಿ ಅಹಿಂಸಾ ತತ್ವವು ವೃದ್ಧಿಯಾಗುವುದಕ್ಕೆ ಸಹಾಯ ಮಾಡುವುದು. ಆದುದರಿಂದ ಇನ್ನು ಮೇಲೆ ನಾನು ಇದಕ್ಕೂ ಕೈ ಬಿಗಿಹಿಡಿಯುವೆನು ಕರಾರುಗಳು ಒಂದೇ. ಅವುಗಳನ್ನು ಜಾರಿ ಮಾಡುವಾಗ ಬಿಗಿಹಿಡಿಯುವೆನು. ನಾವು ಶಕ್ತಿಯಿಂದ ಶಕ್ತಿಗೇರ ಬೇಕಾದರೆ ಹಾಗೂ ನಮ್ಮ ಹೋರಾಟವು ಇನ್ನೂ ನಿರ್ಮಲವಾಗಬೇಕಾದರೆ ಈ ಮಾರ್ಗವು ಅವಶ್ಯವಿರುತ್ತದೆ. ಇದನ್ನು ಬಿಟ್ಟು ಬೇರೆ ಯಾವ ಶರತಗಳ ಮೇಲೆ ನಾನು ಈ ಹೋರಾಟವನ್ನು ಸಾಗಿಸಲಾರೆ"

ಮುಂಬಯಿ, ಸೂರತ್, ಗುಜರಾಥುಗಳಲ್ಲಿಯೂ ಭಾರೀ ನೆರೆ

ವೈಸರಾಯಿ ಕಾರ್ಯಕಾರೀ ಮಂಡಳದಲ್ಲಿ ಬದಲಾವಣೆ

ಚರ್ಚಿಲ್-ನಹರುಗಳು ಭೇಟಿಯಾಗಬೇಕು

ಭಾರತದ ಬಿಕ್ಕಟ್ಟು ಬಗೆಹರಿಸಲು ಮೆಂಚೆಸ್ಟರ್ ಗಾರ್ಡಿಯನಿನ ಸೂಚನೆ

ಅಂತರಾಷ್ಟ್ರೀಯ ಪರಿಸ್ಥಿತಿ ಹಾಗೂ ಭಾರತದ ವಿಚಾರವಾಗಿ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆಯುತ್ತಾ ನಾಜಿಗಳು ರಶ್ಯದ ಮೇಲೆ ಯುದ್ಧಮಾಡುತ್ತಿರುವುದರಿಂದ, ಬ್ರಿಟಿಷ ಸರಕಾರದವರು, ಕೂಡಲೇ ಈಗ ಪಂಡಿತ ಜವಾಹರಲಾಲ ನಹರುಗಳನ್ನು ಬಿಡುಗಡೆ ಮಾಡಿ, ಚರ್ಚಿಲ್ಲರೂ ಅವರೂ ರಾಷ್ಟ್ರದ ಬಿಕ್ಕಟ್ಟನ್ನು ಬಗೆಹರಿಸುವ ಮಾತುಕತೆಗಳನ್ನು ಮಾಡುವಂತೆ ಏರ್ಪಡಿಸಬೇಕೆಂದು ಬರೆದಿದೆ.

ಶ್ರೀ ಸುಭಾಸಬೋಸರ ಸ್ಥಾನವು

ಕಲ್ಕತ್ತಾ ಕಾರ್ಪರೇಶನಿನ ಅಲಡರ್ ಮನ್‌ನಾದ ಶ್ರೀ ಸುಭಾಸಬೋಸರ ಸ್ಥಾನವು ಖಾಲಿಯಿದ್ದು ಜುಲೈ ೭ಕ್ಕೆ ಅವರ ರಜೆಯ ಅವಧಿಯು ಮುಗಿಯುವುದಿದ್ದು ಆ ವಿಷಯ ಸರಕಾರಕ್ಕೆ ಕೋರ್ಪರೇಶನಿನವರು ಬರಕೊಂಡಿದ್ದಾರೆ

ಆತ್ಮರಕ್ಷಣೆಗೆ ಹಿಂಸೆಯೂ ಬೇಕು

ಮಾಳವೀಯರು ಹೇಳುತ್ತಾರೆ

ಪಂಡಿತ ಮದನಮೋಹನ ಮಾಳವೀಯವರು ಒಂದು ಪ್ರಕಟಣೆಯಲ್ಲಿ, ಗಾಂಧಿಜಿಯವರ ಅಹಿಂಸಾತತ್ವವನ್ನು ಪೂರ್ಣವಾಗಿ ತಾನು ಒಪ್ಪುವುದಿಲ್ಲವೆಂದೂ ಪ್ರತಿಯೊಬ್ಬ ಮನುಷ್ಯನೂ ಆತ್ಮರಕ್ಷಣೆಗೆ ಹಿಂಸಾ ಪ್ರತೀಕಾರವನ್ನು ಮಾಡಬೇಕಾಗುತ್ತದೆಯೆಂದು ಹೇಳಿದರು

ಪ್ರಿವಿಕೌನ್ಸಿಲಿಗೆ ಜಯಕರರ ರಾಜಿನಾಮೆ

ರಾಜಕಾರಣಕ್ಕಿಳಿಯುವರು?

ಬ್ಯಾರಿಸ್ಟರ್ ಎಂ ಆರ್ ಜಯಕರರು ಪ್ರಿವಿಕೌನ್ಸಿಲಿನ ಜ್ಯುಡಿಶಿಯಲ್ ಕಮಿಟಿ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು. ಇನ್ನು ಮೇಲೆ ಅವರು ರಾಜಕಾರಣಕ್ಕೆ ಇಳಿಯುವರೆಂದು ಸುದ್ದಿ ಹರಡಿದೆ

ವೈಸರಾಯರ ಮಗಳು ಅಂಗಡಿಯಿಟ್ಟಳು

ಲಾಭ ಯುದ್ಧ ನಿಧಿಗಂತೆ

ವೈಸರಾಯರ ಮಗಳು ಲೇಡಿ ಜಾನ್ ಹೋಪಳು ಸಿಮ್ಲಾದಲ್ಲಿ 'ಬ್ರಾನ್ ಟಬ್' ಎಂಬ ಅಂಗಡಿಯಿಟ್ಟಿದ್ದಾಳೆ. ಇದರಿಂದ ಬಂದ ಲಾಭವನ್ನು ಯುದ್ಧ ನಿಧಿ ಮೊದಲಾದ ಧರ್ಮಕಾರ್ಯಗಳಿಗೆ ಕೊಡಲಾಗುವುದಂತೆ

ಭಾರತದಲ್ಲಿ ಜನರಲ್ ವೇವೆಲರು

ಭಾರತದ ಮುಖ್ಯ ಸೇನಾಧಿಕಾರಿಯಾಗಿ ಜನರಲ್ ವೇವಲರನ್ನು ನೇಮಿಸಿದೆ. ಆ ಬಗ್ಗೆ ಟರ್ಕಿಯ ವಾತಾವರಣದಲ್ಲಿ ಕೆಲವು ಊಹಾಪೋಹಗಳುಂಟಾಗಿವೆ.

ಮುಂಬಯಿಯಲ್ಲಿ ನೆರೆಹಾವಳಿ

ಮುಂಬಯಿಯಲ್ಲಿ ಹಲವು ಕಡೆಗಳಲ್ಲಿ ತೀವ್ರ ನೆರೆಹಾವಳಿಯುಂಟಾಗಿದೆ. ರೈಲ್ವೆ ಲೈನು ತೊಂದರೆಗೀಡಾಗಿರುತ್ತದೆ

ಸೂರತಿನಲ್ಲಿಯೂ ಭಾರಿಮಳೆ ಬಿದ್ದಿರುವುದು.

ದಕ್ಷಿಣ ಗುಜರಾಥಿನಲ್ಲಿ ನೆರೆ

ಅನೇಕ ಹಳ್ಳಿಗಳು ಕೊಚ್ಚಿಹೋದುವು

ಗುಜರಾತ್ ಮತ್ತು ಕಾಥೇವಾಡಿನ ಅನೇಕ ಕಡೆಗಳಲ್ಲಿ ಭಾರೀ ಮಳೆಯು ಬಂದು ಹಳ್ಳಿಗಳು ಮಹಾಪೂರದಿಂದ ಕೊಚ್ಚಿಹೋಗಿವೆಯೆಂದು ತಿಳಿದುಬಂದಿರುತ್ತದೆ

ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ

ಅನೇಕ ಬದಲಾವಣೆಗಳಾಗುವವೆಂದು ತಿಳಿದು ಬರುತ್ತದೆ.

ಮುನ್ಶಿ ಸಾವರ್ಕರರ ಭೇಟಿಯಾಗಿದ್ದರು

ಪೂನದ ಕಾಳ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಗಿದೆ. ಮುನ್ಶಿಯವರು ವರ್ಧಾಕ್ಕೆ ತೆರಳುತ್ತಿದ್ದಾಗ ಬ್ಯಾ. ಸಾವರ್ಕಾರರ ಭೇಟಿಮಾಡಿದರೆಂದೂ, ಅವರೊಡನೆ ಪ್ರಸ್ತುತದ ರಾಜಕೀಯದ ವಿಷಯ ಮಾತನಾಡಿದರೆಂದೂ, ಮತ್ತೆ ಗಾಂಧಿಜಿಯವರಲ್ಲಿಗೆ ಹೋಗಿ ಕಾಂಗ್ರೆಸಿಗೆ ರಾಜಿನಾಮೆಯಿತ್ತರೆಂದೂ ಅದರಲ್ಲಿ ಬರೆದಿದೆ

೩೦೧ ಕೈದಿಗಳ ಬಿಡುಗಡೆ

ವೆಲ್ಲೂರು ಸೆಂಟ್ರಲ್ ಜೈಲಿನಿಂದ ಮದ್ರಾಸು ಸರಕಾರದವರು ಹಿಂದೆ ನಿಶ್ಚಯಿಸಿದಂತೆ ೩೦೧ ಮಂದಿ ಕೈದಿಗಳನ್ನು ಬಿಟ್ಟಿರುವರು



ಸ್ಲೊಟಿಡ್ ಬ್ಲೇಡುಗಳು ಹಳೆಯ ಮೂರು ರಂಧ್ರದ ಬ್ಲೇಡುಗಳಲ್ಲಿ ಒಂದು ದೊಡ್ಡ ಸುಧಾರಣೆಯಾಗಿದೆ. 7 ಓ'ಕ್ಲೋಕ್ ಸ್ಲೊಟಿಡ್ ಬ್ಲೇಡುಗಳಲ್ಲಿ ಸಾಧಾರಣ ಬೆಲೆಗೆ, ಸುಧಾರಿಸಿದ ಬಿಸ್ಸಿನ ಬ್ಲೇಡುಗಳಲ್ಲಿಯ ಎಲ್ಲಾ ಅನುಕೂಲತೆಗಳು ದೊರಕುತ್ತವೆ. ನವಸುಧಾರಣೆಯ ಮುಖಕ್ಷೌರಕ್ಕೆ 7 ಓ'ಕ್ಲೋಕ್ ಬ್ಲೇಡುಗಳನ್ನು ಉಪಯೋಗಿಸಿರಿ.

8 ಆಣೆಗೆ 10 ಬ್ಲೇಡುಗಳು

ಶಾಲಾ ಪುಸ್ತಕಗಳು

ಟೆಕ್ಸ್ಟುಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ
ಪ್ರಾಥಮಿಕ ಲಘುವಿಜ್ಞಾನ
೬, ೭ ಮತ್ತು ೮ನೆಯ ತರಗತಿಗಳಿಗೆ.
ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ
ಮಕ್ಕಳ ಪದ್ಯಮಂಜರಿ
ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ
೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ
ವ್ಯಾಕರಣ ಮತ್ತು ಪ್ರಬಂಧ
೪, ೫, ೬, ೭ ಮತ್ತು ೮ನೆಯ ತರಗತಿಗಳಿಗೆ
ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—0
೭ನೆಯ 0—2—6 ೮ನೆಯ 0—3—0

ಸಿವಿಕ್ಸ್ ಅಥವಾ ಪ್ರಜಾಧರ್ಮ
೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು
೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಿ. ಅ. ನಂ. 290/1941.
ಕ್ರಿ. ನಂ. 393/1935.

ಅರ್ಜಿದಾರ್ರು— ವಿಟ್ಠಲ ಶಾಂತಾರಾಮ ಕುಲಕರ್ಣಿ ಸಹಾ
ಎದ್ರಿರು— ಪಾಂಡ್ಯಪ್ಪರಸು ಬಿನ್ನಾಣಿಯವರು ಸಹಾ

2ನೇ ಎದ್ರಿ ದಿನಕರ ಶಾಂತಾರಾಮ ಕುಲಕರ್ಣಿಯವರಿಗೆ—

ನಿಮ್ಮ ತಂದೆ ಶಾಂತರಾಮ ಮಂಗೇಶ ಕುಲಕರ್ಣಿಯವರು 1ನೆ ಎದ್ರಿ ಪಾಂಡ್ಯಪ್ಪರಸು ಬಿನ್ನಣಿಯವರ ಮೇಲೆ ಆಸ್ತಿ ಸ್ವಾಧೀನತೆಗೂ ಹಣವಿಗೂ ಪಡೆದ ಮೇಲೆ ಹೇಳಿದ ಡಿಕ್ರಿ ಮೇಲೆ ನಿಮ್ಮ ತಂದೆಯವರ ವೀಲು ಪ್ರಕಾರ ವಿಟ್ಠಲ ಶಾಂತಾರಾಮ ಕುಲಕರ್ಣಿ ವಗೈರೆಯು ಆಸ್ತಿ ಸ್ವಾಧೀನತೆಗೂ ಐವಜು ವಸೂಲಿಗೂ ಅಮಲ ಜಾರಿ ಮಾಡಿದ್ದಾರೆ. ಇದರಲ್ಲಿ ನಿಮಗೇನಾದರೂ ಆಕ್ಷೇಪವಿದ್ದರೆ ತಾ 1-8-1941ನೆ ದಿವಸ ಸದ್ರಿ ಕೋರ್ಟಿನಲ್ಲಿ ಜಾಹಿರು ಮಾಡಬೇಕಾಗಿ ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ನಿಮಗೆ ತಿಳಿಸೋಣಾಗುತ್ತದೆ.

ತಾ. 4-7-1941 } N. Ganapathy Rao.
ಅರ್ಜಿದಾರನ ವಕೀಲ.

ನೋಟೀಸು

ಕಾಸರಗೋಡು ಕಸಬೆಯಲ್ಲಿರುವ ಕಣಾನೂರು ನರಸಿಂಹ ಕಮ್ತಿರ ಮಗ ಸಿ. ಶ್ರೀಪಾದ ರಾಯನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ:—

ನನ್ನ ತಮ್ಮ ಸಿ. ಬಾಲಕೃಷ್ಣ ರಾಯನು ತಾನು ಪರಊರಿಗೆ ಹೋಗುವ ಇರಾಧೆಯಲ್ಲಿರುವುದರಿಂದ ತನ್ನ ಕೂಡೆ ಇರುವ ರೂಪಾಯಿ 1000-0-0ನ್ನು ನನ್ನ ಕೂಡೆ ಇಡುವದಾಗಿಯೂ ಆ ಪೈಕಿಯಿಂದ ನನಗೆ ಕಾಗದ ಬರೆದ ಪ್ರಕಾರ ನಾನು ಆಗಾಗ್ಗೆ ಆತಗೆ ಹಣ ಕಳುಹಿಸಿ ಕೊಟ್ಟರೆ ಸಾಕೆಂತಲೂ ವಗೈರೆ ನಂಬಿಸಿ ನನ್ನಿಂದ ತನ್ನ ಹೆಸರಲ್ಲಿ ಆ ಐವೇಜಿಗೆ ತಾ. 5-7-'41ರಲ್ಲು ತನ್ನ ಹೆಸರಲ್ಲಿ ಒಂದು ನೋಟನ್ನು ಬರೆಸಿದ್ದಲ್ಲದೆ ನನಗೆ ಹಣ ಸಿಕ್ಕದ್ರಿಂದ ನಾನೇ ಇಟ್ಟುಕೊಂಡ ನೋಟನ್ನು ತನ್ನ ತಿಳವಳಿಕೆ ವ ಅನುಮತಿಯಿಲ್ಲದೆ ಸ್ವಾಧೀನ ಪಡಿಸಿಕೊಂಡು ಇರುತ್ತಾನೆ. ಸದ್ರಿ ನೋಟು ಪ್ರಕಾರ ನನಗೆ ಏನೊಂದು ಐವಜು ಸಿಕ್ಕದೆ ಇರುವುದರಿಂದಲೂ ಸದ್ರಿ ನೋಟನ್ನು ನಾನು ನನ್ನ ಸ್ವಂತ ಇಚ್ಛೆಯಿಂದ ಆತಗೆ ಕೊಡದೆ ಇರುವುದರಿಂದಲೂ ಆ ನೋಟು ಜ್ಯಾರಿಗೆ ಬರತಕ್ಕದಲ್ಲ. ವ ಅದರ ಪೋಲ್‌ಬೀಟು ಕೂಡಾ ಮಂಜೂರಾದತಕ್ಕದ್ದಲ್ಲ.

ಕಾಸರಗೋಡು } C. Sripada Rao.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 423/1939.
R. E. P. No. 48/1941.

ನರಸಿಂಹ ಬಳ್ಳಕ್ಕುರಾಯ ನಾರಶ್ಯ ಶ್ರೀನಿವಾಸ ಬಳ್ಳಕ್ಕುರಾಯರ ಮಗ, ಕಳಿಯೂರು ಗ್ರಾಮದಲ್ಲಿರುವವರು, } ಅರ್ಜಿದಾರ

ಮತ್ತು

1. ಸಂಗಪ್ಪ ತೆಕ್ಕುಂಜತ್ತಾಯ
2. ಪದ್ಮನಾಭ ತೆಕ್ಕುಂಜತ್ತಾಯ ರಾಮಕೃಷ್ಣ ತೆಕ್ಕುಂಜತ್ತಾಯರ ಮಕ್ಕಳು, ಪುಣಂಬೂರು ಗ್ರಾಮದಲ್ಲಿರುವವರು. } ರೆಸ್ಪಾಂಡೆಂಟರು

ಮೇಲ್ಕಂಡ ಅಮ್ಲಜ್ಯಾರಿಯಲ್ಲಿ 1ನೇ ರೆಸ್ಪಾಂಡೆಂಟಿಗೆ ಸಬಸ್ಟಿಟ್ಯೂಟ್ ಸರ್ವಿಸ ಮುಖಾಂತರ D. S. P. ನೋಟೀಸು ಜ್ಯಾರಿ ಬಗ್ಗೆ ಹುಕುಂ ಆಗಿ ಸದ್ರಿ ಅಮ್ಲಜ್ಯಾರಿಯು ತಾರೀಕು 24-7-1941ಕ್ಕೆ ಇಟ್ಟಿದೆ. ಆ ದಿವಸ 1ನೇ ರೆಸ್ಪಾಂಡೆಂಟನು ಹಾಜರಾಗದೆ ಇದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕಾಸರಗೋಡು } K. Sunder Rama Shenoy.
9-7-41 } Vakil for Petitioner

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 30/1941.
in S. C. 697/38.

ಎಮ್. ವೈಕುಂಠ ಭಕ್ತ— ಅರ್ಜಿದಾರ
ಮತ್ತು
ದೈಯ್ಯಕ್ಕ ಕೂಡಾ— ರೆಸ್ಪೊಂಡೆಂಟರು

ಇವರೊಳಗೆ

ರೆಸ್ಪೊಂಡೆಂಟರು:—
2. ಸುಬ್ಬಕ್ಕೆ ಸುಕ್ಕ ಷಣ್ಮುಖಚಂದ್ರ ಹೆಂಗ್ಸಿನ ಮಗಳು 4. ನಾರ್ಣಪ್ಪ ಶೆಟ್ಟಿ 5. ದೇವಕಿ, ಗುಬ್ಬಿ ಹೆಂಗ್ಸಿನ ಮಕ್ಕಳು, ಎಲ್ಲರೂ ಕಾಸರಗೋಡು ತಾಲೂಕು ಪತೂರು ಗ್ರಾಮದಲ್ಲಿರುವರು—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿದಾರನಾದ ಅರ್ಜಿದಾರನು ರೆಸ್ಪೊಂಡೆಂಟರ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ ಇದೇ ಇಸ್ವಿ ಜುಲೈ ತಾ. 26 ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ. ಹಾಗೆ ನೀವು ಆ ತಾರೀಕಿಗೆ ಕೋರ್ಟಿನ ಮುಂದೆ ಹಾಜರಾಗಿಕೊಳ್ಳದಿದ್ದಲ್ಲಿ ನಿಮ್ಮನ್ನು ಶಿವಾಯಿಸಿ ಸದ್ರಿ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಾದೀತೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು } (Sd.) S. Venkat Rao,
5-7-'41 } Vakil for Decree-holder

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಋತುಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವಜ್ವರನಿವಾರಿಣಿ
ಆಹಾರ, ವಿಹಾರ, ಋತುಭೇದ ದೋಷಗಳಿಂದ ಆಮಾಶಯದಲ್ಲಿ ಕ್ರಿಮಿಗಳು ಸೇರಿ ನಾನಾವಿಧವಾದ ಜ್ವರಗಳು ಸಂಭವಿಸುತ್ತದೆ. ವಾತಜ್ವರ, ಪಿತ್ಥಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ವಾಸಿಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟೆ :: ಮದರಾಸು.

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

ಸರ್ ಷಣ್ಮುಖಂ ಚೆಟ್ಟಿಯಾರರು ಅಮೇರಿಕಕ್ಕೆ

ಇಂಡಿಯನ್ ಪರ್‌ಚೇಸಿಂಗ್ ಮಿಶನ್ ಮುಖಂಡರಾಗಿ ನೇಮಕ ಹೊಂದಿ ತೆರ[illegible]

ಇವರು ಮದ್ರಾಸು ಗವರ್ನರರ ಯುದ್ಧ ನಿಧಿಗೆ ರೂ. ೪ ಸಾವಿರ ಕೊಟ್ಟಿರುವರು.

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಾ! ಕೆ. ವಿಟ್ಠಲ ಶೆಟ್ರ ಸತ್ಯಾಗ್ರಹ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟ ರಾದ ಡಾ! ಕೆ. ವಿಟ್ಠಲ ಶೆಟ್ರು ತಾ. ೧೧ ರಂದು ಮಂಗಳೂರಲ್ಲಿ ಸತ್ಯಾಗ್ರಹಮಾಡುವರೆಂದು ಅಧಿಕೃತವಾಗಿ ತಿಳಿದು ಬರುತ್ತದೆ.

ಶ್ರೀ ಕೆ. ಅಯ್ಯಣ್ಣ ಶೆಟ್ರ ಬಂಧನ

ವಿಟ್ಲ ಕಾಡುಮಠದ ಶ್ರೀ ಅಯ್ಯಣ್ಣ ಶೆಟ್ರು ತಾ. ೯ರಂದು ಯುದ್ಧವಿರುದ್ಧ ಘೋಷಿಸಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಿ ವಿಚಾರಣೆ ನಡೆದು ೩ ತಿಂಗಳ ಸಜೆ, 200 ರೂಪಾಯಿ ದಂಡ ವಿಧಿಸಿರುವರು. ಇವರಿಗೆ 'ಬಿ' ಕ್ಲಾಸು ಕೊಡಲಾಗಿದೆ.

ಹೊನ್ನಾವರದಲ್ಲಿ ಶ್ರೀ ತಿರುಮಲೇಶ್ವರ ಭಟ್ಟರ ಬಂಧನ

ದಕ್ಷಿಣ ಕನ್ನಡದಲ್ಲಿ ಸತ್ಯಾಗ್ರಹ ಹೂಡಿ ದಿಲ್ಲಿಗೆ ಯುದ್ಧವಿರುದ್ಧ ಪ್ರಚಾರಮಾಡುತ್ತಾ ಹೋಗುತ್ತಿದ್ದಾಗ, ಹೊನ್ನಾವರದಲ್ಲಿ ಸತ್ಯಾಗ್ರಹಿ ಶ್ರೀ ತಿರುಮಲೇಶ್ವರ ಭಟ್ಟರನ್ನು ಬಂಧಿಸಿರುವರು.

ಶ್ರೀ ಮುದ್ರಾಡಿ ಭೋಜ ಶೆಟ್ಟಿ, ಶ್ರೀ ಮುದ್ರಾಡಿ ನಾರಾಯಣ ಶೆಟ್ಟಿ ಮತ್ತು ಶ್ರೀ ಬಿ. ದೇವಪ್ಪಾಳ್ವರ ಬಿಡುಗಡೆ

ಸತ್ಯಾಗ್ರಹ ಮಾಡಿ ಬಂಧಿತರಾಗಿ ಆಲಿಪುರಂ ಸೆರೆಮನೆಯಲ್ಲಿದ್ದ ಶ್ರೀಗಳಾದ ಮುದ್ರಾಡಿ ಭೋಜ ಶೆಟ್ಟಿ, ಶ್ರೀ ಮುದ್ರಾಡಿ ನಾರಾಯಣ ಶೆಟ್ಟಿ ಮತ್ತು ಶ್ರೀ ಬಿ. ದೇವಪ್ಪಾಳ್ವರು ತಾ. 1ರಂದು ಅಲ್ಲಿ ಬಿಡುಗಡೆಯಾಗಿ ತಾ. ೯ರಂದು ಊರಿಗೆ ಬಂದಿರುವರು. ಇವರಲ್ಲಿ ಶ್ರೀ ದೇವಪ್ಪಾಳ್ವರು 10 ಪೌಂಡು ಶರೀರ ಭಾರ ಕಳಕೊಂಡಿರುತ್ತಾರೆ.

ಶ್ರೀ ಮಾಧವ ಪಡಿಯಾರ್, ಮತ್ತು ಕುಂಞಂಬು ನಾಯರರ ಬಿಡುಗಡೆ

ಪಾಣೆಮಂಗಳೂರು ಶ್ರೀ ಮಾಧವ ಪಡಿಯಾರರೂ ನೀಲೇಶ್ವರದ ಶ್ರೀ ಎಂ. ಕುಂಞಂಬು ನಾಯರರೂ, ಕಾರಾಗೃಹವಾಸ ಮುಗಿಸಿ ಆಲಿಪುರಂ ಸೆರೆಮನೆಯಿಂದ ಬಿಡುಗಡೆಯಾಗಿ ಮರಳಿದ್ದಾರೆ.

ಶ್ರೀ ವೆಂಕಟೇಶ ಪ್ರಭುಗಳ ಬಿಡುಗಡೆ

ಕಾರ್ಕಳದಲ್ಲಿ ಸತ್ಯಾಗ್ರಹಮಾಡಿ ಬಿ. ತರಗತಿಯಲ್ಲಿ ನಾಲ್ಕು ತಿಂಗಳ ಸಶ್ರಮ ಸಜೆಗೆ ಗುರಿಯಾಗಿದ್ದ ಶ್ರೀ ಕೆ. ವೆಂಕಟೇಶ ಪ್ರಭುಗಳವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿ ಮರಳಿದ್ದಾರೆ.

ಶ್ರೀ ಬಿ. ಸುಬ್ಬಣ್ಣ ಶೆಟ್ರ ಬಿಡುಗಡೆ

ಸತ್ಯಾಗ್ರಹ ಮಾಡಿ ಬಂಧಿತರಾದ ಡಿ! ಬೋ! ಮೆಂಬರ್ ಶ್ರೀ ಬಿ. ಸುಬ್ಬಣ್ಣ ಶೆಟ್ರು ತಿರುಚಿನಾಪಳ್ಳಿ ಜೈಲಿನಿಂದ ಬಿಡುಗಡೆ ಹೊಂದಿ ಬಂದಿರುವರು.

ಪ್ರಾರಂಭ ಭಾಷಣ

ಮಂಗಳೂರು ಬಿ. ಇ. ಎಮ್. ಹೈಸ್ಕೂಲಿನ ಸಾಹಿತ್ಯ ಮತ್ತು ತಾರ್ಕಿಕ ಸಭೆಯ ಪ್ರಾರಂಭ ಭಾಷಣವನ್ನು ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಶ್ರೀ ವಿ. ರಾಮಶರ್ಮ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಜಾಪ್ರಭುತ್ವ ಪ್ರಪಂಚದಲ್ಲಿ ವಿದ್ಯಾರ್ಥಿಗಳು ಯೋಗ್ಯ ನಾಗರಿಕರಾಗುವಂತೆ, ತಮ್ಮ ಇಂದಿನ ವಿದ್ಯಾರ್ಥಿ ಜೀವನದಲ್ಲಿ ತಕ್ಕ ಸಿದ್ಧತೆಯನ್ನು ಮಾಡಬೇಕೆಂದು ಮುಂತಾಗಿ ಭಾಷಣ ಕರ್ತರು ಹೇಳಿದರು.

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಕಾಂಗ್ರೆಸ್ ಕಮಿಟಿ ಮೂಲಕ ಸಹಾಯವಿತ್ತ ಮಹನೀಯರು

ಬೈಲೂರು ಕಾಂಗ್ರೆಸ್ ಕಮಿಟಿ ರೂ. 12; ಕಾಪು ನಾಗರಿಕರು ರೂ. 12-0-0 ಮುಣಿಪಾಲ ನಾಗರಿಕರು ರೂ. 5-0-6; ಮಿಜಾರು ಅಣ್ಣಪ್ಪ ಅನಂತ ಪೈ ಎಂಡ್ ಸನ್ಸ್ ರೂ. 25; ಗ್ರೇಟ್ ಬರ್ಮಾ ಬೀಡಿವರ್ಕ್ಸ್ ರೂ. 100; ಎಂ. ಆರ್. ಪೂಂಜ ರೂ. 10; ಎಂ. ಶಿವರಾವ್ ರೂ. 10; ಬಿ. ಗುಡ್ಡಪ್ಪ ರೈ ರೂ. 5; ಬಿ. ಟಿ. ಅರಿಗ ಜೈನಿ ರೂ. 5; ಐತಪ್ಪ ರೈ ರೂ. 5; ಎಂ. ಸಿ. ಸಂಬಿಯಾರ್ ರೂ. 5; ಎಸ್. ನರ್ಸಪ್ಪಯ್ಯ ರೂ. 25; ಡಿ. ಮಂಜಯ್ಯ ಹೆಗ್ಡೆ (2ನೆಕಂತು) ರೂ. 100; ಮುಟಪಾಡಿ ಬ್ರದರ್ಸ್ ರೂ. 25; ಕೆ. ಎ. ಎನ್. ಉಪಾಧ್ಯಾಯ (ಕೊಲೊಂಬೊ) ರೂ. 5; ತೀರ್ಥಹಳ್ಳಿಯಿಂದ ರೂ. 1; ಕೊಂಚಾಡಿ ಅಣ್ಣಪ್ಪ ಶ್ಯಾನುಭಾಗ ಎಂಡ್ ಬ್ರದರ್ಸ್ ದುರಾಶಿನ ಬುಟ್ಲಿ 50; ರಾಘವೇಂದ್ರ ರಂಗ ಪೈ 10 ವಲ್ಲಿಗಳು; ಶ್ರೀ ತಿಂಗಳೆ ರಘುನಾಥ ಹೆಗ್ಡೆ 2 ನೇಗಿಲುಗಳು; ಶ್ರೀ ದೇವಪ್ಪ ಕಾಮತ್ 2 ನೇಗಿಲುಗಳು; ಶ್ರೀ ಎನ್. ದೇಜಪ್ಪ ಶೆಟ್ಟಿ 1 ನೇಗಿಲು; ಶ್ರೀ ಎಸ್. ಕಾಳಪ್ಪ 1 ನೇಗಿಲು; ಶ್ರೀ ಹಿರಿಯಣ್ಣ ಶೆಟ್ಟಿ ¼ ಮುಡಿ ಬೀಜ, 10 ನೇಗಿಲುಗಳು, ನೇಗಿಲ ಮೊಳೆ 5; ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ ಜ್ವರದ ಮದ್ದು 14 ಬಾಟ್ಲಿ; ಕೊಂಚಾಡಿ ಕೇಶವ ಶೆಣೈ ವಸ್ತ್ರ ಒಂದು ಬಂಡ್ಲು; ಡಾ. ಸಿ. ಪಿ. ಕಾಮತ್ ವಸ್ತ್ರ ಒಂದು ಬಂಡ್ಲು; ಯು. ಆರ್. ಶೆಣೈ, ಬಾಳಿಗಾ ಎಂಡ್ ಸನ್ಸ್ ಶಾರದಾ ಪ್ರೆಸ್, ಬಾಸೆಲ್ ಮಿಶನ್, ಭೋಜರಾವ್ ಕಂಪೆನಿ, ಸ್ಟೂಡೆಂಟ್ಸ್ ಬುಕ್ ಕಂಪೆನಿಗಳಿಂದ ಸಾಹಿತ್ಯ ಶಾಲಾ ಪುಸ್ತಕಗಳು ಮತ್ತು ಇತರ ಸಾಮಗ್ರಿಗಳು; ಚೊಕ್ಕಾಡಿ ಕೇಂದ್ರದ ಗ್ರಾಮಸ್ಥರು ರೂ. 22-2-0.

ರೆವಿನ್ಯೂ ಮೆಂಬರರು ಹಿಂತಿರುಗಿದ್ದರು.

ನಮ್ಮ ಸಂಸ್ಥಾನದ ರೆವಿನ್ಯೂ ಮೆಂಬರರಾದ ಮಿ. ಜಿ. ಡಬ್ಲ್ಯೂ. ಪ್ರೀಸ್ಟ್ಲಿ, ಐ. ಸಿ. ಎಸ್. ಯವರು ಈ ಜಿಲ್ಲೆಯಲ್ಲಿ ನೆರೆ ಬಂದ ಪ್ರದೇಶಗಳಾದ ನಷ್ಟಗಳ ... ವೀಕ್ಷಿಸಿ ಹೊಸ ಲಾಭವುಗಳನ್ನು ನಮ್ಮ ಜಿಲ್ಲಾ ಕಲೆಕ್ಟರರ ಸಹಿತ, ಕಣ್ಣಾರೆ ಕಂಡು ಹಿಂತಿರುಗಿದರು.

ಶ್ರೀ ಗಣಪತಿ ಕಾಮತರು

ಕಯ್ಯೂರು ಮೊಕದ್ದಮೆಯಲ್ಲಿ ಆರೋಪಿತರಾಗಿದ್ದು, ಮಂಗಳೂರು ಜೈಲಿನಲ್ಲಿ ಇದ್ದಾಂದಿನಲ್ಲಿರುವ ಶ್ರೀ ಎಸ್. ಜಿ. ಕಾಮತರು ಉಷ್ಣರೋಗದ ಕಡೆಯಿಂದ ನರಳುತ್ತಿದ್ದು ಈಗ ಸುಧಾರಿಸುತ್ತಿರುವರೆಂದು ತಿಳಿದುಬಂದಿದೆ.

ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘ

ಈ ಸಂಘದ ಒಂದು ಸಭೆಯು ಕಳೆದ ಆದಿತ್ಯವಾರ ಸಂಜೆ ಸ್ಥಳೀಯ "ಕಂಠೀರವ" ಆಫೀಸಿನಲ್ಲಿ ಸಂಘದ ಅಧ್ಯಕ್ಷ ಶ್ರೀ ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಸೇರಿ, ಅಲ್ಲಹಾಬಾದಿನ "ಲೀಡರ" ಪತ್ರಿಕೆಯ ಮುಖ್ಯ ಸಂಪಾದಕರಾದ ಸರ್ ಸಿ. ವೈ. ಚಿಂತಾಮಣಿಯವರ ನಿಧನದ ಕುರಿತಾಗಿ ಅತಿಶಯ ಸಂತಾಪವನ್ನು ಸೂಚಿಸುವ ಹಾಗೂ ಈ ನಿಧನದಿಂದ ಭಾರತ ಪತ್ರಿಕೋದ್ಯೋಗಕ್ಕೂ ಪ್ರಪಂಚಕ್ಕೂ ಆಗಿರುವ ನಷ್ಟವನ್ನು ಶ್ರುತಪಡಿಸುವ ಠರಾವೊಂದನ್ನು ಮಾಡಿ, ಅದನ್ನು ದಿವಂಗತರ ಕುಟುಂಬಕ್ಕೆ ತಿಳಿಸುವಂತೆ ನಿರ್ಧರಿಸಿತು.

ಅಲೆಗೆ ಜನ್ಮಟಾಪು

ಮಂಗಳೂರು ತಾಲೂಕು ಕುಕ್ಕಿಪಾಡಿ ಗ್ರಾಮದ ಅಮ್ಮು ಪೂಜಾರಿ ಎಂಬವನಿಗೂ ಗಿರಿಯಪ್ಪ ಎಂಬವನಿಗೂ ಕಳೆದ ತಾ. 6-1-41ರಲ್ಲು ಜೈದಾಟವಾಗಿ ಕಡೆಗೆ ಅಮ್ಮುವು ಗಿರಿಯಪ್ಪನಿಗೆ ಚೂರಿಯಿಂದ ತಿವಿಯಲಾಗಿ ಆತ ಮೃತಪಟ್ಟು ಹೋದನು. ಆಲೆ ಅಮ್ಮು ಪೂಜಾರಿಯನ್ನು ತನ್ನಿಗೆ ಸೆಶನ್ ಕೋರ್ಟಿಗೆ ಕಮಿಟುಮಾಡಲಾಗಿತ್ತು. ತನ್ನನ್ನು ಮೃತನೂ ಅವನ ಜತೆಗಾರರೂ ಹೊಡೆಯಲು, ಸಹಿಸಲಾರದೆ ತನ್ನ ಜೀವದ ರಕ್ಷಣೆಗಾಗಿ ತಾನು ಚೂರಿ ಹಾಕಿದನ್ನಾಗಿ ಆಲೆಯ ಸಾಧನೆಯಾಗಿತ್ತು. ಎಸೆಸರರು ತಪ್ಪಿತಸ್ಥನಲ್ಲವೆಂತ ಅಭಿಪ್ರಾಯ ಪಟ್ಟಾಗ್ಯೂ ಸೆಶನ್ ಜಡ್ಜರಾದ ಶ್ರೀ ಕೆ. ಎನ್. ಗೋಪಾಲನ್‌ರವರು ಆಲೆಯನ್ನು ಜನ್ಮಟಾಪು ಶಿಕ್ಷೆಗೆ ಗುರಿಪಡಿಸಿದರು.

ದ. ಕ. ಜಿಲ್ಲಾ ಬೋರ್ಡ್ ಸಭೆ

ಕಳೆದ ತಾ. ೫ರಲ್ಲಿ ಡಾ. ವಿಟ್ಠಲ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ, ಬೋರ್ಡಿನ ಒಂದು ಸಾಮಾನ್ಯ ಸಭೆಯು ಸೇರಿ ಸರ್. ಸಿ. ವೈ. ಚಿಂತಾಮಣಿಯವರು, ಮತ್ತು ಶ್ರೀ ಎಸ್. ಎಸ್. ಶ್ರೀನಿವಾಸಯ್ಯಂಗಾರ್ಯ ಇವರ ನಿಧನದ ಬಗ್ಗೆ ಪಶ್ಚಾತ್ತಾಪ ಸೂಚಕವಾದ ಠರಾವುಗಳಾದವು. ಮತ್ತ ಇತರ ಸಭಾಕಾರ್ಯಗಳು ನಡೆದವು.

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗಿನ ಸಭೆ

ಲೀಗಿನ ಸಭೆಯೊಂದು ಕಳೆದ ತಾ. ೬ನೇ ಮಧ್ಯಾಹ್ನ ಬೋಳೂರು ಲೇಬರ್ ಶಾಲೆಯಲ್ಲಿ ಶ್ರೀ ಕೆ. ಈಶ್ವರನವರ ಅಧ್ಯಕ್ಷತೆಯಲ್ಲಿ ಜರಗಿತು. ೧. ಜಿಲ್ಲಾ ಕಲೆಕ್ಟರರ ಪತ್ರವನ್ನು ಪರಿಶೀಲಿಸಿ ಕೆ. ಈಶ್ವರನವರನ್ನೇ ಎಕ್ಸೈಜ್ ಬೋರ್ಡಿಗೆ ಹರಿಜನ ಪ್ರತಿನಿಧಿಯಾಗಿ ಆರಿಸಲಾಯಿತು. ೨. ಸಂಘದ ಕಟ್ಟೋಣದ ಬಗ್ಗೆ ಪ್ರತಿಯೊಬ್ಬ ಸದಸ್ಯರೂ ರೂ. ೧ನ್ನು ವಂತಿಗೆಯಾಗಿಕೊಡಬೇಕೆಂದು ನಿರ್ಧಾರವಾಯಿತು.

ವರ್ಗ

ಶ್ರೀ ಯು. ಜನಾರ್ಧನ ಬಿ. ಎ., ಇವರು ಕುಂದಾಪುರದ ತಹಶೀಲ್ದಾರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ದ. ಕ. ಜಿಲ್ಲಾ ನಿವಿಷ್ಟ ಭಾರತೀಯ ವೈದ್ಯ ಸಂಘ, ಮಂಗಳೂರು

ಇದರ ತೃತೀಯ ವಾರ್ಷಿಕ ಮಹಾ ಸಭೆಯು ಬರುವ ತಾ. 13ನೇ ಆದಿತ್ಯವಾರ ಸಂಜೆ 5-30ಕ್ಕೆ ಉಡುಪಿ ಆಯುರ್ವೇದಿಕ್ ಫಾರ್ಮಸಿಯಲ್ಲಿ ಜರಗುತ್ತದೆ.

ಮಂಗಲಪಾಡಿ

ಮಂಗಲಪಾಡಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ತಾರ್ಕಿಕ ಮತ್ತು ಸಾಹಿತ್ಯ ಸಂಘದ ಉದ್ಘಾಟನಾ ಸಮಾರಂಭವು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ದೇವಪ್ಪ ಶೆಣೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತ ಎಂ. ಬಾಬು ಇವರು ಉದ್ಘಾಟನ ಭಾಷಣವನ್ನು ಕೊಟ್ಟರು.

ಕಾರ್ಕಳ
ಉದ್ಘಾಟನಾ ಸಮಾರಂಭಗಳು

ಇಲ್ಲಿಯ ಪ್ರಸಿದ್ಧ ಜವಳಿ ಸಾಹುಕಾರರಾದ ಶ್ರೀ ರಂಜಾಳ ಗೋವರ್ಧನ ವೈಕುಂಠ ಶೆಣೈಯವರು ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲೆಗೆ ಕಟ್ಟಿಸಿಕೊಟ್ಟ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. 9-7-41ರ ದಿನ ರಾವ್ ಬಹದೂರ್ ಡಾಕ್ಟರ ಯಂ. ಕೇಶವ ಪೈ, ಎ. ಬಿ. ಇ., ಯಂ. ಡಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರಿಗೆ ರಜತ ಕರಂಡಕದಲ್ಲಿ ಶ್ರೀ ಶೆಣೈಯವರ ಮಾನ ಪತ್ರ ಸಮರ್ಪಣೆ, ಸಂದರ್ಭೋಚಿತ ಭಾಷಣಾದಿಗಳೂ ಇದ್ದುವು. ಇದೇ ರೀತಿ ಶ್ರೀ ಶೆಣೈಯವರು ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಗೆ ಕಟ್ಟಿಸಿ ಕೊಟ್ಟ ಸರ್ಜಿಕಲ್ ವಾರ್ಡಿನ ಪ್ರವೇಶ ಸಮಾರಂಭವು ಕೂಡ ತಾ. 10-7-41ರ ದಿನ ಡಾಕ್ಟರ ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಸತ್ಕಾರ ಕೂಟ

ಉದ್ಯೋಗದಿಂದ ನಿವೃತ್ತರಾಗಲಿರುವ ಇಲ್ಲಿಯ ಡಾಕ್ಟರ ಪಿ. ಭವಾನಿರಾಯರಿಗೆ ಜನಾರ್ದನ ಎಂಪೋರಿಯಮಿನ ಮೂಲಕ ಶ್ರೀ ಕೆ. ಗಣಪತಿ ಶೆಣೈಯವರು ಕೊಟ್ಟ ವಿದಾಯಕೂಟವು ಡಿಸ್ಟ್ರಿಕ್ಟ್ ಮುನ್ಸೀಫ್ ಶ್ರೀ ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲೂ, ಕಾರ್ಕಳ ಜನರಲ್ ಪ್ರೊವಿಜನ ಸಪ್ಲಾಯ್ ಲಿಮಿಟೆಡ್ ಸಂಸ್ಥೆಯ ವರ್ಧಂತಿ ಸಂಬಂಧವಾದ ಸತ್ಕಾರ ಕೂಟವೊಂದು ಇಲ್ಲಿಯ ವಕೀಲ ಶ್ರೀ ಸದಾಶಿವ ಭಟ್ಟರವರ ಅಧ್ಯಕ್ಷತೆಯಲ್ಲಿಯೂ ಜರಗಿದುವು.

ಸಭೆ ಸಮಾಚಾರಗಳು

ತಾ. ೬ರ ದಿನ ಶ್ರೀ ಕೆ. ಪಿ. ಕಾಮತರ ಅಧ್ಯಕ್ಷತೆಯಲ್ಲಿ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಸಾರ್ವಜನಿಕ ಸಭೆ ಸೇರಿ ಸನಾತನ ಧರ್ಮರಕ್ಷಣೆಗೆ ಸಮಾಜ ಪರಿಷತ್ತಿನ ಆವಶ್ಯಕತೆಯ ಕುರಿತು ಭಾಷಣಕೊಟ್ಟರು. ಮಂಗಳೂರಲ್ಲಿ ಸ್ಥಾಪಿತವಾದ ಪರಿಷತ್ತಿಗೆ ಇಲ್ಲಿ ಸದಸ್ಯರನ್ನು ಸೇರಿಸುವವರನ್ನಾಗಿ ಶ್ರೀ ಕೆ. ಕೃಷ್ಣ ಪೈಯವರು ಆರಿಸಲ್ಪಟ್ಟರು. ಸ್ಥಳೀಯ ಕೋಪರೇಟಿವ್ ಸ್ಟೋರ್ಸಿನ ವಾರ್ಷಿಕ ಸಭೆಯು ರೆವರೆಂಡ್ ಫಾದರ್ ಜಸ್, ಡಿ'ಸೋಜರವರ ಅಧ್ಯಕ್ಷತೆಯಲ್ಲಿ ಸೇರಿ ಹೊಸ ಕಾರ್ಯಕಾರಿ ಮಂಡಳಿಯು ಆರಿಸಲ್ಪಟ್ಟಿತು.

ಹಿಂದೀ ಪರೀಕ್ಷೆಗಳು

ಈ ಬಾರಿಯ ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯಲ್ಲಿ ಇಲ್ಲಿಂದ ಶ್ರೀಮತಿ ವಿ. ಗಿರಿಜಾ, ಕೆ. ರಾಮಚಂದ್ರ ಭಟ್ಟ, ಕೆ. ನರಸಿಂಹ ಹರಿಭಟ್ಟ ಮತ್ತು ಯಂ. ಕೇಶವ ಭಟ್ಟರವರು ಉತ್ತೀರ್ಣರಾಗಿದ್ದಾರೆ.

ಉಡುಪಿ

ಡಾ. ವಿ. ಪಿ. ಕೇಶವ ಪೈ, ಇವರಿಗೆ ತಾ. 7ರಂದು ಉಡುಪಿಯ ಗೌಡಸಾರಸ್ವತ ಬ್ರಾಹ್ಮಣ ಸಮಾಜದವರು ಒಂದು ಮಾನ ಪತ್ರವನ್ನು ಸಮರ್ಪಿಸಿ ಸತ್ಕರಿಸಿದರು.

ಪೆರಡಾಲ

ಶಂಕರಶಾಸ್ತ್ರಿ ಸ್ಮಾರಕ ಭವನ

ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾದ ದಿವಂಗತ ಮಹೋಪಾಧ್ಯಾಯ ಶಂಕರ ಶಾಸ್ತ್ರಿಗಳ ಸ್ಮಾರಕ ಭವನವೊಂದನ್ನು ಕಟ್ಟಿಸುವರೆ ಶಾಲೆಯ ಹಳೆ ವಿದ್ಯಾರ್ಥಿ ಪ್ರಮುಖರು ನಿಶ್ಚಯಿಸಿದಂತೆ, ಅದರ ಕಾರ್ಯಗಳು ಪ್ರಾರಂಭವಾಗಿ ಇದು ವರೆಗೆ ಸುಮಾರು ರೂ. 300ರ ವರೆಗೆ ಧನಸ್ಥ ಮಹಮ್ಮಹನರ ಮುಷ್ಟೀಯಿಂದ ದೊರೆತಿರುವುದೆಂದೂ ಬೇಗನೆ ಕಟ್ಟಡದ ಕೆಲಸವನ್ನು ಪ್ರಾರಂಭಿಸಲಿರುವುದರಿಂದ ಹಳೆ ವಿದ್ಯಾರ್ಥಿಗಳೂ, ಶಂಕರ ಶಾಸ್ತ್ರಿಗಳ ಮೇಲೆ ಅಭಿಮಾನವುಳ್ಳ ಇತರ ಮಹನೀಯರೂ ಉದಾರ ಸಹಾಯ ಕೊಡಬೇಕಾಗಿ ಸಂಬಂಧಪಟ್ಟವರು ವಿನಂತಿಸಿಕೊಳ್ಳುತ್ತಾರೆ.

ಕೊಡಗು

ಕಾಂಗ್ರೆಸಿನ ಜಯ

ಕೊಡಗಿನ ಡಿ! ಬೊ! ಪ್ರೆಸಿಡೆಂಟರ ಆಯ್ಕೆಯ ಬಗ್ಗೆ ಧಾರವಾಡದಿಂದ ಕೆ. ಪಿ. ಸಿ. ಸಿ.ಯ ಶ್ರೀ ಕರಮಕರರು ಮಂಗಳೂರಿನಿಂದ ಡಿ. ಸಿ. ಸಿ. ಸಿಯ ಶ್ರೀ ದಾಮೋದರ ಬಾಳಿಗರೂ ಆಮಂತ್ರಿತರಾಗಿ ಹೋಗಿದ್ದು, ಶ್ರೀ ಕುಂಞಾಲಪ್ಪನವರು ಕಾಂಗ್ರೆಸು ಕಡೆಯಿಂದ ಅಧ್ಯಕ್ಷರಾಗಿ ಅವಿರೋಧದಿಂದ ಆಯ್ಕೆ ಬಂದರೆಂದು ತಿಳಿಯುತ್ತದೆ.

ರೈಲುಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ನ್ಯೂತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	8.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ.	6.50 ಸಾಯಂ.
ಕಣ್ಣನೂರು ವರೆಗೆ	5.32 ಸಾಯಂ.	9.40 ಪೂರ್ವಾಹ್ನ.

ಜರ್ಮನರು ಸ್ಟಾಲಿನ್ ವ್ಯೂಹವನ್ನು ಭೇದಿಸಿದರಂತೆ!

ಅಮೆರಿಕನರು ಅಯಿಸಲೆಂಡಿನಲ್ಲಿ ತಳವೂರಿದರು

ಜಪಾನಿನ ನೀತಿಯೇನು?

ರಶ್ಯ ಜರ್ಮನ್ ಯುದ್ಧವು ಭೀಕರವಾಗುತ್ತಿದೆ. ಮೋಸ್ಕೋದ ಸಮೀಪ ಬಂದಿರುವೆವೆಂದು ಜರ್ಮನರು ಹೇಳುತ್ತಾರೆ. ಸ್ಟಾಲಿನ್ ವ್ಯೂಹವನ್ನು ಜರ್ಮನರು ಭೇದಿಸಿರುವರಂತೆ. ಜರ್ಮನ್ ಮತ್ತು ರಶ್ಯನ್ ಸೈನಿಕರಲ್ಲಿ ಲಕ್ಷಾಂತರ ಮಂದಿ ಮಡಿದಿರುವರು. ಅಮೆರಿಕನರು ಆಯಿಸಲೆಂಡಿನಲ್ಲಿ ತಳವೂರಿರುವರೆಂದು ತಿಳಿದಿದೆ.

ಸ್ಟಾಲಿನ್ ವ್ಯೂಹವನ್ನು ಜರ್ಮನರು ಭೇದಿಸಿದರು

ವಿಶಾಲ ಸ್ಟಾಲಿನ್ ವ್ಯೂಹವನ್ನು ಜರ್ಮನ್ ಮುಂದಲುಗಳು ಮುರಿದುವೆಂದು ಜರ್ಮನರ ಹೇಳಿಕೆಯಿದೆ.

ಸ್ಟಾಲಿನ್ ವ್ಯೂಹವನ್ನು ಮುರಿದರೆ ಮತ್ತೆ ತಮಗೆ ಜಯದೊರಕುವುದೆಂದು ಜರ್ಮನ್ ಸುದ್ದಿ ಖಾತೆಯ ಹೇಳಿಕೆಯಾಗಿದೆ.

ದಕ್ಷಿಣ ಪೋಲೆಂಡಿನಲ್ಲಿ ಜರ್ಮನ್ ಧಾಳಿ

ಜರ್ಮನ್ ಟ್ಯಾಂಕು ದಲಗಳು ಅತ್ತ ಮೋಸ್ಕೋ ಕಡೆಗೆ ಹೊರಟಿರುವಲ್ಲಿ ಇತ್ತ ನದಿಗಳ ಕ್ಷೇತ್ರಗಳ ಕ್ಷೇತ್ರದಲ್ಲಿ ಘೋರ ಕಾಳಗ ನಡೆದಿದೆ. ಜರ್ಮನ್ ಸೈನ್ಯ ಸುಮಾರು ೩೦೦ ಮೈಲುಗಳ ಮೋಸ್ಕೋ ಅಂತರದಲ್ಲಿ ವೆಯೆಂದು ಸುದ್ದಿ ಬಂದಿರುತ್ತದೆ.

ಅಮೆರಿಕನರು ಆಯಿಸಲೆಂಡಿನಲ್ಲಿ ತಳವೂರಿದರು

ಅಮೇರಿಕದ ನೌಕಾ ಪಡೆಯು ಆಯಿಸಲೆಂಡಿಗೆ ಬಂದಿರುವುದಂತೆ. ಅಮೇರಿಕದ ಈ ಕೃತಿಗೆ ಆಯಿಸಲೇಂಡಿನವರ ಒಪ್ಪಿಗೆಯೂ ಇದೆಯಂತೆ.

ರಶ್ಯನ್ ಉಡುಪು ಧರಿಸಿ ಬಂದರು

ಜರ್ಮನ್ ಕೊಡೆ ವೈಮಾನಿಕರು ರಶ್ಯನ್ ಉಡುಪು ಧರಿಸಿ ಬಂದಿರುವರೆಂದು ಸುದ್ದಿ. ಅವರ ಮೋಸವು ರಶ್ಯನರಿಗೆ ತಿಳಿದು ಅವರನ್ನು ಭಯಂಕರ ಹಾನಿಗೆ ಗುರಿಪಡಿಸಿರುವರಂತೆ.

ಸೆರಸಾಜ ಹಿಡಿದರು

ಜರ್ಮನ್ ಸೈನಿಕರು ಬುಕೋವಿನಾದ ಪ್ರಾಮುಖಪಟ್ಟಣವಾದ ಸೆರಸಾಜವನ್ನು ಹಿಡಿದರೆಂದು ತಿಳಿದಿದೆ.

ರಶ್ಯನರು ಗೋರಿಲ್ಲಾ ಕದನ ಪ್ರಾರಂಭಿಸಿದ್ದಾರೆ

ಬಾಲ್ಟಿಕ್ ಮತ್ತು ಮಧ್ಯ ಪ್ರದೇಶಗಳಲ್ಲಿ ಮುಂದೊತ್ತುತ್ತಿರುವ ಜರ್ಮನ್ ಸೈನ್ಯಗಳನ್ನು ಮುಂದಕ್ಕೆ ಬಿಟ್ಟು ರಶ್ಯನ್ ಸೈನ್ಯಗಳು ಗೋರಿಲ್ಲಾ ಗುಂಪು ಕದನಗಳನ್ನು ಆರಂಭಿಸಿರುವವೆಂದು ಸುದ್ದಿ.

ಹಿಟ್ಲರ ಕಚೇರಿ ಸುದ್ದಿ

ಬಿಯೋಲಿಸ್ಟಾಕ್ ಎಂಬಲ್ಲಿ ಜರ್ಮನರಿಗೆ ಮಹತ್ವದ ವಿಜಯ ಸಿಕ್ಕಿರುವುದೆಂದು ಹಿಟ್ಲರ್ ಕಚೇರಿ ಪ್ರಕಟಣೆಯಿದೆ.

ಲೇನಿನ್‌ಗ್ರಾಡ್ ಕಡೆಗೆ ಮುಂದೋಟ

ಡ್ವಿನ್‌ಸ್ಕಿನಲ್ಲಿ ರಶ್ಯನರು ವಾಪಾಸು ಬಂದಿರುವರು. ಲೇಟ್ವಿಯಾ ರಶ್ಯಗಡಿಯನ್ನು ಜರ್ಮನರು ಮುಟ್ಟಿರುವರು. ಲೆನಿನ್‌ಗ್ರಾಡ್ ಕಡೆಗೆ ಜರ್ಮನರು ಮುಂದೊತ್ತುತ್ತಿರುವರು.

ಜರ್ಮನರು ಬೆರೆಸಿನಾ ನದಿಯನ್ನು ದಾಟಿರುವರೆಂದು ಸುದ್ದಿ. ಜರ್ಮನರು ಮರ್ಮಾನ್‌ಸ್ಕನ್ನು ಹಿಡಿದಿರುವುದಾಗಿ ರೋಂ ರೇಡಿಯೋ ಸಾರುತ್ತವೆ.

ಇಡೀ ಯುದ್ಧದಲ್ಲಿ ರಶ್ಯನರು ಹಿಂಜರಿದರು

ಇಡೀ ರಣಕ್ಷೇತ್ರದಲ್ಲಿ ರಶ್ಯನರು ಹಿಮ್ಮೆಟ್ಟುತ್ತಿರುವರೆಂದು ಜರ್ಮನ್ ಪ್ರಕಟಣೆ.

ಜರ್ಮನ್ ಟ್ಯಾಂಕುಗಳ ಧ್ವಂಸ

ಒಸ್ಟ್ರಾವ ಭಾಗದಲ್ಲಿ ರಶ್ಯನರು ಜರ್ಮನರ ನೂರಾರು ಟೇಂಕುಗಳನ್ನು ಧ್ವಂಸ ಮಾಡಿರುವರೆಂದು ತಿಳಿದಿದೆ!

೭ ಲಕ್ಷ ಜರ್ಮನರಿಗೆ ಅನಾಹುತ

ಇದು ವರೆಗಿನ ಯುದ್ಧದಲ್ಲಿ ರಶ್ಯನರು ೭ ಲಕ್ಷ ಜರ್ಮನ್ ಸೈನಿಕರಿಗೆ ಅನಾಹುತ ಮಾಡಿರುವರಂತೆ.

ಹಿಟ್ಲರ್ ಮತ್ತು ಹಿಟ್ಲರ್‌ವಾದದ ನಾಶವೇ ನಮ್ಮ ಗುರಿ

ಈಡನರು ಹೇಳುತ್ತಾರೆ

ಬ್ರಿಟನಿನ ವಿದೇಶಾಂಗ ಮಂತ್ರಿಗಳಾದ ಈಡನರು ಒಂದು ಸಾರ್ವಜನಿಕ ಭಾಷಣದಲ್ಲಿ ಹಿಟ್ಲರನೊಡನೆ ಯಾವುದೇ ಕರಾರಿನ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿಲ್ಲವೆಂದೂ ನಾವು ನಮ್ಮ ಯುದ್ಧಯತ್ನವನ್ನು ಪ್ರಬಲವಾಗಿ ಸಾಗಿಸಿ ಹಿಟ್ಲರನ ಸರ್ವನಾಶವಾಗುವವರೆಗೆ ಸಾಧಿಸುವೆವೆಂದೂ ಹೇಳಿದರು.

ಬ್ರಿಟನಿಗೆ ಧಾಳಿ

ರಶ್ಯದಲ್ಲಿ ಕಾದಾಟವಾಗುತ್ತಿರುವಂತೆ, ಬ್ರಿಟನಿಗೆ ಶತ್ರುವಿಮಾನ ಧಾಳಿಯು ಸ್ವಲ್ಪ ಸ್ವಲ್ಪವಾದರೂ ಅಗದೆ ಉಳಿದಿಲ್ಲ.

ಸ್ಟಾಲಿನನ ಭಾಷಣ

ರಶ್ಯದ ಸರ್ವಾಧಿಕಾರಿ ಹಾಗೂ ಪ್ರಮುಖ ಸೇನಾನಿಯಾದ ಸ್ಟಾಲಿನ್ ಒಂದು ಭಾಷಣ ಮಾಡುತ್ತಾ, ರಶ್ಯದವರು ಪ್ರಚಂಡವಾಗಿ ಕಾದಾಡಿದರೂ, ಇದುವರೆಗೆ ಜರ್ಮನರಿಗೆ ಜಯವಾಗಿದೆಯೆಂದೂ, ಜರ್ಮನರಿಗೆ ಧಾಳಿಮಾಡಲು ಸೌಕರ್ಯವಾಯಿತೆಂದೂ, ಶತ್ರುಗಳನ್ನು ರಶ್ಯನರು ಸಂಪೂರ್ಣ ನಾಶಮಾಡಬೇಕೆಂದೂ ಹೇಳಿದನು.

ಜಪಾನಿನ ನೀತಿಯೇನು?

"ಎಚ್ಚರಿಕೆಯಿಂದಲೂ ಸಿದ್ಧತೆಯಿಂದಲೂ ಇರಬೇಕು. ರಶ್ಯಾಜರ್ಮನಿಗಳ ಯುದ್ಧದ ಬಗ್ಗೆ ಜಪಾನಿನ ನೀತಿಯು ಮುಖ್ಯ ತಿರುಳೇ ಇದು" ಹೀಗೆಂದು ಜಪಾನಿನ ವಿದೇಶಾಂಗ ಮಂತ್ರಿ ಮತ್ಸೂಕನ ಹೇಳಿಕೆಯಾಗಿದೆ.

ಜಪಾನು ಧಾಳಿ ಮಾಡಬಹುದು

ಹಿಟ್ಲರನು ಹಂಚಿಕೆಯಲ್ಲಿದ್ದಾನೆ?

ಶಾಂತ ಸಾಗರದ ಮೇಲೆ ಜಪಾನು ಧಾಳಿಮಾಡಬಹುದೆಂದೂ, ಜರ್ಮನರೂ ಸಹ ಜಪಾನನ್ನು ಹಾಗೆ ಮಾಡಲು ಒತ್ತಾಯಪಡಿಸುತ್ತಿರುವರೆಂದೂ, ಉತ್ತರ ಮಂಚುಕೋದಲ್ಲಿ ಸಂರಕ್ಷಣೆಯ ಕಾರ್ಯಗಳು ವಿಶೇಷ ನಡೆದಿವೆಯೆಂದೂ ಸುದ್ದಿಯಿದೆ.

ಪೋಪರ ಸಂದೇಶ

ಪೋಪರು ಒಂದು ಬ್ರಾಡ್‌ಕಾಸ್ಟ್ ಭಾಷಣಮಾಡುತ್ತಾ ಅದರಲಿ ದುಷ್ಟತ್ವಕ್ಕೆ ವಿಜಯವು ದೊರಕಲಾರದೆಂದು ಹೇಳಿರುತ್ತಾರೆ.

ಸ್ಟಾಲಿನ ವ್ಯೂಹದ ಮೇಲೆ ಧಾಳಿ

೩ ಲಕ್ಷ ರಶ್ಯನರ ಸೈದು

ಸ್ಟಾಲಿನ್ ವ್ಯೂಹದ ವಿರುದ್ಧ ಜರ್ಮನರು ಹೋರಾಡಿದರು. ೩ ಲಕ್ಷ ರಶ್ಯನರನ್ನು ಜೂಲೈ ೫ರ ತನಕ ಸೆರೆಹಿಡಿದರಂತೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಪಾ ಕಂಪೆನಿ, ಹಂಪನಕಟ್ಟಾ ಮಂಗಳೂರು

HALFTONE & LINE
BLOCK MAKING
UNDERTAKEN
Sharada Press,
MANGALORE

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ಭಾರತದ ಪತ್ರಿಕಾಸಂಪಾದಕರಲ್ಲಿ ಅಗ್ರಗಣ್ಯರು ಅಸ್ತಂಗತರಾದರು!

ಮುಂದಪಕ್ಷದ ರಾಜಕೀಯ ಧುರೀಣರು ಕಣ್ಮರೆಯಾದರು!

ಸರ್ ಯಜ್ಞೇಶ್ವರ ಚಿಂತಾಮಣಿಯವರ ಜೀವನಪರಿಚಯ

ಭಾರತದ ಪತ್ರಿಕಾ ಸಂಪಾದಕರ ಸಾಲಿನಲ್ಲಿ ಸರ್. ಸಿ. ಯಜ್ಞೇಶ್ವರ ಚಿಂತಾಮಣಿಯವರು ಅಗ್ರಪಂಕ್ತಿಯ ಮನ್ನಣೆಯನ್ನು ಪಡೆದಿದ್ದರು. ಮುಂದಪಕ್ಷದ ರಾಜಕೀಯ ಧುರೀಣರಲ್ಲೊಬ್ಬರಾಗಿದ್ದು ಅವರು ತಕ್ಷದ ಸಲುವಾಗಿ ಮಂತ್ರಿಪದವಿಗೂ ರಾಜಿನಾಮೆಯಿತ್ತು ಬಂದ ಕೆಚ್ಚೆದೆಯ ದೇಶಪ್ರೇಮಿಗಳಿದ್ದರು. ಲೇಖಕರಾಗಿ, ಗ್ರಂಥಕರ್ತರಾಗಿ ಅವರು ಅಪೂರ್ವ ಗೌರವಹೊಂದಿದ್ದರು. ಹೀಗೆ, ಪತ್ರಿಕೋದ್ಯಮ, ಗ್ರಂಥಲೇಖನ, ರಾಜನೀತಿ ಪ್ರಾವಿಣ್ಯತೆ ಇವುಗಳ ಅಪೂರ್ವ ಸಮ್ಮಿಳನದಿಂದ ಭಾರತದ ಸಾರ್ವಜನಿಕ ರಂಗದಲ್ಲಿ ಸರ್ ಚಿಂತಾಮಣಿಯವರು ತಮ್ಮದೇ ಆದ ಒಂದು ವಿಶಿಷ್ಟಸ್ಥಾನಕ್ಕೇರಿ ವಿರಾಜಮಾನರಾಗಿದ್ದರು. ಅಂತಹ ಮಹಾ ಮೇಧಾವೀ ಪುತ್ರನೊಬ್ಬನ ಮರಣದಿಂದ ಇಂದು ಭಾರತಾಂಬೆಯು ಅತ್ಯಂತ ದುಃಖಿತಳಾಗಿದ್ದಾಳೆ.

ವಿಜಯನಗರದಲ್ಲಿ ತೆಲುಗು ಬ್ರಾಹ್ಮಣ ಕುಟುಂಬದಲ್ಲಿ ಶ್ರೀ ಶ್ರೀ ಯಜ್ಞೇಶ್ವರ ಚಿಂತಾಮಣಿಯವರು, ೧೮೮೦ನೆಯ ಇಸವಿಯ ತೆಲುಗು ಯುಗಾದಿಯ ದಿನ ಜನ್ಮವೆತ್ತಿದರು. ಚಿಂತಾಮಣಿಯವರ ಶಾಲಾ ದಿನಗಳು ಅತ್ಯಂತ ಉಲ್ಲಾಸಕರವಿದ್ದುವು. ವಿಜಯನಗರದ ಮಹಾರಾಜರೊಡನೆ ಚಿಂತಾಮಣಿಯವರ ತಂದೆಯವರಿಗೆ ವಿಶೇಷ ಆಪ್ತತ್ವವಿತ್ತು. ವಿಜಯನಗರದ ಈ ಮಹಾರಾಜರು 'ಹಿಂದು' ಪತ್ರಿಕೆಯ ಶ್ರೀ. ಜಿ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಸರ್ ಸುರೇಂದ್ರನಾಥ ಬೆನರ್ಜಿ ಇವರ ಬಹಳ ಆಪ್ತರಾಗಿದ್ದರೆಂಬುದನ್ನು ನಾವು ಸ್ಮರಿಸಿಕೊಳ್ಳುವುದು ಅವಶ್ಯವಿದೆ. ಯಾವಾಗಲೂ, ಪತ್ರಿಕಾ ವಾಚನದಲ್ಲಿಯೂ, ಮೇಧಾವಿಗಳಾದ ಮಹಾತ್ಮರ ಭಾಷಣಗಳನ್ನು ಓದುವುದರಲ್ಲಿಯೂ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರೂ ಚಿಂತಾಮಣಿಯವರು ತನ್ನ ೧೫ನೆಯ ವರ್ಷ ಪ್ರಾಯದಲ್ಲಿಯೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅಪೂರ್ವ ವಿಜಯ ಪಡೆದರು. ರಾಜಕೀಯದಲ್ಲಿ ಮತ್ತು ರಾಜಕೀಯ ಸಭೆಗಳಲ್ಲಿ ಅವರಿಗೆ ಇದ್ದ ವಿಶೇಷ ಆಸಕ್ತಿಯ ನಿಮಿತ್ತ ಚಿಂತಾಮಣಿಯವರ ಮುಂದಿನ ಕಾಲೇಜು ವಿದ್ಯಾಭ್ಯಾಸವು ಅಷ್ಟು ಸಾಂಗವಾಗಿ ನೆರವೇರಲಿಲ್ಲ.

'ಹಿಂದು' ಮತ್ತು 'ಮೆಡ್ರಾಸ್ ಸ್ಟೇಂಡಾರ್ಡ್' ಪತ್ರಿಕೆಗಳಲ್ಲಿ ಶ್ರೀ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಅರ್ಡ್ಲಿ ನೋರ್ಟನ್ ಇವರು ಬರೆಯುತ್ತಿದ್ದ ಲೇಖನಗಳು ಯುವಕ ಚಿಂತಾಮಣಿಯ ಮನವನ್ನು ಬಹಳವಾಗಿ ಸೂರೆಗೊಂಡವು. ಶರೀರದ ಅನಾರೋಗ್ಯದ ನಿಮಿತ್ತ ಚಿಂತಾಮಣಿಯವರು ವಿಜಾಗ ಪಟ್ಟಣಕ್ಕೆ ತೆರಳಬೇಕಾಯಿತು; ಇಲ್ಲಿಯೇ ಅವರು ಪತ್ರಿಕೋದ್ಯಮವನ್ನು ಅತ್ಯಂತ ಆಸಕ್ತಿಯಿಂದ ಆರಂಭಿಸಿದರು. 'ವಿಜಾಗ್ ಸ್ಪೆಕ್ಟೇಟರ್' ಎಂಬ ವಾರಪತ್ರಿಕೆಯಲ್ಲಿ ಅವರು ಬರೆದ 'ಲಾರ್ಡ್ ಎಲ್ಗಿನನ ಅಪಜಯ' ಎಂಬೀ ಪ್ರಧಾನ ಲೇಖನವು ಅವರಿಗೆ ಪತ್ರಿಕೆಯ ಸಂಪಾದಕತ್ವವನ್ನು ಒದಗಿಸಿಕೊಟ್ಟಿತು. ಹದಿನೆಂಟನೆಯ ವರ್ಷದ ಪ್ರಾಯದಲ್ಲಿಯೇ ಚಿಂತಾಮಣಿಯವರು ಸಂಪಾದಕತ್ವದ ಹೊಣೆಗಾರಿಕೆ ಹೊತ್ತರು. ಆದರೆ, ತನ್ನ ಕೌಟುಂಬಿಕ ವಿಪತ್ತಿನ ದೆಸೆಯಿಂದ ಬೇಗನೇ ಅವರು ತಮ್ಮ ಆ ಉದ್ಯೋಗವನ್ನು ಬಿಟ್ಟುಬಿಡಬೇಕಾಯಿತು. ಅಲ್ಲಿಂದ ತನ್ನ ಸ್ವಂತ ಊರಾದ ವಿಜಯನಗರಕ್ಕೆ ಮರಳಿ ಬಂದವರು, 'ದಿ ಇಂಡಿಯನ್ ಹೆರಾಲ್ಡ್' ಎಂಬ ಪತ್ರಿಕೆಯನ್ನು ನಡೆಸುವ ಸಂಪೂರ್ಣ ಅಧಿಕಾರ ವಹಿಸಿಕೊಂಡರು. ಈ ಪತ್ರಿಕೆಯು ಆ ಕಾಲದ ಪ್ರಮುಖ ರಾಜಕೀಯ ವ್ಯಕ್ತಿಗಳಾದ ದಾದಾಭಾಯಿ ನೌರೋಜಿ ಮತ್ತು ಡಬ್ಲ್ಯು. ಸಿ. ಬೆನರ್ಜಿ ಇವರ ಪ್ರೀತಿ ಆದರಗಳಿಗೂ ಪಾತ್ರವಾಯಿತು.

ವಿಜಯನಗರದಲ್ಲಿ ಮತ್ತೆ ಒಂದು ಘಟನೆ ನಡೆಯಿತು. ವ್ಯಭಿಚಾರಿಣಿಯರನ್ನು ಕೆಲವರನ್ನು ಕೂಡಿಸಿಕೊಂಡು ಒಂದು ನಾಟಕ ಕಂಪನಿಯನ್ನು ಅಲ್ಲಿನ ನಾಟ್ಯ ವಿಲಾಸಿಗಳು ತೆರೆದರು. ಚಿಂತಾಮಣಿಯವರು ಮುನ್ಸಿಪಲ್ ಕೌನ್ಸಿಲಿನವರು. ಅಂತಹ ದುರುದ್ದೇಶ ಪ್ರೇರಿತವಾದ ಕಂಪನಿಗೆ ಲೈಸನ್ಸ್ ಕೊಡಬಾರದೆಂದು ತೀವ್ರ ಆಂದೋಲನ ನಡೆಸಿದರು. ಇದರಿಂದ ಕೆಲವರು ಅಧಿಕಾರಿಗಳೂ ಚಿಂತಾಮಣಿಯವರ ಮೇಲೆ ಅತೃಪ್ತಿಗೊಂಡರು. ಮಾತ್ರವಲ್ಲದೆ ಇದರಿಂದ ನೊಂದ ಕೆಲವರು, ಚಿಂತಾಮಣಿಯವರಿಗೆ ದ್ರೋಹಮಾಡಲು ಒಬ್ಬ ಪುಂಡನನ್ನು ಪ್ರೇರೇಪಿಸಿದರು. ಚಿಂತಾಮಣಿಯವರು ಈ ಎಲ್ಲಾ ವೈಯುಕ್ತಿಕ ಆಪತ್ತು ಸಂಕಟಗಳನ್ನು ಧೈರ್ಯದಿಂದ ಎದುರಿಸಿದರು. ಅವರ ಅಂತಹ ಆತ್ಮಬಲ ನೈತಿಕ ಧೈರ್ಯದ ಸುದ್ದಿಯನ್ನು ಕೇಳಿದ ಮಹಾದೇವ ಗೋವಿಂದ ರಾನಡೆಯವರು ಚಿಂತಾಮಣಿಯವರನ್ನು ಅವರ ಆತ್ಮಶಕ್ತಿಗಾಗಿ ಮುಕ್ತಕಂಠದಿಂದ ಹೊಗಳಿದರು. ಮುಂದೆ, ಚಿಂತಾಮಣಿಯವರಿಗೆ 'ಹೆರಾಲ್ಡ್' ಪತ್ರಿಕೆಯನ್ನು ನಡೆಸುವುದು ಆಗದೆ, ಅವರು ಮದ್ರಾಸಿಗೆ ತೆರಳಬೇಕಾಯಿತು.

ಮದ್ರಾಸಿನಲ್ಲಿ, ಅವರು, ಆ ಕಾಲದಲ್ಲಿ ಪತ್ರಿಕೋದ್ಯಮಿಗಳ ಪಂಕ್ತಿಯಲ್ಲಿ ಅಗ್ರಗಣ್ಯರಾಗಿದ್ದ ಸುಬ್ರಹ್ಮಣ್ಯ ಅಯ್ಯರರ ನೆರವು ದೊರಕಬಹುದೆಂದು ನಂಬಿದ್ದರು. ಆದರೆ ಅಯ್ಯರೇ ಆಗ ಹೆಚ್ಚಿನ ವಿಪತ್ತಿನಲ್ಲಿ ಬಿದ್ದಿದ್ದರು. ಅಯ್ಯರ್ ಹಿಂದು ಪತ್ರಿಕೆಯನ್ನು ಬಿಟ್ಟುಬಿಡಬೇಕಾಯಿತು. ಮುಂದೆ ಸುಬ್ರಹ್ಮಣ್ಯ ಅಯ್ಯರರು ಸ್ಟೇಂಡಾರ್ಡಿನ ಸಂಪಾದಕರಾದಾಗ ಅದರಲ್ಲಿ ಚಿಂತಾಮಣಿಯವರೂ ಒಂದು ಸ್ಥಾನವನ್ನು ಗಳಿಸಿಕೊಂಡರು. ಮುಂದೆ, ೧೯೦೨ರಲ್ಲಿ ಅವರು ಮದ್ರಾಸನ್ನೂ ಬಿಟ್ಟರು. ಮತ್ತೆ ಎಂದೂ ಅಲ್ಲಿಗೆ ಮರಳಲೇ ಇಲ್ಲ.

ದೇಶಸೇವಾ ಕಾರ್ಯದಲ್ಲಿ ಅವರಿಗಿದ್ದ ಉತ್ಸಾಹವು ಅಷ್ಟಿಷ್ಟಲ್ಲ. ೧೮೯೫ರ ಪೂನಾ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಅಲ್ಲಿ ಅವರು ತನ್ನ ಪ್ರಾರಂಭ ಭಾಷಣ ಮಾಡಿದರು. ಮುಂದೆ, ಬಹಳ ಆರ್ಥಿಕ ಬಿಕ್ಕಟ್ಟು ಬಂದೊದಗಿದ್ದರೂ ೧೯೦೦ರಲ್ಲಿ ಅವರು ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೂ ಹಾಜರಾದರು. ಅಲ್ಲಿ ಅನೇಕ ಮಂದಿ ರಾಜಕೀಯ ಮುಖಂಡರ ಸಮೀಪ ಪರಿಚಯ ಮಾಡಿಕೊಂಡರು. ಚಿಂತಾಮಣಿಯವರು ಸಮಾಜ ಸುಧಾರಣೆಯ ಕಾರ್ಯದಲ್ಲಿ ಬಹಳ ಉತ್ಸುಕರಿದ್ದರು. ತನ್ನ ಆಚರಣೆಯಲ್ಲಿ ಅವುಗಳನ್ನು ತಂದು ಜನತೆಗೆ ತೋರಿಸುತ್ತಿದ್ದರು. 'ಭಾರತದ ಸಮಾಜ ಸುಧಾರಣೆಗಳು' ಎಂದು ಇತ್ತೀಚೆಗೆ ಅವರೊಂದು ಗ್ರಂಥವನ್ನೂ ಬರೆದಿರುವರು.

೧೯೦೩ರಲ್ಲಿ ಚಿಂತಾಮಣಿಯವರು ಡಿಲ್ಲಿಯಿಂದ ಅಲ್ಲಾಬಾದಿಗೆ ತೆರಳಿ, ಡಾ। ಸಚ್ಚಿದಾನಂದ ಸಿಂಹರೊಡನೆ 'ಇಂಡಿಯನ್ ಪೀಪಲ್' ಎಂಬ ಪತ್ರಿಕೆಯ ಕಾರ್ಯವನ್ನು ಕೈಕೊಂಡರು. ಮುಂದೆ ಈ ಪತ್ರಿಕೆಯು 'ಲೀಡರ್' ಪತ್ರಿಕೆಯೊಡನೆ ಸೇರಿಸಲ್ಪಟ್ಟಿತು; ಅಂದಿನಿಂದ ಚಿಂತಾಮಣಿಯವರೇ ಅದರ ಸಂಪಾದಕತ್ವ ವಹಿಸಿಕೊಂಡರು. ದಾದಾಭಾಯಿಯವರ ನಿರ್ದೇಶಕತ್ವದಿಂದ, ಪಿರೋಜಶಹ ಮೆಹರ ಕಾರ್ಯ ನೈಪುಣ್ಯದಿಂದ, ಗೋಖಲೆಯವರ ಧುರೀಣತೆಯಿಂದ, ಭಾರತವು ಮುನ್ನಡೆಯುತ್ತಿರುವಾ ಕಾಲ, ಚಿಂತಾಮಣಿಯವರು ಪತ್ರಿಕೋದ್ಯಮಿಯಾಗಿ ಮುಂದೆ ಬಂದು ಭಾರತದ ಉದ್ಧಾರಕ್ಕಾಗಿ ದುಡಿದರು.

ಚಿಂತಾಮಣಿಯವರ ಜ್ಞಾಪಕಶಕ್ತಿಯು ಎಲ್ಲರನ್ನೂ ಬೆರಗುಗೊಳಿಸುತ್ತಿತ್ತು. ವಿದ್ಯಾರ್ಥಿಯಾಗಿದ್ದಾಗ ಅವರು ತಮ್ಮ ಉಪಾಧ್ಯಾಯರನ್ನು ಆಶ್ಚರ್ಯಪಡಿಸುತ್ತಿದ್ದರು. ರಾಜಕೀಯ ಚರ್ಚೆಯಲ್ಲಿ ಅವರು ಇತರರನ್ನು ದಿಗ್ಭ್ರಮೆಗೊಳಿಸುತ್ತಿದ್ದರು. ಬಿಪಿನ ಚಂದ್ರಪಾಲರು, ಚಿಂತಾಮಣಿಯವರನ್ನು 'ರಾಜಕೀಯ ವಿಶ್ವಕೋಶ'ವೆಂದು ಕರೆಯುವುದಿತ್ತು.

ಜೀವನದಲ್ಲಿ ಜಯವಿರಲಿ, ಅಪಜಯವಿರಲಿ, ಸುಖವಿರಲಿ ದುಃಖವಿರಲಿ, ಅಭ್ಯುದಯವಿರಲಿ ಪತನವಿರಲಿ, ಇಂತಹ ಯಾವುದೇ ತರದ ಪರಿಸ್ಥಿತಿಗಳು ಅವರ ಉತ್ಸಾಹ ಕುತೂಹಲವನ್ನು ಕುಗ್ಗಿಸಿರಲಿಲ್ಲ. ಸ್ವತಂತ್ರ ವಿಚಾರಶಕ್ತಿಯ ಮೇಧಾವಿ ಪತ್ರಿಕೋದ್ಯಮಿಯಾಗಿದ್ದರವರು. ಯಾವುದೇ ಕೆಲಸದಲ್ಲಾಗಲಿ, ಸಾರ್ವಜನಿಕರಿಂದೆಂದಿಗೂ ಗುರಿಯಾಗುವ ಸಂದರ್ಭ ಬಂದರೆ ಚಿಂತಾಮಣಿಯವರು ಅದಕ್ಕಾಗಿ ಅಂಜುತ್ತಿರಲಿಲ್ಲ. ಅಗ್ಗದ ಯಶಸ್ಸಿಗೆ ಅವರು ಹಾತೊರೆದು ಕೆಲಸ ಮಾಡುತ್ತಿರಲಿಲ್ಲ. ಅಂತರಂಗದಲ್ಲಿ ಒಂದು, ಬಹಿರಂಗದಲ್ಲಿ ಇನ್ನೊಂದು, ಈ ತೆರದ ದ್ವಿಭಾಷೆ ಅವರಲ್ಲಿರಲಿಲ್ಲ. ಜನತೆಗಾಗಲಿ, ಸರಕಾರಕ್ಕಾಗಲಿ ಅವರದು ಖಂಡತುಂಡ ಮಾತಾಗಿತ್ತು. ಬೊಂಬಾಯಿಯ 'ಇಂಡಿಯನ್ ಡೈಲಿ ಮೆಲ್' ಪತ್ರಿಕೆಯ ಸಂಪಾದಕತ್ವಕ್ಕೆ ಅವರು ತತ್ವದ ಸಲುವಾಗಿ ರಾಜಿನಾಮೆಯಿತ್ತರು. ಪತ್ರಿಕೋದ್ಯಮಿಗಳಲ್ಲಿ ಅವರ ಸಾಲಿನವರು ಕೆಲವರಿರಬಹುದು; ಆದರೆ ಅವರಿಗಿಂತ ಮಿಕ್ಕಿನವರೆಂದು ಹೇಳಲು ಯಾರೂ ಸಿಗಲಾರರು. ಅವರು ಚುರುಕಿನ ಲೇಖಕರಿದ್ದರು.

ಅಲ್ಲಾಬಾದಿನಲ್ಲಿ, ೧೯೦೯ನೆಯ ಇಸವಿಯಲ್ಲಿ ಪಂಡಿತ ಮದನಮೋಹನ ಮಾಲವೀಯರ ಮುಂದಾಳುತನದಿಂದ 'ಲೀಡರ್' ಪತ್ರಿಕೆಯು ಪ್ರಾರಂಭಿಸಲ್ಪಟ್ಟಿತು. ಕಳೆದ ೩೦ ವರ್ಷಗಳಿಂದ ಅದರ ಸಂಪಾದಕರಾದ ಸರ್. ಚಿಂತಾಮಣಿಯವರು ಆ ಪತ್ರಿಕೆಯನ್ನು ಭಾರತದ ಅಗ್ರಪಂಕ್ತಿಯ ಪತ್ರಿಕೆಗಳಲ್ಲಿ ಒಂದನ್ನಾಗಿ ಮಾಡಿರುವರು. ತತ್ವಗಳಿಗಾಗಿ ಕಾದಾಡಬೇಕಾದ ಪ್ರಸಂಗಗಳು ಪತ್ರಿಕೋದ್ಯಮಿಗಳಿಗೆ ಆಗಾಗ ಬರುತ್ತವೆ. ಯಾವಾಗಲೂ ತತ್ವ ಜೀವನದಲ್ಲಿ ನಡೆಯುವ ಚಿಂತಾಮಣಿಯಂತಹ ಪತ್ರಿಕೋದ್ಯಮಿಗಳಿಗೆ ಅಂತಹ ಹೋರಾಟ ಕೊನೆಯವರೆಗೂ ತಪ್ಪಲಿಲ್ಲ.

[೧೩ನೆಯ ಪುಟವನು ನೋಡಿ]

ಸಿನೆಮಾ ಸುದ್ದಿ

ಪಡೋಶಿಯಲ್ಲಿ ಹಿಂದೂ-ಮುಸ್ಲಿಂ ಐಕ್ಯ

ಹಿಂದೂ ಮುಸ್ಲಿಂ ಐಕ್ಯ ಕಥೆಯುಳ್ಳ ಪ್ರಭಾತದವರ ಪಡೋಶಿ ಚಿತ್ರವು ಕಳೆದ ವಾರ ಪ್ರದರ್ಶಿತವಾಗಿದೆ. ಥಾಕುರ್ ಮತ್ತು ಮಿರ್ಜಾ ಎಂಬಿಬ್ಬರು ಹಿಂದೂ ಮುಸ್ಲಿಂ ಮಿತ್ರರು ನೆರೆಕರೆಯಲ್ಲಿ ಸುಖವಾಗಿ ಜೀವನಮಾಡುತ್ತಿರುವಾಗ ಅವರಿಗೆ ಬಂದೊದಗಿದ ವಿಪತ್ತು ಅಪತ್ತಿನ ಪರಿಣಾಮಗಳು ಇದರಲ್ಲಿ ಬಹಳ ಮನೋಹರವಾಗಿ ಚಿತ್ರಿತವಾಗಿದೆ.

ಕಾಂಚನ್

ರಣಜಿತ ಸ್ಟುಡಿಯೋದಲ್ಲಿ ಚಿತ್ರಪಿಕ್ಚರ್ಸಿನವರ ಕಾಂಚನ್ ಚಿತ್ರವು ತಯಾರಾಗುತ್ತಿದೆ. ಲೀಲಾ ಚಿಟ್ನಿಸಳು ಇದರಲ್ಲಿ ಅನುಪಮವಾಗಿ ನಟಿಸಿದ್ದಾಳೆ.

ದೇವತಾ

ವಂದೇ ಮಾತರಂ, ಸುಮಂಗಲಿ, ಚಿತ್ರಗಳಿಂದ ಪ್ರಖ್ಯಾತಿ ಪಡೆದ ವಾಹಿನಿ ಚಿತ್ರ ಕಂಪೆನಿಯವರು ಈಗ ತಿರುಗಿ 'ದೇವತಾ' ಎಂಬ ಅಪ್ರತಿಮ ಚಿತ್ರವೊಂದನ್ನು ತಯಾರಿಸಿರುವರು.

ನಾಸೀಮಳು ಸ್ವಂತ ಕಂಪೆನಿ ಮಾಡುತ್ತಾಳೆ

ತಾಜ್ ಮಹಾಲ್ ಪಿಕ್ಚರ್ಸ್ ಎಂಬ ಹೆಸರಿನಿಂದ ಸಿನೆಮಾ ಸುಂದರಿಯಾದ ನಾಸೀಮಳು ಸ್ವಕೀಯವಾದ ಕಂಪೆನಿಯೊಂದನ್ನು ಪ್ರಾರಂಭ ಮಾಡಿದ್ದಾಳೆಂದು ತಿಳಿದುಬಂದಿದೆ. ಮುಫೂನಿಯು ಪ್ರಚಾರ ಕಾರ್ಯಕರ್ತನಾಗಿಯೂ, ಕಮಲಾ ಅಪ್ರೋಹಿಯು ಕಥಾ ಲೇಖಕನಾಗಿಯೂ ಜತೆಯಲ್ಲಿ ಇರುವರು.

ಸುಭದ್ರಾ

ಕನ್ನಡ ಚಿತ್ರ ಸುಭದ್ರವು ಬೇಗನೇ ಮದ್ರಾಸಿನ ಸಾಗರ ಟಾಕೀಸಿನಲ್ಲಿ ಪ್ರದರ್ಶಿತವಾಗಲಿದೆ. ವಿದೂಷಕ ವೀರಣ್ಣನು ಬಹಳ ಉತ್ತಮ ನಟನೆ ಮಾಡಿರುವನೆಂದು ತಿಳಿದಿದೆ. ವೀರಣ್ಣ, ಜಯಮ್ಮ, ಹೊನ್ನಪ್ಪ ಭಾಗವತರ್ ಇವರು ಅಭಿನಯಿಸುವರು. ಜಯಮ್ಮ ಸುಭದ್ರಾ ಪಾತ್ರದಲ್ಲಿ ಅತ್ಯಾದರ್ಶವಾಗಿ ನಟಿಸಿರುವಳೆಂದು ಹೇಳಲಾಗಿದೆ.

ಜಾತೀಯ ಸೌಹಾರ್ದಕ್ಕಾಗಿ ಚಿತ್ರಗಳು

ಜಾತೀಯ ಸೌಹಾರ್ದಭಾವನೆಯನ್ನುಂಟುಮಾಡುವಂತಹ ಚಿತ್ರಗಳನ್ನು ತಯಾರಿಸಬೇಕೆಂದು ಪಂಜಾಬು ಸರಕಾರಕ್ಕೆ ಸೂಚನೆಗಳು ಬಂದಿವೆ. ಪಂಜಾಬು ಸರಕಾರಕ್ಕೆ ತೆರಕಕ್ಕ ತೆಂಗೆಯ ಹಣವನ್ನು ಇಂತಹ ಚಿತ್ರಗಳ ಮೇಲೆ ಹೊಂಸಬಾರದೆಂದೂ ಹಾಗಾದರೆ ಚಿತ್ರಗಳು ಹೆಚ್ಚು ಹೆಚ್ಚಾಗಿ ಪ್ರದರ್ಶಿತವಾಗುವುವೆಂಬೂ ಸೂಚನೆಯಿದೆ.

ಕೆ. ಡಿ. ನಂ. ೫

ಬಾಲಾಜಿ ಈಶ್ವರ ಪಿಲ್ಮ್ಸ್‌ನವರು ಕವಿಂಳಿನಲ್ಲಿ ಕೆ. ಡಿ. ನಂ. ೫ ಎಂಬ ಹಾಸ್ಯ ಚಿತ್ರವನ್ನು ರಚಿಸಿರುವರು. ಕಾಳಿ ಎನ್. ರತ್ನಂ ಇವರು ಇದರಲ್ಲಿ ಕೆ. ಡಿ. ನಂ. ೫ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರವು ಬಹಳ ಜನಪ್ರಿಯವಾಗಲಿದೆಯೆಂದು ತಿಳಿದಿದೆ.

ದಿ ಬೇಕರ್ಸ್ ವೈಫ್

ಗಾರ್ಬೋ ಪ್ರತಿಸ್ಪರ್ಧಿನಿ ವೇಗಾ ಆಸ್ಪ್ ಎಂಬ ಸ್ವೇಡಿಷ್ ಹುಡುಗಿಯು ಹೋಲಿವುಡಿನ ಸುದ್ದಿಯಂತೆ ದಿ ಬೇಕರ್ಸ್ ವೈಫ್ ಚಿತ್ರದಲ್ಲಿ ಅಭಿನಯಿಸುವಳೆಂದು ತಿಳಿದಿದೆ.

ಜಿಂಜರ್ ರೋಗರ್ಸ್

ಈ ನಟಿಯು ಹೊವರ್ಡ್ ಹ್ಯೂಗೆಸ ನೊಡನೆ ಮದುವೆಯಾಗುವಳೆಂದು ಆಕೆಯ ತಾಯಿಯೇ ಪ್ರಕಟಿಸಿದ್ದರೂ ಅವಳೇ ಸ್ವತಃ ಅದನ್ನು ಅಲ್ಲಗಳೆದಿರುವಳು

'ನತಿಂಗ್ ಬಟ್ ದ ಟ್ರುತ್'

ಬೋಬ್ ಹೋಪ್ ಮತ್ತು ಪಾಲೆಟ ಗೊಡ್ಡಾರ್ಡ್ ಇವರು ನತಿಂಗ್ ಬಟ್ ದ ಟ್ರುತ್ ಎಂಬೀ ಚಿತ್ರದಲ್ಲಿ ನಟಿಸುವರು.

ಭಾರತದ ಪತ್ರಿಕಾ ಸಂಪಾದಕರಲ್ಲಿ ಅಗ್ರಗಣ್ಯರು ಅಸ್ತಂಗತರಾದರು!

[೧೧ನೆಯ ಪುಟದಿಂದ ಮುಂದುವರಿದುದು]

ಅವರು ಉಚ್ಚ ವಾಗ್ಮಿಯೂ ಆಗಿದ್ದರು. ಸಂಭಾಷಣೆಯ ಕಾಲದಲ್ಲಿ ಚಿಂತಾಮಣಿಯವರು ಬಹಳ ವಿನೋದಪಟುಗಳಿದ್ದರೂ, ಭಾಷಣ ಕಾಲದಲ್ಲಿ ಅವರದು ಗಂಭೀರ ಪ್ರವೃತ್ತಿಯಾಗಿತ್ತು. ಚಿಂತಾಮಣಿಯವರು ಬಹಳ ನಿಷ್ಠುರ ವಿಮರ್ಶಕರಿದ್ದರು. ಗಾಂಧಿಜಿಯವರನ್ನು ಅವರ ನೈತಿಕ ಆತ್ಮಶಕ್ತಿಗಾಗಿ ಮೆಚ್ಚುತ್ತಿದ್ದರೂ, ಅವರ ಕೆಲವು ರಾಜಕೀಯ ತತ್ವಗಳನ್ನು ತೀವ್ರ ಖಂಡಿಸದೆ ಇರುತ್ತಿರಲಿಲ್ಲ. 'ಇಂಡಿಯನ್ ಪೊಲಿಟಿಕ್ಸ್ ಸಿನ್ಸ್ ಮ್ಯುಟಿನಿ' ಮತ್ತು 'ಇಂಡಿಯನ್ ಕಾನ್‌ಸ್ಟಿಟ್ಯೂಶನ್ ಎಟ್ ವರ್ಕ್' ಎಂಬ ಇತ್ತೀಚೆಯ ಅವರ ಗ್ರಂಥಗಳು ಬಹಳ ವಿಚಾರ ಪರಿಪೂರ್ಣವಿವೆ. ಚಿಂತಾಮಣಿಯವರು ಭಾರತಕ್ಕೆ ಮಾಡಿದ ಸೇವೆ ಗಣನೀಯವಿದೆ. ಭಾರತೀಯರು ಅದನ್ನು ಮರಿಯಲಾರದಷ್ಟಿದೆ. ಗಾಂಧಿಜಿ ಮಾಲವೀಯರೇ ಮೊದಲಾದ ಮುಖಂಡರೆಲ್ಲರೂ ಇಂದು ಅವರ ನಿಧನದ ಸಲುವಾಗಿ ಬಾಷ್ಪಾಂಜಲಿ ಸುರಿಸಿ ಆ ಮಹಾವ್ಯಕ್ತಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುತ್ತಿದ್ದಾರೆ.

—K. K. Rai.

ನಿಮಗೆ ಮಲಬದ್ಧತೆಯು ಬಾಧಿಸುತ್ತಿದ್ದರೆ ನೀವು ಆಡುವಾಗಲಾಗಲಿ, ವಿಶ್ರಾಂತಿಯಿಂದಿರುವಾಗಲಿ, ಸಂತೋಷದಿಂದಿರಲಾರಿರಿ. ಮಲಬದ್ಧತೆಯು ಆರೋಗ್ಯವನ್ನು ಕುಂದಿಸುತ್ತದೆ, ಮನಸ್ಸನ್ನು ಕಳವಳಗೊಳಿಸಿ ದೇಹಶಕ್ತಿಯನ್ನು ಕ್ಷೀಣಿಸುತ್ತದೆ. ಪ್ರತಿದಿನ ಒಂದು ಗ್ಲಾಸ್ ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು ನಿಮ್ಮ ದೇಹದ ಒಳಭಾಗವನ್ನು ತೊಳೆದುಬಿಡಿ. ಅದು ನಾಲಿಗೆ ಮತ್ತು ಬಾಯಿಗಳನ್ನು ಶುಚಿಗೊಳಿಸುತ್ತದೆ. ಹೊಟ್ಟೆಯೊಳಗೆ ಸೇರಿ, ಮಲಬಾಧೆಯನ್ನು ಸಂಪೂರ್ಣ ನಿವಾರಿಸುತ್ತದೆ, ಮಾತ್ರವಲ್ಲದೆ ದೇಹಕ್ಕೆ ತಂಪುಕೊಟ್ಟು ರಕ್ತವನ್ನು ಶುದ್ಧಿಗೊಳಿಸುವುದು ಮತ್ತು ಇಡೀ ಶರೀರದಲ್ಲಿ ಹೊಸ ಚೈತನ್ಯವನ್ನು ತರುತ್ತದೆ.

ಶರೀರದ ಒಳಭಾಗವು ನಿರ್ಮಲವಾಗಿರಬೇಕಾದರೆ ದಿನ ನಿತ್ಯವೂ ನೀವು ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿರಿ.

ANDREWS LIVER SALT



ಆರೋಗ್ಯಕರ ಪಾನೀಯ ಮತ್ತು ಟಾನಿಕ್ ಗುಣಕಾರಿ–ಶುದ್ಧಿ–ತಂಪು–ಆನಂದ–ಆರೋಗ್ಯಕರ ಗುಣವುಳ್ಳದ್ದು.

ಆ. 11

ದೊಡ್ಡ ಸೈಜು ರೂ. 1/4

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್, ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್‌ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ. 9% ರೂ. 26ರಿಂದ 100ರ ವರೆಗೆ ಸೇ. 8%

ರೂ. 101ರಿಂದ 500ರ ವರೆಗೆ ಸೇ. 7% ರೂ. 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) B. Narayana Shetty.

ಈ ವಾರದಲ್ಲಿ
ನಿಮ್ಮ ಗ್ರಹಗತಿ ಹೇಗಿದೆ?
11-7-41ರಿಂದ 17-7-41ರ ವರೆಗೆ

ಲೇಖಕ: ಕೆ. ನಾರಾಯಣ ನಂಬಿಯಾರ್, ಜ್ಯೋತಿಷಿ, ಕರ್ನಾಟಕ ಗ್ರಂಥಾಲಯ ಭವಂತಿಕೇರಿ.

ಮೇಷ

ನಿಮಗೆ ಉದ್ಯೋಗ ವ್ಯಾಪಾರಗಳ ವೃದ್ಧಿ, ಮಾನಸಿಕ ಸುಖ, ರಾಜಕೀಯ ಸಮ್ಮಂಧ ವ್ಯಯ, ಇಷ್ಟ ಮಿತ್ರ ಜನರ ಸಹವಾಸ, ಮತ್ತು ಮಂಗಳನು ನಿಮ್ಮ ದ್ವಾದಶದಲ್ಲಿರುವುದರಿಂದ ಅಧಿಕ ಧನ ವ್ಯಯ, ವಾರಾಂತ್ಯದಲ್ಲಿ ಕಾರ್ಯಾದಿಗಳಲ್ಲಿ ಅಲ್ಪಸ್ವಲ್ಪ ತೊಂದರೆ, ಕುಟುಂಬ ಸಹೋದರಾದಿಗಳಲ್ಲಿ ಕ್ಲೇಶ. ತಾ. ೧೧, ೧೨ ಉತ್ತಮವಾಗಿ ದ್ರವ್ಯಪ್ರಾಪ್ತಿ, ಮನಃಸಂತೋಷಾದಿ ಫಲ. ತಾ. ೧೫, ೧೬ ಹೆಚ್ಚಿನ ನಷ್ಟ ಕಷ್ಟಗಳ ಫಲವಿದೆ.

ವೃಷಭ

ಈ ರಾಶಿಯವರಿಗೆ ಏಕಾದಶದಲ್ಲಿ ಮಂಗಳನು, ದ್ವಿತೀಯ ತೃತೀಯ ಭಾವದಲ್ಲಿ ಬುಧ ಮತ್ತು ಶುಕ್ರನು ಇರುವುದರಿಂದ ನೀವು ಆಲೋಚನೆಮಾಡಿದ ಕಾರ್ಯವೂ ಸ್ಥಾನಾಂತರದಿಂದ ಬಹುಮಾನವೂ, ವಸ್ತ್ರಾಡಂಬರಾದಿ ಸುಖವೂ, ಗೃಹ ಕುಟುಂಬಾದಿ ಸುಖಸಂತೋಷ ಪ್ರಾಪ್ತಿಯೂ, ಮತ್ತು ನಿಮ್ಮ ಪಂಚಮದಲ್ಲಿಯೂ ಜನ್ಮದಲ್ಲಿಯೂ ರಾಹು ಶನಿಗಳು ಇರುವುದರಿಂದ ಸ್ವಲ್ಪ ವಾತ, ವಾಯು ವಿಕಾರದಿಂದ ಪೀಡೆ, ಮಾನಸಿಕ ವಿಷಯದಲ್ಲಿ ಚಿಂತೆಗಳು ಆಗುವುದು. ತಾ. ೧೨, ೧೩, ೧೪ ಹೆಚ್ಚಿನ ಲಾಭಕರವಾಗುವುದು.

ಮಿಥುನ

ಈ ರಾಶಿಯವರಿಗೆ ಈ ವಾರದಲ್ಲಿ ಭಯ, ಉದರಪೀಡೆ, ಉದ್ಯೋಗ, ವ್ಯಾಪಾರ ಸಂಬಂಧ ಚಿಂತೆ, ಗುರು ದೇವತಾಸಂಬಂಧ, ವಿಘ್ನ, ಮತ್ತು ಕ್ಲೇಶ, ಧನ ವಿಷಯದಲ್ಲಿ ಹೆಚ್ಚಿನ ತೊಂದರೆ, ಬಂಧು ಮಿತ್ರ ಜನರ ಮನಸ್ತಾಪ, ನಿಮ್ಮ ಆಲೋಚನೆ ದೋಷದಿಂದ ನಿಮಗೆ ಉತ್ತಮ ಜನರ ದ್ವೇಷವೂ ಉಂಟಾದೀತು, ಮತ್ತು ದ್ವಿತೀಯದಲ್ಲಿ ಶುಕ್ರನಿರುವ ಕಾರಣ ವಾರಾಂತ್ಯದಲ್ಲಿ ಅಲ್ಪಸ್ವಲ್ಪ ಧನಲಾಭವೂ, ಕುಟುಂಬ ಜನರ ಸುಖವೂ ಉಂಟಾದೀತು. ತಾ. ೧೫, ೧೬, ೧೭ ಈ ದಿವಸಗಳು ಹೆಚ್ಚಿನ ಧನಲಾಭ, ಮನಃಸಂತೋಷಕ್ಕೆ ಯೋಗ್ಯವಾದವುಗಳು.

ಕರ್ಕಾಟಕ

ನಿಮಗೆ ಈ ವಾರದಲ್ಲಿ ಅನ್ನಪಾನಾದಿ ಸುಖವೂ, ಸ್ತ್ರೀಸುಖ, ಸುಗಂಧ ಆಡಂಬರಾದಿ ವಸ್ತುಗಳಿಂದ ಸುಖ, ಮನಃಸಂತೋಷ ಮತ್ತು ನಿಮ್ಮ ದ್ವಾದಶದಲ್ಲಿ ಸೂರ್ಯನು ಭಾಗ್ಯದಲ್ಲಿ ಮಂಗಳನೂ ಇರುವುದರಿಂದ ಧನಭಾಗ್ಯದಲ್ಲಿ ಹೆಚ್ಚಿನ ತೊಂದರೆ, ನೀವು ಸ್ನೇಹಪಡೆಯುವವರಿಂದ ನಿಮಗೆ ಹಾನಿ, ಕಾರ್ಯಾದಿಗಳಲ್ಲಿ ಚಿಂತೆ, ಉತ್ತಮ ಜನರಿಂದ ತೊಂದರೆಯೂ ಉಂಟಾದೀತು. ತಾ. ೧೩, ೧೪, ೧೫ ಈ ದಿವಸಗಳಲ್ಲಿ ಹೆಚ್ಚಿನ ಮನಃಶ್ಚಾಂಚಲ್ಯ, ಧನಹಾನಿ, ಕಾರ್ಯಹಾನಿಯೂ ಉಂಟಾದೀತು.

ಸಿಂಹ

ನಿಮಗೆ ಈ ವಾರದಲ್ಲಿ ನಿಮ್ಮ ಕೆಲಸ ಮತ್ತು ಮಾತು ಇವುಗಳಿಂದ ಜಯವೂ, ಧನಲಾಭವೂ, ದೇಹಸುಖ, ಮನಃಸಂತೋಷ, ಭಾರ್ಯಾ ಪುತ್ರಾದಿ ಸುಖಸಂತೋಷ, ಬಂಧು ಜನ ಪ್ರೀತಿ, ಉತ್ತಮ ಜನ ಸಹಾಯ ಮತ್ತು ವಾರಾಂತ್ಯದಲ್ಲಿ ವೈರಿಗಳಕಾಟ, ಧನ ವಿಷಯದಲ್ಲಿ ಹೆಚ್ಚಿನ ವ್ಯಯ, ಕರ್ಮದಲ್ಲಿ ಉದಾಸೀನತೆಯೂ ಉಂಟಾಗುವವು. ತಾ. ೧೧, ೧೨, ೧೩ ಈ ದಿನಗಳಲ್ಲಿ ಉತ್ತಮ ಫಲ ದೊರಕೀತು.

ಕನ್ಯಾ

ಈ ರಾಶಿಯವರಿಗೆ ಈ ವಾರದಲ್ಲಿ ಹೆಚ್ಚಿನ ಶ್ರಮಪಡೆಯುವುದರಿಂದ ಧನಲಾಭ, ಶತ್ರುಜಯ, ಬಂಧು ಮಿತ್ರಾದಿ ಜನಸಂತೋಷ, ಬಹುಮಾನ, ಅಶನಶಯನಾದಿ ಸುಖ ಸಂತೋಷ ಪ್ರಾಪ್ತಿ, ಗೃಹೋಪಕರಣ ವಸ್ತುಗಳ ಲಾಭ, ಕಾರ್ಯಾದಿಗಳಲ್ಲಿ ಹೆಚ್ಚಿನ ಲಾಭವೂ, ಜಯವೂ ಆದೀತು. ಮತ್ತು ನಿಮ್ಮ ಸಪ್ತಮ ಭಾವದಲ್ಲಿ ಅಂಗಾರಕನು ಕೇತುವು ಇರುವ ಕಾರಣ ಮಾರ್ಗಕ್ಲೇಶ, ಸ್ತ್ರೀ ವಿಷಯಾದಿಗಳಲ್ಲಿ ಸ್ವಲ್ಪ ತೊಂದರೆಯೂ ಉಂಟಾದೀತು. ತಾ. ೧೩, ೧೪, ೧೫ ಹೆಚ್ಚಿನ ಧನಲಾಭ, ಕಾರ್ಯ ಜಯಾದಿ ಉತ್ತಮ ಫಲವಾಗುವುದು.

ತುಲಾ

ಈ ವಾರದಲ್ಲಿ ದೇಹಾಲಸ್ಯ, ಕಾರ್ಯಾದಿಗಳಲ್ಲಿ ಉದಾಸೀನತೆ, ಮಾನಸಿಕಚಿಂತೆ, ಭಯ, ವಿಚಾರ ಕಾರ್ಯ ಭಂಗ, ಕುಟುಂಬದ ಸುಖಾದಿಗಳಲ್ಲಿ ಮಾಂದ್ಯ, ಕೆಲಸ ವಿಷಯದಲ್ಲಿ ತೊಂದರೆ, ಮತ್ತು ನಿಮ್ಮ ಷಷ್ಠಭಾವದಲ್ಲಿ ಅಂಗಾರಕನಿರುವುದರಿಂದ ಹೆಚ್ಚಿನ ಪ್ರಾಂತ್ಯದಲ್ಲಿ ಅಲ್ಪ ಸ್ವಲ್ಪ ಲಾಭವೂ, ಮನಃಸಂತೋಷವೂ ಉಂಟಾಗುವುದು. ತಾ. ೧೫, ೧೬, ೧೭ ಈ ಮೂರು ದಿವಸಗಳಲ್ಲಿ ಹೆಚ್ಚಿನ ಲಾಭವೂ ಸುಖವೂ ದೊರಕುವವು.

ವೃಶ್ಚಿಕ

ನಿಮಗೆ ಈ ವಾರದಲ್ಲಿ ಶೀತೋಷ್ಣ ವಿಕಾರದಿಂದ ದೇಹಾಯಾಸ ರಾಜಕಾರ್ಯಾದಿಗಳಲ್ಲಿ ತೊಂದರೆ, ಪುತ್ರ ಮಿತ್ರಾದಿಗಳಲ್ಲಿ ಶೋಕ, ದುದ್ದಿನ ವಿಷಯದಲ್ಲಿ ...

ಗಾಯಗಳಲ್ಲಿರುವ ಹೊಲಸು
ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯೂ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ತಾಗಿಸದಿದ್ದರೆ ಭಯಂಕರವಾದ ಹಾನಿಯು ದೊರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ತಾಗಿಸಿದ ಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಸಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮುದ್ವಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಅಲ್ಪ ಸ್ವಲ್ಪ ಲಾಭವೂ, ಕಾರ್ಯ ಜಯವೂ, ಅಲ್ಲದೆ ನೀವು ವಿಚಾರಮಾಡಿದ ಕೆಲಸದಲ್ಲಿ ಜಯವೂ ಒದಗುವವು. ಉದ್ಯೋಗ ವಿಷಯದಲ್ಲಿ ಸ್ವಲ್ಪ ತೊಂದರೆಯೂ ಉಂಟಾಗುವುದು. ತಾ. ೧೧ಕ್ಕೆ ಹೆಚ್ಚಿನ ಲಾಭ, ಜಯಾದಿ ಉತ್ತಮ ಫಲವಾಗುವುದು.

ಧನು

ಈ ರಾಶಿಯವರಿಗೆ ಈ ವಾರದಲ್ಲಿ ಉದ್ಯೋಗಾದಿಗಳಲ್ಲಿ ಅಲ್ಪಸ್ವಲ್ಪ ತೊಂದರೆ, ಗುರುಜನಾದಿ ಕ್ಲೇಶ, ಇಷ್ಟ ಮಿತ್ರ ಜನರಲ್ಲಿ ಕಲಹ; ಧನಭಾಗ್ಯ ವಿಷಯ ಚಿಂತೆ, ಸಮೀಪದ ಜನರಿಂದ ಬರುವ ಕ್ಲೇಶ, ಆಯಾಸ, ಗೃಹ ಕುಟುಂಬ ವಿಷಯದಲ್ಲಿ ಮಾನಸಿಕ ಚಿಂತೆ, ವೈರಿಗಳಿಂದ ಉಂಟಾಗುವ ಕೊರತೆ, ತಾ. ೧೪, ೧೫, ೧೬ ಹೆಚ್ಚಿನ ನಷ್ಟ ಕಷ್ಟ, ಭಯ ಮುಂತಾದವುಗಳು ಉಂಟಾಗುವುವು.

ಮಕರ

ನಿಮಗೆ ಈ ವಾರದಲ್ಲಿ ಕಾರ್ಯಾದಿಗಳಲ್ಲಿ ಸಂತೋಷ, ರಾಜಜನ ಪ್ರೀತಿ, ಸ್ಥಾನಮಾನಾದಿ ಪ್ರಾಪ್ತಿ, ಮಾನಸಿಕ ವಿಷಯ ಸುಖ, ಉದ್ಯೋಗವಗೈರೆಗಳಿಂದ ಹೆಚ್ಚಿನ ಧನಪ್ರಾಪ್ತಿ, ವಿಚಾರ ಕಾರ್ಯಾದಿಗಳಲ್ಲಿ ಧನಸಿದ್ಧಿಯೂ ಉಂಟಾಗುವುದು. ಸ್ತ್ರೀ, ವಸ್ತ್ರ ಸುಖಾದಿಗಳಿಂದ ಮನಃ ಸಂತೋಷವೂ ಉಂಟಾಗುವುದು. ಮತ್ತೂ ನಿಮ್ಮ ಭಾಗ್ಯ ಸ್ಥಾನದಲ್ಲಿ ಇರುವ ಕಾರಣ ಭಾಗ್ಯವಿಷಯ ಚಿಂತೆಯಲ್ಲಿ ಅಲ್ಪ ಸ್ವಲ್ಪ ತೊಂದರೆಯೂ ಆಗುವುದು. ತಾ. ೧೫, ೧೬, ೧೭, ಮಹತ್ತರವಾದ ಸುಖಸಂತೋಷ ಲಾಭವೂ ಉಂಟಾದೀತು.

ಕುಂಭ

ನಿಮಗೆ ಈ ವಾರದಲ್ಲಿ ನೆನೆಸಿದ ಆಲೋಚನೆಯಲ್ಲಿ ವಿಘ್ನ, ಉದ್ಯೋಗ ವಗೈರೆಗಳಲ್ಲಿ ತೊಂದರೆ, ಧನ ನಷ್ಟ, ಕಲಹ, ಭಾರ್ಯಾ ಪುತ್ರಾದಿಗಳಲ್ಲಿ ಮಾನಸಿಕ ಚಿಂತೆ, ಬಂಧು ಮಿತ್ರರಿಂದ ಆಗುವ ಕೆಲಸದಲ್ಲಿ ಅಪಜಯ, ಚೋರರಿಪುಗಳಿಂದ ಅಲ್ಪ ಸ್ವಲ್ಪ ತೊಂದರೆಯೂ ಉಂಟಾದೀತು. ತಾ. ೧೩, ೧೪ ಹೆಚ್ಚಿನ ಸುಖ, ಲಾಭ ವಿಷಯದಲ್ಲಿ ಜಯ ಆಗುವುದು. ತಾ. ೧೫, ೧೬, ೧೭ ಈ ದಿವಸಗಳು ಹೆಚ್ಚಿನ ನಷ್ಟ ಕಷ್ಟಾದಿಗಳಿಗೆ ಕಾರಣವಾದೀತು.

ಮೀನ

ನಿಮಗೆ ಈ ವಾರದಲ್ಲಿ ಕಾರ್ಯಾದಿಗಳಲ್ಲಿ ಜಯ, ಧನಲಾಭ, ಮಾನಸಿಕ ಸುಖ, ಗೃಹ ಕುಟುಂಬಾದಿಗಳಲ್ಲಿ ಮನಃಸಂತೋಷ, ಮತ್ತು ನಿಮ್ಮ ಜನ್ಮ ಸಪ್ತಮ ರಾಶಿಗಳಲ್ಲಿ ಪಾಪಗ್ರಹಗಳಿರುವುದರಿಂದ ನಿವೃತ್ತಿ ಕಾರ್ಯಾದಿಗಳಿಗೆ ಭಂಗ, ಪ್ರವಾಸಾದಿಗಳಿಂದ ತೊಂದರೆ, ವೈರಿಗಳ ಕಾಟ, ಕಳತ್ರ ವಿಷಯದಲ್ಲಿ ಸುಖ ಹೀನತೆ, ದೇಹಾಯಾಸಾದಿ ಫಲ ಉಂಟಾದೀತು. ತಾ. ೧೫, ೧೬ ಹೆಚ್ಚಿನ ...

ವಿಚಿತ್ರ ಪ್ರಪಂಚ

ನಾಲ್ಕು ಕೈಗಳ ಹೆಂಗಸು

—ಅಮೆರಿಕದಲ್ಲಿ ಒಂದು ಎಡಗೈ ಮತ್ತು ಮೂರು ಬಲಗೈಗಳಿರುವ ಒಬ್ಬ ಹೆಂಗಸು ಇದ್ದಾಳೆ. ಅವಳ ಒಂದು ಕೈಗೆ ಆರು ಬೆರಳುಗಳೂ ಇವೆ. ಅವಳು ತನ್ನನ್ನು ಪ್ರದರ್ಶನಕ್ಕಿಟ್ಟು ಹಣ ಸಂಪಾದಿಸಲಿಕ್ಕೆ ಇಚ್ಛಿಸಿಲ್ಲ. ಹಾಗೆ ಇಚ್ಛಿಸಿದ್ದರೆ ಲಕ್ಷಾಂತರ ರೂಪಾಯಿಗಳನ್ನು ಶೇಖರಿಸುತಿದ್ದಳು. ಈಗ ಅವಳು ಟೆಲಿಫೋನ ಕಂಪೆನಿಯಲ್ಲಿ ಒಂದು ನೌಕರಿ ಮಾಡುತಿದ್ದಾಳೆ. ನಾಲ್ಕು ಕೈಗಳಿರುವುದರಿಂದ ತನ್ನ ನೌಕರಿಯ ಕೆಲಸವನ್ನು ಸಾಗಿಸಲಿಕ್ಕೆ ಯಾವ ತೊಂದರೆಯೂ ಆಗುತಿಲ್ಲವೆಂದು ಅವಳೆನ್ನುತ್ತಿರುವಳು. ಅವಳು ಈ ತನಕ ಡಾಕ್ಟರರ ಮುಖ ಸಹ ನೋಡಿಲ್ಲವಂತೆ!

೩೦ ಹುಡುಗಿಯರನ್ನು ಮದುವೆಯಾದಳು!

ದಕ್ಷಿಣ ಆಫ್ರಿಕದ ಸರ್ವತಂತ್ರ ಸ್ವತಂತ್ರಳೆನ್ನಿಸಿಕೊಂಡಿರುವ ಮೋಜಜೇಜೀ ಮಹಾರಾಣಿಗೆ ೩೦ ಮಂದಿ ಹೆಂಡಂದಿರಿದ್ದಾರೆ. ಬಾಲಬೋದು ಎಂಬ ಒಂದು ನೀಗ್ರೋ ಜಾತಿಗೆ ಅವಳು ಒಡತಿ ಆಗಿರುವಳು. ಟ್ರಾನ್ಸವಾಲಿನಲ್ಲಿ ಈ ಜಾತಿ ನೆಲಸಿದೆ. ಈ ೩೦ ಮಂದಿ ಹೆಮ್ಮಕ್ಕಳು ಅವಳ ಕಾಯದೆ ಪ್ರಕಾರದ ಹೆಂಡಂದಿರಾಗಿರುವರು. ಅವಳ ಸೇವೆ ಶುಶ್ರೂಷೆ, ನೌಕರಿ ಚಾಕರಿಗಳನ್ನು ಈ ಹೆಂಡಂದಿರೇ ಮಾಡಬೇಕು. ಆದರೆ ಒಬ್ಬನು ಅವಳ ಗಂಡನಾಗಿಯೂ ಇರುವನು ಅವನು ಯಾರು, ಎಲ್ಲಿಯವ ಎಂಬ ಸಂಗತಿಗಳು ಮಾತ್ರ ಈ ಮಹಾರಾಣಿಗಲ್ಲದೆ ಬೇರೆ ಯಾರಿಗೂ ತಿಳಿದಿರುವುದಿಲ್ಲ—ತಿಳಿಯಕೂಡದು. ಯಾರಾದರೂ ಅದನ್ನು ತಿಳಿಯಹೋದರೆ ಪ್ರಾಣದಂಡವೇ ಆಗಬಹುದು ಆದರೆ ಅವನು ಕಾಯದೆ ಪ್ರಕಾರದ ಗಂಡನಲ್ಲವಾದುದರಿಂದ ಅವನಿಗೆ ಅವಳ ಸಿಂಹಾಸನದ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ. ಅದೇ ಪ್ರಕಾರ ರಾಣಿಯ ಆ ೩೦ ಮಂದಿ ಹೆಂಡಂದಿರ ಗಂಡಂದಿರು ಯಾರೆಂಬ ವಿಷಯವೂ ಗೋಪ್ಯವಾಗಿ ಇರುತ್ತದೆ. ರಾಣಿಗೆ ಈ ಹೆಂಡಂದಿರು ಯಾಕೆಂದರೆ—ಅವಳು ಹೆಣ್ಣು ಮಕ್ಕಳಾಗದೆ ಸತ್ತರೆ ಆ ಹೆಂಡಂದಿರಿಗೆ ಹುಟ್ಟಿದ ಹೆಣ್ಣು ಮಕ್ಕಳಲ್ಲಿ ಹಿರಿಯಳಾದವಳು ರಾಜ್ಯದ ಅಧಿಕಾರಿಣಿ ಆಗುವಳು.

ಚೀನದ ಆಚಾರಗಳು

ಚೀನದಲ್ಲಿ ಕೆಲವು ವಿಚಿತ್ರ ಸಂಪ್ರದಾಯಗಳಿವೆ. ಅಲ್ಲಿ ಅಭ್ಯಾಗತನು ಕೂತುಕೊಂಡ ಹೊರತು ಗೃಹಸ್ಥರು ಕೂತುಕೊಳ್ಳಬಾರದು ಒಬ್ಬ ತಂದೆಯು ತನ್ನ ಹೆಂಡತಿಯನ್ನು ಮಗನ ತಾಯಿಯೆಂದು ಸಂಬೋಧಿಸಬೇಕು. ಅವನು ಪ್ರಕಟವಾಗಿ ಅವಳೊಂದಿಗೆ ತಿರುಗಾಡಬಾರದು. ಒಬ್ಬ ಚೀನಿಯನಿಂದ ನಿಮಗೆ ಹಣ ಬರಬೇಕಾಗಿದ್ದರೆ, ಅದನ್ನು ನೀವು ಎಲ್ಲರ ಮುಂದೆ ಕೇಳಬಾರದು. ಆದರ ಬದಲಿಗೆ ನಿಮಗೆ ಬರಬೇಕಾಗಿದ್ದಷ್ಟೇ ಹಣವನ್ನು ಅವನಿಂದ ಸಹಾಯ ಕೇಳಬೇಕು ಆಗ ನೀವು ಸಾಲದ ಹಣ ಕೇಳುತಿದ್ದೀರೆಂದು ಅವನಿಗೆ ಗೊತ್ತಾಗುತ್ತದೆ. ಚೀನಿಯನು ನಿಮಗೆ ಸಲಾಮು ಮಾಡಲಿಕ್ಕಾಗಿ ತಲೆಯ ಹೇಟನ್ನು ತೆಗೆಯುವುದಿಲ್ಲ, ನಿಮಗೆ ಹಸ್ತಲಾಘವವನ್ನು ಕೊಡುವುದೂ ಇಲ್ಲ. ಬದಲಿಗೆ ಅವನು ತನ್ನ ಕೈಗಳನ್ನೇ ಕುಲುಕಿಸಿಕೊಳ್ಳುತ್ತಾನೆ. ಅಭ್ಯಾಗತನು ಸ್ವತಃ ತನ್ನ ಕೈಗಳಿಂದಲೇ ನಿಮಗೆ ಕುಡಿಯಲಿಕ್ಕೆ ಚಾ ಕೊಟ್ಟನಾದರೆ ನಿಮಗೂ ಅವನಿಗೂ ಬಹಳ ಪರಿಚಯವಾಗಿದೆ ಎಂದು ಅರ್ಥವಾಗುವುದು ಅಂಥ ಪರಿಚಯವಾಗುವ ತನಕ ಮನೆಯ ನೌಕರನು ನಿಮಗೆ ಟೀ ಕೊಡುವನು ಪರಂತು ನೌಕರನು ಟೀ ಕೊಡುತ್ತಿರುವಷ್ಟು ಕಾಲ ನೀವು ಅದನ್ನು ಕುಡಿಯಬಾರದು. ನಿಮ್ಮ ಕೆಲಸವಾಗಿ ಮರಳುವಾಗ ನೀವು ನಿಮ್ಮ ಅಭ್ಯಾಗತನನ್ನು ಚಾ ಕುಡಿಯಲಿಕ್ಕೆ

ವಿಜ್ಞಾನಯುಗ

ದಂಟುಗಳಿಂದಲೂ ಕಾಗದ

ಹುಲ್ಲುಗಳಿಂದ ಕಾಗದ ಮಾಡುವುದು ನಮಗೆ ಗೊತ್ತಾಗಿದೆ. ಬ್ರಿಟನಿನಲ್ಲಿ ಈ ವರ್ಷ ೨೫೦೦೦೦ ಟನ್ ಹುಲ್ಲಿನಿಂದ ಕಾಗದವನ್ನೇ ತಯಾರಿಸುವ ಆಲೋಚನೆಯಾಗಿದೆ. ಯುದ್ಧಕಾಲವಾದುದರಿಂದ ಈಗ ಮರದ ತೊಗಟೆಯನ್ನೂ ಬೆಂಡನ್ನೂ ಕಾಗದ ತಯಾರಿಗೆ ಉಪಯೋಗಿಸುವಂತಿಲ್ಲ. ಆದುದರಿಂದ ಹುಲ್ಲಿನಿಂದ ಕಾಗದ ತಯಾರಿಸುವುದು ಅನಿವಾರ್ಯವಾಗಿರುವುದು. ಆದರೆ ಬ್ರಿಟನಿನ ವಿಜ್ಞಾನಿಗಳು ಇಷ್ಟರಿಂದಲೇ ತೃಪ್ತರಾಗಿರುವುದಿಲ್ಲ. ಅವರು ಈ ತನಕ ಕಾಗದ ತಯಾರಿಗ ಬಾರದ ಹುಲ್ಲಿನ ದಂಟುಗಳನ್ನೂ ಆ ಕೆಲಸಕ್ಕೆ ಉಪಯೋಗಿಸಬಹುದೇ ಎಂದು ಪರೀಕ್ಷಿಸಿದ್ದಾರೆ ಈ ದಂಟುಗಳಿಂದಲೂ ದಪ್ಪ ಜಾತಿಯ ಕಾಗದವನ್ನು ಮಾಡಬಹುದೆಂದು ಅವರು ಹೇಳಿರುವರು ಹೀಗಾಗಿ ಬ್ರಿಟನು ಈಗ ವರ್ಷಕ್ಕೆ ೮೦೦೦೦ ಟನ್ನುಗಳಷ್ಟು ಮರದ ತೊಗಟೆ ಮತ್ತು ಬೆಂಡನ್ನು ಬೇರೆ ಉಪಯುಕ್ತ ಕಾರ್ಯಗಳಿಗೆ ಉಪಯೋಗಿಸಬಹುದಾಗಿರುವುದು.

ಸೋಯಾ ಕಾಳುಗಳ ಉಪಯೋಗ

ಸೋಯಾ ಕಾಳುಗಳು ಶರೀರ ಬೆಳವಣಿಗೆಗೆ ಉತ್ತಮ ಆಹಾರ ಪದಾರ್ಥಗಳಾಗಿವೆ ಎಂದು ಬಹಳ ಪ್ರಸಿದ್ಧವಿದೆಯಷ್ಟೆ! ಈಗ ಈ ಕಾಳುಗಳನ್ನು ಕೈಗಾರಿಕೆಗಳಲ್ಲಿಯೂ ಉಪಯೋಗಕ್ಕೆ

ನಿಮ್ಮ ಮನೆಗೆ ಆಮಂತ್ರಿಸಬೇಕು ಆದರ ಬದಲಿಗೆ ಅಭ್ಯಾಗತನೇ ನಿಮಗೆ ಚಾ ಕುಡಿಯಲಿಕ್ಕೆ ಹೇಳುವನಾದರೆ ನೀವು ಆತನ ಮನೆ ಬಿಟ್ಟು ಹೊರಹೋಗಬೇಕೆಂದು ಅರ್ಥವಾಗುವುದು.

ತರಲಾರಂಭಿಸಿರುವರು. ಟಂಗಯನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸುತ್ತಿದ್ದರೋ, ಅವೇ ಕೆಲಸಗಳಿಗೆ ಸೋಯಾ ಎಣ್ಣೆಯನ್ನೂ ಉಪಯೋಗಿಸಬಹುದೆಂದು ವಿಜ್ಞಾನಿಗಳು ಹೇಳಿದ್ದಾರೆ ಹೀಗಾದ್ದರಿಂದ ಅವೆಕಕ್ಕೆ ಚೀನದಿಂದಾಗುತ್ತಿದ್ದ ಟಂಗಎಣ್ಣೆ ರಫ್ತು ಸಂಪೂರ್ಣ ನಿಂತುಹೋಗ ಹಾಗಾಗಿದೆ ಇಲಿನೊಯ ಪ್ರಯೋಗಶಾಲೆಯ ಅಧಿಕಾರಿಗಳು ಸೋಯಾ ಕಾಳುಗಳಿಂದ ಇನ್ನೂ ಅನೇಕ ಪ್ರಯೋಜನಗಳನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿರುವರು.

ಶುದ್ಧ ನೀರಿನ ಉಪಯೋಗ

ಪ್ರಾಚೀನ ರೋಮಿನ ಒಬ್ಬ ಪ್ರತಿನಿತ್ಯ ೫ ಮಣ ನೀರು ಉಪಯೋಗಿಸುತಿದ್ದನು ಆದರೆ ಮಧ್ಯಕಾಲದ ಜನರು ಎಷ್ಟು ಕೊಳಕರಾಗಿದ್ದರೆಂದರೆ ಆಗ ಪ್ಯಾರಿಸಿನ ಜನರು ದಿನಕ್ಕೆ ಒಂದು ಸೇರಿನಷ್ಟು ನೀರು ಉಪಯೋಗಿಸುತ್ತಿದ್ದರು ಈಗಲೂ ಇಟಲಿ, ಪೂರ್ವ ಯುರೋಪು, ಮತ್ತು ಏಶಿಯದ ಅನೇಕ ದೇಶಗಳಲ್ಲಿ ಬಹಳ ಕಡಿಮೆ ನೀರಿನ ಉಪಯೋಗವಾಗುತ್ತಿದೆ. ಭಾರತದ ಜನ ಎಲ್ಲರಿಗಿಂತ ಹೆಚ್ಚು ನೀರು ಅಂದರೆ ದಿನಕ್ಕೆ ೫ ಮಣದಷ್ಟು ಸರಾಸರಿ ಉಪಯೋಗಿಸುತ್ತಿರುವರು. ಆದರೆ ಇವರು ಉಪಯೋಗಿಸುವ ಹೆಚ್ಚಿನ ಅಂಶವು ಕೊಳಕಾಗಿದೆ ಮನುಷ್ಯನ ಆರೋಗ್ಯವು ಅವನು ಉಪಯೋಗಿಸುತ್ತಿರುವ ಶುದ್ಧ ನೀರಿನ ಪರಿಮಾಣವನ್ನು ಅವಲಂಬಿಸಿದೆ ಹೀಗೆ ಭಾರತ ವಾಸಿಯು ಉಪಯೋಗಿಸುವ ಶುದ್ಧ ನೀರು ದಿನಕ್ಕೆ ಒಂದು ಸೇರು ಆಗುವುದಿಲ್ಲ. ಆದರೆ, ಲಂಡನಿನಿವಾಸಿಯು ದಿನಕ್ಕೆ ಸರಾಸರಿ ೪ ಮಣ ಶುದ್ಧ ನೀರನ್ನು ಉಪಯೋಗಿಸುತ್ತಾನೆ ಅಮೆರಿಕದ ನದೀ ದಂಡೆಗಳ ಮೇಲಿರುವವರು ದಿನಕ್ಕೆ ೪೦ ಮಣಗಳಷ್ಟು ಶುದ್ಧ ನೀರನ್ನು ಉಪಯೋಗಿಸುತ್ತಾರೆ.

BHUVANENDRA PRODUCTS LTD.,

Head Office and Factory:
KATAPADI S Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value
Genuine in quality and choiced by all.
Antiseptic, astringent, aromatic. Useful in Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕಸ್ತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಪಿ. ಸಿ. ಬಿ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-

ದಿ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Stockists —

Messrs. Dadha & Co., MADRAS.

THE PIE-MONEY BANK, LTD

Maidan Road MANGALORE

Undertakes all kinds of Banking Business Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public.

Apply for particulars—

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE ESTD 1901

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
1	4 per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3 %

All kinds of banking business transacted

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

ಒಂದು ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 3-0-0   ಅಂಚೆ ವೆಚ್ಚ ಸೇರಿ ರೂ. 3-12-0   Regd. No. M. 3

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 11-7-1941   [ಸಂಚಿಕೆ

The Bombay Life Assurance Company, Ltd.

(ESTABLISHED 1908)

Death! { **is not a matter of supposition** / **is a matter of Certainty**

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT—

Puthiyara Calicut	Car Street, Mangalore	Central Station Road, Trivandrum.
Gautam Nivas Churni Road Bombay No 4	Post Box No 337 Mount Road, Madras	Visvesvarapuram Circle Bangalore City

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street. Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ನೆರೆಮನೆಯಲ್ಲಿ

ಡಾ। ವಿಟ್ಟಲ ಶೆಟ್ಟರು

KANNADA ILLUSTRATED WEEKLY

ಹಿಟ್ಲರನನ್ನು ಬರ್ನಾರ್ಡ್ ಶಾ ನಿಂದಿಸುತ್ತಾರೆ

ಆತನು ವಿಜಯಿಯಾಗುವುದಿಲ್ಲವಂತೆ

ಹಿಟ್ಲರನು ಮಾಡಿದ ಪ್ರಮಾದಗಳಾವುವು?

ದ್ವಿತೀಯ ಲೋಕ ಯುದ್ಧದಲ್ಲಿ ಇಷ್ಟರ ವರೆಗಿನ ಘಟನೆಗಳು ಹೆಚ್ಚಾಗಿ ಹಿಟ್ಲರನಿಗೆ ಅನುಕೂಲವಾಗಿಯೇ ಘಟಿಸಿವೆ. ಆದರೆ ಹಿಟ್ಲರನು ರಷ್ಯದ ಮೇಲೆ ಯುದ್ಧವನ್ನು ಸಾರಿ ತನ್ನ ಮೂರ್ಖತ್ವವನ್ನು ತೋರಿಸಿದ್ದಾನೆ. ಅವನು ರಷ್ಯವನ್ನು ಸೋಲಿಸಿ ತಾನು ಗೆಲ್ಲುವ ಸಂಭವ ಏನೇನೂ ಇರುವುದಿಲ್ಲ ಎಂದು ವಿಶ್ವವಿಖ್ಯಾತ ಸಾಹಿತಿಗಳಾಗಿರುವ ಜಾರ್ಜ ಬರ್ನಾರ್ಡ ಶಾರವರು ಹೇಳುತ್ತಾರೆ.

ಅಮೇರಿಕ ಮತ್ತು ಜಪಾನನ್ನು ಬಿಟ್ಟರೆ ಈಗ ಇಡೀ ಪ್ರಪಂಚವು ಎರಡು ಪಕ್ಷಗಳಾಗಿ ನಿಂತು ಯುದ್ಧ ಮಾಡುತ್ತಿವೆ ಎಂದು ಹೇಳಬಹುದು. ರಷ್ಯದ ರಣರಂಗದಲ್ಲಿಯಂತೂ ಮಹತ್ತಾದ ಯುದ್ಧಗಳು ನಡೆದು, ರಕ್ತದ ಮಹಾ ಪ್ರವಾಹವು ಹರಿಯಲಾರಂಭವಾಗಿದೆ. ಈ ಎರಡು ವರ್ಷಗಳ ಯುದ್ಧದಲ್ಲಿ ಬೇರೆ ಎಲ್ಲಿಯೂ ಇಷ್ಟು ಪ್ರಾಣಹಾನಿ, ಮತ್ತು ಶಸ್ತ್ರಾಸ್ತ್ರಗಳ ನಷ್ಟವಾದುದಿಲ್ಲ. ಆದರೆ ರಷ್ಯವು ಪ್ರಪಂಚದ ಅತಿ ದೊಡ್ಡ ರಾಷ್ಟ್ರ. ಅದರ ರಾಜ್ಯವು ಯುರೋಪ ಮತ್ತು ಏಷ್ಯ ಎರಡರಲ್ಲಿಯೂ ಇದೆ. ಆ ರಾಷ್ಟ್ರದಲ್ಲಿ ೨೦೦ ಮಿಲಿಯ ಜನರಿದ್ದಾರೆ. ರಾಜಧಾನಿಯಾಗಿರುವ ಮೊಸ್ಕೊ ನಗರವು ರಷ್ಯದ ಮುಖ್ಯ ಸೇನಾನಿಲಯವಾಗಿದೆ. ಅಲ್ಲಿಗೆ ರಷ್ಯದ ಎಲ್ಲ ರೈಲು ದಾರಿಗಳು ಬಂದು ಕೂಡುತ್ತವೆ. ರಷ್ಯಕ್ಕೆ ಆಹಾರ ಸಾಮಗ್ರಿ ಮತ್ತು ಸೇನಾ ಸಾಮಗ್ರಿಗಳಲ್ಲಿ ಯಾವುದರಲ್ಲಿಯೂ ಕೊರತೆ ಇಲ್ಲ. ಕಾಕೇಸಸಿನ ಎಣ್ಣೆಗಣಿಗಳಿಂದ ಅದಕ್ಕೆ ಪ್ರತಿವರ್ಷ ೩೦ ಮಿಲಿಯ ಟನ್ ಎಣ್ಣೆ ಸಿಕ್ಕುತ್ತದೆ. ಎಣ್ಣೆ ಉತ್ಪತ್ತಿಯಲ್ಲಿ ರಷ್ಯವು ಪ್ರಪಂಚದಲ್ಲಿ ಎರಡನೆಯದಾಗಿದೆ. ಮತ್ತೆ ರಷ್ಯವು ಖನಿಜೋತ್ಪತ್ತಿಯಲ್ಲಿಯೂ ಉತ್ತಮ ಸ್ಥಾನ ಪಡೆದಿದೆ.

ರಷ್ಯಕ್ಕೆ ಸಹಾಯವಿದೆ

ರಷ್ಯವು ಸಮಾಜವಾದಿಗಳ ಮಾತೃಸ್ಥಾನ. ಅಲ್ಲಿ ಸಮಾಜವಾದಿ ಸರಕಾರವಿದೆ. ಸಮಾಜವಾದಿಗಳು ಪ್ರಪಂಚದ ಎಲ್ಲ ಭಾಗಗಳಲ್ಲಿ ಇದ್ದಾರೆ; ಅವರು ತಮ್ಮ ತಮ್ಮ ದೇಶಗಳಲ್ಲಿ ದಿನೇ ದಿನೇ ಪ್ರಬಲರಾಗುತ್ತಿದ್ದಾರೆ. ಇವರೆಲ್ಲರ ಕ್ರಿಯಾತ್ಮಕ ಸಹಾನುಭೂತಿಯು ರಷ್ಯಕ್ಕಿದೆ. ಮತ್ತೆ ಬ್ರಿಟನ ಅಮೇರಿಕ ಮೊದಲಾದ ಕೆಲವು ರಾಷ್ಟ್ರಗಳ ನೀತಿ ಧರ್ಮವು ಸಮಾಜವಾದಕ್ಕೆ ಪ್ರತಿಕೂಲವಾಗಿರುವದಾದರೂ ಹಿಟ್ಲರನು ಪ್ರಪಂಚದ ಎಲ್ಲ ರಾಷ್ಟ್ರಗಳ ಸಮಾನ ಶತ್ರುವಾಗಿ ಪರಿಣಮಿಸಿರುವುದರಿಂದ, ಬ್ರಿಟನ ಅಮೇರಿಕ [illegible]ಂಥವುಗಳು ಕೂಡ ರಷ್ಯದ ಪಾಳೆಯವನ್ನು ಸೇರಿರುವವು. ಈ ಯುದ್ಧದಲ್ಲಿ [illegible] ರಾಷ್ಟ್ರಗಳು ರಷ್ಯಕ್ಕೆ ಸಹಾಯ ಮಾಡುವವು. ಸಹಾಯದ ಹಂಚಿಕೆಗಳು ಈಗಾಗಲೇ ಆಗಿರುವವು. ರಷ್ಯವನ್ನು ಕೆಣಕಿಸಿ ಹಿಟ್ಲರನು ಪ್ರಪಂಚದ ತನ್ನ ಎಲ್ಲಾ ಶತ್ರುಗಳನ್ನು ಯುದ್ಧಕ್ಕೆ ಕರೆದ ಹಾಗಾಗಿದೆ. ರಷ್ಯದ ಮೇಲೆ ಯುದ್ಧವನ್ನು ಸಾರಿ ಅವನು ಬಹಳ ಮೂರ್ಖತನದ ಮತ್ತು ಅಚಾತುರ್ಯದ ಕೆಲಸ ಮಾಡಿದನೆಂಬುದರಲ್ಲಿ ಸಂದೇಹವಿಲ್ಲ. ರುಮೇನಿಯ, ಫಿನ್‌ಲೆಂಡ, ಸ್ವೀಡನ ಮೊದಲಾದ ಅವನ ಸ್ವಾಧೀನ ಮಾಡಿಕೊಂಡ ರಾಷ್ಟ್ರಗಳಿಂದ ಅವನಿಗೆ ದೊರೆಯುವ ಸಹಾಯವು ಅಲ್ಪವಾಗಿದೆ. ಯಾಕೆಂದರೆ ಹಿಟ್ಲರನಿಗೆ ಅಧೀನವಾಗಿರುವ ಆ ರಾಜ್ಯಗಳಲ್ಲಿ ಕೂಡ ತೀವ್ರ ಅಸಂತೋಷ ಅತೃಪ್ತಿಗಳಿವೆ.

ಇತರ ಕಡೆಗಳಲ್ಲಿಯಂತೆ ರಷ್ಯದಲ್ಲಿಯೂ ಮಿಂಚಿನ ಯುದ್ಧ ಮಾಡಿ ಗೆಲ್ಲಬಹುದೆಂದು ಹಿಟ್ಲರ್ ಮನಸ್ಸಿನಲ್ಲಿಯೇ ಮಂಡಿಗೆ ತಿಂದಿರುವನು. ರಷ್ಯ ಜರ್ಮನಿಗಳು ಸ್ನೇಹ ಸಂಬಂಧದಲ್ಲಿದ್ದುದಾದರೂ ಕೂಡ ಹಿಟ್ಲರನು ರಷ್ಯಕ್ಕೆ ಏನೇನೂ ತಿಳಿಯದಂತೆ ರಹಸ್ಯದಲ್ಲಿಯೇ ಯುದ್ಧದ ಎಲ್ಲಾ ಸಿದ್ಧತೆಗಳನ್ನು ಕೂಡಿ ರಷ್ಯದ ಮೇಲೆ ೧೫೦೦ ಮೈಲುಗಳ ವಿಸ್ತೀರ್ಣದ ರಣರಂಗದಲ್ಲಿ ದಾಳಿಮಾಡಿರುವನು. ಅನಿರೀಕ್ಷಿತವಾಗಿ ಈ ಘಟನೆಯು ನಡೆದುದರಿಂದ ಯುದ್ಧದ ಮೊದಲಿನ ಒಂದೆರಡು ವಾರಗಳಲ್ಲಿ ಹಿಟ್ಲರನು ಸ್ವಲ್ಪ ಮುಂದೊತ್ತಿ ಬಂದುದು ನಿಜ. ಆದರೆ ಈಗ ರಷ್ಯವು ಹಿಟ್ಲರನನ್ನು ಎದುರಿಸಲಿಕ್ಕೆ ಸಿದ್ಧವಾಗಿ ನಿಂತಿದೆ. ಅದ್ದರಿಂದಲೇ ರಷ್ಯ ಯುದ್ಧದ ಕಟು ಅನುಭವವು ಹಿಟ್ಲರನಿಗೆ ಈಗ ಆಗ ತೊಡಗಿರುವುದು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ.

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂಧನಿಂದಲೂ ಶ್ರೇಷ್ಠವಾಗಿಯೇ ಇದೆ. ಮುಖದ ಮೇಲಿನ ಯಾವತರ್ಹ ಕಲೆ, ಸುಕ್ಕು ಛಿದ್ರ ಮೊದಲಾದವುಗಳನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು
ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ

ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ
ಮುಹಮ್ಮದಾಲಿ ರೋಡ್, ಮಂಗಳೂರು.

ರೋಗ ನಾಶಿಯಾದ ಕೂಡಲೇ, ದಿನನಿತ್ಯ ಓವಲ್‌ಟಿನನ್ನು ಕುಡಿದು, ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಅದರ ಹಿತಕರವಾದ ಸವಿಯನ್ನು ಕೊಂಡಾಡುವಿರಿ. ನಿಶ್ಶಕ್ತವಾದ ಶರೀರಕ್ಕೆ ದುರ್ಬಲವಾದ ನರಗಳಿಗೆ, ಅದು ತಿರುಗಿ ಶಕ್ತಿಯನ್ನು ಉಂಟುಮಾಡಿ, ಸುಖ ನಿದ್ರೆಯನ್ನುಂಟು ಮಾಡುವುದಲ್ಲದೆ ಶರೀರವನ್ನು ಕ್ರಮಪ್ರಕಾರ ಬಲಗೊಳಿಸುವುದು.

ಓವಲ್‌ಟಿನ್ ಶುದ್ಧ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅದನ್ನು ಕುಡಿಯಿರಿ. ಇತರ ನಕಲಿ ಮಾಲುಗಳನ್ನು ಉಪಯೋಗಿಸದಿರಿ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಅಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಡಿಸ್ಟ್ರಿಬ್ಯೂಟರ್ಸ್—ಗ್ರೆಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬೆ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಒವಲ್‌ಟಿನ್
OVALTINE

ಒವಲ್ಟಿನ್ ಬಿಸ್ಕುಟುಗಳು

ಕೆಲವು ಓವಲ್ಟಿನ್ ಬಿಸ್ಕುಟುಗಳನ್ನು ಉಪಯೋಗಿಸಿ ನೋಡಿರಿ.
ಮಧುರವಾಗಿವೆ; ಜೀರ್ಣಕಾರಿಯಾಗಿವೆ; ಮತ್ತು ಆರೋಗ್ಯಕರವಾಗಿವೆ; ನಿಮಗೆ ಅತ್ಯಂತ ಯೋಗ್ಯವಾಗಿದೆ. ೪ ಔನ್ಸ್ ಮತ್ತು ೮ ಔನ್ಸ್‌ನ ಪೆಕೇಟುಗಳಾಗಿಯೂ ಒಂದು ರಾತ್ತಲಿನ ಡಬ್ಬಗಳಾಗಿಯೂ ಮಾರಾಟಮಾಡಲಾಗುತ್ತವೆ.
OV/26/[illegible]

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

18-7-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೮-೭-೧೯೪೧

ರಶ್ಯದೊಡನೆ ಕಾದಾಡಿ ಹಿಟ್ಲರನಿಗೆ ಲಾಭವೇನು?

ಎಣ್ಣೆಯ ನಿಧಿ ದೊರಕುವುದೆ?

ಜರ್ಮನಿಯಲ್ಲಿ ಎಣ್ಣೆಯ ಕೊರತೆಯಿದೆ

ಎಣ್ಣೆಯನ್ನು ದೊರಕಿಸಿಕೊಳ್ಳುವುದಕ್ಕಾಗಿ ಹಿಟ್ಲರನು ರಶ್ಯದೊಡನೆ ಯುದ್ಧವನ್ನು ಆರಂಭಿಸಿದ್ದಾನೆ ಎಂಬುದು ಇತ್ತೀಚೆಗೆ ನಡೆದ ಘಟನೆಗಳಿಂದ ಸ್ಪಷ್ಟವಾಗಿದೆ. ಇರಾಕಿನ ಎಣ್ಣೆಗಣಿಗಳನ್ನು ವಶಮಾಡಿಕೊಳ್ಳುವುದಕ್ಕಾಗಿ ಹಿಟ್ಲರನು ಮಾಡಿದ ಪ್ರಯತ್ನಗಳು ವ್ಯರ್ಥವಾಗಿವೆ ಎನ್ನಬಹುದು. ಇದರಿಂದಲೇ ಅವನು ರಶ್ಯದ ಮೇಲೆ ಯುದ್ಧ ಸಾರಿದ್ದಾನೆಂದು ಹಲವರ ಮತವಾಗಿದೆ.

ಭೂಮಧ್ಯ ಸಾಗರದಲ್ಲಿ

ಭೂಮಧ್ಯ ಸಾಗರದಲ್ಲಿ ಯುದ್ಧವಾಗಿರುವುದು ಇರಾಕಿನ ಎಣ್ಣೆ ಗಣಿಗಳನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕಾಗಿ. ಇರಾಕಿನಲ್ಲಿ ಮೋಸುಲ ಮತ್ತು ಕರ್ಕೂಕ ಪ್ರದೇಶದಲ್ಲಿ ತುಂಬಾ ಎಣ್ಣೆ ಇದೆ. ಇಲ್ಲಿಂದ ಎಣ್ಣೆಯು ನಳಿಗೆಗಳ ಮೂಲಕ ತ್ರಿಪೋಲಿಗೂ ಹೈಫಕ್ಕೂ ಬರುತ್ತದೆ. ಫ್ರಾನ್ಸಿನ ಪತನವಾದ ಬಳಿಕ ತ್ರಿಪೋಲಿಯು ಸುರಕ್ಷಿತವಾಗಿಲ್ಲದಿರುವುದರಿಂದ ಬ್ರಿಟಿಷರು ಅಲ್ಲಿಗೆ ಎಣ್ಣೆ ಕಳುಹಿಸುವುದನ್ನು ನಿಲ್ಲಿಸಿದ್ದಾರೆ. ಈ ಎಣ್ಣೆಯ ಮೇಲೆ ಹಿಟ್ಲರನು ತನ್ನ ಅಧಿಕಾರ ಮಾಡಿಕೊಳ್ಳಬೇಕಾದರೆ ಅವನು ಹೈಫಾ ಮತ್ತು ತ್ರಿಪೋಲಿಯನ್ನು ಸ್ವಾಧೀನ ಮಾಡಿಕೊಳ್ಳಬೇಕು, ಅಥವಾ ಎಣ್ಣೆಯನ್ನು ಕಪ್ಪು ಸಮುದ್ರದ ಮಾರ್ಗವಾಗಿ ಸಾಗಿಸಲಿಕ್ಕೆ ಹೊಸ ದಾರಿಯನ್ನು ಕಟ್ಟಬೇಕು. ಬರ್ಲಿನ್ ಬಗ್ದಾದ್ ರೈಲ್ವೆಯನ್ನು ಪೂರ್ಣ ಮಾಡುವ ಯೋಜನೆಯನ್ನು ಜರ್ಮನರು ಇದೇ ಉದ್ದೇಶದಿಂದ ಕೈಕೊಂಡಿದ್ದರು. ಈಗ ಈ ಎಣ್ಣೆ ಪ್ರದೇಶವನ್ನು ಉತ್ತರದಲ್ಲಿ ಟರ್ಕಿ ಪೂರ್ವದಲ್ಲಿ ಬ್ರಿಟಿಷರು ಮತ್ತು ದಕ್ಷಿಣದಲ್ಲಿ ಈಜಿಪ್ಟ್ ಸುತ್ತು ಹಾಕಿರುವುದರಿಂದ ಜರ್ಮನಿಯು ಗ್ರೀಸ್ ಮತ್ತು ದ್ವೀಪಗಳನ್ನು ಸ್ವಾಧೀನ ಮಾಡಿಕೊಂಡು ಟರ್ಕಿ ಈಜಿಪ್ಟಗಳನ್ನು ತನ್ನ ಅಂಕೆಗೆ ತರುವುದು ಅಗತ್ಯವಾಯಿತು. ಈ ಕೆಲಸವು ಶೀಘ್ರದಲ್ಲಿಯೇ ಆಗಬೇಕಾಗಿದೆ. ಯುದ್ಧವು ದೀರ್ಘಕಾಲ ನಡೆದರೆ ಎಣ್ಣೆಯ ಖರ್ಚು ಬೆಳೆಯುವುದರಿಂದ ಅದು ಜರ್ಮನಿಯ ಹಿತಕ್ಕೆ ಹಾನಿಕರವಾಗಿರುವುದು.

ಯುದ್ಧವು ಇನ್ನೆಷ್ಟು ಕಾಲ ನಡೆಯಬಹುದು?

ಯುದ್ಧವು ಇನ್ನೆಷ್ಟು ಕಾಲ ನಡೆಯುವುದೆಂಬುದು ಜರ್ಮನಿಗೆ ಸಿಕ್ಕುವ ಎಣ್ಣೆಯ ಪರಿಮಾಣವನ್ನು ಹೊಂದಿಕೊಂಡಿರುತ್ತದೆ. ಇರಾಕಿನ ಎಣ್ಣೆ ಗಣಿಗಳ ಮೇಲೆ ಮತ್ತು ರಶ್ಯದ ಎಣ್ಣೆಯ ಮೇಲೆ ಜರ್ಮನಿಯ ಅಧಿಕಾರವು ಆಗುವುದಿಲ್ಲವಾದರೆ ಈ ಯುದ್ಧವು ಈ ಬೇಸಗೆಯಲ್ಲಿಯೇ ಮುಗಿಯಬೇಕು. ತಜ್ಞರು ಲೆಕ್ಕ ಹಾಕಿರುವ ಪ್ರಕಾರ ಜರ್ಮನಿ ಮತ್ತು ಇಟಲಿಗೆ ದೊರೆಯುವುದಕ್ಕಿಂತ ತಿಂಗಳಿಗೆ ಸುಮಾರು ೬೪೭,೦೦೦ ಟನ್ನುಗಳಷ್ಟು ಬೇರೆ ಬೇರೆ ಜಾತಿಯ ಎಣ್ಣೆಗಳು ಜಾಸ್ತಿಯಾಗಿ ಖರ್ಚಾಗುತ್ತವೆ. ಕಡಿಮೆ ಬೀಳುವ ಈ ಎಣ್ಣೆಗಳು ಬೇರೆ ಕಡೆಗಳಿಂದ ಜರ್ಮನಿ ಇಟಲಿಗಳಿಗೆ ದೊರೆಯದಿರುವ ಸಂದರ್ಭದಲ್ಲಿ ಜರ್ಮನಿ ಇಟಲಿಗಳ ಎಣ್ಣೆ ಉಗ್ರಾಣಗಳು ಮೂರು ತಿಂಗಳ ಕೊನೆಗೆ ಬರಿದಾಗಬೇಕು. ಆದರೂ ಜರ್ಮನಿಗೆ ದೊರೆ

ಯುವ ಎಣ್ಣೆ ೬,೪೫೦,೦೦೦ ಟನ್ ಮತ್ತು ಅದರ ಖರ್ಚು ೧೪,೨೫೦,೦೦೦ ಟನ್ ಎಂದು ಲೆಕ್ಕ ಹಿಡಿದಿದೆ. ಜರ್ಮನಿಗೆ ೭,೮೦೦,೦೦೦ ಟನ್ ಎಣ್ಣೆ ಕಡಿಮೆಯಾಗುವುದು. ಈ ಕಡಿಮೆ ಬೀಳುವ ಎಣ್ಣೆಯನ್ನು ಜರ್ಮನಿ ತನ್ನ ಕಾದಿಟ್ಟ ಸಂಗ್ರಹದಿಂದ ಸಂಪೂರ್ಣ ತೆಗೆಯುವ ಹಾಗೆ ಇಲ್ಲ. ಹಾಗೆ ಮಾಡಿದುದಾದರೆ ಅದರ ಯುದ್ಧ ಕಾರ್ಯವೂ, ಕೈಗಾರಿಕೆ ವ್ಯಾಪಾರಗಳೂ ಸಂಪೂರ್ಣ ನಿಂತು ಹೋಗಬೇಕಾಗುವುದು.

ರಶ್ಯದ ಮೇಲೆ ಯುದ್ಧ

ಇರಾಕಿನ ಎಣ್ಣೆ ಗಣಿಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವುದು ಸದ್ಯಕ್ಕೆ ಸಾಧ್ಯವಿಲ್ಲವೆಂದು ಅನುಭವಕ್ಕೆ ಬಂದು ಕೊಂಡ ಅನಂತರವೇ, ಜರ್ಮನಿ ರಶ್ಯದ ಮೇಲೆ ಯುದ್ಧವನ್ನು ಸಾರಿದೆ. ಜರ್ಮನ್ ರಶ್ಯ ಯುದ್ಧದ ರಹಸ್ಯವನ್ನು ನಾವು ಇಲ್ಲಿ ಚೆನ್ನಾಗಿ ತಿಳಕೊಳ್ಳಬಹುದು. ಜರ್ಮನಿಯ ಸೋಲು ಗೆಲುವುಗಳ ಭವಿಷ್ಯವನ್ನು ನಾವು ಈ ಯುದ್ಧದ ಪರಿಣಾಮದಿಂದ ಊಹಿಸಬಹುದು. ಒಂದು ಸಂದರ್ಭದಲ್ಲಿ ಫ್ರಾನ್ಸಿನಂತೆ ರಶ್ಯದ ಪತನವೂ ಆದು ದಾದರೆ ಅದರಿಂದ ಜನರು ಗಾಬರಿಯಾಗುವ ಕಾರಣವಿಲ್ಲ. ಜರ್ಮನಿಗೆ ಯುದ್ಧವನ್ನು ಮುಂದೊತ್ತಲಿಕ್ಕೆ ಅಗತ್ಯ ಬೇಕಾದ ಎಣ್ಣೆಯು ಮಾತ್ರ ರಶ್ಯದಿಂದ ಅದಕ್ಕೆ ದೊರಕಲು ಹಾದಿಯಾಗುವದಾಗಿ, ಜರ್ಮನಿಯಲ್ಲಿ ಪುನಃ ಅದರ ಬರಗಾಲ ಬೀಳುವ ತನಕ ಯುದ್ಧವು ಇನ್ನೂ ಒಂದೆರಡು ವರ್ಷ ಕಾಲ ನಡೆಯಬಹುದು. ಅಲ್ಲವಾದರೆ ಅದು ಇನ್ನು ನಾಲ್ಕಾರು ತಿಂಗಳುಗಳಲ್ಲಿ ಮುಗಿಯಬೇಕು. ಎಣ್ಣೆ ಉತ್ಪತ್ತಿಯ ವಿಷಯದಲ್ಲಿ ಜಗತ್ತಿನಲ್ಲಿ ರಶ್ಯದ ಸ್ಥಾನವು ಎರಡನೆಯದಾಗಿದೆ.

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್,
ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ಠೇವು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುದು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. ೫ರಿಂದ ೨೫ರ ವರೆಗೆ ಸೇ. 9% ರೂ. ೨೬ರಿಂದ 100ರ ವರೆಗೆ ಸೇ. 8%

ರೂ. 101ರಿಂದ 500ರ ವರೆಗೆ ಸೇ. 7% ರೂ. 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2%, ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3%, ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) **B. Narayana Shetty,**
Agent at Kankanady.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 270/37.
R. E. P. 368/41.

ಬ್ರಂಹಾವರ ಪೀಟರ್ ಪೈ— ವಾದಿ.

ಮತ್ತು

ಹಾಲಾಡಿ ನಾಗಪ್ಪಯ್ಯ ಹಾಲಾಡಿ ರಾಮಣ್ಣಯ್ಯನ ಮಗ ಮಣೂರು ಗ್ರಾಮ—

ಮೇಲ್ಕಂಡ ಅಮಲ್‌ಜಾರಿಯಲ್ಲಿ ಸ್ಥಿರ ಆಸ್ತಿಯ ಏಲಂ ಕುರಿತು ಅರ್ಜಿದಾರನು ಅಮಲ್ ಜಾರಿ ಮಾಡಿದ್ದ ನೋಟೀಸ್ ಕುರಿತು 22-7-41ಕ್ಕೆ ಇಟ್ಟಿರುವ ಬಗ್ಗೆ ಈ ಮೂಲಕ ತಿಳಿಸಲಾಗುತ್ತದೆ.

ಕುಂದಾಪುರ 11-7-41 } K. L. Bhandari, ಅರ್ಜಿದಾರನ ವಕೀಲ

ಸ್ವದೇಶಾಭಿಮಾನಿ

ತಾರೀಕು 18—7—1941

ಮಂಗಳೂರು ಮುನ್ಸಿಪಾಲಿಟಿ

ಮಂಗಳೂರು ಮುನ್ಸಿಪಾಲಿಟಿಯ ೧೯೪೦—೪೧ನೆಯ ವರ್ಷದ ಆಡಳಿತೆ ವರದಿಯು ನಮ್ಮ ಹಸ್ತಗತವಾಗಿದೆ. ಈ ವರ್ಷದಲ್ಲಿ ಮುನ್ಸಿಪಾಲಿಟಿಯ ಜನಸಂಖ್ಯೆ ೬೬,೭೫೬ರಿಂದ ೮೧,೦೭೫ಕ್ಕೆ ಏರಿದೆ. ಕೌನ್ಸಿಲಿನಲ್ಲಿ ೩೨ ಮಂದಿ ಚುನಾಯಿತ ಸಭಾಸದರಿದ್ದಾರೆ. ಶ್ರೀ. ವೆಂಕಟ್ರಾಯ ಬಾಳಿಗರು ಚೇರ್‌ಮಾನರಾಗಿದ್ದು ಅವರು ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋದ ಮೇಲೆ, ಕಳೆದ ದಶಂಬರದಿಂದ ವೈಸ್ ಚೇರ್‌ಮೇನರಾದ ಶ್ರೀ ಎಲ್ ಸಿ ಪಾಯಸರು ಆ ಸ್ಥಾನವನ್ನಲಂಕರಿಸಿರುವರು. ಇದೇ ವರ್ಷ ಶ್ರೀ. ನಾರಾಯಣ ಶೆಣೈಯವರು ಕಮಿಶನರಾಗಿ, ನಗರದ ಆಡಳಿತವನ್ನು ಸುಸೂತ್ರವಾಗಿ ಸಾಗಿಸಿದ್ದಾರೆ. ಈ ವರ್ಷದಲ್ಲಿ ೩೦ ಮೀಟಿಂಗುಗಳು ಜರಗಿವೆ.

ಟೇಕ್ಸ್ ಅಪೀಲು, ಟೌನ್ ಪ್ಲಾನಿಂಗ್ ಎಡ್ಯುಕೇಶನಲ್, ಎಂಕ್ರೋಚ್‌ಮೆಂಟ್, ಪಿನೇನ್ಸ್ ಎಂಡ್ ಎಸ್ಟಿಮೇಟ್, ಲೋ, ಲೈಬ್ರೆರಿ, ಲೈಟಿಂಗ್ ಎಂಡ್ ಸೆನಿಟೇಶನ್ ಎಂಬೀ ಕಮಿಟಿಗಳು ಮುನ್ಸಿಪಾಲಿಟಿಯ ಕಾರ್ಯಕಲಾಪಗಳನ್ನು ಹಂಚಿ ಸರಿಯಾಗಿ ಕೆಲಸಮಾಡುತ್ತಿವೆ.

ನಗರ ಸಭೆಯು ಕೆಲವು ಹೊಸ ಮಾರ್ಗಗಳನ್ನು ಮಾಡಿರುವುದಲ್ಲದೆ ಕೆಲವು ಮಾರ್ಗಗಳ ದುರಸ್ತಿಯ ಕಡೆಗೂ ಗಮನವಿತ್ತಿದೆ.

ಮುನ್ಸಿಪಾಲಿಟಿಯು ಸಾವುಕಾರ್ ವಿಟ್ಠಲ ಶಾಂತಾರಾಮ ಕುಲಕರ್ಣಿಯವರಿಂದ, ಕಳೆದ ವರ್ಷ ರೇಡಿಯೋ ಪೆವಿಲಿಯನ್ ಮತ್ತು ಸ್ಕೂಲ್ ಜುಮ್ನಾಸಿಯಮ್ಮನ್ನು ಪಡೆದದ್ದು ಮಾತ್ರವಲ್ಲದೆ, ಹಂಪನಕಟ್ಟೆಯಲ್ಲಿ ಸುಂದರವಾದ ದೀಪಸ್ತಂಭವೊಂದನ್ನೂ ದಾನವಾಗಿ ಪಡೆದಿದೆ.

ಮುನ್ಸಿಪಾಲಿಟಿಯ ಶಾಲೆಗಳಲ್ಲಿ ೬೭೧೬ ಹುಡುಗರೂ ೪೧೮೩ ಹುಡುಗಿಯರೂ ಪ್ರಾಥಮಿಕ ವಿದ್ಯಾಭ್ಯಾಸ ಪಡೆಯುತ್ತಾರೆ. ಎಲ್ಲಾ ಶಾಲೆಗಳಲ್ಲಿಯೂ ವಿದ್ಯಾಭ್ಯಾಸವು ಧರ್ಮಾರ್ಥವಾಗಿದ್ದು ನಗರದ ಬಾಲಕಬಾಲಕಿಯರಿಗೆ ಹಾಗೂ ಹೆತ್ತವರಿಗೆ ಇದರಿಂದ ಮರೆಯಲಾರದ ಉಪಕಾರವಾಗಿದೆ. ಕಡ್ಡಾಯ ಶಿಕ್ಷಣ ಕೊಡುವ ವಿಷಯವನ್ನೂ ಕೌನ್ಸಿಲು ಆಲೋಚಿಸಿದೆಯೆಂಬುದು ಗಮನಾರ್ಹವಾದುದು. ಮುಸ್ಲಿಮ್ ಬಂಧುಗಳಿಗೆ ಪ್ರತ್ಯೇಕ ಹುಡುಗಿಯರ ಶಾಲೆ ಹುಡುಗರ ಶಾಲೆಗಳ ನ್ನೇರ್ಪಡಿಸಿ ಮುನ್ಸಿಪಾಲಿಟಿಯು ಅಲ್ಪಸಂಖ್ಯಾಕರ ಹಿತವನ್ನು ನೋಡಿದೆ. ಹಯ್ಯರ್ ಎಲಿಮೆಂಟರಿ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವೂ ಕೊಡಲಾಗುತ್ತದೆ. ಮುನ್ಸಿಪಾಲಿಟಿಯ ಶಾಲಾಕಟ್ಟಡಗಳು ತಕ್ಕಮಟ್ಟಿಗೆ ಚೆನ್ನಾಗಿರುವವಾದರೂ, ಉದಾರಿಗಳಾದ ಮಹನೀಯರು, ನಗರದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಶಾಲಾ ಕಟ್ಟಡಗಳ ಅಭಿವೃದ್ಧಿಯ ಭಗ್ಗೆ ಉದಾರಬುದ್ಧಿಯಿಂದ ನೆರವಾಗಬೇಕಾಗಿ ನಾವು ಸೂಚಿಸದಿರಲಾರೆವು. ಮುನ್ಸಿಪಾಲಿಟಿಯು ಸಾರ್ವಜನಿಕರ ಬಗ್ಗೆ ರೇಡಿಯೋವನ್ನೂ ಒಂದು ಲೈಬ್ರರಿಯನ್ನೂ ನಡೆಸುತ್ತ ಬರುವುದು ಪ್ರಶಂಸನೀಯವಾದುದು.

ಮುನ್ಸಿಪಾಲಿಟಿಯ ಎರಡು ಆಯುರ್ವೇದಿಕ್ ಡಿಸ್ಪೆನ್ಸರಿ ಹಾಗೂ ಒಂದು ಯುನಾನಿ ಡಿಸ್ಪೆನ್ಸರಿಯನ್ನು ನಡೆಸುತ್ತದೆ ಮಾತ್ರವಲ್ಲದೆ ಅನೇಕ ಸಂಸ್ಥೆಗಳಿಗೆ ವೈದ್ಯಕೀಯ ಸಹಾಯಕ್ಕೆ ಸಲುವಾಗಿ ಧನ ಸಹಾಯಮಾಡಿದೆ. ವೈದ್ಯಕೀಯ ಸಹಾಯಕ್ಕಾಗಿ ಒಟ್ಟು ರೂ. ೮,೬೫೭ರಷ್ಟು ಕೌನ್ಸಿಲು ಖರ್ಚುಮಾಡಿದೆ. ಡಾ। ಬಿ. ಸುಬ್ರಾಯ ಬಾಳಿಗರು ಹೆಲ್ತ್ ಆಫೀಸರಾಗಿದ್ದು ಅವರ ಕೈಕೆಳಗಿನ ಇತರ ಆಫೀಸರುಗಳ ಮೂಲಕ ವೈದ್ಯಕೀಯ ಕೆಲಸ ನಡೆಸಿರುವರು, ಆರೋಗ್ಯ ಪ್ರಚಾರ ಕಾರ್ಯಗಳನ್ನೂ ಮಾಡಿದ್ದಾರೆ.

ನಗರಗಳಲ್ಲಿ ಹರಡುವ ರೋಗಗಳು ಹೆಚ್ಚಾಗುವುದು ಸ್ವಾಭಾವಿಕ, ಅದರಲ್ಲಿಯೂ ಮಾರ್ಗಗಳ ಸ್ವಚ್ಛತೆ, ಶುದ್ಧ ನೀರು ಸೋಳ್ಳೆಗಳ ನಿವಾರಣೆ ಮೊದಲಾದವುಗಳ ಕಡೆಗೆ ಸಾಕಾದಷ್ಟು ಗಮನಕೊಡದಿದ್ದರೆ ಅನೇಕ ರೋಗಗಳು ಪ್ರಬಲಿಸಲು ಕಾರಣವಿದೆ., ಕ್ಷಯ, ಕುಷ್ಠ, ಮೈಲೇರಿಯಾ ಮೊದಲಾದ ಭಯಂಕರ ರೋಗಗಳು ಹರಡದಂತೆ ಮುನ್ಸಿಪಾಲಿಟಿಯವರು ಗಮನಕೊಡತಕ್ಕ ಅವಶ್ಯವಿದೆ. ಇತ್ತೀಚೆಗೆ ನಗರದಲ್ಲಿ 'ಮೈಲೇರಿಯಾ' ರೋಗವು ವಿಶೇಷವಾಗಿ ಹರಡುವುದು ಕಂಡು ಬರುತ್ತದೆ. ಈ ಬಗ್ಗೆ ಕೌನ್ಸಿಲಿನವರು ಸಾಕಷ್ಟು ಗಮನಕೊಟ್ಟದ್ದು ಕಂಡುಬರುವುದಿಲ್ಲ. ನೀರಿನ ಸರಬರಾಯಿ, ನಗರ ಶುಚಿತ್ವ ಚರಂಡಿಗಳ ನೈರ್ಮಲ್ಯ ಇವುಗಳ ಕಡೆಗೆ ಇನ್ನಷ್ಟು ಹೆಚ್ಚಿನ ಗಮನ ಕೊಟ್ಟು ನಗರದಲ್ಲಿ ಇಂತಹ ರೋಗದ ಹಾವಳಿ ಹೆಚ್ಚಾಗದಂತೆ ತಡೆಯುವುದು ಮುನ್ಸಿಪಾಲಿಟಿಯವರ ಪ್ರಾಮುಖ್ಯ ಕರ್ತವ್ಯವೆಂದು ನಾವು ಸೂಚಿಸದಿರಲಾರೆವು.

ಮುನ್ಸಿಪಾಲಿಟಿಯವರು ನಗರದ ಹಿತದೃಷ್ಟಿಯಿಂದ, ಎಷ್ಟೇ ಪ್ರಯಾಸವಾಗುವುದಿದ್ದರೂ, ಕೂಡಲೇ ಶುದ್ಧ ನೀರಿನ ಸರಬರಾಯಿ ಕೆಲಸವನ್ನು ಕೈಕೊಳ್ಳುವುದು ಅತ್ಯಂತ ಅವಶ್ಯ. ಮಾರ್ಗದ ಬಳಿಯ ಚರಂಡಿಗಳು ಈಗ ಹೆಚ್ಚಾಗಿ ಕೊಳೆ ಕಸ್ಮಲಗಳಿಂದ ತುಂಬಿರುವುದರಿಂದ, ಅವುಗಳನ್ನು ಸಂಪೂರ್ಣ ನಿರ್ಮಲವಾಗಿಡುವುದು, ಅದಕ್ಕಿಂತಲೂ ಹೆಚ್ಚಿನ ಗಮನಾರ್ಹವಾದ ವಿಚಾರ. ಮುನ್ಸಿಪಾಲಿಟಿಯವರು ಇನ್ನೂ ಕೆಲವು ರೇಡಿಯೋಗಳ ವ್ಯವಸ್ಥೆ ಮಾಡುವರೆಂದೂ, ಅದಕ್ಕಾಗಿ ದಾನಶೂರರು ಮುಂದೆ ಬರುವರೆಂದೂ ನಾವು ಆಶಿಸುತ್ತೇವೆ. ಮಂಗಳೂರಿನಂತಹ ದೊಡ್ಡ ಪಟ್ಟಣದಲ್ಲಿ ಒಂದು ಒಳ್ಳೆಯ ಪಾರ್ಕು ಇಲ್ಲದಿರುವುದು ಗಮನೀಯವಾದ ಕೊರತೆಯಾಗಿದೆ. ಈ ವಿಷಯಗಳನ್ನು ನಮ್ಮ ಮುನ್ಸಿಪಾಲಿಟಿಯ ಅಧಿಕಾರಿಗಳು ಯೋಚಿಸಿ ತಕ್ಕ ನಿರ್ಧಾರ ಮಾಡುವುದು ಅವಶ್ಯವೆಂದು ಸೂಚಿಸಲು ನಾವು ಮರೆಯಲಾರೆವು.

ಮುನ್ಸಿಪಾಲಿಟಿಯ ಆಡಳಿತೆಯು ತೃಪ್ತಿಕರವಾಗಿದೆಯೆಂದು ಸಂದರ್ಶಕರು ಹಲವರು ಶಿಫಾರಸು ಮಾಡಿರುವರು. ಕಮಿಶನರಾದ ಶ್ರೀ ನಾರಾಯಣ ಶೆಣೈ, ಹೆಲ್ತ್ ಆಫೀಸರರಾದ ಡಾ। ಬಾಳಿಗಾ, ಚೇರ್‌ಮೇನ್ ಮತ್ತು ಕೌನ್ಸಿಲರು ಮಾತ್ರವಲ್ಲದೆ ಇತರ ಉದ್ಯೋಗಸ್ಥರು ಒಳ್ಳೆಯ ಸೌಹಾರ್ದ ಭಾವನೆಯಿಂದ ದುಡಿದಿರುವುದಾಗಿ ನಾವು ತಿಳಿಯುತ್ತೇವೆ. ನಗರದ ಹಿತ ಸಂರಕ್ಷಣೆಯ ಕಾರ್ಯವನ್ನು ಇನ್ನಷ್ಟು ಜಾಗರೂಕತೆಯಿಂದ ಮುನ್ಸಿಪಾಲಿಟಿಯವರು ಕೈಕೊಂಡು ಮಂಗಳೂರು ಮುನ್ಸಿಪಾಲಿಟಿಯು ಒಂದು ಆದರ್ಶ ಮುನ್ಸಿಪಾಲಿಟಿಯಾಗುವಂತೆ ಮಾಡಲು ಎಲ್ಲಾ ವಿಧದಿಂದಲೂ ಯತ್ನಿಸಬೇಕಾಗಿ ನಾವು ಆಶಿಸುತ್ತೇವೆ.

ಬ್ರಿಟನು ರಶ್ಯಗಳ ಒಪ್ಪಂದ

ಮೋಸ್ಕೋದಲ್ಲಿ ಆಂಗ್ಲರಶ್ಯ ಒಪ್ಪಂದ ಕರಾರು, ಕಳೆದ ಆದಿತ್ಯವಾರ ಸಹಿಮಾಡಲಾಯಿತೆಂಬ ವಾರ್ತೆಯು ಬಹಳ ಪ್ರಾಮುಖ್ಯವಾದುದಿದೆ. ಇಂದಿನ ಲೋಕಯುದ್ಧದಲ್ಲಿ, ಹಿಟ್ಲರನ ಆರ್ಭಟವನ್ನು ನಿಲ್ಲಿಸುವ ಸಲುವಾಗಿ, ಆತನ ಹೊಡೆತಕ್ಕೆ ಬಲಿಬಿದ್ದ ಈ ಉಭಯ ರಾಷ್ಟ್ರಗಳೂ, ಹಿಟ್ಲರಿಸಮ್ಮನ್ನು ವಿರೋಧಿಸುವ ಏಕಮಾತ್ರ ಸಮಾನ ಉದ್ದೇಶದಿಂದ, ಈ ರೀತಿಯ ಒಪ್ಪಂದಕ್ಕೆ ಒಳಗಾಗಿವೆಯೆಂಬುದು ಪ್ರಪಂಚಕ್ಕೆಲ್ಲಾ ಅರ್ಥವಾಗುವ ವಿಷಯವೇ ಆಗಿದೆ. ಹೀಗೆ ಬ್ರಿಟನು ರಶ್ಯಗಳು ಒಪ್ಪಂದ ಕರಾರು ಮಾಡಿಕೊಳ್ಳುವ ಸಂದರ್ಭಗಳಲ್ಲಿ, ಅವುಗಳ ಆಂತರಿಕ ಅಭಿಪ್ರಾಯ ವ್ಯತ್ಯಾಸವು ಮುಂದೆ ಬರದಿರುವುದೂ, ಆ ಉಭಯ ರಾಷ್ಟ್ರಗಳ ಮುಖಂಡರೂ ಈಗ ಅನ್ಯೋನ್ಯ ಸಹಕಾರದಿಂದ ವರ್ತಿಸಿ ವೈರಿಯನ್ನೆದುರಿಸಲು ನಿರ್ಧಾರ ಮಾಡಿಕೊಂಡಿರುವುದೂ ಉಚಿತವೂ ಸಂದರ್ಭಾನುಕೂಲವೂ ಆಗಿರುತ್ತದೆ. ಇಂತಹ ಅನ್ಯೋನ್ಯ ಅಭಿಪ್ರಾಯ ಸಹಕಾರವನ್ನು ಎರಡು ವರ್ಷಗಳ ಹಿಂದೆಯೇ ರಶ್ಯ ಬ್ರಿಟನುಗಳು ಮಾಡಿಕೊಳ್ಳುವಷ್ಟು ದೂರಾಲೋಚನೆ ಗೈದಿದ್ದರೆ, ಇಂದಿನ ಯುದ್ಧ ಪ್ರಸಕ್ತಿಯೇ ಬರುತ್ತಿರಲಿಲ್ಲವೆಂಬುದನ್ನೂ ನಾವು ತಿಳಿದುಕೊಳ್ಳಬೇಕಾಗಿದೆ. ಈಗ ಇಷ್ಟು ಸಮಯಗಳ ಬಳಿಕವಾದರೂ, ಇಂತು ಅನ್ಯೋನ್ಯ ಸಹಕರಿಸಿ, ಲೋಕವನ್ನು ಆಕ್ರಮಿಸುವ ಹಿಟ್ಲರ್ ಶಾಹಿಯನ್ನು ಮುರಿದಿಕ್ಕಲು ರಶ್ಯ ಬ್ರಿಟನುಗಳು ಮನಸ್ಸು ಮಾಡಿದ ವಿಚಾರವು ಬಹಳ ಪ್ರಶಂಸನೀಯವೆನದಿರಲು ಸಾಧ್ಯವಿಲ್ಲ.

ಬ್ರಿಟನು ರಶ್ಯಗಳು ಜಂದಕ್ಕಿಂದು ತತ್ವತಃ ವಿರುದ್ಧಾಭಿಪ್ರಾಯವುಳ್ಳವುಗಳು. ರಶ್ಯದ ಕಮ್ಯುನಿಸ್ಟರು ಬ್ರಿಟನಿನ ಹಗೆಗಳಾಗಿರುವರು. ಬ್ರಿಟನಿನ ರಾಜ್ಯಪದ್ಧತಿಯ ವಿಷಯ ರಶ್ಯವು ಸರ್ವಥಾ ಸಮ್ಮತಿಪಡುವಂತಿಲ್ಲ. ಹೀಗೆ ತೀವ್ರಾ ವಿರುದ್ಧ ಆಂತರಿಕ ಅಭಿಪ್ರಾಯಗಳನ್ನಾದರೂ ಬದಿಗಿಟ್ಟುಕೊಂಡು, ಇಂದು ಉಭಯ ರಾಷ್ಟ್ರಗಳ ಮುಖಂಡರು ಒಂದು ಗುರಿ ಕಾರ್ಯ ಸಾಧಿಸಲು ಪಣ ತೊಟ್ಟಿದ್ದಾರೆ! ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ಲರು, ರಶ್ಯದ ಆಕ್ರಮಣ ಕಾಲದಲ್ಲಿ ಮಾಡಿದ ಉದ್ದಾಮ ಭಾಷಣದಲ್ಲಿ, ಕಮ್ಯುನಿಸ್ಟ್ ವಿರುದ್ಧ ಮತವನ್ನು ಅಡಗಿಸಿ ಮಾತನಾಡಿರುವರು. ಮಾತ್ರವಲ್ಲದೆ ಆ ಭಾಷಣದಲ್ಲಿ ಹಿಟ್ಲರ್ ಶಾಹಿಯಿಂದ, ರಶ್ಯನರಿಗೆ ಒದಗುವ ದುರಂತವನ್ನೇ ವರ್ಣಿಸಿ ಸಹಸಂತಾಪ ಸೂಚಿಸಿರುವರು. ಸ್ಟಾಲಿನನಾದರೂ, ತನ್ನ ಭಾಷಣದಲ್ಲಿ ಬ್ರಿಟನಿನ ತತ್ವ ವೈಷಮ್ಯವನ್ನೆತ್ತದೆ, ತಮ್ಮ ವಿಪತ್ಕಾಲದಲ್ಲಿ ಬ್ರಿಟನ್ ಅಮೇರಿಕಗಳು ಸಹಾಯ ಕೊಡಬೇಕಾಗಿ ಅಪೇಕ್ಷಿಸಿದನು ಮತ್ತೆ ಏಡನರೂ, ಲಿಟ್ವಿನೋವರೂ ಉಭಯ ರಾಷ್ಟ್ರಗಳ ಕಡೆಯಿಂದ ಹೆಚ್ಚಿನ ಸೌಹಾರ್ದ ಭಾವನೆಯ ಮಾತುಗಳನ್ನೇ ಆಡಿದರು. ಭವಿಷ್ಯದಲ್ಲಿ ಈ ಉಭಯ ರಾಷ್ಟ್ರಗಳ ಅನ್ಯೋನ್ಯತೆಯ ಪರಿಣಾಮವು ಹೇಗಾಗಬಹುದೆಂಬುದನ್ನು ವಿಚಾರಿಸಿದರೆ ಮಾತ್ರ ಸಂದೇಹ ಸಾವಿರಗಳು ತಲೆಯೆತ್ತುವವಲ್ಲವೆ, ಇಂದಿನ ಹಿಟ್ಲರ್ ಆಕ್ರಮಣ ನೀತಿಯನ್ನು ವಿರೋಧಿಸಬೇಕಾದ ಅನಿವಾರ್ಯವಿಲ್ಲದ ಪ್ರಸಂಗದಲ್ಲಿ ಈ ಎರಡು ರಾಷ್ಟ್ರಗಳಿಗಾದರೂ ಅನ್ಯೋನ್ಯವಾಗಿರುವುದಲ್ಲದೆ ಬೇರೆ ಉಪಾಯವಿಲ್ಲದಂತಾಗಿದೆ. ಇಂತಹ ವಿಪತ್ಕಾಲದಲ್ಲಿ, ಉಭಯ ರಾಷ್ಟ್ರಗಳಿಗೆ ಗಂಡಾಂತರವಾಗಿರುವ ಹಿಟ್ಲರ್ ಶಾಹಿಯ ನಾಶ ಯತ್ನದಲ್ಲಿ, ಈಗ ಆದ ಒಪ್ಪಂದವು ಯೂರೋಪಿನ ರಾಜನೀತಿಯನ್ನು ಅಭ್ಯಾಸ ಮಾಡಿದವರಿಗೆ ವಿಶೇಷ ಆಶ್ಚರ್ಯವೆನಿಸಲಾರದು.

ಹಿಟ್ಲರಿಸಮನ್ನು ತಡೆಯುವ ಸಲುವಾಗಿ ಈ ಎರಡು ರಾಷ್ಟ್ರಗಳು ಇಂದಿನೀ ಒಪ್ಪಂದವನ್ನು ಮಾಡಿಕೊಂಡಿರುವವಲ್ಲದೆ, ಮುಂದಿನ ಶಾಂತಿಸ್ಥಾಪನೆಯ ಸಮಯದಲ್ಲಿ ಅವುಗಳು ಅನ್ಯೋನ್ಯ ಒಪ್ಪಿಗೆಯಿಂದ ಕಾರ್ಯಮಾಡುವವೆಂದೂ ನಂಬುವುದು ಇಂದಿಗೆ ಸಾಧ್ಯವಾದ ವಿಚಾರ. ಪರಸ್ಪರ ಭಿನ್ನ ತತ್ವಗಳ ಮೇಲೆ ಸಮಾಜರಚನೆ ಮಾಡಿದ ಈ ಎರಡು ರಾಷ್ಟ್ರಗಳು ಮುಂದಿನ ಹೊಸ ಜಗತ್ತಿನ ವ್ಯವಸ್ಥೆಯಲ್ಲಿ ಒಂದು ಒಪ್ಪಿಗೆಯ ನಿರ್ಧಾರಕ್ಕೆ ಹೇಗೆ ಬರಬಹುದೆಂಬುದು ಬಹಳ ವಿಷಮವಾಗಿ ತೋರುವ ವಿಷಯವಾಗಿದೆ.

ಮಹಾದೇವ ದೇಸಾಯಿಯರೊಡನೆ ಕೆಲವು ಪ್ರಶ್ನೋತ್ತರಗಳು

ಮುನ್ಶಿಯವರ ರಾಜಿನಾಮೆಗೆ ಕಾರಣ

ಅಹಮ್ಮದಾಬಾದಿನಲ್ಲಿ ಶಾಂತಿಸ್ಥಾಪನಾ ಕಾರ್ಯ

ಆತ್ಮ ಬಲಿದಾನಕ್ಕೆ ಜನರು ಸಿದ್ಧರಿರುವರೆ?

'ಗಾಂಧೀಜಿಯವರ ಮುಂದೆ ತನ್ನ ಅಂತರಂಗವನ್ನು ಬಿಚ್ಚಿಡುವ ಮೊದಲು ಮುನ್ಶಿಯವರು ಅತಿರೇಕವಾಗಿ ಸಂಕಟ ಪಟ್ಟಿದ್ದರು. ಗಾಂಧೀಜಿಯವರ ಸಲಹೆಯಲ್ಲಿ ಅವರು ವಿಶ್ವಾಸವಿಟ್ಟದ್ದರಿಂದ ಅವರು ಹಾಗೆ ಮಾಡಿದರು. ಗಾಂಧೀಜಿಯವರಾದರೂ ಬೇರೆ ರೀತಿಯಲ್ಲಿ ಸಲಹೆಯನ್ನು ಕೊಡುವುದು ಶಕ್ಯವಿರಲಿಲ್ಲ. ಮುನ್ಶಿಯವರು ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟುದು ಉತ್ತಮವಾಯಿತು. ಇದರಿಂದ ಅಹಿಂಸೆಯಲ್ಲಿ ವಿಶ್ವಾಸವಿಲ್ಲದವರಿಗೆ ಕಾಂಗ್ರೆಸಿನಿಂದ ಹೊರಗೆ ಹೋಗುವುದಕ್ಕೆ ದಾರಿ ತೆರೆದಿಟ್ಟಂತಾಯಿತು.

ಮುನ್ಶಿಯವರಿಗಾದರೂ ಮುಂದೆ ಇದು ಅನುಭವಸಿದ್ಧವಾಗುವುದು. ಮುಂಜೆ ಮೊದಲಾದವರು ಆನಂದ ಪಡುವುದರಲ್ಲಿ ಅರ್ಥವಿಲ್ಲ. ಗಾಂಧೀಜಿಯವರ ಕೂಡೆ ಮುನ್ಶಿಯವರ ಮತಭೇದವಾದರೂ ಅದು ಬುದ್ಧಿ ಪೂರ್ವಕವಾಗಿ ಇದೆ. ಸಂದರ್ಭ ಬಿದ್ದಾಗ ಸರಿಪಡಿಸಲು ಬರುವಂತಿದೆ.' ಎಂದು 'ನೆಶನಲ್ ಹೆರಾಲ್ಡ್' ಮತ್ತು ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯ ಪ್ರತಿನಿಧಿಗಳು ಶ್ರೀ ಮಹಾದೇವ ದೇಸಾಯಿಯವರನ್ನು ಭೇಟಿಯಾದಾಗ ಹೇಳಿದರು. ಅವರೊಳಗೆ ಈ ಕೆಳಗಿನಂತೆ ಪ್ರಶ್ನೋತ್ತರ ನಡೆಯಿತು.

ಪ್ರ. ಅಹಮ್ಮದಾಬಾದಿನಲ್ಲಿ ದಂಗೆಯಿಲ್ಲದಂತೆ ಮಾಡಲು ನೀವೇನು ಮಾಡಿದಿರಿ?

ಉ. ದೇವರ ಕೃಪೆಯಿಂದ ಈಗ ದಂಗೆಯಿಲ್ಲ, ಬಹಳ ಆಯಾಸದಿಂದ ನಾವು ದಂಗೆಯನ್ನು ನಿಲ್ಲಿಸಬೇಕು.

ನಮ್ಮ ಸಂಗಡಿಗರೆಲ್ಲ ಒಟ್ಟಾಗಿ ಶಾಂತಿ ಕರ್ತರನ್ನು ಒಂದುಗೂಡಿಸಲು ಯತ್ನಿಸಿದೆವು. ದಂಗೆಯ ಕಾಲದಲ್ಲಿ ಇವರೆಲ್ಲ ನಗರದ ಬೇರೆ ಬೇರೆ ಭಾಗಗಳಿಗೆ ಹೋಗುತ್ತಿದ್ದರು. ಬಲ್ಲೇ ಜೋರಾಗಿ ಕಲಹ ನಡೆಯುತ್ತಿದ್ದ ಜಾಗೆಗಳಲ್ಲಿ ಅವರೇ ಕಾವಲಾಗಿ ನಿಂತಿದ್ದರು. ಅಂಗಡಿಗಳು ಮತ್ತು ಮನೆಗಳು ಹಿಂದೂ ಜನರಿಂದ ಖಾಲಿ ಮಾಡಲ್ಪಟ್ಟಲ್ಲಿ ತಾವೇ ಹೋಗಿ ನಿಂತು ಎಲ್ಲ ವ್ಯವಸ್ಥೆ ಮಾಡಿದರು. ಅಂಗಡಿಗಳು ತೆರೆಯಲ್ಪಟ್ಟವು. ಎರಡೂ ಜಾತಿಯ ಅನೇಕ ನಿರಾಶ್ರಿತರಿಗೆ ಇವರು ಆಹಾರವನ್ನು ಒಯ್ದುಕೊಟ್ಟರು. ನಾವು ಅಷ್ಟನ್ನು ಮಾಡಲು ಶಕ್ತರಿರುವೆವೆಂಬುದನ್ನು ಸಂದರ್ಭ ಬಿದ್ದಾಗ ಮಾಡಿ ತೋರಿಸಬೇಕು. ಆಂಥ ಸಂದರ್ಭವನ್ನು ಕೊಡಬೇಡವೆಂದು ನಾನು ದೇವರನ್ನು ಬೇಡಿಕೊಳ್ಳುತ್ತೇನೆ. ಇಷ್ಟೆಲ್ಲ ಬಗೆಯ ಕಷ್ಟ ಬಂದು ನಮ್ಮ ಅರ್ಹತೆಯು ರುಜುವಾಗುವ ಅವಶ್ಯವಿಲ್ಲ.

ಆತ್ಮ ಬಲಿದಾನ

ಪ್ರ. ನೀವು ನಿಮ್ಮ ಅರ್ಹತೆಯನ್ನು ಹೇಗೆ ವ್ಯಕ್ತ ಮಾಡುವಿರಿ? ನಿಮ್ಮ ತಲೆ ಬಡಿಸಿಕೊಂಡು ಹಾಗೆ ಸ್ಪಷ್ಟ ಮಾಡುವಿರಾ? ಮೊನ್ನೆ ಒಬ್ಬನು ನಿಮ್ಮ ತಂಡವೆಂದರೆ ಆತ್ಮಹತ್ಯೆ ಮಾಡುವ ತಂಡವೆಂದು ಹೇಳಿದ್ದ, ಅವನು ಹೇಳಿದ್ದು ಸರಿಯೆಂದು ನನಗೆ ಅನಿಸುವುದಿಲ್ಲ. ಆದರೆ ಆತ್ಮ ಬಲಿದಾನ ಎಂದು ಸುಲಿಗೆಗೆ ಗುರಿಯಾಗಿ ಪ್ರಾಣ ಕಳೆದುಕೊಳ್ಳುವವರಿಗೆ ಏನು ಲಾಭವಾದಂತಾಯಿತು? ಆತ್ಮ ಬಲಿದಾನಕ್ಕೆ ನೀವು ಜನರನ್ನು ಸಿದ್ಧ

ಉ. ನಿಮ್ಮ ಪ್ರಶ್ನೆಯನ್ನು ನಾನು ಬಹಳವಾಗಿ ಪ್ರೀತಿಸುವೆನು. ಆತ್ಮ ಬಲಿದಾನಕ್ಕೆ ನೀವು ನಿಜವಾಗಿಯೂ ಜನರನ್ನು ತರುವಿರಾ ಎಂಬ ಪ್ರಶ್ನೆಯನ್ನು ಕೇಳಿದಿರಿ. ಒಳ್ಳೆಯದು, ನೀವು ೧೯೩೦ ರಲ್ಲಿಯ ಉದಾಹರಣೆ ತಗೆದುಕೊಳ್ಳಿರಿ. ದರಶನದಲ್ಲಿ ಏನೇನಾಯಿತೆಂಬ ವಿಚಾರ ನಿಮ್ಮ ಮುಂದೆ ವೆಬ್ ಮಿಲ್ಲರ್ ಇವರ ಹೇಳಿಕೆಯನ್ನು ಇಡುತ್ತೇನೆ.

"ಅಧಿಕಾರಿಗಳ ಹುಕುಂ ಬರೊಡನೆ ಪೋಲಿಸರು ೨೦ ಮಂದಿ ಕೈಯಲ್ಲಿ ಲಾಠಿಗಳನ್ನು ಹಿಡಿದುಕೊಂಡು ಮುಂದೆ ಸಾಗಿದರು. ಕಬ್ಬಿಣದ ತುದಿ ಇರುವ ಲಾಠಿಯಿಂದ ಸ್ವಯಂಸೇವಕರ ತಲೆಗೆ ಹೊಡೆದರು. ಸ್ವಯಂಸೇವಕರಲ್ಲಿ ಒಬ್ಬನಾದರೂ ಕೈಯೆತ್ತಲಿಲ್ಲ. ಅವರು ಪೆಟ್ಟು ತಿಂದು ಉರುಳಿದರು. ತಲೆಬುರುಡೆಯ ಮೇಲೆ ಪೆಟ್ಟು ಬೀಳುವ ಸಪ್ಪಳವು ನಂತರ ನನಗೆ ಕೇಳಿಸುತ್ತಿತ್ತು. ಪ್ರತಿಯೊಂದು ಹೊಡೆತಕ್ಕೆ ಅಲ್ಲಿ ಆ ನೋಟವನ್ನು ನೋಡಲು ನಿಂತಿದ್ದ ಪ್ರೇಕ್ಷಕರು ಮರಮರನೆ ಮರುಗುತ್ತಿದ್ದರು. ಪೆಟ್ಟು ತಿಂದವರು 'ತಲೆ ಒಡೆಕೊಂಡು ಕೈ ಮುರಿದುಕೊಂಡು ಸ್ಮೃತಿ ತಪ್ಪಿ ಬೀಳುತಿದ್ದರು. ೨—೩ ನಿಮಿಷಗಳಲ್ಲಿ ನೆಲವು ಪೆಟ್ಟು ತಿಂದು ಉರುಳಿದ ಸ್ವಯಂಸೇವಕರಿಂದ ತುಂಬಿ ಹೋಗಿತ್ತು. ಅವರ ಉಬ್ಬಿದ ಗಾಯಗಳಿಂದ ರಕ್ತದಿಂದ ಬಿಳಿಯ ಬಟ್ಟೆ ಬಿಟ್ಟ ಮುತ್ತುಗದ ಗಿಡದಂತೆ ಕಾಣಿಸುತ್ತಿತ್ತು. ಸ್ವಯಂಸೇವಕರ ತಂಡವು ಒಂದರ ಹಿಂದೊಂದು ಬಂದು ಲಾಠಿ ಪೆಟ್ಟಿಗೆ ಬಲಿಯಾಯಿತು. ಪ್ರತಿಯೊಬ್ಬನಿಗೂ ಪೆಟ್ಟು ಬೀಳುವುದು, ಅವನು ಧರೆಗುರುಳುವುದು ಎಂದು ಗೊತ್ತಿದ್ದರೂ ಸ್ವಯಂಸೇವಕರಲ್ಲಿ ಒಬ್ಬನಾದರೂ ಅಂಜದೆ, ಅಳುಕದೆ ಶಾಂತರೀತಿಯಿಂದ ಎಲ್ಲರೂ ಮುಂದೆ ಬರುತ್ತಿದ್ದರು. ಅವರನ್ನು ಹುರಿದುಂಬಿಸುವುದಕ್ಕೆ ವೀರ ಕಹಳೆಗಳಿರಲಿಲ್ಲ. ಪೆಟ್ಟು ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಅವರು ಮಾಡಲಿಲ್ಲ. ಪೋಲೀಸರು ಮನಸ್ಸಿಗೆ ಕ್ರಮಬದ್ಧವಾಗಿ ಲಾಠಿಪ್ರಯೋಗ ಮಾಡುತ್ತ ಸಾಗಿದರು, ಅಲ್ಲಿ ಜಗಳವಿರಲಿಲ್ಲ, ಹೋರಾಟವಿರಲಿಲ್ಲ. ಬಿದ್ದ ಮೇಲೂ ಸೆಣಸಾಟವಿರಲಿಲ್ಲ. ಗಾಂಧೀಜಿಯವರ ಅನುಯಾಯಿಗಳು ಬಿದ್ದವರ ಕಡೆಗೆ ಲಕ್ಷ್ಯಕೊಡಲಿಲ್ಲ. ತಮ್ಮ ತಲೆ ಮೇಲಿರುವ ಪೋಲೀಸರ ಲಾಠಿಯ ಕಡೆಗೂ ಕಣ್ಣೆತ್ತಿ ನೋಡಲಿಲ್ಲ. ಒಬ್ಬರ ಮೇಲೊಬ್ಬರು ಬೀಳುತ್ತ ಜನರು ಬಿದ್ದಾಗ ಅವರು ಒದ್ದಾಡುತ್ತಿದ್ದರು. ಅವರ ಗಾಯಗಳಿಂದ ರಕ್ತವು ಹೊರಚಿಮ್ಮುತ್ತಿತ್ತು. ತಂಡ ತಂಡವಾಗಿ ಸ್ವಯಂಸೇವಕರು ಮುಂದೆ ಬಂದು ಕುಳಿತು ಲಾಠಿ ಪ್ರಯೋಗಕ್ಕೆ ಆಹುತಿಯಾದರು. ಸ್ಮೃತಿ ತಪ್ಪುವ ವರೆಗೆ ಪೆಟ್ಟು ತಿಂದವರೂ ಒಬ್ಬನಾದರೂ ಕೈಯೆತ್ತಲಿಲ್ಲ. ಪೋಲೀಸರು ಕೂತವರನ್ನು ಅಮಾನುಷರಂತೆ ಹೊಟ್ಟೆ ಮೇಲೆ ಹಾಗೂ ಕೆನ್ನೆಯ ಮೇಲೆ ತುಳಿದರು. ಕೂತವರನ್ನು ಕೈಹಿಡಿದು ಅಥವಾ ಕಾಲು ಹಿಡಿದು ಜಗ್ಗಿ ಕೆಲವು ಸಂದರ್ಭಗಳಲ್ಲಿ ನೂರು ಗಜಗಳ ವರೆಗೆ ಜಗ್ಗಿ ಕಂದಕಗಳಲ್ಲಿ ತೂರುತ್ತಿದ್ದರು. ಕೊನೆಗೆ ತಾತ್ಕಾಲಿಕ ಆಸ್ಪತ್ರೆಗೆ ನಾನು ಹೋಗಿ ಗಾಯಗೊಂಡವರನ್ನು ನೋಡಿದೆ. ಅವರನ್ನು ಸಾಲಾಗಿ ಮಳೆಗರಿಯಿಂದ ಮುಚ್ಚಿದ್ದ ಶಿಬಿರದಲ್ಲಿ ಮಲಗಿಸಿದ್ದರು. ಒಟ್ಟು ೩೨೦ ಮಂದಿ ಗಾಯಗೊಂಡಿದ್ದರು. ಅನೇಕರಿಗೆ ಹೊಟ್ಟೆ ಮೇಲೆ ಹಾಗು ಕೆನ್ನೆಗಳ ಮೇಲೆ ಒದೆತ ಬಿದ್ದುದರಿಂದ ಸ್ಮೃತಿ ತಪ್ಪಿತ್ತು. ಕೆಲವರ ರಟ್ಟೆಗಳು ಒಡೆದಿದ್ದವು."

ಇಷ್ಟೆಲ್ಲ ಸಾಕ್ಷಿಗಳು ದೊರೆತರೂ ಆತ್ಮ ಬಲಿದಾನ ಮಾಡಲು ಜನರು ಸಿಗುವುದಿಲ್ಲವೆಂದು ತಿಳಿಯಬಹುದೇ? ಅವರನ್ನು ನಡೆಸಲು, ಮಹಾತ್ಮಾ ಗಾಂಧಿಯವರಾಗಲಿ ಸರದಾರ ಪಟೇಲರಾಗಲಿ, ಪಂಡಿತ ಜವಾಹರಲಾಲರಾಗಲಿ ಅಲ್ಲಿ ಇದ್ದಿಲ್ಲವೆಂಬುದನ್ನು ನೀವು ಮರೆಯಬಾರದು. ಅವರೆಲ್ಲ ಸಾಮಾನ್ಯ ವ್ಯಕ್ತಿಗಳಿದ್ದರೂ, ಅತಿಶಯವಾದ ಧೈರ್ಯವನ್ನು ಶಾಂತಿ ಸಂಗ್ರಾಮದಲ್ಲಿ ತೋರಿಸಿ ನಮ್ಮ ಇತಿಹಾಸದಲ್ಲಿ ನಮ್ಮ ಗೌರವವನ್ನು ಹೆಚ್ಚಿಸಿ ಹೋಗಿರುವರು. ಅದು ಪರಂಪರಾಗತವಾಗಿ ನಮ್ಮವರಲ್ಲಿ ಉಳಿಯುವುದು. ಇವರ ಧೈರ್ಯಾತಿಶಯದ ಹೋರಾಟವೇ ಅರ್ವಿನರ ಕಣ್ಣು ತೆರೆಸಿತು. ಅಂತೆಯೇ ಲಾರ್ಡ ಅರ್ವಿನರು ಸತ್ಯಾಗ್ರಹಿಗಳೊಡನೆ ಒಪ್ಪಂದವಾದ ಕೊಂಡರು. ಕೊಟ್ಟ ಸಂಬಳಕ್ಕೆ ದುಡಿಯುವ ಪೋಲೀಸರು ಮಾತ್ರ ತಮ್ಮ ಭೀಷಣ ಕೃತ್ಯಗಳನ್ನು ಸಾಗಿಸಿದರು. ಆದಕಾರಣ ಗೂಂಡರನ್ನು ನಾವು ಶಾಂತ ರೀತಿಯಿಂದ ಎದುರಿಸಿದರೆ ಅವರ ಹೃದಯ ಪರಿವರ್ತನೆಯಾಗುವುದರಲ್ಲಿ ಅನುಮಾನವಿಲ್ಲ. ಈ ಸಮಸ್ಯೆಯು ಆಗಲೆ ಬಗೆಹರಿಯುವುದು.

ಪ್ರ. ಈ ಸಮಸ್ಯೆಯು ಮನುಷ್ಯ ಬುದ್ಧಿಗೆ ಮೀರಿದ್ದು ಎಂದು ನೀವು ಹೇಳುವುದೇಕೆ?

ಉ. ಹಾಗೆ ಹೇಳಲು ಎರಡೇ ಕಾರಣಗಳಿವೆ. ೧೯೩೦ರಲ್ಲಿ ನಾವು ಕೇವಲ ಸರಕಾರದ ವಿರುದ್ಧ, ಅದೂ ಶಾಂತಿಕಾಲದಲ್ಲಿ, ಹೋರಾಟ ನಡೆಸುವಂತಾಗಿತ್ತು. ಈಗ ಸೋಲು ಗೆಲುವುಗಳ ನಿಶ್ಚಯವಿಲ್ಲದ ಭೀಕರವಾದ ಯುದ್ಧದಲ್ಲಿ ಸರಕಾರವು ಮಗ್ನವಾಗಿರುವಾಗ ಅದರ ವಿರುದ್ಧ ಹಾಗು ಇನ್ನಿತರ ಶಕ್ತಿಗಳ ವಿರುದ್ಧ ನಾವು ಹೋರಾಡಬೇಕಾಗುವುದು.

ಪ್ರ. ಈ ವಿಷಯದಲ್ಲಿ ಸರಕಾರದ ಸಂಬಂಧವನ್ನು ಹೇಗೆ ತರುತ್ತೀರಿ?

ಉ. ಬೇಡೋಪಾಯದಿಂದ ಬ್ರಿಟಿಷರು ಆಳುವವರು. ಅವರ ಭೇದ ನೀತಿಯ ಮುಂದೆ ಮಾನವ ಬುದ್ಧಿಯು ಕುಂಠಿತವಾಗುವುದು. ಬುದ್ಧಿಯನ್ನು ಗೆಲಿಸಿದರೂ ಮನುಷ್ಯನಲ್ಲಿ ದೇವರು ತುಂಬಿರುವ ಧೈರ್ಯವನ್ನು ಕುಗ್ಗಿಸುವುದು ಮಾತ್ರ ಅದಕ್ಕೆ ಶಕ್ಯವಾಗಲಾರದು.

ಮುನ್ಶಿಯವರ ರಾಜಿನಾಮೆ

ಪ್ರ. ಗಾಂಧಿಜಿಯವರು ಕೇವಲ ಅಹಿಂಸೆಯಲ್ಲಿಯೇ ವಿಶ್ವಾಸವನ್ನಿಡಬೇಕೆಂದು ಏಕೆ ಆಗ್ರಹ ತೊಡಬೇಕು? ಹಿಂಸಾತ್ಮಕ ಪ್ರತಿಭಟನೆಯನ್ನು ಕುರಿತು ಅವರು ಮಾತಾಡಬಾರದೇಕೆ? ಆ ಪ್ರಶ್ನೆಯ ಸಂಬಂಧದಲ್ಲಿ ಮುನ್ಶಿಯಂಥ ವ್ಯಕ್ತಿಗಳನ್ನು ಅವರು ಕಾಂಗ್ರೆಸ್ಸಿನಿಂದ ಹೊರಗೆ ಹೋಗಗೊಡಬಾರದಾಗಿತ್ತು.

ಉ. ಗಾಂಧಿಜಿಯವರ ಅಗ್ರಹದ ಬಗ್ಗೆ ತಪ್ಪು ತಿಳುವಳಿಕೆ ಮಾಡುವುದು ಬೇಡ. ಯಾರಿಗೆ ಅಹಿಂಸೆಯಲ್ಲಿ ವಿಶ್ವಾಸವಿಲ್ಲವೋ ಅಂಥವರು ಕಾಂಗ್ರೆಸಿನೊಳಗೆ ಉಳಿದು ತಮ್ಮ ಭಾವನೆಯನ್ನು ಅದುಮಿಕೊಂಡು ತಟಸ್ಥರಿರುವರೋ ಅಂದವರಿಗೆ ಅವರು ಮಾಡಿದ ಸೂಚನ ಅಹಿಂಸೆಯೆಂಬುದು ಇದಕ್ಕೆ ತೀರಾ ವಿರುದ್ಧವಿದೆ.

ಪ್ರ. ಅಹಿಂಸೆ ಮತ್ತು ಹಿಂಸೆಗಳು ಪರಸ್ಪರ ಹೋರಾಟ ನಡೆಸಿ ಒಂದನ್ನೊಂದು ಕುಗ್ಗಿಸಲೆತ್ನಿಸುವವು ಎಂದು ಭಾಸವಾಗುವುದಿಲ್ಲವೇ?

ಉ. ನೀವು ಹಾಗೆ ಹೇಳಬಹುದು. ಮಹತ್ವ ಮತ್ತು ಯಶಸ್ಸು ಅಹಿಂಸೆಗೆ ಮೀಸಲಾಗಿದೆ. ಹಿಂಸೆಯಲ್ಲಿ ವಿಶ್ವಾಸವುಳ್ಳವರು ಮುಂದೆ ಕಣ್ತೆರೆದು, ಅಹಿಂಸೆಯೇ ಶ್ರೇಷ್ಠವೆಂದು ಭಾವಿಸುವವರಿದ್ದಾರೆ. ಮುನ್ಶಿಯವರಿಗೂ ಅನ್ವಯಿಸುವುದು. ಮುನ್ಶಿಯವರ ರಾಜಿನಾಮೆಯೆಂಬುದು ಅವರ ಮನಸಾಕ್ಷಿಯ ಪ್ರಶ್ನೆ.

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906. THE CANARA BANKING CORPORATION, LIMITED

ವಾರದ ಕತೆ:

ರಾಧೆ ಪತ್ರ ಬರೆದಳು.....

ಮನ್ಮಥನಾಥನು ಕಚೇರಿಗೆ ಹೊರಡುವುದರಲ್ಲಿದ್ದನು. ಆ ಸಮಯದಲ್ಲಿ ಪೋಸ್ಟ್ ಮೇನನು ಬಾಗಿಲನ್ನು ತಟ್ಟಿ 'ಬಾಬು ಪತ್ರವಿದೆ' ಎಂದನು. ಬಾಗಿಲನ್ನು ತೆರೆದು ಪತ್ರವನ್ನು ತೆಗೆದುಕೊಳ್ಳುವ ಸಮಯದಲ್ಲಿ ಅವನ ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆಗಳೆದ್ದು ಮಹಾ ಗೊಂದಲವನ್ನೆಬ್ಬಿಸಿದುವು. ಏಕೆಂದರೆ ಅವನು ತನ್ನ ಹುಟ್ಟೂರನ್ನು ಬಿಟ್ಟು ಸೀತಾಪುರದಲ್ಲಿ ವಾಸವಾಗಿದ್ದಂದಿನಿಂದ ಅವನಿಗೆ ಇದುವರೆಗೆ ಯಾರಿಂದಲೂ ಪತ್ರಗಳು ಬಂದಿರಲಿಲ್ಲ. ಇನ್ನು ಬರುವ ಹಾಗೂ ಇರಲಿಲ್ಲ. ಮನ್ಮಥನಾಥನು ಪತ್ರವನ್ನೊಡೆದು ಓದಹತ್ತಿದನು. ಓದುತ್ತಿದ್ದಂತೆ ಅವನ ಮುಖಮಂಡಲದಲ್ಲಿ ಬದಲಾವಣೆಗಳು ಕಾಣಿಸಿಕೊಂಡವು. ಅವನ ಮುಖವು ಯಾವಾಗಲೂ ಗಂಭೀರವಾಗಿರುತ್ತಿದ್ದರೆ ಅದೀಗ ಮುಗುಳು ನಗೆಯಿಂದಾವೃತವಾಗಿದೆ. ಪತ್ರದಲ್ಲಿ ಹೀಗಿತ್ತು.

ಸವಿನಯ ನಿವೇದನ—

ಲಖನೌ ನಗರಕ್ಕೆ ಅವರನ್ನು ವರ್ಗಾಯಿಸಿದ್ದಾರೆ. ಸೀತಾಪುರದ ಮಾರ್ಗವಾಗಿಯೇ ನಾವು ಹೋಗುವವರಿದ್ದೇವೆ. ನಮ್ಮ ರೈಲುಗಾಡಿಯು ಸಂಜೆ ೬ಕ್ಕೆ ಸೀತಾಪುರಕ್ಕೆ ತಲಪುವುದು. ಅಲ್ಲಿ ಅದು ಬರೇ ಹತ್ತು ನಿಮಿಷ ಮಾತ್ರ ನಿಲ್ಲುತ್ತದೆ. ತಾವು ದಯವಿಟ್ಟು ಸ್ಟೇಶನಿಗೆ ಬರುವ ಕೃಪೆಮಾಡಿದರೆ ನನಗೆ ಬಹಳ ಆನಂದವಾಗುವುದು. ಬಹಳ ಸಮಯದಿಂದ ನನಗೆ ನಿಮ್ಮ ದರ್ಶನವಾಗಿಲ್ಲ. ನಿಮ್ಮನ್ನು ನೋಡಬೇಕೆಂಬ ತೀವ್ರವಾದ ಲಾಲಸೆಯಿದೆ. ತಾವು ಬರುತ್ತೀರೋ ಇಲ್ಲವೋ? ತಾವು ನನ್ನನ್ನು ಮರೆಯಲಾರಿರೆಂಬ ಬಲವಾದ ನಂಬಿಕೆಯಿದೆ.

ರಾಧಾ.

ಮನ್ಮಥನಾಥನು ನಾಲ್ಕನೇ ಬಾರಿ ಆ ಪತ್ರವನ್ನು ಓದಿಮುಗಿಸಿದನು. ಅದನ್ನು ಎಷ್ಟು ಬಾರಿ ಓದಿದರೂ ಅವನಿಗೆ ಬೇಸರವಾಗುತ್ತಿರಲಿಲ್ಲ. ಏಕೆಂದರೆ ಕಳೆದ ಹತ್ತು ವರ್ಷಗಳಿಂದಲೂ ಅವನು ರಾಧೆಯ ವೃತ್ತಾಂತವನ್ನೇ ಕೇಳಿರಲಿಲ್ಲ. ಅಷ್ಟೇ ಅಲ್ಲ. ಹಗಲಿರುಳೂ ಅವಳನ್ನೇ ಧ್ಯಾನಿಸುತ್ತಿದ್ದನು. ರಾಧೆಯ ಆಗಮನ ವಾರ್ತೆಯಿಂದ ಅವನು ಸಂಭ್ರಮಗೊಂಡನು!

ಮನ್ಮಥನಾಥನೂ ರಾಧೆಯೂ ಒಂದೇ ಊರಿನವರು. ಅವಳ ವಿವಾಹಾನಂತರ ಅವನು ಅವಳನ್ನು ಕಂಡಿರಲಿಲ್ಲ. ಅವಳ ವಿವಾಹಕ್ಕೆ ಮೊದಲು ರಾಧೆಯು ಮನ್ಮಥನಾಥನ ಆರಾಧ್ಯ ದೇವತೆಯಾಗಿದ್ದಳು. ಅವರಿಬ್ಬರ ವಿವಾಹವಾಗುವ ಸಂಭವವೂ ಇತ್ತು. ಆದರೆ ದುರ್ದೈವವಶಾತ್ ಅದು ತಪ್ಪಿ ಅವಳು ಬೇರೊಬ್ಬನನ್ನು ವರಿಸಬೇಕಾಯಿತು. ಈ ಪ್ರಸಂಗದಿಂದ ಬೇಸರವಾದುದರಿಂದಲೇ ಮನ್ಮಥನಾಥನು ಊರನ್ನು ತ್ಯಜಿಸಿ ಸೀತಾಪುರಕ್ಕೆ ಬಂದನು. ಇಲ್ಲಿಗೆ ಬಂದು ನೆಲೆಸಿದರೂ ರಾಧೆಯನ್ನು ಮರೆಯಲು ಅವನಿಂದಾಗಲಿಲ್ಲ.

ಭಗವಂತನ ಹೆಸರಿನ ಮಹಾಶಕ್ತಿಯೊಂದಿರುತ್ತಿದ್ದಲ್ಲವಾದರೆ ಈ ಸಂಸಾರ ಚಕ್ರವು ಸರಾಗವಾಗಿ ನಡೆಯುತ್ತಲೇ ಇರಲಿಲ್ಲವೆನ್ನಬಹುದು. ಈ ಶಕ್ತಿಯೇ ಮನ್ಮಥನಾಥನನ್ನು ಇಂದಿನ ವರೆಗೆ ಉಳಿಸಿತ್ತು. ಅವನಿಗೆ ಆ ಪರಮಾತ್ಮನಲ್ಲಿ ಅಗಾಧವಾದ ವಿಶ್ವಾಸವಿತ್ತು. ಅವನ ರಾಧೆಯ ವಿವಾಹವು ಎಂದು ಬೇರೊಬ್ಬನೊಡನೆ ನಡೆಯಿತೋ ಅಂದು ಅವನ ಸ್ವಪ್ನ ಸೌಧದ ಮೇಲೆ ವಜ್ರಪಾತವಾಯಿತು. ಪರಮಾತ್ಮನಿಗೆ ತನ್ನ ಮತ್ತು ರಾಧೆಯ ವಿವಾಹವಾಗುವ ಇಚ್ಛೆಯಿಲ್ಲದಿರುವಾಗ ನಾನಾದರೂ ಏನು ಮಾಡಲಿ? ಎಂದೆಣಿಸಿದನಲ್ಲದೆ ಪರಮಾತ್ಮನನ್ನು ದೂರಲಿಲ್ಲ. 'ಕ್ಷುದ್ರಬುದ್ಧಿಯ ಮಾನವನಿಗೆ ಪರಮಾತ್ಮನ ವಿಧಾನಗಳ ನಿಗೂಢವಾದ ಅರ್ಥವು ಆಗಲಾರದು. ಅವನಿಗೆ ಜಗನ್ನಿಯಾಮಕನ ಕೆಲಸಗಳ ಸಮಾಲೋಚನೆ ಮಾಡುವ ಅಧಿಕಾರವಿಲ್ಲ' ಎಂದವನು ಮಿತ್ರರೊಡನೆ ಹೇಳುತ್ತಿದ್ದನು.

ಯಾವ ವ್ಯಕ್ತಿಯೊಡನೆ ರಾಧೆಯ ವಿವಾಹವಾಯಿತೋ ಅವನು ಎಲ್ಲಾ ವಿಷಯಗಳಲ್ಲೂ ರಾಧೆಗೆ ಅನುರೂಪನಾಗಿದ್ದನು. ದೊಡ್ಡ ಸರಕಾರಿ ಹುದ್ದೆಯಲ್ಲಿದ್ದನು. ನಿಜವಾಗಿ ನೋಡುವುದಾದರೆ ರಾಧೆಯು ಬಹು ಸುಖಿಯಾಗಿದ್ದಳು. ಆದರೆ ಮನ್ಮಥನಾಥನು ಮಾತ್ರ ರಾಧೆಯು ಅಸಾಧ್ಯವಾದ ಕಷ್ಟದಲ್ಲಿರುವಳೆಂದೂ ತನ್ನನ್ನು ವರಿಸಿದ್ದರೆ ಅವಳು ಸುಖಿಯಾಗಿರುತ್ತಿದ್ದಳೆಂದೂ ಭಾವಿಸುವನು! ಈ ವಿಚಾರವು ಅವನ ಮನಸ್ಸಿಗೆ ಬರುತ್ತಲೇ ಅವನು ಅಭಿಮಾನಪಡುವನು. ಈ ಅಭಿಮಾನದಿಂದಲೇ ಅವನು ಇದುವರೆಗೆ ಸೀತಾಪುರದಲ್ಲಿ ಜೀವಿಸಿದ್ದನು.

ಮತ್ತೊಮ್ಮೆ ಅವನು ರಾಧೆಯ ಪತ್ರವನ್ನು ಬಿಡಿಸಿ ಓದಿದನು.

ಬಹುಕಾಲದ ಅವಧಿಯ ನಂತರ ಮಿಲನವು ಎಷ್ಟು ಮಧುರವಾಗಿದೆ! ಮನ್ಮಥನಾಥನು ಇದರ ಕಲ್ಪನೆಯನ್ನು ಮಾಡಿದನು. ಅವನ ಮನಸ್ಸಿನಲ್ಲಿ ಈ ಪ್ರಶ್ನೆಯು ಉಪಸ್ಥಿತವಾಯಿತು. 'ರಾಧೆಯು ಹತ್ತು ನಿಮಿಷಗಳ ವರೆಗೆ ಮಾತ್ರ ನನ್ನೊಡನೆ ಮಾತನಾಡುವಳು. ಈ ಅಲ್ಪ ಅವಧಿಯಲ್ಲಿ ಆ ರೈಲ್ವೆ ಸ್ಟೇಶನ್ನಿನ ಕೋಲಾಹಲದಲ್ಲಿ ನಾನು ಯಾವ ಯಾವ ಮಾತುಗಳನ್ನಾಡಬೇಕು?' ಅವಳ ಕುಶಲ ಕ್ಷೇಮಗಳನ್ನು ಕೇಳುವಾಗ ಆ ಅಲ್ಪಾವಧಿ ಮೀರುವುದು. ಇನ್ನು ಈ ಸಂಧಿಯು ಕಳೆದು ಹೋದರೆ ಮತ್ತೆ ಅವಳು ನನಗೆ ಕಾಣಸಿಗುವುದು ಅಸಾಧ್ಯವಾದ ಸಂಗತಿ. ಅವಳೊಡನೆ ಅವಳ ಪತಿರಾಜನೂ ಇರುವನು...ಇವೆಲ್ಲ ವಿಷಯಗಳು ಅವನ ಮನೋಸಾಮ್ರಾಜ್ಯದಲ್ಲಿ ಕೋಲಾಹಲವನ್ನೆಬ್ಬಿಸಿದುವು. ಪುನಃ ಅವನು ರಾಧೆಯ ಪತ್ರವನ್ನೋದಿದನು.

ಅವನ ಮನಸ್ಸಿನಲ್ಲೊಂದು ಅಭೂತಪೂರ್ವವಾದ ಸಂಗ್ರಾಮವು ನಡೆಯುತ್ತಿತ್ತು. ಕಚೇರಿಗೆ ಒಂದು ದಿನದ ರಜೆಯ ಅರ್ಜಿಯನ್ನು ಬರೆದು ಕಳುಹಿಸಿ, ಅವನು ಇಡೀ ದಿವಸ ದುರ್ದಮನೀಯ ಭಾವನೆಗಳಿಂದಾವೃತನಾಗಿ ಪೇಟೆಯಲ್ಲಿ ಸುತ್ತಾಡತೊಡಗಿದನು. ಸೀತಾಫಲವು ರಾಧೆಯ ಪ್ರಿಯವಸ್ತುವಾಗಿತ್ತು. ಎಲ್ಲಾ ಮಾರ್ಕೆಟುಗಳನ್ನು ಶೋಧಿಸಿದರೂ ಅವನಿಗೆ ಸೀತಾಫಲವು ಸಿಗಲಿಲ್ಲ. ರಾಧೆಗೆ ಬೇರಾವ ವಸ್ತುವನ್ನು ಕಾಣಿಕೆಯಾಗಿ ಕೊಡುವುದೆಂದು ನಿಶ್ಚಯಿಸಲು ಅವನಿಂದಾಗಲಿಲ್ಲ.

ಅವನ ಉಡುಪು ಕೊಳಕಾಗಿತ್ತು. ಇಂತಹ ಕೊಳೆಯ ಉಡುಪನ್ನು ಧರಿಸಿ ರಾಧೆಯ ಭೇಟಿಗೆ ಹೋಗುವುದು ಶಿಷ್ಟಾಚಾರಕ್ಕೆ ವಿರುದ್ಧವಾದುದು. ಆದುದರಿಂದ ಅವನು ಮನೆಗೆ ಹಿಂತಿರುಗಿ ಒಳ್ಳೆಯ ಉಡುಪುಗಳನ್ನುಟ್ಟು ಅಲಂಕಾರವಾಗಿ ಬಂದನು.

ಮಧ್ಯಾಹ್ನವು ಕಳೆದು, ನಾಲ್ಕು ಗಂಟೆ ಹೊಡೆಯಿತು. ಒಮ್ಮೆಲೇ ಅವನಿಗೆ ನೆನಪಾಯಿತು, ರಾಧೆಗೆ ಹೂವುಗಳೆಂದರೆ ಬಹಳ ಇಷ್ಟವೆಂದು. ಕೂಡಲೇ ಅವನು ಹೂವಿನ ಮಾರ್ಕೆಟಿಗೆ ನಡೆದನು. ಅಲ್ಲಿ ನಾನಾ ವಿಧದ ಹೂವುಗಳನ್ನು ಪಡೆದು ಅವುಗಳನ್ನೊಂದು ಸುಂದರವಾದ ಬುಟ್ಟಿಯಲ್ಲಿ ತುಂಬಿಸಿದನು. ಅನಂತರ ಅವನು ತನ್ನ ರಿಸ್ಟ್‌ವಾಚಿನ ಕಡೆ ಒಮ್ಮೆ ದೃಷ್ಟಿ ಬೀರಿದನು. ನಾಲ್ಕುವರೆ ಗಂಟೆಯಾಗಿತ್ತು. ರೈಲುಗಾಡಿಯು ಬರಲು ಇನ್ನೂ ೧½ ತಾಸು ಸಮಯವಿತ್ತು. ಸೀತಾಫಲದ ಅಂಗಡಿಯವನು ಅಲ್ಲಿಂದ ಎರಡು ಫರ್ಲಾಂಗು ದೂರದಲ್ಲಿರುವ ಒಂದು ಸಣ್ಣ ಗಲ್ಲಿಯಲ್ಲಿದ್ದನು. ೫ ಗಂಟೆಗೆ ಸೀತಾಫಲಗಳನ್ನು ಖಂಡಿತವಾಗಿ ಒದಗಿಸಿಕೊಡುವೆನೆಂದು ಅವನು ಮನ್ಮಥನಾಥನಿಗೆ ತಿಳಿಸಿದ್ದನು. ಮನ್ಮಥನಾಥನು ಆ ಗಲ್ಲಿಗೆ ವೇಗವಾಗಿ ಧಾವಿಸಿ ನಡೆದನು. ರಾಧೆಗಾಗಿ ಅವನು ಏನನ್ನು ಬೇಕಾದರೂ ಮಾಡಲು ಸಿದ್ಧನು!

ಯಾವಾಗ ಮನ್ಮಥನಾಥನು ರೈಲ್ವೆ ಸ್ಟೇಶನಿಗೆ ತಲಪಿದನೋ ಆಗ ಅವನ ಮನಸ್ಸು ಹರ್ಷಸಾಮ್ರಾಜ್ಯದಲ್ಲಿ ವಿಹರಿಸಲಾರಂಭಿಸಿತು. ಅವನ ಬಲಕ್ಕೈಯಲ್ಲೊಂದು ಬಾಸ್ಕೆಟು. ಅದರಲ್ಲಿ ತುಂಬ ಸೀತಾಫಲಗಳು. ಎಡಕ್ಕೈಯಲ್ಲೊಂದು ಬುಟ್ಟಿ. ಅದರಲ್ಲಿ ತುಂಬಾ ಹೂಗಳು! ಅವುಗಳನ್ನು ಹಿಡಿದುಕೊಂಡು ಅವನು ಹತ್ತು ನಿಮಿಷಗಳನ್ನು ಹೇಗೋ ಕಳೆದನು. ತಾನೆಲ್ಲಿರುವೆನು? ಏನು ಮಾಡುತ್ತಿದ್ದೇನೆ? ಎಂಬುದು ಅವನಿಗೆ ಅರಿಯದು. ಪ್ರತಿಕ್ಷಣವನ್ನೂ ಅವನು ಯುಗಯುಗಗಳಂತೆ ಕಳೆದನು. ರೈಲು ಗಾಡಿಯು ಇಂದು ಬೇಕಂತಲೇ ಎಂಬಂತೆ ಇನ್ನೂ ಬಾರದಿದ್ದುದಕ್ಕಾಗಿ ಅವನು ರೈಲ್ವೇ ಕಂಪೆನಿಯನ್ನೇ ದೂಷಿಸಿದನು. ಅಂತೂ ಪ್ರೇಕ್ಷಕರಿಗೆ ಅವನೊಬ್ಬ ಹುಚ್ಚನಾಗಿದ್ದನು.

ಆದರೆ ಸ್ವಲ್ಪ ಸಮಯದ ನಂತರ ಅವನ ಹೃದಯದಲ್ಲಿ ಒಂದು ವೇದನಾಮಯ ವಿಚಾರವು ಮೆಲ್ಲನೆ ಸುಳಿಯಲಾರಂಭಿಸಿತು. ಅವನ ಎದೆಯು ಢಡಢಡ ಹಾರಹತ್ತಿತು. ಎಷ್ಟು ಸಮಯದಲ್ಲಿ ರೈಲುಗಾಡಿಯು ಬಂದೀತು? ಎಂದವನು ತನ್ನ ಮನಸ್ಸಿಗೆ ಪ್ರಶ್ನೆಹಾಕಿದನು. ಸಮೀಪದಲ್ಲೊಬ್ಬ ರೈಲ್ವೆ ಕರ್ಮಚಾರಿಯು ನಿಂತಿದ್ದನು. ಮನ್ಮಥನಾಥನು ಅವನೊಡನೆ ಕೇಳಿದನು. 'ಲಖನೌ ನಗರಕ್ಕೆ ಹೋಗುವ ಗಾಡಿಯು ಬರಲು ಎಷ್ಟು ಸಮಯವಿದೆ?'

[೧೨ನೆಯ ಪುಟವನ್ನು ನೋಡಿ]

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE. ESTD. 1906 CANARA BANK LIMITED

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಾ|| ವಿಟ್ಠಲ ಶೆಟ್ರ ಸತ್ಯಾಗ್ರಹ

ತಾ. 11ನೇ ಶುಕ್ರವಾರ 10 ಘಂಟೆಗೆ ಸರಿಯಾಗಿ ಜನಪ್ರೀತ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಡಾ| ಕೆ. ವಿಟ್ಠಲ ಶೆಟ್ಟರು, ನೆರೆದಿದ್ದ 2000 ಮಿಕ್ಕಿದ ಜನಸಂದಣಿಯ ಮುಂದೆ ಸತ್ಯಾಗ್ರಹವನ್ನಾಚರಿಸಿದರು. ಮಂಗಳೂರಿನ ಜಿಲ್ಲಾ ಬೋರ್ಡ್ ಆಫೀಸಿನ ಮುಂದುಗಡೆ ಮೈದಾನಿನಲ್ಲಿ ರಾಷ್ಟ್ರಧ್ವಜಸ್ಥಂಭವು ಸ್ಥಾಪಿಸಲ್ಪಟ್ಟಿತ್ತು, ಜಿಲ್ಲೆಯ ಪ್ರಮುಖರೂ, ನಗರದ ಅನೇಕ ಮಹನೀಯರೂ ಕಾಂಗ್ರೆಸ್ ಕೆಲಸಗಾರರೂ, ಜಿಲ್ಲಾ ಬೋರ್ಡಿನ ನೌಕರರೂ, ವಿದ್ಯಾರ್ಥಿಗಳೂ, ಸತ್ಯಾಗ್ರಹ ನಡೆಯುವುದಕ್ಕಿಂತ ಎಷ್ಟೋ ಮುಂಚಿತವಾಗಿ ಕಾದಿದ್ದರು. 9.55 ಘಂಟೆಗೆ ಡಾ| ಶೆಟ್ಟರು ಮೈದಾನಿಗೆ ಬಂದರು. ಶ್ರೀ ಕೆ. ಈಶ್ವರ ಎಂ. ಎಲ್. ಎ. ಯವರು ರಾಷ್ಟ್ರಧ್ವಜವನ್ನೇರಿಸಿದರು. ಡಾ| ಶೆಟ್ಟರು ತಾವು ಭಾಷಣಮಾಡುವುದಿಲ್ಲವೆಂದು ಗಾಂಧಿಜಿಯವರ ಹೇಳಿಕೆಯಂತೆ ಯುದ್ಧ ವಿರುದ್ಧ ಘೋಷಣೆಯನ್ನಷ್ಟೆ ಮಾಡುವೆನೆಂದೂ ಹೇಳಿ ಎರಡು ಬಾರಿ ಇಂಗ್ಲಿಷ್ ಕನ್ನಡ ಭಾಷೆಗಳಲ್ಲಿ ಯುದ್ಧವಿರುದ್ಧ ಘೋಷಣೆಯನ್ನೊದರು. ಕೂಡಲೇ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಅಣ್ಣಪ್ಪನವರು ಅವರನ್ನು ಬಂಧಿಸಿ ಕೊಂಡೊಯ್ದರು.

ಹಲವರು ಪುಷ್ಪಹಾರಾದಿಗಳನ್ನು ಅರ್ಪಿಸಿ ಡಾ| ಶೆಟ್ಟರಲ್ಲಿ ತಮಗಿದ್ದ ಅಭಿಮಾನ ಗೌರವಗಳನ್ನು ಪ್ರದರ್ಶಿಸಿದರು. ಡಾ. ಶೆಟ್ಟರ ವಿಚಾರಣೆಯು ಅಂದೇ ಡಿವಿಜನಲ್ ಮೆಜಿಸ್ಟ್ರೇಟ್, ಶ್ರೀ ಕೆ. ಕೃಷ್ಣಯ್ಯನವರಿರದ, ಅವರ ಗುರುಪುರ ಕ್ಯಾಂಪಿನಲ್ಲಿ ನಡೆಯಿತು. ಡಾ. ಶೆಟ್ಟರಿಗೆ ಹತ್ತು ವಾರಗಳ ಸಾದಾ ಸಜೆಯೂ 250 ರೂಪಾಯಿಗಳ ಜುಲ್ಮಾನೆಯೂ ವಿಧಿಸಲಾಯಿತು. 'ಎ' ಕ್ಲಾಸ್ ಕೊಡಲಾಗಿದೆ. ಇವರನ್ನು ಮರುದಿನದ ಮೈಲ್ ಗಾಡಿಯಲ್ಲಿ ಕಣ್ಣಾನೂರು ಜೈಲಿಗೆ ಕೊಂಡೊಯ್ದಿದ್ದಾರೆ.

ಶ್ರೀ. ಶ್ರೀನಿವಾಸ ಮಲ್ಯರ ಅಸೌಖ್ಯ

ಸತ್ಯಾಗ್ರಹ ಮಾಡಿ ತ್ರಿಚಿನಾಪಳ್ಳಿ ಸೆರೆಮನೆಯಲ್ಲಿರುವ ಶ್ರೀ. ಶ್ರೀನಿವಾಸ ಮಲ್ಯರು ಅಸೌಖ್ಯದಿಂದಿದ್ದು, ಅಲ್ಲಿನ ಆಸ್ಪತ್ರೆಯಲ್ಲಿ ಓಪರೇಶನ್ ಆಗಿದೆಯೆಂದೂ, ಈಗ ಅವರ ಶರೀರ ಪ್ರಕೃತಿ ಸುಧಾರಿಸುತ್ತಿರುವುದೆಂದೂ ತಿಳಿದಿದೆ.

ಶ್ರೀ. ಪೆನಾರ್ಂಡಿಸರ ಸತ್ಯಾಗ್ರಹ

ಶಿರ್ವದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಶ್ರೀ. ಎಂ. ಸಿ. ಪೆನಾರ್ಂಡಿಸರು ತಾ ೧೧ರಂದು ಬೆಳಿಗ್ಗೆ ಶಿರ್ವದಲ್ಲಿ ಯುದ್ಧವಿರುದ್ಧ ಘೋಷಿಸಿ ಸತ್ಯಾಗ್ರಹ ಮಾಡಿದರು. ಸಾಂಬಾ ಜನಸಂದಣಿ ಸೇರಿತ್ತು. ಅನೇಕರು ಪುಷ್ಪಹಾರಾದಿಗಳಿಂದ ಗೌರವಿಸಿದರು. ಯುದ್ಧ ವಿರುದ್ಧ ಘೋಷಿಸಿದ ಕೂಡಲೇ ಅವರನ್ನು ದಸ್ತಗಿರಿ ಮಾಡಲಾಯಿತು. [illegible]ದಲ್ಲಿ ಅವರ ವಿಚಾರಣೆ ನಡೆದು ೩ ತಿಂಗಳ ಕಠಿನ ಶಿಕ್ಷೆ ಮತ್ತು ೫೦ ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಹೆಚ್ಚಿನ ಶಿಕ್ಷೆ ವಿಧಿಸಲಾಗಿದೆ. ಇವರಿಗೆ ಬಿ. ಕ್ಲಾಸು ಕೊಟ್ಟಿರುವರು.

ಶ್ರೀ. ಅಳ್ವೆ ಗೋವಿಂದ ಪೈಗಳ ಬಿಡುಗಡೆ

ಸತ್ಯಾಗ್ರಹ ಹೂಡಿ ಭಟ್ಕಳದಲ್ಲಿ ಬಂಧಿತರಾಗಿ ಹಿಂಡಲ್ಗಿ ಜೈಲಿನಲ್ಲಿದ್ದ ಶ್ರೀ. ಅಳ್ವೆ ಗೋವಿಂದ ಪೈಗಳು, ಅವರ ತಂದೆಯವರು ನಿಧನ ಹೊಂದಿದ ನಿಮಿತ್ತ, ಬಿಡುಗಡೆ ಮಾಡಲ್ಪಟ್ಟು ಮಂಗಳೂರಿಗೆ ಬಂದಿರುತ್ತಾರೆ.

ಶ್ರೀ ಸುಬ್ಬಣ್ಣ ಶೆಟ್ಟರ ಭಾಷಣ

ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ಬಂಧಮುಕ್ತರಾಗಿ ಬಂದಾಗ ಕಾಂಗ್ರೆಸ್ ಕೆಲಸಗಾರರು ಶ್ರೀ ಯುತರ ಬಂಧುಮಿತ್ರರೂ ಅವರನ್ನು ಕುಂದಾಪುರದಲ್ಲಿ ಇದಿರುಗೊಂಡರು. ಆ ದಿನ ಸಾಯಂಕಾಲ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಸುಬ್ಬಣ್ಣ ಶೆಟ್ಟರು ತಮ್ಮ ಜೈಲು ವಾಸದ ಅನುಭವಗಳನ್ನು ಹೇಳಿದರು. 'ಈ ಸತ್ಯಾಗ್ರಹದಿಂದ ಮುಂದಕ್ಕೆ ದೇಶಕ್ಕೆ ಹಿತವಾದೀತೆಂದು ಎಲ್ಲರೂ ಜೈಲಿನಲ್ಲಿ ಭರವಸೆಯಿಂದಿರುವರೆಂದೂ ಹೇಳಿದರು.

ಐಕ್ಯ ಭೋಜನ

ತಾ. 20-7-1941ನೇ ಆದಿತ್ಯವಾರ ರಾತ್ರಿ 8 ಘಂಟೆಗೆ ಕೊಡಿಯಾಲ್‌ಬೈಲ್ ಬೆಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲಿನಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಒಂದು ಐಕ್ಯ ಭೋಜನವು ಆಗಲಿಕ್ಕಿದೆ. ಹಿಂದೂದೇಶದಲ್ಲಿ ಅನೇಕ ಜಾತಿ ಮತ್ತು ವರ್ಗಗಳ ಐಕ್ಯತೆಯು ಅತ್ಯಗತ್ಯವೆಂದು ತೋರುವ ಇಂದಿನ ದಿನದಲ್ಲಿ ಅಂತಹ ಐಕ್ಯತೆಯನ್ನು ಒಲಿಸಿಕೊಳ್ಳುವ ಮತ್ತು ಮಹಾತ್ಮಾಜಿಯವರ ರಚನಾತ್ಮಕ ಕಾರ್ಯಗಳನ್ನು ಮುಂದೊತ್ತುವ ಆಸೆಯುಳ್ಳ ಎಲ್ಲಾ ಮಹನೀಯರೂ ಈ ಸಮಾರಂಭದಲ್ಲಿ ಮನಃಪೂರ್ವಕವಾಗಿ ಭಾಗವಹಿಸುವರೆಂದೂ, ಪಳಿತ ವರ್ಗದವರೆನ್ನಿಸಿರುವ ಹರಿಜನರ ಅಭಿವೃದ್ಧಿಗೆ ಬೇಕಾದ ವ್ಯಾವಹಾರಿಕ ಸಲಹೆಗಳನ್ನು ಕೊಡುವರೆಂದೂ ನಂಬಿರುವೆವು. ಪ್ರತಿಯೊಬ್ಬರಿಗೆ ಆಣೆ 8ರ ವಂತಿಗೆಯಿಂದ ಈ ಭೋಜನವನ್ನು ಏರ್ಪಡಿಸುವುದಾಗಿದೆ. ಟಿಕ್ಕೆಟುಗಳು ಮಂಗಳೂರು ಕೊಡಿಯಾಲ್‌ಬೈಲಿನಲ್ಲಿರುವ ಖಾದಿ ಭಂಡಾರದಲ್ಲಿ ದೊರೆಯುತ್ತವೆ ಎಂದು ಜಿ. ಹ. ಸೇ. ಸಂಘದ ಅಧ್ಯಕ್ಷರಾದ ಡಾ. ಅಡಪ್ಪರು ತಿಳಿಸುತ್ತಾರೆ. ಶ್ರೀ ಎಸ್. ವಿ. ಕಾಮತರು ಈ ಐಕ್ಯಭೋಜನಕ್ಕೆ ಆಗಮಿಸಲಿರುವ ಪ್ರಧಾನ ಅತಿಥಿಗಳೊಬ್ಬರೆಂದು ಅಧಿಕೃತವಾಗಿ ತಿಳಿದುಬರುತ್ತದೆ.

ಸೆಂಟ್ರಲ್ ಟೋಕೀಸ್ ಪ್ರಾರಂಭೋತ್ಸವ

ಮಂಗಳೂರು ಸೆಂಟ್ರಲ್ ಮೈದಾನಿನ ಮುಂದುಗಡೆ (ಮೊದಲಿನ ಶ್ರೀ ಕೃಷ್ಣ ಸಿನೆಮಾ ಇದ್ದ ಸ್ಥಳದಲ್ಲಿ), ನೂತನವಾಗಿ ಕಟ್ಟಿಸಿದ ಸೆಂಟ್ರಲ್ ಟಾಕೀಸಿನ ಪ್ರವೇಶ ಸಮಾರಂಭವು ಶ್ರೀ ಜಿನರಾಜ ಹೆಗ್ಡೆ ಎಂ. ಎಲ್. ಎ. (ಸೆಂಟ್ರಲ್) ಇವರ ಅಧ್ಯಕ್ಷತೆಯಿಂದ ತಾ. 15ರಂದು ಸಂಜೆಗೆ ನೆರವೇರಿತು. ಪ್ರವೇಶ ಸಮಾರಂಭಕ್ಕೆ ನಗರದ ಅನೇಕ ಗೃಹಸ್ಥರು ಕೆಲವರು ಆಮಂತ್ರಿತರಾಗಿ ಬಂದಿದ್ದರು. ಶ್ರೀ ಎಂ. ವೆಂಕಟೇಶ ಪೈಗಳ ಸೂಚನೆಯಂತೆ ಶ್ರೀ ಜಿನರಾಜ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದರು. ಸೆಂಟ್ರಲ್ ಟೋಕೀಸಿಗೆ ಅಭ್ಯುದಯವನ್ನು ಹಾರೈಸಿ ಶ್ರೀ ಗೌಡ ವಿ. ಎಸ್. ಕುಡ್ವ, ಎಸ್. ಎಸ್. ರಾವ್ ಮತ್ತು ಆನಂದರಾಯರು ಭಾಷಣ ಮಾಡಿದರು. ಬಳಿಕ ಅಧ್ಯಕ್ಷರು ವಿಚಾರಪರಿಪ್ಲುತವಾದ ದೀರ್ಘ ಭಾಷಣಮಾಡಿ ಸೆಂಟ್ರಲ್ ಟೋಕೀಸಿಗೆ ಏಳಿಗೆಯುಂಟಾಗಲೆಂದು ಹರಸಿ ಉದ್ಘಾಟಿಸಿದರು. ಪ್ರೊಪ್ರೈಟರ್ ಶ್ರೀ ಕಾಮತರ ಪರವಾಗಿ ಶ್ರೀ ವೆಂಕಟೇಶ ಪೈಗಳು ಕೃತಜ್ಞತಾ ಸಮರ್ಪಣೆ ಮಾಡಿದರು.

ಬಳಿಕ ಕೆಲವು ಪ್ರದರ್ಶನಗಳು ತೋರಿಸಲ್ಪಟ್ಟವು. ಮುಂದಿನ ಚಿತ್ರ ರಜತಪಟದ 'ಹೋಳಿ' ಎಂಬುದು. ಮಂಗಳೂರಿನ ಕೇಂದ್ರ ಸ್ಥಳದಲ್ಲಿರುವ ಈ ಟೋಕೀಸು ಜನರ ಮೆಚ್ಚಿಗೆ ಪಾತ್ರವಾಗುವುದೆಂದು ನಾವು ಹಾರೈಸುತ್ತೇವೆ.

ಜಿಲ್ಲೆಯಲ್ಲಿ ಸಾಕಷ್ಟು ಮಳೆಬೀಳುವುದಿಲ್ಲ

ಕಳೆದ ತಿಂಗಳಲ್ಲಿ ಗಟ್ಟದ ಮೇಲೆ ವಿಪರೀತ ಮಳೆ ಬಂದು, ದಕ್ಷಿಣ ಕನ್ನಡದ ನದಿಗಳಲ್ಲಿ ಒಮ್ಮೆಯೇ ನೀರು ಉಕ್ಕಿ ನೆರೆಬಂದಿತ್ತಷ್ಟೆ. ಈಗ ಮಳೆಯಿಲ್ಲದೆ ಬಹಳ ದಿನಗಳಾದುವು. ಹಗಲು ರಾತ್ರಿ ಮಳೆ ಬೀಳುವ ಈ ತಿಂಗಳಲ್ಲಿ ದಿನವಿಡೀ ಬೇಸಿಗೆಕಾಲದಂತೆ ಬಿಸಿಲು ಕಾಯುತಿದ್ದು ದಿವಸಕ್ಕೆ ಒಂದೋ ಎರಡೋ ಸ್ವಲ್ಪ ಮಳೆ ಬೀಳುತ್ತಿದೆ. ಇದರಿಂದ ಒರುವ ವರ್ಷದ ಬೆಳೆಯು ಆಗುವಂತಿಲ್ಲ. ದಕ್ಷಿಣ ಕನ್ನಡದ ಬೇಸಾಯಗಾರರು ಈಗಾಗಲೇ ನೆರೆಯಿಂದ ಬಹಳ ಕಂಗೆಟ್ಟಿದ್ದರು. ಈ ತೆರದ ಅನಾವೃಷ್ಟಿಯಿಂದ ಮುಂದಿನ ಜೀವನದ ಹಾದಿ ತೋರದೆ ಕಂಗಾಲಾಗಿರುವರು.

ಬೀಡಿ ಲೇಬರ್ ಯೂನಿಯನ್

ಮಂಗಳೂರು ಬೀಡಿ ಲೇಬರ್ ಯೂನಿಯನಿನ ಮಹಾಸಭೆಯು ಕಳೆದ ತಾ 6ರಲ್ಲಿ ಜನಾಬ್ ಕೆ. ಎಸ್. ಅಹಮ್ಮದ್ ಬಾವಾರವರ ಅಧ್ಯಕ್ಷತೆಯಲ್ಲಿ ಸೇರಿ, ಬೀಡಿ ಕೆಲಸಗಾರರ ಕೇಳಿಕೆಯ ಕುರಿತು ಮಾಲೀಕರಿಂದ ಬಂದ ಉತ್ತರವು ಸಮರ್ಪಕವಲ್ಲವೆಂದೂ, ಯುದ್ಧಭತ್ತೆಯು ಕೂಡಲೇ ದೊರೆಯಬೇಕಾದುದರಿಂದ ಅದಕ್ಕಾಗಿ ಸಕಲ ಕಾರ್ಯಕ್ರಮಗಳನ್ನು ಕೈಕೊಳ್ಳುವರೆ ಮೂರು ಜನರ ಒಂದು ಏಕ್ಷನ್ ಕಮಿಟಿ ಸ್ಥಾಪಿಸಬೇಕೆಂದೂ ಈ ಕಮಿಟಿಯವರು ಎಲ್ಲಾ ಮಾಲೀಕರನ್ನೂ ಕಂಡು ಪುನಃ ಯುದ್ಧಭತ್ತೆಯ ವಿಷಯದಲ್ಲಿ ಮಾತಾಡಬೇಕೆಂದೂ, ತೀರ್ಮಾನವಾಯಿತು.

ಶ್ರೀ ಭಾರತ ಸುಧಾಕರ ಯುವಕ ಸಂಘ, ಮಂಗಳೂರು ದ. ಕ.

ತಾ. 13ರಂದು ಸ್ಥಳೀಯ ಶ್ರೀ ಭಾರತ ಸುಧಾಕರ ಯುವಕ ಸಂಘದ ವಾರ್ಷಿಕ ಸಭೆಯು ಶ್ರೀ ನರ್ಲ ತಿಮ್ಮಪ್ಪಯ್ಯ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಆರ್. ಶ್ರೀಯಾನ್, ಶ್ರೀ ಎ ಬಾಲಪ್ಪ ಮತ್ತು ಶ್ರೀ ಎಮ್. ಕೆ. ಕೃಷ್ಣ ಇವರೇ ಮೊದಲಾದವರು ಭಾಷಣವಿತ್ತರು. ಸಂಘದ ಇನ್ನು ಮುಂದಿನ ಏಳಿಗೆಯ ಬಗ್ಗೆ ಕಾರ್ಯನಿರ್ವಾಹಕ ಸಮಿತಿಯೊಂದನ್ನು ಆರಿಸಲಾಯಿತು.

ಅಪಾದಿತನ ಬಿಡುಗಡೆ

ಕಾರ್ಕಳ ತಾಲೂಕು ಮಾಳಹಳ್ಳಿಯ ಚಿಕ್ಕ ಎಂಬವನು ಕೊಲೆಮಾಡಿದ ಅಪಾದನೆಯ ಮೊಕದ್ದಮೆಯಲ್ಲಿ ಸೆಶ್ಶನ್ಸ್ ಜಡ್ಜರು ತೀರ್ಪು ಕೊಟ್ಟಿರುವರು. ಚಿಕ್ಕನು, ಹೊನ್ನಯ ಶೆಟ್ಟಿ ಮತ್ತು ಇತರರು ತನ್ನಲ್ಲಿ ಪೂರ್ವದ್ವೇಷವಿಟ್ಟುಕೊಂಡು, ಮುಟ್ಟಿನಲ್ಲಿ ಹೊಡೆಯುತ್ತಿರಲು, ಆ ಮೊಕ್ತವನ್ನು ತಡೆಯಲಾರದೆ, ಆತ್ಮರಕ್ಷಣೆಗಾಗಿ ತಾನು ಹೊನ್ನಯ ಶೆಟ್ಟಿ ಮತ್ತು ಇತರರಿಗೆ ಚೂರಿ ಹಾಕಿದುದು ನಿಜವೆಂದು ಹೇಳಿದನು. ಚಿಕ್ಕನು ಮೇರೆಮೀರಿ ಮಾಡಲು ಕಾರಣವಿಲ್ಲದೆ ಆತ್ಮರಕ್ಷಣೆಗೆಂದು ಚೂರಿ ಹಾಕಿದುದರಿಂದ, ತಪ್ಪಿತಸ್ಥನಲ್ಲವೆಂದು, ಅವನನ್ನು ನ್ಯಾಯಾಧೀಶರು ಬಿಡುಗಡೆ ಮಾಡಿದರು.

ಹೊಸ ಪತ್ರಿಕೆಗಳು

ಮಂಗಳೂರಲ್ಲಿ 'ಸಾರಸ್ವತ'ವೆಂಬ ಕೊಂಕಣಿ ಭಾಷೆಯ ಪತ್ರಿಕೆಯೂ, ನವಭಾರತವೆಂಬ ಕನ್ನಡ ಭಾಷೆಯ ಪತ್ರಿಕೆಯೂ ಪ್ರಕಟವಾಗಿವೆ.

ಕಾರ್ಕಳ

ಭಾಷಣ

ತಾ. ೧೧ರ ದಿನ ಸಾರ್ವಜನಿಕಸಭೆಯಲ್ಲಿ ಶ್ರೀ. ಪಂಡಿತ ಧರ್ಮದೇವ ವಿದ್ಯಾಮಾರ್ತಂಡರವರು ಹಿಂದೂ ಸಂಘಟನೆ ಮತ್ತು ವಿಧವಾ ವಿವಾಹ ಪ್ರೋತ್ಸಾಹದ ಆಗತ್ಯದ ಕುರಿತು ಭಾಷಣವನ್ನು ಕೊಟ್ಟರು.

ತರ್ಕಸಭೆಯಲ್ಲಿ ಭಾಷಣ

ಶ್ರೀ. ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ತರ್ಕಸಭೆಯ ಉದ್ಘಾಟನೆಯು ತಾ. ೧೨ರ ದಿನ ಡಿಪ್ಟಿ ಇನ್ಸ್‌ಪೆಕ್ಟರು ಶ್ರೀ ಯು. ಕೃಷ್ಣರಾಯರಿಂದ ನಡೆಯಿತು.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ಮಂಡಳಿಯ ೩೦ನೇ ವರ್ಷೋತ್ಸವವು ಮತ್ತು ಮೊಗವೀರ ರಾತ್ರಿ ಶಾಲೆಯ ವಾರಿಕೋತ್ಸವ ಜಂಟಿ ಸಮಾರಂಭವು ಇದೇ ಕಳೆದ ಜೂನ್ ತಿಂಗಳ ತಾರೀಕು ೨೯ರಂದು ಶ್ರೀಮಾನ್ ಶೇಟ್ ಪ್ಯಾರೇಲಾಲ್ ಹೇಮರಾಜ್ ನಾಂಜಿ, ಇವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಸಭಾಧ್ಯಕ್ಷರು ಮಂಡಳಿಯ ವಿವಿಧ ಕಾರ್ಯಕಲಾಪಗಳನ್ನು ಪ್ರಶಂಸಿಸಿ 'ಕಳೆದ ೩೦ ವರ್ಷಗಳ ಪೂರ್ವದಲ್ಲಿ ಜನ್ಮವೆತ್ತಿದ ಈ ಮಂಡಳಿಯು ಎಡೆಬಿಡದೆ ಧರ್ಮಾರ್ಥ ರಾತ್ರಿ ಶಾಲೆಗಳನ್ನೂ ವಾಚನಾಲಯವನ್ನೂ ಹಗಲು ಶಾಲೆಯನ್ನೂ ಒಂದು ಪತ್ರಿಕೆಯನ್ನೂ ನಡಿಸಿಕೊಂಡು ಬರುವುದಲ್ಲದೆ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನೂ ಕೊಟ್ಟು ನಡಿಸಿಕೊಂಡು ಬರುವಂಥಾದನ್ನು ಕಂಡು ನನಗೆ ತುಂಬಾ ಆನಂದವೆನಿಸುತ್ತದೆ.''

ದಿವಂಗತ ಮಾಧವ ತಿಂಗಳಾಯರಿಂದ ಬರೆಯಲ್ಪಟ್ಟ ''ಜನಮರ್ಲ್'' ಎಂಬ ತುಳು ನಾಟಕವನ್ನು ಶಾಲಾ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅಭಿನಯಿಸಿ ತೋರಿಸಿದರು.

ಧಾರವಾಡ

ಸತ್ಯಾಗ್ರಹಿಗಳಿಗೆ ಪುಸ್ತಕಗಳು

''ಸತ್ಯಾಗ್ರಹ ಆಂದೋಲನದಲ್ಲಿ ಕರ್ನಾಟಕದಲ್ಲಿ ಶಿಕ್ಷೆಯಾಗಿ ಬೆಳಗಾವಿ, ಯರವಾಡ, ವಿಸಾಪುರ ರಾಜಾ ಮುಂತಾದ ಸೆರೆಮನೆಗಳಲ್ಲಿ ಸಾವಿರದಷ್ಟು ಸತ್ಯಾಗ್ರಹಿಗಳು ಇಡಲ್ಪಟ್ಟಿರುವರು. ಸೆರೆಮನೆಯಲ್ಲಿಯೂ ಅವರು ತಮ್ಮ ಶಕ್ತಿಯಂತೆ ಜ್ಞಾನಾರ್ಜನವನ್ನು ಮಾಡಲು ಯತ್ನಿಸುತ್ತಿರುವರು. ಸೆರೆಮನೆಯಲ್ಲಿಯ ಪುಸ್ತಕ ಸಂಗ್ರಹವು ಬರೇ ಹೆಸರಿಗೆ ಇರುವುದರಿಂದಾ ಸೆರೆಮನೆಯಲ್ಲಿರುವವರಿಗಾಗಿ ಪುಸ್ತಕಗಳನ್ನು ಪೂರೈಸುವ ಕಾರ್ಯವನ್ನು ಮಾಡುವುದು ಸಾರ್ವಜನಿಕರ ಕರ್ತವ್ಯವಾಗಿದೆ. ೧೯೨೧ನೇಯ ಸತ್ಯಾಗ್ರಹದ ಕಾಲಕ್ಕೆ ಪುಣೆಯ ಸರಕಾರೀ ಇಂಜಿನೀಯರಿಂಗ್ ಕಾಲೇಜಿನಲ್ಲಿ ಕೆಲಸಮಾಡುತ್ತಿದ್ದ ಪ್ರೊ. ತ್ರಿವೇದಿಯವರು ೫ ಸಾವಿರ ಪುಸ್ತಕಗಳನ್ನು ಜೇಲಧಿಕಾರಿಗಳಿಗೆ ಕಡವಾಗಿ ಕೊಟ್ಟಿದ್ದರಿಂದ ಬಹಳ ಉಪಯೋಗವಾಯಿತು. ಈ ಮೇಲ್ಪಂಕ್ತಿಯನ್ನನುಸರಿಸಿ ಕರ್ನಾಟಕದಲ್ಲಿ ಈ ಕಾರ್ಯದಲ್ಲಿ ಸಹಾನುಭೂತಿಯುಳ್ಳವರು ಪುಸ್ತಕಗಳನ್ನಾಗಲಿ, ಧನಸಹಾಯವನ್ನಾಗಲಿ, ಪ್ರಾಂತಿಯ ಕಾಂಗ್ರೆಸ್ ಸಮಿತಿಗೆ ತಿಳಿಸಬೇಕಾಗಿ ಭಿನ್ನವಿಸುತ್ತೇನೆ'' ಎಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಬರೆಯುತ್ತಾರೆ.

[illegible]ನೆಯ ಪುಟಕ್ಕೆ ಮುಂದುವರಿಯುವುದು.

ನಿಶ್ಚಿತ ಧಾರಣೆ

ತಾ. 8-7-1941ರಲ್ಲಿ ಮಂಗಳೂರು ತಾಲೂಕು ಧಾರಣೆಗಳ ಎಡ್ವೈಸರಿ ಸಮಿತಿಯವರು ಸಭೆಸೇರಿ ತಿದ್ದುಪಡಿಮಾಡಿದ ಮುಖ್ಯ ಜೀನಸುಗಳ ಧಾರಣೆಗಳು

ಸಾಮಾನಿನ ಹೆಸರು			ನಿಶ್ಚಯಿಸಿದ ಧಾರಣೆ ರೂ. ಆ. ಪೈ.
ಕೆಂಪು ಅಕ್ಕಿ ಅವ್ವಲ್ ಸೇರು 1ಕ್ಕೆ			— 0-1-1
,, ಮಧ್ಯಂ			— 0-1-0
ಅಕ್ಕಿ ಮಸ್ಕತಿ ಅವ್ವಲ್ ಸೇ 1ಕ್ಕೆ			— 0-2-6
ಗೋಧಿ	,,	,,	— 0-2-1
,, ಸಣ್ಣ	,,	,,	— 0-2-2
,, ರಾಗಿ	,,	,,	— 0-2-0
ರಾಗಿ	,,	,,	— 0-1-2
ಉಪ್ಪು	,,	,,	— 0-1-0
ಮೆಣಸು	,,	,,	— 0-1-8
,,	ಮಧ್ಯಂ	,,	— 0-1-6
ಸಕ್ಕರೆ		,,	— 0-1-6
ಹುರುಳಿ		,,	— 0-1-1
ಉದ್ದು		,,	— 0-2-4
ಬಗಡೆ		,,	— 0-2-4
ಕಡಲೆ	ಅವ್ವಲ್	,,	— 0-2-8
,,	ಮಧ್ಯಂ	,,	— 0-2-0
ಬೆಂಕಿಪೆಟ್ಟಿಗೆ (ಬಿಲ್ಲೆ 40ರ)	ಪ. 1ಕ್ಕೆ		0-4-8
,, (,, 60ರ)	,,		0-6-0
,, (,, 80ರ)	,,		0-8-6
ಚಿಮಿಣಿ ಎಣ್ಣೆ	ಬಾಟ್ಲಿ 1ಕ್ಕೆ		0-2-8
ಬಟ್ಟೆ ಅಗ್ಗ ನಮೂನೆ	ಗಜ 1ಕ್ಕೆ		0-3-0
ಗಂಡಸರು ಉಡುವ ಪಂಚೆ 1ಕ್ಕೆ			0-7-0
ಅಗ್ಗ ನಮೂನೆಯ ಸೀರೆ 1ಕ್ಕೆ			2-0-0
ತೆಂಗಿನ ಎಣ್ಣೆ ಕುಪ್ಪಿ 1ಕ್ಕೆ			0-7-0
ಕಬ್ಬಿನ ಬೆಲ್ಲ ಅವ್ವಲ್ ಸೇರು 1ಕ್ಕೆ			0-0-8
,,	ಮಧ್ಯಂ	,,	0-0-8
ತೆಂಗಿನ ಕಾಯಿ ಸಿಪ್ಪೆ ಸಮೇತ 100ಕ್ಕೆ			4-8-0

ಲೆನಿನ್‌ಗ್ರಾಡಿಗೆ ಜರ್ಮನರ ಬೆದರಿಕೆ ಆಗಿದೆ!

ಹಿಟ್ಲರನೊಡನೆ ರಾಜಿಯಿಲ್ಲವೆಂದರು ಚರ್ಚಿಲರು

ಆಂಗ್ಲ-ರಶ್ಯ ಒಪ್ಪಂದವು ಸಹಿಯಾಯಿತು

ಹೆಸ್ ಪ್ರಕರಣದ ಸುದ್ದಿಗಳು

-ರಶ್ಯ ಜರ್ಮನ್ ಯುದ್ಧವು ಮುಂದುವರಿಯುತ್ತಿದೆ. ಜರ್ಮನರು ಕೀವನ್ನು ಕೈವಶಮಾಡಿಕೊಳ್ಳುವುದರಲ್ಲಿದ್ದಾರೆಂದು ತಿಳಿದಿದೆ. ಚರ್ಚಿಲ್ಲರು ಒಂದು ಭಾಷಣಮಾಡುತ್ತಾ ಹಿಟ್ಲರನು ಬ್ರಿಟನಿನ ಮೇಲೆ ಧಾಳಿಯಿಡುವನೆಂಬ ಸಂದೇಹವೆತ್ತಿದ್ದಾರೆ ರಶ್ಯ ಬ್ರಿಟನುಗಳು ಒಪ್ಪಂದ ಮಾಡಿಕೊಂಡಿರುತ್ತವೆ.

ಗೋರಿಂಗ್ ಹಿಟ್ಲರ್ ಜಗಳ

ಜರ್ಮನರಿಗೆ ಆದ ಗಂಡಾಂತರವನ್ನು ಪರ್ಯಾಲೋಚಿಸಿ ಗೋರಿಂಗನು ಮುಂದೆ ಆಕ್ರಮಣ ಮಾಡಲು ಒಪ್ಪದ್ದರಿಂದ ಹಿಟ್ಲರನು ಆತನೊಡನೆ ಜಗಳಮಾಡಿ ಆತನನ್ನು ಸೆರೆಯಲ್ಲಿಟ್ಟಿರುವನೆಂದು ಸುದ್ದಿ ಹರಡಿದೆ.

ಆಂಗ್ಲ ರಶ್ಯ ಒಪ್ಪಂದ
ಯುದ್ಧದಲ್ಲಿ ಪರಸ್ಪರ ಸಹಾಯ

ರಶ್ಯಾಬ್ರಿಟನುಗಳು, ಅನ್ಯೋನ್ಯವಾಗಿ, ನಾಜಿ ಯುದ್ಧವನ್ನು ತಡೆಗಟ್ಟುವರೆ ಸಹಾಯ ಮಾಡಬೇಕೆಂದು ಕರಾರು ರಶ್ಯ ಬ್ರಿಟನುಗಳೊಳಗೆ ಆಗಿದೆ.

ಹಿಟ್ಲರನ ಗುರಿ ಬ್ರಿಟನು

ರಶ್ಯಕ್ಕೆ ಈಗ ಹಿಟ್ಲರ್ ಧಾಳಿಯಿಟ್ಟಿದ್ದರೂ ಅದು ತಾತ್ಕಾಲಿಕವಾಗಿ. ಆತನ ಮುಖ್ಯವಾದ ಗುರಿ, ಬ್ರಿಟನು ಆದುದರಿಂದ ಆತನ ಧಾಳಿ ಎಂದಾದರೂ ಯಾವ ಕ್ಷಣದಲ್ಲೂ ಬ್ರಿಟನಿನ ಮೇಲೆ ಆಗಬಹುದು ಈ ಸಂದರ್ಭದಲ್ಲಿ ಎಲ್ಲರೂ ಕಾದಾಡಲು ಸಿದ್ಧರಿರಬೇಕೆಂದು ವಾರ್ ಕೆಬಿನೆಟ್ ಮೆಂಬರರಾದ ಅಟ್ಲಿಯವರು ಹೇಳಿದರು.

ಹೆಸ್ ಪ್ರಕರಣದ ಪರಿಶೀಲನೆ
ಹಿಟ್ಲರನೊಡನೆ ರಾಜಿಮಾಡಲು
ಬ್ರಿಟನು ಒಪ್ಪುವುದಿಲ್ಲ

ಹಿಟ್ಲರನು ಮುಂದೆ ರಶ್ಯಕ್ಕೆ ಧಾಳಿ ಮಾಡಲಿರುವನೆಂದೂ, ಹಿಟ್ಲರನೊಡನೆ ಬ್ರಿಟನು ರಾಜಿಮಾಡಿಕೊಳ್ಳತಕ್ಕದೆಂದೂ ಹೆಸ್ಸನು ಹೇಳಿದುದಾಗಿಯೂ ಚರ್ಚಿಲರು ರಶ್ಯವನ್ನು ಎಚ್ಚರಿಸಿದರೆಂದಾಗಿಯೂ ವಾರ್ತೆಯಿದೆ. ನಾಜಿಗಳು ಯುದ್ಧವನ್ನು ನಿಲ್ಲಿಸಲು ಆಶಿಸುತ್ತಿರುವರಾಗಿಯೂ, ಹೆಸ್ಸನು ಅದರ ಸಲುವಾಗಿ ಸಂಧಾನಕ್ಕೆ ಬಂದಿರುವುದಾಗಿಯೂ ತಿಳಿಸಲಾಗಿದೆ. ಆದರೆ ಬ್ರಿಟನು ಹಿಟ್ಲರನೊಡನೆ ಸಂಧಾನಕ್ಕೆ ಒಪ್ಪುವುದಿಲ್ಲವಂತೆ.

ಲೆನಿನ್ ಗ್ರಾಡನ್ನು
ಮುತ್ತುತ್ತಿರುವರಂತೆ

ಜರ್ಮನರು ರಶ್ಯದಲ್ಲಿ ಮುಂದೊತ್ತಿ ಲೆನಿನ್‌ಗ್ರಾಡನ್ನು ಮುತ್ತಿರುವರೆಂದು ಜರ್ಮನ್ ವಾರ್ತೆಯಿದೆ. ಜರ್ಮನ್ ಸೈನ್ಯಗಳು ಸ್ಟಾಲಿನ್ ವ್ಯೂಹವನ್ನು ಮುರಿಸುವವೆಂದೂ ಸುದ್ದಿ.

ಜರ್ಮನಿ ಮೇಲೆ ಬಾಂಬು

ಬ್ರಿಟಿಷ್ ವೈಮಾನಿಕ ದಳದವರು ಜರ್ಮನಿಯ ಮೇಲೆ ಬಾಂಬುಗಳನ್ನು ಎಸೆದರೆಂದು ಹೇಳಲಾಗಿದೆ.

ಸಿರಿಯಾದಲ್ಲಿ ವಿಜಯ

ಸಿರಿಯಾದಲ್ಲಿ ಬ್ರಿಟಿಷರಿಗೆ ವಿಜಯವಾಗಿ ಶಾಂತಿಯುಂಟಾಗಿದೆಯೆಂದು ತಿಳಿದುಬರುತ್ತದೆ

ರಶ್ಯದಲ್ಲಿ ಹೆಂಗಸರೂ ಮಕ್ಕಳೂ ರಣರಂಗಕ್ಕೆ ಹೋಗುತ್ತಿರುವರು

ಜರ್ಮನರ ಧಾಳಿಯನ್ನು ಇದಿರಿಸಿ ಕಾದಾಡಲು ರಶ್ಯನ್ ಹೆಂಗಸರೂ ಮಕ್ಕಳೂ ಈಗ ರಣರಂಗಕ್ಕೆ ಇಳಿದಿರುವರೆಂದು ತಿಳಿದುಬರುತ್ತದೆ.

ಸಿರಿಯಾ ಒಪ್ಪಂದಕ್ಕೆ ವಿಚಿ ಪ್ರತಿನಿಧಿ ಸಹಿ

ವಿಚಿ ಶಿಷ್ಟಮಂಡಳದವರು ಸಿರಿಯಾ ಒಪ್ಪಂದಕ್ಕೆ ಸಹಿ ಹಾಕಿದ್ದರೆಂದು ತಿಳಿಯುತ್ತದೆ. ಒಪ್ಪಂದ ಮಾತುಕತೆಯು ಸಮಾಧಾನದಿಂದ ಸಾಗಿರುವುದಂತೆ

ನವರು ಸಿದ್ಧರಾಗಿರಬೇಕೆಂದೂ, ಜರ್ಮನಿಯ ಮೇಲೆ, ಬ್ರಿಟನಿಗೆ ಬಾಂಬು ಹಾಕುವ ಮೊದಲು ಬ್ರಿಟಿಷ ವೈಮಾನಿಕರು ಬಾಂಬುಗಳನ್ನು ಎಸೆಯಬೇಕೆಂದೂ ಚರ್ಚಿಲರು ಒಂದು ಉದ್ದಾಮ ಭಾಷಣವಿತ್ತರು. ಅದರಲ್ಲಿ ಹಿಟ್ಲರನೊಡನೆ ತಾವು ಎಂದೂ ರಾಜಿಯಿಂದಿರುವುದು ಸಾಧ್ಯವಿಲ್ಲವೆಂಬುದಾಗಿ ಹೇಳಿರುವರು

ಯುಕ್ರೇನು ಜರ್ಮನರ ವಶವಾದರೆ'
ಅರ್ಧದಷ್ಟು ಉದ್ಯೋಗಗಳು ಕೈಬಿಡುವವು

ರಶ್ಯದಲ್ಲಿ ಯೂರೋಪ್ ಮತ್ತು ಏಶಿಯಾಟಿಕ್ ರಶಿಯ ಎಂಬ ಎರಡು ಭಾಗಗಳಿರುವವಷ್ಟೆ. ಯುರೋಪ ರಶಿಯದ ಭಾಗದಲ್ಲಿ ಯುಕ್ರೇನ ಪ್ರಾಂತವು ಬಹಳ ಫಲವತ್ತಾದುದು. ರಶಿಯಕ್ಕೆ ಅವಶ್ಯವಿದ್ದ ಕಲ್ಲಿದ್ದಲೆಲ್ಲವೂ. ಈಗ ೨೦ ವರ್ಷಗಳ

ಗಿದೆ. ಆದರೂ ಯುಕ್ರೇನು ಜರ್ಮನರ ವಶವಾದರೆ ರಶಿಯದ ಅರ್ಧದಷ್ಟು ಉದ್ಯೋಗಗಳು ಕೈಬಿಡುವುವು. ಇದರ ಜೊತೆಗೆ ಕಾಕಸವೂ ಹೋದರೆ ಎಣ್ಣೆ ಸಂಗ್ರಹವನ್ನು ವೈರಿಗಳಿಗೆ ಒಪ್ಪಿಸಿದಂತಾಗುವುದು. ಆದರೂ ಉರಲ ಪ್ರಾಂತವು ಅಂಥ ಕಷ್ಟ ಪ್ರಸಂಗದಲ್ಲಿ ಇವರ ಕೈಹಿಡಿಯುವಷ್ಟು ಸಮರ್ಥವಿದೆಯೆಂದು ಹೇಳಲಾಗುತ್ತದೆ.

ರಶಿಯನರು ಒಂದು ವೇಳೆ ಯುಕ್ರೇನ ಬಿಟ್ಟು ಉರಲ ಪ್ರಾಂತಕ್ಕೆ ಹಿಂದೆ ಸರಿದರೆ, ಅವರ ಮುಂದಿನ ಹೋರಾಟವು ಅಲ್ಲಿಯ ಹುಟ್ಟುವಳಿಯನ್ನೂ ವ್ಲಾಡಿವೋಸ್ಟಾಕ್ ಬಂದರ ಮುಖಾಂತರ ಹೊರಗಿನಿಂದ ಬರುವ ಸಹಾಯವನ್ನೂ ಅವಲಂಬಿಸಿರುತ್ತದೆಂದು 'ಎಕಾನಮಿಸ್ಟ್' ಪತ್ರಿಕೆಯು ಬರೆದಿರುತ್ತದೆ.

ಲೆನಿನ್ ಗ್ರಾಡಿಗೆ ಜರ್ಮನರ ಬೆದರಿಕೆ'
ರೈಲ್ವೆ ದಾರಿಗಳ ಮೇಲೆ ಬಾಂಬು

ಜರ್ಮನರ ಭೀತಿಯಿಂದ, ಲೆನಿನ್ ಗ್ರಾಡಿನ ರಕ್ಷಣೆಗೆ ಬೆದರಿಕೆಯಾಗಿದೆಯಂತೆ ಜರ್ಮನರು ರಶ್ಯನರ ರೈಲ್ವೆ ದಾರಿಗಳಲ್ಲಿ ಬಾಂಬುಹಾಕಿ ಹಾನಿಗೊಳಿಸಿರುವರ



ಸೆಂಟ್ರಲ್ ಟಾಕೀಸಿನ ಭವ್ಯಕಟ್ಟೋಣ

ಮಾಲ್ಟಾದ ಮೇಲೆ ಬಾಂಬುಗಳು

ಬಿದ್ದು ಕೆಲವರಿಗೆ ಹಾನಿಯೊದಗಿದೆ. ಆಸ್ತಿಗಳೂ ಕೆಲವು ಹಾನಿಗೊಳಗಾಗಿವೆ.

ಛಳಿಗಾಲದ ಯುದ್ಧಕ್ಕೆ ಸಿದ್ಧರಾಗಿರಿ
ಚರ್ಚಿಲ್ ಹೇಳುತ್ತಾರೆ

ಚರ್ಚಿಲ್ಲರು ಒಂದು ಭಾಷಣ ಮಾಡುತ್ತಾ ಅದರಲ್ಲಿ ಲಂಡನಿಗರು, ಛಳಿಗಾಲದಲ್ಲಿ ಹಿಟ್ಲರನು ಧಾಳಿಮಾಡಬಹುದೆಂದೂ ಆದುದರಿಂದ ಆಗಿನ ಯುದ್ಧಕ್ಕೆಲ್ಲರೂ ಸಿದ್ಧರಾಗಿರಬೇಕೆಂದೂ ಹೇಳಿರುವರು.

ಹಿಟ್ಲರನೊಡನೆ ರಾಜಿಯಿಲ್ಲ
ಚರ್ಚಿಲ್ಲರು ಹೇಳುತ್ತಾರೆ

ಮುಂದಿನ ಹಿಟ್ಲರನ ಧಾಳಿಗೆ ಬ್ರಿಟನಿ

ಹಿಂದೆ ಅಲ್ಲಿ ಹುಟ್ಟುತ್ತಿತ್ತು. ಈಗ ಅದು ಕಡಿಮೆಯಾಗಿದ್ದರೂ ಬರುವ ವರ್ಷದಲ್ಲಿ ಶೇಕಡ ೫೦ರಷ್ಟು ಹುಟ್ಟುವಳಿಯಾಗುವದೆಂದು ಲೆಕ್ಕ ಹಾಕಲಾಗಿದೆ. ಕಬ್ಬಿಣ ಮತ್ತು ಉಕ್ಕುಗಳ ಹುಟ್ಟುವಳಿಯು ಪ್ರಮಾಣವಾದರೂ ಹೀಗೆಯೇ ಇರುತ್ತದೆ. ಇಲ್ಲಿ ಬರುವ ವರ್ಷದಲ್ಲಿ ೨೭೫೦೦೦೦೦ ಟನ್ನ ಕಬ್ಬಿಣ ಅಂದರೆ ರಾಷ್ಟ್ರದ ಹುಟ್ಟುವಳಿಯ ಶೇಕಡ ೫೩ರಷ್ಟು ಸಿಕ್ಕಬಹುದೆಂದು ಅಂದಾಜುಮಾಡಲಾಗಿದೆ. ಇದರ ತರುವಾಯ ಕಾಕಸ ಪ್ರಾಂತವು ಅಲ್ಲಿ ಎಣ್ಣೆಯು ಹೇರಳವಾಗಿ ಸಿಕ್ಕುತ್ತವೆ. ಇತ್ತೀಚಿಗೆ ಏಶಿಯಾಟಿಕ್ ರಶಿಯದ ಭಾಗದಲ್ಲಿದ್ದ ಉರಲ ಪ್ರಾಂತದಲ್ಲಿ ಈ ಉದ್ಯೋಗಗಳನ್ನು ಬೆಳೆಸಲಾ

ನೋಟೀಸು
ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 191/41.

ಬಸ್ರೂರು ಹಿರಿಯಣ್ಣ ಸೆಟ್ಟಿ— ವಾದಿ

1 ವಕೀಲ್ ಶಾಂತಾರಾಮರಾವ್
2 ಶಂಕರ ರಾವ್
ಗುಳುವಾಡಿಸುಬ್ರಾಯರ ಮಗಂದಿರರು } ಪ್ರತಿವಾದಿರು

ಹಾಲಿ ಧಾರವಾಡ ಜಿಲ್ಲಾ ಹಾವೇರಿ ಟೌನಿನಲ್ಲಿರುತ್ತಾರೆ.

ಸದ್ರಿ ದಾವೆಯ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ನಿಮ್ಮಿಂದ ಗೇಣಿ ಬಾಕಿ ಬಗ್ಗೆ ಬರತಕ್ಕ ಹಣ ವಸ್ಸೂಲು ಬರಮಾಡಿಕೊಳ್ಳುವ ಕುರಿತು ವಾದಿಯು ಮೇಲಿನ ದಾವಾ ದಾಖಲು ಮಾಡಿರುತ್ತಾನೆ. ಅದನ್ನು ಮೇಲ್ಕಾಣುವ ಕೋರ್ಟಿನಲ್ಲಿ ತಾ. 26—7—41ನೇ ದಿನ ಬೆಳಗ್ಗೆ 11 ಗಂಟೆಗೆ ಇತ್ಯರ್ಥಕ್ಕೆ ಇಡೋಣಾಗಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

ವಿನೋಬಾಜಿ ಮೂರನೆಯ ಸಲ ಸತ್ಯಾಗ್ರಹ ಮಾಡಿದರು!

ಡಾ। ಸತ್ಯಪಾಲರು ಕಾಂಗ್ರೆಸಿಗೆ ರಾಜಿಯಿತ್ತರು

ವೈಸರಾಯರು ಮಹತ್ವದ ಪ್ರಕಟಣೆ ಹೊರಡಿಸುವರೆ?

ಎರಡು ಸಲ ಸತ್ಯಾಗ್ರಹ ಮಾಡಿ ...ಮನೆಗೆ ಹೋಗಿ ಮರಳಿದ ಪ್ರಥ... ಸತ್ಯಾಗ್ರಹಿ ವಿನೋಬಾಜಿ ಮೂ...ಯು ಸಲವೂ ಸತ್ಯಾಗ್ರಹ ಮಾಡಿ ...ಧಿತರಾದರು. ಸತ್ಯಾಗ್ರಹಾಂದೋ...ನವು ಮುಂದುವರಿಯುತ್ತಾ ಇದೆ. ...ಜಾಬಿನ ಪ್ರಸಿದ್ಧ ಕಾಂಗ್ರೆಸು ಮು...ಂಡರಾದ ಡಾ। ಸತ್ಯಪಾಲರು ಈ ...ಕ ಕಾಂಗ್ರೆಸ್ ಧೋರಣೆ, ಗಾಂಧಿ...ಯುವರ ಅಭಿಮತದಲ್ಲಿ ಭಿನ್ನಾಭಿ...ಪ್ರಾಯಪಟ್ಟು ರಾಜಿನಾಮೆಯಿತ್ತಿ...ದ್ದಾರೆ. ವೈಸರಾಯರು ಬೇಗನೇ ...ಂದು ಪ್ರಕಟಣೆ ಕೊಡಲಿರುವ ...ತೆ.

...ಶ್ರೀ. ವಿನೋಬ ಬಾವೆಯವರ ಬಿಡುಗಡೆ

ಜುಲಾಯಿ ೧೪ಕ್ಕೆ ಸತ್ಯಾಗ್ರಹ

ಎರಡನೆಯ ಸಲ ಸತ್ಯಾಗ್ರಹ ಹೂಡಿದ, ...ಥಮ ಸತ್ಯಾಗ್ರಹಿ ಶ್ರೀ ವಿನೋಬ ...ಾವೆಯವರು ನಾಗಪುರ ಸೆರೆಮನೆ...ಯಿಂದ ... ಬಿಡುಗಡೆ ಹೊಂದಿದರು ...ಲ್ಲಿಂದ ಅವರು ಮಹಾತ್ಮಾ ಗಾಂಧಿಜಿ...ಯವರಲ್ಲಿ ಹೋಗಿ, ಅವರನ್ನು ಕಂಡು ...ಾತನಾಡಿದ ಬಳಿಕ, ಮೂರನೆಯ ...ಸತ್ಯಾಗ್ರಹ ಮಾಡುವರು ಗಾಂಧಿಜಿಯವರು, ವಿನೋಬ ಬಾವೆ...ಯವರನ್ನು ಜುಲಾಯಿ ೧೪ರಂದು ತಿರಿಗಿ ...ತ್ಯಾಗ್ರಹ ಮಾಡಲು ಹೇಳಿದರೆಂದು ...ತಿದಿದೆ

ಅಹಿಂಸೆಯಿಂದಲೇ ಶಾಂತಿ

ಖಾನ್ ಸಾಹೇಬರ ಹೇಳಿಕೆ

...ಗಡಿನಾಡಿನ ಮಾಜಿ ಪ್ರಧಾನರಾದ ...ಡಾ। ಖಾನ್ ಸಾಹೇಬರು ಒಂದು ಹೇಳಿಕೆ ...ಕೊಡುತ್ತಾ ಅಹಿಂಸೆಯೊಂದೇ ಜಗತ್ತಿನಲ್ಲಿ ...ಶಾಂತಿ ಸಾಪ್ಪನೆಗೆ ಸಹಕಾರಿಯೆಂದರು.

ಡಾ। ಸತ್ಯಪಾಲರು ಯುದ್ಧಕ್ಕೆ 'ಸಹಾಯ ಕೊಡುತ್ತಾರಂತೆ'

ಕಾಂಗ್ರೆಸಿಗೆ ರಾಜಿ ಕೊಟ್ಟರು

ಪಂಜಾಬಿನ ಪ್ರಸಿದ್ಧ ಕಾಂಗ್ರೆಸ್ ...ಮುಖಂಡರಾದ ಡಾ। ಸತ್ಯಪಾಲರು ...ಯುದ್ಧದಲ್ಲಿ ಗಾಯಗೊಂಡವರಿಗೆ ಉಪ...ಚಾರ ಮಾಡಲು ವೈದ್ಯಕೀಯ ಸಹಾಯ ...ಕೊಡುವ ಅಭಿಪ್ರಾಯವುಳ್ಳವರಾಗಿರು...ವುದರಿಂದ ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜಿ...ನಾಮೆ ಕೊಟ್ಟರೆಂದು ವಾರ್ತೆಯಿರು...ತ್ತದೆ.

ಖಾದಿ ಜಗತ್

ಚರಕಾ ಸಂಘದ ಪತ್ರಿಕೆ

ಅಖಿಳ ಭಾರತ ಚರಕಾ ಸಂಘದವರು ...ವರ್ಧಾದಿಂದ ಖಾದಿ ಜಗತ್ ಎಂಬ ...ಹಿಂದೂಸ್ಥಾನೀ ಭಾಷೆಯ ಪತ್ರಿಕೆಯೊಂದ...ನ್ನು ಪ್ರಕಟಿಸಲಿರುವರೆಂದೂ, ಮಹಾತ್ಮಾ...ಜಿಯವರು ಅದಕ್ಕೆ ಲೇಖನ ಬರೆಯುವ...ರೆಂದೂ ತಿಳಿದಿದೆ.

ನೆಹರುಗಳನ್ನು ಭೇಟಿ ಮಾಡಿದರು

ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಡೆಹರಾಡೂನ್ ಜೈಲಿನಲ್ಲಿ ಪಂಡಿತ ನೆಹರು ಮತ್ತು ಆರ್ ಎಸ್ ಪಂಡಿತರನ್ನು ಭೇಟಿಮಾಡಿದರು. ವಿಜಯ ಲಕ್ಷ್ಮಿ ಪಂಡಿತರು ಗಾಂಧಿಜಿಯವರ ಸಂದರ್ಶನಕ್ಕೆ ವರ್ಧಾ ಯಾತ್ರೆ ಮಾಡಲಿರುವರೆಂದು ತಿಳಿದಿದೆ.

ಎರಡು ಜನಾಂಗ ವಾದವು ಅಪಾಯಕರ

ಸರ್ ಗುಲಾಮ್ ಹಸೇನರ ಅಭಿಪ್ರಾಯ

ಭಾರತದಲ್ಲಿ ಹಿಂದುಸ್ಥಾನ ಪಾಕಿಸ್ತಾನಗಳೆಂಬ ಎರಡು ಜನಾಂಗ ವಾದವು ರಾಷ್ಟ್ರಕ್ಕೆ ಅಪಾಯಕರವಾದ್ದೆಂಬಭಿಪ್ರಾಯವಾಗಿದೆ ಅದನ್ನು ಪ್ರತಿಯೊಬ್ಬ ಭಾರತೀಯನೂ ವಿರೋಧಿಸ ತಕ್ಕದೆಂದು ಸರ್ ಗುಲಾಮ್ ಹಸೇನರು ಹೇಳುತ್ತಾರೆ.

ಕಾಮನ್ಸ್ ಸಭೆಯಲ್ಲಿ ಅಮೆರಿಯವರ ಉತ್ತರ

ರಾಜಕೀಯ ಕೈದಿಗಳನ್ನು ಬಿಡಬೇಕೆಂದು ಸದಸ್ಯರ ಸೂಚನೆ

"ಅಂತರ್ ರಾಷ್ಟ್ರೀಯ ಪರಿಸ್ಥಿತಿ ಬಿಗಡಾಯಿಸುತ್ತಿರುವ ಈ ಸಂದರ್ಭದಲ್ಲಿ ಭಾರತದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ಮೂಲಕ ಬಹಳ ಅನುಕೂಲವಾಗಲಾರದೆ? ಅಲ್ಲದೆ ರಾಜಕೀಯ ಪರಿಸ್ಥಿತಿಯನ್ನು ವಿಚಾರಿಸಿ, ಅಲ್ಲಿನ ರಾಜಕೀಯ ಮುಂದಾಳುಗಳನ್ನು ಆಹ್ವಾನಿಸಲಾಗುವುದೇ?" ಎಂದು ಪಾರ್ಲಿಮೆಂಟಿನಲ್ಲಿ ಸೊರೆನ್ಸನರು ಪ್ರಶ್ನಿಸಿದರು.

ಅದಕೆ ಅಮೆರಿಯವರು, ಅಂತರ್ ರಾಷ್ಟ್ರೀಯ ಪರಿಸ್ಥಿತಿ ಬದಲಾದರೂ ಭಾರತದ ರಾಜಕೀಯದಲ್ಲಿ ಅದರ ಪರಿಣಾಮವಾಗಲಿಕ್ಕಿಲ್ಲವೆಂದರು. ಆ ಕುರಿತು ತಾನು ಈಗಲೇ ಹೇಳುವುದಿಲ್ಲವೆಂದರು.

"ಕಾಂಗ್ರೆಸಿನವರು ಏಳು ಪ್ರಾಂತಗಳ ಅಧಿಕಾರ ವಹಿಸಿದರೆ ಬಿಕ್ಕಟ್ಟು ಬಗೆಹರಿಯದೆ?" ಸರ್ ಜಿರ್ ಫ್ರೆಜ್ ನಾಕ್ಸರು ಕೇಳಿದರು

ಅದಕ್ಕೆ ಉತ್ತರವಿಲ್ಲ.

ಅಖಂಡ ಹಿಂದುಸ್ಥಾನ

ಮುನ್ಷಿಯವರ ಹೊಸ ಪಂಗಡ

ಬೊಂಬಾಯಿಯ ಮಾಜಿ ಮಂತ್ರಿಗಳಾದ ಶ್ರೀ। ಮುನ್ಷಿಯವರು ಕಾಂಗ್ರೆಸಿಗೆ ರಾಜಿನಾಮೆಯಿತ್ತ ಬಳಿಕ ಅಖಂಡ ಹಿಂದುಸ್ಥಾನ್ ಎಂಬ ಹೊಸ ಪಂಗಡವನ್ನು ಮಾಡಿದ್ದಾರೆ. ಎಲ್ಲಾ ರಾಜಕೀಯ ಪಂಗಡದವರೂ ಇದಕ್ಕೆ ಸೇರಬಹುದಂತೆ. ಭಾರತದಲ್ಲಿ ಶಾಂತಿ ಸ್ಥಾಪನೆ ಮತ್ತು ಐಕ್ಯ ಪಾಲನೆಯು ಈ ಹೊಸ ಪಂಗಡದ ತತ್ವಗಳಂತೆ.

ಠಾಗೂರರ ಪ್ರಕೃತಿ ಕೆಟ್ಟಿದೆ

ರವೀಂದ್ರನಾಥ ಠಾಗೋರರ ಆರೋಗ್ಯವು ಕೆಟ್ಟಿರುವ ಕಾರಣ ಡಾ। ಬಿ ಸಿ ರೋಯಿಯವರು ಶಾಂತಿನಿಕೇತನಕ್ಕೆ ತೆರಳುವರೆಂದು ತಿಳಿದಿದೆ.

ಇಪಿಫಕೀರನು ಅಫಘಾನಿಸ್ಥಾನಕ್ಕೆ ಹೋದನು?

ಇಪಿಫಕೀರನು ಅಫಘಾನಸ್ಥಾನಕ್ಕೆ ಓಡಿಹೋಗಿರುವನೆಂದು ಸುದ್ದಿಯಿದೆ

ಯುದ್ಧ ಪ್ರಯತ್ನದಲ್ಲಿ ಭಾಗವಹಿಸಿದರೆ

ಕಾಂಗ್ರೆಸ್ ಸದಸ್ಯತ್ವ ಹೋಗುವುದು

ಗಾಂಧಿಜಿ ತಿಳಿಸಿದ್ದಾರೆ

ಯಾವನೇ ಕಾಂಗ್ರೆಸ್ ಸದಸ್ಯನು ಬ್ರಿಟಿಷರ ಯುದ್ಧ ಪ್ರಯತ್ನದಲ್ಲಿ ಭಾಗವಹಿಸಿದರೆ ಆತನ ಸಾಮಾನ್ಯ ಸದಸ್ಯತ್ವವೂ ರದ್ದಾಗುವುದಾಗಿ ಮಹಾತ್ಮಾಜಿಯವರು ಡಿಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರ ಪತ್ರಕ್ಕೆ ಜವಾಬುಕೊಟ್ಟು ತಿಳಿಸಿದ್ದಾರೆ

ಅಣೆ ಗವರ್ನರರನ್ನು ಕಂಡರು

ಎಂ ಎಸ್ ಅಣೆಯವರು ನಾಗಪುರದ ಗವರ್ನರರನ್ನು ಕಂಡು ರಾಜಕೀಯದ ವಿಷಯ ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ

ಅತಿವೃಷ್ಟಿ—ಅನಾವೃಷ್ಟಿ

ಭಾರತದ ಹಲವಾರು ಕಡೆಗಳಲ್ಲಿ ಅತಿವೃಷ್ಟಿಯಿಂದ ನೆರೆಬಂದು ಅನರ್ಥವಾಗಿದೆ. ಕೆಲವು ಕಡೆಗಳಲ್ಲಿ ಅನಾವೃಷ್ಟಿಯೂ ಆಗಿದೆ. ಒಟ್ಟು ಭಾರತದ ಮೇಲೆ ಪ್ರಕೃತಿಯೇ ಸಿಟ್ಟುಗೊಂಡಂತೆ ಆಗಿದೆ

ವೈಸರಾಯರ ಘೋಷಣೆಯಲ್ಲಿ

ಕಾರ್ಯಕಾರೀ ಮಂಡಳದ ವಿಸ್ತಾರದ ವಿಷಯ

...ವು ಇರುವುದೆಂದೂ ಭಾರತದ ಬಿಕ್ಕಟ್ಟನ್ನು ಬಗೆಹರಿಸುವ ಯಾವ ಸಲಹೆಗಳೂ ಅದರಲ್ಲಿ ಅಡಕವಾಗಿಲ್ಲವೆಂದೂ ಸಿಮ್ಲಾದಲ್ಲಿ ಊಹೆಗಳಿದ್ದಿವೆ

ಡಾ। ಸತ್ಯಪಾಲರು ರಾಜಿನಾಮೆ ಕೊಟ್ಟರು

ಕಾಂಗ್ರೆಸಿನ ಇಂದಿನ ಧೋರಣೆಯಲ್ಲಿ ನಿರಾಶರಾಗಿ ಡಾ। ಸತ್ಯಪಾಲರು ಕಾಂಗ್ರೆಸ್ ಸದಸ್ಯತ್ವ ಹಾಗೂ ಶಾಸನ ಸಭಾ ಸದಸ್ಯತ್ವಗಳಿಗೆ ರಾಜಿನಾಮೆಕೊಟ್ಟರು ...ವರು. ಇವರು ಯುದ್ಧದಲ್ಲಿ ಗಾಯಗೊಂಡವರ ಶುಶ್ರೂಷೆ ಕೈಕೊಳ್ಳಲು ತನ್ನ ಸೇವೆ ಸಮರ್ಪಿಸುವರಂತೆ. ತನ್ನ ರಾಜಿನಾಮೆಯ ವಿಷಯದಲ್ಲಿ ಒಂದು ದೀರ್ಘ ಪ್ರಕಟಣೆ ಹೊರಡಿಸಿ ಅದರಲ್ಲಿ ಗಾಂಧಿಜಿಯವರ ಕ್ರಮ ನೀತಿಗಳನ್ನು ಸತ್ಯಾಗ್ರಹದ ಅಸಹಕಾರ ಕ್ರಮವನ್ನೂ ಕಟುವಾಗಿ ಟೀಕಿಸಿದ್ದಾರೆ. ವಿದೇಶೀಯರು ಭಾರತವನ್ನು ಆಕ್ರಮಿಸಿದರೆ ಅದನ್ನು ತಡೆಯುವುದು ನಮ್ಮ ಕರ್ತವ್ಯವೆಂದು ಅಭಿಪ್ರಾಯಪಟ್ಟಿದ್ದಾರೆ

ಮಹಾಜನ ಫ್ಲಡ್ ರಿಲೀಫ್‌ಗೆ ಸಹಾಯಮಾಡಿದ ಮಹನೀಯರು

ಮೂಲ್ಕಿ ಬೋ. ಹೈಸ್ಕೂಲ್ ಉಪಾಧ್ಯಾಯರ ಸಂಘ ರೂ 7–4–0, ಕೆನರಾ ಚೇಂಬರ್ ಒಫ್ ಕಾಮರ್ಸ್ ರೂ. 25, ಬಿ. ವೈಕುಂಠ ಬಾಳಿಗ ರೂ 50, ಶ್ರೀಮತಿ ಲೀಲಾಬಾಯಿ ಮತ್ತು ಎಂ ಏಕಾಂಬರ ರಾವ್ ರೂ. 5, ಬಾರ್ ಎಸೋಸಿಯೇಶನ್ ಮಂಗಳೂರು ರೂ. 100, ಮೂಲ್ಕಿ ವೆಂಕಟ್ರಮಣ ದೇವಳ ರೂ. 25, ಮಡಿಕೇರಿಯಿಂದ ರೂ. 3, ಮದ್ರಾಸು ಪ್ರಾಂತಿಕ ಕೋ-ಅಪರೇಟಿವ್ ಬೇಂಕ್ ಲಿಮಿಟೆಡ್ ರೂ. 500, ಎಸ್. ಸಿ ... ಬೇಂಕ್ ರೂ 15, ಬಜ್ಪೆ ನಿವಾಸಿಗಳು ಬಜ್ಪೆ ಯೂನಿಯನ್ ಕ್ಲಬ್ಬಿನ ಮುಖಾಂತರ ರೂ 10–8–0, ಡಾ. ವಿಟ್ಠಲ ಶೆಟ್ಟಿ ರೂ 10, ಗೌ। ಕಾರ್ಯದರ್ಶಿಗಳ ಮುಖಾಂತರ ರೂ 89

NOTICE

In the Court of the District Munsiff of Mangalore

S. C 130/41

Between —

Jaya Laxmi Bank Ltd, by its secretary, M Ganesh Rao } **Plaintiff**

and

1 Udyavar Anantha Shenoi
2. John Gregory Saldanha } **Defendants**

To 2nd defendant,

John Gregory Saldanha, son of Daminic Saldanha Town Surveyor, residing at Ulva, Mangalore Town

Please take notice that the above-named Plaintiff has filed the above suit against you and another for the reliefs claimed in the plaint, and that the said suit stands posted to 28–7–41 for hearing. Take notice that on your failure to appear either in person or through a pleader on the said date at 10 30 A.M. the suit will be decided exparte.

(by order of the Court)

Mangalore } K Ramesh Rao,
11–7–41 } Advocate for plaintiff

ರೈಲುಬಂಡಿಗಳ ಸಮಯ

ಇದೇ ಜುಲಾಯಿ ತಾ 1೦ರ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ ನೀಲೇಶ್ವರದವರೆಗೆ	8 45 ರಾತ್ರಿ / 7 52 ಬೆಳಗ್ಗೆ	9 25 ರಾತ್ರಿ / 1 0 ಅಪರಾಹ್ನ
ಮಲಬಾರು ಎಕ್ಸ್ ಪ್ರೆಸ್ (ಮೈಲ್)	9.5 ಬೆಳಗ್ಗೆ	5 15 ಸಾಯಂ.
ಪಾಲಾಘಾಟ್ ಪೆಸೆಂಜರ್	1.20 ಮಧ್ಯಾಹ್ನ	2 55 ಸಾಯಂ.
ಕಾಸರಗೋಡು ವರೆಗೆ	5.25 ಸಾಯಂ.	6 50 ಸಾಯಂ.
ಕಣ್ಣಾನ್ನೂರು ವರೆಗೆ	5 52 ಸಾಯಂ.	9.40 ಪೂರ್ವಾಹ್ನ

ಈ ವಾರದಲ್ಲಿ

ನಿಮ್ಮ ಗ್ರಹಗತಿ ಹೇಗಿದೆ?

18-7-41ರಿಂದ 24-7-41ರ ವರೆಗೆ

ಲೇಖಕ. ಕೆ. ನಾರಾಯಣ ನಂಬಿಯಾರ್, ಜ್ಯೋತಿಷಿ, ಕರ್ನಾಟಕ ಗ್ರಂಥಾಲಯ ಭವಂತಿಕೇರಿ.

ಮೇಷ

ನೀವು ಈ ವಾರದಲ್ಲಿ ಬಹಳ ಶ್ರಮ ಪಟ್ಟು ಧನವನ್ನು ಸಂಪಾದನೆ ಮಾಡುವಿರಿ. ನಿಮ್ಮ ಚತುರ್ಥ ಭಾವದಲ್ಲಿ ಸೂರ್ಯನು ವ್ಯಯ ಸ್ಥಾನದಲ್ಲಿ ಮಂಗಳನೂ ಇರುವ ಕಾರಣ ಪಿತ್ತೋಷ್ಣ ವಿಕಾರದಿಂದ ದೇಹಕ್ಕೆ ಆಯಾಸ. ಮಾನಸಿಕ ವಿಷಯ ತೊಂದರೆ. ಕುಟುಂಬ ಗೃಹಾದಿಗಳಲ್ಲಿ ಅಲ್ಪ ಸ್ವಲ್ಪ ಕೊರತೆ. ಅನಾವಶ್ಯಕ ಧನವ್ಯಯ. ವ್ಯಾಪಾರಾದಿಗಳಲ್ಲಿ ಸ್ವಲ್ಪ ಮಧ್ಯಮ. ನಿಮಗೆ ಲಾಟ್ರಿ ವಗ್ಯೆರೆಗಳಲ್ಲಿ ಹೆಚ್ಚಿನ ಲಾಭವುಂಟಾಗುವುದಿಲ್ಲ. ತಾರೀಕು ೨೨, ೨೩, ಹೆಚ್ಚಿನ ಸುಖ ಸಂತೋಷಾದಿ ಗುಣ ಫಲವಾದೀತು. ತಾ. ೨೦, ೨೧ ಹೆಚ್ಚಿನ ನಷ್ಟ ಕಷ್ಟಗಳಿಗೆ ಕಾರಣವಾದೀತು. ಆ ದಿನಗಳಲ್ಲಿ ಸ್ವಲ್ಪ ಜಾಗ್ರತೆಯಿಂದಿರಿ.

ವೃಷಭ

ನಿಮ್ಮ ತೃತೀಯ ಭಾವದಲ್ಲಿ ಸೂರ್ಯನು ಬಂದಿರುವುದರಿಂದಲೂ, ಏಕಾದಶದಲ್ಲಿ ಕುಜನು ಇರುವುದರಿಂದಲೂ, ನಿಮ್ಮ ಉದ್ಯೋಗಾದಿಗಳಿಂದ ಹೆಚ್ಚಿನ ಧನಪ್ರಾಪ್ತಿಯೂ, ದೇಹ ಸುಖ ಮತ್ತು ಮಾನಸಿಕ ಸುಖವೂ ಉಂಟಾದೀತು. ಗೃಹಕುಟುಂಬಗಳಲ್ಲಿ ಹೆಚ್ಚಿನ ಸುಖಫಲ ಉಂಟಾಗುವುದು. ನೀವು ಮಾಡುವ ಕೃತ್ಯಗಳಿಂದ ನಿಮಗೆ ಜಯವು, ಸ್ಥಾನ ಸುಖವೂ, ಬಹುಮಾನ ಪ್ರಾಪ್ತಿಯೂ ಒದಗುವುವು. ರಾಜಕೀಯ ವಿಷಯದಲ್ಲಿ ಜಯಹೊಂದಲಿಕ್ಕೆ ಕಾರಣವುಂಟು. ಲಾಟ್ರಿ ವಿಷಯದಲ್ಲಿ ಲಾಭವಿದೆ. ತಾರೀಕು ೧೮, ೧೯ ಹೆಚ್ಚಿನ ಧನಪ್ರಾಪ್ತಿ ಸುಖಜಯಾದಿ ಸುಖಫಲವನ್ನು ಹೊಂದುವಿರಿ.

ಮಿಥುನ

ನಿಮಗೆ ಈ ವಾರದಲ್ಲಿ ಅನಾಯಾಸದಿಂದ ದ್ರವ್ಯಪ್ರಾಪ್ತಿ ಬಂಧು ಸಮಾಗಮಾದಿಗಳಿಂದ ಸಂತೋಷ ಅನ್ನಪಾನಾದಿ ಸುಖ, ವಸ್ತ್ರಾಡಂಬರಾದಿಗಳ ಸುಖ ಮತ್ತು ನಿಮ್ಮ ದ್ವಿತೀಯದಲ್ಲಿ ಸೂರ್ಯನಿರುವ ಕಾರಣ ಉದ್ಯೋಗಾದಿಗಳಲ್ಲಿ ಕಷ್ಟ, ಇಷ್ಟ ಜನರಿಂದ ಧನಹಾನಿ, ಶಿರೋನೇತ್ರಗಳಿಗೆ ತಾಪ. ತಾರೀಕು ೨೦, ೨೧ ಹೆಚ್ಚಿನ ನಷ್ಟ ಕಷ್ಟಗಳಿಗೂ, ದೇಹಯಾಸಗಳಿಗೂ ಕಾರಣವಿದೆ. ೨೨, ೨೩ರಲ್ಲಿ ಲಾಭ, ಸುಖಾದಿಗಳಿಗೂ ಕಾರಣವಿದೆ. ನಿಮಗೆ ಲಾಟ್ರಿ ಮೊದಲಾದುವುಗಳಲ್ಲಿ ಅಲ್ಪ ಸ್ವಲ್ಪ ಲಾಭವುಂಟಾದೀತು ಮಾನಸಿಕ ತೊಂದರೆ, ಕಾರ್ಯಾದಿಗಳಲ್ಲಿ ಅಪಜಯ ವಗ್ಯೆರೆಗಳಿಗೂ ಕಾರಣವಿದೆ

ಕರ್ಕಾಟಕ

ನಿಮಗೆ ಈ ವಾರದಲ್ಲಿ ಉದ್ಯೋಗ ಮೊದಲಾದುವುಗಳಲ್ಲಿ ಹೆಚ್ಚಿನ ಧನಪ್ರಾಪ್ತಿ, ಮಾನಸಿಕ ಸುಖ, ಗೃಹಕುಟುಂಬಾದಿಗಳಲ್ಲಿ ಸಂತೋಷ. ನಿಮ್ಮ ಜನ್ಮದಲ್ಲಿ ಸೂರ್ಯನೂ ಸಧ್ಯದಲ್ಲೇ ಬಂದಿರುವವನಾದ ಹಿಂದ ದೇಹಾಯಾಸ ... ಕ್ಲೇಶ, ವೈರಿಗಳಿಂದ ಅಲ್ಪ ಸ್ವಲ್ಪ ತೊಂದರೆಯೂ ಉಂಟಾದೀತು. ಲಾಟ್ರಿ ವಗ್ಯೆರೆಗಳಲ್ಲಿ ಸ್ವಲ್ಪ ಲಾಭಾಂಶವು ಇದೆ. ರಾಜಕೀಯ ವಿಷಯದಲ್ಲಿಯೂ ಹೆಚ್ಚಿನ ತೊಂದರೆ ಇರುವುದಿಲ್ಲ. ತಾರೀಕು ೧೯, ೨೦, ೨೧ ಹೆಚ್ಚಿನ ಲಾಭ ಮಾನಸಿಕ ಸುಖಾದಿಗಳಿಗೆ ಕಾರಣವಾದೀತು.

ಸಿಂಹ

ನಿಮಗೆ ಈ ವಾರದಲ್ಲಿ ಹೆಚ್ಚಿನ ಧನವ್ಯಯ ಉದ್ಯೋಗ ವಗ್ಯೆರೆಗಳ ಚಿಂತೆ, ಉತ್ತಮ ಜನಕ್ಲೇಶ, ರಾಜಕಾರ್ಯಾದಿಗಳಲ್ಲಿ ಅಪಜಯ, ಕಷ್ಟ, ಕುಟುಂಬ ಗೃಹಾದಿಗಳಲ್ಲಿಯೂ ಮನಃ ಕ್ಲೇಶ, ಕಲಹ ಫಲವೂ ಉಂಟು. ದೇಹ ವಿಷಯದಲ್ಲಿಯೂ ಹೆಚ್ಚಿನ ಸುಖಕ್ಕೆ ಕಾಣವಿಲ್ಲ. ಲಾಟ್ರಿ ವಗ್ಯೆರೆಗಳಲ್ಲಿಯೂ ಲಾಭದ ಅಂಶವೇನೂ ಕಂಡಬರುವುದಿಲ್ಲ ನೀವು ಈ ವಾರದಲ್ಲಿ ಹೆಚ್ಚಿಗೆ ದೇವತಾ ಪ್ರಾರ್ಥನಾದಿಗಳನ್ನು ಮಾಡಿದಲ್ಲಿ ಸುಖ ಜಯಾದಿ ಫಲ ಉಂಟಾದೀತು. ತಾ. ೧೮, ೧೯, ಹೆಚ್ಚಿನ ನಷ್ಟಕಷ್ಟಕ್ಲೇಶಾಗುವಿರಿ.

ಕನ್ಯಾ

ನಿಮಗೆ ಈ ವಾರದಲ್ಲಿ ಭಯ, ಉದರ ಪೀಡೆ, ಕಾರ್ಯಾದಿಗಳಲ್ಲಿ ಅಲ್ಪ ಸ್ವಲ್ಪ ತೊಂದರೆ, ನಿಮ್ಮ ಏಕಾದಶದಲ್ಲಿ ಸಧ್ಯ ಸೂರ್ಯನು ಬಂದಿರುವುದರಿಂದಲೂ, ದಶಮದಲ್ಲಿ ಬುಧನೂ ಇರುವ ಕಾರಣ ಉದ್ಯೋಗ ವಗ್ಯೆರೆಗಳಿಂದ ಸುಖ. ಧನಪ್ರಾಪ್ತಿಯೂ ಉಂಟಾದೀತು ಲಾಟ್ರಿ ವಗ್ಯೆರೆಗಳಲ್ಲಿಯೂ ವಾರಾಂತ್ಯದಲ್ಲಿ ಲಾಭವುಂಟಾಗುವುದು. ತಾ. ೨೨, ೨೩, ೨೪ ಅನಾಯಾಸ ದ್ರವ್ಯಪ್ರಾಪ್ತಿ, ಉದ್ಯೋಗ ಸುಖಾದಿ ಉತ್ತಮ ಫಲ.

ತುಲಾ

ನಿಮಗೆ ಈ ವಾರದಲ್ಲಿ ದಶಮದಲ್ಲಿ ಸೂರ್ಯನು, ಷಷ್ಠದಲ್ಲಿ ಮಂಗಳನೂ ಇರುವ ಕಾರಣ ಉದ್ಯೋಗಾದಿಗಳಲ್ಲಿ ಅಲ್ಪ ಸ್ವಲ್ಪ ಲಾಭವೂ ಕಾರ್ಯಸಿದ್ಧಿಯೂ ಉಂಟಾದೀತು ನಿಮ್ಮ ನವಮ ಭಾವದಲ್ಲಿ ಬುಧನೂ ದಶಮದಲ್ಲಿ ಶುಕ್ರನೂ, ದ್ವಾದಶ ರಾಹುವೂ ಇರುವ ಕಾರಣ ಆದಾಯಕ್ಕಿಂತ ವ್ಯಯ ಹೆಚ್ಚಾಗಿಯೂ, ಗೃಹ ಕುಟುಂಬದಲ್ಲಿ ಸುಖಹಾನಿ, ಕಲಹ, ಮನಕ್ಲೇಶ ಇತ್ಯಾದಿಗಳಿಗೂ ಕಾರಣವಿದ್ದೀತು. ಲಾಟ್ರಿ ವಗ್ಯೆರೆಗಳಲ್ಲಿ ಲಾಭದ ಅಂಶವು ಸ್ವಲ್ಪ ಕಡಿಮೆಯಾಗಿದೆ ತಾ ೧೮, ೨೪ ಈ ಎರಡು ದಿವಸ ಉತ್ತಮ ಫಲ. ರಾಜಕೀಯ ವಿಷಯದಲ್ಲಿ ಉತ್ತಮ ಫಲವಿದೆ.

ವೃಶ್ಚಿಕ

ನೀವು ಈ ವಾರದಲ್ಲಿ ಉದ್ಯೋಗದಲ್ಲಿಯೂ ಲಾಟ್ರಿ ವಗ್ಯೆರೆಗಳಲ್ಲಿಯೂ ಹೆಚ್ಚಿನ ಧನವನ್ನು ಸಂಪಾದನೆ ಮಾಡುವಿರಿ. ಕಾರ್ಯಾದಿಗಳಲ್ಲಿ ಜಯಹೊಂದುವಿರಿ. ಮಾನಸಿಕ ವಿಷಯದಲ್ಲಿ ಸ್ವಲ್ಪ ಚಿಂತೆಯನ್ನು ಪಡೆಯುವಿರಿ, ದೇಹ ವಿಷಯದಲ್ಲಿ ಸ್ವಲ್ಪ ಅಸುಖತೆಯನ್ನು ಹೊಂದುವಿರಿ. ತಾ ೧೮, ೧೯, ೨೦ ಹೆಚ್ಚಿನ ಸುಖ ಲಾಭ ಜಯಗಳೂ ಪ್ರಾಪ್ತಿಯಾಗುವವು.

ಧನು

ನೀವು ಬಹಳ ಜಾಗ್ರತೆಯಿಂದಿರಬೇಕು. ದೇವರ ಭಕ್ತರಾಗಿರಬೇಕು; ನಿಮಗೆ ಅಷ್ಟಮದಲ್ಲಿ ಸೂರ್ಯನೂ ಚತುರ್ಥದಲ್ಲಿ ಮಂಗಳನೂ ಷಷ್ಠ ಗುರುವೂ ದಶಮ ರಾಹು, ಇವುಗಳೆಲ್ಲ ಕೆಟ್ಟ ಸ್ಥಿತಿಯಲ್ಲಿರುವುದರಿಂದ ಅನಾವಶ್ಯಕ ಧನ ನಷ್ಟ ಉದ್ಯೋಗ ವಗ್ಯೆರೆಗಳ ಚಿಂತೆ ಕಾರ್ಯಾದಿಗಳಲ್ಲಿ ಅಪಜಯ, ರಾಜಕೀಯ ವಿಷಯದಲ್ಲಿ ತೊಂದರೆ, ಗೃಹ ಕುಟುಂಬ ಸ್ನೇಹಿತರಲ್ಲಿ ಕಲಹ ಲಾಟ್ರಿ ವಗ್ಯೆರೆಗಳಲ್ಲಿ ನಷ್ಟ ಫಲ ಉಂಟಾಗುವವು. ತಾ ೧೮, ೨೪, ಹೆಚ್ಚಿನ ಕಷ್ಟ, ಆಯಾಸ, ಕಲಹ ಫಲಗಳೂ ಇವೆ

ಮಕರ

ನಿಮಗೆ ತೃತೀಯ ಮಂಗಳನೂ ಪಂಚಮ ಗುರುವೂ ಇರುವ ಕಾರಣ ಈ ವಾರದಲ್ಲಿ ಉದ್ಯೋಗಾದಿಗಳಲ್ಲಿ ಸುಖ, ಧನಪ್ರಾಪ್ತಿ, ಕಾರ್ಯಾದಿಗಳಲ್ಲಿ ಜಯ, ಕುಟುಂಬ ಗೃಹಾದಿಗಳಲ್ಲಿ ಸುಖ. ನಿಮ್ಮ ಸಪ್ತಮದಲ್ಲಿ ಸಧ್ಯ ಸೂರ್ಯನಿರುವ ಕಾರಣ ಪ್ರವಾಸಾದಿಗಳಿಂದ ತೊಂದರೆ, ದೇಹಾಲಸ್ಯ, ವಿಚಾರ ಕಾರ್ಯಭಂಗ, ಫಲವೂ ಉಂಟಾಗಲಿವೆ. ತಾ ೨೨, ೨೩, ಉತ್ತಮ, ಲಾಭ ಸುಖ ಫಲವಾದೀತು. ಸ್ವಲ್ಪ ದೇಹಾಯಾಸ, ಕಾರ್ಯಾಪಜಯ ಫಲವೂ ಇದೆ.

ಕುಂಭ

ನಿಮಗೆ ಈ ವಾರದಲ್ಲಿ ಭಯ, ಕಾರ್ಯಾದಿಗಳ ಚಿಂತೆ, ಕುಟುಂಬ ಗೃಹಾದಿಗಳಲ್ಲಿ ಸುಖಹಾನಿ, ಉದ್ಯೋಗ ವಗ್ಯೆರೆಗಳಲ್ಲಿ ಕಷ್ಟ, ಲಾಟ್ರಿ ವಿಷಯದಲ್ಲಿ ನಷ್ಟ, ವೈರಿಗಳ ಪೀಡೆ ನಿಮ್ಮ ಷಷ್ಠ ಸ್ಥಾನದಲ್ಲಿ ಸಧ್ಯ ಸೂರ್ಯನೂ ಬಂದಿರುವುದರಿಂದ ವಿಚಾರಕಾರ್ಯಾದಿಗಳಲ್ಲಿ ಜಯ, ಅಲ್ಪ ಸ್ವಲ್ಪ ಲಾಭ, ರಾಜಕಾರ್ಯಾದಿಗಳಲ್ಲಿ ಸುಖ ಮತ್ತು ಬಹುಮಾನ ಫಲವುಂಟಾದೀತು ತಾ. ೧೯, ೨೪ ಉತ್ತಮ, ಲಾಭ, ಕಾರ್ಯ ಜಯಾದಿ ಫಲವೂ ಇದೆ

ಮೀನ

ನಿಮಗೆ ಈ ವಾರದಲ್ಲಿ ಬಂಧುಜನಾದಿಗಳಿಂದ ಕಷ್ಟ ನೀವು ಮಾಡುವ ಕೃತ್ಯಗಳಲ್ಲಿ ನಿಮಗೆ ನಷ್ಟ ಇಷ್ಟ ಜನರಲ್ಲಿ ಕ್ಲೇಶ; ವೈರಿಗಳಿಂದ ಬಾಧೆ, ಕಾರ್ಯಾದಿಗಳಲ್ಲಿ ತೊಂದರೆ, ಅಪಜಯ ಫಲವೂ ಉಂಟಾದೀತು. ಲಾಟ್ರಿ ವಗ್ಯೆರೆಗಳಲ್ಲಿಯೂ ನಿಮಗೆ ಈ ವಾರದಲ್ಲಿ ಹೆಚ್ಚಿನ ಲಾಭದ ಅಂಶವು ಕಂಡುಬರುವುದಿಲ್ಲ. ತಾ. ೧೮, ೧೯, ಹೆಚ್ಚಿನ ನಷ್ಟಕಷ್ಟ ಫಲವಾದೀತು. ತಾ. ೨೦, ೨೧ ಅಲ್ಪಸ್ವಲ್ಪ

NACET BLADES

ಮೂರು ಗೂಟದ ರೇಜರುಗಳಿಗೆ



ನೆಸೆಟು ಬ್ಲೇಡುಗಳು

ನಿಜವಾದ ಕ್ಷೌರ ಸುಖಕ್ಕೆ ಹದವಾದ ಅಲಗುಗಳು, ಬೇಗನೇ ಉತ್ತಮವಾಗಿ ಆಶ್ಚರ್ಯಕರ ರೀತಿಯಲ್ಲಿ ನಯವಾದ ಕ್ಷೌರವು ಬೇಕಾದಲ್ಲಿ ಅತೀ ಕಡಿಮೆ ಕ್ರಯದ ನೆಸೆಟು ಬ್ಲೇಡುಗಳಲ್ಲಿ ಭರವಸೆಯನ್ನಿಡಿರಿ.

ಅಮೇರಿಕದಲ್ಲಿಯೂ ಹಿಟ್ಲರನೊಬ್ಬನಿರುವನಂತೆ!

ಕರ್ನಲ್ ಲಿಂಡ್‌ಬರ್ಗನೆಂದು ಅವನ ಹೆಸರು

ಬ್ರಿಟಿಷರನ್ನು ದೂರುತ್ತಾ ಇರುವನಂತೆ

ಹಿಂದೊಮ್ಮೆ ಎಲ್ಲರಿಗಿಂತ ಮೊದಲು ವಿಮಾನದಲ್ಲಿ ಅತ್ಲಾಂತಿಕವನ್ನು ಹಾರಾಡಿ ದಿಗಂತ ವ್ಯಾಪ್ತವಾದ ಕೀರ್ತಿಯನ್ನು ಗಳಿಸಿದ ಮತ್ತೆ ಅವನ ಒಂದೇ ಒಂದಾದ ಚಿಕ್ಕ ಮಗುವನ್ನು ಅಮೆರಿಕದ ಕಳ್ಳರ ಗುಂಪಿನವರು ಕದ್ದೊಯ್ದು ಕೊಲೆ ಮಾಡಿದ್ದಾಗ, ಇಡೀ ಪ್ರಪಂಚದ ಸಹಾನುಭೂತಿಗೆ ಪಾತ್ರನಾದ ಕರ್ನಲ್ ಲಿಂಡ್‌ಬರ್ಗನು ಈಗ ಬ್ರಿಟಿಷರ ಪ್ರಬಲ ವಿರೋಧಿಯಾಗಿ ಹಿಟ್ಲರನ ಕೈಗಳನ್ನು ಬಲಪಡಿಸಲಾರಂಭಿಸಿದ್ದಾನಂತೆ. ಕೆಲ ಕೆಲವರಂತೂ ಅವನನ್ನು ಅಮೆರಿಕದ ಹಿಟ್ಲರನೆಂದು ಕರೆಯತೊಡಗಿರುವರು.

ಅಮೆರಿಕದಲ್ಲಿ ಪ್ರಜಾಸತ್ತೆ ಇದೆ. ಅಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಲೇಖನ ಭಾಷಣ ಸ್ವಾತಂತ್ರ್ಯಗಳಿವೆ. ಲಿಂಡ್‌ಬರ್ಗನು ಈ ವ್ಯಕ್ತಿಸ್ವಾತಂತ್ರ್ಯವನ್ನೊಂದು ರೀತಿಯಲ್ಲಿ ದುರುಪಯೋಗ ಮಾಡುತ್ತಿರುವುದು ಅಮೆರಿಕದ ಜನರಲ್ಲಿ ಬಹಳ ಕಳವಳವನ್ನುಂಟುಮಾಡಿರುವುದು. ಅವನು ರೇಡಿಯೋದಲ್ಲಿ ಮಾತನಾಡುತ್ತಲೂ, ಪತ್ರಿಕೆಗಳಲ್ಲಿ ಬರೆಯುತ್ತಲೂ ಹಲವು ತೆರಗಳಿಂದ ಬ್ರಿಟಿಷರ ಮೇಲೆ ತನಗಿರುವ ದ್ವೇಷವನ್ನು ತೋರಿಸಿರುವನು. ಮತ್ತೆ ಅಮೆರಿಕವು ಪ್ರಪಂಚದ ಇತರ ಭಾಗಗಳ ರಾಜಕೀಯಗಳಿಂದ ಪ್ರತ್ಯೇಕವಾಗಿರಬೇಕೆನ್ನುವ ಅಮೆರಿಕದ ಐಸೊಲೇಶನಿಷ್ಟರ, ಬ್ರಿಟನಿಗೆ ಯುದ್ಧಕ್ಕಾಗಿ ಶಸ್ತ್ರಾಸ್ತ್ರ ಯಂತ್ರೋಪಕರಣಗಳನ್ನು ತಯಾರಿಸಲಾರೆವೆನ್ನುವ ಫೋರ್ಡ್ ಕಂಪನಿಯಂಥವರ, ಮುಷ್ಕರ ಹೂಡುವ ಮಜೂರ ಮತ್ತು ಯುದ್ಧ ವಿರೋಧಿ ಪೆಸಿಫಿಸ್ಟರೆಂಬ ಅಹಿಂಸಾ ವಾದಿಗಳ ಮುಖಂಡನೇ ತಾನೆಂದು ಈ ಲಿಂಡ್‌ಬರ್ಗನು ವರ್ತಿಸುತ್ತ ಲೇಖನ ಭಾಷಣಗಳನ್ನು ಕೊಟ್ಟಿದ್ದಾನಷ್ಟೆ.

ಅಮೆರಿಕದಲ್ಲಿ ಅವನಿಗೆ ಪ್ರೋತ್ಸಾಹ

ಪ್ರಪಂಚದ ವ್ಯವಹಾರಗಳ ಸತ್ಯಾಸತ್ಯ ನೀತಿ ಅನೀತಿ, ಔಚಿತ್ಯ ಅನೌಚಿತ್ಯಗಳನ್ನು ಪ್ರಚಾರ ಸಫಲತೆಯ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಕಾಲವಿದು. ಒಬ್ಬನು ಅನ್ಯಾಯವನ್ನೇ ಮಾಡಿದರೂ ತಾನು ಮಾಡಿದ್ದು ನ್ಯಾಯವೆಂದು ಪ್ರಚಾರ ಮಾಡಲಿಕ್ಕೆ ಅವನು ಸಫಲನಾಗುವನಾದರೆ, ಅವನನ್ನು ನ್ಯಾಯವಂತನೆಂದೇ ನಂಬುವ ಸ್ಥಿತಿಯ ಜನರು ಇದ್ದಾರೆ. ಲಿಂಡ್‌ಬರ್ಗನು ಜರ್ಮನಿಗೆ ಹೊರರಾಷ್ಟ್ರಗಳಿಂದ ಆಗಿರುವ ಅನ್ಯಾಯ, ಬ್ರಿಟಿಷರ ಸ್ವಾರ್ಥ ಯುದ್ಧದಿಂದಾಗುವ ಹಾನಿ ಮೊದಲಾದುವನ್ನು ರಸಭರಿತ ಮತ್ತು ಮನಸ್ಸಿಗೆ ಹಿಡಿಯುವ ಹಾಗೆ ಪ್ರಚಾರ ಮಾಡುವುದರಿಂದ, ಕೆಲವರಾದರೂ ಅವನಿಗೆ ಅನುಯಾಯಿಗಳಾ-

ಪ್ರೋತ್ಸಾಹ ಕೊಡುವ ಸಂಭವವು ಸಹಜವಾಗಿರುತ್ತದೆ. ನ್ಯೂಸ್ ಕ್ರಾನಿಕಲ್ ಪತ್ರಿಕೆಗೆ ಲೇಖನವನ್ನು ಬರೆಯುತ್ತ ವಿಚ್ ಮೇನ್ ಎಂಬ ಸದ್ಗೃಹಸ್ಥನು ಲಿಂಡ್‌ಬರ್ಗನಿಗೆ ಕೆಲವು ಹಿಂಬಾಲಿಕರು ಇದ್ದಾರೆಂದೂ ಒಪ್ಪಿದ್ದಾನೆ. ಅಮೆರಿಕದಲ್ಲಿ ಮಜೂರರ ಸಂಪುಗಳಾಗಲಿಕ್ಕೂ, ಯುದ್ಧ ವಿರೋಧ ಪ್ರದರ್ಶನೆಗಳಾಗಲಿಕ್ಕೂ ಲಿಂಡ್‌ಬರ್ಗನೇ ಮುಖ್ಯ ಕಾರಣನಾಗಿರುವನು. ಮತ್ತೆ, ಅವನು ಸರ್ವಪ್ರಥಮನಾಗಿ ವಿಮಾನದಲ್ಲಿ ಅತ್ಲಾಂತಿಕವನ್ನು ಹಾರಾಡಿ ಸಂಪಾದಿಸಿದ ತನ್ನ ಜನಮೆಚ್ಚುಗೆಯನ್ನು ಈಗ ಅವನು ಈ ಯುದ್ಧ ವಿರೋಧಕ್ಕಾಗಿ ಉಪಯೋಗಿಸುತ್ತಿರುವನಂತೆ.

ಪರಿವರ್ತನೆಗೆ ಕಾರಣ

ಅಮೇರಿಕದ ಪ್ರಜಾಸತ್ತೆಯಲ್ಲಿ ಹುಟ್ಟಿ ಬೆಳೆದ ಲಿಂಡ್‌ಬರ್ಗನಿಗೆ ಹಿಟ್ಲರನ ನಾಜಿವಾದದಲ್ಲಿ ಯಾಕೆ ವಿಶ್ವಾಸವುಂಟಾಯಿತು ಎಂಬುದು ರಹಸ್ಯವಾಗಿದೆ. ಅವನು ೧೯೩೬ರಲ್ಲಿ ಜರ್ಮನಿಗೆ ಹೋಗಿದ್ದಾಗ ಅಲ್ಲಿ ನಾಜಿ ಮುಖಂಡರು ಅವನನ್ನು ದಿವ್ಯವಾದ ಆದರೋಪಚಾರಗಳಿಂದ ಸತ್ಕರಿಸಿ ತಮ್ಮ ದೊಡ್ಡಸ್ತಿಕೆಯನ್ನು ತೋರಿಸಿದರು. ಆ ನಾಜಿ ಮುಖಂಡರು ಬೀಸಿದ ಮಾಯಾಜಾಲದಲ್ಲಿ ಲಿಂಡ್‌ಬರ್ಗನು ಬಿದ್ದನು. ಮತ್ತೆ ಅವನು ಅದರೊಳಗಿಂದ ಪಾರಾಗಲೇ ಇಲ್ಲ. ಲಿಂಡ್‌ಬರ್ಗನ ದೆಸೆಯಿಂದ ಅಮೆರಿಕದಲ್ಲಿ ಯುದ್ಧ ಪೂರ್ವದಲ್ಲಿಯೇ ಅನೇಕ ನಾಜಿವಾದಿ ಸಂಘಗಳಿದ್ದುವು. ಈಗ ಸಂಖ್ಯೆ ಇನ್ನೂ ಬೆಳೆಯುತ್ತಾ ಇದೆ. ಹಿಟ್ಲರನು ನಾಜಿವಾದದ ಪ್ರಚಾರಕ್ಕಾಗಿ ಅಮೆರಿಕದಲ್ಲಿ ಲಕ್ಷಾಂತರ ಖರ್ಚು ಮಾಡುತಿದ್ದಾನಂತೆ. ಮತ್ತು ಲಿಂಡ್‌ಬರ್ಗನು ಅಲ್ಲಿ ಹಿಟ್ಲರನ ಸೂತ್ರದ ಗೊಂಬೆಯಾಗಿ ಕೆಲಸಮಾಡುತ್ತಿದ್ದಾನೆಂದೂ ತಿಳಿದಿದೆ.

ನಲವತ್ತು ವರ್ಷಗಳ ಪ್ರಖ್ಯಾತಿ

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಮುಟ್ಟಿನ ಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಮುಟ್ಟುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಬಿಳುಪುರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈ ಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀನು ಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವ ಜ್ವರನಿವಾರಿಣಿ
ಆಹಾರ, ವಿಹಾರ, ಋತುಭೇದ, ದೋಷಗಳಿಂದ ಅನ್ನಾಶಯದಲ್ಲಿ ಕ್ರಿಮಿಗಳು ಸೇರಿ ನಾನಾವಿಧವಾದ ಜ್ವರಗಳು ಸಂಭವಿಸುತ್ತದೆ. ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ವಾಸಿಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖ ಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟೆ :: ಮದರಾಸು.

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

ತಲೆ ನೋಯುತ್ತಿದೆ. ರುಚಿಯಿಲ್ಲ. ನಾಲಗೆ ಒಣಗಿದೆ. ಹೊಟ್ಟೆ ಸರಿಯಿಲ್ಲ.



ಮಲಬದ್ಧತೆ, ತಲೆನೋವು, ಹೊಟ್ಟೆಗೆ ಅಜೀರ್ಣ, ಕೆಡುವ ಪರಿಸ್ಥಿತಿ, ಶಕ್ತಿ ಕ್ಷೀಣವಾಗುವುದು ಇವುಗಳೆಲ್ಲಾ ನಿಮ್ಮ ಶರೀರದಲ್ಲಿ ಕಲ್ಮಷಗಳಿರುವುದನ್ನು ತೋರಿಸುತ್ತವೆ. ದಿನನಿತ್ಯವೂ ಒಂದು ಗ್ಲಾಸು ತಂಪುನೀರಿನ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು, ಶರೀರದೊಳಗಿನ ವಿಷವಸ್ತುಗಳನ್ನು ಹೊರಹಾಕಿರಿ. ಕೂಡಲೆ ನೀವು ಹೊಸ ಮನುಷ್ಯರೇ ಆಗುವಿರಿ. ಬುದ್ಧಿ ತೀವ್ರವಾಗುವುದು, ಶರೀರ ಶಕ್ತಿಗೊಳ್ಳುವುದು. ಪಾಲಕೋಶವನ್ನು ಎಂಡ್ರೂಸ್ ಲಿವರ್ ಸಾಲ್ಟ್ ನಿರ್ಮಲಗೊಳಿಸುವುದು. ಶರೀರದೊಳಭಾಗವು ಶುಚಿಗೊಳ್ಳುವುದು. ಇದರಿಂದ ಖಂಡಿತವಾಗಿಯೂ ಉತ್ತಮ ಆರೋಗ್ಯವುಂಟಾಗುವುದು.

ಶರೀರದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ANDREWS
LIVER SALT

ಆರೋಗ್ಯಕರ ಪಾನೀಯ ಮತ್ತು ಪುಷ್ಟಿಕರವಾದುದು

ಹಿತ, ತಂಪು, ಸುಕ...

ಸಣ್ಣ ಸೈಜಿಗೆ ...
ದೊಡ್ಡ ಸೈಜಿಗೆ ...

ಹಿಟ್ಲರ್, ಸ್ಟಾಲಿನ್, ಜಾರ್ಜರ ಜಾತಕ ಫಲ

ದಕ್ಷಿಣ ಕನ್ನಡದ ಜ್ಯೋತಿಷಿಗಳೊಬ್ಬರ ಭವಿಷ್ಯ

ಕಳೆದ ಜೂನು ೨೨ನೆಯ ತಾರೀಕಿನಿಂದ ಆಗೋಸ್ತು ೮ನೆಯ ತಾರೀಕಿನ ವರೆಗೆ ಹಿಟ್ಲರ ಜಾತಕ ಪ್ರಕಾರ ಅನೇಕ ತೊಂದರೆಗಳು ಸಂಭವಿಸುವವು. ಅದಕ್ಕೆ ಅನುಸಾರವಾಗಿ ರಶ್ಯ ಜರ್ಮನಿಗಳೊಳಗೆ ಮಹತ್ತಾದ ಕದನ ಉಂಟಾಯಿತು. ಜರ್ಮನಿಗೆ ಕಳೆದ ತಾ. ೨೦ಕ್ಕೆ ಕುಜ ೬ನೇ ರಾಶಿಗೆ ಸೇರಿದ ಬಳಿಕ ಇವರ ಜಗಳವು ವಿಪರೀತಕ್ಕೆ ಬಿತ್ತು. ಇವರ ಗ್ರಹರುಗಳ ಗತಿಗಳು ನೋಡುವಾಗ ಭಯಂಕರ ಕಾಲ. ಯಾಕೆಂದರೆ ರಾಹುದಶಾ ಶುಕ್ರಭುಕ್ತಿ, ಆ ರಾಹುವಿನ ಅಂತರ್‌ಭುಕ್ತಿ, ಆ ರಾಹು ಚಂದ್ರಾತ್ ಮಾರಕ ಸ್ಥಾನದಲ್ಲಿರುತ್ತಾನೆ. ಭುಕ್ತಿಕಾರಕ ಶುಕ್ರನು ಲಗ್ನಅಷ್ಟಮಪತಿ ಚಂದ್ರಾತ್ ಷಷ್ಠ ಏಕಾದಶಾಧಿಪತಿಯಾಗಿ ಮಾರಕರೊಂದಿಗೆ ಸೇರಿ ಮಾರಕದಲ್ಲಿ ನಿಂತಿರುವನು. ಚಂದ್ರಾತ್ ಚತುರ್ಥ ಕುಜಕೇತುಗಳು ಷಷ್ಠದಲ್ಲಿ, ಗುರು ಸಪ್ತಮದಲ್ಲಿ ಸೂರ್ಯ ಇದೇ ತಾ ೧೬ಕ್ಕೆ ಅಷ್ಟಮಕ್ಕೆ ರವಿ ಕೂಡಾ ಹೋಗುತ್ತಾನೆ. ಶನಿ ೬ರಲ್ಲಿ ಒಳ್ಳೆಯದೆಂತ ಹೇಳುವನೋ, ಆತನು ೨-೩ನೇ ರಾಶಿಗೆ ಅಧಿಪನಾಗಿ ಅರಿಷ್ಟ ರಾಶಿಯಲ್ಲಿ ನಿತ್ತದ್ದರಿಂದ ನಂಬಿಕೆ ಮತ್ತು ಆಹಾರಕ್ಕೆ ಸಾಂಪತಿಕಕ್ಕೆ ಸಹಾ ಗುಣಕರನಲ್ಲ. ಸರ್ವಾಧಿಕಾರಿಯ ಅಪೇಕ್ಷೆಯಂತೆ ನಡೆಯುವುದಕ್ಕೆ ಸಾಧ್ಯವಲ್ಲ. ರಶ್ಯ ರಾಜಕ್ಕೆ ಕುಂಭ ಮತ್ತು ವೃಷಭರಾಶಿಯೆಂತ ಸೂಚಿಸುತ್ತದೆ. ಕಳೆದ ತಾ. ೨೨ಕ್ಕೆ ಆ ವೃಷಭರಾಶಿಯಲ್ಲಿಯೇ ಚಂದ್ರನಿರುವಾಗ ಯುದ್ಧ ಪ್ರಾರಂಭ. ಯುದ್ಧಕ್ಕೆ ಕಾರಕನಾದ ಕುಜನು ಲಾಭ ರಾಶಿಯಲ್ಲಿ ಕೇತು ಸಮೇತನಾಗಿ ನಿತ್ತದ್ದಲ್ಲದೆ ಲಗ್ನ ಶತ್ರು ಸ್ಥಾನಾಧಿಪ ಶುಕ್ರನು ದ್ವಿತೀಯ ರಾಶಿಯಲ್ಲಿಯೇ ಇರುವುದರಿಂದ ಸ್ಟಾಲಿನರನ್ನು ಜಯಿಸುವುದು ಹಿಟ್ಲರರಿಗೆ ಸುಲಭ ಸಾಧ್ಯವಲ್ಲ. ಆರಂಭ ಗುರ್ವೀ ಕ್ಷಯಿಣೀ ಕ್ರಮೇಣ ಎಂಬಂತೆ ಶುರುವಿಗೆ ಮಹತ್ತಾಗಿ ಕನಸು ಕಂಡರೂ ಕೊನೆಗೆ ತೃಣಸಮಾನವಾಗುವುದು. ರಶ್ಯದವರ ಗ್ರಹಸ್ಥಿತಿಗಳು ಅಷ್ಟು ಕೆಟ್ಟದಲ್ಲವಾದ್ದರಿಂದ ಸಾಕಷ್ಟು ಕಾದಾಡುವರು. ಇವರ ಗ್ರಹದ ಸ್ಥಿತಿಗಳು ಸಂಪೂರ್ಣ ಸಿಕ್ಕಲಿಲ್ಲವಾದ್ದರಿಂದ ವಿಶೇಷ ಸೂಚಿಸುವುದಿಲ್ಲ. ಜಾರ್ಜ್ ಚಕ್ರವರ್ತಿಗಳ ಜಾತಕದಲ್ಲಿ ಪ್ರಸ್ತುತ ಶುಕ್ರ ದಶಾ ಸೂರ್ಯ ಭುಕ್ತಿ, ಬರುವ ಇದೇ ದಶಂಬರ ತಾ ೭ರ ವರೆಗೆ ಇರುತ್ತದೆ. ಈ ಭುಕ್ತಿಯ ಜನ್ಮ ರಾಶಿಯಿಂದ ೫ರಲ್ಲಿ ಕುಂಭ ಕೇತುಗಳು. ೭ರಲ್ಲಿ ಶನಿ, ೮ರಲ್ಲಿ ಸೂರ್ಯ ವಗೈರೆ ಇರುವುದು, ಅಷ್ಟು ಅನುಕೂಲವಲ್ಲ. ಬೃಹಸ್ಪತಿಯು ೭ನೆ ರಾಶಿಯಲ್ಲಿ ನಿಂತು ಪೂರ್ಣ ಅನುಗ್ರಹ ಕೊಡುವವನಾದುದರಿಂದ ಯಾವ ತೊಂದರೆಗಳನ್ನು ಲಕ್ಷಿಸಬೇಕಾಗಿಲ್ಲ. ಇನ್ನು ಕೂಡಾ ಅಮಿತ್ರರು ಮಿತ್ರರಾಗುವಿಕೆ, ವಿಷವು ಅಮೃತವಾಗುವ ಕಾಲ. ಇವರು ಹುಟ್ಟುವಾಗಲೇ ಲಗ್ನಾತ್ ದಶಮದಲ್ಲಿ ಗುರು ಉಚ್ಚಃ ಲಕ್ಷಂ ದೋಷಂ ಹಂತೀ ದ್ಯೈವೇಂದ್ರ ಪೂಜ್ಯಕಾಕೇಂದ್ರಂ ಪ್ರಾಪ್ತೋ ದೈತ್ಯ ಮಂತ್ರೀಶದರ್ಧಂ। ಎಂಬ ಮಹಾ ಯೋಗ ಇರುವುದಲ್ಲದೆ ತ್ರಿಕೋಣ ಕೇಂದ್ರಾಧಿಪ ಶನಿಯು ಲಗ್ನದಲ್ಲಿ ಉಚ್ಚನಾದ ಕಾರಣ ಶುಕ್ರದಸೆಯೇ ನಡೆಯುವ ಕಾರಣವ್ಯಾಗತವೈಭವ ಸಮೇತ ಪ್ರಾಪ್ತಿಯಾಗಿ ಸರ್ವ ಸುಖ ಸಾಮ್ರಾಜ್ಯಪದವಿಯನ್ನು ಆನಂದದಿಂದ ಅನುಭವಿಸುವ ಯೋಗ ಚೆನ್ನಾಗಿ ಕಂಡುಬರುತ್ತದೆ

— ಪಿ. ಗಣಪತಿ ಐತಾಳ

ರಾಧೆ ಪತ್ರ ಬರೆದಳು....

[೩ನೆಯ ಪುಟದಿಂದ ಮುಂದುವರಿದುದು]

ಅವನು ನಿರ್ವಿಕಾರಭಾವದಿಂದ ಉತ್ತರಕೊಟ್ಟನು. 'ಆ ಗಾಡಿಯು ೬ಕ್ಕೆ ಇಲ್ಲಿಗೆ ಬಂದು ೬-೧೦ಕ್ಕೆ ಇಲ್ಲಿಂದ ಮುಂದೆ ಹೋಯಿತು. ಬರುವ ಟ್ರೈನು ಲಖನೌವಿನಿಂದ ಬರಬೇಕಾಗಿದೆ. ಅದು ಬರಲು ಇನ್ನೂ ಒಂದು ತಾಸಿದೆ.'

ಮನ್ಮಥನಾಥನು ದಿಗ್ಭ್ರಾಂತನಾಗಿ 'ಏನಂದೆ? ಲಖನೌವಿಗೆ ಹೋಗುವ ಟ್ರೈನು ಹೋಗಿ ಆಯಿತೇ?' ಎಂದು ಪ್ರಶ್ನಿಸಿದನು. ಅವನ ಮುಖಮಂಡಲದಲ್ಲಿ ಮೂಡಿದ ಹರ್ಷರೇಖೆಗಳು ಮಾಯವಾಗಿ ದುಃಖೋದ್ವೇಗಗಳು ಆಸ್ಥಾನವ ಅಲಂಕರಿಸಿದುವು.

ಅವನು ರಿಸ್ಟ್‌ವಾಚನ್ನು ನೋಡಿದನು. ಪಾಪ! ಆ ಸಣ್ಣ ಮುಳ್ಳುಗಳು ೪॥ ತಾಸನ್ನು ತೋರಿಸುತ್ತಿದ್ದುವು. ಪುನಃ ಮನ್ಮಥನಾಥನು ವಾಚನ್ನು ಪರಿಶೀಲಿಸಿದನು. ಆ ಮುಳ್ಳುಗಳು ಅವನನ್ನು ಹಾಸ್ಯಮಾಡುವಂತೆ ತೋರುತ್ತಿತ್ತು. ೪॥ ಗಂಟೆಯ ನಂತರ ಆ ಮುಳ್ಳುಗಳು ವಿರಾಮವನ್ನು ಹೊಂದಿದ್ದುವು. ದಿವಸದ ಇಡೀ ೨೪ ತಾಸುಗಳಲ್ಲೂ ದುಡಿದು ದುಡಿದು ಹೆಣವಾದ ಆ ಮುಳ್ಳುಗಳಿಗೆ ಕೆಲವು ದಿನಗಳಿಗೊಮ್ಮೆಯಾದರೂ 'ಇಂಟರ್‌ವಲ್' ಬೇಡವೇ?

ಅಂದು ವಾಚಿಗೆ ಕೀ ಕೊಡದೆ ಇದ್ದುದು ಅವನಿಗೆ ನೆನಪಾಯಿತು. ರಾಧೆಯ ಪತ್ರವು ಬಂದು ಅವಳಿಗೆ ಸೀತಾಪುರದಲ್ಲಿ ಸಂಭ್ರಮದ ಸ್ವಾಗತವೀಯಬೇಕೆಂಬ ಭಾವನೆಯ ಆವೇಶದಲ್ಲಿ ವಾಚಿಗೆ ಕೀ ಕೊಡುವುದನ್ನೂ ಮನ್ಮಥನಾಥನು ಮರೆತಿದ್ದನು! ರೈಲ್ವೇ ಕರ್ಮಚಾರಿಯು ಮತಿಗೆಟ್ಟ ಮನ್ಮಥನಾಥನನ್ನು ಕೌತುಕನ ನೋಟದಿ ಅತ್ತ ತೆರಳಿದನು. ಮನ್ಮಥನಾಥನು ನಿಟ್ಟುಸಿರು ಬಿಡುತ್ತ ಕ್ಯೂದಲ್ಲಿರುವ ಬುಟ್ಟಿಗಳೆರಡನ್ನೂ ಶೂನ್ಯ ಮನಸ್ಕನಾಗಿ ನೋಡಿದನು. ಜನರೆಲ್ಲ ಸ್ವಗೃಹಾಭಿಮುಖವಾಗಿ ಹೋಗುತ್ತಿದ್ದಾರೆ! ಗೃಹ ಪಕ್ಷಿಗಳೆನ್ನದೆ ಎಲ್ಲವೂ ತಮ್ಮ ತಮ್ಮ ವಾಸಸ್ಥಾನಗಳಿಗೆ ಮರಳುತ್ತಿವೆ! ಎಲ್ಲರೂ ಮುಂದೆ ಹೋದರು. ಮನ್ಮಥನಾಥನೊಬ್ಬನೆ ಹಿಂದುಳಿದನು.

ಜಗತ್ತೆಲ್ಲ ಅವನಿಗೆ ಶೂನ್ಯವಾಯಿತು. ಬುಟ್ಟಿಗಳಲ್ಲಿ ನೆಟ್ಟ ತನ್ನ ಶೂನ್ಯ ದೃಷ್ಟಿಯನ್ನು ಮನ್ಮಥನಾಥನು ಪಡುದಿಕ್ಕಿಗೆ ಹೊರಳಿಸಿದನು. ಸೂರ್ಯನು ಸಹ ಅವನನ್ನು ಬಿಟ್ಟು ತನ್ನ ನಿಲಯಕ್ಕೆ ತೆರಳುತ್ತಿದ್ದನು!

(ಹಿಂದಿಯಿಂದ, ಅನುವಾದಕ ಎಚ್. ವಿಟ್ಠಲ ಶೆಣೈ, ಮಂಗಳೂರು.)

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರು

ಜಗತ್ಪ್ರಸಿದ್ಧ ಔಷಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಘಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer. **Dr. D. N JASANI,** Vithalbhai Patel Road, BOMBAY 4

Madras Agent. **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

...ನೆಮಾ ಸುದ್ದಿ

...ಪ್ನಾ ಘರ್‌ನಲ್ಲಿ ಶಾಂತಾ ಆಪ್ಟೆ

ಶಾಂತಾಆಪ್ಟೆಯು ಅಭಿನಯವುಳ್ಳ ...ಪ್ನಾ ಘರ್ ಚಿತ್ರವನ್ನು ತಯಾರಿಸು ...ದರಲ್ಲಿ ಶ್ರೀ ದೇವಕಿಬೋಸರು ನಿರತ ...ಗಿರುವರೆಂದು ಮುಂಬಯಿಯ ಸುದ್ದಿ.

...ಗರ್ ಕೀ ಲಾಜ್‌ನಲ್ಲಿ ಹುಬ್ಳೀಕರ್

ಶಾಂತಾ ಹುಬ್ಳೀಕರ್ ಅಭಿನಯಿ ...ವ ಘರ್ ಕೀ ಲಾಜ್ ಚಿತ್ರವು ಕಳೆ ...ವಾರ ಪ್ರದರ್ಶಿತವಾಗಿದೆ. ಅಭಿನಯ ...ಲ್ಲಿ ತನ್ನ ಅತ್ತಿಗೆಯು (ಸಿನೆಮಾದ) ಸತ್ತ ...ಸ್ಸಮಯದಲ್ಲಿ ಶಾಂತಾ ಹುಬ್ಳೀಕರ್ ...ತ್ಯಂತ ದಾರುಣವಾಗಿ ಶೋಕಿಸಿದಳು. ...ಂತಾಳ ಗಂಡ ಗೀಟೆ ಮತ್ತು ಸಿರ್ವೀ ...ರು, ಶಾಂತಾ ಹುಬ್ಳೀಕರಳು ತನ್ನ ...ಗನ ಮರಣದ ಸಂದರ್ಭವನ್ನು ನೆನಸಿ ...ಂಡಳೆಂದು ಅಭಿಪ್ರಾಯಪಟ್ಟರು. ...ಟಿ ಅಳುವ ಹೆಂಡತಿಯು ಬಳಿಗೆ ಹೋ...ಗಿ ಆಕೆಯ ದುಃಖವನ್ನು ಶಾಂತಪಡಿಸಿದನಂತೆ. ಇದು ಸಿನೆಮಾಂಕಣದ ವಾರ್ತ್ಯದ ಸುದ್ದಿ.

ಐ. ಸಿ. ಎಸ್, ಎಂ. ಎಗಳು ಉದಯಶಂಕರ ನೃತ್ಯ ಕೇಂದ್ರದಲ್ಲಿ

ಒಬ್ಬ ಐ. ಸಿ. ಎಸ್., ಒಬ್ಬ ಡಾಕ್ಟರ್ ಓಫ್ ಫಿಲೋಸಫಿ, ಮತ್ತೊಬ್ಬಳು ಪ್ಯಾರಿಸಿನ ಡಿಪ್ಲೊಮಾ ಪಡೆದ ಲೇಡಿ ಇಂತಹವರು ಇತ್ತೀಚೆಗೆ ಉದಯಶಂಕರರ ಅಲ್ಮೋರಾ ನೃತ್ಯ ಕೇಂದ್ರಕ್ಕೆ ಬಂದ ವಿದ್ಯಾರ್ಥಿಗಳು. ಇವರು ಮಾತ್ರವಲ್ಲದೆ ಇನ್ನೂ ಅನೇಕ ಮಂದಿ ಕಲಾವಿದರು ಅಲ್ಲಿ ಬಂದು ಸೇರುವರು.

ರಾಜಾ ಗೋಪಿಚಂದ್

ಎಂ. ಕೆ. ರಾಧಾ, ಎಂ. ಎ; ರಾಜಾಮಣಿ, ಮೀನಲೋಚನಿ ಮತ್ತು ಅನೇಕ ಪ್ರಸಿದ್ಧ ನಟರಿಂದ ಕೂಡಿದ 'ರಾಜಾಗೋಪೀಚಂದ' ಎಂಬ ತಮಿಳು ಚಿತ್ರವು ತಯಾರಾಗುತ್ತಿದೆ.

ಬೇಬಿ ಸರೋಜಳಿಗೆ ಸತ್ಕಾರ

ಫೇಮಸ್ ಪಿಕ್ಚರ್ಸಿನ ಬಾಬುರಾವ್ ಪೈಯವರು ಬೇಬಿ ಸರೋಜಳಿಗೆ ಸತ್ಕಾರಕೂಟವೊಂದನ್ನೇರ್ಪಡಿಸಿದರು. ಚುನ್ನಿಲಾಲ್, ಮೋದಿ, ಬಾಬುರಾವ್ ಪಟೇಲ್, ಚಿಮನ್‌ಲಾಲ ದೇಸಾಯಿ, ಮೊದಲಾದವರು ಅದಕ್ಕೆ ಆಮಂತ್ರಿತರಾಗಿದ್ದರು.

ಸಂಗಮ- ನವಯುಗ ಚಿತ್ರಪಟದಲ್ಲಿ

ನವಯುಗ ಚಿತ್ರಪಟದವರು 'ಸಂಗಮ' ಎಂಬ ಚಿತ್ರವನ್ನು ಕೊಲ್ಹಾಪುರ ಸಿನೆಟೋನ್ ಸ್ಟುಡಿಯೋದಲ್ಲಿ ತಯಾರಿಸುತ್ತಿರುವರು. ವಿನಾಯಕ, ಮೀನಾಕ್ಷಿ ಶಿರೋಡ್ಕರ್, ಮಾಲತಿ ಗುಪ್ತೆ, ಬೇಬಿ ದೇವಿ, ಜೋಗ್ ಮೊದಲಾದವರು ಇದರಲ್ಲಿ ಅಭಿನಯಿಸುತ್ತಾರೆ.

ಶಾಹುಮೋಡಕ್

ಅತ್ರೆ ಪಿಕ್ಚರ್ಸಿಗೆ ಸೇರಿರುವನೆಂಬುದಾಗಿ ಸುದ್ದಿ ಬಂದಿರುವುದು. ಅವರ ಮುಂದಿನ ಚಿತ್ರ 'ವಸಂತಸೇನಾ'ದಲ್ಲಿ ಮುಖ್ಯಪಾತ್ರವಹಿಸಲಿರುವನಂತೆ.

ಪೆಂಡಾರ್ಕರರಿಗೆ ಬೆಂಬಲ

ಪೆಂಡಾರ್ಕರ್ ಪುನರುಜ್ಜೀವನಗೊಳಿಸುವ ಹಂಸ ಪಿಕ್ಚರ್ಸಿಗೆ ಗ್ವಾಲಿಯರ ಸಂಸ್ಥಾನದ ಅರಸರು ಸಹಾಯಕೊಡುವರಂತೆ.

ಮೂರು ಸೈಗಲ್ ಚಿತ್ರಗಳು

ಸೈಗಲ್ ಈ ವರ್ಷ ನ್ಯೂಥಿಯೇಟರ್ಸಿನ ಮೂರು ಚಿತ್ರಗಳಲ್ಲಿ ಅಭಿನಯಿಸಲಿರುವನಂತೆ.

ವಸಂತಸೇನಾದಲ್ಲಿ ವನಮಾಲಾ

ಅತ್ರೆ ಪಿಕ್ಚರ್ಸಿನವರು ತಯಾರಿಸುವ ವಸಂತಸೇನಾ ಚಿತ್ರದಲ್ಲಿ ವನಮಾಲಾ ವಸಂತಸೇನೆಯ ಪಾತ್ರಾಭಿನಯ ಮಾಡುವಳೆಂದು ತಿಳಿದಿದೆ. ಚಾರುದತ್ತನು ಶಾಹುಮೋಡಕ್ ಎಂದು ಸುದ್ದಿ.

ಗೌತಮ ಬುದ್ಧ-ಬೇಕು

ಮಿನೆರ್ವಾ ಚಿತ್ರ ನಿರ್ಮಾಪಕರು ಗೌತಮ ಬುದ್ಧನ ಚಿತ್ರವೊಂದನ್ನು ತಯಾರಿಸುವರಂತೆ. ಅದರಲ್ಲಿ ಬುದ್ಧನ ಪಾತ್ರ ಅಭಿನಯಿಸುವರೆ ಸುಂದರಾಕೃತಿಯ ಯುವಕನೊಬ್ಬನು ಬೇಕಾಗಿರುವನೆಂದು ಅವರ ಪ್ರಕಟಣೆಯಾದೆ. ಆತನು ಕೆಲಕಾಲ ಬುದ್ಧ ಸನ್ಯಾಸ ಜೀವನವನ್ನು ಅಭ್ಯಸಿಸಬೇಕಂತೆ.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ. ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಸುಕ್ರ ಸಂಜೀವನ

ಭಾರತ ದೇಶವಂದು ಪ್ರಾಚೀನ ಋಷಿ... ನಿಯಮಗಳಿಗನುಸಾರವಾಗಿ ನಡೆಯುವ... ಪ್ರತಿಯೊಬ್ಬ ಭಾರತೀಯನ ಮೂಲ... ಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯ... ಕಾಮವಾಗಿ ಭಾರತೀಯರಿಂದು ನಿಸ್ತೇಜತರಾಗಿದ್ದಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆಯಿಲ್ಲದವರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ... ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ. ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುವೆ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ಮಾಡಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4

...ಧ್ಯಕ್ಷ ಡಾ. ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

...ಂಗಳೂರಿನ ಏಜೆಂಟ್: ... ಕಂಪೆನಿ, ಹಂಪನಕಟ್ಟಾ, ಮಂಗಳೂರು

ವಿಚಿತ್ರ ಪ್ರಪಂಚ

ಕಣ್ಮರೆಯಾಗುವ ಹುಡುಗಿ

ಅಮೆರಿಕದ ಯೂನಿಯನ್ ಸಿಟಿ ಎಂಬ ನಗರದಲ್ಲಿ ಹದಿನೆರಡು ವರ್ಷಗಳ ಮೊದಲು ನ್ಯೂಮನ್ ಎಂಬ ಹನ್ನೊಂದು ವರ್ಷ ಪ್ರಾಯದ ಒಬ್ಬ ಹುಡುಗಿ ಮದ್ದು ತರಲಿಕ್ಕೆ ಪೇಟೆಗೆ ಹೋದವಳು ಪುನಃ ಮನೆಗೆ ಮರಳಲಿಲ್ಲ. ತಾಯಿತಂದೆಗಳು ಅವಳನ್ನು ಎಷ್ಟು ಹುಡುಕಿದರೂ ಅವಳು ದೊರೆಯಲಿಲ್ಲ. ಕಳ್ಳರು ಅವಳನ್ನು ಕದ್ದೊಯ್ದಿರಬೇಕೆಂದು ಎಣಿಸಿ ಅವರು ಅವಳ ಎಲ್ಲಾ ಆಸೆಗಳನ್ನು ಬಿಟ್ಟಿದ್ದರು. ಆದರೆ ಮೊನ್ನೆ ಅವಳು ೨೩ ವರ್ಷದ ತರುಣಿಯಾಗಿ ಮನೆಗೆ ಮರಳಿದಳು. ಬರುವಾಗ ಅನೇಕ ಬೆಲೆಯುಳ್ಳ ವಸ್ತು ಒಡವೆಗಳನ್ನು ತಂದಿದ್ದಳು. ತಾಯಿತಂದೆಗಳಿಗೆ ಬಹಳ ಸಂತೋಷವಾಯಿತು. ನೀನು, ಇಷ್ಟು ವರ್ಷ ಎಲ್ಲಿದ್ದೆ ಎಂದು ಕೇಳಿದಾಗ ನ್ಯೂಯೋರ್ಕ ಪಟ್ಟಣದಲ್ಲಿದ್ದೆ ಎಂದು ಅವಳು ಹೇಳಿದಳು. ಆದರೆ ನ್ಯೂಮನ್ ಹೆಚ್ಚು ಸಮಯ ಅಲ್ಲಿ ಉಳಿಯಲಿಲ್ಲ. ಅವಳು ಬಂದ ದಿನವೇ ರಾತ್ರಿ ಮಲಗಿದ್ದ ತಾಯಿತಂದೆಗಳನ್ನು ಚುಂಬಿಸಿ ಹೊರಟುಹೋದಳು. ಮುಂದಿನ ಜನ್ಮದಿನದಂದು ಪುನಃ ಬರುವೆನೆಂದು ಹೇಳಿ ರಾತ್ರಿಯ ಕಗ್ಗತ್ತಲೆಯಲ್ಲಿ ಸೇರಿಕೊಂಡಳು. ತಾಯಿತಂದೆಗಳು ಅವಳನ್ನು ತಡೆಯುವುದಕ್ಕೋಸ್ಕರ ಬಹಳ ಹುಡುಕಿದರಾದರೂ ಈ ವರೆಗೆ ಅವಳ ಪತ್ತೆಯಾಗಿಲ್ಲ. ಅವಳು ನೋಡುತ್ತಿದ್ದ ಹಾಗೆಯೇ ಕಣ್ಮರೆಯಾಗಿದ್ದಾಳೆಂದು ಅವರು ಹೇಳುತ್ತಿದ್ದಾರೆ.

ಹದಿನಾರನೆಯ ಶತಮಾನದ ವಿಚಿತ್ರ ಕೋಟೆ

ಉತ್ತರ ಹಿಂದುಸ್ಥಾನದಿಂದ ದಕ್ಷಿಣಕ್ಕೆ ಬರುವ ಹೆದ್ದಾರಿಯಲ್ಲಿ ಅಭೇದ್ಯವಾದ ಅಸೀರಗಡ ಕೋಟೆ ಇದೆ. ಈ ಕೋಟೆಯು ಸುತ್ತಮುತ್ತಲಿನ ಬಯಲಿನಿಂದ ೯೦೦ ಅಡಿಗಳಷ್ಟು ಎತ್ತರವಾದ ಬೆಟ್ಟದ ಮೇಲೆ ಕಟ್ಟಲ್ಪಟ್ಟಿರುತ್ತದೆ. ಕೋಟೆಯೊಳಗೆ ಕಟ್ಟಲ್ಪಟ್ಟ ಅನೇಕ ಕೆರೆಕುಂಟೆ ಮತ್ತು ಜಲಾಶಯಗಳ ಮೂಲಕ ಅಷ್ಟು ಎತ್ತರವಾದ ಪ್ರದೇಶದಲ್ಲಿಯೂ ನೀರಿಗೆ ಎಳ್ಳಷ್ಟು ಬರಗಾಲವಿರಲಿಲ್ಲ. ಮತ್ತೆ ಈ ಕೋಟೆಗೆ ಬಹಳ ಪ್ರಾಕೃತಿಕ ಸಂರಕ್ಷಣೋಪಾಯಗಳು ಇದ್ದುವಾದರೂ ಅದಕ್ಕೆ ಬೇರೆಯಾದ ಮೂರು ಕೃತಕ ರಕ್ಷಣಾಸಾಲುಗಳಿದ್ದುವು. ಹದಿನಾರನೆಯ ಶತಮಾನದಲ್ಲಿ ಜನರು ಈ ಕೋಟೆಯನ್ನು ದೊಡ್ಡ ಆಶ್ಚರ್ಯವೆಂದು ತಿಳಿದಿದ್ದರು. ೧೬೦೧ರಲ್ಲಿ ಅಕ್ಬರನು ಸುಮಾರು ಒಂದು ವರ್ಷದ ತನಕ ಈ ಕೋಟೆಯನ್ನು ಮುತ್ತಿ ಅದನ್ನು ತನ್ನ ವಶಮಾಡಿಕೊಂಡಿದ್ದನು.

ಹಾವಿಗೂ ರೇಡಿಯೋ ಗಾನ ಇಷ್ಟವಾಗಿದೆ

ಜಥಾದ್‌ದಲ್ಲಿ ಒಂದು ಮನೆಯಲ್ಲಿ ರೇಡಿಯೋವನ್ನು ಇಟ್ಟಿದ್ದರು. ಮೃದುಮಧುರವಾದ ಗಾಯನವು ಕೇಳಿಬರುತ್ತಿತ್ತು. ಅದರ ಸವಿಗೆ ಮನಸೋತ ಒಂದು ಹಾವು ರೇಡಿಯೋವನ್ನಿಟ್ಟ ಮೇಜಿನಡಿಗೆ ಬಂದು, ಹೆಡೆಬಿಚ್ಚಿ ತಲೆದೂಗುತ್ತ ಅದನ್ನು ಕೇಳತೊಡಗಿತು. ಮನೆಯವರು ಹಾವನ್ನು ನೋಡಿ ಕಂಗಾಲಾದರು. ರೇಡಿಯೋವನ್ನು ನಿಲ್ಲಿಸಿದರು. ಆಗ ಹಾವೂ ತನ್ನಷ್ಟಕ್ಕೆ ಹೊರಟುಹೋಯಿತು. ಅವರು ಪುನಃ ರೇಡಿಯೋ ಇಟ್ಟಾಗ ಆ ಹಾವು ಪುನಃ ಗಾಯನವನ್ನು ಕೇಳಲಿಕ್ಕೆ ಅಲ್ಲಿಗೆ ಬಂದಿತು. ಜನರಿಗೆ ಮಾತ್ರ ಆಮಂತ್ರಣವಿಲ್ಲದೆ ಹಾವು ಬರುವುದು ಇಷ್ಟವಾಗಿರಲಿಲ್ಲ. ಆದ್ದರಿಂದ ಅವರು ಅದನ್ನು ತಕ್ಷಣ ಕೊಂದು ಹಾಕಿದರು.

ವಿಜ್ಞಾನಯುಗ

ತೇಲಾಡುವ ವಿಮಾನ ನಿಲ್ದಾಣಗಳು

ಅತ್ಲಾಂತಿಕ ಸಾಗರದಲ್ಲಿ ಜರ್ಮನ್ ಜಲಾಂತರ್ಗಾಮಿಗಳ ಹಾವಳಿಯು ಬಹಳವಾಗಿದೆ. ಅಲ್ಲಿ ತೇಲಾಡುವ ವಿಮಾನ ನಿಲ್ದಾಣಗಳನ್ನು ಕಟ್ಟಿ ಈ ಹಾವಳಿಯನ್ನು ತಡೆಗಟ್ಟಬೇಕೆಂದು ಬ್ರಿಟಿಷ್ ವೈಮಾನಿಕ ತಜ್ಞರಾದ ಶ್ರೀ ಜಿ. ಗ್ರೇಯವರು ಬ್ರಿಟಿಷ್ ಸರಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿರುತ್ತಾರೆ. ಇಂಥ ವಿಮಾನ ನಿಲ್ದಾಣಗಳು ಅತ್ಲಾಂತಿಕ ಸಾಗರದಲ್ಲಿ ಆದುದಾದರೆ ಅಮೆರಿಕದಿಂದ ಬ್ರಿಟನಿಗೆ ಬರುವ ಯುದ್ಧ ಸಾಮಗ್ರಿಗಳಿಗೂ ಬಹಳ ರಕ್ಷಣೆ ದೊರೆಯುವುದು. ಸರಕಾರವು ಈ ವಿಷಯವನ್ನು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರುವ ಕುರಿತು ಆಲೋಚಿಸುತ್ತಿದೆ.

ಮನುಷ್ಯ ಶರೀರದ ಬೆಲೆ

ವಿಜ್ಞಾನ ದೃಷ್ಟಿಯಿಂದ ಮನುಷ್ಯ ಶರೀರದ ಬೆಲೆ ಎಷ್ಟೆಂಬುದನ್ನು ವಿಜ್ಞಾನಿಗಳು ಮನುಷ್ಯ ಶರೀರವನ್ನು ಪೃಥಕ್ಕರಿಸಿ ಹೇಳಿದ್ದಾರೆ. ಮನುಷ್ಯ ಶರೀರವು ಕೆಲವು ಜಾತಿಯ ಲೋಹಗಳು, ಧಾತುಗಳು ಮತ್ತು ದ್ರಾವಕಗಳಿಂದ ಆಗಿರುತ್ತದೆ. ೫ ಮಣ ಭಾರವಾದ ಮನುಷ್ಯ ಶರೀರದಲ್ಲಿ ೧೦ ಗೆಲನ್ ನೀರು ಇದೆ. ಇದಕ್ಕೆ ಯಾರೂ ಬೆಲೆ ಕೊಡಬೇಕಾಗಿಲ್ಲ. ಮತ್ತೆ ೭ ತುಂಡು ಸಾಬೂನುಗಳಿಗೆ ಬೇಕಾಗುವಷ್ಟು ಕ್ಷಾರ, ಒಂದು ಪೆನ್ಸಿಲು ಕಡ್ಡಿಯಲ್ಲಿರುವಷ್ಟು ಅಂಗಾರ, ೩೦೦ ಬೆಂಕಿ ಕಡ್ಡಿಗಳಿಗೆ ಬೇಕಾಗುವಷ್ಟು ಸಣ್ಣ ಪ್ರಮಾಣದ ರಂಜಕ, ಒಂದು ಬಾರಿ ಊಟಕ್ಕೆ ಉಪಯೋಗಿಸುವಷ್ಟು ಲವಣಗಳು, ಒಂದು ಕೋಳಿ ಗೂಡನ್ನು ಬಳಿಸಬೇಕಾಗುವಷ್ಟು ಸುಣ್ಣ, ಮತ್ತು ಕೆ... ನೊಣಗಳಿಗೆ ಹೊಗೆ ಹಾಕಲಿಕ್ಕೆ ಬೇ...ದಷ್ಟು ಗಂಧಕವು ಆ ಶರೀರದಲ್ಲಿದೆ. ... ಪದಾರ್ಥಗಳ ಬೆಲೆಕಟ್ಟಿ ಮಾರುವ...ದರೆ ಅದಕ್ಕೆ ಎರಡು ಮೂರು ರೂಪಾಯಿಗಳಿಗಿಂತ ಹೆಚ್ಚಿನ ಕ್ರಯ ಬರಲಿಕ್ಕಿಲ್ಲ...

ಶರೀರ ಬೆಳವಣಿಗೆಗೆ ಬೇಕಾದ "ಕೆಲ್ಸಿಯಮು"

ಶರೀರವು ಆರೋಗ್ಯಸ್ಥಿತಿಯಲ್ಲಿರ...ಕಾದರೆ ಆಹಾರದಲ್ಲಿ ಕೆಲ್ಸಿಯಮು ತಕ್ಕ ಪ್ರಮಾಣದಲ್ಲಿ ಇರುವುದು ಅಗ...ವಾಗಿದೆ. ಈ ಕೆಲ್ಸಿಯಮು ಎಲುಬು... ಬೆಳವಣಿಗೆಗೆ ಅತ್ಯಗತ್ಯವಾದುದರಿಂ... ಅದರ ಪರಿಮಾಣವು ದೊಡ್ಡವರಿಗಿ... ಮಕ್ಕಳಿಗೆ ಹೆಚ್ಚಾಗಿ ಇರುತ್ತದೆ. ಕೆಲ್ಸಿಯ...ಮಿನ ಅಭಾವವಿರುವುದರಿಂದಲೇ ಮಕ್ಕ... ಎಲುಬುಗಳು ಮೆತ್ತಗಾಗಿ ಇರುವವು ಅಥವಾ ಅವು ಸೊಟ್ಟಗಾಗಿ ಬೆಳೆಯುವವು. ಆದರೆ ಮಕ್ಕಳಿಗೆ ಧಾರಾಳವಾ... ಹಾಲು ಮತ್ತು ಕಿತ್ತಳೆ ಹಣ್ಣಿನ ರಸವನ್ನು ಕೊಡಬೇಕು. ಯಾಕೆಂದರೆ ಇವುಗಳ... ಕೆಲ್ಸಿಯಂ ತುಂಬಾ ಇರುತ್ತದೆ. ಮತ್ತೆ ಈ ಪದಾರ್ಥಗಳು ಮಕ್ಕಳಿಗೆ ರುಚಿಕ...ವಾಗಿಯೂ ಇರುವುದರಿಂದ ಮಕ್ಕಳ... ಸಂತೋಷದಿಂದ ಇವನ್ನು ಸೇವಿಸುವವು...

HALFTONE & LINE
BLOCK MAKING
UNDERTAKEN
Sharada Press,
MANGALORE

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

BHUVANENDRA PRODUCTS LTD.,

Head Office and Factory: KATAPADI S. Kanara.

Depots: 1. Maharatha Galli, Hubli.
2. 57 Big street, Triplicane, Madras.

"BHUVANENDRA"
Danthadavan Choorna

Economical in use. Cheapest in value.
Genuine in quality and choiced by all.
Antiseptic, astringent, aromatic. Useful in Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ.
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚೆಂಟ್, ರಥಬೀದಿ.
ಡಾ। ಎಮ್. ಎಸ್. ...

ಡೋಂಗರೆ ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ



ನವ ಚೈತನ್ಯಕ್ಕೆ
'ಒಂಪೊನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಥಳೀಯ ಸ್ಟಾಕಿಸ್ಟರು:-
ದಿ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Stockists —
Messrs. Dadha & Co., MADRAS.

THE PIE-MONEY BANK, LTD.
Maidan Road, MANGALORE

Undertakes all kinds of Banking Business Current account at 2¼%per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars—

K R. GURU, *Managing Director*

THE BANK OF MANGALORE LIMITED
HEAD OFFICE MANGALORE ESTD 1901
Branches —MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
1 "	4 per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balance on balances over Rs 5 in multiples of Rs 5 @ 3%

All kinds of banking business transacted

THE

Combined Booking Agency, Mangalore

South Kanara Traveller's Guides

ARE

Available for sale in all our Booking Offices

Price 0-2-6 per. Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore

ಬಿಡಿ ಸಂಚಿಕೆಯ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-12-0 Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 18-7-1941 [ಸಂಚಿಕೆ ೨

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಜೊಡಿಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ಕುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ಜರ್ಮನ್ ಬಾಂಬುಗಳಿಂದ ಉಂಟಾದ ಬೆಂಕಿಯನ್ನು ಲಂಡನಿನವರು ನಂದಿಸುತ್ತಾರೆ.

KANNADA ILLUSTRATED WEEKLY

ಸಿನೆಮಾ ಸುದ್ದಿ

ಮಿಲ್ ಕೆಲಸಗಾರರಿಗೆ ಸಿನೆಮಾ ಧರ್ಮಾರ್ಥ

ಬೊಂಬಾಯಿಯ ದಾವಿಡ್ ಸಾಸೂನ್ ಗ್ರೂಪ್ ಮಿಲ್ಲಿನವರು ತಮ್ಮ ಗಿರಣಿಯ ಕೆಲಸಗಾರರಿಗೆ ಧರ್ಮಾರ್ಥ ಸಿನೆಮಾಗಳನ್ನು ಏರ್ಪಡಿಸಿರುವರಾಗಿ ತಿಳಿದುಬರುತ್ತದೆ. ಈ ಉತ್ತಮ ಮಾದರಿಯನ್ನು ಇತರ ಮಾಲಕರೂ ಅನುಸರಿಸಿದರೆ ಮಜೂರರ ಜೀವನದಲ್ಲಿ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಿದಂತಾಗುತ್ತದೆ.

ಭಾರತೀಯ ಚಲಚ್ಚಿತ್ರದಲ್ಲಿ ಕಥೆಗೆ ಪ್ರಾಧಾನ್ಯತೆಯಿಲ್ಲ

ಭಾರತೀಯರು ಸಿನೆಮಾಕ್ಕೆ ಹೋಗುವುದು ಪ್ರಥಮವಾಗಿ ಅದರಲ್ಲಿ ನಟಿಸುವ ನಟನಟಿಯರ ಸಲುವಾಗಿ; ಎರಡನೆಯದೆನಿಸಿ ಅದರಲ್ಲಿರುವ ಸಂಗೀತಕ್ಕಾಗಿ; ಮೂರನೆಯ ವಿಷಯವು ಅದರ ಕಥೆಗಾಗಿ. ಹೀಗಿರುವುದರಿಂದಲೇ ಸಿನೆಮಾದಲ್ಲಿ ಭಾರತೀಯರು ಕಥೆಯ ಕಡೆಗೆ ಪ್ರಾಧಾನ್ಯತೆ ಕೊಡುವುದು ಕಡಿಮೆಯೆಂದು ಒಬ್ಬ ಟೀಕಾಕಾರರು ಬರೆಯುತ್ತಾರೆ.

ವಿಜಯಲಕ್ಷ್ಮಿ ಪಂಡಿತ್ ಉದಯಶಂಕರ ನೃತ್ಯ ಮಂದಿರದಲ್ಲಿ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ತನ್ನ ಕುಮಾರಿಯರೊಂದಿಗೆ ಉದಯಶಂಕರ ನೃತ್ಯ ಕೇಂದ್ರವನ್ನು ಸಂದರ್ಶಿಸಿರುವರಾಗಿ ತಿಳಿದಿದೆ. ಶ್ರೀಮತಿಯರು ಅಲ್ಲಿನ ವಿದ್ಯಾರ್ಥಿ ಮತ್ತು ಅಧ್ಯಾಪಕರೊಡನೆ ಊಟ ಉಪಹಾರಕ್ಕಿದ್ದರೆಂದೂ ಅಲ್ಲಿನ ವಾತಾವರಣದಿಂದ ಅವರು ಮನಸ್ಸು ಸಂತೋಷಗೊಂಡರೆಂದೂ ತಿಳಿದಿದೆ.

ಶ್ರೀಮತಿಯರು ತನ್ನೊಬ್ಬ ಕುಮಾರಿಯನ್ನು ಆ ನೃತ್ಯಕೇಂದ್ರದಲ್ಲಿ ಉದಯಶಂಕರರ ನೃತ್ಯಾಭ್ಯಾಸ ಕಲಿಯಲಿಕ್ಕೆ ಇರಿಸುವರಾಗಿ ತಿಳಿದುಬಂದಿದೆ.

'ಭಾರತದ ಸ್ವಾತಂತ್ರ್ಯಕ್ಕಾಗಿ' ವಾಡಿಯಾ ಚಿತ್ರ

ವಾಡಿಯಾದವರು 'ಭಾರತದ ಸ್ವಾತಂತ್ರ್ಯಕ್ಕಾಗಿ' ಎಂಬ ಹೊಸ ಚಿತ್ರವನ್ನು ನಿರ್ಮಿಸಿರುವರೆಂದು ತಿಳಿದಿದೆ. ಬೊಂಬಾಯಿಯ ಹನ್ನೆರಡು ಸಿನೆಮಾ ಮಂದಿರಗಳಲ್ಲಿ ಅದು ಕಳೆದವಾರ ಪ್ರದರ್ಶಿತವಾಯಿತು.

ಗೋಪಿನಾಥ-ತಂಗಮಣಿ

ಎಂಬೀ ಪ್ರಸಿದ್ಧ ನಾಟ್ಯ ದ್ವಂದ್ವಗಳು ಮದ್ರಾಸಿನಿಂದ ತ್ರಿವೇಂದ್ರಮ್ಮಿಗೆ ತೆರಳಿರುವರು. ಅವರು ನಟಿಸಿದ ಪ್ರಹ್ಲಾದ ಚಿತ್ರವು ಬೇಗನೇ ಪ್ರದರ್ಶಿತವಾಗಲಿದೆ.



ಓವಲ್ಟಿನು ನಿಮಗೆ ಶಕ್ತಿ ಮತ್ತು ಆರೋಗ್ಯವನ್ನು ಕೊಡುತ್ತದೆ

ನಿಮ್ಮ ಶರೀರವನ್ನು ಬಲಪಡಿಸಿಕೊಂಡರೆ ನೀವು ಶಕ್ತಿಶಾಲಿಗಳಾಗಿ ಸುಖದಿಂದ ಇರಬಹುದು. ಒಳ್ಳೆಯ ಆಹಾರದಿಂದ ಬುದ್ಧಿಯೂ ಬಲಗೊಳ್ಳುತ್ತದೆ.

ದಿನನಿತ್ಯ ಒಂದು ಕಪ್ಪು ಓವಲ್ಟಿನು ತೆಗೆದುಕೊಳ್ಳುವುದರಿಂದ ಶರೀರವು ಬಲಗೊಳ್ಳಲು ಬೇಕಾದ ಸತ್ವಗಳು ಸಿಗುತ್ತವೆ. ಹಾಗಾಗಿಯೇ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾವಿರಾರು ಮನೆಗಳಲ್ಲಿ ಓವಲ್ಟಿನನ್ನೇ ಉಪಯೋಗಿಸುತ್ತಾರೆ. ಅದರಿಂದ ಅವರಿಗೆ ಆರೋಗ್ಯ, ಬಲ ಶಕ್ತಿಗಳು ಕೊಡುತ್ತವೆ. ಕೆಲ ದಿನಗಳ ತನಕ ಓವಲ್ಟಿನ್ನು ಸೇವಿಸಿ ನೋಡಿ ಮತ್ತೆ ತಿಳಿಯುವಿರಿ. ಅನಾರೋಗ್ಯವನ್ನು ತಡೆಯಲು ಓವಲ್ಟಿನ್ನು ಅತ್ಯುತ್ತಮ.

ಓವಲ್ಟಿನು ಶುದ್ಧ ನೈಸರ್ಗಿಕ ಆಹಾರ. ಇದನ್ನು ಬಾರ್ಲಿ ಹಾಲು ಮತ್ತು ಅನೇಕ ಉತ್ತಮ ಆಹಾರ ಸತ್ವಗಳನ್ನು ಸೇರಿಸಿ ತಯಾರಿಸಲಾಗಿದೆ. ಕೃತ್ರಿಮವಾದವುಗಳನ್ನು ಕೊಂಡುಕೊಳ್ಳಬೇಡಿರಿ.

ಓವಲ್ಟಿನ್ನು ಹಿತಕರವಾದ ಆರೋಗ್ಯಕರ ಪಾನೀಯ. ಇದನ್ನು ತಣ್ಣಗಾಗಲಿ ಬಿಸಿಯಾಗಲಿ ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹು ಸುಲಭ. ತಯಾರಿಸುವ ರೀತಿಯು ಪ್ರತಿಯೊಂದು ಡಬ್ಬಿಯಲ್ಲಿಯೂ ಬರೆದಿದೆ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಡಿಸ್ಟ್ರಿಬ್ಯೂಟರ್: ಗ್ರಹಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್
ಕೈಥನಸ್ ಬಿಲ್ಡಿಂಗ್, 310-311 ಲಿಂಗಚೆಟ್ಟಿ ಸ್ಟ್ರೀಟ್, ಮದರಾಸು. ಹಾಗೂ ಕಲ್ಕತ್ತ, ಬೊಂಬಾಯಿ, ಕರಾಚಿ ಮತ್ತು ರಂಗೂನ್

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಓವಲ್ಟಿನ್ ಬಿಸ್ಕುಟುಗಳು:

ಓವಲ್ಟಿನ್ ಬಿಸ್ಕುಟುಗಳು ಹಿತಕರ, ಜೀರ್ಣಕರ ಮತ್ತು ಆರೋಗ್ಯಕರ ಇರುವ ಬಿಸ್ಕುಟುಗಳಲ್ಲೆಲ್ಲಾ ಹೆಸರು ಪಡೆದದ್ದು. ಅದರಲ್ಲಿ ಪ್ರತ್ಯೇಕ ಗುಣವೇ ಇದೆ. 4 ಔನ್ಸಿನ ಮತ್ತು 8 ಔನ್ಸಿನ ಕಟ್ಟುಗಳು ಮತ್ತು ರಾತಲು ಟಿನ್ನುಗಳಲ್ಲಿ ಸಿಕ್ಕುತ್ತವೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

25-7-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. [೨೫-೭-೧೯೪೧

ವೈಸರಾಯ್ ಕಾರ್ಯಕಾರೀ ಮಂಡಲ ವಿಸ್ತರಿಸಲಾಯಿತು!

ಮೋಡಿ, ಹೈದರಿ, ರಾಘವೇಂದ್ರ ರಾವ್, ಫಿರೋಜಖಾನನೂನ್, ಅಣೆ ಇವರು ಅಧಿಕಾರ ಪಡೆದರು

ರಾಷ್ಟ್ರೀಯ ಸಂರಕ್ಷಕ ಸಮಿತಿಯೊಂದು ರಚಿತವಾಗಿದೆ.

ಅನೇಕ ದಿನಗಳಿಂದ ನಿರೀಕ್ಷಿಸುತ್ತಿದ್ದ ವೈಸರಾಯರ ಕಾರ್ಯಕಾರೀ ಮಂಡಳದ ವಿಸ್ತರಣ ಕಾರ್ಯವು ಮುಗಿದು ಕೆಳಗಿನ ಐದು ಜನರು ಹೊಸದು ಸಭಾಸದರಾಗಿ ನೇಮಿಸಲ್ಪಟ್ಟರು. ೧. ಸರ್ ಎಚ್. ಪಿ. ಮೋಡಿ, ಪೂರೈಕೆ ಖಾತೆಗೆ, ೨. ಸರ್ ಅಕ್ಬರ ಹೈದರಿ, ಸುದ್ದಿ ಖಾತೆಗೆ, ೩. ಸರ್ ಇ. ರಾಘವೇಂದ್ರರಾವ್, ಸಿವ್ಹಿಲ್ ಡಿಫೆನ್ಸಿಗೆ, ೪. ಸರ್ ಫಿರೋಜಖಾನನೂನ್, ಕೂಲಿಕಾರ ಖಾತೆಗೆ, ೫. ಶ್ರೀ. ಎಂ. ಎಸ್. ಅಣೆ, ಸಮುದ್ರದಾಚೆ ಖಾತೆಗೆ; ಯುದ್ಧ ನಿರ್ವಹಣ ಕಾರ್ಯಕ್ಕಾಗಿ ೩೦ ಜನರಿಂದ ಕೂಡಿದ ರಾಷ್ಟ್ರೀಯ ಸಂರಕ್ಷಕ ಮಂಡಳ ಒಂದೂ ನೇಮಿಸಲಾಗಿದೆ.

ಸರ್ ಮುಹಮ್ಮದ ಜಾಫರುಲ್ಲಾ ಖಾನ ಮತ್ತು ಸರ್ ಗಿರಿಜಾ ಶಂಕರ ವಾಜಪೆ ಇವರು ಹೊಸ ಹುದ್ದೆಗಳನ್ನು ಸ್ವೀಕರಿಸಿದನಂತರ ಅವರ ಸ್ಥಳದಲ್ಲಿ ಸರ್ ಸುಲ್ತಾನ ಅಹಮ್ಮದರು ನ್ಯಾಯಮಂತ್ರಿ ಹಾಗೂ ಶ್ರೀ. ನಲಿನಿರಂಜನ ಸರಕಾರರು ಶಿಕ್ಷಣ ಆರೋಗ್ಯ ಮತ್ತು ಒಕ್ಕಲತನ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು.

ಪ್ರಕಟಣೆ

ವೈಸರಾಯರ ಕಾರ್ಯಕಾರೀ ಮಂಡಳದ ವಿಸ್ತರಣೆ ಮತ್ತು ರಾಷ್ಟ್ರೀಯ ಸಂರಕ್ಷಣಾ ಮಂಡಳದ ನೇಮಕದ ಸಂಬಂಧದಲ್ಲಿ ಕೆಳಗಿನ ಪ್ರಕಟಣೆ ಹೊರಬಿದೆ.

ಯುದ್ಧದ ಮೂಲಕ ಕಾರ್ಯಕಾರೀ ಮಂಡಳದ ಕೆಲಸವು ಬಹಳ ಹೆಚ್ಚಿದ್ದರಿಂದ ಹಿಂದುಸ್ಥಾನದ ಗವರ್ನರ ಜನರಲರ ಕಾರ್ಯಕಾರಿ ಮಂಡಳವನ್ನು ವಿಸ್ತಾರಗೊಳಿಸಬೇಕೆಂದು ನಿರ್ಧರಿಸಲಾಗಿದೆ. ನ್ಯಾಯಖಾತೆ ಮತ್ತು ಪೂರೈಕೆ ಖಾತೆ, ವಾಣಿಜ್ಯ ಮತ್ತು ಕೂಲಿಕಾರ ಖಾತೆಗಳನ್ನು ಬೇರ್ಪಡಿಸಲಾಗುವುದು. ಈಗ ಒಂದೇ ಖಾತೆಯಾಗಿದ್ದ ಶಿಕ್ಷಣ, ಆರೋಗ್ಯ ಮತ್ತು ಒಕ್ಕಲತನ ಖಾತೆಯನ್ನು ಶಿಕ್ಷಣ, ಆರೋಗ್ಯ ಮತ್ತು ಒಕ್ಕಲತನ ಹಾಗು ಸಮುದ್ರದಾಚೆಯ ಹಿಂದೀಯರ ಖಾತೆಯನ್ನಾಗಿ ಬೇರ್ಪಡಿಸಲಾಗುವುದು. ಇದಲ್ಲದೆ ಹೊಸದಾಗಿ ಸುದ್ದಿ ಖಾತೆ ಮತ್ತು ಸಿವ್ಹಿಲ್ ಡಿಫೆನ್ಸ್ ಖಾತೆಗಳನ್ನೇರ್ಪಡಿಸಲಾಗುವುದು. ಈ ಹೊಸ ಖಾತೆಗಳಿಗೆ ಐದು ಜನರು ನೇಮಿಸಲ್ಪಟ್ಟಿದ್ದು ಚಕ್ರವರ್ತಿಗಳು ಅದಕ್ಕೆ ಮನ್ನಣೆ ಕೊಟ್ಟಿರುವರು.

ರಾಷ್ಟ್ರೀಯ ಸಂರಕ್ಷಣ ಮಂಡಳ

ಯುದ್ಧ ನಿರ್ವಹಣ ಕಾರ್ಯದಲ್ಲಿ ಹಿಂದೀ ಅಧಿಕಾರೇತರರ ಅಭಿಪ್ರಾಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂದು ಚಕ್ರವರ್ತಿಗಳು ಬಯಸಿದ್ದರಿಂದ ವೈಸರಾಯರ ಸಲಹೆಯ ಮೇಲೆ ರಾಷ್ಟ್ರೀಯ ಸಂರಕ್ಷಕ ಮಂಡಳವನ್ನು ಸ್ಥಾಪಿಸಬೇಕೆಂಬುದಕ್ಕೂ ಚಕ್ರವರ್ತಿಗಳು ಮನ್ನಣೆ ದೊರೆತಿದೆ. ಈ ಮಂಡಳದ ಮೊದಲನೆಯ ಸಭೆ ಮುಂದಿನ ತಿಂಗಳಲ್ಲಿ ಕೂಡುವುದು. ಈ ಮಂಡಳದಲ್ಲಿ ೩೦ ಜನ ಸದಸ್ಯರಿರತಕ್ಕದ್ದು. ಹಿಂದೀ ಸಂಸ್ಥಾನ ಪ್ರತಿನಿಧಿಗಳು ಮತ್ತು ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು ಯುದ್ಧ ನಿರ್ವಹಣ ಕಾರ್ಯವನ್ನನುಲಕ್ಷಿಸಿ ಬ್ರಿಟಿಶ್ ಹಿಂದುಸ್ಥಾನದಲ್ಲಿರುವ ಉಳಿದ ಜನರು ಈ ಮಂಡಳದಲ್ಲಿ ಸಮಾವಿಷ್ಟ ಮಾಡಲ್ಪಟ್ಟಿರುವರು. ಬ್ರಿಟಿಶ್ ಹಿಂದುಸ್ಥಾನದಿಂದ ಕೆಳಗಿನವರು ಸದಸ್ಯರಾಗುವರು.

೧. ಡಾಕ್ಟರ ಬಿ. ಆರ್. ಅಂಬೇಡಕರ್, ೨. ಸರ್ ಮಹಮ್ಮದ್ ಸಾದುಲ್ಲಾ, ೩. ಎ. ಕೆ. ಫಜಲುಲ್ ಹಕ್, ೪. ಸರ್ ಮಹಮ್ಮದ್ ನವಾಬ್ ಛತ್ರಾಯಿ, ೫. ಕುಮಾರ ರಾಜಾ ಸರ್ ಮುತ್ತಯ್ಯ ಚೆಟ್ಟಿ ಯಾಫ್ ಚೆಟ್ಟಿನಾಡ್, ೬. ಮಹಾರಾಜಾಧಿರಾಜ ದರಭಂಗಾ, ೭. ರಾಮರಾವ್ ಮಾಧವರಾವ ದೇಶಮುಖ, ೮. ಸರ್ ಹೆನ್ರಿ ಗಿಡ್ನೆ, ೯. ಸರ್ ಕೌಸಜಿ ಜಹಾಂಗೀರ, ೧೦. ರಾಜಾಬಹಾದ್ದೂರ ಖಿಲ್ಲೀಕೋಟೆ, ೧೧. ಮಲಿಕ ಖುದಾ ಬಕ್ಷ ಖಾನ, ೧೨. ಜಮ್ನಾದಾಸ ಮೇಥಾ, ೧೩. ಜೆ. ಬಿ. ಮಾರ್ಟಿನ್, ೧೪. ಬೇರೋನ ಮಂಕರ್ಜ್, ೧೫. ಸರದಾರ ಸೌನಾಲಸಿಂಗ, ೧೬. ಬೇಗಮ ಶಹಾನವಾಜ, ೧೭. ಸರ್ ಸಿಕಂದರ ಹಯಾತಖಾನ, ೧೮. ರಾಯ್ ಬಹಾದ್ದೂರ ಎಂ. ಸಿ. ರಾಜಾ, ೧೯. ಪ್ರೊ. ಈ. ಅಹಮ್ಮದಶಹಾ, ೨೦. ಜ್ವಾಲಾಪ್ರಸಾದ ಶ್ರೀವಾಸ್ತವ, ೨೧. ಖಾನಬಹಾದ್ದೂರ ಮಹಮ್ಮದ ಉಸ್ಮಾನ. ಸಂಸ್ಥಾನ ಪ್ರತಿನಿಧಿಗಳ ಹೆಸರುಗಳನ್ನು ಪ್ರತ್ಯೇಕವಾಗಿ ಜಾಹೀರು ಮಾಡಲಾಗುವುದು.

ರಾಜಕೀಯೇತರವಾಗಿದೆ

ವೈಸರಾಯರ ಕೌನ್ಸಿಲ ವಿಸ್ತರಣೆಯು ರಾಜಕೀಯೇತರವಿದ್ದು ಜಾತೀಯವಲ್ಲದ್ದೆಂದೂ ಹೇಳಲಾಗಿದೆ. ಈ ವರೆಗೆ ಇದ್ದ ಕೌನ್ಸಿಲಿನಲ್ಲಿ ನಾಲ್ವರು ಅಧಿಕಾರಿಗಳು ಮೂವರು ಅಧಿಕಾರೇತರರು ಇದ್ದರು. ಈಗ ಪ್ರಕಟಿಸಿದ ಮೇರೆಗೆ ಕಮಾಂಡರ್ ಇನ್ ಚೀಫರನ್ನು ಬಿಟ್ಟರೆ ಮೂರು ಜನರು ಅಧಿಕಾರಿಗಳು ಹಾಗು ೮ ಮಂದಿ ಅಧಿಕಾರೇತರರು ಇರುವರು. ಒಟ್ಟಿನಲ್ಲಿ ಕಳೆದ ಆಗಸ್ಟ್ ಘೋಷಣೆಯಂತೆ ವೈಸರಾಯರ ಕೌನ್ಸಿಲಿನ ವಿಸ್ತರಣೆಯು ಸಾಕಷ್ಟು ಆಗಿದೆಯೆಂದು ಹೇಳಲಾಗಿದೆ. ಆಗಸ್ಟ್ ಘೋಷಣೆಯ ನಂತರ ಸರಕಾರದ ಧೋರಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಮುಂದೆ ರಾಜಕೀಯ ಪಂಗಡಗಳ ನಡುವೆ ಒಪ್ಪಂದವಾಗಿ ಭಾವೀ ಘಟನೆಯು ರಚಿಸಲ್ಪಡುವಾಗ ಯಾವ ತರದ ಅಡಚಣೆಯೂ ಆಗದಂತೆ ಹೊಸಘಟನೆಯ ಮಿತಿಯೊಳಗೆ ಸಮರಸಕ್ತ ರಾಷ್ಟ್ರದ ಸರಕಾರವು ಈ ರೀತಿ ಮಾಡುವುದು ಅನಿವಾರ್ಯವೆಂದು ಕೌನ್ಸಿಲ್ ವಿಸ್ತರಣೆ ಮಾಡಲಾಗಿದೆಯೆಂದು ಹೇಳಲಾಗಿದೆ. ಭಾರತದ ಪ್ರತಿನಿಧಿಗಳೆಂಬ ಬಗ್ಗೆ ಯಾವ ಬಗೆಯ ಸಂಶಯಕ್ಕೂ ಅಸ್ಪದವಿಲ್ಲದ ವ್ಯಕ್ತಿಗಳನ್ನು ಮಾತ್ರವೇ ನೇಮಿಸಲಾಗುವುದು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಸ... ಘಾಮರ ಆದೇಶದಂತೆ ಅವರು ಅಧಿ... ವಹಿಸುವರು. ಈಗಿದ್ದ ಸದ... ಹಾಗೂ ಹೊಸ ಸದಸ್ಯರು ಅ... ಬೇಗನೆ ಅಧಿಕಾರ ಸೂತ್ರವನ್ನು ವ... ವರು. ಈಗ ಪ್ರತಿಯೊಬ್ಬ ಸದಸ... ವರ್ಷಕ್ಕೆ ೮೦ ಸಾವಿರ ರೂಪಾಯಿ ಸ... ದೊರೆಯುತ್ತದೆ. ಮುಂದೆ ಅ... ೬೬೦೦೦ ವಾರ್ಷಿಕ ಸಂಬಳ ತೆ... ಕೊಳ್ಳುವರು.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ ... ಮುನ್ಸಿಫ್ ಕೋರ್ಟಿನಲ್ಲಿ ...

R. E. P. No. 797/19...

ಬಾಗೀರತಿ ಹೆಗ್ಗಡ್ತಿ— ಅರ್ಜಿದಾ...

ಮತ್ತು

ಭಂಡ್ಸಾಲೆ ಮಮ್ಮದೆ ಬ್ಯಾರಿ ಕಸೆಹಾ— ರೆಸ್ಪೊಂಡೆಂ...

1ನೇ ರೆಸ್ಪೊಂಡೆಂಟು—ಭಂಡ್ಸಾಲೆ ... ಬ್ಯಾರಿ—ಗುಲಬಾಂ ಬ್ಯಾರಿಗಳ ಮಗ.

೬ನೇ ರೆಸ್ಪೊಂಡೆಂಟಳು—ಮಂಜನಾಟಿಯ ... ಅಂಮುಕುಟ್ಟಿ ಬ್ಯಾರಿ ವಿಧವೆ.

7ನೇ ರೆಸ್ಪೊಂಡೆಂಟಳು—ಪಿಜೀಜಂಮ... ದ್ದೂಪು ಹಮ್ಮದಬ್ಯಾರಿ ಹೆಂಡ್ತಿ.

ಎಲ್ಲರೂ ಮಂಗಳೂರು ತಾಲೂಕು ... ಕೊಡು ಗ್ರಾಮದಲ್ಲಿರುವವರು.

ಇವರಿಗೆ

ಮೇಲೆ ಹೆಸ್ರು ಕಾಣಿಸಿದ ಅರ್ಜಿದಾರಳು ... ಲಿನ ಅಮ್ಲುಜ್ಯಾರಿಯಲ್ಲಿ ಜಪ್ತಿ ಮಾಡ... ಸ್ಥಿರಾಸ್ತಿ ಏಲಂ ಬಗ್ಗೆ ವಾಕ್ಯ ಮಾಡಿದ ... ಇಸ್ತಿಹಾರು ಶರತುಗಳನ್ನು ಮಂಜೂರು ಮಾ... ವರೆ ತಾ. 31-7-1941ಕ್ಕೆ ಅಕ್ಷೇಪ ... ಬಗ್ಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ... ರೆಸ್ಪೊಂಡೆಂಟರು ಸದ್ರಿ ತಾರೀಕಿನ ಬೆಳಿಗ್ಗೆ 1... ಗಂಟೆಗೆ ಮೇಲಿನ ಕೋರ್ಟಿನ ಮುಂದೆ ... ರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರು ... ಕೊಳ್ಳಬಹುದು.

ಕೋರ್ಟು ಹುಕುಂ ಪ್ರಕಾರ

ಮಂಗಳೂರು } B. Vyasaraya Ach...
21-7-41 } ಅರ್ಜಿದಾರಳಕಡೆ ವಕೀ...

ಸ್ವದೇಶಾಭಿಮಾನಿಯ...
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸ್ವದೇಶಾಭಿಮಾನಿ

ತಾರೀಕು 25—7—1941

ಬರ್ಮಾ ಭಾರತ ಒಪ್ಪಂದ

ಸರ್ ಗಿರಿಜಾ ಶಂಕರವಾಜಪೇಯಿಯರು ಬರ್ಮಾ ಭಾರತ ಸರಕಾರಗಳ ಸಂಬಂಧದಲ್ಲಿ ಒಂದು ಒಪ್ಪಂದಕ್ಕೆ ಬಂದು, ಸಮಸ್ಯೆಯನ್ನು ಬಗೆಹರಿಸಿ ಬಂದರೆಂದು ಮೂರು ವಾರದ ಹಿಂದೆ ಪ್ರಕಟವಾಗಿತ್ತು. ಈಗ ಆ ಒಪ್ಪಂದದ ವಿವರವು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಭಾರತೀಯರು ಹಾಗೂ ಬರ್ಮೀಯರಲ್ಲಿ ಹೆಚ್ಚಿನ ಸೌಹಾರ್ದ ಭಾವನೆಯುಂಟಾಗುವಂತೆ, ಪರಸ್ಪರ ತಲೆದೋರಿದ ವೈಷಮ್ಯವು ನಿಲ್ಲುವಂತೆ ಈ ಒಪ್ಪಂದದ ಪರಿಣಾಮವಾಯಿತು ಎಂದು ಈಗಾಗಲೇ ಪ್ರಸಿದ್ಧವಾಗಿರುವುದು. ಇದರೊಂದಿಗೆ ಜೇಮ್ಸ್ ಬ್ಯಾಕ್ಸಟರ ವರದಿಯೂ ಪ್ರಸಿದ್ಧವಾಗಿರುತ್ತದೆ.

ಬರ್ಮಾ ದೇಶಕ್ಕೆ ಹೋಗುವ ಭಾರತೀಯರ ವಿಷಯದಲ್ಲಿ ಅಲ್ಲಿನವರು ಆಕ್ಷೇಪವೆತ್ತಿದರು. ಆದ್ದರಿಂದ, ಅಲ್ಲಿಗೆ ಹೋಗುವ ಭಾರತೀಯರ ವಿಷಯದಲ್ಲಿ ನಿಯಂತ್ರಣವಿಡುವ ಹಕ್ಕು ಬರ್ಮಾ ಸರಕಾರಕ್ಕೆ ೧೯೩೫ರ ಕಾನೂನಿನಿಂದ ಪ್ರಾಪ್ತವಾಯಿತು. ಆದರೆ ಹಿಂದೆಯೇ ಅಲ್ಲಿ ಹೋಗಿ ವಾಸವಾಗಿದ್ದು, ಅಲ್ಲಿಯೇ ಮನೆಮಾರುಗಳನ್ನು ಮಾಡಿ ನೆಲಸಿರುವ ಭಾರತೀಯರಿಗೆ ಬರ್ಮೀಯರು ತಮ್ಮ ಪ್ರಜೆಗಳಂತೆಯೇ ಪೂರ್ಣ ನಾಗರಿಕ ಹಕ್ಕು ಕೊಡಬೇಕೆಂಬ ವಿಷಯಕ್ಕೂ ಈ ಒಪ್ಪಂದದಲ್ಲಿ ಸಮ್ಮತಿಯಿರುವುದು. ಈ ಮುಖ್ಯ ತತ್ವಗಳನ್ನು ಅವಲಂಬಿಸಿ ಈ ಒಪ್ಪಂದವು ಮಾಡಲಾಗಿದೆ. ಇದು ಬರುವ ಅಕ್ಟೋಬರ ತಿಂಗಳ ಮೊದಲನೆಯ ತಾರೀಕಿನಿಂದ ಜಾರಿಗೆ ಬರಲಿರುವುದು.

ಭಾರತೀಯರು ವರ್ಷ ವರ್ಷವೂ ಬರ್ಮಾ ದೇಶಕ್ಕೆ ಹೋಗುತ್ತಾ ಇದ್ದರು. ಇದರಿಂದ ತಮ್ಮ ದೇಶದ ಆರ್ಥಿಕ ಪರಿಸ್ಥಿತಿಗೆ ಹಾನಿಯಾಯಿತೆಂದು ಬರ್ಮೀಯರು ಆಕ್ಷೇಪವೆತ್ತಿದರು. ಅದಕ್ಕೆ ಬರ್ಮಾ ಸರಕಾರವೂ ಸಮ್ಮತಿಯಿತ್ತಿತು. ಇದರ ಫಲವಾಗಿಯೇ ೧೯೩೮ರಲ್ಲಿ ರಂಗೂನ್ ದಂಗೆಯು ಹುಟ್ಟಿತು. ೧೯೦ಂ ಮಂದಿ ಅಸಹಾಯ ಭಾರತೀಯರು ಅದರಲ್ಲಿ ಹತರಾದರು; ಮತ್ತು ಗಾಯಗೊಂಡರು. ೫೦ ಲಕ್ಷ ರೂಪಾಯಿಗಳ ಬೆಲೆಬಾಳುವ ಭಾರತೀಯರ ಆಸ್ತಿಪಾಸ್ತಿಗಳಿಗೆ ಅದರಿಂದ ಹಾನಿಯೊದಗಿತ್ತು. ಇದನ್ನು ವಿಚಾರಿಸಲು ಭಾರತ ಸರಕಾರವು ನ್ಯಾಯಮೂರ್ತಿ ಭಾಪುಂಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿತು. ಮಾತ್ರವಲ್ಲದೆ ಹಚಿಂಗ್ಸ್ ಎಂಬ ಅಧಿಕಾರಿಯನ್ನು ಅಲ್ಲಿಗೆ ಪ್ರತಿನಿಧಿಯಾಗಿ ಕಳುಹಿಸಿತು. ಇವರಿಬ್ಬರ ವರದಿಗಳು ಹಿಂದೆ ಪ್ರಕಟವಾಗಿವೆ. ಈಗ ಬ್ಯಾಕ್ಸಟರರ ವರದಿಯನ್ನು ಪರಿಶೀಲಿಸಿದರೂ ದೊಂಬಿ ಮಾಡಿದ ಬರ್ಮೀಯರ ತಲೆಯಲ್ಲಿ ತುಂಬಿದ್ದ ವಿಚಾರಗಳು ನಿರಾಧಾರದವುಗಳೆಂದು ತಿಳಿದುಬರುತ್ತದೆ.

ಇತ್ತೀಚೆಗೆ ಅಲ್ಲಿಗೆ ಭಾರತೀಯರು ಹೋಗುವುದು ಬಹಳ ಕಡಿಮೆಯಾಗಿದೆಯೆಂದು ತಿಳಿದು ಬಂದಿದೆ. ಬ್ಯಾಕ್ಸಟರ ವರದಿಯಿಂದ ಅಲ್ಲಿ ಈಗ ನೆಲಸಿರುವ ಭಾರತೀಯರಲ್ಲಿ ನೂರಕ್ಕೆ ೪೦ರಷ್ಟು ಮಂದಿ ಮೊದಲೇ ಅಲ್ಲಿ ಹೋಗಿ ನೆಲಸಿದ ಭಾರತೀಯರ ಸಂತತಿಯವರಾಗಿರುವರೆಂದು ತಿಳಿಯುತ್ತದೆ. ಬರ್ಮಾದವರ ರಾಜಧಾನಿಯಾದ ರಂಗೂನಿನಲ್ಲಿ ಸೇಕಡಾ ೫೩ರಂತೆ ಭಾರತೀಯರಿರುವರೆಂದು ಆರೋಪ ಮಾಡಲಾಗಿದೆ. ಆದರೆ ಇವರಲ್ಲಿ ಬಹುಮಂದಿ ಬಂದರದ ಕೂಲಿಗಾರರಾಗಿರುವರು. ಅಷ್ಟು ಕಡಿಮೆ ಕೂಲಿಗೆ ಬರ್ಮೀಯರು ಒಪ್ಪದ ನಿಮಿತ್ತ ಕಡಿಮೆ ಕೂಲಿಯಲ್ಲಾದರೂ ಜೀವನ ನಡೆಸಲು ನಿಶ್ಚಯಿಸಿದ ಭಾರತೀಯರು ಬಹುಮಂದಿ ರಂಗೂನಿನಲ್ಲಿರುವರು. ಆದರಿಂದ ಬರ್ಮೀಯರ ಆರ್ಥಿಕ ಸ್ಥಿತಿಗೆ ಹೆಚ್ಚಿನ ಧಕ್ಕೆ ಬಂದಿತೆಂದು ಹೇಳಬರುವುದಿಲ್ಲ. ಮಾತ್ರವಲ್ಲದೆ ಭಾರತೀಯರು ಬರ್ಮೀಯರಿಗಿಂತ ಹೆಚ್ಚು ಕಷ್ಟ ಪಟ್ಟು ದುಡಿಯುವರಾದ್ದರಿಂದ ಹೆಚ್ಚಾಗಿ ಅಲ್ಲಿ ಭಾರತೀಯ ಕೂಲಿಗಾರರನ್ನೇ ಸ್ವೀಕರಿಸುತ್ತಿರುವುದರಿಂದ ಬರ್ಮಾದ ಆರ್ಥಿಕೋನ್ನತಿಗೆ ಭಾರತೀಯರು ಸಹಾಯ ಮಾಡಿದಂತೆಯೇ ಆಗಿದೆ. ೧೯೩೭ರ ಮೊದಲು ಬರ್ಮಾ ಭಾರತಗಳು ಒಂದಾಗಿದ್ದುದರಿಂದ ಯಾವ ಪ್ರತಿಬಂಧಕವೂ ಇಲ್ಲದೆ ಜನರು ಉಭಯ ದೇಶಗಳಿಂದಲೂ ಅತ್ತಿತ್ತ ಹೋಗಿ ಬರಬಹುದಾಗಿತ್ತು. ಅನಂತರವಾದರೂ ಅಲ್ಲಿ ಹೋಗಿ ನೆಲಸಿದ ಭಾರತೀಯರಿಂದ ಬರ್ಮಾ ದೇಶೀಯರು ನೆನಸುವಂತಹ ಗಂಡಾಂತರವು ಬರ್ಮಾಕ್ಕೆ ಬಂದಿಲ್ಲವೆಂದು ಪ್ರಕಟವಾದ ವರದಿಗಳಿಂದ ತಿಳಿದುಬರುತ್ತದೆ.

ಈಗಿನ ಒಪ್ಪಂದದಂತೆ ಮುಂದೆ ಅಲ್ಲಿಗೆ ಹೋಗಲಿರುವ ಭಾರತೀಯರ ಮೇಲೆ ನಿರ್ಬಂಧ ಹಾಕಲಾಗುವುದು. ಅದು ಆ ದೇಶದವರ ಹಕ್ಕೇ ಆಗಿದೆ. ಅಲ್ಲಿ ನೆಲಸಿರುವ ಭಾರತೀಯರಿಗೆ ಬರ್ಮೀ ಪ್ರಜೆಗಳಂತೆ ಪೂರ್ಣ ನಾಗರಿಕ ಹಕ್ಕು ಕೊಡಲು ಅವರು ಭರವಸೆಯಿತ್ತಿರುವರು. ಇದರಿಂದ ಉಭಯ ರಾಷ್ಟ್ರಗಳೊಳಗಿರುವ ವೈಷಮ್ಯವು ಹೋಗಿ ಪ್ರೇಮ ಸೌಹಾರ್ದವು ಹೆಚ್ಚಾಗುವಂತಾಗಲೆಂದು ನಾವು ಹಾರೈಸುತ್ತೇವೆ.

ವೈಸ್‌ರಾಯ್ ಕೌನ್ಸಿಲ್ ವಿಸ್ತಾರ

ಅನೇಕ ಸಮಯದಿಂದ ನಿರೀಕ್ಷಿಸುತ್ತಿದ್ದ ವೈಸರಾಯರ ಕೌನ್ಸಿಲ್ ವಿಸ್ತಾರದ ವಿಷಯವು ಈಗ ಕಾರ್ಯರೂಪಕ್ಕೆ ಬಂದಿದೆ. ವೈಸರಾಯರು ಕೂಡಿ ಎಂಟು ಜನರಿದ್ದ ಕೌನ್ಸಿಲಿನ ಸದಸ್ಯರ ಸಂಖ್ಯೆಯು ಈಗ ಹನ್ನೆರಡಕ್ಕೇರಿದೆ. ಈ ಹನ್ನೆರಡು ಜನರಲ್ಲಿ ಎಂಟು ಜನರು ಭಾರತೀಯರಿದ್ದು ಕೇವಲ ನಾಲ್ಕು ಜನರು ಯುರೋಪಿಯನರಾಗಿರುವರು. ಹೀಗಿ[...]ರಿಂದ ಇದು ಭಾರತದ ರಾಜಕೀಯ[...] ಬಹಳ ವಿಶೇಷದ ಒಂದು ಬದಲಾ[...] ಯೆಂದು ಕೆಲವರು ತಿಳಿದು ಕೊ[...]ತಿದೆ.

ಈ ಬದಲಾವಣೆಯ 'ಟೊಳ್ಳು' ವನ್ನು ಈಗಾಗಲೇ ದೇಶದ ಮುಖಂ[...] ಬಯಲಿಗೆಳೆದಿದ್ದಾರೆ. ಕಾಂಗ್ರೆಸ್ಸು, [...]ಸ್ಲಿಂ ಲೀಗುಗಳಂತಹ ಉಗ್ರಪಕ್ಷಗಳ[...] ಬಿಟ್ಟರೂ, ಸರಕಾರಕ್ಕೆ ಹಿತವಂತ[...] ಆದ ಮಂದಪಕ್ಷೀಯರೂ ಇದನ್ನು ತೀ[...] ಅಲ್ಲಗಳೆದಿರುವರು. ಮಂದಪಕ್ಷೀ[...] ರಿಂದಲೇ ನಿರ್ಮಿತವಾದ ಸಪ್ರೂ ಸ[...] ತಿಯ ಕೇಳಿಕೆಗೆ ಇದರಿಂದ ಯಾವು[...] ತರದ ಆಶ್ವಾಸನವು ದೊರೆತಿಲ್ಲವೆಂ[...] ಹೇಳಲಾಗಿದೆ. ಇದರಲ್ಲಿ ಭಾರತೀಯ[...] ಬಹು ಸಂಖ್ಯಾಕರಿದ್ದರೂ ಅವ[...] ಯಾವುದೇ ತರದ ಪ್ರಾಮುಖ್ಯ ಅಧಿಕ[...] ವಿಲ್ಲವೆಂದು ಈ ವಿಸ್ತಾರ ಯೋಜನೆ[...] ಪ್ರಯೋಜನಕಾರಿಯಲ್ಲವೆಂದೂ ಈ[...]ಗಲೇ ದೇಶದ ಮುಖಂಡರು ಸಾರಿದ್ದಾ[...]

ಸಂರಕ್ಷಕ ಖಾತೆಯು ಮೊದಲಿನಂ[...]ತೆಂದು ಕೂಡಾ ಸೇನಾಪತಿಗಳ ಕೈ[...]ವಶವೇ ಇರುತ್ತದೆ. ಗೃಹ, ಅರ್ಥ[...] ಮತ್ತು ಮಾರ್ಗ-ಸೌಕರ್ಯವೆಂಬ ಉ[...] ಮೂರು ಮುಖ್ಯ ಖಾತೆಗಳೂ ಯುರೋ[...]ಪಿಯನರ ಕೈವಶವೇ ಇವೆ. ಅವರ[...] ಹಿಂದೆ ಇದ್ದ ಆ ಅಧಿಕಾರಿಗಳೂ ಇಂದ[...] ಅವರಿಂದ ಬಿಟ್ಟು ಹೋಗಿಲ್ಲ ಮಾ[...]ವಲ್ಲದೆ ಅವರ ಅಧಿಕಾರಕ್ಕೆ ಯಾವು[...] ತೊಂದರೆಯೂ ಆಗಿಲ್ಲ. ಆ ಮೇ[...] ಭಾರತೀಯರಾದ ಸರ್ ಜಫ್ರುಲಾಖಾನ[...] ಸರ್ ಗಿರಿಜಾ ಶಂಕರವಾಜಪೆ, ಸ[...] ರಾಮಸ್ವಾಮಿ ಮುದಲಿಯಾರ್ ಇವ[...] ನಿರ್ವಹಿಸುತ್ತಿದ್ದ ಕೆಲಸಗಳನ್ನು ಹೊ[...]ತಾಗಿ ಕೌನ್ಸಿಲಿಗೆ ಸೇರಿದ ಸದಸ್ಯರ[...] ಹಂಚಿಕೊಡಲಾಗಿದೆ. ಅವುಗಳ[...] ಹಂಚಿಕೊಟ್ಟರೂ ಕೊಡದಿದ್ದರೂ ಅ[...]ರಿಂದ ವಿಶೇಷವೇನೂ ದೊರಕದಂತಾ[...]ಲಿಲ್ಲ. ಅಂತೂ ಐದು ಮಂದಿ ಭಾರತೀ[...]ಯರಿಗೆ ಹೊಸಹುದ್ದೆಗಳನ್ನು ಕೊಟ[...] ಅವರನ್ನು ಸಂತೃಪ್ತಿಪಡಿಸಿದಂತಾಗಿದೆ.

ವಿಸ್ತರಣಾ ಯೋಜನೆಯ ಜತೆ[...] ಮೂವತ್ತು ಜನರಿಂದ ಕೂಡಿದ ರಕ್ಷಣ[...] ಯೋಜನೆಯೊಂದೂ ಮಾಡಲಾಗಿದೆ. [...] ವರಿಗಾದರೂ ಪ್ರಾಮುಖ್ಯ ವಿಷಯದ[...] ಯಾವುದೇ ಅಧಿಕಾರವಿಲ್ಲವೆಂಬ[...]ದು ಪ್ರತ್ಯೇಕ ಹೇಳಬೇಕಾದ ಅವಶ್ಯ[...]ಲ್ಲ. ದೇಶದ ಪ್ರಾಮುಖ್ಯ ವಿಷಯಗಳಲ್ಲಿ[...] ಭಾರತೀಯರಿಗೆ ಸ್ಥಾನಮಾನಗಳಿಲ್ಲ[...] ದೇಶದ ಪ್ರಜೆಗಳ ಸಮ್ಮತಿಯು ದೊರಕದ[...] ಆದ ಈ ಕೌನ್ಸಿಲ್ ವಿಸ್ತರಣೆಯ ಫಲವ[...] ಎಷ್ಟರ ಮಟ್ಟಿಗೆ ಜನಪ್ರಿಯವಾಗಿ ಯಶಸ್ವಿ[...]ಯಾಗುವುದೋ ತಿಳಿಯದಾಗಿದೆ.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

		ರಿಂದ	ವರೆಗೆ
1. (a)	ಛತ್ತ ಅವ್ವಲ್ ತರದ ಗುಡ್ಡು ಮುಡಿಗೆ	—	—
(b)	,, ದುಯಂ ,, ,, ,,	—	—
2. (a)	ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	6— 4—0	6— 4—0
(b)	,, ದುಯಂ ,, ,, ,,	0— 0—0	
3. (a)	,, ಅವ್ವಲ್ ,, ಸುಗ್ಗಿ ,,	6— 0—0	—
(b)	,, ದುಯಂ ,, ,, ,,	5—14—0	5—14—0
4. (a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	35— 0—0	40— 0—0
(b)	,, ಸಿಪ್ಪೆಯಿದ್ದದ್ದು ,,	37— 8—0	42— 8—0
5. (a)	ಕೊಬ್ಬರಿ ಆಫೀಸು ಖಂಡಿಗೆ	57— 8—0	—
(b)	,, ದ್ವೀಪ ,,	—	—
(c)	,, ದಿಲ್‌ಪಸಂದ್ ,,	—	—
6.	ತೆಂಗಿನ ಎಣ್ಣೆ ಮಣಕ್ಕೆ	4— 0—0	—
7. (a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2— 8—0	3— 0—0
(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	— 0—0	— 0—0
	(ಹೊಸ್ತು)	90— 0—0	100— 0—0
8.	ಗೇರುಬೀಜ ಮುಡಿಗೆ	6— 0—0	6— 8—0
9.	ಕಬ್ಬಿನ ಬೆಲ್ಲ ಖಂಡಿಗೆ	35— 0—0	40— 0—0
10.	ಒಳ್ಳೆ ಮೆಣಸು ಹಂಡ್ರೆಡ್ ವೇಟೀಗೆ	14— 8—0	15— 8—0
11. (a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5— 4—0	8— 0—0
(b)	ಹುಡಿಯು ,, ,,	5— 8—0	7— 8—0
12. (a)	ಮೈಸೂರು ಏಲಕ್ಕಿ ಮಣಕ್ಕೆ	— 0—0	— 0—0
(b)	ಕೊಡಗಿನ ,, ,,	70— 0—0	75— 0—0
13. (a)	ಕುಮಟೆಯ ಮೆಣಸು ಖಂಡಿಗೆ	75— 0—0	85— 0—0
(b)	ಕಾಸರಗೋಡು ,, ಮಣಕ್ಕೆ	3— 8—0	—
(c)	ಊರಿನ ,, ,,	3—12—0	3—14—0



ಸೆರೆಮನೆಯಿಂದ ನೆಹರುಗಳ ಧ್ವನಿ ಕೇಳಿಸಿತು!

ಇಂಗ್ಲೆಂಡಿನ 'ನ್ಯೂಸ್ ರಿವ್ಯೂ' ಪತ್ರಿಕೆಯ ಮೂಲಕ

— ನೆಹರುಗಳ ಹೊಸ ಪುಸ್ತಕದ ವಿಮರ್ಶೆಯಲ್ಲಿ —

ಭಾರತದ ರಾಷ್ಟ್ರೀಯತ್ವವನ್ನು ಪುರಸ್ಕರಿಸುವರಲ್ಲಿ ಗಾಂಧಿಜಿಯ ನಂತರ ಪಂಡಿತ ಜವಾಹರಲಾಲ ನೆಹರುಗಳೇ ಶ್ರೇಷ್ಠರಾಗಿದ್ದಾರೆ. ಬಲು ಗಟ್ಟಿಗರಿವರು, ಬಗ್ಗದ ಬ್ರಾಹ್ಮಣ, ಅಲಹಾಬಾದಿನ ಶ್ರೀಮಂತ ಮನೆತನವೊಂದರಲ್ಲಿ ಹುಟ್ಟಿದರು, ಹ್ಯಾರೋ ವಿದ್ಯಾಲಯದಲ್ಲಿ ಶಿಕ್ಷಣಕ್ಕಾಗಿ ಹೋದವರು; ಫ್ರಾನ್ಸ್ ದೇಶಕ್ಕೆ ತಮ್ಮ ರೇಶಿಮೆಯ ಅಂಗಿಗಳನ್ನು ಮಡಿಮಾಡಿಸಲು ಕಳುಹಿಸುತ್ತಿದ್ದರು. ಈಗ ಕೈನೂಲಿನ ಸಾದಾ ಅಂಗಿಗಳನ್ನು ತೊಡುವ ಸಮತಾವಾದಿ. ಭಾರತದಲ್ಲಿ ರಾಜಕೀಯ ಮತ್ತು ಸಾಮಾಜಿಕ ಕ್ರಾಂತಿಯಾಗಬೇಕೆಂದು ಬಯಸುವವರು.

'ಭಾರತದಲ್ಲಿ ಬ್ರಿಟಿಷರ ಆಳಿಕೆಯ ವಿರುದ್ಧ ಪೂರ್ಣ ಸ್ವರಾಜ್ಯಕ್ಕಾಗಿ ಒಂದು ಕೋಟಿ ಜನರೆದುರು ಭಾಷಣ ಮಾಡಿದ್ದಾರೆ. ವಿಮಾನ, ರೈಲು, ಮೋಟರು, ಕುದುರೆ, ಸಾಯಿಕಲ್ ಇವುಗಳಲ್ಲಿ, ಒಮ್ಮೊಮ್ಮೆ ಕಾಲಿನಿಂದ ಸಹ ೫೦೦೦೦ ಮೈಲು ಅದಕ್ಕಾಗಿ ಸುತ್ತಿದ್ದಾರೆ. ತಮ್ಮ ಈ ಚಟುವಟಿಕೆಗಳಿಗಾಗಿ ಅನೇಕ ಸಲ ಸೆರೆಮನೆಗೆ ಹೋಗಿದ್ದಾರೆ.

"ಸೆರೆಮನೆ ಪ್ರಾಣಾಂತಿಕವಾದ ಬೇಸರ, ಆದರೆ ಭಾರತವೇ ಒಂದು ದೊಡ್ಡ ಸೆರೆಮನೆ" ಎಂದು ನಂಬಿ ಜವಾಹರಲಾಲರು ಗಾಂಧಿಯವರ ಶಾಸನಭಂಗದ ಒಂದು ಭಾಗವೆಂದು ೧೯೪೦ರಲ್ಲಿ ಯುದ್ಧವಿರೋಧ ಭಾಷಣಮಾಡಿ ನಾಲ್ಕು ವರ್ಷದ ಕಠಿನ ಶಿಕ್ಷೆಯನ್ನು ಅನುಭೋಗಿಸುತ್ತಿದ್ದಾರೆ. ಅಮೆರಿಯವರ ಹುಟ್ಟೂರಾದ ಗೋರಖಪುರದಲ್ಲಿ ನೆಹರು ಶಿಕ್ಷಿಸಲ್ಪಟ್ಟರು.

ಜವಾಹರಲಾಲರು ಮತ್ತು ಎಷ್ಟೋ ಕಾಂಗ್ರೆಸ್ ಜನರು ಇನ್ನೂ ಸೆರೆಮನೆಯಲ್ಲಿರುವಾಗಲೆ ಕೈದಿಯಾದ ನೆಹರುಗಳು ಬರೆದ ಪುಸ್ತಕವೊಂದು (Unity of India) ಪ್ರಸಿದ್ಧವಾಗಿದೆ. ಇದರಿಂದ ಬ್ರಿಟನಿನ ನ್ಯಾಯ-ನಿಷ್ಠುರತೆಯು ವ್ಯಕ್ತವಾಗುವುದು. ಆ ಪುಸ್ತಕವನ್ನು ವಿಮರ್ಶೆ ಮಾಡುತ್ತಾ ಲಂಡನಿನ 'ನ್ಯೂಸ್ ರಿವ್ಯೂ' ಪತ್ರಿಕೆಯು, ಜವಾಹಿರಲಾಲರ ರಾಷ್ಟ್ರೀಯ ಭಾವನೆಗಳನ್ನು ವಿವರಿಸಿ ತಿಳಿಸುತ್ತದೆ.

ನೆಹರುಗಳು ಅದರಲ್ಲಿ ಭಾರತೀಯರೇಕೆ ಯುದ್ಧಕ್ಕೆ ಬೆಂಬಲಕೊಡುವುದಿಲ್ಲವೆಂಬುದರ ಕಾರಣಗಳನ್ನು ಚೆನ್ನಾಗಿ ವಿವರಿಸಿದ್ದಾರೆ. ೧೯೧೪-೧೮ರ ಮಹಾಯುದ್ಧದ ಕಹಿಯಾದ ನೆನಪು ನಮಗೆ ಇದೆ. ಆ ಮೇಲೇನಾಯಿತು ಎಂಬ ನೆನಪೂ ನಮಗಿದೆ. ಆ ಯುದ್ಧದಲ್ಲಿ ಭಾರತದ ಸಹಾಯವು ಗಣನೀಯವಿತ್ತು. ೧೦೦೦೦೦೦ಕ್ಕೆ ಮೇಲ್ಪಟ್ಟು ಜನರು ಯುದ್ಧದ ಬೇರೆ ಬೇರೆ ರಣರಂಗಗಳಿಗೆ ಕಳಿಸಲ್ಪಟ್ಟಿದ್ದರು. ಭಾರತದ ಮುಂದಿನ ಸ್ಥಾನಮಾನದ ಬಗ್ಗೆ ಭರವಸೆಯ ವಚನಗಳನ್ನು ನಮ್ಮ ಮುಂದೆ ಇಟ್ಟರು. ಆದರೆ ವಚನಗಳ ಫಲವಾಗಿ ಬಂದದ್ದೆಂದರೆ ಘಡುಕರವಾದ ದಬ್ಬಾಳಿಕೆ, ಪಂಜಾಬಿನಲ್ಲಿ ಸೈನಿಕ ರಾಜ್ಯ ಮತ್ತು ಹೆಸರಾದ ಅಮೃತಸರದ ಕೊಲೆ.

'೧೯೨೭ರಲ್ಲಿಯೇ ಹಿಂದುಸ್ಥಾನದ ಅನಧಿಕೃತ ಪಾರ್ಲಿಮೆಂಟಿನಂತಿದ್ದ ಕಾಂಗ್ರೆಸು ಯಾವದೇ ತರಹದ ಸಾಮ್ರಾಜ್ಯವಾದದ ಯುದ್ಧದಲ್ಲಿ ಸಹಕರಿಸುವದಿಲ್ಲೆಂದು ಸಾರಿತ್ತು.

'ಹೊಸ ಯುದ್ಧ ಸಮೀಪಕ್ಕೆ ಬಂದಂತೆ, ಬ್ರಿಟಿಷ್ ಸರಕಾರವು, ಪ್ರಾಂತಿಕ ಸ್ವಾಯತ್ತತೆಯನ್ನು ಕೊಟ್ಟ ಹಿಂದೀ ರಾಜ್ಯಘಟನೆಯಲ್ಲಿ ತಿದ್ದುಪಡಿಮಾಡಿ ಯುದ್ಧದ ಪ್ರಸಂಗ ಬಂದರೆ ಬೇಕಾಗಬಹುದೆಂದು ತಮ್ಮ ಕೈಗೊಂಬೆಯಾದ ಕೇಂದ್ರ ಸರಕಾರದಲ್ಲಿ ಎಲ್ಲ ಅಧಿಕಾರವನ್ನು ಕೇಂದ್ರೀಕರಿಸಿತು.

'೧೯೩೯ನೇ ಅಗಸ್ಟ ತಿಂಗಳಲ್ಲಿ ಕೇಂದ್ರ ಅಥವಾ ಸ್ವಾಯತ್ತತೆಯುಳ್ಳ ಪ್ರಾಂತಿಕ ಶಾಸನ ಸಭೆಗಳನ್ನು ಕೇಳದೆ ಹಿಂದೀ ಸೈನ್ಯವನ್ನು ಸಜ್ಜುಮಾಡಿ ಇಜಿಪ್ತ ಮತ್ತು ಮಲಯ ದೇಶಗಳಿಗೆ ಕಳುಹಿಸಲಾಯಿತು. ಇದನ್ನು ವಿರೋಧಿಸುವುದಕ್ಕೆಂದು ಕಾಂಗ್ರೆಸು ಕೇಂದ್ರ ಸಭೆಯೊಳಗಿನ ತನ್ನ ಸದಸ್ಯರನ್ನೆಲ್ಲ ಹೊರಗೆ ಕರೆಯಿತು. ಮತ್ತು ಜನರ ಸಮ್ಮತಿಯಿಲ್ಲದೆ ಭಾರತವನ್ನು ಯುದ್ಧದಲ್ಲಿ ಎಳೆಯಬಾರದೆಂದು ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿತು.

"ಇಷ್ಟೆಲ್ಲ ಹೇಳಿದರೂ ಯುರೋಪಿನಲ್ಲಿ ಯುದ್ಧಪ್ರಾರಂಭವಾದ ಕೂಡಲೆ ಭಾರತವೂ ಯುದ್ಧಾಸಕ್ತ ರಾಷ್ಟ್ರವೆಂದು ಸಾರಲಾಯಿತು. ಮತ್ತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತ ಘಟನೆಯ ತಿದ್ದುಪಡಿ ಮಸೂದೆಯು ಸ್ವಲ್ಪ ನಿಮಿಷಗಳಲ್ಲಿ ಪಾಸಾಗಿಹೋಯಿತು. ಇದನ್ನು ನೋಡಿ ಕಡುಕೋಪ ಬಂದಿತು.

ನಾಝಿ ವಿಜಯವೂ ನಮಗೆ ಬೇಕಾಗಿಲ್ಲ. ಯುದ್ಧೋದ್ದೇಶಗಳನ್ನು ಸ್ಪಷ್ಟೀಕರಿಸಿರೆಂದು ಬ್ರಿಟಿಷರಿಗೆ ಕೇಳುವುದೇ ಕಾಂಗ್ರೆಸಿನ ಕರ್ತವ್ಯವಾಗಿತ್ತು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಸಾರಬೇಕಲ್ಲದೆ "ಹೊರಗಿನ ಮಧ್ಯಸ್ಥಿಕೆಯಿಲ್ಲದೆ ಘಟನಾಸಮಿತಿಯ ಮೂಲಕ ತಮ್ಮ ಘಟನೆಯನ್ನೂ ಸಿದ್ಧಪಡಿಸಿಕೊಳ್ಳುವ ಅಧಿಕಾರ"ವನ್ನು ಕೊಡಬೇಕೆಂದೂ ಕೇಳಿಕೊಂಡಿತು.

'ಇದು "ಸ್ವಾತಂತ್ರ್ಯಕ್ಕಾಗಿ ನಡೆದ ನಮ್ಮ ದೀರ್ಘವಾದ ಹೋರಾಟ"ದ ಅನಿವಾರ್ಯವಾದ ಫಲ ಮತ್ತು ಭಾರತದಲ್ಲಿ ಯುದ್ಧದ ಬಗ್ಗೆ ಸಹಾನುಭೂತಿಯನ್ನುಂಟುಮಾಡುವ ಪ್ರಯತ್ನದ ಅಗತ್ಯವಾದ ಪ್ರಾಥಮಿಕ ಹಜ್ಜೆಯಾಗಿದೆಯೆಂದು ನೆಹರುಗಳು ಹೇಳಿರುತ್ತಾರೆ.

"ಅವರು ತಮ್ಮ ಶಾಂತತೆಯ ಇಲ್ಲವೆ ಹೋರಾಟದ ಉದ್ದೇಶಗಳನ್ನು ಹೇಳಲೊಲ್ಲೆನೆಂದರು ಮತ್ತು ಭಾರತದ ಬಗ್ಗೆ

ಯುದ್ಧದ ಕೊನೆಗೆ ಸಾರ್ವಭೌಮ ಸರಕಾರವು-ಭಾರತದ ವಿವಿಧ ಜಾತಿ ಪಕ್ಷ ಸಂಗಡ ಹಿತ ಸಂಬಂಧಗಳ ಪ್ರತಿನಿಧಿಗಳೊಂದಿಗೆ ಮತ್ತು ಸಂಸ್ಥಾನಿಕರೊಡನೆ ಅವರೆಲ್ಲರ ಸಹಾಯ ಸಹಕಾರಗಳಿಂದ, ಇಚ್ಛಿತವಾದ ತಿದ್ದುಪಡಿಗಳೊಂದಿಗೆ ರಾಜ್ಯ ಘಟನೆಯನ್ನು ತಯಾರಿಸಲು ಆನಂದದಿಂದ ಭಾಗವಹಿಸಬಹುದು ಎಂದೂ ಹೇಳಲಾಯಿತು.

'ಭಾರತದ ಸಂಸ್ಥಾನಿಕರು ಮಧ್ಯಯುಗದ ಅವಶೇಷಗಳೆಂದೂ ಬ್ರಿಟಿಷ ಬಂಡವಾಳಗಾರರು ಜನರ ಕಡುಹಗೆಗಳೆಂದೂ ದೃಷ್ಟಿಯನ್ನಿಟ್ಟುಕೊಂಡ ಕಾಂಗ್ರೆಸಿನ ಗುಂಟಲಿನಲ್ಲಿ ಶ್ರೀಕಭವನದ ಈ ತುತ್ತು ಸಿಕ್ಕಿಕೊಂಡಿತು. ಆ ಮೇರೆಗೆ ಬ್ರಿಟಿಶರ ಕೊಡುಗೆಯನ್ನು ನಿರಾಕರಿಸಿತು ಮತ್ತು ಇದಕ್ಕೆ ವಿರೋಧವೆಂದು ಪ್ರಾಂತಿಕ ಸರಕಾರಗಳು ರಾಜಿನಾಮೆ ಕೊಡಬೇಕೆಂದು ಅವುಗಳಿಗೆ ಅಪ್ಪಣೆ ಕೊಟ್ಟಿತು.

ಈ ಬಿಕ್ಕಟ್ಟನ್ನು ಬಗೆಹರಿಸಲು ಆತುರವಾಗಿ ಬ್ರಿಟಿಶ ಸರಕಾರವು ಯುದ್ಧಾನಂತರ ಸಾಮಂತ ಸ್ವರಾಜ್ಯವನ್ನು ಕೊಡಬಹುದೆಂಬ ಆಸೆಯ ಆಮಿಷವನ್ನು ಚೆಲ್ಲತೊಡಗಿದೆ. ಸ್ವಾತಂತ್ರ್ಯದ ದೊಡ್ಡ ಪ್ರಶ್ನೆಯನ್ನು ಬಿಟ್ಟು, ಮುಸ್ಲಿಂ ಲೀಗಿನಲ್ಲಿ ಪ್ರತಿನಿಧಿತವಾದ ೮ ಕೋಟಿ ಮುಸಲ್ಮಾನರ ಬಲಾಢ್ಯವಾದ ಅಲ್ಪ ಸಂಖ್ಯಾಕ ಪಕ್ಷದೊಡನೆ ಗಾಂಧಿಯ ಹಿಂದೂ ಮತ್ತು ಬೇರೆ ಅನುಯಾಯಿಗಳು ಒಪ್ಪಂದ ಮಾಡಿಕೊಂಡ ಹೊರತು ಭಾರತವು ಬ್ರಿಟಿಷ ಸಾಮಂತ ರಾಜ್ಯವಾಗಲು ಬಯಸಲಾರದೆಂಬ ಘೋಷಣೆ ಹಬ್ಬಿಸುವುದರಲ್ಲಿ ಬ್ರಿಟಿಷ್ ಸರಕಾರವು ತೊಡಗಿತು.

ಮುಸಲ್ಮಾನರಿಗೆಲ್ಲ ಸ್ವಾತಂತ್ರ್ಯ ಬೇಕೆಂದು ನೆಹರುಗಳು ಹೇಳುತ್ತಾರೆ. ಆದರೆ ಮುಸಲ್ಮಾನರಿಗೆ ಮುಂದಾಳುಗಳು ಪ್ರತಿಗಾಮಿಗಳಿದ್ದಾರೆ. ಅವರು ಹಿಂದುಗಳ ಅಲ್ಪ ಸಂಖ್ಯಾಕರ ಆಡಳಿತದಲ್ಲಿ ರಾಜಕೀಯ ಅಲ್ಪಸಂಖ್ಯಾಕರಾಗಿರುವುದಕ್ಕಿಂತ ಆಯುರದೊಂದಿಗಿರುವ ಅಲ್ಸ್ಟರದಂತೆ ಭಾರತವನ್ನು ತುಂಡುಮಾಡಬೇಕೆನ್ನುತ್ತಾರೆ.

ಹಿಂದು ಮುಸಲ್ಮಾನ ಸಮಸ್ಯೆಯು 'ಒಡಕು ಹುಟ್ಟಿಸಿ ಆಳು' ಎಂಬ ಬ್ರಿಟಿಶರ ಕೈವಾಡವೆಂದು ನೆಹರುಗಳ ಅಭಿಪ್ರಾಯ. ಕಾಂಗ್ರೆಸಿಗೆ ಸ್ವರಾಜ್ಯ ಬೇಕಿಲ್ಲ; ಬ್ರಿಟಿಷ್ ಸೈನ್ಯದ ಮತ್ತು ಹಡಗಪಡೆಯ ಹೆಸರಿನ ಸಂರಕ್ಷಣೆಯೂ ಬೇಕಾಗಿಲ್ಲವೆಂದು ಕೊನೆಗೆ ಹೇಳಿಬಿಡುತ್ತಾರೆ.

ತನ್ನ ನೆರೆನಾಡುಗಳಾದ ಚೀನ, ಬ್ರಹ್ಮದೇಶ, ಸಿಂಹಳದ್ವೀಪ ಅಫಗಾನಿಸ್ಥಾನ ಮತ್ತು ಪರ್ಶಿಯಗಳೊಂದಿಗೆ ಭಾರತವು ಸಂಯುಕ್ತ ರಾಜ್ಯ ಸ್ಥಾಪಿಸಿಕೊಳ್ಳುವುದು ಶಕ್ಯವಿದೆಯೆಂದು ತರಡು ಬರುತ್ತದೆ. ಜಪಾನು ಇದರಲ್ಲಿ ಸೇರಿಸಲ್ಪಟ್ಟಿಲ್ಲ. ಆದರೆ ಪಂಡಿತ ನೆಹರುಗಳು ಭಾರತವು ಗಂಡಾಂತರವನ್ನು ಆತ್ಮಸಂತೋಷದಿಂದ ಎದುರಿಸುವುದಲ್ಲದೆ ಎಂತಹ ವಿಪತ್ತು ಬಂದರೂ ಮುಂದಡಿಯಿಡುವುದೆಂದು ಹೇಳುತ್ತಾರೆ. ಜಪಾನು ಆಕ್ರಮಣ ಮಾಡುವ ಸಂಭವವನ್ನು ಟೀಕಿಸುತ್ತಾರೆ.

ಕೇಂದ್ರ ಕಾರ್ಯಕಾರೀ ಮಂಡಲದ ಮುಖ್ಯಾಂತರವಾಗಿ ಈಗ ಸರ್ವಾಧಿಕಾರತ್ವವನ್ನು ನಡೆಸುತ್ತಿರುವ ವೈಸರಾಯರಾದ ಲಾರ್ಡ ಲಿನ್‌ಲಿಥಗೋರವರು ಭಾರತದ ಸಾರ್ವಜನಿಕ ಜೀವನದಲ್ಲಿರುವ ಮುಖ್ಯಮುಖ್ಯ ಪಂಗಡಗಳು ಪ್ರತಿನಿಧಿಸುವಂತೆ ಅಧಿಕಾರೇತರ ಭಾರತೀಯರನ್ನು ತಮ್ಮ ಕಾರ್ಯಕಾರೀ ಮಂಡಲದಲ್ಲಿ ಸೇರಿಸಿಕೊಳ್ಳಬೇಕು.

ಈ ಹೊಸ ಕಾರ್ಯಕಾರೀ ಮಂಡಲವನ್ನು ಸಾಮಂತ ಸ್ವರಾಜ್ಯದ ಕಾರ್ಯಕಾರಿ ಮಂಡಳಿದಂತೆ ಗಣಿಸಲಾಗುವುದು. ಯುದ್ಧ ಮುಗಿದ ಮೇಲೆ ಸಾಮಂತ ಸ್ವರಾಜ್ಯವನ್ನು ಯಾವಾಗ ಕೊಡಲಾಗುವುದೆಂಬುದನ್ನು ವ್ಹಾಯಿಸರಾಯರು, ಹೇಳುವರು.

ವ್ಹಾಯಿಸರಾಯರು ಸಪ್ರು ಅವರ ಜೊತೆಗೆ ಚರ್ಚಿಸಲಾದ ಈ ಸೂಚನೆಗೆ ಯುದ್ಧ ಪ್ರಯತ್ನದಲ್ಲಿ ಸಹಾಯ ಮಾಡಬೇಕೆನ್ನುವ ನಾಝಿ ವಿರೋಧಕ ಭಾವನಾಪ್ರಧಾನರಾದ ಭಾರತೀಯರನೇಕರು ಬೆಂಬಲ ಕೊಟ್ಟಿದ್ದಾರೆ. ಆದರೆ ಇದು ಮಹಾತ್ಮಾ ಗಾಂಧಿಯವರಂಗಾಗಲಿ ಅಲ್ಲವೆ ಅವರ ಪ್ರಮುಖರನ್ನು ಹೊಂದಿದ ಮತ್ತು ಸೆರೆಮನೆಯಲ್ಲಿರುವ ಅನುಯಾಯಿಗಳಿಗಾಗಲಿ ರುಚಿಸಿದಂತೆ ಕಾಣುವುದಿಲ್ಲ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮೊನ್ಸಿಫ್ ಕೋರ್ಟಿನಲ್ಲಿ

S. E. P. No. 56/1941.

1. ಶಂಕರನಾರಾಯಣ ಭಟ್ಟ } ಅರ್ಜಿದಾರರು,
2. ಕೆ. ವೆಂಕಟ್ರಾಯ ಪೈ }

ಗಣಪತಿ ಭಟ್ಟ ಕೂಡಾ— ಎದ್ರಿರು

ಪೆರುವಾಜೆ ಗ್ರಾಮದ ಸೀರ್ಕಜೆಯಲ್ಲಿರುವ ಕಿನಿಲ ಈಶ್ವರ ಭಟ್ಟರ ಮಗ ಗಣಪತಿ ಭಟ್ರಿಗೆ—

೨ನೆ ಎದ್ರಿ ಹೆಸರಿಗಾದ ಡಿಕ್ರಿ ಪರಾಭಾರೆ ಮಂಜೂರಿಗೂ, 1, 2ನೆ ಎದ್ರಿರನ್ನು ವಾರಂಟಿನಲ್ಲಿ ಹಿಡಿದು, ಶಿವಿಲ್ ಜೈಲಿಗೆ ರವಾನಿಸಲಿಕ್ಕೂ ವಾಳಲು ಮಾಡಿದ ಮೇಲಿನ ಅಮಲ್‌ಜಾರಿ ತಾ. 11-8-41ಕ್ಕೆ ಮೇಲಿನ ಕೋರ್ಟಿನಲ್ಲಿ ವ್ಯಾದೆ ಇಟ್ಟಿದೆ. ನಿಮಗೆ ಈ ಬಗ್ಗೆ ಲ್ಲಾ ಆಕ್ಷೇಪ ಇದ್ರೆ ತಾ. 11-8-41ಕ್ಕೆ 11 ಗಂಟೆಗೆ ಬೆಳಗ್ಗೆ ಹಾಜರಾಗಿ, ಮೇಲಿನ ಕೋರ್ಟಿಗೆ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವಾಯಿಮಾಡಲಾದೀತು ತಿಳಿದಿರಲಿ.

ಪುತ್ತೂರು 17-7-41 } K. K. Shenai

ವಾರದ ಕತೆ:

ತಪ್ಪು ಯಾರದು?

ಕತೆಗಾರ ಕೆ. ಎಸ್. ಶರ್ಮಾ

ಅಯ್ಯೋ! ಅಯ್ಯೋ!! ಅಯ್ಯೋ!!
— ನಾನು, ನಾ—ನು ಅಲ್ಲ! ಪಾಪಿ!

ಹೌದು. ನಾನು ನಿಶ್ಚಯವಾಗಿಯೂ ಪಾಪಿಯು. ನನ್ನಂತಹ ನರಪಿಶಾಚಿಯು ಈ ಲೋಕದಲ್ಲಿಲ್ಲ. ನಾನು ವಿಶ್ವಾಸ ವಂಚಕ. ದೇವರು ಈ ಪಾಪಿಯನ್ನು ಇನ್ನೂ ಸಾಯಗೊಳಿಸದೆ ಉಳಿಸಿರುವನು. ನಾನು ಸಾಯಬೇಕಾಗಿತ್ತು. ಉಜ್ವಲವಾದ ನರಕ ಕುಂಡದಲ್ಲಿ ಸುಟ್ಟು ಭಸ್ಮವಾಗಬೇಕಿತ್ತು. ಹಾಗೆ ನನ್ನ ಹಣೆಯಲ್ಲಿ ಬರೆಯಲಿಲ್ಲ. ಬದಲಾಗಿ ನಾನು ಹುಚ್ಚನಾದೆ. ಎತ್ತೆತ್ತಲೋ ತಿರುಗಿದೆ. ಏನೇನೋ ಹೇಳಿದೆ. ಎಲ್ಲರೂ ನನ್ನನ್ನು ಹುಚ್ಚನೆಂದು ಕರೆದರು. ಆದರೆ ಎಲ್ಲಿಂದ ಹುಚ್ಚು ಬರಬೇಕು. ಈ ಪಾಪಿಗೆ ಹುಚ್ಚು ಬಾರದು. ದೇವಾ, ನಾನು ಪಾಪಿ ಎನ್ನುದರೂ ನನ್ನನ್ನು ನರಕಕ್ಕೆ ನೂಕಿಬಿಡು. ಈ ಆಸ್ಪತ್ರೆಯ ವಾಸವು ನನಗೆ ಬೇಡ. ನನ್ನ ಪಾಲಿಗೆ ಸ್ಮಶಾನವು ಬೇಕಾಗಿದೆ. ನನ್ನ ಭಾಗ್ಯವೆಲ್ಲಿದೆ? ಆ ದಿನ, ನನ್ನ ಭಾಗ್ಯದೇವತೆಯು ಸುರಿಸಿದ ಕಣ್ಣೀರು ಇಂದೂ ನನ್ನ ಹೃದಯವನ್ನು ಸುಡುತ್ತಿದೆ. ಏನು ಮಾಡಲಿ. ಎಲ್ಲಿ ಹೋಗಲಿ ?

ಮಾಧವನು ಏನೇನನ್ನೋ ಅನ್ನುತ್ತಲಿದ್ದ. ಹುಚ್ಚನಂತೆ ಮೇಲಕ್ಕೆದ್ದ. ಕೊಠಡಿಯ ಬಾಗಿಲ ಬಳಿ ಬಂದ. ಬಾಗಿಲು ಹಾಕಿತ್ತು. ಬಲವಾಗಿ ಬಡಿದು ನೂಕಿದ. ಬಾಗಿಲು ತೆರೆಯಿತು. ಹೊರಬಂದ, ನೇರವಾಗಿ ಡಾಕ್ಟರರ ಮನೆಬಳಿಗೆ.

'ಸರ್, ಸರ್' ಡಾಕ್ಟರರು ಗಾಬರಿಯಿಂದ ಹೊರಬಂದರು. 'ಯಾರದು' ಎಂದು ಕೇಳಿದರು. ಮಾಧವನು ಧೈರ್ಯವಾಗಿ ಅಂದ 'ನಾನು ಮತ್ತಾರೂ ಅಲ್ಲ ನಾನು. ಹೋಗುತ್ತೇನೆ. ಸಂಪೂರ್ಣವಾಗಿ ಈಗ ಗುಣಹೊಂದಿದ್ದೇನೆ. ಮುಂದೆ ನನಗೆ ಯಾವ ಔಷಧವೂ ಬೇಡ. ಊರಿಗೆ ತೆರಳುತ್ತೇನೆ.' ಡಾಕ್ಟರರು ಗಾಬರಿಯಾದರು. 'ಮಾಧವ, ನೀನು ಗುಣಹೊಂದಿಲ್ಲ. ಇನ್ನು ಕೆಲ ದಿನ ಇಲ್ಲಿದ್ದು ಗುಣಹೊಂದಿ ತೆರಳು' ಎಂದರು. ಮಾಧವನು ಒಪ್ಪಲಿಲ್ಲ. 'ಸರ್, ಅದೆಲ್ಲಾ ಆಗದು. ನಾನೀಗ ತೆರಳಬೇಕಾಗಿದೆ. ನನ್ನ ಪ್ರಯಾಣಕ್ಕೆ ತಾವು ಅಡ್ಡಿಯನ್ನು ಮಾಡಬಾರದು' ಹೀಗೆಂದು ಆತನು ಅಲ್ಲಿಂದ ಮಾಯವಾದ. ಡಾಕ್ಟರರು ಚಕಿತರಾಗಿ ಆಸ್ಪತ್ರೆಗೆ ಓಡಿಬಂದರು. ಮಾಧವನಿದ್ದ ಕೊಠಡಿಗೆ ಬಂದರು. ಅಲ್ಲಿ ತೀರಾ ಭಯಂಕರ. ಒಂದೆಡೆ ಮಾಧವನ ಹಾಸಿಗೆ ಬಿದ್ದಿತ್ತು. ಇನ್ನೊಂದೆಡೆ ಲಾಂದ್ರವು ಮುರಿದು ಪುಡಿಪುಡಿಯಾಗಿತ್ತು. ಡಾಕ್ಟರು ಮುಂದೆ ಆಲೋಚಿಸಲಾರದೆ ಮನೆ ಮರಳಿ ಬಂದುಬಿಟ್ಟರು.

ಮಾಧವನು ಓಡುತ್ತಲೇ ಇದ್ದ. ಕಾಣದ ದಾರಿಯಲ್ಲಿ ಸಾಗದ ಹೆಜ್ಜೆಯನ್ನಿಡುತ್ತಾ ಮುಂದುವರಿದಿದ್ದ. ಕಣ್ಣುಗಳಿಂದ ಅಶ್ರುಗಳು ಧಾರೆಯಾಗಿ ಬೀಳುತ್ತಿದ್ದುವು. ಮಾಧವನು ನೇರವಾಗಿ ರೈಲ್ವೇ ಸ್ಟೇಷನಕ್ಕೆ ಬಂದ. ಎತ್ತಲೋ ಹೋಗುವ ಒಂದು ಟ್ರೈನು ನಿಂತಿತ್ತು. ಮಾಧವನು ಆಲೋಚಿಸದೆ ರೈಲು ಹತ್ತಿದ. ಒಂದೆರಡು ಕ್ಷಣಗಳಲ್ಲಿ ರೈಲು ಹೊರಟಿತು.

ಮಾಧವನು ಕುಳಿತ ಗಾಡಿಯಲ್ಲಿ ಹೆಚ್ಚು ಮಂದಿ ಇರಲಿಲ್ಲ. ಒಬ್ಬಿಬ್ಬರೇ ಇದ್ದರು. ಮಾಧವನು ಒಂದು ಬದಿಯಲ್ಲಿ ಬಿದ್ದುಕೊಂಡ, ಪುನಃ ಎದ್ದು ಕುಳಿತ. ಅತ್ತಿತ್ತ ಸಂಚರಿಸಿ ಒಂದೆಡೆ ಕುಳಿತ, ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆ, ಪ್ರಪಂಚವನ್ನೇ ದೊಡ್ಡದೊಂದು ಸಮಸ್ಯೆಯನ್ನಾಗಿ ಮಾಡಿಕೊಂಡು, ಮಾಧವನು ಬಿಡಿಸುವ ಆಲೋಚನೆಯಲ್ಲಿದ್ದ. ಶೂನ್ಯವಾಗಿ ಎತ್ತಲೋ ನೋಡಿದ. ಈ ವೇಳೆಗೆ ಮಾಧವನ ಪರಿಸ್ಥಿತಿಯನ್ನು ಕಂಡು ಟ್ರೈನಿನಲ್ಲಿದ್ದ ಓರ್ವ ಮಹನೀಯರು ಆತನ ಬಳಿಬಂದರು. ಮಾಧವನು ಮೆಲ್ಲಗೆ ಅವರನ್ನು ದಿಟ್ಟಿಸಿ 'ಸ್ವಾಮಿ, ತಾವು ದೊಡ್ಡವರು. ಅತ್ತಹೋಗಿ. ಪಾಪಿಯ ಬಳಿ ಬರಬೇಡಿ' ಎಂದು ಹೇಳಿ ಮೂಲೆಮೂಲೆಗೆ ಸರಿಯತೊಡಗಿದ.

ಅವರು ಚಕಿತರಾದರು. ಆದರೂ ಮೆಲ್ಲಗೆ 'ಅಪ್ಪಾ ನೀನಾರು, ವಿದ್ಯಾವಂತನಂತೆ ಕಾಣುತ್ತಿ. ಇದೇನು ಬುದ್ಧಿ ಭ್ರಂಶವಾಗಿದೆಯೆ?' ಮಾಧವನು ಗೋಳೋ ಎಂದು ಅತ್ತುಬಿಟ್ಟ. ಅವರು ಸಮಾಧಾನಪಡಿಸಿದರು. ಮಾಧವನು ಮೌನನಾದ. ಮರುಕ್ಷಣವೇ 'ಅಹುದು ನಾನು ಒಬ್ಬ. ಮನುಷ್ಯನಲ್ಲ. ವಿಮಲೆಯನ್ನು ವಂಚಿಸಿದ ಪಾಪಿ, ಮೂರ್ಖನು ನಾನು, ಮಾಧವನು ತಟಸ್ಥನಾದ. ಮಹನೀಯರು ಸಮಾಧಾನ ಸ್ವರದಿಂದ 'ಅಪ್ಪಾ ನೀನು ಏನು ಹೇಳುತ್ತಿ? ತಾಳ್ಮೆಯಿದ್ದರೆ ಸ್ವಲ್ಪ ನಿಧಾನಿಸಿ ಹೇಳು' ಎಂದರು.

ಮಾಧವನು 'ಹೂಂ—ನನ್ನ ವಿಚಾರ ಬೇಡ. ನನ್ನನ್ನು ನಂಬಿದ ವಿಮಲೆಯನ್ನು ಕಟ್ಟಕಡೆಗೆ ಹೊರದೂಡಿದವನು ನಾನು. ಆ ಭಾಗ್ಯ ಮೂರ್ತಿಯನ್ನು ಧೀರ್ಘ ಹೃದಯದಿಂದ ದೂಡಿದವನು ನಾನು.. ಹ್ಞಂ ನನಗೆ ದೂಡುವ ಅಧಿಕಾರವೆಲ್ಲಿದೆ? ಇಲ್ಲ ಇಲ್ಲ!'

ಮಹನೀಯರು 'ಇರಲಿ ನೀನು ಎಲ್ಲಿಗೆ ಹೋಗುತ್ತಿ—'

ಮಾಧವನು 'ಸ್ವಾಮಿ, ಮನೆಗೆ ಹೋಗುತ್ತೇನೆ ಬೆಂಗಳೂರಿಗೆ, ಅಲ್ಲಿಯೇ ನನ್ನ ಆಶೆ.'

'ಅಪ್ಪಾ, ಇದು ಬೆಂಗಳೂರಿಗೆ ಹೋಗಲಾರದು. ಬೆಂಗಳೂರಿಗೆ ಬೇರೆ ಗಾಡಿಯಿತ್ತು.' ಎನ್ನುವಷ್ಟರಲ್ಲಿಯೇ ಟ್ರೈನು ಒಂದು ಆಫೀಸಿನಲ್ಲಿ ನಿಂತಿತು. ಮಾಧವನು ಕುಳಿತಲ್ಲೇ ಇದ್ದ. ಇನ್ನು ಏನೋ ಹೇಳುವುದರಲ್ಲಿದ್ದ. ಈ ವೇಳೆಗೆ 'ಟಿಕೇಟು ಕಲೆಕ್ಟರನು' ಬಂದ. ಮಾಧವನ ಬಳಿಯಲ್ಲಿ ಟಿಕೇಟು ಕೇಳಿದ. ಆದರೆ ಟಿಕೇಟಿಲ್ಲ. ಪ್ರಪಂಚವನ್ನೇ ಮರೆತವನು ಟಿಕೇಟನ್ನು ಪಡೆಯುವನೆ? ಟಿಕೇಟು ಕಲೆಕ್ಟರನು ನಿರ್ದಾಕ್ಷಿಣ್ಯವಾಗಿ ಮಾಧವನನ್ನು ಹೊರತಳ್ಳಿದ. ಮಾಧವನು ಮನದಲ್ಲಿಯೇ 'ಇದೇ ಅವಮಾನ ಪಾಪಿಗೆ, ಇದೇ ಮರ್ಯಾದೆ' ಎನ್ನುತ್ತಾ ತೆರಳಿದ. ಎಲ್ಲಿಯೂ ನಿಲ್ಲಲಿಲ್ಲ. ವ್ಯಾಕುಲನಾದ. ಸಾಯಂಕಾಲವಾಯಿತು. ರಾತ್ರಿಯಾಯಿತು. ಮಾಧವನು ನಿಲ್ಲಲಿಲ್ಲ. ಮಾಧವನ ಪಾಲಿಗೆ ಪ್ರಕೃತಿ ಮಾತೆಯೂ ಮುನಿದಳೆಂಬಂತೆ ಘೋರವಾದ ಸಿಡಿಲು, ಮಳೆ ಗಾಳಿಗಳಿಗೆ ಪ್ರಾರಂಭವಾಯಿತು. ಮಾಧವನು ಕಡುರಾತ್ರಿಯಲ್ಲಿ ನಡೆದ. ಕಣ್ಣು ಕುಕ್ಕಿದರೂ ಕಾಣದ ಕಾಳರಾತ್ರಿಯಲ್ಲಿ ಮುನ್ನಡೆದ. ದೊಡ್ಡದೊಂದು ಕಟ್ಟಡದ ಬಳಿ ಬಂದು ನಿಂತನು. ಬಾಗಿಲು ಬಲವಾಗಿ ಹಾಕಿತ್ತು. ಮಾಧವನು ಜಗಲಿಯ ಬಳಿ ಬಂದು ಕಂಭವೊಂದಕ್ಕೆ ಒರಗಿ ಮಲಗಿಕೊಂಡ. ಆದರೆ ಎದೆಯು ಚಳಿಗಾಳಿಗೆ ಸಿಕ್ಕಿ ಕಂಗಾಲಾಗಿದ್ದ. ಅದು ಯಾವುದೂ ಆತನಿಗೆ ಹೃದಯದ ವೇದನೆಗಿಂತ ಘೋರವಾಗಿ ತೋರಲಿಲ್ಲ.

ನಿದ್ರೆ ಒರುವುದರಲ್ಲಿತ್ತು. ಥಟ್ಟನೆ ಆತನು ಎದ್ದು ಕುಳಿತ. ಒಳಗಿನಿಂದ ಯಾರೋ ಮಾತನಾಡುತ್ತಿರುವುದು ಕೇಳಿಬತು. ಮಾಧವನಿಗೆ ಆ ಸ್ವರದ ಪರಿಚಯವಾದಂತಾಯಿತು. ಒಮ್ಮೆ ಆತನು ಭ್ರಾಂತನಾದ. ಮೆಲ್ಲಗೆ ಬಾಗಿಲ ಬಳಿ ಬಂದ. ಅಲ್ಲೇ ಕುಳಿತ, ಒಳಗಿನಿಂದ ಬರುವ ಮಾತನ್ನು ಆಲಿಸಿದ.

'ಅಮ್ಮಾ ಸ್ವಲ್ಪ ಸೌಖ್ಯವಿದೆಯೆ?'

'ತಾಯಿ, ನನಗೆ ಸೌಖ್ಯವಾಗುವ ದಿನವಿಲ್ಲ. ಹೊಟ್ಟೆಯಲ್ಲಿ ಬಲವಾದ ವೇದನೆ ನಾನು ಬದುಕಲಾರೆ.'

ಮಾಧವನಿಗೆ ಏನೋ ಆಯಿತು. ಕಣ್ಣೀರು ಹರಿಯುತ್ತಿತ್ತು. ಪುನಃ ಒಂದು ವ್ಯಕ್ತಿಯು 'ಅಮ್ಮಾ ಡಾಕ್ಟರರು ಭರವಸೆಯಿಂದ ಹೇಳಿದ್ದಾರೆ. ಏನೂ ತೊಂದರೆಯಾಗದು. ನಿಮ್ಮ ಚಿಕಿತ್ಸೆಗಾಗಿ ನಾನು ತಯಾರಿದ್ದೇನೆ, ನಿಮಗೆ ಗುಣವಾದರೆ ಸಾಕು. ಇಲ್ಲಿ ನಿಮಗೆ ಕಷ್ಟವಾಗುತ್ತಿದೆಯೆ?'

ಮಾಧವನೀಗ ತಾನು ಆಸ್ಪತ್ರೆಯ ಛತ್ರದಲ್ಲಿರುವೆನೆಂದು ಅರಿತನು. ಒಳಗಿನ ವ್ಯಕ್ತಿಗಳಲ್ಲಿ ಓರ್ವಳು 'ನರ್ಸಳೆಂ'ಬುದನ್ನು ತಿಳಿದ. ಇನ್ನೊಂದು ವ್ಯಕ್ತಿಯ ಸ್ವರವನ್ನು ಕೇಳಿದೊಡನೆಯೇ ಮಾಧವನಿಗೆ ಕಣ್ಣೀರು ಉಕ್ಕಿಬರುತಿತ್ತು. ಏನೇನೋ ಭಾವನೆಗಳು ಬಂದು, ಮಾಧವನು ಹುಚ್ಚನಂತಾಗುವನು. ಮುಂದೆ ನರ್ಸಳು 'ಅಮ್ಮಾ ನಿಮ್ಮ ಊರಾವುದು? ನನ್ನೆಯೇ ಕೇಳಬೇ

[ಮುಂದಿನ ಪುಟವನ್ನು ನೋಡಿ]



ಜಿಲ್ಲಾ ಸಮಾಚಾರಗಳು

ಹರಿಜನ ಸೇವಕ ಸಂಘದ ಆಶ್ರಯ ದಲ್ಲಿ ಐಕ್ಯಭೋಜನ, ಶ್ರೀ ಎಚ್. ವಿ. ಕಾಮತರ ಅಧ್ಯಕ್ಷತೆಯಿಂದ

ಕಳೆದ ಆದಿತ್ಯವಾರ ರಾತ್ರಿ 8 ಗಂಟೆಗೆ ಮಂಗಳೂರು ಬಿಸೆಂಟ್ ಗರ್ಲ್ಸ್ ಹೈಸ್ಕೂಲಿನಲ್ಲಿ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಐಕ್ಯಭೋಜನವೊಂದು ಶ್ರೀ ಎಚ್. ವಿ. ಕಾಮತರ ಅಧ್ಯಕ್ಷತೆಯಿಂದ ನೆರವೇರಿತು. ಸುಮಾರು [illegible] ಮಂದಿ ಅತಿಥಿಗಳು ಬಂದಿದ್ದರು. ಸುಮಾರು [illegible]ರಷ್ಟು ಮಹಿಳೆಯರೇ ಇದ್ದರು. ಹಲವು [illegible], ಎಲ್ಲಾ ಪಂಗಡಗಳ ಹರಿಜನ ಸ್ತ್ರೀ ಪುರುಷರೂ ಆಗಮಿಸಿದ್ದರು. ಪ್ರಾರ್ಥನೆಯಾದ ಬಳಿಕ ಐಕ್ಯಭೋಜನವು ನೆರವೇರಿತು. ಆನಂತರ [illegible] ವಿಷ್ಣು ಕಾಮತರ ಅಧ್ಯಕ್ಷತೆಯಿಂದ ಸಭೆಯು ಕೂಡಿತು. ಪ್ರಾರಂಭದಲ್ಲಿ ಶ್ರೀಮತಿ [illegible]ರ ಸಂಗೀತವಿತ್ತು. ಆ ಬಳಿಕ ಶ್ರೀ ಎಸ್. [illegible]ರಾವ್, ಶ್ರೀಮತಿ ಸುಮತಿ ಬಾಯಿ, ಶ್ರೀ [illegible] ಆರ್. ಭಟ್, ಶ್ರೀ ಗೋಪಾಲ ಸಾಳಿಯ, ಶ್ರೀ ಮಂಜೇಶ್ವರ ಗೋವಿಂದ ಪೈ, ಶ್ರೀ [illegible] ಮತ್ತು ಶ್ರೀ ಚಂದ್ರಶೇಖರ [illegible] ಹರಿಜನ ಸೇವೆ, [illegible] ಭಾಷಣಗಳನ್ನಿತ್ತರು. ಡಾ। ಅಪ್ಪಸ್ವರು ಕೃತಜ್ಞತಾ ಸಮರ್ಪಣೆ ಮಾಡಿದರು. ಅಧ್ಯಕ್ಷರಾದ ಶ್ರೀ ಎಚ್. ವಿ. ಕಾಮತರು [illegible] ಗಂಭೀರವಾದ ಭಾಷಣದಲ್ಲಿ, ಹಿಂದುಗಳಲ್ಲಿ ಐಕ್ಯ ಭಾವನೆಯಿಲ್ಲದೆ ಹಿಂದೂ ಮುಸ್ಲಿಂ ಐಕ್ಯ ಸಂಪಾದನೆ ಸಾಧ್ಯವಿಲ್ಲವೆಂದು ಅಭಿಪ್ರಾಯವಿತ್ತರು.

ಶ್ರೀ ವೆಂಕಟೇಶ ಪ್ರಭುಗಳು ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಸತ್ಯಾಗ್ರಹ ಸಂಬಂಧ 4 ತಿಂಗಳ ಶಿಕ್ಷೆಯನ್ನು ಅನುಭವಿಸಿ ಬಂದ ಶ್ರೀ ಕೆ. ವೆಂಕಟೇಶ ಪ್ರಭುಗಳವರು ಕಾರ್ಕಳದಲ್ಲಿ ತಾ. 19ರ ದಿನ ಪುನಃ ಸತ್ಯಾಗ್ರಹ ಮಾಡಿದರು. ಅನೇಕ ಮಂದಿ ಪ್ರಮುಖರು, ಕಾಂಗ್ರೆಸ್ ಕಾರ್ಯಕರ್ತರು, ಸಾರ್ವಜನಿಕರು ನೆರೆದಿದ್ದರು. ಪೋಲೀಸರು ಸ್ಥಳದಲ್ಲಿ ಹಾಜರಿದ್ದರೂ ಅವರನ್ನು ದಸ್ತಗಿರಿ ಮಾಡಲಿಲ್ಲವಾದ್ದರಿಂದ ಅವರು ಪೂರ್ವ ನಿಶ್ಚಯದಂತೆ [illegible] ಕಡೆಗೆ ಪ್ರಯಾಣ ಬೆಳೆಸಿದ್ದಾರೆ.

ಶ್ರೀ. ಮಹಮ್ಮದ್ ಹಸನ್ ಕೊಲ್ನಾಡರ ಸತ್ಯಾಗ್ರಹ

ಶ್ರೀ ಮಹಮ್ಮದ್ ಹಸನ್ ಕೊಲ್ನಾಡರು [illegible] ಊರಲ್ಲಿ ಅನೇಕಲ್ಲಿನಲ್ಲಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸದಿರುವುದರಿಂದ ಅವರು ಹಳ್ಳಿಹಳ್ಳಿಗಳಲ್ಲಿ ಯುದ್ಧ ವಿರುದ್ಧ ಪ್ರಚಾರ ಮಾಡುತ್ತಿರುವರು.

ಶ್ರೀ ಫೆರ್ನಾಂಡಿಸರನ್ನು ಕನ್ನಾನೂರಿಗೆ ಕೊಂಡೊಯ್ದರು

ಕಾರ್ಕಳದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಸತ್ಯಾಗ್ರಹ ಕೈದಿ ಶ್ರೀ ಯಂ. ಸಿ. ಫೆರ್ನಾಂಡಿಸರನ್ನು ತಾ. 18-4-[illegible]ರ ದಿನ ಕನ್ನಾನೂರು ಜೈಲಿಗೆ ಕರಕೊಂಡು ಹೋಗಿದ್ದಾರೆ.

ಡಾ। ವಿಟ್ಠಲ ಶೆಟ್ಟರು

ಸತ್ಯಾಗ್ರಹ ಮಾಡಿ ಶಿಕ್ಷಿತರಾದ ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾ। ವಿಟ್ಠಲ ಶೆಟ್ಟರನ್ನು ಕಳೆದ ಶುಕ್ರವಾರ ಕನ್ನಾನೂರು ಜೈಲಿನಿಂದ ತಿರುಚನಾಪಳ್ಳಿ ಜೈಲಿಗೆ ಕರೆದೊಯ್ದಿರುವರೆಂದು ತಿಳಿದಿದೆ.

ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರ ಬಿಡುಗಡೆ

ಶಿರ್ವ ಬಂಟಕಲ್ಲಿನಲ್ಲಿ ಸತ್ಯಾಗ್ರಹ ಮಾಡಿ [illegible] ತಿಂಗಳ ಶಿಕ್ಷೆಗೆ ಗುರಿಯಾದ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಬಿಡುಗಡೆ ಹೊಂದಿ ಬಂದಿರುವರು.

ಮಂಗಳೂರು ಮುನಿಸಿಪಾಲಿಟಿ

ತಾ. 21ರಲ್ಲಿ ಸಂಜೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಮೀಟಿಂಗ್ ವೈಸ್ ಚೆಯರ್‌ಮ್ಯಾನರಾದ ಶ್ರೀ ಎಲ್. ಸಿ. ಪಾಯ್ಸರ ಅಧ್ಯಕ್ಷತೆಯಲ್ಲಿ ಅದರ ಕಾರ್ಯಾಲಯದಲ್ಲಿ ಜರುಗಿತು. ಮುನಿಸಿಪಲ್ ಸೇಲೆಯ ವೈದ್ಯರುಗಳು ಖಾಸಗಿ ವೈದ್ಯಕೀಯವನ್ನು ಮಾಡಬಹುದೋ ಕೂಡದೋ ಎಂಬ ವಿಷಯದಲ್ಲಿ ಚರ್ಚೆ ಎದ್ದು ತೀರ್ಮಾನ ಬಾಕಿ ಇರಿಸಲಾಯಿತು. ಕೆಲವು ರಸ್ತೆಗಳನ್ನು ಧೂಳಿಲ್ಲದವುಗಳಾಗಿ ಮಾರ್ಪಡಿಸುವ ವಿಷಯಕ್ಕೆ ಹಣ ಮಂಜೂರಾಯಿತು. ಅವುಗಳ ಬಗ್ಗಾದ ಈಗಿನ ಅಂದಾಜಿನ [illegible] ಲಕ್ಷ ರೂಪಾಯಿಗಳನ್ನು [illegible] ಲಕ್ಷಕ್ಕೇರಿಸಿ ಇನ್ನು ಕೆಲವು ರಸ್ತೆಗಳಿಗೂ ಡಾಮರು ಹಾಕಿಸಬೇಕೆಂಬ ಶ್ರೀ ಅಂದ್ರಾದೆಯವರ ಈ ಸೂಚನೆಯನ್ನು ಮುಂದಿರಿಸಲಾಯಿತು. ವರ್ಷಕ್ಕೆ ಇರ್ಜಿಯೊಳಗೆ [illegible] ಶ್ರವಗಳನ್ನು ಹೂಳಲು ಅನುಮತಿ ಕೇಳಿದ ಉರ್ವದ ಗುರುಗಳ ಅರಿಕೆಗೆ, ಕೆರೆಯಿಂದ ಮೂಲಕ ಮಾನ್ಯತೆ ದೊರಕಿತು.

ಶ್ರೀ ಶ್ರೀಕ್ಷರು, ರಸ್ತೆಗಳಲ್ಲಿ ಗಿಡಮರಗಳನ್ನು ಕಾಪಾಡುವ ವ್ಯವಸ್ಥೆ ತೃಪ್ತಿಕರವಲ್ಲವೆಂದು ಟೀಕೆ ಹಿಡಿದರು. ಶ್ರೀ ಮ. ಸಾಮೋದರವರು ಓಣಿ, ದೀಪಗಳ ವ್ಯವಸ್ಥೆಯ ಕುರಿತು ಕೆಲವು ಸೂಚನೆಗಳನ್ನು ಕೊಟ್ಟು, ಯಎನ್ನಲ್ ಗಳ ವ್ಯವಸ್ಥೆಯನ್ನು ಸೂಚಿಸಿದರು. ರಸ್ತೆಗಳ ಬದಿಯಲ್ಲಿ ಕಲ್ಲಿನ ರಾಶಿಗಳನ್ನು [illegible] ಹಾಕಬಹುದೆಂದು ಶ್ರೀ [illegible] ಕೇಳಿದರು. [illegible] ಮತ್ತು ಚರಂಡಿಯ ವಿಷಯದಲ್ಲಿ ಸರಕಾರದ [illegible] ಸದ್ಯಕ್ಕೆ ಆಗುವಂತಿಲ್ಲವೆಂದು ಪ್ರಕಟವಾಯಿತು.

ಮುನ್ಸಿಪಲ್ ವಿಸ್ತರಣ ಯೋಜನೆಗೆ ವಿರುದ್ಧ ಚಳವಳಿ

ಕೋಡಿಯಾಲ್, ಕದ್ರಿಪದವು, ಮಲ್ಲಿಕಟ್ಟೆ, ಕಂಕನಾಡಿ, ಜಪ್ಪಿನಮೊಗರು, ದೇರೆಬೈಲು ಮತ್ತು ಕೊಡಿಯಾಲ್‌ಬೈಲು ಗ್ರಾಮಸ್ಥರ ಸಭೆಯು ಕಳೆದ ತಾ. [illegible]ರಲ್ಲಿ ಕದ್ರಿ ಶ್ರೀ ವಿದ್ಯಾಬೋಧಿನಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಿ. ವ್ಯಾಸರಾವ್ (ರಿಟಾಯರ್ಡ್ ಡಿಸ್ಟ್ರಿಕ್ಟ್ ಮುನ್ಸೀಫ್) ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಈ ಗ್ರಾಮಗಳ ಅಂಶವು ಮೇಲೆ ಆಗುವ ಮುನ್ಸಿಪಾಲಿಟಿಯ ವಿಸ್ತರಣದಿಂದ ಸಂಬಂಧಪಟ್ಟ ಗ್ರಾಮದವರಿಗೆ ಸಂಭವಿಸಬಹುದಾದ ಹಾನಿಯನ್ನು ಗ್ರಾಮಸ್ಥರಿಗೆ ತೋರಿಸಬಹುದಾದ ಪ್ರಯೋಜನಕ್ಕಿಂತಲೂ [illegible]. ಮುನ್ಸಿಪಾಲಿಟಿಗೆ [illegible] ಅಧಿಕವಾಗಬಹುದೆಂತಲೂ ಯೋಜನೆಗೆ ಒಳಪಟ್ಟ ಭಾಗಗಳಲ್ಲಿ ಗದ್ದೆಗಳು ತೋಟಗಳು ಕೆಲಸಕ್ಕೆ ಬಾರದ [illegible] ವಿಶೇಷ ಇರುವುದರಿಂದ ಈ ಯೋಜನೆಯು ಬೆಳೆಗೆ ಪ್ರಯೋಜನಕಾರಿಯಾಗಲಿಕ್ಕಿಲ್ಲವೆಂತಲೂ ಈ ಗ್ರಾಮದ ನಿವಾಸಿಗಳ ಆರೋಗ್ಯವು ಸ್ವಭಾವಿತ ಉತ್ತಮವಾಗಿಯೇ ಇದ್ದು ಪ್ರತ್ಯೇಕ ರಕ್ಷಣೆಗೆ ಒಳಪಡಬೇಕಾಗಿಲ್ಲವೆಂತಲೂ ಗ್ರಾಮಸ್ಥರಲ್ಲಿ ಅಧಿಕಪಾಲಿನವರು ಕೇವಲ ಬಿನಕೂಲಿ ಮತ್ತು ಬೇಸಾಯಗಾರರು. ಇಂಥವರು ಮುನ್ಸಿಪಲ್ ತೆರಿಗೆಯನ್ನು ತೆರಲು ಕೇವಲ ಅಸಮರ್ಥರೆಂತಲೂ ಭಾಷಣಗಳಾದ ತರುವಾಯ ಈ ಸಂಬಂಧವಾಗಿ ನಿರ್ಣಯಗಳು ಪಾಸಾದುವು.

ಈ ಸಂಬಂಧದ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಬಗ್ಗೆ ಮಹನೀಯರ ಒಂದು ಕಮಿಟಿಯು ನೇಮಕ ಮಾಡಲಾಯಿತು.

ಶ್ರೀ ದಾಮೋದರ ಬಾಳಿಗರು

ಧಾರವಾಡದಲ್ಲಿ ಕೂಡಲಿರುವ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಂಚಾಲಕರ ಸಭೆಗೆ ತೆರಳಿರುವರು. ಅವರು ಅಲ್ಲಿಂದ ಬೆಳಗಾವಿ, ಹಿಂಡಲ್ಗಿ ಸೆರೆಮನೆಗಳಲ್ಲಿರುವ ದಕ್ಷಿಣ ಕನ್ನಡದ ಸತ್ಯಾಗ್ರಹೀ ಕೈದಿಗಳನ್ನು ಸಂದರ್ಶಿಸುವರೆಂದು ತಿಳಿದಿದೆ.

ಮೌಲಾನಾ ಎಚ್. ಎಚ್. ಒಡೆಯರು

ಸತ್ಯಾಗ್ರಹ ಮಾಡಿ ಬಂಧಿತರಾಗಿ ಶಿಕ್ಷೆಯನ್ನನುಭವಿಸಿ ಬಿಡುಗಡೆ ಹೊಂದಿದ ಮೌಲಾನಾ ಒಡೆಯರು ಈಗ ಅಸ್ವಸ್ಥರಿರುವ ಕಾರಣ ಪುನಃ ಸತ್ಯಾಗ್ರಹ ಮಾಡುವ ವಿಷಯದಲ್ಲಿ ಗಾಂಧೀಜಿಯವರಿಗೆ ಬರೆದಿರುವರೆಂದೂ ಅವರ ಉತ್ತರವನ್ನು ನಿರೀಕ್ಷಿಸುತ್ತಿರುವರೆಂದೂ ತಿಳಿದಿದೆ.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಲೇಬರ್ ಲೀಗ್

ನಮ್ಮ ಸಂಘದ ಅನೇಕ ಮಂದಿ ಮೆಂಬರರು ಪೈಕಿ ಈ ವರೆಗೆ ಅಂದರೆ ಕಳೆದ ನಾಲ್ಕು ವರ್ಷ ಸಂಘಕ್ಕೆ ಕೊಡುವ ವಂತಿಗೆಯನ್ನಾಗಲಿ, ಅಥವಾ ಸಂಘದ ಯಾವದೊಂದು ಬಗೆಯ ಕಾರ್ಯಕಲಾಪಗಳಲ್ಲಾಗಲಿ ಭಾಗವಹಿಸಿಕೊಳ್ಳದೆ ತಟಸ್ಥರಿದ್ದು ಈ ತನಕ ಸುಮ್ಮನೆ ಕುಳಿತಿರುವ ಮೆಂಬರರನ್ನು ಇದೇ ಕಳೆದ ಜೂನ್ ತಿಂಗಳ ತಾ. [illegible]ರಲ್ಲಿ ಜರಗಿದ ಮಹಾಸಭೆಯವರು ಅಭಿಪ್ರಾಯಪಟ್ಟ ಮೇರೆಗೆ ಇದೇ ತಿಂಗಳ ತಾ. [illegible]ರಿಂದ ಸಂಘದಿಂದ ತೆಗೆದುಹಾಕಲ್ಪಟ್ಟಿದೆ. ಇವರು ಈ ವರೆಗೆ ಬಾಕಿ ಮಾಡಿದ ವಂತಿಗೆಯನ್ನು ಸಂಪೂರ್ಣ ಕಟ್ಟಿ ಹಕ್ಕು ಪಡಕೊಳ್ಳಬಹುದೆಂದ ಈ ಮೂಲಕ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಿ ಕರ್ನಾಟಕ ಥಿಯೇಟರ್ಸ್

ಈ ಹೆಸರಿನಿಂದ ಭಾರತೀಯ ಕಲೋನ್ನತಿಯ [illegible] ಒಂದು ಸಂಸ್ಥೆಯು ಮಂಗಳೂರಲ್ಲಿ ದಿ ಒಡೆಯರ ಬಂಧು ಪ್ರಿಂಟಿಂಗ್ ಪ್ರೆಸ್ ಲಿಮಿಟೆಡ್ ಮುಗ್ಗಲೂರು ಇವರ ಆಡಳಿತೆಯಲ್ಲಿ ಪ್ರಾರಂಭವಾಗಿರುತ್ತದೆ.

ಹಿಂದೀ ಕ್ಲಾಸುಗಳು

ಆಗೋಸ್ತು ತಿಂಗಳ ಒಂದನೆಯ [illegible] ನಿಂದ ಸ್ಥಳೀಯ ಕೇವಳ [illegible] ಶಾಲೆಯಲ್ಲಿ ಮತ್ತು ಕದ್ರಿ ವಿದ್ಯಾಬೋಧಿನಿ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಹಿಂದೀ ಕ್ಲಾಸುಗಳು ಪ್ರಾರಂಭವಾಗುತ್ತವೆ. ಹಿಂದೀ ವಿದ್ವಾಂಸರಾದ ಶ್ರೀ ದೇವಪ್ಪಾಳ್ವರು ಕಲಿಸಲಿರುವರು. ಕೇವಳ ಕ್ಲಾಸಿನಲ್ಲಿ ಸೇರಬಯಸುವವರು ಶ್ರೀ ವಿ. ಜೆ. ಜೋಗೆಶನೊಡನೆ ತಮ್ಮ ಹೆಸರು ಕೊಡಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಮಂಗಳೂರು ಸಬ್ ಜಡ್ಜರು

ಮಂಗಳೂರು ಸಬ್ ಜಡ್ಜರಾದ ಶ್ರೀ [illegible] ರಜೆ ಪಡೆದಿರುವುದರಿಂದ ಅವರ ಬದಲಿಗೆ ಶ್ರೀ ಕೆ. ಡಿ. ರಾಮಯ್ಯ ಶೆಟ್ಟಿಯವರು ಸಬ್ ಜಡ್ಜರಾಗಿ ಚಾರ್ಜು ವಹಿಸಿರುತ್ತಾರೆ.

ವರ್ಗ

ಕೋಆಪರೇಟಿವ್ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ [illegible] ಇವರು ಅನಂತಪುರ ಜಿಲ್ಲೆಯ ಕೋಆಪರೇಟಿವ್ ಸಬ್ ರಿಜಿಸ್ಟ್ರಾರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಸಾರ್ವಜನಿಕ ಸಭೆ

ಜಪ್ಪು ಮುನ್ಸಿಪಲ್ ವ್ಯಾಖ್ಯಾನದಲ್ಲಿ ತಾ. [illegible]ರಂದು ಒಂದು ಸಾರ್ವಜನಿಕ ಸಭೆ ಜರಗಿ, ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು, ಯುದ್ಧ ವಿರುದ್ಧ ಘೋಷಣೆಯನ್ನು ಹೇಳಿ, ಅದನ್ನು ಹೇಳುವ ಕಾರಣವನ್ನು ವಿವರಿಸಿದರು. ಶ್ರೀ ಪಿ. ವಿಟ್ಠಲ ಮಂಜುನಾಥ ಶ್ಯಾನುಭಾಗರು ಅಧ್ಯಕ್ಷಸ್ಥಾನ ವಹಿಸಿದ್ದರು.

ಕಾರ್ಕಳ: ಬೋರ್ಡ್ ಉಪಾಧ್ಯಾಯರ ಸಭೆ

ಜಿಲ್ಲಾ ಬೋರ್ಡಿನ ಕಾರ್ಕಳ ತಾಲೂಕು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಯೂನಿಯನಿನ ಕಾರ್ಯನಿರ್ವಾಹಕ ಸಮಿತಿಯ ಜಾದು ಸಭೆಯು ತಾ. 20ರ ದಿನ ಶ್ರೀ ಎ. ಸೀತಾರಾಮರಾಯರ ಅಧ್ಯಕ್ಷತೆಯಲ್ಲಿ ಕೂಡಿ, ಈ ಉಪಾಧ್ಯಾಯರ ಕಡಿತವನ್ನು ಖಾಯಮ್ ಮಾಡಿ ಸ್ಲೇಡ್ ಪ್ರೋಸ್ಸುಗಳನ್ನು ಕೊಡಬೇಕೆಂಬ ಬೋರ್ಡಿನ ವಿಚಾರವು ಉಪಾಧ್ಯಾಯರ ಹಿತಾಸಕ್ತಿಗೆ ವಿರೋಧವಾಗಿರುವದೆಂದು ನಿರ್ಣಯವು ಮಾಡಲಾಯಿತು.

ಸಹಕಾರಿಗಳ ಸಭೆ

ಕಾರ್ಕಳ ಲೋಕಲ್ ಬೋರ್ಡು ಸರ್ಕಲ್ ಕೋಆಪರೇಟಿವ್ ಸೊಸೈಟಿಯ ಒಂದು ಸಭೆಯು ತಾ. 20ರ ದಿನ ಶ್ರೀ ಜಿ. ಯಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿ ಪಾಲು ಭಂಡವಾಳದ ಮೇಲೆ ಶೇಕಡಾ [illegible]ರ ಲಾಭವನ್ನು ಹಂಚಿದುದಲ್ಲದೆ, ಹೊಸ ವರ್ಷಕ್ಕೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಆರಿಸಿದರು.

ಮಕ್ಕಳ ಹಬ್ಬ

ಮಂಗಲಪಾಡಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಈ ವರ್ಷದ ಪ್ರಥಮ ಮಕ್ಕಳ ಹಬ್ಬವು ಶ್ರೀ. ಯಂ. ಬಾಬು ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕನ್ನಡ ನ್ಯೂ ಯುವಕ ಸಂಘ ಮಂಗಳೂರು

ಸದ್ರಿ ಸಂಘದ ತೃತೀಯ ವಾರ್ಷಿಕೋತ್ಸವವು ಕಳೆದ ತಾ. [illegible]ರಲ್ಲಿ [illegible] ಮಹಾದೇವಿ ದೇವಸ್ಥಾನದ [illegible] 'ರಾಷ್ಟ್ರಬಂಧು' ಪತ್ರಿಕೆಯ ಉಪ ಸಂಪಾದಕರಾದ ಶ್ರೀ ಕೃಷ್ಣರಾವ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮಹಾಜನ ಫಂಡ್ ರಿಲೀಫಿಗೆ ಸಹಾಯ ಮಾಡಿದ ಮಹನೀಯರು

[illegible] ಅಸೋಸಿಯೇಶನ್ [illegible] ರೂ. [illegible], [illegible] [illegible] [illegible]

ನೆರೆಯಿಂದ ನೊಂದವರಿಗೆ ಸಹಾಯ ಸಲ್ಲಿಸುತ್ತಿದ್ದಾರೆ

ಶ್ರೀ. ಎಚ್. ಕೆ. ತಿಂಗಳಾಯರು

ನೆರೆಹಾವಳಿಯಿಂದ ಸಂಕಷ್ಟಕ್ಕೀಡಾದವರಿಗಾಗಿ ಸೇವೆ ಮಾಡುತ್ತಿದ್ದಾರೆ. [illegible] ಪಡುಬಿದ್ರಿ, [illegible] ಲಾದ ಕಡೆಗಳಲ್ಲಿ [illegible]

ಶ್ರೀ ಜತ್ತಪ್ಪ ರೈಗಳು

[illegible] ಸತ್ಯಾಗ್ರಹಿ ಶ್ರೀ ಜತ್ತಪ್ಪ ರೈಗಳು [illegible] ಕಂಬಳದಾಚೆ [illegible] ಊರುಗಳಲ್ಲಿಯೂ

ಶ್ರೀ ರಾಮ ಪೂಂಜಾಳರು

ಕಾರ್ಕಳದ ಸತ್ಯಾಗ್ರಹಿ ಶ್ರೀ [illegible] [illegible] ಕೈಯೂರು [illegible] ಮತ್ತು ನೆರೆಯ ಊರುಗಳಲ್ಲಿಯೂ

ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟಿ

ಸತ್ಯಾಗ್ರಹಿ ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಬಿಟ್ಟಿಕೈಯೂರು [illegible] ಪ್ರದೇಶಗಳಲ್ಲಿಯೂ

ಶ್ರೀ ಎಸ್. ಶ್ಯಾಮರಾಯ ನಾಯ್ಕರು

ಸತ್ಯಾಗ್ರಹಿ ಶ್ರೀ ಎಸ್. ಶ್ಯಾಮರಾಯ ನಾಯ್ಕರು, ಪ್ರಾಯಶಃ ಎಲ್ಲರಿಗಿಂತ ಹೆಚ್ಚಿನ [illegible]ರನ್ನು ನಾಶಗೊಳಿಸುವ ಉತ್ಸಾಹದಿಂದ, [illegible] ಪಟ್ಲ, ಕುಂಬ್ಳೆ, ಪೇರೂರು, ಕುಡಾಲಮೇರ್ಕಳ, ಇಂಕ್ಲಂಗೋಡು ಮೊದಲಾದ ಕಡೆಗಳಲ್ಲಿಯೂ

ಶ್ರೀ ಕೊಳಂತೋಡಿ ಕೃಷ್ಣ ಭಟ್ಟರು

ಶ್ರೀ ಕೊಳಂತೋಡಿ ಕೃಷ್ಣ ಭಟ್ಟರು ಕಾಸರಗೋಡು ತಾಲೂಕಿನಲ್ಲಿ ನೆರೆಯಿಂದ ಹಾವಳಿಗೊಂಡ ಅನೇಕ ಗ್ರಾಮಗಳಲ್ಲಿಯೂ, ಸಂದರ್ಶಿಸುತ್ತಾ ಅವರ ಸಂಕಷ್ಟ ನಿವಾರಣಾ ಕಾರ್ಯದಲ್ಲಿಯೂ

ಶ್ರೀ ದೇವಪ್ಪಾಳ್ವರು

ಕುಂಬ್ಳೆಯ ಸತ್ಯಾಗ್ರಹಿ ಶ್ರೀ ಬಿ. ದೇವಪ್ಪಾಳ್ವರು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದವರು ವಿಶ್ರಾಂತಿಯಿಲ್ಲದೆ ಹಲವು ಸಾರ್ವಜನೋಪಕಾರೀ ಕೆಲಸಗಳಲ್ಲಿ ಹಾಗೂ ಕಾಸರಗೋಡು ತಾಲೂಕಿನಲ್ಲಿ ನೆರೆಬಂದ ಗ್ರಾಮಗಳಲ್ಲಿಯೂ

ಶ್ರೀ ಬಾಬು ಶೆಟ್ರು

[illegible] ಶ್ರೀ ಬಾಬು ಶೆಟ್ರು ನೆರೆಹಾವಳಿಯ ಹಲವು ಪ್ರದೇಶಗಳಲ್ಲಿಯೂ ಹೋಗಿ ಅನಾಥರಿಗೆ ಕಷ್ಟ ನಿವಾರಣೆಯ ಕಾರ್ಯ ಮಾಡುತ್ತಾರೆ.

ವಾರದ ಕತೆ:

ತಪ್ಪು ಯಾರದು?

ಕತೆಗಾರ: ಕೆ. ಎಸ್. ಶರ್ಮಾ

ಅಯ್ಯೋ! ಅಯ್ಯೋ!! ಅಯ್ಯೋ!!

ನಾನು, ನಾ—ನು ಅಲ್ಲ! ಪಾಪಿ!

ಹೌದು. ನಾನು ನಿಶ್ಚಯವಾಗಿಯೂ ಪಾಪಿಯು. ನನ್ನಂತಹ ನರಪಿಶಾಚಿಯು ಈ ಲೋಕದಲ್ಲಿಲ್ಲ. ನಾನು ವಿಶ್ವಾಸವಂಚಕ. ದೇವರು ಈ ಪಾಪಿಯನ್ನು ಇನ್ನೂ ಸಾಯಗೊಳಿಸದೆ ಉಳಿಸಿರುವನು. ನಾನು ಸಾಯಬೇಕಾಗಿತ್ತು. ಉಜ್ವಲವಾದ ನರಕ ಕುಂಡದಲ್ಲಿ ಸುಟ್ಟು ಭಸ್ಮವಾಗಬೇಕಿತ್ತು. ಹಾಗೆ ನನ್ನ ಹಣೆಯಲ್ಲಿ ಬರೆಯಲಿಲ್ಲ. ಬದಲಾಗಿ ನಾನು ಹುಚ್ಚನಾದೆ. ಎತ್ತೆತ್ತಲೋ ತಿರುಗಿದೆ. ಏನೇನೋ ಹೇಳಿದೆ. ಎಲ್ಲರೂ ನನ್ನನ್ನು ಹುಚ್ಚನೆಂದು ಕರೆದರು. ಆದರೆ ಎಲ್ಲಿಂದ ಹುಚ್ಚು ಬರಬೇಕು. ಈ ಪಾಪಿಗೆ ಹುಚ್ಚು ಬಾರದು. ದೇವಾ, ನಾನು ಪಾಪಿ. ಇನ್ನಾದರೂ ನನ್ನನ್ನು ನರಕಕ್ಕೆ ನೂಕಿಬಿಡು. ಈ ಆಸ್ಪತ್ರೆಯ ವಾಸವು ನನಗೆ ಬೇಡ. ನನ್ನ ಪಾಲಿಗೆ ಸ್ಮಶಾನವು ಬೇಕಾಗಿದೆ... ನನ್ನ ಭಾಗ್ಯವೆಲ್ಲಿದೆ? ಆ ದಿನ, ನನ್ನ ಭಾಗ್ಯದೇವತೆಯು ಸುರಿಸಿದ ಕಣ್ಣೀರು ಇಂದೂ ನನ್ನ ಹೃದಯವನ್ನು ಸುಡುತ್ತಿದೆ. ಏನು ಮಾಡಲಿ. ಎಲ್ಲಿ ಹೋಗಲಿ....'

ಮಾಧವನು ಏನೇನನ್ನೋ ಅನ್ನುತ್ತಲಿದ್ದ. ಹುಚ್ಚನಂತೆ ಮೇಲಕ್ಕೆದ್ದ. ಕೊಠಡಿಯ ಬಾಗಿಲ ಬಳಿ ಬಂದ. ಬಾಗಿಲು ಹಾಕಿತ್ತು. ಬಲವಾಗಿ ಬಡಿದು ನೂಕಿದ. ಬಾಗಿಲು ತೆರೆಯಿತು. ಹೊರಬಂದ, ನೇರಾಗಿ ಡಾಕ್ಟರರ ಮನೆಬಳಿಗೆ.

'ಸರ್, ಸರ್' ಡಾಕ್ಟರರು ಗಾಬರಿಯಿಂದ ಹೊರಬಂದರು. 'ಯಾರದು' ಎಂದು ಕೇಳಿದರು. ಮಾಧವನು ಧೈರ್ಯವಾಗಿ ಅಂದ 'ನಾನು. ಮತ್ತಾರೂ ಅಲ್ಲ. ನಾನು ಹೋಗುತ್ತೇನೆ. ಸಂಪೂರ್ಣವಾಗಿ ಈಗ ಗುಣಹೊಂದಿದ್ದೇನೆ. ಮುಂದೆ ನನಗೆ ಯಾವ ಔಷಧವೂ ಬೇಡ. ಊರಿಗೆ ತೆರಳುತ್ತೇನೆ.' ಡಾಕ್ಟರರು ಗಾಬರಿಯಾದರು. 'ಮಾಧವ, ನೀನು ಗುಣಹೊಂದಿಲ್ಲ. ಇನ್ನು ಕೆಲ ದಿನ ಇಲ್ಲಿದ್ದು ಗುಣಹೊಂದಿ ತೆರಳು' ಎಂದರು. ಮಾಧವನು ಒಪ್ಪಲಿಲ್ಲ: 'ಸರ್, ಅದೆಲ್ಲಾ ಆಗದು. ನಾನೀಗ ತೆರಳಬೇಕಾಗಿದೆ. ನನ್ನ ಪ್ರಯಾಣಕ್ಕೆ ತಾವು ಅಡ್ಡಿಯನ್ನು ಮಾಡಬಾರದು' ಹೀಗೆಂದು ಆತನು ಅಲ್ಲಿಂದ ಮಾಯವಾದ. ಡಾಕ್ಟರರು ಚಕಿತರಾಗಿ ಆಸ್ಪತ್ರೆಗೆ ಓಡಿಬಂದರು. ಮಾಧವನಿದ್ದ ಕೊಠಡಿಗೆ ಬಂದರು. ಅಲ್ಲಿ ತೀರಾ ಭಯಂಕರ. ಒಂದೆಡೆ ಮಾಧವನ ಹಾಸಿಗೆ ಬಿದ್ದಿತ್ತು. ಇನ್ನೊಂದೆಡೆ ಲಾಂದ್ರವು ಮುರಿದು ಪುಡಿಪುಡಿಯಾಗಿತ್ತು. ಡಾಕ್ಟರರು ಮುಂದೆ ಆಲೋಚಿಸಲಾರದೆ ಮನೆಗೆ ಮರಳಿ ಬಂದುಬಿಟ್ಟರು.

ಮಾಧವನು ಓಡುತ್ತಲೇ ಇದ್ದ. ಕಾಣದ ದಾರಿಯಲ್ಲಿ ಸಾಗದ ಹೆಜ್ಜೆಯನ್ನಿಡುತ್ತಾ ಮುಂದುವರಿದಿದ್ದ. ಕಣ್ಣುಗಳಿಂದ ಅಶ್ರುಗಳು ಧಾರೆಯಾಗಿ ಬೀಳುತ್ತಿದ್ದುವು. ಮಾಧವನು ನೇರಾಗಿ ರೈಲ್ವೇ ನಿಲ್ದಾಣಕ್ಕೆ ಬಂದ. ಎತ್ತಲೋ ಹೋಗುವ ಒಂದು ಟ್ರೈನು ನಿಂತಿತ್ತು. ಮಾಧವನು ಆಲೋಚಿಸದೆ ರೈಲು ಹತ್ತಿದ. ಒಂದೆರಡು ಕ್ಷಣಗಳಲ್ಲಿ ರೈಲು ಹೊರಟಿತು. ಮಾಧವನು ಕುಳಿತ ಗಾಡಿಯಲ್ಲಿ ಹೆಚ್ಚು ಮಂದಿ ಇರಲಿಲ್ಲ. ಒಬ್ಬಿಬ್ಬರೇ ಇದ್ದರು. ಮಾಧವನು ಒಂದು ಬದಿಯಲ್ಲಿ ಹಿಡಿದುಕೊಂಡ; ಪುನಃ ಎದ್ದು ಕುಳಿತ. ಅತ್ತಿತ್ತ ಸಂಚರಿಸಿ ಒಂದೆಡೆ ಕುಳಿತ. ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆ; ಪ್ರಪಂಚವನ್ನೇ ದೊಡ್ಡದೊಂದು ಸಮಸ್ಯೆಯನ್ನಾಗಿ ಮಾಡಿಕೊಂಡು, ಮಾಧವನು ಬಿಡಿಸುವ ಆಲೋಚನೆಯಲ್ಲಿದ್ದ. ಶೂನ್ಯವಾಗಿ ಎತ್ತಲೋ ನೋಡಿದ. ಈ ವೇಳೆಗೆ ಮಾಧವನ ಪರಿಸ್ಥಿತಿಯನ್ನು ಕಂಡು ಟ್ರೈನಿನಲ್ಲಿದ್ದ ಓರ್ವ ಮಹನೀಯರು ಆತನ ಬಳಿಬಂದರು. ಮಾಧವನು ಮೆಲ್ಲಗೆ ಅವರನ್ನು ದಿಟ್ಟಿಸಿ 'ಸ್ವಾಮಿ, ತಾವು ದೊಡ್ಡವರು. ಅತ್ತಹೋಗಿ. ಪಾಪಿಯ ಬಳಿ ಬರಬೇಡಿ' ಎಂದು ಹೇಳಿ ಮೂಲೆಮೂಲೆಗೆ ಸರಿಯತೊಡಗಿದ.

ಅವರು ಚಕಿತರಾದರು. ಆದರೂ ಮೆಲ್ಲಗೆ 'ಅಪ್ಪಾ ನೀನಾರು, ವಿದ್ಯಾವಂತನಂತೆ ಕಾಣುತ್ತಿ. ಇದೇನು ಬುದ್ಧಿ ಭ್ರಂಶವಾಗಿದೆಯೆ?' ಮಾಧವನು ಗೋಳೋ ಎಂದು ಅತ್ತುಬಿಟ್ಟ. ಅವರು ಸಮಾಧಾನಪಡಿಸಿದರು. ಮಾಧವನು ಮೌನನಾದ. ಮರುಕ್ಷಣವೇ 'ಅಹುದು ನಾನು ಒಬ್ಬ... ಮನುಷ್ಯನಲ್ಲ... ವಿಮಲೆಯನ್ನು ವಂಚಿಸಿದ ಪಾಪಿ, ಮೂರ್ಖನು ನಾನು,' ಮಾಧವನು ತಟಸ್ಥನಾದ. ಮಹನೀಯರು ಸಮಾಧಾನ ಸ್ವರದಿಂದ 'ಅಪ್ಪಾ ನೀನು ಏನು ಹೇಳುತ್ತಿ? ತಾಳ್ಮೆಯುದ್ದಕೆ ಸ್ವಲ್ಪ ನಿಧಾನಿಸಿ ಹೇಳು' ಎಂದರು.

ಮಾಧವನು 'ಹೂಂ—ನನ್ನ ವಿಚಾರ ಬೇಡ. ನನ್ನನ್ನು ನಂಬಿದ ವಿಮಲೆಯನ್ನು ಕಟ್ಟಕಡೆಗೆ ಹೊರದೂಡಿದವನು ನಾನು. ಆ ಭಾಗ್ಯಮೂರ್ತಿಯನ್ನು ಕ್ರೂರ ಹೃದಯದಿಂದ ದೂಡಿದವನು ನಾನು... ಹ್ಞಂ. ನನಗೆ ದೂಡುವ ಅಧಿಕಾರವೆಲ್ಲಿದೆ? ಇಲ್ಲ ಇಲ್ಲ!'

ಮಹನೀಯರು 'ಇರಲಿ ನೀನು ಎಲ್ಲಿಗೆ ಹೋಗುತ್ತಿ—'

ಮಾಧವನು 'ಸ್ವಾಮಿ, ಮನೆಗೆ ಹೋಗುತ್ತೇನೆ ಬೆಂಗಳೂರಿಗೆ. ಅಲ್ಲಿಯೇ ನನ್ನ ಆಶೆ.'

'ಅಪ್ಪಾ, ಇದು ಬೆಂಗಳೂರಿಗೆ ಹೋಗಲಾರದು. ಬೆಂಗಳೂರಿಗೆ ಬೇರೆ ಗಾಡಿಯಿತ್ತು.' ಎನ್ನುವಷ್ಟರಲ್ಲಿಯೇ ಟ್ರೈನು ಒಂದು ಆಫೀಸಿನಲ್ಲಿ ನಿಂತಿತು. ಮಾಧವನು ಕುಳಿತಲ್ಲೇ ಇದ್ದ. ಇನ್ನು ಏನೋ ಹೇಳುವುದರಲ್ಲಿದ್ದ. ಈ ವೇಳೆಗೆ 'ಟಿಕೇಟು ಕಲೆಕ್ಟರನು' ಬಂದ. ಮಾಧವನ ಬಳಿಯಲ್ಲಿ ಟಿಕೇಟು ಕೇಳಿದ. ಆದರೆ ಟಿಕೇಟಿಲ್ಲ. ಪ್ರಪಂಚವನ್ನೇ ಮರೆತವನು ಟಿಕೇಟನ್ನು ಪಡೆಯುವನೆ? ಟಿಕೇಟು ಕಲೆಕ್ಟರನು ನಿರ್ದಾಕ್ಷಿಣ್ಯವಾಗಿ ಮಾಧವನನ್ನು ಹೊರತಳ್ಳಿದ. ಮಾಧವನು ಮನದಲ್ಲಿಯೇ 'ಇದೇ ಅಪಮಾನ ಪಾಪಿಗೆ, ಇದೇ ಮರ್ಯಾದೆ' ಎನ್ನುತ್ತಾ ತೆರಳಿದ. ಎಲ್ಲಿಯೂ ನಿಲ್ಲಲಿಲ್ಲ. ಮಧ್ಯಾಹ್ನವಾಯಿತು. ಸಾಯಂಕಾಲವಾಯಿತು; ರಾತ್ರಿಯಾಯಿತು. ಮಾಧವನು ನಿಲ್ಲಲಿಲ್ಲ. ಮಾಧವನ ಪಾಲಿಗೆ ಪ್ರಕೃತಿ ಮಾತೆಯೂ ಮುನಿದಳೆಂಬಂತೆ ಘೋರವಾದ ಸಿಡಿಲು, ಮಳೆ, ಗಾಳಿಗಳಿಗೆ ಪ್ರಾರಂಭವಾಯಿತು. ಮಾಧವನು ಕಡುರಾತ್ರಿಯಲ್ಲಿ ನಡೆದ. ಕಣ್ಣು ಕುಕ್ಕಿದರೂ ಕಾಣದ ಕಾಳರಾತ್ರಿಯಲ್ಲಿ ಮುನ್ನಡೆದ. ದೊಡ್ಡದೊಂದ[...]
ಟ್ಟಡದ ಬಳಿ ಬಂದು ನಿಂತನು. ಬಾ[...]
ಬಲವಾಗಿ ಹಾಕಿತ್ತು. ಮಾಧವನು[...]
ಲಿಯ ಬಳಿ ಬಂದು ಕಂಭವೊಂದಕ್ಕೆ[...]
ಗಿ ಮಲಗಿಕೊಂಡ. ಆದರೆ ಎಡೆಯ[...]
ಚಳಿಗಾಳಿಗೆಸಿಕ್ಕು ಕಂಗಾಲಾಗಿದ್ದ. ಆ[...]
ಯಾವುದೂ ಆತನಿಗೆ ಹೃದಯದ [...]
ವಕ್ಕಿಂತ ಘೋರವಾಗಿ ತೋರಲಿಲ್ಲ.

ನಿದ್ರೆ ಬರುವುದರಲ್ಲಿತ್ತು. ಥಕ್ಕನೆ[...]
ನು ಎದ್ದು ಕುಳಿತ. ಒಳಗಿನಿಂದ [...]
ರೋ ಮಾತನಾಡುತ್ತಿರುವುದು ಕೇಳಿ[...]
ತು. ಮಾಧವನಿಗೆ ಆ ಸ್ವರದ ಪರಿಚ[...]
ವಾದಂತಾಯಿತು. ಒಮ್ಮೆ ಆತನು [...]
ಕನಾದ. ಮೆಲ್ಲಗೆ ಬಾಗಿಲ ಬಳಿ ಬಂ[...]
ಅಲ್ಲೇ ಕುಳಿತ. ಒಳಗಿನಿಂದ ಬರ[...]
ಮಾತನ್ನು ಆಲಿಸಿದ.

'ಅಮ್ಮ ಸ್ವಲ್ಪ ಸೌಖ್ಯವಿದೆಯೆ?'

'ತಾಯಿ, ನನಗೆ ಸೌಖ್ಯವಾಗುವ [...]
ವಿಲ್ಲ. ಹೊಟ್ಟೆಯಲ್ಲಿ ಬಲವಾದ ವೇದ[...]
ನಾನು ಬದುಕಲಾರೆ.'

ಮಾಧವನಿಗೆ ಏನೋ ಆಯಿತು. [...]
ಣ್ಣೀರು ಹರಿಯುತ್ತಿತ್ತು. ಪುನಃ ಒಂ[...]
ವ್ಯಕ್ತಿಯು 'ಅಮ್ಮಾ ಡಾಕ್ಟರರು ಭರ[...]
ಯಿಂದ ಹೇಳಿದ್ದಾರೆ. ಏನೂ ತೊಂ[...]
ಯಾಗದು. ನಿಮ್ಮ ಚಿಕಿತ್ಸೆಗಾಗಿ ನಾ[...]
ತಯಾರಿದ್ದೇನೆ, ನಿಮಗೆ ಗುಣವಾದ[...]
ಸಾಕು. ಇಲ್ಲಿ ನಿಮಗೆ ಕಷ್ಟವಾಗುತ್ತಿ[...]
ಯೆ?'

ಮಾಧವನೀಗ ತಾನು ಆಸ್ಪತ್ರೆಯ [...]
ತ್ರದಲ್ಲಿರುವೆನೆಂಬುದನ್ನರಿತನು. ಒಳಗಿ[...]
ವ್ಯಕ್ತಿಗಳಲ್ಲಿ ಓರ್ವಳು 'ನರ್ಸ್'ಳೆಂಬು[...]
ನ್ನು ತಿಳಿದ. ಇನ್ನೊಂದು ವ್ಯಕ್ತಿಯ ಸ್ವರ[...]
ನ್ನು ಕೇಳಿದೊಡನೆಯೇ ಮಾಧವನಿಗೆ ಕಣ್ಣೀ[...]
ರು ಉಕ್ಕಿಬರುತ್ತಿತ್ತು. ಏನೇನೋ ಭಾವ[...]
ಗಳು ಬಂದು ಮಾಧವನು ಹುಚ್ಚನಂತಾ[...]
ಗುವನು. ಮುಂದೆ ನರ್ಸಳು 'ಅಮ್ಮಾ[...]
ನಿಮ್ಮ ಊರಾವುದು? ನನ್ನಿಯೇ ಕೇಳಬ[...]

[...ನೆಯ ಪುಟವನ್ನು ನೋಡಿ]



ಜಿಲ್ಲಾ ಸಮಾಚಾರಗಳು

ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಐಕ್ಯಭೋಜನ, ಶ್ರೀ ಎಚ್. ವಿ. ಕಾಮತರ ಅಧ್ಯಕ್ಷತೆಯಿಂದ

ಕಳೆದ ಆದಿತ್ಯವಾರ ರಾತ್ರೆ 8 ಗಂಟೆಗೆ ಮಂಗಳೂರು ಬೆಸೆಂಟ್ ಗರ್ಲ್ಸ್ ಹೈಸ್ಕೂಲಿನಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಐಕ್ಯಭೋಜನವೊಂದು ಶ್ರೀ ಎಚ್. ವಿ. ಕಾಮತರ ಅಧ್ಯಕ್ಷತೆಯಿಂದ ನೆರವೇರಿತು. ಸುಮಾರು 150 ಮಂದಿ ಅತಿಥಿಗಳು ಬಂದಿದ್ದರು. ಸುಮಾರು 50ರಷ್ಟು ಮಹಿಳೆಯರೇ ಇದ್ದರು. ಹಲವು ಮಂದಿ, ಎಲ್ಲಾ ಪಂಗಡಗಳ ಹರಿಜನ ಸ್ತ್ರೀ ಪುರುಷರೂ ಆಗಮಿಸಿದ್ದರು. ಪ್ರಾರ್ಥನೆಯಾದ ಮೇಲೆ ಐಕ್ಯಭೋಜನವು ನೆರವೇರಿತು. ಆನಂತರ ಶ್ರೀ ಹುಂಡಿ ವಿಷ್ಣು ಕಾಮತರ ಅಧ್ಯಕ್ಷತೆಯಿಂದ ಸಭೆಯು ಕೂಡಿತು. ಪ್ರಾರಂಭದಲ್ಲಿ ಶ್ರೀಮತಿ ಬಾಳಿಗರ ಸಂಗೀತವಿತ್ತು. ಆ ಬಳಿಕ ಶ್ರೀ ಎಸ್ ರಾಮರಾವ್, ಶ್ರೀಮತಿ ಸುಮತಿ ಬಾಯಿ, ಶ್ರೀ ಎಂ. ಆರ್. ಭಟ್, ಶ್ರೀ ಗೋಪಾಲ ಸಾಲಿಯಾನ್, ಶ್ರೀ ಮಂಜೇಶ್ವರ ಗೋವಿಂದ ಪೈ, ಶ್ರೀ ಅಚ್ಯುತ ಬಾಳಿಗ ಮತ್ತು ಶ್ರೀ ಚಂದ್ರಶೇಖರ ಇವರು ಹರಿಜನ ಸೇವೆ, ಐಕ್ಯಭಾವನೆಗಳ ಕುರಿತು ಭಾಷಣಗೈದರು. ಡಾ। ಅಡಪ್ಪರು ಕೃತಜ್ಞತಾ ಸಮರ್ಪಣೆ ಮಾಡಿದರು. ಅಧ್ಯಕ್ಷರಾದ ಶ್ರೀ ಎಚ್ ವಿ ಕಾಮತರು ತಮ್ಮ ಗಂಭೀರವಾದ ಭಾಷಣದಲ್ಲಿ, ಹಿಂದುಗಳಲ್ಲಿ ಐಕ್ಯ ಭಾವನೆಯಿಲ್ಲದೆ ಹಿಂದೂ ಮುಸ್ಲಿಂ ಐಕ್ಯ ಸಂಪಾದನೆಯು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರು.

ಶ್ರೀ ವೆಂಕಟೇಶ ಪ್ರಭುಗಳು ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಸತ್ಯಾಗ್ರಹ ಸಂಬಂಧ 4 ತಿಂಗಳ ಶಿಕ್ಷೆಯನ್ನು ಅನುಭವಿಸಿ ಬಂದ ಶ್ರೀ ಕೆ ವೆಂಕಟೇಶ ಪ್ರಭುಗಳವರು ಕಾರ್ಕಳದಲ್ಲಿ ತಾ 19ರ ದಿನ ಪುನಃ ಸತ್ಯಾಗ್ರಹ ಮಾಡಿದರು. ಅನೇಕ ಮಂದಿ ಪ್ರಮುಖರು, ಕಾಂಗ್ರೆಸ್ ಕೆಲಸಗಾರರು, ಸಾರ್ವಜನಿಕರು ನೆರೆದಿದ್ದರು. ಪೋಲೀಸರು ಸ್ಥಳದಲ್ಲಿ ಹಾಜರಿದ್ದರೂ ಅವರನ್ನು ಸೆರೆಹಿಡಿಯದಿಲ್ಲವಾದ್ದರಿಂದ ಅವರು ಪೂರ್ವ ನಿಶ್ಚಯದಂತೆ ಉಡುಪಿ ಕಡೆಗೆ ಪ್ರಯಾಣ ಬೆಳೆಸಿದ್ದಾರೆ.

ಶ್ರೀ. ಮುಹಮ್ಮದ್ ಹಸನ್ ಕೊಲ್ನಾಡರ ಸತ್ಯಾಗ್ರಹ

ಶ್ರೀ ಮುಹಮ್ಮದ್ ಹಸನ್ ಕೊಲ್ನಾಡರು ತಾ 14ರಲ್ಲಿ ಅನೇಕಲ್ಲಿನಲ್ಲಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸದಿರುವುದರಿಂದ ಅವರು ಹಳ್ಳಿಹಳ್ಳಿಗಳಲ್ಲಿ ಯುದ್ಧ ವಿರುದ್ಧ ಪ್ರಚಾರ ಮಾಡುತ್ತಿರುವರು.

ಶ್ರೀ ಫೆರ್ನಾಂಡಿಸರನ್ನು ಕಣ್ಣಾನೂರಿಗೆ ಕೊಂಡೊಯ್ದರು

ಕಾರ್ಕಳದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತಿದ್ದ ಸತ್ಯಾಗ್ರಹ ಕೈದಿ ಶ್ರೀ ಯಂ. ಸಿ ಫೆರ್ನಾಂಡಿಸರನ್ನು ತಾ. 18—14ರ ದಿನ ಕಣ್ಣಾನೂರು ಜೈಲಿಗೆ ಕರಕೊಂಡು ಹೋಗಿದ್ದಾರೆ.

ಡಾ। ವಿಟ್ಠಲ ಶೆಟ್ಟರು

ಸತ್ಯಾಗ್ರಹ ಮಾಡಿ ಶಿಕ್ಷಿತರಾದ ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾ। ವಿಟ್ಠಲ ಶೆಟ್ಟರನ್ನು ಕಳೆದ ಶುಕ್ರವಾರ ಕಣ್ಣಾನೂರು ಜೈಲಿನಿಂದ ತ್ರಿಚಿನಾಪಳ್ಳಿ ಜೈಲಿಗೆ ಕರೆದೊಯ್ದಿರುವರೆಂದು ತಿಳಿದಿದೆ.

ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರ ಬಿಡುಗಡೆ

ಶಿರ್ವ ಬಂಟಕಲ್ಲಿನಲ್ಲಿ ಸತ್ಯಾಗ್ರಹ ಮಾಡಿ 3 ತಿಂಗಳ ಶಿಕ್ಷೆಗೆ ಗುರಿಯಾದ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಬಿಡುಗಡೆ ಹೊಂದಿರುವರು.

ಮಂಗಳೂರು ಮುನಿಸಿಪಾಲಿಟಿ

ತಾ 21ರಲ್ಲಿ ಸಂಜೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಮೀಟಿಂಗ್ ವೈಸ್ ಚೆಯರ್ಮ್ಯಾನಾದ ಶ್ರೀ ಎಲ್. ಸಿ. ಪಾಯ್ಸರ ಅಧ್ಯಕ್ಷತೆಯಲ್ಲಿ, ಅದರ ಕಾರ್ಯಾಲಯದಲ್ಲಿ ಜರುಗಿತು. ಮುನಿಸಿಪಲ್ ದೇಶೀಯ ವೈದ್ಯರುಗಳು ಖಾಸಗಿ ವೃತ್ತಿಕನವನ್ನು ಮಾಡಬಹುದೋ ಕೂಡದೋ ಎಂಬ ವಿಷಯದಲ್ಲಿ ಚರ್ಚೆ ಎದ್ದು ತೀರ್ಮಾನ ಬಾಕಿ ಇರಿಸಲಾಯಿತು. ಕೆಲವು ರಸ್ತೆಗಳನ್ನು ಧೂಳಿಲ್ಲದವುಗಳಾಗಿ ಮಾರ್ಪಡಿಸುವ ವಿಷಯಕ್ಕೆ ಹಣ ಮಂಜೂರಾಯಿತು. ಅವುಗಳ ಒಟ್ಟಾದ ಈಗಿನ ಅಂದಾಜದ 1 ಲಕ್ಷ ರೂಪಾಯಿಗಳನ್ನು 2 ಲಕ್ಷಕ್ಕೇರಿಸಿ ಇನ್ನು ಕೆಲವು ರಸ್ತೆಗಳಿಗೂ ಡಾಮರು ಹಾಕಿಸಬೇಕೆಂಬ ಶ್ರೀ ಅಂದ್ರಾದೆಯವರ ಈ ಸೂಚನೆಯನ್ನು ಮುಂದಿರಿಸಲಾಯಿತು. ವರ್ಷಕ್ಕೆ ಇಂಜಿನಿಯರಿಗೆ 4 ರಜೆಗಳನ್ನು ಕೊಡಲು ಅನುಮತಿ ಕೇಳಿದ ಉಪ್ಪಿನ ಗುರುಗಳ ಅರ್ಜಿಗೆ, ಕೌನ್ಸಿಲಿನ ಮೂಲಕ ಮಾನ್ಯತೆ ದೊರಕಿತು.

ಶ್ರೀ ಪ್ರೇಷ್ಟರು, ರಸ್ತೆಗಳಲ್ಲಿ ಗಿಡಮರಗಳನ್ನು ಕಾಪಾಡುವ ವ್ಯವಸ್ಥೆ ತೃಪ್ತಿಕರವಲ್ಲವೆಂದು ಟೀಕಿಸಿದರು. ಶ್ರೀ ಮುಹಾದೋರವರು ಬೀಡಿ, ದೀಪಗಳ ವ್ಯವಸ್ಥೆಯ ಕುರಿತು ಕೆಲವು ಸೂಚನೆಗಳನ್ನು ಕೊಟ್ಟು ಯೂನಿಯನ್ ನ ಆವಶ್ಯಕತೆಯನ್ನು ಮುಂದೊತ್ತಿದರು. ರಸ್ತೆಗಳ ಬದಿಯಲ್ಲಿ ಕಲ್ಲಿನ ರಾಶಿಯನ್ನಿಷ್ಟು ಕಾಲ ಹಾಕಬಹುದೆಂದು ಶ್ರೀ ಸಿ ಲೋಬೋರವರು ಕೇಳಿದರು. ನೀರಾವರಿ ಮತ್ತು ಚರಂಡಿಯ ನಿರ್ಮಾಣಗಳ ಸರಕಾರದ ಆಧಿನತೆಯಲ್ಲಿ ಸದ್ಯಕ್ಕೆ ಇಲ್ಲವಂತಿಲ್ಲವೆಂದು ಪ್ರಕಟವಾಯಿತು.

ಮುನ್ಸಿಪಲ್ ವಿಸ್ತರಣ ಯೋಜನೆಗೆ ವಿರುದ್ಧ ಚಳವಳಿ

ಬೋಳೂರು, ಕದ್ರಿಕದವು, ಮರೋಳಿ, ಕಂಕನಾಡಿ, ಜಪ್ಪಿನಮೊಗ್ರು, ದೇರೆಬೈಲು ಮತ್ತು ಕೊಡಿಯಾಲ್‌ಬೈಲು ಗ್ರಾಮಸ್ಥರ ಸಭೆಯು ಕಳೆದ ತಾ 20ರಲ್ಲಿ ಕದ್ರಿ ಶ್ರೀ ವಿದ್ಯಾಬೋಧಿನಿ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಶ್ರೀ ಸಿ. ನ್ಯಾಸಿ... ವಕೀಲ... ಮುನ್ಸಿಫ್) ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಈ ಗ್ರಾಮಗಳ ಅಂಶದ ಮೇಲೆ ಆಗುವ ಮುನ್ಸಿಪಾಲಿಟಿಯ ವಿಸ್ತರಣದಿಂದ ಸಂಬಂಧಪಟ್ಟ ಗ್ರಾಮದವರಿಗೆ ಸಂಭವಿಸಬಹುದಾದ ಹಾನಿಯನ್ನು ಗ್ರಾಮಸ್ಥರಿಗೆ ದೊರಕಬಹುದಾದ ಪ್ರಯೋಜನಕ್ಕಿಂತಲೂ ಮಂಗಳೂರು ಮುನ್ಸಿಪಾಲಿಟಿಗೆ ಆಗುವ ಉತ್ಪತ್ತಿಯೇ ಅಧಿಕವಾಗುವುದೆಂದೂ ಯೋಜನೆಗೆ ಒಳಪಟ್ಟ ಭಾಗಗಳಲ್ಲಿ ಗದ್ದೆಗಳು ತೋಟಗಳು ಕೆಲಸಕ್ಕೆ ಬಾರದ ಗುಡ್ಡೆಗಳೇ ವಿಶೇಷ ಇರುವುದರಿಂದ ಈ ಯೋಜನೆಯು ಹೆಚ್ಚಿಗೆ ಪ್ರಯೋಜನಕಾರಿಯಾಗಲಿಕ್ಕೆ ಇಲ್ಲವೆಂತಲೂ ಈ ಗ್ರಾಮದ ನಿವಾಸಿಗಳ ಆರೋಗ್ಯವು ಸ್ವಭಾವಿತ ಉತ್ತಮವಾಗಿಯೇ ಇದ್ದು ಪ್ರತ್ಯೇಕ ರಕ್ಷಣೆಗೆ ಒಳಪಡಬೇಕಾಗಿಲ್ಲವೆಂತಲೂ ಗ್ರಾಮದಲ್ಲಿ ಅಧಿಕವಾಸಿಗಳು ಕೇವಲ ದಿನಕೂಲಿ ಮತ್ತು ಬೇಸಾಯಗಾರರು ಇಂಥವರು ಮುನ್ಸಿಪಲ್ ತೆರಿಗೆಯನ್ನು ತೆರಲು ಕೇವಲ ಅಸಮರ್ಥರೆಂತಲೂ ಭಾಷಣಗಳಾದ ತರುವಾಯ ಈ ಸಂದರ್ಭವಾಗಿ ನಿರ್ಣಯಗಳು ಪಾಸಾದುವು.

ಈ ಸಂಬಂಧದ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಬಗ್ಗೆ ಮಹನೀಯರ ಒಂದು ಕಮಿಟಿಯು ನೇಮಕ ಮಾಡಲಾಯಿತು.

ಶ್ರೀ ದಾಮೋದರ ಬಾಳಿಗರು

ಧಾರವಾಡದಲ್ಲಿ ಕೂಡಲಿರುವ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಂಚಾಲಕರ ಸಭೆಗೆ ತೆರಳುವರು. ಅವರು ಅಲ್ಲಿಂದ ಬೆಳಗಾವಿ, ಹಿಂಡಲ್ಗಿ ಸೆರೆಮನೆಗಳಲ್ಲಿರುವ ದಕ್ಷಿಣ ಕನ್ನಡದ ಸತ್ಯಾಗ್ರಹಿ ಕೈದಿಗಳನ್ನು ಸಂದರ್ಶಿಸುವರೆ ತೆರಳುವರೆಂದೂ ತಿಳಿದಿದೆ.

ಮೌಲಾನಾ ಎಮ್. ಎಚ್. ಒಡೆಯರು

ಸತ್ಯಾಗ್ರಹ ಮಾಡಿ ಬಂಧಿತರಾಗಿ ಶಿಕ್ಷೆಯನ್ನನುಭವಿಸಿ ಬಿಡುಗಡೆ ಹೊಂದಿದ್ದ ಮೌಲಾನಾ ಒಡೆಯರು ಈಗ ಅಸೌಖ್ಯವಿರುವ ಕಾರಣ ಸತ್ಯಾಗ್ರಹ ... ಯವರಿಗೆ ಬರೆದಿರುವರೆಂದೂ ಅವರ ಉತ್ತರವನ್ನು ನಿರೀಕ್ಷಿಸುತ್ತಿರುವರೆಂದೂ ತಿಳಿದಿದೆ.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಲೇಬರ್ ಲೀಗ್

ನಮ್ಮ ಸಂಘದ ಅನೇಕ ಮಂದಿ ಮೆಂಬರರ ಪೈಕಿ ಈ ವರೆಗೆ ಅಂದರೆ ಕಳೆದ ನಾಲ್ಕು ವರ್ಷ ಸಂಘಕ್ಕೆ ಕೊಡುವ ವಂತಿಗೆಯನ್ನಾಗಲಿ, ಅಥವಾ ಸಂಘದ ಯಾವದೊಂದು ಬಗೆಯ ಕಾರ್ಯಕಲಾಪಗಳಲ್ಲಿಲ್ಲಾಗಲಿ ಭಾಗವಹಿಸಿಕೊಳ್ಳದೆ ತಟಸ್ಥರಿದ್ದು ಈ ತನಕ ಸುಮ್ಮನೆ ಒಳಿದವರ ಮೆಂಬರರನ್ನು ಇದೇ ಕಳೆದ ಜೂನ್ ತಿಂಗಳ ತಾ. 29—6—41ರಲ್ಲಿ ಜರಗಿದ ಮಹಾಸಭೆಯವರ ಅಭಿಪ್ರಾಯಪಟ್ಟ ಮೇರೆಗೆ ಇದೇ ತಿಂಗಳ ತಾ 1—7—41ರಿಂದ ಸಂಘದಿಂದ ತೆಗೆದುಹಾಕಲ್ಪಟ್ಟಿದೆ. ಇವರು ಈ ವರೆಗೆ ಬಾಕಿ ಮಾಡಿದ ವಂತಿಗೆಯನ್ನು ಸಂಪೂರ್ಣ ಕಟ್ಟಿ ಹಕ್ಕು ಪಡಕೊಳ್ಳಬಹುದೆಂದು ಈ ಮೂಲಕ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಿ ಕೆನರಾ ಟಿಕ್ ಥಿಯೇಟರ್ಸ್

ಈ ಹೆಸರಿನಿಂದ ಒಂದು ದೇಶೀಯ ಕಲೋನ್ನತಿಯ ಪತ್ಪರಿಯನ್ನೊಳಗೊಂಡ ಒಂದು ಸಂಸ್ಥೆಯು ಮಂಗಳೂರಲ್ಲಿ ದಿ ಬಡವರ ಬಂಧು ಪ್ರಿಂಟಿಂಗ್ ಪ್ರೆಸ್ ಲಿಮಿಟೆಡ್, ಮಂಗಳೂರು ಇವರ ಆಡಳಿತೆಯಲ್ಲಿ ಪ್ರಾರಂಭವಾಗಿರುತ್ತದೆ.

ಹಿಂದೀ ಕ್ಲಾಸುಗಳು

ಆಗೋಸ್ತು ತಿಂಗಳ ಒಂದನೆಯ ತಾರೀಕಿನಿಂದ, ಸ್ಥಳೀಯ ಕೇರಳ ಕ್ಷತ್ರಿಯ ಸಮಾಜದಲ್ಲಿ ಮತ್ತು ಕದ್ರಿ ವಿದ್ಯಾಬೋಧಿನಿ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಹಿಂದೀ ಕ್ಲಾಸುಗಳು ಪ್ರಾರಂಭವಾಗುತ್ತವೆ. ಹಿಂದೀ ವಿದ್ಯಾಂಸರಾದ ಶ್ರೀ ದೇವಪ್ಪಾಳ್ವರು ಕಲಿಸಲಿರುವರು. ಸೇರಲು ಇಚ್ಛಿಸುವವರು ಪ್ರೊ| ವಿ. ಜಿ. ಜೋಶಿಯವರೊಡನೆ ತಮ್ಮ ಹೆಸರು ಕೊಡಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಮಂಗಳೂರು ಸಬ್ ಜಡ್ಜರು

ಮಂಗಳೂರಿನ ಸಬ್ ಜಡ್ಜರಾದ ಶ್ರೀ ರಘುರಾಯರು ರಜೆ ಪಡೆದಿರುವುದರಿಂದ ಅವರ ಬದಲಿಗೆ ಶ್ರೀ ಟಿ ಡಿ ರಾಮಯ್ಯ ಪಂತುಲುಗಾರರು ಸಬ್ ಜಡ್ಜರಾಗಿ ಚಾರ್ಜು ವಹಿಸಿರುತ್ತಾರೆ.

ವರ್ಗ

ಕೋಆಪರೇಟಿವ್ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ನಂಗಾಲ್ ಇವರು ಅನಂತಪುರ ಜಿಲ್ಲೆಯ ಕೋಆಪರೇಟಿವ್ ಸಬ್ ರಿಜಿಸ್ಟ್ರಾರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಸಾರ್ವಜನಿಕ ಸಭೆ

ಜಪ್ಪು ಮುನ್ಸಿಪಲ್ ಸ್ಕೂಲಿನಲ್ಲಿ ತಾ 13ರಂದು ಒಂದು ಸಾರ್ವಜನಿಕ ಸಭೆ ಜರಗಿ, ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು, ಯುದ್ಧ ವಿರುದ್ಧ ಘೋಷಣೆಯನ್ನು ಹೇಳಿ, ಅದನ್ನು ಹೇಳುವ ಕಾರಣವನ್ನು ವಿವರಿಸಿದರು. ಶ್ರೀ ಕೆ ವಿಟ್ಠಲ ಮಂಜುನಾಥ ಶ್ಯಾನುಭಾಗರು ಅಧ್ಯಕ್ಷಸ್ಥಾನ ವಹಿಸಿದ್ದರು.

ಕಾರ್ಕಳ

ಬೋರ್ಡ್ ಉಪಾಧ್ಯಾಯರ ಸಭೆ

ಜಿಲ್ಲಾ ಬೋರ್ಡಿನ ಕಾರ್ಕಳ ತಾಲೂಕು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಯೂನಿಯನಿನ ಕಾರ್ಯನಿರ್ವಾಹಕ ಸಮಿತಿಯ ಒಂದು ಸಭೆಯು ತಾ. 20ರ ದಿನ ಶ್ರೀ ಎ ಸೀತಾರಾಮರಾಯರ ಅಧ್ಯಕ್ಷತೆಯಲ್ಲಿ ಕೂಡಿ, ಈ ಉಪಾಧ್ಯಾಯರ ಕಡತವನ್ನು ಕಾಯಮ್ ಮಾಡಿ ಸ್ಪೇಟ್ ಪೋಸ್ಟುಗಳನ್ನು ಕೊಡಬೇಕೆಂಬ ಬೋರ್ಡಿನ ವಿಚಾರವು ಉಪಾಧ್ಯಾಯರ ಹಿತಾಸಕ್ತಿಗಳಿಗೆ ವಿರೋಧವಾಗಿರುವುದೆಂಬ ನಿರ್ಣಯವು ಮಾಡಲ್ಪಟ್ಟಿತು.

ಸಹಕಾರಿಗಳ ಸಭೆ

ಕಾರ್ಕಳ ಲೋಕಲ್ ಬೋರ್ಡು ಸರ್ವೆಂಟ್ಸ್ ಕೋಆಪರೇಟಿವ್ ಸೊಸಾಟಿಯ ... ಯಮ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿ ಪಾಲು ಭಂಡವಾಳದ ಮೇಲೆ ಶೇಕಡ 6¼ರ ಲಾಭವನ್ನು ಹಂಚಿದುದಲ್ಲದೆ, ಹೊಸ ವರ್ಷಕ್ಕೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಆರಿಸಿದರು.

ಮಕ್ಕಳ ಹಬ್ಬ

ಮಂಗಲಪಾಡಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಈ ವರ್ಷದ ಪ್ರಥಮ ಮಕ್ಕಳ ಹಬ್ಬವು ಶ್ರೀ ಯಂ. ಬಾಬು ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕನ್ನಡ ಮ್ಯೋಲಿ ಯುವಕ ಸಂಘ ಮಂಗಳೂರು

ಸದ್ರಿ ಸಂಘದ ತೃತೀಯ ವಾರ್ಷಿಕೋತ್ಸವವು ಕಳೆದ ತಾ 20ರಲ್ಲಿ ಉರುವ ಮಹಾದೇವಿ ದೇವಸ್ಥಾನದ ವಠಾರದಲ್ಲಿ ರಾಷ್ಟ್ರಬಂಧು ಪತ್ರಿಕೆಯ ಉಪ ಸಂಪಾದಕರಾದ ಕೆ ಕೃಷ್ಣರಾವ್ ಬಿ ಎ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮಹಾಜನ ಫಂಡ್ ರಿಲೀಫಿಗೆ ಸಹಾಯ ಮಾಡಿದ ಮಹನೀಯರು

ಬಾರ್ ಎಸೋಸಿಯೇಶನ್ ... ಬೋರ್ಡ್ ... ಕೆನರಾ ಬ್ಯಾಂಕ್ ಲಿಮಿಟೆಡ್ ... ಸ್ಟೋರ್ಸ್ ... ಮೊದಲಾದವರು

ನೆರೆಯಿಂದ ನೊಂದವರಿಗೆ ಸಹಾಯ ನಲ್ಲಿಸುತ್ತಿದ್ದಾರೆ

ಶ್ರೀ. ಎಚ್. ಕೆ. ತಿಂಗಳಾಯರು

ನೆರೆಹಾವಳಿಯಿಂದ ಸಂಕಷ್ಟಕ್ಕೊಳಗಾದವರ ಸಹಾಯ ಮಾಡುತ್ತಿದ್ದಾರೆ. ... ಮತ್ತು ... ಮೊದಲಾದ ಕಡೆಗಳಲ್ಲಿ ...

ಶ್ರೀ ಜತ್ತಪ್ಪ ರೈಗಳು

ಡಾ| ಜೋ ... ಸತ್ಯಾಗ್ರಹಿ ಶ್ರೀ ಜತ್ತಪ್ಪ ರೈಗಳು ಕಾಸರಗೋಡು, ... ಕುಂಬಳೆ, ಸೀತ್ತಂಗೋಳಿ, ... ಈ ಊರುಗಳಲ್ಲಿಯೂ

ಶ್ರೀ ರಾಮ ಪೊದುವಾಳರು

ಕಾರ್ಕಳದ ಸತ್ಯಾಗ್ರಹಿ ಶ್ರೀ ಕೆ ಪಿ ರಾಮ ಪೊದುವಾಳರು ನೀಲೇಶ್ವರದ ಸುತ್ತುಮುತ್ತ ನಡಕಾವು ... ಊರುಗಳಲ್ಲಿಯೂ

ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟಿ

ಸತ್ಯಾಗ್ರಹಿ ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟಿ ವಿಟ್ಲ ಸೀಮೆಯ ... ಮೊದಲಾದ ಕಡೆಗಳಲ್ಲಿಯೂ

ಶ್ರೀ ಎಸ್. ಶ್ಯಾಮರಾಯ ನಾಯ್ಕರು

ಸತ್ಯಾಗ್ರಹಿ ಶ್ರೀ ಎಸ್ ಶ್ಯಾಮರಾಯ ನಾಯ್ಕರು, ಪ್ರಾಣವನ್ನಾದರೂ ... ತಮ್ಮದರನ್ನು ಸಾಧಿಸುವ ಉತ್ಸಾಹದಿಂದ ಪುತ್ತೂರು, ವಿಟ್ಲ, ಕುಂಬ್ಳೆ, ಪೆರ್ಲ, ಕೊಡಪಾಡೀರ್ಕರ ಇಂತ್ಲಂಗೋಡು ಮೊದಲಾದ ಕಡೆಗಳಲ್ಲಿಯೂ

ಶ್ರೀ ಕೂಳಂತೋಡಿ ಕೃಷ್ಣ ಭಟ್ಟರು

ಶ್ರೀ ಕೂಳಂತೋಡಿ ಕೃಷ್ಣ ಭಟ್ಟರು ಕಾಸರಗೋಡು ತಾಲೂಕಿನಲ್ಲಿ ನೆರೆಯಿಂದ ಹಾವಳಿಗೊಂಡ ಅನೇಕ ಗ್ರಾಮಗಳಲ್ಲಿಯೂ, ಸಂದರ್ಶಿಸುತ್ತಾ ಅವರ ಸಂಕಷ್ಟ ನಿವಾರಣಾ ಕಾರ್ಯದಲ್ಲಿಯೂ

ಶ್ರೀ ದೇವಪ್ಪಾಳ್ವರು

ಕುಂಬ್ಳೆಯ ಸತ್ಯಾಗ್ರಹಿ ಶ್ರೀ ಜಿ. ದೇವಪ್ಪಾಳ್ವರು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದವರು, ವಿಶ್ರಾಂತಿಯಿಲ್ಲದೆ ಹಲವು ಸಾರ್ವಜನೋಪಕಾರೀ ಕೆಲಸಗಳಲ್ಲಿ. ಹಾಗೂ ಕಾಸರಗೋಡು ತಾಲೂಕಿನಲ್ಲಿ ನೆರೆಬಂದ ಗ್ರಾಮಗಳಲ್ಲಿಯೂ

ಶ್ರೀ ಬಾಬು ಶೆಟ್ರು

ಕಾಸರಗೋಡಿನ ಶ್ರೀ ಬಾಬು ಶೆಟ್ರು ನೆರೆಹಾವಳಿಯ ಹಲವು ಪ್ರದೇಶಗಳಲ್ಲಿಯೂ ಹೋಗಿ ಅವರ ಸಂಕಷ್ಟ ನಿವಾರಣೆಯ ಕಾರ್ಯ ಮಾಡುತ್ತಾರೆ.

ಮಾಸ್ಕೋ ನಗರದ ಮೇಲೆ ಜರ್ಮನ್ ವಿಮಾನ ಧಾಳಿ

ಮಾಸ್ಕೋದ ಮೇಲೆ ಜರ್ಮನರ ಧಾಳಿಯು ಪ್ರಯುಕ್ತ ಸಾಗಿದೆ, ೨೦೦ ಕ್ಕೆ ಮಿಕ್ಕಿದ ಜರ್ಮನ್ ವಿಮಾನಗಳು ಮಾಸ್ಕೋ ಮೇಲೆ ಹಾರಾಡಿದವು. ಕೆಲವು ಕಡೆಗಳಲ್ಲಿ ಬೆಂಕಿ ಬಿದ್ದಿದೆ, ಹಲವರು ಮೃತರಾದರು ಮತ್ತು ಗಾಯಗೊಂಡರು. ಜರ್ಮನಿಯು ಯುರೋಪಿನ ಇನ್ನುಳಿದ ಸ್ವತಂತ್ರ ರಾಷ್ಟ್ರಗಳ ಮೇಲೆ, ಟರ್ಕಿ ಮೊದಲಾದುವುಗಳ ಮೇಲೆಯೂ ಧಾಳಿಮಾಡುವುದೆಂದು ಸುದ್ದಿ ಇದೆ. ಇಟಲಿಯ ಸೈನ್ಯವನ್ನು ನಿರೀಕ್ಷಿಸಲು ಮುಸಲಿನಿಯು ಹೋದಾಗ ಯಾರೋ ಅವನ ಕೊಲೆಮಾಡಲು ಯತ್ನಿಸಿದರೆಂದೂ ಎರಡು ಸಾರಿ ಗುಂಡು ಹಾರಿತೆಂದೂ ಸುದ್ದಿ ಬಂದಿದೆ. ಈ ವಾರ ಲಂಡನಿನ ಮೇಲೆಯೂ ಜರ್ಮನಿ ಧಾಳಿಯು ಆಗಿರುತ್ತದೆ

ಬ್ರೆನ್ನರ್ ಕಣಿವೆಯಲ್ಲಿ ಸರ್ವಾಧಿಕಾರಿಗಳು

ಸರ್ವಾಧಿಕಾರಿಗಳಾದ ಹಿಟ್ಲರ್ ಮುಸಲಿನಿಗಳು ಬ್ರೆನ್ನರ್ ಕಣಿವೆಯಲ್ಲಿ ಭೇಟಿಯಾಗುವರೆಂದು ತಿಳಿದಿದೆ.

ಅವರು ಅಲ್ಲಿ ಇಂಗ್ಲೆಂಡಿನ ವಿರುದ್ಧವಾಗಿ ವಿಚಾರ ವಿನಿಮಯ ಮಾಡುವರಂತೆ ಫ್ರಾನ್ಸಿನ ಪರಿಸ್ಥಿತಿಯನ್ನು ಪರ್ಯಾಲೋಚಿಸುವರಂತೆ.

ಭೀಕರ ಕಾಳಗ

ರಶ್ಯದಲ್ಲಿ ಜರ್ಮನರು ಭೀಕರ ಕಾಳಗ ನಡೆಸುತ್ತಿದ್ದಾರೆ ಸ್ಮೊಲೆನಸ್ಕ್ ನೊವಾಗ್ರಾಡ್ ಭಾಗದಲ್ಲಿ ವಿಶೇಷ ಯುದ್ಧವಾಗುತ್ತಿದೆ

ಹಿಟ್ಲರನನ್ನು ಕೊನೆಗೊಳಿಸಲು ನಿರ್ಧಾರವಂತೆ

ಹೆಲಿಫಾಕ್ಸರು ಅಮೇರಿಕದಲ್ಲಿ ಹೇಳಿದರು

ನಿಮ್ಮ ಸಹಾಯದಿಂದ ಹಿಟ್ಲರನನ್ನು ಕೊನೆಗೊಳಿಸಬೇಕೆಂದು ನಾವು ನಿರ್ಧರಿಸಿದ್ದೇವೆಂದು ಅಮೇರಿಕದ ಕೂಲಿಗಾರರ ಸಭೆಯಲ್ಲಿ ಭಾಷಣ ಮಾಡುತ್ತಾ ಲಾರ್ಡ್ ಹೆಲಿಫಾಕ್ಸರು ಹೇಳಿದರು.

ಆಂಗ್ಲ ರಶ್ಯ ಒಪ್ಪಂದದಿಂದ ಜಪಾನಿನ ಮೇಲೆ ಪರಿಣಾಮ

ಆಂಗ್ಲರಶ್ಯ ಒಪ್ಪಂದದಿಂದ ಜಪಾನಿನ ಮೇಲೆ ವಿಶೇಷ ಪರಿಣಾಮವಾಗಿದೆಯೆಂದು ತಿಳಿದುಬಂದಿದೆ. ಜಪಾನು ಈಸ್ಟ್ ಇಂಡೀಸನ್ನು ಆಕ್ರಮಿಸುವುದೇ ಎಂಬ ಶಂಕೆಯಿದ್ದಿದೆ. ಪೂರ್ವದಲ್ಲಿ ರಶ್ಯದ ಮೇಲೆ ಧಾಳಿಮಾಡಿದ್ದರೆ, ಜಪಾನು ಬ್ರಿಟನುಗಳ ಈಗಿನ ಬಾಂಧವ್ಯ ಉಳಿಯಲಾರದೆಂದು ಊಹಿಸಲಾಗಿದೆ

ಸಿರಿಯಾ ಬ್ರಿಟಿಷರ ಸ್ವಾಧೀನ

ಸಿರಿಯವು ಬ್ರಿಟಿಷರ ಸ್ವಾಧೀನವಾಗಿರುವುದಾಗಿ ತಿಳಿದಿರುತ್ತದೆ.

ಟರ್ಕಿಯ ಮೇಲೆ ಜರ್ಮನ ಆಕ್ರಮಣವೆ?

ಮುಸಲನಿಯ ಕೊಲೆಯ ಪ್ರಯತ್ನ ನಡೆಯಿತು

ನಾಜಿ ವಿರುದ್ಧ ಉಪಾಯವನ್ನು ರೂಸ್‌ವೆಲ್ಟರು ಮಾಡುತ್ತಾರೆ

ನಾಜಿಗಳ ವಿರುದ್ಧ ಕಾರ್ಯವನ್ನು ಕೈಕೊಳ್ಳುವ ವಿಚಾರವಾಗಿ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಸಿನೆಟರ್ ಬಾರ್ಕಲೆಯವರೊಡನೆ ವಿಚಾರ ವಿನಿಮಯ ಮಾಡಿರುವರೆಂದು ತಿಳಿದಿದೆ ಯು ಬೋಟುಗಳ ವಿರುದ್ಧ ಕಾರ್ಯವನ್ನು ಕೈಕೊಳ್ಳುವುದು, ಅಮೇರಿಕದ ವೈಮಾನಿಕರು ನೇರಾಗಿ ಬ್ರಿಟನಿಗೆ ಹಾರುವುದು ಅಮೇರಿಕದಲ್ಲಿ ನಾಜಿಗಳ ಪ್ರಚಾರ ಹೆಚ್ಚಾಗದಂತೆ ನೋಡುವುದು ಇವೇ ಮೊದಲಾಗಿ ವಿಚಾರಮಾಡಿದರಂತೆ

ಗೋರಿಂಗನ ಸ್ಥಳದಲ್ಲಿ ವಾನ್ ಮಿಲ್ಚರು

ಹಿಟ್ಲರ್ ಗೋರಿಂಗರಿಗೆ ಮತಭೇದ ಬಂದ ನಿಮಿತ್ತ ಗೋರಿಂಗನನ್ನು ಸೆರೆ ಹಾಕಿದುದಾಗಿಯೂ ಹಿಟ್ಲರು ಗೋರಿಂಗನ ಸ್ಥಳದಲ್ಲಿ ವಾನ್ ಮಿಲ್ಚರನನ್ನು ನೇಮಿಸಿರುವನೆಂಬುದಾಗಿಯೂ ಲಂಡನಿನ ವರ್ತಮಾನ ಸುದ್ದಿ ಹರಡಿದೆ

ಹಿಟ್ಲರನಿಗೆ ಅಪಸ್ಮಾರ ರೋಗವಂತೆ

ಮಾಸ್ಕೋ ಸುದ್ದಿ

ಹೆರ್ ಹಿಟ್ಲರನು ತನ್ನ ಕಚೇರಿಯಲ್ಲಿ ಯುದ್ಧ ವಿಚಾರವನ್ನು ಮಾತನಾಡುತ್ತಿರುವಾಗ ಅವನಿಗೆ ಒಮ್ಮೆಲೇ ಅಪಸ್ಮಾರ ವಾಯಿತೆಂದೂ. ಕೂಡಲೇ ಪ್ರಸಿದ್ಧ ಡಾಕ್ಟರರ ಕರೆದು ಉಪಚಾರ ಮಾಡಿದರೆಂದೂ ಮಾಸ್ಕೋ ಸುದ್ದಿ ಬಂದಿತ್ತಂತೆ ಆದರೆ ಇದನ್ನು ಲಂಡನಿನಲ್ಲಿ ನಂಬಲಿಲ್ಲವಂತೆ.

ಕೀವ್ ಜರ್ಮನ್ನರ ವಶ

ಕೀವನ್ನು ಜರ್ಮನರು ವಶಪಡಿಸಿಕೊಂಡಿರುವರೆಂದು ಸುದ್ದಿಯಿದ್ದಿದೆ

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ ಪ್ರಾಚೀನ ಸಂಸ್ಕೃತಿಯ ಅರಿವೇ ಇಲ್ಲದವರಿಂದಲೂ ದಕ್ಷ ವಿದ್ಯಾಭ್ಯಾಸವಿಲ್ಲದ್ದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ., ಎಫ್.ಸಿ ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಶಾ ಕಂಪನಿ, ಹಂಪನಕಟ್ಟಾ, ಮಂಗಳೂರು

ಸರ್ ಸ್ಟಾಫೋರ್ಡ್ ಕ್ರೀಪ್ಸರ ಮಗಳು

ರಶ್ಯಾದಲ್ಲಿದ್ದ ಸರ್ ಕ್ರೀಪ್ಸರ ಮಗಳು ಮಿಸ್ ಥೆಲಿಸ್ಸಾಳು ಇಂಗ್ಲೆಂಡಿಗೆ ಅಲ್ಲಿಂದ ತಳಕ್ಕಿತ್ತು ಹೋಗುವಾಗ ದಾರಿಯಲ್ಲಿ ಹಿಂದಿ ದೇಶದ ಬಂದರದಿರುವಳು

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 152/1941.

ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು, ಇದರ ಜನರಲ್ ಮೆನೇಜರ್ ಪಾಂಗಾಳ ಸರ್ವೋತ್ತಮ ನಾಯಕ — ವಾದಿ

ಮತ್ತು

ಪೈದ್ರೊಸ್ ಬ್ಯಾರಿ — ಪ್ರತಿವಾದಿ

ಪ್ರತಿವಾದಿ—ಪೈದ್ರೊಸ್ ಬ್ಯಾರಿ-ಮಲ್ಲ ಪಸನೆ ಬ್ಯಾರಿಗಳ ಮಗ, ಮಂಗಳೂರು ತಾಲೂಕು ಸಜೀಪ ಪಡು ಗ್ರಾಮದ ತಲೆಮೊಗರು ಎಂಬಲ್ಲಿ ವಾಸವು

ಮೇಲೆ ಕಾಣಿಸಿದ ವಾದಿಯು ಅಸ್ತಿ ಸ್ವಾಧೀನತೆಗೂ ಮತ್ತು ನಿಮ್ಮಿಂದ ಬರಾ ಬಾಕಿಗೇಣಿ ವಸೂಲಾತಿ ಬಗ್ಗೆ ನಿಮ್ಮ ಮೇಲೆ ಮೇಲೆ ಕಾಣಿಸಿದ ದಾವೆಯನ್ನು ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಲ ಮಾಡಿರುತ್ತಾನೆ ಸದ್ರಿ ದಾವೆಯು ತಾ 4-8-1941ಕ್ಕೆ ಇತ್ಯರ್ಥ ತನಿಖೆಗೆ ಇಟ್ಟಿರುತ್ತದೆ, ಆ ದಿವಸ ನೀವು ಸ್ವತಃ ಆಗಿ ಯಾ ವಕೀಲರ ಮುಖಾಂತರ ಹಾಜರಾಗಿ ದಾವೆಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಮನವಿಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ

Mangalore } A Damodara Pai,
17-7-1941. } Vakil for Plaintiff

NOTICE

In the Court of the District Munsif of Mangalore

S C No 182/1941

Between —

Messrs Rao & Rao — *Plaintiff.*

and

P. Nagaraja Hegde-*Defendant.*

To

The defendant—P. Nagaraja Hegde, nephew of Padmaraja Hegde, Potail, residing at Kallathabettu Village, Punjalkatte, Mangalore Taluq.

Please take notice that the plaintiff above-named has filed the above suit for recovery of Rs. 114-11-0 due under a demand promissory note executed by the defendant in favour of the plaintiff on 23-1-'40 for a valid consideration of Rs. 100 and that the same stands posted to 5-8-'41 for final disposal.

Mangalore } M. A. TALWAR,
21-7-1941 } Vakil for Plaintiffs

ವೈಸರಾಯ್ ಕೌನ್ಸಿಲ್ ವಿಸ್ತಾರದ ವಿಷಯ ಅತೃಪ್ತಿವುಂಟಾಗಿದೆ

ವೈಸರಾಯರ ಕೌನ್ಸಿಲ್ ವಿಸ್ತರಣೆಯ ಕಾರ್ಯವು ಈ ವಾರ ನಡೆಯಿತು. ಐದು ಮಂದಿ ಭಾರತೀಯರಿಗೆ ಉನ್ನತ ಅಧಿಕಾರಿಗಳು ದೊರೆತುವು. ದೇಶದ ಮುಖಂಡರನೇಕರು ತಮ್ಮ ತೀವ್ರ ಅತೃಪ್ತಿಯನ್ನು ಸೂಚಿಸಿದ್ದಾರೆ. ಗಾಂಧಿಜಿ ಅಸಮಾಧಾನಗೊಂಡಿದ್ದಾರೆ. ಜಿನ್ನರು ಖಂಡಿಸಿದ್ದಾರೆ. ಸತ್ಯಾಗ್ರಹವು ಮೊದಲಿನಂತೆ ಸಾಗುತ್ತಿದೆ. ಸರಕಾರವು ಈ ವಿಷಯದಲ್ಲಿ ಯಾವುದೇ ಶಾಂತ ಪರಿಹಾರವನ್ನು ವಹಿಸುವಂತೆ ಕಂಡುಬರುವುದಿಲ್ಲವಾಗಿ ಸದ್ಯಕ್ಕೆ ಆಂದೋಲನವು ನಿಲ್ಲುವಂತೆಯೂ ತೋರುವುದಿಲ್ಲ. ಗಾಂಧಿಜಿ ಐದು ವರ್ಷಗಳ ವರೆಗೆ ಸತ್ಯಾಗ್ರಹ ನಡೆಯುವುದೆಂದಿರುವರು.

ಕಾಂಗ್ರೆಸಿನ ಬೇಡಿಕೆಗೆ ತಕ್ಕಂತಿಲ್ಲವೆಂದರು ಗಾಂಧಿಜಿ

ಜಿನ್ನರು ವಿಷಾದ ವ್ಯಕ್ತಪಡಿಸಿರುತ್ತಾರೆ

ಬರ್ಮಾ ಭಾರತ ಒಪ್ಪಂದ

ಬರ್ಮಾ ಭಾರತ ಸರಕಾರಗಳ ಒಪ್ಪಂದವನ್ನೊಳಗೊಂಡ ಪತ್ರವು ಪ್ರಕಟವಾಗಿದೆ. ಭಾರತೀಯರಿಂದ ತಮ್ಮ ಆರ್ಥಿಕ ಪರಿಸ್ಥಿತಿಯು ಕೆಡುವುದೆಂಬ ಬರ್ಮೀಯರ ಭೀತಿಯು ಇದರಿಂದ ಕಡಿಮೆಯಾಗುವುದೆಂದು ತಿಳಿಯಲಾಗಿದೆ. ಭಾರತದ ವಲಸೆಗಾರರ ಮೇಲೆ ನಿಯಂತ್ರಣ ವಿಡುವ ಹಕ್ಕು ಬರ್ಮಾ ಸರಕಾರಕ್ಕೆ ಕೊಡಲಾಗಿದೆ. ಅಲ್ಲಿಯ ಕಾಯಂ ನಿವಾಸಿಗಳಾದ ಭಾರತೀಯರನ್ನು ಬರ್ಮಾ ಪ್ರಜೆಗಳಂತೆ ನೋಡಿಕೊಳ್ಳಬೇಕಾಗಿ ಒಪ್ಪಂದವಾಗಿದೆ. ಎರಡೂ ರಾಷ್ಟ್ರಗಳೊಳಗಿರುವ ತಪ್ಪು ತಿಳುವಳಿಕೆಗಳು ಇದರಿಂದ ದೂರವಾಗಿ ಸೌಹಾರ್ದ ಭಾವನೆಗಳು ಹೆಚ್ಚುವಂತಾಗಬೇಕೆಂದು ನಿರ್ಧರಿಸಲಾಗಿದೆ. ಬ್ರಹ್ಮೀ ಹುಡುಗಿಯರನ್ನು ಮದುವೆಯಾಗುವ ವಿಷಯವೂ ನಿರ್ಬಂಧವಿದೆ.

ಗುಜರಾಥಿನಲ್ಲಿ ನೆರೆ

ಮಹಾದೇವ ದೇಸಾಯಿಗಳ ಭಿನ್ನಹ

ಗುಜರಾಥಿನಲ್ಲಿ ನೆರೆಹಾವಳಿಯಿಂದ ಬಂದೊದಗಿದ ಅನರ್ಥದ ವಿಷಯವಾಗಿ ಮಹಾದೇವ ದೇಸಾಯಿಗಳು ಸಹಾಯ ಬಿನ್ನಹಕ್ಕಾಗಿ ಒಂದು ಪ್ರಕಟಣೆ ಹೊರಡಿಸಿರುತ್ತಾರೆ.

ಮುನ್ಶಿಯವರಿಗೆ ಮಿರ್ಜರ ಬೆಂಬಲವುಂಟಂತೆ

ಶ್ರೀ. ಮುನ್ಶಿಯವರ ಅಭಿಪ್ರಾಯಕ್ಕೆ ಮಿರ್ಜರು ಬೆಂಬಲಕೊಟ್ಟಿರುವರೆಂದೂ, ಅಖಂಡ ಹಿಂದುಸ್ಥಾನವೆಂಬು ಹೆಸರಿಡುವುದಕ್ಕಿಂತ, ಯುನೈಟೆಡ್ ಇಂಡಿಯಾ ಲೀಗ್ ಎಂದು ಹೆಸರಿಟ್ಟರೆ ಉಚಿತವಾಗುವುದೆಂದು ಅವರ ಅಭಿಪ್ರಾಯವೆಂದೂ ತಿಳಿದಿದೆ.

ಶ್ರೀ. ವಿನೋಬ ಬಾವೆಯವರಿಗೆ ಸಜೆ

ಈ ಸಲದ ಸತ್ಯಾಗ್ರಹದ ಪ್ರಥಮ ಸೇನಾನಿ ವಿನೋಬಾವೆಯವರು ಮೂರನೆಯ ಸಲ ಸತ್ಯಾಗ್ರಹಮಾಡಿ ಬಂಧಿತರಾದರಷ್ಟೆ? ಅವರಿಗೆ ಈ ಸಲ ಒಂದು ವರ್ಷದ ಕಠಿಣ ಸಜೆ ವಿಧಿಸಿದ್ದಾರೆ. ಮೊದಲನೆಯ ಸಲ ಅವರಿಗೆ ಮೂರು ತಿಂಗಳೂ, ಎರಡನೆಯ ಸಲ ಆರು ತಿಂಗಳೂ ಸಜೆ ವಿಧಿಸಲಾಗಿತ್ತು.

ಮಜೂರ ಮುಂದಾಳುಗಳಿಗೆ ಪ್ರತಿಬಂಧ

ಕಲ್ಕತ್ತದ ಮಜೂರ ಮುಂದಾಳುಗಳಾದ ಶ್ರೀ. ಶಿವನಾಥ ಬೆನರ್ಜಿ, ಎಂ. ಎಲ್. ಎ; ಡಾ. ಚಾರು ಬೆನರ್ಜಿ ಎಂಬವರು ಕಲ್ಕತ್ತದಲ್ಲಾಗಲಿ ಅದರ ಸುತ್ತ ಮುತ್ತಲಾಗಲಿ ಸಭೆ ಸೇರಬಾರದೆಂದು ಸರಕಾರದ ಆಜ್ಞೆಯಾಗಿದೆ.

ಬಂಗಾಳದಲ್ಲಿ ಬಿರುಗಾಳಿ: ಬೆಳೆ ಜನನಾಶವಾಗಿದೆ

ಬಂಗಾಳದಲ್ಲಿ ಬಿರುಗಾಳಿಯುಂಟಾಗಿ ಅನೇಕ ಕಡೆಗಳಲ್ಲಿ ಬೆಳೆ ಜನಗಳ ನಾಶವಾಗಿರುತ್ತವೆ. ಅನೇಕ ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ಪೂರ್ವ ಬಂಗಾಳದಲ್ಲಿ ನೆರೆಯ ಹಾವಳಿಯೂ ಬಿರುಗಾಳಿಯೂ ವಿಶೇಷವಾಗಿದೆ.

ಷಣ್ಮುಖಂ ಚೆಟ್ಟಿ

ಸರ್ ಷಣ್ಮುಖಂ ಚೆಟ್ಟಿಯವರು ಸಿಂಗಾಪುರ ಮಾರ್ಗವಾಗಿ ಅಮೆರಿಕಕ್ಕೆ ತೆರಳಿದರು.

ಠಾಗೂರರ ಆರೋಗ್ಯ

ಅನಾರೋಗ್ಯದಿಂದ ಇರುವ ರವೀಂದ್ರನಾಥ ಠಾಗೂರರಿಗೆ ಆಯುರ್ವೇದ ಚಿಕಿತ್ಸೆ ನಡೆಯುತ್ತಿದ್ದು ಈಗ ಗುಣಮುಖರಾಗಿರುವರಂತೆ. ಆದರೂ ಹೊರಗೆ ಚಲಿಸುವಷ್ಟು ಶಕ್ತಿವಂತರಾಗಿಲ್ಲವೆಂದು ತಿಳಿದುಬರುತ್ತದೆ.

ಮೌಲಾನಾ ಅಜಾದರು

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರಿಗೆ ಸೆರೆಮನೆಯಲ್ಲಿ ಹಲ್ಲುನೋವಿನ ಅಸೌಖ್ಯವಾಗಿರುವುದಂತೆ.

ಶ್ರೀ. ಬಿರ್ಲಾ ಗಾಂಧಿ ಭೇಟಿ

ಶ್ರೀ. ಜಿ. ಡಿ. ಬಿರ್ಲಾರವರು ಗಾಂಧಿಜಿಯವರ ಭೇಟಿಗೆ ಹೋಗಿರುವರೆಂದು ತಿಳಿದಿದೆ.

ಸರಕಾರ— ಗಾಂಧಿ ಭೇಟಿ

ಶ್ರೀ. ನಳಿನಿರಂಜನ ಸರಕಾರರು ಗಾಂಧಿಜಿಯವರ ಭೇಟಿಗಾಗಿ ವರ್ಧಾಕ್ಕೆ ತೆರಳಿರುವರು.

ರೈಲುಬಂಡಿಗಳ ಸಮಯ

ಇದೇ ಜುಲೈ ತಾ. 10ರಿಂದ ಮೈಸೂರು ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತೆ—

ಗಾಡಿಗಳು ಹೊರಡುವ ಗಂಟೆ ತಲ್ಪುವ ಗಂಟೆ

ಸೂಪರ್ ಬೆಳಿ 3.45 ರಾತ್ರಿ 9.25 ರಾ [illegible]

ಶಿವಮೊಗ್ಗದವರೆಗೆ 7.32 ಬೆಳಿಗ್ಗೆ 1.0 [illegible]

ಮಂಗಳೂರು ಎಕ್ಸ್‌ಪ್ರೆಸ್ (ಮೈಲ್) 9.5 ಬೆಳಿಗ್ಗೆ 5.15 ಸಾಯಂ

ಜಾಲಾರ್‌ಪೇಟೆ

ಪೆಸೆಂಜರ್ 12.0 ಮಧ್ಯಾಹ್ನ 2.55 ಸಾಯಂ

ಕಾಸರಗೋಡು

ವರೆಗೆ [illegible] ಸಾಯಂ. 6.50 ಸಾಯಂ

ಕಣ್ಣನ್ನೂರು

ವರೆಗೆ [illegible] ಸಾಯಂ. [illegible] ಪೂರ್ವ [illegible]

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಮುಟ್ಟುಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಮುಟ್ಟುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈ ಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವ ಜ್ವರನಿವಾರಿಣಿ
ಆಹಾರ, ವಿಹಾರ, ಋತುಭೇದ ದೋಷಗಳಿಂದ ಆಮಾಶಯದಲ್ಲಿ ಕ್ರಿಮಿಗಳು ಸೇರಿ ನಾನಾ ವಿಧವಾದ ಜ್ವರಗಳು ಸಂಭವಿಸುತ್ತವೆ. ವಾತಜ್ವರ, ಪಿತ್ಥಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಕ್ರಿಮಿಗಳನ್ನೂ ನಾಶಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ದೇಹ ವ್ರಣಗಳು, ಸುಖಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಹುಣ್ಣು ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟ :: ಮದರಾಸು.
ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

Announcement

DONATIONS & CONTRIBUTIONS
Are received for credit of account
OF
**The Mahajana Flood Relief Committee
Of South Kanara**
At all our Branches free of all charges

ESTD. 1906. **THE CANARA BANKING CORPORATION, LIMITED**
(Incorporated in Br. India)

ಪುಸ್ತಕಾವಲೋಕನ: ನೆರೆಮನೆಯ ಹುಡುಗಿ*

ಕನ್ನಡದಲ್ಲಿ ಸಣ್ಣ ಕತೆಗಳ ಸುಗ್ಗಿ ಆಗಿದೆ. ಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಪಡೆಯುವಂತಹ ಅನೇಕ ಕತೆಗಳು ಕನ್ನಡದ ಕತೆಗಾರರ ಲೇಖನಿಯಿಂದ ಹೊರಬಿದ್ದಿವೆ. 'ಮಿತ್ರಮಂಡಳಿ'ಯ ಉತ್ಸಾಹೀ ಕಾರ್ಯಕರ್ತರಲ್ಲೊಬ್ಬರಾದ ಶ್ರೀ. ಎಸ್. ಪಿ. ಭಟ್ಟರು, 'ನೆರೆಮನೆಯ ಹುಡುಗಿ' ಎಂಬೀ ತಮ್ಮ ಸಣ್ಣ ಕತೆಗಳ ಸಂಗ್ರಹವಿದನ್ನು ಬಹಳ ಅಂದವಾಗಿ, ಸಚಿತ್ರವಾಗಿ, ಮುದ್ರಿಸಿ ಪ್ರಕಟಿಸಿರುತ್ತಾರೆ.

ಶ್ರೀ. ಗೋವಿಂದ ಪೈಗಳ 'ಮುನ್ನುಡಿ' ಶ್ರೀ. ವಾಮನ ಭಟ್ಟರ 'ಮಾಲೆಯ ಪರವಾಗಿ ಮಾತು', ಕತೆಗಾರರ 'ಬಿನ್ನಹ' ಎಂಬೀ ಮೂರು ಪ್ರಸ್ತಾವನೆಗಳಿಂದ ಪುಸ್ತಕವು ಒಳ್ಳೆಯ ವಾಚನೀಯವಾಗಿದೆ. ಶ್ರೀಮಾನ್ ಪೈಗಳು ಕನ್ನಡದಲ್ಲಿ ಸಣ್ಣ ಕತೆಗಳು ಹುಟ್ಟಿ ಬೆಳೆದ ವಿಷಯವನ್ನೇ ಹೆಚ್ಚಾಗಿ ಮುನ್ನುಡಿಯಲ್ಲಿ ವಿಸ್ತರಿಸಿ ಬರೆದಿದ್ದಾರೆ. 'ನಾನು ಬಲ್ಲಷ್ಟರ ಮಟ್ಟಿಗೆ ಕನ್ನಡ ಸಣ್ಣ ಕತೆ ನಮ್ಮ ತುಳುನಾಡಿನಲ್ಲಿ ಹುಟ್ಟಿತು, ಸುವಾಸಿನಿಯ ತೊಟ್ಟಿಲಲ್ಲಿ ಬೆಳೆಯಿತು... ಸಣ್ಣ ಕತೆಗಳನ್ನು ಮೊದಲು ಮಾಡಿದವರು ಶ್ರೀ. ಶ್ರೀ. ಪಂಜೆ ಮಂಗೇಶರಾಯರು' ಎಂದು ಅವರು ಮುನ್ನುಡಿಯಲ್ಲಿ ನಿರ್ಧಾರಪೂರ್ವಕ ಹೇಳಿ 'ಶ್ರೀನಿವಾಸರ ವಿಷಯ ಬರೆಯುತ್ತಾ, In his hand the thing became a trumpet ಎಂದು, ಅವರಿಗೆ ಸಲ್ಲತಕ್ಕ ಮನ್ನಣೆ ಸಲ್ಲಿಸಿದ್ದಾರೆ. ಶ್ರೀ। ಪೈಗಳು ಪ್ರಕೃತ ಪುಸ್ತಕದ ಕುರಿತು, 'ಈ ಕತೆಗಾರರ ನಿರ್ಮಾಣಶಕ್ತಿ ಸಂಕುಚಿತವಲ್ಲ ಎಂಬಂತಿದೆ! ಇವರ ಪಾತ್ರ ವಿಕಾಸನ ಶಕ್ತಿ ಸಜೀವವೆಂದೂ ಖಚಿತವಾಗುತ್ತದೆ' ಎಂದು ಹೇಳಿ ಕತೆಗಾರರನ್ನು ಪ್ರಶಂಸಿಸಿದ್ದಾರೆ.

'ನಮ್ಮ ಕಾಲದ ಯುವಕ ಯುವತಿಯರ ಮನೋಭಾವದಲ್ಲಿ ಯಾವ ತರದ ಅಂತಃಪ್ರವಾಹಗಳು ಹರಿಯುತ್ತಿವೆ, ಯಾವ ತರದ ಜ್ವಾಲಾಮುಖಿಗಳು ಸಿಡಿಯುತ್ತಿವೆ, ಯಾವ ತರದ ಪರಂಜ್ಯೋತಿಗಳು ಉರಿಯುತ್ತಿವೆ ಎಂಬುದು, ಊಹನಾಶಕ್ತಿಯಿದ್ದು ಸಂಸಾರದ ಊನನ್ಯೂನಗಳನ್ನು ಮನಕಂಡ ಮನುಷ್ಯನಿಗೆ ಗೊತ್ತಿದೆ. ಅಂತಹ ಮನೋಭಾವದಲ್ಲಿ ಹುಟ್ಟಿ ಬೆಳೆದ ಗಿಡದಲ್ಲಿ ಆರು ಹೂಗಳು ಇವು' ಹೀಗೆಂದು ಶ್ರೀ। ವಾಮನ ಭಟ್ಟರು 'ಮಾಲೆಯ ಪರವಾಗಿ ಮಾತಿ'ನಲ್ಲಿ ಕತೆಗಳನ್ನು ಮತ್ತು ಕತೆಗಾರರನ್ನು ಕುರಿತು ಬರೆದಿದ್ದಾರೆ. ಕತೆಗಾರರು 'ಬಿನ್ನಹ'ದಲ್ಲಿ ಸಣ್ಣ ಕತೆ, ಮತ್ತು ತಮ್ಮ ಪುಸ್ತಕದ ವಿಷಯಗಳನ್ನು ಹೇಳಿರುವರು.

ಇಲ್ಲಿನ ಕತೆಗಳೆಲ್ಲವೂ ಪ್ರೇಮ ಜೀವಿಗಳ ಕತೆಗಳು; ಯುವಕ ಯುವತಿಯರ ಜೀವನ ಭಾವನೆಗಳ ಮಥನವನ್ನು ಕತೆಗಾರರು ಇಲ್ಲಿ ಮಾಡಿದ್ದಾರೆ. ಬಾಲ್ಯದ ಬಾಲಕ ಬಾಲಕಿಯರ ಒಡನಾಟ, ಮುಂದೆ, ಅವರ ಹೃದಯದಲ್ಲಿ ಪ್ರೇಮರಸವು ತುಂಬಿದಾಗ ಅದರಿಂದಾಗುವ ಮಾಟಗಾರಿಕೆ ಇದು 'ನೆರೆಮನೆಯ ಹುಡುಗಿ'ಯಲ್ಲಿ ಕಾಣಬಹುದು. ಪುರುಷನು ನೀರಸನಾಗಿ ವರ್ತಿಸುವುದಿದ್ದರೂ, ತಾನು ಮೆಚ್ಚಿದವನ ಮೇಲೆ ಸ್ತ್ರೀ ಹೃದಯವು ಎಷ್ಟು ಪ್ರೇಮಪೂರ್ಣವಾಗಿರುತ್ತದೆಯೆಂಬುದು 'ಒಲುಮೆಯ ಚಿಲುಮೆ'ಯಲ್ಲಿ ಹೊರಬಿದ್ದಿದೆ. 'ಚಿತ್ರಗಾರನ ಹೃದಯದಲ್ಲಿ ಆತನ ಜೀವನದ ಭಾವನೆಗಳು ಬೆಳೆದು ಫಲಿಸುವುದೇ ಕಲೆಯ ಪರಿಪೂರ್ಣತೆಗೆ ನಿದಾನವೆಂಬುದನ್ನು 'ವಿಲುಪ್ತ ವಸ್ತು'ವು ತಿಳಿಸುವುದು. 'ವಿಲುಪ್ತ ವಸ್ತು'ವು ಈ ಸಂಗ್ರಹದಲ್ಲಿರುವ ಒಂದು ಉತ್ತಮ ಕತೆಯಾಗಿದೆ. 'ಮಾರ್ಗತಪ್ಪಿ ಸ್ವರ್ಗ'ವು ಒಂದು ವಿಚಿತ್ರ ರೀತಿಯ ಪ್ರೇಮ ಘಟನೆಯಾಗಿದೆ. ಅಲ್ಲಿ, ಮೊದಲು ಮೆಚ್ಚದ ಹುಡುಗಿಯೇ, ಕೊನೆಗೆ ಆತನ ಹೃದಯಕ್ಕೊಪ್ಪುವ ರಾಣಿಯಾಗುತ್ತಾಳೆ! ಜೀವನದಲ್ಲಿ ಈ ತರದ ಘಟನೆಗಳು ಅಸಂಭವವೆನಲಾಗುವುದಿಲ್ಲ. 'ಪ್ರಣಯದಲ್ಲಿ ಪ್ರಳಯ' ಒಂದು ವಿಷಾದ ಘಟನೆ. ಕುರುಡ ಗಂಡನೊಡನಿರಲು ಕೈಹಿಡಿದಾಕೆಗೆ ಮನವೊಪ್ಪುವುದಿಲ್ಲ. ಆಕೆ ವಿದ್ಯಾವ್ಯಾಸಂಗದಲ್ಲಿಯೇ ನಿರತಳಿದ್ದಳು. ಆತನು ಸಂಗೀತದಲ್ಲಿ ತಲ್ಲೀನನಾಗುವನು. ಆತನ ಜೀವನ ಸಂಗೀತವು ಒಮ್ಮೆಗೇ ನಿಂತು ಹೋಗುವುದು; ಆಕೆ ಆತ್ಮಹತ್ಯ ಮಾಡಿಕೊಳ್ಳುವಳು. 'ಅಮೃತದಲ್ಲಿ ವಿಷ' ಕೊನೆಯ ಕತೆ. ತಿರುಗಿ ಮದುವೆಯಾಗಬೇಕೆಂಬ ವಿಚಾರವು ಹಿಂದಿನ ಪತ್ನಿಯ ವಿಷಯದಲ್ಲಿ ತಾನು ಗೈದ ಅಪರಾಧದ ಪಶ್ಚಾತ್ತಾಪದಿಂದ ಕೊನೆಗೊಳ್ಳುತ್ತದೆ.

ಯುವಕ ಯುವತಿಯರ ಹೃದಯಭಾವನೆಗಳನ್ನು ಒಡಮೂಡಿಸಿ ಈ ಕತೆಗಳನ್ನು ಕತೆಗಾರರು ಕಟ್ಟಿದ್ದಾರೆ. ಒಟ್ಟಿನಿಂದ ಕಥನ ಶೈಲಿ ಚೆನ್ನಾಗಿದೆ. ಕೆಲವು ಕತೆಗಳಲ್ಲಿ ಮಾತ್ರ, ಕತೆಗಾರರು 'ಬಿನ್ನಹ'ದಲ್ಲಿ ಸಮಾಧಾನ ಕೊಟ್ಟಿದ್ದರೂ, ಶೈಲಿ ಕೃತ್ರಿಮತೆಗೆ ಇಳಿದಿದೆ. ಕನ್ನಡ ಸಾಹಿತ್ಯದಲ್ಲಿ ಇಲ್ಲಿನ ಕೆಲವು ಕತೆಗಳಾದರೂ ಯೋಗ್ಯ ಸ್ಥಾನಪಡೆಯುವವೆಂದು ಹೇಳಬಹುದಾಗಿದೆ.

ಎಲ್ಲದಕ್ಕಿಂತಲೂ ವಿಶೇಷವಾಗಿ, ಪುಸ್ತಕದ ಮುದ್ರಣ, ಹೊರಮೈಗಳು ಬಹಳ ಅಂದವಾಗಿವೆ; ಮೋಹಕವಾಗಿವೆ. ತ್ರಿವರ್ಣಗಳಿಂದ ಕೂಡಿದ ಚಿತ್ರವುಳ್ಳ ಮುಚ್ಚು ಹೊದಿಕೆಯುಂಟು; ಕತೆಗಳಿಗೆ ಸಂಬಂಧಿಸಿ ಬೇರೆ ನಾಲ್ಕು ಚಿತ್ರಗಳನ್ನು ಕೊಡಲಾಗಿದೆ. ಕಲಾವಿದರಾದ ಮಂಗಳೂರಿನ ಶ್ರೀ। ಜಿ. ಕೆ. ಆರ್ಥರರು ಚಲೋ ಚಿತ್ರಗಳಿಂದ ಈ ಪುಸ್ತಕದ ಅಂದವನ್ನು ಹೆಚ್ಚಿಸಿದ್ದಾರೆ. ಪುಸ್ತಕವು 'ಎಂ. ಎನ್. ಕಾಮತರ ನೆನಪಿಗೆ' ಅರ್ಪಿತವಾಗಿದೆ. 'ಮಿತ್ರಮಂಡಳಿ'ಯ ಈ ಸಾಹಿತ್ಯಸೇವಾ ಸಾಹಸವು ಪ್ರಶಂಸನೀಯವಾಗಿದೆ.

— ಕಯ್ಯಾರ

*ಬರೆದವರು: ಎಸ್. ಪಿ. ಭಟ್ಟ, ಮಿತ್ರಮಂಡಳಿ, ಅಖಿಲಜೀವ ಗ್ರಂಥಮಾಲೆಯ ೧ನೆಯ ಕುಸುಮ. ಕ್ರೌನ್ ೧/೮ ಆಕಾರ ೧+೧೧ ಪುಟಗಳು. ಬೆಲೆ ಹತ್ತು ಆಣೆ.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮೊದಲಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು

ನೋಟೀಸು

ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ಹೆಸರು ಕಾಣ್ಸಿದ ಬೇಂಕಿನ ಪಾಲುಗಾರರು ಮೃತಪಟ್ಟಿರುವರಾಗಿ ತಿಳಿದುಬಂದಿರುತ್ತದೆ. ಹಾಗೆ ಮೃತಪಟ್ಟವರ ನ್ಯಾಯವಾದ ವಾರಿಸುದಾರರು ಬೇಕಾದ ರುಜುವಾತುಗಳನ್ನು ಬೇಂಕಿಗೆ ಹಾಜರುಪಡಿಸಿ ತಮ್ಮ ಹಕ್ಕುಸ್ಥಾಪನೆ ಮಾಡಿ, ಸದ್ರಿ ಬೇಂಕಿನ ಪಾಲುಗಳಲ್ಲಿ ಬಾಕಿ ಇರುವ ಚಂದಾಹಣವನ್ನು ತಾರೀಕು ೩೧—೧೦—೧೯೪೧ರೊಳಗೆ ಬೇಂಕಿಗೆ ಪಾವತಿಮಾಡದಿದ್ದಲ್ಲಿ ಬೇಂಕಿನ ನಿಬಂಧನೆಗಳಿಗನುಸಾರವಾಗಿ ಬೇಂಕಿನವರು ಸದ್ರಿ ಪಾಲುಗಳನ್ನು ಮುಟ್ಟುಗೋಲು ಮಾಡುವರು.

ಜಂಜ್ರಿ ನಂಬ್ರ	ಮೃತಪಟ್ಟ ಪಾಲುಗಾರರ ಹೆಸರು ವ ವಿಳಾಸ
1.	ಎ. ಐತಪ್ಪ, ಉಗ್ಗಪ್ಪನ ಮಗ, ಬೀಡಿ ಮರ್ಚೆಂಟ್, ಮಾರ್ಕೆಟ್ ರಸ್ತೆ ಮಂಗಳೂರು.
2.	ಡಿ. ಲಕ್ಷ್ಮಣ, ಬಿ. ಕೇಶನ ಮಗ, ವಾಚ್ ರಿಪೇರರ್, ರಥಬೀದಿ ಮಂಗಳೂರು.
3.	ಮಟ್ಟಿ ಪುಂಡಲೀಕ ರಾಮ ಪ್ರಭು, ವ್ಯಾಪಾರಿ, ಗೋಳಿಕಟ್ಟೆ ಬಜಾರು ಮಂಗಳೂರು.
4.	ಥಿಯೊದೋರ್ ಅಂಚಸ್, ಡಿ. ಅಂಚಸ್‌ರ ಮಗ, ಕ್ಲಾರ್ಕ್, ಪೋಸ್ಟ್ ಆಫೀಸು.
5.	ಜಿ. ಎಂ. ಡಿಸೋಜ, ಎ. ಸಿ. ಡಿಸೋಜರ ಮಗ, ಹಂಚು ಕಾರ್ಖಾನೆ ಮಾಲಿಕರು ಮಂಗಳೂರು.
6.	ಪಿ. ಆರ್. ಯೋಗ್ಯಸ್ವಾಮಿ ಅಯ್ಯರ್, ರಾಮಸ್ವಾಮಿ ಶಾಸ್ತ್ರಿಯವರ ಮಗ, ಬೆಂಗಾಲ್ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ಕಂ. ಲಿ., ಇದರ ಏಜಂಟ್, ಕಲ್ಕತ್ತಾ.
7.	ದೇವಿ ಯಾನೆ ಲಕ್ಷ್ಮಿ ಅಮ್ಮ, ಕೆ. ವಾಸುದೇವ ಕಂಪ್ತಿಯರ ಮಗಳು, ಹೊಯ್ಗೆ ಬಜಾರು ಮಂಗಳೂರು
8.	ಕೋಟೆಕಾರ್ ವಾಸುದೇವ ಕಂಪ್ತಿ, ಕೋಟೆಕಾರ್ ಸುಬ್ರಾಯರ ಮಗ, ಏಜಂಟ್ ಕೆನರಾ ಬೇಂಕಿಂಗ್ ಕೊರ್ಪೊರೇಷನ್ ಲಿಮಿಟೆಡ್.
9.	ಗಂಗೊಳ್ಳಿ ದೇವಣ್ಣ ಶೇಟ್, ಜಿ. ನಾಗಪ್ಪ ಶೇಟ್ರ ಮಗ, ಸರಾಫ್, ರಥಬೀದಿ ಮಂಗಳೂರು
10.	ಶಿಲಾನದಿ ಮಂಜುನಾಥ ಕೃಷ್ಣ ನಾಯಕ್, ಗದ್ದೆಕೇರಿ ಹೊಸ ರಸ್ತೆ ಮಂಗಳೂರು.
11.	ಟಿ. ಕೃಷ್ಣರಾಮ ಪೈ, ಟಿ. ನಾಗಪ್ಪ ಪೈಗಳ ಮಗ, ಬ್ರಹ್ಮಾವರ
12.	ಟಿ. ರಂಗ ಪೈ, ಟಿ. ವಾಸುದೇವ ಪೈಗಳ ಮಗ, ಬ್ರಹ್ಮಾವರ.
13.	ಮೊಗರ್ನಾಡು ನಾರಾಯಣ ಭಟ್, ಮೊಗರ್ನಾಡು ಗ್ರಾಮ, ಪಾಣೆಮಂಗಳೂರು.

(BY ORDER)

Office of the Bank, Mangalore 10-7-'41. M. S. RAO,

ಮಧ್ಯಪೂರ್ವದ ಯುದ್ಧ ಪರಿಸ್ಥಿತಿ

ಜನರಲ್ ವೇವೆಲ್ಲನ ಸಿಂಹಾವಲೋಕನ

ನಾಜಿಗಳ ಮುನ್ನಡೆಯನ್ನು ತಡೆವ ಸಿದ್ಧತೆ

ಮಧ್ಯಪೂರ್ವದ ಯುದ್ಧ ಪರಿಸ್ಥಿತಿಯಲ್ಲಿ ಅನಿರೀಕ್ಷಿತ ಶೀಘ್ರ ಬದಲಾವಣೆಗಳಾದುದರಿಂದ ಅಲ್ಲಿ ಸರ್ವ ಸೇನಾಪತಿಯಾಗಿದ್ದ ಜನರಲ್ ವೇವೆಲ್ಲರನ್ನು ಬ್ರಿಟಿಷ ಸರಕಾರವು ಭಾರತದ ಸರ್ವ ಸೇನಾಧಿಪತಿಗಳನ್ನಾಗಿ ಇಲ್ಲಿಗೆ ವರ್ಗಾಯಿಸಿದೆ. ನಾಝಿಗಳು ಪೂರ್ವಕ್ಕೆ ಕಕೇಸಸದತನಕ ಮುಂದೊತ್ತಿ ಬರುವದಾದರೆ, ಅಲ್ಲಿಂದ ಬ್ರಿಟಿಷರ ಯುದ್ಧ ವ್ಯೂಹಕ್ಕೆ ಭಂಗಬರುವುದು. ಮಾತ್ರವಲ್ಲದೆ, ಯುದ್ಧವು ಭಾರತದ ತನಕವೂ ಸುಲಭದಲ್ಲಿ ಹರಡಿಕೊಳ್ಳಬಹುದು. ಆದ್ದರಿಂದಲೇ ಹೆಚ್ಚಿನ ಅನುಭವಿಯಾದ ವೇವೆಲ್ಲನನ್ನು ಬ್ರಿಟಿಷ ಸರಕಾರವು ಈ ಕಡೆಗೆ ಕಳುಹಿಸಿಕೊಟ್ಟದ್ದಾಗಿದೆ.

ವೇವೆಲ್ಲನ ಪರಿಚಯ

ಭಾರತದ ಹೊಸ ಸರ್ವಸೇನಾಧಿಪತಿಗಳಾದ ಇವರ ಸಂಪೂರ್ಣ ಹೆಸರು ಸರ್ ಆರ್ಚಿಬಾಲ್ಡ ವೇವೆಲ್ಲನೆಂದು ಇರುತ್ತದೆ. ಉತ್ತರ ಆಫ್ರಿಕದಲ್ಲಿ ಇಟಾಲಿಯನರ ಪತನವಾದ ಬಳಿಕ ಜರ್ಮನ ಸೇನಾಧಿಪತಿಯಾದ ಜನರಲ್ ಕೀಟಲನು "ಬ್ರಿಟಿಷರಲ್ಲಿ ವೇವೆಲ್ಲನು ಅತ್ಯುತ್ತಮ ಸೇನಾಧಿಪತಿ" ಎಂದು ಅವನನ್ನು ಶ್ಲಾಘಿಸಿದ್ದಾನೆ. ವೇವೆಲ್ಲನು ಉಗ್ರ ಸ್ವಭಾವದವನಲ್ಲ, ಅವನು ಸಿಟ್ಟಿಗೆ ಬರುವುದು ಕಡಿಮೆ. ಮಿತ ಭಾಷಿಯಾಗಿರುತ್ತಾನೆ. ಮಿಲಿಟರಿ ವಿಷಯಗಳಲ್ಲಿ ಮಾತ್ರವಲ್ಲ, ಸಾಹಿತ್ಯ ವಿಷಯಗಳಲ್ಲಿಯೂ ಬಹಳ ಅನುಭವಿ. ಶೇಕ್ಸಪಿಯರ, ಬ್ರೌನಿಂಗ ಮತ್ತು ವುಡ್ ಹೌಸ ಮಹಾಕವಿಗಳು ಅವರ ಮೆಚ್ಚುಗೆಯಾಗಿದ್ದಾರೆ. ಎನ್ ಸ್ಯಾಕ್ಲೋಪೇಡಿಯಾ ಬ್ರಿಟಾನಿಕಾದಲ್ಲಿ ವೇವೆಲ್ಲನು ಹನ್ನೆರಡು ಉದ್ದಾಮ ಲೇಖನಗಳನ್ನು ಬರೆದಿರುವನು. ಅವನು ರಶ್ಯಕ್ಕೆ ಆರು ಬಾರಿ ಹೋಗಿ ಬಂದಿದ್ದಾನೆ. ಮತ್ತು ರಶ್ಯ ಭಾಷೆಯನ್ನು ಬಹುಚೆನ್ನಾಗಿ ಆಡುವನು. ಕಳೆದ ಮಹಾ ಯುದ್ಧದಲ್ಲಿ ಜನರಲ್ ವೆಲ್ಲಿಂಗ್ಟನಿಯರ ಕೈಕೆಳಗೆ ಪೆಲೆಸ್ಟೀನಿನಲ್ಲಿ ಹೋರಾಟಕ್ಕೆ ಹೋಗುವ ಮೊದಲು ಯಾಪ್ರೆಸಿನಲ್ಲಿ ಯುದ್ಧ ಮಾಡುತ್ತಾ ತನ್ನ ಎಡ ಕಣ್ಣನ್ನು ಕಳಕೊಂಡಿದ್ದನು. ವೇವೆಲ್ಲನಿಗೆ ಗೋಲ್ಫ ಆಡುವುದು ಮತ್ತು ಈಜುವುದು ಬಹಳ ಸಂತೋಷವನ್ನು ಕೊಡುತ್ತದೆ. ಅವರು ಪ್ರತಿ ದಿನ ಮುಂಜಾನೆ ಈಜುತ್ತಾರೆ.

ಸಿಂಹಾವಲೋಕನ

ಭಾರತದ ಸರ್ವ ಸೇನಾಧಿಪತಿಯಾಗಿ ಇಲ್ಲಿಗೆ ಹೊರಟ ಸಮಯ ಜನರಲ್ ವೇವೆಲ್ಲನು ಮಧ್ಯ ಪೂರ್ವ ಯುದ್ಧ ಪರಿಸ್ಥಿತಿಯ ಸಿಂಹಾವಲೋಕನ ಮಾಡಿ ಇದ್ದುದನ್ನು ಮರೆಮಾಜದೆ ಎಲ್ಲವನ್ನೂ ಹೇಳಿದ್ದಾನೆ. ಬ್ರಿಟಿಷರ ಯುದ್ಧದ ದಾರಿಯು ಸುಗಮವೂ ಸುಲಭವೂ ಆಗಿದೆ ಎಂದು ಅವನು ಹೇಳುವುದಿಲ್ಲ. ಅಥವಾ ತಾನು ಒಬ್ಬ ಪವಾಡ ಪುರುಷನಾಗಿದ್ದೇನೆಂದೂ ಅವನು ತಿಳಿಸುವುದಿಲ್ಲ. ಆದರೂ ಕೂಡಾ ಜನರಲ್ ವೇವೆಲ್ಲನು ಉತ್ತರ ಆಫ್ರಿಕದ ರಣಕ್ಷೇತ್ರದಲ್ಲಿ ಅದ್ಭುತ ಸಾಹಸವನ್ನು ತೋರಿಸಿದ್ದಾನೆ. ಅಲ್ಲಿ ಅವನಿಗೆ ಶಸ್ತ್ರಾಸ್ತ್ರಗಳ ಮತ್ತು ಸೈನಿಕ ಬಲದ ಸಹಾಯವು ಬೇಕಾದಷ್ಟು ದೊರೆಯುವ ಅನುಕೂಲವಿದ್ದಿರಲಿಲ್ಲ. ಆದರೂ ಕೂಡ ಅವನು ಇದ್ದುದರಲ್ಲಿಯೇ ಇಟಾಲಿಯನ್ ಸಾಮ್ರಾಜ್ಯ ದರ್ಪದ ಹುಟ್ಟಡಗಿಸಿಬಿಟ್ಟನು. ಈಗ ಅಬಿಸೀನಿಯು ಇಟಾಲಿಯಿಂದ ಸಂಪೂರ್ಣ ಸ್ವಾತಂತ್ರ್ಯವಾದ ಹಾಗೆಯೇ ಸರಿ.

ಈಜಿಪ್ತದ ಮೇಲೆ ಗಂಡಾಂತರ

ಆದರೂ ಈಜಿಪ್ತ ಮತ್ತು ಸುಯೇಜ ಕಾಲುವೆಯ ಮೇಲೆ ಶತ್ರು ದಾಳಿಯ ಭಯವು ಸಂಪೂರ್ಣ ದೂರವಾಗಿಲ್ಲ. ಅವೆರಡರ ರಕ್ಷಣೆಯ ಬಗ್ಗೆ ಬ್ರಿಟಿಷ ಸೇನಾಧಿಕಾರಿಗಳು ಬಹುದೂರ ಮತ್ತು ಬಹು ಸೂಕ್ಷ್ಮವಾದ ಆಲೋಚನೆಗಳನ್ನು ಮಾಡಬೇಕಾಗಿದೆ. ಸಿರಿಯದಲ್ಲಿ ಬ್ರಿಟಿಷರಿಗೆ ಸಂಪೂರ್ಣ ವಿಜಯವಾಗುವುದೆಂದೂ, ಇರಾಕಿನ ಬಂಡಾಯವನ್ನು ನಿಲ್ಲಿಸಿರುವುದರಿಂದ ಆ ಕಡೆಯಿಂದ ಮೊದಲಿನ ಭಯಾತುರಗಳು ಈಗಿಲ್ಲವೆಂದೂ ವೇವೆಲ್ಲನೂ ಹೇಳಿರುವನು. ಪಶ್ಚಿಮದ ಮರಳು ಕಾಡಿನಲ್ಲಿ ಕೂಡ ಶತ್ರುಗಳ ಪರಾಭವ ಖಂಡಿತವಾಗಿದೆ. ಈ ಎಲ್ಲ ಕಾರಣಗಳಿಂದ ಪಾರಸೀಕದಲ್ಲಿ ಮತ್ತು ಬಸ್ರದ ಮೇಲಿನ ಗಂಡಾಂತರಗಳು ಸದ್ಯಕ್ಕೆ ದೂರವಾದ ಹಾಗಾದುವು.

ರಶ್ಯಾ ಜರ್ಮನ ಯುದ್ಧ

ಈ ಮಧ್ಯೆ ರಶ್ಯದ ಮೇಲೆ ಯುದ್ಧವನ್ನು ಸಾರಿ ನಾಝಿಗಳು ಅದರ ಮೇಲೆ ಯುದ್ಧಕ್ಕೆ ಹೋದುದು ಬ್ರಿಟಿಷರಿಗೆ ಬಹಳ ಅನುಕೂಲವಾಯಿತು. ಅವರಿಗೆ ಸಂದಿಗ್ಧದಲ್ಲಿ ಉಸಿರಾಡುವಷ್ಟು ವಿರಾಮ ದೊರೆಯಿತು. ಆದರೆ ಜರ್ಮನರು ರಶ್ಯದಲ್ಲಿ ಕಕೇಸಸ ಪರ್ವತ ಮಾಲೆಯ ತನಕ ಮುಂದೊತ್ತಿ ಬರುವರಾದರೆ, ಮತ್ತೆ ನಾಝಿಗಳು ಮಧ್ಯ ಪೂರ್ವದ ಬ್ರಿಟಿಷ ಸೇನೆಗಳ ಮೇಲೆ ಬೀಳುವ ಭಯವಿದೆ. ಆದರೆ ಹೀಗೆ ನಾಝಿಗಳು ಮುಂದೊತ್ತಿ ಬರುವುದು ಬಹಳ ಕಠಿನ ಕೆಲಸವಾಗಿದೆ. ಆದರೂ ಇದಕ್ಕೆ ಮಿತ್ರಪಕ್ಷದವರು ಈಗಿನಿಂದಲೇ ಅವರನ್ನು ಎದುರಿಸುವ ಎಲ್ಲ ಸಿದ್ಧತೆ ವ್ಯವಸ್ಥೆಗಳನ್ನು ಮಾಡಬೇಕಾಗಿದೆ.



ಸಾವಿರಾರು ಮಂದಿ ಮಲಬದ್ಧತೆಯಿಂದ ನರಳುತ್ತಿದ್ದಾರೆ. ಅಜೀರ್ಣ ಅಗ್ನಿಮಾಂದ್ಯಗಳು ಉಂಟಾಗುತ್ತವೆ. ಅವರ ಕೆಲಸವು ಚೆನ್ನಾಗುವುದಿಲ್ಲ, ಅವರಿಗೆ ನೌಕರಿ ಉಳಿಯುವುದೇ ಕಷ್ಟವಾಗುತ್ತದೆ. ಅವರ ಸುಖ ಜೀವನವು ಹಾಳಾಗುತ್ತದೆ. ಅವರ ಈ ಸಂಕಷ್ಟ ಅವರ ಶರೀರದೊಳಗೆ ಇರುವ ಕೆಟ್ಟ ವಸ್ತುಗಳಿಂದಲೇ ಆಗಿದೆ. ಈ ವಿಷಗಳನ್ನು ತೊಳೆದುಬಿಡಿರಿ. ಹಾಗೆ ಮಾಡಿ ಬುದ್ಧಿಯನ್ನು ಮತ್ತು ಶರೀರವನ್ನು ತೀಕ್ಷ್ಣಗೊಳಿಸಿರಿ. ತಂಪಾದ, ಹಿತವಾದ ಎಂಡ್ರೂಸ್ ಲಿವರ್ ಸಾಲ್ಟನು ದಿನನಿತ್ಯ ಒಂದು ಗ್ಲಾಸು ತೆಗೆದುಕೊಳ್ಳುವುದರಿಂದ ನಿಮ್ಮ ಉದರವು ಕ್ರಮವಾಗಿ ಶುಚಿಯಾಗಿ ಇರುತ್ತದೆ. ಅಂತರಂಗ ನೈರ್ಮಲ್ಯವುಂಟಾಗುತ್ತದೆ. ಹೊಟ್ಟೆಯು ಅವ್ಯವಸ್ಥೆಯನ್ನು ನೀಗುತ್ತದೆ. ಇಡೀ ಶರೀರವು ತಿರುಗಿ ಶಕ್ತಿ ಚೈತನ್ಯಗಳಿಂದ ಕೂಡುತ್ತದೆ.

ದೇಹದೊಳಗಿನ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಕುಡಿಯಿರಿ.

ANDREWS LIVER SALT



ಆರೋಗ್ಯಕರ ಪಾನೀಯ—
ಉತ್ತಮವಾದ ಪಾನೀಯ—
ನೈರ್ಮಲ್ಯ—ತಂಪು—ಹಿತ—ಶಕ್ತಿ
ದಾಯಕವಿದು.

ಚಿಕ್ಕ ಸೈಜಿಗೆ ಆಣೆ 11
ದೊಡ್ಡ ಸೈಜಿಗೆ ರೂ. 1-4-0

67

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್, ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ. 9%   ರೂ. 26ರಿಂದ 100ರ ವರೆಗೆ ಸೇ. 8%
ರೂ. 101ರಿಂದ 500ರ ವರೆಗೆ ಸೇ. 7%   ರೂ. 501 ಮೇಲ್ಪಟ್ಟ ಮೊಬಲಗಿಗೆ 6%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ
ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ
ನಿರಖು ಠೇವಣಾತಿ—3 ತಿಂಗಳಿಗೆ—3%   ನಿರಖು ಠೇವಣಾತಿ—6 ತಿಂಗಳಿಗೆ—3½%
ನಿರಖು ಠೇವಣಾತಿ—12 ತಿಂಗಳಿಗೆ—4%

(Sd) **B. Narayana Shetty,**
Agent at Kankunady.

ತಪ್ಪು ಯಾರದು?

[೩ನೆಯ ಪುಟದಿಂದ ಮುಂದುವರಿದುದು]

ಕೆಂಡಿದ್ದೆ. ಆದರೆ ನೀವು ನನ್ನ ತುಂಬಾ ಬಳಲಿದ್ದಿರಿ' ಎಂದಳು.

ಮಲಗಿದ್ದ ವ್ಯಕ್ತಿಯು 'ತಾಯಿ, ನಾನು ಪಾಪಿ. ನೀವು ಮಹಾತ್ಮರು. ನನ್ನ ಈ ಪಾಪಿಯ ಕತೆ ಬೇಡ.'

'ಅಮ್ಮಾ ಅದಾಗದು. ಸ್ವಲ್ಪವಾದರೂ ತಿಳಿಸಿ' ದಾದಿಯು ಪುನಃ ಹೇಳಿದಳು.

'ನನ್ನೂರು ಬೊಂಬಾಯಿ. ತಾಯಿ, ನಾನು ನಿರ್ಭಾಗ್ಯೆ. ನನ್ನ ಮೇಲೆ ತುಂಬಾ ಆರೋಪಣೆಗಳು ಬಂದುವು. ನಿಜವಾಗಿ ನಾನದಕ್ಕೆ ಭಾಗಿಯಾಗಿದ್ದೆ. ತಾಯಿ ತಂದೆಗಳಿಗೆ ತಿಳಿಸದೆ ನಾನು ನನ್ನ ಭಾಗ್ಯದೇವತೆಯೊಬ್ಬಳಲ್ಲಿ ಮನವನ್ನರ್ಪಿಸಿದ್ದೆ. ನಾವು ಸುಖದಲ್ಲಿದ್ದೆವು. ಮುಂದೆ ನಾವು ದಂಪತಿಗಳಾಗಿ ಬಾಳಬೇಕೆಂದಿದ್ದೆವು. ಆದರೆ ತಾಯಿ, ಹೇಳಲು ನಾಚಿಕೆಯಾಗುತ್ತಿದೆ. ನಾನು ಪಾಪಿಣಿ. ಆದರೂ ಹೇಳುವೆ. ನಾನು ವಿವಾಹಕ್ಕೆ ಮುಂಚೆಯೇ 'ಗರ್ಭ . . . ದ' ಕೂಗಿಬಿಟ್ಟಳು. ದಾದಿಯು ಸಮಾಧಾನಪಡಿಸಿದಳು. ತಾಯಿ, ಆ ವಿಚಾರ ಬೇಡ. ಮುಂದೇನು?

'ತಾಯಿ, ಮುಂದೆ ನಾನು ನನ್ನ ಇದೇ ಕಿವಿಗಳಿಂದ ಘೋರವಾದ ಮಾತನ್ನು ಕೇಳಿದೆ. ನನ್ನ ಭಾಗ್ಯದೇವತೆಯು ನನ್ನ ಪಾಲಿಗೆ ತೀರಾ ವಿರೋಧಿಯಾದರು. ಊರವರು ಅವರ ಕಿವಿಗೆ ಅಲ್ಲಸಲ್ಲದ ಆರೋಪಣೆಗಳನ್ನು ತುಂಬಿದರು. ನಾನು ಬಹುವಾಗಿ ಅವರನ್ನು ಬೇಡಿದೆ. ಆದರೆ ಕೊನೆಗೆ ನನ್ನನ್ನು ಅವರೂ ತಿರಸ್ಕರಿಸಿ ಬಿಟ್ಟರು. ನಿರ್ಗತಿಕಳನ್ನಾಗಿ ಮಾಡಿದರು. ಆದರೂ ಪುನಃ ಕೇಳಿದೆ. ಅಯ್ಯೊ ನಾನು ಅಭಾಗ್ಯೆಯಾದೆ. ಬಾರಿ ಬಾರಿ ಅತ್ತು ಕೇಳಿದೆ. ಸಹಿಸಲಾರದ ಅಪಮಾನ. ಮುಂದೆ ನನ್ನ ಎದುರಿಗೆ ನಿಂತಿರುವ ಭೀಕರಕಾಲಧರ್ಮವನ್ನು ನೆನೆದೆ. ಆದರೆ ತಾಯಿ, ನನ್ನನ್ನು ಈ ಸ್ಥಿತಿಗೆ ತಂದಿದ್ದರೂ, ಆ ನನ್ನ ಭಾಗ್ಯದೇವತೆಯು ಮಾತ್ರ ನಿಷ್ಕಲ್ಮಶ ಹೃದಯರು. ಆದರೆ ಊರವರ ಮಾತಿಗೆ ಬಲಿಬಿದ್ದರು. ಈಗಲೂ ಅವರನ್ನು ನೆನಸಿದರೆ ಒಮ್ಮೆ ಆಶ್ವಾಸಬರುತ್ತಿದೆ. ತಾಯಿ, ಮುಂದೆ ನಾನು ಸಾಯಬಯಸಿದೆ. ಅಪಮಾನವಾದರೂ ಚಿಂತೆಯಿಲ್ಲ 'ಭ್ರೂಣ' ಹತ್ಯೆ ಉಚಿತವಲ್ಲವೆಂದರಿತೆ. ಊರು ಬಿಟ್ಟು ತೆರಳಬಯಸಿದೆ. ದೈವಯೋಗದಿಂದ ಆಗಲೇ ನನಗೆ ಬಹಿಷ್ಕಾರವೂ ಬಂತು. ಮುಂದೆ ತೆರಳಿಬಿಟ್ಟೆ. ಬರುವಾಗ ಭಾಗ್ಯದೇವತೆಯ ಬಳಿ ಕಣ್ಣೀರ ಧಾರೆಯನ್ನೇ ಸುರಿಸಿದೆ. ಬೇಡಿದೆ. ಆದರೂ, ಆ ಹೃದಯ ಕರಗಲಿಲ್ಲ. ದಾರಿಗಾಣದೆ ಹೊರಟೆ. ಮುಂದೆ ಒಂದೆರಡು ದಿನದಲ್ಲಿ ಇಲ್ಲಿಗೆ ಬಂದೆ. ದೈವಯೋಗದಿಂದ ಪೇಟೆಯಲ್ಲಿ ಬಸ್ಸಿನ ಅಡಿಗೆಬಿದ್ದೆ. ಅಲ್ಲಿಯೂ ಈ ಪಾಪಿ ಸಾಯಲಿಲ್ಲ. ಬಲವಾಗಿ ಅತ್ತುಬಿಟ್ಟಳು. ನರ್ಸಳ ಹೃದಯವು ಕರಗಿತು. 'ತಾಯಿ ನಿಮ್ಮನ್ನು ವಂಚಿಸಿದವನನ್ನ ಇನ್ನೂ ನೀವು ಭಾಗ್ಯದೇವತೆಯೆಂದನ್ನುವಿರಾ?'

'ತಾಯಿ, ಹಾಗೆನ್ನಬೇಡಿ. ನಾನು ಮರೆಯಲಾರೆ. ನನ್ನ ಭಾಗ್ಯದೇವತೆ, ಇಂದಿಗೂ, ಮುಂದಿಗೂ, ಎಂದೆಂದಿಗೂ ಅವರೇ ಆ ನನ್ನ ಹೃದಯದೇವತೆಯೆ! ಅಯ್ಯೋ ತಾಳಲಾರೆ.'

★

ಮಾಧವನು ಕೇಳುತ್ತಿದ್ದ. ಒಳಗಿನಿಂದ ಹೊರಟು ಬರುತ್ತಿರುವ ಪ್ರತಿಯೊಂದು ಮಾತೂ ಶೂಲದಂತೆ ಹೃದಯವನ್ನು ಇರಿಯುತ್ತಿದ್ದುವು. ಮಾಧವನು ಮೇಲಕ್ಕೆದ್ದ. ಅಲ್ಲೇ ಕುಳಿತ. ಪುನಃ ಒಳಗಿನಿಂದ:

'ತಾಯಿ,'

'ಏಕೆ ತಾಯಿ?'

ಸ್ವಲ್ಪ ಗುಣವಿದೆಯೆ? ಮದ್ದು ತರಲೆ?

ಬೇಡ, ನಿಮಗೇಕೆ ತೊಂದರೆ?

ತಾಯಿ, ನಿಮ್ಮ ಹೆಸರೇನು ಹೇಳುವಿರಾ?

'ತಾಯಿ, ನಿರ್ಭಾಗ್ಯಳ ಹೆಸರಿನಿಂದ ಪ್ರಯೋಜನವಿಲ್ಲ. ನನಗೆ ನನ್ನ ಭಾಗ್ಯದೇವತೆಯನ್ನು ಕಾಣಬೇಕಿತ್ತು. ಆದರೆ ಅಷ್ಟಕ್ಕೆ ಭಾಗ್ಯವನ್ನು ನಾನು ಪಡೆದಿಲ್ಲ. ತಾಯಿ, ನನ್ನನ್ನು ವಿಮಲೆಯೆಂದು ಕರೆಯುತ್ತಾರೆ. ಅಯ್ಯೊ! ಸಹಿಸಲಾರದ ವೇದನೆ ತಾಯಿ.'

ಮಾಧವನು ಭ್ರಾಂತನಾದ. ಒಮ್ಮೆಲೆ ಪರ್ವತ ಕಳಚಿ ಬಿದ್ದಂತಾಯಿತು. 'ವಿಮಲೆ, ಅಯ್ಯೊ! ನನ್ನ ಭಾಗ್ಯವೆ!' ಎಂದನ್ನುತ್ತಾ ಹಾರಿ ಬಾಗಿಲಿಗೆ ಬಿದ್ದ. ಬಲವಾಗಿ ತಟ್ಟಿದ. 'ವಿಮಲೇ!' ಎಂದು ದೀರ್ಘವಾಗಿ ಕರೆದ. ಒಳಗಿನಿಂದ ದಾದಿಯು ಓಡಿಬಂದು ಬಾಗಿಲು ತೆರೆದಳು. ಮಾಧವನು ಭ್ರಾಂತನಂತೆ 'ನನ್ನ ವಿಮಲೆಯೆಲ್ಲಿ?' ಎನ್ನುತ್ತಾ ಒಳನುಗ್ಗಿದ. ದಾದಿಯು ಸಿಟ್ಟುಗೊಂಡು ಬಲವಾಗಿ ಆತನನ್ನು ನೂಕಿದಳು. ಮಾಧವನು ದೂರಕ್ಕೆ ಹಾರಿಬಿದ್ದುಬಿಟ್ಟ. ಮಾಧವನ ತಲೆಯು ಬಲವಾಗಿ ಮೆಟ್ಟುಕಲ್ಲಿಗೆ ಬಡಿಯಿತು. 'ನನ್ನ ವಿಮಲೇ. ನನ್ನ ವಿಮಲೇ . . . ವಿಮಲೇ!' ಎಂದನ್ನುತ್ತಾ ಬಿದ್ದುಬಿಟ್ಟ. ವಿಮಲೆಯು ಓಡಿಬಂದಳು. ಅವಳಲ್ಲಿ ಹೊಸ ಚೇತನ ತುಂಬಿತ್ತು. ಮಾಧವನ ಬಳಿಯಲ್ಲೇ ಬಿದ್ದಳು. 'ನನ್ನ ಭಾಗ್ಯವೇ ಅಯ್ಯೊ ದೇವಾ', ಎನ್ನುತ್ತಾ ಹೊರಳಾಡಿದಳು. ದಾದಿಯು ತನ್ನ ಅವಿಚಾರಕ್ಕೆ ನೊಂದಳು. ವಿಮಲೆಯು ಹುಚ್ಚಳಂತೆ ನಾಥಾ, ನನ್ನನ್ನು ಬಿಟ್ಟುಹೋಗುವಿಯ? ಎಂದಳು. ಮಾಧವನು ಮುಚ್ಚಿದ ಕಣ್ಣನ್ನು ತೆರೆದು, ಮೆಲ್ಲಗೆ ವಿಮಲೆಯ ಕೈಯನ್ನು ನಡುಗುವ ಕೈಗಳಿಂದ ಹಿಡಿದು ವಿಮಲಾ, ನನ್ನ ಹೃದಯವೆ, ನಾನು ಪಾಪಿ. ನಿನ್ನನ್ನು ವಂಚಿಸಿದವನು. ವಿಮಲೆ, ಕೋಪಿಸಬೇಡ. ಏನು ಮಾಡಲಿ, ವಿಧಿಯು ನನ್ನ ಪಾಲಿಗೆ ವಿರೋಧಿಯಾಯಿತು. ಕ್ಷಮಿಸು' ಎಂದನ್ನುತ್ತಾ ಅವಳ ಕೈಗಳನ್ನು ಎದೆಗೆ ಒತ್ತುತ್ತಾ ಕಣ್ಣುಮುಚ್ಚಿದ. ವಿಮಲೆಯು ಉದ್ವಿಗ್ನಳಾಗಿ ಬೊಬ್ಬಿಡುತ್ತಾ 'ನಾಥ, ನಾನು ಬರುವೆ' ಎಂದು ಮಾಧವನ ಪಾದತಳದಲ್ಲೇ ಹೊರಳಾಡಿ ಕಣ್ಣುಮುಚ್ಚಿದಳು. ಭಾಗ್ಯದೇವತೆಯ ದಿವ್ಯ ಚರಣಗಳಲ್ಲಿಯೇ ಕೊನೆ ಬಯಸಿದ ಪರಮಶಾಂತಿಯನ್ನು ವಿಮಲೆ ಪಡೆದಳು.

Paying Your Insurance PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1906 CANARA BANK LIMITED

ಈ ಅವಶ್ಯಕತೆಗಳಿಗಾಗಿ — ಮಕ್ಕಳ ವಿದ್ಯಾಭ್ಯಾಸಕ್ಕೆ ಕೂಡ — ನಿಮ್ಮ ಈಗಿನ ವರಮಾನವು ನಿಂತರೂ ನೀವು ಹಣ ಕೊಡಲೇಬೇಕು. ಆದುದರಿಂದ ಯಾವ ಹೆಚ್ಚಿಗೆ ಖರ್ಚುಗಳನ್ನು ನೀವು ಬಿಡಬಹುದೆಂಬುದನ್ನು ನೋಡಿಕೊಳ್ಳಿ, ಮತ್ತು ನಿಮ್ಮ ಸಂಪಾದನೆ ನಡೆಯುವವರೆಗೆ ಆ ಉಳಿದ ಹಣವನ್ನು ಬೇರೆ ಇಡುತ್ತ ಹೋಗಿರಿ.

ಭವಿಷ್ಯತ್ತಿಗೆ ಉಳಿಸಿರಿ — ನಿಮ್ಮ ಸುರಕ್ಷತೆಯು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿಯೇ ಇದೆ.

ರೂ. ೪|೯ ಲಾಭ ಪ್ರತಿ ೧೦ ರೂ. ಗೆ Kn.G.1. 38

ನಿಮ್ಮ ಗ್ರಹಗತಿ ಹೇಗಿದೆ?

ತಾ. 25—4—41ರಿಂದ 2—8—41ರ ವರೆಗೆ

ಮೇಷ

ನಿಮಗೆ ಹಿಡಿದ ಶನಿ ಬಿಡುವುದಿಲ್ಲ. ನೀವು ಸ್ವಭಾವತಃ ಒಳ್ಳೆಯ ಸಾಹಸಿಗಳು; ಆದರೆ ತಾಪತ್ರಯಗಳು ನಿಮ್ಮನ್ನು ಸದಾ ಬಾಧಿಸುತ್ತಿವೆ. ಮನೆಯಲ್ಲಿ ಶಾಂತಿಯಿರದು, ಆದರೆ ಹಿಡಿದ ಕೆಲಸವನ್ನು ಪೂರೈಸುವ ಖಂಡಿತ ನಿರ್ಧಾರವಿರಲಿ, ನಿಮಗೆ ಯಶಸ್ಸು ದೊರಕದೆ ಇರಲಾರದು. ತಾ. ೨೬, ೨೮, ೨೯ ಈ ದಿನಗಳು ಕಾರ್ಯಜಯ

ವೃಷಭ

ಉದ್ಯೋಗಾದಿಗಳಲ್ಲಿ ಧನಪ್ರಾಪ್ತಿಯೋಗವಿದೆ. ನಿಮಗೆ ಸ್ತ್ರೀ ಸುಖವುಂಟು ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆಯುವಿರಿ. ಈ ವಾರದಲ್ಲಿ ಯಾವುದೇ ದುಡುಕಿನ ಕೆಲಸಕ್ಕೆ ಕೈಹಾಕಬೇಡಿ ತಾ ೨೭, ೨೯ ಈ ದಿನಗಳಲ್ಲಿ ನಿಮಗೆ ಧನಲಾಭವಿದೆ. ತಾ. ೨೮, ೩೦ ಎಚ್ಚರವಿರಿ.

ಮಿಥುನ

ಬಹಳ ಕಷ್ಟಪಟ್ಟು ನೀವು ದುಡಿಯುತ್ತೀರಿ. ಆದರೆ ಸಾಕಷ್ಟು ಪ್ರತಿಫಲ ದೊರೆಯುವುದಿಲ್ಲವೆಂದು ಬೇಸರಗೊಳ್ಳಬೇಡಿ. 'ತಾಳಿದವ ಬಾಳಿಯಾನು' ಈ ವಾರ ಅಂಥ ಶುಭಗ್ರಹವು ಕೂಡಲಿದೆ ಮಿತ್ರರಿಂದ ಹೆಚ್ಚಿನ ಸಹಾಯ ದೊರಕುವುದು ಸ್ತ್ರೀಸುಖ ಚೆನ್ನಾಗಿದೆ ನಿಮ್ಮ ಇಷ್ಟಮಿತ್ರರನ್ನು ನೋಡುವ ಯೋಗವಿದೆ. ತಾ. ೨೭,೨೮, ೩೦ ಈ ದಿನಗಳಲ್ಲಿ ದ್ರವ್ಯಪ್ರಾಪ್ತಿಯಿದೆ. ವಾಹನಾದಿಗಳ ಸಂಚಾರದ ವಿಷಯ ಎಚ್ಚರವಿರಬೇಕು.

ಕರ್ಕಾಟಕ

ಈ ವಾರ ನಿಮಗೆ ಅನಿರೀಕ್ಷಿತವಾಗಿ ಧನಪ್ರಾಪ್ತಿಯಿದೆ, ಶರೀರದಲ್ಲಿ ಒಳ್ಳೆಯ ಉತ್ಸಾಹವಿರುವುದು, ದುರ್ವ್ಯಸನಗಳ ವಿಷಯ ಬಹಳ ಎಚ್ಚರವಾಗಿರಿ, ಪ್ರಯಾಣ ಮಾಡುವ ಫಲವಿದೆ, ರಾಜಕೀಯದ ನಿಮಗೆ ಗೌರವವಿದೆ, ಸ್ತ್ರೀ ವಿಷಯದಿಂದ ತೊಂದರೆ, ತಾ. ೨೯, ೩೦, ೩೧ ಈ ದಿನಗಳಲ್ಲಿ ಧನಪ್ರಾಪ್ತಿ.

ಸಿಂಹ

ವ್ಯಾಪಾರಾದಿಗಳಲ್ಲಿ ಸಾಕಷ್ಟು ಸಂಪಾದನೆಯಾಗಲಿದೆ, ಕುಟುಂಬದೊಳಗೆ ಮನಃಕ್ಲೇಶವುಂಟಾಗಲಿದೆ ಆದರೆ ಬುದ್ಧಿವಂತಿಕೆಯಿಂದ ನೀವು ಅದನ್ನು ಪರಿಹಾರ ಮಾಡಲ್ಲಿರಿ. ಉತ್ತಮ ಜನರ ಸಹವಾಸ ದೊರಕಲಿದೆ ವಾರದ ಕೊನೆಯ ದಿನಗಳಲ್ಲಿ ನಿಮಗೆ ಮನಸ್ಸಂತೋಷವಾಗಲಿದೆ ತಾ. ೩೦, ೩೧, ೧ ಈ ದಿನಗಳು ಉತ್ತಮ ಫಲ,

ಕನ್ಯಾ

ಈ ವಾರದಲ್ಲಿ ನಿಮಗೆ ಧನಪ್ರಾಪ್ತಿಯಿದೆ, ಖರ್ಚಿನ ವಿಷಯ ಗೊಂದಲಕ್ಕೊಳಗಾಗುವಿರಿ, ಸಾಲದ ಶೂಲಕ್ಕೆ ಬೀಳದಂತೆ ಎಚ್ಚರವಾಗಿರಿ, ನಿಮ್ಮ ಆಪ್ತಮಿತ್ರರಿಂಬವರೂ ನಿಮ್ಮ ಸಹಾಯಕ್ಕೆ ಒದಗುವಂತಿಲ್ಲ, ಹೆಂಡತಿ ಮಕ್ಕಳ ವಿಷಯದಲ್ಲಿ ಮನಸ್ಸಿಗೆ ಬೇಸರ ಹಚ್ಚಿಕೊಳ್ಳಬೇಡಿರಿ. ಶರೀರ ಆರೋಗ್ಯಸಾಮಾನ್ಯ ಉಳಿಯುವುದು. ತಾ. ೨೬, ೨೭, ೩೦ ಈ ದಿನಗಳು ಶುಭಫಲ.

ತುಲಾ

ಗ್ರಹಚಾರವೆಂದು ನಿರಾಶೆಗೊಳಬೇಡಿ ಬೇಗನೇ ನಿಮ್ಮ ಅನಿಷ್ಟರಾಶಿ ದಾಟಲಿದೆ, ಈ ವಾರ ನೀವು ಅಷ್ಟೊಂದು ಸಂತೋಷವುಳ್ಳವರಾಗುವುದಿಲ್ಲ, ವ್ಯಾಪಾರದಲ್ಲಿ ಧನಪ್ರಾಪ್ತಿಯುಂಟು, ಗೃಹಕಲಹ ಕಡಿಮೆ, ದೇವರಲ್ಲಿ ನಿಮಗೆ ಭಕ್ತಿಯಿರಲಿ, ಆರೋಗ್ಯದ ಕಡೆಗೆ ಗಮನವಿರಬೇಕು, ತಾ. ೨೬, ೨೮, ೩೦ ಧನಪ್ರಾಪ್ತಿಯಾಗಲಿದೆ.

ವೃಶ್ಚಿಕ

ಈ ವಾರ ನಿಮಗೆ ಮಾನಸಿಕ ತೊಂದರೆಯಿಲ್ಲ ವ್ಯಾಪಾರಾದಿಗಳಲ್ಲಿ ಧನಲಾಭ ಕಡಿಮೆ. ಆರೋಗ್ಯವು ಚೆನ್ನಾಗಿರುವುದು ಸ್ತ್ರೀ ನಿಮಿತ್ತ ಸುಖವಿದೆ. ವಾರದ ಕೊನೆಗೆ ಧನಲಾಭವಿದೆ. ತಾ. ೨೭, ೩೦ ಕಾರ್ಯಜಯ.

ಧನು

ದೈವಭಕ್ತಿಯನ್ನು ಬಿಡಬೇಡಿ, ಈ ವಾರ ವ್ಯಾಪಾರದಲ್ಲಿ ಜಯವಿದೆ, ಆಪ್ತೇಷ್ಟರಿಂದ ಲಾಭವಾಗುವುದು, ಗೃಹಕಲಹವು ಕಡಿಮೆಯಾಗುವುದು, ಪುತ್ರಕಳತ್ರಾದಿಗಳು ಅನುಕೂಲರಾಗುವರು, ದೇಹಾರೋಗ್ಯವು ಸುಧಾರಿಸಲಿದೆ, ತಾ ೨೮, ೩೦ ಈ ದಿನಗಳ ಕಾರ್ಯಸಿದ್ಧಿ

ಮಕರ

ನಿಮಗೆ ಈ ವಾರ ಹೆಚ್ಚಿನ ಪ್ರವಾಸ ಯೋಗವಿಲ್ಲ, ಶರೀರವು ಆರೋಗ್ಯದಿಂದಿರುವುದು, ಕುಟುಂಬ ಕಲಹವು ಕಡಿಮೆಯಾಗಲಿದೆ, ನೀವು ನೆನಸಿದ ಕಾರ್ಯವನ್ನು ಕೊನೆಗೊಳಿಸಲು ಅನೇಕ ವಿಘ್ನಗಳು ಉಂಟಾಗಲಿವೆ ತಾ. ೨೭, ೩೦ ಈ ದಿನಗಳಲ್ಲಿ ಧನಪ್ರಾಪ್ತಿಯಾಗಲಿದೆ.

ಕುಂಭ

ಧೈರ್ಯದಿಂದ ಹಿಡಿದ ಕೆಲಸವನ್ನು ಕೊನೆಗಾಣಿಸಿಬಿಡಿ, ದೇವರ ದಯೆಯಿಂದ ನಿಮಗೆ ಜಯವಾಗಲಿದೆ, ವ್ಯಾಪಾರದಲ್ಲಿ ಹೆಚ್ಚಿನ ಲಾಭವಿಲ್ಲದಿದ್ದರೂ ಸಂಪತ್ತಿನ ವಿಷಯದಲ್ಲಿ ಕೊರತೆಯಾಗಲಾರದು, ಸ್ತ್ರೀಸುಖ ಚೆನ್ನಾಗಿದೆ, ತಾ ೨೮, ೨೯ ಈ ದಿನಗಳಲ್ಲಿ ಜಾಗರೂಕರಾಗಿರಿ.

ಮೀನ

ನಿಮ್ಮ ಇಷ್ಟಮಿತ್ರರಿಂದ ನಿಮಗೆ ಸಹಾಯವು ದೊರಕುವುದು, ಶತ್ರುಗಳ ಬಾಧೆ ಕಡಿಮೆಯಾಗಲಿದೆ, ನೀವು ಮಾಡುವ ಕೆಲಸವು ಕೈಗೂಡುವುದು, ಗೃಹ ಕಲಹವು ನಿವಾರಣೆಯಾದೀತು, ತಾ. ೨೯, ೨೮, ೩೦ ಈ ದಿನಗಳಲ್ಲಿ ಧನಪ್ರಾಪ್ತಿಯಿದೆ.

ಕೆಲವು ಸಿದ್ಧೌಷಧಿಗಳು

ಲೇಖಕರು: ಶ್ರೀ ಎನ್. ಶ್ಯಾಮರಾಯ ನ್ಯಾಯ್ಕರು

[ಪ್ರತಿ ಊರಿನಲ್ಲಿ ತಿರುಗಾಡಿ ವಿಚಾರಿಸಿದರೆ, ಯಾವುದಾದರೂ ಒಂದು ಮನೆಯಲ್ಲಿ ಅವರ ವಂಶಪಾರಂಪರ್ಯವಾಗಿ ಕೊಡುತ್ತಾ ಬರುವ ಒಂದು ಸಿದ್ಧೌಷಧಿ ಇದ್ದೇ ಇರುತ್ತದೆ. ಸದ್ರಿ ಔಷಧಿಯನ್ನು ಆ ಒಂದು ರೋಗಕ್ಕೆ ಕೊಟ್ಟರೆ ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗುವುದು. ವೈದ್ಯರಿಂದಲೂ ಡಾಕ್ಟರರಿಂದಲೂ ಗುಣಮಾಡಲಿಕ್ಕೆ ಸಾಧ್ಯವಿಲ್ಲದ ರೋಗಗಳೂ ಅಂತಹ ಮದ್ದುಗಳಿಂದ ಗುಣವಾಗುತ್ತವೆ. ಮದ್ದಿಗೆ ಖರ್ಚು ಕಡಿಮೆ; ಕಾಡಿನಲ್ಲಿ ಸಿಕ್ಕುವ ಗಿಡಮೂಲಿಕೆಗಳು, ಅಂಥಾ ದಿವ್ಯವಾದ ಮದ್ದುಗಳು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿಯೂ ಇರುತ್ತವೆ. ಅಂತಹ ಔಷಧ ಪ್ರಯೋಗಗಳು ವೈದ್ಯ ಪುಸ್ತಕದಲ್ಲಿ ಸಿಕ್ಕುವುದಿಲ್ಲ, ಇದನ್ನು ತಿಳಿಯಾ ಮನೆಯವರು ತಮ್ಮ ಅಂತ್ಯಕಾಲದಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಒಬ್ಬನಿಗೆ ಗುಟ್ಟಾಗಿ ಕಲಿಸುವರು; ಅದು ಒಬ್ಬರಿಂದ ಒಬ್ಬರಿಗೆ ಇದೇ ರೀತಿಯಲ್ಲಿ ವಂಶಪಾರಂಪರೆಯಾಗಿ ಮುಂದರಿಯುವುದು. ಇನ್ನು ಹಲವು ಕಡೆಗಳಲ್ಲಿ ಮದ್ದನ್ನು ಕಲಿಸಿಕೊಡುವ ಮೊದಲೇ ಅದನು ತಿಳಿದಿದ್ದವರು ತೀರಿಹೋಗಿ, ಅಂಥಾ ದಿವ್ಯ ಔಷಧಿಗಳು ಮಾಯವಾಗುವವು ಸದ್ರಿ ಔಷಧಿಗಳನ್ನು ಪ್ರಚಾರಮಾಡಿದರೆ ನಮ್ಮ ಸಹೋದರ ಸಹೋದರಿಯರಿಗೆ ಬಹಳ ಸಹಾಯಮಾಡಿದಂತಾಗುವುದು ಆದ್ದರಿಂದ ಇಂಥಾ ದಿವ್ಯ ಔಷಧಿಗಳು ನಾಶವಾಗದಂತೆಯೂ ಎಲ್ಲಾ ಜನರಿಗೆ ಪ್ರಯೋಜನ ಸಿಕ್ಕುವಂತೆಯೂ ಅದನ್ನು ಪ್ರಚಾರಮಾಡಬೇಕಾಗಿ, ಅಂತಹ ಸಿದ್ಧೌಷಧಿಗಳನ್ನು ಕಲಿತಿರುವ ಜನರಲ್ಲಿ ಪ್ರಾರ್ಥಿಸುತ್ತೇನೆ ನನಗೆ ತಿಳಿದುಬಂದ ಕೆಲವು ಕೈಕಂಡ ಪ್ರಯೋಗಗಳನ್ನು (ಸಿದ್ಧೌಷಧಿಗಳನ್ನು) ಕೆಳಗೆ ಕೊಡುತ್ತಾ ಬರುತ್ತೇನೆ]

ರೋಗದ ಹೆಸರು—ಒನಾರ್ಳಿ ಮತ್ತು ವಿನಾರ್ಳಿ ಎಂಬ ಕುತ್ತಿಗೆ ರೋಗ

ಶ್ವಾಸನಾಳದ ಹತ್ತಿರ ಮಾಂಸದ ಗುಳಿಗೆ ಬಾತುಹೋಗಿ ಶ್ವಾಸನಾಳವನ್ನು ಮುಚ್ಚಿಬಿಡುವುದು ಇದು ಒಹು ಬೇಗನೆ ವೃದ್ಧಿಯಾಗಿ ಜನರು ಸತ್ತುಹೋಗುವುದುಂಟು ಇದು ರೋಗದ ಲಕ್ಷಣ

ಔಷಧಿ—ತುಳು ರಂಜೆದ ಮರ, ಸಂಸ್ಕೃತ ಬಕುಳ, ಸದ್ರಿ ಮರದ ಕೆತ್ತೆಯನ್ನು ತಂದು, ಜಜ್ಜಿ, ಕಷಾಯಮಾಡಿ, ಅದಕ್ಕೆ ಉಪ್ಪುಹಾಕಿ ಬಾಯಿಯಲ್ಲಿ ಕಷಾಯವನ್ನು ಸ್ವಲ್ಪ ಸಮಯ ಇಟ್ಟು ಬಾಯಿ ಮುಕ್ಕುಳಿಸುತ್ತಾ ಇರುವಾಗ ಸ್ವಲ್ಪ ಕಷಾಯವನ್ನು ನುಂಗಬೇಕು, ಕುತ್ತಿಗೆಗೆ ಸದ್ರಿ ಕೆತ್ತೆಯನ್ನು ತೇದು ಹಚ್ಚಬೇಕು ಕಷಾಯ ಮಾಡುವಾಗ ಕೆತ್ತೆ ಜಾಸ್ತಿಯಾದರೂ ಬಾಧಕವಿಲ್ಲ, ರೋಗವು ಜೋರಾದರೆ ನಾಲಿಗೆಯೂ ದಪ್ಪವಾಗಿ ಮಾತಾಡಲಿಕ್ಕೆ ಆಗುವದಿಲ್ಲ, ಅಂಥಾ ಸಂದರ್ಭದಲ್ಲಿ ಸಹ ಈ ಮದ್ದಿನಿಂದ ರೋಗವು ಬೇಗನೆ ಗುಣವಾಗುವುದು.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಬೊಬ್ಬೆಗಳಿರುವನೆ? ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ್ಯ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮಿ(Cuticura Ointment)ನಿಂದ ಮುದ್ದಣ, ಛಿದ್ರ, ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura TalcumPowder) ಬಹಳ ಹಿತಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರವಾಸಕ್ಕೆ) ದೊರೆಯುತ್ತದೆ.

ವಿಚಿತ್ರ ಪ್ರಪಂಚ

ಲೋಕ ಪ್ರಸಿದ್ಧನಾದ ಜ್ಯೋತಿಷಿ ಹೇಳುವ ಹಿಟ್ಲರನ ಭವಿಷ್ಯ

ಲೂಯಿಸ್ ಡಿ ವ್ಹೋಲ್ ಎಂಬವನು ಲೋಕ ಪ್ರಸಿದ್ಧರಾದ ಜ್ಯೋತಿಷಿಯಾಗಿದ್ದಾನೆ. ಅವನು ಗಗನ ಗುಪ್ತಚರ ಸಂಘ ಎಂಬ ಒಂದು ವಿಚಿತ್ರ ಪುಸ್ತಕವನ್ನು ಬರೆದು ಕೆಲವು ಕ್ಷೋಭಪೂರಿತವಾದ ಭವಿಷ್ಯಗಳನ್ನು ಹೇಳಿದ್ದಾನೆ. ಈ ಜ್ಯೋತಿಷಿ ಹಿಟ್ಲರನ ಜಾತಕದ ಸ್ಫುಟವಾಗಿ ಅವನಿಗೆ ಈ ವರ್ಷ ಜೀವದ ಅಪಾಯವಿದೆ ಎಂದಿರುವನು. ಹಿಟ್ಲರನ ಸಮೀಪದವರೇ ಅವನನ್ನು ಕೊಲ್ಲಬಹುದೆಂದು ಅವನು ಊಹಿಸಿದ್ದಾನೆ. ಹಿಟ್ಲರನು ಏಳು ವರ್ಷಗಳ ಹಿಂದೆ ತನ್ನ ಆಪ್ತನಾದ ರೋಹಮನನ್ನು ಬರೀ ಸಂದೇಹದ ಮೇಲೆ ಕೊಲೆಗಡುಕರ ಕೊಡಲಿಗೆ ಬಲಿಕೊಟ್ಟಿದ್ದನು. ಅವನ ಪ್ರೇತವೇ ಹಿಟ್ಲರನನ್ನು ಪೀಡಿಸುತ್ತಿರುವುದಂತೆ.

ಹಾವು ತಿನ್ನುವ ಕಪ್ಪೆಗಳು

ಕಪ್ಪೆಗಳನ್ನು ಹಾವುಗಳು ತಿನ್ನುತ್ತವೆಂದು ಎಲ್ಲರೂ ತಿಳಿದಿರುತ್ತಾರೆ. ಆದರೆ ಕಪ್ಪೆಗಳು ಹಾವುಗಳನ್ನು ತಿನ್ನುತ್ತವೆಂದು ಪ್ರಾಯಶಃ ಯಾರೂ ಕೇಳಿ ಅರಿತಿರಲಿಕ್ಕಿಲ್ಲ. ಮಡಗಾಸ್ಕರ ಎಂಬ ದ್ವೀಪದಲ್ಲಿ ಹಾವು, ಸರ್ಪಗಳನ್ನು ತಿನ್ನುವ ವಿಚಿತ್ರ ಕಪ್ಪೆಗಳೂ ಇವೆ. ಈ ಕಪ್ಪೆಗಳು ಆಕಾರದಲ್ಲಿ ಮಾತ್ರ ಬಹಳ ದೊಡ್ಡವಾಗಿ ಭಾರದಲ್ಲೂ ೨೦-೩೦ ರಾತಲುಗಳಷ್ಟು ಅಂದರೆ ಒಂದು ಮಣದಷ್ಟು ಇರುತ್ತವೆ. ಇವು ಸರ್ಪಗಳನ್ನು ಕೂಡ ಹಿಡಿದು ತಿನ್ನುವವು.

ಬಾವಲಿಗಳ ವಿಚಿತ್ರ ಶಕ್ತಿ

ಕಣ್ಣುಗಳನ್ನು ಮುಚ್ಚಿದ್ದರೂ ಬಾವಲಿಗಳು ನೋಡಬಲ್ಲುವೆಂದು ತಿಳಿದುಬರುತ್ತದೆ. ಈ ಬಾವಲಿಗಳ ಚರ್ಮದಿಂದ ಆದ ರೆಕ್ಕೆಗಳಲ್ಲಿ ನರಗಳ ಬಲೆ ಇದೆ. ಈ ನರಗಳ ಮೂಲಕ ಬಾವಲಿಯು ಸಮೀಪದಲ್ಲಿರುವ ಯಾವ ವಸ್ತುವನ್ನಾದರೂ ಕಣ್ಣುಗಳಿಂದ ನೋಡುವ ಹಾಗೆಯೆ ನೋಡಬಲ್ಲುದು. ಕೆಲವರು ಕೆಲವು ಬಾವಲಿಗಳಿಗೆ ಕಣ್ಣುಕಟ್ಟಿ ಬಲೆ ಕಟ್ಟಿದ ಮತ್ತು ಕಿಟಕಿ ಬಾಗಿಲು ಮುಚ್ಚಿದ ಒಂದು ಕೋಣೆಯಲ್ಲಿ ಬಿಟ್ಟರು. ಆ ಬಾವಲಿಗಳು ಬಲೆಯಲ್ಲಿ ಸಿಕ್ಕಿಕೊಳ್ಳದೆ ಬಲೆಯ ಕಣ್ಣುಗಳಿಂದ ಸುಲಭವಾಗಿ ದಾಟಿ, ಕೋಣೆಯಲ್ಲಿದ್ದ ಒಂದೇ ಬಿರುಕಿನಿಂದ ಹೊರಕ್ಕೆ ಹಾರಿ ಬಂದುವು. ಹೀಗೆ ಹಾರಿಬರುವ ಅವುಗಳ ವೇಗದಲ್ಲಿ ಕೂಡ ಹೆಚ್ಚು ಕಡಿಮೆ ಆಗಲಿಲ್ಲ. ಬಾವಲಿಗಳಿಗೆ ಶ್ರವಣಶಕ್ತಿಯು ಅತಿ ಸೂಕ್ಷ್ಮವಾಗಿರುತ್ತದಂತೆ.

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

O. S. 75/1941 R. I. A 249/1941

ತಿಮ್ಮಯ್ಯ ಭಟ್ಟ — ವಾದಿ—Petitioner.

1. ತಿಮ್ಮಯ್ಯ—ಕಾಶಿಮಠ ಶಂಭಯ್ಯನ ಮಗ ಕಸ್ಬಾನ ಗ್ರಾಮದ ಪರಕಜೆ ಕುಟುಂಬದ ಯಜಮಾನ. 2. ಆಲ್ಬರ್ಟ ಸಬೆಸ್ತಿಯಾನ್ ಡಾಸ್ಸಿಂಝ ಸಾಲ್ವದೋರ್ ಡಾಸ್ಸಿಂಝರ ಮಗ ವಿಟ್ಲ ಕಸಬಾ — ಪ್ರತಿವಾದಿರು—Respondents.

1ನೇ ಪ್ರತಿವಾದಿಯು 2ನೇ ಪ್ರತಿವಾದಿ ಹೆಸರಲ್ಲಿ ಮಾಡಿಸಿಟ್ಟ ಕ್ರಯಚೀಟು ರದ್ದುಪಡಿಸಿ ಅಂಥಾ ಪರಾಧೀನವು ವಾದಿಗೆ ಬಾಧಕವಾದದ್ದಲ್ಲವೆಂತ ಡಿಕ್ಲರೇಶನ್ ಕೊಡಿಸುವಂತೆ ದಾವಾ ಮಾಡಿ ಅದರಲ್ಲಿ 1ನೇ ಪ್ರತಿವಾದಿಯ ಎಲ್ಲಾ ಸಾಲಗಾರರ ಪರವಾಗಿ ಈ ದಾವೆಯನ್ನು ತರುವಂತೆ ಪರ್ಮಿಶನು ಬಗ್ಗೆ ಮೇಲಿನ ಅರ್ಜಿ ಕೊಟ್ಟಿರುವದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳುವದಿದ್ದರೆ ಈ ಕೋರ್ಟಿನ ಮುಂದೆ ಹಾಜರಾಗಿ ಬರಹ ಮೂಲಕ ಸ್ವತಃ ಯಾ ವಕೀಲರ ಮುಖಾಂತ್ರ ಹೇಳಿಕೊಳ್ಳಬಹುದು.

Puttur 12-7-'41 — B. Ramchandra Rao, Pleader for Plaintiff.

ವಿಜ್ಞಾನಯುಗ

ಕಾರ್ಖಾನೆಗಳಲ್ಲಿ ವ್ಯವಸಾಯ ಮಾಡಬಹುದು

ಕಚ್ಚಾ ವಸ್ತುಗಳಿಂದ ಸಿದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಿವೆಯಷ್ಟೆ! ಅಂಥ ಕೈಗಾರಿಕೆಯ ಕಾರ್ಖಾನೆಗಳಲ್ಲಿ ಅಸಿದ್ಧ ಸಾಮಗ್ರಿಗಳನ್ನು ಮಾತ್ರವಲ್ಲ ಬೇಸಾಯ ವ್ಯವಸಾಯಗಳನ್ನೂ ಮಾಡಬಹುದೆಂದು ಒಬ್ಬ ವಿಜ್ಞಾನಿಗಳು ತರ್ಕಿಸಿದ್ದಾರೆ. ಹೀಗಾದರೆ ಹೊಲಗಳಲ್ಲಿ ಮಾತ್ರವಲ್ಲ, ಕಾರ್ಖಾನೆಗಳಲ್ಲಿಯೂ ಬೆಳೆಯಾಗಬಹುದು? ಅಮೇರಿಕದ ಕೆಮಿಕಲ್ ಸೊಸೈಟಿಯವರು ನೀರಿನ ಮೇಲೆ ಕೆಲವು ಪ್ರಯೋಗಗಳನ್ನು ಮಾಡಿ, ಇಂಥ ಬೆಳೆಗಳನ್ನು ಬೆಳೆಸಬಹುದೆಂದೂ ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

ಮೂಕರು ಮಾತನಾಡುವರು

ಇನ್ನು ಸ್ವಲ್ಪ ಸಮಯ ಕಳೆದ ಅನಂತರ ಮೂಕರೂ ಮಾತನಾಡಬಹುದು. ಅಮೇರಿಕದ ಡಾಕ್ಟರ್ ಬ್ರಿಯಾನ್ ಟಿ. ಕಿಂಗ್ ಎಂಬಾತನು ಒಬ್ಬ ಮೂಕನ ಗಂಟಲಿನ ಮೇಲೆ ಶಸ್ತ್ರಕ್ರಿಯೆ ಮಾಡಿ ಅವನಿಗೆ ಮಾತನಾಡುವ ಶಕ್ತಿಯನ್ನು ಕೊಟ್ಟನು. ಆ ಮೇಲೆ ಬೇರೆ ೨೬ ಮಂದಿ ಮೂಕರ ಮೇಲೂ ಈ ಚಿಕಿತ್ಸೆಯನ್ನು ಮಾಡಿದಾಗ ಅವರಿಗೂ ಮಾತನಾಡುವ ಶಕ್ತಿ ಬಂದಿತು! ಆದರೆ ಈ ಶೋಧವು ಆಕಸ್ಮಿಕವಾಗಿಯೇ ಆಯಿತು. ಚಿಕಾಗೋದ ವೈದ್ಯಕೀಯ ಸಂಘದ ಕಾರ್ಯದರ್ಶಿಗೆ ಗಟ್ಟಿಯಾಗಿ ಮಾತನಾಡಲಿಕ್ಕೆ ಆಗುತ್ತಿದ್ದಿಲ್ಲ. ಅವಳು ಯಾವಾಗಲೂ ಪಿಸುಗುಟ್ಟುತ್ತಿದ್ದಳು. ಆದರೆ ಅವಳ ಮೇಲೆ ಬ್ರಿಯಾನರ ಪ್ರಥಮ ಚಿಕಿತ್ಸೆ ನಡೆದಾಗ ಅವಳಿಗೆ ನಮ್ಮಂತೆಯೇ ಮಾತನಾಡಲಿಕ್ಕಾಯಿತು. ಆ ಮೇಲೆ ಬ್ರಿಯಾನರು ತಮ್ಮ ಪ್ರಯೋಗಗಳನ್ನು ಮತ್ತೂ ಮುಂದುವರಿಸಿ ಸಫಲತೆಯನ್ನು ಪಡೆದರು.

ನಕ್ಷತ್ರಗಳು ಯಾಕೆ ಬೀಳುವವು

ಅಕ್ಟೋಬರ್ ನವಂಬರ ತಿಂಗಳುಗಳಲ್ಲಿ ಆಕಾಶವನ್ನು ನೋಡಿದರೆ ಅಲ್ಲಿ ಕೆಲವು ಜ್ಯೋತಿಗಳು ಭೂಮಿಯ ಕಡೆಗೆ ಎರಗುವುದನ್ನು ಕಾಣಬಹುದು. ಜನರು ಇವನ್ನು ನಕ್ಷತ್ರ ಬೀಳುವುದೆಂದು ಹೇಳುತ್ತಾರೆ. ಆದರೆ ಯಥಾರ್ಥದಲ್ಲಿ ನಕ್ಷತ್ರಗಳು ಬೀಳುವುದಿಲ್ಲ. ಆಕಾಶಮಂಡಲದಲ್ಲಿ ಕಲ್ಲಿನಂಥ ಕೆಲವು ಪದಾರ್ಥಗಳು ಇರುತ್ತವೆ. ಅವು ಭೂಮಿಯ ಗುರುತ್ವಾಕರ್ಷಣಕ್ಕೆ ಒಳಪಟ್ಟಾಗ ಭೂಮಿಯ ಕಡೆಗೆ ಎರಗುವ ವೇಗಕ್ಕೆ ಘರ್ಷಣೆಯಾಗಿ ಉರಿಯುವವು. ಈ ಉರಿಯುವ ಜ್ಯೋತಿಯನ್ನೇ ನಾವು ನೋಡಿ ನಕ್ಷತ್ರ ಬಿದ್ದಿತೆಂದು ಹೇಳುತ್ತೇವೆ. ಹೀಗೆ ಬೀಳುವ ಕಲ್ಲುಗಳಲ್ಲಿ ಹೆಚ್ಚಿನವುಗಳು ಭೂಮಿಯನ್ನು ಸೇರಬೇಕಾದರೆಯೇ ಭಸ್ಮವಾಗುವವು. ಆದರೆ ದೊಡ್ಡದಾಗಿರುವ ಕೆಲವು ಮಾತ್ರ ಪೂರ್ಣ ಭಸ್ಮವಾಗುವ ಮೊದಲೇ ಭೂಮಿಯ ಮೇಲೆ ಬಿದ್ದು ಗುಂಡಿಯನ್ನು ಸೇರುವವು. ಇಂಥ ಕೆಲವು ಕಲ್ಲುಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ ಕಾಣಬಹುದು.

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

BHUVANENDRA PRODUCTS LTD.,

Head Office and Factory: KATAPADI S. Kanara.

Depots: 1. Maharatha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು:—

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶ್ಯೆ, ಮರ್ಚಂಟ್, ರಥಬೀದಿ.

ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಬಿ. ಬಿಲ್ಡಿಂಗ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯುನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-

ಏ ಪೊಪ್ಯುಲರ ಸ್ಟೋರ್ಸ,

ಮಂಗಳೂರು.

Stockists. –

Messrs. Dadha & Co., MADRAS.

THE PIE-MONEY BANK, LTD.

Mandan Road, MANGALORE.

Undertakes all kinds of Banking Business Current account at 2½%per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% for 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars–

K. R. GURU, *Managing Director*

THE BANK OF MANGALORE LIMITED

HEAD OFFICE MANGALORE ESTD 1931

Branches—MOODABIDRI & PADUBIDRI

NOTICE

On and from 1st January 1941 the following are the rates of interest on deposits

FIXED DEPOSITS

For 2 years or over	5 per cent
1	4½ per cent
6 months	4 per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples R 5 @ 3%

All kinds of banking business transacted

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:—

THE JOINT MANAGERS,

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 25-7-1941   [ಸಂಚಿಕೆ 30]

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings

Prompt Settlement of Claims

Liberal Terms

Experience &

Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI, MANGALORE, CALICUT, MADRAS, VANDRUM, BANGALORE City, and BOMBAY 4.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ-ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಣಿವು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬ್ಯಾ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಳೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

'ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು'

—ಲೋಕಮಾನ್ಯ ತಿಲಕರು

ಬಿಡಿ ಸಂಚಿಕೆ ಬೆಲೆ ಒಂದಾಣೆ — ವಾರ್ಷಿಕ ಚಂದಾ ರೂ. 2-0-0 — ಅಂಚೆ ವೆಚ್ಚ ಸೇರಿ ರೂ. 2—12—0 — ***Regd. No. M. 3460***

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 25—7—1941 [ಸಂಚಿಕೆ 30]

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI, MANGALORE, CALICUT MADRAS,
VANDRUM, BANGALORE City, and BOMBAY 4.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಥಾವು ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ, ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press ...

ಸ್ವದೇಶಾಭಿಮಾನಿ

Swadeshabhimani. Estd 1906

'ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು'

—ಲೋಕಮಾನ್ಯ ತಿಲಕರು

ಕರ್ನಾಟಕದ ಜಿಲ್ಲಾ ಸತ್ಯಾಗ್ರಹ ಕಮಿಟಿಗಳ ಸಂಚಾಲಕರ ಸಭೆ

ಕರ್ನಾಟಕದ ಸತ್ಯಾಗ್ರಹ ಹಾಗೂ ...ಂಗ್ರೆಸ್ ಚಟುವಟಿಕೆಗಳ ಸಿಂಹಾವ...ಲೋಕನ ಮಾಡಿ ಮುಂದಿನ ಕಾರ್ಯದ ...ಯೋಜನೆಯನ್ನು ವಿಚಾರಿಸುವುದಕ್ಕಾಗಿ ...೨೦ ಜುಲೈ ದಿನ ಬ್ರಿಟಿಶ ಕರ್ನಾಟಕ ಜಿಲ್ಲಾ ಸತ್ಯಾಗ್ರಹ ಕಮಿಟಿಗಳ ಸಂಚಾಲಕರ ಸಭೆಯು ಧಾರವಾಡದಲ್ಲಿ ಕರೆಯ...ಯಿತು. ಸಭೆಗೆ ಜಿಲ್ಲಾ ಸತ್ಯಾಗ್ರಹ ...ಮಿಟಿಯ ಸಂಚಾಲಕರಾದ ಶ್ರೀ. ...ಮನರಾವ ಬಿದರಿ (ಬೆಳಗಾವಿ), ಶ್ರೀ. ...ಕ್. ಮಿರ್ಜಿ (ವಿಜಾಪುರ), ಶ್ರೀ. ಟಿ. ... ನಾಯಕ (ಕಾರವಾರ) ಶ್ರೀ. ...ಮೋದರ ಬೇಳಿಗಾ (ಮಂಗಳೂರು), ... ನಂಜುಂಡೇಶ್ವರ (ಕೊಡಗು), ಡಾ. ...ಬ್ಬೂರ (ಧಾರವಾಡ), ಶ್ರೀ. ಟಿ. ...ಬ್ರಹ್ಮಣ್ಯಂ (ಬಳ್ಳಾರಿ) ಇವರು ...ದ್ಧಿದ್ದರು. ಅಲ್ಲದೆ, ಪ್ರಾಂತಿಕ ...ಂಗ್ರೆಸ್ ಕಮಿಟಿಯ ವಿಧಾಯಕ ...ರ್ಯಕ್ರಮದ ಕಾರ್ಯದರ್ಶಿಗಳಾದ ... ಮಾಗಡಿಯವರೂ, ಶ್ರೀ. ಶರೀಫರೂ ... ಮಾನಪ್ಪ ಧಾರವಾಡ, ಇವರೂ ...ಜರು ಇದ್ದರು. ಬೆಂಗಳೂರು ...ಡಿನ ಕಾಂ. ಕ. ಸಂಚಾಲಕರು ವರದಿ...ಯನ್ನು ಕಳಿಸಿದ್ದರು. ಸಭೆಯ ಕಾರ್ಯವು ...ಡು ದಿನ ಪ್ರಾಂತಾಧ್ಯಕ್ಷರ ಅಧ್ಯಕ್ಷತೆ...ಲ್ಲಿ ನಡೆಯಿತು. ಚರಖಾ ಸಂಘದ (...ರ್ನಾಟಕ ಶಾಖೆಯ) ಕಾರ್ಯದರ್ಶಿ...ಗಳಾದ ಶ್ರೀ. ಕೌಜಲಗಿ ಹಣಮಂತ...ಯರು ಶ್ರೀ. ಸಾವಕಾರ ಹಾಗೂ ...ಳಸೀನೇರಿ ಇವರು ವಿಧಾಯಕ ...ರ್ಯಕ್ರಮದ ಬಗ್ಗೆ ತಮ್ಮ ಸಲಹೆ...ಗಳನ್ನು ಕೊಟ್ಟರು. ಪ್ರಾಂತದಲ್ಲಿ ಇದುವರೆಗೆ ನಡೆದ ಕಾರ್ಯವು ಯಥಾ ಸಾಂಗವಾಗಿ ನಡೆದಿದೆಯೆಂದೂ ಪ್ರಾಂತದ ಎಲ್ಲಾ ಭಾಗಗಳಲ್ಲಿ ಉತ್ಸಾಹದ ವಾತಾವರಣವು ಕಂಡುಬಂದಿದೆಯೆಂದೂ ಪ್ರಾಂತಾಧ್ಯಕ್ಷರು ಹೇಳಿದರು.

ಸಭೆಯಲ್ಲಿ ಈ ಮುಂದಿನಂತೆ ಮುಖ್ಯವಾಗಿ ವಿಚಾರಗಳು ನಿಶ್ಚಿತವಾದವು.

೧. ಇನ್ನು ಮುಂದೆ ಸತ್ಯಾಗ್ರಹಿಗಳು ಇಡಬೇಕಾದ ದಾಯರಿ ಮುಂತಾದವುಗಳ ವಿಷಯಕ್ಕೆ ಸಲಹೆಯನ್ನು ಕೊಡುವುದಕ್ಕಾಗಿ ಜಿಲ್ಲಾ ಸಂಚಾಲಕರು ಸತ್ಯಾಗ್ರಹಿಗಳೊಡನೆ ಸ್ವಂತ ಭೇಟಿಯಾಗಿ ಪ್ರತ್ಯಕ್ಷ ಸಂಬಂಧವನ್ನು ಬೆಳೆಯಿಸಬೇಕೆಂದು ಗೊತ್ತಾಯಿತು.

೨. ಎಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಸದ್ಯದ ಮಟ್ಟಿಗೆ ರದ್ದಾದುದರಿಂದ ಅವುಗಳಿಗೆ ಅಧೀನವಾದ ಪಾರ್ಲಿಮೆಂಟರಿ ಕಮಿಟಿಗಳು ತಾವಾಗಿಯೆ ವಿಸರ್ಜಿಸಲ್ಪಟ್ಟಿರುವವೆಂದು ಎಲ್ಲರ ಅಭಿಪ್ರಾಯವಾಯಿತು.

೩. ತಾಲೂಕು ಗ್ರೂಪ್, ಮುಂತಾದ ಅಧೀನ ಕಾಂಗ್ರೆಸ್‌ಗಳ ಲೆಖ್ಖ ಪಟ್ಟಿಗಳನ್ನೂ ಹಣವನ್ನೂ ಆಯಾ ಸಮಿತಿಗಳಿಗೆ ಸಂಬಂಧಪಟ್ಟವರು ಜಿಲ್ಲಾ ಸಂಚಾಲಕರುಗಳಿಗೆ ಒಪ್ಪಿಸಬೇಕೆಂದು ತೀರ್ಮಾನವಾಯಿತು.

೪. ಕೊಡಗಿಗಾಗಿ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ನೆರವೇರಿಸಲು ಶ್ರೀ. ಕರಂಬಯ್ಯನವರನ್ನು ನಿಯಮಿಸಿದ ಸಂಗತಿಯನ್ನು ಅಧ್ಯಕ್ಷರು ಸಭೆಗೆ ತಿಳಿಸಿದರು.

೫. ಪ್ರತಿಯೊಂದು ಜಿಲ್ಲೆಯಲ್ಲಿ ವಿಧಾಯಕ ಕಾರ್ಯಕ್ರಮವು ಸಮಗ್ರವಾಗಿ ಸಾಗುವ ಉದ್ದೇಶದಿಂದ ಅದೇ ಕೆಲಸಕ್ಕೆ ಮೀಸಲಾಗಿ ಒಬ್ಬ ಸಂಘಟಕರನ್ನು ಆಯಾ ಜಿಲ್ಲಾಧ್ಯಕ್ಷರು ನಿಯಮಿಸಬೇಕೆಂದೂ, ಅವರೆಲ್ಲರೂ, ಶ್ರೀ. ಹಣಮಂತರಾವ ಕೌಜಲಗಿಯವರೂ, ಪ್ರಾಂತಾಧ್ಯಕ್ಷರಿಂದ ಆರಿಸಲ್ಪಟ್ಟ ಹೆಚ್ಚಿನ ಸದಸ್ಯರೂ ಕೂಡಿ ಪ್ರಾಂತೀಯ ವಿಧಾಯಕ ಕಾರ್ಯದ ಸಮಿತಿಯು ಏರ್ಪಡಿಸಲ್ಪಡಬೇಕೆಂದು ನಿರ್ಣಯವಾಯಿತು.

೬. ನೂಲುವ ಮತ್ತು ಹಂಜಿಹಾಕುವ ಶಿಕ್ಷಣವನ್ನು ಕೊಡಲು ಅದು ಭಾರತ ಚರಖಾ ಸಂಘದ ನೇತೃತ್ವದಲ್ಲಿ ಒಂದು ವರ್ಗವು ತೆರೆಯಬೇಕೆಂದೂ ಆ ವರ್ಗದ ಅವಧಿಯು ಎರಡು ತಿಂಗಳುಗಳದ್ದಿರಬೇಕೆಂದೂ, ಪ್ರತಿ ಜಿಲ್ಲೆಯವರು ಮೂರು ಜನ ಕಲಿಯುವವರನ್ನು ಆರಿಸಿ ಕಳುಹಿಸಬೇಕೆಂದೂ ಈ ವರ್ಗವು ಧಾರವಾಡದಲ್ಲಿ ನಡೆಯಬೇಕೆಂದೂ ನಿರ್ಣಯವಾಯಿತು.

೭. ಬರುವ ೨-೩ ತಿಂಗಳುಗಳಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಅನುಕೂಲವಿರುವ ಪಟ್ಟಣಗಳಲ್ಲಿ ಖಾದಿ ಸಂತೆಗಳನ್ನು ಮಾಡಿಸಿ ಖಾದಿಯ ಪ್ರಚಾರವನ್ನು ಮಾಡಬೇಕೆಂದು ನಿರ್ಣಯವಾಯಿತು.

೮. ಕಾಂಗ್ರೆಸ್ಸಿನ ವರ್ಚಸ್ಸಿನಲ್ಲಿರುವ ಸ್ಥಳಿಕ ಸಂಸ್ಥೆಗಳಲ್ಲಿ ವಿಧಾಯಕ ಕಾರ್ಯಕ್ರಮವನ್ನು ಹೆಚ್ಚು ಆಸ್ಥೆಯಿಂದ ಸಾಗಿಸಬೇಕೆಂಬ ತೀರ್ಮಾನವಾಯಿತು. ಸಪ್ಟಂಬರ ಕೊನೆಯೊಳಗೆ ಆದಷ್ಟು ಹೆಚ್ಚು ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕಾರ್ಯವನ್ನು ಮಾಡಬೇಕೆಂದು ಗೊತ್ತಾಯಿತು.

೯. ಸೆರೆಮನೆಯಲ್ಲಿರುವ ಸತ್ಯಾಗ್ರಹಿಗಳಿಗೆ ಪುಸ್ತಕಗಳನ್ನು ಪೂರೈಸಲು ಶಕ್ಯವಿದ್ದಷ್ಟು ಪ್ರಯತ್ನ ಮಾಡಬೇಕೆಂದು ಎಲ್ಲರ ಅಭಿಪ್ರಾಯವಾಯಿತು.

೧೦. ಮಂಗಳೂರು ಜಿಲ್ಲೆಯಲ್ಲಿ ನೆರೆಹಾವಳಿಯ ಸಂಕಟಕ್ಕೆ ಈಡಾದವರಿಗಾಗಿ ಮಹಾಜನ ನೆರೆಹಾವಳಿ ಸಂಕಟ ನಿವಾರಣಾ ಸಮಿತಿಗೆ ಸಹಾಯ ಮಾಡಬೇಕೆಂದೂ, ಸಾಧ್ಯವಿದ್ದ ವಿಶೇಷವಾಗಿ ಬೆಂಗಳೂರು ಮುಂಬಯಿಯಂತಹ ದೊಡ್ಡ ಪಟ್ಟಣಗಳಲ್ಲಿ ಸಹಾಯವನ್ನು ಕೊಡಿಸಬೇಕೆಂದು ಗೊತ್ತಾಯಿತು.

೧೧. ಡಾ. ಬಾಬೂ ರಾಜೇಂದ್ರಪ್ರಸಾದ ಹಾಗೂ ಆಚಾರ್ಯ ಕೃಪಾಲನಿಯವರು ಕರ್ನಾಟಕದಲ್ಲಿ ಪ್ರವಾಸವನ್ನು ಕೈಕೊಳ್ಳಲು ಬಿನ್ನವಿಸಿಕೊಳ್ಳಬೇಕೆಂದು ನಿಶ್ಚಯವಾಯಿತು. ಹೀಗೆಂದು ಕ. ಪ್ರಾಂ. ಕಾಂ. ಕಮಿಟಿ ಅಧ್ಯಕ್ಷ ಶ್ರೀ. ಕರಮಕರರು ತಿಳಿಸುತ್ತಾರೆ.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

	ರಿಂದ	ವರೆಗೆ
1. (a) ಚೆತ್ತ ಅವ್ವಲ್ ತರದ ಗುಡ್ಡು ಮುಡಿಗೆ	—	—
(b) ,, ದುಯಂ ,, ,, ,,	—	—
2. (a) ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	6—4—0	6—4—0
(b) ,, ದುಯಂ ,, ,, ,,	6—0—0	
3. (a) ,, ಅವ್ವಲ್ ,, ಸುಗ್ಗಿ ,,	6—0—0	—
(b) ,, ದುಯಂ ,, ,, ,,	5—14—0	5—14—0
4. (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	35—0—0	40—0—0
(b) ,, ಸಿಪ್ಪೆಯಿದ್ದದ್ದು ,,	37—8—0	42—8—0
5. (a) ಕೊಬ್ಬರಿ ಆಫೀಸು ಖಂಡಿಗೆ	57—8—0	—
(b) ,, ದೀವಿ ,,	—	—
(c) ,, ದಿಲ್ ಪಸಂದ್ ,,	—	—
6. ತೆಂಗಿನ ಎಣ್ಣೆ ಮಣಕ್ಕೆ	4—0—0	—
7. (a) ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	3—0—0
(b) ಸುಲಿದ ಅಡಿಕೆ ಖಂಡಿಗೆ (ಹಳ್ತು)	—0—0	—0—0
(ಹೊಸ್ತು)	90—0—0	100—0—0
8. ಗೇರುಬೀಜ ಮುಡಿಗೆ	6—0—0	6—8—0
9. ಕಬ್ಬಿನ ಬೆಲ್ಲ ಖಂಡಿಗೆ	35—0—0	40—0—0
0. ಒಳ್ಳೆ ಮೆಣಸು ಹಂಡ್ರೆಡ್ ವೇಟಿಗೆ	14—8—0	15—8—0
1. (a) ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5—4—0	8—0—0
(b) ಹುಡಿಯ ,, ,,	5—8—0	7—8—0
2. (a) ಮೈಸೂರು ಏಲಕ್ಕಿ ಮಣಕ್ಕೆ	—0—0	—0—0
(b) ಕೊಡಗಿನ ,, ,,	70—0—0	75—0—0
3. (a) ಕುಮಟೆಯ ಮೆಣಸು ಖಂಡಿಗೆ	75—0—0	85—0—0
(b) ಕಾಸರಗೋಡು ,, ಮಣಕ್ಕೆ	3—8—0	—
(c) ಊರಿನ ,, ,,	3—12—0	3—14—0

ರೈಲುಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜೊಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ.	6.50 ಸಾಯಂ.
ಕಣ್ಣನ್ನೂರು ವರೆಗೆ	5.52 ಸಾಯಂ.	9.40 [illegible]

ಸಮಶೀತಲವಾದ ರುಚಿಕರ ಓವಲ್‌ಟಿನ್

ಬಿಸಿಲು ದಿನಗಳಲ್ಲಿ ಒಂದು ಗ್ಲಾಸ್ ತಣ್ಣನೆಯ ಓವಲ್‌ಟಿನ್ ರುಚಿಕರವಾದ ಪಾನೀಯವಾಗಿರುವದಲ್ಲದೆ ಇಡೀ ದೇಹಕ್ಕೆ ಪೋಷಣೆಯನ್ನೂ ಚೈತನ್ಯವನ್ನೂ ಕೊಡುತ್ತದೆ. ಇದನ್ನು ತಯಾರಿಸುವುದು ಬಹು ಸುಲಭ. ಒಂದು ಗ್ಲಾಸ್ ತಣ್ಣನೆಯ ಹಾಲಿಗೆ ಸುಮ್ಮನೇ ಎರಡು ಟೀ ಚಂಚದಷ್ಟು "ಓವಲ್‌ಟಿನ್" ಅದನ್ನು ಸೇರಿಸಿರಿ ಮತ್ತು ನಿಮಗೆ ಬೇಕಾದರೆ ಸಕ್ಕರೆಯನ್ನು ಬೆರಸಿ, ನಂತರ ಚೆನ್ನಾಗಿ ಕಲಕಬಿಡಿ. ನೆನಪಿನಲ್ಲಿಡಿ, ಬಿಸಿ "ಓವಲ್‌ಟಿನ್" ನಿಮಗೆ ಎಷ್ಟು ಒಳ್ಳೆಯದೋ ತಣ್ಣನೆಯ "ಓವಲ್‌ಟಿನ್" ಅಷ್ಟು ಒಳ್ಳೆಯದು—ಅಷ್ಟೇ ಪೋಷಣೆ ಕೊಡುತ್ತೆ, ಆನಂದದಾಯಕ, ಚೈತನ್ಯದಾಯಕವಾಗಿರುತ್ತೆ. ಎಲ್ಲಾ ಔಷಧ ಮಾರುವವರಲ್ಲೂ ಮತ್ತು ಅಂಗಡಿಗಳಲ್ಲೂ ದೊರೆಯುತ್ತದೆ.

ಓವಲ್‌ಟಿನ್
OVALTINE

ಹಂಚುನವರು: ಗ್ರಹಾಂಸ್ ಟ್ರೇಡಿಂಗ್ ಕಂ. [ಇಂಡಿಯಾ] ಲಿ., ಬಾಂಬೆ, ಕಲ್ಕತ್ತ, ಕರಾಚಿ, ರಂಗೂನ್, ಮತ್ತು ಮದ್ರಾಸು.

"ಓವಲ್‌ಟಿನ್" ಬಿಸ್ಕತುಗಳು

ರುಚಿಕರ, ಜೀರ್ಣಕರ, ಮತ್ತು ಪುಷ್ಟಿದಾಯಕ. ನೀವು ಕೊಳ್ಳಬಹುದಾದ ಬಿಸ್ಕತುಗಳಲ್ಲಿ "ಓವಲ್‌ಟಿನ್" ಬಿಸ್ಕತುಗಳು ಶ್ರೇಷ್ಠವಾದವು. ಅವುಗಳಲ್ಲಿ "ಓವಲ್‌ಟಿನ್" ಸೇರಿದೆ. ... ಟಿನ್, ... ಟಿನ್, ಪೆಕೆಟ್ಟುಗಳಲ್ಲಿ ಮತ್ತು ... ಪಟ್ಟಿಗಳಲ್ಲಿ ದೊರೆಯುತ್ತವೆ.

OV/13/40

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1—8—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧—೮—೧೯೪೧

ಸಪ್ರು ಮಂಡಳಿಯು ಸರಕಾರದ ಧೋರಣವನ್ನು ಟೀಕಿಸುತ್ತದೆ!

ಪುಣೆಯಲ್ಲಿ ಸಪ್ರು ಮಂಡಳಿಯ ಅಧಿವೇಶನವು ಸೇರಿ, ಭಾರತದ ರಾಜಕೀಯದ, ವಿಷಯವಾಗಿ ಚರ್ಚೆ ಮಾಡಿ ನಿರ್ಣಯಗಳನ್ನು ಮಾಡಿತು. ಸಪ್ರುಗಳು ಪ್ರಾರಂಭ ಭಾಷಣದಲ್ಲಿ ಸರಕಾರದ ಧೋರಣವನ್ನು ಕಟುವಾಗಿ ಟೀಕಿಸಿ ಹಲವು ಸೂಚನೆಗಳನ್ನು ಮಾಡಿದರು. ಭಾರತ ಮಂತ್ರಿಗಳ ಧೋರಣೆಯು ನ್ಯಾಯವಾಗಿಲ್ಲವೆಂದರು. ವೈಸರಾಯ್ ಕೌನ್ಸಿಲ್ ವಿಸ್ತಾರವು ಸಮಂಜಸವಾಗಿಲ್ಲವೆಂದು ಅಭಿಪ್ರಾಯಪಟ್ಟರು ಹೊಸ ಸದಸ್ಯರಾದ ಭಾರತೀಯರಿಗೆ ಕೊಟ್ಟ ಅಧಿಕಾರವು ನಿಷ್ಪ್ರಯೋಜಕದ್ದಿದೆಯೆಂದೂ, ಸಂರಕ್ಷಕ, ಗೃಹ, ಆರ್ಥಿಕ ಖಾತೆಗಳ ಆಡಳಿತವು ಭಾರತೀಯರ ಕೈಗೆ ಬರುವುದು ನ್ಯಾಯವಾದುದೆಂದೂ ವಾದಿಸಿದರು

ಸಪ್ರು ಪರಿಷತ್ತಿನ ಸಭೆಯಲ್ಲಿ ಈ ನಿರ್ಣಯವು ಮಂಡಿಸಲಾಯಿತೆ?

ಮೊದಲನೆಯ ನಿರ್ಣಯ

ವೈಸರಾಯರ ಕೌನ್ಸಿಲಿನ ಪುನರ್ಘಟನೆಯಾಗಬೇಕೆಂಬುದನ್ನು ಪುನಃ ಈ ಪರಿಷತ್ತು ದೃಢೀಕರಿಸುತ್ತದೆ

ಆರ್ಥಿಕ, ಸಂರಕ್ಷಕ ಖಾತೆಗಳನ್ನು ಹಾಗೂ ಮುಖ್ಯ ಮುಖ್ಯ ಅಧಿಕಾರಗಳನ್ನು ಭಾರತೀಯರಿಗೆ ಕೊಡಬೇಕು. ಆದರೆ, ಕಾರ್ಯಕಾರೀ ಮಂಡ್ರಳವು ಯುದ್ಧಕಾಲದಲ್ಲಿ ಬ್ರಿಟಿಷ್ ಸರಕಾರಕ್ಕೆ ಹೊಣೆಯಾಗಿರಬೇಕು ಮತ್ತು ಸಂರಕ್ಷಕ ಖಾತೆಯಲ್ಲಿ ಕಮಾಂಡರ್ ಇನ್‌ಚೀಫರ ಅಧಿಕಾರಕ್ಕೆ ತೊಂದರೆಯಾಗದಂತಿರಬೇಕು.

ಸಂಯುಕ್ತ ಹಾಗೂ ಒಟ್ಟು ಹೊಣೆಗಾರಿಕೆಯ ತತ್ವದ ಮೇಲೆ ಧೋರಣೆಗೆ ಸಂಬಂಧಪಟ್ಟ ಮಹತ್ವದ ವಿಚಾರಗಳನ್ನು ಪುನರ್ಘಟಿತ ಸರಕಾರವು ನಿರ್ಧರಿಸಬೇಕು.

ಅಂತರ್‌ರಾಷ್ಟ್ರೀಯ ಹಾಗೂ ಅಂತರ್ ಸಾಮ್ರಾಜ್ಯ ಪ್ರಶ್ನೆಗಳ ವಿಷಯ ಪುನರ್ಘಟಿತ ಸರಕಾರವು ಇತರ ಸಾಮ್ರಂತ ರಾಜ್ಯಗಳಿಗೆ ಸಮಾನವಾಗಿರಬೇಕು. ದೇಶದ ಜನರಲ್ಲಿ ಉಂಟಾದ ಸಂದೇಹಗಳನ್ನು ಪರಿಹರಿಸುವ ಬಗ್ಗೆ ಸಾರ್ವಭೌಮ ಸರ

ಕಾರ್ಯಕಾರೀ ಮಂಡಳದಲ್ಲಿ ತಿರುಳಿಲ್ಲವೆಂದು ಪುಣೆಯಲ್ಲಿ ಪಕ್ಷವಿಲ್ಲದ ಮುಖಂಡರ ಪರಿಷತ್ತು

ಕಾರಣವರು ತಕ್ಕ ಸಮಾಧಾನ ಕೊಡಬೇಕು, ಎಂದರೆ ಕೇಂದ್ರ ಸರಕಾರದ ಪುನರ್ಘಟನೆಯೊಡನೆ, ಯುದ್ಧ ನಂಗಿದ ಇಂತಿಷ್ಟೇ ಅವಧಿಯಲ್ಲಿ ಬ್ರಿಟನ್ ಹಾಗೂ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಇತರ ರಾಷ್ಟ್ರಗಳು ಅನುಭೋಗಿಸುವಷ್ಟು ಸ್ವಾತಂತ್ರ್ಯವನ್ನು ಕೊಟ್ಟೇ ತೀರುವೆವೆಂದು ಪ್ರಕಟಿಸಬೇಕೆಂದು ಪರಿಷತ್ತು ಹಿಂದೆ ಕೇಳಿತ್ತಾದರೂ ಈಗ ಆದ ವೈಸರಾಯ್ ಕೌನ್ಸಿಲಿನ ಬದಲಾವಣೆ ಕಾಲದಲ್ಲಿ ಯಾವ ಮಾತೂ ಬಂದಿರುವುದರ ವಿಷಯಕ್ಕಾಗಿ ಪರಿಷತ್ತು ಖೇದಿಸುತ್ತದೆ.

ಮುಖ್ಯವಾದ ಅಂದರೆ ಸಂರಕ್ಷಕ ಆರ್ಥಿಕ ಖಾತೆಗಳ ಅಧಿಕಾರದಿಂದ ಭಾರತೀಯರನ್ನು ಹೊರಗಿಟ್ಟಿರುವುದರಿಂದ ಯುದ್ಧ ಪ್ರಯತ್ನಕ್ಕೆ ಜನತೆಯ ಪ್ರೋತ್ಸಾಹ ಪಡೆವುದು ಶಕ್ಯವಿಲ್ಲವಾಗಿದೆ

ಅಂತರ್ ಸಾಮ್ರಾಜ್ಯ ಹಾಗೂ ಅಂತರ್‌ರಾಷ್ಟ್ರೀಯ ಪರಿಷತ್ತುಗಳಲ್ಲಿ ಭಾರತಕ್ಕೆ ಸಮಾನತೆ ದೊರಕಬೇಕೆಂದು ಕೇಳಿ ಧ್ಯಕ್ಷ, ಸಾರ್ವಭೌಮ ಸರಕಾರವು ಮಾನ ಕಳೆದಿರುವ ಸಿವಿಕ್ತ ಪರಿಷತ್ತಿಗೆ ಖೇದವಾಗಿದೆ

ದೇಶದ ಜನರಲ್ಲಿ ಸಂದೇಹ ಪರಿಹಾರ ಹಾಗೂ ಬ್ರಿಟನು ಭಾರತಗಳ ಸಂಬಂಧಗಳ ಸಲುವಾಗಿ ಯುದ್ಧ ಮುಗಿದ ಕೂಡಲೇ ಭಾರತಕ್ಕೆ ಬ್ರಿಟನು ಹಾಗೂ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳು ಅನುಭವಿಸುವ ಸ್ವಾತಂತ್ರ್ಯ ಸಮಾನತೆ ನೀಡುವುದಾಗಿ ಪ್ರಕಟಿಸಬೇಕೆಂದು ಪರಿಷತ್ತು ಅಪೇಕ್ಷಿಸುತ್ತದೆ

ಕಳೆದ ಸಲದ ಪರಿಷತ್ತಿನ ನಿರ್ಣಯಗಳ ಕಡೆಗೆ ಸರಕಾರವು ಸಂಪೂರ್ಣ ಲಕ್ಷ್ಯ ಕೊಡಬೇಕಾಗಿ ಈ ಪರಿಷತ್ತು ಕೇಳುತ್ತದೆ

ಕಳೆದ ಪರಿಷತ್ತಿನ ನಂತರ ಪೂರ್ವದಿಕ್ಕಿನಲ್ಲಿ ಯುದ್ಧ ಹರಡುವುದನ್ನು ಪರಿಷತ್ತು ನಿರೀಕ್ಷಿಸುತ್ತದೆ.

ಎರಡನೆಯ ನಿರ್ಣಯ

ಜನತೆಯಲ್ಲಿ ಐಕ್ಯವುಳಿಯುವಂತೆ ಭಾವೀ ಭಾರತದ ಘಟನಾತ್ಮಕ ಒದಲಾವಣೆಯು ಯಾವ ರೀತಿಯಲ್ಲಿ ಸಾಗಬೇಕೆಂಬ ಬಗ್ಗೆ ವಿಚಾರಮಾಡಲು ಆರಂಭಿಸಬೇಕು. ಮುಂದಿನ ಘಟನೆಯಲ್ಲಿ ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನಸ್ಥಾನ ಸಿಗಬೇಕೆಂದು ಕೇಳುತ್ತದೆ ಎಲ್ಲಾ ಪಂಗಡದವರ ಒಂದಾಗುವಂತೆ ನಡೆಸುವ ಧೋರಣೆಯನ್ನು ಇಟ್ಟುಕೊಳ್ಳಬೇಕೆಂದು ಕೇಳುತ್ತಾರೆ.

ಮುಂದಿನ ಕಾರ್ಯಕ್ರಮ ನಡೆಸಲು ಅಗತ್ಯವೆಂದು ತೋರಿದ ಕಲಸಗಳನ್ನು ನಿರ್ವಹಿಸುವರೆ ಪರಿಷತ್ತು ಸರ್ ಸಪ್ರುಗಳಿಗೆ ಅಧಿಕಾರ ಕೊಡುತ್ತದೆ.

ಶ್ರೀ ಜಯಕರರು ಈ ಮುಖ್ಯ ನಿರ್ಣಯಗಳನ್ನು ಮಂಡಿಸಿದರು. ಶ್ರೀ ಜಯಕರರು ತಮ್ಮ ಭಾಷಣದಲ್ಲಿ, ಬ್ರಿಟಿಷ್ ಸರಕಾರದ ಧೋರಣ, ಜಿನ್ನಾ ಮನೋವೃತ್ತಿ ಮೊದಲಾದವುಗಳನ್ನು ಟೀಕಿಸಿದರು. ಸರ್. ರಾಧಾಕೃಷ್ಣನ್ ಡಾ। ಸಚ್ಚಿದಾನಂದ ಸಿಂಹ, ಸರ್. ಇಸ್ಮಾಯಿಲ್ ಮೊದಲಾದವರ ಅವಕ್ಕೆ ಬೆಂಬಲವಿತ್ತರು

ನಮ್ಮ ಕೈಗೆ ಬಂದ ಅಧಿಕಾರವನ್ನು ಸ್ವೀಕರಿಸಿ ಹೆಚ್ಚಿನವಕ್ಕೆ ಮತ್ತೆ ಒದಿದಾಡಬೇಕೆಂದು ಸಪ್ರುಗಳು ಭಾಷಣ ಮಾಡುತ್ತಾ ಹೇಳಿದರು. ಜಾತೀಯ ಐಕ್ಯ ಹಾಗೂ ಶಾಂತತಾ ರಕ್ಷಣೆಯು ಪರಿಷತ್ತಿನ ಪ್ರಮುಖ ಕಾರ್ಯಗಳೆಂದು ಸಾರಲಾಯಿತು.

NACET
BLADES



ನೆಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಕ್ಷೌರವಾಗಬೇಕಾದರೆ, ಹರಿತ, ಸುಖ ಮತ್ತು ನಯ ಇವು ಮೂರು ಗುಣಗಳು ಇರಬೇಕು — ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾಗುವಷ್ಟು ಕಡಿಮೆ ಕ್ರಯದಲ್ಲಿ ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರವನ್ನು ಮಾಡಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡಲಿರುವಿರಿ.

HALFTONE & LINE
BLOCK MAKING
UNDERTAKEN
Sharada Press,
MANGALORE

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 1—8—1941

ಇಂಡೋ-ಚೀನ

ಪೂರ್ವ ಏಶಿಯದ ಕಡೆಗೆ ಯುದ್ಧದ ಕಾರ್ಮೋಡವು ಕವಿಯುತ್ತಿದೆ. ಜಪಾನು ಇಂಡೋ-ಚೀನದ ಮೇಲೆ ಆಕ್ರಮಣ ಮಾಡಿರುವುದಾಗಿ ಪ್ರಬಲವಾದ ಸುದ್ದಿಯಿದೆ. ಜಪಾನಿನ ಮಂತ್ರಿಮಂಡಳದಲ್ಲಿ ಬದಲಾವಣೆಯಾದ ಮೇಲೆ ಜಪಾನಿನ ಈ ಹೊಸ ಕಾರ್ಯಕ್ರಮವು ಈಗ ಹೊರಬಿದ್ದಿದೆ. ಇದನ್ನು ಬ್ರಿಟನು ಅಮೇರಿಕೆಗಳು ಪ್ರತಿಭಟಿಸಲಿರುವವೆಂದು ಸುತ್ತಲೂ ಸುದ್ದಿ ಹರಡಿದೆ.

ಇಂಡೋ ಚೀನವನ್ನು ಇಪ್ಪತ್ತನಾಲ್ಕು ತಾಸುಗಳೊಳಗೆ ಬಿಟ್ಟುಕೊಡಬೇಕೆಂದು ಜಪಾನು ಕೊನೆಯ ಮಾತನ್ನು ಹೇಳಿ ಕಳುಹಿಸಿತೆಂದು ಸುದ್ದಿಯಾಯಿತು. ಅದರೊಡನೆ, ಫ್ರೆಂಚ್ ಜಪಾನು ಸರಕಾರಗಳೊಳಗೆ ಇಂಡೋ ಚೀನದ ವಿಷಯ ಒಪ್ಪಂದದ ಕರಾರಾಯಿತೆಂದೂ ವಾರ್ತೆ ಹರಡಿದೆ. ಜಪಾನು ಇಂಡೋ ಚೀನದಲ್ಲಿ ಮುಂದೊತ್ತಿದರೆ, ಬ್ರಿಟನು ಅಮೇರಿಕಗಳು ಜಪಾನಿನ ಎದುರು ನಿಂತು ಕಾದಾಡಬೇಕಾಗಬಹುದೆಂದು ಈಗ ಜಗಜ್ಜಾಹಿರವಾಗಿ ತಿಳಿದುಬಂದಿದೆ. ಅಮೇರಿಕವು ಇಂದಿನ ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸಲು ಇದೇ ಸಂದರ್ಭವಾಗಬಹುದೇ ಎಂದು ಹಲವರ ನಿರೀಕ್ಷೆಯುಂಟು.

ಚೀನದ ಮೇಲೆ ಯಶಸ್ವಿಯಾಗಿ ಮುತ್ತಿಗೆ ಹಾಕುವ ಸಲುವಾಗಿ, ಇಂಡೋ ಏಶಿಯದ ಮೇಲೆ ಭದ್ರವಾದ ಕಾವಲಿಡುವ ಸಲುವಾಗಿ, ಶಾಂತಸಾಗರದಲ್ಲಿ ನಿರಾತಂಕವೆನಿಸಿ ತನ್ನ ಅಧಿಕಾರವನ್ನು ನಡೆಸುವ ಸಲುವಾಗಿ ಇಂಡೋ ಚೀನವು ಜಪಾನಿಗೆ ಎಂದಿನಿಂದಲೋ ಬೇಕಾಗಿತ್ತು. ಬಹುದಿನಗಳಿಂದ ಇದರ ಸಲುವಾಗಿ ಜಪಾನು ಪ್ರಯತ್ನಪಡುತ್ತಲೂ ಇತ್ತು.

ಈಗ ವಿಚಿ ಟೋಕಿಯೋ ಸರಕಾರಗಳೊಳಗೆ ಒಪ್ಪಂದವಾದ ವಿಷಯ ಕೇಳುತ್ತೇವೆ. ಒಪ್ಪಂದ ಕರಾರನ್ನು ಪರಿಶೀಲಿಸಿದಲ್ಲಿ ಇಂಡೋ ಚೀನದ ಪ್ರಾಣವನ್ನೇ ಜಪಾನು ಹೀರಿದೆಯೆಂದು ತಿಳಿದುಕೊಳ್ಳಬೇಕಾಗಿದೆ. ಕಾಮ್ಮರಿನ್ ಉಪಸಾಗರವು ಜಪಾನರ ವಶಬರಬೇಕು; ಸಾಯಿಗೋನ್ ವೈಮಾನಿಕ ಠಾಣ್ಯವನ್ನು ಜಪಾನು ಉಪಯೋಗಿಸಬೇಕು; ಶಾಂತಸಾಗರದಲ್ಲಿ ಭದ್ರವಾದ ಕಾವಲಿಡುವ ಬಗ್ಗೆ ಜಪಾನಾ ೩೦೦೦೦ ಸೈನ್ಯವನ್ನು ಸದ್ಯಕ್ಕೆ ಇಂಡೋ ಚೀನದ ವೆಚ್ಚದಿಂದ ಅಲ್ಲಿ ಇಡಬೇಕು ಎಂಬುದಿಷ್ಟು ಕರಾರಿನ ಮುಖ್ಯ ಅಂಶವಾಗಿದೆ. ಈ ಕರಾರಿನಂತೆ ಇಂಡೋ ಚೀನವು ಸಂಪೂರ್ಣವಾಗಿ ಜಪಾನರ ಕೈವಶ ಸಿಲುಕಿದಂತೆಯೇ ಆಯಿತು. ಜಪಾನು, ಇಂಡೋ ಚೀನವನ್ನು ಸ್ವಾಧೀನಪಡಿಸುವುದರಿಂದ ಅದು ನೆರೆಯ ರಾಷ್ಟ್ರಗಳ ಕಡೆಗೆ ಕಾಲು ಚಾಚಿದಂತಾಗುವುದೆಂದು ಖಂಡಿತವಾಗಿ ತಿಳಿದ ಬ್ರಿಟನು ಅಮೇರಿಕಗಳು ಮಾತ್ರ ಜಪಾನನ್ನು ನಿರ್ಬಂಧಿಸದೆ ಬಿಡುವಂತೆ ತೋರುವುದಿಲ್ಲ.

ಇಂಡೋ ಚೀನದ ಸುದ್ದಿಯು ಹೀಗೆ ಬಹಳ ಗೊಂದಲಕ್ಕೆ ಬಿದ್ದಿದೆ. ಇಂಡೋ ಚೀನದ ಧಾಳಿಯ ವಿಷಯವು ಬರಿಯ ಕಪಟವೆಂದೂ, ಜಪಾನು ಇಂಡೋ ಚೀನದಲ್ಲಿ ಗಳಭೆಯೆಬ್ಬಿಸಿ, ರಶ್ಯವನ್ನು ಮುತ್ತಲು ಯತ್ನಿಸುತ್ತಿದೆಯೆಂದೂ ಊಹಿಸುವವರೂ ಕೆಲವರಿದ್ದಾರೆ.

ಜಪಾನು ಇಂಡೋ ಚೀನವನ್ನು ಆಕ್ರಮಿಸಿದುದರಲ್ಲಿ ವಿಶೇಷ ಪ್ರಾಮುಖ್ಯತೆಯುಂಟೆಂಬುದು ಸತ್ಯ. ತನ್ನ ಸಾಮ್ರಾಜ್ಯವನ್ನು ದಕ್ಷಿಣಕ್ಕೆ ವಿಸ್ತರಿಸಬೇಕೆಂದು ಜಪಾನು ಬಹು ಕಾಲದಿಂದ ಹಾರೈಸಿತ್ತು. ಆದರೆ ಪಾಶ್ಚಾತ್ಯ ರಾಷ್ಟ್ರಗಳ ಪ್ರಾಬಲ್ಯದ ಕಾರಣ ಇದುವರೆಗೆ ಜಪಾನಿಗೆ ಆ ಆಶೆಯನ್ನು ಕೈಗೂಡಿಸಲಾಗಲಿಲ್ಲ. ಆದರೆ ಈಗ ಅವುಗಳು ಮಹಾ ಗಂಡಾಂತರದಲ್ಲಿ ಸಿಲುಕಿ ಬಿದ್ದಿರುವಾಗ, ಜಪಾನಿಗೆ ಅನುಕೂಲ ಸಂದರ್ಭವೊಂದು ಒದಗಿದೆ. ಜಪಾನು ಕಟ್ಟಬೇಕೆಂದಿರುವ ದಕ್ಷಿಣದ ಸಾಮ್ರಾಜ್ಯದಲ್ಲಿ ಇಂಡೋ-ಚೀನದ ಸ್ವಾಧೀನತೆಯು ಒಂದು ವಿಶೇಷವಾದ ಕಾರ್ಯವಾಗಿದೆ.

ಇಂಡೋ ಚೀನದ ಆಕ್ರಮಣದಲ್ಲಿ ಜಪಾನಿಗೆ ಚೀನಾ ಯುದ್ಧದ ವಿಷಯವೂ ಇದೆ. ಚೀನದ ಕರಾವಳಿಯ ಕೆಲವು ಬಂದರಗಳನ್ನು ಜಪಾನು ಇಷ್ಟರಲ್ಲಿ ಆಕ್ರಮಿಸಿಕೊಂಡಿದ್ದರೂ ಅಲ್ಲಿ ಪ್ರಬಲ ಹೋರಾಟವು ಸಾಗುತ್ತಿದೆ. ಮಾತ್ರವಲ್ಲದೆ ಬ್ರಿಟನು, ಅಮೇರಿಕ, ರಶ್ಯಗಳಿಂದ ಚೀನದವರಿಗೆ ಸಹಾಯವೂ ಬರುತ್ತಾ ಇತ್ತು. ಚೀನವನ್ನು ಸ್ವಾಧೀನ ಮಾಡಿಕೊಂಡರೆ, ವಿಶ್ವದಲ್ಲಿ ಜಪಾನು ಪ್ರಬಲ ರಾಷ್ಟ್ರವಾಗುವುದು ನಿಶ್ಚಯ. ರಶ್ಯವು ಜರ್ಮನಿಯೊಡನೆ ಯುದ್ಧಕ್ಕಿಳಿದ ಮೇಲೆ, ರಶ್ಯದಿಂದ ಚೀನಕ್ಕೆ ಯಾವ ಸಹಾಯವೂ ಈಗ ಬರುವಂತಿಲ್ಲ; ಹಾಗಾದರೆ ಬ್ರಿಟನು ಅಮೇರಿಕಗಳ ಸಹಾಯವನ್ನು ಮಾತ್ರ ತಡೆಯುವುದು ಜಪಾನಿಗೆ ಬಾಕಿಯುಳಿಯಿತು. ಅದರ ಸಲುವಾಗಿ ಈಗ ಜಪಾನು ಈ ಧೀರ ಹೆಜ್ಜೆಯನ್ನು ತೆಗೆದುಕೊಂಡಿರುವುದೆಂದು ತಿಳಿಯಬಹುದಾಗಿದೆ.

ಇಂಡೋ ಚೀನದ ಆಕ್ರಮಣದಿಂದ ಸಿಂಗಾಪುರದ ರಕ್ಷಣೆಯಲ್ಲಿ ಬೆದರಿಕೆಯೊದಗಬಹುದು. ಈಗಾಗಲೇ ಅಲ್ಲಿ ಸೈನ್ಯ ಸಂಗ್ರಹವು ಬಹಳ ಭರದಿಂದ ಸಾಗುತ್ತಿದೆಯೆಂದು ಕೇಳುತ್ತೇವೆ.

ಶಾಂತಸಾಗರದಲ್ಲಿ ಅಶಾಂತಿಯ ಕಲ್ಲೋಲಗಳು ಏಳಬಹುದೇ ಎಂದು ಈಗ ಎಲ್ಲರಲ್ಲಿಯೂ ಉದ್ವೇಗವು ಹುಟ್ಟಿರುವುದು.

ಪೂಣೆಯ ಪರಿಷತ್ತು

ಪೂಣೆಯಲ್ಲಿ ಸಪ್ರು ಮಂಡಲಿಯ ಪರಿಷತ್ತು ಕೂಡಿ ಭಾರತದ ರಾಜಕೀಯ ಸಮಸ್ಯೆಯ ಕುರಿತು ತಿರುಗಿ ಒಮ್ಮೆ ತನ್ನ ಅಭಿಪ್ರಾಯವನ್ನು ಸಾರಿತು. ಕಳೆದ ಸಲ ಈ ಮಂಡಳಿಯವರು ಮುಂಬಯಿಯಲ್ಲಿ ಸೇರಿ ಬ್ರಿಟಿಷ್ ಸರಕಾರದೊಡನೆ ಯಾವ ಕನಿಷ್ಠ ಬೇಡಿಕೆಗಳನ್ನು ಕೇಳಿದ್ದರೋ, ಆ ಬೇಡಿಕೆಗಳೂ, ಇಂದು ವಿಸ್ತರಿಸಲಾದ ವೈಸ್‌ರಾಯ್ ಕಾರ್ಯಕಾರೀ ಮಂಡಳದಲ್ಲಿ ಪೂರ್ತಿಗೊಳ್ಳದ ಕಾರಣ ಅವರು ತಮ್ಮ ಅಸಂತೃಪ್ತಿಯನ್ನು ಪೂಣೆಯಲ್ಲಿ ಸೇರಿ ಈಗಲೂ ಪ್ರಕಟಪಡಿಸಿದರು. ಕೇಂದ್ರದಲ್ಲಿ ಪ್ರಬಲವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ, ಅದರಲ್ಲಿ ಭಾರತೀಯರಿಗೆ ಹೊಣೆಗಾರಿಕೆಯ ಅಧಿಕಾರಗಳನ್ನು ಬಿಟ್ಟುಕೊಡಬೇಕಾಗಿ ಮಾಡಿದ ಅವರ ಮುಂಬಯಿ ನಿರ್ಣಯವು ಇಂದಿನ ವೈಸ್‌ರಾಯ್ ಕಾರ್ಯಕಾರೀ ಮಂಡಳದ ಬದಲಾವಣೆಯ ಕಾಲದಲ್ಲಿ ಸಂಪೂರ್ಣ ಅಲ್ಲಗಳೆಯಲ್ಪಟ್ಟಿತೆಂಬ ವಿಷಯದಲ್ಲಿ ಪ್ರತಿಯೊಬ್ಬರೂ ಸಂತಾಪಗೊಂಡು ಅಲ್ಲಿ ಮಾತನಾಡಿದರು.

ಸಪ್ರು ಮಂಡಳಿಯವರು ಪುಣೆಯಲ್ಲಿ ಪ್ರಾಮುಖ್ಯವಾಗಿ ಎರಡು ನಿರ್ಣಯಗಳನ್ನು ಮಂಜೂರು ಮಾಡಿದರು. ಶ್ರೀ. ಜಯಕರರು ಈ ನಿರ್ಣಯಗಳನ್ನು ಮಂಡಿಸಿದರು. ವೈಸರಾಯ್ ಕಾರ್ಯಕಾರೀ ಮಂಡಳವು ಸಂಪೂರ್ಣವಾಗಿ ಪುನರ್ಘಟಿತವಾಗಬೇಕು; ಭಾರತಕ್ಕೆ ಬ್ರಿಟನ್ ಹಾಗೂ ಬ್ರಿಟಿಷ ವಸಾಹತುಗಳ ಸಮಾನ ಸ್ಥಾನ ದೊರೆಯಬೇಕು ಎಂದು ಅವರು ಆ ನಿರ್ಣಯಗಳಲ್ಲಿ ಅತ್ಯಂತ ಆಗ್ರಹದಿಂದ ಕೇಳಿದ್ದಾರೆ. ಆದರೆ ಈ ಪರಿಷತ್ತಿನಲ್ಲಿ ಹಿಂದಿನ ಪರಿಷತ್ತಿನಂತೆ ತಿರುಗಿಯೂ ಒಮ್ಮೆ ವಿನಂತಿ ಮಾಡಿಕೊಳ್ಳುವುದೇ ಕಾರ್ಯವಾಗಿತ್ತಲ್ಲದೆ, ಬ್ರಿಟಿಷ್ ಸರಕಾರವು ಈ ವಿನಂತಿಗಳು ಯಾವುದನ್ನೂ ಕೇಳದೇ ಇದ್ದಲ್ಲಿ ಮುಂದೆ ಯಾವ ಕಾರ್ಯಕ್ರಮವನ್ನು ತಾವು ಕೈಕೊಳ್ಳುವುದಾಗಿಯೂ ಅವರು ಸೂಚಿಸಲಿಲ್ಲ. ಕೊಟ್ಟಷ್ಟು ಅಧಿಕಾರ ಸ್ವೀಕರಿಸಿಕೊಳ್ಳಬೇಕೆಂಬ ದೀನ ಮನೋಭಾವವನ್ನು ವ್ಯಕ್ತಪಡಿಸಿದ ಸಪ್ರು ಮಂಡಳಿಯವರ ಕೇಳಿಕೆಗಳು ಎಷ್ಟು ಮಾನ್ಯವಾಗಬಹುದೋ ಎಂದು ವಿಚಾರಣೀಯವಾಗಿದೆ.

ಸಪ್ರು ಮಂಡಳಿಯವರು ಎಷ್ಟು ಆಗ್ರಹದಿಂದ ದೀನಭಾವದಿಂದ ಕೇಳಿಕೊಂಡರೂ, ದೇಶದ ಅಭಿಪ್ರಾಯಕ್ಕೆ ಸಮ್ಮತಿಸಿ ಭಾರತೀಯರ ವಿಶ್ವಾಸವನ್ನು ಗಳಿಸಿಕೊಳ್ಳುವಂತೆ ಬ್ರಿಟಿಷ್ ಸರಕಾರವು ತನ್ನ ಧೋರಣೆಯನ್ನಿಟ್ಟು ನಡೆಯುವುದೆಂಬ ಭರವಸೆಯು ಯುದ್ಧದ ಬೇಗೆ ಹೆಚ್ಚುತ್ತಿರುವ ಈ ಕಾಲದಲ್ಲಿ ಭಾರತದ ಪರಿಸ್ಥಿತಿಯ ವಿಷಯ ಬ್ರಿಟನು ವಿಚಾರಿಸುವುದು ಅವಶ್ಯವಾಗಿದ್ದರೂ, ಸಂಭವವಾಗಿ ಅನಿಸುವುದಿಲ್ಲ. ಆದರೆ ಇಂತಹ ಕೇಳಿಕೆಗಳನ್ನು ಸರಕಾರದ ಮುಂದಿಡುವ ಮುಖಂಡರು ಅವುಗಳು ಪೂರೈಸದಿದ್ದಲ್ಲಿ ಮುಂದೇನು ಮಾಡುವರೆಂಬ ವಿಚಾರದಲ್ಲಿಯೇ ಹೆ… ನ ಮಹತ್ವವಿದೆ. ಆ ರೀತಿಯಿಂದ ವಿಚಾ… ರಿಸಿದರೆ ಪೂಣೆ ಪರಿಷತ್ತಿನ ಈ ಸಲ… ಕೇಳಿಕೆಯಲ್ಲಿಯೂ ಹೆಚ್ಚಿನ ಭಾರವಿರ… ವುದಾಗಿ ನಮಗೆ ತೋರುವುದಿಲ್ಲ.

ತಿಲಕ ಜಯಂತಿ

ಲೋಕಮಾನ್ಯ ಬಾಲ ಗಂಗಾಧರ ತಿಲಕರು ಭಾರತದ ರಾಷ್ಟ್ರೀಯ ಯು… ಪುರುಷರಲ್ಲೊಬ್ಬರು. ಅವರ ಜಯಂ… ಆಗೆಸ್ಟ್ ತಿಂಗಳ ಪ್ರಥಮ ದಿನ ಬರ… ತ್ತದೆ. ಅದು ಭಾರತೀಯರೆಲ್ಲರಿಗು… ಅತ್ಯಂತ ಪವಿತ್ರವಾದ ದಿನ. ರಾಷ್ಟ್ರೀಯ ಸಂಸ್ಥೆಯವರು ಆ ಮಹಾತ್ಮನ ಪುಣ… ದಿನವನ್ನು ಕಳೆದ ಇಪ್ಪತ್ತೊಂದು ವರ್ಷಗಳಿಂದ ಬಿಡದೆ ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾ ಬರುತ್ತಾರೆ. ನಿದ್ರಿ… ಭಾರತವನ್ನು ಸ್ವಾತಂತ್ರ್ಯದ ವೀರ ಕಹಳೆಯೂದಿ ಎಚ್ಚರಿಸಿದ ಆ ಮಹಾ ವ್ಯಕ್ತಿಯ ಜನ್ಮದಿನಾಚರಣೆಯು ಭಾರತೀಯರಿಗೆ ವಿಶೇಷ ಸ್ಫೂರ್ತಿದಾಯಕವಾದ ಕಾರ್ಯವಾಗಿದೆ.

ಲೋಕಮಾನ್ಯ ತಿಲಕರು ಉಜ್ವಲ ದೇಶಾಭಿಮಾನಿಗಳು. ಅನುಪಮ ಸ್ವಾರ್ಥತ್ಯಾಗಿಗಳು. ಅವಿಶ್ರಾಂತ ಕರ್ಮಯೋಗಿಗಳು, ಉನ್ನತ ಜ್ಞಾನ ಮೂರ್ತಿಗಳು. ಜನತಾ ಹೃದಯದಲ್ಲಿ ಅವರಿಗಿರುವ ಸ್ಥಾನವು ಅತ್ಯಂತ ಭದ್ರವಾದುದು. ರಾಷ್ಟ್ರದ ಸಲುವಾಗಿ ಬಹಳ ಸ್ವಾರ್ಥತ್ಯಾಗ ಮಾಡಿ ದುಡಿಯಬೇಕಾದೀ ಕಾಲದಲ್ಲಿ ಅವರ ನೆನಹು ಪ್ರತಿಯೊಬ್ಬರಿಗೂ ಉತ್ತಮ ಆದರ್ಶಕರವಾದುದು. ತಿಲಕರ ಜೀವನಾಭ್ಯಾಸದಿಂದ ಪ್ರತಿಯೊಬ್ಬ ಭಾರತೀಯನೂ ಕಲಿತುಕೊಳ್ಳಬೇಕಾದ ಪಾಠವು ಬಹಳವಿದೆ.

ದೇಶಸೇವಕರನ್ನು ನೆನೆಯುವುದು ಅವರಿಗೆ ಸಲತಕ್ಕ ಗೌರವವನ್ನು ಸಲ್ಲಿಸುವ ಸಲುವಾಗಿ ಮಾತ್ರವಲ್ಲ; ದೇಶಸೇವಾ ಕಾರ್ಯದಲ್ಲಿ ಸತ್ಯ ನಿರಂತರ ಜನತೆಯು ಹಿಂದುಳಿಯದಂತೆ ಸ್ಫೂರ್ತಿ ಕೊಡುವ ಕಾರ್ಯದ ಸಲುವಾಗಿಯೂ ಆಗಿದೆ. ತಿಲಕರ ಜೀವನ ಸ್ಮರಣೆಯಿಂದ ನಾವು ದೇಶದ ಸೇವೆ, ಸಂಸ್ಕೃತಿಯ ಸೇವೆ, ಧರ್ಮದ ಸೇವೆ, ಜ್ಞಾನದ ಸೇವೆಗಳನ್ನು ಮಾಡತಕ್ಕ ಉತ್ತಮ ಪಾಠಗಳನ್ನು ಕಲಿತುಕೊಳ್ಳಲಿದೆ. ಲೋಕಮಾನ್ಯ ತಿಲಕರಂತಹ ವ್ಯಕ್ತಿಗಳು ಯುಗಕ್ಕೆ ಒಮ್ಮೆಯೂ ಜನ್ಮವೆತ್ತಿ ಬರುವುದು ದುರ್ಲಭವಾಗಿದೆ. ಭಾರತದ ಉಜ್ವಲ ಇತಿಹಾಸದಲ್ಲಿ ಲೋಕಮಾನ್ಯ ತಿಲಕರ ಪುಣ್ಯನಾಮವು ಚಿರನೂತನವೆನಿಸಿ ಶಾಶ್ವತ ಕಾಲದವರೆಗೆ ಸ್ಥಿರವಾಗಿ ಮೆರೆಯಲಿದೆ. ನಾಡಿಗೆ ನಾಡೇ ಅವರ ಪುಣ್ಯತಿಥಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿ ಇಂದು ಸ್ಫೂರ್ತಿ ಚೇತನಗೊಳ್ಳುತ್ತಿದೆ.

ರಶ್ಯ-ಜರ್ಮನ್ ಯುದ್ಧ

ರಶ್ಯವನ್ನು ಗೆಲ್ಲುವುದು ಜರ್ಮನಿಗೆ ಸುಲಭಸಾಧ್ಯವಲ್ಲ

ಮೋಸ್ಕೋ ನಗರದ ಮೇಲೆ ಧಾಳಿಯಾಗಿದೆ ಗಂಡಾಂತರ ಹೆಚ್ಚಾಗುತ್ತಲಿದೆ

ರಶ್ಯದ ಕೀವ್, ಲೆನಿನ್‌ಗ್ರಾಡ್, ಮೋಸ್ಕೋ ಈ ಮೂರು ಪ್ರಸಿದ್ಧ ಸ್ಥಳಗಳ ಮೇಲೆ, ಜರ್ಮನರು ಧಾಳಿ ಮಾಡಿದರು. ಕೀವ್ ನಗರವನ್ನು ಸಂಪೂರ್ಣ ಸ್ವಾಧೀನಪಡಿಸಿರುವುದಾಗಿ ಜರ್ಮನರು ಹೇಳುವುದಿದ್ದರೂ ರಶ್ಯಾದಿಂದ ಬಂದ ಸುದ್ದಿಯಂತೆ ಅದನ್ನು ನಂಬಲಾಗುವುದಿಲ್ಲ. ಆದರೆ ಕೀವ್ ನಗರದ ಬಳಿವರೆಗೆ ಜರ್ಮನರು ಜೋರಿನ ಯುದ್ಧ ಮಾಡುತ್ತಿರುವರೆಂಬುದಂತೂ ನಿಜ. ಲೆನಿನ್‌ಗ್ರಾಡಿನ ವಿಷಯವೂ ಇದೇ ತೆರನಾಗಿದೆ. ಲೆನಿನ್‌ಗ್ರಾಡನ್ನು ವಶಪಡಿಸಿಕೊಳ್ಳುವುದು ಜರ್ಮನರಿಗಷ್ಟು ಸುಲಭಸಾಧ್ಯವೆನಲಾಗುವುದಿಲ್ಲ. ಆದರೆ ನಾಲ್ಕು ದಿಕ್ಕುಗಳಿಂ ಮುಂದೊತ್ತಿದ ಜರ್ಮನ್‌ಸೈನ್ಯದ ಆಕ್ರಮಣದಿಂದ ರಶ್ಯಕ್ಕೆ ತೀವ್ರ ಗಂಡಾಂತರವೊದಗಿದೆಯೆಂಬುದು ನಿಶ್ಚಯವಾಗಿದೆ.

ರಶ್ಯನರ ಹೊಸ ರೀತಿಯ ಕದನ

ರಶ್ಯನರ ಯುದ್ಧ ರೀತಿ ಹೊಸ ತೆರನಾಗಿದೆ. ಜರ್ಮನರು ಮುಂದೊತ್ತಿ ಬರುವಲ್ಲಿ ಅವರು ಸಂಪೂರ್ಣ ಒಕ್ಕಲು ತೆಗೆದು ಆ ಸ್ಥಳಗಳಿಂದ ಮುಂಚಿತವಾಗಿಯೇ ಹೋಗಿರುತ್ತಾರೆ. ಹಾಗಾಗಿ ಜರ್ಮನರು ಆ ಊರನ್ನು ಸ್ವಾಧೀನಪಡಿಸಿದರೂ ಅವರಿಗೆ ಅಲ್ಲಿ ಏನೂ ಪ್ರಯೋಜನಕಾರಿಯಾದ ವಸ್ತು ಸಿಗುವಂತಿಲ್ಲ. ಮತ್ತೆ ವಿಸ್ತಾರವಾದ ರಶ್ಯನ್ ಭೂಮಿಯಲ್ಲಿ, ರಶ್ಯನ್ ಸೈನಿಕರು ಅಲ್ಲಿ ಅಲ್ಲಿ ಅಡಗಿದ್ದು, ಜರ್ಮನರನ್ನು ಸಂದರ್ಭ ದೊರೆತಾಗ ಹೊಡೆಯುವ ಗೆರಿಲ್ಲಾ ಯುದ್ಧ ಕ್ರಮವನ್ನು ಪ್ರಾರಂಭಿಸಿದ್ದಾರೆ. ಹೀಗಾಗಿ ಜರ್ಮನರು ಈಗ ವಿಚಾರಮಾಡಬೇಕಾಗಿ ಬಂದಿದೆ. ವೈರಿಗಳ ಊರುಗಳು ಸ್ವಾಧೀನಬಂದರೂ ಪ್ರಯೋಜನವಿಲ್ಲದೆ ಆಗುತ್ತದೆ, ವೈರಿಯು ಎಂದು ಹೇಗೆ ಯಾವಲ್ಲಿ ಹೊಡೆಯುವನೆಂಬ ವಿಚಾರವೂ ತಿಳಿವಂತಿಲ್ಲ. ಹೀಗಾಗಿ ಪೇಚಾಟಕ್ಕಿಟ್ಟದೆಯೆನಬೇಕು. ಆದರೂ ಜರ್ಮನರ ಸಮರ ಸಾಹಸವು ಪ್ರಶಂಸನೀಯವೇ ಆಗಿದೆ.

ಮೋಸ್ಕೋದ ಮೇಲೆ ಧಾಳಿ

ಜರ್ಮನರು ಕೆಲವು ಸಾರಿ ರಶ್ಯನರ ಮುಖ್ಯ ಪಟ್ಟಣವಾದ ಮೋಸ್ಕೋದ ಮೇಲೂ ಧಾಳಿ ಮಾಡಿದರು. ಮೋಸ್ಕೋದ ಧಾಳಿಯೆಂದರೆ ರಶ್ಯಕ್ಕೆ ಬಂದೊದಗಿದ ಒಂದು ಪ್ರಬಲ ಗಂಡಾಂತರವೆನ್ನಲು ಯಾವ ಅಡ್ಡಿಯೂ ಇಲ್ಲ. ರಶ್ಯನರು ಬುಕಾರೆಸ್ಟ್, ಹೆಲ್ಸಿಂಕಿ ಮೊದಲಾದ ಅರ[illegible]ತ ಪಟ್ಟಣಗಳ ಮೇಲೆ ಧಾಳಿ ಮಾಡಿದ ಕಾರಣ ತಾವು ಮೋಸ್ಕೋದ ಮೇಲೆ ಬಾಂಬು ಸುರಿಸಬೇಕಾಯಿತೆಂದು ಜರ್ಮನರ ಹೇಳಿಕೆಯಿದೆ. ಆ ಮಾತು ಹೇಗಿದ್ದರೂ, ರಶ್ಯವನ್ನು ಭೀಕರವಾದ ಆಕ್ರಮಣ ಮೂಲಕವಾದರೂ ಬೆದರಿಸಿ ಶರಣುಗೊಳಿಸಬೇಕೆಂಬ ಮಹತ್ವಾಕಾಂಕ್ಷೆ ಜರ್ಮನಿಗಿರುವುದರಿಂದ ಹೀಗೆ ಹಠತ್ತಾಗಿ ಮೋಸ್ಕೋದ ಮೇಲೂ ಬಾಂಬಿನ ಮಳೆ ಕರೆದಿರುವುದಾಗಿ ನಾವು ಯೋಚಿಸಬಹುದಾಗಿದೆ. ಅರಮನೆ, ಮದ್ದುಗುಂಡುಗಳ ಕಾರ್ಖಾನೆ ಮೊದಲಾದ ಕಡೆಗಳಿಗೇ ಬಾಂಬು ಸುರಿಸುವುದರ ಉದ್ದೇಶ ಬೇರೇನೂ ಇರುವುದಾಗಿ ತಿಳಿಯಬೇಕಾಗಿಲ್ಲ. ಲಂಡನಿನ ಮೇಲೆ ಜರ್ಮನರು ತೀವ್ರ ಧಾಳಿ ಮಾಡಿದಾಗ ಯಾವ ಮಹತ್ವಾಕಾಂಕ್ಷೆ ಅವರಿಗಿದ್ದಿತೋ ಅದಕ್ಕಿಂತ ಕಡಿಮೆಯ ಮಹತ್ವಾಕಾಂಕ್ಷೆ ಮೋಸ್ಕೋದ ಧಾಳಿಯಲ್ಲಿಯಾದರೂ ಜರ್ಮನರಿಗೆ ಇರಬಹುದಾಗಿ ಊಹಿಸುವ ಅವಶ್ಯವಿಲ್ಲ.

ರಶ್ಯನರ ವೀರ ಹೋರಾಟ

ಜರ್ಮನರು ಹೀಗೆ ಅಭಿಪ್ರಾಯಪಟ್ಟಿದ್ದರೂ ರಶ್ಯನರು ಬಹುಬೇಗ ಬೆದರಿ ಶರಣಾಗುವಷ್ಟು ನಿರುತ್ಸಾಹಿಗಳಲ್ಲ. ಕಳೆದ ಹಲವಾರು ವರ್ಷಗಳಿಂದ ಕಷ್ಟಪಟ್ಟು ಸ್ವಕೀಯ ಸ್ವತಂತ್ರ ರಾಜ್ಯಭಾರದ ಫಲವನ್ನುಂಡ ಸ್ವತಂತ್ರ ರಶ್ಯನರು ಅದನ್ನು ಪ್ರಾಣ ಕೊಟ್ಟಾದರೂ ಬಿಟ್ಟುಬಿಡಲಾರರು. ರಶ್ಯದ ಅಪಜಯದೊಡನೆ ಕಮ್ಯುನಿಸಮ್ಮಿನ ಸಮಾಧಿಯೂ ಆಗಬಹುದೆಂದು ರಶ್ಯನರು ಜೀವದ ಹಂಗು ತೊರೆದು ಕಾದಾಡದಿರಲಾರರು. ರಶ್ಯದಲ್ಲಿ ಸ್ಟಾಲಿನ್ ವಿರೋಧಿಗಳ ಪಂಗಡವೊಂದು ಇರುವುದೆಂಬುದು ನಿಜವೆನಬೇಕು. ಟ್ರಾಟ್‌ಸ್ಕಿ ಪಂಗಡಿಗರು ಸ್ಟಾಲಿನನನ್ನು ಪದಚ್ಯುತನನ್ನಾಗಿ ಮಾಡಲು ಯತ್ನ ಮಾಡಬಹುದಾದರೂ, ಅವರು ಹಿಟ್ಲರನು ಹೇಳುವಂತೆ, ಝಾರನನ್ನು ತಿರುಗಿ ಸಿಂಹಾಸನಕ್ಕೇರಿಸುವ ಜರ್ಮನ್ ಧೋರಣೆಗೆ ಸಮ್ಮತಿಸುವಷ್ಟು ಮೂರ್ಖರಿರಲಾರರೆಂದು ತಿಳಿದುಕೊಳ್ಳಬಹುದಾಗಿದೆ. ರಶ್ಯಾ ಜರ್ಮನ್ ಯುದ್ಧದ ಗತಿಯು ಏನೆಂದು ಈಗ ಹೇಳಬರುವುದಿಲ್ಲವಾದರೂ, ಹಿಟ್ಲರನಿಗೆ ರಶ್ಯವು ತುತ್ತು ನುಂಗಲಾರದ ಕಬಳವಾಗಿ ಪರಿಣಮಿಸಬಹುದೆಂದು ಹೇಳಲು ಸಾಕಷ್ಟು ಪ್ರಮಾಣಗಳಿರುತ್ತವೆ.

ಅಖಂಡ ರಶ್ಯನರು ಇಂದು ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ, ಅಖಿಲ ಜಗತ್ತಿನ ಸ್ವಾತಂತ್ರ್ಯರಕ್ಷಣೆಗಾಗಿ ಕಾದಾಡುತ್ತಾರೆ. ಯೂರೋಪಿನ ವಿವಿಧ ಭಾಗಗಳಲ್ಲಿ ತುಂಡುತುಂಡಾದ ರಾಜ್ಯಗಳಲ್ಲಿ ಹಿಟ್ಲರನು ಬೇಗನೇ ಜಯಶಾಲಿಯಾದರೂ, ಒಂದೇ ಭೂಖಂಡವಾದ, ಹಲವು ಸಮಯಗಳಿಂದ ಸ್ವತಂತ್ರ ಆಡಳಿತದ ಸವಿಯನ್ನನುಭವಿಸಿದ ರಶ್ಯನರಿಂದ ಜರ್ಮನರು ಸ್ವಾತಂತ್ರ್ಯ ಅಪಹರಿಸಿಕೊಳ್ಳುವುದು ಬಹಳ ದುಸ್ಸಾಧ್ಯವಾದ ಕೆಲಸವೇ ಆಗಿದೆ.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1906 CANARA BANK LIMITED

NOTICE

In the Court of the District Munsif of Mangalore

O. P. No. 53 of 1940.

Between:—

Deyakku Hengsu as Ejamanthi of her family also & others . . . . Petitioners.

and

Lokayya Shetty as adaltedar of his family & others . . . . . . Respondents.

To

(6) Ramakke daughter of Appu, residing in Balepuni village Kasargod Taluk . . . . . . 6th Respondent.

Please take notice that the above named petitioners have filed the above application for scaling down the debt under the mortgage dated 24-8-1921 executed by them in favour of the mother of the 1st respondent and that the said application stands posted to 28-8-1941 for final disposal. You are hereby required to appear before this Court on the said day at 11 A. M. failing which the same shall be decided in your absence.

Published under orders of the Court in R. I. A. No. 754 of 1941 dated 26-7-1941.

Mangalore } G. Somasheker Rao,
27-7-1941 } Vakil for Petitioners.

NOTICE

In the Court of the District Munsif of Mangalore

R. E. P. No 789/1940 in S. C. 414/1940

Between:—

A. M. L. D'Souza . Petitioner.

and

1. Gowri Hengsu . . }
2. Rama Shettigara . } Respondents.
3. Sheena Shettigara . }

Notice to 3rd Respondent Sheena Shettigara, son of Venkappa Shettigara, residing in Sashihitlu village, Mangalore Taluq, is hereby given that the Petitioner abovenamed has applied for sale of the immoveable properties mentioned in the sale papers filed by him in court. The respondent is hereby informed that the 12th day of August 1941 has been fixed for settling the terms of the proclamation of sale.

(By order of the Court)

Mangalore } JOHN GONSALVES,
22-7-1941 } Vakil for Petitioner.

ವಾರದ ಕತೆ:

ಮೀನಾಕ್ಷಿ ಮದುವೆಯಾಗಿದ್ದಳು

ಕತೆಗಾರ: ಕೆ. ಎಸ್. ಶೆಟ್ಟಿ

ಮೀನಾಕ್ಷಿ! ಹಳ್ಳಿಯ ಪ್ರಪಂಚದಲ್ಲಿ ಅದೆಷ್ಟು ಸುಂದರವಾದ ಹೆಸರು! ಅವಳು ತನ್ನ ತಾಯ್ತಂದೆಗಳ ಒಬ್ಬಳೇ ಮಗಳು. ಅವರು ಶ್ರೀಮಂತರ ಸಾಲಿಗೆ ಸೇರಿದವರಲ್ಲವಾದರೂ, ಬರೀ ಗರೀಬರೂ ಆಗಿರಲಿಲ್ಲ. ತುಂಬಿದ ಯೌವನ ಭಾರದಿಂದ ಅವಳ ಅಂಗೋಪಾಂಗಗಳು ನರ್ತಿಸುತ್ತಿದ್ದವು. ಸಾಯಂಕಾಲದ ಸಮಯ, ಸೂರ್ಯನು ಮುಳುಗಲಿಕ್ಕಾಗಿದ್ದನು. ತಲೆಯ ಮೇಲೆ ತರಕಾರಿಯ ಬುಟ್ಟಿಯನ್ನು ತೆಗೆದುಕೊಂಡು ಪೇಟೆಯಿಂದ ಮನೆ ಮಾರ್ಗವನ್ನು ಹಿಡಿದಿದ್ದಳು. ಆದರೆ ಅವಳ ಮನಸ್ಸು ಬಹಳ ಗಂಭೀರವಾಗಿತ್ತು. ಹೃದಯದ ಭಾವವು ಮೋರೆಯಿಂದ ತಿಳಿಯುತ್ತಿದ್ದಿಲ್ಲ. ಮೆಲ್ಲಮೆಲ್ಲಗೆ ನಡೆದುಬರುತ್ತಿದ್ದಳು. 'ಮೀನು, ಸಂತೆಗೆ ಹೋಗಿದ್ದಿಯಾ?' ಎಂದು ಕೇಳಿದಾಗಲೇ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದ ಅವಳು ಪ್ರತ್ಯಕ್ಷ ಲೋಕಕ್ಕೆ ಬಂದಳು. 'ಹೌದು, ರಾಮು, ಸಂತೆಯಿಂದ ಬಂದೆ' ಅವಳಂದಳು.

ರಾಮು ೨೦–೨೫ ವರ್ಷ ಪ್ರಾಯದ ಸುಂದರ ತರುಣ. ಪ್ರಾಮಾಣಿಕ ಮತ್ತು ನಂಬಿಕೆಯವನಾಗಿದ್ದ. ಉತ್ತಮ ನಡತೆಗಳ ಬಗ್ಗೆ ಎಲ್ಲರಿಗೂ ಅವನ ಮೇಲೆ ಅಭಿಮಾನವಿದ್ದಿತು. ಅವನೂ ಮೀನಾಕ್ಷಿಯೂ ಮಾರ್ಗದ ಒಂದು ಬದಿಯಲ್ಲಿದ್ದ ನೀರಳೆಕಟ್ಟೆಯ ಮೇಲೆ ಕೂತರು. ಇಬ್ಬರೂ ಹತ್ತಿರ ಹತ್ತಿರ ಕೂತಿದ್ದರು. ಮೀನಾಕ್ಷಿಯ ತರಕಾರಿ ಬುಟ್ಟಿಯು ಅವರಿಬ್ಬರನ್ನು ಪ್ರತ್ಯೇಕಿಸಿದ್ದಿತು.

'ಮೀನು, ನಿನ್ನೆ ನಿನ್ನ ತಂದೆಯ ಹತ್ತಿರ ಪ್ರಸ್ತಾಪ ತೆಗೆದೆ; ಆದರೆ ಅವನು ಏನೂ ಹೇಳಲಿಲ್ಲ?'

'ರಾಮು; ಇನ್ನೊಬ್ಬರು—ಗುಟ್ಟಿಯಾಕೆ—ಗುತ್ತಿನ ಶಾಮುಶೆಟ್ಟರು ನನ್ನನ್ನು ಕೇಳಿದ್ದಾರೆ. ಅವರಿಗೆ ಏನೂ ಕೊಡಬೇಕಾಗಿಲ್ಲ. ಮೇಲಾಗಿ ಸೀರೆ ಕುಪ್ಪಸ, ಚಿನ್ನ ಆಭರಣ, ಎಲ್ಲವನ್ನು ತಾನೇ ತರುತ್ತೇನೆಂದು ಅವರು ಹೇಳಿದ್ದಾರಂತೆ!'

'ಮೀನು! ನನ್ನನ್ನು ಕಂಡು ನಿನ್ನ ತಂದೆಗೆ ಯಾಕೆ ಅಷ್ಟು ತಿರಸ್ಕಾರವೋ- ನನಗೆ ಗೊತ್ತಾಗಿರಲಿಲ್ಲ....'

'ಆದರೆ ರಾಮು!-ನಾನು ಮಾತ್ರ ನಿನ್ನ ಹೊರತಲ್ಲದೆ ಬೇರೆ ಯಾರ ಕೈಯನ್ನೂ ಹಿಡಿಯುವುದಿಲ್ಲ. ತಂದೆ ಹಟ ಹಿಡಿದರೆ ಸಾಯುವೆನು. ಅಥವಾ ಸನ್ಯಾಸಿನಿಯಾಗುವೆನು.'

'ಮೀನು! ನಾನೇನು ಹೇಳಬೇಕೋ ನನಗೆ ಗೊತ್ತಾಗದು. ಪ್ರಪಂಚದ ಎಲ್ಲ ಕೆಲಸಗಳು ಹಣದಿಂದಾಗುವವು. ನನ್ನ ಹತ್ತಿರ ಅದೇ ಇಲ್ಲ; ಮತ್ತೆ ಗುತ್ತಿನವರ ಹತ್ತಿರ ಅದು ರಾಶಿಯಾಗಿದೆ.'

'ರಾಮು! ಚಿಂತಿಸಬೇಡ. ನನಗೆ ಹಣವಲ್ಲ, ಗುಣಬೇಕು; ನೀನು ಬೇಕು. ತಂದೆ ಹಟಮಾಡಿದರೆ ನಾನು ಹೊಳೆಗೆ ಬಿದ್ದೆ....'

ಮೀನಾಕ್ಷಿಗೆ ೧೮–೨೦ ವರ್ಷ ಆಗಿರಬಹುದು; ಅವಳ ತಾಯಿಯಿಂದ ತಂದೆ

ಸವಿನುಡಿಗಳನ್ನು ಕೇಳಿ ರಾಮುಪ್ಪನಿಗೆ ಪರಮಾನಂದವಾಯಿತು.

ಸೂರ್ಯನು ಮುಳುಗಿದ್ದನು. ಕತ್ತಲು ಹರಡುತ್ತ ಇತ್ತು. ಮೀನಾಕ್ಷಿಯು ಎದ್ದು ನಿಂತಳು. ರಾಮುಪ್ಪ ತರಕಾರಿಯ ಬುಟ್ಟಿಯನ್ನು ಅವಳ ತಲೆಯ ಮೇಲಿಟ್ಟ. ಇಬ್ಬರೂ ಲೋಕಾಪವಾದಕ್ಕೆ ಅಂಜಿ ನಡೆಯಬೇಕಾಗಿತ್ತು. ಮದುವೆ ನಿಶ್ಚಯವಾದ ಮದುಮಕ್ಕಳೂ ಕೂಡ ಒಬ್ಬರೊಬ್ಬರ ಮೋರೆ ನೋಡಲಿಕ್ಕಿಲ್ಲ; ಪರಸ್ಪರ ಕಂಡು ಮಾತನಾಡಲಿಕ್ಕಿಲ್ಲ. ಮತ್ತೆ ಮೂರನೆಯವರು ಬಂದು ಮಾತನಾಡುವುದು ಮಹಾಪರಾಧವಲ್ಲವೆ? ಅದರಲ್ಲೂ ಮೀನಾಕ್ಷಿ ರಾಮುಪ್ಪ ಇದ್ದುದು ನಿರ್ಜನಪ್ರದೇಶ ಸಾಲದುದಕ್ಕೆ ಅಂಧಕಾರವೂ ತುಂಬುತ್ತ ಬಂದಿತ್ತು! ಇಬ್ಬರೂ ತಮ್ಮ ತಮ್ಮ ದಾರಿ ಹಿಡಿದು ಬೇಗಬೇಗ ಹೋದರು.

★

ಮೀನಾಕ್ಷಿಯ ವಿವಾಹವು ಗುತ್ತಿನ ಶಾಮುಶೆಟ್ಟರೊಂದಿಗೆ ಆಗುವುದೆಂದು ನಿಶ್ಚಯವಾಯಿತು. ಅವರಿಗೆ ಈಗ ೬೦ ಕಳೆದು ೬೧ರ ವರ್ಷವು ನಡೆಯುತ್ತಿತ್ತು. ಹಿಂದೆ ಮೂರು ಮದುವೆಗಳಾಗಿ ಆ ಮೂವರೂ ಹೆಂಡಂದಿರು ಸ್ವರ್ಗವಾಸಿಗಳಾಗಿದ್ದರು. ಈಗ ಶಾಮುಶೆಟ್ಟರ ದೃಷ್ಟಿ ಮೀನಾಕ್ಷಿಯ ಮೇಲೆ ಹೊರಳಿತ್ತು. ಅವರ ಶರೀರವು ಮುದಿಯಾಗಿತ್ತಾದರೂ ಮನಸ್ಸು ಮಾತ್ರ ೨೦–೨೫ ವರ್ಷಗಳ ಯುವಕನದಾಗಿಯೇ ಉಳಿದಿತ್ತು.

ಮೀನಾಕ್ಷಿ, ಪ್ರಾಣವನ್ನಾದರೂ ಕೊಡುವಳು, ಆದರೆ ತನ್ನ ಕೈಹಿಡಿಯಲಾರಳು ಎಂಬ ಸಂಗತಿ ಶಾಮುಶೆಟ್ಟರಿಗೆ ತಿಳಿದಾಕ್ಷಣ—ಅವರ ಸಿಟ್ಟಿಗೆ ಪಾರವುಳಿಯಲಿಲ್ಲ. ಮೀನಾಕ್ಷಿಯ ಈ ಧಿಟ್ಟತನಕ್ಕೆ ರಾಮುಪ್ಪನು ಕಾರಣ ಪುರುಷ ಎಂಬುದು ಅವರಿಗೆ ತಿಳಿಯಿತು. ಶಾಮುಶೆಟ್ಟಿ ಮತ್ತು ರಾಮುಪ್ಪ ಇಬ್ಬರೂ ಬದುಕಿ ಉಳಿಯಬಾರದೆಂದು ಅವರಿಗೆ ಅನ್ನಿಸಿತು. ಒಂದೋ ಶಾಮುಶೆಟ್ಟಿ ಬದುಕಬೇಕು ಅಥವಾ ರಾಮುಪ್ಪ ಉಳಿಯಬೇಕು ಎಂದು ಅವರು ಪ್ರತಿಜ್ಞೆ ತೆಗೆದುಕೊಂಡರು. ರಾಮುಪ್ಪನು ಶೆಟ್ಟರ ಮನೆಯ ೫೦೦ ರೂಪಾಯಿಗಳ ಆಭರಣ ಕದ್ದನೆಂದು ಸುಳ್ಳು ಅಪರಾಧ ಹೊರಿಸಲ್ಪಟ್ಟು, ಅವನಿಗೆ ೨ ವರ್ಷಗಳ ಕಠಿಣ ಶಿಕ್ಷೆಯಾಯಿತು. ರಾಮುಪ್ಪನ ಕುರಿತು ಜೈಲಿನಿಂದ ಭಯಂಕರವಾದ ಸುದ್ದಿ ವರ್ತಮಾನಗಳು ಬರತೊಡಗಿದವು. ಮೀನಾಕ್ಷಿ ರಾಮುಪ್ಪನ ನರಕಯಾತನೆಗಳ ದುಃಖಕಾರೀ ಸಮಾಚಾರಗಳನ್ನು ಕೇಳಿ ಕೇಳಿ ಸುಣ್ಣವಾದಳು. ಕೊನೆಗೆ ಜೈಲಿನಲ್ಲಿ ರಾಮುಪ್ಪನು ಬದುಕುವುದೇ ಕಷ್ಟ ಎಂಬ ವಾರ್ತೆ ಅವಳ ಕಿವಿಗೆ ಬಿದ್ದಿತು! ರಾಮುಪ್ಪನ ಜೀವರಕ್ಷಣೆಗಾಗಿ ಅವಳು ಶಾಮುಶೆಟ್ಟರನ್ನು ಮದುವೆಯಾಗಲು ಒಪ್ಪಿಕೊಂಡಳು. ಮದುವೆ ಆಯಿತು.

ಮದುವೆಯಾಗಿ ಎರಡು ತಿಂಗಳುಗಳು ಕೂಡ ಕಳೆದಿರಲಿಲ್ಲ. ರಾಮುಪ್ಪ ನಿರಪರಾಧಿ ಎಂದು ಜೈಲಿನಿಂದ ಅವನ ಬಿಡುಗಡೆಯಾಯಿತು. ಅವನು ತನ್ನ ಹಳ್ಳಿಗೆ ಬಂದು ನೋಡಿದ. ಮೀನಾಕ್ಷಿಯನ್ನು ಮದುವೆಯಾಗಿ ಸ್ವರ್ಗಸುಖವನ್ನು ಅನುಭವಿಸುವೆನೆಂದು ಅವನು ಆಶೆಗೊಂಡಿದ್ದ. ಆದರೆ ಇಲ್ಲಿಯ ಸಂಗತಿಗಳು ಯಾವುವೂ ಅವನಿಗೆ ತಿಳಿದಿರಲಿಲ್ಲ. ತಿಳಿದ ಮೇಲೆ ಅವನ ಆಶೆ ನಿರಾಶೆಯಾಯಿತು; ಜೀವನ ನೀರಸವಾಯಿತು; ಹಳ್ಳಿಗೆ ಬಂದ ಆ ದಿನವೇ ಮರೆಯಾದ. ಮತ್ತೆ ಆ ಪ್ರೇಮಿಯನ್ನು ಯಾರೂ ನೋಡಲಿಲ್ಲ.

ರಾಮುಪ್ಪನ ಬಿಡುಗಡೆಯಾದ ಮರುದಿನ ಶಾಮುಶೆಟ್ಟರ ಮನೆಯಂಗಳದ ಬಾವಿಯಲ್ಲಿ ಒಂದು ಹೆಣವಿರುವುದನ್ನು ಜನರು ಎತ್ತಿಹಾಕಿದರು. ಅದು ಮೀನಾಕ್ಷಿಯದಾಗಿತ್ತು! ಮೀನಾಕ್ಷಿ, ರಾಮುಪ್ಪನನ್ನು ಬಿಟ್ಟು ಶಾಮುಶೆಟ್ಟರನ್ನು ಮದುವೆಯಾಗಿದ್ದಳು!

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಆ ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಕ್ರಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪಟೇಲ್ ರೋಡ್, ಮುಂಬಾಯಿ 4.

Sole Manufacturer: Dr. D. N. JASANI, Vithalbhai Patel Road, BOMBAY 4

Madras Agent: Appah & Co, China Bazar Madras.

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಜಿಲ್ಲಾ ಸಮಾಚಾರಗಳು

ಶ್ರೀ. ಎನ್. ಶೇಷಗಿರಿರಾಯರು ಎರಡನೆಯ ಸಲ ಸತ್ಯಾಗ್ರಹ ಮಾಡಿದರು.

ಒಮ್ಮೆ ಸತ್ಯಾಗ್ರಹಮಾಡಿ ಬಂಧಿತರಾಗಿ ಸೆರೆಮನೆಯಲ್ಲಿ ಶಿಕ್ಷೆಯ ಅವಧಿ ತೀರಿಸಿ ಬಿಡುಗಡೆಯಾಗಿ ಬಂದ ಶ್ರೀ. ಎನ್. ಶೇಷಗಿರಿ ರಾಯರು ಎರಡನೆಯ ಸಲ ಮಂಗಳೂರಿಂದ ತಾ. ೨೯ರಂದು ಯುದ್ಧವಿರುದ್ಧ ಘೋಷಿಸಿ ಸತ್ಯಾಗ್ರಹಮಾಡಿ ಹೊರಟಿರುವರು.

ಶ್ರೀಗಳಾದ ದೈಯಂದ್ರ ಬೀರುಶೆಟ್ಟಿ ಕಾಪು ನರಸಿಂಹ ಶೆಣೈ, ವಿ. ಕೆ. ಐತಾಳರ ಬಿಡುಗಡೆ

ದಕ್ಷಿಣ ಕನ್ನಡದ ಸತ್ಯಾಗ್ರಹಿಗಳಾಗಿ, ಹಿಂಡಲ್ಗಿ ಸೆರೆಮನೆಯಲ್ಲಿದ್ದ ಶ್ರೀ ದೈಯಂದ್ರ ಬೀರುಶೆಟ್ಟಿ, ಶ್ರೀ. ಕಾಪು ನರಸಿಂಹ ಶೆಣೈ, ಶ್ರೀ ವಿ. ಕೆ. ಐತಾಳ ಇವರು ತಮ್ಮ ಶಿಕ್ಷೆಯ ಅವಧಿ ತೀರಿಸಿ ತಾ. ೨೧ರಂದು ಅಲ್ಲಿಂದ ಬಿಡುಗಡೆ ಹೊಂದಿ ಬಂದಿರುವರು.

ಶ್ರೀಗಳಾದ ಮುಲ್ಕಿ ಬೊಳಿಗ ಶೆಟ್ಟಿ ಕಾರಂತರ ಬಿಡುಗಡೆ

ಶ್ರೀ. ಯು. ಶ್ರೀನಿವಾಸ ಮಲ್ಯರು ಮತ್ತು ಶ್ರೀ. ಬಿ. ವೆಂಕಟ್ರಾಯ ಬಾಳಿಗರು, ತಮ್ಮ ಶಿಕ್ಷೆಯ ಅವಧಿ ತೀರಿಸಿ ತಾ. ೧೮ರಂದು ತ್ರಿಚುನಾಪಳ್ಳಿ ಸೆರೆಮನೆಯಿಂದ ಬಿಡುಗಡೆ ಹೊಂದುವರೆಂದೂ, ಶ್ರೀ. ಪಿ. ಬಿ. ಶೆಟ್ಟಿ ಮತ್ತು ಶ್ರೀ. ಕೆ. ಎಲ್. ಕಾರಂತರು ತಾ. ೯ರಂದು ತ್ರಿಚುನಾಪಳ್ಳಿ ಸೆರೆಮನೆಯಿಂದ ಬಿಡುಗಡೆ ಹೊಂದುವರೆಂದೂ ತಿಳಿದಿದೆ.

ಬೊಂಬಯಿ ಪ್ರಾಂತದ ಸೆರೆಮನೆಯಲ್ಲಿರುವ ದಕ್ಷಿಣ ಕನ್ನಡ ಮತ್ತು ಮಲಬಾರ ಸತ್ಯಾಗ್ರಹಿಗಳು

ಜಿಲ್ಲಾ ಸಂಚಾಲಕರ ಹೇಳಿಕೆ

ಧಾರವಾಡದಲ್ಲಿ ಕೂಡಿದ ಜಿಲ್ಲಾ ಸತ್ಯಾಗ್ರಹ ಸಂಚಾಲಕರ ಸಭೆಗೆ ತೆರಳಿದ ಶ್ರೀ ವ ನೋಡದ ಬಳಿಗರು ಅಲ್ಲಿನ ಕಾರ್ಯಕಲಾಪಗಳನ್ನು ತೀರಿಸಿ ಹಿಂಡಲಗಿ ಜೈಲಿಗೆ ಹೋಗಿ ಅಲ್ಲಿ ಸೆರೆಮನೆಯಲ್ಲಿರುವ ಕರ್ನಾಟಕ ರಾಜಕೀಯ ಕೈದಿಗಳು ಹಾಗೂ ದಕ್ಷಿಣ ಕನ್ನಡ ಮತ್ತು ಮಲಬಾರು ಸತ್ಯಾಗ್ರಹಿಗಳನ್ನು ಭೇಟಿ ಮಾಡಿ ತಾ. ೩೪ರಂದು ಮಂಗಳೂರಿಗೆ ಮರಳಿ ಬಂದಿರುವರು.

ಜೈಲಿನಲ್ಲಿ ದಕ್ಷಿಣ ಕನ್ನಡ ಹಾಗೂ ಮಲಬಾರು ರಾಜಕೀಯ ಕೈದಿಗಳಿಗೆ ರೊಟ್ಟಿಯನ್ನು ಕೊಡುತ್ತಿರುವರೆಂದೂ, ಅವರು ಅನ್ನದ ಆಹಾರ ತೆಗೆದುಕೊಳ್ಳುವವರಾದುದರಿಂದ ಅವರ ಆರೋಗ್ಯಕ್ಕೆ ಅದು ಅನುಕೂಲವಾಗುವುದಿಲ್ಲವೆಂದೂ, ಹಾಗಾಗಿ ಶೇಕಡಾ ಎಂಬತ್ತು ಮಂದಿ ಅಜೀರ್ಣದಿಂದ ನರಳುತ್ತಿರುವರೆಂದೂ ಹೀಗಾಗಿ ಒಬ್ಬರನ್ನು ಅವಧಿಮುಗಿವ ಮುನ್ನವೇ ಬಿಡುಗಡೆ ಮಾಡಬೇಕಾಗಿ ಬಂತೆಂದೂ, ನಾಲ್ಕು ಮಂದಿ ಸತ್ಯಾಗ್ರಹಿ ಕೈದಿಗಳು 'ಇನ್‌ಪೇಶಂಟ್'ಗಳಾಗಿರುವರೆಂದೂ, ಅವರಿಗೆ ಅಕ್ಕಿ ಆಹಾರವೊದಗಿಸಿದಲ್ಲಿ ಅವರ ಆರೋಗ್ಯವು ಉಳಿಯುವುದೆಂದೂ, ಅಲ್ಲಿ ವೈದ್ಯಕೀಯ ಉಪಚಾರ ಸಾಕಷ್ಟಿಲ್ಲವೆಂಬೂ ಅವರು ಹೇಳಿಕೆಯಿತ್ತಿರುವರು.

ಹಿಂಡಲಗಿ ಜೈಲಲ್ಲಿ ಸತ್ಯಾಗ್ರಹಿ ಕೈದಿಗಳನ್ನು ಭೇಟಿಯಾಗುವರೆ ಅನುಕೂಲತೆ ಒಳ್ಳೆಯದಿರುವುದಾಗಿಯೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಶ್ರೀ. ಎಚ್. ವಿ. ಕಾಮತರ ಭಾಷಣ

ಕಳೆದ, ಸೋಮವಾರ ಸಂಜೆಗೆ, ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ, ಐ. ಸಿ. ಎಸ್. ಕೆಲಸಕ್ಕೆ ರಾಜಿನಾಮೆಯಿತ್ತು ದೇಶಸೇವೆಗಾಗಿ ದುಡಿಯುತ್ತಿರುವ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಆರ್ಗನೈಸಿಂಗ್ ಸೆಕ್ರಟರಿಗಳಾದ ಶ್ರೀ. ಎಚ್. ವಿ. ಕಾಮತರು, ಮಂಗಳೂರು ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ. ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಿಂದ ಒಂದು ಉಜ್ವಲವಾದ ಭಾಷಣವಿತ್ತರು. ವಿದ್ಯಾರ್ಥಿಗಳು, ಸಾರ್ವಜನಿಕ ಕೆಲಸಗಾರರು ಪುರ ಪ್ರಮುಖರನೇಕರು ಸಭಾಮಂದಿರದಲ್ಲಿ ತುಂಬಿ ನೆರೆದಿದ್ದರು. ಶ್ರೀ. ಕಾಮತರು ಸುಮಾರು ಎರಡು ಗಂಟೆಗಳ ತನಕ, ಅಂತರ್ರಾಷ್ಟ್ರೀಯ ರಾಷ್ಟ್ರೀಯ ರಾಜಕೀಯಗಳ ವಿಚಾರವೂ ಭಾರತದ ವಿವಿಧ ಸಾಮಾಜಿಕ ಸಮಸ್ಯೆಗಳ ವಿಚಾರವೂ, ವಿದ್ಯಾರ್ಥಿಗಳು ರಾಷ್ಟ್ರೀಯ ಜೀವನದಲ್ಲಿ ವಹಿಸಬೇಕಾದ ಪಾತ್ರಗಳ ವಿಚಾರವೂ ಬಹಳ ಸ್ಫೂರ್ತಿ ಮತ್ತಾದ ಗಂಭೀರ ಭಾಷಣವಿತ್ತರು. ಭಾರತದ ಬಂಧವಿಮೋಚನೆಯಾಗದೆ, ಭಾರತವು ಸ್ವತಂತ್ರವಾಗದೆ ಯಾವ ಸಮಸ್ಯೆಯೂ ಪರಿಹಾರವಾಗುವುದಿಲ್ಲವೆಂದರು. ಭಾರತವನ್ನು ವಿಭಜಿಸುವ ಪಾಕಿಸ್ತಾನ ವಾದವನ್ನು ಕಟುತರವಾಗಿ ಖಂಡಿಸಿ, ಒಂದೇ ಒಂದು ಅಭಿನ್ನ ಭಾರತವು, ಸ್ವತಂತ್ರವಾದ ಭಾರತವು ಇತಿಹಾಸದಲ್ಲಿ ಉಜ್ವಲವಾಗಿ ಬೆಳಗಬೇಕೆಂದು ಬಯಸಿದರು. ಆಕ್ರಮಣಕಾರೀ ನಾಜೀ ನೀತಿಯನ್ನು ಖಂಡಿಸುವುದರೊದನೆ, ಬ್ರಿಟನಿನ ಧೋರಣೆಯನ್ನು ಬಯಲಿಗೆಳೆದರು. ಹಿಂದೂ ಸಮಾಜವೇ ಐಕ್ಯವಾಗದೆ, ರಾಷ್ಟ್ರೀಯ ಐಕ್ಯವು ಸಾಧ್ಯವಿಲ್ಲವೆಂದರು. ಸನಾತನ ಪ್ರವೃತ್ತಿಯಿಂದು ಅಂಥ ಆಚಾರವಿಚಾರಗಳಿಂದ ಸಮಾಜವು ಅಧಃಪಾತ ಹೊಂದುತ್ತಿದೆಯೆಂದೂ ಯುವಕರು, ಸಮಾಜದ ಅಂಥ ಆಚಾರಗಳಿಗೆ ವಿರೋಧವಾಗಿ ಕ್ರಾಂತಿಕಾರಿಕರಾಗಬೇಕೆಂದರು. ವಿದ್ಯಾರ್ಥಿಗಳು-ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸುವುದು ಅಗತ್ಯವಿಲ್ಲವೆಂದೂ, ಸ್ವದೇಶೀ ಪ್ರೋತ್ಸಾಹ, ಐಕ್ಯ ಕಾರ್ಯ, ಪ್ರದರ್ಶನಾತ್ಮಕ ಆಂದೋಲನಾದಿಗಳಲ್ಲಿ ಸಹಕರಿಸಬಹುದೆಂದರು. ಕೊನೆಗೆ ಸರ್ವರೂ ಭಾರತದ ಬಂಧನದ ಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಅದರ ವಿಮೋಚನೆಗಾಗಿ ಅಹರ್ನಿಶಿ ಸಾಧಿಸಬೇಕೆಂದು ಸಾರಿದರು. ಕೊನೆಗೆ ಅಧ್ಯಕ್ಷರು ಅರ್ಥಗರ್ಭಿತವಾದ ಭಾಷಣವಿತ್ತ ಮೇಲೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಕೃತಜ್ಞತಾಸಮರ್ಪಣೆ ಮಾಡಿದರು.

ಹರಿಜನ ಸೇವಕ ಸಂಘ ಶ್ರೀ ಥಕ್ಕರ್ ಬಾಪಾರವರ ಸಂದೇಶ

ಮೊನ್ನೆ ಮಂಗಳೂರಲ್ಲಿ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಜರಗಿದ ಐಕ್ಯಭೋಜನಕ್ಕೆ ಶ್ರೀ ಥಕ್ಕರ್ ಬಾಪಾರವರು ಒಂದು ಸಂದೇಶವನ್ನು ಕಳುಹಿಸಿ, ಅದರಲ್ಲಿ ಅಂಥಾ ಐಕ್ಯಭೋಜನಗಳಿಂದ ಸಕಲರೂ ಸಮಾನ ಬಾಂಧವ್ಯ ಪ್ರೇಮಪೂರಿತರಾಗುವರಲ್ಲದೆ ಸಮಾಜವು ಉತ್ತರೋತ್ತರ ಏಳಿಗೆಯನ್ನು ಹೊಂದುವುದೆಂದೂ, ಈ ರೀತಿಯ ಕೂಟಗಳಿಂದ ಉಂಟಾದ ಭ್ರಾತೃಭಾವವು ರಾಷ್ಟ್ರೀಯ ಐಕ್ಯತೆಗೆ ಕಾರಣವಾಗುವುದೆಂದೂ ಬರೆದಿರುವರು

ಸ್ಮಾಲ್ ಪಾಕ್ಸ್

ನಗರದಲ್ಲಿ ಸ್ಮಾಲ್‌ಪಾಕ್ಸ್ ಈಗ ಹಲವು ಕಡೆಗಳಲ್ಲಿ ಹರಡುವುದರಿಂದ, ನಾಗರಿಕರು ಕಡುಗಿ ಹಾಕು ಹಾಕಿಸಿಕೊಳ್ಳಬೇಕಾಗಿ ಮುನ್ಸಿಪಲ್ ಹೆಲ್ತ್ ಆಫೀಸರರು ತಿಳಿಸುತ್ತಾರೆ.

ಆಳೆಯ ಬಿಡುಗಡೆ

ಮಂಗಳೂರು ತಾಲೂಕು ತೆಂಕು ಎಕ್ಕಾರು ಗ್ರಾಮದ ಜಾರಪ್ಪ ಮೊಲಿ ಎಂಬವನು ತಾ. ೧೭-೩-೪೧ನೆಯ ರಾತ್ರಿ ತನ್ನ ತಾಯಿ ೯೧ ವರ್ಷದ ಮುದುಕಿ ಸೀತು ಎಂಬವಳನ್ನು ತುಳಿದು ಇಲ್ಲವೆ ದೊಣ್ಣೆಯಿಂದ ಹೊಡೆದು ಕೊಂದನೆಂಬ ಅಪಾದನೆಯಿಂದ ಅವನನ್ನು ಸೆಶ್ಶನಿಗೆ ಕಮಿಟು ಮಾಡಲಾಗಿತ್ತು. ತಾನು ಆ ರಾತ್ರಿ ಅಲ್ಲಿರಲಿಲ್ಲವಾಗಿ ಮೃತಳು ಕೂಡಾ ಇರಲಿಲ್ಲವಾಗಿಯೂ ಆತನ ಸಾಧನೆಯಾಗಿತ್ತು. ಮೂವರು ಎಸೆಸರರು ಆಳೆಯು ಖೂನಿ ತಪ್ಪಿಗೆ ಗುರಿಯಾಗುತ್ತಾನೆಂದೂ ಒಬ್ಬರು ಆಳೆಯು ಕೊಲೆಪಾತಕದ ತಪ್ಪಿಗೆ ಗುರಿಯಾಗುತ್ತಾನೆಂದೂ ಅಭಿಪ್ರಾಯ ಪಟ್ಟರು. ಜಡ್ಜರಾದ ಶ್ರೀ. ಕೆ. ಎನ್. ಗೋಪಾಲನ್‌ರವರು ಆಳೆಯ ಮೇಲೆ ತಪ್ಪು ನಿರ್ಧಾರವಾದಷ್ಟು ರುಜುವಾತಿಲ್ಲವೆಂದು ಆಳೆಯನ್ನು ಬಿಡುಗಡೆ ಮಾಡಿದರು.

ರಸ್ತೆಗಳಿಗೆ ಡಾಮರು

ಮಂಗಳೂರು ನಗರದ ಹೆಚ್ಚಿನ ರಸ್ತೆಗಳಿಗೆ ಡಾಮರು ಹಾಕುವಂತೆ ಮಂಗಳೂರು ಮುನ್ಸಿಪಾಲಿಟಿಯವರು ಹಣ ಮಂಜೂರು ಮಾಡುವರಾಗಿ ತೆಳಿಯುತ್ತೇವೆ.

ಉಡುಪಿ ರಾಜಿನಾಮೆ

ಸತ್ಯಾಗ್ರಹ ತತ್ವಕ್ಕನುಸರಿಸಿ ಶ್ರೀಮತಿ ಪಾಂಗಾಳ ಮನೋರಮಾ ಬಾಯಿಯವರು ಉಡುಪಿ ಮುನ್ಸಿಪಾಲಿಟಿಯ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರೆಂದು ತಿಳಿದಿದೆ.

ಪಂಚಾಯತ್ ಬೋರ್ಡುಗಳ ಅವಗಾಹನೆಗೆ

ಲೋಕಲ್ ಬೋರ್ಡು ಮತ್ತು ಮುನಿಸಿಪಲ್ ಕೌನ್ಸಿಲುಗಳಿಗೆ ಲಗಾವಾಗುವ ಅಂದರೆ ಪ್ರಥಮ ಭಾಗದ ಇಲೆಕ್ಷನ್ ರೂಲಿನ ಪುಸ್ತಕವು ಜಿಲ್ಲಾ ಪಂಚಾಯತ ಆಫೀಸಿನಲ್ಲಿ ಕ್ರಯಕ್ಕೆ ದೊರೆಯುತ್ತದೆಯೆಂಬ ಸಂಗತಿಯನ್ನು ಎಲ್ಲಾ ಪಂಚಾಯತ ಬೋರ್ಡುಗಳಿಗೂ ಮತ್ತು ಇತರ ಜನರಿಗೂ ಇದರಿಂದ ತಿಳಿಸಲಾಗುತ್ತದೆ. ಪ್ರತಿ ಬಾಗದ ರೂಲು ಯಾವ ಪಂಚಾಯತದಲ್ಲಿ ಜಾರಿಯಲ್ಲಿದುತ್ತದೆ ಅಂಥಾ ಪಂಚಾಯತುಗಳು ೩ ಪ್ರತಿಗಳಂತೆ ಪಡಕೊಳ್ಳಲೇ ಬೇಕೆಂದು ಪಂಚಾಯತ ಆಫೀಸರರು ತಿಳಿಸುತ್ತಾರೆ.

ಕಾಸರಗೋಡು ಯುವಜನ ಸಂಘ

ಈ ಸಂಘದ ಪ್ರಥಮ ವಾರ್ಷಿಕೋತ್ಸವವು ಈ ದಿನ ಸಾಯಂಕಾಲ ಗಂಟೆ ೫-೩೦ಕ್ಕೆ ಶ್ರೀ. ಕೆ. ಮಾಧವ ನಾಯರ್, ಎಲ್. ಎಂ. ಎಸ್. ರಿಟಾಯರ್ಡ್ ಸಿವಿಲ್ ಸರ್ಜನ್, ಇವರ ಅಧ್ಯಕ್ಷತೆಯಲ್ಲಿ ಕಾಸರಗೋಡು ಟೌನ್ ಕೊ-ಒಪರೇಟಿವ್ ಬೇಂಕಿನ ಕಟ್ಟಡದಲ್ಲಿ ಜರಗುವುದು.

ಯುದ್ಧ ಲಾವಣಿಗೆ ಸ್ವರ್ಣ ಪದಕ

ಮದ್ರಾಸು ಸಂಸ್ಥಾನದ ಯುದ್ಧ ನಿಧಿಯ ಪ್ರಚಾರ ಸಮಿತಿಯವರು ಪತ್ರಿಕೆಗಳಲ್ಲಿ ಪ್ರಕಟಿಸಿದ ಪ್ರಕಾರ ಉತ್ತಮವಾದ ಯುದ್ಧ ಲಾವಣಿಯನ್ನು ಬರೆದ ಶ್ರೀ. ಸಂಪಾಜೆ ಮುಂಡಪ್ಪ ರೈಗಳಿಗೆ ಸ್ವರ್ಣ ಪದಕವು ಬಹುಮಾನವಾಗಿ ದೊರೆತಿದೆಯೆಂದು ತಿಳಿಯುತ್ತದೆ.

ಪಾಣೆಮಂಗಳೂರು

ಪಾಣೆಮಂಗಳೂರಿನಿಂದ ಒಂದು ಮೈಲು ದೂರದಲ್ಲಿರುವ ನರಹರಿ ಪರ್ವತದಲ್ಲಿ ಇಬ್ಬರು ಸಾಧುಗಳು ಬಂದು ಅಲ್ಲಿ ಅವರು ಶಿಲೆಯ ಚಿಕ್ಕ ಗುಡಿಸಲು ಕಟ್ಟಿ ನೆಲಸಿರುವರೆಂದೂ, ಭಾವಿಕ ಜನರು ಅವರ ಸಂದರ್ಶನಕ್ಕಾಗಿ ಹೋಗುತ್ತಿರುವರೆಂದೂ ಸುದ್ದಿಯಿದೆ.

ಮಂಗಲ್ಪಾಡಿ

ಮಂಗಲ್ಪಾಡಿ ಸೆಂಟರಿನ ಟೀಚರ್ಸ್ ಸಂಘದ ಮಾಸಿಕ ಸಭೆಯು ತಾ. ೨೬-೭-೪೧ರಂದು ಶ್ರೀ. ಯಂ. ಭಾರ್ಗವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೌನ ಓದುವಿಕೆ ಮಾದರಿಪಾಠ, ಪ್ರಾಥಮಿಕ ವಿದ್ಯಾಭ್ಯಾಸದೊಳಗಣ ಕುಂದುಕೊರತೆಗಳ ಕುರಿತು ಭಾಷಣ, ಸ್ಕೌಟ್ ಕ್ರಾಫ್ಟ್ ಪ್ರದರ್ಶನಗಳಿದ್ದುವು. ಅಧ್ಯಕ್ಷ ಭಾಷಣಗಳಾದ ಮೇಲೆ ಶ್ರೀ ಕೆ. ರಾಮಚಂದ್ರ ಭಟ್ಟರು ಧನ್ಯವಾದ ಅರ್ಪಣೆ ಮಾಡಿದರು.

ಕೊಂಚಾಡಿ ಸಾಹಿತ್ಯ ಸಂಘ

ಇದರ ವಾರ್ಷಿಕೋತ್ಸವವು ತಾ. ೨೭-೭-೪೧ರಂದು ಶ್ರೀ ರಾಮಾಶ್ರಮ ಹಾ. ವಿ. ಶಾಲಾ ಮಂದಿರದಲ್ಲಿ ಶ್ರೀ. ಕೆ. ಎಟ್ಟಪ್ಪ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರ್ಥನೆ, ಅಧ್ಯಕ್ಷರ ಪ್ರಥಮ ಭಾಷಣ, ಸಂಘದ ವರದಿ ವಾಚನ, ಬಹುಮಾನವಿತರಣ, ಸಭಿಕರ ಭಾಷಣ ಅಧ್ಯಕ್ಷ ಭಾಷಣಗಳಾದುವು. 'ಸಾಕ್ಷರತಾ ಪ್ರಸರಣ' ಎಂಬ ಏಕಾಂಕ ನಾಟಕವೂ ಗಾಯನವೂ ಇತ್ತು

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ದಿವಂಗತ ವೀರಪ್ಪ ಬಿ. ಕರ್ಕೇರರು

"ದಿವಂಗತ ಹೊಸಬೆಟ್ಟು ವೀರಪ್ಪ ಬಿ ಕರ್ಕೇರರು ಹಲವು ವರ್ಷಗಳಿಂದ ಮಂಡಳಿಯ ಕಾರ್ಯನಿರ್ವಾಹಕಸಭೆಯ-ಮೆಂಬರರಾಗಿಯೂ ಗೌರವ ಕೋಶಾಧಿಕಾರಿಯಾಗಿಯೂ, ಕಾರ್ಯದರ್ಶಿಯಾಗಿಯೂ ಶಾಲೆಯಲ್ಲಿ ಉಪಾಧ್ಯಾಯರಾಗಿಯೂ, ಸ್ವಯಂಸೇವಕರಾಗಿಯೂ ಸಮಾಜಸೇವೆ ಗೈಯುತ್ತಿದ್ದವರು ಮುಂಬಯಿಯ ತನ್ನ ನಿವಾಸದಲ್ಲಿ ಅನಿರೀಕ್ಷಿತವಾಗಿ ತಾ. ೧೯-೭-೪೧ರಲ್ಲಿ ಅಕಾಲ ಮರಣವನ್ನೈದಿದರೆಂಬ ದುಃಖವಾರ್ತೆಯಿಂದ ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯವರು ತಾ. ೧೯-೭-೪೧ರಲ್ಲಿ ಜರಗಿದ ಮಂಡಳಿಯ ಆಡಳಿತ ಸಭೆಯಲ್ಲಿ ದುಃಖ ಸೂಚಕ ಠರಾವೊಂದನ್ನು ಸರ್ವಾನುಮತದಿಂದ ಮಂಜೂರುಮಾಡಿ ದಿವಂಗತರ ಸ್ಮರಣಾರ್ಥಕ್ಕಾಗಿ ಅಂದಿನ ಸಭೆಯನ್ನು ಮುಂದುವರಿಸಿಟ್ಟಿರುವುದಲ್ಲದೆ ಶಾಲೆಗಳನ್ನೂ ವಾಚನಾಲಯವನ್ನೂ ಮಂಡಳಿಯ ಆಫೀಸನ್ನೂ ಪೂರ್ಣವಾಗಿ ತಾ. ೨೧-೭-೪೧ರಲ್ಲಿ ಮುಚ್ಚಿರುವುದಾಗಿ ತಿಳಿಸುತ್ತಾರೆ.

ಮಹಾಜನ ಫ್ಲಡ್ ರಿಲೀಫ್ ಕಮಿಟಿ ದಕ್ಷಿಣ ಕನ್ನಡ

ಇದರ ಮಹಾಸಭೆಯು ತಾ. ೨೩-೭-೪೧ರಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ ಇವರ ಅಧ್ಯಕ್ಷತೆಯಿಂದ ಸಿ ಪಿ ಸಿ. ಕಂಪೆನಿಯವರ ಅತಿಥಿ ಮಂದಿರದಲ್ಲಿ ಜರಗಿತು. ಶ್ರೀ ವಾಮನದೇವ ಬಾಳಿಗರು ಈ ವರ್ಷ ಜಿಲ್ಲಾ ಕಾಂಗ್ರೆಸು ಕಮಿಟಿಯ ಮತ್ತು ಮಹಾಜನ ಫ್ಲ. ರಿ ಕಮಿಟಿಯ ವತಿಯಿಂದ ನಡೆದ ರಿಲೀಫ್ ಕೆಲಸದ ವರದಿಯನ್ನು ಸಭೆಯ ಮುಂದೆ ಮಂಡಿಸಿದರು. ನೆರೆಯ ಅನಾಹುತಕ್ಕೆ ಈಡಾದ ಜನರ ಅತಿರೇಕ ಸಂಕಷ್ಟವನ್ನು ಗಣನೆಗೆ ತಂದರೆ, ನಮ್ಮ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಈ ವರ್ಷ ನಡೆದ ಸಂಕಷ್ಟ ನಿವಾರಣಾ ಕಾರ್ಯವು ಕೇವಲ ಅಲ್ಪವೆಂಬುದಾಗಿಯೇ ವರದಿಯು ಉದ್ಗಾರವಾಗಿದ್ದಿತು. ನಿರ್ಗತಿಕರಿಗೆ ಅತ್ಯಗತ್ಯದ ಸಹಾಯವನ್ನು ಕೂಡಾ ಒದಗಿಸಲು ಹಣದ ಅಭಾವವಿದ್ದುದರಿಂದ ಸಾಧ್ಯವಾಗಲಿಲ್ಲದಿದ್ದರೂ ಮ. ಫ್ಲ. ರಿ. ಕಮಿಟಿಯವರು ತಮ್ಮ ಫಂಡಿನಿಂದ ಕೂಡಿದ ಹಣದಿಂದಲೂ, ಇತರ ಕಮಿಟಿಗಳ ಸಹಾಯದಿಂದಲೂ ಒದಗಿದ ಕಿಂಚಿತ್ ಸಹಾಯವನ್ನು ಆರ್ತರಾದ ಜನರಿಗೆ ಅತ್ಯಂತ ಕ್ಷಿಪ್ರದಲ್ಲಿ ತಲುಪಿಸುವ ಕಾರ್ಯವನ್ನು ಅತೀವ ದಕ್ಷತೆಯಿಂದ ಮಾಡಿರುವರು. ಎಂದು ಶ್ರೀ. ಬಾಳಿಗರು ಹೇಳಿದರು. ವರದಿಯು ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾಯಿತು ಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚೆ-ನಡೆಯಿತು. ಶ್ರೀಗಳಾದ ವೈಕುಂಠ ಬಾಳಿಗ, ಎಂ. ವೆಂಕಟೇಶ ಪೈ, ಸಿತಾರ್ಗ ನಾಗರಾಜಯ್ಯ, ಬಿ. ಜಿನರಾಜ ಹೆಗ್ಡೆ, ಎಂ ಎಲ್. ಎ. ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಶ್ರೀ. ಮೊಳಹಳ್ಳಿ ಶಿವರಾಯರು, ನಿರಾಶ್ರಿತರಿಗೆ ಎಲ್ಲಾ ವಿಧಾನಗಳಿಂದಲೂ ಅಗತ್ಯದ ಸಹಾಯವನ್ನು ಒದಗಿಸಲು ಸಕಲ ಪ್ರಯತ್ನಗಳನ್ನೂ ಕೈಕೊಳ್ಳಲೇ ಬೇಕೆಂದರು. ಹೊಲಗದ್ದೆಗಳಲ್ಲೆಲ್ಲಾ ನೆರೆಯ ಕೆಸರು ಹೊಯ್ಗೆಗಳು ತುಂಬಿ ನೆಟ್ಟ ಏಣೆಲು ಬೆಳೆ ಎಲ್ಲಾ ನಾಶವಾಗಿ ಹೋಗಿದ್ದು ಕೂಲಿ ಕೆಲಸವು ಕೂಡ ಸಿಕ್ಕದೆ ಕಂಗೆಟ್ಟಿರುವ ಬಡ ಬೇಸಾಯಗಾರರ ಸಂಖ್ಯೆ ವಿಪರೀತವಿರುವುದರಿಂದ ಅವರ ಹಸಿದ ಹೊಟ್ಟೆಗೆ ಬಪ್ಪೊತ್ತಿನ ಗಂಜಿಯನ್ನಾದರೂ ಸುಗ್ಗಿ ಬೆಳೆಯ ಕೆಲಸ ಪ್ರಾರಂಭವಾಗುವ ತನಕ (ಅಂದರೆ ಸಪ್ಟಂಬರ ತಾ. ೧೫ರ ವರೆಗೆ) ಒದಗಿಸಿಗೊಡುವ ಹೊಣೆಗಾರಿಕೆಯನ್ನು ಈ ಕಮಿಟಿಯು ವಹಿಸಬೇಕೆಂದು ಸಭೆಯಲ್ಲಿ ನೆರೆದ ಬಹುಮಂದಿಯ ಅಭಿಪ್ರಾಯವಿದ್ದಿತು. ಎಲ್ಲಾ ಕೇಂದ್ರಗಳಲ್ಲಿರುವ ಇಂತಹ ನಿರ್ಗತಿಕರ ಸಂಖ್ಯೆಯನ್ನು ವಿಮರ್ಶಿಸಿ ಒಂದು ಅಂದಾಜಿನ ಬಜೆಟನ್ನು ಕಮಿಟಿಯವರು ಮಾಡಿ ತಾ. ೩-೮-೪೧ರಲ್ಲಿ ಜರಗುವ ಈ ...

ಥಾಯಿಲೆಂಡನ್ನು ಜಪಾನು ಆಕ್ರಮಿಸಲಿರುವುದೆ?

ಇಂಡೋ ಚೀನವು ಜಪಾನಿನ ಬಲಿಗೆ ಬಿತ್ತು

ಅಮೇರಿಕ ಬ್ರಿಟನುಗಳು ಜಪಾನನ್ನು ಎದುರಿಸುವವು

ರಶ್ಯ ಜರ್ಮನಿಗಳ ಭೀಕರ ಕದನ

ರಶ್ಯ ಜರ್ಮನಿ ಕದನ ಭೀಕರವಾಗಿ ನಡೆಯುತ್ತಿದ್ದಂತೆ, ಜಪಾನು ಇಂಡೋ ಚೀನವನ್ನು ಸ್ವಾಧೀನಪಡಿಸಿ ಪೂರ್ವದಿಕ್ಕಿನ ಕಡೆ ಕಾಲ್ನೀಡಲು ಬಯಸಿದೆ. ಬ್ರಿಟನು ಅಮೇರಿಕಗಳು ಜಪಾನಿನ ಚಟುವಟಿಕೆಯನ್ನು ಉಗ್ರವಾಗಿ ನೋಡುತ್ತಿವೆ. ಥಾಯಿಲೆಂಡನ್ನು ಜಪಾನು ಮುತ್ತುವುದೆಂಬುದೊಂದು ಸುದ್ದಿಯಿದೆ. ಆದರೆ ಅದು ತಟಸ್ಥವಾಗಿರುವುದೆಂದು ಸಾರಿದೆ. ಯೂರೋಪಿನ ರಾಜಕೀಯದಲ್ಲಿ ವಿಷಮತೆಗಳು ಹೆಚ್ಚುಹೆಚ್ಚಾಗುತ್ತಾ ಇವೆ. ಯುದ್ಧವು ಪೂರ್ವದ ಕಡೆಗೂ ವಿಸ್ತರಿಸಿದಂತೆ ತೋರುತ್ತದೆ.

ಮೋಸ್ಕೋದ ಮೇಲೆ

ಜರ್ಮನರ ಧಾಳಿಯು ನಡೆಯುತ್ತಲೇ ಇದೆ. ರುಮೇನಿಯನರು ಬೆಸರೇಬಿಯವನ್ನು ಹಿಡಿದಿರುವುದಾಗಿ ಹೇಳುತ್ತಾರೆ.

ಜರ್ಮನ್ನರ ವಿಷವಾಯು

ಜರ್ಮನ್ ನಾಜಿ ಸೇನೆಗಳು ವಿಷವಾಯುವನ್ನು ಉಪಯೋಗಿಸಲು ಸೂಚನೆ ಕೊಟ್ಟಿರುವುದು ನಿಜವೆಂದು ಜರ್ಮನಿಯೇ ಒಪ್ಪಿಕೊಂಡಿದೆಯೆಂದು ರಶ್ಯ ಹೇಳುತ್ತದೆ.

ಜಪಾನಿನಲ್ಲಿ ಸಾರ್ವತ್ರಿಕ ಸೈನ್ಯ ಸಂಗ್ರಹ

ಮುಂದಿನ ಪರಿಸ್ಥಿತಿಯನ್ನು ವಿವೇಚಿಸಲು ಜಪಾನಿನ ಪ್ರಿವಿ ಕೌನ್ಸಿಲಿನ ಸಭೆ ಕರೆಯಲಾಗಿತ್ತು. ಸಾರ್ವತ್ರಿಕ ಸೈನ್ಯ ಸಂಗ್ರಹದ ಬಗ್ಗೆ ಚರ್ಚೆಮಾಡಲಾಗಿತ್ತೆಂದು ತಿಳಿದುಬಂದಿದೆ.

ಬ್ರಿಟನ್ ಜಪಾನ್ ವ್ಯಾಪಾರ ರದ್ದು

ಬ್ರಿಟನು ಜಪಾನುಗಳೊಳಗೆ ಆದ ಎಲ್ಲಾ ವ್ಯಾಪಾರ ಒಪ್ಪಂದವು ರದ್ದಾಗುವುದಾಗಿ ತಿಳಿದಿದೆ.

೧೯೧೧ರ ಜಪಾನ್ ಆಂಗ್ಲ ವ್ಯಾಪಾರ ಒಪ್ಪಂದ ೧೯೩೪ರ ಭಾರತ ಜಪಾನ್ ಒಪ್ಪಂದ, ೧೯೩೭ರ ಬರ್ಮಾ ಜಪಾನ್ ವ್ಯಾಪಾರ ಒಪ್ಪಂದ ಇವುಗಳೆಲ್ಲ ರದ್ದಾಗುವ ಯೋಚನೆ ನಡೆದಿರುವುದಂತೆ.

ಇಂಡೋಚೀನದಲ್ಲಿ ಜಪಾನು ಸೈನ್ಯಗಳು

ಜಪಾನು ಸೈನ್ಯಗಳು ಬಂದು ಇಂಡೋಚೀನದಲ್ಲಿ ಇಳಿದಿವೆಯೆಂದು ತಿಳಿದಿದೆ. ಒಪ್ಪಂದ ಪ್ರಕಾರ ಅವರಿಗೆ ದೊರೆತ ಸೌಲಭ್ಯವನ್ನು ಜಪಾನೀಯರು ಸಂಪೂರ್ಣ ಉಪಯೋಗಿಸಲು ಬಂದಿರುವರು.

ನ್ಯೂಜಿಲೇಂಡಿನಲ್ಲಿ ಜಪಾನರ ಆಸ್ತಿ ಬದುಕು ಜಪ್ತಿ

ಅಮೇರಿಕ ಬ್ರಿಟನುಗಳು ಅನುಸರಿಸಿದ ಮಾರ್ಗದಂತೆ ತಮ್ಮ ಸೀಮೆಯಲ್ಲಿ ನೆಲೆನಿಂತ ಜಪಾನೀಯರ ಆಸ್ತಿ ಬದುಕುಗಳನ್ನು ನ್ಯೂಜಿಲೆಂಡಿನವರೂ ಜಪ್ತಿಮಾಡಲು ನಿರ್ಧರಿಸಿರುವರಂತೆ.

ಥಾಯಿಲೆಂಡು ತಾಟಸ್ಥ್ಯ ವಹಿಸುವುದು

ಜಪಾನು ಆಕ್ರಮಣವೇಕೆ ಮಾಡಿಲ್ಲ

ಥಾಯಿಲೆಂಡನ್ನು ಆಕ್ರಮಿಸುವುದಾಗಿ ಜಪಾನು ಸಾರಿತ್ತೆಂದು ಪ್ರಕಟವಾದ ವಿಷಯ ತಮಗೆ ಗೊತ್ತಿಲ್ಲವೆಂದೂ, ಥಾಯಿಲೆಂಡು ಎಲ್ಲಾ ಸಂದರ್ಭಗಳಲ್ಲಿಯೂ ತಾಟಸ್ಥ್ಯ ವಹಿಸುವುದೆಂದೂ ಅಲ್ಲಿನ ಪ್ರಮುಖರ ಪ್ರಕಟಣೆಯಾಗಿದೆ.

ಜಪಾನು ಹಡಗ ಹಿಂದೆ ಹೋಗಬೇಕು

ಅಮೆರಿಕದ ಆಜ್ಞೆ

ಅಮೆರಿಕದ ಬಂದರಿನಿಂದ ಜಪಾನು ಹಡಗುಗಳು ಕೂಡಲೇ ಹಿಂದಕ್ಕೆ ಹೋಗಬೇಕೆಂದು ಸಂಯುಕ್ತ ಸಂಸ್ಥಾನ ಸರಕಾರವು ಆಜ್ಞಾಪಿಸಿರುವುದು.

ಬೆಸರ್ಬಿಯ ಪೂರ್ಣ ಆಕ್ರಮಣ

ರುಮೇನಿಯನರು ಬೆಸರ್ಬಿಯದಿಂದ ಪೂರ್ಣವಾಗಿ ರಶ್ಯನರನ್ನು ಹೊರ ಅಟ್ಟಿರುವರೆಂದು ತಿಳಿದಿದೆ.

ಅಮೆರಿಕದಲ್ಲಿ ಸಿದ್ಧತೆ

ಅಮೆರಿಕದ ನೆಲ, ಜಲ, ವಿಮಾನಗಳ ಸೇನೆಗಳ ಸಿದ್ಧತೆಯಾಗುತ್ತಿದೆ. ದಿನಕ್ಕೆರಡು ವ್ಯಾಪಾರೀ ಹಡಗುಗಳ ನಿರ್ಮಾಣವಾಗುವ ಏರ್ಪಾಡಾಗುತ್ತಿದೆ.

ಜಪಾನಿನ ಕುರಿತು ಬ್ರಿಟನು

ಜಪಾನಿನ ಚಟುವಟಿಕೆಯ ಕುರಿತು ಬ್ರಿಟನಿನ ವಿದೇಶೀ ಮಂತ್ರಿಗಳಾದ ಈಡನರು ಕಾಮನ್ಸ್ ಮಂದಿರದಲ್ಲಿ ಒಂದು ಹೇಳಿಕೆಕೊಡುತ್ತಾ, ಜಪಾನಿನ ಕಲಹಕಂಟಕ ಕನವನ್ನು ಖಂಡಿಸಿ ವಿಚಿಯ ದುರ್ಬಲತೆಯನ್ನು ತಿಳಿಸಿ, ಮಲಯದ ರಕ್ಷಣಾಕಾರ್ಯವನ್ನು ಬಲಗೊಳಿಸಬೇಕಾಗಿ ಹೇಳಿರುವರು. ಅಮೇರಿಕದೊಡನೆ ಬ್ರಿಟನು ಸಂಯುಕ್ತ ಕಾರ್ಯ ನಡೆಸುವುದೆಂದರು.

ಫ್ರೆಂಚರು ಇಂಡೋಚೀನವನ್ನು ಜಪಾನಿಗೆ ಬಿಟ್ಟುಕೊಟ್ಟರು

ಪೂರ್ವದೇಶದಲ್ಲಿ ೮೦ ವರ್ಷಗಳಿಂದ ಫ್ರೆಂಚರ ವಶವಿದ್ದ ಇಂಡೋಚೀನವನ್ನು ವಿಚಿ ಸರಕಾರದವರು ಜಪಾನಿಗೆ ಬಿಟ್ಟುಕೊಟ್ಟರೆಂದು ತಿಳಿದಿದೆ. ಇಂಡೋಚೀನದ ೪೦ ಮಿಲಿಯ ಪ್ರಜೆಗಳಲ್ಲಿ ೩೦ ಸಾವಿರ ಮಂದಿಗೆ ಮಾತ್ರ ಶಸ್ತ್ರ ಉಪಯೋಗಿಸುವ ಅಭ್ಯಾಸತಿಳಿದಿದೆಯಂತೆ.

ಜಪಾನಿನ ಕುರಿತು ಅಮೇರಿಕವು ಉಗ್ರಧೋರಣೆ ವಹಿಸಿದೆ.

ಇಂಡೋಚೀನದ ಮೇಲೆ ಜಪಾನು ಮಾಡುವ ಕಾರ್ಯನೀತಿಯ ಕುರಿತು ಸಮ್ನರ್ ವೆಲ್ಸರು ಟೀಕಿಸಿದರು. ಪೆಸಿಫಿಕ್ಕಿನಲ್ಲಿ ಶಾಂತಿ ಕದಡುವದೊಂದು ಅಮೇರಿಕ ತಿಳಿದಿದೆ.

ಯುದ್ಧ ನಿಲ್ಲಿಸಲು ಪೆರೂ ಸರಕಾರದ ಒಪ್ಪಿಗೆ

ಇಕ್ವಡೇರಿನೊಡನೆ ಈಗ ನಡೆದ ಯುದ್ಧವನ್ನು ಬಿಡಲು ಪೆರೂ ಸರಕಾರವು ಒಪ್ಪಿಕೊಂಡಿರುವುದೆಂದೂ ಇಕ್ವಡೇರ್ ಸರಕಾರವೂ ಯುದ್ಧ ನಿಲ್ಲಿಸಲು ಸಿದ್ಧವಿರುವುದೆಂದೂ ಪ್ರಕಟವಾಗಿದೆ.

ಇಂಡೋ ಚೀನದಲ್ಲಿ

ಇಂಡೋ ಚೀನಕ್ಕೆ ಇಪ್ಪತ್ತನಾಲ್ಕು ತಾಸುಗಳ ಕೊನೆಯ ಮಾತು ಹೇಳಿ, ಜಪಾನು ಸೇನೆ ಈಗಾಗಲೇ ಅಲ್ಲಿ ಆಕ್ರಮಿಸಿದೆ. ಇದರಿಂದ ಮಹಾನರ್ಥವು ಪೂರ್ವದಲ್ಲಿಯೂ ಹರಡಬಹುದೆಂದು ಊಹಿಸಲಾಗಿದೆ. ಅಮೇರಿಕ ಬ್ರಿಟನುಗಳು ಪೂರ್ವದಲ್ಲಿ ಜಪಾನು ಕಾಲು ಚಾಚುವುದನ್ನು ನೋಡಿ ಸುಮ್ಮಗಿರಲು ಸಾಧ್ಯವಿಲ್ಲ. ಈಗಾಗಲೇ ಅವುಗಳಲ್ಲಿ ಬಲವಂತವಾದ ಆಲೋಚನೆ ಸಿದ್ಧತೆಗಳು ನಡೆಯುತ್ತಿವೆಯೆಂದು ತಿಳಿದಿದೆ.

ಅಮೆರಿಕದ ಜಪಾನಿಯರ ವಿಷಯ

ಅಮೆರಿಕದಲ್ಲಿರುವ ಜಪಾನಿ ಹಾಗೂ ಚೀನದ ಮೂಲವನ್ನು ಕರಗಿಸಿ ಬಿಡುವಂತೆ ಅಮೆರಿಕದ ಅಧ್ಯಕ್ಷರು ಆಜ್ಞೆ ಮಾಡಿದ್ದಾರೆ. ಚೀನವನ್ನು ಈ ಸಾಲಿಗೆ ಸೇರಿಸಿದ್ದು ಚೀನದ ಅರಿಕೆಯಂತೆಯೆಂದು ಹೇಳಲಾಗಿದೆ. ಹೀಗೆ ಬ್ರಿಟನಿನಲ್ಲಿಯೂ ಅದರ ಇತರ ಭಾಗಗಳಲ್ಲಿಯೂ ಆಜ್ಞೆ ಆಗಿದೆ.

ಸೈಬೇರಿಯಾದ ಮೇಲೆ ಜಪಾನು ಧಾಳಿ

ಸೈಬೇರಿಯಾದ ಮೇಲೆ ಜಪಾನು ಧಾಳಿಮಾಡುವುದು ಸಂಭವವೆಂದು ರಶ್ಯದ ಪ್ರಕಟಣೆಯಿದೆ.

ವಿಚಿ ಸರಕಾರದ ವರ್ತನೆಗೆ ಸ್ವತಂತ್ರ ಫ್ರೆಂಚರು ಹೊಣೆಯಲ್ಲ

ಜಪಾನಿನೊಡನೆ ಇಂಡೋ ಚೀನದ ಕುರಿತು ವಿಚಿ ಸರಕಾರವು ಒಪ್ಪಂದ ಮಾಡಿದ ವಿಷಯದಲ್ಲಿ ಮೇಲಿನಂತೆ ಪ್ರಕಟಣೆ ಹೊರಟಿದೆ.

ಲಂಡನಿನಲ್ಲಿ ವಿಮಾನಧಾಳಿ ಭಯ

ಆಂಗ್ಲೇಯ ಇಂಗ್ಲೆಂಡು ಲಂಡನುಗಳ ಮೇಲೆ ವೈರಿ ವಿಮಾನಗಳ ಧಾಳಿ ವಿಶೇಷವಾಗಿತ್ತು.

ಆಫ್ರಿಕದಲ್ಲಿ ಕದನ

೩೦ ಸಾವಿರ ಜನರ ಮರಣ

ಡಿಸೆಂಬರ ೨೦ರಿಂದ ಜುಲಾಯಿ ೨೦ರವರೆಗೆ ೭೪೨೭ ಜನ ಹಿಂದೀ ಸೈನಿಕರು ಗಾಯಗೊಂಡಿದ್ದು ಕೆಲವು ಜನರು ಮೃತಪಟ್ಟಿರುವರಂತೆ. ವೈರಿಗಳಲ್ಲಿ ಸುಮಾರು ೩೦ ಸಾವಿರ ಜನರು ಮರಣಹೊಂದಿದರಂತೆ.

ಆಸ್ಟ್ರೇಲಿಯದಲ್ಲಿ ಸೈನ್ಯಸಂಗ್ರಹ

ಆಸ್ಟ್ರೇಲಿಯದಲ್ಲಿ ಸೈನ್ಯಕ್ಕೆ ಜನರನ್ನು ಸೇರಿಸುತ್ತಿದ್ದಾರೆ.

ಜಪಾನಿನ ಸಂಬಂಧದಲ್ಲಿ ಆರ್ಥಿಕ ನಿರ್ಬಂಧ

ಜಪಾನಿನ ವಿಷಯದಲ್ಲಿ ಅಮೇರಿಕವು ಮಾಡಿದ ರೀತಿಯಲ್ಲಿ ಆರ್ಥಿಕ ನಿಯಂತ್ರಣ ನಿರ್ಬಂಧವನ್ನು ಇತರ ದೇಶದವರೂ ಮಾಡಿದರೆ ತಾವು ಅದನ್ನು ಸ್ವಾಗತಿಸುವುದಾಗಿ ಸುಮ್ನರ್ ವೆಲ್ಲಸರು ಹೇಳುತ್ತಾರೆ.

ಜೀವನದ ಪ್ರತಿಯೊಂದು ಅಂಶದಲ್ಲಿಯೂ ಅವರು ಸುಖಪಡುತ್ತಾರೆ. ಸಂಪೂರ್ಣ ಆರೋಗ್ಯಶಾಲಿಗಳಾಗಿರುವುದರಿಂದ ಅವರು ಸುಖಪಡುತ್ತಾರೆ.

ನೀವು ಎಷ್ಟೇ ಪ್ರಾಯಸ್ಥರಾಗಿರಿ, ಇಲ್ಲ, ಎಷ್ಟೇ ಅನಾರೋಗ್ಯ ಹೊಂದಿರಿ, ನೀವೂ ಪೂರ್ಣ ಆರೋಗ್ಯವನ್ನು ಹೊಂದಬಹುದು.

ಒಂದು ಬಾಟ್ಲ್

ಜೀವಾಮೃತ

ವನ್ನು ಕೊಂಡುಕೊಳ್ಳಿರಿ.

ಸ್ತ್ರೀ ಪುರುಷರೆಲ್ಲರಿಗೂ ಹಿತಕರ ಶಕ್ತಿವರ್ಧಕ ಟಾನಿಕ್

ಕ್ರಮವಾಗಿ ಇದನ್ನು ತೆಗೆದುಕೊಳ್ಳಿರಿ: ನಿಮ್ಮಲ್ಲಿ ಹೊಸ ಜೀವನ ತುಂಬಿದ ಅನುಭವವಾಗುವುದು. ಎಂದಿಗೂ ಇದು ಗುಣಕೊಡದೆ ಇರುವುದಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಇದು ದೊರಕುತ್ತದೆ.

ತಯಾರು ಮಾಡುವವರು:

ಆಯುರ್ವೇದಾಶ್ರಮ, ಮದರಾಸು.

ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಪುಣೆಯ ಪರಿಷತ್ತಿನವರು ಅಸಂತುಷ್ಟಿ ಪ್ರಕಟಿಸಿದರು

ಮಹಾರಾಷ್ಟ್ರದಿಂದ ೧೬ ಮಂದಿ ಸತ್ಯಾಗ್ರಹಿಂಗಳು ಮಾತ್ರ ಆರಿಸಲ್ಪಟ್ಟರು

ವೈಸರಾಯರ ಕಾರ್ಯಕಾರೀ ಮಂಡಳದ ಕುರಿತು ದೇಶದಲ್ಲಿ ಸರ್ವತ್ರ ಅಸಂತುಷ್ಟಿಯಿದೆ. ಪುಣೆಯ ಪರಿಷತ್ತಿನ ಅಪಕ್ಷದ ಮುಖಂಡರೂ ಅತೃಪ್ತಿಯನ್ನು ಆಗ್ರಹ ಪೂರ್ವಕ ಸಾರಿದ್ದಾರೆ. ಆದರೆ ಸಧ್ಯಕ್ಕೆ ಬೇರೇನೂ ಬದಲಾವಣೆಗಳಾಗುವ ಚಿಹ್ನೆ ತೋರುವುದಿಲ್ಲ. ವೈಸರಾಯರು ಮಳೆಗಾಲದ ಪ್ರವಾಸಕ್ಕೆ ಹೊರಟವರು ಮದ್ರಾಸಿಗೆ ಬರಲಿರುವರು. ಗಾಂಧಿಜಿ ಮಹಾರಾಷ್ಟ್ರದಿಂದ ಹೊಸತಾಗಿ ಹದಿನಾರು ಮಂದಿ ಸತ್ಯಾಗ್ರಹಿಗಳನ್ನು ಮಾತ್ರ ಆರಿಸಿದ್ದಾರೆ. ಸತ್ಯಾಗ್ರಹ ಸಮರವು ಅಭಾಧಿತವಾಗಿ ಸಾಗುತ್ತಿದೆ.

ಟೀಕಾಕಾರರಿಗೆ ಎಂ. ಎಸ್. ಅಣೆಯವರ ಉತ್ತರ

"ನಾನು ಅಧಿಕಾರ ಸ್ವೀಕರಿಸಿದ್ದಕ್ಕೆ ಅನೇಕರು ನನ್ನನ್ನು ಟೀಕಿಸಿರುವರು ಅನೇಕರು ಸ್ವಾಗತಿಸಿರುವರು ಟೀಕಾಕಾರ ಟೀಕೆಯ ಸತ್ಯಾಂಶವನ್ನು ನಾನು ಕರ್ತವ್ಯ ನಿರ್ವಹಿಸುವಾಗ ಮರೆಯಲಾರೆನು'' ಹೀಗೆಂದು ಅಣೆಯವರು ಹೇಳುತ್ತಾರೆ.

ಮಹಾರಾಷ್ಟ್ರದ ಮೂರನಯ ಸತ್ಯಾಗ್ರಹಿಗಳ ಪಟ್ಟಿ

ಮಹಾತ್ಮರು ೧೬ ಜನರನ್ನು ಮಾತ್ರ ಆರಿಸಿದರು

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಟಿ. ಕೆ ಗೋಸ್ವಾಮಿಯವರು ಸ್ವತಃ ಮಹಾತ್ಮರಿಗೆ ಒಪ್ಪಿಸಿದ ಸತ್ಯಾಗ್ರಹಿಗಳ ಪೈಕಿ ೧೬ ಜನರನ್ನು ಮಾತ್ರ ಆರಿಸಿರುವರೆಂದು ತಿಳಿದಿದೆ.

ಅನ್ನ ಸತ್ಯಾಗ್ರಹ ನಿಲ್ಲಿಸಿರೆಂದು ಸತ್ಯಾಗ್ರಹಿ ಕೈದಿಗಳಿಗೆ ಮಹಾತ್ಮರ ಸಂದೇಶ

ಲ್ಯಾಲಪುರ ರಾಜಕೀಯ ಕೈದಿಗಳು ಅನ್ನ ಸತ್ಯಾಗ್ರಹ ಮಾಡಿದ ವಿಷಯವಾಗಿ ಗಾಂಧಿಜಿಯವರು, ಅವರಿಗೆ ಅನ್ನ ಸತ್ಯಾಗ್ರಹ ನಿಲ್ಲಿಸುವಂತೆ ಹೇಳಬೇಕೆಂದು ಪಂಜಾಬು ಪ್ರಾಂತಿಕ ಕಾಂಗ್ರೆಸು ಕಮಿಟಿ ಅಧ್ಯಕ್ಷ ಇಪ್ತಿಕರುದ್ದೀನರ ಮುಖಾಂತರ ಸಂದೇಶ ಕಳುಹಿಸಿರುವರು.

ವೈಸರಾಯರ ಮಳೆಗಾಲದ ಪ್ರವಾಸ

ವೈಸರಾಯರು ಮಳೆಗಾಲದ ಪ್ರವಾಸದಲ್ಲಿ ಮದ್ರಾಸಿಗೆ ಬರಲಿರುವರು. ದಾರಿಯಲ್ಲಿ ನಾಗಪುರದಲ್ಲಿ ಎರಡು ದಿನಗಳು ಇಳ್ಳುವರು.

ಅಣೆಯವರು ಅಸೆಂಬ್ಲಿಯಲ್ಲಿ ಧುರೀಣರಾಗುವರೆ?

ಕೇಂದ್ರ ಅಸೆಂಬ್ಲಿಯ ಶರದೃತು ಅಧಿವೇಶನವು ಅಕ್ಟೋಬರ ೨೭ಕ್ಕೆ ಹೊಸ ಡಿಲ್ಲಿಯಲ್ಲಿ ಪ್ರಾರಂಭವಾಗುವುದು ಆಗ ಅದರಲ್ಲಿನ ಬೇರೆ ಬೇರೆ ಪಕ್ಷಗಳ ಬಲ, ಧೋರಣ, ಪ್ರಮುಖ ವ್ಯಕ್ತಿ ಇವೇ ಮೊದಲಾದವುಗಳ ಕೇಂದ್ರ ಕಾರ್ಯಕಾರೀ ಮಂಡಳದ ಪುನರ್ಘಟನೆಗನುಸಾರವಾಗಿ ನಿರ್ಣಯವಾಗುವುದು. ಇದರಂತೆ ನವೆಂಬರ ೧೦ಕ್ಕೆ ಸೇರುವ ಕೌನ್ಸಿಲ್ ಓಪ್ ಸ್ಟೇಟಿನಲ್ಲಿಯೂ ವ್ಯತ್ಯಾಸವಾಗುವುದು. ಅಸೆಂಬ್ಲಿಯಲ್ಲಿ ಶ್ರೀ ಅಣೆಯವರು, ಕೌನ್ಸಿಲ್ ಓಪ್ ಸ್ಟೇಟಿನಲ್ಲಿ ಸರ್ ಅಕ್ಬರ್ ಹೈದರಿಯವರು ಸರಕಾರದ ಧುರೀಣರಾಗುವರೆಂದು ಊಹೆಯಿದೆ.

ಲೀಗಿನಿಂದ ಹೊರಹಾಕಿರಿ

ಲೀಗಿನ ಸಮ್ಮತಿ ಕೇಳದೆ ಪಜುಲುಲ್ ಹಕ್ ಮೊದಲಾದವರು ವೈಸರಾಯ ಕಾರ್ಯಕಾರೀ ಮಂಡಳ ಮೊದಲಾದುವುಗಳಲ್ಲಿ ಕೆಲಸ ಸ್ವೀಕರಿಸಿದ ವಿಷಯದಲ್ಲಿ ಅವರನ್ನು ಲೀಗಿನಿಂದ ಹೊರಹಾಕಬೇಕಾಗಿ ಜಿನ್ನರಿಗೆ ಹಲವರ ಸೂಚನೆ ಬಂದಿದೆ. ಹಕ್ಕರು ಅದಕ್ಕೆ ತಮ್ಮ ಉತ್ತರವಿತ್ತಿರುವರು.. ಲೀಗಿನವರು ರಾಜಿ ಕೊಡಬೇಕೆಂದು ಹೇಳಿದರೆ ಆ ಕುರಿತು ಮುಂದೆ ತಿಳಿಸುವೆನೆಂದು ಹಕ್ಕರು ಹೇಳಿರುವರು

ಶ್ರೀ ಎ. ಝುಡ್ ಶರೀಫರಿಗೆ ಮುಂಬಯಿ ಪ್ರಾಂತದಿಂದ ಗಡಿಪಾರು

ಬೆಂಗಳೂರು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎ ಝುಡ್ ಶರೀಫರಿಗೆ ಮುಂಬಯಿ ಪ್ರಾಂತ ಬಿಟ್ಟು ೨೪ ಗಂಟೆಗಳೊಳಗೆ ಹೊರ ಹೋಗುವರೆ ಮುಂಬಯಿ ಸರಕಾರದವರು ತಿಳಿಸಿದ್ದಾರೆ. ಶ್ರೀ ಶರೀಫರನ್ನು ಮೈಸೂರು ಸಂಸ್ಥಾನ ಸರಕಾರದವರು ಹೊರಹಾಕಿದ್ದರಿಂದ ಅವರು ಕಳೆದ ಮೂರು ನಾಲ್ಕು ತಿಂಗಳಿಂದ ಧಾರವಾಡದಲ್ಲಿದ್ದರು.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜತರಾಗಿರುತ್ತಾರೆ ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆಸ್ತಿಯನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

1/4 ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್. (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳೂ ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಸಾ ಕಂಪನಿ, ಹಂಪನಕಟ್ಟಾ ಮಂಗಳೂರು.

ಏನಾದರೂ ಹಿತಮಾಡಬೇಕೆಂದು ನಾನು ಸೇರಿದೆನು

ಎನ್ ಆರ್. ಸರ್ಕಾರರ ಹೇಳಿಕೆ

ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಅಧಿಕಾರ ವಹಿಸಿದ ವಿಷಯದಲ್ಲಿ ಮಾತನಾಡುತ್ತಾ ಶ್ರೀ ನಳಿನೀ ರಂಜನ ಸರ್ಕಾರರು ಮುಂದೆ ಏನಾದರೂ ಹಿತ ಸಾಧಿಸಬಹುದೆಂದು ನಾನು ಈಗ ಅಧಿಕಾರ ವಹಿಸಿರುವೆನೆಂದೂ, ನಾನು ಇನ್ನಿತರರಷ್ಟೇ ರಾಷ್ಟ್ರೀಯ ಮನೋವೃತ್ತಿಯುಳ್ಳವನೆಂದೂ ಹೇಳಿದರು. ಬ್ರಿಟಿಷ್ ಸರಕಾರದ ಧೋರಣವನ್ನು ಅವರು ಕಟುವಾಗಿ ಟೀಕಿಸಿದರು ಶ್ರೀ ಸರ್ಕಾರರು ಮೊದಲು ಕಾಂಗ್ರೆಸ್ ಪಕ್ಷದವರಿದ್ದು ಬಂಗಾಳದ ಮಂತ್ರಿ ಮಂಡಳದಲ್ಲಿದ್ದರು

ಹಿಂದೂ ಮಹಾಸಭೆಯ ಸನ್ನಿಧಿ ಕೇಂದ್ರ ಡಿಲ್ಲಿಯಿಂದ ಹಂಪೆಗೆ ಬರುವುದೆ?

ಹಿಂದೂ ಮಹಾಸಭೆಯ ಸನ್ನಿಧಿ ಕೇಂದ್ರವನ್ನು ಡಿಲ್ಲಿಯಿಂದ ಕಲ್ಕತ್ತೆಗೆ ಸ್ಥಳಾಂತರಿಸಲು ಆಲೋಚಿಸಿದ್ದು ಬಳ್ಳಾರಿಯ ಶ್ರೀ ಎಸ್ ಕೆ ರಾವ ಬ್ಯಾರಿಸ್ಟರ್, ಎಡ್ವೋಕೇಟ್ ಇವರು ವಿದ್ಯಾರಣ್ಯರ ಪುಣ್ಯಕ್ಷೇತ್ರವಾದ ಹಂಪೆಗೆ ಸ್ಥಳಾಂತರಿಸಲು ಸಾವರ್ಕಾರರಿಗೆ ಬರೆದಿರುವರಂತೆ.

ಅಶುಭ ಸೂಚಕ ಹದಿಮೂರು

ವೈಸರಾಯರನ್ನು ಸೇರಿ, ಕಾರ್ಯಕಾರೀ ಮಂಡಳದಲ್ಲಿ ಹದಿಮೂರು ಸಂಖ್ಯೆಯಿದೆ. ಇಂಗ್ಲಿಷ್ ಜನರಲ್ಲಿ ಹದಿಮೂರು ಅಶುಭ ಸೂಚಕ ಆಸ್ಪತ್ರೆಯಲ್ಲಿ ಹದಿಮೂರು ನಂಬರದ ಹಾಸಿಗೆಯಲ್ಲಿ ಮಲಗಲು ಇಂಗ್ಲಿಷರು ಹೆದರುವರು. ಅಂತೆಯೇ ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದ ವಿಷಯ ಉಂಟಾಗಿರುವ ಜನತಾ ಅಭಿಪ್ರಾಯಗಳಲ್ಲಿ 'ಅಶುಭ ಸೂಚಕ ಹದಿಮೂರು' ಎಂಬ ನಾಮಕರಣವೂ ಒಂದಾಗಿರುವುದು.

ಮಂಗಳೂರು

ಶ್ರೀ ರಾಜಗೋಪಾಲ ಶೆಟ್ಟಿಯನ್ನು ಭಟ್ಕಳದಲ್ಲಿ ಬಂಧಿಸಿದರು

ದಕ್ಷಿಣ ಕನ್ನಡ ಜಿಲ್ಲೆಯ ಸತ್ಯಾಗ್ರಹಿ ಶ್ರೀ ರಾಜಗೋಪಾಲ ಶೆಟ್ಟಿಯನ್ನು ಭಟ್ಕಳದಲ್ಲಿ ಬಂಧಿಸಿದರು ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರೆಂದು ತಿಳಿದಿದೆ.

ಥಾಯಿಲೆಂಡನ್ನು ಜಪಾನು ಆಕ್ರಮಿಸಲಿರುವುದೆ?

ಇಂಡೋ ಚೀನವು ಜಪಾನಿನ ಬಲಿಗೆ ಬಿತ್ತು

ಅಮೇರಿಕ ಬ್ರಿಟನುಗಳು ಜಪಾನನ್ನು ಎದುರಿಸುವವು

ರಶ್ಯ ಜರ್ಮನಿಗಳ ಭೀಕರ ಕದನ

ರಶ್ಯ ಜರ್ಮನಿ ಕದನ ಭೀಕರವಾಗಿ ನಡೆಯುತ್ತಿದ್ದಂತೆ, ಜಪಾನು ಇಂಡೋ ಚೀನವನ್ನು ಸ್ವಾಧೀನಪಡಿಸಿ ಪೂರ್ವದಿಕ್ಕಿನ ಕಡೆ ಕಾಲ್ಕೀಳಲು ಬಯಸಿದೆ. ಬ್ರಿಟನು ಅಮೇರಿಕಗಳು ಜಪಾನಿನ ಚಟುವಟಿಕೆಯನ್ನು ಉಗ್ರವಾಗಿ ನೋಡುತ್ತಿವೆ. ಥಾಯಿಲೆಂಡನ್ನು ಜಪಾನು ಮುತ್ತುತ್ತದೆಂಬುದೊಂದು ಸುದ್ದಿಯಿದೆ. ಆದರೆ ಅದು ತಟಸ್ಥವಾಗಿರುವುದೆಂದು ಸಾರಿದೆ. ಯೂರೋಪಿನ ರಾಜಕೀಯದಲ್ಲಿ ವಿಷಮತೆಗಳು ಹೆಚ್ಚುಹೆಚ್ಚಾಗುತ್ತಾ ಇವೆ. ಯುದ್ಧವು ಪೂರ್ವದ ಕಡೆಗೂ ವಿಸ್ತರಿಸಿದಂತೆ ತೋರುತ್ತದೆ.

ಮೋಸ್ಕೋದ ಮೇಲೆ

ಜರ್ಮನರ ಧಾಳಿಯು ನಡೆಯುತ್ತಲೇ ಇದೆ. ರುಮೇನಿಯನರು ಬೆಸರೇಬಿಯವನ್ನು ಹಿಡಿದಿರುವುದಾಗಿ ಹೇಳುತ್ತಾರೆ.

ಜರ್ಮನರ ವಿಷವಾಯು

ಜರ್ಮನ್ ನಾಜಿ ಸೇನೆಗಳು ವಿಷವಾಯುವನ್ನು ಉಪಯೋಗಿಸಲು ಸೂಚನೆ ಕೊಟ್ಟಿರುವುದು ನಿಜವೆಂದು ಜರ್ಮನಿಯೇ ಒಪ್ಪಿಕೊಂಡಿದೆಯೆಂದು ರಶ್ಯ ಹೇಳುತ್ತದೆ.

ಜಪಾನಿನಲ್ಲಿ ಸಾರ್ವತ್ರಿಕ ಸೈನ್ಯ ಸಂಗ್ರಹ

ಮುಂದಿನ ಪರಿಸ್ಥಿತಿಯನ್ನು ವಿವೇಚಿಸಲು ಜಪಾನಿನ ಪ್ರಿವಿ ಕೌನ್ಸಿಲಿನ ಸಭೆ ಕರೆಯಲಾಗಿತ್ತು. ಸಾರ್ವತ್ರಿಕ ಸೈನ್ಯ ಸಂಗ್ರಹದ ಬಗ್ಗೆ ಚರ್ಚೆಮಾಡಲಾಗಿತ್ತೆಂದು ತಿಳಿದುಬಂದಿದೆ.

ಬ್ರಿಟನ್ ಜಪಾನ್ ವ್ಯಾಪಾರ ರದ್ದು

ಬ್ರಿಟನು ಜಪಾನುಗಳೊಳಗೆ ಆದ ಎಲ್ಲಾ ವ್ಯಾಪಾರ ಒಪ್ಪಂದವು ರದ್ದಾಗುವುದಾಗಿ ತಿಳಿದಿದೆ.

೧೯೧೧ರ ಜಪಾನ್ ಆಂಗ್ಲ ವ್ಯಾಪಾರ ಒಪ್ಪಂದ ೧೯೩೪ರ ಭಾರತ ಜಪಾನ್ ಒಪ್ಪಂದ, ೧೯೩೭ರ ಬರ್ಮಾ ಜಪಾನ್ ವ್ಯಾಪಾರ ಒಪ್ಪಂದ ಇವುಗಳೆಲ್ಲಾ ರದ್ದಾಗುವ ಯೋಚನೆ ನಡೆದಿರುವುದಂತೆ.

ಇಂಡೋಚೀನದಲ್ಲಿ ಜಪಾನು ಸೈನ್ಯಗಳು

ಜಪಾನು ಸೈನ್ಯಗಳು ಬಂದು ಇಂಡೋ ಚೀನದಲ್ಲಿ ಇಳಿದಿವೆಯೆಂದು ತಿಳಿದಿದೆ. ಒಪ್ಪಂದ ಪ್ರಕಾರ ಅವರಿಗೆ ದೊರೆತ ಸೌಲಭ್ಯವನ್ನು ಜಪಾನೀಯರು ಸಂಪೂರ್ಣ ಉಪಯೋಗಿಸಲು ಬಂದಿರುವರು.

ನ್ಯೂಜಿಲೇಂಡಿನಲ್ಲಿ ಜಪಾನರ ಆಸ್ತಿ ಬದುಕು ಜಪ್ತಿ

ಅಮೇರಿಕ ಬ್ರಿಟನುಗಳು ಅನುಸರಿಸಿದ ಮಾರ್ಗದಂತೆ ತನ್ನ ಸೀಮೆಯಲ್ಲಿ ನೆಲೆನಿಂತ ಜಪಾನೀಯರ ಆಸ್ತಿ ಬದುಕುಗಳನ್ನು ನ್ಯೂಜಿಲೆಂಡಿನವರೂ ಜಪ್ತಿ ಮಾಡಲು ನಿರ್ಧರಿಸಿರುವರಂತೆ.

ಥಾಯಿಲೆಂಡು ತಾಟಸ್ಥ್ಯ ವಹಿಸುವುದು

ಜಪಾನು ಆಕ್ರಮಣವೇಕೆ ಮಾಡಿಲ್ಲ

ಥಾಯಿಲೆಂಡನ್ನು ಆಕ್ರಮಿಸುವುದಾಗಿ ಜಪಾನು ಸಾರಿತ್ತೆಂದು ಪ್ರಕಟವಾದ ವಿಷಯು ತಮಗೆ "ಗೊತ್ತಿಲ್ಲವೆಂದೂ, ಥಾಯಿಲೆಂಡು ಎಲ್ಲಾ ಸಂದರ್ಭಗಳಲ್ಲಿಯೂ ತಾಟಸ್ಥ್ಯ ವಹಿಸುವುದೆಂದೂ ಅಲ್ಲಿನ ಪ್ರಮುಖರ ಪ್ರಕಟಣೆಯಾಗಿದೆ.

ಜಪಾನು ಹಡಗ ಹಿಂದೆ ಹೋಗಬೇಕು

ಅಮೆರಿಕದ ಆಜ್ಞೆ

ಅಮೆರಿಕದ ಬಂದರಿನಿಂದ ಜಪಾನು ಹಡಗುಗಳು ಕೂಡಲೇ ಹಿಂದಕ್ಕೆ ಹೋಗಬೇಕೆಂದು ಸಂಯುಕ್ತ ಸಂಸ್ಥಾನ ಸರಕಾರವು ಆಜ್ಞಾಪಿಸಿರುವುದು.

ಬೆಸರೆಬಿಯ ಪೂರ್ಣ ಆಕ್ರಮಣ

ರುಮೇನಿಯನರು ಬೆಸರಬಿಯದಿಂದ ಪೂರ್ಣವಾಗಿ ರಶ್ಯನರನ್ನು ಹೊರ ಅಟ್ಟಿರುವರೆಂದು ತಿಳಿದಿದೆ.

ಅಮೆರಿಕದಲ್ಲಿ ಸಿದ್ಧತೆ

ಅಮೆರಿಕದ ನೆಲ, ಜಲವಿಮಾನಗಳ ಸೇನೆಗಳ ಸಿದ್ಧತೆಯಾಗುತ್ತಿದೆ. ದಿನಕ್ಕೆರಡು ವ್ಯಾಪಾರೀ ಹಡಗುಗಳ ನಿರ್ಮಾಣವಾಗುವ ಏರ್ಪಾಡಾಗುತ್ತಿದೆ.

ಜಪಾನಿನ ಕುರಿತು ಬ್ರಿಟನು

ಜಪಾನಿನ ಚಟುವಟಿಕೆಯ ಕುರಿತು ಬ್ರಿಟನಿನ ವಿದೇಶೀ ಮಂತ್ರಿಗಳಾದ ಈಡನರು ಕಾಮನ್ಸ್ ಮುಂದಿರದಲ್ಲಿ ಒಂದು ಹೇಳಿಕೆಕೊಡುತ್ತಾ, ಜಪಾನಿನ ಕಲಹಕಂಟಕತನವನ್ನು ಖಂಡಿಸಿ ವಿಚಿಯ ದುರ್ಬಲತೆಯನ್ನು ತಿಳಿಸಿ, ಮಲಯಾದ ರಕ್ಷಣಾಕಾರ್ಯವನ್ನು ಬಲಗೊಳಿಸಬೇಕಾಗಿ ಹೇಳಿರುವರು. ಅಮೆರಿಕದೊಡನೆ ಬ್ರಿಟನು ಸಂಯುಕ್ತ ಕಾರ್ಯ ನಡೆಸುವುದೆಂದರು.

ಫ್ರೆಂಚರು ಇಂಡೋಚೀನವನ್ನು ಜಪಾನಿಗೆ ಬಿಟ್ಟುಕೊಟ್ಟರು

ಪೂರ್ವದೇಶದಲ್ಲಿ ೮೦ ವರ್ಷಗಳಿಂದ ಫ್ರೆಂಚರ ವಶವಿದ್ದ ಇಂಡೋಚೀನವನ್ನು ವಿಚಿ ಸರಕಾರದವರು ಜಪಾನರಿಗೆ ಬಿಟ್ಟುಕೊಟ್ಟರೆಂದು ತಿಳಿದಿದೆ. ಇಂಡೋಚೀನದ ೪೦ ಮಿಲಿಯ ಪ್ರಜೆಗಳಲ್ಲಿ ೩೦ ಸಾವಿರ ಮಂದಿಗೆ ಮಾತ್ರ ಶಸ್ತ್ರ ಉಪಯೋಗಿಸುವ ಅಭ್ಯಾಸತಿಳಿದದೆಯಂತೆ.

ಜಪಾನಿನ ಕುರಿತು ಅಮೇರಿಕವು

ಉಗ್ರಧೋರಣೆ ವಹಿಸಿದೆ. ಇಂಡೋ ಚೀನದ ಮೇಲೆ ಜಪಾನು ಮಾಡುವ ಕಾರ್ಯನೀತಿಯ ಕುರಿತು ಸಮ್ನರ್ ವೆಲ್ಸರು ಟೀಕಿಸಿದರು. ಪೆಸಿಫಿಕ್ಕಿನಲ್ಲಿ ಶಾಂತಿ ಕದಡುವದೆಂದು ಅಮೇರಿಕ ತಿಳಿದಿದೆ.

ಯುದ್ಧ ನಿಲ್ಲಿಸಲು ಪೆರೂ ಸರಕಾರದ ಒಪ್ಪಿಗೆ

ಇಕ್ವೆಡೇರಿನೊಡನೆ ಈಗ ನಡೆದ ಯುದ್ಧವನ್ನು ಬಿಡಲು ಪೆರೂ ಸರಕಾರವು ಒಪ್ಪಿಕೊಂಡಿರುವುದೆಂದೂ ಇಕ್ವೆಡೇರ್ ಸರಕಾರವೂ ಯುದ್ಧ ನಿಲ್ಲಿಸಲು ಸಿದ್ಧವಿರುವುದೆಂದೂ ಪ್ರಕಟವಾಗಿದೆ.

ಇಂಡೋ ಚೀನದಲ್ಲಿ

ಇಂಡೋ ಚೀನಕ್ಕೆ ಇಪ್ಪತ್ತನಾಲ್ಕು ತಾಸುಗಳ ಕೊನೆಯ ಮಾತು ಹೇಳಿ, ಜಪಾನು ಸೇನೆ ಈಗಾಗಲೇ ಅಲ್ಲಿ ಆಕ್ರಮಿಸಿದೆ. ಇದರಿಂದ ಮಹಾನರ್ಥವು ಪೂರ್ವದಲ್ಲಿಯೂ ಹರಡಬಹುದೆಂದು ಊಹಿಸಲಾಗಿದೆ. ಅಮೆರಿಕ ಬ್ರಿಟನುಗಳು ಪೂರ್ವದಲ್ಲಿ ಜಪಾನು ಕಾಲು ಚಾಚುವುದನ್ನು ನೋಡಿ ಸುಮ್ಮಗಿರಲು ಸಾಧ್ಯವಿಲ್ಲ. ಈಗಾಗಲೇ ಅವುಗಳಲ್ಲಿ ಬಲವಂತವಾದ ಆಲೋಚನೆ ಸಿದ್ಧತೆಗಳು ನಡೆಯುತ್ತಿವೆಯೆಂದು ತಿಳಿದಿದೆ.

ಅಮೆರಿಕದ ಜಪಾನಿಯರ ವಿಷಯ

ಅಮೆರಿಕದಲ್ಲಿರುವ ಜಪಾನಿ ಹಾಗೂ ಚೀನದ ಮೂಲವನ್ನು ಕರಗಿಸಿ ಬಿಡುವಂತೆ ಅಮೆರಿಕದ ಅಧ್ಯಕ್ಷರು ಆಜ್ಞೆ ಮಾಡಿದ್ದಾರೆ. ಚೀನವನ್ನು ಈ ಸಾಲಿಗೆ ಸೇರಿಸಿದ್ದು ಚೀನದ ಅಂಕೆಯಂತೆಯೆಂದು ಹೇಳಲಾಗಿದೆ. ಹೀಗೆ ಬ್ರಿಟನಿನಲ್ಲಿಯೂ ಅದರ ಇತರ ಭಾಗಗಳಲ್ಲಿಯೂ ಆಜ್ಞೆ ಆಗಿದೆ.

ಸೈಬೇರಿಯಾದ ಮೇಲೆ ಜಪಾನು ಧಾಳಿ

ಸೈಬೇರಿಯಾದ ಮೇಲೆ ಜಪಾನು ಧಾಳಿಮಾಡುವುದು ಸಂಭವವೆಂದು ರಶ್ಯದ ಪ್ರಕಟಣೆಯಿದೆ.

ವಿಚಿ ಸರಕಾರದ ವರ್ತನೆಗೆ ಸ್ವತಂತ್ರ ಫ್ರೆಂಚರು ಹೊಣೆಯಲ್ಲ

ಜಪಾನಿನೊಡನೆ ಇಂಡೋ ಚೀನದ ಕುರಿತು ವಿಚಿ ಸರಕಾರವು ಒಪ್ಪಂದ ಮಾಡಿದ ವಿಷಯದಲ್ಲಿ ಮೇಲಿನಂತೆ ಪ್ರಕಟಣೆ ಹೊರಟಿದೆ.

ಲಂಡನಿನಲ್ಲಿ ವಿಮಾನಧಾಳಿ ಭಯ

ಆಗ್ನೇಯ ಇಂಗ್ಲೆಂಡು ಲಂಡನುಗಳ ಮೇಲೆ ವೈರಿ ವಿಮಾನಗಳ ಧಾಳಿ ವಿಶೇಷವಾಗಿತ್ತು.

ಆಫ್ರಿಕದಲ್ಲಿ ಕದನ

೭೦ ಸಾವಿರ ಜನರ ಮರಣ

ಡಿಸೆಂಬರ ೨೦ರಿಂದ ... ವರೆಗೆ ೭೪೩೭ ಜನ ಹಿಂದೀ ಸೈನಿಕರು ಗಾಯಗೊಂಡಿದ್ದು ಕೆಲವು ಜನರು ಮೃತಪಟ್ಟಿರುವರಂತೆ. ವೈರಿಗಳಲ್ಲಿ ಸುಮಾರು ೭೦ ಸಾವಿರ ಜನರು ಮರಣಹೊಂದಿದರಂತೆ.

ಆಸ್ಟ್ರೇಲಿಯದಲ್ಲಿ ಸೈನ್ಯಸಂಗ್ರಹ

ಆಸ್ಟ್ರೇಲಿಯದಲ್ಲಿ ಸೈನ್ಯಕ್ಕೆ ಜನರನ್ನು ಸೇರಿಸುತ್ತಿದ್ದಾರೆ.

ಜಪಾನಿನ ಸಂಬಂಧದಲ್ಲಿ ಆರ್ಥಿಕ ನಿರ್ಬಂಧ

ಜಪಾನಿನ ವಿಷಯದಲ್ಲಿ ಅಮೇರಿಕವು ಮಾಡಿದ ರೀತಿಯಲ್ಲಿ ಆರ್ಥಿಕನಿಯಂತ್ರಣ ನಿರ್ಬಂಧವನ್ನು ಇತರ ದೇಶದವರೂ ಮಾಡಿದರೆ ತಾವು ಅದನ್ನು ಸ್ವಾಗತಿಸುವುದಾಗಿ ಸಮ್ನರ್ ವೆಲ್ಲಿಸರು ಹೇಳುತ್ತಾರೆ.

ಜೀವನದ ಪ್ರತಿಯೊಂದು ಅಂಶದಲ್ಲಿಯೂ ಅವರು ಸುಖಪಡುತ್ತಾರೆ. ಸಂಪೂರ್ಣ ಆರೋಗ್ಯಶಾಲಿಗಳಾಗಿರುವುದರಿಂದ ಅವರು ಸುಖಪಡುತ್ತಾರೆ.

ನೀವು ಎಷ್ಟೇ ಪ್ರಾಯಸ್ಥರಾಗಿರಿ, ಇಲ್ಲಾ ಎಷ್ಟೇ ಅನಾರೋಗ್ಯ ಹೊಂದಿರಿ, ನೀವೂ ಪೂರ್ಣ ಆರೋಗ್ಯವನ್ನು ಹೊಂದಬಹುದು.

ಒಂದು ಬಾಟ್ಲಿ

ಜೀವಾಮೃತ

ವನ್ನು ಕೊಂಡುಕೊಳ್ಳಿರಿ.

ಸ್ತ್ರೀ ಪುರುಷರೆಲ್ಲರಿಗೂ ಹಿತಕರ ಶಕ್ತಿವರ್ಧಕ ಟಾನಿಕ್

ಕ್ರಮವಾಗಿ ಇದನ್ನು ತೆಗೆದುಕೊಳ್ಳಿರಿ. ನಿಮ್ಮಲ್ಲಿ ಹೊಸ ಜೀವನ ತುಂಬಿದ ಅನುಭವವಾಗುವುದು. ಎಂದಿಗೂ ಇದು ಗುಣಕೊಡದೆ ಇರುವುದಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಇದು ದೊರಕುತ್ತದೆ.

ತಯಾರು ಮಾಡುವವರು:

ಆಯುರ್ವೇದಾಶ್ರಮ, ಮದರಾಸು.

ಸ್ಟೋಕಿಸ್ಟರು: ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಪುಣೆಯ ಪರಿಷತ್ತಿನವರು ಅಸಂತುಷ್ಟಿ ಪ್ರಕಟಿಸಿದರು

ಮಹಾರಾಷ್ಟ್ರದಿಂದ ೧೬ ಮಂದಿ ಸತ್ಯಾಗ್ರಹಿಗಳು ಮಾತ್ರ ಆರಿಸಲ್ಪಟ್ಟರು

ವೈಸರಾಯರ ಕಾರ್ಯಕಾರೀ ಮಂಡಳದ ಕುರಿತು ದೇಶದಲ್ಲಿ ಸರ್ವತ್ರ ಅಸಂತುಷ್ಟಿಯಿದೆ. ಪುಣೆಯ ಪರಿಷತ್ತಿನ ಅಪಕ್ಷದ ಮುಖಂಡರೂ ಅತೃಪ್ತಿಯನ್ನು ಆಗ್ರಹ ಪೂರ್ವಕ ಸಾರಿದ್ದಾರೆ. ಆದರೆ ಸ್ಥಿತ್ಯಲ್ಲಿ ಬೇರೇನೂ ಬದಲಾವಣೆಗಳಾಗುವ ಚಿಹ್ನೆ ತೋರುವುದಿಲ್ಲ. ವೈಸರಾಯರು ಮಳೆಗಾಲದ ಪ್ರವಾಸಕ್ಕೆ ಹೊರಟವರು ಮದ್ರಾಸಿಗೆ ಬರಲಿರುವರು. ಗಾಂಧಿಜಿ ಮಹಾರಾಷ್ಟ್ರದಿಂದ ಹೊಸತಾಗಿ ಹದಿನಾರು ಮಂದಿ ಸತ್ಯಾಗ್ರಹಿಗಳನ್ನು ಮಾತ್ರ ಆರಿಸಿದ್ದಾರೆ. ಸತ್ಯಾಗ್ರಹ ಸಮರವು ಅಬಾಧಿತವಾಗಿ ಸಾಗುತ್ತಿದೆ.

ಟೀಕಾಕಾರರಿಗೆ ಎಂ. ಎಸ್. ಅಣೆಯವರ ಉತ್ತರ

"ನಾನು ಅಧಿಕಾರ ಸ್ವೀಕರಿಸಿದ್ದಕ್ಕೆ ಅನೇಕರು ನನ್ನನ್ನು ಟೀಕಿಸಿರುವರು ಅನೇಕರು ಸ್ವಾಗತಿಸಿರುವರು ಟೀಕಾಕಾರ ಟೀಕೆಯ ಸತ್ಯಾಂಶವನ್ನು ನಾನು ಕರ್ತವ್ಯ ನಿರ್ವಹಿಸುವಾಗ ಮರೆಯಲಾರೆನು" ಹೀಗೆಂದು ಅಣೆಯವರು ಹೇಳುತ್ತಾರೆ

ಮಹಾರಾಷ್ಟ್ರದ ಮೂರನೆಯ ಸತ್ಯಾಗ್ರಹಿಗಳ ಪಟ್ಟಿ

ಮಹಾತ್ಮರು ೧೬ ಜನರನ್ನು ಮಾತ್ರ ಆರಿಸಿದರು

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಟಿ ಕೆ ಗೋಸ್ವಾಮಿಯವರು ಸ್ವತಃ ಮಹಾತ್ಮರಿಗೆ ಒಪ್ಪಿಸಿದ ಸತ್ಯಾಗ್ರಹಿಗಳ ಪೈಕಿ ೧೬ ಜನರನ್ನು ಮಾತ್ರ ಆರಿಸಿರುವರೆಂದು ತಿಳಿದಿದೆ.

ಅನ್ನ ಸತ್ಯಾಗ್ರಹ ನಿಲ್ಲಿಸಿರೆಂದು ಸತ್ಯಾಗ್ರಹಿ ಕೈದಿಗಳಿಗೆ ಮಹಾತ್ಮರ ಸಂದೇಶ

ಲ್ಯಾಲಪುರ ರಾಜಕೀಯ ಕೈದಿಗಳು ಅನ್ನ ಸತ್ಯಾಗ್ರಹ ಮಾಡಿದ ವಿಷಯವಾಗಿ ಗಾಂಧಿಜಿಯವರು, ಅವರಿಗೆ ಅನ್ನ ಸತ್ಯಾಗ್ರಹ ನಿಲ್ಲಿಸುವಂತೆ ಹೇಳಬೇಕೆಂದು ಪಂಜಾಬು ಪ್ರಾಂತಿಕ ಕಾಂಗ್ರೆಸು ಕಮಿಟಿ ಅಧ್ಯಕ್ಷ ಇಫ್ತಿಕರುದ್ದೀನರ ಮುಖಾಂತರ ಸಂದೇಶ ಕಳುಹಿಸಿರುವರು.

ವೈಸರಾಯರ ಮಳೆಗಾಲದ ಪ್ರವಾಸ

ವೈಸರಾಯರು ಮಳೆಗಾಲದ ಪ್ರವಾಸದಲ್ಲಿ ಮದ್ರಾಸಿಗೆ ಬರಲಿರುವರು. ದಾರಿಯಲ್ಲಿ ನಾಗಪುರದಲ್ಲಿ ಎರಡು ದಿನಗಳು ಇಳಿವರು.

ಅಣೆಯವರು ಅಸೆಂಬ್ಲಿಯಲ್ಲಿ ಧುರೀಣರಾಗುವರೆ?

ಕೇಂದ್ರ ಅಸೆಂಬ್ಲಿಯ ಸರಕಾರಿ ಪಕ್ಷಕ್ಕೆ ಧುರೀಣರಾಗುವರೆಂದು ಊಹೆಯಿದೆ. ಕೇಂದ್ರ ಅಸೆಂಬ್ಲಿಯ ಶರತ್ಕಾಲದ ಅಧಿವೇಶನವು ಅಕ್ಟೋಬರ ೨೭ಕ್ಕೆ ಹೊಸ ಡಿಲ್ಲಿಯಲ್ಲಿ ಪ್ರಾರಂಭವಾಗುವುದು ಆಗ ಅದರಲ್ಲಿನ ಬೇರೆ ಬೇರೆ ಪಕ್ಷಗಳ ಬಲ, ಧೋರಣ, ಪ್ರಮುಖ ವ್ಯಕ್ತಿ ಇವೇ ಮೊದಲಾದವುಗಳ ಕೇಂದ್ರ ಕಾರ್ಯಕಾರೀ ಮಂಡಳದ ಪುನರ್ಘಟನೆಗನ್ನು ಸಾರವಾಗಿ ನಿರ್ಣಯವಾಗುವುದು ಇದರಂತೆ ನವೆಂಬರ ೧೦ಕ್ಕೆ ಸೇರುವ ಕೌನ್ಸಿಲ್ ಓಫ್ ಸ್ಟೇಟಿನಲ್ಲಿಯೂ ವ್ಯತ್ಯಾಸವಾಗುವುದು. ಅಸೆಂಬ್ಲಿಯಲ್ಲಿ ಶ್ರೀ. ಅಣೆಯವರು, ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಸರ್ ಅಕ್ಬರ್ ಹೈದರಿಯವರು ಸರಕಾರದ ಧುರೀಣರಾಗುವರೆಂದು ಊಹೆಯಿದೆ

ಶರೀಫರಿಗೆ ಮುಂಬಯಿ ಪ್ರಾಂತವನ್ನು ಬಿಡುವ ಆಜ್ಞೆ

ವೈಸರಾಯರು ಮದ್ರಾಸಿಗೆ ಪ್ರವಾಸ ಮಾಡುವರು

ಲೀಗಿನಿಂದ ಹೊರಹಾಕಿರಿ

ಲೀಗಿನ ಸಮ್ಮತಿ ಕೇಳದೆ ಫಜುಲುಲ್ ಹಕ್ ಮೊದಲಾದವರು ವೈಸರಾಯ ಕಾರ್ಯಕಾರೀ ಮಂಡಳ ಮೊದಲಾದುವುಗಳಲ್ಲಿ ಕೆಲಸ ಸ್ವೀಕರಿಸಿದ ವಿಷಯದಲ್ಲಿ ಅವರನ್ನು ಲೀಗಿನಿಂದ ಹೊರಹಾಕಬೇಕಾಗಿ ಜಿನ್ನರಿಗೆ ಹಲವರ ಸೂಚನೆ ಬಂದಿದೆ. ಹಕ್ಕರು ಅದಕ್ಕೆ ತಮ್ಮ ಉತ್ತರವಿತ್ತಿರುವರು. ಲೀಗಿನವರು ರಾಜಿ ಕೊಡಬೇಕೆಂದು ಹೇಳಿದರೆ ಆ ಕುರಿತು ಮುಂದೆ ತಿಳಿಸುವೆನೆಂದು ಹಕ್ಕರು ಹೇಳಿರುವರು

ಶ್ರೀ ಎ. ಝುಬೇದ್ ಶರೀಫರಿಗೆ ಮುಂಬಯಿ ಪ್ರಾಂತದಿಂದ ಗಡಿಪಾರು

ಬೆಂಗಳೂರು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎ ಝುಬೇದ್ ಶರೀಫರಿಗೆ ಮುಂಬಯಿ ಪ್ರಾಂತ ಬಿಟ್ಟು ೨೪ ಗಂಟೆಗಳೊಳಗೆ ಹೊರ ಹೋಗುವರೆ ಮುಂಬಯಿ ಸರಕಾರದವರು ತಿಳಿಸಿದ್ದಾರೆ. ಶ್ರೀ. ಶರೀಫರನ್ನು ಮೈಸೂರು ಸಂಸ್ಥಾನ ಸರಕಾರದವರು ಹೊರಹಾಕಿದ್ದರಿಂದ ಅವರು ಕಳೆದ ಮೂರು ನಾಲ್ಕು ತಿಂಗಳಿಂದ ಧಾರವಾಡದಲ್ಲಿದ್ದರು

ಏನಾದರೂ ಹಿತಮಾಡಬೇಕೆಂದು ನಾನು ಸೇರಿದೆನು

ಎನ್ ಆರ್. ಸರ್ಕಾರರ ಹೇಳಿಕೆ

ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಅಧಿಕಾರ ವಹಿಸಿದ ವಿಷಯದಲ್ಲಿ ಮಾತನಾಡುತ್ತಾ ಶ್ರೀ ನಳಿನೀ ರಂಜನ ಸರ್ಕಾರರು, ಮುಂದೆ ಏನಾದರೂ ಹಿತ ಸಾಧಿಸ ಬಹುದೆಂದು ನಾನು ಈಗ ಅಧಿಕಾರ ವಹಿಸಿರುವೆನೆಂದೂ, ನಾನು ಇನ್ನಿತರರಷ್ಟೇ ರಾಷ್ಟ್ರೀಯ ಮನೋವೃತ್ತಿಯುಳ್ಳವನೆಂದೂ ಹೇಳಿದರು. ಬ್ರಿಟಿಷ್ ಸರಕಾರದ ಧೋರಣವನ್ನು ಅವರು ಕಟುವಾಗಿ ಟೀಕಿಸಿದರು ಶ್ರೀ ಸರ್ಕಾರರು ಮೊದಲು ಕಾಂಗ್ರೆಸ್ ಪಕ್ಷದವರಿದ್ದು ಬಂಗಾಳದ ಮಂತ್ರಿ ಮಂಡಳದಲ್ಲಿದ್ದರು

ಹಿಂದೂ ಮಹಾಸಭೆಯ ಸನ್ನಿಧಿ ಕೇಂದ್ರ ಡಿಲ್ಲಿಯಿಂದ ಹಂಪೆಗೆ ಬರುವುದೆ?

ಹಿಂದೂ ಮಹಾಸಭೆಯ ಸನ್ನಿಧಿ ಕೇಂದ್ರವನ್ನು ಡಿಲ್ಲಿಯಿಂದ ಕನ್ನಡಕ್ಕೆ ಸ್ಥಳಾಂತರಿಸಲು ಆಲೋಚಿಸಿದ್ದು ಬಳ್ಳಾರಿಯ ಶ್ರೀ ಎನ್ ಕೆ ರಾಮದಾಸ್, ಎಡ್ವೋಕೇಟ್ ಇವರು ವಿದ್ಯಾರಣ್ಯರ ಪುಣ್ಯಕ್ಷೇತ್ರವಾದ ಹಂಪೆಗೆ ಸ್ಥಳಾಂತರಿಸಲು ಸಾವರ್ಕಾರರಿಗೆ ಬರೆದಿರುವರಂತೆ

ಅಶುಭ ಸೂಚಕ ಹದಿಮೂರು

ವೈಸರಾಯರನ್ನು ಸೇರಿ, ಕಾರ್ಯಕಾರೀ ಮಂಡಳದಲ್ಲಿ ಹದಿಮೂರು ಸಂಖ್ಯೆಯಿದೆ ಇಂಗ್ಲಿಷ್ ಜನರಲ್ಲಿ ಹದಿಮೂರು ಅಶುಭ ಸೂಚಕ ಆಸ್ಪತ್ರೆಯಲ್ಲಿ ಹದಿಮೂರು ನಂಬರದ ಹಾಸಿಗೆಯಲ್ಲಿ ಮಲಗಲು ಇಂಗ್ಲಿಷರು ಹೆದರುವರು ಅಂತೆಯೇ ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದ ವಿಷಯ ಉಂಟಾಗಿರುವ ಜನತಾ ಅಭಿಪ್ರಾಯಗಳಲ್ಲಿ 'ಅಶುಭ ಸೂಚಕ ಹದಿಮೂರು' ಎಂಬ ನಾಮಕರಣವೂ ಒಂದಾಗಿರುವುದು.

—

ಮಂಗಳೂರು

ಶ್ರೀ ರಾಜಗೋಪಾಲ ಶೆಟ್ರನ್ನು ಭಟ್ಕಳದಲ್ಲಿ ಬಂಧಿಸಿದರು

ದಕ್ಷಿಣ ಕನ್ನಡ ಜಿಲ್ಲೆಯ ಸತ್ಯಾಗ್ರಹಿ ಶ್ರೀ ರಾಜಗೋಪಾಲ ಶೆಟ್ರನ್ನು ಭಟ್ಕಳದಲ್ಲಿ ಬಂಧಿಸಿದರು ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರೆಂದು ತಿಳಿದಿದೆ

ಸುಕ್ರ ಸಂಜೀವನ

ಭಾರತ ದೇಶದಿಂದು ಪ್ರಾಚೀನ ಋಷಿಗಳ ನಿಯಮಗಳ ಸುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವ್ರತ ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಕರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯು ತಿಳಿಯದೇ ಇಲ್ಲದುದರಿಂದಲೂ ಶಕ್ತಿ ವಿಜ್ಞಾನವಿಲ್ಲದುದ್ದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ' ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

½ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ, ಎಫ್.ಸಿ ಎಸ್ (ಲಂಡನ್) ಎಂ. ಸಿ ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ 17A, ಆರ್ಮೇನಿಯ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಸ್ವಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ಸಿನಿಮಾ ಸುದ್ದಿ

ತಾಜ್‌ಮಹಾಲ್ ಪಿಕ್ಚರ್ಸಿನಲ್ಲಿ ಪೃಥ್ವೀರಾಜ್

ನಾಸೀಮಾಳು ಮತ್ತು ಮುಖ್ತಿ ಇವರ ಹೊಸ ಚಲಚ್ಚಿತ್ರ ಕಂಪೆನಿ ತಾಜ್‌ಮಹಾಲ್ ಪಿಕ್ಚರ್ಸಿನ 'ಸುಭಾಶಾಮ್' ಎಂಬ ನೂತನ ಚಿತ್ರದಲ್ಲಿ ಒಂದು ಪ್ರಾಮುಖ್ಯ ಪಾತ್ರವಹಿಸುವರೆ ಪೃಥ್ವೀರಾಜನು ಕರಾರು ಮಾಡಿರುವನೆಂದು ತಿಳಿದಿದೆ.

'ಪುಂಡಲೀಕ' ಚಿತ್ರದಲ್ಲಿ ವಿಷ್ಣುಪಂತ್ ಪಗ್ನಿಸ್

ಬ್ರಿಲಿಯಂಟ್ ಪಿಕ್ಚರ್ಸಿನವರು 'ಪುಂಡಲೀಕ' ಎಂಬ ಸಂತ ಚಿತ್ರವೊಂದನ್ನು ತಯಾರಿಸಲಿರುವರೆಂದೂ, ಅದರಲ್ಲಿ ಸಂತ ಶಿರೋಮಣಿಯ ಪಾತ್ರವಹಿಸಲು ವಿಷ್ಣುಪಂತ ಪಗ್ನೀಸನನ್ನು ಕೇಳಲಾಗಿದೆಯೆಂದೂ ತಿಳಿದಿದೆ.

ಬಂಗಾಳವನ್ನು ಬಂಗಾಳ ನಟಿ ಬಿಡವೊಲ್ಲಳಂತೆ

ಇನ್‌ಕಮ್ ಟೇಕ್ಸ್ ಮಾಫಿಯಾಗಿ ವರ್ಷವೊಂದಕ್ಕೆ ರೂ. ೪೮,೦೦೦ ಸಂಬಳ ಕೊಡಬಹುದಾಗಿ ಬಂಗಾಳದ ಪ್ರಸಿದ್ಧ ನಟಿ ಕನ್ನನ್‌ಬಾಲಾ ಇವಳಿಗೆ ಬೊಂಬಯಿಯ ಚಲಚ್ಚಿತ್ರ ಕಂಪೆನಿಯೊಂದರಿಂದ ಕೇಳಿಗೆ ಬಂದಿರುವುದಾಗಿಯೂ, ಆದರೂ ಆಕೆ ತನ್ನ ಪ್ರಾಂತವನ್ನು ಬಿಟ್ಟುಹೋಗಲು ಇಚ್ಛಿಸದಿದ್ದುದರಿಂದ ಆ ಕೇಳಿಕೆಯನ್ನು ಅಲ್ಲಗಳೆದಿರುವಳೆಂದೂ ಸುದ್ದಿಯಿದೆ. ಹೀಗೆಯೇ ನಿರ್ದೇಶಕ ನಿತಿನ್ ಬೋಸರಿಗೆ ತಿಂಗಳ ೫,೦೦೦ ರೂಪಾಯಿ ಸಂಬಳದ ಕೇಳಿಕೆ ಬಂದಿರುವುದಾಗಿಯೂ ಆದರೆ ಅವರು ನ್ಯೂಥಿಯೇಟರ್‍ಸಿನ ೧೫೦೦ ರೂಪಾಯಿಗಳಲ್ಲಿಯೇ ತೃಪ್ತಿಪಟ್ಟಿರುವರೆಂದೂ ತಿಳಿದಿದೆ.

ಸೀದಾ ರಾಸ್ತಾ

ಬೊಂಬಯಿಯ ಓರಿಯಂಟ್ ಪಿಕ್ಚರ್ಸಿನವರು ಸೀದಾ ರಾಸ್ತಾ (ಸರಿದಾರಿ) ಎಂಬ ಚಿತ್ರವೊಂದನ್ನು ತಯಾರಿಸಲಿರುವರಂತೆ. ಸುಶೀಲಕುಮಾರ್, ರಾಧಾರಾಣಿ, ಜಗದೀಶ ಶೆಟ್ಟಿ B. A. ಮೊದಲಾದವರು ಇದರಲ್ಲಿ ಅಭಿನಯಿಸುವರು.

ದೇವಿಕಾರಾಣಿ

(ಜೀವನ)

ದೇವಿಕಾರಾಣಿ ಇಂದು ಚಲಚ್ಚಿತ್ರ ತಾರೆಗಳಲ್ಲಿ ಅತ್ಯಂತ ಖ್ಯಾತಿ ಶಿಖರವನ್ನೇರಿದ್ದಾಳೆ. ಬಂಗಾಳಿ ಐ. ಎಮ್. ಎಸ್. ಆಫೀಸರರ ಮಗಳಾಗಿ, ಕವಿ ಠಾಗೂರರ ಮೊಮ್ಮಗಳಾಗಿ ಆಕೆ ಹುಟ್ಟಿದಳು. ದಕ್ಷಿಣ ಭಾರತದಲ್ಲಿ ಅವಳ ಜನನವಾಯಿತು. ಶಾಂತಿನಿಕೇತನದಲ್ಲಿ ವಿದ್ಯಾಭ್ಯಾಸ ಪಡೆದಳು. ಮತ್ತೆ ಇಂಗ್ಲೆಂಡು ಫ್ರಾನ್ಸುಗಳಲ್ಲಿ ಶಿಕ್ಷಣ ಹೊಂದಿದಳು. ಜರ್ಮನಿಯ ಪ್ರಸಿದ್ಧ ಉಫಾ ಸ್ಟುಡಿಯೋದಲ್ಲಿ ಸಿನೆಮಾ ಜೀವನವನ್ನು ಅಭ್ಯಾಸಿಸಿ, ಹಿಮಾಂಶುರೈಯೊಡನೆ ಪ್ರೇಮವಿವಾಹವಾಗಿ, ಪತಿಯ ಸಂಗಡ 'ಕರ್ಮ'ದಲ್ಲಿ (ಪ್ರಥಮ ಆಂಗ್ಲ ಭಾಷೆಯಲ್ಲಿ ಭಾರತೀಯ ಚಿತ್ರ) ಅಭಿನಯಿಸಿ, ಆಂಗ್ಲ ಹುಡುಗಿಯರಿಗಿಂತಲೂ ಚತುರತೆಯ ಇಂಗ್ಲಿಷಿನಲ್ಲಿ ಮಾತನಾಡಿ ಅಭಿನಯಿದಳು. ಮತ್ತೆ ಭಾರತಕ್ಕೆ ಬಂದು ಹಿಂದೂಸ್ತಾನಿಯಲ್ಲಿ ಹೆಚ್ಚಿನ ಪ್ರಾವೀಣ್ಯತೆ ಹೊಂದಿದಳು. ತನ್ನ ಪತಿ ಹಿಮಾಂಶುರೈ ಮೃತಪಟ್ಟ ಮೇಲೆ ಬೊಂಬಯಿ ಟಾಕೀಸಿನ ಸಂಪೂರ್ಣ ಆಡಳಿತ ವಹಿಸಿ ಈಗ ಅದನ್ನು ನಡೆಸುತ್ತಿದ್ದಾಳೆ.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವಕ್ಕೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ್ಯ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು:—

ಮೆಸರ್ಸ್ ವೆದುಲ್ಲಪಳ್ಳಿ ಬ್ರದರ್ಸ್,

289 ಎಸ್ಪ್ಲನೇಡ—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.

ಮುಹಮ್ಮದಾಲಿ ರೋಡ್, ಮಂಗಳೂರು.

ಕೆಲವು ಸಿದ್ಧೌಷಧಗಳು

ಲೇಖಕ: ಶ್ರೀ. ಎನ್. ಶ್ಯಾಮರಾಯ ನಾಯ್ಕರು

[ಪ್ರತಿ ಊರಿನಲ್ಲಿ ತಿರುಗಾಡಿ ವಿಚಾರಿಸಿದರೆ, ಯಾವುದಾದರೂ ಒಂದು ಮನೆಯಲ್ಲಿ ಅವರ ವಂಶಪಾರಂಪರ್ಯವಾಗಿ ಕೊಡುತ್ತಾ ಬರುವ ಒಂದು ಸಿದ್ಧೌಷಧಿ ಇದ್ದೇ ಇರುತ್ತದೆ. ಸದ್ರಿ ಔಷಧಿಯನ್ನು ಆ ಒಂದು ರೋಗಕ್ಕೆ ಕೊಟ್ಟರೆ, ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗುವುದು. ವೈದ್ಯರಿಂದಲೂ ಡಾಕ್ಟರರಿಂದಲೂ ಗುಣಮಾಡಲಿಕ್ಕೆ ಸಾಧ್ಯವಿಲ್ಲದ ರೋಗಗಳೂ ಅಂತಹ ಮದ್ದುಗಳಿಂದ ಗುಣವಾಗುತ್ತವೆ. ಮದ್ದಿಗೆ ಖರ್ಚು ಕಡಿಮೆ; ಕಾಡಿನಲ್ಲಿ ಸಿಕ್ಕುವ ಗಿಡಮೂಲಿಕೆಗಳು; ಅಂತಹ ದಿವ್ಯವಾದ ಮದ್ದುಗಳು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿಯೂ ಇರುತವೆ. ಅಂತಹ ಔಷಧ ಪ್ರಯೋಗಗಳು ವೈದ್ಯ ಪುಸ್ತಕದಲ್ಲಿ ಸಿಕ್ಕುವುದಿಲ್ಲ; ಇದನ್ನು ಆಯಾ ಮನೆಯವರು ತಮ್ಮ ಅಂತ್ಯಕಾಲದಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಒಬ್ಬನಿಗೆ ಗುಟ್ಟಾಗಿ ಕಲಿಸುವರು; ಅದು ಒಬ್ಬರಿಂದ ಒಬ್ಬರಿಗೆ ಅದೇ ರೀತಿಯಲ್ಲಿ ವಂಶಪಾರಂಪರ್ಯವಾಗಿ ಮುಂದರಿಯುವುದು. ಇನ್ನು ಹಲವು ಕಡೆಗಳಲ್ಲಿ ಮದ್ದನ್ನು ಕಲಿಸಿಕೊಡುವ ಮೊದಲೇ ಅದನ್ನು ತಿಳಿದಿದ್ದವರು ತೀರಿಹೋಗಿ, ಅಂಥಾ ದಿವ್ಯ ಔಷಧಿಗಳು ಮಾಯವಾಗುವವು. ಔಷಧಿಗಳನ್ನು ಪ್ರಚಾರ ಮಾಡಿದರೆ ನಮ್ಮ ಸಹೋದರ ಸಹೋದರಿಯರಿಗೆ ಬಹಳ ಸಹಾಯಮಾಡಿದಂತಾಗುವುದು. ಆದ್ದರಿಂದ ಇಂಥಾ ದಿವ್ಯ ಔಷಧಿಗಳು ನಾಶವಾಗದಂತೆಯೂ ಎಲ್ಲಾ ಜನರಿಗೆ ಪ್ರಯೋಜನ ಸಿಕ್ಕುವಂತೆಯೂ ಅದನ್ನು ಪ್ರಚಾರ ಮಾಡಬೇಕಾಗಿ ಅಂತಹ ಸಿದ್ಧೌಷಧಿಗಳನ್ನು ಕಲಿತಿರುವ ಜನರಲ್ಲಿ ಪ್ರಾರ್ಥಿಸುತ್ತೇನೆ. ನನಗೆ ತಿಳಿದುಬಂದ ಕೆಲವು ಕೈಕಂಡ ಪ್ರಯೋಗಗಳನ್ನು (ಸಿದ್ಧೌಷಧಿಗಳನ್ನು) ಕೆಳಗೆ ಕೊಡುತ್ತಾ ಬರುತ್ತೇನೆ.]

೨. ಆಸನಕುರ

ರೋಗದ ಲಕ್ಷಣ:— ಆಸನ ದ್ವಾರದಲ್ಲಿ ಕುರ ಆಗುವುದು; ತಡಿಯಲಾರದಷ್ಟು ವೇದನೆ ಆಗುವುದು. ಇದು ಆದ ಮೇಲೆ ಮಲಮೂತ್ರ ವಿಸರ್ಜನೆ ಮಾಡಲಿಕ್ಕೂ ಸಾಧ್ಯವಾಗುವುದಿಲ್ಲ.

ಮದ್ದು:— ತುಳು: ಪಲ್ಲೆ, ಕನ್ನಡ: ಹಲ್ಲೆಕಾಯಿ, ಕೊಂಕಣಿ: ಗಾಗಾಯಿವಾಲಿ. ಸದ್ರಿ ಹಲ್ಲೆಕಾಯಿಯ ಒಳಗಿನ ಬೀಜ ತೆಗೆದು, ಅಷ್ಟೇ ಗೋಧಿ ಸೇರಿಸಿ, ದನದ ಹಾಲಿನಲ್ಲಿ ಅರೆದು ಬಿಸಿಮಾಡಿ ಆಸನ ಕುರಕ್ಕೆ ಮೇಲೆ ಮೇಲೆ ಹಚ್ಚುತ್ತಾ ಬಂದರೆ ಕೂಡಲೆ ನೋವು ಗುಣವಾಗಿ ವಾಸಿಯಾಗುವುದು.

೩. ನಿರ್ವೇದನಾ ತೈಲ

ತುಳು: ತಿಪಲೆ, ಕನ್ನಡ: ಪಾಡಾವಳಿ ಬಳ್ಳಿ, ಸಂಸ್ಕೃತ: ಪಾಠಾ.

ತೈಲ ಮಾಡುವ ವಿಧಾನ:— ತುಂಬೆ ಸೊಪ್ಪು ೪ ತೊಲೆ, ಪಾಡಾವಳಿ ಬಳ್ಳಿಯ ಎಲೆ ೨ ತೊಲೆ, ಕರಿನೆಕ್ಕಿ ಸೊಪ್ಪು ೪ ತೊಲೆ ಸದ್ರಿ ಮೂರು ಬಗೆಯ ಸೊಪ್ಪುಗಳನ್ನು ನೀರು ಹಾಕದೆ ನುಣ್ಣಗೆ ಅರೆದು, ಅಡಿಕೆ ಪ್ರಮಾಣ ಗುಳಿಗೆಗಳನ್ನು ಮಾಡಿ, ಒಂದು ಗುಳಿಗೆಗೆ ಒಂದು ಕುಡ್ತೆಯಂತೆ ತೆಂಗಿನೆಣ್ಣೆ ಕೂಡಿಸಿ, ಸದ್ರಿ ಗುಳಿಗೆಗಳನ್ನು ಎಣ್ಣೆಯಲ್ಲಿ ಕಲಸಿ, ಬಿಸಿಮಾಡಿ, ಸರಿಯಾದ ಪಾಕಕ್ಕೆ ಇಳಿಸುವುದು; ಇಳಿಸುವಾಗ ಒಂದು ಕುಡ್ತೆಗೆ ೨ ಕಾಣೆ ಪಾವಲಿ ತೂಕ ಪ್ರಕಾರ ಅರಸಿನದ ಪುಡಿಯನ್ನು ಸೇರಿಸುವುದು.

ಪ್ರಯೋಜನ:— ಈ ತೈಲಕ್ಕೆ ಹತ್ತಿಯನ್ನು ಮುಳುಗಿಸಿ, ಕುರ, ಹುಣ್ಣು, ಕತ್ತಿಯ ಯಾ ಜಜ್ಜಿದ ಪೆಟ್ಟು ಇವುಗಳ ಮೇಲೆ ಇಟ್ಟರೆ ಕೂಡ್ಲೆ ನೋವು ಗುಣವಾಗಿ ವಾಸಿಯಾಗುತ್ತದೆ. ಸಣ್ಣ ಮಕ್ಕಳಿಗೆ ವಾತದಿಂದ ಸಹಿತ ಕುರು ಆಗುವುದು. ಈ ತೈಲವನ್ನು ಹಚ್ಚುವುದರಿಂದ ಕೂಡಲೆ ಗುಣ. ಬೇರೆ ವಾತ, ಬಾವು, ಮುಳ್ಳು ತಾಗುವುದು, ನಂಜಿ ಇತ್ಯಾದಿ ರೋಗಗಳಿಗೂ ಆಗುತ್ತದೆ. ಮುಳ್ಳು ಯಾ ಗಾಜೂರು ತಾಗಿದ ಕೂಡಲೆ ರಾತ್ರಿ ಮಲಗುವಾಗ ಹತ್ತಿಯಿಂದ ಸದ್ರಿ ಸ್ಥಳಕ್ಕೆ ಇಟ್ಟು ಮಲಗಿದರೆ ಮಾರಣೇ ದಿನ ವೇದನೆ ಇರುವುದಿಲ್ಲ.

[೭ನೆಯ ಪುಟದಿಂದ ಮುಂದುವರಿದುದು]

ಮಹಾಸಭೆಗೆ ಒಪ್ಪಿಸಬೇಕೆಂದು ನಿರ್ಧಾರವಾಯಿತು. ಈ ತನಕ ಜರಗಿಸಿದ ರೀತಿಯಲ್ಲಿಯೇ ಆಚರಣೆಯನ್ನು ತಾ. ೭-೮-೪೧ರ ತನಕ ಮುಂದರಿಸಬೇಕೆಂದು ಠರಾವಾಯಿತು. ಕಮಿಟಿಯ ನಿಧಿಗೆ ಧನಸಹಾಯವನ್ನು ಕೂಡಿಸಲು ಅಖಿಲ ಕರ್ನಾಟಕದಲ್ಲಿಯೂ, ಮದ್ರಾಸು ಮುಂಬಯಿ ಮೊದಲಾದ ನಗರಗಳಲ್ಲಿಯೂ ಶ್ರೀ. ದಾಮೋದರ ಬಾಳಿಗರು ಕಮಿಟಿಯ ಪರವಾಗಿ ಅಧಿಕೃತರಾಗಿ ಹೊರಡಬೇಕೆಂದು ನಿರ್ಣಯಿಸಲಾಯಿತು. ಕೊನೆಗೆ ಶ್ರೀ. ದಾಮೋದರ ಬಾಳಿಗರು ವಂದನಾರ್ಪಣೆಯನ್ನು ಅರ್ಪಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಮಹಾಜನ ಪ್ಲಡ್ ರಿಲೀಫ್ ಕಮಿಟಿಗೆ ಸಹಾಯಮಾಡಿದವರು

ಕೊಡಗು ಸೆಂಟ್ರಲ್ ಕೋಪರೇಟಿವ್ ರೂ. 25, ಮುಂಬಯಿ ಬಿಲ್ಲವರ ಎಸೋಸಿಯೇಶನ್ ರೂ. 51, ಮದ್ರಾಸಿನ ಸೌತ್ ಇಂಡಿಯ ಬ್ರಹ್ಮಸಮಾಜ ರೂ. 5, ಮಂಗಳೂರು ಬಾರ್ ಎಸೋಸಿಯೇಶನ್ ರೂ. 25-8-0 (ಹಿಂದೆ ಒಮ್ಮೆ ರೂ. 100 ಕೊಟ್ಟಿದ್ದಾರೆ) ಇತರ ಒಟ್ಟು ರೂ. 8-14-0.

ವಿವೇಕಾನಂದ ಸಭೆ

ಪೂರ್ವಾರ್ಧ 8ರಿಂದ 10ರ ವರೆಗೆ ಕೀರ್ತನ ಪ್ರವಚನಗಳು

ತಾ. 3ರಂದು ಶ್ರೀ ಗೋಕರ್ಣ ಮಾಧವ ಭಟ್ಟ ಇವರಿಂದ, ತಾ. 10ರಂದು ಶ್ರೀ ಕಲ್ಲಿ ನರಸಿಂಗ ರಾವ್ ಇವರಿಂದ, ತಾ. 17ರಂದು ಶ್ರೀ ಎಸ್. ರಾಮಚಂದ್ರ ಅಯ್ಯರಿಂದ, ತಾ. 24ರಂದು ಶ್ರೀ ಶಾಬಾಜಿ ಶ್ರೀನಿವಾಸಾಚಾರ್ಯರಿಂದ, ತಾ. 31ರಂದು ಶ್ರೀ ಕಾರ್ಕಳ ವೆಂಕಟರಾಯರಿಂದ ಕೀರ್ತನೆ ಪ್ರವಚನಗಳಿವೆ.

ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು ಎಂದು ಅವರು ಗರ್ಜಿಸಿದರು!

ಲೋಕಮಾನ್ಯ ತಿಲಕರ ಪುಣ್ಯ ಸ್ಮಾರಕ ದಿನ

ರಾಜಕೀಯ ಕ್ರಾಂತಿಯುಗದ ಮೂಲಪುರುಷರು

'ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು' ಹೀಗೆಂದು ಸಿಂಹನಾದವನ್ನು ಮಾಡಿ, ಪಾರತಂತ್ರ್ಯ ದ ಪರುಷಪಾಶದಲ್ಲಿ ಬಂಧಿತರಾಗಿ ಕೆಡೆದಿದ್ದ ಭಾರತೀಯರನ್ನು ೮೫ ವರ್ಷಗಳ ಹಿಂದೆ ಜಡನಿದ್ರೆಯಿಂದ ಹೊಡೆದೆಬ್ಬಿಸಿದ ವೀರ ವಿಭೂತಿಪುರುಷರು ಲೋಕಮಾನ್ಯ ಬಾಲ ಗಂಗಾಧರ ತಿಲಕರು, ೧೯೨೦ನೆಯ ಇಸವಿ ಆಗಸ್ಟ್ ತಿಂಗಳ ಮೊದಲನೆಯ ದಿನ ಅವರ ಪಾರ್ಥಿವ ಶರೀರವು ಲೋಕದ ಕಣ್ಮರೆಯಾಯಿತು! ಆದರೆ ಅವರು ಹೊತ್ತಿಸಿದ ದೇಶಾಭಿಮಾನದ ಶಾಶ್ವತ ಜ್ಯೋತಿಯು ವಿಶಾಲಭಾರತದಲ್ಲಿ ಸುತ್ತುಮುತ್ತಲೆತ್ತಲೂ ಪ್ರಜ್ವಲಿಸುತ್ತಿದೆ! ಅಂದಿನ ಅವರ ಸ್ವಾತಂತ್ರ್ಯದ ಸಮರ ಗರ್ಜನೆಯು ಇಂದೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ ಅವರ ಅಸಾಧಾರಣ ಧೀರಧುರೀಣತೆಯು ಈಗಲೂ ಭಾರತೀಯರನ್ನು ಸ್ವಾತಂತ್ರ್ಯದ ದಿವ್ಯ ಪಥದಲ್ಲಿ ಮುನ್ನುಗ್ಗಿ ಸಾಗುವಂತೆ ಪ್ರೇರೇಪಿಸುತ್ತಿದೆ! ಅವರ ಅಂದಿನ ಅವಿಶ್ರಾಂತ ದೇಶಸೇವೆಯು ಇಂದೂ ಭಾರತ ವೀರರಿಗೆ ಅತ್ಯುತ್ತಮ ಆದರ್ಶವಾಗಿದೆ ಅವರ ಅಮರ ಆತ್ಮವು ಸಮಸ್ತ ಭಾರತದ ವಿಶಾಲ ವಾತಾವರಣದಲ್ಲಿ ಹರಡಿದ್ದು, ಎಂದೆಂದೂ ಸಹನೆಯಿಲ್ಲದೆ ರಣರಣಕವನ್ನು ಹುಟ್ಟಿಸುತ್ತಿದೆ ಜನ್ಮಸಿದ್ಧಹಕ್ಕಾದ ಸ್ವರಾಜ್ಯವು ಸಾಧಿಸುವತನಕ ಅವರ ಆತ್ಮಕ್ಕೆ ವಿಶ್ರಾಂತಿ ದೊರಕುವುದಾದರೂ ಸಾಧ್ಯವುಂಟೆ?

ತಿಲಕರು ಜನ್ಮವೆತ್ತಿದ ಕಾಲದ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ಅವರಿಂದ ಆದ ಮಹಾಕಾರ್ಯಗಳ ಅರ್ಥ ಮಾಡಿಕೊಳ್ಳಬಹುದು. ಅಂದು ಜನರು ಆಂಗ್ಲೇಯ ವಿದ್ಯಾಬುದ್ಧಿಗಳಿಂದ ತೀರಾ ಮೋಹಿತರಾಗಿದ್ದರು ಸರಕಾರದ ಅಧಿಕಾರ ಲಾಲಸೆಯು ಜನರ ಬಾಯಲ್ಲಿ ನೀರಿಳಿಸುತಿತ್ತು ಆಂಗ್ಲ ವಿದ್ಯಾಭ್ಯಾಸ ಪಡೆದರೆ, ಅತನು ಉನ್ನತ ಅಧಿಕಾರಕ್ಕೇರಿದನೆಂದೂ, ಅವನು ತನ್ನ ಸೋದರ ಭಾರತೀಯರನ್ನು ಯಾವುದೇ ರೀತಿಯಿಂದಲೂ ಸುಲಿಯಲು ಸಾಮರ್ಥ್ಯವುಳ್ಳವನೆಂದೂ ಜನರ ಅರಿವಾಗಿತ್ತು ತಿಲಕರು ಇಂಗ್ಲಿಷಿನಲ್ಲಿ ಉಚ್ಚ ವಿದ್ಯಾಭ್ಯಾಸವನ್ನು ಪಡೆದಿದ್ದರು, ನ್ಯಾಯಶಾಸ್ತ್ರದಲ್ಲಿ ಪಾರಂಗತರಾಗಿದ್ದರು ಅಂದಿನ ಕಾಲದಲ್ಲಿ ಒಬ್ಬನು ಅಧಿಕಾರಕ್ಕೇರಬೇಕಾದರೆ ಯಾವ ಯಾವ ಗುಣ ಭೂಷಣಗಳು ಅವಶ್ಯವಿದ್ದುವೋ, ಅವೆಲ್ಲವೂ ಅವರಲ್ಲಿ ಸಂಪೂರ್ಣವಾಗಿತ್ತು ಆದರೆ ಅವರು ತಮ್ಮ ವಿದ್ಯಾ ಯೋಗ್ಯತೆಯನ್ನು, ತಮ್ಮ ಜ್ಞಾನವನ್ನು ಸ್ವಾರ್ಥದ ಸಲುವಾಗಿ ಉಪಯೋಗಿಸಿಕೊಳ್ಳದೆ, ಭಾರತದ ಸೇವೆಗಾಗಿ ಧಾರೆಯೆರೆದರು! ಭರತಮಾತೆಯ ಪಾರತಂತ್ರ್ಯ ಬಂಧನವು, ದಾರಿದ್ರ್ಯಸಂವೇದನೆಯು ಅವರನ್ನು ರಾಜಕೀಯ ರಂಗಕ್ಕೆಳೆದು ಅವರಿಂದ ಮಹಾಸೇವೆಯು ಸಲ್ಲುವಂತೆ ಮಾಡಿತು! ಇಂದು ಭಾರತದ ರಾಜಕೀಯ ಆಂದೋಲನವು ಎಂದರೆ ಕಾಂಗ್ರೆಸು ಚಳವಳವು ಇಷ್ಟು ವಿರಾಡ್ರೂಪದಿಂದ ಮುಂದುವರಿಯುಲ್ಲಿ, ಗಾಂಧಿಜಿಯವರ ಮಹಾಧುರೀಣತೆಯು ಪ್ರಧಾನ ಕಾರಣವಾಗಿದ್ದರೂ, ಭಾರತದಲ್ಲಿ ಮೊತ್ತ ಮೊದಲು ರಾಜಕೀಯ ಕ್ರಾಂತಿಯ ಬೀಜವನ್ನು ಬಿತ್ತಿದ ಯುಗ ಪುರುಷರು ಲೋಕಮಾನ್ಯ ತಿಲಕರು

ಮಹಾರಾಷ್ಟ್ರ ಪ್ರಾಂತದ ರತ್ನಗಿರಿಯೆಂಬಲ್ಲಿ ೧೮೫೬ನೆಯ ಇಸವಿ ಜುಲಾಯಿ ತಿಂಗಳ ೨೩ರಂದು ಕುಲೀನ ಮರಾಠಾ ಬ್ರಾಹ್ಮಣ ದಂಪತಿಗಳ ಪುಣ್ಯಗರ್ಭದಲ್ಲಿ ಬಾಲಗಂಗಾಧರರು ಜನ್ಮವೆತ್ತಿದರು ಪೂನದಲ್ಲಿ ಅವರ ಬಾಲ್ಯ ವಿದ್ಯಾಭ್ಯಾಸವಾಯಿತು ಅವರ ಅಂದಿನ ವಿದ್ಯಾಭ್ಯಾಸವು, ಪಾಶ್ಚಾತ್ಯ ಪದ್ಧತಿಯದ್ದಿರದೆ, ಶುದ್ಧ ಭಾರತೀಯ ರೀತಿನೀತಿಯದಿದ್ದುದರಿಂದ, ಮುಂದಿನ ಅವರ ಜೀವನದಲ್ಲಿ, ಅಂದಿನ ಆ ಸಂಸ್ಕೃತಿಯು ಹೆಚ್ಚು ಪ್ರಭಾವವನ್ನು ಬೀರಿತು ಸಂಸ್ಕೃತ ಭಾಷೆಯಲ್ಲಿ ಅವರು ಅಪ್ರತಿಮ ವಿದ್ವಾಂಸರಾಗಿದ್ದರು. ಆದುದರಿಂದಲೇ ಮುಂದೆ ಅವರು ಕಾರಾಗೃಹವಾಸವನ್ನು ಅನುಭವಿಸಬೇಕಾಗಿ ಬಂದಾಗ, ಅಲ್ಲಿ, ಪ್ರಪಂಚವೇ ಬೆರಗಾಗುವಂತೆ, ಗೀತೆಯ ಕುರಿತು ವಿಸ್ತಾರವಾದ, ಅರ್ಥಗರ್ಭಿತವಾದ, ಅಧಿಕಾರಯುಕ್ತವಾದ 'ಗೀತಾ ರಹಸ್ಯ'ವೆಂಬ ಉದ್ಗ್ರಂಥವೊಂದನ್ನು ಬರೆದು ಭಾರತೀಯ ಜ್ಞಾನಭಂಡಾರದ ಅಮೂಲ್ಯತೆಯನ್ನು ಜಗತ್ತಿಗೆ ಸಾರಿದರು, ವೈದಿಕ ಸಾಹಿತ್ಯದ ಕುರಿತು ಸಂಶೋಧನಾತ್ಮಕ ಗ್ರಂಥವೊಂದನ್ನೂ ಅವರು ಬರೆದಿರುವರು ಗಣಿತ ಜ್ಯೋತಿಷ ಶಾಸ್ತ್ರಗಳಲ್ಲಿ ಅವರಿಗೆ ಅದ್ಭುತವಾದ ಪಾಂಡಿತ್ಯವಿತ್ತು ವಿಷಯಗಳನ್ನು ವಿಚಕ್ಷಣತೆಯಿಂದಲೂ, ಸಂಪೂರ್ಣತೆಯಿಂದಲೂ, ತೀಕ್ಷ್ಣತೆಯಿಂದಲೂ ವಿಮರ್ಶಿಸಿ ಬರೆವ ಪ್ರಭಾವಪೂರ್ಣ ಲೇಖನಶಕ್ತಿ ಅವರ ಕೈವಶವಾಗಿತ್ತು ಇಂಗ್ಲಿಷಿನಲ್ಲಿ 'ಮರಾಠಾ', ಮರಾಠಿಯಲ್ಲಿ 'ಕೇಸರಿ' ಎಂಬೀ ವಾರಪತ್ರಿಕೆಗಳ ಸ್ಥಾಪಕ ಮತ್ತು ಸಂಪಾದಕರಾಗಿ ಅವರು ಪತ್ರಿಕಾ ವ್ಯವಸಾಯದಲ್ಲಿಯೂ ಅಪ್ರತಿಮರಾಗಿ ಮೆರೆದಿದ್ದರು.

ಭಾರತದ ರಾಜಕೀಯ ಆಂದೋಲನವು ತಿಲಕರ ದಿನಗಳಿಗೆ ಮೊದಲೇ ತಲೆಯೆತ್ತಿತ್ತು! ಬಿಗಿದ ಪಾರತಂತ್ರ್ಯದ ಸಂಕಲೆಯ ನೋವು ಹಲವರಿಗೆ ತಟ್ಟಿತ್ತು. ಸ್ವರಾಜ್ಯದ ದಿವ್ಯ ಸ್ವಪ್ನವು ಹಲವರನ್ನು ಜಾಗ್ರತಿಗೊಳಿಸಿತ್ತು! ಆದರೆ ಸ್ವರಾಜ್ಯದ ಸಮಸ್ಯಾತ್ಮಕ ಪ್ರಶ್ನೆಯನ್ನು ಎದೆಗೊಟ್ಟು ಎದುರಿಸುವ ಶಕ್ತಿ ತಿಲಕರಂತೆ ಅಂದು ಬೇರೆ ಯಾರಲ್ಲಿಯೂ ಇರಲಿಲ್ಲವೆನಬಹುದು. ಕೇವಲ ಮನವಿಗಳ, ಬಿನ್ನಹಗಳ ರೂಪದಿಂದ ಸೌಕರ್ಯವನ್ನು ನೀಡಿರೆಂದು ಹಲವರು ಭಾರತೀಯ ಮುಂದಾಳುಗಳು ಬ್ರಿಟಿಷ್ ಸರಕಾರದೊಡನೆ ಮೊರೆಯಿಡುತ್ತಿದ್ದರು. ಬಾಲ ಗಂಗಾಧರ ತಿಲಕರು ಅಂದಿನ ರಾಜಕೀಯ ಆಂದೋಲನಕ್ಕೆ ನೂತನ ಚೇತನವನ್ನು ಕೊಟ್ಟರು ಬ್ರಿಟಿಷ್ ಸಾಮ್ರಾಜ್ಯ ಶಾಹೀ ನೀತಿಯನ್ನು ಕಟುತರವಾಗಿ ಖಂಡಿಸಿದರು. ಬ್ರಿಟಿಷ್ ರಾಜ್ಯಭರಣ ಕ್ರಮವನ್ನು ತೀವ್ರತರವಾಗಿ ಪ್ರತ್ಯಕ್ಷವಾಗಿ ಎದುರಿಸಿ ನಿಂತು, ಸಾರ್ವಜನಿಕರಲ್ಲಿ ನಿರ್ಭಯದ ಸ್ವಾತಂತ್ರ್ಯ ಪ್ರೇಮದ ವಾತಾವರಣವನ್ನು ಕಲ್ಪಿಸಿದರು. ಇಂತಹ ಗಂಡೆದೆಯ ಗಡುಸುತನದ ಪರಿಣಾಮವಾಗಿ ಲೋಕಮಾನ್ಯರು ಬಂಧನದ ಭವಣೆಗಳನ್ನು ಅಂಜದೆ ಅಳುಕದೆ ಅನುಭವಿಸಿದರು

ಜನತಾ ನಾಯಕರಲ್ಲಿರಬೇಕಾದ ಗುಣಗಣಗಳು ತಿಲಕರಲ್ಲಿ ತುಂಬಿದ್ದವು ಸಾರ್ವಜನಿಕ ಭಾಷಣ ಕೊಡುವುದರಲ್ಲಿ ಅವರಿಗೆ ಅಸ್ಖಲಿತ ವಾಕ್ ಶಕ್ತಿಯ ಮಾಯಾಜಾಲವಿತ್ತು ಒಮ್ಮೆ ಭಾಷಣ ಕೊಟ್ಟುದರ ಫಲವಾಗಿಯೇ, ೧೯೦೮ರಂದು ಅವರು ೭೮ ತಿಂಗಳ ದೀರ್ಘ ಬಂಧನದಲ್ಲಿ ಬೀಳಬೇಕಾಗಿ ಬಂದಿತ್ತು ಹೋಮ್ ರೂಲ್ ಚಳವಳದ ಕಾಲದಲ್ಲಿ ಅವರು ಮುಂದಾಳುಗಳಾಗಿನಿಂತು ಕೆಲಸ ಮಾಡಿದರು ಮುಂದೆ ಅಖಿಲ ಭಾರತ ಕಾಂಗ್ರೆಸಿನಲ್ಲಿಯೂ ಅವರು ತಮ್ಮ ಮಹಾ ಪ್ರಭಾವವನ್ನು ಸ್ಥಾಪಿಸಿದರು

ಲೋಕಮಾನ್ಯ ತಿಲಕ ಮತ್ತು ಗೋಪಾಲಕೃಷ್ಣ ಗೋಖಲೆ ಇವರಿಬ್ಬರೂ ಆಗ ಅಗ್ರಪಂಕ್ತಿಯ ಮುಂದಾಳುಗಳಾಗಿದ್ದರು. ಅವರಲ್ಲಿ ಆಗಾಗ ಅಭಿಪ್ರಾಯಭೇದಗಳು ಹುಟ್ಟುತ್ತಿದ್ದವು ಅವರಿಬ್ಬರ ಉದ್ದೇಶಗಳು ಒಂದೇ ಇದ್ದುವು ಆದುದರಿಂದಲೇ ಕೊನೆತನಕ ಅವರಲ್ಲಿ ಅನ್ಯೋನ್ಯ ವೈಯುಕ್ತಿಕ ಮೈತ್ರಿ ಬೆಳೆದೇ ಬಂದಿತ್ತು ಇವರಲ್ಲಿ ಯಾರು ಹೆಚ್ಚು, ಯಾರು ಕಡಿಮೆಯೆನ್ನುವುದು ನಮಗೆ ಸಾಧ್ಯವಿಲ್ಲ ಇಬ್ಬರೂ ಭಾರತಮಾತೆಯ ಉನ್ನತಿಗಾಗಿಯೇ ಅಹರ್ನಿಶಿ ದುಡಿದವರು. ತಿಲಕರು ಸರಕಾರದೊಡನೆ ಪ್ರತ್ಯಕ್ಷ ನಿಂತು ಹೋರಾಡಿ, ದೇಶಕ್ಕೆ ಹಿತಸಾಧಿಸುವ ಯೋಧನಾಗಿದ್ದರೆ, ಗೋಖಲೆಯವರು ಸರಕಾರದ ಸ್ನೇಹಿತರಾಗಿ ನಡೆದು ಭಾರತದ ಹಿತವನ್ನು ಕೈಗೂಡಿಸಿದವರ ಒಬ್ಬರು ದೇಶಾಭಿಮಾನದ ಸಲುವಾಗಿ ಸರಕಾರದ ಕೋಪಕ್ಕೆ ಪಾತ್ರರಾಗಿದ್ದರೆ, ಇನ್ನೊಬ್ಬರು ದೇಶಾಭಿಮಾನಿಗಳಾಗಿ ಸರಕಾರದ ಮೈತ್ರಿಯನ್ನೂ ಪಡೆದರು ಅಂತೂ ಅವರ ಧೋರಣೆಗಳು ಉಗ್ರ—ಮಂದವಾಗಿ ಹೋದ ಹಾದಿಗಳು ಮಾತ್ರ ಭಿನ್ನವಾಗಿರುತ್ತವೆ; ನೆನೆದ ಗುರಿಯೂ ಸಾಧಿಸಿದ ಉದ್ದೇಶವೂ ಒಂದೇ ಆಗಿತ್ತೆಂಬುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಶಾಸ್ತ್ರೀಯ ಸಮ್ಯಕ್ ಜ್ಞಾನ, ಅಸದೃಶವಾದ ಮೇಧಾಶಕ್ತಿ, ರಾಜಕೀಯ ನಿರ್ಭಯ ಧುರೀಣತೆ, ಅಸ್ಖಲಿತವಾದ ವಾಕ್ಸರಣಿ, ಅಪ್ರತಿಹವಾದ ಲೇಖನ ಸಾಮರ್ಥ್ಯ, ಅವಿಶ್ರಾಂತವಾದ ರಾಷ್ಟ್ರಸೇವೆ ಇವುಗಳ ಫಲವಾಗಿ 'ಲೋಕಮಾನ್ಯ' ಎಂಬ ಗೌರವದ ಬಿರುದು ಅವರಿಗೆ ಅಂದೂ, ಇಂದೂ, ಎಂದೂ ಒಪ್ಪುವಂತೆ ಸಂದಿತು ಸಂಕಷ್ಟ ಸಾವಿರಗಳು ಬಂದರೂ ಅಂಜದೆ ಅಳುಕದೆ ಅವುಗಳೆಲ್ಲವನ್ನೂ ಎದುರಿಸಿ ದೇಶದಸೇವೆಗಾಗಿ ಸೊಂಟಕಟ್ಟಿ ಹೋರಾಡಿದ ವೀರಾಗ್ರಣಿ ಅವರಾಗಿದ್ದರು ಲೋಕದಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಮಾನ್ಯತೆಯನ್ನು ಪಡೆಯುವುದು ಅಂತಹ ಕೆಚ್ಚೆದೆಯ ಕಲಿತನವಿಲ್ಲದವರಿಗೆ ಸಾಧ್ಯವುಂಟೆ?

ಭಾರತವು ಇಂದು ಈ ತೆರನ ಜಾಗ್ರತಿಯ ಸ್ಥಿತಿಗೆ ಮುಟ್ಟಿದರೆ ಅದಕ್ಕಾಗಿ ಶಕ್ತಿ ಮೀರಿ ಸಹಾಯವಾಡಿದ ಮೂಲಪುರುಷರಲ್ಲಿ ಲೋಕಮಾನ್ಯ ತಿಲಕರು ಅಗ್ರಗಣ್ಯರು ರಾಷ್ಟ್ರದ ಉದ್ಧಾರಕ್ಕಾಗಿಯೇ, ತಮ್ಮ ಉಜ್ವಲ ಜೀವನವನ್ನು ಅವರು ಧಾರೆಯೆರೆದರು ಅವರನ್ನು ಯಾವ ಹೋದ್ದೇಶವು ಸ್ವರಾಜ್ಯ ಸ್ವಾತಂತ್ರ್ಯ ಪ್ರೇಮವು ಅಂದು ಆ ರೀತಿ ಅವಿಶ್ರಾಂತವಾಗಿ ಅಹರ್ನಿಶಿ ದುಡಿಸುವಂತೆ ಮಾಡಿತೊ, ಆ ಧ್ಯೇಯದ, ಭಾರತದ ಸ್ವರಾಜ್ಯ ಸಾಧನೆಯ ಪುಣ್ಯ ಕಾರ್ಯದಲ್ಲಿ ನಾವು ನೆರವಾದರೆ ಮಾತ್ರ ಅವರ ಪುಣ್ಯದಿನದ ಪವಿತ್ರ ಸ್ಮರಣೆಯನ್ನು ನಿಜವಾಗಿ ಮಾಡಿದಂತಾಗುವುದು.

—K. K Rai.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C ನಂಬ್ರ 213/41

ದಿ ಪ್ರಾಮನಿ ಬೆಂಕ್ ಲಿಮಿಟೆಡ್ ಮಂಗಳೂರು . . . . ವಾದಿ

ಮತ್ತು

1 ನೆ ಗೋವಿಂದ ಕಮ್ತಿ, ಕೇಶವ ಕಮ್ತಿರ ಮಗ 2 ಪಿ. ರಾಮಚಂದ್ರ ಶ್ಯಾನಭಾಗ, ಪಿ. ವಿಟ್ಠಪ್ಪ ಶ್ಯಾನಭಾಗರ ಮಗ, ಮಂಗಳೂರು ಶಹರ ಕೋರ್ಟ ಹೊಸ ರಸ್ತೆಯಲ್ಲಿರುವವರು . . . . ಪ್ರತಿವಾದಿರು.

ಮೇಲ್ಕಂಡ ಪ್ರತಿವಾದಿರಿಗೆ—

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿರಿಗೆ ಸಬ್ಸ್ಟಿಟ್ಯೂಟೆಡ್ ಸರ್ವಿಸ್ ಮುಕುಂತರ ತಾರೀಖು 11-8-41ಕ್ಕೆ ತನ್ಖಿ ಬಗ್ಗೆ ಇಟ್ಟಿರುತ್ತದೆ ಸದ್ರಿ ಪ್ರತಿವಾದಿರಿಗೆ ಏನಾದರೂ ಉಜ್ರಾಹರಣೆ ಕೊಡುವರೆ ಇದ್ದರೆ ಆ ದಿವಸ ಹಗಲು 11 ಗಂಟೆಗೆ ಸದ್ರಿಯವರು ಖುದ್ದಾಗಿ ಯಾ ವಕೀಲದ್ವಾರವಾಗಲೀ ಹಾಜ್ರಾಗಿ ಹೇಳಿಕೊಳ್ಳದಿದ್ದರೆ ವ್ಯಾಜ್ಯ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ತಿಳಿಧಿರುವುದು

ಮಂಗಳೂರು 24-7-41 } G Narayana Rao, Vakil for Plaintiff

ಮೋಟಿಗಳು...!

ಜರ್ಮನಿಯು ಪಶ್ಚಿಮದಲ್ಲಿ ಆಕ್ರಮಣ ಪರಾಕ್ರಮ ಮಾಡುವ ಸಮಯ, ಜಪಾನು ಪೂರ್ವದಲ್ಲಿ ದಂಡೆತ್ತಿಹೊರಟಿದೆ.

❀ ❀ ❀

ಜರ್ಮನಿಯ ಪ್ರಚಂಡ ವಿಮಾನಧಾಳಿಗಳ ಸುದ್ದಿ ಕೇಳಿದ ಬಳಿಕ, ಜಪಾನು ಚೀನಾದ ಮೇಲೆ ಮಾಡುವ ಉಪಟಳವು ಯಾರಿಗೂ ಅಷ್ಟೊಂದು ವಿಶೇಷವೆನಿಸಲ್ಲ.

❀ ❀ ❀

ಪ್ರಾರಂಭದಲ್ಲಿಯೇ ಜಪಾನು ರಶ್ಯಗಳೊಳಗೆ ದ್ವೇಷಭಾವನೆಯಿತ್ತು. ಜರ್ಮನಿಯು ಹಿಂದೆ ಜಪಾನಿನ ಬೆಂಬಲ ನಿಂತು, ಇಡೀ ಏಶ್ಯವನ್ನು ಜಪಾನಿಗೆ ಬಿಟ್ಟುಕೊಡುವುದಾಗಿ ಭರವಸೆಯಿತ್ತಿತು.

❀ ❀ ❀

ಕೆಲವೇ ದಿನಗಳ ಬಳಿಕ, ಜರ್ಮನಿಯು ರಶ್ಯದೊಡನೆ ಒಪ್ಪಂದದಿಂದಿರುವುದಾಗಿ ಸುದ್ದಿ ಬಂತು. ಜಪಾನೂ ಹಿಟ್ಲರನೊಡನೆ ಸಂಧಿಮಾಡಿಕೊಳ್ಳಬೇಕೆಂಬ ಸೂಚನೆಯು ಅದರಲ್ಲಿತ್ತು.

❀ ❀ ❀

ಆಗ ಪ್ರಧಾನ ಮಂತ್ರಿಗಳಾಗಿದ್ದ ಮತ್ಸೂಕರು ಇದಕ್ಕೆ ಒಪ್ಪಿದರು. ಸ್ಟಾಲಿನ್ ಹಿಟ್ಲರಿಬ್ಬರನ್ನು ತಮ್ಮ ಆಪ್ತಮಿತ್ರರೆಂದು ಸಾರಿದರು

❀ ❀ ❀

ಮತ್ಸೂಕರು, ಜಪಾನಿಗೆ ಹಿಂದಿರುಗುವುದರೊಡನೆ, ಹಿಟ್ಲರನು ರಶ್ಯದ ಮೇಲೆ ಆಕ್ರಮಣ ಮಾಡಿದನೆಂಬ ಸುದ್ದಿಯೂ ಬಂದಿತು.

❀ ❀ ❀

ಜಪಾನು, ಈ ಘಟನೆಗಳೆಲ್ಲವನ್ನು ನೋಡಿ, ಯಾರನ್ನೂ ಇನ್ನು ಮುಂದೆ ನಂಬಿಕೊಂಡಿರಲು ಸಾಧ್ಯವಿಲ್ಲವೆಂದು ನಿಶ್ಚಯ ಮಾಡಿ ತನ್ನ ಹಾದಿ ಹಿಡಿದಿರಬೇಕು

❀ ❀ ❀

ಮತ್ಸೂಕರ ಮಂತ್ರಿಮಂಡಳವು ಬದಲಾಯಿತು ಜಪಾನು ಪೂರ್ವದ ದಂಡಯಾತ್ರೆಗೂ ಹೊರಟಿತು.

❀ ❀ ❀

ಜಪಾನಿನ ನೀತಿ ಅಮೇರಿಕ ಬ್ರಿಟನುಗಳನ್ನು ರೇಗಿಸಿದೆ. ಶಾಂತಸಾಗರದಲ್ಲಿ ಕಾಲ್ನೀಡಲು ಮುಂದೆ ಬರುವ ಜಪಾನಿನ ವಿಷಯ ಆಲೋಚಿಸದಿರಲು ಈಗ ಅವುಗಳಿಗೆ ಸಾಧ್ಯವೇ ಇಲ್ಲವಾಗಿದೆ.

❀ ❀ ❀

ಪ್ರಪಂಚದ ರಾಜನೀತಿ ದಿನದಿಂದ ದಿನಕ್ಕೆ ಸಮಸ್ಯೆಗಳೊಳಗೇ ಸುಳಿಯುತ್ತಿದೆ.

ಮುಸ್ಲಿಂ ಲೀಗಿನ ಆಧಾರ ಕಂಬಗಳೆರಡು ಈಗ ಕಳಚಿ ಬಿದ್ದಂತಾಗಿದೆ!

❀ ❀ ❀

ಪಂಜಾಬು ಮತ್ತು ಬಂಗಾಳ ಪ್ರಾಂತ್ಯಗಳ ಪ್ರಧಾನ ಮಂತ್ರಿಗಳಿಬ್ಬರು, ಸಿಕಂದರ್ ಮತ್ತು ಹಕ್ಕರು, ಮುಸ್ಲಿಂ ಲೀಗಿನ ಮುಖಂಡರಾದ ಜಿನ್ನರ ಸಮ್ಮತಿ ಕೇಳದೆ, ವೈಸರಾಯರ "ನೇಶನಲ್ ಡಿಫೆನ್ಸ್ ಕೌನ್ಸಿಲಿ"ನ ಸ್ಥಾನವನ್ನು ಅಂಗೀಕರಿಸಿದ್ದಾರೆ!

❀ ❀ ❀

'ಮುಸ್ಲಿಂ ಲೀಗಿನ ಇಬ್ಬರು ಪ್ರಧಾನ ಮಂತ್ರಿಗಳನ್ನು ಹಾಗೂ ಇನ್ನು ಕೆಲವು ಸದಸ್ಯರನ್ನು, ತಮ್ಮ ಕೆಲಸಕ್ಕೆ ತೆಗೆದುಕೊಂಡು ಲೀಗಿನಲ್ಲಿ ಭಿನ್ನತೆ ತೋರಿಸಿದ್ದಸಲುವಾಗಿ ನಾನು ವೈಸರಾಯರನ್ನು ಅಭಿನಂದಿಸುತ್ತೇನೆ' ಎಂದು ಜಿನ್ನಾಸಾಹೇಬರು ನಿರಾಶರಾಗಿಯೂ, ವ್ಯಂಗವಾಗಿಯೂ ಹೇಳಿದರು!

❀ ❀ ❀

ಸಿಕಂದರ ಹಕ್ಕರು ಜಿನ್ನರೊಡನೆ ಸಮಾನಾಭಿಪ್ರಾಯವುಳ್ಳವರಾಗಿಲ್ಲವೆಂಬುದಂತೂ ಇದರಿಂದ ಸ್ಪಷ್ಟವಾಯಿತು. ಸುಧಾರಿಸಲು ಸಾಧ್ಯವಾಗದ ರೀತಿಯ ಭಿನ್ನಾಭಿಪ್ರಾಯವಿದ್ದುದರಿಂದಲೇ, ಜಿನ್ನರ ಸಮ್ಮತಿ ಕೇಳದೆ ಅವರು ವೈಸರಾಯರ ಕೆಲಸಕ್ಕೆ ಸೇರಿರಬಹುದಾಗಿಯೂ ತಿಳಿಯಬೇಕಾಗಿದೆ

❀ ❀ ❀

ಬ್ರಿಟನು, ಆಗಸ್ಟ್ ಘೋಷಣೆಗಿಂತ ಹೆಚ್ಚಿನದೇನನ್ನೂ ಕೊಡಲು ಇಷ್ಟಪಡಲಿಲ್ಲ. 'ರಾಷ್ಟ್ರೀಯ ಸರಕಾರ'ವನ್ನು ಸ್ಥಾಪಿಸಬೇಕೆಂದು ದೇಶಕ್ಕೆ ದೇಶವೇ ಬೊಬ್ಬಿಟ್ಟರೂ, ಪ್ರಧಾನ ಪಕ್ಷವಾದ ಕಾಂಗ್ರೆಸು ಮತ್ತು ಅಷ್ಟೇ ಬಲವಂತವಾದ ಪಕ್ಷವೆಂದು (ಬ್ರಿಟನು ಹೇಳುವ) ಮುಸ್ಲಿಂ ಲೀಗು, ಇವುಗಳು ಅನ್ಯೋನ್ಯ ಒಪ್ಪಂದಮಾಡಿಕೊಳ್ಳದೆ, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲಾಗುವುದಿಲ್ಲವೆಂದು ಹಿಂದೆಯೇ ಸಾರಲಾಗಿತ್ತು.

❀ ❀ ❀

ಬ್ರಿಟನು ಪ್ರಧಾನವಾದೊಂದು ಪಕ್ಷವಾಗಿ ಪರಿಗಣಿಸುವ ಮುಸ್ಲಿಂ ಲೀಗಿನ ಕಂಬಗಳೆರಡು ಕಳಚಿ ಹೋದುವೆಂದು ಜಿನ್ನರು ಹೀಗೆ ಪ್ರಲಾಪಿಸುವ ಮೇಲಾದರೂ ಲೀಗಿನ ಸ್ಥಾನಭದ್ರತೆಗಳ ವಿಷಯ ಬ್ರಿಟನಿಗೆ ಸರಿಯಾಗಿ ಅರ್ಥವಾಡಲಾಗುವುದಿಲ್ಲವೆ?

ಭಾರತದಲ್ಲಿ, ವಿದ್ಯಾಭ್ಯಾಸ ಹೊಂದಿದ ಹುಡುಗರ ಸಂಖ್ಯೆ ಕಡಿಮೆಯಿದೆ, ಹುಡುಗಿಯರಂತೂ ಮತ್ತೂ ಕಡಿಮೆಯಾಗಿದ್ದಾರೆ ಮದ್ರಾಸಿನ ವಿದ್ಯಾ ಇಲಾಖೆಯ ಡೈರೆಕ್ಟರರಾದ ಮಿ। ಸ್ಟೇಥಮ್ರಂಥವರು ಇರುವವರೆಗೆ ಹುಡುಗ ಹುಡುಗಿಯರ ವಿದ್ಯಾಭ್ಯಾಸದ ವಿಷಯ ಯಾರೂ ವಿಶೇಷ ಚಿಂತಿಸಬೇಕಾದುದೇ ಇಲ್ಲ!

❀ ❀ ❀

ಮಿ। ಸ್ಟೇಥಮರು ಈ ವಿಷಯದಲ್ಲಿ ಹೊಸ ಪ್ರಯೋಗವೊಂದನ್ನು ಇತ್ತೀಚೆಗೆ ಸೂಚಿಸಿರುತ್ತಾರೆ

❀ ❀ ❀

ಗುಂಟೂರಿನಲ್ಲಿ ಕೂಡಿದ ಉಪಾಧ್ಯಾಯ ಪರಿಷತ್ತಿನ ಉದ್ಘಾಟನೆ ಮಾಡುತ್ತಾ ಅವರು ಹೇಳಿದ ಮಾತು ಅವರ ವಿದ್ಯಾವಿಚಕ್ಷಣತೆಯನ್ನು ಎತ್ತಿ ತೋರಿಸುತ್ತದೆ.

❀ ❀ ❀

'ಹುಡುಗಿಯರನ್ನು ವಿದ್ಯಾವತಿಯರನ್ನಾಗಿ ಮಾಡುವ ವಿಷಯದಲ್ಲಿ ಬರತಕ್ಕ ಸಮಸ್ಯೆಗಳೆಲ್ಲವನ್ನೂ ಪರ್ಯಾಲೋಚಿಸಿ, ಅದು ಎಷ್ಟರ ಮಟ್ಟಿಗೆ ವಿಷಮವಾಗಿದ್ದರೂ, ಅವರು ಶಾಲೆಗೆ ಹೋಗಿಯೇ ತೀರುವಂತೆ, ನಾವು ಸರ್ವ ಪ್ರಯತ್ನಗಳನ್ನೂ ಮಾಡಲು ನಿಶ್ಚಯ ಮಾಡಿದ್ದೇವೆ ಹುಡುಗಿಯರು ಶಾಲೆಗೆ ಹೋಗದಿದ್ದರೆ, ಹುಡುಗರಿಗೆ ಸಿಗತಕ್ಕ ಸೌಕರ್ಯವನ್ನೂ ಹಿಂತೆಗೆಯಬೇಕಾಗಿದೆ. ಮನೆಯಲ್ಲಿ, ಕೆಲವು ಮಕ್ಕಳು ಮನೆಕೆಲಸಕ್ಕೊ, ಹೊಲ ಕೆಲಸಕ್ಕೊ ನಿಂತುಕೊಳ್ಳುದು, ಹುಡುಗಿಯರನ್ನು ಶಾಲೆಗೆ ಕಳುಹಿಸತಕ್ಕದ್ದು' ಎಂದು ಅವರು ಆ ಸಭೆಯಲ್ಲಿ ಹೇಳಿ

❀ ❀ ❀

ಹುಡುಗಿಯರಿಗೆ ವಿದ್ಯಾಭ್ಯಾಸ ಬೇಕೆನ್ನುವ ವಿಷಯದಲ್ಲಿ ಮಿ। ಸ್ಟೇರು ಪ್ರಕಟಪಡಿಸಿರುವ ವಿಶೇಷ ಯನ್ನು ಯಾರಾದರೂ ಕೊಂಡಾಬೇಕು! ಆದರೆ, ಹುಡುಗರನ್ನು ಮಲ್ಲಿ ನಿಲ್ಲಿಸಿ, ಹುಡುಗಿಯರನ್ನು ಶಾಲೆಗೆ ಕಳುಹಿಸಬೇಕೆನ್ನುವಷ್ಟು ವಿಮಾಡಿದ್ದು ಸ್ವಲ್ಪ ಅಧಿಕ ಆಸಕ್ತಿಯನಿವಾರ್ಹವಿಲ್ಲ.

ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇ ಕೋರ್ಟಿನಲ್ಲಿ

ಕ್ರಮ ನಂಬ್ರ 34/34

ಆರ್ ಇ ಯೆ ನಂಬ್ರ 1503/40

ಕೃಷ್ಣ ಭಟ್ಟ . . ಅರ್ಜಿ

ಮತ್ತು

ಗೋಪಿ ಕೂಡಾ ರೆಸ್ಪೊಂಡೆಂ

ಸದ್ರಿ ಪೈಕಿ ವಿವರಣೆಯ

1ನೇ ರೆಸ್ಪೊಂಡೆಂಟಳು ಗೋಪಿ ಹೆಂ ಚೋಯಿಚ್ಚಿ ಮಗಳು (ಪ್ಯಾನರಡು ಇ ಮಕ್ಕಳು

2ನೇ ನಾರಾಯಣ
3ನೇ ಗೋಪಾಲ
4ನೇ ಚೋಯಿಚ್ಚಿ
5ನೇ ಗೋವಿಂದ
6ನೇ ಅಮ್ಮಾರಿ . . . . } ಇವ ಗಾರ್ಡಿ ಯಾಗಿ ಕು

9ನೇ ರ್ಸ್ಪೆ ಕೃಷ್ಣ ಮಣಿಯಾಣಿ
10ನೇ ರ್ಸ್ಪೆ ಕುಂಞರಾಮ
14ನೇ ರ್ಸ್ಪೆ ಕುಂಞಕಣ } ದುಗ್ಗವ ಮಕ್ಕ

ಇವರಿಗೆ—

ಕಾಸ್ರಗೋಡು ತಾಲ್ಲೂಕು ನಟ್ಟಣಿಗೆ ಗ್ರಾಮ ರುವವರು—

ಮೇಲಣ O. S। 34/34ನೇ ವ್ಯಾಜ್ಯ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯನ್ನು ಪ ಲ್ ಮಾಡಬೇಕಾಗಿ ಅರ್ಜಿದಾರನು ದಾ ಮಾಡಿದ ಮೇಲಣ ಆರ್. ಇ. ಯೆ. ನಂ 1503/40ನೇ ಅರ್ಜಿಯ ತಾ. 6-8-'41 ತನಿಖೆಗೆ ಇಟ್ಟಿದೆ. ಆ ಬಗ್ಗೆ ನಿಮ್ಮ ಆಕ್ಷೇಪಣೆಗ ನಾದ್ರು ಇದ್ದರೆ ಅದನ್ನು ಆ ದಿವಸಕ್ಕೆ ಮೇಲ್ಕ ಕೋರ್ಟಿನಲ್ಲಿ ನೀವು ಖುದ್ದು ಯಾ ವಕೀ ಮುಖಾಂತ್ರ ಹಾಜರುಪಡಿಸತಕ್ಕದ್ದು. ಇಲ್ಲ ದರೆ ಸದ್ರಿ ಅರ್ಜಿಯು ನಿಮ್ಮ ಗೈರು ಹಾ ಯಲ್ಲಿ ಯೆಕ್ಸ್‌ಪಾರ್ಟಿಯಾಗಿ ತೀರ್ಮಾನಿಸ ಡುವುದು.

(By order of Court)

ಮಂಗಳೂರು
14-7-'41 | **K VYASA RAO,**
ಅರ್ಜಿದಾರನ ಪರ ವಕೀಲ

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906.

THE CANARA BANKING CORPORATION, LIMITED

(Incorporated in Br. India)

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್, ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ 9% ರೂ. 26ರಿಂದ 100ರ ವರೆಗೆ ಸೇ. 8%

ರೂ. 101ರಿಂದ 500ರ ವರೆಗೆ ಸೇ 7% ರೂ 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) ***B. Narayana Shetty,***

Agent at Kankanady

ಈ ವಾರದಲ್ಲಿ

ನಿಮ್ಮ ಗ್ರಹಗತಿ ಹೇಗಿದೆ?

1-8-41ರಿಂದ 7-8-41ರ ವರೆಗೆ

★

ಮೇಷ

ಈ ವಾರ ನೀವು ಉಲ್ಲಾಸದಿಂದಿದ್ದೀರಿ ಹಣದ ತಾಪತ್ರಯ ಕಡಿಮೆಯಾಗಿದೆಯೆಂದಲ್ಲ. ಶರೀರದ ಆರೋಗ್ಯವೂ ಸಾಮಾನ್ಯ ಚೆನ್ನಾಗಿರುವುದು ಮಹತ್ವದ ಕಾರ್ಯವೊಂದಕ್ಕೆ ಮನಸ್ಸು ಮಾಡಿದ್ದೀರಿ ದೇವರ ದಯೆಯಿಂದ ನಿಮಗೆ ಜಯ ದೊರಕುವುದು. ತಾ. ೩, ೫, ೭ ಈ ದಿನಗಳಲ್ಲಿ ನಿಮಗೆ ಜಯವಿದೆ ವಾಹನಾದಿಗಳ ಸಂಚಾರದಲ್ಲಿ ಜಾಗರೂಕರಾಗಿರಿ

ವೃಷಭ

ಹಣ ಸಂಪಾದಿಸಿದಷ್ಟು ನಿಮಗೆ ವ್ಯಯವೇ ಆಗುತ್ತದೆ. ಆದರೆ ಪರರನ್ನು ಆಶ್ರಯಿಸುವ ಅವಶ್ಯ ಈಗ ಬೀಳಲಾರದು. ರಾಜಕೀಯದಲ್ಲಿ ಎಚ್ಚರದಿಂದ ವರ್ತಿಸಿರಿ ನೇತ್ರ ರೋಗಾದಿಗಳಿಂದ ಪೀಡಿತರಾಗಲಿರುವಿರಿ ಗೃಹ ಸೌಖ್ಯ ಚೆನ್ನಾಗಿದೆ. ಸಟ್ಟಾ ಮೊದಲಾದವುಗಳಲ್ಲಿ ಈ ವಾರ ಜಯವಿಲ್ಲ ತಾ. ೪, ೬, ೭ ಈ ದಿನಗಳು ಲಾಭಕರವಲ್ಲ ಪ್ರಯಾಣ ಫಲವುಂಟು

ಮಿಥುನ

ಅನಾಯಾಸವಾಗಿ ನಿಮಗೆ ಹಣ ದೊರಕಲಿದೆ ಆದರೆ ದುಂದುಗಾರಿಕೆಯಿಂದ ಮನಸ್ಸು ಬಿಗಿ ಹಿಡಿಯಿರಿ ಸ್ತ್ರೀ ಸುಖ ಚೆನ್ನಾಗಿದೆ ನಿಮ್ಮ ಆಪ್ತರೆಂಬವರೇ ನಿಮಗೆ ಅಹಿತ ಬಯಸಬಹುದು ಸತ್ಯವೊಂದಿದ್ದರೆ ಎತ್ತಲೂ ಭಯವಿಲ್ಲ. ತಾ. ೩, ೫, ೬ ಈ ದಿನಗಳಲ್ಲಿ ಧನಲಾಭವಿದೆ. ಶರೀರ ಪ್ರಕೃತಿಯ ವಿಷಯ ಎಚ್ಚರವಿರಲಿ

ಕರ್ಕಾಟಕ

ವ್ಯಾಪಾರದಲ್ಲಿ ಈ ವಾರ ಹೆಚ್ಚಿನ ಲಾಭವಿಲ್ಲ ಶರೀರದಲ್ಲಿ ಉತ್ಸಾಹವೂ ಸ್ವಲ್ಪ ಕಡಿಮೆಯಾಗುವುದು ದೈವ ಭಕ್ತಿಯಿಂದ ಕೆಲಸ ಮಾಡಿರಿ ವಿಘ್ನಗಳೆಲ್ಲವೂ ವಾರದ ಕೊನೆಗೆ ಕಡಿಮೆಯಾಗುವವು. ಸಮಾಜದಲ್ಲಿ ಗೌರವ ಕಡಿಮೆಯಾಗಲಾರದು ಸಂಚಾರದ ಯೋಗವಿದೆ ತಾ. ೪, ೬, ೭ ಈ ದಿನಗಳು ಅಷ್ಟು ಲಾಭಕರವಲ್ಲ

ಸಿಂಹ

ದುಷ್ಟ ಜನರು ಸಹವಾಸ ಬೆಳೆಸಲು ಬರಬಹುದು. ಆದರೆ ವಿಷಯ ಜಾಗರೂಕರಾಗಿರಿ, ಜೂಜು ಸಟ್ಟಾಗಳ ಕಡೆಗೆ ಈ ವಾರ ಮನಸ್ಸು ಕೊಡಬೇಡಿ. ಗೃಹ ಕಲಹವು ಸಮಾಧಾನವಾಗಲಿದೆ. ಪುತ್ರ ಕಳತ್ರ ಸೌಖ್ಯ ಚೆನ್ನಾಗಿರುವುದು. ವಾರದ ಕೊನೆಯ ದಿನಗಳು ಅಷ್ಟು ಆನಂದಕರವಾಗಿರಲಾರವು. ತಾ. ೩,

ಕನ್ಯಾ

ವ್ಯಾಪಾರಾದಿಗಳಿಂದ ನಿಮಗೆ ಧನ ಪ್ರಾಪ್ತಿಯಿದೆ ವೆಚ್ಚವೂ ಚೆನ್ನಾಗಿಯೇ ಆಗಲಿದೆ ನಿಮ್ಮ ಆಪ್ತೇಷ್ಟರ ಸಲುವಾಗಿ ನೀವು ಪರಿಶ್ರಮ ತೆಗೆದುಕೊಳ್ಳಬೇಕಾಗುವುದು. ಸತ್ಕಾರ್ಯದಿಂದ ಯಾವಾಗಲೂ ಹಾನಿಯಿಲ್ಲ ಶರೀರ ಆರೋಗ್ಯದ ವಿಷಯ ಎಚ್ಚರವಿರಬೇಕು ತಾ ೫, ೭ ಈ ದಿನಗಳು ಉತ್ತಮ ಲಾಭಕರ.

ತುಲಾ

ಗೃಹ ಯೋಗ ನಿಮಗೆ ಈ ವಾರ ಚೆನ್ನಾಗಿದೆ ಮನಸ್ಸು ಬಹಳ ಉಲ್ಲಾಸದಿಂದಿರುವುದು ದುಡ್ಡಿನ ವಿಷಯ ಹೆಚ್ಚು ಮನಸ್ಸಿಗೆ ತಂದುಕೊಳ್ಳಬೇಡಿ ಎಲ್ಲವೂ ಅನಾಯಾಸವಾಗಿ ಪರಿಹಾರವಾಗಲಿದೆ. ಗೃಹ ಕಲಹದ ವಿಷಯ ಎಚ್ಚರವಾಗಿರಿ ಸ್ತ್ರೀ ಸುಖ ಚೆನ್ನಾಗಿರಲಾರದು. ವಾರದ ಕೊನೆಯಲ್ಲಿ ಶೀತಬಾಧೆಯುಂಟಾಗಲಿದೆ ತಾ ೬, ೭ ಈ ದಿನಗಳು ಲಾಭಕರ

ವೃಶ್ಚಿಕ

ಮನಸ್ಸಿನ ಗಾಬರಿ ನಿಮಗೆ ಕಡಿಮೆಯಾಗಲಿದೆ ವ್ಯಾಪಾರಾದಿಗಳಲ್ಲಿ ಸಾಕಷ್ಟು ಧನಲಾಭವಿದೆ ನಿಮ್ಮ ಶರೀರ ಪ್ರಕೃತಿಯ ವಿಷಯ ಮಾತ್ರ ಎಚ್ಚರವಿರಬೇಕು ಸ್ತ್ರೀ ಸುಖ ಸಾಮಾನ್ಯವಿದೆ ಪ್ರಯಾಣಾದಿಗಳ ವಿಷಯ ಸ್ವಲ್ಪ ಜಾಗರೂಕರಾಗಿರಿ. ತಾ ೩, ೫ ಈ ದಿನಗಳು ಲಾಭಕರವಲ್ಲ

ಧನು

ದೇವರ ದಯೆ ನಿಮ್ಮಲ್ಲಿ ಪರಿಪೂರ್ಣವಿದೆ ಬಂದ ವಿಘ್ನಗಳು ನೀರ ಮೇಲಣ ಗುಳ್ಳೆಗಳಂತೆ ಮಾಯವಾಗುವವು ಕುಟುಂಬ ಕಲಹದಿಂದ ನಿವೃತ್ತಿ ಹೊಂದುವಿರಿ ಮಿತ್ರಬಂಧುಗಳ ಸಮಾಗಮವಾಗುವುದು ವಾತ ಕಫಗಳ ವಿಷಯ ಸ್ವಲ್ಪ ಎಚ್ಚರವಿರಬೇಕು ತಾ ೬, ೭ ಈ ದಿನಗಳು ಉತ್ತಮ ಧನ ಲಾಭ

ಮಕರ

ಮನೆಬಿಟ್ಟು ಈ ವಾರ ಅಲೆದಾಡುವ ಸಂದರ್ಭ ಬಂದೊದಗಬಹುದು. ಆದರೆ ದುಡ್ಡಿನ ತಾಪತ್ರಯ ಬರಲಾರದು. ಇಷ್ಟಮಿತ್ರರಿಂದ ಸಹಾಯ ದೊರಕಲಿದೆ ನೆನೆದ ಕೆಲಸವು ಕೈಗೂಡಲಿದೆ. ಶರೀರ ಪ್ರಕೃತಿ ಚೆನ್ನಾಗಿ ಉಳಿಯುವುದು. ತಾ. ೪, ೬, ೭ ಈ ದಿನಗಳು ಲಾಭಕರ.

ಕುಂಭ

ನಿಮ್ಮ ಮನಸ್ಸು ಗಾಬರಿಗೊಂಡಿದೆ. ಆದರೆ ಕಂಗಾಲಾಗುವ ಕಾರಣವಿಲ್ಲ. ವಿಘ್ನಗಳು ಬದರೂ ದೇವರ ಕೃಪೆಯಿಂದ ಪರಿಹಾರವಾಗುವವು. ವ್ಯಾಪಾ…

…ಯುಂಟು. ಗೃಹಕಲಹವು ಉಂಟಾಗಲಾರದು ತಾ. ೫, ೭ ಈ ದಿನಗಳು ಜಯಕರವಲ್ಲ.

ಮೀನ

ನಿಮ್ಮ ಸಮೀಪದ ಬಂಧುಗಳ ಸಲುವಾಗಿ ನೀವು ವೆಚ್ಚ ಮಾಡುವ ಪ್ರಸಂಗ ಬರಬಹುದು. ಶರೀರಕ್ಕೆ ಸಾಕಷ್ಟು ಆಯಾಸದ ಕೆಲಸವೂ ದೊರಕಲಿದೆ. ಆದರೆ, ಉತ್ತಮ ಕಾರ್ಯಗಳಿಗೆ ಸತ್ಕಾರವೂ ಇದ್ದೇ ಇದೆ ಸ್ತ್ರೀ ಸುಖ ಚೆನ್ನಾಗಿರುವುದು. ತಾ ೩, ೫, ೭ ಈ ದಿನಗಳು ಉತ್ತಮ ಲಾಭಕರ

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲು ಹುಣ್ಣುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟಿದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ, ಕಡು, ತುರಿಕಜ್ಜಿ, ಗಾಯ, ಪಟ್ಟು, ಪರಚುವಿಕೆ, ಸುಟ್ಟಗಾಯ ಮುದ್ದು ಇಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT



ರೂ.3/9 ಲಾಭ ಪ್ರತಿ ರೂ.10/-ಕ್ಕೆ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು

ನಿಮ್ಮ ಹತ್ತಿರದ ಪೋಸ್ಟ್ ಆಫೀಸಿನಲ್ಲಿ ಪೂರ್ತಿ ವಿವರಗಳನ್ನು ತಿಳಿದುಕೊಳ್ಳಿ.

KN 61 39

ವಿಚಿತ್ರ ಪ್ರಪಂಚ

ಮನುಷ್ಯರನ್ನು ಹಿಡಿವ ಗಿಡಮರಗಳು

ಅಮೆಜಾನಿನಲ್ಲಿ ಮೃಗಪಕ್ಷಿಗಳನ್ನು ಹಿಡಿದುಕೊಳ್ಳುವ ಗಿಡಮರಗಳು ಕೆಲವು ಇವೆಯೆಂದು ತಿಳಿದಿದೆ. ಅನೇಕ ಗಿಡಗಳಲ್ಲಿ ಪಕ್ಷಿಗಳ ಗರಿಗಳು, ಮೃಗಗಳ ಎಲುಬುಗಳು ನೇತಾಡಿಕೊಂಡಿರುತ್ತವೆಯಂತೆ ಅವುಗಳು ಮನುಷ್ಯರನ್ನೂ ಹಿಡಿದುಬಿಡುತ್ತವೆಯೆಂದೂ ತಿಳಿಯುತ್ತದೆ. ಅಲ್ಲಿಗೆ ಯೂರೋಪಿಯನರೂ ಹೋಗಲು ಹೆದರುತ್ತಿರುವರಂತೆ. ಒಕ್ಟೋಪಸ್ ಎಂಬುದು ಇಂತಹ ಗಿಡಗಳಲ್ಲಿ ಬಹಳ ಭಯಂಕರವಾದುದು ಆಸ್ಟ್ರೇಲಿಯದ ಕೆನಿಬಾರ್ ಮರಗಳೂ ಅಂತೆಯೇ ಅಪಾಯಕಾರಿಗಳಾಗಿವೆ.

ಪ್ರಾಣಿಗಳು ಫಾರ್ಮು ನಡೆಸುತ್ತವೆ!

ಇಡಿಯ ಫ್ರಾನ್ಸಿನಲ್ಲಿ, ಏಕೆ ಅಖಿಲ ಜಗತ್ತಿನಲ್ಲಿಯೇ ಅತ್ಯಂತ ವಿಚಿತ್ರವಾದುದೆಂದರೆ, ಫ್ರಾನ್ಸಿನ ಮೊಂಟೆಲ್ಸ್ ಎಂಬಲ್ಲಿನ ಸಣ್ಣ ಹಳ್ಳಿಯೊಂದರಲ್ಲಿ ಪ್ರಾಣಿಗಳು ಫಾರ್ಮು ನಡೆಸುವ ಸಂಗತಿಯೊಂದು

ಅಲ್ಲಿ ಒಂದು ಆನೆಯು ನೇಗಿಲು ಎಳೆಯುತ್ತದೆ. ಕುದುರೆಗಳು ಆಚೀಚೆಗೆ ಗದ್ದೆಗಳಲ್ಲಿ ಓಡಾಡುತ್ತವೆ ದನಗಳೊಡನೆ ಹೆಣ್ಣು ಲಾಮಗಳು ಮತ್ತು ಒಂಟೆಗಳು ಆಹಾರ ತೆಗೆದುಕೊಳ್ಳುತ್ತವೆ ಸಿಂಹ ಮತ್ತು ಹುಲಿಗಳು ಕೆಲಸಗಾರರಾಗಿವೆ!

ಈ ಮೃಗಗಳು ಫ್ರೆಂಚ್ ಜರ್ಮನ ಪ್ರಸಿದ್ಧವಾದ ಅವರ್ ಸರ್ಕಸಿನ ಮೃಗಗಳು ಈಗ ಆ ಸರ್ಕಸಿನವರು ಅವುಗಳನ್ನು ಆ ಹಳ್ಳಿಗೆ ತಂದು ಬಿಟ್ಟಿರುತ್ತಾರೆ ಜರ್ಮನರ ಬಾಂಬಿನ ತೋಪಿನ ಪೆಟ್ಟಿನಿಂದ ಪ್ರವುಗಳು ಹಾನಿ ಹೊಂದದೆ ಬದುಕಿ ಉಳಿದವೆ. ಅಲ್ಲಿ ಫಾರ್ಮಿನಲ್ಲಿ ಹೀಗೆ ದಿನನಿತ್ಯವೂ ಈಗ ಕೆಲಸಮಾಡುತ್ತಿವೆ. ಅವರ್ ಸರ್ಕಸಿನವರು ಮುಂದೆ ತಿರುಗಾಟ ಮಾಡಲು ಅನುಕೂಲವಾಗುವವರೆಗೆ ಈ ಮೃಗಗಳಿಂದ ಇದೇ ಕೆಲಸ ಮಾಡಿಸುವರಂತೆ

ಮಿಲಿಯ ಡೋಲರ್ ಮಾನನಷ್ಟ

ನ್ಯೂಯಾರ್ಕ್, ಪ್ರಸಿದ್ಧ ಮನೆತನವೊಂದರಲ್ಲಿ ಹುಟ್ಟಿದ ಜೆನೆಟಿಸ್ಕೋಟ್ ಸಿಮೂರ್ ಯಂಗ್ ಎಂಬ ೨೭ ವರ್ಷದವಳು ತನ್ನನ್ನು ಹುಚ್ಚರ ಆಸ್ಪತ್ರೆಗೆ ಹಾಕಿದ ತಪ್ಪಿಗಾಗಿ ಹಾಗೂ ಅಲ್ಲಿ ಒತ್ತಾಯದಿಂದ ಓಪರೇಶನು ಮಾಡಿದ್ದಕ್ಕಾಗಿ ಒಂದು ಮಿಲಿಯ ಡಾಲರು ಮಾನನಷ್ಟದ ದಾವೆಮಾಡಿದ್ದಾಳೆ

ರಾಲ್ಫ್ ಮಾಕ್ಸ್‌ವೆಲ್ ಲೂಯಿಸ್ ಎಂಬವನೊಡನೆ ೧೯೩೩ರಲ್ಲಿ ಆಕೆ ಒಂದು ರಾತ್ರೆ ಬಹಳ ವಿಲಾಸಭೋಗವನ್ನು ಪಡೆದಿದ್ದಳಂತೆ ಕಡೆಗೆ ಆತನು ವಿವಾಹಿತನೆಂದು ಅವಳಿಗೆ ತಿಳಿದುಬಂದಿತು. ಹಾಗಾಗಿ ಆತನ ಮೇಲೆ ಕಾಯಿದೆ ಪ್ರಕಾರ ವ್ಯಾಜ್ಯಮಾಡುವೆನೆಂದು ಆಕೆ ಹೆದರಿಸಲು, ಆತನು ಅವಳನ್ನು ಹುಚ್ಚರ ಆಸ್ಪತ್ರೆಗೆ ಹಾಕಿ, ಅಲ್ಲಿ ಒತ್ತಾಯದಿಂದ ಓಪರೇಶನು ಮಾಡಿಸಿದನೆಂದೂ ಅದರಿಂದ ಅವಳು ತನ್ನ ಸೌಂದರ್ಯ, ಸ್ತ್ರೀ ಗುಣಗಳೆಲ್ಲವನ್ನೂ ಕಳೆದುಕೊಂಡು ದಿನಹೋದಂತೆ, ನಪುಂಸಕಳೂ ವೃದ್ಧೆಯುಹೋದವಳೂ ಆಗಬರುತ್ತಿರುವುದರಿಂದ, ಆ ಅಪರಾಧಕ್ಕಾಗಿ ಮಿಲಿಯ ಡಾಲರುಗಳು ಆಕೆ ಮಾನನಷ್ಟ ಕೊಡಬೇಕಾಗಿಯೂ ಅವಳು ವಾದಿಸಿರುವಳು

ವಿಜ್ಞಾನಯುಗ

ಲೋಕದಲ್ಲಿ ಅತ್ಯುತ್ತಮ ಕೋವಿ

'ಬ್ರೆನ್‌ಗನ್' ಎಂಬುದು ಲೋಕದ ಎಲ್ಲಾ ಕೋವಿಗಳಲ್ಲಿಯೂ ಅತ್ಯುತ್ತಮವಾದುದೆಂದು ಪ್ರಸಿದ್ಧವಾಗಿದೆ ಅಂತಹವುಗಳನ್ನು ತಯಾರಿಸುವರೆ, ಅನೇಕ ಜೆಕ್ಕ್ ಇಂಜಿನಿಯರರು ಬ್ರಿಟನಿನಲ್ಲಿ ಈಗ ಕೆಲಸಮಾಡುತ್ತಿದ್ದಾರೆ

೧೯೩೦ನೆಯ ಇಸವಿಯಲ್ಲಿ ಈ ಕೋವಿಯ ವಿಷಯ ಬ್ರಿಟನಿನಲ್ಲಿ ಪ್ರಸ್ತಾಪ ಬಂದಿತ್ತು ಅನೇಕರು ಅದು ಅಷ್ಟು ಪ್ರಯೋಜನವಿಲ್ಲದ್ದೆಂದೂ ವಾದಿಸಿದರು. ಮೂರು ವರ್ಷಗಳ ವರೆಗೆ ಆ ಕುರಿತು ವಾದ ನಡೆಯಿತು ಕಡೆಗೆ ಅದರ ಪರೀಕ್ಷೆಯಾದ ಮೇಲೆ ಬ್ರೆನ್‌ಗನ್ ಅತ್ಯುತ್ತಮವೆಂದು ಸಿದ್ಧಾಂತವಾಗಿ ಅದನ್ನು ತಯಾರಿಸುವ ಸಿದ್ಧತೆ ಮಾಡಲಾಗಿದೆ ಅದಕ್ಕೆ "Z B" ಎಂದು ಹೆಸರು ಕೊಡಲಾಗಿದೆ

ಈ ಕೋವಿಯನ್ನು ಹಿಡಿದುಕೊಂಡು ಹೋಗಲು ಬಹಳ ಲಘುವಾಗಿದೆ ಎಂತಹ ಕಷ್ಟದ ಸಂದರ್ಭದಲ್ಲೂ ಇದನ್ನು ಉಪಯೋಗಿಸ ಬಹುದಾಗಿದೆ ಮಳೆ, ಕೊಳೆ, ಬಿರುಗಾಳಿ ಇಂತಹ ಎಲ್ಲಾ ಸಂದರ್ಭಗಳಲ್ಲಿಯೂ ಇದು ನಿರ್ಬಾಧವಾಗಿದೆ

ಹೊಟ್ಟೆಯೊಳಗಿನ ಮಕ್ಕಳ ಎದೆಬಡಿತವನ್ನು ರೇಡಿಯೋದಲ್ಲಿ ಕೇಳಿದರು!

ಕಳೆದ ತಿಂಗಳಲ್ಲಿ ಅಮೆರಿಕದ ಕೆಲಿಫೋರ್ನಿಯದಲ್ಲಿರುವ ಮಿಸೆಸ್ ಜೇಕ್ ಸ್ಮಿತ್ ಎಂಬಾಕೆಯು ಇನ್ನೂ ಹೆತ್ತಿರದ ಇರುವ, ಹೊಟ್ಟೆಯೊಳಗಿದ್ದ ಅವಳಿಜವಳಿ ಮಕ್ಕಳ ಎದೆಬಡಿತದ ಶಬ್ದವನ್ನು ರೇಡಿಯೋ ಮೂಲಕ ಇಡೀ ಅಮೇರಿಕನರು ಕೇಳಿದರು.

ಮಿಸೆಸ್ ಸ್ಮಿತ್ತಳು ಇನ್ನೂ ಹುಟ್ಟದ ತನ್ನ ಗರ್ಭಸ್ಥ ಶಿಶುಗಳ ಎದೆ ಬಡಿತ ಶಬ್ದವನ್ನು ಕೇಳಿ ಸುಖದಿಂದ ಹಾಸಿ ಮೇಲೆ ಹೊರಳಾಡಿದಳು.

ಸ್ಟೆತೋಸ್ಕೋಪಿನ ಪ್ರಯೋಗ ಮೂಲಕ ಡಾಕ್ಟರರು, ಹೊಟ್ಟೆಯೊಳಗಿ ಮಕ್ಕಳ ಎದೆಬಡಿತದ ಗ್ರಾಮಫೋ ರಿಕಾರ್ಡು ತೆಗೆದರು ಆ ಮೇಲೆ ಅದನ್ನು ರೇಡಿಯೋದಲ್ಲಿ ಉಪಯೋಗಿಸುವಂತೆ ತಯಾರು ಮಾಡಿದರು ಇದು ಅತ್ಯಂತ ನೂತನ ಶೋಧನೆಗಳಲ್ಲೊಂದಾಗಿದೆ

ಏಪ್ಲ್‌ಸಿಂದ ಕ್ರಿಮಿನಾಶಕ ಮದ್ದು

"ದಿನಕ್ಕೊಂದು ಏಪ್ಲ್ ತಿಂದ ಡಾಕ್ಟರರನ್ನು ಕರೆಯಬೇಕಾಗಿಲ್ಲ" ಎಂಬ ಗಾದೆಯಿದೆಯಷ್ಟೆ! ಏಪ್ಲ ಸತ್ವವನ್ನು ತೆಗೆದು ಕ್ರಿಮಿನಾಶಕ ಔಷಧಿಯೊಂದನ್ನು ಈಗ ತಯಾರಿಸಿದ್ದಾರೆ ಉಷ್ಣ ಹೊರಕಡೆ, ಮಕ್ಕಳ ಅಜೀರ್ಣ ಮೊದಲಾದ ಅನೇಕ ರೋಗಗಳಲ್ಲಿ ಈ ಮದ್ದು ಅತ್ಯಂತ ಪ್ರಯೋಜನಕಾರಿಯಾಗಿ ಕಂಡುಬಂದಿದೆ ಕಳೆದ ಮೂರು ವರ್ಷಗಳಲ್ಲಿ ಸುಮಾರು ೭೫ ರೋಗಿಗಳಿಗೆ ಇದರಿಂದ ಪ್ರಯೋಜನ ತೋರಿದೆ ೧೫ ವರ್ಷದ ಒಂದು ಹುಡುಗಿ ಕಾಲು ನೋವಿನಿಂದ ಬಹಳ ಸಮಯ ಬಾಧಪಡುತ್ತಿದ್ದು ಈ ಔಷಧಿಯಿಂದ ಕೇವಲ ಎರಡೇ ತಿಂಗಳಲ್ಲಿ ಗುಣಹೊಂದಿದ್ದಾಳೆ.

ಲೋಕದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ವಿಮಾನಗಳಾಗುತ್ತಿವೆ?

ಜರ್ಮನಿ	೨೫೦೦
ರಶ್ಯ	೨೦೦೦
ಬ್ರಿಟನ್	೧೮೦೦
ಅಮೇರಿಕ	೧೫೦೦
ಜಪಾನ್	೭೦೦
ಇಟಲಿ	ಇನ್ನೂ ಕಡಿಮೆ

ಅಮೇರಿಕದ 'ನೆಷಿನ್' ಎಂಬ ಮಾಸಪತ್ರಿಕೆಯಲ್ಲಿ ಈ ಅಂಕೆಗಳು ಪ್ರಸಿದ್ಧವಾಗಿವೆ

BHUVANENDRA PRODUCTS LTD.,

Head Office and Factory:
ATAPADI S Kanara.

Depots:
1 Maharatha Galli, Hubli.
2. 57 Big street, Triplicane, Madras.

"BHUVANENDRA"
Danthadavan Choorna

Economical in use. Cheapest in value. Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಮ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ಟೋಕಿಸ್ಟರು,—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್,

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪ್ರೊನಾ

ದೇಹದ ರಕ್ತ, ಗ್ರಂಥಿ
ನರನಾಡಿಗಳನ್ನು ಬೀ
ಪಡಿಸಿ ಶಕ್ತಿಯುನ್ನೀ
ಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-
ದಿ ಪ್ರಾಪ್ಯುಲರ್ ಸ್ಟೋರ್ಸ್
ಮಂಗಳೂರು.

Stockists:—

Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE.

Undertakes all kinds of Banking Business. Current account at 2¼%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines Unique Banking faciliti to Businessmen and interested Public.

Apply for particulars—

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE. ESTD. 1931.

Branches:—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits.

FIXED DEPOSITS:

For 2 years or over	...	...	5 per cent
„ 1 „	...	...	4½ per cent
„ 6 months	...	...	3½ per cent
„ 3 „	...	...	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%.

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price **0-2-6** per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,

The Combined Booking Agency, Mangalo

[illegible] ವಾರ್ಷಿಕ ಚಂದಾ ರೂ 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 1-8-1941 [ಸಂಚಿಕೆ 3]

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, itpays you to consult us:

KOCHIKAR BROTHERS, LTD.,

Chief Agents for South India Including Indian States

UDIPI, MANGALORE, CALICUT MADRAS,

VANDRUM, BANGALORE City, and BOMBAY 4.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸೊಂಟವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದ್ರು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

ವಿಶ್ವಕವಿ ಠಾಗೋರರು

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 1-8-1941   [ಸಂಚಿಕೆ 31]

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, itpays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
VANDRUM,—BANGALORE City,—and BOMBAY 4.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ವಿಶ್ವಕವಿ ಠಾಗೋರರು

KANNADA ILLUSTRATED WEEKLY

ನೀವು ಚಿಲ್ಲರೆ ಅಂಗಡಿಗಾರನಾಗಿರಿ, ಇಲ್ಲವೇ ಕಾರ್ಖಾನೆ ಕೆಲಸಗಾರರೇ ಆಗಿರಿ, ಗುಮಾಸ್ತರೋ, ಕೆಲಸಗಾರರೋ, ಆಗಿದ್ದರೆ ಮಲಬದ್ಧತೆ ಅಜೀರ್ಣಗಳಾಗದಂತೆ ನೀವು ಅವಶ್ಯ ನೋಡಿಕೊಳ್ಳಬೇಕು. ಅಂತಹ ನೋವುಗಳಿಂದ ನಿಮ್ಮ ಆರೋಗ್ಯವು ಕೂಡಲೇ ಬಿದ್ದು ಹೋಗುವುದು. ನೀವು ದುರ್ಬಲರಾಗುವಿರಿ ಕಾರ್ಯಶಕ್ತಿಯನ್ನು ಕಳಕೊಳ್ಳುವಿರಿ ನಿಮ್ಮ ಮೆದುಳು ಬಲಹೀನವಾಗುವುದು. ದಿನನಿತ್ಯ ಶಾಂತಿಪ್ರಕರವಾದ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿ. ನಿಮ್ಮ ಶರೀರದೊಳಗಡೆಯನ್ನೂ ನಿರ್ಮಲವಾಗಿರಿಸಿ. ಅದೇ ನಿಮ್ಮ ಶರೀರ ಮತ್ತು ಮೆದುಳುಗಳನ್ನು ಶಕ್ತಿಯುತವನ್ನಾಗಿ ಮಾಡುವುದು ಅಂಡ್ರೂಸ್ ಉತ್ತಮ ಫಲಿತಾಂಶವನ್ನೊದಗಿಸುತ್ತದೆ.

ಅಂತರಂಗ ನೈರ್ಮಲ್ಯಕ್ಕೆ ದಿನ
ನಿತ್ಯವು ಅಂಡ್ರೂಸ್ ಲಿವರ್
ಸಾಲ್ಟನ್ನು ಉಪಯೋಗಿಸಿರಿ

ಆರೋಗ್ಯಕರ, ಶಕ್ತಿಕರವಾದ ಪಾನೀಯವಿದು.

ANDREWS
LIVER SALT



ಚುರುಕಾದ ಮತ್ತು ತಂಪುಕೊಡುತ್ತದೆ ಆನಂದವನ್ನುಂಟುಮಾಡುತ್ತದೆ. ಶಕ್ತಿ ಕೊಡುತ್ತದೆ. ಸಣ್ಣ ಸೈಜಿಗೆ 11 ಆಣೆ ದೊಡ್ಡ ಸೈಜಿಗೆ 1-4-0

68

ಇಂದಿನಿಂದಲೇ ಅವುಗಳಿಗೆ

ಓವಲ್ಟಿನ್

ಕೊಟ್ಟರೆ, ಅವು ಆರೋಗ್ಯವಾಗಿ ಬಲಶಾಲಿಗಳಾಗುವುವು

ಮಕ್ಕಳು ಬೆಳೆಯುವ ಸಮಯದಲ್ಲಿ ಅವುಗಳಿಗೆ ತಕ್ಕುದಾದ ಮತ್ತು ಸರಿಯಾದ ಪೋಷಣೆಯ ಅವಶ್ಯಕತೆ ಇದೆ. ಈ ಬೆಳವಣಿಗೆಯ ಸಮಯ ಅವುಗಳು ಬೇಗನೇ ತಮ್ಮ ಶಕ್ತಿಯನ್ನು ವ್ಯಯಮಾಡುವುವು. ಅವು ಆರೋಗ್ಯವಂತರಾಗಿಯೂ ಬಲಶಾಲಿಗಳಾಗಿಯೂ ಇರಬೇಕಾದರೆ ಈ ವ್ಯಯವನ್ನು ಕೂಡಲೇ ಭರ್ತಿಮಾಡಬೇಕು.

ಈ ವ್ಯಯವಾದ ಶಕ್ತಿಯನ್ನು ಭರ್ತಿಮಾಡಿ ಬಲವನ್ನೂ, ಸುಖವನ್ನೂ, ಆರೋಗ್ಯವನ್ನೂ ಕೊಡಲು ದೇಹದಾರ್ಢ್ಯಕ್ಕೆ ಉತ್ತಮ ಪೋಷಣೆಯ ಗುಣವುಳ್ಳ 'ಓವಲ್ಟಿನ್' ಒಂದು ಅಮೂಲ್ಯ ಆಹಾರಪಾನೀಯವಾಗಿರುತ್ತದೆ.

'ಓವಲ್ಟಿನ್' ಒಂದು ಉತ್ತಮವಾದ ನೈಸರ್ಗಿಕ ಆಹಾರ– ನೆನೆಹಾಕಿ ಮಾಗಿದ ಬಾರ್ಲಿ, ಹಸಿಹಾಲಿನ ಕೆನೆ, ಅಮೂಲ್ಯ ನೈಸರ್ಗಿಕ ವಿಟಾಮಿನುಗಳು ಮತ್ತು ಇನ್ನಿತರ ಆಹಾರವಸ್ತುಗಳ ತಯಾರಿಕೆಯಾಗಿರುತ್ತದೆ. ಮಕ್ಕಳು ಇದರ ರುಚಿಯನ್ನು ಬಹಳವಾಗಿ ಮೆಚ್ಚುತ್ತವೆ ಇತರ ನಕಲಿ ಪಾನೀಯಗಳನ್ನು ವರ್ಜಿಸಿರಿ 'ಓವಲ್ಟಿನ್'ನ್ನೇ ಕೊಂಡುಕೊಳ್ಳಿರಿ.

'ಓವಲ್ಟಿನ್' ಒಂದು ಆಹಾರಪಾನೀಯವಾಗಿದ್ದು ಬಿಸಿಯಾ ಕಣ್ಣಗಾಗಿ ಸೇವಿಸಬಹುದು. ಇದನ್ನು ತಯಾರಿಸುವ ಕ್ರಮವು ಬಹಳ ಸುಲಭ ಮತ್ತು ಕ್ರಮವು ಪ್ರತೀ ಒಂದು ಟಿನ್ನಿನೊಂದಿಗಿದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಡಿಸ್ಟ್ರಿಬ್ಯೂಟರ್ಸ್:—
ಗ್ರೆಹಮ್ಸ್ ಟ್ರೇಡಿಂಗ್ ಕೋ. [ಇಂಡಿಯಾ] ಲಿಮಿಟೆಡ್,
16 ಬೇಂಕ್ ಸ್ಟ್ರೀಟ್, ಬೊಂಬಾಯಿ, ಹಾಗೂ ಕಲ್ಕತ್ತಾ, ಮದ್ರಾಸು, ಕರಾಚಿ ಮತ್ತು ರಂಗೂನು

'ಓವಲ್ಟಿನ್ ಬಿಸ್ಕುಟುಗಳು'— ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತ, "ಓವಲ್ಟಿನ್" ಬಿಸ್ಕುಟುಗಳು ಬಹಳ ಉತ್ತಮ. ಅವುಗಳಲ್ಲಿ ಅಮೂಲ್ಯ ಗುಣದ ಓವಲ್ಟಿನ್ ಸೇರಿದೆ. 4 ಔನ್ಸು, 8 ಔನ್ಸ್‌ಗಳ ಪೆಕೆಟುಗಳಲ್ಲಿಯೂ, 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/42/40

ಸಿನೆಮಾ ಸುದ್ದಿ

ರಾಮಶಾಸ್ತ್ರಿ

ಪ್ರಭಾತದವರ ಮುಂದಿನ ಚಿತ್ರವು ರಾಮಶಾಸ್ತ್ರಿಯೆಂದು ತಿಳಿದಿದೆ. ಇದರ ರಚನೆಯ ಕಾರ್ಯವು ಬೇಗನೇ ಪ್ರಾರಂಭವಾಗಲಿರುವುದಂತೆ. ಈ ಚಿತ್ರದ ಮರಾಠೀ ಪ್ರತಿಯಲ್ಲಿ ಶ್ರೀ ದಾತೆ ಪ್ರಧಾನ ಪಾತ್ರ ವಹಿಸುವುದಾಗಿ ಸುದ್ದಿ. ಹಿಂದೀ ಪ್ರತಿಯಲ್ಲಿ ಮಜ್ಹರ್ ಖಾನನು ಪ್ರಧಾನ ಪಾತ್ರ ವಹಿಸುವನಂತೆ. ದುರ್ಗಾ ಖೋಟೆಯು ಎರಡು ಭಾಷಾ ಚಿತ್ರಗಳಲ್ಲಿಯೂ ನಾಯಕಿಯಾಗುವಳು

ವನಮೋಹಿನಿ

ಸೌತ್ ಇಂಡಿಯನ್ ಯುನೈಟೆಡ್ ಆರ್ಟಿಸ್ಟ್ಸ್ ಇವರ ತಮಿಳು ಅರಣ್ಯ ಚಿತ್ರ ವನಮೋಹಿನಿಯಲ್ಲಿ ಕುಮಾರಿ ತವಮಣಿ ಮತ್ತು ಎಂ. ಕೆ. ರಾಧಾ ಇವರು ನಾಯಿಕಾನಾಯಕರಾಗಿ ಅಭಿನಯಿ

ಬ್ರಿಲಿಯಂಟ್ ಪಿಕ್ಚರ್ಸ್

ಇವರು ವಿಷ್ಣುಪಂತ ಪಗ್ನೀಸನ ನಟನಿಯಿಂದ ಕೂಡಿದ 'ಪುಂಡಲೀಕ' ಎಂಬ ಭಕ್ತಿ ಚಿತ್ರ ತಯಾರಿಸುವರಂತೆ. ಅವರ 'ಮುನ್ಸಿಪಾಲಿಟಿ' ಚಿತ್ರವು ಪೂರ್ಣವಾಗಿದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

8-8-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೮—೮—೧೯೪೧

ಯೂರೋಪಿನ ರಣರಂಗವು ವಿಸ್ತರವಾಗುತ್ತಿದೆ

ರಶ್ಯ ಜರ್ಮನ್ ಯುದ್ಧ - ಜಪಾನು ದಕ್ಷಿಣದ ಕಡೆಗೆ - ರಶ್ಯ ಪೋಲೆಂಡ್ ಒಪ್ಪಂದ - ಇರಾಣಿನ ಮೇಲೆ ಹಿಟ್ಲರನ ಕಣ್ಣು?

ಯೂರೋಪಿನ ಸಂಗ್ರಾಮ ರಂಗವು ವಿಸ್ತರಿಸುತ್ತಿದೆ. ಇದಕ್ಕೆ ಯಾವ ಇತ್ಯರ್ಥವೂ ಆಗುವಂತೆ ಕಾಣಬರುವುದಿಲ್ಲ. ರಶ್ಯ ಜರ್ಮನಿಗಳೊಳಗೆ ಯುದ್ಧವು ನಡೆಯುತ್ತಿದೆ. ಆದರೆ ಅಷ್ಟು ಆರಭಸವಾಗಿಲ್ಲ. ಜರ್ಮನರ ಮುಂದೊತ್ತುವಿಕೆಯನ್ನು ರಶ್ಯನರು ಸಾಹಸದಿಂದ ತಡೆಗಟ್ಟುತ್ತಾರೆ. ರಶ್ಯ ಪೋಲೆಂಡುಗಳೊಳಗೆ ಒಪ್ಪಂದವಾಗಿರುವುದಾಗಿ ತಿಳಿದುಬರುತ್ತದೆ. ಇಂಡೋ-ಚೀನವನ್ನು ಒತ್ತಾಯಿಸಿ ಜಪಾನು ವಶಪಡಿಸಿಕೊಂಡ ಮೇಲೆ ಥಾಯಿಲೆಂಡನ್ನೂ ಆಕ್ರಮಿಸುವುದೆಂದು ಸುದ್ದಿ ಬರುತ್ತಿದೆ.

ರಶ್ಯ-ಜರ್ಮನ್ ಯುದ್ಧ

ಜರ್ಮನಿಯ ವಿದ್ಯುತ್ ಯುದ್ಧವು ರಶ್ಯದಲ್ಲಿ ಪ್ರಯೋಜನಕ್ಕೆ ಬರಲಿಲ್ಲ. ಮೋಸ್ಕೋವನ್ನು ಆಕ್ರಮಿಸಿ ಸ್ವಾಧೀನಪಡಿಸಲು ಮಾಡಿದ ಧಾಳಿಯೂ ಯಶಸ್ವಿಯಾದಂತೆ ಕಂಡುಬರುವುದಿಲ್ಲ. ರಶ್ಯದಲ್ಲಿ ಈಗಾಗಲೇ ಮಳೆ ಬೀಳಲು ಪ್ರಾರಂಭವಾದುದರಿಂದ ಜರ್ಮನರಿಗೆ, ಅಲ್ಲಿ ಯುದ್ಧಮಾಡಲು ಹವೆ ಅನುಕೂಲವಲ್ಲವೆಂದು ತಿಳಿದಿದೆ. ಆದರೆ, ಜರ್ಮನರಿಗೆ ಪ್ರತಿಕೂಲವಾದ ಕಾಲವನ್ನು ರಶ್ಯನರು ತಮ್ಮ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳದೆ ಇರಲಾರರು. ರಶ್ಯದ ಯುದ್ಧದಿಂದ ಜರ್ಮನರಿಗೆ ಅಪಾರ ಹಾನಿಯೊದಗಿದೆಯೆಂದು ಲಂಡನ್ ವಾರ್ತೆಯಿದೆ. ಸ್ಮೋಲೆನಸ್ಕ್, ನೆವೆಲ್, ಪೊರೋಜೆವ್ಸ್ಕ್ ಮೊದಲಾದ ಕಡೆಗಳಲ್ಲಿ ರಶ್ಯಾ ಜರ್ಮನ್ ಸೈನ್ಯಗಳೊಳಗೆ ಮಾರಾಮಾರಿಯ ಕಾಳಗವು ಆಗುತ್ತಲಿದೆ.

ರಶ್ಯ-ಪೋಲೆಂಡ್ ಒಪ್ಪಂದ

ಜರ್ಮನಿಯು ಮೊದಲು ಪೋಲೆಂಡಿಗೆ ಆಕ್ರಮಿಸಿ ಅದನ್ನು ವಶಪಡಿಸಿಕೊಂಡಾಗ ರಶ್ಯವು ಅಲ್ಲಿ ಕೆಲವು ಸ್ಥಳವನ್ನು ತನ್ನ ಅಧೀನ ಬಿಟ್ಟುಕೊಡಬೇಕಾಗಿ ಕೇಳಿ ಅದನ್ನು ಪಡೆದಿತ್ತಷ್ಟೆ? ಆ ಕಾಲದಲ್ಲಿ ಬ್ರಿಟನರು ಪೋಲೆಂಡಿನ ಆಕ್ರಮಿತ ಸ್ಥಳಗಳನ್ನು ತಿರುಗಿ ಅದಕ್ಕೆ ತಾವು ಕೊಡಿಸುವುದಾಗಿ ಭರವಸೆ ಕೊಟ್ಟಿದ್ದರು. ಮೊನ್ನೆ ರಶ್ಯ ಬ್ರಿಟನುಗಳೊಳಗೆ ಒಪ್ಪಂದವಾದಾಗ ಬ್ರಿಟನು ಆ ದಿನ ಪೋಲೆಂಡಿನ ವಿಷಯದಲ್ಲಿ ಹೇಳಿದ ಭರವಸೆಯ ವಿಷಯವೇನೆಂದು ಹಲವರು ಶಂಕಿಸಿದ್ದರು. ಆದರೆ ರಶ್ಯ ಪೋಲೆಂಡುಗಳೊಳಗೆ ಈಗ ಒಪ್ಪಂದವಾಯಿತೆಂಬ ಚಮತ್ಕಾರದ ಸುದ್ದಿಯೇ ಬಂದಿದೆ. ರಶ್ಯನರು ಆಕ್ರಮಿತ ಸ್ಥಳವನ್ನು ತಿರುಗಿ ಬಿಟ್ಟುಕೊಟ್ಟಿರುವರು. ಇದರಿಂದ ಪೋಲೆಂಡನ್ನು ಹಂಚಿಕೊಳ್ಳುವ ಸಮಯ ರಶ್ಯ ಜರ್ಮನಿಗಳೊಳಗೆ ಆದ ಒಪ್ಪಂದವು ಈಗ ಮುರಿದುಹೋದಂತಾಯಿತು. ರಶ್ಯದೊಡನೆ ಪೋಲರು ರಾಜಿಮಾಡಿಕೊಂಡದ್ದರಿಂದ ಅವರು ಜರ್ಮನಿಯೊಡನೆ ಯುದ್ಧಮಾಡಬೇಕಾದ ಪ್ರಸಂಗವೊದಗಿದೆ.

ದಕ್ಷಿಣದ ಕಡೆಗೆ ಜಪಾನು

ಇಂಡೋ ಚೀನದ ಮೇಲೆ ಜಪಾನು ಆಕ್ರಮಿಸಲು ಮುಂದೆ ಬಂದು ವಿಚಿ ಸರಕಾರಕ್ಕೂ ಜಪಾನಿಗೂ ಆದ ಒಪ್ಪಂದ ವಿಷಯ ನೀವು ಕಳೆದ ವಾರ ಓದಿದ್ದೀರಿ. ಆ ಒಪ್ಪಂದದಂತೆ ಜಪಾನಿನ ಸೈನ್ಯವು ಇಂಡೋ ಚೀನದಲ್ಲಿ ಬಂದು ಒಟ್ಟುಗೂಡುತ್ತಿವೆ. ಅನೇಕ ಸೈನ್ಯ ಶಸ್ತ್ರ ಸಂಗ್ರಹಗಳೂ ಅಲ್ಲಿ ಸಿದ್ಧವಾಗುತ್ತಿವೆ. ಹಲವು ವೈಮಾನಿಕ ಕೇಂದ್ರಗಳನ್ನು ಜಪಾನು ಈಗಾಗಲೇ ಕೈವಶಪಡಿಸಿಕೊಂಡಿರುವುದು. ಜಪಾನರು ಸೈಬೇರಿಯದ ಹತ್ತಿರವೂ ಸೈನ್ಯ ಸಂಗ್ರಹಿಸಿಟ್ಟಿರುವರೆಂದು ತಿಳಿದಿದೆ. ಮಂಚೂರಿಯಾ ಕೊರಿಯಾಗಳಲ್ಲಿ ಜಪಾನರ ಸೈನ್ಯವಿದೆ. ಹೀಗೆ ಜಪಾನು ದಕ್ಷಿಣದ ಕಡೆಗೆ ಧಾಳಿಮಾಡಲು ಸರ್ವ ಸನ್ನಾಹಗಳನ್ನೂ ಮಾಡುವಂತಿದೆ.

ಬ್ರಿಟನು ಅಮೇರಿಕಾಗಳ ಪ್ರತೀಕಾರ

ಜಪಾನಿನ ಚಟುವಟಿಕೆಗಳನ್ನು ಬ್ರಿಟನು ಅಮೇರಿಕಗಳು ಬಹು ಗಂಭೀರ ದೃಷ್ಟಿಯಿಂದ ಪರೀಕ್ಷಿಸುತ್ತಿವೆ. ಬ್ರಿಟನು ಒಮ್ಮೆಲೇ ಜಪಾನಿನ ಮೇಲೆ ಬೀಳಲು ಬಯಸುವುದಿಲ್ಲ. ಬ್ರಿಟಿಷ್ ರಾಯಭಾರಿಯು ಜಪಾನ್ ಪ್ರತಿನಿಧಿಯೊಡನೆ ಭೇಟಿಯಾದನು. ಅಮೇರಿಕ ಬ್ರಿಟನುಗಳು ಈಗಾಗಲೇ ಜಪಾನಿನ ಮೇಲೆ ಆರ್ಥಿಕ ನಿರ್ಬಂಧವನ್ನು ಜಾರಿಮಾಡಿವೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿಯೂ ಜಪಾನ್ ಹಣ ಎಲ್ಲ ಕಡೆಗಳಲ್ಲಿ ಜಪ್ತಿಯಾಗಿದೆ. ನ್ಯೂಜಿಲೆಂಡು ಆಸ್ಟ್ರಿಯಗಳೂ ಹೀಗೆ ಮಾಡಿವೆ. ಜಪಾನಿನಲ್ಲಿರುವ ಅಮೇರಿಕದ ಬಂಡವಾಳವು ಅಮೇರಿಕೆಯಲ್ಲಿರುವ ಜಪಾನು ಬಂಡವಾಳಕ್ಕಿಂತ ಬಹಳ ಹೆಚ್ಚಿಗೆ ಇರುವುದರಿಂದ ಇದರಿಂದ ಜಪಾನಿಗೇ ತಾತ್ಕಾಲಿಕ ಲಾಭವಾಗಿದೆ. ಅಮೇರಿಕದಲ್ಲಿರುವ ಜಪಾನು ಹಡಗುಗಳಿಗೂ ನಿರ್ಬಂಧ ಹಾಕಲಾಗಿದೆ. ಆದರೂ ಪ್ರತ್ಯಕ್ಷ ಯುದ್ಧವು ಸುರುವಾಗಿಲ್ಲ.

ಇರಾಣಿನ ಮೇಲೆ ಕಣ್ಣು

ಇರಾಣಿನ ಮೇಲೆ ಹಿಟ್ಲರನು ಕಣ್ಣಿಟ್ಟಿರುವನೆಂದು ಈಡನ್ನರು ಪಾರ್ಲಿಮೆಂಟಿನಲ್ಲಿ ಹೇಳಿದರು. ಇರಾಣಿನಲ್ಲಿ ಎಣ್ಣೆ ಮೊದಲಾದ ಅನೇಕ ಯುದ್ಧೋಪಯೋಗಿ ಸಾಮಗ್ರಿಗಳು ದೊರಕುವವೆಂದೇ ಹಿಟ್ಲರನು ಈ ಹಂಚಿಕೆ ಮಾಡಿರುವನಂತೆ. ಅಲ್ಲಿ ಈಗ ಆತನ ಪಂಚಮದಳದವರು ತೀವ್ರ ಪ್ರಚಾರ ಕಾರ್ಯ ಮಾಡುತ್ತಿರುವರಂತೆ. ಇರಾಣಿನಲ್ಲಿ ಹಿಟ್ಲರನ ಮಾಟ ನಡೆಯುವುದರಿಂದ ಭಾರತಕ್ಕೂ ಗಂಡಾಂತರವು ಸಮೀಪಿಸಿದಂತೆಯೇ ಆಯಿತು.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE — ESTD. 1906 — CANARA BANK LIMITED

HALFTONE & LINE BLOCK MAKING UNDERTAKEN
Sharada Press,
MANGALORE

ಸ್ವದೇಶಾಭಿಮಾನಿ

ತಾರೀಕು 8-8-1941

ಕಾಮನ್ಸಿನಲ್ಲಿ ಭಾರತದ ವಿಷಯ ಚರ್ಚೆ

ಭಾರತ ಸಚಿವರಾದ ಅಮೆರಿಯವರು ಕಾಮನ್ಸ್‌ಸಭೆಯಲ್ಲಿ ದೀರ್ಘವಾದೊಂದು ಭಾಷಣ ಮಾಡುತ್ತಾ, ವೈಸರಾಯ್ ಕೌನ್ಸಿಲ್ ವಿಸ್ತರಣದ ವಿಷಯವನ್ನು ಹಾಗೂ ಇತರ ಕಮಿಟಿಗಳ ರಚನೆಯ ವಿಚಾರವನ್ನು ಸಮರ್ಥಿಸಿ ತಮ್ಮ ಧೋರಣೆಯು ನ್ಯಾಯವಾದುದೆಂಬ ಬಗ್ಗೆ ವಾದಿಸಿದರು. ಈ ಸಂದರ್ಭದಲ್ಲಿ ಸಪ್ರು ಪರಿಷತ್ತಿನ ವಿಚಾರದಲ್ಲಿಯೂ ಕೆಲ ಮಾತುಗಳನ್ನಾಡಿದರು. ಕಾಂಗ್ರೆಸಿನ ಕುರಿತು ಸಹಜವಾದ ತಮ್ಮ ಅಸಂತುಷ್ಟಿಯನ್ನು ಪ್ರಕಟಪಡಿಸಿದರು. ಭಾರತದ ಪಂಗಡಗಳೊಳಗೆ ಮತ್ತೈಕ್ಯವಾಗದೆ ಭಾರತದ ವಿಚಾರ ಘಟನಾತ್ಮಕ ಬದಲಾವಣೆ ಮಾಡಲಾಗುವುದಿಲ್ಲವೆಂಬ ತಮ್ಮ ಹಳೆಯ ಹಾಡಿನ ಪಲ್ಲವಿಯನ್ನೇ ತಿರಿಗಿಯೂ ಹಾಡಿದರು. ಚರ್ಚಿಲ್ ಮತ್ತು ಅಮೆರಿಯವರ ಭಾರತ ಧೋರಣೆಯನ್ನು ಅಭ್ಯಸಿಸುತ್ತಾ ಬಂದವರಿಗೆ ಯಾರಿಗಾದರೂ ಇದರಲ್ಲಿ ಆಶ್ಚರ್ಯಕರವಾದುದ್ದು ತೋರಲಾರದು.

ಅಮೆರಿಯವರ ಭಾಷಣದ ಅನಂತರದಲ್ಲಿ ಆದ ಚರ್ಚೆಯು ವಿಚಾರಣೀಯವಾಗಿದೆ. ಅಮೆನರಂಥವರು ಬ್ರಿಟನಿನ ನೀತಿಯ ವಿಷಯ ಆಕ್ಷೇಪವೆತ್ತದೆ ಬಿಡಲಿಲ್ಲ. ಭಾರತಕ್ಕೆ ಸಾಮ್ರಾಂತ ಸ್ವರಾಜ್ಯವನ್ನಾಗಲಿ ಕೊಡುವ ಅವಧಿ ನಿಶ್ಚಿತಮಾಡಿ ಹೇಳಬೇಕೆಂದೂ, ಪಂಡಿತ ನೆಹರೂಗಳಂತಹವರನ್ನು ಬಂಧನದಲ್ಲಿಟ್ಟದ್ದು ಪ್ರಮಾದಕರವೆಂದೂ ಕೂಲಿಗಾರ ಪಕ್ಷದ ಸದಸ್ಯರಾದ ಅಮೆನರು ವಾದಿಸಿದರು. ಭಾರತದ ಪರಿಸ್ಥಿತಿಯನ್ನು ಅವರು ಸಾಧ್ಯವಿದ್ದಷ್ಟು ಸ್ವಾರಸ್ಯವಾಗಿಯೇ ಸಭೆಯ ಮುಂದಿಟ್ಟರು. ಭಾರತಕ್ಕೆ ಸ್ವರಾಜ್ಯ ಕೊಡದಿರುವುದು ನ್ಯಾಯವಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಬ್ರಿಟಿಷರ ಧೋರಣೆಯಿಂದ ಭಾರತೀಯರಿಗುಂಟಾದ ದುಃಖವನ್ನು ವ್ಯಕ್ತಪಡಿಸಿದರು.

ಕಾಮನ್ಸಿನ ಇತರ ಭಾಷಣಗಾರರು ಬ್ರಿಟನು ಭಾರತದ ಕುರಿತು ತಳೆದ ಧೋರಣವನ್ನು ಅಮೆನರಷ್ಟು ಕಟುವಾಗಿ ಟೀಕಿಸದಿದ್ದರೂ ಭಾರತದ ವಿಚಾರದಲ್ಲಿ ಅಮೆರಿಯವರು ಹೆಚ್ಚಿನ ಸಹಾನುಭೂತಿಕರವಾದ ನೀತಿಯನ್ನು ವಹಿಸುವುದು ಅವಶ್ಯವೆಂದು ಸಮ್ಮತಿ ವ್ಯಕ್ತಮಾಡಿರುವರು. ರಾಜಕೀಯ ಕೈದಿಗಳೆಲ್ಲರನ್ನೂ ಸೆರೆಮನೆಗಳಿಂದ ಬಿಡಬೇಕೆಂದು ಕೆಲವರು ವಾದಿಸಿದರು. ಭಾರತದ ವಿಷಯ ಬ್ರಿಟಿಷ್ ಧೋರಣೆಯು ಅಮೆರಿಕದಲ್ಲಿಯೂ ಸಂಶಯಕ್ಕೆ ಕಾರಣವಾಗಿದೆಯೆಂದು ಬೇರೆ ಕೆಲವರೆಂದರು. ಇನ್ನೊಬ್ಬರು ಅಮೆರಿಯವರು ಭಾರತಕ್ಕೆ ತೆರಳಿ ಪರಿಸ್ಥಿತಿಯನ್ನು ವಿಚಾರಿಸಿ ಬರಬೇಕೆಂದರು. ಒಟ್ಟಿನಿಂದ ಭಾರತದ ವಿಷಯದಲ್ಲಿ ಅವಶ್ಯವಾಗಿ ಅಮೆರಿಯವರು ವಿಚಾರಿಸಬೇಕೆಂದು ಸರ್ವರೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಾಂಧಿಜಿಯವರ ಹೇಳಿಕೆಗಳು

ಸತ್ಯಾಗ್ರಹವು ಆರಂಭವಾದ ಮೇಲೆ ಗಾಂಧಿಜಿಯವರ ಹೇಳಿಕೆಗಳನ್ನು ಇದ್ದಕ್ಕಿದ್ದಂತೆ ಪ್ರಕಟಿಸುವ ವಿಷಯದಲ್ಲಿ ಸರಕಾರವು ಸಂಶಯದೃಷ್ಟಿಯಿಂದ ಬೀರಿ ಆ ಬಗ್ಗೆ ಪತ್ರಿಕೆಗಳಿಗೆ ಕೊಟ್ಟ ಎಚ್ಚರದಿಂದ, ಪತ್ರಿಕಾ ಸಂಪಾದಕರು ಅಸಮಾಧಾನಪಟ್ಟ ವಿಚಾರವು ಈಗಾಗಲೇ ಪ್ರಸಿದ್ಧವಾಗಿದೆ. ಈ ವಿಷಯದಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕ ಪರಿಷತ್ತು ಹಾಗೂ ಸರಕಾರದ ಮಧ್ಯೆ ಪತ್ರವ್ಯವಹಾರ ನಡೆಯುತ್ತಿದ್ದು, ಮತ್ತೂ ಸರಕಾರದವರು ಮಹಾತ್ಮರ ಹೇಳಿಕೆಯ ವಿಷಯವಾಗಿ ಸಂಶಯ ದೃಷ್ಟಿಯನ್ನೇ ಎತ್ತಿದ ಕಾರಣ, ಪತ್ರಿಕಾ ಸಂಪಾದಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಶ್ರೀನಿವಾಸರು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಸಂಪಾದಕರು, ಗಾಂಧಿಜಿಯವರ ಹೇಳಿಕೆಗಳು ಆಕ್ಷೇಪಾರ್ಹವಿರುವವೆಂದು ಸಂಶಯಪಟ್ಟರೆ ಮಾತ್ರ ಪ್ರೆಸ್ ಸಲಹೆಗಾರರನ್ನು ಕೇಳಬಹುದು. ಇಲ್ಲವಾದರೆ ಪ್ರಕಟಣೆಯು ಆಕ್ಷೇಪಾರ್ಹವಿದೆಯೆಂದು ಸರಕಾರವು ಅಭಿಪ್ರಾಯಪಟ್ಟರೆ, ಆಗ ಸಲಹೆಗಾರ ಸಮಿತಿಯನ್ನು ವಿಚಾರಿಸಿ ಸಂಪಾದಕರಿಗೆ ಎಚ್ಚರಿಕೆ ಕೊಡಬಹುದು ಹೀಗೆಂದು ಪತ್ರಿಕಾ ಸಂಪಾದಕ ಪರಿಷತ್ತಿನವರು ಅಭಿಪ್ರಾಯಪಟ್ಟಿದ್ದಾರೆ. ಈ ಕಾಲದಲ್ಲಿ ಮಹಾತ್ಮರಂತಹ ಪ್ರಭಾವಶಾಲೀ ವ್ಯಕ್ತಿಯ ಪ್ರಕಟಣೆಗಳು ಅನಾವಶ್ಯಕ ನಿರ್ಬಂಧಕವಾಗದಂತೆ ಸರಕಾರವು ಮಾಡಬೇಕಾಗಿ ಚಳವಳಿ ನಡೆದಿತ್ತು. ಈ ಚಳವಳದಲ್ಲಿ ಆದ ಭಿನ್ನಾಭಿಪ್ರಾಯವು ಸರಿಗೂಡದೆ ಇರುವ ಕಾರಣ ಶ್ರೀನಿವಾಸನರು, ಮೇಲಿನ ಪ್ರಕಟಣೆಯನ್ನು ಹೊರಡಿಸಿ, ಪತ್ರಿಕಾ ಸಂಪಾದಕರು ಸರಕಾರದ ಸಲಹೆಗಾರರನ್ನು ಕೇಳದೆ ಪ್ರಕಟಿಸುವಂತೆ ಆಗಬೇಕೆಂದೂ ಅದರ ಸಂಭವಗಳ ವಿಷಯ ಹೊಣೆಗಾರಿಕೆ ಹೊತ್ತಿರಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಸೂಚನೆಯಿಂದ ಪತ್ರಿಕಾ ಸಂಪಾದಕರಿಗೆ ಸ್ವಲ್ಪ ಮಟ್ಟಿಗಾದರೂ ಸ್ವಾತಂತ್ರ್ಯ ಬೇಕೆಂದಂತಾಗುವುದು. ತಮ್ಮ ಹೊಣೆಗಾರಿಕೆಯನ್ನು ಪತ್ರಿಕಾ ಸಂಪಾದಕರಾರೂ ತಿಳಿದವರಿರುವುದರಿಂದ, ಸರಕಾರದವರು ಈ ವಿಷಯದಲ್ಲಿ ಸಮ್ಮತಿಸುವುದು ಉಚಿತವೆಂದು ನಾವು ಅಭಿಪ್ರಾಯಪಡುತ್ತೇವೆ.

ಗಾಂಧಿಜಿಯವರು ಇಂದು ಅಸಮಾನ್ಯ ವ್ಯಕ್ತಿ. ಅವರ ಅಭಿಪ್ರಾಯವು ಜನತೆಗೆ ಎಷ್ಟು ಆಗ್ರಹಕಾರಿಯಾದುದೋ ಸರಕಾರಕ್ಕಾದರೂ ಅಷ್ಟು ಅಲಕ್ಷ್ಯ ಮಾಡತಕ್ಕದ್ದೇನೂ ಇಲ್ಲ. ಹೀಗಿರುವಲ್ಲಿ ಅದನ್ನು ಕೂಡಲೇ ಪ್ರಕಟಿಸುವುದರಿಂದ ಉಭಯತರಿಗೂ ಪ್ರಯೋಜನವಿದೆ. ಈ ಬಗ್ಗೆ ಸರಕಾರದವರು ಸಂಶಯ ದೃಷ್ಟಿವಹಿಸಿ ನಿರ್ಬಂಧಿಸುವುದರಿಂದ ಲಾಭವೇನೋ ನಮಗೆ ತಿಳಿಯದು.

NOTICE

In the Court of
The Subordinate Judge of
South Kanara.

S. C. S. No. 33 of 1941.

Between:—
Polycarp Noronha ... *Plff.*
and
1. Juje Moras
2. Narayana Shetty, s/o Poovappa Shetty, residing in Kukkala village, Puttur Taluk. } *Defendants*

To the 2nd defendant.

Please take notice that the abovenamed Plaintiff has filed the above suit for the recovery of the sum of Rs. 671—5—1 due by you and the 1st defendant in respect of the pronote dated 15-5-'39 executed by you and the 1st defendant in favour of the late Diwan Bahadur S. L. Mathias, which pronote has been assigned in favour of plaintiff by the executors of the Will of the late Diwan Bahadur S. L. Mathias and the said suit stands posted to 15—8—1941 for your appearance and if you fail to appear on that date you will be declared exparte.

(By order of the Court)

Mangalore, 29-7-1941. Sd. P. D'Souza, B.A., B.L.
,, L. C. Pais, B.A., B.L.
Vakils for Plaintiff.

Canara Industrial & Banking Syndicate Ltd.

(Incorporated in British India, Liability of Share-holders Limited.)

STATEMENT OF AFFAIRS AS ON 30TH JUNE, 1941

LIABILITIES	Rs.	As.	Ps.	ASSETS	Rs.	As.	Ps.
Paid-up Capital	5,76,246	0	0	Cash in hand & with Bankers at call	4,58,536	2	1
Reserve Funds	2,10,000	0	0	Investments on Govt. Securities	6,19,566	6	6
Deposits	26,61,363	5	11	" on Shares of other Banks & Companies	99,929	6	0
Due to Bankers	2,01,050	12	0	Fully Secured Advances	14,04,254	8	10
Bills for Collection	2,70,628	14	0	Other advances, Bills discounted etc.	10,01,997	2	11
Sundries	4,05,760	2	10	Landed Properties etc., Office premises Safes, Furniture & fittings	2,34,943	7	6
				Bills for Collection (per contra)	2,70,628	14	0
				Sundries	2,34,893	2	11
Total Rs.	43,25,049	2	9	Total Rs.	43,25,049	2	9

"MUKUND NIVAS"
UDIPI
15th July, 1941.

T. M. A. PAI
Managing Director

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

೮—೮—೧೯೪೧] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೮—೮—೧೯೪೧

ಯೂರೋಪಿನ ರಣರಂಗವು ವಿಸ್ತಾರವಾಗುತ್ತಿದೆ

ರಶ್ಯ ಜರ್ಮನ್ ಯುದ್ಧ - ಜಪಾನು ದಕ್ಷಿಣದ ಕಡೆಗೆ
ರಶ್ಯ ಪೋಲೆಂಡ್ ಒಪ್ಪಂದ - ಇರಾಣಿನ ಮೇಲೆ ಹಿಟ್ಲರನ ಕಣ್ಣು?

ಯೂರೋಪಿನ ಸಂಗ್ರಾಮ ರಂಗವು ವಿಸ್ತರಿಸುತ್ತಿದೆ. ಸದ್ಯಕ್ಕೆ ಯಾವ ಇತ್ಯರ್ಥವೂ ಆಗುವಂತೆ ಕಂಡು ಬರುವುದಿಲ್ಲ. ರಶ್ಯ ಜರ್ಮನಿಗಳೊಳಗೆ ಯುದ್ಧವು ನಡೆಯುತ್ತಿದೆ. ಆದರೆ ಅಷ್ಟು ರಭಸವಾಗಿಲ್ಲ. ಜರ್ಮನರ ಮುಂದೊತ್ತುವಿಕೆಯನ್ನು ರಶ್ಯನರು ಸಾಹಸದಿಂದ ತಡೆಗಟ್ಟುತ್ತಾರೆ. ರಶ್ಯ, ಪೋಲೆಂಡುಗಳೊಳಗೆ ಒಪ್ಪಂದವಾಗಿರುವುದಾಗಿ ತಿಳಿದು ಬರುತ್ತದೆ. ಇಂಡೋ-ಚೀನವನ್ನು ಬಿತ್ತಾಯಿಸಿ ಜಪಾನು ವಶಪಡಿಸಿಕೊಂಡ ಮೇಲೆ ಥಾಯಿಲೆಂಡನ್ನೂ ಆಕ್ರಮಿಸುವುದೆಂದು ಸುದ್ದಿ ಬರುತ್ತಿದೆ.

ರಶ್ಯ ಜರ್ಮನ್ ಯುದ್ಧ

ಜರ್ಮನಿಯ ವಿದ್ಯುತ್ ಯುದ್ಧವು ರಶ್ಯದಲ್ಲಿ ಪ್ರಯೋಜನಕ್ಕೆ ಬರಲಿಲ್ಲ. ಮೋಸ್ಕೋವನ್ನು ಆಕ್ರಮಿಸಿ ಸ್ವಾಧೀನಪಡಿಸಲು ಮಾಡಿದ ಧಾಳಿಯು ಯಶಸ್ವಿಯಾದಂತೆ ಕಂಡು ಬರುವುದಿಲ್ಲ. ರಶ್ಯದಲ್ಲಿ ಈಗಾಗಲೇ ಮಳೆ ಬೀಳಲು ಪ್ರಾರಂಭವಾದುದರಿಂದ ಜರ್ಮನರಿಗೆ, ಅಲ್ಲಿ ಯುದ್ಧ ಮಾಡಲು ಹವೆ ಅನುಕೂಲವಲ್ಲವೆಂದು ತಿಳಿದಿದೆ. ಆದರೆ ಜರ್ಮನರಿಗೆ ಪ್ರತಿಕೂಲವಾದ ಕಾಲವನ್ನು ರಶ್ಯನರು ತಮ್ಮ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳದೆ ಇರಲಾರರು. ರಶ್ಯದ ಯುದ್ಧದಿಂದ ಜರ್ಮನರಿಗೆ ಅಪಾರ ಹಾನಿಯೊದಗಿದೆಯೆಂದು ಲಂಡನ್ ವಾರ್ತೆಯಿದೆ. ಸ್ಮೊಲೆನಸ್ಕ, ನೆವೆಲ್, ನವೊರ್‌ಜೆವ್ಸ್ಕ ಮೊದಲಾದ ಕಡೆಗಳಲ್ಲಿ ರಶ್ಯಾ ಜರ್ಮನ್ ಸೈನ್ಯಗಳೊಳಗೆ ಮಾರಾಮಾರಿಯ ಕಾಳಗವು ಆಗುತ್ತಲಿದೆ.

ರಶ್ಯ ಪೋಲೆಂಡ್ ಒಪ್ಪಂದ

ಜರ್ಮನಿಯು ಮೊದಲು, ಪೋಲೆಂಡಿಗೆ ಆಕ್ರಮಿಸಿ ಅದನ್ನು ವಶಪಡಿಸಿಕೊಂಡಾಗ ರಶ್ಯವು ಅಲ್ಲಿ ಕೆಲವು ಸ್ಥಳವನ್ನು ತನ್ನ ಅಧೀನ ಬಿಟ್ಟುಕೊಡಬೇಕಾಗಿ ಕೇಳಿ ಅದನ್ನು ಪಡೆದಿತ್ತಷ್ಟೆ? ಆ ಕಾಲದಲ್ಲಿ ಬ್ರಿಟನರು ಪೋಲೆಂಡಿನ ಆಕ್ರಮಿತ ಸ್ಥಳಗಳನ್ನು ತಿರುಗಿ ಅದಕ್ಕೆ ತಾವು ಕೊಡಿಸುವುದಾಗಿ ಭರವಸೆ ಕೊಟ್ಟಿದ್ದರು. ಮೊನ್ನೆ ರಶ್ಯ ಬ್ರಿಟನುಗಳೊಳಗೆ ಒಪ್ಪಂದವಾದಾಗ ಬ್ರಿಟನು ಆ ದಿನ ಪೋಲೆಂಡಿನ ವಿಷಯದಲ್ಲಿ ಹೇಳಿದ ಭರವಸೆಯ ವಿಷಯವೇನೆಂದು ಹಲವರು ಶಂಕಿಸಿದ್ದರು. ಆದರೆ ರಶ್ಯ ಪೋಲೆಂಡುಗಳೊಳಗೆ ಈಗ ಒಪ್ಪಂದವಾಯಿತೆಂಬ ಚಮತ್ಕಾರದ ಸುದ್ದಿಯೀ ಬಂದಿದೆ. ರಶ್ಯನರು ಆಕ್ರಮಿತ ಸ್ಥಳವನ್ನು ತಿರುಗಿ ಬಿಟ್ಟುಕೊಟ್ಟಿರುವರು. ಇದರಿಂದ ಪೋಲೆಂಡನ್ನು ಹಂಚಿಕೊಳ್ಳುವ ಸಮಯ ರಶ್ಯ ಜರ್ಮನುಗಳೊಳಗೆ ಆದ ಒಪ್ಪಂದವು ಈಗ ಮುರಿದು ಹೋದಂತಾಯಿತು. ರಶ್ಯದೊಡನೆ ಪೋಲರು ರಾಜಿಮಾಡಿಕೊಂಡದ್ದರಿಂದ ಅವರು ಜರ್ಮನಿಯೊಡನೆ ಯುದ್ಧ ಮಾಡಬೇಕಾದ ಪ್ರಸಂಗವೊದಗಿದೆ.

ದಕ್ಷಿಣದ ಕಡೆಗೆ ಜಪಾನು

ಇಂಡೋ ಚೀನದ ಮೇಲೆ ಜಪಾನು ಆಕ್ರಮಿಸಲು ಮುಂದೆ ಬಂದು ವಿಚಿ ಸರಕಾರಕ್ಕೂ ಜಪಾನಿಗೂ ಆದ ಒಪ್ಪಂದ ವಿಷಯ ನೀವು ಕಳೆದ ವಾರ ಓದಿದ್ದೀರಿ. ಆ ಒಪ್ಪಂದದಂತೆ ಜಪಾನಿನ ಸೈನ್ಯವು ಇಂಡೋ ಚೀನದಲ್ಲಿ ಬಂದು ಒಟ್ಟುಗೂಡುತ್ತಿವೆ. ಅನೇಕ ಸೈನ್ಯ ಶಸ್ತ್ರ ಸಂಗ್ರಹಗಳೂ ಅಲ್ಲಿ ಸಿದ್ಧವಾಗುತ್ತಿವೆ. ಹಲವು ವೈಮಾನಿಕ ಕೇಂದ್ರಗಳನ್ನು ಜಪಾನು ಈಗಾಗಲೇ ಕೈವಶಪಡಿಸಿಕೊಂಡಿರುವುದು. ಜಪಾನರು ಸೈಬೇರಿಯದ ಹತ್ತಿರವೂ ಸೈನ್ಯ ಸಂಗ್ರಹಿಸಿಟ್ಟಿರುವರೆಂದು ತಿಳಿದಿದೆ. ಮಂಚೂರಿಯಾ ಕೊರಿಯಾಗಳಲ್ಲಿ ಜಪಾನರ ಸೈನ್ಯವಿದೆ. ಹೀಗೆ ಜಪಾನು ದಕ್ಷಿಣದ ಕಡೆಗೆ ಧಾಳಿ ಮಾಡಲು ಸರ್ವ ಸನ್ನಾಹಗಳನ್ನೂ ಮಾಡುವಂತಿದೆ.

ಬ್ರಿಟನು ಅಮೆರಿಕಾಗಳ ಪ್ರತೀಕಾರ

ಜಪಾನಿನ ಚಟುವಟಿಕೆಗಳನ್ನು ಬ್ರಿಟನ್ ಅಮೇರಿಕಗಳು ಬಹು ಗಂಭೀರ ದೃಷ್ಟಿಯಿಂದ ಪರೀಕ್ಷಿಸುತ್ತಿವೆ. ಬ್ರಿಟನು ಒಮ್ಮೆಲೇ ಜಪಾನಿನ ಮೇಲೆ ಬೀಳಲು ಬಯಸುವುದಿಲ್ಲ. ಬ್ರಿಟಿಷ್ ರಾಯಭಾರಿಯು ಜಪಾನ್ ಪ್ರತಿನಿಧಿಯೊಡನೆ ಭೇಟಿಯಾದನು. ಅಮೆರಿಕ ಬ್ರಿಟನುಗಳು ಈಗಾಗಲೇ ಜಪಾನಿನ ಮೇಲೆ ಆರ್ಥಿಕ ನಿರ್ಬಂಧವನ್ನು ಜಾರಿ ಮಾಡಿವೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿಯೂ ಜಪಾನ್ ಹಣವೆಲ್ಲ ಕಡೆಗಳಲ್ಲಿ ಜಪ್ತಿಯಾಗಿವೆ. ನ್ಯೂಜಿಲೆಂಡು ಆಸ್ಟ್ರೇಲಿಯಗಳೂ ಹೀಗೆ ಮಾಡಿವೆ. ಜಪಾನಿನಲ್ಲಿರುವ ಅಮೇರಿಕದ ಬಂಡವಾಳವು ಅಮೆರಿಕೆಯಲ್ಲಿರುವ ಜಪಾನು ಬಂಡವಾಳಕ್ಕಿಂತ ಬಹಳ ಹೆಚ್ಚಿಗೆ ಇರುವುದರಿಂದ ಇದರಿಂದ ಜಪಾನಿಗೇ ತಾತ್ಕಾಲಿಕ ಲಾಭವಾಗಿದೆ. ಅಮೆರಿಕದಲ್ಲಿರುವ ಜಪಾನು ಹಡಗುಗಳಿಗೂ ನಿರ್ಬಂಧ ಹಾಕಲಾಗಿದೆ. ಆದರೂ ಪ್ರತ್ಯಕ್ಷ ಯುದ್ಧವು ಸುರುವಾಗಿಲ್ಲ.

ಇರಾಣಿನ ಮೇಲೆ ಕಣ್ಣು

ಇರಾಣಿನ ಮೇಲೆ ಹಿಟ್ಲರನು ಕಣ್ಣಿಟ್ಟಿರುವನೆಂದು ಏಡನ್ನರು ಪಾರ್ಲಿಮೆಂಟಿನಲ್ಲಿ ಹೇಳಿದರು. ಇರಾಣಿನಲ್ಲಿ ಎಣ್ಣೆ ಮೊದಲಾದ ಅನೇಕ ಯುದ್ಧೋಪಯೋಗಿ ಸಾಮಗ್ರಿಗಳು ದೊರಕುವವೆಂದೇ ಹಿಟ್ಲರನು ಈ ಹಂಚಿಕೆ ಮಾಡಿರುವನಂತೆ. ಅಲ್ಲಿ ಈಗ ಆತನ ಪಂಚಮ ದಲದವರು ತೀವ್ರ ಪ್ರಚಾರ ಕಾರ್ಯ ಮಾಡುತ್ತಿರುವರಂತೆ. ಇರಾಣಿನಲ್ಲಿ ಹಿಟ್ಲರನ ಮಾಟ ನಡೆಯುವುದರಿಂದ ಭಾರತಕ್ಕೂ ಗಂಡಾಂತರವು ಸಮೀಪಿಸಿದಂತೆಯೇ ಆಯಿತು.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for business rules regarding our Insurance Premia Payment Service.

RESOURCES OF A CRORE — ESTD. 1906

CANARA BANK LIMITED

HALFTONE & LINE
BLOCK-MAKING
UNDERTAKEN
Sharada Press,
MANGALORE

ಸ್ವದೇಶಾಭಿಮಾನಿ

ತಾರೀಕು 8—8—1941

ಕಾಮನ್ಸಿನಲ್ಲಿ ಭಾರತದ ವಿಷಯ ಚರ್ಚೆ

ಭಾರತ ಸಚಿವರಾದ ಅಮೇರಿಯವರು ಕಾಮನ್ಸ್‌ಸಭೆಯಲ್ಲಿ ದೀರ್ಘವಾದೊಂದು ಭಾಷಣ ಮಾಡುತ್ತಾ, ವೈಸರಾಯ್ ಕೌನ್ಸಿಲ್ ವಿಸ್ತರಣದ ವಿಷಯವನ್ನು ಹಾಗೂ ಇತರ ಕಮಿಟಿಗಳ ರಚನೆಯ ವಿಚಾರವನ್ನು ಸಮರ್ಥಿಸಿ ತಮ್ಮ ಧೋರಣೆಯು ನ್ಯಾಯವಾದುದೆಂಬ ಬಗ್ಗೆ ವಾದಿಸಿದರು. ಈ ಸಂದರ್ಭದಲ್ಲಿ ಸಪ್ರು ಪರಿಷತ್ತಿನ ವಿಚಾರದಲ್ಲಿಯೂ ಕೆಲ ಮಾತುಗಳನ್ನಾಡಿದರು. ಕಾಂಗ್ರೆಸಿನ ಕುರಿತು ಸಹಜವಾದ ತಮ್ಮ ಅಸಂತುಷ್ಟಿಯನ್ನು ಪ್ರಕಟಪಡಿಸಿದರು. ಭಾರತದ ಪಂಗಡಗಳೊಳಗೆ ಮತ್ತೈಕ್ಯವಾಗದೆ ಭಾರತದ ವಿಚಾರ ಘಟನಾತ್ಮಕ ಬದಲಾವಣೆ ಮಾಡಲಾಗುವುದಿಲ್ಲವೆಂಬ ತಮ್ಮ ಹಳೆಯ ಹಾಡಿನ ಪಲ್ಲವಿಯನ್ನೇ ತಿರಿಗಿಯೂ ಹಾಡಿದರು. ಚರ್ಚಿಲ್ ಮತ್ತು ಅಮೇರಿಯವರ ಭಾರತ ಧೋರಣೆಯನ್ನು ಅಭ್ಯಸಿಸುತ್ತಾ ಬಂದವರಿಗೆ ಯಾರಿಗಾದರೂ ಇದರಲ್ಲಿ ಆಶ್ಚರ್ಯಕರವಾದುದು ತೋರಲಾರದು.

ಅಮೇರಿಯವರ ಭಾಷಣದ ಅನಂತರದಲ್ಲಿ ಆದ ಚರ್ಚೆಯು ವಿಚಾರಣೀಯವಾಗಿದೆ. ಅಮೆನರಂಥವರು ಬ್ರಿಟನಿನ ನೀತಿಯ ವಿಷಯ ಆಕ್ಷೇಪವೆತ್ತದೆ ಬಿಡಲಿಲ್ಲ. ಭಾರತಕ್ಕೆ ಸಾಮಂತ ಸ್ವರಾಜ್ಯವನ್ನಾಗಲಿ ಕೊಡುವ ಅವಧಿನಿಶ್ಚಿತಮಾಡಿ ಹೇಳಬೇಕೆಂದೂ, ಪಂಡಿತ ನೆಹರೂಗಳಂತಹವರನ್ನು ಬಂಧನದಲ್ಲಿಟ್ಟದ್ದು ಪ್ರಮಾದಕರವೆಂದೂ ಕೂಲಿಗಾರ ಪಕ್ಷದ ಸದಸ್ಯರಾದ ಅಮೆನರು ವಾದಿಸಿದರು. ಭಾರತದ ಪರಿಸ್ಥಿತಿಯನ್ನು ಅವರು ಸಾಧ್ಯವಿದ್ದಷ್ಟು ಸ್ವಾರಸ್ಯವಾಗಿಯೇ ಸಭೆಯ ಮುಂದಿಟ್ಟರು. ಭಾರತಕ್ಕೆ ಸ್ವರಾಜ್ಯ ಕೊಡದಿರುವುದು ನ್ಯಾಯವಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಬ್ರಿಟಿಷ ಧೋರಣೆಯಿಂದ ಭಾರತೀಯರಿಗುಂಟಾದ ದುಃಖವನ್ನು ವ್ಯಕ್ತಪಡಿಸಿದರು.

ಕಾಮನ್ಸಿನ ಇತರ ಭಾಷಣಗಾರರು ಬ್ರಿಟನು ಭಾರತದ ಕುರಿತು ತಳೆದ ಧೋರಣವನ್ನು ಅಮೆನರಷ್ಟು ಕಟುವಾಗಿ ಟೀಕಿಸದಿದ್ದರೂ ಭಾರತದ ವಿಚಾರದಲ್ಲಿ ಅಮೇರಿಯವರು ಹೆಚ್ಚಿನ ಸಹಾನುಭೂತಿಪರವಾದ ನೀತಿಯನ್ನು ವಹಿಸುವುದು ಅವಶ್ಯವೆಂದು ಸಮ್ಮತಿ ವ್ಯಕ್ತಪಡಿಸಿರುವರು. ರಾಜಕೀಯ ಕೈದಿಗಳೆಲ್ಲರನ್ನು ಸೆರೆಮನೆಗಳಿಂದ ಬಿಡಬೇಕೆಂದು ಕೆಲವರು ವಾದಿಸಿದರು. ಭಾರತದ ವಿಷಯ ಬ್ರಿಟ ಪರ ಧೋರಣೆಯು ಅಮೇರಿಕದಲ್ಲಿಯೂ ಸಂಶಯಕ್ಕೆ ಕಾರಣವಾಗಿದೆಯೆಂದು ಬೇರೆ ಕೆಲವರೆಂದರು. ಇನ್ನು ಕೆಲವರು ಅಮೇರಿಯವರು ಭಾರತಕ್ಕೆ ತೆರಳಿ ಪರಿಸ್ಥಿತಿಯನ್ನು ವಿಚಾರಿಸಿ ಬರಬೇಕೆಂದರು. ಒಟ್ಟಿನಿಂದ ಭಾರತದ ವಿಷಯದಲ್ಲಿ ಅವಶ್ಯವಾಗಿ ಅಮೇರಿಯವರು ವಿಚಾರಿಸಬೇಕೆಂದು ಸರ್ವರೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಾಂಧಿಜಿಯವರ ಹೇಳಿಕೆಗಳು

ಸತ್ಯಾಗ್ರಹವು ಆರಂಭವಾದ ಮೇಲೆ ಗಾಂಧಿಜಿಯವರ ಹೇಳಿಕೆಗಳನ್ನು ಇದ್ದಕ್ಕಿದ್ದಂತೆ ಪ್ರಕಟಿಸುವ ವಿಷಯದಲ್ಲಿ ಸರಕಾರವು ಸಂಶಯದೃಷ್ಟಿಯಿಂದ ಬೀರಿದ ಬಗ್ಗೆ ಪತ್ರಿಕೆಗಳಿಗೆ ಕೊಟ್ಟ ಎಚ್ಚರದಿಂದ, ಪತ್ರಿಕಾ ಸಂಪಾದಕರು ಅಸಮಾಧಾನಪಟ್ಟ ವಿಚಾರವು ಈಗಾಗಲೇ ಪ್ರಸಿದ್ಧವಾಗಿದೆ. ಈ ವಿಷಯದಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕ ಪರಿಷತ್ತು ಹಾಗೂ ಸರಕಾರದ ಮಧ್ಯೆ ಪತ್ರವ್ಯವಹಾರ ನಡೆಯುತ್ತಿದ್ದು, ಮತ್ತೂ ಸರಕಾರದವರು ಮಹಾತ್ಮರ ಹೇಳಿಕೆಯ ವಿಷಯವಾಗಿ ಸಂಶಯ ದೃಷ್ಟಿಯನ್ನೇ ಎತ್ತಿದ ಕಾರಣ, ಪತ್ರಿಕಾ ಸಂಪಾದಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಶ್ರೀನಿವಾಸರು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಸಂಪಾದಕರು, ಗಾಂಧಿಜಿಯವರ ಹೇಳಿಕೆಗಳು ಆಕ್ಷೇಪಾರ್ಹವಿರುವವೆಂದು ಸಂಶಯಪಟ್ಟರೆ ಮಾತ್ರ ಪ್ರೆಸ್ ಸಲಹೆಗಾರರನ್ನು ಕೇಳಬಹುದು. ಇಲ್ಲವಾದರೆ ಪ್ರಕಟಣೆಯು ಆಕ್ಷೇಪಾರ್ಹವಿದೆಯೆಂದು ಸರಕಾರವು ಅಭಿಪ್ರಾಯಪಟ್ಟರೆ, ಆಗ ಸಲಹೆಗಾರ ಸಮಿತಿಯನ್ನು ವಿಚಾರಿಸಿ ಸಂಪಾದಕರಿಗೆ ಎಚ್ಚರಿಕೆ ಕೊಡಬಹುದು ಹೀಗೆಂದು ಪತ್ರಿಕಾ ಸಂಪಾದಕ ಪರಿಷತ್ತಿನವರು ಅಭಿಪ್ರಾಯಪಟ್ಟಿದ್ದಾರೆ. ಈ ಕಾಲದಲ್ಲಿ ಮಹಾತ್ಮರಂತಹ ಪ್ರಭಾವಶಾಲೀ ವ್ಯಕ್ತಿಯ ಪ್ರಕಟಣೆಗಳು ಅನಾವಶ್ಯಕ ನಿರ್ಬಂಧಿತವಾಗದಂತೆ ಸರಕಾರವು ಮಾಡಬೇಕಾಗಿ ಚಳವಳವು ನಡೆದಿತ್ತು. ಈ ಚಳವಳದಲ್ಲಿ ಆದ ಭಿನ್ನಾಭಿಪ್ರಾಯವು ಸರಿಗೂಡದೆ ಇರುವ ಕಾರಣ ಶ್ರೀನಿವಾಸನರು, ಮೇಲಿನ ಪ್ರಕಟಣೆಯನ್ನು ಹೊರಡಿಸಿ; ಪತ್ರಿಕಾ ಸಂಪಾದಕರು ಸರಿತೋರಿದರೆ, ಸಲಹೆಗಾರರನ್ನು ಕೇಳದೆ ಪ್ರಕಟಿಸುವಂತೆ ಆಗಬೇಕೆಂದೂ ಅದರ ಸಂಭವಗಳ ವಿಷಯ ಹೊಣೆಗಾರಿಕೆ ಹೊತ್ತಿರಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಸೂಚನೆಯಿಂದ ಪತ್ರಿಕಾ ಸಂಪಾದಕರಿಗೆ ಸ್ವಲ್ಪಮಟ್ಟಿಗಾದರೂ ಸ್ವಾತಂತ್ರ್ಯ ಬೇಕೆಂದಂತಾಗುವುದು. ತಮ್ಮ ಹೊಣೆಗಾರಿಕೆಯನ್ನು ಪತ್ರಿಕಾ ಸಂಪಾದಕರಾರೂ ತಿಳಿದವರಿರುವುದರಿಂದ, ಸರಕಾರದವರು ಈ ವಿಷಯದಲ್ಲಿ ಸಮ್ಮತಿಸುವುದು ಉಚಿತವೆಂದು ನಾವು ಅಭಿಪ್ರಾಯಪಡುತ್ತೇವೆ.

ಗಾಂಧಿಜಿಯವರು ಇಂದು ಅಸಮಾನ್ಯ ವ್ಯಕ್ತಿ. ಅವರ ಅಭಿಪ್ರಾಯವು ಜನತೆಗೆ ಎಷ್ಟು ಆಗ್ರಹಕಾರಿಯಾದುದೋ ಸರಕಾರಕ್ಕಾದರೂ ಅಷ್ಟು ಅಲಕ್ಷ್ಯ ಮಾಡತಕ್ಕದ್ದೇನೂ ಅಲ್ಲ. ಹೀಗಿರುವಲ್ಲಿ ಅದನ್ನು ಕೂಡಲೇ ಪ್ರಕಟಿಸುವುದರಿಂದ ಉಭಯತರಿಗೂ ಪ್ರಯೋಜನವಿದೆ. ಈ ಬಗ್ಗೆ ಸರಕಾರದವರು ಸಂಶಯ ದೃಷ್ಟಿಯಿಟ್ಟು ನಿರ್ಬಂಧಿಸುವುದರಿಂದ ಲಾಭವೇನೋ ನಮಗೆ ತಿಳಿಯದು.

NOTICE

In the Court of
The Subordinate Judge of
South Kanara.

S. C. S. No. 33 of 1941.

Between:—

Polycarp Noronha ... *Pltf.*

and

1. Juje Moras
2. Narayana Shetty, s/o Poovappa Shetty, residing in Kukkala village, Puttur Taluk. } *Defendants*

To the 2nd defendant.

Please take notice that the abovenamed Plaintiff has filed the above suit for the recovery of the sum of Rs. 671—5—1 due by you and the 1st defendant in respect of the pronote dated 15—5—'39 executed by you and the 1st defendant in favour of the late Diwan Bahadur S. L. Mathias, which pronote has been assigned in favour of plaintiff by the executors of the Will of the late Diwan Bahadur S. L. Mathias and the said suit stands posted to 15—8—1941 for your appearance and if you fail to appear on that date you will be declared exparte.

(By order of the Court)

Mangalore, 29-7-1941. } Sd. P. D'Souza, B.A., B.L. ,, L. C. Pais, B.A., B.L. Vakils for Plaintiff.

Canara Industrial & Banking Syndicate Ltd.

(Incorporated in British India, Liability of Share-holders Limited.)

STATEMENT OF AFFAIRS AS ON 30TH JUNE, 1941

LIABILITIES	Rs.	As.	Ps.	ASSETS	Rs.	As.	Ps.
Paid-up Capital	5,76,246	0	0	Cash in hand & with Bankers at call	4,58,836	2	1
Reserve Funds	2,10,000	0	0	Investments on Govt. Securities	6,10,566	6	6
Deposits	26,61,363	5	11	„ on Shares of other Banks & Companies	99,929	6	0
Due to Bankers	2,01,050	12	0	Fully Secured Advances	14,04,254	8	10
Bills for Collection	2,70,628	14	0	Other advances, Bills discounted etc.	10,01,997	2	11
Sundries	4,05,760	2	10	Landed Properties etc., Office premises Safes, Furniture & fittings	2,34,943	7	6
				Bills for Collection (per contra)	2,70,628	14	0
				Sundries	2,34,893	2	11
Total Rs.	43,25,049	2	9	Total Rs.	43,25,049	2	9

"MUKUND NIVAS" UDIPI 15th July, 1941. }

M. A. PAI
[Man]aging Director.

ವೈಸರಾಯ್-ಕೌನ್ಸಿಲ್ ವಿಸ್ತಾರವನ್ನು ಅಮೇರಿ ಸಮರ್ಥಿಸುತ್ತಾರೆ

ಜಾತೀಯ ಒಪ್ಪಂದವಾಗದೆ ಘಟನಾತ್ಮಕ ಬದಲಾವಣೆಯಿಲ್ಲ

ತತ್ಕಾಲಕ್ಕೆ ಇದು ಬಹಳ ಉತ್ಕೃಷ್ಟ ಯೋಜನೆಯಂತೆ

ಪಾರ್ಲಿಮಂಟಿನಲ್ಲಿ ಭಾರತದ ವಿಷಯ ಚರ್ಚೆಯಾಯಿತು

ಭಾರತ ಮಂತ್ರಿ ಅಮೇರಿಯವರು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಭಾರತದ ವಿಷಯ ಚರ್ಚೆಯಾದ ಸಂದರ್ಭದಲ್ಲಿ ಒಂದು ಸುದೀರ್ಘ ಭಾಷಣ ಮಾಡಿ ವೈಸರಾಯ್ ಕೌನ್ಸಿಲ್ ವಿಸ್ತರಣದ ಸಮರ್ಥನೆಗೈದು ಅದರಲ್ಲಿ ಜಾತೀಯ ಐಕ್ಯವಾಗದೆ ಘಟನಾತ್ಮಕ ಬದಲಾವಣೆ ಶಕ್ಯವಿಲ್ಲದ್ದರಿಂದ ಈಗ ಈ ತಾತ್ಕಾಲಿಕ ಯೋಜನೆ ಕೈಕೊಂಡಿದೆಯೆಂದರು ಭಾರತಕ್ಕೆ ಸಾಮಂತ ಸ್ವರಾಜ್ಯ ಹಾಗೂ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಸಮಾನತೆ ಕೊಡುವ ವಿಷಯ ಎಲ್ಲರೂ ಒಪ್ಪುವರೆಂದು ಪುನರುದ್ಧರಿಸಿದರು. ವೈಸರಾಯರು ಮಾಡಿದ ಈ ಕಾರ್ಯವು ಯಶಸ್ವಿಯಾಗಿ ಭಾರತದ ರಾಜಕೀಯ ಪ್ರಗತಿಗೆ ಸಹಾಯವಾಗುವವೆಂದೂ ಅವರು ಆಶಿಸಿದರು

ಅವರ ವಿಸ್ತಾರವಾದ ಭಾಷಣದ ಸಾರಾಂಶವು ಈ ಕೆಳಗಿನಂತಿದೆ—

ಆದರೆ ವಿಚಾರಿಸಬೇಕಾಗಿದೆ!

ಭಾರತವು ಆದಷ್ಟು ಬೇಗನೇ ಸ್ವತಂತ್ರವಾಗಬೇಕೆಂಬ ವಿಷಯ ಹಾಗೂ ಅದು ಬ್ರಿಟಿಷ್ ಕಾಮನ್‌ವೆಲ್ತಿನಲಿ ಸಮಾನತೆಯ ಅಧಿಕಾರ ಪಡೆಯಬೇಕೆಂಬ ವಿಷಯವಾಗಿ ಇಂದು ಮತಭೇದವಿಲ್ಲ ಆದರೆ ಅದನ್ನು ಜಾರಿಗೆ ತರುವ ಕುರಿತು ಮತ್ತು ನಮ್ಮ ಹೊಣೆಗಾರಿಕೆಯ ವಿಷಯದಲ್ಲಿ ವಿಚಾರಿಸಬೇಕಾಗಿದೆ

ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಂಸ್ಥಾನದ ಪ್ರಭುಗಳು ಅಂಜಿದ್ದರಿಂದ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಟ್ಟೆವು ನಾವು ಮತ್ತು ಭಾರತದ ಮುಖಂಡರು ಸಹ ಭಾರತದ ಕೇಂದ್ರ ಸರಕಾರವು ಜವಾಬ್ದಾರಿ ಪಾರ್ಲಿಮೆಂಟರಿ ಸರಕಾರದ ಕ್ರಮವನ್ನು ಅನುಸರಿಸುವುದೆಂದು ನಂಬಿದೆವು. ಆ ಭಾವನೆಯ ಮೇಲೆಯೇ ೧೯೩೫ನೆಯ ಇಸವಿಯ ಕಾಯಿದೆ ರಚಿಸಲ್ಪಟ್ಟಿತು. ಆದರೆ ಅದನ್ನು ಪ್ರಾಂತಗಳಲ್ಲಿ ಜಾರಿಗೆ ತರುವಲ್ಲಿ ಬಂದ ಅನುಭವಗಳಿಂದ ಆ ಪದ್ಧತಿಯು ಭಾರತದಲ್ಲಿ ಯಶಸ್ವಿಯಾಗುತ್ತದೋ ಎಂಬ ವಿಷಯ ಸಂದೇಹ ಹುಟ್ಟಿದೆ. ಕಾಂಗ್ರೆಸ್ ರಾಜ್ಯ ಅಥವಾ ಹಿಂದೂರಾಜ್ಯವೆಂದು ಕರೆಯಲ್ಪಡುವ ಗಂಡಾಂತರದ ವಿರುದ್ಧ ನಡೆದ ಚಳವಳ ಬಲು ದೂರ ಹೋಗಿದೆ. ಮುಸಲ್ಮಾನರು ಮುಸಲ್ಮಾನ ರಾಜ್ಯವಾಗಬೇಕೆನ್ನುತಿದ್ದಾರೆ. ಈ ಯೋಜನೆಗೆ ಅನೇಕ ಆಕ್ಷೇಪಗಳಿವೆ. ಇದರಿಂದ ಅಲ್ಪಸಂಖ್ಯಾಕರ ಸಮಸ್ಯೆ ಶಾಶ್ವತ ಪರಿಹಾರವಾಗದೆ ಸಣ್ಣ ಸಣ್ಣ ಕ್ಷೇತ್ರಗಳಿಗೆ ಹಂಚಿ ಹೋಗುತ್ತದೆ. ಇದು ನಿರಾಶಾವಾದಿಗಳ ಯೋಜನೆಯಾಗಿದೆ. ಹೀಗೆ ನಿರಾಶೆ ತೋರಿಸಲು ಕಾರಣವೇನೂ ಇಲ್ಲ ೧೯೩೫ನೆಯ ಇಸವಿಯ ಕಾಯಿದೆಯು ಪಾರ್ಲಿಮೆಂಟಿನಿಂದ ಒತ್ತಾಯದಿಂದ ಹೇರಲ್ಪಟ್ಟದ್ದೆಂದು ಭಾರತದಲ್ಲಿ ಸಾರ್ವತ್ರಿಕ ಟೀಕೆ ಬಂದುದರಿಂದ ಭಾರತೀಯ ಜೀವನದ ಸಾಮಾಜಿಕ ಆರ್ಥಿಕ ರಾಜಕೀಯ ಪರಿಸ್ಥಿತಿಯು ಭಾರತೀಯ ಕಲ್ಪನೆ ಮೇರೆಗೆ ನಿಮ್ಮ ನಿಮ್ಮಲ್ಲಿ ಪರಸ್ಪರ ಒಪ್ಪಂದ ಮಾಡಿಕೊಂಡು ಭಾರತದ ಭಾವೀ ಘಟನೆಯನ್ನು ಸಿದ್ಧ ಮಾಡಬೇಕೆಂದು ಹೇಳಲಾಗಿತ್ತು ಸದ್ಯದಲ್ಲಿ ಅಸ್ತಿತ್ವದ ಬಗ್ಗೆ ಹೋರಾಟ ನಡೆದಿರುವಾಗ ಹೊಸ ಘಟನೆಯನ್ನು ಕೂಡಲೇ ಜಾರಿಗೆ ತರುವುದಿಲ್ಲವೆಂದೂ, ಅದೇ ಕಾಲಕ್ಕೆ ಯುದ್ಧ ಮುಗಿದ ಕೂಡಲೇ ಸಮಸ್ಯೆಯನ್ನು ಬಿಡಿಸುವಂತೆ ಪ್ರಯತ್ನ ಮಾಡಲಾಗುವುದರಿಂದ ಒಪ್ಪಂದ ಮಾಡಿಕೊಳ್ಳಲು ಪ್ರತಿನಿಧಿಗಳು ಉಪಾಯ ಯೋಚಿಸಬೇಕೆಂದೂ ಈ ವಿಷಯ ನಾವು ಸಹಕಾರ ಮಾಡುವೆವೆಂದೂ ಹೇಳಲಾಯಿತು.

ಪಕ್ಷಗಳು ತಪ್ಪು ತಿಳಿದರು

ಈ ಹೊಸ ಪರಿಸ್ಥಿತಿಯಲ್ಲಿ ಸವಿನಯ ಶಾಸನಭಂಗ ಮಾಡುವದರಿಂದ ಏನೂ ಉಪಯೋಗವಿಲ್ಲವೆಂಬ ಪುಣೆಯ ಪಕ್ಷಾತೀತ ಪರಿಷತ್ತಿನ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ ಸಮಸ್ಯೆಗಳನ್ನು ಬಗೆಹರಿಸಲು ತಕ್ಕ ವಿಚಾರ ಮಾಡಲು ಪಕ್ಷಗಳಷ್ಟು ಯೋಗ್ಯರು ಬೇರೆ ಯಾರೂ ಇಲ್ಲ, ಆದರೆ ಭಾರತದಲ್ಲಿ ರಾಷ್ಟ್ರೀಯ ಜೀವನದ ಮುಖ್ಯ ಘಟನೆಗಳಲ್ಲಿ ಒಡಂಬಡಿಕೆಯಾಗಬೇಕೆಂದು ಹೇಳಿದ ವಿಷಯ ಅವರು ತಪ್ಪು ತಿಳಿದಂತಿದೆ ನಾವು ಹೇಳುವುದು ಮುಖ್ಯ ರಾಜಕೀಯ ಪಕ್ಷಗಳ ಸಂಬಂಧವಾಗಿಯೇ ಆಗಿರುವುದಿಲ್ಲ ಭಾರತದಲ್ಲಿ ರಾಜಕೀಯ ಪಕ್ಷ ಧಾರ್ಮಿಕ ಸಂಸ್ಥೆ, ಸಾಂಸ್ಕೃತಿಕ ಪಂಗಡ ಹಾಗೂ ಪ್ರಾಂತಗಳ ಭೌಗೋಳಿಕ ಹಾಗೂ ಆಡಳಿತ ಘಟನೆಗಳ ಮತ್ತೆ ಭಾರತದ ಸಂಸ್ಥಾನಗಳ ವಿಷಯವೂ ಅದರಲ್ಲಿ ಅಡಕವಾಗಿದೆ.

ಸದ್ಯದಲ್ಲಿ ಇದೇ ಚಂದ

ಸದ್ಯದ ಪರಿಸ್ಥಿತಿಯಲ್ಲಿ ವೈಸರಾಯ್ ಕೌನ್ಸಿಲಿಗಿಂತ ಹೆಚ್ಚಿನ ವ್ಯಾವಹಾರಿಕ ಯೋಜನೆ ಬೇರೆ ಇರುವುದಿಲ್ಲ ಭಾರತದ ಭಾವೀ ರಾಜ್ಯ ಘಟನೆ ಮಾಡುವ ವಿಚಾರ ಸ್ವತಃ ಭಾರತೀಯರಿಗೆ ಒಪ್ಪಿಸಿ ಭಾರತದ ಮುಖಂಡರನ್ನು ದೇಶದ ಆಡಳಿತ ವಿಚಾರ ಹೆಚ್ಚಿನ ನಿಕಟ ಹಾಗೂ ಜವಾಬುದಾರೀತನದಿಂದ ಸೇರಿಸಿಕೊಳ್ಳಲು ಈ ತಾತ್ಕಾಲಿಕ ಯೋಜನೆ ಮಾಡಲಾಗಿದೆ. ಇದರಲ್ಲಿ ಭಾರತದ ಸದಸ್ಯರ ಬಹುಮತವಿರುವಂತೆ ನೋಡಿಕೊಳ್ಳಲಾಯಿತು ಇದಲ್ಲದೆ ಯುದ್ಧ ಪ್ರಯತ್ನದ ಸಲುವಾಗಿ ಯುದ್ಧ ಸಲಹೆಗಾರ ಮಂಡಳವೂ ಏರ್ಪಡಿಸಲಾಯಿತು. ಈ ವಿಷಯದಲ್ಲಿ ವೈಸರಾಯರು ಸಹಜವಾಗಿ ದೇಶದ ಪ್ರಬಲ ರಾಜಕೀಯ ಪಕ್ಷಗಳ ಸಹಕಾರ ಹಾರೈಸಿದರು. ಆದರೆ ಅದು ಸಫಲವಾಗಲಿಲ್ಲ

ಕಾಂಗ್ರೆಸು ಈ ವಿಷಯ ಚರ್ಚೆ ಮಾಡಲು ನಿರಾಕರಿಸಿದ್ದು ಮಾತ್ರವಲ್ಲದೆ ಯುದ್ಧ ವಿರೋಧ ಭಾಷಣ ಮಾಡುವ ಆಂದೋಲನ ಆರಂಭಿಸಿ ಸೆರೆಮನೆಗೆ ಹೋಗುವ ನಿರರ್ಥಕ ಚಳವಳವನ್ನು ಎಬ್ಬಿಸಿದೆ ಉಳಿದ ಹಿಂದೂ ಮುಸಲ್ಮಾನ ಪಕ್ಷಗಳು ನಮ್ಮ ತತ್ವಕ್ಕೊಪ್ಪಿದರೂ ಪರಸ್ಪರ ವಿರುದ್ಧ ಹಾಗೂ ಮತ್ತೈಕ್ಯವಾಗದ ಹಕ್ಕುಬಾಧ್ಯತೆಗಳನ್ನು ಮುಂದಿಟ್ಟವು ದೇಶದ ಜನರಲ್ಲಿ ಒಂದು ಬಗೆಯ ಅಸಂತುಷ್ಟಿಯಿದ್ದುದರಿಂದ, ಸರಕಾರದೊಡನೆ ಸಹಕರಿಸಿ ಈ ಗಂಡಾಂತರ ಕಾಲದಲ್ಲಿ ದೇಶಸೇವೆ ಮಾಡಲು ಮುಂದೆ ಬಂದ ಮಹನೀಯರಿಂದ ಈ ಕಾರ್ಯ ಮಾಡಲು ವೈಸರಾಯರು ನಿಶ್ಚಯಿಸಿದರು

ಯೋಗ್ಯರು ಯಾರು?

ಭಾರತವು ಈಗ ಯುದ್ಧದಲ್ಲಿ ತೊಡಗಿದೆ ಕೆಲವೇ ತಿಂಗಳುಗಳಲ್ಲಿ ಭಾರತದ ಪೂರ್ವ ಪಶ್ಚಿಮಗಳಲ್ಲಿ ಗಂಡಾಂತರ ಒದಗಬಹುದು. ಆದ್ದರಿಂದ ವೈಸರಾಯರ ಕೌನ್ಸಿಲ್ ವಿಸ್ತರಣೆ ಹಾಗೂ ಯುದ್ಧ ಮಂಡಳದ ರಚನೆ ಅವಶ್ಯವಾಗಿತ್ತು. ಆರ್ಥಿಕ ಮತ್ತು ಸಂರಕ್ಷಕ ಖಾತೆಗಳು ಭಾರತೀಯರಿಗೆ ಒಪ್ಪಿಸಲಿಲ್ಲವೆಂಬ ವಿಷಯ ಟೀಕೆ ಬಂದಿದೆ ಆದರೆ ಅದು ಎಷ್ಟು ಮಹತ್ವದ್ದೆಂದು ವಿಚಾರಿಸಿ ಅದಕ್ಕೆ ಯೋಗ್ಯರಿರುವವರಿಗೇ ವೈಸರಾಯರು ಅದನ್ನು ಕೊಟ್ಟಿರುವರು ಈಗಿನ ಕೌನ್ಸಿಲಿನಲ್ಲಿ ಹಾಗೂ ರಾಷ್ಟ್ರೀಯ ಸಂರಕ್ಷಕ ಸಮಿತಿಗಳಲ್ಲಿ ಭಾರತೀಯ ಸದಸ್ಯರಿಗೆ ಬಹುಮತವಿದೆ. ಇವರಿಗಿಂತ ಹೆಚ್ಚು ಯೋಗ್ಯತೆಯವರನ್ನು ಹುಡುಕಿ ತರುವುದು ಬಹಳ ಕಠಿಣವಿದೆ.

ಕಾಂಗ್ರೆಸು ತನ್ನ ಸದ್ಯದ ಧೋರಣೆಯಿಂದ ಇದರಲ್ಲಿ ಸಹಕರಿಸದಿದ್ದರೂ ಇದರಲ್ಲಿರುವ ಬಹಳ ಜನ ಸದಸ್ಯರು ಹಿಂದೆ ಕಾಂಗ್ರೆಸಿನಲ್ಲಿದ್ದವರು.

ಆದರೆ ಇಷ್ಟೆಲ್ಲಾ ಯೋಜನೆಗಳನ್ನು ಕೈಕೊಂಡಿದ್ದರೂ ಸದ್ಯದ ಘಟನೆಯಲ್ಲಿ ಬದಲಾವಣೆ ಮಾಡಲಾಗುವುದಿಲ್ಲ. ಯಾವುದೇ ಸುಧಾರಣೆಯನ್ನು ಮುಂದಿರಿಸಿದರೆ, ಭಾರತದ ಭಿನ್ನಪಕ್ಷಗಳ ಸಮಾಧಾನಪಡಿಸಲು ಸದ್ಯದ ಗಂಡಾಂತರ ಕಾಲದಲ್ಲಿ ಸಾಧ್ಯವಿಲ್ಲ

ಕಾಂಗ್ರೆಸಿನ ಮೇಲೆ ಉರಿ

ಕಾಂಗ್ರೆಸಿನ ಬಗ್ಗೆ ನಾನು ಅಸಮಂಜಸವಾದ ರೀತಿಯಲ್ಲಿ ಸ್ವಲ್ಪ ದಯಾರಹಿತ ದೃಷ್ಟಿಯಲ್ಲಿ ಮಾತನಾಡಿದೆನೆಂದು ಸೂಚಿಸಲಾಗಿದೆ ಆದರೆ ಅದು ನನ್ನ ಉದ್ದೇಶವಿರಲಿಲ್ಲ ಕಾಂಗ್ರೆಸು ಇದುವರೆಗೆ ಸಾಧಿಸಿದ ರಾಷ್ಟ್ರೀಯ ಜಾಗೃತಿಯನ್ನು ನಾನು ಬಲ್ಲೆ ಇದುವರೆಗೆ ಅದು ಪಾಲಿಸಿದ ಆದರ್ಶದ ಬಗೆ ನನ್ನ ಸಮ್ಮತಿಯಿದೆ ಆ ಬಗ್ಗೆ ನಾನು ಕಾಂಗ್ರೆಸನ್ನು ಟೀಕಿಸಿಲ್ಲ. ಆದರೆ ಹೊಸ ಘಟನೆಯಂತೆ ಆಡಳಿತೆ ಸಾಗಿಸಲು ಕಾಂಗ್ರೆಸು ಸಮ್ಮತಿಸಿದ್ದರೆ ಭಾರತವು ಒಳ್ಳೆಯ ಪ್ರಗತಿ ಹೊಂದುತ್ತಿತ್ತು ಕಾಂಗ್ರೆಸಿಗೂ ಪ್ರಹಸ್ತ ದೊರಕುತಿತ್ತು ಅದು ಮುಂದಾದರೂ ದೊರಕುವುದು ಶಕ್ಯವಿದೆ ನಾವು ಯುದ್ಧ ಸಾರುವಾಗ ಪ್ರಜಾಪ್ರತಿನಿಧಿಗಳೊಡನೆ ಕೇಳಲಿಲ್ಲವಂತೆ ಆ ಸದಸ್ಯರು ಹಾಜರಿರಲಿಲ್ಲವಾಗಿ ಹಾಗೂ ಹಾಜರಿದ್ದವರೂ ಭಾರತವು ಸಮರಸಕ್ತ ರಾಷ್ಟ್ರವಲ್ಲವೆಂದು ಸಮ್ಮತಿ ವ್ಯಕ್ತಪಡಿಸಿದ್ದರಿಂದ ಹಾಗೆ ಮಾಡಲಾಯಿತು. ಈ ಸಮಯದಲ್ಲಿ ವೈಸರಾಯರು ಸಾಧ್ಯವಾದಷ್ಟು ಯತ್ನಮಾಡಿ ಮುಖಂಡರ ಭೇಟಿಯಾದರ ಗಾಂಧಿಯವರು ಮೊದಲು ಯುದ್ಧಕ್ಕೆ ಬೆಂಬಲ ಕೊಡಲು ಒಪ್ಪಿದರು ಬಳಿಕ ವರ್ಕಿಂಗ್ ಕಮಿಟಿ ಬುದ್ಧಿವಂತರು (ನಾನು ಹಾಗೆನಿಸುವುದಿಲ್ಲ) ಅದನ್ನು ವಿರೋಧಿಸಿದರು ಈ ಧೋರಣೆಯಿಂದ ಭಾರತದ ಬಹುಭಾಗಕ್ಕೆ ಸ್ವಾಯತ್ತತೆ ತಪ್ಪಿಹೋಯಿತು ಮುಖಂಡರನ್ನು ನಾವು ಸೆರೆಮನೆಗಳಿಗೆ ಕಳುಹಿಸಬೇಕಾಯಿತು. ಯುದ್ಧ ಕಾಲದಲ್ಲಂತೂ ಆ ರೀತಿ ಮಾಡಲು ಯಾರೂ ಬಿಡಲಾರರು

ರೈಲುಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9 25 ರಾತ್ರಿ
ನೀಲೇಶ್ವರದವರೆಗೆ	7 32 ಬೆಳಿಗ್ಗೆ	10 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಿಗ್ಗೆ	5 15 ಸಾಯಂ.
ಜಾಲಹಳ್ಳಿ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ	6.50 ಸಾಯಂ.
ಕಣ್ಣನ್ನೂರು ವರೆಗೆ	5.52 ಸಾಯಂ	9.40 ರಾತ್ರಿ

ಶೀನುವಿಗೆ ಕುದುರೆ ರೇಸಿನಲ್ಲಿ ೧೦ ಸಾವಿರ ರೂಪಾಯಿಗಳು ಸಿಕ್ಕಿದೊಡನೆ ಅವನು ಶ್ರೀಮಾನ್ ಶ್ರೀನಿವಾಸ ರಾಯನಾದನು. ಮೊದಲೇ ಆತನು ಮಹಾ ವಿಲಾಸಿ. ಅಷ್ಟು ಹಣದ ರಾಶಿ ಸಿಕ್ಕಿದ ಮೇಲೆ ಕೇಳಬೇಕೆ? ಅವನ ತಾಯಿಯು ಅಷ್ಟು ದೊಡ್ಡ ಧನರಾಶಿ ಸಿಕ್ಕಿದುದಕ್ಕಾಗಿ "ನೀನು ಅದೃಷ್ಟಶಾಲಿ ಶೀನೂ, ಏನೋ ನಿನ್ನ ಪೂರ್ವ ಪುಣ್ಯವು ಉತ್ತಮವಿತ್ತು" ಎಂದು ಅವನನ್ನು ಹೊಗಳಿದಳು. ಶೀನುವು ಸಿಟ್ಟಿನಿಂದ "ಹಣವಿದ್ದರೆ ಮಾತ್ರ ಎಲ್ಲರೂ ಹತ್ತಿರ ಬರುತ್ತಾರೆ. ಚಂದಚಂದವಾದ, ಬಣ್ಣಬಣ್ಣದ ಸಕ್ಕರೆಯಷ್ಟು ಸವಿಯಾದ ಮಾತನ್ನಾಡುತ್ತಾರೆ. ನಾನು ಕೆಲಸವಿಲ್ಲದೆ ಅಲೆಯುತ್ತಿರುವಾಗ ನನ್ನನ್ನು ಬೈಯುತ್ತಿದ್ದವಳಿಗೆ ಈಗ ಮಾತ್ರ ನನ್ನ ಮೇಲೆ ಪ್ರೀತಿಯುಂಟಾಯಿತೇ? ಎಂದು ಎದುರುತ್ತರವಿತ್ತನು.

ಶೀನನ ತಾಯಿಯು ಮಾತಾಡಲಿಲ್ಲ. ತನ್ನ ಮಗನು ಎಂಥವನೆಂದು ಅವಳಿಗೆ ಗೊತ್ತಿತ್ತು. ಆದರೆ ಅಲ್ಲೇ ಇದ್ದ ಅವನ ತಂದೆಯು "ಸಾಕುಮಾಡೋ, ನಿನ್ನ ಬಡಾಯಿಯನ್ನು! ನೀನೊಬ್ಬ ದೊಡ್ಡ ಸಾಹುಕಾರನಾಗಿ ಹೋದಿ" ಎಂದನು. ತಂದೆಯ ಈ ಮಾತುಗಳಿಂದ ಶೀನುವು ಸಂತಪ್ತನಾದನು. ಶ್ರೀಮಂತನಾದ ತನ್ನನ್ನು ತಂದೆಯು ಹಿಂದಿನಂತೆ ಗದರಿಸುವುದನ್ನು ಕಂಡು ಆ ತಾಪದ ಭರದಲ್ಲೂ ಅವನಿಗೆ ಕೌತುಕವೆನಿಸಿತು. ತಂದೆಯನ್ನು ತಲೆ ತಗ್ಗಿಸುವಂತೆ ಮಾಡುವೆನೆಂಬ ದರ್ಪದಿಂದ ಶೀನುವು "ನಿಮಗೆ ನನ್ನಿಂದ ತೊಂದರೆಯೇ ಆಗಕೂಡದೆಂದು ನಾನು ಊರನ್ನು ಬಿಡುವ ಆಲೋಚನೆ ಮಾಡಿದ್ದೇನೆ" ಎಂದನು.

"ಏನು? ಯಾವ ಊರನ್ನು ಸೇರಬೇಕೆಂದಿರುವೆ ಶೀನು? ಇಲ್ಲಿ ನಿನಗೇನು ಕಡಿಮೆಯಾಗಿದೆ?"

"ಇಲ್ಲೇನೂ ಕಡಿಮೆಯಾಗಿರುವುದಿಲ್ಲ ನಿಜ. ಆದರೆ ಈ ಹಾಳು ಕೊಂಪೆಯಲ್ಲಿ ಜೀವಿಸಿರಲು ಯಾರಿಗೆ ಸಾಧ್ಯವಿದೆ. ಆದುದರಿಂದ ಬೆಂಗಳೂರಿನಲ್ಲಿ ನಿಲ್ಲುವುದೆಂದು ನಿಶ್ಚಯಿಸಿದ್ದೇನೆ."

ಈ ಮಾತುಗಳು ಅವನ ತಾಯಿಯ ಕರುಳನ್ನು ಚುಚ್ಚಿದುವು. ಅವಳು ಅಳುತ್ತ "ಮಗೂ, ನಮ್ಮನ್ನು ಬಿಟ್ಟು ಹೋಗುತ್ತೀಯಾ? ನೀನು ಹೋದರೆ ನಮ್ಮ ಮನೆಯು ಬರಿದಾದಂತೆಯೇ?" ಎಂದಳು. ಶೀನುವು ಅವಳನ್ನು ಅಣಕಿಸಿದನು. "ನಿನ್ನ ಮೊಸಳೆ ಕಣ್ಣೀರಿನ ಪರಿಚಯವು ನನಗೆ ಚೆನ್ನಾಗಿದೆ. ಅಳುವುದನ್ನು ಸಾಕು ಮಾಡು. ಅಲ್ಲದಿದ್ದರೆ ಈ ಮೊದಲು ನನಗಾಗಿ ನೀನು ಒಮ್ಮೆಯಾದರೂ ಅತ್ತಿದ್ದಿಯೇ? ಹಾಗೆಲ್ಲ ನಿಮ್ಮ ಬಲೆಯಲ್ಲಿ ಬೀಳುವಷ್ಟು ಹೆಡ್ಡನಾಗಿದ್ದರೆ ಕುದುರೆ ಜೂಜಿನಲ್ಲಿ ೧೦,೦೦೦ ರೂಪಾಯಿಗಳನ್ನು ಹೊಡೆಯುತ್ತಿದ್ದೆನೇ?"

ವಾರದ ಕತೆ:

ಅವನು ಕ್ಷಮಾರ್ಹನೇ?

ಕತೆಗಾರ: ಶ್ರೀ. ಎಚ್. ವಿಟ್ಠಲ್ ಶೆಟ್ಟಿ, ಮಂಗಳೂರು.

"ನಿನ್ನ ಹಣವು ನಮಗೆ ಬೇಡ ಮಗೂ, ಆದರೆ ನೀನು ಮಾತ್ರ ಊರು ಬಿಡಬೇಡ."

"ಒಳ್ಳೆಯ ಹಿತವಾದ. ಏನು? ಬರೀ ಹತ್ತು ಸಾವಿರದಿಂದಲೇ ನಾನು ತೃಪ್ತನಾಗಿದ್ದೇನೆಂದು ಭಾವಿಸಿದೆಯಾ ಅಪ್ಪಾ? ಈ ಕುದುರೆ ಜೂಜಿನಿಂದ ನಾನು ಕೋಟ್ಯಾಧೀಶ್ವರನಾಗಬೇಕೆಂದಿದ್ದೇನೆ. ಈ ಹಾಳು ರಣ್ಯದಲ್ಲಿದ್ದರೆ ಅದೆಲ್ಲ ಹೇಗೆ ಸಾಧ್ಯ?"

ಅವನ ತಂದೆಯು ಅವನ ಮಾತುಗಳಿಗೆ ಉತ್ತರವೀಯದೆ ನಿಟ್ಟುಸಿರು ಬಿಟ್ಟು ಒಳಗೆ ನಡೆದನು.

★ ★ ★

ಹಾಗೂ ವಿಲಾಸಿಯಾದ ಶೀನುವು ಬೆಂಗಳೂರಿಗೆ ಪ್ರಯಾಣ ಮಾಡಿದನು. ಅಲ್ಲಿ ದೊಡ್ಡದೊಂದು ಬಂಗಲೆಯನ್ನು ಬಾಡಿಗೆಗೆ ಪಡೆದು ಇಬ್ಬರು ನೌಕರರನ್ನು ಕೆಲಸಕ್ಕಿಟ್ಟನು. ಶೀನುವಿಗೆ ಕುದುರೆ ಜೂಜಿನ ಹುಚ್ಚು ಬಹಳವೆಂದು ಈ ಮೊದಲೇ ಹೇಳಿದೆ. ಕುದುರೆ ಜೂಜು ರಣಪಂಡಿತರನೇಕರು ಇದನ್ನರಿತು ಇವನ ಸ್ನೇಹವನ್ನು ಸಂಪಾದಿಸಿದರು. ಕ್ರಮೇಣ ಆ ಮಿತ್ರರ ಸಂಖ್ಯೆ ಬೆಳೆಯಿತು. ಅವರೆಲ್ಲ ದಿವಸ ದಿವಸಗಳನ್ನೇ ಶೀನುವಿನ ಬಂಗಲೆಯಲ್ಲಿ ಕಳೆದುದುಂಟು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಶೀನುವಿನ ಬಂಗಲೆಯು ಸಾರ್ವಜನಿಕ ವಿನೋದ ಭವನವಾಯಿತೆನ್ನಬಹುದು. ಆ ಭವನದಲ್ಲಿ ಇಲ್ಲದ ವಿನೋದಗಳಿಲ್ಲ. ಇಸ್ಪೀಟಂತೂ ಪ್ರಧಾನವಾದ ಕ್ರೀಡೆಯಾಗಿತ್ತು. ಅದಲ್ಲದೆ ಯಾವ ಕ್ಲಬ್ಬುಗಳೂ ಬದುಕಲಾರವೆನ್ನಬಹುದು. ಅಂದ ಮೇಲೆ ಶೀನುವಿನ ಭವನದಲ್ಲಿ ಅದಿಲ್ಲದೆ ಸಾಧ್ಯವೇ? ಅವನ ಜೀವದ ಗೆಳೆಯನಾದ ರಾಮಮೂರ್ತಿಯು ಇತ್ತ ಮಹಾ ಇಸ್ಪೀಟ್ ಪ್ರವೀಣ, ಅತ್ತ ಕುದುರೆ ಜೂಜು ರಣರಂಗದ ಸಮರಪಂಡಿತ. ಈ ವೈಶಿಷ್ಟ್ಯದಿಂದಲೇ ಅವನು ಶೀನುವಿನ ಕಾರ್ಯದರ್ಶಿಯ ಸ್ಥಾನವನ್ನಾಕ್ರಮಿಸಿದನು!

ಶೀನುವಿನ ಮಿತ್ರರು ಹರಟೆಯಲ್ಲಿ ನಿಪುಣರು. ನಾನಾ ಊರುಗಳ ಜೂಜುಗಳ ಕುರಿತು ಹರಟೆಹೊಡೆಯುವರು. ಅವನ ಭವನದಲ್ಲಿ ಸಂಜೆಯ ಚಹಾ ತೀರಿಸಿ ಅವನೊಂದಿಗೆ ವಿಹಾರಕ್ಕೆ ಹೊರಡುವರು. ಶನಿವಾರ ಕಬ್ಬನ್ ಪಾರ್ಕಿಗೆ ಬೇಂಡು ಕೇಳಲು ಹೋಗುವರಾದರೆ, ರವಿವಾರ ಲಾಲ್‌ಬಾಗಿಗೆ ಹೋಗುವರು. ಮತ್ತೊಂದು ದಿನ ಸಿನೇಮಾಕ್ಕೋ, ಸಂಗೀತ ಕಛೇರಿಗೋ ಹೋಗುವರು. ಮೋಟರ್ ಕಾರಿನಲ್ಲಿ ಸುತ್ತಾಡುವರು. ಅಂತೂ ಶೀನುವಿಗೆ ಸ್ವರ್ಗವೇ ಸ್ವರ್ಗ.

ಅಂತೂ ಜೂನ್ ತಿಂಗಳು ಬಂತು. ಬೆಂಗಳೂರಿನ ಕುದುರೆ ಜೂಜಿನ ಕಾಲವಿದು. ಶೀನುವಿಗಂತೂ ಎಲ್ಲಿಲ್ಲದ ಆನಂದ ಅವನ ಸಲಹೆಗಾರರೆಲ್ಲ ನಾನಾ ಸಲಹೆಗಳನ್ನಿತ್ತರು. 'ರ್‍ಯಾಜಿಂಗ್ ಮೂನ್' ಗೆಲ್ಲುವುದೆಂದು ಕೆಲವರು, 'ಗೋಲ್ಡನ್ ಕಿಂಗ್' ಎಂದು ಕೆಲವರು, 'ಪ್ರಥ್ವಿಸಿಂಹ್' ಎಂದು ಬೇರೆ ಕೆಲವರು. ಹೀಗೆ ನಾನಾ ವಿಧದ ಸೂಚನೆಗಳನ್ನಿತ್ತರು.

ಇಂದು ಕುದುರೆ ಜೂಜಿನ ಮೊದಲನೆಯ ದಿನ. ಶೀನುವು ತನ್ನ ಮಿತ್ರಮಂಡಳಿಯೊಂದಿಗೆ ಮೊದಲೇ ಹೋಗಿ ಕಳದಲ್ಲಿ ವಿರಾಜಮಾನನಾಗಿದ್ದಾನೆ. 'ಪ್ರಥ್ವಿಸಿಂಹ'ದ ಮೇಲೆ ಅವನು ಐದು ನೂರು ರೂಪಾಯಿಗಳನ್ನು ಹೇರಿದ್ದಾನೆ. ಅದು ಮೊದಲು ಬಂದದ್ದೇ ಆದರೆ ಒಂಭತ್ತು ಪಾಲು ಹಣವನ್ನು ಅದು ಹೊತ್ತುಕೊಂಡು ಬರುವುದು. ಇಲ್ಲವಾದರೆ ಶೂನ್ಯ!

ಕುದುರೆಗಳನ್ನು ಕಳಕ್ಕೆ ತಂದರು. ಎಲ್ಲವೂ ಗಾತ್ರ, ಬಣ್ಣಗಳಲ್ಲಿ ಹೆಚ್ಚು ಕಡಿಮೆ ಒಂದೇಯಾಗಿದ್ದುವು. ಸವಾರರ ವಿವಿಧ ಬಣ್ಣದ ಉಡಿಗೆಗಳಿಂದ ಮಾತ್ರ ಆ ಕುದುರೆಗಳನ್ನು ಗುರುತಿಸಬಹುದಿತ್ತು. ರಾಮಮೂರ್ತಿಯು ನೀಲಿ ಬಣ್ಣದ ಬನಿಯನನ್ನು ಧರಿಸಿರುವ ಸವಾರನನ್ನು ಶೀನುವಿಗೆ ತೋರಿಸಿ "ಆ ನೀಲಿ ಬಣ್ಣದವನನ್ನು ನೋಡುತ್ತೀರು. ಅವನು ಏರುವುದೇ ಪ್ರಥ್ವಿಸಿಂಹ" ಎಂದನು.

ಕುದುರೆಗಳ ಓಟಕ್ಕೆ ಪ್ರಾರಂಭವಾಯಿತು. ಶೀನುವಿನ ಎದೆಯು ಡವಗುಟ್ಟುವುದಕ್ಕೆ ಆರಂಭಿಸಿತು. ಅವನು ತದೇಕದೃಷ್ಟಿಯಿಂದ ನೀಲಿ ಸವಾರನನ್ನು ನೋಡುತ್ತಿದ್ದನು. ಶೀನುವಿನ ವಿಧಿಯು ಇಂದು ಹೀಗಾಗಬೇಕೆ? ಯಾವಾಗಲೂ ಬಿರುಗಾಳಿಯನ್ನನುಸರಿಸಿ ಧಾವಿಸುವ ಆ ಚಪಲಾಶ್ವವು ಒಂದು ಅಶ್ವವನ್ನೂ ಹಿಂದೆ ಹಾಕದಿರಬೇಕೆ? ಅಂತು 'ಹರಿಕೇನ್' ಎಂಬ ಕುದುರೆಯು ಮೊದಲನೆಯ ಬಹುಮಾನವನ್ನು ಗೆದ್ದಿತು. ಶೀನುವಿನ ಮುಖವು ಬಾಡಿ ನಿಸ್ತೇಜವಾಯಿತು. ಪ್ರಥ್ವಿಸಿಂಹಕ್ಕೆ ಹಣಕಟ್ಟಬೇಕೆಂದು ಸೂಚಿಸಿದ ರಾಮಮೂರ್ತಿಯು "ದೈವೇಚ್ಛೆ ಬೇರೆಯಾಗಿತ್ತು. ಆದುದರಿಂದ ನಾವು ಗೆಲ್ಲಲಿಲ್ಲ" ಎಂದು ತನ್ನ ಜವಾಬ್ದಾರಿಕೆಯನ್ನು ಪರಮಾತ್ಮನ ಮೇಲೆ ಹೊರಿಸಿದನು. 'ಹರಿಕೇನ್' ಗೆಲ್ಲುವುದೆಂಬ ಸಲಹೆಯನ್ನಿತ್ತ ಮಹಾರಾಯನು 'ನಾನು ನಿಮಗೆ ಮೊದಲೇ ಹೇಳಿಲ್ಲವೇ? ಹರಿಕೇನ್ ಮೊದಲು ಬಂದೇ ತೀರುವುದೆಂದು' ಎಂದು ಹುಸಿ ಕೋಪವನ್ನು ನಟಿಸಿದನು. ಹೀಗೂ ಶೀನುವಿನ ೫೦೦ ರೂಪಾಯಿಗಳು ಕೆಲವು ತಾಸುಗಳೊಳಗೆ ನೀರಾದುವು.

ಹೀಗೆ ಕುದುರೆ ರೇಸಿನ ಸೀಜನು ಮುಗಿಯುವ ಹೊತ್ತಿಗೆ ಸುಮಾರು ೫೦,೦೦೦ ರೂಪಾಯಿಗಳು ಶೀನುವಿನ ಕಿಸೆಯಿಂದ ಹೊರಗಾದುವು. ಒಂದೇ ವರ್ಷದಲ್ಲಿ ತನ್ನಲ್ಲಿದ್ದ ಹಣದ ಅರ್ಧಾಂಶವನ್ನು ಕಳೆದ ಶೀನುವು ಯೋಚನಾಕ್ರಾಂತನಾದನು. ಬರುವ ವರ್ಷವಾದರೂ ಹೋದ ಹಣವನ್ನು ಗಳಿಸುವೆನೆಂಬ ವಿಶ್ವಾಸವು ಅವನಲ್ಲಿತ್ತು.

ಶೀನು ಬೆಂಗಳೂರಿನಲ್ಲಿ ವಿಲಾಸದಿಂದ ಕಾಲವನ್ನು ಕಳೆಯುವಾಗ ಇತ್ತ ಅವನ ಹುಟ್ಟೂರಲ್ಲಿ ಅವನ ತಂದೆತಾಯಿಗಳು ಹೊಟ್ಟೆಗಿಲ್ಲದೆ ಪೇಚಾಡುತ್ತಿದ್ದರು. ಸಾಲದಲ್ಲಿ ಮುಳುಗಿದ್ದರೆನ್ನಬಹುದು. ಶೀನುವು ತನ್ನ ಮಿತ್ರರಿಗಾಗಿ ವೆಚ್ಚಮಾಡಿದ ಹಣದ ಹತ್ತನೇ ಒಂದು ಪಾಲನ್ನು ತನ್ನ ಮನೆಗೆ ಕಳುಹಿಸದುದೇ ಆಗಿದ್ದರೆ ಅವರು ದಿನಕ್ಕೆ ಮೂರು ಊಟಗಳನ್ನಾದರೂ ಮಾಡುತ್ತಿದ್ದರು. ಈ ಯೋಚನೆಯು ಶೀನುವಿನ ಮನಸ್ಸಿನಲ್ಲಿ ಸುಳಿದು ಅವನಲ್ಲಿ ಜ್ಞಾನೋದಯವಾಗಿದ್ದುದಾದರೆ ಅವನು ನಿಶ್ಚಯವಾಗಿಯೂ ಪಶ್ಚಾತ್ತಾಪಪಡುತ್ತಿದ್ದನು. ಇನ್ನೂ ಅವನಲ್ಲಿ ಹಣ ಯಥೇಷ್ಟವಾಗಿರುವಾಗ ಅವನಿಗೆ ಮನೆಯ ನೆನಪಾದರೂ ಹೇಗಾಗಬೇಕು?

★ ★ ★

ಕುದುರೆ ಜೂಜು ಮುಗಿದ ಕೆಲವು ದಿವಗಳಲ್ಲೇ ಶೀನುವಿಗೆ ಸುಂದರವಾದ ಆ ನಗರವು ನೀರಸವಾಗಿ ತೋರಿತು. ಅದಕ್ಕೆ ಕುದುರೆ ಜೂಜಿನ ಅಭಾವವೇ ಕಾರಣ. ಅವನ ಅಸಹನೀಯ ವ್ಯಥೆಯನ್ನು ಹೋಗಲಾಡಿಸಲು ಅವನ ಮಿತ್ರ ರಾಮಮೂರ್ತಿಯು ಮುಂದಾದನು. "ಕುದುರೆ ಜೂಜಿಗೆ ಬೊಂಬಾಯಿ ಹೆಸರಾಗಿದೆ. ಅಲ್ಲಿಗೆ ನಾವು ಹೋದರೆ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಬಹುದು" ಎಂದು ಸಲಹೆ ಕೊಟ್ಟನು. ರಾಮಮೂರ್ತಿಯೇನು ಸಾಮಾನ್ಯನೇ? ಶೀನುವು ರಾಮಮೂರ್ತಿಯನ್ನು ಸಂಗಡ ಕರೆದು ಬೊಂಬಾಯಿಯನ್ನು ಸೇರಿದನು. ರಾಮಮೂರ್ತಿಯು ಬೆಂಗಳೂರನ್ನೂ ಅಲ್ಲಿಯ ಕುದುರೆ ಜೂಜನ್ನೂ ತುಚ್ಛೀಕರಿಸಿ, ಬೊಂಬಾಯಿಯ ಮಹತ್ವವನ್ನೂ, ಅಲ್ಲಿಯ ಕುದುರೆ ಜೂಜಿನ ವೈಶಿಷ್ಟ್ಯವನ್ನೂ ತಾನು ಅದುವರೆಗೆ ಬೊಂಬಾಯಿಯನ್ನು ನೋಡದಿದ್ದರೂ ನೋಡಿದವನಂತೆ ವಿವರಿಸುತ್ತಿದ್ದನು.

ಅಂತೂ ಕುದುರೆ ಜೂಜಿಗೇನೋ ಹಣ ಕಟ್ಟಿದರು. ಆದರೆ ದೈವಕ್ಕೆ ಶೀನುವಿನ ವಿಜಯದಲ್ಲಿ ಮನಸ್ಸಿರಲಿಲ್ಲ. ಹಣವನ್ನು ಸದ್ವಿನಿಯೋಗಗೊಳಿಸಲು ಆತನು ಅಸಮರ್ಥನೆಂದು ವಿಧಿಯ ಭಾವನೆಯೊ? ಇರಬಹುದು.

ಆರೇ ಆರು ತಿಂಗಳಲ್ಲಿ ಸಾವಿರಾರು ರೂಪಾಯಿಗಳನ್ನು ಕಳೆದು ಶೀನುವು ಬರಿದಾಗಬೇಕಾಯಿತು. ಆ ನಡುವೆ ಅವನ ಜೀವನ್ಮಿತ್ರ ರಾಮಮೂರ್ತಿಯೂ ಕಾಣೆ

[12ನೆಯ ಪುಟವನ್ನು ನೋಡಿ]

ಜಿಲ್ಲಾ ಸಮಾಚಾರಗಳು

ಶ್ರೀ. ಕೆ. ವೆಂಕಟೇಶ ಪ್ರಭುಗಳು ಎರಡನೆಯ ಸಲ ಬಂಧಿತರಾದರು

ಕಾರ್ಕಳದ ಶ್ರೀ. ವೆಂಕಟೇಶ ಪ್ರಭುಗಳು ಎರಡನೆಯ ಸಲ ಸತ್ಯಾಗ್ರಹ ಮಾಡಿ ಬೈಂದೂರಲ್ಲಿ ಬಂಧಿತರಾಗಿ ವಿಚಾರಣೆ ನಡೆದು ಏಳು ತಿಂಗಳ ಕಠಿನ ಶಿಕ್ಷೆ ೫೦ ರೂಪಾಯಿ ಜುಲ್ಮಾನೆಯಾಗಿ ಅಲಿಪುರಂ ಜೈಲಿಗೆ ಕಳುಹಿಸಲ್ಪಟ್ಟಿರುವರು. 'ಎ' ತರಗತಿ ಕೊಡಲಾಗಿದೆ.

ಶ್ರೀಯುತರಾದ ಯು. ಎಸ್. ಮಲ್ಯ ಮತ್ತು ವೆಂಕಟ್ರಾಯ ಬಾಳಿಗರ ಬಿಡುಗಡೆ

ಶ್ರೀ. ವೆಂಕಟ್ರಾಯ ಬಾಳಿಗಾ, ಎಂ. ಎಲ್. ಎ. ಇವರೂ, ಎ. ಐ. ಸಿ. ಸಿ. ಸದಸ್ಯರಾದ ಶ್ರೀ ಯು. ಎಸ್. ಮಲ್ಯರೂ ತಾ. ೩ರಂದು ತ್ರಿಚಿನಾಪಳ್ಳಿ ಜೈಲಿನಿಂದ ತಮ್ಮ ಸತ್ಯಾಗ್ರಹ ಶಿಕ್ಷೆಯ ಅವಧಿಯನ್ನು ಪೂರೈಸಿ ಬಿಡುಗಡೆ ಹೊಂದಿದವರು ತಾ. ೫ರಂದು ಸಂಜೆ ಮೈಲ್ ಬಂಡಿಯಲ್ಲಿ ಮಂಗಳೂರಿಗೆ ಬಂದು ತಲಪಿದರು.

ಅವರಿಗೆ ಅನೇಕರು ಹೂಮಾಲೆಗಳನ್ನು ಹಾಕಿ ಸತ್ಕರಿಸಿದರು. ಸಂಜೆ ೬॥ ಗಂಟೆಗೆ ಮೈದಾನಿನಲ್ಲಿ ಶ್ರೀ. ದಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಒಂದು ಸಾರ್ವಜನಿಕ ಸಭೆ ಜರಗಿ ಶ್ರೀ. ವೆಂಕಟ್ರಾಯ ಬಾಳಿಗರು ಇಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಜಿಲ್ಲೆಯು ಸಾಕಷ್ಟು ಭಾಗ ವಹಿಸಿದೆಯೆಂದು ಚಿಕ್ಕ ಭಾಷಣ ಮಾಡಿದರು.

ಶ್ರೀ. ಸೂರಪ್ಪ ಶೆಟ್ರ ಬಿಡುಗಡೆ

ಶ್ರೀ. ಸೂರಪ್ಪ ಶೆಟ್ಟರು ತಮ್ಮ ಸತ್ಯಾಗ್ರಹ ಶಿಕ್ಷೆಯ ಅವಧಿ ಪೂರೈಸಿ ತಾ. ೨ರಂದು ತ್ರಿಚಿನಾಪಳ್ಳಿ ಜೈಲಿನಿಂದ ಬಿಡುಗಡೆ ಹೊಂದಿ ಬಂದಿರುವರು.

ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಮೀಟಿಂಗು

ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಮೀಟಿಂಗು ತಾ. ೬ರಂದು ಸಂಜೆ ಪ್ರೆಸಿಡೆಂಟರಾದ ಶ್ರೀ ಪಾಯಸರ ಅಧ್ಯಕ್ಷತೆಯಿಂದ ಜರಗಿತು. ಮಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡುವ ಮಾರ್ಗ ಚರಂಡಿಗಳ ಕುರಿತಾದ ಯೋಜನೆಯ ವಿಷಯ ಚರ್ಚೆಯಾಗಿ ಸರಕಾರಕ್ಕೆ ಬರೆಯುವದೆಂದು ನಿಶ್ಚಯವಾಯಿತು. ಮಂಗಳೂರಿನ ಕೆಲವು ಮಾರ್ಗಗಳಿಗೆ ದುರಸ್ತಿ ಡಾಮರು ಹಾಕುವ ಬಗ್ಗೆ ಟೆಂಡರ್ ಕರೆದದ್ದು ೩ ವಿಚಾರವಾಗಿ ಬಂದು, ಕಮಿಟಿ ಏರ್ಪಟ್ಟು ಅವರು ಅದನ್ನು ವಿಚಾರಿಸುವುದೆಂದಾಯಿತು. ಬೆಂದೂರು ರೋಡಿನ ವಿಸ್ತಾರದ ಕುರಿತು ಶ್ರೀ. ಎಸ್. ನೋನ್ಹಾಲ್ವೆಸರು ತಂದ ಠರಾವು ಅದನ್ನು ಮುಂದಿನ ಬಜೆಟ್ ಕಾಲಕ್ಕೆ ವಿಚಾರಿಸಲಾಗುವುದೆಂಬ ಉಪಸೂಚನೆಯಾಗಿ ಅಂಗೀಕೃತವಾಯಿತು.

ಅನಂತರ ಸಭಾಂತ್ಯದಲ್ಲಿ ಸತ್ಯಾಗ್ರಹ ಮಾಡಿ ಶಿಕ್ಷೆಯ ಅವಧಿ ತೀರಿಸಿ ಮರಳಿದ ಕೌನ್ಸಿಲರಾಗಿದ್ದ ಶ್ರೀ. ವೆಂಕಟ್ರಾಯ ಬಾಳಿಗರನ್ನು ಸ್ವಾಗತಿಸಿ ಸತ್ಕಾರ ಕೊಟ್ಟಿತು.

ತಿಲಕರ ಪುಣ್ಯದಿನಾಚರಣೆ

ಕಳೆದ ಶುಕ್ರವಾರ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಿಲಕರ ಪುಣ್ಯದಿನಾಚರಣೆಯು ಮಂಗಳೂರು ಸಾರ್ವಜನಿಕ ಮೈದಾನಿನಲ್ಲಿ ಸಂಜೆ ಆರು ಗಂಟೆಗೆ ಜರಗಿತು. ಶ್ರೀ. ದಾಮೋದರ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಕೃಷ್ಣರಾವ್, ಬಿ. ವಿ. ಕಕ್ಕಿಲ್ಲಾಯ ಮತ್ತು ಕಯ್ಯಾರ ಕಿಂಞಣ್ಣ ರೈ ಇವರು ತಿಲಕರ ಜೀವನ ಇತಿಹಾಸವನ್ನೂ, ಭಾರತದ ರಾಜಕೀಯ ಕ್ಷೇತ್ರದಲ್ಲಿ ಅವರು ಸಾಧಿಸಿದ ಉತ್ಕ್ರಾಂತಿಯ ವಿಚಾರವನ್ನೂ, ತಿಲಕರ ಮಹಾ ವ್ಯಕ್ತಿತ್ವದ ವಿಷಯವನ್ನೂ ವಿವರಿಸಿ ಭಾಷಣ ಮಾಡಿದರು.

ಶ್ರೀ. ಎಚ್. ವಿ. ಕಾಮತರ ಸಾರ್ವಜನಿಕ ಭಾಷಣ

ಕಳೆದ ಗುರುವಾರ ಸಂಜೆ ಮಂಗಳೂರು ಮೈದಾನಿನಲ್ಲಿ ಶ್ರೀ. ಎಚ್. ವಿ. ಕಾಮತರು ರಾಜಕೀಯದ ವಿಷಯವಾಗಿ ಒಂದು ಭಾಷಣವಿತ್ತರು. ಇಂದಿನ ಯುದ್ಧಕ್ಕೆ ಚೆಂಬರ್ಲಿನ್ ನೀತಿಯವರೇ ಕಾರಣರೆಂದೂ ಅಭಿಪ್ರಾಯವಿತ್ತರು. ಭಾರತವು ಒಂದೇ ಒಂದು ರಾಷ್ಟ್ರವಾಗಿರಬೇಕೆಂದೂ ಭಾರತವನ್ನು ವಿಭಜಿಸುವ ಪಾಕಿಸ್ತಾನದ ಕೂಗನ್ನು ನಿಲ್ಲಿಸಬೇಕೆಂದೂ ಹೇಳಿದರು.

ಜ್ಞಾನೋದಯ ಸಮಾಜ

ತಾ. ೪ರಂದು ಸಂಜೆ ಹೊಯ್ಗೆ ಜ್ಞಾನೋದಯ ಸಮಾಜದಲ್ಲಿ ಶ್ರೀ. ಎಚ್. ವಿ. ಕಾಮತರು ಭಾರತದ ಐಕ್ಯ ಸಾಧನೆ ಮತ್ತು ದೇವಾಲಯ ಪ್ರವೇಶ ವಿಚಾರವಾಗಿ ಭಾಷಣವಿತ್ತರು. ಶ್ರೀ. ಎಂ. ಆರ್. ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

ಹಿಂಸೆ ಅಹಿಂಸೆಗಳ ವಿಷಯ ಅಭ್ಯಾಸ ಗೋಷ್ಠಿ

ಕಳೆದ ರವಿವಾರ ಸಂಜೆಗೆ ಮಂಗಳೂರು ಥಿಯೊಸೊಫಿಕಲ್ ಲಾಜಿನಲ್ಲಿ ಶ್ರೀ. ಎಚ್. ಕಾಮತರ ಅಧ್ಯಕ್ಷತೆಯಿಂದ ಗಾಂಧೀಜಿಯವರ ಅಹಿಂಸೆಯ ಪ್ರಯೋಗದ ಔಚಿತ್ಯ ಅನೌಚಿತ್ಯಗಳ ವಿಷಯವಾಗಿ ಒಂದು ಅಭ್ಯಾಸ ಗೋಷ್ಠಿಯು ನೆರವೇರಿತು. ಚರ್ಚೆಯಲ್ಲಿ ಶ್ರೀಗಳಾದ ಎಚ್. ವಿ. ಕಾಮತ್, ಪುಂಡರೀಕ ಬಾಳಿಗ, ನಿರಂಜನ ರಾವ್, ಜಿನರಾಜ ಹೆಗ್ಗೆ, ಮಂಜೇಶ್ವರ ಗೋವಿಂದ ಪೈ, ಬಿ. ವಿ. ಕಕ್ಕಿಲ್ಲಾಯ, ಎಂ. ಎಸ್. ಮಾಧವ ರಾವ್, ದಾಮೋದರ ಬಾಳಿಗ, ಎಂ. ಆರ್. ಭಟ್ ಮೊದಲಾದವರು ಭಾಗವಹಿಸಿದ್ದರು.

ಕೈಯ್ಯೂರು ಪ್ರಕರಣ

ಇದರ ತನಿಖೆ ನಡೆಯುತ್ತದೆ. ೭ ಮಂದಿಯ ಸಾಕ್ಷಿ ವಿಚಾರಣೆಯಾಗಿದೆ. ವಿಚಾರಣೆ ತಾ. ೧೧ಕ್ಕೆ ಮುಂದುವರಿಸಲಾಗಿದೆ.

ಜೀವಾವಧಿ ಸಜೆ

ತಣ್ಣೀರುಬಾವಿ ಗ್ರಾಮದ ಐತ ಎಂಬಾತನು ಅವನ ಅಳಿಯ ನಕ್ರ ಎಂಬಾತನನ್ನು ಕಳೆದ ಮಾರ್ಚಿಯಲ್ಲಿ ಖೂನಿ ಮಾಡಿದನೆಂಬ ಮೊಕದ್ದಮೆ ಜಿಲ್ಲಾ ಸೆಶನ್ ಕೋರ್ಟಿನಲ್ಲಿ ತನಿಖೆ ನಡೆದು ಜಿಲ್ಲಾ ಜಡ್ಜರು ಇಬ್ಬರು ಎಸೆಸರರು ಆರೋಪಿ ಅಪರಾಧಿಯೆಂಬ ಅಭಿಪ್ರಾಯಪಟ್ಟಂತೆ ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿರುವರು.

ತಾತ್ಕಾಲಿಕ ಅಸಿ. ಸರ್ಜನ್

ಶ್ರೀಗಳಾದ ಎ. ಶಂಭು ಹೆಗ್ಡೆ, ಎಂ. ವಾಮನ್ ಕಾಮತ್, ಲಿಯೋನರ್ ಸಿಲ್ವೆಸ್ಟರ್ ಜೆ. ಎಂ. ರೆಬೆಲ್ಲೊ ಈ ನಾಲ್ವರನ್ನು ಮದ್ರಾಸು ಅಧಿಪತ್ಯದ ತಾತ್ಕಾಲಿಕ ಅಸಿ. ಸರ್ಜನರ ಹುದ್ದೆಗೆ ರಿಕ್ರೂಟ್ ಮಾಡಲಾಗಿದೆ.

ವರ್ಗ

ದ. ಕ. ವಿಭಾಗದ ಅರಣ್ಯ ಖಾತೆಯ ಜಿಲ್ಲಾ ಆಫೀಸರರಿಗೆ ಸಹಾಯಕರೂ, ಅರಣ್ಯಗಳ ಆಸೀಸ್ಟೆಂಟ್ ಕನ್ಸರ್ವೇಟರೂ ಆಗಿರುವ ಶ್ರೀ. ಪಿ. ಗೋವಿಂದ ಮೆನನ್‌ರು ೪ ತಿಂಗಳ ರಜೆ ಪಡೆದುದರಿಂದ ಶ್ರೀ. ಎಂ. ವಿ. ಸುಂದರರಾವ್ ಅವರು ಶ್ರೀ. ಮೆನೋನರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುವರು.

ಪೆಟ್ರೋಲ್ ರೇಶನಿಂಗ್ ಆಫೀಸರ್

ಮಲಬಾರ್ ಮತ್ತು ದ. ಕ. ಜಿಲ್ಲೆಗೆ ಪಿ. ಪಿ. ರೇ. ಆಫೀಸರರ ನೇಮಕವಾಗಿದೆ. ಇವರು ತಾ. ೧೫ರಿಂದ ಕಾರ್ಯನಿರ್ವಹಿಸುವರು.

ಶ್ರೀ. ಭಾರತ ಸುಧಾರಕ ಯುವಕ ಸಂಘ ಮಂಗಳೂರು

ತಾ. ೩ರಂದು ತಿಮ್ಮಪ್ಪಯ್ಯ ಕಾರಂತರ ಅಧ್ಯಕ್ಷತೆಯಲ್ಲಿ ಸದ್ರಿ ಸಂಘದ ಒಂದು ಸಭೆಯು ನೆರವೇರಿತು. ಸದ್ರಿ ಸಭೆಯಲ್ಲಿ ಶ್ರೀ. ಕೃಷ್ಣರಾಯರು ಭಾಷಣ ಮಾಡಿ ತ್ರಾಸದಾರಿದ್ರ್ಯ ನಿವಾರಣೆ, ಸ್ವದೇಶ ಸೇವೆ, ಅನಾಥ ರಕ್ಷಣೆ, ಸ್ವದೇಶ ಬಾಂಧವರಲ್ಲಿ ಐಕ್ಯತೆ ಇವೇ ಮೊದಲಾದುವುಗಳಲ್ಲಿ ಪ್ರೋತ್ಸಾಹಿಸುವ ಈ ಯುವಕ ಸಂಘಕ್ಕೆ ಸುಕೀರ್ತಿ ದಾಯಕವಾದ ಕಾರ್ಯಗಳೆಂದೂ ಭಿನ್ನವಿಸಿದರು.

೨೪,೦೦೦ ರೂಪಾಯಿಗಳ ಅಂದಾಜುಪಟ್ಟಿ

ನೆರೆಯ ನಿರ್ಗತಿಕರಿಗೆ ಒಪ್ಪೊತ್ತಿನ ಗಂಜಿಗೆ

ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಶ್ರೇಷ್ಠ ಉದ್ಯಮ

ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗೆ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಮಹಾಸಭೆಯು ಸಿ. ಪಿ. ಸಿ. ಅತಿಥಿ ಮಂದಿರದಲ್ಲಿ ತಾ. ೩ರಂದು ಜರಗಿತು. ಸಪ್ಟಂಬರ ೧೫ನೆಯ ತಾರೀಕಿನ ವರೆಗೆ ಗಂಜಿಯನ್ನು ಒದಗಿಸಲು ಸುಮಾರು ೨೪,೦೦೦ ರೂಪಾಯಿ ಬೇಕಾದೀತೆಂಬ ಮಾಡಿದ ಅಂದಾಜು ಪಟ್ಟಿಯು ಸಭೆಯಲ್ಲಿ ಸ್ವೀಕೃತವಾಯಿತು. ಪ್ರತೀ ಗ್ರಾಮದಲ್ಲಿಯೂ ಅನುಕೂಲವಾದ ಸ್ಥಳಗಳಲ್ಲಿ ಗಂಜಿ ಮತ್ತು ಪದಾರ್ಥವನ್ನು ಅಡುಗೆಮಾಡಿ ಒದಗಿಸಲು ಅಡುಗೆಮನೆಗಳನ್ನು (Relief kitchen) ತೆರೆಯುವ ವ್ಯವಸ್ಥೆಯು ಯುಕ್ತವೆಂದು ಸಭೆಯಲ್ಲಿ ನಿರ್ಧರಿಸಲಾಯಿತು. ಸಾಧ್ಯವಿದ್ದ ಕೇಂದ್ರಗಳಲ್ಲಿ ನೆರೆಯ ಹಾವಳಿಯಿಂದ ಬೇಸಾಯದ ಕೆಲಸವು ತಪ್ಪಿ ಕಂಗೆಡುವ ಜನರಿಗೆ ಕೂಲಿಕೆಲಸವನ್ನು ಒದಗಿಸುವ ಸಲುವಾಗಿ ಯುಕ್ತ ಮತ್ತು ಅವಶ್ಯವಿದ್ದ ರಸ್ತೆ ಮತ್ತು ಕಾಲ್ವಾರಿಗಳ ಕೆಲಸವನ್ನು ಕೈಕೊಳ್ಳುವಂತೆ ಸರಕಾರವು ಒಪ್ಪುವಂತೆ ಮಾಡಲು ಪ್ರಯತ್ನಿಸಬೇಕೆಂದು ನಿರ್ಣಯಿಸಲಾಯಿತು. ಸದ್ಯಕ್ಕೆ ಗುರುಪುರ, ಪೊಳಲಿ ಬಡಕಬೈಲು ರಸ್ತೆಗಳ ಕೆಲಸವನ್ನು ಕೈಕೊಳ್ಳುವರೆ ಬೇಕಾದ ಸಲಹೆಗಳನ್ನು ಸಿದ್ಧಪಡಿಸಿ ಸರಕಾರಕ್ಕೆ ಕಳುಹಿಸಬೇಕಾಗಿ ನಿರ್ಧರಿಸಲಾಯಿತು. ಬಾಂಬೆಯ ಸೌತ್ ಕೆನರಾ ಡಿಸ್ಟ್ರಿಕ್ಟ್ ಫ್ಲಡ್ ರಿಲೀಫ್ ಕಮಿಟಿಯು ಎರಡನೆಯ ಕಂತಾಗಿ ರೂ. ೩೦೦೦ವನ್ನು ಈ ಕಮಿಟಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುವ ಠರಾವು ಮಂಜೂರಾಯಿತು.

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಸಹಾಯ

ನೋರ್ದರ್ನ ಕೆನೆಯ ಮಾಲಿಕರಾದ ಶ್ರೀ. ಕೆ. ಸೀತಾರಾಮ ರಾವ್ ರೂ. 100, ಕೊಟ್ಟಿ ಕಾರ್ಡ್ ಬ್ರದರ್ಸ್ ರೂ. 51, ಶ್ರೀ. ಕಾರ್ಕಳ ಸದಾಶಿವ ರಾವ್ 25, ಮದ್ರಾಸು ಹಿಂದು ಸೂಡ್ ಟೆಂಪ್ಲರ್ಸ್ ಲೀಗ್ ರೂ. 11, ಡಾ. ಎಚ. ವಿ. ಅಡಪ್ಪ ರೂ. 10 ಇತರರು ರೂ. 6.

BHUVANENDRA PRODUCTS LTD.,

Head Office and Factory:

KATAPADI S. Kanara

Depots:

1. Maharatha Galli, Hubli
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ. ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.

ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್.

ಜಪಾನಿನ ಚಲನವಲನಗಳು ಹೆಚ್ಚಾಗುತ್ತಿವೆ!

ರಶ್ಯನರು ಜರ್ಮನರನ್ನು ಧೈರ್ಯದಿಂದ ಎದುರಿಸುವರು

ಇಟಲಿಯ ಸೈನಿಕರನ್ನು ಮುಸಲನಿ ಹುರಿದುಂಬಿಸುತ್ತಾನೆ

ಜರ್ಮನರ ಅಮಿತ ಸೈನ್ಯದೆದುರು ರಶ್ಯನರು ವೀರಾವೇಶದಿಂದ ಪ್ರತಿಭಟಿಸಿ ಕಾದಾಡುತ್ತಿದ್ದಾರೆ. ರಶ್ಯಕ್ಕೆ ಅಮೆರಿಕವು ಎಲ್ಲಾ ಬಗೆಯ ಆರ್ಥಿಕ ಬೆಂಬಲ ಕೊಡುವುದಾಗಿ ತಿಳಿಸಿದೆ. ಥಾಯಿಲೆಂಡನ್ನು ಜಪಾನು ಮೂರೇ ವಾರದಲ್ಲಿ ಆಕ್ರಮಿಸುವುದಾಗಿ ಸುದ್ದಿಯಿದೆ. ಮೋಸ್ಕೋ ಶಸ್ತ್ರಾಸ್ತ್ರ ಕಾರಖಾನೆಯ ಮೇಲೆ ಜರ್ಮನರ ಬಾಂಬು ಬಿದ್ದು ಅನರ್ಥವಾಗಿದೆ. ಸ್ಮೋಲಿನಸ್ಕದಲ್ಲಿ ಈಗ ಕಾದಾಟ ಹೆಚ್ಚುತ್ತಲಿದೆ. ಆಂಗ್ಲ ಅಮೇರಿಕ ಸರಕಾರಗಳ ದೃಷ್ಟಿ ಪೂರ್ವಕ್ಕೆ ಹೊರಳಿದೆಯೆಂದು ತಿಳಿದು ಬಂದಿದೆ. ರಶ್ಯನ್ ವ್ಯೂಹವನ್ನು ಭೇದಿಸಲು ವೀರರಾಗಿ ಕಾದಾಡಿರೆಂದು ಕಪ್ಪಂಗಿ ಸೈನಿಕರನ್ನು ಮುಸಲನಿ ಹುರಿದುಂಬಿಸುತ್ತಾನೆ. ಆಸ್ಟ್ರೇಲಿಯವು ಜಪಾನಿನ ಆಕ್ರಮಣಶೀಲ ಧೋರಣವನ್ನು ಪ್ರತಿಭಟಿಸುತ್ತದೆ.

ವಿಚಿ ಸರಕಾರದ ಮೇಲೆ ಅಮೇರಿಕ ಆರೋಪಮಾಡುತ್ತದೆ

ವಿಚಿ ಸರಕಾರವು ಆಕ್ಸಿಸ ರಾಷ್ಟ್ರಗಳ ಆಕ್ರಮಣಕ್ಕೆ ಅನುಕೂಲಿಸುವಂತೆ ಧೋರಣೆಯನ್ನು ವಹಿಸಿದ್ದು, ಇಂಡೋಚೀನವನ್ನು ಜಪಾನು ಆಕ್ರಮಿಸುವಾಗ ಫ್ರಂಚರು ಪ್ರತಿಭಟಿಸದೆ ಸುಮ್ಮನಿದ್ದ ವಿಚಾರವಾಗಿ ಆರೋಪ ಮಾಡಿ ಸುಮ್ನರ್ ವೆಲ್ಸರು ಮಾತುಹೇಳಿದ್ದಾರೆ.

ರೂಜ್‌ವೆಲ್ಟರು ಪಯಣಮಾಡಿದರು' ನ್ಯೂ ಲಂಡನಿಗೆ

ರೂಸ್‌ವೆಲ್ಟರು ಹಡಗದ ಮೇಲೆ ಕುಳಿತು ಪ್ರಯಾಣಮಾಡಿದರು. ಎಲ್ಲಿಗೆಂದು ಯಾರಿಗೂ ತಿಳಿದಿಲ್ಲ ಅವರು ನ್ಯೂ ಲಂಡನಿಗೆ ಹೊರಡುವರೆಂದು ಪ್ರಕಟವಾಗಿತ್ತು. ಅಲ್ಲಿ ಒಂದು ತಾಸ ತನಕ ನಿಲ್ಲುವರಂತೆ. ಅವರ ಪಯಣದ ವಿಷಯವು ಗುಪ್ತವಾಗಿಡಲಾಗಿದೆ.

ದಕ್ಷಿಣ ಆಫ್ರಿಕದ ಕರಾವಳಿಯಲ್ಲಿ ಯುದ್ಧ.

ಜರ್ಮನರು ದಕ್ಷಿಣ ಆಫ್ರಿಕದ ಕರಾವಳಿಯಲ್ಲಿ ಬ್ರಿಟಿಷ್ ಯುದ್ಧ ಹಡಗಗಳ ಮೇಲೆ ಧಾಳಿಮಾಡಿದರು. ಬ್ರಿಟಿಷ್ ಜರ್ಮನ್ ಸೈನ್ಯಗಳಲ್ಲಿ ತುಮುಲ ಯುದ್ಧ ನಡೆಯಿತು.

ಸುವೇಜ್ ಕಾಲುವೆಯ ಮೇಲೆ ಧಾಳಿ

ಇಜಿಪ್ತಿನ ಹಲವು ಭಾಗಗಳಲ್ಲಿ ವಿಮಾನ ಧಾಳಿಯ ಎಚ್ಚರಿಕೆ ಕೊಡಲ್ಪಟ್ಟಿತ್ತು. ಶತ್ರುಗಳು ಸುಯೇಜ್ ಕಾಲುವೆಯ ಪ್ರದೇಶದ ಮೇಲೆ ಅನೇಕ ಬಾಂಬುಗಳನ್ನು ಒಗೆದರು. ಕೈರೋದಲ್ಲಿಯೂ ತೋಪುಗಳ ಗರ್ಜನೆ ಕೇಳುತ್ತಿತ್ತು.

ಥಾಯ್‌ಲೆಂಡನ್ನು ಜಪಾನು ಆಕ್ರಮಿಸುವುದೆ?

ಜಪಾನು ಸೈನ್ಯಗಳು ಗಡಿಯಲ್ಲಿವೆ!

ಥಾಯಿಲೆಂಡ್ ಪರಿಸ್ಥಿತಿಯು ಇತ್ತೀಚೆಗೆ ಬಹು ಗಂಭೀರವಾಗಹತ್ತಿದೆ. ಆ ಬಗ್ಗೆ ಅಲಕ್ಷ್ಯಮಾಡಲು ಬರುವಂತಿಲ್ಲವೆಂದು ಹೇಳಲಾಗಿದೆ. ಜಪಾನ್ ಸೈನ್ಯಗಳು ಈಗಾಗಲೇ ಥಾಯಿಲೆಂಡಿನ ಗಡಿಯಲ್ಲಿ ನೆಲಸಿವೆ.

ಸ್ಮೋಲಿನಿಸ್ಕ ಮತ್ತು ಇಸ್ಟೋನಿಯಾಗಳಲ್ಲಿ ಭೀಕರ ಕಾಳಗ

ರಶ್ಯದಲ್ಲಿ ಜರ್ಮನರ ಕಾಳಗ ನಡೆಯುತ್ತಿವೆ. ಸ್ಮೋಲಿನಸ್ಕ ಮತ್ತು ಇಸ್ಟೋನಿಯಾ ಈ ಭಾಗದಲ್ಲಿ ಕಾಳಗವು ಬಹು ಜೋರಾಗಿ ನಡೆಯುತ್ತಲಿದೆ. ಮೋಸ್ಕೋದ ಮೇಲೆ ಧಾಳಿ ಕಡಿಮೆಯಾಗಿದೆ.

ಜಪಾನೀ ಸೈನ್ಯದ ಗುಪ್ತ ಚಲನವಲನ

ಮಂಚೂಕೋದ ಕಡೆಗೆ!

ಮಂಚೂಕೋದ ಕಡೆಗೆ ಜಪಾನೀ ಸೈನ್ಯವು ಗುಪ್ತವಾಗಿ ಸಂಚರಿಸುತ್ತಿದೆಯೆಂದು ತಿಳಿದುಬಂದಿದೆ. ಕಳೆದ ವಾರದಿಂದ ಈ ಚಲನವು ಪ್ರಾರಂಭವಾಗಿದೆಯಂತೆ. ಮಂಚೂಕೋದಲ್ಲಿರುವ ಕೇಂದ್ರವನ್ನು ಬಲಪಡಿಸುವ ಸಲುವಾಗಿ ಈ ಯತ್ನ ನಡೆದಿದೆಯಂತೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 183/41

ಶಂಭು ಶಾಸ್ತ್ರಿ—ವಾದಿ

ಮತ್ತು

1 ದೇಯಕ್ಕ ಹೆಂಗಸು } ಪ್ರತಿವಾದಿರು
2 ತಿಮ್ಮಪ್ಪ ಭಟ್ಟ }

1ನೇ ಪ್ರತಿವಾದಿ —ಕಾಸರಗೋಡು ತಾಲೂಕು ಕುಡ್ಲಮೊಗರು ಗ್ರಾಮದಲ್ಲಿರುವ ಮಾರು ಪಕಳರ ವಿಧವೆ ದೇಯಕ್ಕ ಹೆಂಗ್ಸಿಗೆ—

ವಾದಿಯು ನಿಮ್ಮ ಮೇಲೆ ಅವರಿಗೆ ನಿಮ್ಮ ಆಸ್ತಿ ಜವಾಬ್ದಾರಿಯಿಂದ ಬರತಕ್ಕ ಆಕ್ಕಿಯ ಬಗ್ಗೆ ದಾವಾ ಮಾಡಿರುತ್ತಾರೆ ಸದ್ರಿ ವ್ಯಾಜ್ಯವು ಈ ಕೋರ್ಟಿನಲ್ಲಿ 5-9-41ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ದಿವಸ ನೀವು ಈ ಕೋರ್ಟಿನಲ್ಲಿ 10 ಗಂಟೆಗೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿಯಾಗಿ ಮಾಡೋಣಾದೀತು.

(By order of court)

Mangalore } **N. Krishna Bhat**
0-8-41 } Counsel for Plaintiff.

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟು ಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನಿನ (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನೂ ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮೊಡವೆ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು

CUTICURA SOAP

ಕಾಲಿನ ಹುಣ್ಣುಗಳು ಮತ್ತು ವಿಷಪೂರಿತ ವ್ರಣಗಳು ಮಂತ್ರಶಕ್ತಿಯಂತೆ ಗುಣಹೊಂದುವವು

ಜಾಂಬಕ್ ಗಾಯದ ಕಲೆಗಳನ್ನು ಉಳಿಯಗೊಡುವುದಿಲ್ಲ

ನೀವು ಕಾಲುನೋವಿನಿಂದ ನರಳುವುದಿದ್ದರೆ, ವಿಷಪೂರಿತ ವ್ರಣಗಳಿಂದ ನೀವು ಸಂಕಟಪಡುವುದಿದ್ದರೆ ಜಾಂಬಕಿನಿಂದ ಆಶ್ಚರ್ಯಕರವಾದ ಗುಣವನ್ನು ಹೊಂದುವಿರಿ. ನೀವು ಜಾಂಬಕನ್ನು ತೆಗೆದು ನೋವಿನ ಸ್ಥಳಕ್ಕೆ ಹಾಕಿ ತಿಕ್ಕಿ ಆದಕ್ಕೆ ವಸ್ತ್ರ ಕಟ್ಟಿದರಾಯಿತು. ಜಾಂಬಕಿನಲ್ಲಿ ರುವ ಅತ್ಯುತ್ತಮವಾದ ವನೌಷಧಿ ಸತ್ವವು ಚರ್ಮದೊಳಗೆ ಎಳೆದುಕೊಳ್ಳುತ್ತದೆ, ನೋವನ್ನು ಗುಣಪಡಿಸುತ್ತದೆ, ಬೇಗನೇ ವಾಸಿಮಾಡುತ್ತದೆ, ಗಾಯದ ಕಲೆಯೂ ಇಲ್ಲದಂತೆ ಜಾಂಬಕ್ ಗುಣಪಡಿಸುತ್ತದೆ ಜಾಂಬಕ್ ಒಂದು ರೂಪಾಯಿ ಇಲ್ಲವೇ ರೂ 2-1-0, ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್: ಮೆಸರ್ಸ್ ರಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜಾಂಬಕನ್ನುಪಯೋಗಿಸಿರಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು

ಕವೀಂದ್ರ ಠಾಗೂರರು ಮರಣೋನ್ಮುಖರಾಗಿದ್ದಾರೆ

ಠಾಗೋರರ ದೇಹಾರೋಗ್ಯದ ಕುರಿತು

ಬಹಳ ಚಿಂತಾಜನಕವಾದ ವಾರ್ತೆ ಹರಡಿದೆ. ಅಖಿಲ ಪ್ರಪಂಚದಲ್ಲಿ ಕೀರ್ತಿವಂತರಾದ ಕವಿವರ್ಯರು ರುಗ್ಣ ಶಯ್ಯೆಯಲ್ಲಿ ಮರಣೋನ್ಮುಖರಾಗಿರುವರೆಂದು ಬಂದ ವಾರ್ತೆ ಪ್ರತಿಯೊಬ್ಬನನ್ನೂ ಕಳವಳಗೊಳಿಸಿರುತ್ತದೆ. ಭಾರತದ ರಾಜಕೀಯದಲ್ಲಿ ವಿಶೇಷ ಬದಲಾವಣೆಗಳೇನೂ ಆಗಿಲ್ಲ. ವೈಸರಾಯ್‌ರ ಕಾರ್ಯಕಾರೀ ಮಂಡಳದವರು ಬೇಗನೇ ತಮ್ಮ ಅಧಿಕಾರದ ಹೊತ್ತು ಕೆಲಸ ಕೈಗೊಳ್ಳಬಹುದು. ಗಾಂಧಿಜಿಯವರ ಸತ್ಯಾಗ್ರಹವು ಬಿಡದೆ ಮುಂದುವರಿಯುತ್ತಲಿದೆ. ವೈಸರಾಯರು ಮದ್ರಾಸು ಕಡೆಯಲ್ಲಿ ಪ್ರವಾಸ ಮಾಡುತ್ತಿದ್ದಾರೆ.

"ಸ್ವರಾಜ್ಯಕ್ಕಿಂತ ಕಡಿಮೆ ಬೇಕಾಗಿಲ್ಲ"

ಗಾಂಧಿಜಿ ಹೇಳುತ್ತಾರೆ

ಅಮೆರಿಕದ 'ಲುಕ್' ಪತ್ರಿಕೆಯ ಪ್ರತಿನಿಧಿಗೆ ಗಾಂಧಿಜಿ ಕೊಟ್ಟ ಭೇಟಿಯ ವಿಷಯವೆಂದು ಸುಳ್ಳುಸುದ್ದಿ ಪ್ರಕಟವಾಗಿದೆಯಾಗಿ, ತನಗೆ ಅಂತಹ ಪತ್ರಿಕೆಯೊಂದಿರುವುದೇ ಗೊತ್ತಿಲ್ಲವೆಂದೂ, ತಾನಿದುವರೆಗೆ ಹೇಳಿದಂತೆ ತನ್ನ ಧೋರಣ ಅಚಲವಾಗಿದೆಯೆಂದೂ ಎಷ್ಟೇ ಸೌಕರ್ಯಗಳನ್ನು ಕೊಟ್ಟರೂ ಪೂರ್ಣ ಸ್ವರಾಜ್ಯಕ್ಕಿಂತ ಕಡಿಮೆ ಏನು ಕೊಟ್ಟರೂ ಕಾಂಗ್ರೆಸಿಗೆ ಸಮಾಧಾನವಾಗಲಾರದೆಂದೂ ಗಾಂಧಿಜಿ ಒಂದು ಪ್ರಕಟಣೆಯಲ್ಲಿ ತಿಳಿಸುತ್ತಾರೆ.

ಠಾಗೂರರ ಪ್ರಕೃತಿ ಚಿಂತಾಜನಕವಿದೆ

ಡಾ| ರವೀಂದ್ರನಾಥ ಠಾಗೂರರ ಪ್ರಕೃತಿಯು ಚಿಂತಾಜನಕವಾಗಿದೆಯೆಂದೂ, ಜ್ವರ ಬಿಸಿಯೇರುತ್ತಿದ್ದು ಮುಖ ಕಳೆಗೆಡುತ್ತಾ ಬರುತ್ತಿದೆಯೆಂದೂ ಸುದ್ದಿ ಪ್ರಕಟವಾಗಿದೆ.

ಸತ್ಯಾಗ್ರಹದ ಕುರಿತು ಕೃಪಲಾನಿ ಪ್ರಕಟಣೆ

ಅಹಿಂಸೆಯ ಕುರಿತು ಸಂದೇಹಗ್ರಸ್ತರಾಗಿದ್ದಾರೆ

ಅಹಿಂಸೆಯ ಕುರಿತು ಸಂಶಯಪಡುತ್ತಾರೆ.

"ನಮ್ಮ ಸೊತ್ತುಗಳನ್ನು ನಮ್ಮ ಮುಂದೆ ದರೋಡೆ ಮಾಡಿ, ನಮ್ಮ ಹೆಂಗುಸರ ಮಾನಭಂಗ ಮಾಡುವಂಥಾ ಸಮಯದಲ್ಲಿ, ನಮ್ಮಿಂದ ಅಹಿಂಸಾ ಬದ್ಧರಾಗಿರುವುದು ಅಸಾಧ್ಯ, ಆತ್ಮ ರಕ್ಷಣೆಗಾಗಿ ಹಿಂಸೆ ಕೈಕೊಳ್ಳಬೇಕಾಗುತ್ತದೆ. ಇಂಥಾ ಸಂದರ್ಭದಲ್ಲಿಯೂ ನಾವು ಅಹಿಂಸೆಯನ್ನು ಪಾಲಿಸಬೇಕೆಂದರೆ, ಅಹಿಂಸಾ ತತ್ವ ಪ್ರತಿಷ್ಠೆಗೆ ಕುಂದ ತಂದಂತೆಯೇ ಆಗಿದೆಯೆಂದು. ಗಾಂಧಿಜಿಯವರಿಗೆ ಕೆಲವರು ಕಾಂಗ್ರೆಸಿನವರು ಬರೆದಿರುತ್ತಾರೆ.

ಸತ್ಯಾಗ್ರಹದ ವಿಷಯದಲ್ಲಿ ಮಹಾತ್ಮರ ಸ್ಪಷ್ಟೀಕರಣ

"ನೆಹರು ಪಕ್ಷದ ವಿಷಯ ಸಮಾನ. ಜೂತಿಯವರದೇನೋ ನಿಜ. ಆದರೆ, ಅದಕ್ಕಾಗಿ ಕಾಂಗ್ರೆಸು ಸಧ್ಯದ ಧೋರಣವನ್ನು ಬದಲಾಯಿಸಬೇಕಾಗಿಲ್ಲ. ಈ ಮೊದಲು ಅಹಿಂಸಾತ್ಮಕ ಪ್ರತೀಕಾರ ತಗೆದುಕೊಳ್ಳುವ ಸೂಚನೆಯನ್ನ ಬ್ರಿಟಿಷರಿಗೂ ಕೊಡಲಾಗಿತ್ತು. ರಶ್ಯಕ್ಕಾದರೂ ಅದೇ ಸೂಚನೆ ಕೊಡಬಹುದು. ಶಾಸನ ಭಂಗದ ಪ್ರಗತಿಯ ವಿಷಯ ನನಗೆ ಸಮಾಧಾನವಿದೆ. ಈ ಸತ್ಯಾಗ್ರಹಿಗಳಲ್ಲಿ ಅನೇಕರು ಧೋರಣವೆಂದೇ ಅಹಿಂಸಾ ತತ್ವವನ್ನು ಸ್ವೀಕರಿಸುವೆವೆಂಬ ಧಾಗಿ ಹೇಳಿದ್ದರೂ ನನ್ನ ಭಿನ್ನಾಭಿಪ್ರಾಯವಿಲ್ಲ. ಎಲ್ಲಿ ನೋಡಿದರೂ, ಬಾಹ್ಯತಃ ವಿರುದ್ಧವೆಂದು ಕಂಡು ಬಂದರೂ ಜನರಲ್ಲಿ ಅಹಿಂಸಾ ತತ್ವವು ಹೆಚ್ಚುತ್ತಿದೆಯೆಂದು ನನಗೆ ಅನಿಸುತ್ತದೆ. ಹಾಗೆ ವಿಶ್ವಾಸವಾಗಿದೆ. ದೇಶದಲ್ಲಿ ಜಾತೀಯ ದಂಗೆ ವೈಷಮ್ಯಗಳು ಹೆಚ್ಚುತ್ತಿರುವುದು ನಿಜ. ಆದರೆ ನಮ್ಮಿಷ್ಟೆಯಂತೆ ಭಾರತದ ಭವಿತವ್ಯವನ್ನು ನಿಶ್ಚಯಿಸುವ ಸಾಮರ್ಥ್ಯ ಮತ್ತು ಐಕ್ಯ ಭಾರತಕ್ಕೆ ದೊರಕುವುದೆಂಬುದರಲ್ಲಿ ಸ್ವಲ್ಪವೂ ಸಂಶಯ ಬೇಡ' ಹೀಗೆಂದು ಮಹಾತ್ಮರು ಒಂದು ಪ್ರಕಟಣೆ ಹೊರಡಿಸುತ್ತಾರೆ.

ಸತ್ಯಾಗ್ರಹ ಚಳವಳದ ಪರಿಶೀಲನೆ

ಕೃಪಾಲನಿಯವರ ಪ್ರಕಟಣೆ

ಸತ್ಯಾಗ್ರಹಿಗಳೂ ಸತ್ಯಾಗ್ರಹಿಗಳಲ್ಲದವರೂ ರಚನಾತ್ಮಕ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಕೈಕೊಳ್ಳಬೇಕು. ಅಲ್ಲಲ್ಲಿಯ ಕಾಂಗ್ರೆಸ್ ಕಮಿಟಿಗಳ ಕಾರ್ಯಗಳನ್ನು ಪರಿಶೀಲಿಸಲು ಎ ಐ ಸಿ ಸಿಯ ಓರ್ವ ಅಧಿಕಾರಿಗಳು ಅಲ್ಲಲ್ಲಿಗೆ ಸಂಚರಿಸುವರು. ಒಂದು ಪ್ರಶ್ನೆ ಮಾಲಿಕೆಯನ್ನು ಸಿದ್ಧಪಡಿಸಿ ಎಲ್ಲ ಪ್ರಾಂತಗಳಿಗೆ ಅದನ್ನು ಕಳುಹಿಸಿಕೊಡಲಾಗಿದೆ. ಸತ್ಯಾಗ್ರಹದ ಚಳವಳ ಮತ್ತು ಕಾಂಗ್ರೆಸಿನ ಮುಂದಿರುವ ಇತರ ಸಮಸ್ಯೆಗಳಿಗೆ ಆ ಪ್ರಶ್ನೆಗಳು ಸಂಬಂಧಿಸಿರುವವು. ಇದಕ್ಕೆ ಉತ್ತರಗಳು ಹಾಗೂ ಸತ್ಯಾಗ್ರಹದ ಬಗ್ಗೆ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯಗಳು ಇಲ್ಲಿಗೆ ಬಂದ ಮೇಲೆ ಒಂದು ವರದಿಯನ್ನು ಸಿದ್ಧಪಡಿಸಿ ಮಹಾತ್ಮರಿಗೆ ಒಪ್ಪಿಸಲಾಗುವುದು.

NOTICE

Empire of India
Life Assurance Company
Limited.

Head Office BOMBAY
Established 1897

Policyholders are hereby informed that the appointment of Mr K Ganapathy Hegde of Karkala as an Agent and Organiser of this Company has been terminated as from 7th July 1941 and he is not authorised to represent the Company in any capacity. Premiums are only payable to the Head Office or to the Company's Branch Office at Calicut or the Banks in which the Company has collection account. Agents or Organisers are not authorised to collect premiums.

Huzur Road, Calicut 5-8-41 } P K S Iyer, Branch Secretary



ಇಂದು ನಿಮ್ಮ ಹಲ್ಲುಗಳನ್ನು ಮ್ಯಾಕ್ಲೀನದಿಂದ ತೊಳೆದುಕೊಂಡಿರೋ?

ಪ್ರಿಯ ಸ್ವಾಮಿ,
ತಮ್ಮ ಪ್ರಶ್ನೆಗೆ "ನಿಶ್ಚಯದಿಂದ ತೊಳೆದುಕೊಂಡೆ"

ಹಲ್ಲುಗಳು ಚಿಕ್ಕಗೆ ಥಳಥಳಿಸಬೇಕಾದರೆ, ವಸಡುಗಳು ಆರೋಗ್ಯಕರವಿರಬೇಕಾದರೆ ಬಾಯಿಯು ಸ್ವಚ್ಛ ಮತ್ತು ತಂಪು ಇರಬೇಕಾದರೆ ಮ್ಯಾಕ್ಲೀನ್ಸ್ ಉಪಯೋಗಿಸಿರಿ. ಕಲೆಗಳನ್ನು ಬೇಗನೇ ತೆಗೆದು ಹಲ್ಲುಗಳನ್ನು ಬೆಳ್ಳಗೆ ಹೊಳೆಯಿಸುವಂತೆ ಮಾಡುವ ನಿತ್ಯದ ಉಪಯೋಗ





ನೋಟೀಸು

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಪೆಂಟ್ಲಾಂಡ್‌ಪೇಟೆ; ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ದಿ ಜವಾಹರ ಬೇಂಕ್ (ರಿಜಿಸ್ಟರ್ಡ್) ಮತ್ತು ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಪೆಂಟ್ಲಾಂಡ್‌ಪೇಟೆ ಮಂಗಳೂರು. ಈ ಬೇಂಕುಗಳಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲಪಡಕೊಂಡ ನಂತರ ಕ್ಲಪ್ತ ವಾಯಿದೆಗೆ ಬಡ್ಡಿ ಕೊಡದೆ ಬಾಕಿ ಮಾಡಿರುವುದರಿಂದ, ಬಡ್ಡಿಯನ್ನು ಕಟ್ಟುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ, ಕೆಲವು ಜಾರಿಯಾಗದೆಯೂ, ಇನ್ನು ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ 1941 ಆಗೋಸ್ತು ತಿಂಗಳ ತಾರೀಕು 22ನೇ ಶುಕ್ರವಾರ ದಿವಸ ಯಾ ಅದಕ್ಕಿಂತ ಮೊದಲೇ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸುಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1941ನೇ ಅಗೋಸ್ತು 25ನೇ ಸೋಮವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 3ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1.	534–39 / 29–4–39	ಕೊರಲ S/o ಬಬ್ಬು, ವಯರ್‌ಲೆಸ್ ಸ್ಟೇಶನ್ ಉರ್ವ, ಬೋಳೂರು ಗ್ರಾಮ; ಮಂಗಳೂರು.	6
2.	728–39 / 27–5–39	ಅಬ್ದುಲ್‌ಖಾದರ್ S/o ಅವುಲ ಬ್ಯಾರಿ, ಬೊಳ್ಳಾಡಿ ಪಣಂಬೂರು ಗ್ರಾಮ; P. O. ಪಣಂಬೂರು.	6
3.	955–39 / 3–7–39	ಮಾದಪ್ಪ ಪೂಜಾರಿ S/o ದೂಮ ಪೂಜಾರಿ, ಬೋಳೂರು ಗ್ರಾಮ ಕೋಡಿಕಲ್ ಮಾಗಣೆ; P. O. ಉರ್ವ ಮಂಗಳೂರು.	5
4.	1174–39 / 9–8–39	ಚಂದಪ್ಪ ಪೂಜಾರಿ S/o ಜಾರು ಪೂಜಾರಿ, ತಿಮ್ಮಪ್ಪ ಹೆಗ್ಡೆಯವರ ಭಂಡಸಾಲೆ ಬಳಿ ಕೊಡಿಯಾಲಬೈಲು, ಮಂಗಳೂರು.	5
5.	1850–39 / 29–12–39	ಸೀತರಾಮ ಆಚಾರಿ S/o ಜನಾರ್ದನ ಆಚಾರಿ, ಬೋಳೂರು, ಗುಡ್ಡೆ ಶಾಲೆ ಬಳಿ ಮಂಗಳೂರು.	5
6.	1809–39 / 16–12–39	ಅೃತಪ್ಪ ಗಟ್ಟಿ S/o ಮುದ್ದ ಗಟ್ಟಿ, ಬರ್ಕೆ ಮೇಸ್ತ್ರಿ ತಿಮ್ಮಪ್ಪನವರ ಮನೆಬಳಿ ಪೆಂಟ್ಲಾಂಡ್‌ಪೇಟೆ; ಮಂಗಳೂರು.	5
7.	1009–39 / 31–10–39	ಕೊರಗೆ N/o ರಾಮು, ಬಾರ್‌ಬರ್ ಮಿಶನ್‌ಗೋರಿ ಹಿಂದುಗಡೆ ಪೆಂಟ್ಲಾಂಡ್‌ಪೇಟೆ, ಮಂಗಳೂರು.	22
8	1570–39 / 24–10–39	ಕೊರಗ ಶೆಟ್ಟಿ N/o ಬಸ ಶೆಟ್ಟಿ, ದೂಮಪ್ಪ ಮೇಸ್ತ್ರಿ ಮನೆಬಳಿ ಪೆಂಟ್ಲಾಂಡ್‌ಪೇಟೆ; ಮಂಗಳೂರು.	5
9.	1475–39 / 2–10–39	ಅೃತಪ್ಪ ನ್ಯಾಕ S/o ಬಾಬು ನ್ಯಾಕ, ಮಣ್ಣಗುಡ್ಡೆ ಮೆಯಿನ್ ರೋಡು ಸಾಹೇಬರ ಜಾಗೆಯಲ್ಲಿ, ಮಂಗಳೂರು.	5
10.	10–40 / 3–1–40	ಪೂವಪ್ಪ ಪೂಜಾರಿ S/o ತಿಮ್ಮ ಪೂಜಾರಿ, ಉರ್ವ ಅಂಗಡಿ ವ್ಯಾಪಾರಿ, ಮಾರಿಗುಡಿ ದೇವಸ್ಥಾನದ ಒಳಿ, P. O ಉರ್ವ ಮಂಗಳೂರು.	5
11.	54–40 / 9–1–40	ರಾಮ ಮೇಸ್ತ್ರಿ S/o ಲಕ್ಷ್ಮಣ ಕೊಟ್ಟಾರಿ, ದೇರಬೈಲು ಟೈಲರ್ ಜೂಜನ ಅಂಗಡಿಒಳಿ, P O ಬಿಜೈ.	36
12.	61—40 / 9–1–40	ನಾರಾಯಣ ಶ್ಯಾನುಭೋಗ್ S/o ಶ್ರೀನಿವಾಸ ಶ್ಯಾನುಭೋಗ್, ಉರ್ವ ಚಿಲಿಂಬಿ, P. O ಉರ್ವ ಮಂಗಳೂರು.	28
13.	188–40 / 24–1–40	ಗುರುವ S/o ಪ್ರಭು, ಕಾಪಿಕಾಡು, ಬಿಜೈ P. O ಬಿಜೈ.	7
14.	286—40 / 22–2–40	ಸೂರ್ಯ S/o ಒಬ್ಬು, ಕದ್ರಿ ಕಂಬ್ಳಬಳಿ, ಮಂಗಳೂರು.	5
15.	322—40 / 27–2–40	ಸುಬ್ರಾಯ ಶೈ S/o ಕೊರ‍ಗ ಶೈ, ಪೆಂಟ್ಲಾಂಡ್‌ಪೇಟೆ ಡಾಕ್ಟರ್ ವೆಂಕಟ್ರಾಯರ ಮನೆಒಳಿ, ಮಂಗಳೂರು	5
16.	332–40 / 29–2–40	ಕಾಪ್ರ S/o ಬಾಡು, ಕೋಡಿಕಲ್ ಗುಡ್ಡೆ, P. O ದೇರೆಬೈಲು.	5
17.	337–40 / 29–2–40	ಮಂಜಪ್ಪ ಪೂಜಾರಿ N/o ಪರಮೇಶ್ವರ ಪೂಜಾರಿ, ಉರ್ವ ಲಕ್ಷ್ಮಣ ಮೇಸ್ತ್ರಿ ಮನೆಬಳಿ, ಮಂಗಳೂರು.	50
18.	356—40 / 4–3–40	ಸೋಮಯ S/o ರಾಮ ಮೂಲ್ಯ, ಉರ್ವ ಮಿಜಾರ್ ಕಾರ್ ಕಂಪೆನಿ ಬಳಿ, P O. ಉರ್ವ ಮಂಗಳೂರು.	5
19.	399—40 / 11–3–40	ಅೃತಪ್ಪ ಪೂಜಾರಿ S/o ತನಿಯ ಪೂಜಾರಿ, ತಣ್ಣೀರು ಬಾವಿ ಪಟೇಲರ ಮನೆಒಳಿ, P. O. ಪಣಂಬೂರು	15
20.	394–40 / 11–3–40	ಪೂವಪ್ಪ S/o ಸೋಮಪ್ಪ ಪೂಜಾರಿ, ಕೊಂಚಾಡಿ ದೇರೆಬೈಲು ಗುತ್ತಿಗೆ ಮನೆ, P. O. ಬಿಜೈ.	5
21.	598–40 / 15–4–40	ದಾಬು ಪೂಜಾರಿ S/o ಬಾಬು ಪೂಜಾರಿ, ಟೈಲರ್ ಪೆಂಟ್ಲಾಂಡ್ ಪೇಟೆ, ಮಂಗಳೂರು	5
22.	812—40 / 20–5–40	ಎಲ್ಯಪ್ಪೆ D/o ಅೃತ, ಲಯಿಸ್ ನಾಯ್ಕರ ಮನೆಒಳಿ ದೇರೆಬೈಲು ಗ್ರಾಮ, P. O. ದೇರೆಬೈಲು.	5
23.	616—40 / 18–4–40	ಮುಲ್ಕಿ ಮರ್ಧ S/o ಶಾಡ, ದೇರೆಬೈಲು ಕೊಟ್ಟಾರ ಗುರುವಪ್ಪನವರ ಗುತ್ತಿಗೆಯ ಬಳಿ; P. O. ದೇರೆಬೈಲು.	9
24.	742—40 / 9–5–40	ಪರಮೇಶ್ವರ ಮೂಲ್ಯ S/o ದೋಗು ಮೂಲ್ಯ, C/o ಸುಜೀರ್ ಕಾರ್ ಟೈಲ್ ಫೆಕ್ಟರಿ ಕಂಡತ್‌ಪಳ್ಳಿ, ಮಂಗಳೂರು.	5
25.	978—40 / 10–6–40	ಜೆರಾಮ್ ಪತ್ರಾವ್ S/o ಸಲ್ವದೋರ್ ಡೋಸ್ ಪತ್ರಾವ್; ಬೋಳೂರು A. J. ಸಲ್ಡಾನರ ಕಾಫಿ ಕಾರ್ಖಾನೆಯ ಬಳಿ; P. O. ಉರ್ವ ಮಂಗಳೂರು.	8
26.	942–40 / 4–6–40	ಕೆ. ಪೂವಪ್ಪ N/o ಕೃಷ್ಣ ಭಂಡಾರಿ, ಟೈಲರ್ ಮಣ್ಣಗುಡ್ಡೆ; ಮಂಗಳೂರು.	6
27.	921–40 / 1–6–40	ನಾರಾಯಣ S/o ಗುರುವ, ಕೊಟ್ಟಾರ 3ನೇ ಮೈಲು ಕಲ್ಲಿನ ಬಳಿ; P. O. ದೇರೆಬೈಲು	5
28.	1127–40 / 3–7–40	ಫ್ರೆಡ್ರಿಕ್ ಕರ್ಕಡ S/o ಎಲಿಶ ಕರ್ಕಡ, ಬೋಳೂರು ಉರ್ವ ಕೋಡಿಕಲ್‌ಗುಡ್ಡೆ ಕಬ್ಬಿಣದ ಕೆಲ್ಲ P. O. ಉರ್ವ ಮಂಗಳೂರು.	5
29.	1169–40 / 9–7–40	ಬಾಬು S/o ಲಿಂಗ ಮೈಲಿ, ಉರ್ವ ಮಿಜಾರ್‌ಕಾರ್ ಕಂಪೆನಿ ಬಳಿ ಗೋವಿಂದರಾಯರ ಪಕ್ಕ P. O. ಉರ್ವ; ಮಂಗಳೂರು.	5
30.	1190–40 / 12–7–40	ಹುಸನಬ್ಯಾರಿ S/o ಅಬ್ದುಲ್ಲ ಬ್ಯಾರಿ, ಕರಿಯಂಗಳ ಗ್ರಾಮ ಕರಿಯಂಗಳ ಎಲಿಮೆಂಟರಿ ಶಾಲೆಯ ಬಳಿ; P. O. ಗುರುಪುರ.	5

Office of the Bank
Pentlandpete Mangalore
6—8—1941.

A. Narasimha Rao,
Agent.
The Attur & Jawahar Bank Ltd
PENTLANDPET MANGALORE.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್ ಕೆನರಾ ಹೈಸ್ಕೂಲ್ ರೋಡ್, ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ಅತ್ತೂರು ವೈಕುಂಠ ಪ್ರಭು ಬೇಂಕ್ ಮತ್ತು ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಮಂಗಳೂರು. ಇವುಗಳಿಂದ ನಗಗಳ ಈಡಿನ ಮೇಲೆ ಸಾಲಪಡಕೊಂಡ ನಂತರ ಕ್ಲಪ್ತವಾಯಿದೆಗೆ ಅಸ್ಲು ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೇ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ, ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ಬಂದಿರುವುದರಿಂದಲೂ, ಸದ್ರಿಯುವರು ಈಡಾಗಿಟ್ಟ ನಗಗಳನ್ನು ಇದೇ 1941 ಇಸವಿ ಅಗೋಸ್ತ್ ತಿಂಗಳ ತಾರೀಕು 20ನೇ ಬುಧವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದ್ರಿಯುವರು ಈಡಿಟ್ಟ ನಗಗಳನ್ನು ಇದೇ 1941ನೇ ಇಸವಿ ಅಗೋಸ್ತ್ ತಿಂಗಳ ತಾ. 23ನೇ ಶನಿವಾರ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 3ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1.	961—39 / 16–5–39	ಕೆ. ಎಸ್. ಅಬ್ದುಲ್ ರಜಾಕ್ S/o ಕೆ. ಬುಡಾನ್ ಸಾಹೇಬ್, ಕುದ್ರೋಳಿ ಕಂಡತಪಳ್ಳಿ ಒಳಿ; ಮಂಗಳೂರು.	10
2	2625–39 / 5–12–39	ಉಗ್ಗು D/o ಶಂಕರ, ಕುದ್ರೋಳಿ ದೇವಸ್ಥಾನದ ಒಳಿ; ಮಂಗಳೂರು.	5
3.	102 – 40 / 16–1–40	ಬಿ. ಆರ್. ಭಟ್ S/o ಕೃಷ್ಣ ಭಟ್, ಎಡ್ವಕೇಟ್ ಬೈಕಂಪಾಡಿ; ಪಣಂಬೂರು.	9
4.	805–40 / 6–5–40	H. ಚಂದ್ರಾಯನಾಚಾರಿ S/o ಊವಯಾಚಾರಿ ಟೀಚರ್ ಮುನ್ಸಿಪಲ್ ಸೆಂಟ್ರಲ್‌ವಾರ್ಡ್ ಹುಡುಗರ ಶಾಲೆ, ಮಂಗಳೂರು.	13
5.	867–40 / 15–5–40	ಮೂಸಬ್ಯಾರಿ S/o ಮೊಯಿದಿನ್ ಬ್ಯಾರಿ, ದೊಡ್ಡ ಹಿತ್ಲು ಕಿನ್ನಿ ಗ್ರಾಮ ಏಲಕ್ಕಿ ವ್ಯಾಪಾರಿ, P. O. ಮಂಜೇಶ್ವರ	20
6.	932–40 / 23–5–40	ಚೈರ ಪೂಜಾರಿ S/o ದೂಮ ಪೂಜಾರಿ ಕೊಡಿಯಾಲಬೈಲು, ಬಿಜೈ	8
7.	953–40 / 26–5–40	ಕೊರಗ S/o ಊವಯ್ಯ, ಮುಕದಮ್ ತ್ಯಾಂಪಣ್ಣನವರ ಹಿತ್ಲು ಒಸ್ತಿಯ ಎದುರು ಅವಲಕ್ಕಿಕೇರಿ, ಮಂಗಳೂರು	5
8.	1284–40 / 16–7–40	ಹಮ್ಮಬ್ಬ ಬ್ಯಾರಿ S/o ಹಾಜಿಯಬ್ಬ ಬ್ಯಾರಿ, ಒವವಿದೆ ಬೈಕಂಪಾಡಿ ಗ್ರಾಮ P. O. ಪಣಂಬೂರು.	5
9	1271–40 / 15–7–40	ಬಿ ಮಹಮ್ಮದ್ ಕಾಸಿಮ್ S/o ಬಿ. ಮುಹಮ್ಮದಾಲಿ, ಉರ್ವ ಚಿಲಿಂಬಿ ಬಳಿ, ಮಂಗಳೂರು	5
10.	1342–40 / 25–7–40	ಬಿ. ವೆಂಕಟ್ರಮಣ S/o N. ಮಂಜುನಾಥಯ್ಯ, ಫಿಟ್ಟರ್ ಸಿ. ಪಿ. ಸಿ. ಕಂಪೆನಿ; ಮಂಗಳೂರು.	6
11.	1357–40 / 29–7–40	ಸುಲೆಮಾನ್ ಬ್ಯಾರಿ S/o ಅಮದೆ ಬ್ಯಾರಿ, ಕುದ್ರೋಳಿ ಸುಜೀರ್ ಟೈಲ್ ಫೆಕ್ಟರಿ ಒಳಿ ಕಟ್ಟಿಗೆ ಡಿಪ್ಪೋ; ಮಂಗಳೂರು	5
12.	1455–40 / 10–8–40	ಸೋಮಪ್ಪ N/o ದೇಗ, ಬೊಕ್ಕಪಟ್ಣ ಉಪ್ಪಿನಕೋಡಿ ಅಟೆದಪ ಮೀನು ಶಿಕಾರಿ; ಮಂಗಳೂರು.	5
13	1618–40 / 30–8–40	ಸೋಮಪ್ಪ ಪೂಜಾರಿ S/o ಗುಡ್ಡ ಪೂಜಾರಿ, ಬೈಲು ಕಂದಾವರ ಗ್ರಾಮ ತಲೆಕಿದಕೋಡಿ; P O. ಗುರುಪುರ.	5
14.	1771—40 / 23–9–40	ಉಮ್ಮರೆ ಬ್ಯಾರಿ S/o ಅಮದೆ ಬ್ಯಾರಿ, ನಡಿಗ್ರಾಮ ವ್ಯಾಪಾರಿ ಕೊಳ್ಳಿ P O. ಉಳ್ಳಾಲ	5
15.	1799–40 / 28–9–40	T. ಶ್ರೀಧರ ನಾಯ್ಕ S/o ಪಿ. ದಾಸಪ್ಪ ನಾಯ್ಕ, ಮಾಸ್ಟರ್ ಸಾಹೇಬರ ಕಂಪೌಂಡು ದೇವಂಗುಲಸ್ಥಾನದ ಬಳಿ, ಮಂಗಳೂರು.	5

Office of the Bank
6—8—1941.

A. Vaikunta Prabhu,
Managing Director.
The Attur & Jawahar Bank Ltd.
Canara High School Road Manglore

ಭಿನ್ನ ಜಾತಿಗಳೊಳಗೆ ವಿವಾಹವಾಗುವುದು ಶಾಸ್ತ್ರ ವಿರುದ್ಧವೆ?

ಪುರಾಣಗಳು ಏನು ಹೇಳುತ್ತವೆ?

ಇತಿಹಾಸಗಳ ಆಧಾರವೇನು?

ವೈಜ್ಞಾನಿಕರ ಅಭಿಪ್ರಾಯ ಹೇಗಿದೆ?

ಬೇರೆ ಬೇರೆ ಜಾತಿಗಳ ಹೆಣ್ಣು ಗಂಡುಗಳೊಳಗೆ ಪ್ರೇಮ ವಿವಾಹವಾಗುವುದನ್ನು ಇಂದಿನ ಸಮಾಜದ ಮುಖಂಡರು ವಕ್ರದೃಷ್ಟಿಯಿಂದ ನೋಡುತ್ತಾರೆ. ಅನೇಕ ಮಂದಿ ಯುವಕ ಯುವತಿಯರು ಅಂತಹ ಧೀರ ಮಾರ್ಗವನ್ನು ತುಳಿದು ಸಮಾಜದ ಕಠಿಣ ನಿಯಮಗಳಿಗೆ ಬಲಿಯಾಗಿ ಸಂಕಷ್ಟಗಳನ್ನು ಅನುಭವಿಸಿದ್ದಾರೆ. ಆದರೆ ಭಿನ್ನ ಜಾತಿಗಳೊಳಗೆ ವಿವಾಹವಾಗುವುದು ಶಾಸ್ತ್ರ ನಿಷಿದ್ಧವೇ! ಹೇಗೆ ಎಂಬುದು ವಿಚಾರಾರ್ಹವಾದ ವಿಷಯವಾಗಿದೆ.

ಅಂತರ್ಜಾತೀಯ ವಿವಾಹವು ಶಾಸ್ತ್ರಸಮ್ಮತವೂ ಸಮಾಜ ಹಿತಕಾರಣವೂ ಆಗಿದೆಯೆಂದು ಕೆಳಗಿನ ದೃಷ್ಟಾಂತಗಳಿಂದ ತಿಳಿಯಬಹುದಾಗಿದೆ ಸನಾತನ ಅಭಿಪ್ರಾಯಗಳು ಈ ವಿಷಯದ ಕಡೆಗೆ ತಮ್ಮ ಸಮ್ಮತಿಯಿತ್ತಿವೆಯೆಂದು ನಾವು ಹಾರೈಸಬಹುದೆ? ಜನಾಂಗದಲ್ಲಿ ಸುದೃಢ ಸಂತತಿಯುಂಟಾಗಬೇಕಾದರೆ ಬಿನ್ನ ಜಾತಿಯ ತರುಣ ತರುಣಿಯ ದಾಂಪತ್ಯವೇ ಮುಖ್ಯ ಸಾಧನವೆಂದು ಇತ್ತೀಚೆಗೆ ಹಲವು ವಿಜ್ಞಾನಿಗಳೂ ಒಪ್ಪಿದ ವಿಷಯವು ಹಳೆಯ ಸಂಪ್ರದಾಯವಾದಿಗಳು ಇಷ್ಟರಿಂದಲೂ ಕಣ್ಣು ತೆರೆಯಲಾರರೆ?

— ಹೀಗೆಂದು ಲಾಹೋರಿನಲ್ಲಿ ಸ್ಥಾಪಿತವಾದ ಜಟ್ ಪಟ್ ತೋರಕ ಮಂಡಲ್ ಎಂಬ ಜಾತೀಯತಾ ನಿರ್ಮೂಲ ಸಾಧಕ ಸಂಘದ ಅಧ್ಯಕ್ಷರು ಒಂದು ಲೇಖನದಲ್ಲಿ ಈ ವಿಷಯ ಶಾಸ್ತ್ರೀಯ ಸಿದ್ಧಾಂತವನ್ನು ತೋರಿಸುತ್ತಾರೆ

ಅವರು ಕೊಡುವ ಕಾರಣಗಳು ಸಮಕ್ಷವಾಗುವಂತಿವೆ

ೲ ೲ ೲ

ಪ್ರಿಯವ್ರತನೆಂಬ ಕ್ಷತ್ರಿಯ ರಾಜನು ವಿಶ್ವಕರ್ಮನೆಂಬ ಬ್ರಾಹ್ಮಣನ ಪುತ್ರಿ ಬರ್ಹಿಷ್ಮತಿ ಎಂಬವಳನ್ನು ವಿವಾಹವಾಗಿದ್ದನು.

ಶುಕ್ರಾಚಾರ್ಯರ ಮಗಳು ಕೃಕ್ಷಿ ಎಂಬವಳನ್ನು ಕ್ಷತ್ರಿಯ ರಾಜನಾದ ನೀಪನು ಮದುವೆಯಾಗಿದ್ದನು. ಈ ವಂಶದಲ್ಲಿಯೇ ಬ್ರಾಹ್ಮಣರ ಮೌದ್ಗಲಾಯ ಗೋತ್ರದ ಸ್ಥಾಪಕನಾದ ಮುದ್ಗಲನು ಜನ್ಮವೆತ್ತಿದನು

ಪ್ರಮಥೆಯೆಂಬ ಬ್ರಾಹ್ಮಣ ಕನ್ಯೆಯು ಒಬ್ಬ ಕ್ಷೌರಿಕ ಯುವಕನನ್ನು ಮದುವೆಯಾಗಿ, ಅವರ ಒಸುರಲ್ಲಿ ಮಹಾಮುನಿ ಮಾತಂಗನು ಜನ್ಮವೆತ್ತಿದನು

ೲ ೲ ೲ

ವ್ಯಭಿಚಾರಿಣಿಯ ಪುತ್ರನಾದ ವಸಿಷ್ಠನು, ಕರ್ದಮನೆಂಬ ಕ್ಷತ್ರಿಯನ ಪುತ್ರಿಯಾದ ಅರುಂಧತಿಯನ್ನು ಮದುವೆಯಾದನು. ಅವರ ಮಗನಾದ ಶಕ್ತಿಯು, ಅದೃಶ್ಯಂತಿ ಎಂಬ ಚಂಡಾಲ ಕನ್ಯೆಯನ್ನು ವಿವಾಹವಾದನು ಅವರ ಮಗನಾದ ಪ್ರಸಿದ್ಧ ಪಾರಾಶರ ಗೋತ್ರದ ಮೂಲಪುರುಷನಾದ ಪರಾಶರನೆಂಬ ಋಷಿಯು ಸತ್ಯವತಿಯೆಂಬ ಬೆಸ್ತ ಹುಡುಗಿಯನ್ನು ಮದುವೆಯಾದನು ಅವರ ಮಗನಾದ ವೇದವ್ಯಾಸನೇ ಪ್ರಸಿದ್ಧ ಮಹಾಭಾರತದ ಕರ್ತೃವು. ವೇದವ್ಯಾಸನು ಅಂಬೆ ಅಂಬಾಲಿಕೆಯರೆಂಬ ಕ್ಷತ್ರಿಯ ಕನ್ಯೆಯರಲ್ಲಿ ಮಕ್ಕಳನ್ನು ಹುಟ್ಟಿಸಿದನು ಅವರಲ್ಲಿ ಒಬ್ಬನು ಪಾಂಡು ಆತನು ತನ್ನ ಇಬ್ಬರು ಹೆಂಡಿರಿಗೂ ನಿಯೋಗ ಮೂಲಕ ಸಂತಾನ ಪಡೆಯಿರೆಂದು ಸಮ್ಮತಿಯಿತ್ತನು ಆ ಮಕ್ಕಳೇ ಭಾರತದ ಇತಿಹಾಸದಲ್ಲಿ ಅಜರಾಮರ ಕೀರ್ತಿಪಡೆದ ಪಾಂಡವರು, ಕರ್ಣ, ಘಟೋದ್ಗಚ, ವಿದುರ, ಬಬ್ರುವಾಹನ ಇವರೆಲ್ಲರೂ ಅಂತರ್ಜಾತೀಯ ವಿವಾಹದಿಂದಲೇ ಹುಟ್ಟಿದ ಮಹಾಪುರುಷರು!

ಇತಿಹಾಸ ಕಾಲದಲ್ಲಿ, ಚಂದ್ರಗುಪ್ತನು ಬ್ರಾಹ್ಮಣ ಕನ್ಯೆಯೊಬ್ಬಳನ್ನು ವಿವಾಹವಾದನು. ಅವರ ಬಸುರಲ್ಲಿಯೇ ಪ್ರಸಿದ್ಧ ರಾಜನಾದ ಅಶೋಕನು ಜನ್ಮ ತಾಳಿದನು. ಅಶೋಕನು ಬೇರೆ ಜಾತಿಯ ಹೆಣ್ಣನು ಮದುವೆಯಾದನು. ಆತನ ಹೆಂಡತಿಯು ಒಬ್ಬ ವೈಶ್ಯ ಕನ್ಯೆಯಾಗಿದ್ದಳು.

ಹರ್ಷನು ಬ್ರಾಹ್ಮಣನು. ಆದರೆ ಆತನ ಪುತ್ರಿಯನ್ನು ಕ್ಷತ್ರಿಯನೊಬ್ಬನಿಗೆ ವಿವಾಹಮಾಡಿ ಕೊಟ್ಟಿದ್ದನು. ವಿಕ್ರಮಾದಿತ್ಯನ ಯಜ್ಞಾಚಾರ್ಯ ವ್ಯಾಧಕರ್ಮನು ಒಬ್ಬ ಕೋಳಿ ಸಾಕುವವನ ಮಗನು ಆತನ ತಾಯಿ ಮಾತ್ರ ಬ್ರಾಹ್ಮಣ ಹೆಂಗುಸಾಗಿದ್ದಳು. ಕೃಷ್ಣಭಟ್ಟನೆಂಬ ಬ್ರಾಹ್ಮಣ ಯುವಕನು ಚಾಂಡಾಳ ಕನ್ಯೆಯಲ್ಲಿ ಪ್ರೇಮಗೊಂಡು ಅವಳನ್ನು ಕೈಹಿಡಿದನು. ಅವನೇ ಮಾತಂಗ ಗೋತ್ರದ ಪ್ರಧಾನ ಪುರುಷನು.

ಈ ಮೇಲಿನ ಉದಾಹರಣೆಗಳಿಂದ ಶಾಸ್ತ್ರವು ಅಂತರ್ಜಾತೀಯ ವಿವಾಹವನ್ನು ನಿಷೇಧಿಸುವುದಿಲ್ಲವೆಂಬುದು ಖಚಿತವಾಗುವುದಿಲ್ಲವೆ? ಇಂದು ಹಿಂದೂ ಸಮಾಜದಲ್ಲಿ ಈ ಆಚಾರಗಳು ಹಿಂದೆ ಶಾಸ್ತ್ರಗಳಲ್ಲಿ ಅಷ್ಟು ನಿಷ್ಠುರವಾಗಿರಲಿಲ್ಲವೆಂಬುದಕ್ಕೆ ಇವು ಸಾಕಷ್ಟು ನಿದರ್ಶನಗಳಲ್ಲವೆ? ಆರ್ಯಕುಲದ ಕೀರ್ತಿ ಗೌರವಗಳಿಗೆ ಅಂತರ್ಜಾತೀಯ ವಿವಾಹಗಳಿಂದ ಹಾನಿಯಿಲ್ಲವೆಂದು ಇವುಗಳಿಂದ ಪ್ರಮಾಣಪೂರ್ವಕ ನಿರ್ಧಾರವಾಗುವುದಿಲ್ಲವೆ?

—ಹೀಗೆಂದು ಅವರು ವಾದಿಸಿರುವರು.

ಸಾರ್ವಜನಿಕ ವಿಶ್ವಾಸವೇ

“ಓರಿಯಂಟಲ್”ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12-39	ರೂ. 79½ ಕೋಟಿಗಿಂತ ಮಿಕ್ಕಿದೆ
ಫಂಡುಗಳು	,,	ರೂ 25½ ,, ,,
ವಾರ್ಷಿಕ ಆದಾಯ	,,	ಸುಮಾರು ರೂ 4¾ ಕೋಟಿಗೆ ,,

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೊಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

	ಅ	ದಿ ಇನ್ಸ್‌ಪೆಕ್ಟರ್
ಸೌತ್ ಪೆರೇಡ್,	ಥ	ಕಾರ್ನಾಡ್ ಸದಾಶಿವರಾವ್ ರೋಡ್,
ಬೆಂಗಳೂರು.	ವಾ	ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆಯಿಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆಮುಪರಿಪ್ತ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ “ಸುಕ್ರ ಸಂಜೀವನ”ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ಮಾಡಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

¼ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್ ಸಿ ಎಸ್ (ಲಂಡನ್) ಎಂ. ಸಿ ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು –

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ಅವನು ಕ್ಷಮಾರ್ಹನೇ?

[6ನೆಯ ಪುಟದಿಂದ ಮುಂದುವರಿದುದು]

ಯಾದನು! ಎಷ್ಟೆಂದರೂ ಜೀವನ ಮಿತ್ರ ನಲ್ಲವೇ? ಇನ್ನಾದರೂ ತನ್ನ ಸ್ನೇಹಿತನನ್ನು ತನ್ನ ಪೋಷಣೆಯ ಭಾರದಿಂದ ತಪ್ಪಿಸಿ, ರಕ್ಷಿಸಬೇಕೆಂಬೇ ಅವನು ಮಾಯವಾಗಿರಕೂಡದೇಕೆ?

ಶೀನುವು ಬೊಂಬಾಯಿಯಲ್ಲಿ ಕಂಗೆಟ್ಟನು. ಕಷ್ಟಕಾಲದಲ್ಲಿ ಇದ್ದ ಒಬ್ಬ ಮಿತ್ರನೂ ಕೈಬಿಟ್ಟನೆಂದು ಅವನಿಗೆ ಅತಿ ವ್ಯಸನವಾಯಿತು. ಇಂಥವರ ಮೈತ್ರಿಯು ದುಡ್ಡಿರುವ ವರೇಗೆ ಮಾತ್ರ ಎಂಬುದನ್ನವನು ಅರಿತುದು ಆಗಲೇ! ಎನ್ನಬಹುದು! ಗೆಳೆಯರ ಸೋಗಿನಲ್ಲಿದ್ದವರನ್ನು ನಂಬಿ ತಾನು ಕೆಟ್ಟೆನೆಂದು ಅವನಿಗೆ ಹೊಳೆಯಿತು. ಜ್ಞಾನೋದಯವೂ ಅವನಲ್ಲಾಯಿತು. ತನ್ನ ತಾಯಿಯು ಅಂದು ಊರನ್ನು ಬಿಡಬಾರದೆಂದು ಕಣ್ಣೀರಿಟ್ಟು ಬೇಡಿಕೊಳ್ಳುವಾಗಿನ ದೃಶ್ಯವು ಅವನಿಗೆ ನೆನಪಾಗಿ ಅವನು ಕಣ್ಣೀರು ಸುರಿಸಿದನು. ಪ್ರೀತಿಯ ತಮ್ಮನ ನೆನಪಾಯಿತು. 'ಅವನು ನಾನಿಲ್ಲದೆ ಎಷ್ಟು ಬೇಸರ ಪಡುತ್ತಿರುವನೋ? ಹರಕು ಅಂಗಿಗಳನ್ನು ಧರಿಸಿ ಶಾಲೆಗೆ ಹೋಗುತ್ತಿರುವನೋ?' ಎಂದು ಮುಂತಾಗಿ ಶೀನುವು ಭಾವಿಸತೊಡಗಿದನು,

ಮೊದಲು ಶೀನುವು ಯಾವ ನಿರ್ಧಾರಕ್ಕೂ ಬರಲಿಲ್ಲ. ಕಡೆಗೆ ತನ್ನ ಹುಟ್ಟು ಮನೆಯೇ ಗತಿಯೆಂದು ನಿಶ್ಚಯಿಸಿದನು. ಮರದಿನವೇ ಅವನು ತನ್ನಲ್ಲಿದ್ದ ರಿಸ್ಟ್ ವಾಚನ್ನೂ, ಫೌಂಟನ್ ಪೆನ್ನನ್ನೂ ಬೆರಳುಂಗುರವನ್ನೂ ಮಾರಿ, ರೈಲನ್ನೇರಿದನು.

ಹಾಗೂ ಶೀನುವು ಬೆಂಗಳೂರು ಸೇರಿದನು. ಮಿತ್ರರಿಗೆ ಮುಖ ತೋರಿಸದೆ ತನ್ನೂರಿಗೆ ಪಯಣ ಬೆಳಸಿದನು. ಬೆಳಿಗ್ಗೆ ೯ ಗಂಟೆಗೆ ಊರನ್ನು ಸೇರಿದನು. ರಸ್ತೆಯಲ್ಲಿ ಶ್ರೀಪಾದರಾಯರು ಸಿಕ್ಕಿದರು. ಶೀನುವನ್ನು ನೋಡಿ ಆಶ್ಚರ್ಯದಿಂದ "ಏನೋ ಶೀನು? ನಮ್ಮ ಹಳ್ಳಿಗೆ ಬರಲಾರೆನೆಂದು ಪ್ರತಿಜ್ಞೆ ಮಾಡಿದವನು ನೀನು! ಕಡೆಗೆ ಬಂದೇ ಬಿಟ್ಟೆ ಅಲ್ಲವೇ? ನಮ್ಮೂರಿನ ಭಾಗ್ಯ. ತಂದೆ ಸತ್ತ ಮೇಲಾದರೂ ನಿನ್ನ ಮನೆಯ ನೆನಪು ನಿನಗಾದುದು ನಿನ್ನ ತಾಯಿಯ ಪೂರ್ವ ಪುಣ್ಯದಿಂದೆನ್ನಬಹುದು" ಎಂದರು.

ಶೀನುವಿಗೆ ಸಿಡಿಲು ಬಡಿದಂತಾಯಿತು! ತನ್ನ ತಂದೆ ತೀರಿಹೋದ ವರ್ತಮಾನವು ಅವನಿಗೆ ಹೇಗೆ ತಿಳಿಯಬೇಕು? ಅವನು ಮುಖವೆತ್ತದೆ ಮುಂದುವರಿದನು. ಅತೀವ ದುಃಖದಿಂದಲೂ ನಾಚಿಕೆಯಿಂದಲೂ ಅವನು ಮ್ಲಾನಚಿತ್ತನಾದನು! ಅವನು ಅಂದು ಊರು ಬಿಡುವಾಗ ಐಶ್ವರ್ಯದ ಮಹಿಮೆಯಿಂದ ಅಮಲಿನಲ್ಲಿರುವಾಗ— ಶ್ರೀಪಾದರಾಯರ ಮಾತನ್ನು ಕೇಳದೆ ಅವರನ್ನು ನಿಂದಿಸಿ ಹೊರಟಿದ್ದನು. ಆದರೆ ಅದೇ ಶ್ರೀನಿವಾಸರಾಯನ ಸ್ಥಿತಿಯು ಈ ದಿನ ಎಷ್ಟು ಶೋಚನೀಯ! ಶ್ರೀಪಾದರಾಯರು ಮಾತನಾಡದೆ ಮುಂದರಿಯುತ್ತಿರುವ ಶೀನುವನ್ನು ಕಂಡು ಸ್ವಲ್ಪ ಸಿಟ್ಟಿನಿಂದ "ತಂದೆ ಸತ್ತರೂ ಇನ್ನೂ ಬುದ್ಧಿ ಬಂದಿಲ್ಲವೆಂದು ತೋರುತ್ತದೆ. ಇನ್ನೂ ಆ ಹಣದ ಸೊಕ್ಕು ಇಳಿಯಲಿಲ್ಲವೆ ನಿನಗೆ ಶೀನು? ಇಲ್ಲದಿದ್ದರೆ ಏನು ರೀತಿ ಇವನದು! ಮಾತನ್ನೇ ಆಡುವುದಿಲ್ಲ. ನಿಮ್ಮ ಮನೆಯವರ ಅವಸ್ಥೆಯನ್ನು ಸ್ವಲ್ಪ ನೋಡು. ಅವರು ದಿನ ಒಂದರ ಎಷ್ಟು ಊಟಗಳನ್ನು ಮಾಡುತ್ತಿದ್ದಾರೆ ನೋಡು. ತಿಂಗಳಲ್ಲಿ ಎಷ್ಟು ದಿನ ಉಪವಾಸ ಬೀಳುತ್ತಾರೆ ಕಣ್ಣು ಬಿಟ್ಟು ನೋಡು" ಎಂದು ಮುಂತಾಗಿ ಜರೆಯಲಾರಂಭಿಸಿದರು. ಶೀನುವಿಗೆ ಈ ಕರ್ಣ ಕಠೋರಗಳಾದ ಮಾತಿನಿಂದ ಸಿಟ್ಟು ಬರುವುದರ ಬದಲಾಗಿ ಅಳು ಬಂತು. ಅವನು ಮೆಲ್ಲ ಮೆಲ್ಲನೆ ಮನೆಯ ಕಡೆ ಹೆಜ್ಜೆ ಹಾಕುತಿದ್ದನು.

ಮನೆಯ ಚಾವಡಿಯನ್ನು ಶೀನುವು ಸದ್ದಿಲ್ಲದೆ ಹತ್ತಿದನು. ಅವನ ಎದೆಯು ಡವಡವ ಹಾರುತಿತ್ತು. ಚಾವಡಿಯ ಬಲಪಾರ್ಶ್ವದ ಕೋಣೆಯಲ್ಲಿ ಕುಳಿತು ಅವನ ತಮ್ಮ ನಾಣುವು ಒಂದು ಪದ್ಯವನ್ನು ಕಂಠಪಾಠ ಮಾಡುತ್ತಿದ್ದನು. ಶೀನುವು ಅವನ ಹರಕುಮುರುಕಾದ ವಸ್ತ್ರಗಳನ್ನು ಕಂಡು ಕಂಬನಿದುಂಬಿದನು. ನಾಣುವು ಚಾವಡಿಗೆ ಬೆನ್ನುಮಾಡಿ ಕುಳಿತದ್ದರಿಂದ ತನ್ನ ಈ ಹತಭಾಗ್ಯ ಅಣ್ಣನನ್ನು ಕಾಣಲಿಲ್ಲ.

ಶೀನುವು ಚಾವಡಿಯಲ್ಲಿದ್ದ ಕೈಗಳು ನಷ್ಟವಾಗಿ ಹೋದ ಕುರ್ಚಿಯೊಂದರಲ್ಲಿ ತನ್ನ ಜಡಶರೀರವನ್ನಿಟ್ಟು ನಿಟ್ಟುಸಿರು ಬಿಟ್ಟನು. ಅವನ ತಾಯಿಯು ಒಳಗಡೆಯಲ್ಲಿ ಏನೋ ಕೆಲಸದಲ್ಲಿದ್ದಳು. ಶೀನುವಿಗೆ ಒಳಗಡೆ ಹೋಗುವಷ್ಟು ಧೈರ್ಯವಿದ್ದರಲ್ಲವೇ?

ನಾಣುವು ಪದ್ಯವನ್ನು ಗಟ್ಟಿಯಾಗಿ ಓದುತ್ತಿದ್ದನು.

"ಏರುವನು ರವಿ ಏರುವನು
ಬಾನೊಳು ಸಣ್ಣಗೆ ತೋರುವನು .

ಶೀನುವು ತದೇಕಾಗ್ರ ಚಿತ್ತನಾಗಿ ಪದ್ಯವನ್ನು ಕೇಳುತಿದ್ದನು.

ಏರಿದವನು ಚಿಕ್ಕವನಿರಬೇಕೆಲೆ
ಎಂಬಾ ಮಾತನು ಸಾರುವನು—
ಸಾರುವನು. ಸಾರುವನು.

ಶೀನುವು ಸಹ ಈ ಪದ್ಯವನ್ನು ಬಾಲ್ಯದಲ್ಲಿ ಓದಿದ್ದನು. ಆದರೆ ಅಂದು ಅದರ ಭಾವಾರ್ಥವು ಅವನಿಗೆ ಹೊಳೆದಿರಲಿಲ್ಲ. ಆದರೆ ಇಂದು ಅದರ ಅಭಿಪ್ರಾಯವು ಅವನಿಗೆ ತಿಳಿಯಿತು. ತನ್ನ ತಮ್ಮನು ತನ್ನನ್ನು ಹೀಯಾಳಿಸುತ್ತಿರುವನೆಂದೇ ಅವನು ಭಾವಿಸಿದನು. ಪಶ್ಚಾತ್ತಾಪದಿಂದ ಅವನ ಮನಸ್ಸು ಸುಡಹತ್ತಿತು. ಹಿಂದಿನ ಅವನ ಕೃತ್ಯಗಳೆಲ್ಲ ಒಂದೊಂದಾಗಿ ನೆನಪಿಗೆ ಬಂದು, ಅವನ ತಲೆಯು ಬಿಸಿಯೇರಹತ್ತಿತು.

ಪಶ್ಚಾತ್ತಾಪದಿಂದ ಮನಸ್ಸು ಶುದ್ಧವಾಗುವುದು. ದುರ್ಗುಣಗಳೆಲ್ಲ ನಾಶವಾಗುವುವು. ಪಶ್ಚಾತ್ತಾಪದಿಂದ ಪರಿಶುದ್ಧಾಂತಃಕರಣನಾದ ಶೀನುವನ್ನು ಅವನ ತಾಯಿಯು ಕ್ಷಮಿಸಬಲ್ಲಳೇ? ಅವನು ಕ್ಷಮಾರ್ಹನೇ?

ನಿಮ್ಮ ಸಂಬಳವು

ರೂ. ೪೦ ಇರಲಿ

ಅಥವಾ ರೂ. ೧೦೦ ಇರಲಿ

ನೀವು ಕೊಳ್ಳಬಹುದು

ಒಂದು ಲಾಭಕರ ಧನ ಸಂಚಯ

ಈಗಿನ ನಿಮ್ಮ ಪರಮಾನವು, ವ್ಯವಹಾರ, ಉದ್ಯೋಗ ಅಥವಾ ಧನಸಂಚಯ ಯಾವುದೇ ರೂಪದಲ್ಲಿರಲಿ ಭವಿಷ್ಯದಲ್ಲಿ ನೀವು ಅಪಾಯವನ್ನು ಎದುರಿಸಲಾರಿರಿ. ನಿಮಗೆ ಸುರಕ್ಷಿತತೆಬೇಕು ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ಹಣವನ್ನು ವಿನಿಯೋಗಿಸುವದಕ್ಕಿಂತ ಬೇರೆ ಯಾವ ಕ್ಷೇಮಕರವಾದ ಮಾರ್ಗವೂ ಇಲ್ಲ. ಪೋಸ್ಟಾಫೀಸ್‌ನಲ್ಲಿ-೧೦ಕ್ಕೆ ರೂ. ೧೨ಕ್ಕೆ ಮಾರುತ್ತೆ, ಮತ್ತು ರೂ. ೩/೯ ಲಾಭವನ್ನು ಹತ್ತು ವರ್ಷಗಳ ಕೊನೆಯಲ್ಲಿ ಆದಾಯ ತೆರಿಗೆ ವಿನಾಯಿತಿಯಿಂದ ದೊರೆಯುತ್ತೆ. ಬೇಕಾದಾಗ ಹಣವನ್ನು ಆದು ಗಳಿಸಿದ ಬಡ್ಡಿಯನ್ನೂ ವಾಪಸು ಕೊಡಲಾಗುತ್ತೆ.

ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳು ಉಳಿಸಲು ಸಹಾಯ ಮಾಡುತ್ತವೆ

ಪೋಸ್ಟಾಫೀಸ್‌ನಲ್ಲಿ ಮಾರುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು ಆದರ್ಶವಾದ ಸುರಕ್ಷಿತತೆಯಾಗಿದೆ, ಇವನ್ನು ಕದಿಯಲು ಅವಕಾಶವಿಲ್ಲ, ಮೌಲ್ಯದಲ್ಲಿ ತಗ್ಗುವದಿಲ್ಲ. ಈಗಲೇ ಉಳಿಸಲು ಆರಂಭಿಸಿ. ನಿಮಗೆ ರೂ. ೧೦ನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಆಣೆ ೪, ಆಣೆ ೮ ಅಥವಾ ೧ ರೂ ನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಳ್ಳಿರಿ ಮತ್ತು ಅವನ್ನು ಕಾರ್ಡ್ ಮೇಲೆ ಅಂಟಿಸಿರಿ— ಇವು ಉಚಿತವಾಗಿ ದೊರೆಯುತ್ತವೆ. ನಿಮ್ಮಲ್ಲಿ ರೂ. ೧೦ ಬೆಲೆ ಬಾಳುವ ಸ್ಟಾಂಪ್‌ಗಳಾದ ಕೂಡಲೆ ಅವನ್ನು ಪೋಸ್ಟಾಫೀಸ್‌ನಲ್ಲಿ ಸರ್ಟಿಫಿಕೇಟ್‌ನ ಬದಲಿಸಿರಿ.

ಡಿಫೆನ್ಸ್ ಸೇವಿಂಗ್ಸ್

ಸರ್ಟಿಫಿಕೇಟ್‌ಗಳನ್ನು

GI KN. 37

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906. **THE CANARA BANKING CORPORATION, LIMITED**

(Incorporated in Br. India)

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್,

ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ-ಎಲ್ಲಾ ಬೇಂಕ್ ವ್ಯವಹಾರ ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ 9% ರೂ. 26ರಿಂದ 100ರ ವರೆಗೆ ಸೇ. 8%

ರೂ. 101ರಿಂದ 500ರ ವರೆಗೆ ಸೇ. 7% ರೂ. 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ,

ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) ***B. Narayana Shetty,***

Agent at Kankanady.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್‌ಕೋರ್ಟ್ ನಂಬ್ರ 72/1921ಕ್ರಮ ಅರ್ಜಿ ನಂಬ್ರ 149/1922 ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಬಾಬ್ತು ತಾರೀಕು 26-7-1940 ರಿಂದ ತಾರೀಕು 31-7-1941ರ ವರೆಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ	ಆ	ಪೈ	ಬೆಳ್ತಿಗೆ ಮೂ	ಕ	ಸೇ	ಸುಗ್ಗಿ ಬೆಳ್ತಿಗೆ ಮೂ	ಕ	ಸೇ	ಮಸ್ಸ್ಕಿ ಮೂ	ಕ	ಸೇ	ಛತ್ರ ಮೂ	ಕ	ಸೇ	ಕ್ಯಾ
ಗುದಸ್ತಾ ಶಿಲ್ಕು ಉಡ್ಪಿ ಡಿ. ಮು. ಕೋರ್ಟು ನಂಬ್ರ 504/39ನೇ ವ್ಯಾಜ್ಯ ತಾರೀಕು 7-12-39ರಲ್ಲು ಖರ್ಚಿಗೆ	48	14	5	0	0	6¼				27	2	10				
ಕೊಟ್ಟ ಬಾಬ್ತು ಸೈಕಿ ಜಮಾ	300	0	0													
ವರ್ಷ ಹುಟ್ಟುವಳಿ ಜಮಾ	155	11	8	18	1	0¼	6	0	0	33	2	1	24	0	0	60
ಮೇಲಿನ ಹುಟ್ಟುವಳಿ ಅಕ್ಕಿ ವ ಭತ್ತ ವಿಕ್ರಿತ ಜಮಾ	369	5	2													
ಬಿಡಾರ ಬಾಡಿಗೆ ಜಮಾ	9	8	0													
ಅನಂತವ್ರತದ ಸಮಾರಾಧನೆ ಮಾಡುವರೆ ಖರ್ಚಿಗೆ ಕೊಟ್ಟಂತೆ ಜಮಾ	10	0	0													
ಮಾರೆಮ್ಮ ದೇವರ ಭಂಡಾರದಿಂದ ಖರ್ಚಿಗೆ ಪಡದ್ದು ಜಮಾ	41	0	0		1	7										
ಉತ್ಸವಗಳ ವರ್ಗದಲ್ಲಿ ಜಮಾ	3	0	0													10
ಗುರುಗಳವರಿಗೆ ಸಲುವ ಬಾಬ್ತು ಅನಾಮತ್ತು ಇಟ್ಟದ್ದು ಜಮಾ	1	0	0													
ಕ್ರಯಕ್ಕೆ ಪಡೆದ ಕ್ಯಾ ವ ಅಕ್ಕಿ ಜಮಾ				22	0	0										
ಶುಭಶೋಭಾನಾದಿಗಳಿಂದ ಬರುವ ಕಾಣಿಕೆ ಜಮಾ	5	1	9													1
ಜುಮಲಾ	973	10	9	48	2	13¼	6	0	0	61	2	0½	24	0	0	1014

ಖರ್ಚು

ಖರ್ಚು ವಿವರ	ನಗದು ರೂ	ಆ	ಪೈ	ಬೆಳ್ತಿಗೆ ಮೂ	ಕ	ಸೇ	ಸುಗ್ಗಿ ಬೆಳ್ತಿಗೆ ಮೂ	ಕ	ಸೇ	ಮಸ್ಸ್ಕಿ ಮೂ	ಕ	ಸೇ	ಛತ್ರ ಮೂ	ಕ	ಸೇ	ಕ್ಯಾ
ಆಸ್ತಿಗಳ ಶೀರ್ವೆ ಖರ್ಚು	84	2	0													
ಸ್ಥಿರಾಸ್ತಿ ಕ್ರಯ ಖರ್ಚು	5	11	0													
ಸಿಕ್ತ ನೈವೇದ್ಯಕ್ಕೆ ಅಡಿಕೆ ಖರ್ಚು	5	11	0													
ಸಿಕ್ತ ಸಮರ್ಪಣ ತಂಗಿನ ಕ್ಯಾ ಕ್ರಯದ್ದು ವ ಗಾಣದ್ದು ಕೂಲಿ ಖರ್ಚು	11	4	6													730
ಅಮೃತಪಡಿ ಬಗ್ಗೆ ಅಕ್ಕಿ ಕ್ರಯದ ಬಾಬ್ತು ಖರ್ಚು	114	12	0	21	2	12¼										
ಪಾರುಪತ್ಯ ವ ದೇವಸ್ಥಾನದ ಬಾಬ್ತು 1347 ಮತ್ತು 1348 ಫಸಲಿಗಳ ಓಡಿಟರವರ ಫೀಸು 2 ವರ್ಷಗಳ ಬಾಬ್ತು ಖರ್ಚು	60	0	0													
ಹಿರಿಕ್ಕಿ ಸೀರೆ ವಸ್ತ್ರ ಖರ್ಚು	41	11	0													
ಪಸೂರು ಖರ್ಚು	23	13	6													
ರಾಶಿ ವ ಸಂತರ್ಪಣೆಗಳ ಖರ್ಚು	20	14	0													
ಅನಂತವ್ರತಕ್ಕೆ ಒಂಥದ್ದು ಖರ್ಚು	40	12	1													
ಮಾರೆಮ್ಮ ದೇವರ ಭಂಡಾರದಿಂದ ಪಡದ್ದು ಖರ್ಚು	16	0	0													
ಉತ್ಸವಗಳ ಬಗ್ಗೆ ಖರ್ಚು	35	11	1													
ಸಮಾರಾಧನೆಗಳ ಖರ್ಚು	64	12	5	4	1	13										185
ವಸಂತಗಳ ಖರ್ಚು	39	11	9													59
ನೌಕರರ ಸಂಬಳ ಖರ್ಚು	114	0	0													
ಗುರುಗಳ ಪರ ಮಂಗಳೂರದಲ್ಲಿ ಒಂದದ್ದು ಖರ್ಚು	8	1	0													
ವ್ಯವಹರಣೆ ಖರ್ಚು	1	6	6													
ಒಕ್ಕೆ ಪಟ್ಟಿ 1 ಶೋರ್ ನ 26ರ ಕ್ರಯ ಖರ್ಚು	135	2	0													
ಗೇಣಿ ಬಾಬ್ತು ಆಮ್ಯಂತರಪರಿಗೆ				17	2	0½										
ಮಾರೆಮ್ಮ ದೇವರ ಭಂಡಾರದಿಂದ ಪಡದ ಸೈಕಿ ಖರ್ಚು				4	1	8										
ವಿಕ್ರೀತ ಅಕ್ಕಿ ವ ಭತ್ತ ಗೇಣಿ ಬಾಬ್ತು							6	0	0	61	2	0½	24	0	0	
ಉಳಿದ ಶಿಲ್ಕು	121	15	11	0	0	7¼										
ಜುಮಲಾ	973	10	9	48	2	13¼	6	0	0	61	2	0½	24	0	0	1014

K. Narashimha Shenoi, Manager.
31-7-1941

ಕಾಪು ಶ್ರೀ ವೆಂಕಟರಮಣ ದೇವರ ಬಾಬ್ತು ತಾರೀಕು 1-8-41ರಿಂದ 1942 ಜುಲ್ಯಾಯಲ್ಲಾಗುವ ಒಂದು ವರ್ಷದ ಮಾಮೂಲು ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ವಿವರ ಮತ್ತು ಜಮಾ.

ಖರ್ಚಿನ ವಿವರಗಳು	ನಗದು ರೂ.	ಆ.	ಪೈ	ಕ್ಯಾ	ಬೆಳ್ತಿಗೆ ಮೂ.	ಕ	ಸೇ
ಆಸ್ತಿಗಳ ಶೀರ್ವೆ ಖರ್ಚು	184	2	0				
ಪ್ರತಿನಿತ್ಯ ಎಲೆ ಅಡಿಕೆ ಮತ್ತು ಅಕ್ಕಿ ಕೂಡಾ	11	6	0	365	44	0	7
ನಿತ್ಯ ದೀಪಾರಾಧನೆಗೆ ಎಣ್ಣೆ ಮಣದ ಕ್ರಯ ಖರ್ಚು	150	0	0				
ಸಮಾರಾಧನೆ ಸಂತರ್ಪಣೆ ವಸಂತ ವ ಉತ್ಸವಗಳ ಖರ್ಚು	250	0	0				
ನೌಕರರ ಸಂಬಳ ಖರ್ಚು	114	0	0				
ಪಸೂರು ಖರ್ಚು	50	0	0				
	889	8	0	365	44	0	7

ತಾ 1-8-41ರಿಂದ 1942ನ ಜುಲ್ಯಾ ಅಖ್ಯೆರು ವರೆಗೆ ನಿತ್ಯಕಲ್ಪ ಖರ್ಚಿನ ಲೆಕ್ಕಕ್ಕೆ

ಜಮಾ ಆಗತಕ್ಕ ವಿವರ

	ರೂ. ಆ. ಪೈ
ವರ್ಷ ಹುಟ್ಟುವಳಿಯಿಂದ	600-0 0
ಇತರದಿಂದ ಖರ್ಚಿನ ಬಗ್ಗೆ	70 0-0
504/39ನೆ ಉಡ್ಪಿ ಡಿ. ಮು. ಕೋರ್ಟು ಡಿಕ್ರಿ ಬಾಬ್ತು ಬರಬೇಕಾದ್ದು	2000-0 0
ಬರತಕ್ಕ ಐವಜು	2670-0 0

K. Narashimha Shenoi, *Manager.*
31-7-1941

ಅವನು ಕ್ಷಮಾರ್ಹನೇ?

[6ನೆಯ ಪುಟದಿಂದ ಮುಂದುವರಿದುದು]

ಯಾಥನು! ಎಷ್ಟೆಂದರೂ ಜೀವನ ಮಿತ್ರನಲ್ಲವೇ? ಇನ್ನಾದರೂ ತನ್ನ ಸ್ನೇಹಿತನನ್ನು ತನ್ನ ಪೋಷಣೆಯ ಭಾರದಿಂದ ತಪ್ಪಿಸಿ, ರಕ್ಷಿಸಬೇಕೆಂದೇ ಅವನು ಮಾಯವಾಗಿರಕೂಡದೇಕೆ?

ಶೀನುವು ಬೊಂಬಾಯಿಯಲ್ಲಿ ಕಂಗೆಟ್ಟನು. ಕಷ್ಟಕಾಲದಲ್ಲಿ ಇದ್ದ ಒಬ್ಬ ಮಿತ್ರನೂ ಕೈಬಿಟ್ಟನೆಂದು ಅವನಿಗೆ ಅತಿ ವ್ಯಸನವಾಯಿತು. ಇಂಥವರ ಮೈತ್ರಿಯು ದುಡ್ಡಿರುವವರೆಗೆ ಮಾತ್ರ ಎಂಬುದನ್ನವನು ಅರಿತುದು ಆಗಲೇ ಎನ್ನಬಹುದು! ಗೆಳೆಯರ ಸೋಗಿನಲ್ಲಿದ್ದವರನ್ನು ನಂಬಿ ತಾನು ಕೆಟ್ಟೆನೆಂದು ಅವನಿಗೆ ಹೊಳೆಯಿತು. ಜ್ಞಾನೋದಯವೂ ಅವನಲ್ಲಾಯಿತು. ತನ್ನ ತಾಯಿಯು ಅಂದು ಊರನ್ನು ಬಿಡಬಾರದೆಂದು ಕಣ್ಣೀರಿಟ್ಟು ಬೇಡಿಕೊಳ್ಳುವಾಗಿನ ದೃಶ್ಯವು ಅವನಿಗೆ ನೆನಪಾಗಿ ಅವನು ಕಣ್ಣೀರು ಸುರಿಸಿದನು. ಪ್ರೀತಿಯ ತಮ್ಮನ ನೆನಪಾಯಿತು. 'ಅವನು ನಾನಿಲ್ಲದೆ ಎಷ್ಟು ಬೇಸರ ಪಡುತ್ತಿರುವನೋ? ಹರಕು ಅಂಗಿಗಳನ್ನು ಧರಿಸಿ ಶಾಲೆಗೆ ಹೋಗುತ್ತಿರುವನೋ?' ಎಂದು ಮುಂತಾಗಿ ಶೀನುವು ಭಾವಿಸತೊಡಗಿದನು.

ಮೊದಲು ಶೀನುವು ಯಾವ ನಿರ್ಧಾರಕ್ಕೂ ಬರಲಿಲ್ಲ. ಕಡೆಗೆ ತನ್ನ ಹುಟ್ಟು ಮನೆಯೇ ಗತಿಯೆಂದು ನಿಶ್ಚಯಿಸಿದನು. ಮರುದಿನವೇ ಅವನು ತನ್ನಲ್ಲಿದ್ದ ರಿಸ್ಟ್ ವಾಚನ್ನೂ, ಫೌಂಟನ್ ಪೆನ್ನನ್ನೂ ಬೆರಳುಂಗುರವನ್ನೂ ಮಾರಿ, ರೈಲನ್ನೇರಿದನು.

ಹಾಗೂ ಶೀನುವು ಬೆಂಗಳೂರು ಸೇರಿದನು. ಮಿತ್ರರಿಗೆ ಮುಖ ತೋರಿಸದೆ ತನ್ನೂರಿಗೆ ಪಯಣ ಬೆಳಸಿದನು. ಬೆಳಿಗ್ಗೆ ೯ ಗಂಟೆಗೆ ಊರನ್ನು ಸೇರಿದನು. ರಸ್ತೆಯಲ್ಲಿ ಶ್ರೀಪಾದರಾಯರು ಸಿಕ್ಕಿದರು. ಶೀನುವನ್ನು ನೋಡಿ ಆಶ್ಚರ್ಯದಿಂದ "ಏನೋ ಶೀನು? ನಮ್ಮ ಹಳ್ಳಿಗೆ ಬರಲಾರೆನೆಂದು ಪ್ರತಿಜ್ಞೆ ಮಾಡಿದವನು ನೀನು! ಕಡೆಗೆ ಬಂದೇ ಬಿಟ್ಟೆ ಅಲ್ಲವೇ? ನಮ್ಮೂರಿನ ಭಾಗ್ಯ. ತಂದೆ ಸತ್ತ ಮೇಲಾದರೂ ನಿನ್ನ ಮನೆಯ ನೆನಪು ನಿನಗಾದುದು ನಿನ್ನ ತಾಯಿಯ ಪೂರ್ವ ಪುಣ್ಯದಿಂದೆನ್ನಬಹುದು" ಎಂದರು.

ಶೀನುವಿಗೆ ಸಿಡಿಲು ಬಡಿದಂತಾಯಿತು! ತನ್ನ ತಂದೆ ತೀರಿಹೋದ ವರ್ತಮಾನವು ಅವನಿಗೆ ಹೇಗೆ ತಿಳಿಯಬೇಕು? ಅವನು ಮುಖವೆತ್ತದೆ ಮುಂದುವರಿದನು. ಅತೀವ ದುಃಖದಿಂದಲೂ ನಾಚಿಕೆಯಿಂದಲೂ ಅವನು ಮಾತೆತ್ತಲಾರದಾದನು! ಅವನು ಅಂದು ಊರು ಬಿಡುವಾಗ ಐಶ್ವರ್ಯದ ಮಹಿಮೆಯಿಂದ ಅಮಲಿನಲ್ಲಿರುವಾಗ— ಶ್ರೀಪಾದರಾಯರ ಮಾತನ್ನು ಕೇಳದೆ ಅವರನ್ನು ನಿಂದಿಸಿ ಹೊರಟಿದ್ದನು. ಆದರೆ ಅದೇ ಶ್ರೀನಿವಾಸರಾಯನ ಸ್ಥಿತಿಯು ಈ ದಿನ ಎಷ್ಟು ಶೋಚನೀಯ! ಶ್ರೀಪಾದರಾಯರು ವ್ಯಾಕನವಾಡದೆ ಮುಂದರಿಯುತ್ತಿರುವ ಶೀನುವನ್ನು ಕಂಡು ಸ್ವಲ್ಪ ಸಿಟ್ಟಿನಿಂದ "ತಂದೆ ಸತ್ತರೂ ಇನ್ನೂ ಬುದ್ಧಿ ಬಂದಿಲ್ಲವೆಂದು ತೋರುತ್ತದೆ. ಇನ್ನೂ ಆ ಹಣದ ಸೊಕ್ಕು ಇಳಿಯಲಿಲ್ಲವೆ ನಿನಗೆ ಶೀನು? ಇಲ್ಲದಿದ್ದರೆ ಏನು ರೀವಿ, ಇವನದು? ಮಾತನ್ನೇ ಆಡುವುದಿಲ್ಲ. ನಿಮ್ಮ ಮನೆಯವರ ಅವಸ್ಥೆಯನ್ನು ಸ್ವಲ್ಪ ನೋಡು. ಅವರು ದಿನ ಒಂದರ ಎಷ್ಟು ಊಟಗಳನ್ನು ಮಾಡುತ್ತಿದ್ದಾರೆ ನೋಡು. ತಿಂಗಳಲ್ಲಿ ಎಷ್ಟು ದಿನ ಉಪವಾಸ ಬೀಳುತ್ತಾರೆ ಕಣ್ಣು ಬಿಟ್ಟು ನೋಡು" ಎಂದು ಮುಂತಾಗಿ ಜರೆಯಲಾರಂಭಿಸಿದರು. ಶೀನುವಿಗೆ ಈ ಕರ್ಣ ಕಠೋರಗಳಾದ ಮಾತಿನಿಂದ ಸಿಟ್ಟು ಬರುವುದರ ಬದಲಾಗಿ ಅಳು ಬಂತು. ಅವನು ಮೆಲ್ಲ ಮೆಲ್ಲನೆ ಮನೆಯ ಕಡೆ ಹೆಜ್ಜೆ ಹಾಕುತಿದ್ದನು.

ಮನೆಯ ಚಾವಡಿಯನ್ನು ಶೀನುವು ಸದ್ದಿಲ್ಲದೆ ಹತ್ತಿದನು. ಅವನ ಎದೆಯು ಡವಡವ ಹಾರುತಿತ್ತು. ಚಾವಡಿಯ ಬಲಪಾರ್ಶ್ವದ ಕೋಣೆಯಲ್ಲಿ ಕುಳಿತು ಅವನ ತಮ್ಮ ನಾಣುವು ಒಂದು ಪದ್ಯವನ್ನು ಕಂಠಪಾಠ ಮಾಡುತ್ತಿದ್ದನು. ಶೀನುವು ಅವನ ಹರಕುಮುರುಕಾದ ವಸ್ತ್ರಗಳನ್ನು ಕಂಡು ಕಂಬನಿದುಂಬಿದನು. ನಾಣುವು ಚಾವಡಿಗೆ ಬೆನ್ನುಮಾಡಿ ಕುಳಿತದ್ದರಿಂದ ತನ್ನ ಈ ಹತಭಾಗ್ಯ ಅಣ್ಣನನ್ನು ಕಾಣಲಿಲ್ಲ.

ಶೀನುವು ಚಾವಡಿಯಲ್ಲಿದ್ದ ಕೈಗಳು ನಷ್ಟವಾಗಿ ಹೋದ ಕುರ್ಚಿಯೊಂದರಲ್ಲಿ ತನ್ನ ಜಡಶರೀರವನ್ನಿಟ್ಟು ನಿಟ್ಟುಸಿರು ಬಿಟ್ಟನು. ಅವನ ತಾಯಿಯು ಒಳಗಡೆಯಲ್ಲಿ ಏನೋ ಕೆಲಸದಲ್ಲಿದ್ದಳು. ಶೀನುವಿಗೆ ಒಳಗಡೆ ಹೋಗುವಷ್ಟು ಧೈರ್ಯವಿದ್ದರಲ್ಲವೇ?

ನಾಣುವು ಪದ್ಯವನ್ನು ಗಟ್ಟಿಯಾಗಿ ಓದುತ್ತಿದ್ದನು.

"ಏರುವನು ರವಿ ಏರುವನು
ಬಾನೊಳು ಸಣ್ಣಗೆ ತೋರುವನು . .

ಶೀನುವು ತದೇಕಾಗ್ರ ಚಿತ್ತನಾಗಿ ಪದ್ಯವನ್ನು ಕೇಳುತಿದ್ದನು.

ಏರಿದವನು ಚಿಕ್ಕವನಿರಬೇಕೆಲೆ
ಎಂಬಾ ಮಾತನು ಸಾರುವನು—
ಸಾರುವನು. ಸಾರುವನು.

ಶೀನುವು ಸಹ ಈ ಪದ್ಯವನ್ನು ಬಾಲ್ಯದಲ್ಲಿ ಓದಿದ್ದನು. ಆದರೆ ಅಂದು ಅದರ ಭಾವಾರ್ಥವು ಅವನಿಗೆ ಹೊಳೆದಿರಲಿಲ್ಲ. ಆದರೆ ಇಂದು ಅದರ ಅಭಿಪ್ರಾಯವು ಅವನಿಗೆ ತಿಳಿಯಿತು. ತನ್ನ ತಮ್ಮನು ತನ್ನನ್ನು ಹೀಯಾಳಿಸುತ್ತಿರುವನೆಂದೇ ಅವನು ಭಾವಿಸಿದನು. ಪಶ್ಚಾತ್ತಾಪದಿಂದ ಅವನ ಮನಸ್ಸು ಸುಡಹತ್ತಿತು. ಹಿಂದಿನ ಅವನ ಕೃತ್ಯಗಳೆಲ್ಲ ಒಂದೊಂದಾಗಿ ನೆನಪಿಗೆ ಬಂದು, ಅವನ ತಲೆಯು ಬಿಸಿಯೇರ ಹತ್ತಿತು.

ಪಶ್ಚಾತ್ತಾಪದಿಂದ ಮನಸ್ಸು ಶುದ್ಧವಾಗುವುದು. ದುರ್ಗುಣಗಳೆಲ್ಲ ನಾಶವಾಗುವುವು. ಪಶ್ಚಾತ್ತಾಪದಿಂದ ಪರಿಶುದ್ಧಾಂತಃಕರಣನಾದ ಶೀನುವನ್ನು ಅವನ ತಾಯಿಯು ಕ್ಷಮಿಸಬಲ್ಲಳೇ? ಅವನು ಕ್ಷಮಾರ್ಹನೇ?

ನಿಮ್ಮ ಸಂಬಳವು

ರೂ. ೪೦ ಇರಲಿ

ಅಥವಾ ರೂ. ೧೦೦ ಇರಲಿ

ನೀವು ಕೊಳ್ಳಬಹುದು

ಒಂದು ಲಾಭಕರ ಧನ ಸಂಚಯ

ಈಗಿನ ನಿಮ್ಮ ವರಮಾನವು, ವ್ಯವಹಾರ, ಉದ್ಯೋಗ ಅಥವಾ ಧನಸಂಚಯ ಯಾವುದೇ ರೂಪದಲ್ಲಿರಲಿ ಭವಿಷ್ಯದಲ್ಲಿ ನೀವು ಆದಾಯವನ್ನು ಎದುರಿಸಲಾರಿರಿ. ನಿಮಗೆ ಸುರಕ್ಷಿತತೆಬೇಕು ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣವನ್ನು ವಿನಿಯೋಗಿಸುವದಕ್ಕಿಂತ ಬೇರೆ ಯಾವ ಕ್ಷೇಮಕರವಾದ ಮಾರ್ಗವೂ ಇಲ್ಲ. ಪೋಸ್ಟಾಫೀಸ್‌ನಲ್ಲಿ ೧೦ಕ್ಕೆ ರೂ. ೧೦ಕ್ಕೆ ಮಾರುತ್ತೆ, ಮತ್ತು ರೂ. ೨/೯ ಲಾಭವನ್ನು ಹತ್ತು ವರ್ಷಗಳ ಕೊನೆಯಲ್ಲಿ ಆದಾಯ ತೆರಿಗೆ ವಿನಾಯತಿಯಿಂದ ದೊರೆಯುತ್ತೆ. ಬೇಕಾದಾಗ ಹಣವನ್ನೂ ಅದು ಗಳಿಸಿದ ಬಡ್ಡಿಯನ್ನೂ ವಾಪಸು ಕೊಡಲ್ಪಾಗುತ್ತೆ.

ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳು ಉಳಿಸಲು ಸಹಾಯ ಮಾಡುತ್ತವೆ

ಪೋಸ್ಟಾಫೀಸ್‌ನಲ್ಲಿ ಮಾರುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಅದರ್ಶವಾದ ಸುರಕ್ಷಿತತೆಯಾಗಿದೆ, ಇವನ್ನು ಕದಿಯಲು ಅವಕಾಶವಿಲ್ಲ, ಮೌಲ್ಯದಲ್ಲಿ ತಗ್ಗುವದಿಲ್ಲ. ಈಗಲೇ ಉಳಿಸಲು ಆರಂಭಿಸಿ. ನಿಮಗೆ ರೂ. ೧೦ನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಆಣೆ ೪, ಆಣೆ ೮ ಅಥವಾ ೧ ರೂನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಳ್ಳಿರಿ ಮತ್ತು ಅವನ್ನು ಕಾರ್ಡ್ ಮೇಲೆ ಅಂಟಿಸಿರಿ—ಇವು ಉಚಿತವಾಗಿ ದೊರೆಯುತ್ತವೆ. ನಿಮ್ಮಲ್ಲಿ ರೂ. ೧೦ ಬೆಲೆ ಬಾಳುವ ಸ್ಟಾಂಪ್‌ಗಳಾದ ಕೂಡಲೆ ಅವನ್ನು ಪೋಸ್ಟಾಫೀಸ್‌ನಲ್ಲಿ ಸರ್ಟಿಫಿಕೇಟ್‌ಗೆ ಬದಲಿಸಿರಿ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

G.I. KN. 37.

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906.

THE CANARA BANKING CORPORATION, LIMITED

(Incorporated in Br. India)

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್, ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ 9% — ರೂ. 26ರಿಂದ 100ರ ವರೆಗೆ ಸೇ 8%

ರೂ. 101ರಿಂದ 500ರ ವರೆಗೆ ಸೇ 7% — ರೂ. 501 ಮೇಲ್ಪಟ್ಟ ಲೋನುಗಳಿಗೆ $6\frac{1}{2}$%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3% — ನಿರಖು ಠೇವಣಾತಿ—6 ತಿಂಗಳಿಗೆ—$3\frac{1}{2}$%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) **B. Narayana Shetty,**

Agent at Kankanady.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್‌ಕೋರ್ಟು ನಂಬ್ರ 72/1921ಕ್ರಮ ಅರ್ಜಿ ನಂಬ್ರ 149/1922 ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಬಾಬ್ತು ತಾರೀಕು 26-7-1940 ರಿಂದ ತಾರೀಕು 31-7-1941ರ ವರೆಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ.	ಅ.	ಪೈ	ಬೆಳ್ತಿಗೆ ಮು.	ಕ.	ಸೇ.	ಸುಗ್ಗಿ ಬೆಳ್ತಿಗೆ ಮು.	ಕ.	ಸೇ.	ಮುಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕ್ಷಾ
ಗುದಸ್ತಾ ಶಿಲ್ಕು	48	14	5	0	0	0¼				27	2	10½				
ಉಡುಪಿ ಡಿ. ಮು. ಕೋರ್ಟು ನಂಬ್ರ 504/39ನೇ ವ್ಯಾಜ್ಯ ತಾರೀಕು 7-12-39ರಲ್ಲು ಖರ್ಚಿಗೆ ಕೊಟ್ಟ ಬಾಬ್ತು ಪೈಕಿ ಜಮಾ	300	0	0													
ವಕ್ಲ ಹುಟ್ಟುವಳಿ ಜಮಾ	155	11	8	18	1	0½	6	0	0	33	2	1	24	0	0	365
ಮೇಲಿನ ಹುಟ್ಟುವಳಿ ಅಕ್ಕಿ ವ ಭತ್ತ ವಿಕ್ರಿತ ಜಮಾ	369	5	2													
ಬಿಡಾರ ಬಾಡಿಗೆ ಜಮಾ	9	8	0													
ಅನಂತವ್ರತದ ಸಮಾರಾಧನೆ ಮಾಡುವರೆ ಖರ್ಚಿಗೆ ಕೊಟ್ಟಂತೆ ಜಮಾ	40	0	0													
ಮಾರೆಮ್ಮ ದೇವರ ಭಂಡಾರದಿಂದ ಖರ್ಚಿಗೆ ಪಡದ್ದು ಜಮಾ	41	0	0	8	1	7										315
ಉತ್ಸವಗಳ ವರ್ಗದಲ್ಲಿ ಜಮಾ	3	0	0													
ಗುರುಗಳವರಿಗೆ ಸಲುವ ಬಾಬ್ತು ಅಮಾನತ್ತು ಇದ್ದದ್ದು ಜಮಾ	1	0	0													
ಕ್ರಯಕ್ಕೆ ಪಡೆದ ಕ್ಷಾ ವ ಅಕ್ಕಿ ಜಮಾ				22	0	0										334
ಶುಭಶೋಭಾನಾದಿಗಳಿಂದ ಬರುವ ಕಾಣಿಕೆ ಜಮಾ	5	3	0													
ಜುಮಲಾ	973	10	9	48	2	13¾	6	0	0	61	2	0½	24	0	0	1014

ಖರ್ಚು

ಖರ್ಚು ವಿವರ	ನಗದು ರೂ.	ಅ.	ಪೈ	ಬೆಳ್ತಿಗೆ ಮು.	ಕ.	ಸೇ.	ಸುಗ್ಗಿ ಬೆಳ್ತಿಗೆ ಮು.	ಕ.	ಸೇ.	ಮುಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕ್ಷಾ
ಆಸ್ತಿಗಳ ಜೀರ್ಣ ಖರ್ಚು	84	2	0													
ನಿತ್ಯ ಎಣ್ಣೆ ಬತ್ತಿ ಕ್ರಯ ಖರ್ಚು	5	11	0													
ನಿತ್ಯ ನೈವೇದ್ಯ ಎಲೆ ಅಡಿಕೆ ಖರ್ಚು	5	11	0													
ನಿತ್ಯ ಸಮರ್ಪಣೆ ತೆಂಗಿನ ಕ್ಷಾ ಕ್ರಯದ್ದು ವ ಗೇಣಿದ್ದು ಕೂಡಾ ಖರ್ಚು	11	4	6													730
ನಿತ್ಯ ಅಮೃತಪಡಿ ಬಗ್ಗೆ ಅಕ್ಕಿ ಕ್ರಯದ ಬಾಬ್ತು ಖರ್ಚು	114	12	0	21	2	12½										
ಮಾರಿಗುಡಿ ವ ದೇವಸ್ಥಾನದ ಬಾಬ್ತು 1347 ಮತ್ತು 1348 ಫಸಲಿಗಳ ಓಡಿಟರವರ ಫೀಸು 2 ವರ್ಷಗಳ ಬಾಬ್ತು ಖರ್ಚು	60	0	0													
12ನೇ ಸ್ಥಳ ಮರಾಮತ್ತು ಖರ್ಚು	41	11	0													
ಹಸೂರಿ ಖರ್ಚು	23	13	0													
ಶಾಸ್ತ್ರ ಸಂತರ್ಪಣೆಗಳ ಖರ್ಚು	20	14	0													
ಅನಂತವ್ರತಕ್ಕೆ ಬಂದದ್ದು ಖರ್ಚು	40	12	1													
ಮಾರೆಮ್ಮ ದೇವರ ಭಂಡಾರದಿಂದ ಸಡದ್ದು ಖರ್ಚು	46	0	0													
ಉತ್ಸವಗಳ ಬಗ್ಗೆ ಖರ್ಚು	35	11	1													
ಸಮಾರಾಧನೆಗಳ ಖರ್ಚು	64	12	5	4	1	13										185
ವಸಂತಗಳ ಖರ್ಚು	39	11	9													99
ನೌಕರರ ತಲಬು ಖರ್ಚು	114	0	0													
ಗುರುಗಳ ಮಠ ಮರ್ಯಾದೆ ಒಂದದ್ದು ಖರ್ಚು	6	4	0													
ವ್ಯವಹರಣೆ ಖರ್ಚು	1	6	6													
ಎಣ್ಣೆ ಡಬ್ಬಿ 4 ಹೊರ್ತು 26ರ ಕ್ರಯ ಖರ್ಚು	135	2	0													
ಗೇಣಿ ಬಾಬ್ತು ಅಮ್ಮಂತಪಡಿಗೆ				17	2	0½										
ಮಾರೆಮ್ಮ ದೇವರ ಭಂಡಾರದಿಂದ ಪಡದ ಪೈಕಿ ಖರ್ಚು				4	1	8										
ವಿಕ್ರಿತ ಅಕ್ಕಿ ವ ಭತ್ತ ಗೇಣಿ ಬಾಬ್ತು							6	0	0	61	2	0½	24	0	0	
ಅಖೈರು ಶಿಲ್ಕು	121	15	11	0	0	7¾										
ಜುಮಲಾ	973	10	9	48	2	13¾	6	0	0	61	2	0½	24	0	0	1014

K. Narashimha Shenoi, Manager.
31—7—1941

ಶ್ರೀ ವೆಂಕಟರಮಣ ದೇವರ ಬಾಬ್ತು ತಾರೀಕು 1-8-41ರಿಂದ 1942 ಜುಲಾಯಿ ಅಖೈರುವರೆಗಿನ ಒಂದು ವರ್ಷಕ್ಕೆ ಮಾಮೂಲು ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ವಿವರ ಮತ್ತು ಜಮಾ.

ಖರ್ಚಿನ ವಿವರಗಳು	ನಗದು ರೂ.	ಅ.	ಪೈ	ಕ್ಷಾ	ಬೆಳ್ತಿಗೆ ಮು.	ಕ.	ಸೇ.
ಆಸ್ತಿಗಳ ಜೀರ್ಣ ಖರ್ಚು	184	2	0				
ಪ್ರತಿನಿತ್ಯ ಎಲೆ ಅಡಿಕೆ ಮತ್ತು ಅಕ್ಕಿ ಕೂಡಾ	11	6	0	365	44	0	7
ನಿತ್ಯ ದೀಪಾರಾಧನೆಗೆ ಎಣ್ಣೆ ಮುಂತಾದ ಕ್ರಯ ಖರ್ಚು	180	0	0				
ಸಮಾರಾಧನೆ ಸಂತರ್ಪಣೆ ವಸಂತ ವ ಉತ್ಸವಗಳ ಖರ್ಚು	350	0	0				
ನೌಕರರ ತಲಬು ಖರ್ಚು	114	0	0				
ಹಸೂರಿ ಖರ್ಚು.	50	0	0				
	889	8	0	365	44	0	7

ತಾ. 1-8-41ರಿಂದ 1942ನೆ ಜುಲಾಯಿ ಅಖೈರು ವರೆಗೆ ನಿತ್ಯಕಟ್ಲೆ ಖರ್ಚಿನ ಲೆಕ್ಕಕ್ಕೆ.

ಜಮಾ ಆಗತಕ್ಕ ವಿವರ	ರೂ. ಅ. ಪೈ
ವಕ್ಲ ಹುಟ್ಟುವಳಿಯಿಂದ	600-0-0
ಇತರರಿಂದ ಕರ್ಜಿನ ಬಗ್ಗೆ	70-0-0
504/39ನೆ ಉಡುಪಿ ಡಿ. ಮು. ಕೋರ್ಟು ಡಿಕ್ರಿ ಬಾಬ್ತು ಬರಬೇಕಾದ್ದು	2000-0-0
ಬರತಕ್ಕ ಐವಜು	2670-0-0

K. Narashimha Shenoi, *Manager.*
31—7—1941

ದಕ್ಷಿಣ ಕನ್ನಡ ಜಿಲ್ಲಾ ಮಂಗ್ಳೂರು ಸಬ್‌ಕೋರ್ಟು ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922ನೇ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು ತಾರೀಕು 26-7-1940 ರಿಂದ 31-7-1941 ರ ವರೇಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಸ್ಯಾ	ಸಿಯಾಳ	ಪುಲ್ಲು
ಗುದಸ್ತ ಶಿಲ್ಕು	46	11	11		64	2	7½						
ಗದ್ದಿಗೆ ಪೂಜೆ ಬಾಬ್ತು ಜಮಾ	1352	9	2										
ಕುಂಕುಮಾರ್ಜನೆ ಬಾಬ್ತು ಜಮಾ	54	4	0										
ಹರಿಕೆ ಬಂದ ಬಾಬ್ತು ಜಮಾ				6									
ನವರಾತ್ರಿ ಬಾಬ್ತು ಜಮಾ	15	7	0		3	0	13				25		
ಮಾರಿಗುಡಿ ವ ದೇವಸ್ಥಾನ ಹಸೂರಿ ವರ್ಗದಲ್ಲಿ	36	12	0										
ವೆಂಕಟರಮಣ ದೇವರ ಭಂಡಾರದಿಂದ ಜಮಾ	48	4	0										
ಮಾರಿಪೂಜೆಗಳ ಬಾಬ್ತು ಜಮಾ	265	8	9										
ವಕ್ಲ ಹುಟ್ಟುವಳಿ ನಗ್ದು ವ ಅಕ್ಕಿ ಜಮಾ	330	2	0		96	0	0	16	0	0	50		600
ಗೇಣಿ ಬಾಬ್ತು ಅಕ್ಕಿ ವ ಭತ್ತ ವಿಕ್ರಿತ ಜಮಾ	618	4	6										
72/30ನೇ ಆಸ್ತಿ ಉತ್ಪತ್ತಿ ಜಮಾ	180	0	0								520	400	
ಬಾಣ್ಯದ ಕೇರಿ ಉತ್ಪತ್ತಿ ಜಮಾ	69	0	0								63	90	
ಸುಲೋಚನಾ ಬ್ಯಾ ಜವಾಬ್ದಾರಿ ಬಗ್ಗೆ ವಾಪಾಸು ಕೊಡುವ ಬಗ್ಗೆ ಡಿಪೊಜಿಟು ಮೆನೆಜರನ ಕಡೆಯಿಂದ	500	0	0										
ಪ್ರಾಣ ದೇವರ ಕಾಣಿಕೆ ಜಮಾ	2	0	0										
ಮಾರಿಪೂಜೆ ವಾಪಾಸು ಕೊಡುವ ಬಗ್ಗೆ ಬೊಂಬ್ಬ ಸೇಸಿ ಹೆಂಗ್ಸು ಅಮಾನತ್ತು ಜಮಾ	60	0	0										
ಗೇಣಿ ಜವಾಬ್ದಾರಿ ಬಗ್ಗೆ ಅಮಾನತ್ತು ಬಂದ ಅಕ್ಕಿ ಮುಡಿ					32	0	0						
ಜುಮಲಾ	3578	15	4	6	196	0	6½	16	0	0	658	490	600

ಹರಿಕೆಗೆ ಬಂದ ಬಾಬ್ತು ಗುದಸ್ತ ಶಿಲ್ಕು ಕೂಡಾ ಮುಗುತಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರಿಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2½ ಎರಡುವರೆ ಬೆಳ್ಳಿ ತೊಲಿ ಚೂರು ಕೂಡಾ 328½ ಮೂನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ.

ಖರ್ಚು

ಖರ್ಚು ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಸ್ಯಾ	ಸಿಯಾಳ	ಪುಲ್ಲು
ಗದ್ದಿಗೆ ಪೂಜೆ ಬಾಬ್ತು ಖರ್ಚು	181	2	7		0	0	7				343	490	
ಕುಂಕುಮಾರ್ಜನೆ ಬಾಬ್ತು ಖರ್ಚು	32	12	0										
ನವರಾತ್ರಿ ಬಾಬ್ತು ಖರ್ಚು	179	13	6		2	1	13						
ಮಾರಿ ಪೂಜೆಗಳ ಖರ್ಚು	298	11	9		8	0	10½						
ವ್ಯವಹರಣೆ ಖರ್ಚು	151	13	6										
ಆಸ್ತಿಗಳ ಶಿರ್ವೆ ಖರ್ಚು	196	8	0										
ಮಾರಿಗುಡಿ ವ ದೇವಸ್ಥಾನಕ್ಕೆ ಗುರುಗಳು ಬಂಡಾಗ ವ ಎಷ್ಟೆ ವಗೈರೆ ಹಸೂರಿ ಖರ್ಚು	676	14	0										
ವೆಂಕಟರಮಣ ದೇವರ ಭಂಡಾರಕ್ಕೆ ಖರ್ಚು	46	7	3		8	1	7				315		100
ಮೂಲಡೀಣಿ ತೆತ್ತದ್ದು	6	4	3										
ನೌಕರರ ತಲಬು ಖರ್ಚು	619	9	6		31	1	0	4	0	0			
72/30ನೇ ಆಸ್ತಿ ಕೃತ ಖರ್ಚು	18	2	6										500
ಬಾಣ್ಯದ ಕೇರಿ ಕೃತ ಖರ್ಚು	13	0	0										
ಎಂಡೋಮೆಂಟ ಬೋರ್ಡು ಆಫೀಸಿಗೆ ಮತ್ತು ಕಮಿಟಿ ಆಫೀಸಿಗೆ ಖರ್ಚು	176	8	0										
ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಡಿಪೋಜಿಟು ಖರ್ಚು	500	0	0										
ಮಾರಿಗುಡಿ ಜೀರ್ಣೋದ್ಧಾರಕ್ಕೆ ಖರ್ಚು	120	0	3										
10/4ಕ್ಕೆ ಸ್ಥಳಕ್ಕೆ ಖರ್ಚು	76	4	0										
ವಿಕ್ರಿತ ಅಕ್ಕಿ ವ ಭತ್ತ ಅಮಾನತ್ತು ಕೂಡ ಖರ್ಚು					129	0	0	12	0	0			
ಆಖೈರು ಶಿಲ್ಕು	275	0	3	6	16	0	11						
ಜುಮ್ಲಾ	3578	15	4	6	196	0	6½	16	0	0	658	490	600

ಹರಿಕೆಗೆ ಬಂದಬಾಬ್ತು ಗುದಸ್ತ ಶಿಲ್ಕು ಕೂಡಾ ಮುಗುತಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರಿಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2½ ಎರಡುವರೆ ಬೆಳ್ಳಿ ತೊಲೆ ಚೂರುಗಳು ಕೂಡ ತೊಲೆ 328½ ಮುನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಬಾಬ್ತು ತಾರೀಕು 1-8-41 ರಿಂದ 1942ನೆ ಇಸ್ವಿ ಜುಲ್ಯಾ ಆಖೈರು ಒಳಗೆ ಜಮಾ ಬರಬಹುದಾದ ಅಂದಾಜು ಪಟ್ಟಿ

ಗದ್ದಿಗೆ ಪೂಜೆ ಮತ್ತು ಮಾರಿಪೂಜೆಗಳ ಬಾಬ್ತು ಕಾಣಿಕೆಯಿಂದ ಜಮಾ	ರೂ.	1850
ಹುಟ್ಟುವಳ್ಳಿಯಿಂದ ಜಮಾ	ರೂ.	1200
ಜುಮ್ಲಾ	ರೂ.	3050

K. Narashinha Shenai, *Manager.*
31-7-1941

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಬಾಬ್ತು ತಾರೀಕು 1-8-1941 ರಿಂದ 1942 ಜುಲ್ಯಾಯಲ್ಲಾಗುವ ಆಡಿ ಮಾರಿಪೂಜೆ ಮರುದಿವಸದ ವರೆಗಿನ ಒಂದು ವರ್ಷದ ಮಾಮೂಲ ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ಬಜೇಟು ವಿವರ

	ನಗದು ರೂ.	ಆ.	ಪೈ.	ಸ್ಯಾ	ಸಿಯಾಳ	ಮಸ್ಕತಿ ಮು.	ಕ.	ಸೇ.
ಗದ್ದಿಗೆ ಪೂಜೆಗಳ ಖರ್ಚು	196	0	0	343	490			
3 ಮಾರಿಪೂಜೆಗಳ ಖರ್ಚು	300	0	0			12	0	0
ನವರಾತ್ರಿ ಚಂಡಿಕಾ ಹೋಮ ಸಮಾರಾಧನೆಗಳ ಖರ್ಚು	200	0	0					
ಆಸ್ತಿ ಶಿರ್ವೆಗಳ ಖರ್ಚು	244	4	0					
ನೌಕರರ ತಲಬು ಖರ್ಚು	821	12	0			42	0	0
ಹಸೂರಿ ಖರ್ಚು	200	0	0					
ಕೆರ್ವನೆಣೆ ಡಬ್ಬಿ 12ರ ಕ್ರಯ ಖರ್ಚು	49	8	0					
ಜುಮ್ಲಾ	2011	8	0			54	0	0

1-8-1941 ರಿಂದ 1942ನೆ ಇಸ್ವಿ ಜುಲ್ಯಾ ಆಖೈರು ವರೆಗೆ ವರುಷ 1ರ ಬೇಕಾದ ಖರ್ಚು ಮತ್ತು 28-7-38ರ (ವ) 27-7-39 ರಲ್ಲು 21-1-1941ರಲ್ಲಿ ಮಹಾಸಭೆಯವರು ನಿರ್ಣಯಿಸಿದಂತೆ ಮಾರಿಗುಡಿ ಜೀರ್ಣೋದ್ಧಾರದ ಖರ್ಚು ಪ್ರತ್ಯೇಕ.

K. Narashinha Shenai *Manager.*
31-7-1941

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್‌ಕೋರ್ಟು ನಂಬ್ರ 72/1921ಕ್ರಮ ಅರ್ಜಿ ನಂಬ್ರ 149/1922 ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಬಾಬ್ತು ತಾರೀಕು 26-7-1940 ರಿಂದ ತಾರೀಕು 31-7-1941ರ ವರೆಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ	ಆ	ಪೈ	ಬೆಳ್ತಿಗೆ ಮು	ಕ	ಸೇ	ಸುಗ್ಗಿಬೆಳ್ತಿಗೆ ಮು	ಕ	ಸೇ	ಮುಸ್ಕತಿ ಮು	ಕ	ಸೇ	ಭತ್ತ ಮು	ಕ	ಸೇ	ಕ್ಯಾ
ಹುದಸ್ತಾ ಶಿಲ್ಕು	48	14	5	0	0	6¼				27	2	10½				
ಉಡ್ಪಿ ಡಿ. ಮು. ಕೋರ್ಟು ನಂಬ್ರ 501/39ನೇ ವ್ಯಾಜ್ಯ ತಾರೀಕು 7-12-39ರಲ್ಲು ಖರ್ಚಿಗೆ ಕೊಟ್ಟ ಬಾಬ್ತು ಪೈಕಿ ಜಮಾ	300	0	0													
ವಕ್ಲು ಹುಟ್ಟುವಳಿ ಜಮಾ	155	11	8	18	1	0¼	6	0	0	33	2	1	21	0	0	605
ಮೋಲಿನ ಹುಟ್ಟುವಳಿ ಅಕ್ಕಿ ವ ಭತ್ತ ವಿಕ್ರಿಯ ಜಮಾ	369	[illegible]	[illegible]													
ಬಿಡಾರ ಬಾಡಿಗೆ ಜಮಾ	9	8	0													
ಅನಂತವೃತದ ಸಮಾರಾಧನೆ ಮಾಡುವರೆ ಖರ್ಚಿಗೆ ಕೊಟ್ಟಂತೆ ಜಮಾ	40	0	0													
ಮಾರೆಮ್ಮ ದೇವರ ಭಂಡಾರದಿಂದ ಖರ್ಚಿಗೆ ಪಡದ್ದು ಜಮಾ	41	0	0	8	1	7										10
ಉತ್ಸವಗಳ ವರ್ಗದಲ್ಲಿ ಜಮಾ	3	0	0													
ಗುರುಗಳವರಿಗೆ ಸಲುವ ಬಾಬ್ತು ಅಮಾನತ್ತು ಇದ್ದದ್ದು ಜಮಾ	1	0	0													
ಕ್ರಯಕ್ಕೆ ಪಡೆದ ಕ್ಯಾವ ಅಕ್ಕಿ ಜಮಾ				22	0	0										344
ಶುಭಶೋಭಾನಾದಿಗಳಿಂದ ಬರುವ ಕಾಣಿಕೆ ಜಮಾ	5	3	0													
ಜುಮ್ಲಾ	973	10	9	48	2	13¼	6	0	0	61	2	0½	24	0	0	1014

ಖರ್ಚು

ಖರ್ಚು ವಿವರ	ನಗದು ರೂ	ಆ	ಪೈ	ಬೆಳ್ತಿಗೆ ಮು	ಕ	ಸೇ	ಸುಗ್ಗಿಬೆಳ್ತಿಗೆ ಮು	ಕ	ಸೇ	ಮುಸ್ಕತಿ ಮು	ಕ	ಸೇ	ಭತ್ತ ಮು	ಕ	ಸೇ	ಕ್ಯಾ
ಆಸ್ತಿಗಳ ತೀರ್ವೆ ಖರ್ಚು	84	2	0													
ನಿತ್ಯ ಅರತ್ತಿಬತ್ತಿ ಕ್ರಯ ಖರ್ಚು	5	11	0													
ನಿತ್ಯ ನೈವೇದ್ಯಂ ಎಲೆ ಅಡಿಕೆ ಖರ್ಚು	5	11	0													
ನಿತ್ಯ ಸಮಾರ್ಪಣೆ ತೆಂಗಿನ ಕಾಯಿ ಕ್ರಯದ್ದು ವ ಗೇಣಿದ್ದು ಕೂಡಾ ಖರ್ಚು	11	4	6													730
ನಿತ್ಯ ಅಂಬು ತಪಡಿ ಒಗ್ಗ ಅಕ್ಕಿ ಕ್ರಯದ ಬಾಬ್ತು ಖರ್ಚು	114	12	0	21	2	12¼										
ಸಾಂಗುಡಿ ವ ದೇವಸ್ಥಾನದ ಬಾಬ್ತು 1347 ಮತ್ತು 1348 ಫಸಲಿಗಳ ಓಡಿಟರವರ ಫೀಸು 2 ವರ್ಷಗಳ ಬಾಬ್ತು ಖರ್ಚು	60	0	0													
149ನೇ ಸ್ಕೀಮ್ ದುರುಸ್ತಿ ಖರ್ಚು	41	11	0													
ಹಸಲಿ ಖರ್ಚು	23	13	6													
ಬ್ರಾಹ್ಮಣ ಸಂತರ್ಪಣೆಗಳ ಖರ್ಚು	20	14	0													
ಅನಂತವ್ರತಕ್ಕೆ ಒಂದದ್ದು ಖರ್ಚು	40	12	1													
ಮಾರೆಮ್ಮ ದೇವರ ಭಂಡಾರದಿಂದ ಪಡದ್ದು ಖರ್ಚು	40	0	0													
ಉತ್ಸವಗಳ ಬಗ್ಗೆ ಖರ್ಚು	35	11	1													
ಸಮಾರಾಧನೆಗಳ ಖರ್ಚು	64	12	5	4	1	13										185
ನಕ್ಷತ್ರಗಳ ಖರ್ಚು	39	11	9													99
ನೌಕರರ ಸಂಬಳ ಖರ್ಚು	114	0	0													
ಗುಡಿಗಳ ಮರ ಮರ್ಯಾದೆ ಒಂದದ್ದು ಖರ್ಚು	6	4	0													
ವ್ಯವಹಾರದ ಖರ್ಚು	1	6	6													
ಎಣ್ಣೆ ಪಟ್ಟಿ 1 ಹೊರ್ತು 26ರ ಕ್ರಯ ಖರ್ಚು	135	2	0													
ಗೇಣಿ ಬಾಬ್ತು ಅನ್ಯಂಕಪಡಿಗೆ				17	2	0¼										
ಮಾರೆಮ್ಮ ದೇವರ ಭಂಡಾರದಿಂದ ಪಡದ ಪೈಕಿ ಖರ್ಚು				4	1	8										
ವಿಕ್ರಿ ಅಕ್ಕಿ ವ ಭತ್ತ ಗೇಣಿ ಬಾಬ್ತು							6	0	0	61	2	0½	24	0	0	
ಅಖೈರು ಶಿಲ್ಕು	121	15	11	0	0	7¾										
ಜುಮ್ಲಾ	973	10	9	48	2	13¼	6	0	0	61	2	0½	24	0	0	1014

K. Narasimha Shenoi, Manager.
31-7-1941

ಕಾಪು ಶ್ರೀ ವೆಂಕಟರಮಣ ದೇವರ ಬಾಬ್ತು ತಾರೀಕು 1-8-41ರಿಂದ 1942 ಜುಲೈಯಲ್ಲಾಗುವ ಒಂದು ವರ್ಷದ ಮಾಮೂಲು ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ವಿವರ ಮತ್ತು ಜಮಾ.

ಖರ್ಚಿನ ವಿವರಗಳು	ನಗದು ರೂ.	ಆ.	ಪೈ	ಕ್ಯಾ	ಬೇರಬೆಳ್ತಿಗೆ ಮು.	ಕ.	ಸೇ
ಆಸ್ತಿಗಳ ತೀರ್ವೆ ಖರ್ಚು	184	2	0				
ಪ್ರತಿನಿತ್ಯ ಎಲೆ ಅಡಿಕೆ ಮತ್ತು ಅಕ್ಕಿ ಕೂಡಾ	11	6	0	365	44	0	7
ನಿತ್ಯ ದೀಪಾರಾಧನೆಗೆ ಎಣ್ಣೆ ಮೊದಲ ಕ್ರಯ ಖರ್ಚು	180	0	0				
ಸಮಾರಾಧನೆ ಸಂತರ್ಪಣೆ ವಸಂತ ವ ಉತ್ಸವಗಳ ಖರ್ಚು	350	0	0				
ನೌಕರರ ಸಂಬಳ ಖರ್ಚು	114	0	0				
ಹಸೂರಿ ಖರ್ಚು	50	0	0				
	889	8	0	365	44	0	7

ಜಮಾ ಆಗತಕ್ಕ ವಿವರ	ರೂ. ಆ. ಪೈ
ವಕ್ಲು ಹುಟ್ಟುವಳಿಯಿಂದ	600-0-0
ಇತರರಿಂದ ಕರ್ಚಿನ ಬಗ್ಗೆ	70-0-0
501/39ನ ಉಡ್ಪಿ ಡಿ. ಮು. ಕೋರ್ಟು ಡಿಕ್ರಿ ಬಾಬ್ತು ಬರಬೇಕಾದ್ದು	2000-0-0
ಭರತಕ್ಕ ಐವಜು ರೂ.	2670-0-0

ತಾ. 1-8-41ರಿಂದ 1942ನ ಜುಲೈ ಆಖೈರು ವರೆಗೆ ನಿತ್ಯಕಟ್ಟಳೆ ಕರ್ಚಿನ ಲೆಕ್ಕಕ್ಕೆ.

K. Narasimha Shenoi, *Manager.*
31-7-1941

ದಕ್ಷಿಣ ಕನ್ನಡ ಜಿಲ್ಲಾ ಮಂಗ್ಳೂರು ಸಬ್‌ಕೋರ್ಟು ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922ನೇ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು ತಾರೀಕು 26-7-1940 ರಿಂದ 31-7-1941ರ ವರೇಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕಾ	ಸಿಯಾಳ	ಹುಲ್ಲು
ಗುದಸ್ತ ಶಿಲ್ಕು	46	11	11		64	2	7½						
ಗದ್ದಿಗೆ ಪೂಜೆ ಬಾಬ್ತು ಜಮಾ	1352	9	2										
ಶುಂಕುಮಾರ್ಜನೆ ಬಾಬ್ತು ಜಮಾ	54	4	0										
ಹರಿಕೆ ಬಂದ ಬಾಬ್ತು ಜಮಾ				6									
ನವರಾತ್ರಿ ಬಾಬ್ತು ಜಮಾ	15	7	0		3	0	13				25		
ಮಾರಿಗುಡಿ ವ ದೇವಸ್ಥಾನ ಹಸೂರಿ ವರ್ಗದಲ್ಲಿ	36	12	0										
ವೆಂಕಟರಮಣ ದೇವರ ಭಂಡಾರದಿಂದ ಜಮಾ	48	4	0										
ಮಾರಿಪೂಜೆಗಳ ಬಾಬ್ತು ಜಮಾ	265	8	9										
ವಕ್ಲ ಹುಟ್ಟುವಳಿ ನಗ್ದಿ ವ ಅಕ್ಕಿ ಜಮಾ	330	2	0		96	0	0	16	0	0	50		600
ಗೇಣಿ ಬಾಬ್ತು ಅಕ್ಕಿ ವ ಭತ್ತ ವಿಕ್ರಿತ ಜಮಾ	618	4	6										
72/30ನೇ ಆಸ್ತಿ ಉತ್ಪತ್ತಿ ಜಮಾ	180	0	0								520	400	
ರಾಂಣ್ಯದ ಕೇರಿ ಉತ್ಪತ್ತಿ ಜಮಾ	69	0	0								63	90	
ಸುಲೋಚನ ಬ್ಯಾ ಜವಾಬ್ದಾರಿ ಬಗ್ಗೆ ವಾಪಾಸು ಕೊಡುವ ಬಗ್ಗೆ ಡಿಪೊಜಿಟು ಮೆನೇಜರನ ಕಡೆಯಿಂದ	500	0	0										
ಪ್ರಾಣ ದೇವರ ಕಾಣಿಕೆ ಜಮಾ	2	0	0										
ಮಾರಿಪೂಜೆ ವಾಪಾಸು ಕೊಡುವ ಬಗ್ಗೆ ಬೊಂಬ್ಯ ಸೇಟಿ ಹೆಂಗ್ಸು ಅಮಾನತ್ತು ಜಮಾ	60	0	0										
ಗೇಣಿ ಜವಾಬ್ದಾರಿ ಬಗ್ಗೆ ಅಮಾನತ್ತು ಬಂದ ಅಕ್ಕಿ ಮುಡಿ					32	0	0						
ಜುಮ್ಲಾ	3578	15	4	6	196	0	6½	16	0	0	658	490	600

ಖರ್ಚು

ಖರ್ಚು ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕಾ	ಸಿಯಾಳ	ಹುಲ್ಲು
ಗದ್ದಿಗೆ ಪೂಜೆ ಬಾಬ್ತು ಖರ್ಚು	161	2	7		0	0	7				343	490	
ಶುಂಕುಮಾರ್ಜನೆ ಬಾಬ್ತು ಖರ್ಚು	32	12	0										
ನವರಾತ್ರಿ ಬಾಬ್ತು ಖರ್ಚು	179	13	6		2	1	13						
ಮಾರಿ ಪೂಜೆಗಳ ಖರ್ಚು	298	11	9		8	0	10½						
ವ್ಯವಹಾರಕ್ಕೆ ಖರ್ಚು	151	13	6										
ಆಸ್ತಿಗಳ ರಿಪೇರಿ ಖರ್ಚು	196	8	0										
ಮಾರಿಗುಡಿ ವ ದೇವಸ್ಥಾನಕ್ಕೆ ಗುರುಗಳು ಬಂದಾಗ ವ ಎಣ್ಣೆ ವಗೈರೆ ಹಸೂರಿ ಖರ್ಚು	676	14	0										
ವೆಂಕಟರಮಣ ದೇವರ ಭಂಡಾರಕ್ಕೆ ಖರ್ಚು	46	7	3		8	1	7				315		100
ಮೂಲಗೇಣಿ ಕೆತ್ತದ್ದು	6	4	3										
ನೌಕರರ ಸಂಬಳ ಖರ್ಚು	619	9	6		31	1	0	4	0	0			
72/30ನೇ ಆಸ್ತಿ ಕೃತ ಖರ್ಚು	18	2	6										500
ರಾಂಣ್ಯದ ಕೇರಿ ಕೃತ ಖರ್ಚು	13	0	0										
ಎಂಡೋಮೆಂಟ್ ಬೋರ್ಡ ಆಫೀಸಿಗೆ ಮತ್ತು ಕಮಿಟಿ ಆಫೀಸಿಗೆ ಖರ್ಚು	176	8	0										
ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಡಿಪೋಜಿಟು ಖರ್ಚು	500	0	0										
ಮಾರಿಗುಡಿ ಜೀರ್ಣೋದ್ಧಾರಕ್ಕೆ ಖರ್ಚು	130	0	3										
10/4ಕ್ಕೆ ಸ್ಥಳಕ್ಕೆ ಖರ್ಚು	76	4	0										
ವಿಕ್ರಿತ ಅಕ್ಕಿ ವ ಭತ್ತ ಅಮಾನತ್ತು ಕೂಡ ಖರ್ಚು					129	0	0	12	0	0			
ಅಖೈರು ಶಿಲ್ಕು	275	0	3	6	10	0	11						
ಜುಮ್ಲಾ	3578	15	4	6	196	0	6½	16	0	0	658	490	600

ಹರಿಕೆಗೆ ಬಂದ ಬಾಬ್ತು ಗುದಸ್ತ ಶಿಲ್ಕು ಕೂಡಾ ಮುಗುತಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರಿಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2½ ಎರಡುವರೆ ಬೆಳ್ಳಿ ತೊಲೆ ಚೂರು ಕೂಡಾ 328½ ಮೂನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ.

ಹರಿಕೆಗೆ ಬಂದಬಾಬ್ತು ಗುದಸ್ತ ಶಿಲ್ಕುಕೂಡಾ ಮುಗುತಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರಿಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2½ ಎರಡುವರೆ ಬೆಳ್ಳಿ ತೊಲೆ ಚೂರುಗಳು ಕೂಡ ತೊಲೆ 328½ ಮುನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ

ಕಾಪು ಶ್ರೀ ಹಳೆ ಮಾರೆಮ್ಮ ದೇವರ ಬಾಬ್ತು ತಾರೀಕು 1-8-41ರಿಂದ 1942ನೆ ಇಸ್ವಿ ಜುಲ್ಯಾ ಆಖೈರು ಒಳಗೆ ಜಮಾ ಬರಬಹುದಾದ ಅಂದಾಜು ಪಟ್ಟಿ

ಗದ್ದಿಗೆ ಪೂಜೆ ಮತ್ತು ಮಾರಿಪೂಜೆಗಳ ಬಾಬ್ತು ಕಾಣಿಕೆಯಿಂದ ಜಮಾ	ರೂ.	1850
ಹುಟ್ಟುವಳ್ಳಿಯಿಂದ ಜಮಾ	ರೂ.	1200
ಜುಮ್ಲಾ	ರೂ.	3050

K. Narashinha Shenai, *Manager*.
31-7-1941.

ಕಾಪು ಶ್ರೀ ಹಳೆ ಮಾರೆಮ್ಮ ದೇವರ ಬಾಬ್ತು ತಾರೀಕು 1-8-1941ರಿಂದ 1942 ಜುಲ್ಯಾಯಲ್ಲಾಗುವ ಆಡಿ ಮಾರಿಪೂಜೆ ಮರುದಿವಸದ ವರೆಗಿನ ಒಂದು ವರ್ಷದ ಮಾಮೂಲ ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ಬಜೇಟು ವಿವರ

	ನಗದು ರೂ.	ಆ.	ಪೈ.	ಕಾ	ಸಿಯಾಳ	ಮುಕ್ಕತಿ ಮು.	ಕ.	ಸೇ.
ಗದ್ದಿಗೆ ಪೂಜೆಗಳ ಖರ್ಚು	196	0	0	343	400			
3 ಮಾರಿಪೂಜೆಗಳ ಖರ್ಚು	300	0	0			12	0	0
ನವರಾತ್ರಿ ಚಂಡಿಕಾ ಹೋಮ ಸಮಾರಾಧನೆಗಳ ಖರ್ಚು	200	0	0					
ಆಸ್ತಿ ರಿಪೇರಿಗಳ ಖರ್ಚು	244	4	0					
ನೌಕರರ ಸಂಬಳ ಖರ್ಚು	821	12	0			42	0	0
ಹಸೂರಿ ಖರ್ಚು	200	0	0					
ಕೆಲ್ಸನೇಣೆ ಡಬ್ಬಿ 12ರ ಕ್ರಯ ಖರ್ಚು	49	8	0					
ಜುಮ್ಲಾ	2011	8	0			54	0	0

1-8-1941 ರಿಂದ 1942ನೆ ಇಸ್ವಿ ಜುಲ್ಯಾ ಆಖೈರು ವರೆಗೆ ವರುಷ 1ರ ಬೇಕಾದ ಖರ್ಚು ಮತ್ತು 28-7-38ರ (ವ) 27-7-39 ರಲ್ಲಿ 21-1-1941ರಲ್ಲಿ ಮಹಾಸಭೆಯವರು ನಿರ್ಣಯಿಸಿದಂತೆ ಮಾರಿಗುಡಿ ಜೀರ್ಣೋದ್ಧಾರದ ಖರ್ಚು ಪ್ರತ್ಯೇಕ.

K. Narashinha Shenai *Manager*.
31-7-1941.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪ್ರೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-
ದಿ ಪಾಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists:—
Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines Unique Banking facilities to Businessmen and interested Public

Apply for particulars—

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE ESTD 1931

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs. 5 in multiples of Rs. 5 @ 3%

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,

The Combined Booking Agency, Mangalore.

ದಕ್ಷಿಣ ಕನ್ನಡ ಜಿಲ್ಲಾ ಮಂಗ್ಳೂರು ಸಬ್‌ಕೋರ್ಟು ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922ನೇ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು ತಾರೀಕು 26-7-1940 ರಿಂದ 31-7-1941 ರ ವರೇಗಿನ ಜಮಾ ಖರ್ಚು ವಿವರ

ಜಮಾ

ಜಮಾ ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕ್ಯಾ	ಸಿಯಾಳ	ಹುಲ್ಲು
ಗುದಸ್ತ ಶಿಲ್ಕು	46	11	11		64	2	7½						
ಗದ್ದಿಗೆ ಪೂಜೆ ಬಾಬ್ತು ಜಮಾ	1352	9	2										
ಕುಂಕುಮಾರ್ಜನೆ ಬಾಬ್ತು ಜಮಾ	54	4	0										
ಹುಂಡಿ ಬಂದ ಬಾಬ್ತು ಜಮಾ				6									
ನವರಾತ್ರಿ ಬಾಬ್ತು ಜಮಾ	15	7	0		3	0	13				25		
ಮಾರಿಗುಡಿ ವ ದೇವಸ್ಥಾನ ಹಸೂರಿ ವರ್ಗದಲ್ಲಿ	36	12	0										
ವೆಂಕಟರಮಣ ದೇವರ ಭಂಡಾರದಿಂದ ಜಮಾ	48	4	0										
ಮಾರಿಪೂಜೆಗಳ ಬಾಬ್ತು ಜಮಾ	265	8	9										
ಪಳ್ಳ ಹುಟ್ಟುವಳಿ ನಗ್ದಿ ವ ಅಕ್ಕಿ ಜಮಾ	330	2	0		96	0	0	16	0	0	50		600
ಗೇಣಿ ಬಾಬ್ತು ಅಕ್ಕಿ ವ ಭತ್ತ ವಿಕ್ರಿತ ಜಮಾ	618	4	6										
72/30ನೇ ಅಸ್ತಿ ಉತ್ಪತ್ತಿ ಜಮಾ	180	0	0								520	400	
ರಾಂಣ್ಯದ ಕೇರಿ ಉತ್ಪತ್ತಿ ಜಮಾ	69	0	0								63	90	
ಸುಲೋಚನ ಬ್ಯಾ ಜವಾಬ್ದಾರಿ ಬಗ್ಗೆ ವಾಪಾಸು ಕೊಡುವ ಬಗ್ಗೆ ಡಪೊಜಿಟು ಮೊಸೆಜರನ ಕಡೆಯಿಂದ	500	0	0										
ಪ್ರಾಣ ದೇವರ ಕಾಣಿಕೆ ಜಮಾ	2	0	0										
ಮಾರಿಪೂಜೆ ವಾಪಾಸು ಕೊಡುವ ಬಗ್ಗೆ ಬೊಂಬ್ರ ಸೇಸಿ ಹೆಂಗ್ಸು ಅಮಾನತ್ತು ಜಮಾ	60	0	0										
ಗೇಣಿ ಜವಾಬ್ದಾರಿ ಬಗ್ಗೆ ಅಮಾನತ್ತು ಬಂದ ಅಕ್ಕಿ ಮುಡಿ					32	0	0						
ಜುಮುಲಾ	3578	15	4	6	196	0	6¼	16	0	0	658	490	600

ಹರಿಕೆಗೆ ಬಂದ ಬಾಬ್ತು ಗುದಸ್ತ ಶಿಲ್ಕು ಕೂಡಾ ಮುಗುಳಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರೆಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2¼ ಎರಡುವರೆ ಬೆಳ್ಳಿ ತೊಲೆ ಚೂರು ಕೂಡಾ 328¼ ಮೂನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ.

ಖರ್ಚು

ಖರ್ಚು ವಿವರ	ನಗದು ರೂ.	ಆ.	ಪೈ.	ಪವನು	ಅಕ್ಕಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ಕ್ಯಾ	ಸಿಯಾಳ	ಹುಲ್ಲು
ಗದ್ದಿಗೆ ಪೂಜೆ ಬಾಬ್ತು ಖರ್ಚು	181	2	7		0	0	7				343	400	
ಕುಂಕುಮಾರ್ಜನೆ ಬಾಬ್ತು ಖರ್ಚು	32	12	0										
ನವರಾತ್ರಿ ಬಾಬ್ತು ಖರ್ಚು	179	13	6		2	1	13						
ಮಾರಿ ಪೂಜೆಗಳ ಖರ್ಚು	298	11	9		8	0	10½						
ವ್ಯವಹರಣೆ ಖರ್ಚು	151	13	6										
ಅಸ್ತಿಗಳ ತೀರ್ವೆ ಖರ್ಚು	196	8	0										
ಮಾರಿಗುಡಿ ವ ದೇವಸ್ಥಾನಕ್ಕೆ ಗುರುಗಳು ಬಂದಾಗ ವ ಎಣ್ಣೆ ವಗೈರೆ ಹಸೂರಿ ಖರ್ಚು	676	14	0										
ವೆಂಕಟರಮಣ ದೇವರ ಭಂಡಾರಕ್ಕೆ ಖರ್ಚು	46	7	3		8	1	7				315		100
ಮೂಲಗೇಣಿ ತೆತ್ತದ್ದು	6	4	3										
ನೌಕರರ ಸಂಬಳ ಖರ್ಚು	619	9	6		31	1	0	4	0	0			
72/30ನೇ ಅಸ್ತಿ ಕೃತ ಖರ್ಚು	18	2	6										500
ರಾಂಣ್ಯದ ಕೇರಿ ಕೃತ ಖರ್ಚು	13	0	0										
ಎಂಡೋಮೆಂಟು ಬೋರ್ಡು ಆಫೀಸಿಗೆ ಮತ್ತು ಕಮಿಟಿ ಆಫೀಸಿಗೆ ಖರ್ಚು	176	8	0										
ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಡಿಪೋಸಿಟು ಖರ್ಚು	500	0	0										
ಮಾರಿಗುಡಿ ಜೀರ್ಣೋದ್ಧಾರಕ್ಕೆ ಖರ್ಚು	130	0	3										
10/4ಕ್ಕೆ ಸ್ಥಳಕ್ಕೆ ಖರ್ಚು	76	4	0										
ವಿಕ್ರಿತ ಅಕ್ಕಿ ವ ಭತ್ತ ಅಮಾನತ್ತು ಕೂಡ ಖರ್ಚು					129	0	0	12	0	0			
ಅಖೈರು ಶಿಲ್ಕು	275	0	3	6	16	0	11						
ಜುಮ್ಲಾ	3578	15	4	6	196	0	6¼	16	0	0	658	490	600

ಹರಿಕೆಗೆ ಬಂದಬಾಬ್ತು ಗುದಸ್ತ ಶಿಲ್ಕು ಕೂಡಾ ಮುಗುಳಿಗಳು 23 ಇಪ್ಪತ್ತಮೂರು ಬೊಟ್ಟು 17 ಹದಿನೇಳು ದಾರೆಮಣಿ 1 ಒಂದು ಕರಿಮಣಿ 2 ಎರಡು ಬಳೆ 2ರ ತೊಲೆ 2¼ ಎರಡುವರೆ ಬೆಳ್ಳಿ ತೊಲೆ ಚೂರುಗಳು ಕೂಡ ತೊಲೆ 328¼ ಮುನ್ನೂರಇಪ್ಪತ್ತೆಂಟುವರೆ ಶಿಲ್ಕು ಇರುತ್ತದೆ

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಬಾಬ್ತು ತಾರೀಕು 1-8-41 ರಿಂದ 1942ನೆ ಇಸ್ವಿ ಜುಲೈ ಅಖೈರು ಒಳಗೆ ಜಮಾ ಬರಬಹುದಾದ ಅಂದಾಜು ಪಟ್ಟಿ

ಗದ್ದಿಗೆ ಪೂಜೆ ಮತ್ತು ಮಾರಿಪೂಜೆಗಳ ಬಾಬ್ತು ಕಾಣಿಕೆಯಿಂದ ಜಮಾ	ರೂ.	1850
ಹುಟ್ಟುವಳಿಯಿಂದ ಜಮಾ	ರೂ.	1200
ಜುಮ್ಲಾ	ರೂ.	3050

K. Narashinha Shenai, *Manager*.
31-7-1941.

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಬಾಬ್ತು ತಾರೀಕು 1-8-1941 ರಿಂದ 1942 ಜುಲೈಯಲ್ಲಾಗುವ ಆಡಿ ಮಾರಿಪೂಜೆ ಮರುದಿವಸದ ವರೆಗಿನ ಒಂದು ವರ್ಷದ ಮಾಮೂಲ ಪ್ರಕಾರ ಆಗತಕ್ಕ ವಿನಿಯೋಗಗಳ ಅಂದಾಜು ಖರ್ಚಿನ ಬಜೇಟು ವಿವರ

	ನಗದು ರೂ.	ಆ.	ಪೈ.	ಕ್ಯಾ	ಸಿಯಾಳ	ಮುಸ್ಕತಿ ಮು.	ಕ.	ಸೇ.
ಗದ್ದಿಗೆ ಪೂಜೆಗಳ ಖರ್ಚು	196	0	0	343	400			
3 ಮಾರಿಪೂಜೆಗಳ ಖರ್ಚು	300	0	0			12	0	0
ನವರಾತ್ರಿ ಚಂಡಿಕಾ ಹೋಮ ಸಮಾರಾಧನೆಗಳ ಖರ್ಚು	200	0	0					
ಅಸ್ತಿ ತೀರ್ವೆಗಳ ಖರ್ಚು	244	4	0					
ನೌಕರರ ಸಂಬಳ ಖರ್ಚು	821	12	0			42	0	0
ಹಸೂರಿ ಖರ್ಚು	200	0	0					
ಕಟ್ಟನೆಂಣೆ ಡಬ್ಬಿ 12ರ ಕ್ರಯ ಖರ್ಚು	49	8	0					
ಜುಮ್ಲಾ	2011	8	0			54	0	0

1-8-1941 ರಿಂದ 1942ನೆ ಇಸ್ವಿ ಜುಲೈ ಅಖೈರು ವರೆಗೆ ವರುಷ 1ರ ಬೇಕಾದ ಖರ್ಚು ಮತ್ತು 28-7-38ರ (ವ) 27-7-39 ರಲ್ಲಿ 21-1-1941ರಲ್ಲಿ ಮಹಾಸಭೆಯವರು ನಿರ್ಣಯಿಸಿದಂತೆ ಮಾರಿಗುಡಿ ಜೀರ್ಣೋದ್ಧಾರದ ಖರ್ಚು ಪ್ರತ್ಯೇಕ.

K. Narashinha Shenai *Manager*.
31-7-1941.

ಡೋಂಗರೆ
ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ



ನವ ಚೈತನ್ಯಕ್ಕೆ
'ಓಂಪ್ರೊನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಥಳೀಯ ಸ್ಟಾಕಿಸ್ಟರು:-
ದಿ ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists —
Messrs. Dadha & Co., MADRAS.

THE PIE-MONEY BANK, LTD.
Maidan Road, MANGALORE
Undertakes all kinds of Banking Business Current account at 2½% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines Unique Banking facilities to Businessmen and interested Public
Apply for particulars—
K. R. GURU, *Managing Director*

THE BANK OF MANGALORE LIMITED
HEAD OFFICE MANGALORE ESTD 1931
Branches — MOODABIDRI & PADUBIDRI
NOTICE
On and from 1st January 1941 the following are the revised rates of interest on deposits
FIXED DEPOSITS

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly
SAVINGS BANK DEPOSITS
On daily balances or balances over Rs. 5 in multiples of Rs. 5 @ 3%
All kinds of banking business transacted

THE
Combined Booking Agency, Mangalore.
South Kanara Traveller's Guides
ARE
Available for sale in all our Booking Offices
Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 8—8—1941 [ಸಂಚಿಕೆ 32]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಝುಂಕಾದ ಬೇನೆ, ಪಕ್ಷವಾತ, ನೊಣವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings,
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದು ಮಾಲಿಯಾಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಕೈಸೆರೆ ಸಿಕ್ಕಿದ ಜರ್ಮನ್ ಸೈನಿಕನ ಮುಖಭಾವವನ್ನು ಗಮನಿಸಿರಿ!

KANNADA ILLUSTRATED WEEKLY

ನೋಟಗಳು...!

ಬ್ರಿಟಿಷರು ದಾನಮಾಡುವ ಸ್ವರಾಜ್ಯಕ್ಕೆ ಕಾಂಗ್ರೆಸು ಮುಸ್ಲಿಂ ಲೀಗುಗಳು ಮಾತ್ರ ಕೈಯೊಡ್ಡಿದ್ದರೆ? ಎಂದು ಶಂಕೆಗೊಳ್ಳುತ್ತಿದ್ದ ಮುಂಬಯಿ ಸಂಪತ್ತಿನ ಮುಖಂಡರಂತಹವರಿಗೆ, ಅಮೇರಿಯವರು ಮೊನ್ನೆ ಮಾಡಿದ ಭಾಷಣದಲ್ಲಿ ಬಂದು ಸಮಾಧಾನಕರವಾದ ಉತ್ತರವನ್ನೇ ಕೊಟ್ಟಿದ್ದಾರೆ.

❀ ❀ ❀

'ಭಾರತದ ರಾಷ್ಟ್ರೀಯ ಜೀವನದಲ್ಲಿ ಪ್ರಧಾನವಾದ ಅಂಗಗಳು ಮೊತ್ತಮೊದಲು, ತಮ್ಮತಮ್ಮೊಳಗೆ ಒಂದು ಒಪ್ಪಂದ ಮಾಡಿಕೊಳ್ಳದೆ ಯಾವುದೇ ರಾಜಕೀಯ ಪ್ರಗತಿಯನ್ನೂ ಮಾಡಲಾಗುವುದಿಲ್ಲ' ಎಂದು ಅವರು ಶ್ರೀಮದ್ಗಂಭೀರವಾಗಿ ತಮ್ಮ ಭಾಷಣವನ್ನು ಪ್ರಸ್ತಾಪಿಸಿದರು!

❀ ❀ ❀

'ಆ ಪ್ರಧಾನವಾದ ಅಂಗಗಳು ಎಂದರೆ, ರಾಜಕೀಯ ಸಂಸ್ಥೆಗಳು, ಮಾತ್ರವಲ್ಲ ದೊಡ್ಡ ದೊಡ್ಡ ಧಾರ್ಮಿಕ ಸಂಘಗಳು, ಸಾಂಸ್ಕೃತಿಕ ಸಭೆಗಳು, ಭೌಗೋಳಿಕ ಆಡಳಿತೆಯ ಭಾಗಗಳು, ಬ್ರಿಟಿಷ್ ಪ್ರಾಂತಗಳು, ಆಶ್ರಿತ ಸಂಸ್ಥಾನಗಳು ಮೊದಲಾದುವುಗಳು' ಎಂದರು.

❀ ❀ ❀

ಭಾರತದಲ್ಲಿರುವ ದೊಡ್ಡದೊಡ್ಡ ನದಿಗಳು, ಮಹಾ ಮಹಾ ಪರ್ವತಗಳು, ವಿಶಾಲವಾಗಿರುವ ಮೈದಾನಗಳು, ಉನ್ನತಾಕಾರದ ಆನೆಗಳು, ಸಿಂಹ ಹುಲಿ ಶಾರ್ದೂಲಾದಿಗಳು......., ಇವುಗಳನ್ನು ಅವರು ಆ 'ಪ್ರಧಾನ ಅಂಗ'ಗಳ ಪಟ್ಟಿಯಲ್ಲಿ ಸೇರಿಸದಿರುವುದು ಬಹಳ ಆಶ್ಚರ್ಯವನ್ನುಂಟುಮಾಡತಕ್ಕ ಸಂಗತಿಯಾಗಿದೆ!

ಚರ್ಚಿಲ್ಲರು ಭಾರತದ ವಿಷಯವಾಗಿ ಒಂದು ಧೀರನೀತಿಯನ್ನನುಸರಿಸಿ, ಅಲ್ಲಿನ ರಾಜಕೀಯ ಮುಖಂಡರನ್ನು ಸಂತೃಪ್ತಿಪಡಿಸಬೇಕೆಂದು ಲಂಡನಿನ 'ಡೈಲಿ ಹೆರಾಲ್ಡ್' ಪತ್ರಿಕೆ ಬರೆಯುತ್ತದೆ.

❀ ❀ ❀

ಆದರೆ ಅಮೇರಿಯವರ ಇತ್ತೀಚೆಯ ಕೃತಿಗಳನ್ನು ಪರಿಶೀಲಿಸಿದಲ್ಲಿ, ಚರ್ಚಿಲ್ಲರು ಅಂತಹುದೊಂದನ್ನೂ ಮಾಡುವಂತೆ ಕಂಡುಬರುವುದಿಲ್ಲ. 'ನಾಯಿಗಳು ಬಗುಳುತ್ತಿದ್ದರೂ ಒಂಟೆಗಳು ಸಾಗುತ್ತಲೇ ಇರುವುವು' ಎಂಬುದೊಂದು ಹೇಳಿಕೆಯಾಗಿದೆ.

❀ ❀ ❀

ಈ ಸಲ್ಲದಲ್ಲಿ ಆಗುವ ತೊಂದರೆಯೆಂದರೆ ಒಂಟೆಗಳು ಸಾಗುತ್ತಲೇ ಇರುವಾಗ ದೂರ ಭಾರತದಲ್ಲಿರುವ ನಾಯಿಗಳು ಮಾತ್ರ ಬಗಳುತ್ತಿರುವುದಲ್ಲ. ಹತ್ತಿರ ಹತ್ತಿರದ ಬ್ರಿಟನಿನ ನಾಯಿಗಳ ಬಗುಳುವಿಕೆಯೂ ಹೆಚ್ಚು ಹೆಚ್ಚಾಗತೊಡಗಿದೆ.

❀ ❀ ❀

'ಡೈಲಿ ಹೆರಾಲ್ಡ್' ಪತ್ರಿಕೆ ಮಾತ್ರವಲ್ಲ ಇತರ 'ಜಾನ್ ಬುಲ್'ನಂತಹ ಪ್ರಾಮುಖ್ಯ ಜನಪ್ರಿಯ ಪತ್ರಿಕೆಗಳೂ ಭಾರತದ ಪರಿಸ್ಥಿತಿಯ ವಿಷಯ ಚರ್ಚಿಲ್ಲರು ಅಲಕ್ಷ್ಯಮಾಡುತ್ತಿರುವುದು ಸರಿಯಲ್ಲವೆಂದು ಟೀಕಿಸಿವೆ.

❀ ❀ ❀

ಬ್ರಿಟಿಷ್ ಪ್ರಧಾನರು ಕಳೆದ ಒಂದು ವರ್ಷದ ಯುದ್ಧಪ್ರಯುಕ್ತದಲ್ಲಿ ಮಾಡಿದ ಸ್ತುತ್ಯ ಕಾರ್ಯಗಳನ್ನೂ, ಅದರ ಮೇಲಾಗಿ, ಭಾರತದ ವಿಚಾರ ಅವರು ವಹಿಸಿದ ಅಲಕ್ಷ್ಯ ಧೋರಣವನ್ನು ತೂಗಿ ನೋಡಿದಲ್ಲಿ, ಮೊದಲಿನ ಅವರ ಕೆಲಸವು ಗುರುತರವಾಗಿದಷ್ಟು, ಆ ಮೇಲಿನ ಅವರ ಅಪರಾಧವು ಅಕ್ಷಮ್ಯವಾಗಿದೆಯೆಂದು ಬ್ರಿಟನಿನ ಹಲವು ಮಂದಿ ಜನತಾ ಮುಖಂಡರೇ ಸಾರುತಿದ್ದಾರೆ.

❀ ❀ ❀

'ನಾಯಿಗಳು ಬೊಗಳಿದರೂ ಒಂಟೆಗಳು ಮುಂದೆ ಸಾಗುತ್ತಲೇ' ಇರಬಹುದು. ಆದರೆ, ಅಷ್ಟರಲ್ಲಿ ಒಂಟೆಗಳಿಗೆ ಕಿವಿಗಳು ಕೇಳುವುದಿಲ್ಲ, ಕಣ್ಣುಗಳು ಕಾಣುವುದಿಲ್ಲ ಎಂಬುದಿಷ್ಟು ಸಿದ್ಧವಾಗಿಯೇ ತೀರುವುದು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ

ಕ್ರಮ ನಂಬ್ರ 174/1941.

ಉಡುಪಿ ಶ್ರೀ ಕೃಷ್ಣಾಪುರ ಮಠದ ಅಧಿಪತಿಗಳಾದ ಶ್ರೀಮದ್ ವಿದ್ಯಾರತ್ನ ತೀರ್ಥಸ್ವಾಮಿಯವರು } ವಾದಿಯು

ಮತ್ತು

ದಿ ಚರ್ಚ್ ಓಫ್ ಡೋಲರ್ಸ್ ರೋಮನ್ ಕೆಥೋಲಿಕ್ ಚರ್ಚ್, ಉಡುಪಿ, ಕೂಡಾ } ಪ್ರತಿವಾದಿಯು

ಇವರೊಳಗೆ

ಸದರಿ ವ್ಯಾಜ್ಯದ 3ನೇ ಪ್ರತಿವಾದಿಯು ಅನ್ನಿ ಸಬಿನಾ ಮತ್ತಾಸ್ ಬ್ಯಾ—(Mrs. Annie Sabina Mathias) ಅಂತೋಣಿ ಫ್ರಾನ್ಸಿಸ್ ಮತ್ತಾಸರ ವಿಧವೆ, ಮಂಗಳೂರು ತಾಲೂಕು ಕದ್ರಿಯಲ್ಲಿರುವವಳು—

ಇವಳಿಗೆ ಈ ಮೂಲಕ ತಿಳಿಸುವುದೇನಂದರೆ ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು ದಾಖಲ್ಲು ಮಾಡಿದ ಕೈಫೇತಿನಲ್ಲಿ, ಕಾಣುವ ಪ್ಲೇಂಟು ಸ್ಕೆಡ್ಯೂಲು ಆಸ್ತಿಗಳ ಸ್ವಾಧೀನತೆ ಮುಟ್ಟುವಳಿ ಕೂಡಾ ಮಗೈರೆ ನಿವೃತ್ತಿಗಳ ಬಗ್ಗೆ ದಾಕಲ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 1–9–41 ಕ್ಕೆ ಇಡೋಣಾಗಿಯದೆ. ನಿಮ್ಮ ಬಗ್ಗೆ ವಾದೀರ ಕಡೆಯಿಂದ ದಾಕಲ್ಲು ಮಾಡಿದ ಕೈಫೇತಿನ ನಕ್ಲು ಕೋರ್ಟಿನಲ್ಲಿದ್ದು ಅದನ್ನು ಕೋರ್ಟಿನಿಂದ ಪಡಿಯಬಹುದು. ಆದುದರಿಂದ ಸದರಿ ದಾವೆಯ ಕುರಿತು ನಿಮಗೆ ಆಕ್ಷೇಪ ಇದ್ದಲ್ಲಿ ನೀವು ಖುದ್ದಾಗಿಯಾಗಲೀ ವಕೀಲರ ಮೂಲಕವಾಗಿಯಾಗಲೀ ಸದರಿ ತಾ. 1–9–41 ನೇ ದಿವಸ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲು ಸಾಧೋಣಾದೀತೆಂಬ ಸಂಗ್ತಿ ನೀವು ತಿಳಿದಿರತಕ್ಕದ್ದು.

ಮೊಕ್ಕಾಂ ಉಡುಪಿ } P. V. Achar,
ತಾ. 6-8-1941 } Vakil for Plaintiff.

ಅಜೀರ್ಣ ಅರುಚಿಗಳ ಬಾಧೆಯಿಂದ ಅವನ ಬುದ್ಧಿ ಮತ್ತು ಶರೀರಗಳು ಬಾಧ್ಯ ಹೊಂದಿದ್ದವು—ಹಾಗಾಗಿಯೇ ಆತನು ಅಷ್ಟು ಹುಷಾರಾಗಿರಲಿಲ್ಲ!



ಅಜೀರ್ಣ ಅರುಚಿ ಮತ್ತು ತಲೆನೋವುಇನ್ನುಮುಂದೆ ಆತನನ್ನು ಬಾಧಿಸಲಾರವು

ಏಕೆಂದರೆ ಈಗ ಆತನ ಒಳಗೂ ನಿರ್ಮಲತೆಯುಂಟಾಗಿದೆ.

ನಿಮ್ಮ ಹೊಟ್ಟೆಯೊಳಗಡೆ ಅಶುದ್ಧ ವಸ್ತುಗಳಿದ್ದರೆ ನೀವು ಜಯಶೀಲರಾಗಿರಲೂ ಸಂತುಷ್ಟರಾಗಿರಲೂ ಸಾಧ್ಯವಿಲ್ಲ. ಆಗಾಗ ಅಜೀರ್ಣ ಅರುಚಿ ತಲೆನೋವುಗಳು ನಿಮ್ಮನ್ನು ಯಾವ ಕೆಲಸದಲ್ಲಿಯೂ ನಿಷ್ಪ್ರಯೋಜನಕರವನ್ನಾಗಿ ಮಾಡುವವು. ಮೆದುಳು ಮತ್ತು ಶರೀರದೊಳಭಾಗವನ್ನು ನೀವು ಶುಚಿಯಾಗಿಡಬೇಕು. ದಿನನಿತ್ಯ ತಂಪಾದ ಅಂಡ್ರೂಸ್ ಲಿವರ್ ಸಾಲ್ಟಿನ ಒಂದು ಪಾನೀಯ ತೆಗೆದುಕೊಳ್ಳುವುದರಿಂದ ನೀವು ಸಂಪೂರ್ಣ ಆನಂದವಹೊಳ್ಳುವಿರಿ. ಅದು ಬಾಯಿ ಮತ್ತು ನಾಲಗೆಗಳನ್ನು ಶುಚಿಗೊಳಿಸುತ್ತದೆ. ಹೊಟ್ಟೆಯನ್ನು ಕ್ರಮದಲ್ಲಿರಿಸುತ್ತದೆ. ಹೊಟ್ಟೆಯ ಸರ್ವಾಯವಗಳನ್ನೂ ಶುದ್ಧಿಗೊಳಿಸುತ್ತದೆ. ಹೊಟ್ಟೆಗೆ ತಂಪನ್ನುಂಟು ಮಾಡಿ ರಕ್ತವನ್ನು ಶುದ್ಧಿಗೊಳಿಸುತ್ತದೆ.

ಹೊಟ್ಟೆಯೊಳಗಡೆಯ ನೈರ್ಮಲ್ಯಕ್ಕೆ ದಿನನಿತ್ಯ ಅಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ

ANDREWS LIVER SALT



ಆರೋಗ್ಯಕರ ಪಾನೀಯ—ಶಕ್ತಿವರ್ಧಕವಾದ ಔಷಧಿ—ಶುಚಿಕರ—ತಂಪುಕರ—ಆನಂದಕರ—ಆಮೋದಕರ

ದಿ ಅತ್ತೂರು ಎಂಡ್ ಜನಾಹರ ಬೇಂಕ್ ಲಿಮಿಟೆಡ್, ಕಂಕನಾಡಿ, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ. 9% ರೂ. 26ರಿಂದ 100ರ ವರೆಗೆ ಸೇ. 8%
ರೂ. 101ರಿಂದ 500ರ ವರೆಗೆ ಸೇ. 7% ರೂ. 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ
ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ
ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%
ನಿರಖು ಠೇವಣಾತಿ—12 ತಿಂಗಳಿಗೆ—4%

(Sd) B Narayana Shetty,
Agent at Kankanady.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

15-8-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೫—೮—೧೯೪೧

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡ್‌ನಲ್ಲಿ ರಶ್ಯನರು ಜರ್ಮನರಿಗೆ ಭಾರೀ ಕಾಳಗ ಕೊಟ್ಟರು ಅಕಸ್ಮಾತ್ ಜರ್ಮನರು ರಶ್ಯದ ಮೇಲೆ ಧಾಳಿ ಮಾಡಿದ ನಿಮಿತ್ತ ಆರಂಭದಲ್ಲಿ ಜರ್ಮನರಿಗೆ ಜಯದೊರಕಿದಂತೆ ಕಂಡು ಬಂತು ಆದರೆ ಕಳೆದ ಮೂರು ವಾರಗಳಿಂದ ಬಿಡದ ಜರ್ಮನರನ್ನು ಪ್ರತಿಭಟಿಸುತ್ತಿರುವ ರಶ್ಯನರ ಸಾಹಸವನ್ನು ನೋಡಿ ಪ್ರಪಂಚವೇ ಇಂದು ಬೆರಗಾಗಿದೆ. ರಶ್ಯದಂತಹ ವಿಶಾಲ ದೇಶದಲ್ಲಿ, ಮತ್ತು ಶಸ್ತ್ರಸಜ್ಜಿತವಾದ ಸ್ವತಂತ್ರ ರಾಷ್ಟ್ರದಲ್ಲಿ ಜರ್ಮನರು ಮಿಂಚಿನ ಯುದ್ಧಮಾಡಿ ಬೆದರಿಸಿ ಗೆಲ್ಲುವುದು ಅಸಾಧ್ಯವಾದ ವಿಷಯವೆಂಬುದು ಈಗ ಖಂಡಿತವಾಗಿ ತಾಗಿದೆ. ಸ್ಮೊಲೆನ್‌ಸ್ಕ್, ಕೀವ್, ಲೆನಿನ್‌ಗ್ರಾಡುಗಳು ಬಳಿಯಲ್ಲಿ ಜರ್ಮನರಿಗೆ ರಶ್ಯನರಿಂದ ದೊರೆತ ತೀವ್ರವಾದ ಪ್ರತಿಭಟನೆಯನ್ನು ಯೋಚಿಸಿದರೆ, ಜರ್ಮನರು ಮೊಸ್ಕೋದ ಕಡೆಗೆ ಧಾಳಿಯಿಡುವುದು ಸಾಧ್ಯವೇ ಎಂಬ ಬಗ್ಗೆ ಸಂಶಯ ಹುಟ್ಟದೆ ಇರಲಾರದು

ರಶ್ಯದಲ್ಲಿ ಜರ್ಮನರು

ರಶ್ಯದಲ್ಲಿ ಜರ್ಮನರು ದೂರ ನುಗ್ಗಿರುವರೆಂಬುದು ನಿಶ್ಚಯ. ಹೀಗೆ ಮುಂದೊತ್ತಬೇಕಾದರೆ ಬಹಳ ಹಾನಿಗೂ ಒಳಪಟ್ಟಿರಬೇಕು. ಯುಕ್ರೇನಿನ ಕಡೆಗೆ ಜರ್ಮನರು ಮುನ್ನುಗ್ಗುತ್ತಿರುವರೆಂಬ ಸುದ್ದಿಯು ಈಗ ಕೇಳಿಬರುತ್ತಿದೆ. ಯುಕ್ರೇನನ್ನು ಹಿಡಿದು ಅಲ್ಲಿನ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಮೊದಲಿಂದಲೇ ಜರ್ಮನರ ಗುರಿಯಾಗಿದೆ. ಹಾಗಾಗಿ ಯುಕ್ರೇನಿನ ಕಾಳಗವು ಮುಂದೆ ಬಹಳ ಭೀಕರವಾಗಿ ನಡೆಯಲಿದೆ. ಎಷ್ಟು ತೀವ್ರವಾಗಿ, ಎಷ್ಟು ಬುದ್ಧಿವಂತಿಕೆಯಿಂದ, ಎಷ್ಟು ಶಸ್ತ್ರಸಜ್ಜಿತವಾಗಿ ಜರ್ಮನರು ಈಗ ಆಕ್ರಮಿಸಿದರೂ, ರಶ್ಯನ್ ವ್ಯೂಹವನ್ನು ಭೇದಿಸಿ ಮೊದಲಿನಂತೆ ಮುಂದೊತ್ತುವುದು ಅವರಿಂದ ಆಗುವುದಿಲ್ಲ. ಇಂದು ಸ್ಟಾಲಿನ್‌ಸ್ಕದಲ್ಲಿ ನಡೆಯುತ್ತಿರುವ ಕಾಳಗವು ಈ ಸಲದ ಯುದ್ಧದ ಇತಿಹಾಸದಲ್ಲಿಯೇ ಬಹಳ ಪ್ರಾಮುಖ್ಯವೆನಿಸಲಿದೆ. ಇಂದಿನ ಯುದ್ಧಗತಿಯನ್ನು ನೋಡಿದರೆ ಜರ್ಮನರು ಯುಕ್ರೇನಿನ ದಾರಿಯಲ್ಲಿ ಮುನ್ನುಗ್ಗಿ ಲೆನಿನ್‌ಗ್ರಾಡನ್ನು ಭೇದಿಸಲು ನಿಶ್ಚಯಿಸಿದಂತೆ ತೋರುತ್ತದೆ. ಜರ್ಮನರ ಯುದ್ಧಕ್ರಮದಲ್ಲಿ ಬದಲಾವಣೆಯಾಗ ಪ್ರಸಂಭವವೂ ಊಹಸೀಯ

ಇತ್ತ ಜಪಾನಿನ ಚಟುವಟಿಕೆ

ಅತ್ತ ರಶ್ಯ ಜರ್ಮನಿ ಯುದ್ಧ ನಡೆಯುತ್ತಿರುವಂತೆ ಹಾಗೂ ಯೂರೋಪಿನ ಇತರ ರಾಷ್ಟ್ರಗಳೂ ಯುದ್ಧಾಸಕ್ತವಾಗಿರುವಂತೆ ಇತ್ತ ಜಪಾನು ಬಹಳ ಚಟುವಟಿಕೆಗಳಿಗೆ ಕೈಹಾಕಿದಂತೆ ತೋರುತ್ತದೆ ಇಂಡೋಚೀನವನ್ನು ಬದರಿಸಿ ಅಲ್ಲಿನ ವಿಮಾನ ಹಾಗೂ ನೌಕಾರಣ್ಯಗಳನ್ನು ಅದು ಅನಾಯಾಸವಾಗಿಯೇ ವಶಪಡಿಸಿಕೊಂಡಿತು ಜಪಾನು ಥಾಯಿಲೆಂಡಿನ ಗಡಿಯಲ್ಲಿಯೂ ಸೈನ್ಯವನ್ನು ಇಟ್ಟಿರುವುದೆಂದು ತಿಳಿದಿದೆ ಹಾಗಾಗಿ ಥಾಯಿಲೆಂಡಿಗೆ ಹೆದರಿಕೆಯೇ ಹುಟ್ಟಿರುವುದು. ಉತ್ತರದಲ್ಲಿ ಮಂಚುಕೋ ಸೈಬೇರಿಯಗಳ ಹತ್ತಿರವೂ ಜಪಾನ್ ಸೈನ್ಯಗಳು ಕೂಡಿರುವಂತೆ ಇಂತಹ ಜಪಾನಿನ ಸಿದ್ಧತೆಯನ್ನು ನೋಡಿ ಅದು ರಶ್ಯದ ಮೇಲೆ ಬೀಳುವುದೋ, ಥಾಯಿಲೆಂಡನ್ನು ಆಕ್ರಮಿಸುವುದೋ ಎಂದು ಎರಡು ಬಗೆಯ ಊಹೆಗಳೂ ಹುಟ್ಟಿರುತ್ತವೆ

ಕೆಲವು ದಿನಗಳ ಹಿಂದೆ ಜಪಾನು ರಶ್ಯಕ್ಕೆ ಕೆಲವು ಬೇಡಿಕೆಗಳನ್ನು ಕಳುಹಿಸಿತ್ತೆಂದೂ, ಈ ಬೇಡಿಕೆಯಿಂದ ಅದು ತಾಲೂಕದರಿ ರಶ್ಯವನ್ನು ರಣರಂಗಕ್ಕೆ ಆಹ್ವಾನಿಸುವುದೆಂದೂ ಕೆಲವರು ಊಹಿಸಿದ್ದರು ಆದರೆ ಇತ್ತೀಚೆಗೆ ರಶ್ಯನ್ ಸರಕಾರವು ತಮಗೆ ಜಪಾನಿನಿಂದ ಅಂತಹ ಬೇಡಿಕೆಗಳು ಬಂದಿಲ್ಲವೆಂದು ಅಧಿಕೃತವಾಗಿ ನಿರಾಕರಿಸಿ ಸಂಶಯವನ್ನು ಪರಿಹರಿಸಿದೆ, ಆದರೆ ಜಪಾನು ಮಂಚುಕೋ ಗಡಿಯಲ್ಲಿ ಯಾತಕ್ಕಾಗಿ ಸೈನ್ಯವನ್ನು ಸಂಗ್ರಹಿಸಿಟ್ಟಿರುವುದೆಂಬ ವಿಚಾರವಿನ್ನೂ ಯಾರಿಗೂ ತಿಳಿಯಲಾರದಾಗಿದೆ.

ಜಪಾನಿಗೆ ನಿರ್ಬಂಧ

ಹೇಗಿದ್ದರೂ, ಇಂಡೋಚೀನದಲ್ಲಿ ಜಪಾನು ನಡೆಸಿದ ವರ್ತನಗಳಿಂದ, ಅದರ ಸುತ್ತಲಿರುವವುಗಳು ಹೆಚ್ಚಾಗಿ ಎಲ್ಲಾ ಚಿಕ್ಕ ರಾಷ್ಟ್ರಗಳೇ ಆದುದರಿಂದ ಅವುಗಳಿಗೆ ಬಹಳ ಕಳವಳವೇ ಉಂಟಾಗಿರುವುದು. ಥಾಯಿಲೆಂಡು ಅವಸರದ ಮಂತ್ರಿಮಂಡಳದ ಸಭೆಯನ್ನು ಕರೆದು ತನ್ನ ರಕ್ಷಣೆಯ ವಿಚಾರಮಾಡಿತು ಜಪಾನಿನ ಧಾಳಿಯನ್ನು ತಡೆದು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಶಕ್ತಿ ಥಾಯಿಲೆಂಡಿಗೂ ಇರುವುದಿಲ್ಲ. ಆಸ್ಟ್ರೇಲಿಯವೂ ಹೀಗೆಯೇ ಎಚ್ಚರಗೊಂಡಿದೆ. ಮತ್ತೆ ಫಿಲಿಪೈನ್, ಮಲಿಯಾ, ಬರ್ಮಾ ದೇಶಗಳೂ ಬಹಳ ಕಳವಳಪಡುತ್ತಲಿವೆ

ಇಂಗ್ಲಂಡು ಅಮೇರಿಕಗಳೂ ಎಚ್ಚತ್ತಿವೆ. ಅವು ಸಂಯುಕ್ತ ಕಾರ್ಯಕ್ರಮವನ್ನು ಅಪ್ರತ್ಯಕ್ಷವಾಗಿ ಈಗಾಗಲೇ ಕೈಗೊಂಡಿವೆ, ವ್ಯಾಪಾರೀ ನಿರ್ಬಂಧವು ಜಪಾನಿನ ಮೇಲೆ ಹಾಕಲಾಗಿದೆ. ಚೀನದೊಡನೆ ಬಹುಕಾಲದಿಂದ ಕಾದಾಡಿ ಇದು ವರೆಗೂ ಗೆಲಲಾರದೆ ಮುಗ್ಗರಿಸುತ್ತಿರುವ ಜಪಾನು, ಈಗ ಯಾವುದೋ ಮಹಾದಾಶೆಯನ್ನಿಟ್ಟುಕೊಂಡು ಮುಂದೆ ಸಿಕ್ಕಿ ಬಂದು ಇಂಗ್ಲೆಂಡು ಅಮೇರಿಕಗಳ ದ್ವೇಷ ಸಾಧನೆಯನ್ನೂ ಮಾಡಲು ಧೈರ್ಯ ಮಾಡೀತೇ ಎಂಬುದು ವಿಚಾರಣೀಯವಿದೆ. ಅಂತೂ ಜಪಾನಿಗೆ ಪೂರ್ವದಲ್ಲಿ ಸಾಮ್ರಾಜ್ಯ ವಿಸ್ತರಿಸುವ ಸ್ವಾರ್ಥಲಾಲಸೆಯು ಬಲವತ್ತರವಾಗಿದೆಯೆಂದು ಕಂಡುಬರುತ್ತದೆ.

ಇರಾನಿನಲ್ಲಿ ಜರ್ಮನರು?

ಇರಾನಿನಲ್ಲಿ ಜರ್ಮನ್ ಚಟುವಟಿಕೆಗಳು ಬಹಳ ಜೋರಿನಿಂದ ನಡೆಯುತ್ತಿರುವುದಾಗಿ ಸುದ್ದಿಯಿದೆ. ಅನೇಕ ಮಂದಿ ಜರ್ಮನ್ ಗುಪ್ತ ಪೋಲೀಸರು ಈಗಾಗಲೇ ಇರಾನಿನಲ್ಲಿ ಬಿಂದ್ರಿಳಿದಿರುವರಂತೆ. ಇದರ ಕುರಿತು ಸ್ಟಾಲಿನನು ಇರಾನಿನ ಶಹನಿಗೆ ಒಂದು ಎಚ್ಚರಿಕೆಯ ಪತ್ರವನ್ನೂ ಬರೆದಿರುವುದಾಗಿ ಸುದ್ದಿಯಿದೆ ಜರ್ಮನರನ್ನು ಆದಷ್ಟು ಬೇಗನೇ ಇರಾನಿನಿಂದ ಹೊರಹಾಕಬೇಕೆಂದು ಆತನು ತಿಳಿಸಿರುವನಂತೆ. ರಶ್ಯ ಇರಾನುಗಳ ಒಪ್ಪಂದದಂತೆ ಇರಾನು ರಶ್ಯದ ಕೇಳಿಕೆಯನ್ನು ಪೂರೈಸುವ ಕೆಲವು ನೈತಿಕ ಬಂಧದಿಂದ ಕೂಡಿರುವುದಾಗಿಯೂ ಹೇಳಲಾಗಿದೆ.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our 'Insurance Premia Payment Service.

RESOURCES OF A CRORE | ESTD 1906 CANARA BANK LIMITED

ಸ್ವದೇಶಾಭಿಮಾನಿ

ತಾರೀಕು 15—8—1941

ಪ್ರಾಥಮಿಕ ವಿದ್ಯಾಭ್ಯಾಸ

ಪ್ರಾಂತದಲ್ಲಿ ಹಲವು ಪ್ರಾಥಮಿಕ ಶಾಲೆಗಳ ಮಂಜೂರಾತಿ ರದ್ದುಮಾಡಿದ ರೆಂಬ ವಿಷಯವು ಈಗಾಗಲೇ ಪ್ರಸಿದ್ಧ ವಾಗಿದೆ ಇವುಗಳ ಪೈಕಿ ನಮ್ಮ ದಕ್ಷಿಣ ಕನ್ನಡದಲ್ಲಿ ಸುಮಾರು ನೂರಮೂವತ್ತಕ್ಕೆ ಮಿಕ್ಕಿದ ಪ್ರಾಥಮಿಕ ಶಾಲೆಗಳ ಮಂಜೂರಾತಿ ರದ್ದಾಗಿರುವುದೆಂದೂ, ಇವುಗಳಲ್ಲಿ ಸುಮಾರು ನೂರಕ್ಕೆ ಮಿಕ್ಕಿದ ಶಾಲೆಗಳು ಡಿಸ್ಟ್ರಿಕ್ಟ್ ಬೋರ್ಡಿನವುಗಳೆಂದೂ, ಉಳಿದವುಗಳು ಫಿಶರೀಸ್ ಮತ್ತು ಇತರ ಖಾಸಗಿ ಶಾಲೆಗಳೆಂದೂ ತಿಳಿಯುತ್ತೇವೆ ಒಟ್ಟಿನಿಂದ ಒಂದೇ ಹೊಡೆತಕ್ಕೆ ಇಷ್ಟು ಶಾಲೆಗಳ ಮಂಜೂರಾತಿಯನ್ನೂ ರದ್ದು ಮಾಡಿದ ಕಾರಣ, ಹಳ್ಳಿಹಳ್ಳಿಗಳಲ್ಲಿ ದೊರಕುತಿದ್ದ ಕಿಂಚಿತ್ತಾದರೂ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಯೋಜನವು ಇದರಿಂದ ಹಲವು ಕಡೆಗಳಲ್ಲಿ ವಂಚಿತವಾಯಿತೆಂದು ಈಗಾಗಲೇ ಬೊಬ್ಬೆಯೆದ್ದಿರುವುದು

ಕೆಲವು ಕಡೆಗಳಲ್ಲಿ ಶಾಲೆಗಳು ಅಷ್ಟು ಚೆನ್ನಾಗಿ ನಡೆಯುತ್ತಿರಲಿಲ್ಲವೆಂಬುದೇನೋ ನಿಜ ಇದಕ್ಕೆ ಬಡ ಹಳ್ಳಿಯ ಜನರನ್ನು ದೂರಿ ಫಲವಿಲ್ಲ. ಸರಕಾರ, ವಿದ್ಯಾಭ್ಯಾಸದ ಅಧಿಕಾರಿಗಳು ಮತ್ತು ಸಾರ್ವಜನಿಕ ಕೆಲಸಗಾರರು ಆ ಕಡೆಗೆ ಸಾಕಷ್ಟು ಗಮನ ಕೊಡದಿರುವುದೇ ಶಾಲೆಗಳು ದುರ್ಬಲವಾಗಿ ನಡೆಯುವುದಕ್ಕೆ ಹೆಚ್ಚಿನ ಕಡೆಗಳಲ್ಲಿ ಕಾರಣವಾಗಿವೆ ಈ ವಿಷಯಗಳನ್ನು ಪರಾಂಬರಿಸಿ ಹೆಚ್ಚಿನ ಎಚ್ಚರಿಕೆಯಿಂದ ತಕ್ಕುದಾದ ಕಾರ್ಯಕ್ರಮಗಳನ್ನು ಕೈಗೊಂಡು ವಿದ್ಯಾಭ್ಯಾಸವು ಹೆಚ್ಚಾಗುವಂತೆ ಯೋಜನೆಗಳನ್ನು ಮಾಡುವುದನ್ನು ಬಿಟ್ಟು ಶಾಲೆಗಳ ಮಂಜೂರಾತಿಯನ್ನೇ ರದ್ದುಮಾಡಿದುದರಿಂದ, ನಿರಕ್ಷರಕುಕ್ಷಿಗಳಾದ ಹಳ್ಳಿಯ ಬಡ ಬೇಸಾಯಗಾರರಿಗೆ ದೊರಕುತಿದ್ದ ಅಲ್ಪಸ್ವಲ್ಪ ವಿದ್ಯಾಭ್ಯಾಸದ ಪ್ರಯೋಜನಕ್ಕೆ ಇದರಿಂದ ಪ್ರಬಲವಾದ ಆಘಾತವಾದಿದಂತಾಗಿದೆ

ದೂರದ ಶಾಲೆಗೆ ಹೋಗಿಯಾದರೂ ಕಲಿಯುವಷ್ಟು ಹಳ್ಳಿಯ ಹೆಚ್ಚಿನ ಜನರಿಗೆ ತಿಳುವಳಿಕೆಯಿರುವುದಿಲ್ಲ ದೂರದಲ್ಲಿ ಮೂರು ನಾಲ್ಕು ಮೈಲುಗಳ ಅಂತರದಲ್ಲಿ ಒಂದೊಂದು ಯೋಗ್ಯ ಶಾಲೆಗಳು ಇದ್ದರೂ, ಆ ಶಾಲೆಗಳಿಂದ ಅದರ ಹತ್ತಿರದವರಿಗೆ ಮಾತ್ರ ಪ್ರಯೋಜನವಾಗುವುದಲ್ಲದೆ ದೂರದವರು ಅಲ್ಲಿಗೆ ತಮ್ಮ ಮಕ್ಕಳನ್ನು ಕಳುಹಿಸುವುದು ಕಡಿಮೆಯೆನಬೇಕು. ಹೆಚ್ಚಿನವರಿಗೆ ಬಡತನದ ನಿಮಿತ್ತ ದೂರದ ಶಾಲೆಗಳಿಗೆ ಹುಡುಗರನ್ನು ಕಳುಹಿಸುವುದು ಆಗುವುದಿಲ್ಲ ಹಲವರಿಗೆ ಅಷ್ಟು ಕಷ್ಟ ಪಟ್ಟಾದರೂ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೆಂಬಷ್ಟು ತಿಳಿವಿರುವುದಿಲ್ಲ. ಪ್ರಾಥಮಿಕ ಶಿಕ್ಷಣವನ್ನಾದರೂ ನಮ್ಮಲ್ಲಿ ಕಡ್ಡಾಯವಾಗಿ ಸರಕಾರದವರು ಇದುವರೆಗೆ ಮಾಡಿಲ್ಲ. ಹೀಗಿರುವಾಗ ಹಳ್ಳಿಗಳಲ್ಲಿ ಇದ್ದ ಒಂದೊಂದು ಶಾಲೆಗಳನ್ನೂ ಹೀಗೆ ತೆಗೆದುಬಿಟ್ಟಲ್ಲಿ ಅಲ್ಲಿನವರನ್ನು ತೀರಾ ವಿದ್ಯಾಭ್ಯಾಸವಿಹೀನರಾಗಿ ಮೂಕಪಶುಗಳಾಗಿ ಬಿಟ್ಟು ಬಿಟ್ಟಂತೆ ಆಗುವುದಿಲ್ಲವೇ ಎಂಬುದನ್ನು ಚೆನ್ನಾಗಿ ಯೋಚಿಸಬೇಕಾಗಿದೆ.

ಯುದ್ಧದ ನಿಮಿತ್ತ ಹಲವು ತರದಲ್ಲಿ ನಮ್ಮ ಜನರ ಜೀವನವು ದುಃಖಕ್ಕೀಡಾಗಿದೆ ನಿರುದ್ಯೋಗ ದಾರಿದ್ರ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ ಹೇಗಿದ್ದರೂ ವಿದ್ಯಾಭ್ಯಾಸಕ್ಕೆ ಇದರಿಂದ ತೊಂದರೆ ಬರಬಾರದಿತ್ತು ನಾಡಿನ ವಿದ್ಯಾಭ್ಯಾಸವು ಹೆಚ್ಚಿನ ಪ್ರಗತಿಯಿಂದ ಸಾಧ್ಯವಿಲ್ಲವಾದರೂ ಹಿಂದಿಗಿಂತ ಕಡಿಮೆಯಲ್ಲದೆ ನಡೆಯುವುದು ಅವಶ್ಯವಿತ್ತು. ಹೀಗಿರುವಲ್ಲಿ ಈಗ ಇಷ್ಟೊಂದು ಶಾಲೆಗಳ ಮಂಜೂರಾತಿಯನ್ನೇ ರದ್ದುಮಾಡಿದುದರಿಂದ ಹಳ್ಳಿಯ ಜನರು ಹಲವರು ನಿರಾಶೆಗೊಳ್ಳುವಂತಾಗಿದೆ ಈ ಸಂದರ್ಭದಲ್ಲಿ ಸರಕಾರವನ್ನೇ ದೂರಲು ಎಡೆಯಿಲ್ಲ ಈ ಶಾಲೆಗಳ ಮಂಜೂರಾತಿಯ ರದ್ದತಿಗೆ ಕಾರಣವು ಯಾವುದಾಗಿದೆಯೊ ಅಂತಹ ಲೋಪದೋಷಗಳನ್ನು ಹೋಗಲಾಡಿಸಿ ದೇಶದ ವಿದ್ಯಾಭ್ಯಾಸವು ಹಿಂದಿಗಿಂತಲೂ ಸುಸೂತ್ರವಾಗಿ ಮುಂದೆ ಸಾಗುವಂತೆ ನೋಡುವ ಹೊಣೆಗಾರಿಕೆ ನಮ್ಮ ನಾಡಿನ ಎಲ್ಲಾ ಸಾರ್ವಜನಿಕ ಕೆಲಸಗಾರರದೂ ಆಗಿದೆ ಈ ಸಂದರ್ಭದಲ್ಲಿ ಇನ್ನಾದರೂ ಈ ವಿಚಾರವನ್ನು ಗಮನಕ್ಕೆ ತಂದುಕೊಂಡು, ಸಾರ್ವಜನಿಕ ಕೆಲಸಗಾರರು ಯೋಗ್ಯ ಚಳವಳ ಮಾಡಿ ಈ ಶಾಲೆಗಳ ಮಂಜೂರಾತಿಯನ್ನು ಸ್ವಲ್ಪ ಅವಧಿಯ ವರೆಗಾದರೂ ಮುಂದುವರಿಸುವಂತೆ ಸಾಧಿಸಿ ಪ್ರಾಂತದ ಹಾಗೂ ಜಿಲ್ಲೆಯ ಪ್ರಾಥಮಿಕ ವಿದ್ಯಾಭ್ಯಾಸವು ತೊಂದರೆಗೊಳಗಾಗದಂತೆ ನೋಡಿಕೊಳ್ಳುವುದು ಅವಶ್ಯವಾಗಿದೆಯೆಂದು ನಾವು ಸೂಚಿಸಬಯಸುತ್ತೇವೆ

ಠಾಗೋರರು

ವಿಶ್ವವಿಶ್ರುತ ಕವಿಸಾರ್ವಭೌಮರಾದ ರವೀಂದ್ರನಾಥ ಠಾಗೋರರು ಕಳೆದ ಶ್ರಾವಣ ಶುದ್ಧ ಪೂರ್ಣಿಮಾ ಗುರುವಾರ ದಿನ, ಆಗಸ್ಟು ತಿಂಗಳ ಏಳನೆಯ ದಿನದ ಮಧ್ಯಾಹ್ನ [illegible] ಗಂಟೆ [illegible] ಮಿನಿಟಿನ ಹೊತ್ತಿಗೆ ತಮ್ಮ ಪಾರ್ಥಿವ ಶರೀರವನ್ನು ತೊರೆದು ಪರಂಧಾಮವನ್ನು ಹೊಂದಿದರೆಂಬೀ ಶೋಕವಾರ್ತೆಯು ಅಖಿಲ ಭಾರತವನ್ನು ದುಃಖಸಾಗರದಲ್ಲಿ ಅದ್ದಿತು ವಿಶಾಲ ವಿಶ್ವವೇ ಅವರ ನಿಧನದ ಒಗ್ಗೆ ಸಂತಾಪದಿಂದ ಮಮ್ಮಲ ಮರುಗುತ್ತಿದೆ ಕಾವ್ಯ ಸಾಮ್ರಾಜ್ಯದಲ್ಲಿ ಅಧಿರಾಜ ಪಟ್ಟವನ್ನೇರಿ ಮೆರೆದ ಕವಿಸಾರ್ವಭೌಮರು ಇಂದು ಕಣ್ಮರೆಯಾದರು ಜಾಜ್ವಲ್ಯಮಾನವಾದ ಸಾಹಿತ್ಯ ಜ್ಯೋತಿಯೊಂದು ಕಾಲನ ಆಘಾತವನ್ನು ತಪ್ಪಿಸಲಾರದ ನಂದಿಹೋಯಿತು ಭಾರತಿಯು ಪುತ್ರರತ್ನವೊಂದನ್ನು ಕಳಕೊಂಡು ಸಂತೈಸಲಾರದ ಸಂಕಟದಿಂದ ನಿರಂತರ ಸಂತಾಪ ಪಡುತ್ತಿರುವಳು.

ರವೀಂದ್ರರ ಇಡಿಯ ಜೀವನವೇ ಒಂದು ಅದ್ಭುತ ರಮ್ಯ ಕಾವ್ಯ, ಜೀವಿತದಲ್ಲಿ ಅವರು ಪ್ರೇಮ ಸೌಂದರ್ಯಗಳ ಅನ್ವೇಷಣ ಮಾಡಿದರು ವಿಶ್ವದ ಮಾನವ ಕುಲವನ್ನು ಸಹೋದರ ಸ್ನೇಹಭಾವದಿಂದ ಬಂಧಿಸಿದ ಪ್ರೇಮದ ವಾತಾವರಣವನ್ನು ಸುತ್ತಲೂ ಸ್ವತಃ ಅನುಭವಿಸಿದರು, ಇತರರೂ ಅದನ್ನು ಅನುಭವಿಸುವಂತೆ ಮಾಡಿದರು. ಮಹಾ ಕವಿಯಾಗಿ ಮನ್ನಣೆ ಪಡೆದರು, ಸಾಹಿತ್ಯ ಸಾಮ್ರಾಜ್ಯದ ಸಾರ್ವಭೌಮರಾದರು; ತಾತ್ವಿಕರಾಗಿ ಮಹರ್ಷಿ ಸಮಾನ ಗೌರವ ಹೊಂದಿದರು ದೇಶಪ್ರೇಮದ ಸ್ಫೂರ್ತಿ ಚೈತನ್ಯಗಳ ಖನಿಯಾಗಿದ್ದರು ಕಲಾ ಸಂಸ್ಕೃತಿಗಳ ಮಾತೃಮಂದಿರವಾಗಿದ್ದರು ಅಖಿಲ ಜಗತ್ತಿನಲ್ಲಿ ಭಾರತದ ಘನತೆಯನ್ನು ಪ್ರತಿಷ್ಠಿಸಿದ ಪ್ರಭಾವಾನ್ವಿತರೆಂದರೆ, ಗಾಂಧಿಜಿಯವರ ಒಳಿಕ ಠಾಗೋರರೊಬ್ಬರೇ

ಠಾಗೋರರು, ಒಬ್ಬ ಮಹಾ ಪುರುಷನು ಜೀವನದಲ್ಲಿ ಏರಲು ಸಾಧ್ಯವಿದ್ದಷ್ಟು ಮಹೋನ್ನತಿಗೆ ಏರಿದರು ಜಗತ್ತಿಗೆ ಒಬ್ಬ ವಿಭೂತಿಪುರುಷನು ಸಾರಬಲ್ಲನಿತು ಸಂದೇಶವನ್ನು ಸಾರಿದರು, ಒಬ್ಬ ಕವಿಯು ಹಾಡಬಲ್ಲಷ್ಟು ಸವಿಯಾಗಿ ಅವರು ಹಾಡಿದರು, ಒಬ್ಬ ಕಲಾವಿದನು ಚಿತ್ರಿಸಬಹುದಾದಷ್ಟು ರಮ್ಯವಾಗಿ ಜೀವನ ಚಿತ್ರಗಳನ್ನು ಚಿತ್ರಿಸಿದರು, ಒಬ್ಬ ದೇಶಪ್ರೇಮಿಯು ಸಲ್ಲಿಸಬಹುದಾದಷ್ಟು ಸಾಹಸದಿಂದ ದೇಶಸೇವೆಯನ್ನೂ ಸಲ್ಲಿಸಿದರು ಹೀಗೆ ಒಬ್ಬ ಸಫಲ ಜೀವಿಯು ಪಡೆಯುವ ಮನ್ನಣೆಗಳೆಲ್ಲವನ್ನೂ ಠಾಗೂರರು ಪಡೆದರು ಅವರ ಪಾರ್ಥಿವ ಶರೀರವು ಇಂದು ನಮ್ಮ ಕಣ್ಮರೆಯಾದರೂ ಸಾಹಿತ್ಯ ಸತ್ಕೃತಿಗಳಿಂದ ಅವರು ಭಾರತೀಯರ ಮಾತ್ರವಲ್ಲ, ಅಖಿಲ ವಿಶ್ವದ ಮಾನವ ವರ್ಗದ ಹೃದಯದಲ್ಲಿಯೇ ಶಾಶ್ವತವಾದ ಸ್ಥಾನವೊಂದನ್ನು—ಗೌರವದ ಪಟ್ಟವೊಂದನ್ನು ಪಡೆದು—ಅಮರರಾಗಿ ನೆಲಸಿರುವರು

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು

			ರಿಂದ	ವರೆಗೆ
1	(a)	ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	—	—
	(b)	,, ದುಯಂ ,, ,,	—	—
2	(a)	ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	[illegible]— 6—0	6— [illegible]—0
	(b)	,, ದುಯಂ ,, ,, ,,	[illegible]— 4—0	
3	(a)	,, ಅವ್ವಲ್ ,, ಸುಗ್ಗಿ ,,	6— 2—0	[illegible]—4—0
	(b)	,, ದುಯಂ ,, ,, ,,	[illegible]— 0—0	[illegible]— 1—0
4	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	[illegible]7— [illegible]—0	12— 8—0
	(b)	,, ಸಿಪ್ಪೆಯಿದ್ದದ್ದು	10— 0—0	15—0—0
5	(a)	ಕೊಬ್ಬರಿ ಆಫೀಸು ಖಂಡಿಗೆ	[illegible]— 0—0	—
	(b)	,, ದೀವಿ ,,	—	—
	(c)	,, ದಿಲ್‌ಪಸಂದ್ ,,	—	—
6.		ತೆಂಗಿನ ಎಣ್ಣೆ ಮಣಕ್ಕೆ	4— [illegible]—0	—
7	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2— 12—0	5— 4—0
	(b)	ಸುಲಿದ ಅಡಿಕೆ ಖಂಡಿಗೆ (ಹಳತ್ತು)	— 0—0	— 0—0
		(ಹೊಸತ್ತು)	90— 0—0	110— 0—0
8		ಗೇರುಬೀಜ ಮುಡಿಗೆ	[illegible]— 0—0	[illegible]— 4—0
9.		ಕಬ್ಬಿನ ಬೆಲ್ಲ ಖಂಡಿಗೆ	42— [illegible]—0	47— 8—0
10.		ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	17— 0—0	1[illegible]— 0—0
11	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	4—12—0	7— 4—0
	(b)	ಹುಡಿಯ ,, ,,	[illegible]— 0—0	8— 0—0
12	(a)	ಮೈಸೂರು ಎಲಕ್ಕಿ ಮಣಕ್ಕೆ	— 0—0	— 0—0
	(b)	ಕೊಡಗಿನ ,, ,,	75— 0—0	80— 0—0
13.	(a)	ಕುಮಟೆಯ ಮೆಣಸು ಖಂಡಿಗೆ	77— 8—0	87— 8—0
	(b)	ಕಾಸರಗೋಡು ,, ಮಣಕ್ಕೆ	3—12—0	—
	(c)	ಊರಿನ ,, ,,	4— 2—0	4— 4—0

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಿ. ಅ ನಂ 13/1940

ಕ್ರಿ ನಂ 185/1932.

ಅರ್ಜಿದಾರ— ಸಂಕಪ್ಪ ರೈ

ಎದ್ರಿರು— ಕೊರಗ ಗೌಡ ಸಹಾ

ಸಿವಿಲ ಕೋಡಿನ 21ನೇ ಆರ್ಡರ 66ನೆ ರೂಲ 7ನೆ ಎದ್ರಿ ವೆಂಕಪ್ಪ ಗೌಡ—ಅಪ್ಪಯ್ಯ ಗೌಡನ ಮಗ—ಪುತ್ತೂರು ತಾಲೂಕು ಕುರಿಯ ಗ್ರಾಮದ ಸಂಪೆಯಲ್ಲಿರುವವನ—ರಿಗೆ

ಮೇಲ್ಕಂಡ ಅಮಲಜಾರಿಯಲ್ಲಿ ಅರ್ಜಿದಾರನು ಸ್ಥಿರ ಆಸ್ತಿ ಏಲಂ ಮಾಡುವರೆ ಮನವಿ ಮಾಡಿದ್ದಾನೆ. ಏಲಮಿನ ಶರ್ತಗಳು ನಿರ್ಣಯಿಸಲಿಕ್ಕೆ ಅರ್ಜಿಯು 1941ನೆ ಇಸ್ವಿ ಸಪಟೆಂಬ್ರ ತಾ. 8ಕ್ಕೆ ಹಗಲು ಗಂಟೆ 11ಕ್ಕೆ ಮುಂದರಿಸಿಟ್ಟಿದೆ.

ಪುತ್ತೂರು 9—8—1941

H. Ganapathi Rao, Pleader for Petitioner

ಇನ್ನೊಂದು ಪ್ರಾಂತವೂ ಮಹಾತ್ಮರನ್ನು ಹಿಂಬಾಲಿಸುತ್ತದೆ

ಬಲೂಚಿಸ್ತಾನದಲ್ಲಿ ಅಹಿಂಸೆ ಬೇರುಬಿಟ್ಟಿದೆ

ಹಿಂಸಾಮಯ ಯೋಧರಲ್ಲಿ ಅಹಿಂಸಾತ್ಮಕ ರಾಷ್ಟ್ರ ಜಾಗೃತಿ

ಭಾರತದ ಗಡಿಯಲ್ಲಿರುವ, ವೀರ ಹಿಂಸಾಮಯ ಯೋಧರಿಂದ ಕೂಡಿದ ಇನ್ನೊಂದು ಪ್ರಾಂತ್ಯವು, ಬಲೂಚಿಸ್ಥಾನವು ಮಹಾತ್ಮರ ಅಹಿಂಸೆಯನ್ನು ಅಂಗೀಕರಿಸುತ್ತದೆಯೆಂಬ ಬೊಂಬೇ ಕ್ರಾನಿಕಲಿನಲ್ಲಿ ಶ್ರೀ ಕಲ್ಯಾಣಪುರಕರ್ ಒಂದು ಲೇಖನ ಬರೆದು ವಿವರಿಸಿದ್ದಾರೆ. ಅಲ್ಲಿರುವ ಜನರು ಸಂಪೂರ್ಣ ಮುಸಲ್ಮಾನರು. ಮಹಾತ್ಮಾಜಿಯವರ ತತ್ವವಾದ ಅಹಿಂಸೆಯು ಗಡಿನಾಡಿನ ಮುಸ್ಲಿಮರಾದ ಪಠಾಣರಿಂದ ವಿಸ್ತಾರಹೊಂದಿ ಬಲೂಚಿಸ್ಥಾನದ ಮುಸ್ಲಿಮ್ ಕುಲಕ್ಕೂ ಹಬ್ಬುತ್ತಿರಲಿವುದು ನಿಜವಾಗಿ ಚರಿತ್ರೆಯಲ್ಲಿ ಎತ್ತಿ ಹೇಳತಕ್ಕ ಒಂದು ಸಂಗತಿಯಾಗಿದೆ.

ಅವರು ತಮ್ಮ ಲೇಖನದಲ್ಲಿ ಹೀಗೆಂದು ಬರೆದಿರುವರು.

ಬಲೂಚಿಸ್ತಾನವು ೧೫,೦೦೦ ಚದುರ ಮೈಲು ವಿಸ್ತಾರದ ಪ್ರಾಂತ; ಗುಡ್ಡಗಾಡುಗಳಿಂದ ಕೂಡಿದ್ದು, ದೀರ್ಘರಾದ ಬಲಶಾಲಿಗಳಾದ ಸುಂದರ ಜನರು ಯಾವಾಗಲೂ ಅಲೆದಾಟದಿಂದ ಅಲ್ಲಿ ಜೀವಿಸುತ್ತಾರೆ. ಅವರು ಇಂದು ಗಾಂಧಿಜಿಯವರ ಅಹಿಂಸಾತತ್ವವನ್ನು ಕ್ರಮವಾಗಿ ಅಂಗೀಕರಿಸುತಿದ್ದಾರೆ.

ನಿರಕ್ಷರಿಗಳಾದ ಬಲೂಚಿಸ್ತಾನದ ಆ ಜನರಿಗೆ ತಮ್ಮ ಬಿಲ್ಬಾಣಗಳ ನಿಶಿತಧಾರೆಯ ಪ್ರಯೋಗದ ಒಂದು ನಿಯಮವೇ ಗೊತ್ತಲ್ಲದೆ ಬೇರೆ ಶಾಸನವು ಅವರಿಗೆ ಗೊತ್ತೇ ಇರಲಿಲ್ಲ. ಅವರ ಪಂಗಡ ಪಂಗಡಗಳಲ್ಲಿ ಆಗಾಗ ಕಲಹಗಳುಂಟಾದರೆ ಅದು ತೀರ್ಮಾನ ಹೊಂದುವುದು, ಸ್ತ್ರೀಕಾರಣದ ಮಾತುಕತೆಗಳಿಂದಲ್ಲ; ಭೀಕರ ಹೊಡೆದಾಟ ಮಲ್ಲಯುದ್ಧಗಳ ರಕ್ತಸ್ರಾವದಿಂದ ಇಂತಹ ಜಗಳ ಹೊಡೆದಾಟಗಳು ಅಲ್ಲಿ ಯಾವಾಗಲೂ ಆಗುತ್ತಲೇ ಇರುತ್ತಿದ್ದವು.

ಸೇವಾಗ್ರಾಮದ ಸಂದೇಶ

೧೯೩೩ನೆಯ ಇಸವಿಯಿಂದ, ಅಖಿಲ ಭಾರತ ಬಲೂಚಿ ಕಾನ್ಫರೆನ್ಸು ಕೂಡಿದ ಮೇಲೆ ಅಲ್ಲಿಯೂ ರಾಷ್ಟ್ರೀಯ ಜಾಗೃತಿ ಉಂಟಾಯಿತು. ಅಲ್ಲಿನ ಸದೃಢ ಹಿಂಸ್ರ ಬಲೂಚರು, ಹಿಂಸೆ ಬಾಣಗಳಿಂದ ಬಲವಂತವಾದ ಇನ್ನೊಂದು ಅಸ್ತ್ರವಿದೆಯೆಂದು ಮೆಲ್ಲಮೆಲ್ಲಗೆ ತಿಳಿದುಕೊಂಡರು. 'ಅಂಜುಮಾನ್-ಇ-ವಾಟನ್' ಎಂಬ ನೂರಾರು ಜನ ಸ್ವಯಂಸೇವಕರಿಂದ ಕೂಡಿದ ರಾಷ್ಟ್ರೀಯ ಸಂಸ್ಥೆಯೊಂದರ ಮೂಲಕ ಅವರಿಗೆ ಸೇವಾಗ್ರಾಮದ ಸಂದೇಶವು ಮುಟ್ಟಿತು. ಅಹಿಂಸಾರೀತಿಯಿಂದ 'ಅಂಜುಮಾನ್-ಇ-ವಾಟನ್' ಸಂಸ್ಥೆಯು ಬಲೂಚಿಸ್ತಾನದ ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಗತಿಯನ್ನು ಪ್ರಯತ್ನ ಮಾಡುತ್ತಿದೆ.

ಅಂಜುಮಾನ್—ಇ—ವಾಟನ್

ಈ ಸಂಸ್ಥೆಯು ಸಾವಿರಾರುಮಂದಿ ನಿಸ್ವಾರ್ಥ ಸ್ವಯಂಸೇವಕರನ್ನು ಕೂಡಿಸಿಕೊಂಡು ಪ್ರತಿಯೊಂದು ಬಲೂಚಿಸ್ತಾನದ ಹಳ್ಳಿಹಳ್ಳಿಗಳಲ್ಲಿಯೂ ಹರಡಿ ಸಾರ್ವಜನಿಕ ಕಾರ್ಯದಲ್ಲಿ ಮಗ್ನವಾಗಿದೆ. ಬಲೂಚಿಸ್ತಾನದ ಜನರನ್ನು ಅಹಿಂಸೆಗೆ ಪ್ರತಿಜ್ಞಾಬದ್ಧರಾಗಿ ನಡೆಯುವಂತೆ ಮಾಡುವುದರೊಡನೆ ಪ್ರಾಂತ್ಯದ ಇತರ ಏಳಿಗೆಯ ಕಾರ್ಯವನ್ನೂ ಆ ಸಂಸ್ಥೆಯು ಕೈಗೊಳ್ಳುತ್ತಿದೆ. ಪ್ರಾಂತಿಕ ಸ್ವಾಯತ್ತತೆಯು ಬಲೂಚಿಸ್ತಾನಕ್ಕೆ ಸಿಗಬೇಕೆಂಬುದು ಅದರ ರಾಜಕೀಯ ಗುರಿಯಾಗಿದೆ.

ಕಾಂಗ್ರೆಸಿನಿಂದ ಸ್ಫೂರ್ತಿ

ಈ ರಾಷ್ಟ್ರೀಯ ಸಂಸ್ಥೆಯ ಮೂಲ ಜನ್ಮವು ಲಾಹೋರ್ ಕಾಂಗ್ರೆಸಿನಿಂದ ಆರಂಭವಾಯಿತೆನ್ನಬಹುದು. ಆ ಕಾಂಗ್ರೆಸಿಗೆ ಬಲೂಚಿಸ್ತಾನದ ಹಲವು ಮುಖಂಡರು ನವಾಬ್ ಜಾದಾ ಯೂಸಫ್ ಆಲಿ ಖಾನ್ ಮಗ್ಸಿ ಮೊದಲಾದವರು ಬಂದಿದ್ದರು. ಆ ಮುಖಂಡರು ಲಾಹೋರಿನ ಕಾಂಗ್ರೆಸ್ಸು ಸಭಾಗೃಹವನ್ನು ಬಿಡುವುದರೊಡನೆ, ಅಲ್ಲಿಂದ ತಮ್ಮೂರಲ್ಲಿ ರಾಷ್ಟ್ರೀಯ ಆಂದೋಲನವನ್ನು ಆರಂಭಿಸಬೇಕೆಂಬ ಸ್ಫೂರ್ತಿಯನ್ನೂ ಕೊಂಡೊಯ್ದರು.

ಸಂಕಷ್ಟಗಳಿಗೆ ತಲೆಯೊಡ್ಡಿದರು

ಎಲ್ಲಾ ತರದ ಸಂಕಷ್ಟಗಳನ್ನೂ ಅವರು ಆ ಮೇಲೆ ಅನುಭವಿಸಬೇಕಾಯಿತು. ಶಾಸನ ಸಭೆಯೆಂಬುದು ಆ ಪ್ರಾಂತಕ್ಕಿಲ್ಲ. ಗವರ್ನರ್ ಜನರಲ್ಲರ ಏಜೆಂಟನೊಬ್ಬನು ಅಲ್ಲಿನ ಆಡಳಿತೆ ಮಾಡುವನು. ಸ್ಥಳೀಕ ಸಂಸ್ಥೆಗಳಿಗೆ ಸಾರ್ವಜನಿಕ ಪ್ರತಿನಿಧಿಗಳನ್ನು ಕಳುಹಿಸುವುದೆಂದೂ ಅಲ್ಲಿ ಇಲ್ಲ. ಕ್ವೆಟ್ಟದಲ್ಲಿ ಪೊಲಿಟಿಕಲ್ ಏಜಂಟನೇ ಅಲ್ಲಿನ ಮುನ್ಸಿಪಾಲಿಟಿಗೆ ನಿರಂತರದ ಚೇರ್‌ಮಾನ್ ಆಗಿರುವನು. ಕಳೆದ ೫೦ ವರ್ಷಗಳಿಂದ ಯಾವುದೇ ಬದಲಾವಣೆ ಹೊಂದದ ಒಂದು ಶಾಸನ ಪ್ರಕಾರ ಅಲ್ಲಿನ ಆಡಳಿತೆಯಿದೆ. ಹದಿನಾಲ್ಕು ವರ್ಷಗಳಷ್ಟು ದೀರ್ಘಕಾಲದ ಶಿಕ್ಷೆಯನ್ನು ಕೊಡಲು ಅಧಿಕಾರವುಳ್ಳ ಜಿರ್ಗಾ ಎಂಬ ನ್ಯಾಯಾಧೀಶರ ಸಭೆಯು, ತೀರ್ಮಾನಕ್ಕೆ ಹೆಬ್ಬೆಟ್ಟಿನ ಗುರುತು ಹಾಕುವಂತಹ ಹಲವು ನಿರಕ್ಷರಿಗಳಾದ ಸದಸ್ಯರಿಂದ ಕೂಡಿದೆ. ಬಲೂಚಿಸ್ತಾನದ ಈ ತೆರದ ಆಡಳಿತದ ದುರವಸ್ಥೆಯನ್ನು ನೆನೆದು ಆ ಮುಖಂಡರು ಆಂದೋಲನಕ್ಕೆ ಮನವಾಗಿದರು. ಆದರೆ ಅವರಲ್ಲಿ ಕೆಲವರು ಲಾಹೋರಿನಿಂದ ಮರಳಿಬಂದಕೂಡಲೇ ತಾಸುಗಳಲ್ಲಿ ಬಂಧಿಸಲ್ಪಟ್ಟರು. ೧೯೩೩ರ ವರೆಗೆ ಸೆರೆಮನೆಯಿಂದ ಹೊರಗೆ ಬರಲು, ತಮ್ಮ ಮಿತ್ರರ ಆಗಮನಕ್ಕಾಗಿ ನವಾಬ್ ಜಾದಾ ಸಹನೆಯಿಂದ ಕಾಯಬೇಕಾಯಿತು. ಬಂದ ಕೂಡಲೇ ಅಖಿಲ ಭಾರತ ಬಲೂಚ್ ಕಾನ್ಫರೆನ್ಸ್ ಎಂಬ ಸಂಘವನ್ನು ಸ್ಥಾಪಿಸಿದರು. ಅದರ ವಿಷಯದಲ್ಲಿ ಪ್ರಚಾರವೂ ಪ್ರಾರಂಭಿಸಲ್ಪಟ್ಟಿತು. ಆ ಮೇಲೆ ನವಾಬ್ ಜಾದರು ಇಂಗ್ಲೆಂಡಿಗೂ ತೆರಳಿ ಅಲ್ಲಿನ ಆಂಗ್ಲ ರಾಜಕಾರಣಿಗಳನ್ನೂ ಭಾರತ ಮಂತ್ರಿಯನ್ನೂ ಕಂಡು ಬಲೂಚಿಸ್ತಾನದ ವಿಷಯವನ್ನು ಅವರ ಮುಂದಿಟ್ಟರು. ಅಲ್ಲಿ ಅವರಿಗೆ ದೊರೆತ ಪ್ರೋತ್ಸಾಹವು ಆಶಾಜನಕವಾಗಿತ್ತು.

ಭೂಕಂಪದ ಹಾವಳಿ

೧೯೩೫ರಲ್ಲಿ ಆ ಪ್ರಾಂತದ ಜನರನ್ನು ಭಯಂಕರ ಭೂಕಂಪವು ಪೀಡಿಸಿತು. ಅದರಿಂದ ರಾಷ್ಟ್ರೀಯ ಆಂದೋಲನದ ಪ್ರಗತಿ ಕುಗ್ಗಿದಂತಾಯಿತು. ಅನೇಕ ಮಂದಿ ರಾಷ್ಟ್ರೀಯ ಮುಖಂಡರು ಕೆಲಸಗಾರರು ಭೂಕಂಪದಲ್ಲಿ ಮಡಿದುಹೋದರು. ಕೆಲಮಂದಿ ನಿಸ್ವಾರ್ಥ ದೇಶಸೇವಕರು ಸಂಕಷ್ಟಗೊಂಡವರ ಸಹಾಯಕ್ಕಾಗಿ ಹಳ್ಳಿಹಳ್ಳಿಗಳನ್ನು ಸಂಚರಿಸಿ ನೆರವಾದರು.

ಇಂದು ಆ ಸಂಸ್ಥೆಯು ಪ್ರಗತಿಹೊಂದುತ್ತಿದೆ. ೩,೦೦೦ ಮಂದಿ ಸ್ವಯಂಸೇವಕರಿಂದ ಅದು ಕೂಡಿದೆ. ಹನ್ನೊಂದುಮಂದಿ ಸದಸ್ಯರಿಂದ ಕೂಡಿದ ವರ್ಕಿಂಗ್ ಕಮಿಟಿಯೊಂದಿದೆ. ಅನೇಕ ಶಾಖೆಗಳಾಗಿವೆ.

ಅದರ ಮುಖಂಡರು ಆಗಾಗ ಸೇವಾಗ್ರಾಮದ ಶಾಂತಿದೂತ ಮಹಾತ್ಮಾ ಗಾಂಧಿಯವರ ಆಶೀರ್ವಾದ ಸೂಚನೆಗಳನ್ನು ಕೇಳುತ್ತಾ ಇರುತ್ತಾರೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ವೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುವೆ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ: ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್: ಷಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

ವಾರದ ಕತೆ

ಅವಳ ನೆನಪು

ಬರೆದವರು "ಶ್ರೀ ಕಣಗಾರ"

'ಒಳ್ಳೇದು,' ಇನ್ನು ನೀವು ಹೋಗಬಹುದು'.

ನರ್ಸು ಹೊರಗೆ ಹೋದಳು. ಡಾಕ್ಟರರು ಒಬ್ಬರೇ ಕುರ್ಚಿಯ ಮೇಲೆ ಕುಳಿತರು. ಅವರ ದೃಷ್ಟಿ ಮೇಜಿನ ಮೇಲಿತ್ತು. ಆಗ ಸಾಯಂಕಾಲ ಆರು ತಾಸಾಗಿತ್ತಾದರೂ ಅವರು ಕೂತ ಕುರ್ಚಿಯಿಂದ ಮೇಲಕ್ಕೆ ಏಳಲಿಲ್ಲ. ವಿಚಾರಧಾರೆ ಹರಿಯುತ್ತಾ ಇತ್ತು.

*

ಯಾರಿಗೋಸ್ಕರ ಮನೆಗೆ ಹೋಗಬೇಕು? ಅಲ್ಲಿ ನನಗಾಗಿ ಏನಿದೆ? ಏನೂ ಇಲ್ಲ. ಎಲ್ಲಿ ಹೋದರೂ ಅಂಧಕಾರ, ಗಾಢಾಂಧಕಾರ! ಮನೆಗೆ ಹೋಗುತ್ತ ಚಾಕರಿಯವಳು ಬಾಗಿಲು ತೆರೆಯುವಳು ಸ್ವಾಮಿ, ಕಾಲು ತೊಳೆಯಿರಿ ಅನ್ನುವಳು. ಆದರೆ ನನ್ನ ಯೋಗಕ್ಷೇಮದ ಚಿಂತೆ ಅವಳಿಗೇನಿದೆ? ಹೀಗೆ ಬೇಕಾದರೆ ಬೇರೆ ಎಷ್ಟೋ ಮಂದಿ ನನ್ನ ಸೇವೆಗೆ ಬಾಯಿ ತೆರೆದು ಬಿದ್ದುಕೊಂಡಿದ್ದಾರೆ. ಆದರೇನು ಅವರ ಸೇವೆಯಿಂದ ನನಗೆ ಸುಖವಾಗುವುದು ದೂರ ಉಳಿಯಿತು. ಆದರೆ ಅವರನ್ನು ಕಂಡಾಕ್ಷಣ ಹೃದಯವು ಅಸಹ್ಯ ವೇದನೆಯಿಂದ ಹೊರಳುತ್ತವೆ. ಅವರೆನ್ನ ಬಿಟ್ಟು, ದೂರ, ಬಹುದೂರ, ಎಲ್ಲಿಗಾದರೂ ಹೋಗಿ ಬಿಡೋಣ ಅನ್ನಿಸುತ್ತದೆ.

ನನಗಾಗಿ ಈ ಶುಷ್ಕ ನೀರಸ-ಹೀನ ದೀನ-ಜೀವನವನ್ನು ಬಿಟ್ಟು ಅವಳು ಹೊರಟು ಹೋದಳು; ಕಮಲೆ ಸದಾಕಾಲಕ್ಕಾಗಿ ಹೊರಟು ಹೋದಳು. ಅವಳು ಹೋಗಿ ಎರಡು ತಿಂಗಳುಗಳು ಕೂಡ ಆಗಿಲ್ಲ. ಆದರೆ ಜನರು ಮಾತ್ರ ಮನಸ್ಸಿಗೆ ಬಂದ ಹಾಗೆ ಆಡಿಕೊಳ್ಳುತ್ತಾರೆ—'ಒಳ್ಳೆದಾಯಿತು, ತೊಂದರೆ ತಪ್ಪಿತು. ಇಷ್ಟು ದಿನ ಅವಳದೊಂದು ಕಾಟವಿತ್ತು. ಈಗ ಈ ಡಾಕ್ಟರ ಮಹಾಶಯರು ಮನಸ್ಸಿಗೆ ಬಂದ ಹಾಗೆ ನರ್ಸು, ಮಿಡ್‌ವೈಫ್‌ಗಳ ಒಟ್ಟಿಗೆ ಇರಬಹುದು. ಅವರಿಗೆ ಒಬ್ಬ ಸುಂದರ, ಫೇಶನದಾರ ಆಧುನಿಕ ಹೆಂಗಸು ಬೇಕಾಗಿದ್ದಳು. ಅವಳೇ ದೊರಿತಳು. ಆಸ್ಪತ್ರೆಯ ಚೊಲ್ಲು ನೀರು ಸುರಿಸಿ ಇದ್ದಾರೆ. ಯಾರ ಬಾಯಿಗೆ ಬೀಳುವರೋ, ಮುಖ್ಯ, ಆ ದೊರೆಸಾನಿಯ ಪುಣ್ಯ.' ಏನೇನೋ ಆಡಿಕೊಳ್ಳುತ್ತಾರೆ.

ಆದರೆ ನನಗೆ ಮಾತ್ರ ನರ್ಸು ಬೇಡ, ಮಿಡ್‌ವೈಫೂ ಬೇಡ, ಹೆಂಗಸೂ ಬೇಡ, ದೊರೆಸಾನಿಯೂ ಬೇಡ ನನಗೆ ನನ್ನ ಕಮಲೆ ಬೇಕು (ಇಷ್ಟು ದಿನಗಳ ತನಕ ನನ್ನ ಒಡನಾಡಿಯಾಗಿ ನನ್ನ ಸುಖದುಃಖಗಳಲ್ಲಿ ಸಮಭಾಗಿಯಾಗಿದ್ದ ಅವಳೇ ನನಗೆ ಬೇಕು

ಅವಳಿಗೆ ನನ್ನ ಮೇಲೆ ಎಷ್ಟು ಪ್ರೇಮವಿತ್ತು. ಎಷ್ಟು ಆದರ ಇತ್ತು! ನಾನು ದಣಿದು ಮನೆಗೆ ಹೋದಾಗ ಅವಳು ಮುಗುಳು ನಗೆಯಿಂದ ನನ್ನನ್ನು ಬರಮಾಡಿಕೊಳ್ಳುತ್ತಿದ್ದಳು. ಅವಳು ಬಳಸುವಾಗ ತಾಯಿಯಂತೆ, ಆಲೋಚನೆ ಹೇಳುವಾಗ ಮಂತ್ರಿಯಂತೆ ಇದ್ದಳು ಕ್ಷೇಮಚಿಂತನೆಯಲ್ಲಿ ತಂದೆಯಾಗಿದ್ದಳು, ಸೇವೆಯಲ್ಲಿ ಚಾಕರಿಯವಳಾಗಿದ್ದಳು. ಶಯನದಲ್ಲಿ ರತಿಸಮಾನಳು, ಕಷ್ಟಕಾಲದಲ್ಲಿ ಮಿತ್ರ ಸಮಾನಳು ಆಗಿದ್ದಳು. ಅವಳಿಲ್ಲವಾಗಿದ್ದರೆ ಜೀವನದಲ್ಲಿ ನಾನಿಂದು ಇಷ್ಟು ಸಫಲನಾಗುತ್ತಿದ್ದಿಲ್ಲ.

ಸಫಲ! ಹೌದು, ಜೀವನದಲ್ಲಿ ನಾನು ನಿಶ್ಚಯವಾಗಿಯೂ ಇಷ್ಟು ಸಫಲನಾಗಿದ್ದೇನೆ ಒಬ್ಬ ಡಾಕ್ಟರನ ಇಷ್ಟು ಖ್ಯಾತಿ ಇಷ್ಟು ಆದರ, ಇಷ್ಟು ವಿಶ್ವಾಸ, ನನಗಲ್ಲದೆ ಮತ್ತಾರಿಗೆ ತಾನೆ ಪ್ರಾಪ್ತವಾಗಿರಬಹುದು? ಆದರೆ ಏನು? ನಿಜವಾಗಿಯೂ ನನ್ನ ಜೀವನವು ಸಫಲವಾಗಿದೆಯೆ?' ನನ್ನದು ಸಫಲ ಜೀವನವಾಗಿದೆಯೆ?

*

ಅಕಸ್ಮಾತ್ತಾಗಿ ಡಾಕ್ಟರರ ದೃಷ್ಟಿ ಕಪಾಟಿನಲ್ಲಿಟ್ಟಿದ್ದ ಶಸ್ತ್ರಗಳ ಕಡೆಗೆ ಹೋಯಿತು. ಅಲ್ಲಿ ಇಂಜಕ್ಷನಿನ ಸೂಜಿ ಥಳಥಳ ಹೊಳೆದುವು.

'ಸರಿ! ಬಹಳ ಸುಲಭ ಕೆಲಸ. ಸೂಜಿಯನ್ನು ಚುಚ್ಚಿ ಬಲ್ಬನ್ನು ಸ್ವಲ್ಪ ಒತ್ತಿದರಾಯ್ತು. ಶಾಂತಿಯಿಂದ, ನಿಶ್ಚಿಂತ ರೂಪದಿಂದ ಎಲ್ಲವೂ ಸಮಾಪ್ತವಾಗುವುದು. 'ಹಾರ್ಟ್‌ಫೈಲ್' ಆಯಿತು ಎಂದು ಎಲ್ಲಾ ಕಡೆಗಳಲ್ಲಿ ಸಮಾಚಾರ ಹಬ್ಬುವುದು. ಪತ್ರಪತ್ರಿಕೆಗಳಲ್ಲಿ ಈ ಶೋಕ ಸಮಾಚಾರವು ಪ್ರಕಟವಾಗುವುದು. ಆತ್ಮಹತ್ಯೆ ಮಾಡಿದೆನೆಂದು ಕನಸಿನಲ್ಲಿಯೂ ಗೊತ್ತಾಗಲಿಕ್ಕಿಲ್ಲ. ನಾನು ಹೇಡಿಯಂತೆ ಸತ್ತನೆಂದು ಯಾರೂ ಹೇಳಲಾರರು

ಆದರೆ? ನನ್ನ ಕಮಲೆಯು ಪರಲೋಕಗತ ಆತ್ಮವು ಇದನ್ನು ಒಪ್ಪಬಹುದೆ? ಒಪ್ಪದೆ ಏನು? ಅಲ್ಲ, ಈ ಸಂಗತಿ ಅವಳಿಗೆ ಹೇಗೆ ಗೊತ್ತಾಗುವುದು? ಗೊತ್ತಾದರೆ? ಗೊತ್ತಾದರೆ . ಆಗಲಿ'

ಅವರು ದೃಢನಿಶ್ಚಯ ಮಾಡಿ ಎದ್ದರು. ಇಂಜೆಕ್ಶನು ತಯಾರು ಮಾಡಿದರು ಕೋಟಿನ ಕೈಯನ್ನು ಮೇಲಕ್ಕೆತ್ತಿ ತೋಳಿನಲ್ಲಿ ಸೂಜಿಯನ್ನು ಒತ್ತಲಿಕ್ಕಿದ್ದರು. ಅಷ್ಟರಲ್ಲಿ—'ಹೀಗೆ ತಾ'' ಎನ್ನುವ ಶಬ್ದವು ಕೇಳಿಸಿತು

ಬಾಗಿಲು ತೆರೆಯಿತು. ಇಬ್ಬರು ಪುರುಷರು ಗಾಯಗೊಂಡ ಒಬ್ಬ ಹುಡುಗನನ್ನು ಎತ್ತಿ ತರುತ್ತಾ ಇದ್ದರು ಮೋಟಾರಿನ ಅಡಿಬಿದ್ದು ಅವನ ತಲೆ ಜಜ್ಜಿ ಹೋಗಿತ್ತು ಒಂದು ಕೈ ಮುರಿದಿತ್ತು

'ಡಾಕ್ಟರರೆ! ಇವನನ್ನು ಎಲ್ಲಿ ಮಲಗಿಸಲಿ?' ಎಂದು ಅವರು ಕಾತರರಾಗಿ ಕೇಳಿದರು

ಏನೋ ಒಂದು ಅಜ್ಞಾತಶಕ್ತಿಯು ಅವರಿಗೆ ಏನೋ ಎಂದು ಪ್ರೇರಣೆ ಮಾಡಿದಂತಾಗಿ ಅವರು ಕೈಯಲ್ಲಿ ಹಿಡಿದಿದ್ದ ಇಂಜಕ್ಷನ್ ಸೂಜಿಯನ್ನು ಒಂದು ಮೂಲೆಗೆ ಒಗೆದರು ಮತ್ತೆ ಅವಸರದಿಂದ ಹೇಳಿದರು. 'ಇಲ್ಲಿ ತನ್ನಿ, ಹೀಗೆ ತನ್ನಿರಿ'

ಒಬ್ಬನು ಹೇಳಿದ—'ತಲೆ ಜಜ್ಜಿ ಹೋಗಿದೆ ಸ್ವಾಮಿ''

ಇನ್ನೊಬ್ಬ ಹೇಳಿದ—'ಬಹಳ ಪೆಟ್ಟಾಗಿದೆ ಸ್ವಾಮಿ''

ಡಾಕ್ಟರರು ಕೂಡಲೇ ಪರೀಕ್ಷೆ ಮಾಡಿ ಚಿಕಿತ್ಸೆಯನ್ನು ಆರಂಭಿಸಿದರು. ನರ್ಸು ಇರಲಿಲ್ಲ. ಡಾಕ್ಟರರು ಹೇಳಿದ್ದರಿಂದ ಅವಳು ಆಗಲೇ ತನ್ನ ಮನೆಗೆ ಹೋಗಿಬಿಟ್ಟಿದ್ದಳು. ಎಲ್ಲ ಕೆಲಸಗಳನ್ನು ಅವರೇ ಮಾಡಿದರು. 'ಬಹಳ ಪರಿಶ್ರಮ ಪಡಬೇಕಾಯಿತು. ಮೂರು ತಾಸುಗಳ ಸತತ ಪರಿಶ್ರಮದಿಂದ ಡಾಕ್ಟರರು ಒಂದು ನಿಟ್ಟುಸಿರನ್ನು ಬಿಟ್ಟರು. ಗಾಯಗೊಂಡ ಹುಡುಗನು ಬದುಕುವ ಆಶೋದಯವಾಗಿತ್ತು

ಆಗಲೇ ಅವರ ಮನೆಯಿಂದ ಟೆಲಿಫೋನು ಆಯಿತು 'ಭೋಜನ ತಯಾರಾಗಿ ಬಹಳ ಸಮಯವಾಗಿದೆ.'

'ಸರಿ, ಈಗಲೇ ಬಂದೆ'

ಡಾಕ್ಟರರು ಕೋಟು ಹಾಕಿಕೊಂಡು ತಲೆಗೆ ಟೊಪ್ಪಿಯನ್ನಿಟ್ಟರು ಮತ್ತೆ ಕೈಯಲ್ಲಿ ಕೋಲು ತೆಗೆದುಕೊಂಡು ಹೊರಟರು. ಪರಲೋಕ ಗತ ಕಮಲೆಯ ಸುಂದರ ವದನವು ದೃಷ್ಟಿಯ ಮುಂದೆ ನಲಿಯುತ್ತಿರುವಂತೆ ಅವರಿಗೆ ಭಾಸವಾಯಿತು. ದಿನದ ಎಲ್ಲಾ ದಣುವೂ ಆಗ ದೂರವಾಗಿತ್ತು ಅವರಲ್ಲಿ ಹೊಸ ಜೀವ, ಹೊಸ ಸ್ಫೂರ್ತಿ ಬಂದಂತಾಗಿತ್ತು. ಇಲ್ಲ ಈಗ ಸಾಯುವುದಿಲ್ಲ, ಆತ್ಮಘಾತ ಮಾಡಿಕೊಳ್ಳುವುದಿಲ್ಲ ಇನ್ನೂ ಈ ಜೀವನದಲ್ಲಿ ಮಾಡಬೇಕಾದ ಕೆಲಸಗಳು ಅವೆಷ್ಟೋ ಹಾಗೆಯೇ ಉಳಿದಿರುವಾಗ, ಹೇಗೆ ಸಾಯಬಹುದು, ಘಾತಮಾಡಿಕೊಳ್ಳಬಹುದು? ಅವರು ಅನೇಕ ಜೀವಗಳನ್ನು ಬದುಕಿಸಲಿಕ್ಕೆ ಸಮರ್ಥರು. ಅಂತಿರುವಾಗ ತಮ್ಮ ಜೀವವನ್ನು ಸಾಯಬಿಡುವುದು ಮೂರ್ಖತನ ಅಲ್ಲದಿದ್ದರೆ ಮತ್ತೇನು? ಇಷ್ಟು ಆಲೋಚಿಸುತ್ತಾ ಇರುವಾಗ ಅವರು ತಮ್ಮ ಮನೆ ಅಂಗಳದಲ್ಲಿ ಇದ್ದರು

ಮನೆ ಕೆಲಸದವಳು ಬಂದು ಇಲ್ಲಿ ನೀರಿದೆ, ಕಾಲು ತೊಳೆಕೊಳ್ಳಿ' ಅಂದಳು.

ಕೊಳ್ಳಿರಿ ಡಿಫೆನ್ಸ್

ಸೇವಿಂಗ್ ಸ್ಟಾಂಪ್‌ಗಳನ್ನು

ಮತ್ತು ಹಣಗಳಿಸಿರಿ

ಪ್ರತಿ ೧೦ ರೂಪಾಯಿ ೧೦ ವರ್ಷಗಳಲ್ಲಿ ರೂ. ೧೩ ಆ ೮ ಆಗುತ್ತದೆ.

೪ ಆಣೆ, ೮ ಆಣೆ, ಮತ್ತು ೧ ರೂಪಾಯಿ ಬೆಲೆಯ ಸೇವಿಂಗ್ಸ್ ಸ್ಟಾಂಪುಗಳು ಪೋಸ್ಟಾಫೀಸಿನಲ್ಲಿ ಮಾರಾಟಕ್ಕಿವೆ. ನೀವು ಅವನ್ನು ಕೊಂಡಂತೆಲ್ಲಾ ಅವನ್ನು ಪೋಸ್ಟಾಫೀಸುಗಳಲ್ಲಿ ಉಚಿತವಾಗಿ ಕೊಡುವ ಸೇವಿಂಗ್ಸ್ ಸ್ಟಾಂಪ್ಸ್ ಕಾರ್ಡಿಗೆ ಅಂಟಿಸಿರಿ. ಆ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆ ಬಾಳುವ ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದಕ್ಕೆ ಬದಲಾಗಿ ಒಂದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಿ. ಅದು ನಿಮಗೆ ಹಣವನ್ನು ಗಳಿಸಿ ಕೊಡುವುದು.

ಇಂದೇ ನಿಮ್ಮ ಸೇವಿಂಗ್ಸ್ ಕಾರ್ಡನ್ನು ತೆಗೆದುಕೊಂಡು ಬನ್ನಿ!

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906. **THE CANARA BANKING CORPORATION, LIMITED**

(Incorporated in Br. India)

ಜಿಲ್ಲಾ ಸಮಾಚಾರಗಳು

ಶ್ರೀ ಬಿ. ದೇವಪ್ಪಾಳ್ವರು ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಮೊದಲನೆಯ ಸಲ ಕುಂಬಳೆಯಲ್ಲಿ ಸತ್ಯಾಗ್ರಹಮಾಡಿ ಆರು ತಿಂಗಳ ಶಿಕ್ಷೆಯನ್ನು 'ಸಿ' ಕ್ಲಾಸಿನಲ್ಲಿ ಅನುಭವಿಸಿ ಬಿಡುಗಡೆ ಹೊಂದಿ ಬಂದ ಶ್ರೀ ಬಿ. ದೇವಪ್ಪಾಳ್ವರು ಕಳೆದ ಬುಧವಾರ ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಶ್ರೀಗಳಾದ ಎ ಬಿ ಶೆಟ್ಟಿ ಮತ್ತು ಕೆ. ಆರ್ ಕಾರಂತರು ಬಿಡುಗಡೆ ಹೊಂದಿದರು

ಸತ್ಯಾಗ್ರಹ ಮಾಡಿ ಶಿಕ್ಷೆಗೆ ಗುರಿಯಾದ ಮದ್ರಾಸು ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಎ. ಬಿ ಶೆಟ್ಟಿ ಎಂ. ಎಲ್. ಎ. ಮತ್ತು ಶ್ರೀ ಕೆ ಆರ್ ಕಾರಂತ ಎಂ. ಎಲ್. ಎ ಇವರಿಬ್ಬರು ತಮ್ಮ ಒಂಬತ್ತು ತಿಂಗಳ ಶಿಕ್ಷೆಯ ಅವಧಿಯನ್ನು ಪೂರೈಸಿ ಕಳೆದ ತಾ 9ರಂದು ತ್ರಿಚನಾಪಳ್ಳಿ ಸೆರೆಮನೆಯಿಂದ ಬಿಡುಗಡೆ ಹೊಂದಿ ತಾ 10ರಂದು 2 5ರ ಟ್ರೈನಿನಲ್ಲಿ ಮಂಗಳೂರಿಗೆ ಬಂದು ತಲಪಿದರು ರೈಲ್ವೆ ಸ್ಟೇಶನಿನಲ್ಲಿ ಅವರನ್ನು ಅನೇಕರು ಎದುರುಗೊಂಡು ಹೂಮಾಲೆಗಳನ್ನು ಹಾಕಿ ಸತ್ಕರಿಸಿ ಸ್ವಾಗತಿಸಿದರು.

ಅ ದಿನ ಸಂಜೆ ಆರು ಗಂಟೆಗೆ ಅವರನ್ನು ಸ್ವಾಗತಿಸುವ ಬಗ್ಗೆ ಟೌನ್ ಮೈದಾನಿನಲ್ಲಿ ಶ್ರೀ ದಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಸೇರಿತು ಆ ಸಭೆಯಲ್ಲಿ ಶ್ರೀ ಎ ಬಿ ಶೆಟ್ರು ಭಾಷಣಮಾಡುತ್ತಾ, ಪರತಂತ್ರವಾದ ಭಾರತದ ಪರಿಸ್ಥಿತಿಯನ್ನು ಪ್ರಥಮವಾಗಿ ಎತ್ತಿ ಹೇಳಿ, ತಾವು ಸಣ್ಣ ಜೈಲಿನಿಂದ ದೊಡ್ಡ ಜೈಲಿಗೆ ಬಂದಿರುವುದಾಗಿಯೂ ದೇಶದ ರಾಜಕೀಯ ಸ್ಥಿತಿಯೂ ವಿಷಮವಾಗುತ್ತಿದೆಯೆಂದೂ ಶಾಸನ ಸಭೆಗಳ ಇಲೆಕ್ಷನ್ ಮುಂದುವರಿಸಿದ ವಿಚಾರ ಹಾಗೂ ವೈಸರಾಯ್ಸ್ ಕೌನ್ಸಿಲ್ ವಿಸ್ತಾರದ ವಿಷಯಗಳ ಕುರಿತು ಸರಕಾರದ ಘೋಷಣೆಯನ್ನು ಟೀಕಿಸಿ, ಕೊನೆಗೆ, ಕಾಂಗ್ರೆಸ್ ಸಂಸ್ಥೆಯನ್ನು ಇನ್ನಷ್ಟು ಬಲಪಡಿಸಿ ಸ್ವಾತಂತ್ರ್ಯದ ಕೆಲಸವನ್ನು ಪುಷ್ಟೀಕರಿಸಬೇಕೆಂದರು

ಅನಂತರ ಶ್ರೀ ಕೆ ಆರ್ ಕಾರಂತರು ಮಾತನಾಡುತ್ತಾ, ಮಹಾಜನರು ಕಾಂಗ್ರೆಸ್ ಕೆಲಸಗಾರರ ಹಾಗೂ ಸಂಸ್ಥೆಯ ವಿಷಯ ತೋರಿಸುವ ಗೌರವವನ್ನು ಅವರನ್ನು ಅಭಿವಂದಿಸುತ್ತಾ ಬ್ರಿಟಿಷರು ಇನ್ನು ಅನೇಕ ಶತಮಾನಗಳು ಕಳೆದರೂ ಅಧಿಕಾರವನ್ನು ಬಿಟ್ಟು ಕೊಡಲು ಮನಸ್ಸುಳ್ಳವರಾಗಿಲ್ಲವೆಂದೂ ಅವರು ಚರ್ಚಿಲ್ಲರಂತವರು ಕೊಡುವೆನೆನ್ನುವ 'ಡೊಮಿನಿಯನ್ ಸ್ಟೇಟಸ್' ಎಂಬುದರ ಅರ್ಥ ನಮಗೇ ಅರಿವಾಗಿಲ್ಲವೆಂದೂ, ವೈಸರಾಯ್ ಕೌನ್ಸಿಲ್ ವಿಸ್ತಾರವು ನಿಸ್ಸಾರವಾದುದೆಂದೂ ವಿವರಿಸಿ ಸರ್ವರೂ ಇಂದು ದೇಶದ ಮುಖಂಡರನ್ನು ವಿಶ್ವಾಸಪೂರ್ವಕ ಅನುಸರಿಸುವುದರಿಂದ ನಾವು ಬೇಗನೇ ಸ್ವಾತಂತ್ರ್ಯವನ್ನು ಪಡೆಯುವಂತಾಗುವುದೆಂದೂ ಹೇಳಿದರು. ಶ್ರೀ ಪ್ರಕಾಶಂ ರಾಜಾಜಿ ಮೊದಲಾದ ನಮ್ಮ ಮುಖಂಡರು, ಜ್ಞಾನವಯೋವೃದ್ಧರನೇಕರು ಇನ್ನೂ ಸೆರೆಮನೆಯೊಳಗಿರುವಾಗ ನಾವು ಹೊರಗೆ ಬಂದು ಬಿಡುಗಡೆಯ ಸುಖವನ್ನು ಅನುಭವಿಸುವುದಿಲ್ಲವೆಂದೂ ಹೇಳಿದರು ಅಧ್ಯಕ್ಷ ಭಾಷಣದ ಬಳಿಕ ಸಭೆ ಮುಗಿಯಿತು

ಜಿಲ್ಲಾ ಕಾಂಗ್ರೆಸ್ ಮುಖಂಡರು ವಿಚಾರ ವಿನಿಮಯ ಮಾಡಿದರು.

ಈಗಾಗಲೇ ಸತ್ಯಾಗ್ರಹ ಮಾಡಿ ಶಿಕ್ಷೆಯ ಅವಧಿಯನ್ನು ತೀರಿಸಿ ಬಿಡುಗಡೆ ಹೊಂದಿ ಬಂದ ನಮ್ಮ ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಶ್ರೀ. ಬಿ. ವೆಂಕಟ್ರಾಯ ಬಾಳಿಗ, ಎಂ ಎಲ್ ಎ ಶ್ರೀ. ಕೆ. ಈಶ್ವರ ಎಂ ಎಲ್ ಎ, ಶ್ರೀ ಕೆ ಆರ್ ಕಾರಂತ ಎಂ. ಎಲ್. ಎ, ಶ್ರೀ ಎ. ಬಿ ಶೆಟ್ಟಿ, ಎಂ. ಎಲ್. ಎ, ಶ್ರೀ. ಯು. ಶ್ರೀನಿವಾಸ ಮಲ್ಯ ಎ. ಐ. ಸಿ. ಸಿ. ಮೆಂಬರ್, ಇವರು ಜಿಲ್ಲಾ ಕಾಂಗ್ರೆಸ್ ಸಂಚಾಲಕ ಶ್ರೀ. ದಾಮೋದರ ಬಾಳಿಗರಿಂದ ಅವರ ಮನೆಗೆ ಆಮಂತ್ರಿತರಾಗಿ ಸತ್ಕರಿಸಲ್ಪಟ್ಟು ಜಿಲ್ಲೆಯ ಮುಂದಿನ ಕಾಂಗ್ರೆಸ್ ಚಟುವಟಿಕೆಗಳ ಕುರಿತು ವಿಚಾರ ವಿನಿಮಯ ಮಾಡಿದರೆಂದು ತಿಳಿದು ಬರುತ್ತದೆ.

ಖಾದೀ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಬೇಕಾಗಿದ್ದಾರೆ

ಅಖಿಲ ಭಾರತ ಚರಕಾ ಸಂಘದ ವತಿಯಿಂದ ಇದೇ ಸಪ್ಟಂಬರ ತಿಂಗಳಲ್ಲಿ ಧಾರವಾಡದಲ್ಲಿ ನಡೆಯುವ ಖಾದೀ ಶಿಕ್ಷಣ ವರ್ಗದಲ್ಲಿ ದ ಕ ಜಿಲ್ಲೆಯಿಂದ ಉತ್ಸಾಹೀ ರಾಷ್ಟ್ರಪ್ರೇಮಿಗಳಾದ ಮೂರು ಮಂದಿ ಯುವಕರು ಬೇಕಾಗಿದ್ದಾರೆ. ವರ್ಗವು ಎರಡು ತಿಂಗಳ ಅವಧಿಯದಾಗಿರುತ್ತದೆ

ಯೋಗ್ಯ ಉಮೇದಾರರಿಗೆ ಜಿಲ್ಲಾ ಕಾಂಗ್ರೆಸು ಕಮಿಟಿಯಿಂದ ಧನಸಹಾಯವು ಕೊಡಲಾಗುವುದು ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬರೆಯಿರಿ

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಸಹಾಯ ಮಾಡಿದವರು

ಶ್ರೀ ಬಿ ಶಿವರಾವ್ ರೂ 20, ಸೆಂಟ್ರಲ್ ಟೌನ್ ರೂ 50 ಕೆನರಾ ಬೇಂಕ್ ಲಿಮಿಟೆಡ್ ರೂ 101 ಶ್ರೀ ಆರೂರ್ ಲಕ್ಷ್ಮೀನಾರಾಯಣ ರಾವ್ ರೂ 1), ಇತರ ರೂ 2

ಕೇಂದ್ರ ಟೌನ್, ಸರ್ಕಲ್ ಕಾಂಗ್ರೆಸು ಕಮಿಟಿಗಳ ಕಾರ್ಯಕರ್ತರಿಗೆ—

ಜಿಲ್ಲಾ ಕಮಿಟಿಯ ಹೊರತು ಇತರ ಜಿಲ್ಲಾ ಅಧೀನ ಕಾಂಗ್ರೆಸ್ಸು ಕಮಿಟಿಗಳೂ ಮನ್ನಾಪಡಿಸಿದುದರಿಂದ, ಎಲ್ಲಾ ಕಾಂಗ್ರೆಸು ಕಮಿಟಿಗಳ ಲೆಕ್ಕಪತ್ರ ಹಾಗೂ ಕಾಂಗ್ರೆಸು ಕಮಿಟಿಗಳ ಹಣವನ್ನು ಆಯಾಯ ಕಮಿಟಿಯ ಕಾರ್ಯಕರ್ತರು ಇದೇ ಆಗೋಸ್ತು ತಾ ೩೧ರ ಒಳಗೆ ಜಿಲ್ಲಾ ಕಾಂಗ್ರೆಸು ಕಮಿಟಿಗೆ ಒಪ್ಪಿಸಬೇಕೆಂದು ಕೆ ಪಿ. ಸಿ ಸಿಯ ಅಧ್ಯಕ್ಷರು ಆಜ್ಞಾಪಿಸಿರುವರು. ಆದುದರಿಂದ ಎಲ್ಲಾ ಕಾರ್ಯಕರ್ತರು ತಮ್ಮ ವಶವಿರುವ ಲೆಕ್ಕಪತ್ರವನ್ನೂ ಹಣವನ್ನೂ ಜಿಲ್ಲಾ ಕಮಿಟಿಗೆ ಕೂಡಲೇ ಕಳುಹಿಸಿ ಪಾವತಿ ಪಡೆಯಬೇಕಾಗಿದೆ ಎಂದು ದ ಕ ಜಿಲ್ಲಾ ಕಾಂ ಕ ಅಧಿಕಾರಿಗಳು ತಿಳಿಸುತ್ತಾರೆ

ಹಿಂಡಲ್ಗಿ ಜೈಲಿನಿಂದ ಬಿಡುಗಡೆ ಹೊಂದಿದ ದ ಕ ಜಿಲ್ಲಾ ಸತ್ಯಾಗ್ರಹಿಗಳು

ಹಿಂಡಲ್ಗಿ ಜೈಲಿನಿಂದ ದ. ಕ ಜಿಲ್ಲಾ ಸತ್ಯಾಗ್ರಹಿಗಳು ಶ್ರೀಗಳಾದ ಬಾರ್ಕೂರು ಗೋವಿಂದ ಶೆಟ್ರು ಗಂಗೊಳ್ಳಿ ವೇಣು ಗೋಪಾಲ ನಾಯ್ಕರು ಮತ್ತು ಉಡುಪಿ ಸೀತಾರಾಮ ನಾಯರು ತಾ 1ರಂದೂ, ಶ್ರೀ ಕೊಳ್ನಾಡು ಚಿಕ್ಕಯ ನಾಯ್ಕರು, ತಾ 2ರಂದೂ ಶ್ರೀ ಕುಳಾಲು ರಾಮಯ್ಯ ರೈಗಳು ತಾ 6ರಂದೂ ಬಿಡುಗಡೆಹೊಂದಿ ಬಂದಿರುವರು

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿದ್ಯುದ್ದೀಪಜ್ವಲನ ಮತ್ತು ತೈಲಚಿತ್ರ ಅನಾವರಣ ಸಮಾರಂಭ

ಬಂಟ ಯಾಜಮಾನರ ಸಂಘದ ವಿದ್ಯಾರ್ಥಿ ನಿಲಯವಾದ ಎಸ್ ಆರ್. ಎಸ್ ಹೋಮ್‌ನ ವಿದ್ಯುದ್ದೀಪಜ್ವಲನಾ ಸಮಾರಂಭವು ತಾ 10 ರಂದು ಸೆರೆಮನೆಯಿಂದ ಬಿಡುಗಡೆ ಹೊಂದಿ ಅದೇ ದಿನ ಬಂದ ಶ್ರೀ ಎ ಬಿ ಶೆಟ್ಟರ ಹಸ್ತದಿಂದ ಸಂಜೆ 6 30ಗೆ ನೆರವೇರಿತು ಅನಂತರ ಕೊಡಿಯಾಲಗುತ್ತು ದೇವು ಶೆಟ್ರು ತೈಲ ಚಿತ್ರ ಅನಾವರಣ ಉತ್ಸವವು (ಅವರ ಅಳಿಯ ಶ್ರೀ ಕೆ ಟಿ ಆಳ್ವರಿಂದ ಅರ್ಪಿತವಾದುದು) ವಕೀಲ ಶ್ರೀ ಶ್ಯಾಮ ಶೆಟ್ರು ಹಸ್ತದಿಂದಲೂ ನೆರವೇರಿತು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಸದಾಶಿವ ಹೆಗ್ಡೆ ವಕೀಲ್ ಅಡ್ವೊಕೇಟ್, ಇವರು ಸಮಾರಂಭದ ವಿಷಯ ಪ್ರಸ್ತಾಪಿಸಿದರು.

ಪ್ರಾರಂಭದಲ್ಲಿ ಶ್ರೀ ಎ. ಬಿ. ಶೆಟ್ಟರು ವಿದ್ಯುದ್ದೀಪಜ್ವಲನ ಸಮಾರಂಭವನ್ನು ನೆರವೇರಿಸುತ್ತಾ ಬಹಳ ಮನೋರಂಜಕವಾದ ದೀರ್ಘ ಭಾಷಣ ವಿತ್ತರು. ಅದರಲ್ಲಿ ಹೆಚ್ಚಾಗಿ ತಮ್ಮ ಜೈಲಿನ ಜೀವನದ ವಿಷಯವನ್ನೇ ಪ್ರಸ್ತಾಪಿಸಿ, ಜೈಲು "ಹೋಸ್ಟೆಲ್ ಜೀವನ"ದಂತೆಯೇ ತಮಗೆ ಆಯಿತೆಂದೂ, ಅಲ್ಲಿ ಅನೇಕ ಪಾಠಗಳನ್ನು, ಸ್ವಸಹಾಯ, ಉಪವೃತ್ತಿ ಮೊದಲಾದ ಜೀವನದ ಅವಶ್ಯಕತೆಗಳ ಅಭ್ಯಾಸವನ್ನು ಮಾಡಿದುದಾಗಿಯೂ ಜೈಲಲ್ಲಿ ಶ್ರೀ ವೆಂಕಟ್ರಾಯ ಬಾಳಿಗರು ಉತ್ತಮ ಅಡಿಗೆಯವರಾಗಿದ್ದರೆಂದು ಮೊದಲಾಗಿ ಉದಾಹರಿಸುತ್ತಾ, ಬಹಳ ಸ್ವಾರಸ್ಯವಾದ ಭಾಷಣ ಮಾಡಿದರು. ಅನಂತರ ಶ್ರೀ ಶ್ಯಾಮ ಶೆಟ್ಟರು ಭಾಷಣಮಾಡುತ್ತಾ ಹಿಂದಿನ ಕಾಲದಲ್ಲಿ ಬಂಟ ಸಮಾಜದವರು ವಿದ್ಯಾಭ್ಯಾಸದ ಕಡೆಗೆ ಯಾವ ರೀತಿಯ ಅನಾದರ ತೋರಿಸುತ್ತಿದ್ದರೆಂದು ತಿಳಿಸಿ, ದಿವಂಗತ ಕೊಡಿಯಾಲಗುತ್ತು ದೇವು ಶೆಟ್ಟರು ಆ ಕಾಲದಲ್ಲಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಸಹಾನುಭೂತಿಯುಳ್ಳವರೆಂದೂ ಹೇಳಿದರು

ಅನಂತರ ಸಂಘದ ಅಧ್ಯಕ್ಷ ಶ್ರೀ ಕೆ ಟಿ ಆಳ್ವರು ಧನ್ಯವಾದ ಸಮರ್ಪಿಸಿದರು ಲಘು ಉಪಹಾರವೂ ಇತ್ತು

ಮೋಟರು ಸ್ಪಿರಿಟ್ ರೇಶನಿಂಗ್ ಆರ್ಡರ್

ಮೋಟರು ಸೈಕಲ್, ಕಾರು, ಮತ್ತು ಮೋಟರು ಬೋಟು ಮೊದಲಾದವುಗಳಿಗ ಬೇಸಿಕ್ ರೇಶನ್‌ಗಳನ್ನು ಕಲೆಕ್ಟರರು ಹೊರಡಿಸುವರು ಅದರ ಬಗ್ಗೆ ಅಲ್ಲಿಗೆ ಅರ್ಜಿಮಾಡಬೇಕು ಸಪ್ಲಿಮೆಂಟರಿ ಕೂಪನ್‌ಗಳನ್ನು ಏರಿಯಾ ರೇಶನಿಂಗ್ ಆಫೀಸರರು ಕೊಡುವರು. ಆದರೆ ಸಪ್ಲಿಮೆಂಟರಿ ರೇಶನ್‌ಗಳು ಆಗಸ್ಟ್ ತಿಂಗಳಿಗೆ ಅಷ್ಟು ಅಗತ್ಯವೆಂದು ತೋರದಿದ್ದಲ್ಲಿ ಕೊಡಲಾಗುವುದಿಲ್ಲ

ಬಸ್ಸುಗಳ ಬಗ್ಗೆ ಜಿಲ್ಲೆಯ ದಿ ರೋಡ್ ಟ್ರೇಫಿಕ್ ಬೋರ್ಡು ರೇಶನಿಂಗ್ ಅಧಿಕಾರ ಹೊಂದಿದೆ ಅಲ್ಲಿಗೆ ಬಸ್ ಮಾಲೀಕರು ಅರ್ಜಿ ಹಾಕಬೇಕು.

ಲಾರಿ, ಪಬ್ಲಿಕ್ ಗಾಡಿ, ಸಾಮಾನು ಗಾಡಿ, ಮತ್ತು ಟ್ಯಾಕ್ಸಿಗಳಿಗೂ ಏರಿಯಾ ರೇಶನಿಂಗ್ ಆಫೀಸರರೇ ಕೂಪನ್ ಕೊಡುವರು ಈ ವಿಷಯಗಳನ್ನು ಸಂಬಂಧಪಟ್ಟವರು ಅಗತ್ಯವಾಗಿ ಗಮನಿಸತಕ್ಕದ್ದು ಎಂದು ಕಲೆಕ್ಟರರ ಆಫೀಸಿನಿಂದ ತಿಳಿಸಿದ್ದಾರೆ

ದ ಕ ಜಿಲ್ಲೆಯಲ್ಲಿ ಎಲಿಮೆಂಟರಿ ಶಾಲೆಗಳ ಮಂಜೂರಾತಿ ರದ್ದತು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 135 ರಷ್ಟು ಎಲಿಮೆಂಟರಿ ಶಾಲೆಗಳ ರಿಕೊಗ್ನಿಶನ್ ರದ್ದಾಗಿರುವವೆಂದೂ ಅವುಗಳ ಪೈಕಿ ಸುಮಾರು 10ರಷ್ಟು ಬೋರ್ಡು ಶಾಲೆಗಳಿರುವವೆಂದೂ, ಉಳಿದವು ಮಿಶನರೀಸ್ ಮತ್ತು ಖಾಸಗಿ ಆಡಳಿತದ ಶಾಲೆಗಳೆಂದೂ ತಿಳಿದಿದೆ

ದೇವಸ್ಥಾನ ಪ್ರವೇಶ ಭಾಷಣ

ತಾ 9ರಂದು ಸಂಜೆ ಡಾ। ಯಂ ಆರ್ ಭಟ್ಟರ ಮನೆಯಲ್ಲಿ ಶ್ರೀ ನಾರಾಯಣ ಕಿಲ್ಲೆಯವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿ, ದೇವಸ್ಥಾನ ಪ್ರವೇಶದ ಕುರಿತು ಶ್ರೀಗಳಾದ ಎಚ್. ವಿ ಶೆಣೈ, ಎಂ. ಗೋವಿಂದ ಪೈ, ರಮಾನಾಥ ರಾವ್, ಗೋಪಾಲದಾಸ್ ಯಂ ಆರ್ ಭಟ್ ಇವರು ಭಾಷಣ ಮಾಡಿದರು.

ಹರಿಜನರಿಗೆ ಗಾಯತ್ರಿ ಮತ್ತು ಗೀತೋಪದೇಶ

ತಾ. 10ರಂದು ಕದ್ರಿಗುಡ್ಡೆಯ ಸಾಧಕಾಶ್ರಮದಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಶ್ರೀ ಬಿ. ಪುಂಡರೀಕ ಬಾಳಿಗರು 'ಗಾಯತ್ರಿ ಮತ್ತು ಗೀತೋಪದೇಶಗಳನ್ನು ಮಾಡಿದರು. ಅಲ್ಲಿ ನೆರೆದಿದ್ದ ಶ್ರೀಗಳಾದ ಎಚ್. ವಿ. ಕಾಮತ್, ಎಂ. ಗೋವಿಂದ ಪೈ, ಡಾ। ಯಂ. ಆರ್. ಭಟ್ಟ ಮೊದಲಾದವರೂ ಮಾತನಾಡಿದರು.

ವಸ್ತ್ರದ ಬೆಲೆಯನ್ನು ಇಳಿಸುವ ಯೋಜನೆ

ವಸ್ತ್ರದ ಬೆಲೆಯು ಈಗ ಸೇಕಡಾ 75ರಷ್ಟು ಹೆಚ್ಚಿದ್ದು, ಆ ವಿಷಯದಲ್ಲಿ ಜನರಿಗೆ ಹೆಚ್ಚಿನ ತೊಂದರೆಯಾಗಬಹುದಾದ ನಿಮಿತ್ತ ಕೆನರಾ ಚೆಂಬರ್ ಒಫ್ ಕಾಮರ್ಸಿನ ಆಶ್ರಯದಲ್ಲಿ ಒಂದು ಸಭೆ ಸೇರಿ, ಹೆಚ್ಚಾಗಿ ಬಡ ಜನರು ಉಪಯೋಗಿಸುವಂತಹ 20 ಕೌಂಟಿಗಿಂತ ಕಡಿಮೆಯ ವಸ್ತ್ರಗಳಿಗೆ ಯುದ್ಧಕ್ಕಿಂತ ಮೊದಲಿನ ದರದಲ್ಲಿಯೇ ಎಂದರೆ ಸುಮಾರು ಸೇಕಡಾ 25ರ ಹೆಚ್ಚಿದ ದರದಲ್ಲಿ ಮಾರಾಟಮಾಡಲು ಒಂದು ಕಮಿಟಿಯು ರಚಿತವಾಗಿದೆಯೆಂದೂ, ಆ ದರದಲ್ಲಿ ಮಾರಾಟ ಮಾಡುವಂತೆ ಸಕಲ ಪ್ರತಿನಿಧಿಗಳಿಂದ ಕೂಡಿದ ಆ ಕಮಿಟಿಯವರು ಒಂದು ಪ್ರತ್ಯೇಕ ಡಿಪೋ ತೆರೆಯುವರೆ ಸೂಚಿಸಿರುವರೆಂದೂ ತಿಳಿದಿದೆ.

ಹರಿಜನ ಸೇವಕ ಸಂಘ

ಇದರ ಕಾರ್ಯನಿರ್ವಾಹಕ ಸಮಿತಿಯ ಸಭೆಯು ತಾ. 9ರಂದು ಡಿ ಸಿ. ಮಿಶ್ಯನಿನಲ್ಲಿ ಡಾ। ಎಚ್ ವಿ. ಆಡಪ್ಪರ ಅಧ್ಯಕ್ಷತೆಯಿಂದ ಜರಗಿ, ರಾಮರ ನಿಧನದ ಮರಣಸೂಚಕ ಠರಾವು ಮಂಜೂರಾಯಿತು, ನೆರೆಯ ಹಾವಳಿಯಿಂದ ನೊಂದ ಜಿಲ್ಲೆಯ ಹರಿಜನರ ವಿಷಯದ ವರದಿಯನ್ನು ಶ್ರೀ ಕಿಲ್ಲೆಯವರು ಸಭೆಯ ಮುಂದಿಟ್ಟರು ಬೇರೆ ಬೇರೆ ತರದ ಸಹಾಯಗಳಿಗೆ, ಬಂದ ಇತರ ಅರ್ಜಿಗಳನ್ನು ತನಿಖೆ ಮಾಡಿ ರೂ 100 ಕೊಡುವುದಾಗಿ ಸೇಂಕ್ಶನ್ ಆಯಿತು ಸಾರ್ವಜನಿಕ ಬಾವಿ, ಹೋಟೆಲು ಮತ್ತು ಇತರ ಸ್ಥಳಗಳಲ್ಲಿ ಹರಿಜನರಿಗೆ ಇತರರು ಬಾಧೆಕೊಡುವಲ್ಲಿ ಆ ಕುರಿತು ಕಾರ್ಯಕ್ರಮವನ್ನು ಕೈಕೊಳ್ಳುವುದಾಗಿ ಜಿಲ್ಲಾ ಕಲೆಕ್ಟರರು ಸಂಘದ ಅಧ್ಯಕ್ಷರಿಗೆ ತಿಳಿಸಿದ ವಿಷಯ ಸಭೆಯ ಮುಂದಿಡಲಾಯಿತು

ಎರವಾಡ ಜೈಲಿನಲ್ಲಿರುವ ದ. ಕ ಜಿಲ್ಲಾ ಸತ್ಯಾಗ್ರಹಿಗಳು ಈ ಕೆಳಗೆ ಬರೆದ ತಾರೀಕುಗಳಲ್ಲಿ ಬಿಡುಗಡೆ ಹೊಂದುವರೆಂದು ತಿಳಿದಿದೆ—

ಗಳ ಆಗೋಸ್ತು ಕ್ಕೆ ನರಸಿಂಹ ಕಾಮತ್ ಮತ್ತು ಕುಳಾಲು ಪದ್ಮನಾಭ ರೈ, ಆಗೋಸ್ತು ಕ್ಕೆ ಶೀನ ಶೆಟ್ಟಿ ಯು ಶ್ರೀಧರ ನಾಯಕ್ ಎಸ್ ವರದರಾಜ ಶೆಣೈ ಮತ್ತು ಕೆ ನಾರಾಯಣ ಶೆಣೈ ಆಗೋಸ್ತು ಕ್ಕೆ ಶ್ರೀ ಕರಿಯಣ್ಣ ಶೆಟ್ಟಿ ಮತ್ತು ಸೋಮವಾರದ ಗೋಪಾಲ ೨೦-೮-೪೧ಕ್ಕೆ ನೀಲಕಂಠ ಪಾಟೀಲ್ ಬಿ ಮಾಧವ ಪೈ ಆಗರಿ ಲಕ್ಷ್ಮಪ್ಪ ಅಣ್ಣಪ್ಪ ಭಂಡಾರಿ ಮತ್ತು ದುಗ್ಗಪ್ಪ ಸುವರ್ಣ ತಾ ೨೨-೮-೪೧ಕ್ಕೆ ಮೈಂದಪ್ಪ ರೈ ತಾ 24ಕ್ಕೆ ಸದಾಶಿವ ಹೆಗ್ಡೆ ತಾ ೨೬ಕ್ಕೆ ಬಿ. ರಾಮಕೃಷ್ಣ ರಾವ್ ತಾ. 27ಕ್ಕೆ ಯಂ ಸುಬ್ರಾಯನ್ ಪಿ ಕೃಷ್ಣ ಪೈ, ಉಪೇಂದ್ರ ನಾಯಕ್ ಮತ್ತು ಜಿ ಕೃಷ್ಣರಾಯ ಪೈ

10ನೆಯ ಪುಟವನ್ನು ನೋಡಿ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 8/41.

ಸೋಮಕ್ಕ— ಅರ್ಜಿದಾರಳು

ಈಶ್ವರ ರೈ ಕೂಡಾ— ಎದ್ರಿಗಳು

ಸದ್ರಿ 2ನೇ ಎದ್ರಿ ಮೋನಪ್ಪ ಶೆಟ್ರಿಗೆ

ಅರ್ಜಿದಾರಳು ಕದಬ ಸಂಬ್ಯಾತ ಕೋರ್ಟು C. S 15/39ನೇ ಡಿಕ್ರಿ ರದ್ದು ಪಡಿಸಬೇಕಾಗಿ ವಗೈರೆ ಬರಕೊಂಡ ಮೇಲಿನ ಅರ್ಜಿಯು ತಾ 21-8-1941ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ವ್ಯಾದಗೆ ಈ ಕೋರ್ಟು ಮುಂದೆ ಹಾಜ್ರಾಗಿ ಉದ್ರಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸೋಣಾಗಿಯದೆ.

Puttur 10-8-41 | B. Chidanand Rao, Pleader for Petr.

ಯುಕ್ರೇನಿನಲ್ಲಿ ರಶ್ಯ-ಜರ್ಮನರು ಕಾಳಗಮಾಡುತ್ತಾರೆ!

ಸಿಂಗಾಪುರದಿಂದ ಜಪಾನರ ಪ್ರಯಾಣ

ಮಲಯದಲ್ಲಿರುವ ಜಪಾನೀಯರು ಪಯಣಮಾಕ್ಕೆಹೋಗುತ್ತಿರುವರು. ಸಿಂಗಾಪುರದಿಂದ ೩೦೦ ಜನರನ್ನು ಸಾಗಿಸಲು ವ್ಯವಸ್ಥೆಮಾಡಬೇಕೆಂದು ಜಪಾನು ಸರಕಾರಕ್ಕೆ ತಿಳಿಸಿದೆ.

ಕ್ರಿಮಿಯದ ಮೇಲೆಯೂ ಜರ್ಮನ್ ದಾಳಿ

ಜರ್ಮನರು ಕೀವ್ ಒಡೆಸ್ಸಾಗಳ ಮೇಲೆ ಮಾಡುತ್ತಿರುವ ಧಾಳಿಯೊಡನೆ ಕ್ರಿಮಿಯಕ್ಕೂ ಧಾಳಿಯಿಡುತ್ತಿರುವರು.

ಕಪ್ಪುಸಮುದ್ರದ ಹತ್ತಿರ ನೌಕಾಸಂಗ್ರಹ

ಆಗುತ್ತಿದೆಯೆಂದು ತಿಳಿದಿದೆ. ಕಾಂಸ್ಟಾಜಾ ಎಂಬ ಬಂದರದ ಹತ್ತಿರ ೩೦೦ ಜರ್ಮನ್ ನೌಕೆಗಳಿವೆಯಂತೆ ಪ್ರತಿಯೊಂದು ನೌಕೆಯಿಂದ ೪೦೦ ಸೈನಿಕರನ್ನು ಸಾಗಿಸಬಹುದಂತೆ ಜರ್ಮನರು ಕಪ್ಪು ಸಮುದ್ರದ ಹತ್ತಿರ ಇರುವ ಸೋವಿಯಟ್ ಗಡಿನಾಡಿನ ಹತ್ತಿರವೂ ಸೈನ್ಯ ಸಂಗ್ರಹಿಸುತಿದ್ದಾರೆ ಇದಕ್ಕೆ ದಕ್ಷಿಣದಲ್ಲಿ ಸುಮಾರು ೩೦೦ ರೂಮಾನಿಯನ್ ಮತ್ತು ಬಲ್ಗೇರಿಯನ್ ಹಡಗುಗಳ ಸೈನಿಕರು ಮತ್ತು ಯುದ್ಧಸಾಮಗ್ರಿಯನ್ನು ಸಾಗಿಸಲು ಸಿದ್ಧವಾಗಿವೆಯಂತೆ. ಈ ನೌಕೆಗಳನ್ನು ಸಂರಕ್ಷಿಸಲು ಜರ್ಮನರ ೨೦ ಟಾರ್ಪೆಡೊಗಳಿವೆಯಂತೆ ಇದರ ಜೊತೆಗೆ ಜರ್ಮನ್ ಸಬ್‌ಮೆರಿನುಗಳೂ ಇರುವವಾಗಿ ತಿಳಿದಿದೆ

ತ್ರಿರಾಷ್ಟ್ರ ಒಪ್ಪಂದಕ್ಕೆ ಫ್ರಾನ್ಸು ಸೇರುವುದು

ವಿಚಿಯ ಮಂತ್ರಿಮಂಡಲದ ಸಭೆಯಲ್ಲಿ ಜರ್ಮನ್ ಬೇಡಿಕೆ ವಿಷಯ ಚರ್ಚೆಯಾಯಿತು ಫ್ರಾನ್ಸು ತ್ರಿರಾಷ್ಟ್ರ ಒಪ್ಪಂದಕ್ಕೆ ಸೇರುವ ಬಗ್ಗೆ ವಿಚಾರ ಮಾಡಲಾಯಿತು. ಜನರಲ್ ವೇಗನರು ಮಾತ್ರ ಇದನ್ನು ವಿರೋಧಿಸಿದರಂತೆ

ಮೊಸ್ಕೋ ಮೇಲೆ ಧಾಳಿ!

ಜರ್ಮನರು ಮೊಸ್ಕೋದ ಮೇಲೆ ಕೆಲವು ಬಾಂಬುಗಳನ್ನೆಸೆದರು. ಮೊಸ್ಕೊದ ಮಿಲಿಟರಿ ಶಿಬಿರ ಹಾಗೂ ಪ್ರಮುಖ ರೈಲ್ವೆ ಜಂಕ್ಷನ್‌ಗಳ ಮೇಲೂ ಬಾಂಬು ಸುರಿಸಿದರು. ಅನೇಕ ಕಡೆ ಉರಿ ಎದ್ದಿತಂತೆ.

ಜರ್ಮನರು ಒಡೆಸ್ಸಾ ಕಡೆ ಮುನ್ನುಗ್ಗುತ್ತಿದ್ದಾರೆ

ಟ್ಯಾಂಕುಗಳ ಸಶಸ್ತ್ರ ದಳವೊಂದು ನಿಗೋಲಾಯಿಪಿನಿಂದ ೫೦ರಿಂದ ೭೦ ಮೈಲುಗಳ ಮುಂದೆ ನುಗ್ಗಿರುವುದೆಂದು ಲಂಡನ ಸುದ್ದಿ.

ರಶ್ಯ ಚೀನ ಒಪ್ಪಂದ?

ಚೀನಕ್ಕೆ ರಶ್ಯದ ಸಹಾಯ

ರಶ್ಯ ಮತ್ತು ಚುಂಕಿಂಗ್ ಸರಕಾರ

ಒಡೆಸ್ಸಾ ಕಡೆ ಜರ್ಮನರು ಮುನ್ನುಗ್ಗಿದರು!

ಜರ್ಮನಿಯ ಮೇಲೆ ರಶ್ಯ-ಆಂಗ್ಲರ ಧಾಳಿ!

ಥಾಯಿಲೆಂಡಿಗೆ ಭೀತಿ ಹುಟ್ಟಿದೆ.

ಗಳು ಇಷ್ಟರಲ್ಲಿಯೇ ಒಂದು ಒಪ್ಪಂದದ ಕರಾರು ಮಾಡಿಕೊಳ್ಳಲಿರುವುದಾಗಿ ತಿಳಿದಿದೆ

ಬುಕಾರೆಸ್ಟ್ ಸೇತುವೆ ನಾಶವಾಯಿತು!

ಬುಕಾರೆಸ್ಟ್ ಮತ್ತು ಕಾಂಸ್ಟಾಜಾ ಬಂದರಗಳ ನಡುವೆ ಇದ್ದ ಸುಮಾರು ೨೫೨೫ ಅಡಿ ಉದ್ದದ ಸೇತುವೆಯು ರಶ್ಯನ್ ಧಾಳಿಯಿಂದ ಮುರಿದಿದೆಯಂತೆ

ಜರ್ಮನಿ ಮೇಲೆ ಆಂಗ್ಲ ರಶ್ಯ ಧಾಳಿ

ಒಂದೇ ಸಮನೆ ನಡೆದಿದೆಯಂತೆ. ಅಗ್ನಿಜನಕ ಬಾಂಬುಗಳನ್ನೆಸೆಯುತ್ತಿವೆಯಂತೆ ಜರ್ಮನಿನ ಮೇಲೆಯೂ ಧಾಳಿಯಾಗುತ್ತಿದೆ

ಲಾರ್ಡ್ ವಿಲ್ಲಿಂಗ್‌ಡನ್ನರು ತೀರಿಹೋದರು!

ಲಾರ್ಡ್ ವಿಲ್ಲಿಂಗ್‌ಡನ್ನರು ಡಬ್ಲ್ ನಿಮೋನಿಯಾದಿಂದ ನರಳಿ ತೀರಿಹೋದರು

ಆಸ್ಟ್ರೇಲಿಯದ ಗಡಿಬಿಡಿ

ಶಾಂತಸಾಗರದಲ್ಲಿ ಗಂಡಾಂತರವು ತೀವ್ರವಾಗಿದೆಯೆಂದು ಆಸ್ಟ್ರೇಲಿಯು ಸರಕಾರವು ಗಡಿಬಿಡಿಗೊಂಡು ಮಂತ್ರಿಮಂಡಳದ ಅವಸರದ ಸಭೆಯನ್ನು ಕರೆದಿದೆ. ಸಿಂಗಾಪುರದ ವರೆಗೆ ಆಸ್ಟ್ರೇಲಿಯದ ಗಡಿಯಾದೆಯೆಂದು ಆ ಸರಕಾರ ಹೇಳಿದೆ. ಯುದ್ಧಮಾಡಬೇಕೆಂದು ತಮಗಿಚ್ಛೆಯಿಲ್ಲವೆಂದೂ, ಆಸ್ಟ್ರೇಲಿಯ ತನ್ನನ್ನು ರಕ್ಷಿಸಿಕೊಳ್ಳಲು ನಿರ್ಧರಿಸಿರುವುದೆಂದೂ ಹೇಳಿಕೆಯಾಗಿದೆ. ಜಪಾನು ಕುಂಟುನೆವ ಮಾಡಿ ಮುಂದೆ ಬರುತ್ತಿರುವ ವಿಚಾರವಾಗಿ ಆಸ್ಟ್ರೇಲಿಯದ ಮಂತ್ರಿಯು ಎಚ್ಚರಿಕೆ ಕೊಟ್ಟಿರುವನು.

ಪಿಟೇನರಿಗೆ ಪೇಚಾಟ

ಜರ್ಮನ್ ಸರಕಾರವು ಮತ್ತೂ ಬೇಡಿಕೆಗಳನ್ನು ಮಾಡಿ ಫ್ರೆಂಚ್ ಪಿಟೇನ್ ಸರಕಾರಕ್ಕೆ ಪತ್ರವೊಂದನ್ನು ಬರೆದಿರುವುದಾಗಿ ಅಮೆರಿಕನ್ ಸುದ್ದಿಗಾರನು ಬರೆಯುತ್ತಾನೆ. ಪಿಟೇನ್, ಡಾರ್ಲಾನ್, ವೇಗಾನರು ಕೂಡಿ ಈ ವಿಷಯದಲ್ಲಿ ವಿಚಾರ ವಿನಿಮಯ ಮಾಡಿದರಂತೆ.

ಯುದ್ಧವು ಹತ್ತು ವರ್ಷ ನಡೆಯಬಹುದು

ಇಟಲಿಯ ಶಿಕ್ಷಣ ಮಂತ್ರಿಯು

ರೋಮ್ ಪತ್ರಿಕೆಗೆ ಒಂದು ಭೇಟಿ ಕೊಟ್ಟು ಆ ಸಂದರ್ಭದಲ್ಲಿ, ಯುದ್ಧವು ಹತ್ತು ವರ್ಷಗಳ ವರೆಗೂ ನಡೆಯುವುದರಿಂದ, ನಮ್ಮ ಜನರು ದೀರ್ಘ ಯುದ್ಧಕ್ಕೆ ಸಿದ್ಧರಾಗಿರಬೇಕೆಂದು ಹೇಳಿದನೆಂದು ತಿಳಿದಿದೆ.

ಯುಕ್ರೇನಿನಲ್ಲಿ ಜರ್ಮನರ ಮುನ್ನಡೆ

ಮಾಸ್ಕೋದ ಮೇಲೆ ಬಾಂಬು

ರಶ್ಯನ್ ರಣಭೂಮಿಯಲ್ಲಿ ಈಗ ಮೂರು ನಾಲ್ಕು ಕಡೆಗಳಲ್ಲಿ ರಣರಂಗವು ನಡೆಯುತ್ತಿದೆ. ಸ್ಮೊಲೆನ್‌ಸ್ಕ್ ಮತ್ತು ಕೆಕ್ಸ್‌ಹೋಮ್‌ಗಳಲ್ಲಿ ಜೋರಾಗಿದೆಯಂತೆ. ಯುಕ್ರೇನಿನಲ್ಲಿ ಜರ್ಮನ್ ಸೇನೆಗಳು ಬೆಲಾ-ಸರ್ಕೋವದಿಂದ ಆಗ್ನೇಯಕ್ಕೆ ಅತಿ ವೇಗದಿಂದ ಮುನ್ನುಗ್ಗುತ್ತಿದ್ದು ಅವು ಕೀವಿನ ಆಚೆ ನೀಪರ್ ನದಿಯನ್ನು ಮುಟ್ಟಿರುವವೆಂದು ನಂಬಿಗೆಯಿದೆ ಕೀವ್ ಮತ್ತು ಒಡೆಸ್ಸಾಗಳ ಮಧ್ಯದ ರೈಲ್ವೆ ಲೈನ್ ತುಂಡುಮಾಡಿರುವುದರಿಂದ ರಶ್ಯನ್ ಸೈನ್ಯಗಳಿಗೆ ಆತಂಕವಾಗಿದೆಯಂತೆ ಮೋಸ್ಕೋದ ಮೇಲೆ ಮತ್ತೆಯೂ ಅಗ್ನಿಜನಕ ಬಾಂಬುಗಳು ಬಿದ್ದಿವೆಯಂತೆ. ಅನೇಕ ಮನೆಗಳು ಸುಟ್ಟಿವೆಯಂತೆ

ಇರಾಣಿನಲ್ಲಿ ಜರ್ಮನರ ಚಟುವಟಿಕೆ?

ಜರ್ಮನ್ ಗುಪ್ತ ಪೋಲೀಸ ದಳವು ಇರಾಣಿಗೆ ಬಂದಿರುವುದೆಂದು ಸುದ್ದಿಯಿದೆ. ಇರಾಣಿನಲ್ಲಿ ಜರ್ಮನರ ಚಟುವಟಿಕೆ ಜೋರಾಗುವುದರಿಂದ ಮಧ್ಯ ಏಶಿಯದಲ್ಲಿ ಗಡಿಬಿಡಿ ಹೆಚ್ಚುವುದಂತೆ ಇರಾಣ ತಟಸ್ಥವಿದ್ದರೆ ಮಧ್ಯ ಏಶ್ಯದಲ್ಲಿ ತಾಟಸ್ಥ್ಯವುಳಿಯುವುದೆಂದು ಟರ್ಕಿಯ ಅಭಿಪ್ರಾಯ. ಇಂದಿನ ಇರಾಣಿನ ಪರಿಸ್ಥಿತಿಯಿಂದ ಟರ್ಕಿಯವರೂ ಗಾಬರಿಗೊಂಡಿರುವರಂತೆ

ಇರಾಣಿನ ಶಹಾನಿಗೆ ಸ್ಟಾಲಿನನ ಪತ್ರ?

ಇರಾಣಿನಲ್ಲಿ ಜರ್ಮನರ ಚಟುವಟಿಕೆಯ ಕುರಿತು ಎಚ್ಚರಿಕೆಯ ಪತ್ರವೊಂದನ್ನು ಇರಾಣಿನ ಶಹಾನಿಗೆ ರಶ್ಯದ ಸ್ಟಾಲಿನ್ ಬರೆದಿರುವನೆಂದು ತಿಳಿದಿದೆ.

ಕೊನೆಯ ಮನುಷ್ಯನ ವರೆಗೂ ಹೋರಾಡುವೆವು.

ಥಾಯಿಲೆಂಡ್ ನಿರ್ಧರಿಸಿದೆ

ಥಾಯಿಲೆಂಡಿನ ಮೇಲೆ ದಾಳಿಯಾದದ್ದಾದರೆ ರಾಷ್ಟ್ರವನ್ನು ರಕ್ಷಿಸುವ ಸಲುವಾಗಿ, ಕೊನೆಯ ಮನುಷ್ಯನ ವರೆಗೂ ತಾವು ಹೋರಾಡುವುದಾಗಿಯೂ, ಸೋತರೆ ಶತ್ರುವಿಗೆ ತಮ್ಮ ಹಣವನ್ನು ಬಿಟ್ಟು ಮತ್ತೇನೂ ಸಿಗಲಾರದೆಂದೂ ಅಲ್ಲಿ ಸಾರಲಾಗಿದೆಯಂತೆ. ಥಾಯಿಲೆಂಡಿಗೆ ಜಪಾನು ದಂಡು ಸಾಗಿರುವುದಾಗಿಯೂ ಸುದ್ದಿ ಹಬ್ಬಿರುವುದು



ಈ ದಿನ ನೀವು ನಿಮ್ಮ ಹಲ್ಲುಗಳನ್ನು ಮೆಕ್ಲೀನಿನಿಂದ ತೊಳೆದಿದ್ದೀರಾ?

ನಾನೆಂದೂ ಮಾಡದಿರುವುದಿಲ್ಲ.

ಸುಂದರ ಶುಭ್ರ ಹಲ್ಲುಗಳಿಗೆ ಆರೋಗ್ಯಕರ ಅಂಟನ್ನು ಕೊಡುವ, ಬಾಯಿಯನ್ನು ಹೊಸತೂ ತಂಪೂ ಮಾಡುವ ಮೆಕ್ಲೀನನ್ನು ಉಪಯೋಗಿಸಿರಿ. ಅದು ಕೂಡಲೇ ನೋವನ್ನು ಗುಣಪಡಿಸುತ್ತದೆ. ದವಡೆಯನ್ನು ಬಿಗಿಗೊಳಿಸುತ್ತದೆ. ಉಪಯೋಗಿಸಿದರೆ ಖರ್ಚು ಕಡಿಮೆಯಾಗುವುದು.

ಖುರ್ಶಿದ್ ಬೆನ್ನರನ್ನು ತಿರುಗಿ ನಿರ್ಬಂಧಿಸಲಾಗಿದೆ!

ಮಹಾತ್ಮರಿಗೆ ಸತ್ಯಾಗ್ರಹಿಗಳು ಪತ್ರಬರೆದಿಲ್ಲ

ನೈನಿಜೈಲಿನಿಂದ ರಾಷ್ಟ್ರಪತಿಗಳನ್ನೊಳಗೊಂಡ ಕೆಲವುಂದಿ ಸತ್ಯಾಗ್ರಹಿಗಳು ಮಹಾತ್ಮರು ಈಗಿನ ಧೋರಣವನ್ನು ಬದಲಾಯಿಸಬೇಕೆಂಬುದಾಗಿ ಪತ್ರ ಬರೆದ್ದಿದ್ದಾರೆಂದು ವಾರ್ತೆ ಹಬ್ಬಿತ್ತು, ಆದರೆ ಅದು ಸಟೆಯೆಂದು ಅಲ್ಲಿಗೆ ಹೋಗಿ ರಾಷ್ಟ್ರಪತಿಗಳನ್ನು ಭೇಟಿಯಾದ ಕೃಪಾಲನಿಯವರು ಹೇಳಿರುತ್ತಾರೆ

ಖುರ್ಶಿದ್ ಬೆನ್ನರನ್ನು ನಿರ್ಬಂಧಿಸಿದರು

ದಾ ಥಾ ಜಿ ಯ ವ ರ ಮೊಮ್ಮಗಳು ಖುರ್ಶಿದ್ ಬೆನ್ನರು ಗಡಿನಾಡಿನ ಪಠಾಣರಿಗೆ ಅಹಿಂಸಾನೀತಿ ಬೋಧಿಸುತ್ತಿದ್ದರು ಅವರನ್ನು ಅಲ್ಲಿನ ಸರಕಾರ ಬಂಧಿಸಿ 3 ತಿಂಗಳ ಶಿಕ್ಷೆ ವಿಧಿಸಿತು ಆ ಶಿಕ್ಷೆಯ ಬಳಿಕ ಅವರು ಗಡಿನಾಡಿಗೆ ಬರಬಾರದೆಂದೂ ಬೊಂಬಯಿಯಲ್ಲಿರಬೇಕೆಂದೂ ಹೇಳಲಾಯಿತು 'ಗಡಿನಾಡಿಗೆ ಹೋಗದಿದ್ದರೂ ಚಿಂತೆಯಿಲ್ಲ, ಬೊಂಬಯಿಯಿಂದ ಹೊರಗೆ ಹೋಗಬೇಡವೆಂದು ನಿರ್ಬಂಧಿಸಬೇಡಿ ನನಗೆ ಗಾಂಧಿಜಿಯವರನ್ನು ನೋಡಲು ವರ್ಧಾಕ್ಕೆ ಹೋಗಬೇಕು' ಎಂದು ಅವರು ಸರಕಾರಕ್ಕೆ ಬರೆದಿದ್ದರು ಅದಕ್ಕೆ ಒಪ್ಪಿಗೆ ಸಿಗಲಿಲ್ಲ ಆದ್ದರಿಂದ ಸರಕಾರದ ಹುಕುಮು ಮೀರಿದು ಅವರು ವರ್ಧಾಕ್ಕೆ ತೆರಳುವವರಾಗಿ ಹೊರಟಿದ್ದರು, ಕೂಡಲೇ ಅವರನ್ನು ಬಂಧಿಸಿ ಶಿಕ್ಷಿಸಿದರು. ಮಹಾತ್ಮರು ಈ ವಿಷಯವಾಗಿ ಬರೆಯುತ್ತಾ ಹಿಂದೀಯರಿಗೆ ಕೊಟ್ಟ ರಾಜ್ಯಾಧಿಕಾರದ ಒಂದು ಉತ್ತಮ ಉದಾಹರಣೆಯೆಂದು ಹೇಳಿರುತ್ತಾರೆ

ವಲ್ಲಭಭಾಯಿ ಪಟೇಲರು

ಇವರನ್ನು ಯರವಾಡಾ ಜೈಲಿನಿಂದ ಸಸೂನ್ ಆಸ್ಪತ್ರೆಗೆ ಚಿಕಿತ್ಸೆಯ ಸಲುವಾಗಿ ಸಾಗಿಸಿರುವರಂತೆ ಅವರನ್ನು ಸ್ಪೆಶಲ್ ವಾರ್ಡಿನಲ್ಲಿರಿಸಿರುವಂತೆ ಅವರನ್ನು ನೋಡಲು ಯಾರಿಗೂ ಅನುಮತಿ ಕೊಡಲಾಗುವುದಿಲ್ಲ

ಅಣೆಯವರು ತಿಲಕರನ್ನು ಅನುಸರಿಸುವರಂತೆ

"ಅಹಿಂಸೆಯಿಂದ ಆಕ್ರಮಣವನ್ನು ಎದುರಿಸಕೂಡದು"

ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳಿದಲ್ಲಿ ಅಧಿಕಾರ ವಹಿಸಿದ ಶ್ರೀ ಎಂ. ಎಸ್. ಅಣೆಯವರು ತಮ್ಮ ಮೇಲಿನ ಟೀಕೆಗಳಿಗೆ ಉತ್ತರ ಕೊಡುತ್ತಾ ತಾನು ಅಧಿಕಾರ ವಹಿಸಿದ್ದು ತಿಲಕರ ಅನುಸರಣೆಯಂತೆಯೆಂದೂ, ಸರಕಾರದಲ್ಲಿ ಸೇರಿ ಮಹತ್ವದ ಸೂಚನೆ ಕೊಡುವುದರಿಂದ್ರ ಮಾರ್ಗವು ಸುಲಭವಾಗುವುದೆಂದೂ, ಕಾಂಗ್ರೆಸ್ - ವೈಸರಾಯರ

ಅಣೆಯವರು ಆತ್ಮ ಸಮರ್ಥನೆ ಮಾಡುತ್ತಾರೆ

ಅಹಿಂಸಕ ವ್ಯಾಯಾಮ ಮಂಡಳ

—ಗಾಂಧಿಜಿಯವರಿಗೆ ನೂಲಿನ ಕಾಣಿಕೆ—

ಕೊಡುಗೆಯನ್ನು ತಿರಸ್ಕರಿಸದಿದ್ದರೆ ಸಂರಕ್ಷಣ ಹಾಗೂ ಇತರ ಖಾತೆಗಳು ಭಾರತೀಯರಿಗೆ ಸಿಗುತ್ತಿದ್ದುವೆಂದೂ, ಪಾರ್ಲಿಮೆಂಟಿನಿಂದ ಕ್ರಮಶಃ ಅಧಿಕಾರವು ಪ್ರಜಾಸಮ್ಮತ ಅಸೆಂಬ್ಲಿಗೆ ಬರುವುದರಿಂದಲೇ ಸ್ವರಾಜ್ಯವು ಸಿಗುವುದೆಂದೂ, ಹಿಂದುಸ್ಥಾನದ ಹಿತಕ್ಕಾಗಿ ಇಂಗ್ಲೆಂಡು ಯುದ್ಧದಲ್ಲಿ ಗೆಲ್ಲಬೇಕೆಂದೂ, ಹಿಂದುಸ್ಥಾನವನ್ನು ನ್ಯಾಸಿಸ್ಟ್ ಆಕ್ರಮಣದಿಂದ ಅಹಿಂಸಾತತ್ವವು ಕಾಪಾಡಲಾರದೆಂದೂ ಉದ್ಗರಿಸಿದರು

ಯೂ ಖಾದೀ ಪ್ರೇಮಿಗಳ ಸಂಖ್ಯೆಯು ಬೆಳೆಯುತ್ತಿರುವುದು ಒಂದು ಶುಭ ಚಿನ್ಹವು ಸ್ವತಃ ನೂತ ನೂಲಿನಿಂದ ತಮ್ಮ ಸ್ವಂತ ಬಟ್ಟೆಗಳನ್ನು ನೇಯಿಸಿಕೊಳ್ಳುವವರ ಸಂಖ್ಯೆಯು ಬೆಳೆಯುತ್ತಿರುವ ಮೂಲಕ ಖಾದೀ ಆಂದೋಲನದ ಗುರಿಯು ತೀವ್ರವೇ ಸಾಧ್ಯವಾಗುವುದೆಂದು ಅನಿಸುತ್ತಿದೆ ಇಂಥ ತರುಣ ಖಾದೀ ಪ್ರೇಮಿಗಳು ಸಂಪೂರ್ಣವಾಗಿ ಹಳ್ಳಿ ಪಟ್ಟಣಗಳಲ್ಲಿ ಪ್ರತಿಯೊಂದು ಕುಟುಂಬದವರಿಗೂ ಈ ಖಾದೀ ಸ್ವಾವಲಂಬನದ ಸಂದೇಶವನ್ನು ಬೀರುತ್ತಿದ್ದಾರೆ

ಆದರೆ ಈ ಹುರುಪಿನ ತರುಣ ಕಾರ್ಯಕರ್ತರು ಹಳ್ಳಿಯ ನೂಲುವವರಿಗೆ ಸರಿಯಾದ ಶಿಕ್ಷಣವನ್ನು ಕೊಡಲು ಸಮರ್ಥರಾಗಿಲ್ಲ ಸಮನಾದ ಹಾಗೂ ಗಟ್ಟಿಯಾದ ನೂಲನ್ನು ತೆಗೆಯಲು ಸ್ವತಃ ಪರಿಚಿತರಾಗಿಕೊಳ್ಳುವುದು ಬಹಳ ಮಹತ್ವದ್ದಾಗಿದೆ ಅನುಕೂಲವಾದ ರಾಟೆ ಮತ್ತು ನೇರವಾದ (ಮುಳ್ಳಿಯದ) ಕದಿರುಗಳಿಂದ ನೂಲುವ ವೇಗವು ಹೆಚ್ಚುವುದು. ಈ ವಿಷಯಗಳನ್ನು ಕಾರ್ಯಕರ್ತರು ಕಲಿತು ಅವನ್ನು ಹಳ್ಳಿಗರಿಗೆ ಕಲಿಸಿದರೆ ಮಾತ್ರ ಖಾದೀ ಆಂದೋಲನವು ನಮ್ಮಲ್ಲಿ ಬೇರೂರುವುದು ನಮ್ಮ ನೂಲುವವರಿಗೆ ಮೇಲಿನ ವಿಷಯಗಳ ಬಗ್ಗೆ ಸರಿಯಾದ ಜ್ಞಾನವಾದರೆ ಉತ್ತಮ ಹತ್ತಿಯನ್ನು ಬೆಳೆಯುವ ಕರ್ನಾಟಕ ಪ್ರಾಂತವು ಖಾದೀ ಆಂದೋಲನದಲ್ಲಿ ಅಗ್ರ ಸ್ಥಾನ ಪಡೆಯುವದು.

ಈ ಉದ್ದೇಶದಿಂದ ತರುಣರಾದ ಖಾದೀ ಕಾರ್ಯಕರ್ತರಿಗೆ ನೂಲುವ ಹಾಗೂ ಹಂಜೀ ಹಾಕುವ ಶಾಸ್ತ್ರದಲ್ಲಿ ಶಿಕ್ಷಣವನ್ನು ಕೊಡುವದಕ್ಕಾಗಿ ಅ ಭಾ. ಚರಖಾ ಸಂಘದ ಕರ್ನಾಟಕ ಶಾಖೆಯವರು ಒಂದು ವರ್ಗವನ್ನು ಪ್ರಾರಂಭಿಸಬೇಕೆಂದು ಗೊತ್ತುಮಾಡಿದ್ದಾರೆ ಈ ವರ್ಗದಲ್ಲಿ ಕೇವಲ ಎರಡೇ ತಿಂಗಳ ವರೆಗೆ ಶಿಕ್ಷಣವನ್ನು ಕೊಡಲಾಗುವುದು ಇದೇ ಸಪ್ಟೆಂಬರ ತಿಂಗಳ ಮೊದಲನೆಯ ಅಥವಾ ಎರಡನೆಯ ವಾರದಲ್ಲಿ ಈ ವರ್ಗವು ಧಾರವಾಡದಲ್ಲಿ ಪ್ರಾರಂಭವಾಗುವುದು. ಶಿಕ್ಷಣಕ್ಕೆ ಅನುಕೂಲವಾಗುವಂತೆ 30 ವಿದ್ಯಾರ್ಥಿಗಳನ್ನು ಮಾತ್ರ ತೆಗೆದುಕೊಳ್ಳಲಾಗುವುದು. ಕರ್ನಾಟಕದ ಪ್ರತಿ ಜಿಲ್ಲೆಯವರೂ ಈ ವರ್ಗಕ್ಕೆ ಮೂರು ವಿದ್ಯಾರ್ಥಿಗಳನ್ನು ಕಳಿಸಬಹುದು. ಪ್ರವೇಶದ ನಿಯಮ ಮುಂತಾದವುಗಳನ್ನು ನಮ್ಮ ಸಂಸ್ಥೆಯ ಪ್ರಕಟಣೆಯಲ್ಲಿ ಪ್ರಸಿದ್ಧಪಡಿಸುವೆವು ಎಂದು ಶ್ರೀ. ಹ ಶ್ರೀ ಕೌಜಲಗಿ ಕಾರ್ಯದರ್ಶಿ, ಅ ಭಾ. ಚರಖಾ ಸಂಘ ಕರ್ನಾಟಕ ಶಾಖೆ ಹುಬ್ಬಳ್ಳಿ ಮತ್ತು ವಿ. ಟಿ. ಮಾಗಡಿ, ಕಾರ್ಯದರ್ಶಿ ವಿಧಾಯಕ ಕಾರ್ಯವಿಭಾಗ ಕ. ಪ್ರಾ. ಕಾ. ಕ. ಧಾರವಾಡ ಇವರು ತಿಳಿಸುತ್ತಾರೆ.

ಮಹಾತ್ಮಾಜಿಯವರಿಗೆ ನೂಲಿನ ಕಾಣಿಕೆ

ಸತ್ಯಾಗ್ರಹಿಗಳ ಹಾಗೂ ಎಲ್ಲಾ ಕೊಂಗ್ರೆಸಿಗರ ಅವಗಾಹನ ಬಗ್ಗೆ:—

ಇದೇ ಬರುವ ಅಕ್ಟೋಬರ 2ನೇ ತಾರೀಕಿನಲ್ಲಿ ಜರಗುವ "ಗಾಂಧೀ ಜಯಂತಿ"ಯ ಒಳಗಾಗಿ ಮಹಾತ್ಮಾಜಿಯವರಿಗೆ, ತಾವು ಸ್ವತಃ ನೂತ ನೂಲನ್ನು ಕಾಣಿಕೆಯಾಗಿ ಅರ್ಪಿಸಬೇಕೆಂಬ ಉದ್ದೇಶವಿದೆ ಪ್ರತಿ ಒಬ್ಬ ಕೊಂಗ್ರೆಸಿಗರು, ಶ್ರದ್ಧೆಯಿಂದ ನೂತ ನೂಲನ್ನು ಜಿಲ್ಲಾ ಕೊಂಗ್ರೆಸು ಕಛೇರಿಗೆ ಕಳುಹಿಸಿದರೆ, ವಿಧಾಯಕ ಕಾರ್ಯಕ್ರಮದಲ್ಲಿ ಶ್ರೇಷ್ಟಸ್ಥಾನವನ್ನು ಹೊಂದಿದ ಖಾದೀ ವಿಭಾಗದಲ್ಲಿ ತೋರ್ಪಡಿಸಿದ ಆಸಕ್ತಿಯಿಂದ ಮಹಾತ್ಮಾಜಿಯವರ ಸೂಚನೆಗೆ ಬೆಂಬಲ ಕೊಟ್ಟಂತಾಗುವುದು ಸತ್ಯಾಗ್ರಹಿಯಾದ ಪ್ರತಿ ಒಬ್ಬರೂ ಐದು ಸಾವಿರ ಗಜ ನೂಲನ್ನು ಕಳುಹಿಸಬೇಕಾಗಿದೆ ಪ್ರತಿ ಒಬ್ಬರೂ ತಾವು ಕಳುಹಿಸಿದ ನೂಲಿಗೆ ತಮ್ಮ ಪೂರ್ಣ ವಿಳಾಸ ಹಾಗೂ ನೂಲಿನ ಅಳತೆಯನ್ನು ಸೂಚಿಸುವ ಚೀಟಿಯನ್ನು ಹಚ್ಚಿ ದ ಕ ಜಿಲ್ಲಾ ಕೊಂಗ್ರೆಸು ಆಫೀಸಿಗೆ ಕಳುಹಿಸಿದರೆ, ಅದನ್ನು ಆಫೀಸಿನಲ್ಲಿ ಪ್ರದರ್ಶಿಸಿ, ಮಹಾತ್ಮರಿಗೆ ಕ್ಲಪ್ತಕಾಲದಲ್ಲಿ ಮುಟ್ಟಿಸುವ ಏರ್ಪಾಡನ್ನು ಮಾಡಲಾಗುವುದು

ದ ಕ ಜ ಕೊ ಆಫೀಸು 11-8-41

ದಾಮೋದರ ಬಾಳಿಗ
ಅಧ್ಯಕ್ಷ

ಪಂಜಾಬ್ ಮಂತ್ರಿಮಂಡಳವನ್ನು ಉರುಳಿಸುವ ಪ್ರಯತ್ನ

ಸಿಕಂದರ್ ವಿರುದ್ಧ ಲೀಗ್ ಚಳವಳ

ಸಿಕಂದರರ ಆಧಾರವಾದ ಯೂನಿಯನಿಸ್ಟ್ ಪಕ್ಷವು ಮುರಿದು ಬೀಳುವುದೆಂದೂ, ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ತಮಗೆ ಪ್ರಾತಿನಿಧ್ಯ ಸಿಗಲಿಲ್ಲವೆಂದು ಉದ್ರೇಕದಿಂದ ಶೀಖರು ಚಳವಳ ಮಾಡುತ್ತಿರುವರೆಂದೂ, ತಿಳಿದಿದೆ ಅಲ್ಲಿನ ಪಾರ್ಲಿಮೆಂಟಿನ ಸೆಕ್ರೆಟರಿ ಉಜ್ವಲ ಸಿಂಗರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರಂತೆ ಇದೇ ಸಮಯದಲ್ಲಿ ಮುಸ್ಲಿಂ ಲೀಗಿನ ಜಿನ್ನಾ ಪಕ್ಷದವರು ಸಿಕಂದರ ವಿರುದ್ಧ ಚಳವಳ ನಡೆಸುತ್ತಿರುವರಂತೆ.

ಖಾದೀ ಪ್ರೇಮಿಗಳಿಗಾಗಿ ನೂಲುವ ಹಾಗೂ ಹಂಜೀ ಹಾಕುವ ಶಿಕ್ಷಣ ವರ್ಗವು

ಇತ್ತತ್ತ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿ

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 107/1941.

ರಂಗ ಹೆಗ್ಡೆ — ವಾದಿ

ಮತ್ತು

ಮುಂಜಪ್ಪ ಹೆಗ್ಡೆ ಹಿ — ಪ್ರತಿವಾದಿಗಳು

(1) ಶ್ರೀಮತಿ ಪಂಜ್ಜು—ದರ್ಣಪ್ಪ ಹೆಂಗ್ಸಿನ ಮಗಳು—ವಕಾಂಬು ಪಾಂಡಿರ ಹೆಂಡ್ತಿ ಕಾರ್ಕಳ ತಾಲೂಕು ನೀರೂರು ಗ್ರಾಮದ ಹೊಸಮನೆ ಎಂಬಲ್ಲಿ ಇರುವವಳು

(7) ರತ್ನಾವತಿ ಹೆಂಗ್ಸು ರಂಜಾಳ ಕೂಸು ನಾಜ ಹೆಂಗ್ಸು ಮಗಳು ವ ಆನಂಗ್ರಾಜ ಶ್ರಾವರ ಹೆಂಡ್ತಿ ಕಾರ್ಕಳ ತಾಲೂಕು ಕಾಂತಾವರ ಗ್ರಾಮದಲ್ಲಿರುವವಳು

ವಾದಿಗೆ ಪ್ರತಿವಾದಿ ನ 1ನೇ ಪ್ರತಿವಾದಿಯ ಅಕ್ಕ ಚಲುವಮ್ಮ ವಗೈರವರು ಕಳೆದ ತಾ. 30-1-1934ರಲ್ಲು ರಿಜಿಸ್ಟ್ರಿ ಸೀ ರೂಪಾಯಿ ಸಾವಿರಕ್ಕೆ ಒಳಕೊಟ್ಟ ಆಧವು ದಸ್ತವೇಜಿನ ಬಾಬ್ತು ಕಳೆದ 1939 ನ 1940ನೇ ಇಸವಿ ಎಪ್ರಿಲ್ ಅಖೈರಿಗೆ ಬಾಕಿ ಒಟ್ಟು ಸವೇಜು ರೂಪಾಯಿ 2618-15-4ನ್ನು ವಸೂಲು ಮಾಡುವರೇ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತನ್ನ ಟಿ ತಾ 25-8-41ಕ್ಕೆ ಇಟ್ಟಿರುವುದರಿಂದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರವಾದಿಸತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವದೆಂತ ಕೋರ್ಟ ಹುಕುಂ ಪ್ರಕಾರ ಸದ್ರಿ 3 7ನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ 7-8-41

K. Venkatesha Pai
Pleader for Plff

ರೈಲುಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸುಬಂಡಿ	8.15 ರಾತ್ರಿ	9 25 ರಾತ್ರಿ
ಸೀಲೇಶ್ವರದವರೆಗೆ 7 32 ಬೆಳಗ್ಗೆ		10 ಅಪರಾಹ್ನ
ಮಲಬಾರು ಎಕ್ಸ್		
ಪ್ರೆಸ್ (ಮೈಲ್)	9.5 ಬೆಳಗ್ಗೆ	5.15 ಸಾಯಂ.
ಜಾಲಾರ್ ಪೇಟೆ		
ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ
ಕಾಸರಗೋಡು		
ವರೆಗೆ	3.25 ಸಾಯಂ.	6.50 ಸಾಯಂ
ಕಣ್ಣನ್ನೂರು		
ವರೆಗೆ	5 52 ಸಾಯಂ	9.40 ಪೂರ್ವಾಹ್ನ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ.

"ಅಹಿಂಸಕ ವ್ಯಾಯಾಮ ಸಂಘ"

ಹಿಂದಿನ ಕ್ರಾಂತಿಕಾರಕನು ಇಂದು ಶಾಂತಿಶಿಕ್ಷಕನು!

ಸರ್ದಾರ್ ಪ್ರಿಥ್ವಿಸಿಂಗರ ಯೋಜನೆ

ಆಗಸ್ಟು ಒಂದರಿಂದ ಆರಂಭಿಸಿ ಭಾರತದಲ್ಲಿ ಒಂದು ಹೊಸ ಸಂಸ್ಥೆಯು ಏರ್ಪಾಡಾಗಿದೆ.

ಬೊಂಬಯಿಯ, ಮಾಲಾಬಿನ, ರಾಮಭಾಗ್ ಎಂಬಲ್ಲಿ, ಮಾಜಿ ಕ್ರಾಂತಿಕಾರಕರಾದ ಸರ್ದಾರ್ ಪ್ರಿಥ್ವೀ ಸಿಂಗರು "ಅಹಿಂಸಕ ವ್ಯಾಯಾಮಮಂಡಳಿ" ಎಂಬ ಒಂದು ಹೊಸ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಇದಕ್ಕೆ ಗಾಂಧಿಜಿ ತನ್ನ ಆಶೀರ್ವಾದವನ್ನು ಕಳುಹಿಸಿರುವರು. ಮಾನಸಿಕ ಶಾರೀರಿಕ ಶಿಕ್ಷಣ ಯೋಜನೆಯನ್ನು ಅವರು ಈ ಮಂಡಳದ ಮೂಲಕ ಕೈಗೊಳ್ಳಲಿರುವರಂತೆ

ಇದನ್ನು ಪ್ರಾರಂಭಿಸುವ ಮೊದಲು ಅವರು ಗಾಂಧಿಜಿಯವರೊಡನೆ ಈ ವಿಷಯ ಮಾತನಾಡಲು ಹೋಗಿದ್ದರು. ಗಾಂಧಿಜಿ ಅವರ ಯೋಜನೆಗೆ ಸಮ್ಮತಿಸಿದರು. ಈಗ ಈ ಸಂಘಕ್ಕೆ ಕೇವಲ 25 ವಿದ್ಯಾರ್ಥಿಗಳನ್ನು ಮಾತ್ರ ಅವರು ತೆಗೆದುಕೊಳ್ಳುವರು. ಇಲ್ಲಿನ ವಿದ್ಯಾರ್ಥಿಗಳಿಗೆ, ಗ್ರಾಮದ ಅರ್ಥನೀತಿ, ಭಾರತ ರಾಜಕೀಯ, ಅಂತರ್ರಾಷ್ಟ್ರೀಯ ರಾಜಕೀಯ, ಚರಕಾ ಮತ್ತು ಖಾದಿ ಅಹಿಂಸೆ ಮತ್ತು ಅಹಿಂಸಾತ್ಮಕ ಕ್ರಾಂತಿ, ಭಾರತದ ಸಮಾಜಿಕ ಸಮಸ್ಯೆ ಇತ್ಯಾದಿ ವಿಷಯಗಳನ್ನು ಅವರು ಕಲಿಸುವರು. ಎಟ್ಟಿನಿಂದ ಜೀವನದ ವಿಶಾಲ ದೃಷ್ಟಿ ಬರುವಂತೆ ಅಲ್ಲಿನ ಶಿಕ್ಷಣವಿರುವುದಾಗಿ ಪ್ರಕಟಿಸಲಾಗಿದೆ

ಅಖಿಲಭಾರತ ಚರಕಾಸಂಘದಲ್ಲಿ 2 ಲಕ್ಷರೂಪಾಯಿಗಳ ವಂಚನೆ

'ಖಾದಿಜಗತ್' ಪತ್ರಿಕೆಯಲ್ಲಿ ಗಾಂಧಿಜಿಯವರು ಅಖಿಲಭಾರತ ಚರಕಾ ಸಂಘದ ಆಡಳಿತದಲ್ಲಿ ಈ ವರ್ಷ ಎರಡು ಲಕ್ಷರೂಪಾಯಿಗಳ ವಂಚನೆಯಾಗಿದೆ ಯೆಂಬ ವಿಷಯವನ್ನು ಪ್ರಕಟಿಸಿದ್ದಾರೆ. ಇದು ನನ್ನ ಮತ್ತು ಸಂಗಾತಿ ಕೆಲಸಗಾರನೊಬ್ಬನ ಅಜಾಗ್ರತೆಯಿಂದ ಆಯಿತು ಎಂದು ಅವರು ಬರೆದಿರುತ್ತಾರೆ ಶಂಕರ್ ಲಾಲ್ ಬೇಂಕರ್ ಒಬ್ಬನನ್ನು ಕೆಲಸಕ್ಕೆ ತಂದರಂತೆ. ಆ ಜನದ ಮೇಲೆ ಅತೀ ವಿಶ್ವಾಸ ತೋರಿಸಿ, ಹೆಚ್ಚಿನ ವಿಚಾರಣೆ ಮಾಡದ್ದರಿಂದ ಆತನು ಎರಡು ಲಕ್ಷ ರೂಪಾಯಿಗಳಷ್ಟು ವಂಚನೆಮಾಡಿದನು. ಅದನ್ನು ಬಹಳ ನಿಪುಣತೆಯಿಂದ ಮಾಡಿದ್ದರೂ ಕೊನೆಗೆ ಅದು ತಿಳಿಯಿತು. ಇದುವರೆಗೆ ಚರಖಾಸಂಘವು ಕೋರ್ಟಿಗೆ ಹೋಗದಿದ್ದರೂ ಈ ವಿಷಯ ತೀರ್ಮಾನವಾಗದಿದ್ದಲ್ಲಿ ಮೇಲಿನ ವಿಚಾರ ಪುನರಾಲೋಚಿಸಬೇಕಾಗಿದೆಯೆಂದೂ ಈ ವಿಷಯವನ್ನು ಪ್ರಕಟಿಸಿದ್ದು ಯಥಾಸ್ಥಿತಿ ಸಮಸ್ತರಿಗೂ ತಿಳಿಯಲೆಂದಾಗಿಯೆಂದೂ ಗಾಂಧಿಜಿಯವರು ಬರೆಯುತ್ತಾರೆ.

ಸತ್ಯಾಗ್ರಹಿಗಳು ಸೌಖ್ಯಹೊಂದಿ ತೆರಳಿರುವರು

ಕೇರಳದ ಸತ್ಯಾಗ್ರಹಿ ಶ್ರೀ ಸಿ. ಕೇಶವನ್ ನಾಯರರು ಡಿಲ್ಲಿಗೆ ಪ್ರಯಾಣ ಮಾಡುತ್ತಿದ್ದುದಾರಿಯಲ್ಲಿ ಮಂಗಳೂರಿಗೆ ಬಂದವರು ಮಂಗಳೂರಲ್ಲಿ ಅಸ್ವಸ್ಥರಾಗಿದ್ದು ಕಾಂಗ್ರೆಸ್ ಕಚೇರಿಯಲ್ಲಿದ್ದು ಈಗ ಸೌಖ್ಯಹೊಂದಿ ತಮ್ಮ ಪ್ರಯಾಣ ಮುಂದುವರಿಸಿರುವರು.

ಕುಮಾರಿ ಸೀತಾದೇವಿಯರ ಭಾಷಣ

ಮಂಗಳೂರು ಆರ್ಯ ಸಮಾಜ ಮಂದಿರದಲ್ಲಿ ಗುರುವಾರ ಸಂಜೆ ಶ್ರೀ ಎಂ. ಮಾಧವರಾಯರ ಅಧ್ಯಕ್ಷತೆಯಿಂದ ಶ್ರೀ ಕೃಷ್ಣಜಯಂತ್ಯುತ್ಸವವು ನೆರವೇರಿತು. ಡೇರಾಡೂನ್ ಆರ್ಯ ಕನ್ಯಾ ಗುರುಕುಲದಲ್ಲಿ ವಿದ್ಯಾಭ್ಯಾಸ ಪಡೆದುಬಂದ ಕುಮಾರಿ ಸೀತಾದೇವಿ, ಬೆಳ್ಳಿಪಾಡಿ, ಇವರು ಶ್ರೀಕೃಷ್ಣ ಚರಿತ್ರೆ ವಿಷಯ ಭಾಷಣ ಸಂಗೀತ ಮಾಡಿದರು

ಪೆರಡಾಲ ವಾಲ್ಮೀಕಿಸ್ಮಾರಕೋತ್ಸವ

ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಡಾ. ಟಿ. ಎಸ್ ಶಾಸ್ತ್ರಿಗಳ ಅಧ್ಯಕ್ಷತೆಯಿಂದ ವಾಲ್ಮೀಕಿಸ್ಮಾರಕೋತ್ಸವವು ನೆರವೇರಿತು. ಆದಿ ಕವಿಯ ವಿಚಾರವಾಗಿ, ಕಾಲೇಜಿನ ವಿದ್ವಾಂಸರಾದ ಶ್ರೀಗಳು ಪಿ. ಕೃಷ್ಣಯ್ಯ, ಸಿ. ಎಚ್. ಸುಬ್ರಾಯ ಭಟ್ಟ, ಡಿ. ನಾರಾಯಣ ಭಟ್ಟ, ಕೆ. ವೆಂಕಟಕೃಷ್ಣ ವರ್ಣ, ಕೆ. ವೆಂಕಪ್ಪ ಭಟ್ಟ, ಕೆ. ಯಂ. ಸುಬ್ರಾಯ ಭಟ್ಟ ಮತ್ತು ಸಿ. ಬಾಲಗೋಪಾಲನ್ ನಾಯರರು ಭಾಷಣಗಳನ್ನಿತ್ತರು.

ಮಂಗಳೂರು ಬೀಡಿಲೇಬರ್ ಯೂನಿಯನಿನ ಮಹಾಸಭೆ

ಯು ಇದೇ ತಾ. 3ರಂದು ಜನಾಬ್ ಕೆ. ಯಸ್. ಅಹಮ್ಮದ್ ಬಾವಾರ ಅಧ್ಯಕ್ಷತೆಯಲ್ಲಿ ಜರಗಿ ಮ್ಹಾಲಕರಿಂದ ಸಂಧಿಯ ಬಗ್ಗೆ ಯಾವದೊಂದು ತರದ ಸೂಚನೆಗಳು ಇಷ್ಟರ ತನಕ ಕಂಡು ಬಾರದ್ದರಿಂದ ಎಲ್ಲಾ ಕೆಲಸಗಾರರೂ ಸುಸಂಘಟಿತರಾಗಿ ತಮ್ಮ ಕೆಲಸವನ್ನು ಮುಂದರಿಸಬೇಕೆಂದೂ ಮತ್ತು ಒಂದು ರಕ್ಷಣಾ ಫಂಡನ್ನು ಸ್ಥಾಪಿಸಿ, ಪ್ರತಿಯೋರ್ವ ಕೆಲಸಗಾರನೂ ರಕ್ಷಣಾ ಫಂಡಿಗೆ ಎಂಟಾಣೆಯಂತೆ ಕೊಡಬೇಕೆಂದೂ ನಿರ್ಣಯವಾಯಿತು. ತುಟ್ಟಿ ಭತ್ತೆಯ ಕೇಳಿಕೆಯನ್ನು ಪಡೆಕೊಳ್ಳುವಲ್ಲಿ ಊರಿನ ಸಕಲ ಮಜೂರರ ಮತ್ತು ಮಹಾಜನರ ಬೆಂಬಲವನ್ನು ಯಾಚಿಸಲು ಇದೇ ತಾ. 31—8—41ನೇ ಆದಿತ್ಯವಾರ ಮಂಗಳೂರಿನ ಬೀಡಿ ಕೆಲಸಗಾರರ ಸಮ್ಮೇಲನವನ್ನು ಕೂಡಿಸಬೇಕೆಂದೂ ಪಾಸಾಯಿತು.

ರವೀಂದ್ರರಿಗೆ ಬಾಷ್ಪಾಂಜಲಿ

ಮಂಗಳೂರು ವಿದ್ಯಾರ್ಥಿ ಸಂಘದವರು ಶ್ರೀ. ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಿಂದ ಮೈದಾನಿನಲ್ಲಿ ಸಭೆ ಸೇರಿಸಿ, ರವೀಂದ್ರರ ನಿಧನದ ಕುರಿತು ಸಂತಾಪಸೂಚಕ ಠರಾವು ಮಾಡಿದರು. ಶ್ರೀಗಳಾದ ಕೆ ಶಿವರಾವ್ ಮತ್ತು ಪಿ. ಕೆ ನಾರಾಯಣ ಇವರು ಆ ದಿನ ಮಾತನಾಡಿದರು.

ಮೂಡುಬಿದ್ರೆಯ ಸಾರ್ವಜನಿಕರು ಟಾಗೂರರ ನಿಧನದ ಕುರಿತು ಸಂತಾಪ ಸೂಚಕ ಠರಾವು ಮಾಡಿದರು. ಶ್ರೀಗಳಾದ ಮುರಾಯರು, ಶಶಿಧರ ಕರಂಜೆ, ಗೋಪಾಲ ಪೈ ಇವರು ಭಾಷಣಮಾಡಿದರು

ಕಾರ್ಕಳದಲ್ಲಿ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಿಂದ ಟಾಗೂರರ ನಿಧನದ ಕುರಿತು ಸಂತಾಪ ಸೂಚಕ ಠರಾವಾಯಿತು ಶ್ರೀಗಳಾದ ಕಟಪಾಡಿ ಶ್ರೀನಿವಾಸ ಶೆಣೈ, ಅಲೆವೂರು ಶೇಷಪ್ಪಯ್ಯ, ಕೇವಶ ರಾಮಚಂದ್ರ ಶೆಣೈ, ಗುರುಲಿಂಗ ಶಿವಾಚಾರ್ಯ ಇವರು ಮಾತನಾಡಿದರು

ಪೆರಡಾಲಿನ ಸಂಸ್ಕೃತ ಕಾಲೇಜಿನಲ್ಲಿ ಟಾಗೂರರ ನಿಧನದ ಕುರಿತು ಒಂದು ಸಂತಾಪ ಸೂಚಕ ಠರಾವಾಯಿತು.

ಟಾಗೂರ್ ಸ್ಮಾರಕ ಸಭೆ

ಮಂಗಳೂರಿನ ಥಿಯಾಸಫಿಕಲ್ ಸೊಸೈಟಿ, ಮಿತ್ರಮಂಡಳಿ ಮತ್ತು ಕಲ್ಚರಲ್ ಎಸೋಸಿಯೇಶನ್‌ಗಳ ಆಶ್ರಯದಲ್ಲಿ ತಾ. 16ರಂದು ಸಂಜೆ 5 ಘಂಟೆಗೆ ಬೆಸೆಂಟ್ ಗರ್ಲ್ ಸ್ಕೂಲಿನಲ್ಲಿ ಶ್ರೀ ಎ. ಬಿ ಶೆಟ್ಟರ ಅಧ್ಯಕ್ಷತೆಯಿಂದ ಟಾಗೂರ್ ಸ್ಮಾರಕ ಸಭೆಯೊಂದು ಕೂಡಲಿರುವುದು

NACET BLADES

ಮೊಂಡು ಗೂಟದ ರೇಜರುಗಳಿಗೆ



ನೆಸಟು ಬ್ಲೇಡುಗಳು

ಮೂರು ಗೂಟದ ರೇಜರುಗಳಿಗೆ ನೆಸಟು ಬ್ಲೇಡುಗಳನ್ನು ಪಯೋಗಿಸಿ ಪೂರ್ತನತೆಯಲ್ಲಿ ಡಿ. ಪ್ರತಿ ಬ್ಲೇಡು ಆದರ ಕಡಿಮೆ ಬೆಲೆಗಿಂತ ಮಿಕ್ಕಿದ ನುಣುಪೂ ನಯವೂ ಉತ್ತಮವೂ ಆದ ಕ್ಷೌರವನ್ನುಂಟುಮಾಡುವುದು.

'N.B.1.

ಎದೆ ನೋವಿನಿಂದ ದೂರವಾಗಿರಿ

ನಿಮಗೆ ಬೇಗನೇ ಶೀತಬಾಧೆಯಾಗುವುದೇ? ನಿಮಗೆ ಕಫ ಬಾಧೆ ಮತ್ತು ಶ್ವಾಸಕೋಶದ ಶೀತಬಾಧೆಯಿದೆಯೆ? ಹೀಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸಗಳನ್ನು ತೆಗೆದುಕೊಳ್ಳುವುದರಿಂದ ನೀವು ಪ್ರಯೋಜನ ಹೊಂದುವಿರಿ.

ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಕರಗುವುದಾಗಿದ್ದು, ಕೂಡಲೇ ತುಂಬಾ ಔಷಧ ಸತ್ವದಿಂದ ಕೂಡಿದುದಾಗಿ, ಅದು ಶ್ವಾಸದೊಡನೆ ನಿಮ್ಮ ಶ್ವಾಸಕೋಶಕ್ಕೆ ಹೋಗುವುದು ಹಾಗೆ, ಪೆಪ್ಸಗಳು ದೋಷಕರ ವಿಷಕ್ರಿಮಿಗಳನ್ನು ನಾಶಪಡಿಸಿ, ಶೀತ, ಗಂಟಲು ನೋವು ಮೊದಲಾದವುಗಳನ್ನು ಸಂಪೂರ್ಣ ಗುಣಪಡಿಸುತ್ತದೆ, ಇಂಫ್ಲುಯೆಂಜಾ, ಆಸ್ತಾ ಮೊದಲಾದವುಗಳಿಗೂ ಇದು ಗುಣಕಾರಿ ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿಗೆ ದೊರಕುತ್ತದೆ

ಏಜೆಂಟರು:—
ಮೆಸರ್ಸ್ ದಾಥಾ ಮತ್ತು ಕಂಪೆನಿ, ಓ. ಟಿ. ಮದರಾಸು
ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ವಾಲ್ಮೀಕಿ ಕಾಳಿದಾಸರ ಸಾಲಿಗೆ ಸೇರಿದ ಮಹಾಕವಿಗಳು

ರವೀಂದ್ರನಾಥ ಠಾಗೋರರ ಜೀವನ ಪರಿಚಯ

ನಮ್ಮ ಕಾಲದ ಭಾರತದ ಯುಗಪುರುಷರಲ್ಲಿ, ಗಾಂಧಿಯವರ ಬಳಿಕ ಕೀರ್ತಿ ಶಿಖರಕ್ಕೇರಿದ ಮಹಾತ್ಮರೆಂದರೆ ಕವೀಂದ್ರರಾದ ರವೀಂದ್ರನಾಥ ಠಾಗೋರರು. ಅಖಿಲ ಜಗತ್ತಿನ ವಿದ್ವಾಂಸ ಲೋಕಕ್ಕೆ ಅವರು ಪರಿಚಿತರೂ, ಪ್ರೀತರೂ, ಗೌರವ ಮೂರ್ತಿಗಳೂ ಆದವರು. ಭಾರತದಲ್ಲಂತೂ ಅವರು ಒಬ್ಬ ಮಹಾಕವಿ, ಮಹಾಮುನಿ, ಮಹಾ ತತ್ವಜ್ಞಾನಿ, ಮಹಾ ಸ್ಪೂರ್ತಿ ಋಷಿಗಳೇ ಆಗಿದ್ದರು. ಠಾಗೋರರು ತಮ್ಮ ನೂತನ ಸಾಹಿತ್ಯ ಸಂಸ್ಕಾರದಿಂದ ಭಾರತದ ಮಾತ್ರವಲ್ಲ ವಿಶ್ವ ಸಾಹಿತ್ಯ ಜ್ಯೋತಿಯಲ್ಲಿ ತಮ್ಮದೇ ಆದ ನವೀನ ಪ್ರಕಾಶವೊಂದನ್ನು ಉಂಟುಮಾಡಿದರು. ಭಾರತದ ಹೃದಯಾಂತರಾಳದಲ್ಲಿ ಅಡಗಿದ್ದ ಗೂಢನಿಗೂಢವಾದ ವೈದಿಕ ಪ್ರಾಚೀನ ಋಷಿವರ್ಯರ ಪರಮೋಚ್ಚ ತತ್ವ ಸಂಸ್ಕೃತಿಗಳನ್ನು ಅಂತುಕೊಂಡು ಪಾಶ್ಚಾತ್ಯ ಲೋಕದ ಅರ್ವಾಚೀನ ವೈಜ್ಞಾನಿಕ ಸಂಸ್ಕಾರದ ನೂತನ ವಿಚಾರ ವಾಹಿನಿಯೊಡನೆ ಅದನ್ನು ಸಮರಸದಿಂದ ಬೆರಸಿ ತೋರಿಸಿ ಠಾಗೂರರು ಸಹೃದಯರಿಗೆ, ಸಾಂಸ್ಕೃತಿಕ ಜೀವಿಗಳಿಗೆ, ತತ್ವವೇತ್ತರಿಗೆ ಜ್ಞಾನದ ಅಮೂಲ್ಯ ದಾನವನ್ನೇ ನೀಡಿದ್ದಾರೆ. ಅವರ ಮರಣದಿಂದ 'ವಿಶ್ವಭಾರತಿ'ಯು ಇಂದು ಬಂಜೆಯಾಗಿದೆ! ವಿಶ್ವ ಸಾಹಿತ್ಯ ಸೇವಿಯ ರತ್ನಕಿರೀಟದಲ್ಲಿ ಝಗಝಗಿಸುತ್ತಿದ್ದ ಉಜ್ವಲ ವಜ್ರವೊಂದು, ಇಂಥ ಸಂತ ಕಣ್ಮರೆಯಾಗಿದೆ!

ಠಾಗೂರ್ ವಂಶವು ಬಂಗಾಳದಲ್ಲಿ ಬಹಳ ಪ್ರಸಿದ್ಧವಾದುದು. ಶ್ರೀಮಂತರಾಗಿದ್ದುದು ಮಾತ್ರವಲ್ಲ, ವಿದ್ಯೆ, ಕಲೆ, ಸಾಹಿತ್ಯ, ಸಂಸ್ಕೃತಿಗಳಲ್ಲಿಯೂ ಆ ವಂಶಸ್ಥರು ಸಿರಿವಂತರೇ ಎನಿಸಿದ್ದರು. ಠಾಗೂರರ ತಂದೆ ದೇವೇಂದ್ರನಾಥ ಠಾಗೂರರು ಬ್ರಹ್ಮ ಸಮಾಜದ ಮುಂದಾಳುಗಳಿದ್ದು 'ಮಹರ್ಷಿ' ಎಂಬ ಗೌರವದ ಹೆಸರು ಪಡೆದವರು. ಕ್ರಿಸ್ತಶಕ ೧೮೬೧ನೆಯ ಇಸವಿಯಲ್ಲಿ ಮೇ ೬ನೆಯ ತಾರೀಕು ರವೀಂದ್ರರು ಮಹರ್ಷಿ ದೇವೇಂದ್ರನಾಥ ಠಾಗೂರ್ ಮತ್ತು ಶಾರದಾ ದೇವಿಯರ ಪುಣ್ಯ ಗರ್ಭದಲ್ಲಿ ಏಳನೆಯ ಸುಪುತ್ರನಾಗಿ ಜನ್ಮವೆತ್ತಿದರು. ರವೀಂದ್ರರು ಜನ್ಮವೆತ್ತಿದ ಕಾಲದಲ್ಲಿ ಬಂಗಾಳದಲ್ಲಿ ಹೊಸ ಯುಗವೊಂದು ಆರಂಭವಾಗಿತ್ತು. ಪಾಶ್ಚಾತ್ಯ ವಿದ್ಯಾ ಸಂಸ್ಕೃತಿಗಳು ಭಾರತದ ಇತರ ಪ್ರಾಂತಗಳಿಗಿಂತ ಬಂಗಾಳಾ ಪ್ರಾಂತದ ಜನತಾ ಜೀವನದಲ್ಲಿ ಆಗ ವಿಶೇಷ ಮಾರ್ಪಾಟುಗಳನ್ನು ಉಂಟುಮಾಡಿದ್ದುವು. ರಾಜಾರಾಮ ಮೋಹನ ರಾಯರಂತಹ ಸುಧಾರಕ ವ್ಯಕ್ತಿಗಳು ಹೊಸ ಸಮಾಜವನ್ನೇ ನಿರ್ಮಿಸುವ ಸಾಹಸಕ್ಕೆ ಸೊಂಟಕಟ್ಟಿದ್ದರು. ಈಶ್ವರಚಂದ್ರ ವಿದ್ಯಾಸಾಗರ, ಬಂಕಿಂಚಂದ್ರ ಚಟರ್ಜಿ ಮೊದಲಾದವರು ಬಂಗಾಳೀ ಸಾಹಿತ್ಯದಲ್ಲಿ ನವಜೀವನವನ್ನು ತುಂಬಿಸುತ್ತಿದ್ದರು. ಸಂಸ್ಕೃತಿ, ಸಾಹಿತ್ಯ, ಕಲೆ, ವಿದ್ಯೆ ಜೀವನಗಳ ಮಾತೃ ಮಂದಿರದಂತಿದ್ದ ಠಾಗೂರ್ ವಂಶದಲ್ಲಿ ಹುಟ್ಟಿಬಂದ ರವೀಂದ್ರರಿಗೆ ಅನುಕೂಲ ವಾತಾವರಣವೇ ಒದಗಿತು. ರವೀಂದ್ರರು ಕೇವಲ ಎಂಟನೆಯ ವಯಸ್ಸಿನಲ್ಲಿ ಕವಿತಾ ರಚನೆಗೆ ಕೈಹಾಕಿದ್ದರು!

ಸಣ್ಣದಿರುವಾಗಲೇ ಮಾತೃವಿಯೋಗ ವೊದಗಲು, ರವೀಂದ್ರರು ಇಡೀ ಕುಟುಂಬದ ಅತ್ಯಂತ ಲಾಲನೆಯ ಬಾಲಕನಾಗಿ ಬೆಳೆದರು. ರವೀಂದ್ರರಿಗೆ ಶಾಲಾ ಜೀವನದಲ್ಲಿ ಒಂದು ತರದ ಅನಾದರವಿತ್ತು. ಅವರಿಗೆ ಮನೆಯಲ್ಲಿಯೇ ವಿದ್ಯಾಭ್ಯಾಸ ಕೊಡುವ ಏರ್ಪಾಡು ಮಾಡಿದರು. ಅವರ ಬುದ್ಧಿಯು ಶಾಲೆಗಳ ಒಂದೇ ತೆರದ ಜಡಪದ್ಧತಿಗೆ ಬಾಗದಷ್ಟು ಬಲಿಷ್ಟವೂ ಸ್ವತಂತ್ರವೂ ತೀಕ್ಷ್ಣವೂ ಸೂಕ್ಷ್ಮವೂ ಆಗಿತ್ತು. ಮಹರ್ಷಿ ದೇವೇಂದ್ರನಾಥರು ಹಿಮಾಲಯ ಸಂಚಾರಿಯಾಗಿ ತಿರುಗಾಡಿದರು. ಅವರು ತಮ್ಮೊಡನೆ ರವೀಂದ್ರರನ್ನೂ ಒಮ್ಮೆ ಕರಕೊಂಡು ಹೋದರು. ತಂದೆಯೊಡನೆ ಹಿಮಾಲಯದ ತಪ್ಪಲಲ್ಲಿ ತಿರುಗಾಡುತ್ತಿದ್ದ ಸವಿ ನೆನಪನ್ನು ರವೀಂದ್ರರು ಮನೋಹರವಾಗಿ ವರ್ಣಿಸಿದ್ದಾರೆ.

ರವೀಂದ್ರರು ೧೮೭೭ರಲ್ಲಿ ಮೊದಲನೆಯ ಸಲ ತಮ್ಮ ಸಹೋದರ ಸತ್ಯೇಂದ್ರನಾಥರೊಡನೆ ಇಂಗ್ಲೆಂಡಿಗೆ ತೆರಳಿದರು. ಕೇವಲ ಒಂದು ವರ್ಷಗಳು ಮಾತ್ರ ಅಲ್ಲಿದ್ದು ಮರಳಿ ಭಾರತಕ್ಕೆ ಬಂದರು. ರವೀಂದ್ರರಿಗೆ ಅಲ್ಲಿನ ಶಾಲಾಜೀವನದಲ್ಲಿಯೂ ಮನಸ್ಸಾಗಲಿಲ್ಲ. ಸಾಹಿತ್ಯ ಸರಸ್ವತಿಯು ಅವರನ್ನು ತನ್ನ ಸೇವೆಗೆ ಕರೆಯುತ್ತಿದ್ದಳು; ಹದಿನೈದನೆಯ ವರ್ಷದ ಪ್ರಾಯದಲ್ಲಿಯೇ ಅವರು ಉತ್ತಮ ಕಾವ್ಯವೊಂದನ್ನು ಬರೆದರು.

ತಮ್ಮ ೨೨ನೆಯ ವಯಸ್ಸಿನಲ್ಲಿ ರವೀಂದ್ರರಿಗೆ ಮೃಣಾಲಿನೀ ದೇವಿಯರೊಡನೆ ವಿವಾಹವಾಯಿತು. ಮೃಣಾಲಿನೀ ದೇವಿಯವರು ೨ ಗಂಡು ಮಕ್ಕಳನ್ನೂ ೨ ಹೆಣ್ಣು ಮಕ್ಕಳನ್ನೂ ಪಡೆದು ೧೯೦೨ರಲ್ಲಿ ಮೃತಿಹೊಂದಿದರು. ಠಾಗೂರರು 'ಸ್ಮರಣ' ಎಂಬ ಕವಿತಾಗುಚ್ಛವನ್ನು ಪತ್ನಿಯ ನೆನಪಿಗಾಗಿ ಅರ್ಪಿಸಿದ್ದಾರೆ. ತಮ್ಮ ಜೀವನ ಸಹಭಾಗಿನಿಯ ವಿಷಯ ಠಾಗೂರರು ಬಹಳ ಉಜ್ವಲವಾಗಿ ಪ್ರೇಮಮಯವಾಗಿ, ವಿಯೋಗ ವ್ಯಥಿತರಾಗಿ ಹಾಡಿದ್ದಾರೆ. ಪ್ರೇಮ ಸೌಂದರ್ಯಗಳ ಚಿತ್ರವನ್ನು ಠಾಗೂರರಷ್ಟು ಸುಂದರವೂ ಭವ್ಯವೂ ಆಗಿ ಚಿತ್ರಿಸಿದ ಆಧುನಿಕ ಕಲಾವಿದರು ಸಿಗುವುದು ದುರ್ಲಭ.

ಬಂಗಾಳವೂ ಭಾರತದ ಇತರ ಪ್ರಾಂತಗಳಂತೆ ರಾಷ್ಟ್ರೀಯ ಸ್ಫೂರ್ತಿಯಿಂದ ಕುದಿಯುತ್ತಿತ್ತು. ಅದು ವರೆಗೆ ಶ್ರೀಮಂತ ಪ್ರಭುತ್ವ ರೀತಿಯ ಜೀವನದಲ್ಲಿದ್ದ ರವೀಂದ್ರರು ಒಮ್ಮೆಗೇ ಜನಸಾಮಾನ್ಯರೊಡನೆ ತಾನೂ ಸಾಮಾನ್ಯ ಜನವಾಗಿ ಬೆರೆತರು. ಮಾತಿನಲ್ಲಿ, ಕೃತಿಯಲ್ಲಿ, ಬರಹಗಳಲ್ಲಿ, ಕವಿತೆಗಳಲ್ಲಿ ಠಾಗೂರರು ಭಾರತೀಯ ಪಾರತಂತ್ರ್ಯವನ್ನು ವರ್ಣಿಸಿದರು; ಸ್ವಾತಂತ್ರ್ಯದ ತುರುಹಾ(?) ರಣಕಹಳೆಯ ನಿರೀಕ್ಷೆಯಲ್ಲಿ ಜನತೆಯು ಆನಂದಪರವಶವಾಗುವಂತೆ ಮಾಡಿ ಹಾಡಿದರು! ಬ್ರಿಟಿಷ್ ಪ್ರಭುತ್ವ, ಬ್ರಿಟಿಷ್ ವಿದ್ಯಾಭ್ಯಾಸ, ಬ್ರಿಟಿಷ್ ಗೌರವ ರೀತಿನೀತಿಗಳನ್ನು ಅವರು ಒಮ್ಮೆಲೇ ತಿರಸ್ಕರಿಸಿದರು. ಸರಕಾರವಿತ್ತ 'ಸರ್' ಬಿರುದನ್ನು ಹಿಂದಟ್ಟಿ ಬ್ರಿಟಿಷರು ಕೊಡುವ ಗೌರವದಲ್ಲಿ ಅನಾದರ ತೋರಿಸಿದರು. ಪಂಜಾಬಿನ ಅತ್ಯಾಚಾರದಂತಹ ಅನ್ಯಾಯಗಳು ಅವರಲ್ಲಿ ಬ್ರಿಟಿಷ್ ಗೌರವದ ಕುರಿತು ಆ ತೆರನ ತಿರಸ್ಕಾರವನ್ನು ಹುಟ್ಟಿಸಿತು. ಅದೇ ಸಮಯದಲ್ಲಿ ವಂಗಭಂಗವೂ ನಡೆಯಿತು. ರವೀಂದ್ರನಾಥ ಠಾಗೂರರು ತಮ್ಮ ವೀರವಾಣಿಯಿಂದ ಬಂಗಾಳಿಗಳನ್ನು ಹೊಡೆದೆಬ್ಬಿಸಿದರು. ದೇಶದ ಪಾರತಂತ್ರ್ಯದ ದುರವಸ್ಥೆಯನ್ನು ವರ್ಣಿಸಿ ವರ್ಣಿಸಿ, ಭಾರತೀಯ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಗೀತೆಗಳನ್ನೂ ಅಮರಗೀತೆಗಳನ್ನೂ ರಚಿಸಿ ರಚಿಸಿ ಹಾಡಿದರು. ಸಮಸ್ತ ಭಾರತವೂ ಅವರ ಗಾನಕ್ಕೆ ಕಲಕಂಠ ಕೂಡಿಸಿ ಹಾಡಿತು, ದೇಶಸೇವಕರ ಧಮನಿಗಳಲ್ಲಿ ವೀರರಕ್ತವು ಹರಿಯಿತು. ರಾಷ್ಟ್ರೀಯ ಶಾಲೆ, ರಾಷ್ಟ್ರೀಯ ಸಂಘ ಮೊದಲಾದವುಗಳನ್ನು ಅವರು ಆರಂಭಿಸಿ ಕೆಲಸಮಾಡಿದರು.

ಕಡೆಗೆ ರಾಜಕೀಯದ ಕಳತಂತ್ರವು ಅವರ ಮನಸ್ಸಿಗೆ ಒಪ್ಪಲಿಲ್ಲ. ರಾಜನೀತಿಯ ಮಾಯಾಜಾಲವು ಅವರ ಹೃದಯಕ್ಕೆ ಒಗ್ಗಲಿಲ್ಲ. ಅವರು ಪ್ರತ್ಯಕ್ಷ ರಾಜಕೀಯದಿಂದ ಮತ್ತೆ ದೂರ ನಿಂತರು. ತಾವು ಸ್ಥಾಪಿಸಿದ ಕಲಾ ಸಾಂಸ್ಕೃತಿಕ ಕೇಂದ್ರವಾದ 'ಶಾಂತಿನಿಕೇತನ'ದಲ್ಲಿ ಅದರ ಅಭ್ಯುದಯ ಕಾರ್ಯದಲ್ಲಿ, ಕಲಾಸಾಹಿತ್ಯ ಸಂಸ್ಕೃತಿಗಳ ತಪೋ ಜೀವನದಲ್ಲಿ ಜೀವನ ಕಳೆದರು. ಗಾಂಧಿಜಿ ಮತ್ತು ಠಾಗೂರರಲ್ಲಿ ಅತ್ಯಂತ ಆಪ್ತಭಾವದ ಸಂಬಂಧವಿತ್ತೆಂಬುದನ್ನು ಮರೆಯತಕ್ಕುದಲ್ಲ. ಭಾರತದ ರಾಷ್ಟ್ರೀಯ ಧುರೀಣರನೇಕರು ಅವರನ್ನು "ಗುರುದೇವ"ರೆಂಬ ಆದರಭಾವದಿಂದ ಗೌರವಿಸುತ್ತಿದ್ದರು. ಕೊನೆಯ ಕಾಲದಲ್ಲಿ ಮೊನ್ನೆ ಮೊನ್ನೆ, ಮಿಸ್ ರತ್‌ಬೋನಳಂತಹ ಉದ್ಧಟ ಬ್ರಿಟಿಷ್ ಮಹಿಳೆಗೆ ಅವರಿತ್ತ ಉತ್ತರವು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರಿಗಿದ್ದ ಅತ್ಯಂತವಾದ ಆದರಕ್ಕೆ ಉತ್ತಮವಾಗಿರುವ ಅತ್ಯಾಧುನಿಕ ನಿದರ್ಶನವಾಗಿದೆ. "ಲೋಕವನ್ನು ಉದ್ಧರಿಸುವ ಯುಗಪುರುಷನೊಬ್ಬನು ಭಾರತೀಯ ಗರ್ಭದಲ್ಲಿ ಜನ್ಮವೆತ್ತುವನು" ಎಂಬ ಅವ್ಯಕ್ತಮಯ ಭವಿಷ್ಯ ಸಂದೇಶವೊಂದನ್ನು ಠಾಗೋರರು ತಮ್ಮ ಕಡೆಯ ಹುಟ್ಟಿದ ಹಬ್ಬದ ದಿನ ಕೊಟ್ಟು ಹೋಗಿದ್ದಾರೆ!

ಶಾಂತಿನಿಕೇತನದ 'ವಿಶ್ವಭಾರತಿ'ಯು ಒಂದು ವಿಶ್ವವಿದ್ಯಾನಿಲಯ. ಅಲ್ಲಿನ ವಾತಾವರಣವು ರವೀಂದ್ರರ ಬುದ್ಧಿ ಸಂಸ್ಕಾರಗಳಿಂದ ಪುನೀತವಾದುದು. ಅಲ್ಲಿ ವಿಶ್ವದ ಭಾರತಿಯನ್ನು, ಸಾಹಿತ್ಯ ಸಂಸ್ಕೃತಿ ಕಲಾದೇವಿಯನ್ನು ಪ್ರತಿಷ್ಠಿಸಿ ಆರಾಧಿಸಿದರು ಠಾಗೂರರು. ದೇಶವಿದೇಶಗಳ ವಿದ್ವಾಂಸರು, ಧೀಮಂತರು, ಜ್ಞಾನಿವಿಜ್ಞಾನಿಗಳು ಶಾಂತಿನಿಕೇತನವನ್ನು ಸಂದರ್ಶಿಸಿ ಮುಕ್ತಕಂಠದಿಂದ ಹೊಗಳಿದರು. "ವಿಶ್ವಭಾರತಿ"ಯು ವಿಶ್ವದ ಸೊತ್ತಾಗಿದೆ. ವಿಶ್ವದ ಮಾನವ ಕುಲವೆಲ್ಲ ಒಂದೇ ಕುಟುಂಬ, ಪಾಶ್ಚಾತ್ಯ ಪೌರ್ವಾತ್ಯ ಮಾನವಕೋಟಿಯ ಹೃದಯಾಂತರಾಳದಲ್ಲಿ ಅಡಗಿರುವ ಪ್ರೇಮ ಸಂಬಂಧವು ಸಮಾನವಾದುದು ಎಂಬ ಮಹೋದ್ದೇಶದಿಂದ ಆ ಸಂಸ್ಥೆಯು ಠಾಗೂರರ ನೇತೃತ್ವದಲ್ಲಿ ದುಡಿಯಿತು, ದುಡಿಯುತ್ತಿದೆ. ಅದರ ಉನ್ನತಿಗಾಗಿ ಅವರು ತಮ್ಮ ಕೊನೆಯ ದಿನಗಳಲ್ಲಿಯೂ ದಯಪಾಲಿಸಿ(?) ದುಡಿದರು. ಇಂಥ ಅದನ್ನು ಅಗಲಿ ಅವರು ವಿಶ್ವಭಾರತಿಯನ್ನು ವಿಶ್ವದ ಸೊತ್ತಾಗಿಯೇ ಬಿಟ್ಟು ಹೋದರು!

ರವೀಂದ್ರರ ಸಾಹಿತ್ಯ ಕೀರ್ತಿ ಶಿಖರವು ಹಿಮಾಲಯದ ಉನ್ನತಿಯನ್ನೂ ಮೀರಿದೆ. ಅವರ 'ಗೀತಾಂಜಲಿ' ಎಂಬ ಕಾವ್ಯಕ್ಕೆ 'ನೋಬೆಲ್ ಪ್ರೈಜ್' ಎಂಬ ಒಂದು ಲಕ್ಷ ರೂಪಾಯಿಗಳ ಪುರಸ್ಕಾರವು ದೊರೆಕಿತು, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಅವರ ಸಾಹಿತ್ಯ ಸಾರ್ವಭೌಮತ್ವವನ್ನು ಮನ್ನಿಸಿ ಅವರಿಗೆ 'ಡಾಕ್ಟರ್ ಓವ್ ಲಿಟರೇಚರ್' ಬಿರುದನ್ನು ತಂದೊಪ್ಪಿಸಿತು! ಅವರು ಕಾವ್ಯ, ಕವಿತೆ, ನಾಟಕ, ಕತೆ, ಪ್ರಬಂಧ ರೂಪವಾಗಿ ಅನೇಕಾನೇಕ ಉದ್ಗ್ರಂಥಗಳನ್ನು, ಶಾಶ್ವತ ಸಾಹಿತ್ಯವನ್ನು ಸೃಷ್ಟಿಸಿದರು. ಸಾಹಿತ್ಯವೆಂಬುದು ರವೀಂದ್ರರ ಪ್ರಾಣ. ಕವಿಗಳಾಗಿ ಅವರು ಜಗತ್ಪ್ರಸಿದ್ಧಿ ಪಡೆದರು, ಕಲೆಯೆಂದರೆ ಅವರ ಉಸಿರು; ಕಲಾವಿದರಾಗಿ ಅವರು ಕೀರ್ತಿ ಹೊಂದಿದರು. ತತ್ವಜ್ಞಾನವೆಂದರೆ ಅವರ ಜೀವ, ತಾತ್ವಿಕರಾಗಿ ಅವರು ಹೆಸರು ಮೆರೆಸಿದರು. ಮಕ್ಕಳ ಸಾಹಿತ್ಯವನ್ನು ಬರೆದಿದ್ದಾರೆ; ಪ್ರೌಢರ ಕಾವ್ಯಗಳನ್ನು ರಚಿಸಿದ್ದಾರೆ, ನಾಟಕಗಳನ್ನು ಸೃಷ್ಟಿಸಿದ್ದಾರೆ, ನಟರಾಗಿ ನಟಿಸಿದ್ದಾರೆ! ಜೀವನ ರಂಗಭೂಮಿಯಲ್ಲಿ ಉತ್ತಮ ಪ್ರತಿಭಾನ್ವಿತ ನಟರಾಗಿ ತಮ್ಮ ಪಾತ್ರವನ್ನು ಬಹಳ ಭವ್ಯವಾಗಿ ನಟಿಸಿದ್ದಾರೆ. ಕವೀಂದ್ರ ರವೀಂದ್ರರು ಭಾರತದಲ್ಲಿ ವಾಲ್ಮೀಕಿ ಕಾಳಿದಾಸರ ಸಾಲಿನಲ್ಲಿ ಶೋಭಿಸುವ ಸಾಹಿತ್ಯ ಪುರುಷರು; ಠಾಗೂರರು ವಿಶ್ವಸಾಹಿತ್ಯಲೋಕದಲ್ಲಿ ಶಾಶ್ವತವೂ ಜಾಜ್ವಲಮಾನವಾಗಿ ಪ್ರಕಾಶಬೀರುವ ದಿವ್ಯ ಜ್ಯೋತಿಗಳು!

—K. K. Rai.

ನಾಡಿಗೆ ನಾಡೇ ಮಮ್ಮಲ ಮರುಗಿತು!

ಠಾಗೂರರ ಅಂತ್ಯ ದರ್ಶನ

ಕವೀಂದ್ರ ರವೀಂದ್ರರು ಕಳೆದ ತಾ: ೭ರಂದು ಕಲ್ಕತ್ತೆಯ ತಮ್ಮ ವಂಶಗೃಹದಲ್ಲಿ ಪರಂಧಾಮವನ್ನೈಯ್ದಿದರು. ಅವರಿಗೆ ಕೆಲದಿನಗಳಿಂದ ಮೂರ್ಛೆಯಾಗುತಿದ್ದು, ದಿನಹೋದಂತೆ ದನಿ ಶಕ್ತಿಗಳು ಕುಗ್ಗುತ್ತಾ ಬಂದು ಮುಖ ಭಾವವೂ ಬದಲಾಯಿತು. ಅವರು ವಿಧಿವಶರಾದರೆಂಬ ವಾರ್ತೆ ಕೇಳಿದೊಡನೆಯೇ ಇಡೀ ನಗರವೇ ಶೋಕಾಕುಲವಾಯಿತು. ಅವರ ಕಳೇವರವಿದ್ದ ಕೋಣೆಯ ಬಾಗಿಲು ತೆರೆಯಲಾಯಿತು. ಸಹಸ್ರ ಸಹಸ್ರ ಸಂಖ್ಯೆಯಿಂದ ಬಂದ ಜನರು ಹೆಂಗುಸರು, ಗಂಡುಸರು, ಗಲಭೆ ಇಲ್ಲದೆ, ಶಾಂತಮೌನದಿಂದ ತಂಡೋಪತಂಡವಾಗಿ ಕೋಣೆಯೊಳ ಹೊಕ್ಕು ಮಹಾಪುರುಷರಿಗೆ ಕಟ್ಟಕಡೆಯ ತಮ್ಮ ಶ್ರದ್ಧಾಭಕ್ತಿಗಳನ್ನು ಸಲ್ಲಿಸಿದರು. ಅನೇಕರು ಗೌರವಭಾವದಿಂದ ತಲೆಬಾಗಿ ಅವರ ಪಾದಗಳನ್ನು ಕಣ್ಣೀರಿಂದ ತೊಳೆದರು. ಹೊರಗಡೆ ಅನೇಕ ಮಂದಿ ನಿಂತಿದ್ದು ಅಶ್ರುಧಾರೆಯನ್ನು ಸುರಿಸುತ್ತಿದ್ದರು.

ಮೃತಕಳೇಬರವನ್ನು ಹಸುರು ರೇಶ್ಮೆಯಿಂದ ಹೊದಿಸಿದರು; ಲೋಹದಮಂಚದ ಮೇಲೆ ಅರ್ಧ ಮಲಗಿ ವಿಶ್ರಾಂತಿ ತೆಗೆದುಕೊಳ್ಳುವ ರೀತಿ ಇರಿಸಲಾಗಿತ್ತು. ರಮಾನಂದ ಚಟರ್ಜಿಯವರು ಕಳೇಬರವನ್ನು ಸ್ಮಶಾನಕ್ಕೆ ಕೊಂಡೊಯ್ಯುವ ಮೊದಲು ದಿವಂಗತರ ಆತ್ಮಶಾಂತಿಗಾಗಿ ವೇದಮಂತ್ರಗಳನ್ನು ಹೇಳಿ ಪ್ರಾರ್ಥನೆ ನಡೆಸಿದರು. ಕಳೇಬರದ ಹಿಂದುಗಡೆ ಲಕ್ಷಾಂತರ ಮಂದಿ ಬರುತ್ತಿದ್ದರು. ಸ್ಮಶಾನ ಯಾತ್ರೆಯು ಮೆರವಣಿಗೆಯು ಜನಸಂದಣಿಯು ಸುಮಾರು ಎರಡು ಮೈಲುಗಳಷ್ಟು ಉದ್ದದಲ್ಲಿತ್ತು. ದಾರಿಯುದ್ದಕ್ಕೂ ಅವರ ಮೇಲೆ ಅರಳನ್ನೂ ಅತ್ತರನ್ನೂ, ಪುಷ್ಪಗಳನ್ನೂ, ಪುಷ್ಪಮಾಲೆಗಳನ್ನೂ ಜನರು ಸುರಿಸುತಿದ್ದರು. ವಿದ್ಯಾರ್ಥಿಗಳು ರವೀಂದ್ರರ ಶವವನ್ನು ಹೊತ್ತಿದ್ದರು. ಕಲ್ಕತ್ತಾ ಸಿನೆಟ್ ಹೌಸಿನ ಮುಂದೆ ಶವವನ್ನು ತಂದಾಗ, ಯುನಿವರ್ಸಿಟಿಯವರು ಗೌರವ ಸಲ್ಲಿಸಿದರು. ಹೂಗ್ಲೀ ನದಿಯ ದಂಡೆಯ ಮೇಲೆ ದಹನಕ್ರಿಯೆಯೂ ನಡೆಯಿತು. ಲಕ್ಷಾಂತರ ಮಂದಿ ಬಂದು ಕೊನೆಯ ಸಂದರ್ಶನ ಪಡೆದು; ಪುಷ್ಪವೃಷ್ಟಿಗಳನ್ನು ಸುರಿಸಿ, ಕಂಬನಿಗಳಿಂದ ಮೃತರ ಪಾದಗಳನ್ನು ತೊಳೆದು, ಮೌನ ಶೋಕಾಕುಲರಾಗಿ ತೆರಳುತಿದ್ದರು. ಹಲವು ದೇಶ ವಿದೇಶಗಳ ಸಂಘದ ಪ್ರತಿನಿಧಿಗಳು ತಮ್ಮ ಸಂಸ್ಥೆಯ ಪರವಾಗಿ ಮಹಾಪುರುಷರಿಗೆ ಗೌರವ ಸಲ್ಲಿಸಲೆಂದು, ಹಾರಗಳನ್ನು ಶವದ ಮೇಲಿಟ್ಟರು. ಶವವನ್ನು ತುಪ್ಪದಿಂದ ತೊಯ್ದು, ಗಂಧದ ಕಾಷ್ಠದಲ್ಲಿಳಿಸಿ 'ವಂದೇ ಮಾತರಂ' 'ವಿಶ್ವಕವೀಕಿ ಜೈ' ಜಯಘೋಷದೊಡನೆ ದಹನಕ್ರಿಯೆ ನೆರವೇರಿಸಿದರು. ಅವರ ಪಾರ್ಥಿವ ಶರೀರವು ಅಗ್ನಿನಾರಾಯಣನಿಗೆ ಆಹುತಿಯಾಯಿತು.

ಸಂತಾಪ ಸೂಚನೆಗಳು—

ಮಹಾತ್ಮಾ ಗಾಂಧಿ— 'ಡಾ. ರವೀಂದ್ರನಾಥ ಠಾಗೂರರು, ಅದ್ವಿತೀಯ ಕವಿಗಳು ಆಗಿದ್ದುದು ಮಾತ್ರವಲ್ಲದೆ, ನಿಷ್ಠಾವಂತ ದೇಶಾಭಿಮಾನಿಗಳೂ ಇದ್ದರು. ಅವರು ಮಾನವಸಂಸ್ಕೃತಿಯ ಕೃಪಾಮೂರ್ತಿಯ ಅವತಾರವಾಗಿದ್ದರು. ರವೀಂದ್ರರ ಪ್ರಭಾವವು ನಮ್ಮ ಯುಗದ ಪ್ರತಿಯೊಂದು ಕಾರ್ಯದ ಮೇಲೆಯೂ ಪರಿಣಾಮ ಹೊಂದಿದೆ. ಪ್ರಪಂಚಕ್ಕೂ ಭಾರತಕ್ಕೂ ರವೀಂದ್ರರು ಬಿಟ್ಟುಹೋದ ಕಾಣಿಕೆ ಶಾಂತಿನಿಕೇತನ ಮತ್ತು ಶ್ರೀನಿಕೇತನ ಸಂಸ್ಥೆಗಳು.'

ಸರ್. ರಾಧಾಕೃಷ್ಣನ್ — 'ಅವರು ವಾಲ್ಮೀಕಿ ಕಾಳಿದಾಸರಿದ್ದಂತೆ ಚಿರಂಜೀವಿಗಳು. ಭಾರತದ ಭಾವೀಪ್ರಗತಿಗೆ ಮಾರ್ಗದರ್ಶಕರೂ, ಸದುಪದೇಶಕರೂ ಆದ ಮಹರ್ಷಿಗಳಂತಿದ್ದರು. ಠಾಗೂರರು ಭಾರತದಲ್ಲಿ ಜನಿಸಿ, ನಮ್ಮ ದೇಶದ ಕೀರ್ತಿ ಹಬ್ಬಿಸಿದುದು, ನಮ್ಮ ಮೇಲೆ ಭಗವಂತನಿಗಿರುವ ಕೃಪೆಯನ್ನು ಸೂಚಿಸುತ್ತದೆ.'

ಸರೋಜಿನಿ ನಾಯ್ಡು— 'ಅವರ ಅದ್ಭುತ ಶಕ್ತಿ, ಅವರ ಸೌಂದರ್ಯ, ಅವರಜ್ಞಾನ ಅವರ ಬುದ್ಧಿಸಾಮರ್ಥ್ಯ ಇವುಗಳಿಂದ ಠಾಗೂರರು ಮಹಾಪುರುಷರು. ಅವರು ಇಂದು ಕಣ್ಮರೆಯಾದರೂ ಚಿರಂಜೀವಿಗಳು. ಅವರ ಕೃತಿಗಳು ಮನಮೋಹಕವಾದ ಬೆಳದಿಂಗಳಂತೆ ಆನಂದವನ್ನುಂಟುಮಾಡುತ್ತವೆ.'

ಶ್ರೀ. ಜಯಕರ್— 'ಭಾರತದ ಕೀರ್ತಿಯನ್ನು ಆಧುನಿಕ ಕಾಲದಲ್ಲಿ ನಾಗರಿಕ ಪ್ರಪಂಚದಲ್ಲೆಲ್ಲಾ ಅವರು ಹರಡಿದರು.'

ಪಜುಲುಲ್ ಹಕ್ — 'ಬಂಗಾಳಾ ಸಾಹಿತ್ಯಕ್ಕೆ ಅವರ ನಿಧನದಿಂದ ಅಪಾರ ನಷ್ಟವಾಗಿದೆ. ಇಂಥಾ ಮಹಾನುಭಾವರನ್ನು ಮುಂದೆ ಕಾಣಲಾರೆವು.'

ರಾಮಸ್ವಾಮಿ ಮುದಲಿಯಾರ್ — 'ಸಾರ್ವಜನಿಕ ಜೀವನದಲ್ಲಿ, ಕಲಾಪ್ರಪಂಚದಲ್ಲಿ, ವೇದಾಂತದಲ್ಲಿ ಪರಿಪೂರ್ಣವಾದ ಮಹಾವ್ಯಕ್ತಿ ನಮಗೆ ಇಲ್ಲದಂತಾಗಿದೆ.'

ಸರ್ ಮಾರಿಸ್ ಗ್ವಾಯರ್— 'ಪ್ರಪಂಚದಲ್ಲಿ ಸದಾಕಾಲ ಸತ್ಯಕ್ಕೆ, ಧರ್ಮಕ್ಕೆ, ನ್ಯಾಯಕ್ಕೆ ವಿಜಯವೆಂದೂ ದುಷ್ಟರೂ, ಹಿಂಸಕರೂ, ಸ್ವಾರ್ಥಪರರೂ ನಾಶವಾಗುವರೆಂದೂ ಅವರು ಬೋಧಿಸಿದ್ದಾರೆ. ಠಾಗೂರರು ವಿಶ್ವದ ಮಹಾಪುರುಷ.'

ವೈಸರಾಯರು— 'ರವೀಂದ್ರರು ಭಾರತದ ಕೀರ್ತಿಯನ್ನು ವಿಶ್ವದಲ್ಲೆಲ್ಲ ಹರಡಿದರು. ಠಾಗೂರರು ತಮ್ಮ ದೀರ್ಘ ಜೀವಮಾನದಲ್ಲಿ ಉನ್ನತ ಧ್ಯೇಯಗಳಿಂದ ಮಾನವ ಸೇವಾಭಾವನೆಯಿಂದ ಕಾರ್ಯ ನಡೆಸಿ ಆದರ್ಶ ವ್ಯಕ್ತಿಯಾಗಿದ್ದಾರೆ.'

ಜವಾಹಿರಲಾಲ ನೆಹರು — 'ಗುರುದೇವ'ರ ಉಜ್ವಲ ಪ್ರತಿಭೆಯು, ಉದಾತ್ತ ವ್ಯಕ್ತಿತ್ವದ ನೆಲಳಲ್ಲಿ ಬೆಳೆದ ನಮ್ಮಂತಹವರಿಗೆ ಅವರ ಮರಣವು ಈಗ ಕಣ್ಣು ಕತ್ತಲೆ ಕಟ್ಟಿಸಿದೆ. ಪ್ರಾಚೀನ ಮತ್ತು ಅರ್ವಾಚೀನ ಸಂಸ್ಕೃತಿ ಸಂಪತ್ತಿನಿಂದ ಕೂಡಿ ಭಾರತವನ್ನು ಮಾತ್ರವಲ್ಲ ಪ್ರಪಂಚವನ್ನೇ ತನ್ನ ಪ್ರಭೆಯಿಂದ ಬೆಳಗಿಸಿದ ನಮ್ಮ 'ತಾರೆ' ಇಂದು ಅಸ್ತಂಗಮಿಸಿದೆ. ನಮ್ಮ ಹೃದಯಗಳು ಬರಿದಾಗಿವೆ. ಆದರೂ ಅವರ ಉಜ್ವಲ ಸಂದೇಶಗಳು ನಮ್ಮ ಕಿವಿಗಳಲ್ಲಿ ಧ್ವನಿಸುತ್ತಿವೆ. ಅವರ ಇತ್ತೀಚೆಯ ಮಾತುಗಳು ನಮ್ಮ ಆದರ್ಶ ನಕ್ಷತ್ರಗಳಾಗಿವೆ. 'ವಿಶ್ವಭಾರತಿ' ಮತ್ತು ಶಾಂತಿನಿಕೇತನದ ಉದ್ಧಾರಕಾರ್ಯಕ್ಕೆ ಸಹಾಯಮಾಡುಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.'

ರಾಜೇಂದ್ರ ಪ್ರಸಾದರು— 'ಅವರು ಅಸ್ತಮಿಸಿದರು, ಆದರೆ ಅವರು ಭಾರತಕ್ಕೂ ಪ್ರಪಂಚಕ್ಕೂ ಈ ಪರೀಕ್ಷಾಯುಗದಲ್ಲಿ ಮುನ್ನಡೆಯಲು ಸಾಕಷ್ಟು ಆದರ್ಶ ಹಾದಿಯನ್ನು ಹಾಕಿ ಹೋಗಿರುವರು. ಇಂದಿನೀ ಕಾಲದಲ್ಲಿ ಅವರ ಸನ್ನಿಧಿ ನಮಗೆ ಅವಶ್ಯ ಬೇಕಾಗಿತ್ತು.'

ಡಾ. ರವೀಂದ್ರರ ಸ್ಮಾರಕ ಸಮಿತಿ.

ಕವೀಂದ್ರರಾದ ಡಾ. ರವೀಂದ್ರನಾಥ ಠಾಗೋರರ ಸ್ಮಾರಕವನ್ನು ಆಚರಿಸಲು ಬಂಗಾಳದ ಪ್ರಮುಖರಾದ ಫಜುಲುಲ್ ಹುಕ್, ಸರ್. ಪಿ. ಸಿ. ರೆ, ಮನ್ಮಥನಾಥ ಮುಖರ್ಜಿ, ಅಜೀಲುಲ್ ಹಕ್, ರಿಚಾರ್ಡ್‌ಸನ್ (ಕಲ್ಕತ್ತೆಯ ಶೆರೀಫ್) ಮತ್ತು ಕಲ್ಕತ್ತ ಮೇಯರ್, ಇವರಿಂದ ಕೂಡಿದ ಒಂದು ಕಮಿಟಿ ಸ್ಥಾಪಿತವಾಗಿದೆ.

ರವೀಂದ್ರರೆಲ್ಲಿ?

ಎಲ್ಲಿ ಮೌನದ ನೆಲೆಯೊ, ಎಲ್ಲಿ ಶಾಂತಿಯ ಬೀಡೊ
ಎಲ್ಲಿ ಪ್ರೇಮದ ಗೀತವೊಂದೆ ತುಂಬಿಹುದೋ
ಎಲ್ಲಿ ಭವತಾಪ ಸಂತಾಪಾದಿಗಳು ಮುಸುಕಿ
ಕಂಗೆಡಿಸ ಕನಸುಗಳಾದರೆಡೆಯಿರದೊ?
ಎಲ್ಲಿ ಸೋದರ ಸಮಾನತೆ ಸೋದರತೆ ಬೆಳಗಿ
ಬಡವ ಬಲ್ಲಿದರೆಂಬ ಭೇದವಿರದೊ?
ಅಲ್ಲಿ ನಿನ್ನಯ ಅನುಪಮಾತ್ಮ ವಿಶ್ರಾಂತನೆ—
ತೆರಳಿ ಸಾಗಿತೊ? ಶಾಂತಿ ನಿಜದೂತನಾಗಿ

ಹೂವು ಬಾಡಿದರೇನು? ಪಿನವು ಬಾಡುವುದುಂಟೆ?
ಸಫಲತೆಯನಾಂತ ಜೀವನ? ಪಂಗರತುನ?
ವಿಶ್ವ ವಿಸ್ತಾರದಲಿ ಬಿತ್ತಿ ಭಿಳಕನು ಶಾಂತಿ—
ಯಾನದೆಯೆ ದೂರಸಾರ್ಥಿಯ ಪೂರಿಪಿಡಲು?
ಅಂದು ಗೀತಾಂಜಲಿಯ ನೀ ಪಸುಳೆಗಿತ್ತು
ಸುಮನೋನುರಾಗದಿಂ ನಾಡೆಚ್ಚರಿಸಿದೆ?
ಏನು ನಿರ್ಮಲ ಕೀರ್ತಿ? ಸುಮಧುರ ಯಶೋಗಾನ—
ಗಂಧತಾನಿಲ ನೀಡಿ, ನಾಡೆಚ್ಚರಿಸಿದೆ,
ಎಲ್ಲಿ ಮನ ಕಳುಕಿತವೊ ಎಲ್ಲಿ ತಲೆ ಬಾಗಿರದೊ?
ಎಲ್ಲಿ ತಿಳಿವಿಗೆ ತೊಡಕು ತೋರದಿಹುದಲ್ಲಿ
ಅಲ್ಲೆ ನಿನ್ನಾತ್ಮ ಪುಣ್ಯಾತ್ಮ ಶಾಂತಿಯನ್ನೆದಿ
ರಾಜಿಸಲಿ ಪರಮಾತ್ಮನಲ್ಲೈಕ್ಯವಾಗಿ?

ಎಚ್. ವಿಠ್ಠಲ ಶೆಟ್ಟಿ.

ಅಜಂತ
ಚಿತ್ರಕಲೆಗಳು

ಭಾರತೀಯ ಮಹಿಳೆಯರ, ಪೂರ್ಣ ಆರೋಗ್ಯ, ಸೌಂದರ್ಯ, ಶೋಭೆಗಳನ್ನು ಪ್ರದರ್ಶಿಸುವ ಅಜಂತದ ಸುಂದರ ಚಿತ್ರಗಳಿಗೆ ಇಂದು ಸರಿಸಮಾನವಾದವುಗಳೇ ಇಲ್ಲ. ಮಹಿಳೆಯರು, ಪಾತ್ರ ಪದವಿಗೇರಲು ಬೇಕಾದ ಆದರ್ಶ ಆರೋಗ್ಯವನ್ನು ಇತ್ತೀಚೆಗೆ ಕಳಕೊಳ್ಳುತ್ತಿದ್ದಾರೆ.

ನಮ್ಮ ಅರುಣವನ್ನು ಯಾವಾಗಲೂ ಸೇವಿಸುವುದರಿಂದ ಮುಟ್ಟು ದೋಷ, ಮತ್ತು ಹೆಂಗುಸರ ಇತರ ಬಾಧೆಗಳು ಮಾಯವಾಗಿ ಸಂಪೂರ್ಣ ಆರೋಗ್ಯ ಸೌಂದರ್ಯಗಳು ಕೂಡಿಬರುವವು.

ಅರುಣ

ಅತ್ಯಂತ ಫಲಕಾರೀ ಟಾನಿಕ್
ಮುಟ್ಟುದೋಷವನ್ನು ಅದು ಗುಣಪಡಿಸುತ್ತದೆ. ಸಂಪೂರ್ಣ ಮಾತೃತ್ವಕ್ಕೆ ಆರೋಗ್ಯವನ್ನು ಬಲಪಡಿಸುತ್ತದೆ.
ಎಲ್ಲಾ ಕೆಮಿಸ್ಟರಲ್ಲಿ ಮತ್ತು ಸ್ಟೋರುಗಳಲ್ಲಿ ಅದು ಮಾರಾಟಕ್ಕಿದೆ.
ತಯಾರಿಸುವವರು:
ಆಯುರ್ವೇದಾಶ್ರಮ,
ಮದ್ರಾಸು.
ಸ್ಟಾಕಿಸ್ಟ್: ಪ್ರೊಪ್ಯುಲರ್ ಸ್ಟೋರ್ಸ್,
ಕಾರ್‌ಸ್ಟ್ರೀಟ್, ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸಿನೆಮಾ ಸುದ್ದಿ

ತಿರಿಗಿ ಶಾಂತಾ ಆಪ್ಟೆಯ ದುಡುಕು

ಶಾಂತಾ ಆಪ್ಟೆ ಹೆಚ್ಚಾಗಿ ಇತ್ತೀಚೆಗೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಿಗೆ ಬರುತಿದ್ದಾಳೆ.- ಬೊಂಬಾಯಿಯ ಮಿರರ್ ಎಂಬ ಪತ್ರಿಕೆ ಅಂತಹ ಸುದ್ದಿಗಳನ್ನು ಪ್ರಕಟಿಸುವುದರಲ್ಲಿ ಪ್ರಸಿದ್ಧವಾದುದು ಆ ಪತ್ರಿಕೆ ಶಾಂತಾ ಆಪ್ಟೆಯ ಇತ್ತೀಚೆಯ ಚಟುವಟಿಕೆಗಳ ಕುರಿತು ಈ ಸುದ್ದಿಯೊಂದನ್ನು ಪ್ರಕಟಿಸಿದೆ

ಶಾಂತಾ ಆಪ್ಟೆ ಸಿರ್ಕೋ ಪ್ರೊಡಕ್ಷನ್ಸಿಗೆ ಸೇರಿರುವಳಂತೆ. ಅಲ್ಲಿ ಹೆಚ್ಚಾಗಿ ಸ್ಟುಡಿಯೋವನ್ನು ಸಂದರ್ಶಿಸುವವರನ್ನು ಅಭ್ಯಾಸ ಕಾಲದಲ್ಲಿ ಪ್ರೇಕ್ಷಕರಾಗಿ ಬಿಡುತ್ತಿದ್ದರಂತೆ. ಶಾಂತಾ ಎರಡು ದಿನಗಳ ತನಕ ಇದನ್ನು ಸಹಿಸಿದಳಂತೆ ಆ ವೇಳೆ ಆ ಕುರಿತು ಬಹಳ ದುಡುಕಿನಿಂದ ವರ್ತಿಸಿದಳೆಂದು ತಿಳಿದಿದೆ ಅಲ್ಲಿಗೆ ಯಾವಾಗಲೂ ಒಬ್ಬ ಪೋಸ್ಟು ಮೇನನು ಬಂದು, ನಟಿಯರ ಹೆಸರು ಗಟ್ಟಿಯಾಗಿ ಕರೆದು ಅವರಿಗೆ ಬಂದ ಪತ್ರಗಳನ್ನು ಕೊಡುತ್ತಿದ್ದನಂತೆ ಒಂದು ದಿನ ಶಾಂತಾ ಆಪ್ಟೆಯು 'ಅಲಂಕಾರ ಭವನ'ದ ಬಾಗಿಲಲ್ಲಿ ನಿಂತು ಅವಳ ಹೆಸರನ್ನು ಗಟ್ಟಿಯಾಗಿ ಕರೆದನಂತೆ ಆ ದಿನ ಅವನ ಕುತ್ತಿಗೆ ಹಿಡಿದು ಹೊರದಬ್ಬಲ್ಪಟ್ಟನಂತೆ!

ಅಂದಿನಿಂದ ಪ್ರತಿಯೊಂದು ನಟನಟಿಯರಿಗೆ ಬಂದ ಕಾಗದವು ಆಫೀಸು ರೂಮಿನಲ್ಲಿಯೇ ಕೊಟ್ಟು ಹೋಗುವುದಾಗಿ ನಿರ್ಣಯವಾಯಿತೆಂದು ತಿಳಿದಿದೆ

ಅರ್ಧ ಮಿಲಿಯ ರೂಪಾಯಿಗಳ ಚಿತ್ರ

ಶಾಂತಾ ಆಪ್ಟೆಯು ಅಭಿನಯದಿಂದ ಕೂಡಿದ, ರಾಯಲ್ ಟಾಕೀಸನವರು ತಯಾರಿಸಿದ ಸಾವಿತ್ರಿ ಚಿತ್ರವನ್ನು ಅರ್ಧ ಮಿಲಿಯ ರೂಪಾಯಿಗಳ ವೆಚ್ಚದಿಂದ ತಯಾರಿಸಿರುವರಂತೆ ಇದರಲ್ಲಿ ಸುಬ್ಬುಲಕ್ಷ್ಮಿ ನಾರದ ಪಾತ್ರವನ್ನೂ, ವೈ. ವಿ. ರಾವ್ ಸತ್ಯವಾನ್ ಪಾತ್ರವನ್ನೂ ಶಾಂತಾ ಆಪ್ಟೆ ಸಾವಿತ್ರಿ ಪಾತ್ರವನ್ನೂ ಅಭಿನಯಿಸಿರುವರು.

ನಾಡಿಯಾ' ಚಿತ್ರ 'ಬೊಂಬೇವಾಲಿ'

ಮಿಸ್ ನಾಡಿಯಾಳ ಅಭಿನಯದಿಂದ ಕೂಡಿದ ಸಾಹಸ ಚಿತ್ರ ಬೊಂಬ್ಬೇವಾಲಿ ಎಂಬುದು ಕಳೆದ ವಾರ ಪ್ರದರ್ಶಿತವಾಗಿದೆ.

ಶಕುಂತಲೆ

25 ವಾರಗಳು ಮದ್ರಾಸಿನಲ್ಲಿ

ಶ್ರೀಮತಿ ಸುಬ್ಬುಲಕ್ಷ್ಮಿಯ ಅಭಿನಯದಿಂದ ಕೂಡಿದ ತಮಿಳು ಚಿತ್ರ ಶಕುಂತಲೆಯು ಮದ್ರಾಸಿನ ಥಿಯೇಟರ್ ಒಂದರಲ್ಲಿ ೨೫ ವಾರಗಳ ವರೆಗೆ ನಡೆಯುತ್ತಿದೆ.

ದೇವಿಕಾರಾಣಿ ಮತ್ತು ಅಶೋಕ ಕುಮಾರ್

ಇವರ ಅಭಿನಯದಿಂದ ಕೂಡಿದ ಅಂಜನ್ ಎಂಬ ಬೊಂಬೇ ಟಾಕೀಸಿನ ಚಿತ್ರವು ಪೂರ್ಣವಾಗುತ್ತಿದೆ.

ಸಿಕಂದರ್

ಸಿಕಂದರ್ ಚಿತ್ರದ ಸಿದ್ಧತೆಯಲ್ಲಿ ಸೊಹ್ರಾಬ್ ಮೋದಿ ಮಗ್ನನಾಗಿರುವರು. ಮಹಾತ್ಮ ಅಲೆಕ್ಸಾಂಡರನ ಜೀವನ ಇತಿಹಾಸವನ್ನು ಈ ಕಥೆಯು ರಮ್ಯ ಸುಂದರವಾಗಿ ಚಿತ್ರಿಸುತ್ತದೆ ಪೂರ್ವಕ್ಕೆ ದಂಡೆತ್ತಿ ಬಂದು, ಇರಾನ್, ಭಾರತ, ಜೆಹುಲಮ್‌ಗಳ ತನಕ ಅಲೆಕ್ಸಾಂಡರನು ಬಂದನು ಅಲ್ಲಿ ಪೋರಸನೆಂಬ ವೀರನನ್ನು ಆತನು ಇದಿರಿಸಬೇಕಾಯಿತು ಪೋರಸನು ಅಲೆಕ್ಸಾಂಡರನ ಆರ್ಭಟಿಗೆ ತಲೆ ಬಾಗಿಸಲಿಲ್ಲ! ಭಾರತದ ಇತಿಹಾಸದಲ್ಲಿ ಪೋರಸನು ಉದಾತ್ತ ಕೀರ್ತಿಶಾಲಿಯಾದನು

ಇತಿಹಾಸದ ೨,೩೦೦ ವರ್ಷಗಳ ಹಿಂದಕ್ಕೆ ಈ ರಮ್ಯ ಚಿತ್ರವು ಪ್ರೇಕ್ಷಕರನ್ನು ಸೆಳೆಯುತ್ತದೆ ಬರುವ ತಿಂಗಳ ಅಂತ್ಯಕ್ಕೆ ಈ ಚಿತ್ರವು ಪ್ರದರ್ಶನಕ್ಕೆ ತಯಾರಾಗುವುದಂತೆ

ಸಂತ ಸಖು

ಪ್ರಭಾತದವರು ಸಂತ ಸಖು ಎಂಬ ಚಿತ್ರವನ್ನು ತಯಾರಿಸುವರು ಅದರಲ್ಲಿ ಹಂಸಾ ವಾಡ್ಕರಳು ಪ್ರಮುಖ ಪಾತ್ರ ವಹಿಸುವಳೆಂದು ಸುದ್ದಿ, ಗೌರಿ (ತುಕಾರಾಮನ ಪತ್ನಿ ಪಾತ್ರಧಾರಿಣಿ)ಯು ಸಂತ ಸಖುವಿನ ಅತ್ತೆಯ ಪಾತ್ರವಹಿಸುವಳಂತೆ ಜ್ಞಾನೇಶ್ವರದಲ್ಲಿ ನಟಿಸಿದ ಬಾಲ ನಟನಟಿಯರೂ ಇದರಲ್ಲಿರುವರೆಂದು ತಿಳಿದಿದೆ ಆಗಷ್ಟು ತಿಂಗಳ ಮಧ್ಯದಲ್ಲಿ ಈ ಚಿತ್ರವು ಪ್ರದರ್ಶನಕ್ಕೆ ಸಿದ್ಧವಾಗುವುದಂತೆ

ತಾಜ್ ಮಹಾಲ್

ತಾಜ್ ಮಹಾಲ್ ಎಂದರೆ ಶಿಲ್ಪಿಗಳ, ಇತಿಹಾಸಕಾರರ, ಕವಿಗಳ, ರಾಜನೀತಿಜ್ಞರ ಎಲ್ಲರಿಗಿಂತಲೂ ಮಿಗಿಲಾಗಿ ಪ್ರೇಮ ಮುಗ್ಧ ಹೃದಯದ ರಸಿಕರ ಮನಸ್ಸು ಮರುಳುಗೊಳ್ಳುತ್ತದೆ! ಶಾಜಹಾನ್ ತನ್ನ ಪ್ರೀತಿಯ ನಲ್ಲಳ ನೆನಹಿಗಾಗಿ ಜಗತ್ತೇ ಇಂದಿಗೂ ಬೆರಗಾಗುವಂತಹ ಒಂದು ಅತ್ಯದ್ಭುತ ಕಟ್ಟಡವನ್ನು ಕಟ್ಟಿಸಿದನು ರಸಿಕರ, ಕವಿಗಳ, ಇತಿಹಾಸಕಾರರ, ರಾಜನೀತಿಜ್ಞರೆಲ್ಲರ ತಲೆತೂಗಿಸಿದನು

ಮೋಹನ್ ಪಿಕ್ಚರ್ಸಿನ ನನುಭಾಯಿ ವಕೀಲ್ ಇವರು ತಾಜ್ ಮಹಾಲ್ ಎಂಬ ಹೊಸ ಚಿತ್ರವನ್ನು ತಯಾರಿಸುತ್ತಿದ್ದಾರೆ ಇದರ ನಿರ್ಮಾಣದ ಸಲುವಾಗಿ ಅವರು ಆಗ್ರಾ, ಉದಯಪುರಗಳನ್ನು ಸಂದರ್ಶಿಸಿ ಚಿತ್ರ ತೆಗೆದು ಮರಳಿ ಬಂದಿದ್ದಾರೆ ದುಬಾಷ್ ಎಂಬ ಪ್ರಸಿದ್ಧ ಕಲಾವಿದನು ಶತಮಾನದ ಐತಿಹಾಸಿಕ ರೀತಿ ನಿದರ್ಶಕವಾಗಿ ರಾಣಿ ಮುಮ್ತಾಜ ಮಹಲಿನ ಒಂದು ಅಂತಃಪುರವನ್ನು ಇದರಲ್ಲಿ ನಿರ್ಮಿಸಿದ್ದಾರೆ.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ವಿಶೇಷೀಕರಿಸಲ್ಪಟ್ಟಿದೆ ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದಂತ ಚರ್ಮದ ಬಾಧೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಇದನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುವಾಸನಾಭರಿತವಾದ ಪರಿಮಳವನ್ನು ಮೆಚ್ಚುತ್ತಿರುವರು

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER



ನಾನು ಹೇಳುತ್ತಿದ್ದೆನಲ್ಲವೇ—

ಮೊದಲು ಪುರೋಹಿತ ಶ್ವಾಸಹಾರೀ ತೆಗೆದುಕೊಳ್ಳಿರಿ ಅಂತಾ—

ನಮ್ಮ ನಿಮ್ಮೆಲ್ಲರ ಸಿಟ್ಟಿಗೆ ಕೆಮ್ಮು ಎಂಬ ರೋಗದಿಂದ ಅನೇಕರ ಕ್ಷಣಿಕ ಗುಣಕೊಡುವ ಔಷಧ ಕೊಂಡು ಹಣ ಹೋಗಿದ್ದಾರೆ ಪುರೋಹಿತ ಶ್ವಾಸಹಾರೀಯು ಇಂಥವಲ್ಲ ಇದರ ದಮ್ಮನ್ನು ಒಂದೆರಡು ದಿನ ನೋಡಿ ನಡೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣ ಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಇದನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ಕಫ ಕಡಿಮೆಯಾಗುವುದು, ಶ್ವಾಸ ನಿಂತರ ರೋಗಿಯು ಬದಲ್ಲ, ಪಚನಶಕ್ತಿಯು ತಿದ್ದುವುದು, ಸ್ವಾಭಾವಿಕವಾಗಿ ಶಕ್ತಿ ಹೆಚ್ಚಾಗಿ ಶ್ವಾಸ ಕಟ್ಟುವ ಬಗ್ಗೆ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು

ದಮ್ಮು, ಕೆಮ್ಮು, ಕ್ಷಯರೋಗ, ಗಂಟಲು ಮೊದಲಾದ ಶ್ವಾಸ ಪ್ರಶ್ವಾಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಉಪಯೋಗಿಸಬೇಕು. ಒಷ್ಠಕೋಷ್ಟ ಸುದ್ದಿ ಅನ್ನುಪಿತ್ತ ಉದ್ದಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕಂಪ್ಲ ಕ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ಮೂ ೩-೪, ರು, ೬-೮ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು ತರಿಸಿಕೊಳ್ಳುವ ವಿಳಾಸ —

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ ಮೆ॥ ವನಮಾಳೀ ಥೀಮಾ ಮತ್ತು ಕಂ, ಪ್ರಿನ್ಸೆಸ್ ಸ್ಟ್ರೀಟ್ ಮುಂಬಯಿ

ಪುರೋಹಿತ ಶ್ವಾಸಹಾರಿ

ವಿಚಿತ್ರ ಪ್ರಪಂಚ

ಸತ್ತವರನ್ನು ಬದುಕಿಸುವ ವಿಚಾರ

ವಿಲಿಯಂ ಜೋಸೆಫ್ ಬ್ರಿಕ್ಲಿ ಎಂಬ ಬೋಸ್ಟನ್‌ನ ಮೆಡಿಕಲ್ ಎಕ್ಸಾಮಿನರು ಕೆಲಕಾಲದಿಂದ ಸತ್ತವರನ್ನು ಬದುಕಿಸುವ ವಿಚಾರದಲ್ಲಿ ಸಂಶೋಧನೆ ನಡೆಸುತ್ತಿರುವನೆಂದು ತಿಳಿದಿದೆ.

ಕಳೆದ ವರ್ಷ ಒಂದು ಸಾಯುವ ಪರಿಸ್ಥಿತಿಯಲ್ಲಿದ್ದ ಹೆಂಗಸಿನ ಪರೀಕ್ಷೆ ಮಾಡಿದಾಗ ಅವನಿಗೆ ಈ ಶೋಧನೆಯು ಹೊಳೆಯಿತಂತೆ. ಅವನು ಅವಳ ಎದೆ ಮತ್ತು ಮೆದುಳಿನ ಪೆಟ್ಟನ್ನು ಪರೀಕ್ಷಿಸುತ್ತಾ ಇದ್ದನಂತೆ.

ಮೊದಲು ಮಿದುಳಿನ ಎಡಬದಿಯು ಹೊಡೆತ ನಿಂತಿತು. ಹತ್ತು ನಿಮಿಷಗಳ ಮೇಲೆ ಬಲಬದಿಯ ಹೊಡೆತ ನಿಂತು, ಹತ್ತು ನಿಮಿಷಗಳ ಬಳಿಕ ಎದೆಯ ಬಡಿತವೂ ನಿಂತಿತು. ಎದೆಯ ಬಡಿತನಿಂತಿತು; ಮೇಲೆ ಹೆಂಗಸು ಸತ್ತಳೆಂದು ಸಾರಲಾಯಿತು. ಆದರೆ ಐದು ನಿಮಿಷಗಳ ಬಳಿಕ ಯಾವುದೇ ತರದ ಮದ್ದು ಇಂಜೆಕ್ಷನ್‌ಗಳ ಪ್ರಯೋಗವಿಲ್ಲದೆಯೇ ಎದೆ ಬಡಿತವು ಆರಂಭವಾಯಿತು. ಡಾ। ಬ್ರಿಕ್ಲೆಯ ಅಭಿಪ್ರಾಯವೆಂದರೆ ಇಂತಹುದು ಸಾಮಾನ್ಯ ಎಲ್ಲಾ ಕಡೆಗಳಲ್ಲಿಯೂ ಇದೆಯೆಂದು- ಮರಣದಲ್ಲಿ ಅನೇಕ ವಿಧಗಳಿರುವವಂತೆ. ಮಿದುಳಿನ ಬಡಿತ ನಿಂತ ಮೇಲೆ ಮಾತ್ರ ಪ್ರಾಣಹೋಗುವುದೆಂದು ಅವನ ಅಭಿಪ್ರಾಯವಿದೆ.

ಮಧ್ಯದಲ್ಲಿ ಮುರಿಯುವ ಕಾರು

ಮಾಲ್ಬೋರ್ನಿನ ಕೊರ್ನಿಲಿಯಸ್ ವಾಂಚಿ ಎಂಬವನು ಮಧ್ಯದಲ್ಲಿ ಮುರಿಯುವಂತಹ ಹೊಸ ವಿಧಾನದ ಕಾರೊಂದನ್ನು ತಯಾರಿಸಿರುವನು. ೪ ಫೀಟು ಉದ್ದ ೪ ಫೀಟು ಅಗಲವಾದ ಅದು ಗಂಟೆಗೆ ೬೦ ಮೈಲುಗಳ ತನಕವೂ ಓಡುವುದಂತೆ; ಕಾರನ್ನು ತಿರುಗಿಸುವಲ್ಲಿ ಮುಂದಿನ ಚಕ್ರಗಳು ಮಾತ್ರ ತಿರುಗುವುದಲ್ಲ; ಕಾರಿನ ಅರ್ಧ ಶರೀರವೇ ತುಂಡಾದಂತೆ ತಿರುಗುವುದು.

ಪೆಟ್ರೋಲಿನ ಬದಲು ನೀಲಗಿರಿ ಎಣ್ಣೆ

ಪೆಟ್ರೋಲ್ ಮತ್ತು ನೀಲಗಿರಿ ಎಣ್ಣೆಗಳ ಮಿಶ್ರಣದಿಂದ ಮೋಟರು ಕಾರುಗಳನ್ನು ನಡೆಸಬಹುದೆಂದು ಈಗ ಪ್ರಯೋಗಪೂರ್ವಕ ಸಿದ್ಧಪಡಿಸಿದ್ದಾರೆ. ನೀಲಗಿರಿ ಎಣ್ಣೆ ಮಾತ್ರವನ್ನೇ ಉಪಯೋಗಿಸಿದರೂ ಮೋಟರು ನಡಿಸಲು ಆಗುವುದೆಂದು ಇತ್ತೀಚೆಗೆ ವೈಜ್ಞಾನಿಕರ ನಿಶ್ಚಯವಾಗಿದೆ.

ನಿದ್ರಿಸುವ ರೋಗ

ಹಗಲು ರಾತ್ರಿಯೆನ್ನದೆ ತಡೆಯಲಾರದ ನಿದ್ರೆಬರುವ ಒಂದು ರೋಗವಿದೆ. ಊಟಮಾಡುತ್ತಿರುವಾಗಲೂ ನಿದ್ರೆ ಬರುವುದು. ನಡೆಯುತ್ತಿರುವಾಗಲೂ ನಿದ್ರೆ ಬರುವುದು. ಅಂತಹ ನಿದ್ರೆಯ ಕಾಲದಲ್ಲಿ ಬಲವಂತವಾಗಿ ಶರೀರವನ್ನು ಅಲುಗಾಡಿಸಿದರೆ ಮಾತ್ರ ಎಚ್ಚರವಾಗುವುದು. ಇಂತಹ ನಿದ್ರೆಯನ್ನು ತಡೆಯುವುದರಿಂದಲೂ ಶರೀರಕ್ಕೆ ಹಾನಿಯಿದೆ. ಈ ತರದ ನಿಕ್ಕ ನಿದ್ರಾಭಾವವು ಒಂದು ರೋಗವಾದರೂ, ಇದನ್ನು ಗುಣಪಡಿಸುವ ವಿಷಯದಲ್ಲಿ ಡಾಕ್ಟರರೂ ವೈಜ್ಞಾನಿಕರೂ ಬಹಳ ವಿಚಾರಮಗ್ನರಾಗಿದ್ದಾರೆ.

ವಿಜ್ಞಾನಯುಗ

ಸಂಜ್ಞೆಗಳಿಂದ ಭಾಷಣ

ಧ್ವನಿ ಶಾಸ್ತ್ರಕಾರರ ದ್ವಿತೀಯ ಅಂತರ್ರಾಷ್ಟ್ರೀಯ ಕಾಂಗ್ರೆಸಿನ ಮುಂದೆ ಸರ್ ರಿಚಾರ್ಡ್ ಎಂಬ ವೈಜ್ಞಾನಿಕನು ತಾನು ನಿರ್ಮಿಸಿದ ಸಂಜ್ಞಾ ಶಾಸ್ತ್ರದ ವಿವರಣೆ ಮಾಡಿ ಐದು ನಿಮಿಷಗಳ ತನಕ ಇಡೀ ಸಭೆಗೆ ತನ್ನ ಅಭಿಪ್ರಾಯವನ್ನು ಸಂಜ್ಞೆ ಭಾಷಣ ಮಾಡಿದನು. ಆ ಭಾಷಣವು ಅಲ್ಲಿ ನೆರೆದವರೆಲ್ಲರಿಗೂ ಅರ್ಥವಾಯಿತು.

ಅವನ ಹೇಳಿಕೆಯೆಂದರೆ ೫೦೦ ಸಂಜ್ಞೆಗಳಿಂದ ಒಬ್ಬನು ಸಾಕಾದಷ್ಟು ವ್ಯವಹಾರಗಳನ್ನು ಮಾಡಬಹುದೆಂದು. ಆ ೫೦೦ ಸಂಜ್ಞೆಗಳನ್ನು ಸಾಮಾನ್ಯ ವಿದ್ಯಾರ್ಥಿಯಾದರೂ ಒಬ್ಬನು ಕೇವಲ ಒಂದೇ ದಿನದಲ್ಲಿ ಕಲಿತುಕೊಳ್ಳಬಹುದಂತೆ. ಹುಷಾರಿನವರಾದರೆ ಕೇವಲ ಮೂವತ್ತು ನಿಮಿಷಗಳಲ್ಲಿಯೇ ನೂರು ಅಕ್ಷರಗಳ ಸಂಜ್ಞೆಯನ್ನು ಕಲಿಯಬಹುದೆಂದು ಅವನು ಹೇಳುತ್ತಾನೆ.

ಗರ್ಜಿಸುವ ಮರುಭೂಮಿ

ದಕ್ಷಿಣ ಆಫ್ರಿಕದ ಕಲಹಾರಿ ಮರುಭೂಮಿಯು ಗರ್ಜಿಸುವುದಾಗಿ ಪ್ರಸಿದ್ಧವಾಗಿದೆ. ಇತ್ತೀಚೆಗೆ ಆ ಮರುಭೂಮಿಯಿಂದ ಅಂತಹ ಶಬ್ದವು ಹುಟ್ಟಲು ಕಾರಣವೇನೆಂದು ಸಿ. ಪಾಂಡರ್ ವಾಲ್ಕನೆಂಬ ವೈಜ್ಞಾನಿಕನು ಕಂಡು ಹುಡುಕಿರುವನು.

ಕಲಹಾರಿಯ ಹೊಯಿಗೆಯು ಬಹಳ ಒಣಗಿದ್ದು ಅವುಗಳು ಅನ್ಯೋನ್ಯ ಗಾಳಿ ಬಂದು ತಾಗಿ ಘರ್ಷಣೆಯಾಗುವಾಗ ಅದರಿಂದ ಶಬ್ದಗಳು ಹುಟ್ಟಿ ಅವುಗಳಿಂದ ಗರ್ಜಿಸುವ ಮಹಾಧ್ವನಿ ಹುಟ್ಟುವುದಂತೆ. ಆದರೆ ಬಿಳಿಯ ಹೊಯಿಗೆಗಳಲ್ಲಿಯೇ ಈ ಶಬ್ದ ಹುಟ್ಟುವುದೂ ಕೆಂಪು ಹೊಯಿಗೆಗಳಲ್ಲಿ ಶಬ್ದ ಹುಟ್ಟದಿರುವುದೂ ಯಾವ ಕಾರಣದಿಂದ ಎಂದು ಅವನು ವಿವರಿಸುವುದಿಲ್ಲ.

ವಿಷದ ಹಣ್ಣುಗಳು

ವೆಸ್ಟ್ ಇಂಡೀಸಿನಲ್ಲಿ ಮೇಂಚಿನೀಲ್ ಎಂಬ ವಿಷಪೂರಿತ ಫಲಗಳು ಇವೆಯೆಂದು ತಿಳಿದಿದೆ. ಆ ಮರದ ಹತ್ತಿರ ಮೃಗ ಪಕ್ಷಿಗಳೂ ಸಂಚಾರ ಮಾಡುವುದಿಲ್ಲವಂತೆ. ಆ ಫಲಗಳಿಂದ ಬರುವ ರಸವು ಕಾರ್ಬೋಲಿಕ್ ಏಸಿಡಿಗಿಂತಲೂ ನಿಷ್ಠುರ ವಿಷಕಾರಿಯೆಂದು ಪರೀಕ್ಷಿಸಿ ತಿಳಿದುಬಂದಿದೆ. ಸರ್ ವಾಲ್ಟರ್ ರೇಲಿಯ ಅನೇಕ ಮಂದಿ ನೌಕಾಪ್ರಯಾಣಿಕರು ಆ ವಿಷ ಫಲವನ್ನು ತಿಂದು ಪ್ರಾಣ ಕಳಕೊಂಡಿರುವರಂತೆ.

ಪ್ರಥಮ ಮೋಟರ್ ಸೈಕಲ್

ಪ್ರಥಮವಾಗಿ ಮೋಟರ್ ಸೈಕಲ್ ಮಾಡಿದ್ದು ೧೮೮೫ನೆಯ ಇಸವಿಯಲ್ಲಿ; ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಇದು ಒಂದೇ ಸಮಯದಲ್ಲಿ ಪ್ರಚಾರ ಮಾಡಲಾಯಿತು.

HALFTONE & LINE
BLOCK MAKING
UNDERTAKEN.

Sharada Press,
MANGALORE

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value.
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕರ್ತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. L. C. P. S. ಬಲ್ಮಠ.

ಡೊಂಗರೆ ಬಾಲಾಮೃತವು



ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಓಂಪ್ರೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:—
ದಿ ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists:—

Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per-annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs. 5000 run regularly on systematic lines Unique Banking facilities to Businessmen and interested Public

Apply for particulars:—

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE — ESTD 1931

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS.

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

ವಿಚಿತ್ರ ಪ್ರಪಂಚ

ಸತ್ತವರನ್ನು ಬದುಕಿಸುವ ವಿಚಾರ

ವಿಲಿಯಂ ಜೋಸೆಫ್ ಬ್ರಿಕ್ಲಿ ಎಂಬ ಬೋಸ್ಟನ್‌ನ ಮೆಡಿಕಲ್ ಎಕ್ಸಾಮಿನರು ಕೆಲಕಾಲದಿಂದ ಸತ್ತವರನ್ನು ಬದುಕಿಸುವ ವಿಚಾರದಲ್ಲಿ ಸಂಶೋಧನೆ ನಡೆಸುತ್ತಿರುವನೆಂದು ತಿಳಿದಿದೆ

ಕಳೆದ ವರ್ಷ ಒಂದು ಸಾಯುವಂಸ್ಥಿತಿಯಲ್ಲಿದ್ದ ಹೆಂಗಸಿನ ಪರೀಕ್ಷೆ ಮಾಡಿದ್ದಾಗ ಅವನಿಗೆ ಈ ಶೋಧನೆಯು ಹೊಳೆಯಿತಂತೆ. ಅವನು ಅವಳ ಎದೆ ಮತ್ತು ಮೆದುಳಿನ ಪೆಟ್ಟನ್ನು ಪರೀಕ್ಷಿಸುತ್ತಾ ಇದ್ದನಂತೆ.

ಮೊದಲು ಮಿದುಳಿನ ಎಡಬದಿಯ ಹೊಡೆತ ನಿಂತಿತು. ಹತ್ತು ನಿಮಿಷಗಳ ಮೇಲೆ ಬಲಬದಿಯ ಹೊಡೆತ ನಿಂತು, ಹತ್ತು ನಿಮಿಷಗಳ ಬಳಿಕ ಎದೆಯ ಒಡ್ಡಿತವೂ ನಿಂತಿತು. ಎದೆಯ ಬಡಿತನಿಂತಿತು, ಮೇಲೆ ಹೆಂಗಸು ಸತ್ತಳೆಂದು ಸಾರಲಾಯಿತು. ಆದರೆ ಐದು ನಿಮಿಷಗಳ ಒಳಕ ಯಾವುದೇ ತರದ ಮದ್ದು ಇಂಜೆಕ್ಶನ್‌ಗಳ ಪ್ರಯೋಗವಿಲ್ಲದಯೇ ಎದೆ ಬಡಿತವು ಆರಂಭವಾಯಿತು. ಡಾ। ಬ್ರಿಕ್ಲೆಯ ಅಭಿಪ್ರಾಯವೆಂದರೆ ಇಂತಹುದು ಸಾಮಾನ್ಯ ಎಲ್ಲಾ ಕಡೆಗಳಲ್ಲಿಯೂ ಇದೆಯೆಂದು ಮರಣದಲ್ಲಿ ಅನೇಕ ವಿಧಗಳಿರುವವಂತೆ ಮಿದುಳಿನ ಬಡಿತ ನಿಂತ ಮೇಲೆ ಮಾತ್ರ ಪ್ರಾಣಹೋಗುವುದೆಂದು ಅವನ ಅಭಿಪ್ರಾಯವಿದೆ

ಮಧ್ಯದಲ್ಲಿ ಮುರಿಯುವ ಕಾರು

ಮಲ್‌ಬೋರ್ನಿನ ಕೊರ್ನೆಲಿಯುಸ್ ಮೆಂಚಿ ಎಂಬವನು ಮಧ್ಯದಲ್ಲಿ ಮುರಿಯುವಂತಹ ಹೊಸ ವಿಧಾನದ ಕಾರೊಂದನ್ನೆ ತಯಾರಿಸಿರುವನು. ೪ ಫೀಟು ಉದ್ದ ೪ ಫೀಟು ಅಗಲವಾದ ಅದು ಗಂಟೆಗೆ ೬೦ ಮೈಲುಗಳ ತನಕವೂ ಓಡುವುದಂತೆ, ಕಾರನ್ನು ತಿರುಗಿಸುವಲ್ಲಿ ಮುಂದಿನ ಚಕ್ರಗಳು ಮಾತ್ರ ತಿರುಗುವುದಲ್ಲ; ಕಾರಿನ ಅರ್ಧ ಶರೀರವೇ ತುಂಡಾದಂತೆ ತಿರುಗುವುದು.

ಪೆಟ್ರೋಲಿನ ಬದಲು ನೀಲಗಿರಿ ಎಣ್ಣೆ

ಪೆಟ್ರೋಲ್ ಮತ್ತು ನೀಲಗಿರಿ ಎಣ್ಣೆಗಳ ಮಿಶ್ರಣದಿಂದ ಮೋಟರು ಕಾರುಗಳನ್ನು ನಡೆಸಬಹುದೆಂದು ಈಗ ಪ್ರಯೋಗಪೂರ್ವಕ ಸಿದ್ಧಪಡಿಸಿದ್ದಾರೆ. ನೀಲಗಿರಿ ಎಣ್ಣೆ ಮಾತ್ರವನ್ನೇ ಉಪಯೋಗಿಸಿದರೂ ಮೋಟರು ನಡಿಸಲು ಆಗುವುದೆಂದು ಇತ್ತೀಚೆಗೆ ವೈಜ್ಞಾನಿಕರ ನಿಶ್ಚಯವಾಗಿದೆ.

ನಿದ್ರಿಸುವ ರೋಗ

ಹಗಲು ರಾತ್ರಿಯೆನ್ನದೆ ತಡೆಯಲಾರದ ನಿದ್ರೆಬರುವ ಒಂದು ರೋಗವಿದೆ. ಊಟಮಾಡುತ್ತಿರುವಾಗಲೂ ನಿದ್ರೆ ಬರುವುದು. ನಡೆಯುತ್ತಿರುವಾಗಲೂ ನಿದ್ರೆ ಬರುವುದು ಅಂತಹ ನಿದ್ರೆಯ ಕಾಲದಲ್ಲಿ ಬಲವಂತವಾಗಿ ಶರೀರವನ್ನು ಅಲುಗಾಡಿಸಿದರೆ ಮಾತ್ರ ಎಚ್ಚರವಾಗುವುದು. ಇಂತಹ ನಿದ್ರೆಯನ್ನು ಕಡೆಯುವುದರಿಂದಲೂ ಶರೀರಕ್ಕೆ ಹಾನಿಯಿದೆ. ಈ ತರದ ನಿತ್ಯ ನಿದ್ರಾಭಾವವು ಒಂದು ರೋಗವಾದರೂ, ಇದನ್ನು ಗುಣಪಡಿಸುವ ವಿಷಯದಲ್ಲಿ ಡಾಕ್ಟರರೂ ವೈಜ್ಞಾನಿಕರೂ ಬಹಳ ವಿಚಾರಮಗ್ನರಾಗಿದ್ದಾರೆ.

ವಿಜ್ಞಾನಯುಗ

ಸಂಜ್ಞೆಗಳಿಂದ ಭಾಷಣ

ಧ್ವನಿ ಶಾಸ್ತ್ರಕಾರರ ದ್ವಿತೀಯ ಅಂತರ್ರಾಷ್ಟ್ರೀಯ ಕಾಂಗ್ರೆಸಿನ ಮುಂದೆ ಸರ್ ರಿಚಾರ್ಡ್ ಎಂಬ ವೈಜ್ಞಾನಿಕನು ತಾನು ನಿರ್ಮಿಸಿದ—ಸಂಜ್ಞಾ-ಶಾಸ್ತ್ರದ ವಿವರಣೆ ಮಾಡಿ ಐದು ನಿಮಿಷಗಳ ತನಕ ಇಡೀ ಸಭೆಗೆ ತನ್ನ ಅಭಿಪ್ರಾಯವನ್ನು ಸಂಜ್ಞಾ ಭಾಷಣ ಮಾಡಿದನು. ಆ ಭಾಷಣವು ಅಲ್ಲಿ ನೆರೆದವರೆಲ್ಲರಿಗೂ ಅರ್ಥವಾಯಿತು.

ಅವನ ಹೇಳಿಕೆಯೆಂದರೆ ೫೦೦ ಸಂಜ್ಞೆಗಳಿಂದ ಒಬ್ಬನು ಸಾಕಾದಷ್ಟು ವ್ಯವಹಾರಗಳನ್ನು ಮಾಡಬಹುದೆಂದು. ಆ ೫೦೦ ಸಂಜ್ಞೆಗಳನ್ನು ಸಾಮಾನ್ಯ ವಿದ್ಯಾರ್ಥಿಯಾದರೂ ಒಬ್ಬನು ಕೇವಲ ಒಂದೇ ದಿನದಲ್ಲಿ ಕಲಿತುಕೊಳ್ಳಬಹುದಂತೆ. ಹುಷಾರಿನವರಾದರೆ ಕೇವಲ ಮೂಹತ್ತು ನಿಮಿಷಗಳಲ್ಲಿಯೇ ನೂರು ಅಕ್ಷರಗಳ ಸಂಜ್ಞೆಯನ್ನು ಕಲಿಯಬಹುದೆಂದು ಅವನು ಹೇಳುತ್ತಾನೆ

ಗರ್ಜಿಸುವ ಮರುಭೂಮಿ

ದಕ್ಷಿಣ ಆಫ್ರಿಕದ ಕಲಹಾರಿ ಮರುಭೂಮಿಯು ಗರ್ಜಿಸುವುದಾಗಿ ಪ್ರಸಿದ್ಧವಾಗಿದೆ. ಇತ್ತೀಚೆಗೆ ಆ ಮರುಭೂಮಿಯಿಂದ ಅಂತಹ ಶಬ್ದವು ಹುಟ್ಟಲು ಕಾರಣವೇನೆಂದು ಸಿ. ವಾಂಡರ್‌ವಾಲ್ಟನೆಂಬ ವೈಜ್ಞಾನಿಕನು ಕಂಡು ಹುಡುಕಿರುವನು.

ಕಲಹಾರಿಯ ಹೊಯಿಗೆಯು ಬಹಳ ಒಣಗಿದ್ದು ಅವುಗಳು ಅನ್ಯೋನ್ಯ ಗಾಳಿ ಬಂದು ತಾಗಿ ಸರ್ಷಣೆಯಾಗುವಾಗ ಅದರಿಂದ ಶಬ್ದಗಳು ಹುಟ್ಟಿ ಅವುಗಳಿಂದ ಗರ್ಜಿಸುವ ಮಹಾಧ್ವನಿ ಹುಟ್ಟುವುದಂತೆ. ಆದರೆ ಬಿಳಿಯ ಹೊಯಿಗೆಗಳಲ್ಲಿಯೇ ಈ ಶಬ್ದ ಹುಟ್ಟುವುದೂ ಕೆಂಪು ಹೊಯಿಗೆಗಳಲ್ಲಿ ಶಬ್ದ ಹುಟ್ಟದಿರುವುದೂ ಯಾವ ಕಾರಣದಿಂದ ಎಂದು ಅವನು ವಿವರಿಸುವುದಿಲ್ಲ.

ವಿಷದ ಹಣ್ಣುಗಳು

ವೆಸ್ಟ್ ಇಂಡೀಸಿನಲ್ಲಿ ಮೇಂಚಿನೀಲ್ ಎಂಬ ವಿಷಪೂರಿತ ಫಲಗಳು ಇವೆಯೆಂದು ತಿಳಿದಿದೆ. ಆ ಮರದ ಹತ್ತಿರ ಮೃಗಪಕ್ಷಿಗಳೂ ಸಂಚಾರ ಮಾಡುವುದಿಲ್ಲವಂತೆ. ಆ ಫಲಗಳಿಂದ ಬರುವ ರಸವು ಕಾರ್ಬೋಲಿಕ್ ಏಸಿಡಿಗಿಂತಲೂ ನಿಷ್ಠುರ ವಿಷಕಾರಿಯೆಂದು ಪರೀಕ್ಷಿಸಿ ತಿಳಿದುಬಂದಿದೆ. ಸರ್ ವಾಲ್ಟರ್ ರೇಲಿಯ ಅನೇಕ ಮಂದಿ ನೌಕಾ ಪ್ರಯಾಣಿಕರು ಆ ವಿಷ ಫಲವನ್ನು ತಿಂದು ಪ್ರಾಣ ಕಳಕೊಂಡಿರುವರಂತೆ

ಪ್ರಥಮ ಮೋಟರ್ ಸೈಕಲ್

ಪ್ರಥಮವಾಗಿ ಮೋಟರ್ ಸೈಕಲ್ ಮಾಡಿದ್ದು ಗಿಲಟಿನೆಯ ಇಸವಿಯಲ್ಲಿ, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಇದು ಒಂದೇ ಸಮಯದಲ್ಲಿ ಪ್ರಚಾರ ಮಾಡಲಾಯಿತು.

HALFTONE & LINE
BLOCK MAKING
UNDERTAKEN

Sharada Press,
MANGALORE

BHUVANENDRA PRODUCTS LTD.,

Head Office and Factory:
KATAPADI S Kanara

Depots:
1 Maharatha Galli, Hubli.
2. 57 Big street, Triplicane, Madras.

"BHUVANENDRA"
Danthadavan Choorna

Economical in use. Cheapest in value.
Genuine in quality and choiced by all.
Antiseptic, astringent, aromatic. Useful in Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚೆಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

ಒಂಪ್ರೊನಾ

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:- ದಿ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Stockists —

Messrs. Dadha & Co., MADRAS.

THE PIE-MONEY BANK, LTD

Maidan Road, MANGALORE

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

THE BANK OF MANGALORE LIMITED

HEAD OFFICE MANGALORE ESTD 1931

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 15—8—1941 [ಸಂಚಿಕೆ 33]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings

Prompt Settlement of Claims

Liberal Terms

Long Experience &

Sound Investments.

To Insure or to represent, itpays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,

TRIVANDRUM,—BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI



ಬ್ರಿಟನಿನ ನೌಕಾಪಡೆಯ ಎಚ್. ಎಮ್. ಎಸ್. ಫೋರ್ತ್ ಜಲಾಂತರ್ಗಾಮಿ ನಾವೆ
ಇದರಲ್ಲಿ ಸಕಲ ಸಾಧನಗಳು ಸಜ್ಜಾಗಿವೆ. ಫಿರಂಗಿಗಳು ಇವರಲ್ಲಿ ಸಜ್ಜಿತವಾಗಿರುವವು.

KANNADA ILLUSTRATED WEEKLY

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 218/1941.

ಬಿ. ನಾರಾಯಣ ರಾವ್ — ವಾದಿ

ಮತ್ತು

1. ಶೀನಶೆಟ್ಟಿ 2. ಚಂದಯ್ಯ ಶೆಟ್ಟಿ 3. ಕಿಟ್ಟುಶೆಟ್ಟಿ 4. ವೆಂಕಪ್ಪ ಶೆಟ್ಟಿ, ಪರಮೇಶ್ವರಿ ಹೆಂಗ್ಸಿನಮಕ್ಕಳು, ಸದ್ರಿಯವರು ಮಂಗಳೂರು ತಾಲೂಕು ಮುಡ್ಕ ಗ್ರಾಮದಲ್ಲಿರುವವರು — ಪ್ರತಿವಾದಿರು

ಮೇಲ್ಕಂಡ ದಾವೆಯಲ್ಲಿ ವಾದಿಗೆ, ಪ್ರತಿವಾದಿರಿಂದ ಬರಾ ಮೂಲಧನ ವಗೈರೆ ಬರತಕ್ಕ ವರೆ ವಾದಿಯು ವ್ಯಾಜ್ಯ ವಗೈರೆ ಮೇಲಿನ ದಾವೆಯು 1941ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 2ನೇ ಹಗಲು ಗಂಟೆ 10½ಗೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟದ್ದಕ್ಕೆ ಸದ್ರಿ ವ್ಯಾದಿಗೆ ಪ್ರತಿವಾದಿರು ಈ ಕೋರ್ಟಿನ ಮುಂದೆ ಖುದ್ದು ಹಾಜರಾಗದೆ ಇದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು

ಮಂಗಳೂರು 19-8-1941 — **P. Sanjiva Rao,** Vakil for Plaintiff

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. S. No. 170/1941

ಕೆ. ಸಂಜೀವ ರಾವ್ . . . ವಾದಿ.

ಮತ್ತು

ತಿಮ್ಮಯ್ಯ ಶೆಟ್ಟಿ . . . ಪ್ರತಿವಾದಿ.

ಮೇಲ್ಕಾಣಿಸಿದ ವಾದಿಯು ಈ ಕೋರ್ಟಿನಲ್ಲಿ S. C. S. No 170/41ನೇ ವ್ಯಾಜ್ಯವನ್ನು ನಿನ್ನ ಮೇಲೆ ದಾಖಲುಮಾಡಿದ್ದಾನೆ. ಸದ್ರಿ ಸಂಬಂಧ ಸದ್ರಿ ಕೋರ್ಟಿನಲ್ಲಿ ತಾ 9-9-41 ಕ್ಕೆ ಅಖೈರಿ ತೀರ್ಮಾನದ ಬಗ್ಗೆ ಇಡಲ್ಪಟ್ಟಿದೆ. ಆದುದರಿಂದ ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ 10.30 ಘಂಟೆಗೆ ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

Mangalore 18-8-1941 — **K. V. POOJARI,** Advocate for Plaintiff

ಸ್ವೀಕಾರ-ವಿಮರ್ಶೆ

ಸಾಮಾಜಿಕ ಅಭ್ಯಾಸ ಮತ್ತು ರಾಜ್ಯಭಾರಕ್ರಮ ಅಥವಾ ಸಿವಿಕ್ಸ್:—ಬರೆದವರು ಶ್ರೀ ಶಂಕರನಾರಾಯಣ ಕಾರಂತ ಕೋಟ, ಬಿ. ಎ., ಬಿ. ಎಲ್, ವಡ್ವೊಕೇಟ್, ಕುಂದಾಪುರ, ಪ್ರಕಾಶಕರು: ಕೆ. ಎಸ್. ಕಾರಂತ, ಪುತ್ತೂರು ದ. ಕ. ಪುಟಗಳು ಕ್ರೌನ್ 1/8 ಆಕಾರದ 112, ಬೆಲೆ ಪತ್ರಾಣೆ.

ಈ ಪುಸ್ತಕವು ಗವರ್ನಮೆಂಟಿನ ಇಸವಿಯ ಸರಕಾರೀ ಪ್ರಾಥಮಿಕ ಶಿಕ್ಷಣಪ್ರಣಾಳಿಗನುಸಾರವಾಗಿ ಬರೆಯಲ್ಪಟ್ಟಿದೆ ಟ್ರೈನಿಂಗ್ ಶಾಲೆಯ ಅಧ್ಯಾಪಕ ವಿದ್ಯಾರ್ಥಿಗಳಿಗೂ, ಎಂಟನೆಯ ತರಗತಿಯ ವಿದ್ಯಾರ್ಥಿಗಳಿಗೂ ಇದು ಹೆಚ್ಚಿನ ಪ್ರಯೋಜನಕಾರಿಯಾಗುವುದೆಂದು ನಾವು ನಂಬುತ್ತೇವೆ ಗ್ರಂಥಕರ್ತರು ಸಿವಿಕ್ಸಿನ ವಿಷಯ ಬಹಳ ಅಭ್ಯಾಸಮಾಡಿ ವಿಸ್ತಾರವಾಗಿ ಈ ಪುಸ್ತಕವನ್ನು ಬರೆದಿರುವರು. ಪಠ್ಯ ಪುಸ್ತಕವಾಗಲು ಇದು ಯೋಗ್ಯವಾದುದು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಶ್ರೀ ಕಾಂತಪ್ಪ ಕರ್ಕೆರ ಹೆಸರನಲ್ಲಿರುವ ನಂ 440671 ಜೀವವಿಮಾ ಪೋಲಿಸಿಯು ಕಳೆದು ಹೋಗಿದೆ, ಈ ತಾರೀಕಿನಿಂದ ಒಂದು ತಿಂಗಳ ಒಳಗೆ ನಮಗೆ ಆಕ್ಷೇಪ ತಿಳಿಸದಿದ್ದಲ್ಲಿ, ಜೀವ ವಿಮಾದಾರನಿಗೆ ಪೋಲಿಸಿಯ ಸಂಪೂರ್ಣ ಸರೆಂಡರ್ ಬೆಲ್ಯವನ್ನು ಕೊಡಲಾಗುವುದು. ಮೇಲೆ ಹೇಳಿದ ಒಂದು ತಿಂಗಳ ಮೇಲೆ ಬಂದ ಯಾವತ್ತೂ ಅರ್ಜಿಗಳು ವಿಚಾರಮಾಡಲಾಗುವುದಿಲ್ಲ

(ಸಹಿ) ಎಚ್. ಇ. ಜೋನ್ಸ್
ಬೊಂಬಯಿ ಮೆನೇಜರ್
13-8-'41

ನಾನು ಹೇಳುತ್ತಿದ್ದೆನಲ್ಲವೇ—

ಮೊದಲು ಪುರೋಹಿತ ಶ್ವಾಸಹಾರೀ ತೆಗೆದುಕೊಳ್ಳಿರಿ ಅಂತಾ—



ನಮ್ಮ ಒಮ್ಮೆಲೇ ನಿಟ್ಟಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕ ಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೋಡಿ ನಡೆ ಮೆಲ್ಲಮೆಲ್ಲನೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಕೆಮ್ಮು, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ **ಪುರೋಹಿತ ಶ್ವಾಸಹಾರಿ** ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಅಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು **ಶ್ವಾಸಹಾರಿ ಕಂಪೌಂಡ** (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. 1-4; ರೂ. 2-8 ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತಯಾರಿಸುವವರು —

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ ಮೆ॥ ವನಮಾಳೀ ಛೀಟಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ

ಪುರೋಹಿತ ಶ್ವಾಸಹಾರಿ

ನೈಸರ್ಗಿಕ ಆಹಾರವನ್ನು ಕೊಟ್ಟಲ್ಲಿ ನಿಮ್ಮ ಮಗುವು ಆರೋಗ್ಯವಾಗಿಯೂ ಬಲಶಾಲಿಯಾಗಿಯೂ ಬೆಳೆಯುವುದು. ಉತ್ತಮ ಪಾನೀಯವಾದ "ಓವಲ್ಟಿನ್"ನ್ನು ದಿನನಿತ್ಯವೂ ಸೇವಿಸುವುದರಿಂದ ಮಗುವಿಗೆ ಧಾರಾಳ ತಾಯಿಯ ಮೊಲೆಹಾಲೇ ಕೊಟ್ಟಂತೆ ಆಗುತ್ತದೆ —

ಓವಲ್ಟಿನ್ನು ಸಂಪೂರ್ಣ ಮತ್ತು ಯೋಗ್ಯವಾದ ನೈಸರ್ಗಿಕ ಆಹಾರ

ಇದು ಉತ್ತಮ ಬಾರ್ಲಿಯಿಂದಲೂ ಹೊಸ ಹಾಲಿನಿಂದಲೂ ತಯಾರಿಸಿದ್ದುದು ಮಾತ್ರವಲ್ಲದೆ ಇತರ ಅನೇಕ ವಿಟಮಿನ್‌ಗಳು ಶರೀರ ಪೋಷಕ ವಸ್ತುಗಳೂ ಇದರಲ್ಲಿ ಇವೆ. ಇದನ್ನು ಕುಡಿಯುವವರಾದ ತಾಯಿಯ ಆರೋಗ್ಯವೂ ಪೂರ್ಣ ಯೋಗ್ಯ ರೀತಿಯಿಂದಿದ್ದು ಉತ್ತಮ ಶಕ್ತಿ ಬಲಗಳನ್ನು ಕೊಡುತ್ತದೆ. ಇದರಂತೆ ಕೃತ್ರಿಮ ರೀತಿಯಲ್ಲಿ ತಯಾರಾದ ಬೇರೆ ಪಾನೀಯಗಳನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

'ಓವಲ್ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುತ್ತದೆ.

ಡಿಸ್ಟ್ರಿಬ್ಯೂಟರ್ಸ್: ಗ್ರೇಹಮ್ಸ್ ಟ್ರೇಡಿಂಗ್ ಕಂಪೆನಿ, (ಇಂಡಿಯಾ) ಬೊಂಬೆ, ಕಲ್ಕತ್ತಾ, ಮದ್ರಾಸ್, ಕರಾಚಿ, ರಂಗೂನ್ ಲಿಮಿಟೆಡ್

ಓವಲ್ಟಿನ್ ಬಿಸ್ಕುಟುಗಳು ರುಚಿಕರ, ಜೀರ್ಣಕರ, ಮತ್ತು ಶಕ್ತಿಕರವಾದ ಓವಲ್ಟಿನ್ ಬಿಸ್ಕುಟುಗಳು ಅತ್ಯುತ್ತಮವಾಗಿವೆ. ಅವುಗಳಲ್ಲಿಯೂ 'ಓವಲ್ಟಿನ್' ಗುಣಗಳೆಲ್ಲಾ ಕೂಡಿವೆ. 4ಔನ್ಸ್ ಮತ್ತು 8ಔ. ಪಕೇಟುಗಳೂ, 1 ರಾತ್ತಲು ಟಿನ್ನುಗಳೂ ಮಾರಲ್ಪಡುತ್ತವೆ.

OV/2/40

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

22—8—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೨—೮—೧೯೪೧

ಸಮರ ಭೂಮಿಯ ಸಂಚಾರ

ರಷ್ಯ ಜರ್ಮನಿ ಯುದ್ಧವು, ಹಿಂದಿನ 'ಕುರುಕ್ಷೇತ್ರ'ದ ಕಾಳಗಕ್ಕೆ ಸರಿಮಿಗಿಲೆನಿಸಿದೆ. ಜರ್ಮನರು ಒಡೆಸ್ಸಾ, ಉಕ್ರೇನ್, ಸ್ಮೊಲೆನ್‌ಸ್ಕ್‌ಗಳಲ್ಲಿ ಮುಂದೊತ್ತಿರುವರೆಂದು ತಿಳಿದು ಬರುತ್ತದೆ. ರಷ್ಯನವರು, ದಕ್ಷಿಣದ ಎರಡು ನಗರಗಳನ್ನು ಕಿರೊವೊಗ್ರಡ್ ಮತ್ತು ಪರ್ವೊಮೈಸ್ಕಗಳನ್ನು ಖಾಲಿ ಮಾಡಿರುವುದಾಗಿ ರಷ್ಯನರದೇ ಹೇಳಿಕೆಯಿದೆ. ರಷ್ಯನರು ಎಲ್ಲಾ ಕಡೆಗಳಲ್ಲಿಯೂ ಸುಸಜ್ಜಿತರಾಗಿ ಜರ್ಮನರನ್ನು ಎದುರಿಸುತ್ತಿರುವರಾದರೂ, ಜರ್ಮನರ ಮುಂದೊತ್ತುವಿಕೆಯು ಕೆಲದಿನಗಳಿಂದ ಬಹಳ ತೀವ್ರವಾಗಿ ಬಿಟ್ಟಿದೆ.

ರಶ್ಯಾ ಸಂಗ್ರಾಮದ ವಿಸ್ತಾರ

ಇಷ್ಟರಿಂದ ಯುದ್ಧದ ಭವಿಷ್ಯವನ್ನು ಹೇಳಬರುವಂತಿಲ್ಲ. ಆರ್ಕ್‌ಟಿಕ್ ಸಾಗರದಿಂದ ಕಪ್ಪು ಸಮುದ್ರದ ವರೆಗೆ ರಷ್ಯದಲ್ಲಿ ಯುದ್ಧವು ಆಗುತ್ತಲೇ ಇದೆ. ಈ ಯುದ್ಧದಲ್ಲಿ ಜರ್ಮನರಿಗೆ ಅಪಾರ ನಷ್ಟವಾಗಿದೆಯೆಂದು ಮೋಸ್ಕೋದ ಹೇಳಿಕೆಯಾಗಿದೆ. ಹೇಳಿಕೆಯಂತೆ ಜರ್ಮನರ ೧೧ ಡಿವಿಜನುಗಳು, ೧೨ ರೆಜಿಮೆಂಟುಗಳು ಸಂಪೂರ್ಣ ವಿನಾಶವಾಗಿವೆ. ಮತ್ತೆ ೨೦ ಡಿವಿಜನುಗಳ ಅರ್ಧಭಾಗವು ಮಾತ್ರ ಧ್ವಂಸವಾಗಿರುವುದಂತೆ.

ಹಿಟ್ಲರ್ ಉಕ್ರೇನಿನಲ್ಲಿರುವನಂತೆ. ಉಕ್ರೇನಿನಲ್ಲಿ ರಷ್ಯನರ ಪ್ರತಿಭಟನೆ ಸಫಲವಾಗಿರುವುದಿಲ್ಲ. ಒಡೆಸವನ್ನು ಜರ್ಮನ್ ಸೈನ್ಯವು ಮುತ್ತಿರುವುದು. ಉಕ್ರೇನಿನಲ್ಲಿ ಕಬ್ಬಿಣದ ಅದಿರಿರುವ ಸ್ಥಳವನ್ನು ಜರ್ಮನರು ಹಿಡಿದಿರುವರೆಂಬುದು ಸುದ್ದಿ. ಇದು ಖಂಡಿತವಾಗಿಲ್ಲ.

ರಷ್ಯನರು ನಿಕೋಲೇವ್ ಮತ್ತು ಕ್ರಿವಾಯರೋಗ್ ಎಂಬ ಎರಡು ಊರುಗಳನ್ನು ಜರ್ಮನರಿಗೆ ಬಿಟ್ಟುಕೊಟ್ಟರೆಂದು ಈಚೆಯ ಸುದ್ದಿ. ಉಕ್ರೇನಿನಲ್ಲಿ ರಷ್ಯನರ ಪ್ರತಿಘಾಳಿಯಾಗಿದೆ. ಲಾಡೋಗಾ ಸರೋವರದ ವಾಯುವ್ಯಕ್ಕಿರುವ ಸೋರ್ಟವಲ್ಲಾ ನಗರವನ್ನು ಫಿನ್ನಿಶ್ ಸೈನಿಕರು ರಷ್ಯನರಿಂದ ಸ್ವಾಧೀನಪಡಿಸಿಕೊಂಡಿರುವರೆಂದೂ ತಿಳಿದಿದೆ. ಇದರಿಂದ ರಷ್ಯನರಿಗೆ ಲಾಡೋಗಾ ಸರೋವರದ ಪಶ್ಚಿಮ ಭಾಗವು ಇಲ್ಲದಂತಾಗಿದೆ.

ರೂಸ್‌ವೆಲ್ಟ್ ಚರ್ಚಿಲ್ ಭೇಟಿ

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್ ಇವರೂ, ಬ್ರಿಟನಿನ ಮಹಾಮಂತ್ರಿ ಚರ್ಚಿಲ್ಲರೂ ಈ ವಾರದ ಆದಿಯಲ್ಲಿ ಗುಪ್ತ ಮಾತುಕತೆಯೊಂದನ್ನು ನಡೆಸಿದಲ್ಲಿ ರಷ್ಯವು ಹಣಕೊಟ್ಟು ಯುದ್ಧ ಸಾಮಗ್ರಿಗಳನ್ನು ಪಡಕೊಳ್ಳುವ ವಿಚಾರ ಅವರು ಒಮ್ಮತಪಟ್ಟಿರುವರಂತೆ. ಯುದ್ಧ ಸಾಮಗ್ರಿಗಳಿಗೆ ಹಣಕೊಡಲು ರಷ್ಯವು ಸಮರ್ಥವಿರುವುದರಿಂದ ಅದಕ್ಕೆ ಸಾಲಕೊಡುವ ಅಗತ್ಯವಿಲ್ಲವೆಂದು ಅವರು ಅಭಿಪ್ರಾಯವಿದೆಯಂತೆ. ರೂಸ್‌ವೆಲ್ಟ್ ಚರ್ಚಿಲ್ಲರು ಭೇಟಿಯಾಗಿ ಪ್ರಪಂಚದ ರಾಷ್ಟ್ರಗಳ ಸ್ವಾತಂತ್ರ್ಯದ ವಿಷಯದಲ್ಲಿ ಒಂದು ಮಹತ್ವದ ಘೋಷಣೆಯನ್ನೂ ಮಾಡಿದರು. ಇದರಲ್ಲಿ ಯುದ್ಧದ ಬಳಿಕ ಸ್ವಾತಂತ್ರ್ಯವನ್ನು ಕಳೆದುಕೊಂಡ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಕೊಡುವ ಭರವಸೆ ಹೇಳಲಾಗಿದೆ. ರಾಷ್ಟ್ರಗಳ ರಕ್ಷಣೆ ವ್ಯಾಪಾರಾದಿಗಳ ವಿಚಾರದಲ್ಲಿಯೂ ಬಹಳ ಪದ್ಧತಿ ಹೇಳಿರುವರು. ಕೊನೆಗೆ ನಾಜಿಸಮ್ಮನ್ನು ಮುರಿಯಲು ಸಹಾಯ ಮಾಡಬೇಕೆಂದೂ ಕೇಳಿದ್ದಾರೆ.

ಇರಾಣಿನಲ್ಲಿ ಜರ್ಮನರು

ಇತ್ತ ಇರಾಣಿಗೆ ಜರ್ಮನಿಯು ಎಚ್ಚರಿಕೆ ಕೊಟ್ಟಿರುವುದೆಂದು ಸಂಬಂಧಪಟ್ಟವರ ಕಡೆಯಿಂದ ಸುದ್ದಿ ಬಂದಿದೆ. ಇರಾಣಿನಲ್ಲಿರುವ ಜರ್ಮನರನ್ನು ಹೊರಗೆ ಹಾಕಿದರೆ ಜರ್ಮನಿಯು ಇರಾಣಿನೊಡನೆ ಸಂಬಂಧವನ್ನು ಕಡಿದುಕೊಳ್ಳುವುದೆಂದು ಜರ್ಮನ್ ರಾಯಭಾರಿಯು ಇರಾಣ್ ಸರಕಾರಕ್ಕೆ ತಿಳಿಸಿರುವನು. ಜರ್ಮನರನ್ನು ಇರಾಣಿನಿಂದ ಓಡಿಸಬೇಕೆಂದು ಬ್ರಿಟನ್ ರಷ್ಯಗಳು ಒತ್ತಾಯಪಡಿಸಿ ಅದಕ್ಕೆ ಪತ್ರ ಬರೆದವು. "ಇರಾಣಿನ ಮೇಲೆ ರಾಜಕೀಯ ಗಂಡಾಂತರ ಬರಬಾರದೆಂಬ ಇಚ್ಛೆಯಿದ್ದರೆ ಈ ಜರ್ಮನರನ್ನು ಆದಷ್ಟು ಬೇಗ ಹೊರಹಾಕಬೇಕು" ಎಂದು ಅವುಗಳು ಎಚ್ಚರಿಸಿರುವವು. ಇರಾಣಿನಲ್ಲಿ ತುಂಬಾ ಮಂದಿ ಜರ್ಮನರಿರುವರೆಂದು ತಿಳಿದು ಬಂದಿದೆ.

ಟರ್ಕಿಗೆ ಬೆದರಿಕೆ

ಜರ್ಮನಿಯು ಪೂರ್ವದಿಕ್ಕಿನಲ್ಲಿ ಮುಂದೊತ್ತಬೇಕೆಂದು ಮಾಡಿದ ಪ್ರಯತ್ನಗಳ ವಿಷಯವು ಎಲ್ಲರಿಗೂ ತಿಳಿದಿದೆಯಷ್ಟೆ. ಜರ್ಮನಿಯ ೩೭ ಡಿವಿಜನ್ ಸೇನೆಗಳು ಬಲ್ಗೇರಿಯದಲ್ಲಿರುವುವಂತೆ. ಇತ್ತ ಇಟಲಿಯ ಸೈನ್ಯಗಳೂ ದಕ್ಷಿಣದಲ್ಲಿ ಒಟ್ಟುಗೂಡುತ್ತಿದ್ದು ಟರ್ಕಿಗೆ ಬುದ್ಧಿಕಲಿಸಬಂದಿರುವವೆಂದು ಸುದ್ದಿ. ಇರಾಣಿನ ಗಲಭೆಯ ವಿಷಯವಂತೂ ಹಿಂದೆಯೇ ಹೇಳಿದೆ. ಟರ್ಕಿಗೆ ಜರ್ಮನಿ ಬೆದರಿಕೆ ಹಾಕಿದಂತಿದೆ. ಆದರೆ ಸಿರಿಯಾವನ್ನು ಗೆದ್ದ ಬ್ರಿಟಿಷರ ಬಲವು ಹತ್ತಿರದಲ್ಲಿರುವುದರಿಂದ ಟರ್ಕಿ ಸ್ವಲ್ಪ ಸಮಾಧಾನಪಟ್ಟುಕೊಳ್ಳಬಹುದು. ಇತ್ತ ಸ್ಟಾಲಿನನೂ ಟರ್ಕಿ ಪ್ರೆಸಿಡೆಂಟರಿಗೆ ಸ್ನೇಹದ ವಾಗ್ದಾನ ಮಾಡುವ ಪತ್ರವೊಂದನ್ನು ಬರೆದಿರುವನಂತೆ.

ಜಪಾನಿನ ಚಲನವಲನ

ಬ್ರಿಟನ್, ಅಮೇರಿಕ, ಡಚ್ ಇಂಡೀಸುಗಳು ಜಪಾನಿಗೆ ಹಾಕಿದ ಆರ್ಥಿಕ ನಿರ್ಬಂಧದಿಂದ, ಜಪಾನು ಬೆರಗಾಗಿರುವುದು. ಕಳೆದ ಹಲವು ಕಾಲಗಳಿಂದ ಜಪಾನು ಒಂದು ರೀತಿಯ ಮಧ್ಯಸ್ಥಿಕೆಯಿಂದಲೇ ನಡೆದಿತ್ತು. ಬ್ರಿಟನು ಅಮೇರಿಕಗಳೂ ಅದನ್ನು ಕೆರಳಿಸಲಿಲ್ಲ. ಆದರೆ ಇಂಡೋಚೀನವನ್ನು ಆಕ್ರಮಿಸಿದ ಬಳಿಕ ಅವುಗಳೆಲ್ಲ ಎಚ್ಚತ್ತು ನಿಂತಿವೆ. ಒಮ್ಮೆಗೇ ಆರ್ಥಿಕ ನಿರ್ಬಂಧ ಹಾಕಿವೆ. ಜಪಾನಿಗೆ ತೀವ್ರ ಪ್ರತಿಭಟನೆಯೊದಗಿದೆ. ಇಂಡೋಚೀನದ ಫ್ರೆಂಚ್ ಸೈನಿಕರು ಜಪಾನರೊಡನೆ ಸೆಣಸಿ [illegible] ತಯಾರಾಗಿರುವರಂತೆ. ಜಪಾನಿನ ಸಂಗ್ರಾಮ ನೌಕೆಗಳು ಚೀನಾ ಸಮುದ್ರದಲ್ಲಿ ಓಡಾಡುತ್ತಿವೆ. ಥಾಯಿಲೆಂಡಿನ ಗಡಿಯಲ್ಲಿ ಜಪಾನು ಸೈನ್ಯವಿದೆ. "ಸತ್ತರೂ ನಾವು ಯಾರಿಗೂ ಶರಣಾಗೆವು" ಎಂದು ಥ್ಯಾಲೆಂಡಿನವರೇನೂ ದೃಢ ನಿರ್ಧಾರ ಮಾಡಿಕೊಂಡಿದ್ದಾರೆ.

ಡಾರ್ಲಾನ್‌ನ ಅಧಿಕಾರ

ಫ್ರಾನ್ಸಿನ ಚಟುವಟಿಕೆಗಳು ಈಚೆಗೆ ಮತ್ತೂ ಬ್ರಿಟಿಷ್ ವಿರೋಧವಾಗಿಯೇ ನಡೆದಿವೆ. ಹಿಂದಿನಿಂದಲೂ ಬ್ರಿಟಿಷರಲ್ಲಿ ಬದ್ಧವೈರವಿದ್ದ ಅಡ್ಮಿರಲ್ ಡಾರ್ಲಾನನೇ ಅಧಿಕಾರದಲ್ಲಿದ್ದಾನೆಂಬುದು ಗಮನಾರ್ಹವಾದ ವಿಚಾರವಾಗಿದೆ. ಮಾರ್ಶಲ್ ಪೆಟೈನರ ಮೇಲೆ ಮಾಡಿದ ಒತ್ತಾಯ ಬಲವಂತಗಳಿಂದಾಗಿ ಅವರು ನಿರುಪಾಯರಾಗಿದ್ದಾರೆ. ಅವರ ಅವಸ್ಥೆ ನೋಡಿದರೆ ಕನಿಕರ ಹುಟ್ಟುವುದು. ಡಾರ್ಲಾನನು ಜರ್ಮನಿ ಪರವಾಗಿ ಫ್ರಾನ್ಸನ್ನು ಕುಣಿಸುವಾಗ ಪೆಟೇನರು ಮನಸ್ಸಿಲ್ಲದಿದ್ದರೂ ಎದುರು ಮಾತನಾಡುವಷ್ಟು ಶಕ್ತರಾಗಿರುವುದಿಲ್ಲ.

Announcement

DONATIONS & CONTRIBUTIONS
Are received for credit of account
OF
The Mahajana Flood Relief Committee
Of South Kanara
At all our Branches free of all charges

THE CANARA BANKING CORPORATION, LIMITED
(Incorporated in Br India)
ESTD. 1906

ಸ್ವದೇಶಾಭಿಮಾನಿ

ತಾರೀಖು ೨೨—೮—೧೯೪೧

ರೂಸ್‌ವೆಲ್ಟ್-ಚರ್ಚಿಲ್ಲರ ಎಂಟು ಸಿದ್ಧಾಂತಗಳು

ಅಮೇರಿಕದ ಮಹಾ ಅಧ್ಯಕ್ಷರಾದ ರೂಸ್‌ವೆಲ್ಟರೂ, ಬ್ರಿಟನಿನ ಮಹಾ ಮಂತ್ರಿಗಳಾದ ಚರ್ಚಿಲ್ಲರೂ ಕಳೆದವಾರ ಬಹು ಗುಪ್ತವಾಗಿ, ಸಮುದ್ರ ಮಧ್ಯದಲ್ಲಿ ಒಟ್ಟುಸೇರಿ ಬಹಳ ಪ್ರಾಮುಖ್ಯವೆನಿಸುವಂತಹ ಮಾತುಕತೆಗಳನ್ನು ಮಾಡಿದರು. ಪ್ರಪಂಚದ ರಾಷ್ಟ್ರಗಳ ಭವಿಷ್ಯ ಯೋಜನೆಯ ವಿಚಾರದಲ್ಲಿ ಒಂದು ಮಹಾ ಘೋಷಣೆಯನ್ನು ಪ್ರಕಟಿಸಿರುವರು. ಹಿಟ್ಲರನ ಆಕ್ರಮಣ ನೀತಿಯನ್ನು ತಡೆಗಟ್ಟದೆ ನಿರ್ವಾಹವೇ ಇಲ್ಲದೀ ಪ್ರಸಂಗದಲ್ಲಿ ಪ್ರಪಂಚದ ಭವಿತವ್ಯದ ವಿಚಾರವಾಗಿ ಬ್ರಿಟನು ಅಮೇರಿಕಗಳು ಈಗ ವಿಚಾರ ಮಾಡಿದ್ದು ಬಹಳ ಗಮನಾರ್ಹವಾದ ಸಂಗತಿಯಾಗಿದೆ. ಅವರು ಸಾರಿದ ಘೋಷಣೆಯಲ್ಲಿ ಎಂಟು ಮುಖ್ಯ ಸಿದ್ಧಾಂತಗಳಿರುವುದು ಈಗ ಪ್ರಕಟವಾಗಿರುತ್ತದೆ. ಈ ಎಂಟು ಸಿದ್ಧಾಂತಗಳು ಯೂರೋಪಿನ ರಾಷ್ಟ್ರಗಳ ಸ್ವಾತಂತ್ರ್ಯದ ಘೋಷಣೆಯಂತಿದ್ದು ನಾಜಿಸಮ್ಮನ್ನು ಮುರಿಯಲು ಎತ್ತಿದ ಪ್ರತಿಜ್ಞಾಶಸ್ತ್ರದಂತಿವೆ ಈ ಸಿದ್ಧಾಂತಗಳಿಂದ ಉದ್ವೇಗಗೊಂಡ ಪಾಶ್ಚಾತ್ಯ ರಾಷ್ಟ್ರ ಶಕ್ತಿಗಳು ಹಿಟ್ಲರಿಸಮ್ಮನ್ನು ನಾಶಗೊಳಿಸುವ ಕಾರ್ಯದಲ್ಲಿ ಬ್ರಿಟನು ಅಮೇರಿಕಗಳ ಬೆಂಬಲ ಬರಬಹುದೆಂದು ಈ ಘೋಷಣೆ ಮಾಡಿದವರ ನಿರೀಕ್ಷೆಯಿರಬಹುದಾಗಿಯೂ ನಂಬಬೇಕಾಗಿದೆ

ರೂಸ್‌ವೆಲ್ಟ್ ಚರ್ಚಿಲ್ಲರ ಇಂದಿನ ಈ ಎಂಟು ಸಿದ್ಧಾಂತಗಳು, ಹಿಂದಿನ ಲ್ಯಾಡ್ ಲಾರ್ಜ್ ಮತ್ತು ವಿಲ್ಸನರ ಹದಿನಾಲ್ಕು ಸಿದ್ಧಾಂತಗಳನ್ನು ನೆನಪಿಗೆ ತರುತ್ತವೆ. ಕಳೆದ ಮಹಾ ಯುದ್ಧವು ನಡೆದ ಕಾಲದಲ್ಲಿಯೇ ಆ ಹದಿನಾಲ್ಕು ಸಿದ್ಧಾಂತಗಳ ಪ್ರಚಾರ ಮಾಡಲಾಗಿತ್ತು. ಆ ಸಿದ್ಧಾಂತಗಳನ್ನನುಸರಿಸಿ ಎಲ್ಲಾ ರಾಷ್ಟ್ರಗಳಲ್ಲಿಯೂ ಸ್ವಯಂ ನಿರ್ಣಯ ತತ್ವವನ್ನು ಪ್ರಯೋಗಕ್ಕೆ ತರಬೇಕೆಂದು ಪ್ರೆಸಿಡೆಂಟ್ ವಿಲ್ಸನರೇ ಸಾರಿದ್ದರು ಆದರೆ ಆ ಮಹಾ ಯುದ್ಧವು ಮುಗಿದ ಬಳಿಕ ಇಪ್ಪತ್ತು ವರ್ಷಗಳ ನಂತರ ಆ ಸಿದ್ಧಾಂತಗಳೆಲ್ಲವೂ ವಿಸ್ಮೃತಿಯ ರಸಾತಳಕ್ಕೆ ಹಾಕಿ ಒತ್ತಲ್ಪಟ್ಟವು. ಸಾಮ್ರಾಜ್ಯವಾದೀ ರಾಷ್ಟ್ರಗಳ ಅಂತರ್ಯವನ್ನು ತಿಳಕೊಂಡ ಪ್ರಪಂಚದ ಹಲವು ರಾಷ್ಟ್ರಗಳು ಈ ಸಿದ್ಧಾಂತಗಳಾದರೂ ಹೇಗೆ ಕಾರ್ಯರೂಪಕ್ಕೆ ಬರುವವೋ ಎಂಬ ವಿಷಯ ಸಂಶಯದಿಂದ ನೋಡುತ್ತವೆ.

ಯುದ್ಧದಿಂದ ಸ್ವಾತಂತ್ರ್ಯವನ್ನು ಕಳಕೊಂಡ ರಾಷ್ಟ್ರಗಳ ಪುನಃ ಸ್ವಾತಂತ್ರ್ಯವನ್ನು ಕೊಡುವ ಭರವಸೆಯು ಇದರಲ್ಲಿ ಕೊಡಲಾಗಿದೆ. ಆದರೆ ಯುದ್ಧಕ್ಕಿಂತ ಮೊದಲೇ ಪರತಂತ್ರವಾಗಿ, ಬ್ರಿಟಿಷರ ಅಧೀನದಲ್ಲೇ ಇರುವ ಭಾರತದಂತಹ ದೇಶಗಳ, ಸ್ವಾತಂತ್ರ್ಯದ ವಿಚಾರವೇನೆಂಬುದಾಗಿ ಇದರಲ್ಲಿ ತಿಳಿಸಿರುವುದಿಲ್ಲ. ಈ ವಿಚಾರವನ್ನೆತ್ತಿ ಚಿಕಾಗೋ ವಿಶ್ವವಿದ್ಯಾನಿಲಯದ ಹಟ್ಸನ್ಸ್ ಎಂಬವರು ಒಂದು ಪ್ರಶ್ನೆಯೆತ್ತಿದ್ದಾರೆ "೧೯೩೯ನೆಯ ಇಸವಿಯ ಮೊದಲು ಸ್ವಾತಂತ್ರ್ಯವನ್ನು ಕಳೆದುಕೊಂಡ ಹಾಂಕಾಂಗ್, ಮಲಯಾ, ಡಚ್ ಈಸ್ಟ್ ಇಂಡೀಸ್, ಫ್ರೆಂಚ್ ಇಂಡೋ ಚೀನ, ಆಫ್ರಿಕಾ ಭಾರತವೇ ಮೊದಲಾದ ದೇಶಗಳ ವಿಚಾರವೇನು" ಎಂದು ಅವರು ಈ ಸಿದ್ಧಾಂತಗಳ ವಿಷಯ ಬರೆಯುತ್ತಾ ಆಶಂಕಿಸಿರುವರು. ಇಂತಹ ಅಸ್ಪಷ್ಟವಾದ ಘೋಷಣೆ ಮಾಡುವುದರಿಂದ ಯಾರಿಗೂ ಧೈರ್ಯ ಬರುವುದಿಲ್ಲ ಸಂಶಯ ಹೋಗುವುದಿಲ್ಲ. ಚರ್ಚಿಲ್ಲರೂ ರೂಸ್‌ವೆಲ್ಟರೂ ತಮ್ಮ ಯುದ್ಧದ ಇಂಗಿತವನ್ನು ಹಾಗೂ ಸ್ವಾತಂತ್ರ್ಯ ಘೋಷಣೆಯನ್ನು ಸ್ಪಷ್ಟಗೊಳಿಸುವುದು ಅವಶ್ಯವಿರುತ್ತದೆ ಅಂತಹ ಸ್ಪಷ್ಟೀಕರಣದಿಂದ ಮಾತ್ರ ಹಿಟ್ಲರಿಸಮಿನ ನಾಶಕ್ಕೆ ಅಖಿಲ ಪ್ರಪಂಚದ ಬೆಂಬಲ ಸಹಾನುಭೂತಿಗಳನ್ನು ಅವರು ಒದಗಿಸಿಕೊಳ್ಳುವುದೂ ಸಾಧ್ಯವಿದೆ

ಪೆಟ್ರೋಲ್ ನಿರ್ಬಂಧ

ಭಾರತದಲ್ಲಿ ಇದೇ ಮೊದಲನೆಯ ಸಲವಾಗಿ ತಾ ೧೫ರಿಂದ ಮೊದಲ್ಗೊಂಡು ಮೋಟರುಗಳಿಗೆ ಬೇಕಾಗುವ ಪೆಟ್ರೋಲು ನಿರ್ಬಂಧಿಸಲಾಗಿದೆ. ಇಂದಿನ ಮಹಾ ಯುದ್ಧದ ಅಂತರ್‍ರಾಷ್ಟ್ರೀಯ ಕಲಹದಲ್ಲಿ ಪೆಟ್ರೋಲಿನ ಅವಶ್ಯಕತೆ ತುಂಬಾ ಇದೆ; ಇಂದಿನ ಯುದ್ಧದ ಜೀವಾಳವೇ ಪೆಟ್ರೋಲ್ ಎಂದರೂ ಸಲ್ಲುವುದು. ವೈಜ್ಞಾನಿಕ ಯುಗವೆನಿಸಿದ ಈ ಕಾಲದಲ್ಲಿ ವಿಜ್ಞಾನದ ವಿರಾಡ್ರೂಪವನ್ನು ಥಳೆಸಿದ, ಅನೇಕ ಮಾನವ ಸೌಕರ್ಯಗಳನ್ನು ಕಲ್ಪಿಸಲೂ ಸಾಧನವಾಗಿದ್ದ ಪೆಟ್ರೋಲು, ತಿರುಗಿ ಈಗ ಮಾನವ ವಿನಾಶ ಕಾರ್ಯಕ್ಕೂ ಅತ್ಯಂತ ಅವಶ್ಯವಾಗಿ ಕಂಡುಬಂದಿದೆ. ಹೀಗೆ ಸಂಗ್ರಹವಿರುವ ಪೆಟ್ರೋಲನ್ನು ಬಹಳ ಎಚ್ಚರದಿಂದ ಖರ್ಚುಮಾಡಬೇಕಾಗಿ ಬಂದ ಕಾರಣ, ಇಂದು ಈ ತರದಲ್ಲಿ ಪೆಟ್ರೋಲು ನಿರ್ಬಂಧವು ಜಾರಿಗೆ ತರಲಾಯಿತು.

ಪೆಟ್ರೋಲ್ ನಿಯಂತ್ರಣವು ಇಂತಹ ದುರ್ಧರ ಪ್ರಸಂಗದಲ್ಲಿ ಅವಶ್ಯವಾಗಿದೆಯೆಂಬುದನ್ನು ಯಾರಾದರೂ ಒಪ್ಪಲೇಬೇಕು. ಸರಕಾರದವರು ನಿಯಮಿಸಿದ ನಿಯಂತ್ರಣದ ವಿಷಯದಲ್ಲಿ ಕೆಲವು ಲೋಪದೋಷಗಳಿವೆಯೆಂಬುದು ಸಾರ್ವಜನಿಕರ ವಿವಾದಕ್ಕೆ ಆಸ್ಪದವನ್ನುಂಟು ಮಾಡಿದೆ. ಖಾಸಗಿ ಮೋಟರು ಮಾಲಕರಿಗೆ ತಿಂಗಳಿಗೆ ಸುಮಾರು ೨೦೦ ಮೈಲುಗಳ ಓಡಾಟಕ್ಕೆ ಸಾಕಾಗುವಷ್ಟು ಪೆಟ್ರೋಲ್ ಕೊಡಲಾಗುವುದೆಂದು ಸೂಚಿತವಾಗಿದೆ. ಎಂದರೆ ದಿವಸಕ್ಕೆ ಸಾಧಾರಣ ಆರು ಮೈಲುಗಳ ಪ್ರಯಾಣಕ್ಕೆ ಬೇಕಾದಷ್ಟಾಯಿತು. ದಿನಕ್ಕೆ ಆರು ಮೈಲುಗಳಷ್ಟು ಮೋಟರು ಸಂಚಾರದ ಆಗತ್ಯವಿರುವವನು ಖಾಸಗಿ ಮೋಟರು ಕಾರುಗಳನ್ನು ಇಟ್ಟುಕೊಳ್ಳುವುದಿಲ್ಲವಾಗಿ, ಇದರಿಂದ ಅತೃಪ್ತಿಯುಂಟಾಗಿದೆ. ಇನ್ನು ಸಾರ್ವಜನಿಕ ಮೋಟರುಗಳ ವಿಷಯದಲ್ಲಿ ಒಂದು ವ್ಯಾಪಕವಾದ ವಿಷಯವಿರುತ್ತದೆ. 'ಅವಶ್ಯಕ ಹಾಗೂ ಅನವಶ್ಯಕ'ವೆಂಬ ಎರಡು ವಿಭಾಗಗಳನ್ನು ಅವುಗಳಲ್ಲಿ ಮಾಡಲಾಗಿದೆ. ಈ 'ಅವಶ್ಯಕ ಮತ್ತು ಅನವಶ್ಯಕ'ಗಳನ್ನು ನಿರ್ಣಯಿಸುವ ಅಧಿಕಾರವು ಯಾರದೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಇದರಿಂದ ನಿಯಂತ್ರಣಾಧಿಕಾರಿಗಳ ಮತ್ತು ಬಸ್ಸು ಮಾಲಕರ ಸಂಬಂಧದಲ್ಲಿ ಸಂದೇಹಕ್ಕೆಡೆಯಾಗುವುದೆಂಬ ಸಂಶಯ ಹಲವರಲ್ಲಿದೆ ಇಂತಹುದಕ್ಕೆ ಆಸ್ಪದವಿಲ್ಲದಂತೆ ಕಾರ್ಯಗಳು ಸುಸೂತ್ರವಾಗಿ ವಿಚಕ್ಷಣತೆಯಿಂದ ಸಾಗಿ ಸಂದೇಹಗಳು ಮುಂದೆ ಪರಿಹಾರವಾಗುವವೆಂದು ಭರವಸೆಪಡಬೇಕಾಗಿದೆ

ಸ್ವದೇಶೀ ಪ್ರಚಾರದ ದೃಷ್ಟಿಯಲ್ಲಿ ಪೆಟ್ರೋಲ್ ನಿರ್ಬಂಧವನ್ನು ಭಾರತೀಯರು ಸ್ವಾಗತಿಸಬೇಕಾಗಿದೆ ಬಡರೈತನಿಗೆ ಇದರಿಂದ ಏನೇನೂ ಅನಾನುಕೂಲವಿಲ್ಲ ಕೃಷಿಯೇ ನಮ್ಮ ದೇಶದ ಮುಖ್ಯ ಉದ್ಯೋಗವಿದ್ದು ಕೃಷಿಕರ ಹಿತಕ್ಕೆ ಹಾನಿಯಾಗಿದೆಯೋ ಎಂಬುದು ದೇಶದ ಉನ್ನತಿಯ ದೃಷ್ಟಿಯಲ್ಲಿ ಪ್ರಾಮುಖ್ಯವೆನಿಸುತ್ತದೆ ಪೆಟ್ರೋಲ್ ನಿರ್ಬಂಧವಾಗುವುದರಿಂದ, ಮೋಟರು ಬಂಡಿಗಳ ಚಲಾವಣೆಯು ಬಹಳವಾಗಿ ನಿಂತು ಹೋಗುವುದರಿಂದ ಹಳ್ಳಿಗನ ಎತ್ತು ಬಂಡಿಗಳಿಗೆ ಕೆಲಸ ದೊರಕಿದಂತಾಗುತ್ತದೆ ಹಲವು ಮಂದಿ ಮಾನವರ ಶಕ್ತಿಯನ್ನು ಜೀರ್ಣಿಸುತ್ತಿರುವ, ಅವರ ಅನ್ನದ ಹಾದಿಗೆ ಅಡ್ಡಬರುವ ಯಂತ್ರದ ಕೈಕಾಲು ಮುರಿದುಬಿದ್ದ ಈ ಸಂದರ್ಭದಲ್ಲಿ ಹಳ್ಳಿಯ ಬಡಕೂಲಿಗಾರನಿಗೆ ಹೆಚ್ಚಿನ ಉದ್ಯೋಗವು ದೊರಕಿತೆಂಬುದರಲ್ಲಿ ಸಂಶಯವಿಲ್ಲ.

ಗತಿಸಿದ ವಿಲ್ಲಿಂಗ್ಡನ್

ಬಹುಕಾಲ ಭಾರತದಲ್ಲಿ ಅಧಿಕಾರ ನಡೆಸಿದ ಲಾರ್ಡ್ ವಿಲ್ಲಿಂಗ್ಡನರು ನಿಧನ ಹೊಂದಿದೀ ಸಂದರ್ಭದಲ್ಲಿ ಭಾರತೀಯರಾದ ನಾವು ಅವರ ಸ್ಮರಣೆ ಮಾಡದಿರುವುದು ಉಚಿತವಾಗಲಾರದು. ಯಾವದೇ ಮನುಷ್ಯನಾದರೂ ಸತ್ತ ಮೇಲೆ ಆತನು ಮಾಡಿದ ಕೆಟ್ಟ ಕೆಲಸಗಳೆಲ್ಲವೂ ಮಾಯವಾಗಿ, ಕೇವಲ ಸದ್ಗುಣಗಳೇ ಎತ್ತಿ ತೋರಬೇಕು. ಆದರೆ ವಿಲ್ಲಿಂಗ್ಡನ್ ಪ್ರಭುಗಳು, ಭಾರತದ ಜನರು ನೆನಪಿನಲ್ಲಿಡತಕ್ಕ ಯಾವುದೇ ಒಂದು ಸತ್ಕಾರ್ಯವನ್ನೂ ಮಾಡಿ ಹೋಗಿಲ್ಲವೆಂಬುದು ಈ ಸಂದರ್ಭದಲ್ಲಿ ಅತ್ಯಂತ ಶೋಚನೀಯ ವಿಚಾರವಾಗಿದೆ.

೧೯೩೧ರಿಂದ ೧೯೩೬ರ ವರೆಗೆ ಅವರು ಭಾರತದ ವೈಸರಾಯರಾಗಿದ್ದರು. ಅದಕ್ಕಿಂತ ಹಿಂದೆ ೧೯೧೩ರಿಂದ ೧೯೧೮ರ ವರೆಗೆ ಅವರು ಮುಂಬಯಿ ಗವರ್ನರರಾಗಿದ್ದರು. ೧೯೧೯ರಿಂದ ೧೯೨೪ರ ವರೆಗೆ ಅವರು ಮದ್ರಾಸಿನ ಗವರ್ನರರಾಗಿದ್ದರು. ವಿಲ್ಲಿಂಗ್ಡನರು ತಮ್ಮ ಅಧಿಕಾರದಲ್ಲಿ ತೋರಿಸಿದ ದರ್ಪ, ಅಟ್ಟಹಾಸಗಳು ಭಾರತದ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿ ಉಳಿದಿರುವವಾಗುವುದು. ಲಾರ್ಡ್ ಕರ್ಜನರ ಬಳಿಕ, ಬ್ರಿಟಿಷ್ ದರ್ಪವನ್ನು ತೋರಿಸಿದ ಉದ್ಧಟ ಅಧಿಕಾರಿಗಳಲ್ಲಿ ವಿಲ್ಲಿಂಗ್ಡನರ ಹೆಸರು ಅಗ್ರಗಣ್ಯವಾಗಿದೆ. ಭಾರತದ ಸ್ವಾತಂತ್ರ್ಯ, ಭಾರತದ ಹಕ್ಕು, ಭಾರತದ ಸ್ವರಾಜ್ಯಭರಣ ಈ ವಿಚಾರಗಳು ಅವರಿಗೆ ಕರ್ಣವೇದನೆಯನ್ನು ಹುಟ್ಟಿಸುತ್ತಿದ್ದವು, ಅಂತೆಯೇ ಭಾರತದ ಸ್ವಾತಂತ್ರ್ಯ ಪ್ರೇಮಿಗಳು, ಜನತಾಮುಖಂಡರು 'ದೇಶದ್ರೋಹಿಗಳು, ರಾಜದ್ರೋಹಿಗಳಾಗಿ' ಅವರ ಶಸ್ತ್ರಕ್ರಿಯೆಗೆ ಗುರಿಯಾಗಿದ್ದರು

ಹದಿನೈದು ವರ್ಷಗಳಷ್ಟು ದೀರ್ಘಕಾಲದ ವರೆಗೆ ಭಾರತದಲ್ಲಿ ಹಿರಿಯ ಅಧಿಕಾರವನ್ನು ನಡೆಸಿದ್ದರೂ ಕೂಡಾ ಭಾರತದ ಜನತಾ ಹೃದಯವನ್ನು ಅರಿಯದ ಒಬ್ಬ ವ್ಯಕ್ತಿಯಿದ್ದರೆಂದರೆ ಅವರು ಗತಿಸಿದ ವಿಲ್ಲಿಂಗ್ಡನರೆನಬೇಕು

ಗಾಂಧಿ ಇರ್ವಿನ್ ಒಪ್ಪಂದವಾಗಿ ರೌಂಡ್‌ಟೇಬಲ್ ಕಾನ್ಫರೆನ್ಸ್ ಕೂಡಿದ ಕಾಲದಲ್ಲಿ ಬ್ರಿಟಿಷ್ ಭಾರತಗಳೊಳಗೆ ಮಧುರ ಸಂಬಂಧವು ಹುಟ್ಟಿದಂತೆ ತೋರಿತು! ಆದರೆ ಗಾಂಧಿಜಿ ರೌಂಡ್‌ಟೇಬಲ್ ಕಾನ್ಫರೆನ್ಸಿನಿಂದ ಮರಳಿಬಂದವರೇ, ವಿಲ್ಲಿಂಗ್ಡನರ ಪ್ರಭುತ್ವದ ಆಜ್ಞೆಯಿಂದ ಬಂಧಿಸಲ್ಪಟ್ಟರು, ತಿರುಗಿ ಭಾರತದ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲವು ಮಸಗಿತು ದಬ್ಬಾಳಿಕೆಯಲ್ಲಿ ವಿಲ್ಲಿಂಗ್ಡನರು ನಿಸ್ಸೀಮರೆನಿಸಿದರು, ಕಾಂಗ್ರೆಸನ್ನು ಸದೆಬಡೆಯುವ ಹಠತೊಟ್ಟು ಕೆಲಸಮಾಡಿದವರು. ದೇಶದ ಆದ್ಯಂತವೂ ಆರ್ಡಿನೆನ್ಸ್‌ಗಳು ಜಾರಿಗೆ ತರುವಲ್ಲಿ ಭಾರತೀಯರ ಹಕ್ಕುಬಾಧ್ಯತೆಗಳನ್ನೂ ಅವರು ಗಮನಿಸಲಿಲ್ಲ. ತಾವು ಕಬ್ಬಿಣದ ಮನುಷ್ಯನೆಂಬುದನ್ನು ವಿಲ್ಲಿಂಗ್ಡನರು ತಮ್ಮ ಅಧಿಕಾರದ ಕಾಲದಲ್ಲಿ ಭಾರತೀಯರಿಗೆ ತೋರಿಸಿಕೊಟ್ಟರು.

ಆದರೂ ಭಾರತೀಯರು ಉದಾರ ಹೃದಯರು, ವಿಲ್ಲಿಂಗ್ಡನರಿಗೆ ಬ್ರಿಟಿಷ್ ಪ್ರಭುತ್ವ ರಕ್ಷಣೆಯಲ್ಲಿದ್ದ ಆಸಕ್ತಿಯು ಕೊಂಡಾಡತಕ್ಕದ್ದಿದೆ. ಕೊನೆಯ ಕಾಲದಲ್ಲಿ, ವೃದ್ಧಾಪ್ಯದಲ್ಲಿಯೂ ತನ್ನ ರಾಜಭಕ್ತಿಯನ್ನು ಅವರು ಚೆನ್ನಾಗಿ ಪ್ರದರ್ಶಿಸಿದ್ದಾರೆ. ಭಾರತೀಯರ ವಿಷಯದಲ್ಲಿ ಮಾಡಿದ ಅಪರಾಧಗಳ ಕುರಿತು ಅವರು ಅಂತ್ಯಕಾಲದಲ್ಲಾದರೂ ಪಶ್ಚಾತ್ತಾಪಪಟ್ಟಿದ್ದರೆ, ಭಗವಂತನು ಅವರನ್ನು ಮನ್ನಿಸದಿರಲಾರನು.

ಲೋಕೋದ್ಧಾರಕ ಯುಗಪುರುಷನು ಭಾರತದಲ್ಲಿ ಜನ್ಮವೆತ್ತುವನು

ಠಾಗೂರರ ಅಮೃತಮಯ ಭವಿಷ್ಯವಾಣಿ

'ಯುರೋಪಿನ ಹೃದಯದಿಂದ ಸಂಸ್ಕೃತಿಯ ಬುಗ್ಗೆಯು ಸ್ಫುರಿಸಿ ಹರಿಯುವುದೆಂದು ನಾನು ಒಂದು ಸಮಯ ನಂಬಿದ್ದೆನು. ಆದರೆ ನನ್ನೀ ಕೊನೆಯ ದಿನಗಳಲ್ಲಿ ನನ್ನ ಹಿಂದಿನ ಆ ನಂಬುಗೆಯು ಹಾರಿಹೋಗಿದೆ. ಇಂದು ನನಗೊಂದು ಕೊನೆಯಾಶೆಯಿದೆ ಇಂದಿನ ಈ ವಿನಾಶಕಾರಕ ರೋಗಕ್ಕೆ ಔಷಧ ಕೊಡುವ ಯುಗಪುರುಷನೊಬ್ಬನು ನಮ್ಮ ದರಿದ್ರ ದೇಶದಲ್ಲಿ ಭಾರತದಲ್ಲಿಯೇ ಜನ್ಮವೆತ್ತುವನು. ಆತನ ಅಮೃತಮಯ ದಿವ್ಯಸಂದೇಶವು ಪಶ್ಚಿಮ ಭೂಖಂಡಗಳಲ್ಲಿ ಪಸರಿಸಿ ಅಲ್ಲಿಯ ಹೃದಯಗಳಲ್ಲಿ ಅಭ್ಯುದಯದ ಆಶೆಯನ್ನು ತುಂಬುವುದು.'

ಹೀಗೆಂದು ಕವೀಂದ್ರ ರವೀಂದ್ರರು ತನ್ನ ಎಂಬತ್ತನೆಯ ಹುಟ್ಟಿದ ಹಬ್ಬದ ದಿನ ಕಳೆದ ಎಪ್ರಿಲ್ ೧೪ರಂದು ಶಾಂತಿನಿಕೇತನದಲ್ಲಿ ಭಾಷಣಮಾಡುತ್ತಾ ಹೇಳಿದರು. ವಿಶ್ವಕವಿಯು ಆ ಸಂದರ್ಭದಲ್ಲಿ ಜಗತ್ತಿಗೆ ಒಂದು ಅಮೃತಮಯವಾದ ಸಂದೇಶವನ್ನಿತ್ತರು.

ಅದರ ಸಾರಾಂಶ ಹೀಗಿತ್ತು:

'ಮನುಷ್ಯ ರಾಕ್ಷಸನು ಇಂದು ಮನುಕುಲವನ್ನೆತ್ತಿ ಲೋಕವಿನಾಶಕ್ಕಾಗಿ ಹಲ್ಲು ಕಿರಿದು ಮುಂದು ಬಂದಿರುವನು. ಬ್ರಹ್ಮಾಂಡದ ಒಂದು ಬದಿಯಿಂದ ಇನ್ನೊಂದು ತುದಿಯ ತನಕ ರೋಷದ್ವೇಷಗಳ ವಿಷವಾಯು ಬೀಸುತ್ತಲಿದೆ. ಪಶ್ಚಿಮ ಭೂಖಂಡದಲ್ಲಿ ಇದುವರೆಗೆ ಅಡಗಿಕೊಂಡಿದ್ದ ಮಾನವ ಹನನ ರೋಗವು ಇಂದು ವೃದ್ಧಿಯಾಗಿ ಮನುಷ್ಯನ ಆತ್ಮನಾಶಕ್ಕೆ ಸಿದ್ಧವಾಗಿರುತ್ತದೆ'

ರವೀಂದ್ರರು ಲೋಕ ಯುದ್ಧದ ವಿಷಯ ಹೀಗೆಂದು ಆ ಮೇಲೆ ಭಾರತವನ್ನು ಇನ್ನಿತರ ಏಶ್ಯಾಖಂಡಗಳ ರಾಷ್ಟ್ರಗಳೊಡನೆ ಹೋಲಿಸುತ್ತಾ ಹೀಗೆ ಹೇಳಿದರು.

'ಭಾರತೀಯರು ಜಪಾನೀಯರಿಗಿಂತ ಯಾವ ದೃಷ್ಟಿಯಿಂದ ನೋಡಿದರೂ ಹಿಂದೆ ಉಳಿದವರಲ್ಲ. ಬ್ರಿಟಿಷ್ ಸರಕಾರವು ಇಲ್ಲಿ ಕಾಯಿದೆ ಹಾಗೂ ಸುವ್ಯವಸ್ಥೆಯ ಎಂದರೆ ಪೋಲೀಸ್ ಕಾರಬಾರಿನ ಆಡಳಿತೆಯನ್ನು ನಡೆಸಿದ್ದಾರೆಂಬುದು ನಿಜ. ಹಿಂಸೆಯಿಂದ ಆಳುವ ಹಾಗೂ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದ ರಾಜ್ಯಕ್ರಮದಲ್ಲಿ ಇನ್ನು ಮೇಲೆ ನಮಗೆ ನಂಬುಗೆ ಇರಲಾರದು. ಬ್ರಿಟಿಷರು ತಮ್ಮ ಸಂಸ್ಕೃತಿಯಲ್ಲಿರುವ ಒಳ್ಳೆಯ ಗುಣಗಳನ್ನು ಲೋಭಿಗಳಂತೆ ಅಡಗಿಸಿಟ್ಟುಕೊಂಡು, ಭಾರತೀಯರೊಡನೆ ನಿಜವಾದ ಬಾಂಧವ್ಯವನ್ನು ಬೆಳೆಸಲು ನಿರಾಕರಿಸಿ ನಮ್ಮ ಪ್ರಗತಿಯ ಹಾದಿಯನ್ನು ತಡೆಗಟ್ಟಿದ್ದಾರೆ.'

([redacted]

ಠಾಗೂರರು ಸ್ವಲ್ಪ ಸಮಯಗಳ ಹಿಂದೆ 'ಶಾಂತಿನಿಕೇತನ' ವಿಶ್ವವಿದ್ಯಾಲಯದ ಸಲುವಾಗಿ ನಿಧಿಕೂಡಿಸಲು, ತಾನು ಬರೆದ ನಾಟಕಗಳಲ್ಲಿ ತಾನೇ ನಟನಾಗಿ ಅಭಿನಯಿಸಿ ಹೊರ ದೇಶಕ್ಕೆ ಹೊರಟಿದ್ದರು, ಆ ಸಮಯದಲ್ಲಿ ತೆಗೆದ ಅವರ ಒಂದು ಭಾವ ಚಿತ್ರ

ಸತ್ಯಾಗ್ರಹದ ವಿಷಯ ಗಫರ್‌ಖಾನರ ಹೇಳಿಕೆ

ಸತ್ಯಾಗ್ರಹ ಆಂದೋಲನವು ಅನಿಶ್ಚಿತ ಅವಧಿ ವರೆಗೆ ನಡೆಯಲಿದೆ

ಅಬ್ದುಲ್ ಗಫರ್‌ಖಾನರ ಹೇಳಿಕೆ

ಯುರೋಪಿನ ಯುದ್ಧವು ಯಾವಾಗ ಕೊನೆಗೊಳ್ಳುವುದೆಂಬ ಗೊಡವೆ ನಮಗಿಲ್ಲ, ನಮ್ಮ ಸತ್ಯಾಗ್ರಹ ಆಂದೋಲನವು ಬಿಡದೆ ಸಾಗುವುದು—ಹೀಗೆಂದು ಗಡಿನಾಡಿನ ಗಾಂಧಿ ಅಬ್ದುಲ್ ಗಫರ್ ಖಾನರು ಲಾಹೋರಿನ ಪತ್ರಿಕಾ ಪ್ರತಿನಿಧಿಯೊಬ್ಬನಿಗೆ ಕೊಟ್ಟ ಸಂದರ್ಶನದಲ್ಲಿ ಹೇಳಿದರು

ಅವರು ವರ್ಧಾಕ್ಕೆ ತೆರಳಿ ಮಹಾತ್ಮಾಜಿಯವರ ಸಂದರ್ಶನ ತೆಗೆದುಕೊಂಡು ಅಲ್ಲಿಂದ ಮರಳಿ ಪೇಶಾವರಕ್ಕೆ ಹೋಗುವಾಗ ಲಾಹೋರಿನಲ್ಲಿ ಇದ್ದವರು ಪತ್ರಿಕಾ ಪ್ರತಿನಿಧಿಗೆ ಸಂದರ್ಶನವಿತ್ತ ಕಾಲ ಈ ಹೇಳಿಕೆ ಕೊಟ್ಟರು.

"ಇಂದಿನ ಸತ್ಯಾಗ್ರಹ ಆಂದೋಲನವು ಎಷ್ಟು ಕಾಲದ ವರೆಗೆ ಮುಂದುವರಿಯುವುದೆಂದು ಹೇಳಲು ಸಾಧ್ಯವಿದೆಯೇ" ಹೀಗೆಂದು ಅವರೊಡನೆ ಪತ್ರಿಕಾ ಪ್ರತಿನಿಧಿಯು ಪ್ರಶ್ನಿಸಿದನು. ಅದಕ್ಕೆ ಅವರು ತಮ್ಮ ಹಲ್ಲಿಲ್ಲದ ಬಾಯಿಯ ನಗುವಿಂದ ಉತ್ತರವಿತ್ತರು.

—"ಜಗತ್ತು ಬಹಳ ಶೀಘ್ರಗತಿಯಲ್ಲಿ ಓಡತೊಡಗಿದೆ. ಹಲವು ಘಟನೆಗಳು ವಿದ್ಯುದ್ವೇಗದಿಂದ ಆಗತೊಡಗಿವೆ. ಮುಂದೆ ಏನಾಗಬಹುದೆಂದು ದೇವರೊಬ್ಬನಲ್ಲದೆ ಬೇರೆ ಯಾರಿಗೆ ಗೊತ್ತು? ಎಷ್ಟು ದೀರ್ಘ ಕಾಲದ ವರೆಗೆ ನಾವು ಹೋರಾಡಬೇಕಾಗಬಹುದೆಂಬ ವಿಚಾರ ಯಾರಿಗೂ ಈಗ ಹೇಳಲು ಸಾಧ್ಯವಿಲ್ಲ."

ಮುಂದುವರಿಸುತ್ತಾ ಅವರು ಮತ್ತೆ ಹೀಗೆಂದು ಹೇಳಿದರು.

"ನಾವಿಂದು ವಿಚಿತ್ರ ದೃಶ್ಯವೊಂದನ್ನು ನೋಡುತ್ತಿದ್ದೇವೆ ಜಗತ್ತಿನ ಇತಿಹಾಸದಲ್ಲಿಯೇ ಪ್ರಬಲವಾದೊಂದು ಉತ್ಕ್ರಾಂತಿಯ ಮಧ್ಯದಲ್ಲಿ ನಾವೀಗ ಇದ್ದೇವೆ. ಈ ಕ್ರಾಂತಿಯು ಅನೇಕ ಅನರ್ಥಗಳನ್ನು ತಂದೊಡ್ಡಿದೆ. ಇದು ಹೀಗಾಗಬೇಕೆಂಬುದೇ ದೇವರ ಇಚ್ಛೆಯು. ಆದುದರಿಂದಲೇ ಅವನು ತನ್ನ ಉನ್ನತ ಕೀರ್ತಿಯಿಂದ, ಭೀಕರ ಶಕ್ತಿಗಳನ್ನು ಕ್ರಿಯೆಗೆ ಪೂರ್ಣವಾಗಿ ಮಾಡಲು ಅಣಿಮಾಡಿಬಿಟ್ಟಿರುವನು"

ಇಂದಿನ ರಷ್ಯ—ಜರ್ಮನಿಗಳ ಕಾಳಗದಲ್ಲಿ ಮುಂದಿನ ಜಗತ್ತಿನ ವ್ಯವಸ್ಥೆಯು ನಿರ್ಣಯವಾಗಲಿದೆಯೆಂದು ಖಾನ್ ಅಬ್ದುಲ್ ಗಫರ್ ಖಾನರು ಅಭಿಪ್ರಾಯಪಟ್ಟರು.

"ಇಂದಿನ ರಾಷ್ಟ್ರೀಯ ಹೋರಾಟದಲ್ಲಿ ಪಠಾಣರು ವಹಿಸಿದ ಭಾಗದಿಂದ ಅವರು ಸಂತೃಪ್ತರಾದಂತೆ ತೋರಿತು.

ರೈಲ್ವೆ ಸ್ಟೇಶನಿನಲ್ಲಿ ಅವರನ್ನು ಬೀಳ್ಕೊಡಲು ಡಾಕ್ಟರ್ ಗೋಪೀಚಂದ ಭಾರ್ಗವ ಮತ್ತು ಇತರ ಹಲವು ಕಾಂಗ್ರೆಸ್ ಮುಖಂಡರು ಸೇರಿದ್ದರು

ಸಾದರ-ಸ್ವೀಕಾರ

ಹರಿಜನ ಸೇವಾ ಸಂಘ ಕಾರ್ಕಳ

ಇದರ ೧೯೪೦—೪೧ನೆಯ ವರ್ಷದ ವರದಿ ಹಸ್ತಗತವಾಗಿದೆ. ಕಾರ್ಕಳ ತಾಲೂಕಿನಲ್ಲಿ ಹರಿಜನರ ಬಗ್ಗೆ ಅನೇಕ ವಿಧದ ಸತ್ಕಾರ್ಯಗಳನ್ನು ಮಾಡುತ್ತಿರುವ ಈ ಸಂಸ್ಥೆಯು ಇನ್ನಷ್ಟು ಸಾರ್ವಜನಿಕ ಪ್ರೋತ್ಸಾಹಾರ್ಹವಾಗಿದೆ. ಶಬರೀ ಆಶ್ರಮ ಮೊದಲಾದವುಗಳನ್ನು ಸ್ಥಾಪಿಸಿ ಇಲ್ಲಿನ ಕೆಲವು ಮಹನೀಯರು ಹರಿಜನ ಪರವಾಗಿ ದುಡಿಯುತ್ತಿರುವುದು ಅಭಿನಂದನೀಯ

ಸುಕ್ರ ಸಂಜೀವನ

ಭಾರತ ದೇಶದಿಂದ ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯದ ಪಾಲನೆಯಿಲ್ಲದೆ ಎಂದೋ ಮಾಯ ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯು ತಿಳಿಯದೆ ಇದ್ದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದ ದುವ್ಯವಹಾರದಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಒಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

¼ ಸೇರಿಗೆ ರೂ. 4



ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ.ಸಿ.ಎಸ್. (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್: ಶಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

ಫೈಲ್ಡ್ ಇಂಟರ್ ಪ್ರೇಮ ವಿಜಯ

ಲೇಖಕರು: ಬಿ. ಯಸ್. ಭಾಸ್ಕರ ರೈ, ಮಂಗಳೂರು.

'ಶಶಿ, ನೀನು ಇನ್ನೂ ನನ್ನನೇತಕ್ಕೆ ಪ್ರೀತಿಸುವೆ? ನಾಯಿಯ ಬಾಳಿಗಿಂತಲೂ ಕಡೆ ನನ್ನ ಬಾಳೀಗ.'

'ಅದೇಕೆ ಹೀಗೆನ್ನುವಿರಿ? ನೀವೀಗ ಕಷ್ಟದಲ್ಲಿರುವಿರೆಂದು ನಿಮ್ಮನ್ನು ನಾನು ಪ್ರೀತಿಸದಿರಲೇ? ಸುಖದುಃಖ ಜರಾಮರಣಗಳು ನರಜನ್ಮಕ್ಕೆ ಬಂದವರಿಗೆಲ್ಲಾ ಇದ್ದೇ ಇವೆ.'

ಜಾಣೆ ನೀನು! ಆದರೆ ನೋಡು, ನಾನೀಗ ಕಷ್ಟದಲ್ಲಿರುವೆನು. ನನ್ನ ಜೀವನದ ಅಮೂಲ್ಯವಾದ ಎರಡು ವರ್ಷಗಳು ವ್ಯರ್ಥವಾದುವು. ಈಗಿನ ನನ್ನನ್ನು ವರಿಸುವುದು ನಿನ್ನ ತಂದೆತಾಯಿಗಳಿಗೆ ಒಪ್ಪದ ವಿಷಯ. ನೀನು ಶ್ರೀಮಂತರ ಮಗಳು ನಾನೀಗ ತಿರುಕನಿಗಿಂತಲೂ ಕಡೆ.'

'ನೀವಿಂತಹ ಮಾತುಗಳನ್ನಾಡಬೇಡಿ. ನೀವಂದು ಆಟ ಪಾಟಗಳಲ್ಲಿ ಮಿಂಗಿಲೆನಿಸಿದಾಗ ಮಾತ್ರ ನಿಮ್ಮನ್ನು ಪ್ರೀತಿಸುವೆನೆಂದು ತಿಳಿದಿರಾ? ಆಗ ಮಾತ್ರ ತಂದೆತಾಯಿಗಳು ಒಪ್ಪುತ್ತಿದ್ದರೇನು?'

ಮೂಢೆ! ಸುಮ್ಮನೆ ನನ್ನನ್ನು ಪ್ರೀತಿಸಿ ಪ್ರಯೋಜನವಿಲ್ಲ. ನೀನು ಧನವಂತನ ಕುವರಿ. ಅಂತೆಯೇ ಸರ್ವ ಸುಖಗಳನನುಭವಿಸುತ್ತಿರುವಿ. ನನ್ನನ್ನು, ಈ ಜಿತೇಂದ್ರನನ್ನು ವರಿಸಿದರೆ ನಿನಗಾವ ಸುಖಗಳು ಲಭ್ಯವೆ?'

'ನಿಮ್ಮ ಹೊರತು ಬೇರೆಯವರಿಗೆ ಈ ಶಶಿಕಲೆಯು ತನ್ನ ಹೃದಯ ಮಂದಿರದಲ್ಲಿ ಸ್ಥಾನವನ್ನೀಯಳು. ಇದಕ್ಕೆ ವ್ಯತಿರಿಕ್ತವಾಗಿ ಸಂಭವಿಸುವುದಾದರೆ ನಾನು ಖಂಡಿತವಾಗಿಯೂ ಪ್ರಾಣಹತ್ಯೆ ಮಾಡಿಕೊಳ್ಳುವೆನು.'

*

ಹದಿನೆಂಟು ವರ್ಷದ ತರುಣನು ಜಿತೇಂದ್ರ. ಸುಂದರ ಹಾಗೂ ದೃಢಕಾಯನಾದ ದೇಹ. 'ಇಂಟರ್ ಮಿಡಿಯೆಟ್' ತನಕ ಸರಿಯಾಗಿ ವರ್ಷವರ್ಷವೂ ಉತ್ತೀರ್ಣನಾಗುತ್ತ ಬಂದಿದ್ದ. ಮತ್ತೆ ಆತನ ಮನಸ್ಸು ಆ ವರ್ಷ ಆಟ ಓಟಗಳ ಕಡೆಗೇ ತಿರುಗಿತು. ಅದರೊಂದಿಗೆ ಸ್ವರಾಜ್ಯ ಸಂಪಾದನೆಗೂ ಹೊರಟನು. ಹೀಗಾಗಿ ಪಾಠದಲ್ಲಿ ಆತನ ಕಳೆಗುಂದಿತು. ಇಂದು ಎರಡು ವರ್ಷಗಳಿಂದ 'ಇನ್‌ಟರ್'ನಲ್ಲಿಯೇ ಸ್ವರಾಜ್ಯ ಸಂಪಾದನೆ ಮಾಡುತ್ತಿದ್ದ. ಅಂತೂ ಉತ್ತೀರ್ಣನಾಗದೀತನಿಗೆ ಮಾವಂದಿರು ಹಣ ಕೊಡುವುದನ್ನು ನಿಲ್ಲಿಸಿದರು. ಅಂದಿನ ಆತನ ಸಹಾಯಕ ವೃಂದವು ಇಂದು ಕೃಷ್ಣ ಪಕ್ಷದ ಚಂದ್ರನ ಕಾಂತಿಯಂತೆ ಕಡಿಮೆಯಾಗತೊಡಗಿತು. ಆಗ ಜಿತೇಂದ್ರನ ಕಣ್ತೆರೆಯಿತು. ತನ್ನ ಪ್ರಾಣಸಖನಾದ ಸುಖದೇವನ ಹೊರತು ಮತ್ತಾರೂ ತನ್ನವರಿಲ್ಲವೆಂದರಿತನು, ಜಿತೇಂದ್ರನಿಗೆ ಕೆಟ್ಟ ಮೇಲೆ ಬುದ್ಧಿ ಬಂತು.

ಶಶಿಕಲೆ, ಹದಿನಾರು ವರ್ಷದ ನವತರುಣಿ. ರೂಪವತಿ, ಕಲಾಕೌಶಲ್ಯ ನಿಪುಣೆ. ಹೈಸ್ಕೂಲು ತರಗತಿಯಲ್ಲಿ ಓದುತ್ತಿದ್ದಳು. ಅವಳು ತನ್ನ ಹೃದಯವನ್ನು ಜಿತೇಂದ್ರನಿಗೆ ಅದೆಂದೋ ಅರ್ಪಿಸಿದ್ದಳು. ಜಿತೇಂದ್ರನು ಅಂತೆಯೇ ಆಕೆಯಲ್ಲಿ ಅನುರಾಗಪೂರಿತನಾಗಿದ್ದನು. ಆದರೆ ಅವಳ ತಂದೆಯು ತನ್ನ ಕುವರಿಯನ್ನು ಈಗಿನ ಜಿತೇಂದ್ರನಿಗೆ ಕೊಡಲು ಒಪ್ಪನು. 'ಬೇರೆಯವರನ್ನು ವರಿಸೆನು, ಅಲ್ಲ ಮುಖವೆತ್ತಿಯೂ ನೋಡೆನು' ಶಶಿಕಲೆ ಹೀಗೆಂದು ಮನದಲ್ಲಿಯೇ ಪ್ರತಿಜ್ಞೆ ತೊಟ್ಟಿದ್ದಳು.

*

ಕ್ಲಾರ್ಕ ಕೂನಿಯ ಕೆಲಸವಾದರೂ ದೊರಕುವುದೋ ನೋಡಬೇಕೆಂದು ಅಲೆದಾಡಿದನು ಜಿತೇಂದ್ರ. ಆದರೆ ಹೋದಲ್ಲೆಲ್ಲಾ ನಿರಾಶನಾಗಬೇಕಾಯಿತು. ಇತ್ತ ತಾಯಿ, ಸಹೋದರ, ಸಹೋದರಿಯರ ಗೋಳು; ಅತ್ತ ಆತನ ದುಸ್ಥಿತಿ. ಇನ್ನೊಂದೆಡೆ ಶಶಿಕಲೆಯು ಅಂಧಪ್ರೇಮ, ಅತ್ತ ಆಕೆಯ ತಂದೆಯ ಕಠಿಣ ಹೃದಯ. ಏನು ಮಾಡುವುದೆಂದು ತೋಚದೆ, ಅವನ ಮನಸ್ಸು ಬಿರುಗಾಳಿಯಲ್ಲಿ ಸಿಕ್ಕಿದ ತರಗೆಲೆಯಂತಿತ್ತು.

*

ಜಿತೇಂದ್ರನು ತನ್ನ ತಾಯಿಗೂ, ತನ್ನ ಹಿತೈಷಿಯಾದ ಶಶಿಕಲೆಗೂ ಪತ್ರಗಳನ್ನು ಬರೆದಿಟ್ಟು ಮನೆಯಿಂದ ಹೊರಬಂದನು; ಕೈಯಲ್ಲಿ ಒಂದು ಹಗ್ಗವನ್ನು ಹಿಡಿದುಕೊಂಡನು. ಅಮಾವಾಸ್ಯೆ, ಮಧ್ಯರಾತ್ರಿಯ ಸಮಯ. ಎಲ್ಲೆಲ್ಲಿಯೂ ಗಾಢಾಂಧಕಾರ, ಇಡೀ ಊರೇ ನಿದ್ರಿಸುವಂತಿತ್ತು. ಅಂತೆಯೇ ನಿಶ್ಶಬ್ದ; ದೂರದಲ್ಲಿ ಹಲಕೆಲವು ನಾಯಿಗಳು ಬೊಗಳುತ್ತಿದ್ದುವು. ಇಡೀ ಪ್ರಪಂಚವನ್ನೇ ನಿದ್ರಾದೇವಿಯು ತನ್ನ ಉದ್ದವಾದ ತೋಳುಗಳಿಂದ ಆಲಂಗಿಸಿದ್ದಳು. ಅವನು ಸದ್ದಿಲ್ಲದೆ ಹೊರಟು ಮನೆಯ ಹಿಂಬಾಗದ ತೋಟಕ್ಕೆ ಹೋಗಿ ನಾಲ್ಕು ಕಡೆಯೂ ನೋಡಿ ಹತ್ತಿರ ಮಾವಿನ ಮರದ ಕೊಂಬೆಗೆ ಹಗ್ಗವನ್ನು ಬಿಗಿದು, ಈ ಕ್ರೂರ ಸಮಾಜದ ಕರಾಳ ರಕ್ಕಸ ಕೈಯಿಂದ ತಪ್ಪುವರೆ ಸಿದ್ಧನಾಗಿ ಕುತ್ತಿಗೆಗೆ ಉರುಳು ಸುತ್ತಿದನು. ಅಕಸ್ಮಾತ್ ಹಿಂದಿನಿಂದ ಯಾರೋ ಹಿಡಿದು ಜಗ್ಗಿದಂತಾಯಿತು. ತನ್ನ ಗುಟ್ಟು ರಟ್ಟಾಯಿತೆಂದು ಜಿತೇಂದ್ರನು ಗಾಬರಿಯಿಂದ ಹಿಂದಿರುಗಿದನು. ನೋಡಿದನು, ತನ್ನ ಹಿತೈಷಿಯಾದ ಶಶಿಕಲೆ. ಪರಸ್ಪರಾವಲೋಕನದಿಂದಲೇ ಸ್ವಲ್ಪ ಹೊತ್ತು ಕಳೆದ ಆ ಪ್ರಣಯಿಗಳು. ಜಿತೇಂದ್ರನು ಉಸಿರ್ಗರೆದು 'ಕಲಾ! ಆ ಜನ್ಮ ಸುಖಸಂಪಾದನೆಗೋಸುಗ ಹೊರಟ ನನ್ನನ್ನೇತಕ್ಕೆ ತಡೆದೆ? ಎಂದನು.

'ನಿಮ್ಮ ಸುಖದಲ್ಲಿ ನನಗೊಂದು ಪಾಲಿರಲೆಂದು' ಶಶಿಕಲೆ ಹೇಳಿದಳು.

'ಹಾಗಾದರೆ ನಾನೇನನ್ನು ಮಾಡಬೇಕೆನ್ನುವೆ? ಇಂತು ಸುಮ್ಮನೆ ನಿರುದ್ಯೋಗಿಯಾಗಿ ಬೀದಿ ಬಸವನಂತೆ ತಿರುಗಲೇ? ಕೊಲೇಜಿಗೆ ಸೇರಲೆಂದರೆ ಹಣವಿಲ್ಲ.'

'ಇದಕ್ಕಾಗಿ ಇಷ್ಟು ಚಿಂತಿಸಬೇಕೆ? ನನ್ನೀ ಚಿನ್ನದ ಬಳೆಗಳನ್ನು ವಿಕ್ರಯಿಸಿ ಕಾಲೇಜಿಗೆ ಸೇರಿರಿ. ಚಿಂತಿಸಬೇಡಿರಿ. ಇಂಥಾ ನೀಚ ಕೃತ್ಯವು ನಿಮ್ಮಂತವರಿಗೆ ತಕ್ಕುದ್ದೇ?

'ಕಲಾ! ನೀನು ಬಹು ದಯಾಳು. ನೀನು ನನಗಾಗಿ ಆಪತ್ತಿಗೀಡಾಗಬೇಡ'. ಜಿತೇಂದ್ರನು ಬೇಡವೆಂದರೂ ಶಶಿಕಲೆ ಸಮ್ಮತಿಸಲಿಲ್ಲ.

*

ಮರುದಿನ ಮುಂಜಾನೆ ಜಿತೇಂದ್ರನ ಸುಳಿವಿಲ್ಲ. ಯಾರಿಗೂ ಎಲ್ಲಿ ಹೋದನೆಂದು ತಿಳಿಯದು. ಮೇಜಿನ ಮೇಲೆ ಪತ್ರ ಒಂದಿತ್ತು.

ಕಲಾ!

ಚಿಂತಿಸಬೇಡ. ಸಹಿಸಿಕೊ. ಮೂರು ವರ್ಷದೊಳಗೆ ಹಿಂದಿರುಗುವೆನು. ತಪ್ಪಿದೆನೆಂದರೆ ನನ್ನ ಆಶೆ ಬಿಡು.

ಇತಿ ನಿನ್ನ ಜಿತೇಂದ್ರ.

ಕಾಗದವನ್ನು ಯಾರಿಗೂ ತೋರಿಸದೆ ಶಶಿಕಲೆ ಬಚ್ಚಿಟ್ಟುಕೊಂಡಳು.

ಶಶಿಕಲೆಯನ್ನು ಶ್ರೀಮಂತನಾದ ಶಿವರಾಯನಿಗೆ ಕೊಡುವುದಾಗಿ ನಿಶ್ಚಯವಾಗಿದರು. ವರನು ಸರ್ವಾಂಗ ಸುಂದರನು, ಮೂರ್ಖ ಶಿರೋಮಣಿ, ಪ್ರಾಯ ಬಹಳವಾಗಿರಲಿಲ್ಲ. ನಾಲ್ವತ್ತಾಗಿರಬಹುದು. ಜಿತೇಂದ್ರನು ಮಾಯವಾದಂದಿನಿಂದ ಸರಿಯಾಗಿ ಆಹಾರ ತೆಗೆದುಕೊಂಡಿರಲಿಲ್ಲ ಶಶಿಕಲೆ. ಶಿವರಾಯನನ್ನು ವರಿಸೆನೆಂದು ಅವಳು ದೃಢವಾಗಿ ಹೇಳಿಬಿಟ್ಟಳು.

*

ಜಿತೇಂದ್ರನು ಮಾಯವಾಗಿ ಇಂದಿಗೆ ಮೂರು ವರ್ಷ. ಇನ್ನೂ ಅವನ ಸುಳಿವಿಲ್ಲ. ಕಲೆಯ ದುಃಖವನ್ನು ಹೇಳಲಸಾಧ್ಯ.

ಅಂದು ರಾಮರಾಯರಲ್ಲಿ ಮದುವೆ. ಅದರ ಸಂಭ್ರಮ. ಎಲ್ಲೆಲ್ಲೂ ಬ್ಯಾಂಡುಗಳ ಶಬ್ದ; ನೆಂಟರಿಷ್ಟರು ಕಿಕ್ಕಿರಿದು ನೆರೆದಿದ್ದರು. ಲಗ್ನ ಮುಹೂರ್ತವು ಬಂತು. ಆತುರದಿಂದ ವರನು ಬಂದು ಮಣೆಯ ಮೇಲೆ ಕುಳಿತುಕೊಂಡನು...ವಧುವೆಲ್ಲಿ?

*

ಕಲೆಯ ಪತ್ತೆ ಇಷ್ಟರ ತನಕ ಆಗಿರಲಿಲ್ಲ. ಕಾಣೆಯಾಗಿ ಅಂದಿಗೆ ಎಂಟು ದಿನ. ಅಂದು ರಾಮರಾಯರು ಪೇಪರನ್ನು ಮಗುಚುತ್ತಾ ಇದ್ದವರು ಒಟ್ಟನೆ ಎದ್ದು ಕುಳಿತರು. ಜಿತೇಂದ್ರನಾಥರು ಮತ್ತು ಶಶಿಕಲೆ ಇವರ ಭಾವಚಿತ್ರವು ಅದರಲ್ಲಿ ಬಂದಿತ್ತು. ಜಿತೇಂದ್ರನ ಈಗಿನ ಸಂಭ್ರಮವನ್ನು ನೋಡಿ ಅವರ ಆನಂದವನ್ನು ಹೇಳಿ ಪೂರೈಸದು. ಪ್ರಪಂಚವೇ ಆನಂದಮಯವಾಗಿ ತೋರಿತವರಿಗೆ. ಮರುದಿನ ಬೆಳಗ್ಗೆ ಮೈಲ್ ಬಂಡಿಯನ್ನು ಹತ್ತಿ ಹೊರಟರು ರಾಯರು ಬೆಂಗಳೂರಿಗೆ.

ಜಿತೇಂದ್ರನು ಅಂದು ತನ್ನ ಮನೆಯಿಂದ ಬೆಂಗಳೂರಿಗೆ ಓಡಿಹೋಗಿದ್ದನು. ಅಲ್ಲಿ ದೃಢಕಾಯನಾಗಿದುದರಿಂದ ಮಿಲಿಟರಿಯಲ್ಲಿ ಸೈನಿಕನಾಗಿ ಸೇರಿದನು. ಜಿತೇಂದ್ರನು ಸೇರಿ ಕೆಲವು ಸಮಯದಲ್ಲಿಯೇ ಯುದ್ಧ ಪ್ರಾರಂಭವಾಯಿತು. ಕೂಡಲೇ ಅವನ ಶೌರ್ಯಕ್ಕೆ ಅವನಿಗೆ ಕೇಪ್ಟನ್ ಪದವಿ ದೊರೆಯಿತು. ಅವನ ವಿಷಯ ಮಿತ್ರ ಸುಖದೇವನಿಗೆ ಮಾತ್ರ ಗೊತ್ತು. ಸುಖದೇವನು ಶಶಿಕಲೆಯ ಮದುವೆಯ ಕುರಿತು ಬರೆದಿದ್ದನು. ಆಗ ಜಿತೇಂದ್ರನಿಗೆ ತನ್ನ ಪ್ರತಿಜ್ಞೆಯ ನೆನಪು ಬಂದಿತು; ಅಂತೆಯೇ ಅವನು ಯಾರಿಗೂ ಗೊತ್ತಿಲ್ಲದೆ ಬಂದು ಸುಖದೇವನ ಸಹಾಯದಿಂದ ಶಶಿಕಲೆಯೊಡನೆ ಬೆಂಗಳೂರಿಗೆ ಹೋಗಿ ಅಲ್ಲಿ ಮಿಲಿಟರಿ ಪದ್ಧತಿಯಂತೆ ಪಾಣಿಗ್ರಹಣ ಮಾಡಿಕೊಂಡನು.

*

ಹುಣ್ಣಿಮೆಯ ದಿನ. ಚಂದ್ರನು ಮೂಡಿ ಕೆಲವು ಸಮಯ ದಾಟಿತ್ತು. ಜಿತೇಂದ್ರನಾಥನು ತನ್ನ ಬಂಗಲೆಯ ಹೂತೋಟದಲ್ಲಿ ಕುಳಿತುಕೊಂಡು ಹುಣ್ಣಿಮೆ ಚಂದ್ರನನ್ನು ನೋಡುತಿದ್ದನು. ಹಿಂದಿನಿಂದ ಬಂದು ಕಣ್ಣನ್ನು ಯಾರೋ ಒತ್ತಿದಂತಾಯಿತು. ಹಿಂತಿರುಗಿ ನೋಡಿದನು. ತನ್ನ ಕಣ್ಮಣಿರತ್ನವಾದ ಕಲೆಯು. ಕೈಯಲ್ಲಿ ಒಂದು ಹಳೆಯ ಹಗ್ಗ. 'ಇದರ ಗುರುತು ಇದೆಯೇ' ಎಂದು ಪ್ರಶ್ನೆ.

ಜಿತೇಂದ್ರನು ಮುಗುಳ್ನಕ್ಕನು. ಇದೆ; ಇದರಿಂದ ಒಬ್ಬ ಪಾಪಿಯು, ತನ್ನ ಪ್ರಾಣವನ್ನು ತೆಗೆಯಲು ತೊಡಗಿದಾಗ ಆತನನ್ನು ರಕ್ಷಿಸಿದ ದೇವಿ ನೀನಲ್ಲವೇ?'

'ಹೌದು! ಅದಕ್ಕೆ ಬಹುಮಾನ?'

'ಬಹುಮಾನ ಬೇಕೆ?' ಎಂದು ಕೈಹಿಡಿಯಲು ತಪ್ಪಿಸಿಕೊಂಡು ದೂರ ಸರಿದಳು; ತನ್ನ ಕೈಯಲ್ಲಿ ಇದ್ದ ಹಗ್ಗದಿಂದ ಹತ್ತಿರ ಬರಮಾಡಿಕೊಂಡು ಬಳಿಯಲ್ಲಿ ಕುಳ್ಳಿರಿಸಿದನು.

'ಕಲಾ!'

'ಏನು'

'ಅಂದಿನ ರಾತ್ರಿಯ ನೆನಪಿದೆಯೇ'

ಹೌದು'

'ಅಂದಿಗೂ ಇಂದಿಗೂ ಎಷ್ಟು ವ್ಯತ್ಯಾಸ

'ಹೌದು'

'ಅಂದು ಆತನು ಭಿಕಾರಿ, ಇಂದು ಈತನು ಕೆಪ್ಟನ್ ಜಿತೇಂದ್ರ ಅಲ್ಲವೆ?'

ಏನಾದರೂ 'ಇನ್‌ಟರ್ ಫೈಲ್ಡ್' ಅಲ್ಲವೆ? ಎನ್ನುವಷ್ಟರಲ್ಲಿ ಜಿತೇಂದ್ರನು ಶಶಿಕಲೆಯ ತುಟಿಗಳಿಂದ ಮಾತು ಹೊರಡದಂತೆ ಮಾಡಿಬಿಟ್ಟಿದ್ದನು.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

ಜಿಲ್ಲಾ ಸಮಾಚಾರಗಳು

ಡಾ। ಯು. ಪಿ. ಮಲ್ಯರ ಬಿಡುಗಡೆ

ಸತ್ಯಾಗ್ರಹಿ ಡಾ. ಯು. ಪಿ. ಮಲ್ಯರು ತಾ. ೧೬ರಂದು ತಿರುಚಿನಾಪಳ್ಳಿ ಸೆರೆಮನೆಯಿಂದ ಬಿಡುಗಡೆ ಹೊಂದಿ ತಾ. ೧೭ರಂದು ಮೈಲುಗಾಡಿಯಲ್ಲಿ ಮಂಗಳೂರಿಗೆ ತಲಪಿದರು. ಅನೇಕರು ಅಲ್ಲಿ ಅವರನ್ನು ಇದಿರ್ಗೊಂಡು, ಹೂಮಾಲೆ ಮೊದಲಾದುವುಗಳಿಂದ ಸತ್ಕರಿಸಿದರು.

ಸಂಜೆ ಮೈದಾನಿನಲ್ಲಿ ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಕೂಡಿದ ಸಭೆಯಲ್ಲಿ ಅವರಿಗೆ ಸಾರ್ವಜನಿಕ ಸ್ವಾಗತ ನೀಡಲಾಯಿತು. ಡಾ. ಮಲ್ಯರು ಸಮುಚಿತ ಉತ್ತರವಿತ್ತು ಸ್ವಾಗತದ ಬಗ್ಗೆ ಆಭಾರ ಹೇಳಿದರು.

ಶ್ರೀ ಎಂ. ಡಿ. ಅಧಿಕಾರಿಗಳ ಬಿಡುಗಡೆ

ದ. ಕ. ಜಿ. ಕಾಂ. ಕ. ಉಪಾಧ್ಯಕ್ಷ ಶ್ರೀ ಎಂ. ಡಿ. ಅಧಿಕಾರಿಗಳು ತಾರೀಕು ೧೬ರಂದು ಸತ್ಯಾಗ್ರಹಿ ಆಲಿಪುರಂ ಜೈಲಿನಿಂದ ಬಿಡುಗಡೆ ಹೊಂದಿ ತಾ. ೧೭ರಂದು ಸಂಜೆ ಮೈಲು ಗಾಡಿಯಲ್ಲಿ ಮಂಗಳೂರಿಗೆ ತಲಪಿದರು. ಕಾಂಗ್ರೆಸ್ ಪ್ರಮುಖರು ನಾಗರಿಕರನೇಕರು ಅವರಿಗೆ ಸ್ಟೇಶನಿಗೆ ಹೂಮಾಲೆ ಮೊದಲಾದುವುಗಳನ್ನರ್ಪಿಸಿ ಸ್ವಾಗತ ಸತ್ಕಾರ ಮಾಡಿದರು.

ಯರವಾಡ ವಿಶಾಪುರಗಳಿಂದ ಬಿಡುಗಡೆ ಹೊಂದಿದ ದ. ಕ. ಜಿಲ್ಲಾ ಸತ್ಯಾಗ್ರಹಿಗಳು

ನಮ್ಮ ಜಿಲ್ಲೆಯಲ್ಲಿ ಸತ್ಯಾಗ್ರಹ ಹೂಡಿ ಭಟ್ಕಳದಲ್ಲಿ ಬಂಧಿತರಾಗಿ, ಯರವಾಡ ಸೆರೆಮನೆಯಲ್ಲಿ 'ಸಿ' ಕ್ಲಾಸಿನ ಶಿಕ್ಷೆಗಳನ್ನು ಅನುಭವಿಸಿ ಶ್ರೀಗಳಾದ ನಾರಾಯಣ ಶೆಣೈಗಳು, ನರಸಿಂಹ ಕಾಮತ್, ಕುಟ್ಟಾಲ್ ಪದ್ಮನಾಭ ಪೈಗಳು ಮತ್ತು ಕೆ. ಶೀನ ಶೆಟ್ಟಿ, ಹಾಗೂ ವಿಶಾಪುರ ಸೆರೆಮನೆಯಲ್ಲಿ 'ಸಿ' ಕ್ಲಾಸಿನ ಶಿಕ್ಷೆ ಅನುಭವಿಸಿ ಶ್ರೀ ವಿಟ್ಠಲ ನಾರಾಯಣ ಆಚಾರ್ಯರೂ ತಾ. ೧೪ರಂದು ಅಲ್ಲಿಂದ ಬಿಡುಗಡೆ ಹೊಂದಿ ಬಂದಿರುವರು.

ಯರವಾಡ ಜೈಲಿನಿಂದ ಬಿಡುಗಡೆ ಹೊಂದಲಿರುವವರು

ಸಪ್ಟೆಂಬರ ತಾ. ೩ಕ್ಕೆ, ನರಸಿಂಗ ರಾವ್ ಅಂಕೋಲೆಕಾರ್, ತಾ. ೬ಕ್ಕೆ ಪಿ. ರಂಗನಾಥ ಪ್ರಭು, ಯಂ. ಕೆ. ರಾಮನ್, ವಿಷ್ಣು ಕಡಂಬಳಿತ್ತಾಯ, ತಾ. ೧೦ಕ್ಕೆ ಪಿ. ಪದ್ಮನಾಭ ಶೆಣೈ, ತಾ. ೧೬ಕ್ಕೆ ಮರೋಳಿ ರಾಮರಾಯ ಶಿಣೈ, ತಾ. ೨೫ಕ್ಕೆ ಬಿ. ವಿಠಲದಾಸ ಶೆಟ್ಟಿ, ಭಾಮಿ ಉಪೇಂದ್ರ ಶೆಣೈ, ಮತ್ತು ವಿ. ಶಿವರಾಮ ಶೆಟ್ಟಿ, ತಾ. ೨೯ಕ್ಕೆ ಐ. ಸುಬ್ರಾಯ ಪೈ.

ಒಕ್ಟೋಬರದಲ್ಲಿ, ೨೬ನೇ ತಾರೀಕಿಗೆ ಐ. ಕೆ. ವಿಶ್ವನಾಥ ಶೆಟ್ಟಿ, ಕೆ. ಟಿ. ಶಂಕರ ಮತ್ತು ಬುಡೋಳಿ ಸದಾನಂದ ಪೈ, ೩೧ಕ್ಕೆ ಬಿ. ಶಂಭು ಶೆಟ್ಟಿ, ಕೆ. ಮಹಾಬಲ ಶೆಟ್ಟಿ, ಪಿ. ಯಸ್. ಕೃಷ್ಣ ಭಟ್ಟ, ಕೆ. ವರದರಾಜ ಪ್ರಭು, ಬಿ. ವೆಂಕಟೇಶ ಭಟ್ಟ, ಕೆ. ವಾಮನ ಶರ್ಮ, ಕೆ. ರಾಮಣ್ಣ ಶೆಟ್ಟಿ, ಬಿ. ಸುಬ್ಬಣ್ಣ ಗುಪ್ತ, ವಿಶಾಪುರ ಜೈಲಿನಿಂದ:— ಸಪ್ಟೆಂಬರ ೨೫ಕ್ಕೆ, ಬಿ. ಪುಂಡಲೀಕ ಕಾಮತ್, ೨೫ಕ್ಕೆ ಎಸ್. ಕೇಶವ ಕುಡ್ವ.

ಮದ್ರಾಸ್ ವಿಶ್ವವಿದ್ಯಾನಿಲಯದ ಬಂಗಾರದ ಮೆಡಲುಗಳು

ಸರ್. ಪಿ. ಎಸ್. ಕೃಷ್ಣಮೂರ್ತಿಯವರ ಬಂಗಾರದ ಪದಕವು ಕನ್ನಡದ ಪ್ರಾವೀಣ್ಯತೆಗಾಗಿ ಶ್ರೀ ಎಂ. ರಾಮಕೃಷ್ಣ ಭಟ್, ವಿದ್ವಾನ್ ಇವರಿಗೂ, ಎಸ್. ಅನಂತ ಕೃಷ್ಣನ್ ಬಂಗಾರದ ಪದಕವು "ಮ್ಯಾಥಮೇಟಿಕ್ಸಿನ" ಪ್ರಾವೀಣ್ಯತೆಗಾಗಿ ಶ್ರೀ ಎಂ. ಕೆ. ಶಂಭಟ್ ಬಿ. ಎ. (ಆನರ್ಸ್) ಇವರಿಗೂ, ಆರ್. ಪಟ್ಟಾಭಿರಾಮನ್ ರೆಡ್ಡಿಯವರ ಮೆಡಲು "ಕೆಮಿಸ್ಟ್ರಿ" ಪ್ರಾವೀಣ್ಯತೆಗಾಗಿ ಶ್ರೀ ದತ್ತಾತ್ರೇಯ ರಾವ್, ಎಸ್. ಬಿ. ಎಸ್. ಸಿ. (ಆನರ್ಸ್) ಇವರಿಗೂ, ಕ್ರಾಫರ್ಡ್ ಬಹುಮಾನ, "ಜಿಯೊಲಜಿ" ಪ್ರಾವೀಣ್ಯತೆಗಾಗಿ ಶ್ರೀ ಕೆ. ವೆಂಕಟರಾಯ ಶೆಣೈ, ಬಿ. ಎಸ್. ಸಿ. (ಆನರ್ಸ್) ಇವರಿಗೂ, ಕೊಡೆಟ ಎಥಿರಾಜಮ್ಮ ಮೆಮೋರಿಯಲ್ ಮೆಡಲು, "ಹಿಸ್ಟರಿ ಮತ್ತು ಇಕೊನಾಮಿಕ್ಸ್"ಗಳ ಪ್ರಾವೀಣ್ಯತೆಗಾಗಿ ಶ್ರೀಮತಿ ಜೋಯಿಸ್ ಮಾರ್ಗರೆಟ್ ರಬೆಲ್ಲೋ ಬಿ. ಎ. (ಆನರ್ಸ್) ಇವರಿಗೂ ಮದ್ರಾಸ್ ವಿಶ್ವವಿದ್ಯಾನಿಲಯದ ಕಡೆಯಿಂದ ದತ್ತವಾಗಿದೆ.

ಬೆಂಚ್ ಮೆಜಿಸ್ಟ್ರೇಟರು

ಶ್ರೀಗಳಾದ ಉಳ್ಳಾಲ ಮಂಗೇಶ-ರಾವ್, ಪ. ಕರ್ಡ ರಾಮಣ್ಣ ಶೆಟ್ಟಿ, ಕೆ. ಪದ್ಮಪ್ಪ, ಮಿ। ಜೂಲಿಯಸ್ ಮತಾಯಸ್, ಮಿ। ವ್ರೋಲಿ ಮಹಮ್ಮದ್, ಶ್ರೀ ಐತಪ್ಪ ಭಂಡಾರಿ ಇವರು ಬೆಂಚ್ ಮ್ಯಾಜಿಸ್ಟ್ರೇಟರಾಗಿ ಆರಿಸಲ್ಪಟ್ಟಿದ್ದಾರೆ.

ಆಲೆಗೆ ೬ ವರ್ಷ ಕಠಿಣ ಶಿಕ್ಷೆ:— ಬಂದಾರು ಗ್ರಾಮದ ನಲ್ಕೆ ಚೆನ್ನ ಇವನ ತಮ್ಮ ಚೆನ್ನು ವ ಅಳಿಯ ಪುಟ್ಟ ಈ ಮೂವರು ತಾ. ೨-೮-೪೧ರಲ್ಲಿ ದೇವಪ್ಪ ಪೂಜಾರಿ ಎಂಬವನನ್ನು ಕಡಿದು ಕೊಂದರೆಂದು ತಕ್ಷೀರಿನ ಮೇಲೆ ಸೆಶ್ಶನಿಗೆ ಕಮಿಟ್ ಆಗಿತ್ತು. ೨ ವ ೩ನೇಯವರು ದೇವಪ್ಪನನ್ನು ಹಿಡಿದಿಟ್ಟು ೧ನೆಯವನು ಚೂರಿಯಿಂದ ತಿವಿಯಲು ದೇವಪ್ಪ ಮೃತಪಟ್ಟದಾಗಿ ಆಲೆರ ಪ್ರೋಸಿಕ್ಯೂಶನ ಕೇಸಾಗಿತ್ತು. ದೇವಪ್ಪ ವಗೈರರು ತನ್ನನ್ನು ಹೊಡೆಯಲು ತನ್ನ ಪ್ರಾಣರಕ್ಷಣೆಗಾಗಿ ತಾನು ಹೊಡೆದದ್ದೆಂದು ೧ನೆಯ ಆಲೆಯ ಹೇಳಿಕೆಯಾಗಿತ್ತು. ೨ ಮತ್ತು ೩ನೆಯವರು ತಕ್ಷೀರಿನ ಸಮಯ ಅಲ್ಲಿರಲಿಲ್ಲವಾಗಿ ಸಾಧಿಸಿದ್ದರು. ಎಲ್ಲಾ ಎಸೆಸರರೂ ಆಲೆರು ತಪ್ಪಿತಸ್ಥರೆಂದು ಅಭಿಪ್ರಾಯ ಪಟ್ಟಾಗ್ಯೂ ಮಂಗಳೂರು ಸೆಶನ್ ಜಡ್ಜರಾದ ಶ್ರೀ ಕೆ. ಎನ್. ಗೋಪಾಲನ್ ಇವರು ನಾಲ್ಕನೇ ಆಲೆಗೆ ೬ ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ೨ ಮತ್ತು ೩ನೆಯ ಆಲೆರನ್ನು ಬಿಡುಗಡೆ ಮಾಡಿದರು.

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗಿನ ವರ್ಧಂತಿ.— ಯು ಕಳೆದ ಆದಿತ್ಯವಾರ ಮಂಗಳೂರು, ಉಳ್ಳಾಲ ರಘುನಾಥಯ್ಯ ಸ್ಮಾರಕ ಭವನದಲ್ಲಿ ಜರಗಿತು. ಜನಾಬ್ ಎಫ್. ಎಚ್. ಒಡೆಯರು ಅಧ್ಯಕ್ಷತೆ ವಹಿಸಿದ್ದರು. ದಿವಂಗತ ಮುಂಡನವರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು. ಶ್ರೀ ಕೆ. ಈಶ್ವರ, ಎಂ. ಎಲ್. ಎ. ಇವರು ಸಂಘದ ವರದಿಯೋದಿದರು. ಶ್ರೀಗಳಾದ ಕೆ. ಕೃಷ್ಣ ರಾವ್, ಯು. ಲಕ್ಷ್ಮಣ, ತನಿಯಮುಖಾರಿ, ಟಿ. ಆನಂದ, ಕೆ. ಗುರುವ, ಟಿ. ಸರಸ, ಬಿ. ಕೊರಗ ಮೇಸ್ತ್ರಿ, ಗೋಪಾಲ ಸಾಲಿನ್ಸ, ಯು. ಗೋವಿಂದ ರಾವ್, ಕೆ. ಸುಮತಿ ಕುಮಾರಿ ಇವರ ಮಾತನಾಡಿದರು.

ನೇಮಕಗಳು

ಶ್ರೀ ಎಂ. ಶಂಭು ಹೆಗ್ಗಡೆಯವರು ಕಾರ್ಕಳದ ಲೋಕಲ್ ಫಂಡ್ ಆಸ್ಪತ್ರೆಯ, ಶ್ರೀ ಜೆ. ಸ್ಟ್ರಿಟೆಲೊ ಕಾಸರಗೋಡು ಸರಕಾರಿ ಆಸ್ಪತ್ರೆಯ, ಶ್ರೀ ಟಿ. ಕೆ. ನಾರಾಯಣನ್ ಉಡುಪಿಯ ಸರಕಾರಿ ಆಸ್ಪತ್ರೆಯ ಶ್ರೀ. ಲಿಯೊನಲ್ ಸಿಲ್ವೆಸ್ಟರರವರು ರಾಮೇಶ್ವರಂ ಸರಕಾರಿ ಆಸ್ಪತ್ರೆಯ ಡಾಕ್ಟರುಗಳಾಗಿರುವಂತೆ ನೇಮಿಸಲ್ಪಟ್ಟಿದ್ದಾರೆ.

ಕ್ಯಾಪ್ಟನ್ ಎಂ. ಜಿ. ಕಿಣಿ ಎಂ. ಸಿ. ಎಂ. ಡಿ. ಬಿ. ಎಸ್. ಎಫ್. ಆರ್. ಸಿ. ಎಸ್. ಇವರು ಮದ್ರಾಸ್ ಸ್ಟೇನ್ಲಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಾಗಿಯೂ, ಡಾ. ಜಿ. ಎಚ್. ಪದ್ಮನಾಭ ಪೈ ಎಂ. ಡಿ. ಅವರು ಮದ್ರಾಸಿನ ಸ್ಟಾನ್ಲಿ ಆಸ್ಪತ್ರೆಯ ಎರಡನೆ ಫಿಸಿಶಿಯನ್ ಮತ್ತು ಕ್ಲಿನಿಕಲ್ ಮೆಡಿಸಿನಗಳ ಪ್ರೊಫೆಸರರಾಗಿಯೂ ಬದಲಿಸಲ್ಪಡುವಂತೆ ನೇಮಿಸಲ್ಪಟ್ಟಿದ್ದಾರೆ.

ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿಗಳು

ಜಿಲ್ಲಾ ಬೋರ್ಡಿನಲ್ಲಿ ಇದುವರೆಗೆ ವಿದ್ಯಾಧಿಕಾರಿಗಳಾಗಿದ್ದ ಶ್ರೀ ಸಂಜೀವ ಭಟ್ ಎಂ. ಎ. ಎಲ್. ಟಿ. ಅವರು ತಮ್ಮ ಉದ್ಯೋಗದ ಅವಧಿ ಪೂರೈಸಿ ಆ ಉದ್ಯೋಗದಿಂದ ನಿವೃತ್ತರಾಗಿದ್ದಾರೆ.

ಶ್ರೀ ಎಚ್. ವಿ. ಕಾಮತರ ಪ್ರಯಾಣ

ಐ. ಸಿ. ಎಸ್. ಹುದ್ದೆ ರಾಜಿನಾಮೆಯಿತ್ತು ದೇಶ ಸೇವಾ ಕಾರ್ಯದಲ್ಲಿ ನಿರತರಾಗಿರುವ ನಮ್ಮ ಜಿಲ್ಲೆಯವರಾದ ಶ್ರೀ ಎಚ್. ವಿ. ಕಾಮತರು ಈಗ ಕೆಲಕಾಲ ಮಂಗಳೂರಲ್ಲಿದ್ದು ಕಳೆದ ವಾರ ಇಲ್ಲಿಂದ ಹೊರಟುಹೋಗಿರುವರು. ಅವರು ಇಲ್ಲಿಂದ ಪೊಂಡಿಚೇರಿ ತಿರುವಣ್ಣಾಮಲೆ ಮತ್ತು ವಾರ್ಧಾಗಳಿಗೆ ಹೋಗಲಿರುವರೆಂದು ತಿಳಿದಿದೆ.

ಉಡುಪಿ

ಸಂಸ್ಕೃತ ಕಾಲೇಜ್ ವರ್ಧಂತಿ ಉತ್ಸವವು ತಾ. ೯ರಲ್ಲು ಅದ್ಮಾರ್ ಮಠದ ಶ್ರೀ ಪಾದಂಗಳವರ ಅಧ್ಯಕ್ಷತೆಯಿಂದ ಜರಗಿತು. ಶಾಲಾ ಅಧ್ಯಾಪಕ ವಿದ್ಯಾರ್ಥಿಗಳಿಗೆ ವಸ್ತ್ರದಾನ ಅನ್ನದಾನಾದಿಗಳಿದ್ದುವು.

ಅಕ್ಕಿಯ ಬೆಲೆ—ಅಕ್ಕಿಗೆ ಏರಿದ ಬೆಲೆಯನ್ನಿಳಿಸಿರೆಂದು ನೇಕಾರ ಕೂಲಿಗಾರರು ತಾ. ೮ರಲ್ಲಿ ಸಬ್ ಕಲೆಕ್ಟರರ ಮುಂದೆ ತಾಲೂಕು ಕಛೇರಿಯ ವಠಾರದಲ್ಲಿ ಶಾಂತ ಪ್ರದರ್ಶನ ಮಾಡಿದರು.

ಕಾರ್ಕಳಕ್ಕೆ ವಿದ್ಯುಚ್ಛಕ್ತಿ:—ಕಾರ್ಕಳಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಉಡುಪಿ ಇಲೆಕ್ಟ್ರಿಕ್ ಸಪ್ಲ್ಯೆ ಕಂಪೆನಿಯವರು ಇಲ್ಲಿ ಕಟ್ಟಿಸಿದ ವಿದ್ಯುದುತ್ಪಾದನ ಗೃಹದ ಆರಂಭೋತ್ಸವ ಮತ್ತು ಬೆಳಕಿನ ಗುಂಡಿಯನ್ನು ಒತ್ತುವ ಸಮಾರಂಭವು ತಾ. ೧೭ರ ದಿನ ಜನಾಬ್ ಯಜ್. ಯಸ್.—ಹುಸ್ಸೇನ ಸಾಹೇಬರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಹಿಂದುಸ್ಥಾನ ಸ್ಕೌಟ ಎಸ್ಸೋಸಿಯೇಶನ:—ಇದರ ಕಾರ್ಕಳ ತಾಲೂಕು ಸಂಘದ ಸಭೆಯು ತಾ. ೧೭ರ ದಿನ ಶ್ರೀ. ಕೆ. ಕೃಷ್ಣ ಪೈಗಳವರ ಅಧ್ಯಕ್ಷತೆಯಲ್ಲಿ ಕೂಡಿತು. ತಾಲೂಕಿನ ಸ್ಕೌಟರುಗಳು ಪ್ರತಿ ತಿಂಗಳ ಮೊದಲನೆಯ ವಾರದಲ್ಲಿ ಹಿಂದಿನ ತಿಂಗಳ ಕಾರ್ಯವೃತ್ತಾಂತ ಮತ್ತು ಆ ತಿಂಗಳ ಕಾರ್ಯಕ್ರಮವನ್ನು ಸಂಘಕ್ಕೆ ಕಳುಹಿಸಬೇಕೆಂದು ಅವರನ್ನು ಕೇಳಿಕೊಳ್ಳುವ ಹಾಗೂ ಸಂಘದ ಸದಸ್ಯರನ್ನು ಕೂಡಿಸಲಿಕ್ಕೂ ಹಣ ಸಂಗ್ರಹಿಸಲಿಕ್ಕೂ ಒಂದು ಉಪಸಮಿತಿಯನ್ನು ಮಾಡುವ ನಿರ್ಣಯಗಳಾದುವು.

ವಿಟ್ಲ

ನಿತ್ಯಾನಂದ ಸಾರ್ವಜನಿಕ ವಾಚನಾಲಯ:—ವಿಟ್ಲದಲ್ಲಿ ಸ್ಥಳೀಯ ಕೆಲವು ಮಹನೀಯರ ಪ್ರೋತ್ಸಾಹದಿಂದ ಸಾರ್ವಜನಿಕರಿಗಾಗಿ ಧರ್ಮಾರ್ಥ ವಾಚನಾಲಯದ ತೆರೆಯುವಿಕೆಯು ಕಳೆದ ವಾರ ಶ್ರೀ. ಬಾಲಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಡಾ. ಓ. ವಿ. ಶರ್ಮರಿಂದ ಜರಗಿತು. ಶ್ರೀಗಳಾದ ವಿಠಬಾ ಭಂಡಾರ್ ಕಾರ್, ಚಂದು ಕುದುಪ್ಪ ವೈದ್ಯರ್ ಮತ್ತು ಭಾಸ್ಕರ ಪೈ ಮೊದಲಾದವರು ಮಾತಾಡಿದರು.

ಪೆರಡಾಲ

ಶ್ರೀ ಕೃಷ್ಣ ಜಯಂತಿ:—ಇಲ್ಲಿನ ಸಂಸ್ಕೃತ ಕಾಲೇಜಿನಲ್ಲಿ ಶ್ರೀ ಕೃಷ್ಣ ಜಯಂತಿಯು ತಾ. ೧೪ರಂದು ಜರಗಿತು. ಆ ಸಂದರ್ಭದಲ್ಲಿ ಶ್ರೀ ಎಂ. ವೆಂಕಟರಮಣ ಭಟ್ಟರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅದೇ ದಿನ ರಾತ್ರಿ ವಿದ್ಯಾರ್ಥಿಗಳು ಒಂದು ಕನ್ನಡ ನಾಟಕವನ್ನೂ ಒಂದು ಹಿಂದೀ ನಾಟಕವನ್ನೂ ಅಭಿನಯಿಸಿದರು.

ದಕ್ಷಿಣ ಕನ್ನಡದ ನೆರೆಹಾವಳಿಯ ವಿಷಯ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ವಿನಂತಿ

ದಕ್ಷಿಣ ಕನ್ನಡದಲ್ಲಿ ಉಂಟಾದ ನೆರೆ ಹಾವಳಿಯ ವಿಷಯವಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಒಂದು ವಿನಂತಿಯನ್ನು ಕಳುಹಿಸುತ್ತಾ ನೆರೆಯಿಂದನೊಂದವರಿಗೆ ಕನಿಷ್ಠ ಮಿತಿಯ ೫೦ ಸಾವಿರ ರೂಪಾಯಿಗಳ ಸಹಾಯವಾದರೂ ಬೇಕಾಗಬಹುದೆಂದೂ ಆದ್ದರಿಂದ ಜಿಲ್ಲೆಯ ಹೊರಗಿನ ಪ್ರಾಂತಗಳ ಜನರು ಉದಾರ ಬುದ್ಧಿಯಿಂದ ಸಹಾಯ ಮಾಡಬೇಕೆಂದೂ ಅದರಲ್ಲಿ ಬರೆದಿರುವರು.

ಶ್ರೀ ದಾಮೋದರ ಬಾಳಿಗರ ಪ್ರವಾಸ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದ ನೆರೆಯಿಂದ ನೊಂದವರ ಸಲುವಾಗಿ ಸಹಾಯ ಬೇಡುವರೆ ಮಹಾ ಜನ ಫ್ಲಡ್ ರಿಲೀಫ್ ಕಮಿಟಿಯಿಂದ ಅಧಿಕೃತರಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಂಚಾಲಕರಾದ ಶ್ರೀ ದಾಮೋದರ ಬಾಳಿಗರು ಮದ್ರಾಸು, ಬೊಂಬಾಯಿ, ಮೈಸೂರು ಪ್ರಾಂತಗಳಲ್ಲಿ ಸಂಚಾರಕ್ಕಾಗಿ ಇಲ್ಲಿಂದ ತಾ. ೧೯ರಂದು ಹೊರಟಿರುವರು.

[೧೦ನೆಯ ಪುಟವನ್ನು ನೋಡಿ]

ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮ ಸೂತ್ರವೆಂದು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸಿ

ದೇಹದ ಒಳಭಾಗವನ್ನು ನೈರ್ಮಲ್ಯವಾಗಿರಿಸಲು ಯಾವಾಗಲೂ ಅವುಗಳಿಗೆ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸಾಲ್ಟನ್ನು ಕೊಡಿರಿ. ಎಂಡ್ರೂಸ್ ಲಿವರ್ ಸೋಲ್ಟ್ ಹೊಟ್ಟೆಯನ್ನು ಹಗುರವಾಗಿಯೂ ಸ್ವಚ್ಛವಾಗಿಯೂ ಶುಚಿಗೊಳಿಸಿ ಮಲಬದ್ಧತೆ ಮತ್ತು ಇನ್ನಿತರ ಬಾಧೆಗಳಿಗೆ ಕಾರಣವಾದ ಮಲೀನತೆಯನ್ನು ಹೊರಗೆ ದಬ್ಬುತ್ತದೆ. ಮಕ್ಕಳಿಗೆ ಉತ್ತೇಜನವನ್ನೂ, ಬಲವನ್ನೂ ಕೊಟ್ಟು ಮುಖ ಮತ್ತು ಕಣ್ಣುಗಳ ಸೌಂದರ್ಯವನ್ನೂ ಹೆಚ್ಚಿಸಿ ಸುಖವನ್ನೀಯುವುದು.

ಅಂತರಂಗ ನೈರ್ಮಲ್ಯಕ್ಕೆ
ಯಾವಾಗಲೂ ಸೇವಿಸಿರಿ

ಎಂಡ್ರೂಸ್ ಲಿವರ್ ಸಾಲ್ಟ್

ANDREWS
LIVER SALT

ಆರೋಗ್ಯ ಪಾನೀಯ ಮತ್ತು ವಿರೇಚಕಔಷಧ ನೈರ್ಮಲ್ಯ ತಂಪುದಣಿವಾರಿಸುವುದು

ಸ ಸ್ಟೈ 11 ಅ
ದೊ ಸ್ಟೈ 1½ರೂ

ಸರ್ದಾರರ ಪಟೇಲರನ್ನು ಆಸ್ಪತ್ರೆಗೆ ಒಯ್ಯಲಾಗಿದೆ

ಚರ್ಚಿಲ್ ರೂಸವೆಲ್ಟ್ ಘೋಷಣೆಯ ವಿಚಾರ ಗಾಂಧಿಜಿ ಹೇಳಿಕೆ

ಆಣೆಯವರು ತಮ್ಮ ಪಕ್ಷದವರನ್ನೂ ವಿಚಾರಿಸಲಿಲ್ಲ!

ಸರಕಾರದ ನಿಯಂತ್ರಣ ಆಜ್ಞೆಯನ್ನು ಮುರಿದ ಬಗ್ಗೆ ನಿರ್ಬಂಧಿಸಿ ಯೆರವಾಡದಲ್ಲಿರಿಸಿದ ಕುಮಾರಿ ಕುರ್ಶಿದ್ ಬೆನ್ನರನ್ನು ಬಿಡುಗಡೆ ಮಾಡಿದರು. ನೆಹರೂ ಬಾವನಾದ ರಣಜಿತ್ ಪಂಡಿತರು ಡೇರಾಡೂನ್ ಜೈಲಿನಲ್ಲಿ ಅಸ್ವಸ್ಥಬಿದ್ದಿರುವುದರಿಂದ ಅವರನ್ನು ಉಪಚಾರಕ್ಕಾಗಿ ಆಸ್ಪತ್ರೆಗೊಯ್ದಿರುವರಂತೆ. ಜಮುನಾಲಾಲ ಬಜಾಜರ ಮಗ ರಾಮಕೃಷ್ಣ ಬಜಾಜರು ಪುನಃ ಸತ್ಯಾಗ್ರಹ ಮಾಡಿ ಬಂದಿತರಾದರು. ಸರದಾರರು ಕರುಳು ಬೇನೆಯ ಅಸ್ವಸ್ಥದಲ್ಲಿದ್ದು ಯೆರವಾಡದಿಂದ ಪೂನೆಯ ಸೆಸೂನ್ ಆಸ್ಪತ್ರೆಗೊಯ್ಯಲ್ಪಟ್ಟಿರುವರು. ಕವಿವರ್ಯ ಠಾಗೂರರ ಶ್ರಾದ್ಧ ದಿನವು ಅಖಿಲ ಭಾರತದಲ್ಲಿ ಆಚರಿಸಲ್ಪಟ್ಟಿತು. ವೈಸರಾಯರು ಮುಂಬಯಿಗೆ ತಲಪಿರುವರು. ಗುಜರಾಥಿನ ಸಾಬರ್ಮತಿ ಮಹಿ ನದಿಗಳಲ್ಲಿ ನೆರೆಬಂದು ಅನರ್ಥವಾಗಿದೆ. ಲಂಡನಿನ ಇಂಡಿಯಾ ಲೀಗಿನವರು ಸತ್ಯಾಗ್ರಹ ನಿಲ್ಲಿಸಬೇಕೆಂದು ಹೇಳಿದ್ದಾರೆ.

ಆಣೆಯವರ ವಿಚಾರ

ಶ್ರೀ. ಎಂ. ಎಸ್. ಆಣೆಯವರು ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದಲ್ಲಿ ಅಧಿಕಾರ ಸ್ವೀಕರಿಸುವ ಮೊದಲು ತಮ್ಮ ಪಕ್ಷದವರನ್ನೂ (ರಾಷ್ಟ್ರೀಯ ಪಕ್ಷ) ವಿಚಾರಿಸಲಿಲ್ಲವೆಂದು ತಿಳಿದಿದೆ.

ರವೀಂದ್ರರಿಗೆ ಕೈಶೇಕರ ಬಾಷ್ಪಾಂಜಲಿ

ಚೀನದ ದಳಪತಿ ಚಿಯಾಂಗ್ ಕೈಶೇಕರು ರವೀಂದ್ರರ ನಿಧನದ ಬಗ್ಗೆ ಅತ್ಯಂತ ದುಃಖವನ್ನು ವ್ಯಕ್ತಮಾಡಿ, ಪ್ರಾಚ್ಯ ದೇಶಗಳ ನಾಗರಿಕತೆಯ ಶಿಕ್ಷಕನು ಕಣ್ಮರೆಯಾದನು ಎಂದು ಹೇಳಿರುವರು.

ಕರ್ನಾಟಕದಲ್ಲಿ ಸಾದಿಕ್ ಅಲಿ ಪ್ರವಾಸ

ಅ. ಭಾ. ಕಾಂಗ್ರೆಸ್ ಕಮಿಟಿ ಕಚೇರಿಯ ಕಾರ್ಯದರ್ಶಿ ಶ್ರೀ ಸಾದಿಕ್ ಅಲಿಯವರು ಕರ್ನಾಟಕದಲ್ಲಿ ತಾ. ೨೬ರಿಂದ ಸಂಚಾರ ಪ್ರಾರಂಭಿಸುವಂತೆ!

ಅಮೇರಿಕದಲ್ಲಿ ಷಣ್ಮುಖಂ

ಅಮೇರಿಕಕ್ಕೆ ತೆರಳಿದ ಷಣ್ಮುಖಂ ಚೆಟ್ಟಿಯಾರರು ಅಲ್ಲಿ ಲಾರ್ಡ್ ಹೆಲಿಫಾಕ್ಸರೊಡನೆ ಮಾತುಕತೆಮಾಡಿದರಂತೆ.

ಚರ್ಚಿಲ್ ರೂಸ್‌ವೆಲ್ಟ್ ಯೋಜನೆ ಕುರಿತು ಗಾಂಧಿಜಿ ಅಭಿಪ್ರಾಯ

ಬ್ರಿಟನ್ ಅಮೇರಿಕಗಳು ಶಸ್ತ್ರಸನ್ಯಾಸ ಧೋರಣೆ ಕೈಕೊಂಡರೆ ಕೂಡಲೇ ನಾನು ಆ ಎರಡು ರಾಷ್ಟ್ರಗಳಿಗೆ ಅಭಿನಂದನೆ ಕಳುಹಿಸುವೆನೆಂದು ಗಾಂಧಿಜಿಯವರು ಚರ್ಚಿಲ್ ರೂಸ್‌ವೆಲ್ಟ್ ಘೋಷಣೆಯಲ್ಲಿದ್ದ ಶಸ್ತ್ರಸನ್ಯಾಸದ ವಿಷಯದಲ್ಲಿ ಅಭಿಪ್ರಾಯ ಇತ್ತರು

ಅರ್ಧಾಣೆ ನಿಕ್ಕಲ್ ನಾಣ್ಯಗಳು ಪ್ರಚಾರಕ್ಕೆ ಬರುವವು

ಅರ್ಧಾಣೆಯ ನಿಕ್ಕಲ್, ನಾಣ್ಯಗಳು ಬೇಗನೇ ಪ್ರಚಾರಕ್ಕೆ ಬರುವವೆಂದು ತಿಳಿದಿದೆ.

ಸರ್ದಾರ್ ಪಟೇಲರು

ಅನಾರೋಗ್ಯದಿಂದಿದ್ದು ಅವರನ್ನು ನೋಡಲು ಈಗ ಅವರ ಅತ್ಯಂತ ಆಪ್ತರಿಗೆ ಅನುಮತಿ ಕೊಡಲಾಗಿದೆಯಂತೆ.

ಹಿಂದೂಸ್ಥಾನದಲ್ಲಿ ಕಂದಾಯ ಕರ ಹೆಚ್ಚುವುದೆ?

ಕೇಂದ್ರ ಸರಕಾರದ ಖರ್ಚು ತಿಂಗಳಿಗೆ ಒಂದು ಕೋಟಿಯಂತೆ ಹೆಚ್ಚುವ ನಿಮಿತ್ತ ಭಾರತದಲ್ಲಿ ಈ ವರ್ಷ ಯುದ್ಧ ನಿಮಿತ್ತ ಕಂದಾಯ ಕರಗಳು ಹೆಚ್ಚಿಸಲ್ಪಡಲಾಗುವುದೇ ಎಂದು ಊಹಿಸಲಾಗಿದೆ

ಪೋಲೀಸ್ ಠಾಣ್ಯಾದ ಮೇಲೆ ಪುಂಡರ ಗುಂಡು

ಪೇಶಾವರದಲ್ಲಿ ಕೋಹತ್ ಜಿಲ್ಲೆಯ ಗಾಗಾರಿ ಎಂಬ ಪೋಲೀಸ್ ಠಾಣ್ಯದ ಮೇಲೆ ಪುಂಡರು ಗುಂಡು ಹಾರಿಸಿದರಾಗಿ ತಿಳಿದಿದೆ.

ಶಿಸ್ತು ಜಾರಿಮಾಡಲು ಜಿನ್ನರಿಗೆ ಹಕ್ಕಿಲ್ಲ

ಹಕ್ಕರು ಹೇಳುತ್ತಾರೆ.

ವೈಸರಾಯರ ರಾಷ್ಟ್ರೀಯ ರಕ್ಷಣಾ ಸಮಿತಿಯಲ್ಲಿ ಅಧಿಕಾರ ವಹಿಸಿದ ವಿಷಯ ಮುಸ್ಲಿಂ ಲೀಗಿನಿಂದ ಹೊರಗೆ ಹಾಕುವರೆ ನಿರ್ಧರಿಸಿದ್ದರೆ ಜಿನ್ನರು ಘಟನೆಗೆ ವಿರೋಧ ನಡೆದಂತಾಗುವುದೆಂದು ಫಜುಲುಲ್ ಹಕ್ಕರು ಹೇಳುತ್ತಾರೆ.

ಮುಸ್ಲಿಂ ಲೀಗು ಸಭೆ ಮುಂಬಯಿಯಲ್ಲಿ

ಮುಂಬಯಿಯಲ್ಲಿ ಕೂಡುವ ಮುಸ್ಲಿಂ ಲೀಗು ಸಭೆಯಲ್ಲಿ ಮುಸ್ಲಿಂ ಲೀಗಿನ ಅನುಮತಿ ಕೇಳದೆ ವೈಸರಾಯರು ಕೊಟ್ಟ ಅಧಿಕಾರ ವಹಿಸಿದ್ದಕ್ಕೆ ಸರ್ ಸಿಕಂದರ್ ಹಕ್ ಮೊದಲಾದವರ ಮೇಲೆ ಶಿಸ್ತು ಜಾರಿಮಾಡುವ ವಿಷಯ ಯೋಚಿಸುವದೆಂದು ಸುದ್ದಿ.

ಮುಂಬಯಿಯಲ್ಲಿ ವೈಸರಾಯ್

ವೈಸರಾಯರು ಮುಂಬಯಿ ಗವರ್ನರರೊಂದಿಗೆ ಶಸ್ತ್ರ ಕಾರಖಾನೆಗಳೇ ಮೊದಲಾದವುಗಳನ್ನು ಸಂದರ್ಶಿಸಿದರು. ಸೈನಿಕ ವಾಹನಾದಿಗಳನ್ನು ನೋಡಿದರು.

ಅಹಮದಾಬಾದಿನಲ್ಲಿ ನೆರೆ

ಇಲ್ಲಿ ನೆರೆಬಂದು ರೈಲ್ವೆ ಮಾರ್ಗವು ಕಟ್ಟಾಯಿತು ಟಪ್ಪಾಲು ಮೊದಲಾದವುಗಳು ಹೋಗುವ ವ್ಯವಸ್ಥೆಗೂ ತೊಂದರೆಯಾಗಿದೆ.

ಉಕ್ಕಿನ ನಿಯಂತ್ರಣ

ಉಕ್ಕು ಬೇಕಾದವರು ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ನಮೂನೆಯಲ್ಲಿ ಯಾವತ್ತೂ ಮಾಹಿತಿ ವಿವರಿಸಿ ಉಕ್ಕಿನ ಆಯಾತನಿಯಂತ್ರಣಾಧಿಕಾರಿಗಳಿಗೆ ಕಳುಹಿಸಬೇಕು ಎಂದು ಹಿಂದುಸ್ಥಾನ ಸರಕಾರದ ಪ್ರಕಟಣೆಯಿದೆ

ಠಾಗೂರ ದಿನಾಚರಣೆ

ಮಹಾತ್ಮರ ಸಂದೇಶದಂತೆ ತಾ. ೧೭ರಂದು ಠಾಗೂರರ ಶ್ರಾದ್ಧ ದಿನ ಎಲ್ಲಾ ಕಡೆಗಳಲ್ಲಿಯೂ ಭಾರತದಲ್ಲಿ ಠಾಗೂರ್ ದಿನಾಚರಣೆಯಾಯಿತು

ಖುರ್ಶಿದ್ ಬೆನ್ನರ ಬಿಡುಗಡೆ

ಬೊಂಬಾಯಿ ಪ್ರಾಂತವನ್ನು ಬಿಡಕೂಡದೆಂಬ ಆಜ್ಞೆಯನ್ನು ಮುರಿದು ವರ್ಧಾಕ್ಕೆ ತೆರಳುದ್ಯುಗಿಸಿದುದಕ್ಕಾಗಿ ಕಳೆದವಾರ ಸೆರೆಹಿಡಿದ ಕುಮಾರಿ ಖುರ್ಶಿದ್ ಬೆನ್ನರನ್ನು ಯೆರವಾಡದಿಂದ ಬಿಡುಗಡೆ ಮಾಡಿದರು

ಸಾದರ ಸ್ವೀಕಾರ

ಇಡ್ಯ ವಿದ್ಯಾದಾಯಿನಿ ಸ್ಕೂಲ್, ಸುರತ್ಕಲ್: ಇದರ ೨೪ನೆಯ ವಾರ್ಷಿಕೋತ್ಸವದ ವರದಿಯು ನಮ್ಮ ಹಸ್ತಗತವಾಗಿದೆ. ಈ ಶಾಲೆಯು ಶ್ರೀ. ಎಚ್. ದಾಮೋದರ ರಾಯರಂತಹ ವಿಚಕ್ಷಣ ಮುಖ್ಯಾಧ್ಯಾಪಕರ ಆಡಳಿತದಿಂದ ಕಳೆದ ೨೪ ವರ್ಷಗಳಿಂದ ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಬಹಳ ಪ್ರಾಮುಖ್ಯ ಸ್ಥಾನವನ್ನು ಪಡೆದಿದೆ ಶಾಲೆಯಲ್ಲಿ ಈ ವರ್ಷ ೨೭೮ ಬಾಲಕರೂ ೧೧೯ ಬಾಲಕಿಯರೂ ಇರುವರು ಇವರಲ್ಲಿ ಹತ್ತುಮಂದಿ ಹರಿಜನ ಬಾಲಕ ಬಾಲಕಿಯರಿರುವುದು ಸಂತೋಷದ ವಿಚಾರ. ಶಿಕ್ಷಣವು ಧರ್ಮಾರ್ಥವಾಗಿದೆ. ಸೆಕೆಂಡರಿಗ್ರೇಡ್, ಎಲ್‌ಟಿಗ್ರೇಡ್ ಉಪಾಧ್ಯಾಯರೂ, ನೇಯುವ ಮೊದಲಾದ ಶಿಕ್ಷಣದ ಉಪಾಧ್ಯಾಯರೂ ಒಟ್ಟು ೧೫ ಮಂದಿ ಇರುವರು. ಶಾಲೆಯು ೨೫ನೆಯ ವರ್ಷದ ರಜತೋತ್ಸವವನ್ನು ಆಚರಿಸುವುದಾಗಿ ತಿಳಿಯುತ್ತದೆ ಮಹಾಜನರು ಉದಾರ ಸಹಾಯ ಮಾಡಿ ಇಂತಹ ಆದರ್ಶ ಸಂಸ್ಥೆಯನ್ನು ಅಭಿವೃದ್ಧಿಗೊಳಿಸುವರೆಂದು ನಂಬುತ್ತೇವೆ.

ಪ್ರತಿಯೊಬ್ಬ ಓದುಗನು

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು
ರೂ. ೩॥ ಲಾಭ ಪ್ರತಿ ರೂ. ೧೦|-ಕ್ಕೆ

ಪೋಸ್ಟ್ ಆಫೀಸ್‌ನಲ್ಲಿ ಮಾರುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು ಆದರ್ಶವಾದ ಭದ್ರತೆಯುಳ್ಳವು, ಇವನ್ನು ಕಳವು ಮಾಡಲು ಸಾಧ್ಯವಿಲ್ಲ, ಇವು ಮೌಲ್ಯದಲ್ಲಿ ಕಮ್ಮಿಯಾಗುವದಿಲ್ಲ ಈಗಲೇ ಉಳಿಸಲು ಆರಂಭಿಸಿರಿ. ನೀವು ರೂ ೧೦/ನ್ನು ಕೊಡಲು ಸಾಧ್ಯವಿಲ್ಲದಿದ್ದರೆ ೪ ಆಣೆಯ, ೮ ಆಣೆಯ, ೧ ರೂ. ದ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಂಡು ಉಚಿತವಾಗಿ ಕೊಡುವ ಒಂದು ಕಾರ್ಡಿನ ಮೇಲೆ ಅಂಟಿಸಿರಿ. ನಿಮ್ಮಲ್ಲಿ ೧೦ ರೂ.ದ ಸ್ಟಾಂಪ್‌ಗಳಾದ ಕೂಡಲೇ ಒಂದು ಸರ್ಟಿಫಿಕೇಟಿಗೆ ಬದಲಿಸಿರಿ
ಪೋಸ್ಟ್ ಆಫೀಸ್ ಗುಮಾಸ್ತರು ಈ ಅರ್ಜಿಗಳನ್ನು ನಿಮಗೆ ಉಚಿತವಾಗಿ ಕೊಡುತ್ತಾರೆ.
K.N G.I. 36

ರಶ್ಯದಲ್ಲಿ ಜರ್ಮನರು ಮುಂದೊತ್ತುತ್ತಿದ್ದಾರೆ!

ರಶ್ಯನ್ ಸೈನ್ಯವು ಯುದ್ಧ ಮಾಡುತ್ತ ಹಿಂದೆಸರಿಯಿತು

ಇರಾನಿಗೆ ಹಲವು ಕಡೆಗಳ ಒತ್ತಾಯ

ಸತ್ತರೂ ಶರಣಾಗೆವೆನ್ನುವರು ಫಾಯಿಲೆಂಡಿನವರು

ರಶ್ಯನ್ ರಣಭೂಮಿಯುಲ್ಲಿ ಘೋರ ಕಾಳಗ ನಡೆಯುತ್ತಿದೆ. ರಶ್ಯನ್ ಸೈನವು ಲೆನಿನ್‌ಗ್ರಾಡ್‌ನ ನೈಋತ್ಯದಲ್ಲಿರುವ ಕಿಂಗೀಸೆಪ್ ಪಟ್ಟಣವನ್ನು ಜರ್ಮನರಿಗೆ ಬಿಟ್ಟುಕೊಟ್ಟಿವು. ಎಸ್ತೋನಿಯಾ ಗಡಿನಾಡಿನಲ್ಲಿ ಪೇಪಸ್ ಸರೋವರದ ಎರಡೂ ದಿಕ್ಕಿನಲ್ಲಿಯೂ ಜರ್ಮನ್ ದಂಡುಗಳು ಮುನ್ನುಗ್ಗುತ್ತಿವೆ ಜರ್ಮನ್ ಕಾಲ್ಬಲಗಳು ನೀಪರ್ ನದಿಯನ್ನು ಮುಟ್ಟಿ ಅಲ್ಲಿ ಬೀಡು ಬಿಟ್ಟಿರುವರು. ಎಸ್ತೋನಿಯದಿಂದ ಜರ್ಮನರು ಹೊಸ ಧಾಳಿ ಪ್ರಾರಂಭಿಸಿದ್ದಾರೆ. ರಶ್ಯನ್ ದಂಡುಗಳು ಜರ್ಮನರೊಡನೆ ಕಾಳಗವಾಡುತ್ತಾ ಹಿಂದೆ ಸರಿಯುತ್ತಿವೆ. ಸಂಪದ್ಯುಕ್ತವಾದ ಉಕ್ರೇನಿನ ಡಾನ್ ಕಣಿವೆಯನ್ನು ವಶಪಡಿಸಲು ಹಿಟ್ಲರನು ಯೋಚಿಸಿರುವನಂತೆ. ಹಲವು ಜರ್ಮನರ ಬಾಂಬುಗಳು ಮಾಸ್ಕೋದ ಮೇಲೆಯೂ ಬಿದ್ದಿದೆ.

ಚರ್ಚಿಲ್ ರೂಸ್‌ವೆಲ್ಟರ ಗುಪ್ತ ಭೇಟಿ

ಸ್ವಾತಂತ್ರ್ಯದ ವಿಷಯು ಘೋಷಣೆ

ಇದು ಎರಡನೆ ವರ್ಸೇಲಿಯಂತೆ

ಮೇಜರ್ ಅಟಲಿಯವರು ಭಾಷಣ ಮಾಡಿ ಅದರಲ್ಲಿ ಚರ್ಚಿಲ್ಲರೂ ಪ್ರೆಸಿಡೆಂಟ್ ರೂಸ್‌ವೆಲ್ಟರೂ ಅಟ್ಲಾಂಟಿಕ್ ಸಾಗರ ಮಧ್ಯದಲ್ಲಿ ಗುಪ್ತವಾಗಿ ಭೇಟಿಯಾದರೆಂದೂ, ಅಲ್ಲಿ ಬ್ರಿಟನ್–ಅಮೇರಿಕಗಳ ಶಾಂತಿ ಧ್ಯೇಯವನ್ನು ನಿರ್ಧರಿಸಿದರೆಂದೂ ಹೇಳಿ ಆ ಧ್ಯೇಯಗಳಲ್ಲಿನ ಎಂಟು ವಿಷಯಗಳನ್ನು ಪ್ರಾಮುಖ್ಯವಾಗಿ ತಿಳಿಸಿದ್ದಾರೆ. ೧) ತಾವು ದರ್ಪದಿಂದ ತಮ್ಮ ಸ್ಥಾನವನ್ನು ಬಲಗೊಳಿಸಲು ಯತ್ನಿಸುವುದಿಲ್ಲ ೨) ಜನತೆಯಲ್ಲಿ ಹೆಚ್ಚಿನವರ ಅಭಿಪ್ರಾಯಕ್ಕೆ ವಿರುದ್ಧವಾಗಿ ರಾಜ್ಯಗಳನ್ನು ಬದಲಾಯಿಸಿಕೊಳ್ಳುವುದಿಲ್ಲ ೩) ಸ್ವತಂತ್ರ ಅಧಿಕಾರ ಮತ್ತು ಪ್ರಜಾಪ್ರಭುತ್ವಗಳನ್ನು ಪುನಃ ಸ್ಥಾಪಿಸಿ, ಅವನ್ನು ಗೌರವಿಸುವುದು. ೪) ಪ್ರತಿಯೊಂದು ಜನಾಂಗಕ್ಕೂ ಈಗಿರುವ ಹಕ್ಕುಗಳು ಇರತಕ್ಕದು. ಪ್ರತಿಯೊಂದು ಜನಾಂಗಕ್ಕೂ ಕಚ್ಚಾಮಾಲುಗಳು ನಿರಾತಂಕವಾಗಿ ಇತರ ರಾಷ್ಟ್ರಗಳಿಂದ ದೊರೆಯುವಂತೆ ಮಾಡುವುದು, ವ್ಯಾಪಾರದಲ್ಲಿ ಎಲ್ಲ ಜನಾಂಗಗಳಿಗೂ ಸಮಾನ ಹಕ್ಕು ಇರತಕ್ಕದು, ೫) ಎಲ್ಲ ಜನಾಂಗಗಳೊಳಗೆ ಆರ್ಥಿಕ ವಿಷಯಗಳಲ್ಲಿ ಹೆಚ್ಚಿನ ಸಹಕಾರವನ್ನುಂಟುಮಾಡುವುದು; ೬) ಜನಾಂಗಗಳು ತಮ್ಮ ದೇಶಗಳ ಎಲ್ಲೆ ಕಟ್ಟನೊಳಗೆ ಸುರಕ್ಷಿತವಾಗಿಯೂ, ತಮ್ಮ ಸ್ವಾತಂತ್ರ್ಯಕ್ಕೆ ಭೀತಿಬಾರದಂತೆಯೂ ಬದುಕುವಂತೆ ಮಾಡುವುದು, ಮತ್ತು ಅವುಗಳು ಸುಖವಾಗಿರುವಂತೆ ಮಾಡುವುದು, ೭) ಸಮುದ್ರಗಳಲ್ಲಿ ಸಂಚರಿಸಲು ಸಕಲ ಜನಾಂಗಗಳಿಗೂ ಹಕ್ಕು ಇರತಕ್ಕದ್ದು, ೮) ಲೋಕದಲ್ಲಿ ಆಯುಧಗಳನ್ನು ಸಂಗ್ರಹಿಸುವುದನ್ನು ಕಡಿಮೆ ಮಾಡುವುದು ಅಗತ್ಯವಾದ್ದರಿಂದ ಶಸ್ತ್ರಸನ್ಯಾಸಕ್ಕೆ ಯತ್ನಿಸುವುದು ಎಲ್ಲಾ ಜನಾಂಗಗಳಿಗೂ ಸಮಾನವಾದ ಭದ್ರತೆಗೆ ಅನುವಾಗುವ ರೀತಿಯಲ್ಲಿ ಮತ್ತು ಶಾಂತಿಪ್ರಿಯ ಜನಾಂಗಗಳು ನಿರ್ಭೀತಿಯಿಂದಿರುವಂತೆ ಆಯುಧಗಳ ಹೊರೆಯಿಂದ ಅವುಗಳನ್ನು ರಕ್ಷಿಸುವುದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುವುದು

ಅಮೇರಿಕದ ಸೆನೆಟಿನ ಮಿಲಿಟರಿ ಎಪೇರ್ಸ್ ಕಮಿಟಿಯ ಚೇರ್‌ಮೇನರಾದ (ಡಿಮೋಕ್ರೆಟಿಕ್ ಪಕ್ಷದ) ರೈನೋಲ್ಡ್ಸರವರು ಮೇಲಿನ ವಿಷಯವಾಗಿ ತಮ್ಮ ಅಭಿಪ್ರಾಯ ಸೂಚಿಸುತ್ತಾ ಈ ತತ್ವಗಳನ್ನು ಹಿಂದುಸ್ಥಾನ, ರಶ್ಯಗಳಲ್ಲಿ ಏತಕ್ಕೆ ಜಾರಿಗೆ ತರಕೂಡದೆಂದು ಕೇಳಿದ್ದಾರೆ

ಚರ್ಚಿಲ್–ರೂಸ್‌ವೆಲ್ಟರ ಹೇಳಿಕೆಯು ಹಳೆಯ, ತ್ಯಾಜ್ಯ ಮಾಡಲ್ಪಟ್ಟ ತತ್ವಗಳನ್ನೊಳಗೊಂಡಿದೆಯೆ. ಇದೂ ವರ್ಸೈಲ್ಸ್ ಒಪ್ಪಂದವನ್ನು ಇದು ಹೋಲುತ್ತದೆಂದೂ, ಆದ್ದರಿಂದ ಇದನ್ನು ನಂಬಬಾರದೆಂದೂ ಜರ್ಮನರು ಅಭಿಪ್ರಾಯಪಟ್ಟಿದ್ದಾರೆ.

ರಶ್ಯಕ್ಕೆ ಜಪಾನ್ ಎಚ್ಚರಿಕೆ

ಬ್ರಿಟನ್ ಅಮೇರಿಕಗಳಿಂದ ಸಹಾಯ ಕೂಡದು

ಜಪಾನು ಮತ್ತು ಸೋವಿಯಟ್ ರಶ್ಯಗಳ ಸ್ನೇಹಸಂಬಂಧವು ಕೆಟ್ಟರೆ ಅದಕ್ಕೆ ರಶ್ಯವೇ ಜವಾಬ್ದಾರಿಯಾಗುವುದೆಂದು ಜಪಾನು ಪತ್ರಿಕೆಯೊಂದು ರಶ್ಯನ್ ಬ್ರಿಟನ್ ಅಮೇರಿಕಗಳ ಸಂಧಾನದ ಕುರಿತು ಎಚ್ಚರಿಸಿದೆ ರಶ್ಯಕ್ಕೆ ಯುದ್ಧಸಾಮಗ್ರಿಗಳುಹಿಸುವ ವಿಷಯವಾಗಿ ಈ ಮೂರು ರಾಷ್ಟ್ರಗಳು ಒಟ್ಟುಗೂಡಿ ಆಲೋಚಿಸುತ್ತಿವೆಯೆಂಬ ವಿಷಯದಲ್ಲಿ ಜಪಾನು ಸಿಟ್ಟಿಗೆದ್ದಿರುವುದು.

'ಜರ್ಮನಿಯ ಧಾಳಿಯಿಂದ ರಶ್ಯಕ್ಕೆ ಬಹಳ ತೊಂದರೆಯಾಗಿದೆಯೆಂದು ಒಂದು ವೇಳೆ ಒಪ್ಪಿದರೂ ರಶ್ಯವು ನಮ್ಮ ವಿರುದ್ಧ ರಾಷ್ಟ್ರಗಳಿಂದ ಸಹಾಯಪಡೆಯಲು ಯತ್ನಿಸುವುದು ತುಂಬಾ ಶೋಚನೀಯ, ಚೀನ ಯುದ್ಧವನ್ನು ಕೊನೆಗಾಣಿಸಲು ಜಪಾನು ಮಾಡುವ ಯತ್ನಕ್ಕೆ ಬ್ರಿಟನು ಅಮೇರಿಕಗಳೇ ಅತಂಕವುಗಳಾಗಿದ್ದುದು ರಶ್ಯ ಮರೆಯಬಾರದು" ಎಂದು ಅದು ಹೇಳುತ್ತದೆ.

ರಶ್ಯನರು ಹಿಂತಿರುಗುತ್ತಾರೆ

ಒಡೆಸ್ಸಾದ ಬಳಿ ಜರ್ಮನರು ಮುನ್ನುಗ್ಗುತ್ತಿದ್ದು ರಶ್ಯನರು ಹಿಂತಿರುಗುವರಂತೆ.

ಚೆಂಕಿಂಗ್ ಮೇಲೆ ಉಗ್ರ ಧಾಳಿ

೭ ದಿನಗಳ ವರೆಗೆ

ಒಂದೇ ಸಮನೆ ನಡೆಯಿತೆಂದು ಜಪಾನೀ ಪ್ರಚಾರ ಖಾತೆಯ ಹೇಳಿಕೆ ಜಪಾನರಿಗೂ ಈ ಧಾಳಿಯಲ್ಲಿ ತುಂಬಾ ಹಾನಿಯಾದೆಯಂತೆ

ಚರ್ಚಿಲ್ ದಂಪತಿಗಳು ಮುದ್ದಾಡಿದರು

ಚರ್ಚಿಲ್ಲರು ಲಂಡನಿಗೆ ಬಂದಿಳಿದ ಕೂಡಲೇ ಸ್ಟೇಶನಿನಲ್ಲಿ ಅವರ ಹೆಂಡತಿ ಓಡಿಹೋಗಿ ಚರ್ಚಿಲ್ಲರಿಗೆ ಮುದ್ದು ಕೊಟ್ಟರು ಕೆಲನಿಮಿಷ ಹಾಗೆಯೇ ಮುದ್ದಾಡುತ್ತಾ ಕೆಲಹೊತ್ತು ಒಟ್ಟಿಗೆ ನಿಂತಿದ್ದರು ಚರ್ಚಿಲ್ಲರು ರೂಸ್‌ವೆಲ್ಟರೊಡನೆ ಇತಿಹಾಸ ಪ್ರಸಿದ್ಧ ಬೇಟಿಯನ್ನು ತೀರಿಸಿ ಮರಳಿದ್ದರು

ರೂಸ್ವೆಲ್ಟರು ಮರಳಿ ಬಂದರು

ರೂಸ್ವೆಲ್ಟರು ತಮ್ಮ ವಿಹಾರ ಮುಗಿಸಿಕೊಂಡು ಮರಳಿ ಅಮೇರಿಕಕ್ಕೆ ಬಂದರೆಂದು ತಿಳಿದಿದೆ

ರೂಸ್ವೆಲ್ಟರು ಮತ್ತು ಚರ್ಚಿಲ್ಲರು ಗುಪ್ತವಾಗಿ ಒಟ್ಟಾಗಿ ಒಂದು ಸ್ವಾತಂತ್ರ್ಯ ಘೋಷಣೆ ಹೊರಡಿಸಿದರು ಅದರ ಕುರಿತು ಹಲವು ಟೀಕೆಗಳು ಬಂದಿವೆ

ಇರಾನಿಗೆ ಜರ್ಮನ್ ಬೆದರಿಕೆ

ಇರಾನಿನಲ್ಲಿರುವ ಜರ್ಮನರನ್ನು ಹೊರಹಾಕಬೇಕೆಂಬ ರಶ್ಯಬ್ರಿಟನುಗಳ ಒತ್ತಾಯಪಡಿಸುವ ವಿಷಯ ಜರ್ಮನಿಯು ಇರಾನನ್ನು ಬೆದರಿಸಿರುವುದು.

ನೀಪರ್ ನದಿಯವರೆಗೆ– ಜರ್ಮನ್ ಧಾಳಿ

ಲೆನಿನ್‌ಗ್ರಾಡ್ ಕಡೆಗೆ

ಲೆನಿನ್‌ಗ್ರಾಡಿನ ಕಡೆಗೆ ಜರ್ಮನರು ಜೋರಿನಿಂದ ಹೊರಡಿರುವರು ಪೇಪಸ್ ಸರೋವರದ ಹತ್ತಿರ ಜರ್ಮನ್ ಸೈನ್ಯಗಳು ಬಹಳ ದೂರ ನುಗ್ಗಿರುವವೆಂದು ಸುದ್ದಿ.

ರಶ್ಯನ್ ರಣಭೂಮಿಯಲ್ಲಿ ಎಲ್ಲಾ ಕಡೆಗೂ ಘೋರ ಕಾಳಗ ನಡೆಯುತ್ತದೆ. ಹಿಮಗಾಲದ ಒಳಗೆ ರಶ್ಯನ್ ಯುದ್ಧ ಮುಗಿಸಬೇಕೆಂದು ಹಿಟ್ಲರನ ಪ್ರತಿಜ್ಞೆಯಂತೆ

ಬೇರನ್ ಹಿರಾನುಮಾನ ಕೊಲೆಯ ಯತ್ನ

ಜಪಾನಿನ ಮುಖ್ಯ ಮಂತ್ರಿ ಬೇರನ್ ಹಿರಾನುಮಾ ಇವನ ಮೇಲೆ ಗುಂಡಿನ ಅತ್ಯಾಚಾರದ ಸಂಬಂಧ ವಿವರಗಳು ತಿಳಿದುಬರುತ್ತಿವೆ.

ರಶ್ಯಬ್ರಿಟನ್ ಒಪ್ಪಂದ

ಸಹಿಯಾಗಿರುವುದು ಸಾಮಾನುಗಳ ವಿನಿಮಯ ಮಾಡಲಾಗುವುದು. ರಶ್ಯಕ್ಕೆ ೧೦೦ ಲಕ್ಷ ಪೌಂಡುಗಳ ಸಾಲಕೊಡಲಾಗುವುದಂತೆ ಈ ಸಾಲದ ಅವಧಿ ಐದು ವರ್ಷವಿದ್ದು ಈ ಸಾಲ ಮುಗಿದ ಮೇಲೆ ಮತ್ತಷ್ಟು ಸಾಲ ಕೊಡಲಾಗುವುದಂತೆ

ಮೇಕ್ಲಿನಿನಿಂದ

ನೀವು ನಿಮ್ಮ ಹಲ್ಲನ್ನು ಶುಚಿಗೊಳಿಸಿದ್ದೀರಾ?

ಹೌದು! ನಿಜವಾಗಿಯೂ ನಾನು ಶುಚಿಗೊಳಿಸಿದ್ದೇನೆ

ಶುಭ್ರ ಹಲ್ಲುಗಳಿಗೆ, ಆರೋಗ್ಯಕರವಾದ ದವಡೆಗಳಿಗೆ, ತ್ವರಿತವಾದ ಹೊಸ ಬಾಯಿಗೆ ಮೆಕ್ಲೀನು ಉಪಯೋಗಿಸಬೇಕು. ಹಲ್ಲಿನ ಅಶುಚಿಯನ್ನು ಇದು ಕೂಡಲೇ ಇಲ್ಲದೆ ಮಾಡುವುದು ಹಲ್ಲನ್ನು ಬಿಳಿಮಾಡಿ ಒಣ್ಣಕೊಡುವುದು_ಖರ್ಚು ಇದಕ್ಕೆ ಕಡಿಮೆ ತಗಲುವುದು

ರವೀಂದ್ರರಿಗೆ ಬಾಷ್ಪಾಂಜಲಿ

[೭ನೆಯ ಪುಟದಿಂದ ಮುಂದುವರಿದುದು]

ಮಂಗಳೂರು ಮೈದಾನಿನಲ್ಲಿ ತಾ. ೧೭ರಂದು ಸಂಜೆ, ಬೃಹತ್ ಸಭೆಯೊಂದು ಠಾಗೂರರ ಶ್ರಾದ್ಧ ದಿನಾಚರಣೆಯ ನಿಮಿತ್ತ ಶ್ರೀ. ಎ. ಬಿ. ಶೆಟ್ರ ಅಧ್ಯಕ್ಷತೆಯಿಂದ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಕೂಡಿತು. ಆ ದಿನದ ಸಭೆಯಲ್ಲಿ ಶ್ರೀಗಳಾದ ಜನರಾಜ ಹೆಗ್ಡೆ, ಎಂ. ಎಲ್. ಎ. (ಕೇಂದ್ರ) ಕಯ್ಯಾರ ಕಿಞ್ಞಣ್ಣ ರೈ, ಡಾ. ಎಂ. ಆರ್. ಭಟ್, ವೆಂಕಟೇಶ ಪ್ರಭು ಇವರು ಕವಿ ಜೀವನ, ರಾಷ್ಟ್ರಪ್ರೇಮ, ಸಾಹಿತ್ಯ ಸಂಪತ್ತುಗಳ ವಿಷಯವಾಗಿ ಭಾಷಣಗಳನ್ನಿತ್ತು ಶಾಂತಿನಿಕೇತನದ ಏಳಿಗೆ ಉದಾರ ಸಹಾಯ ಮಾಡುವುದು ಭಾರತೀಯರ ಕರ್ತವ್ಯವೆಂದರು. ಸಂತಾಪಸೂಚಕ ನಿರ್ಣಯವೊಂದು ಮಂಜೂರಾಯಿತು.

ಬಿಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಶ್ರೀ ಎ. ಬಿ. ಶೆಟ್ರ ಅಧ್ಯಕ್ಷತೆಯಿಂದ ಥಿಯಾಸಫಿಕಲ್ ಸಂಘ, ಕಲ್ಚರಲ್ ಎಸೋಸಿಯೇಶನ್, ಮಿತ್ರ ಮಂಡಳಿಗಳ ಪರವಾಗಿ ಸಭೆಕೂಡಿ ದಿವಂಗತ ಠಾಗೂರರ ಸ್ಮಾರಕ ತಾರೀಕು ೧೬ರಂದು ಸಂಜೆ ಆಯಿತು. ಆ ದಿನ ಶ್ರೀಗಳಾದ ಟಿ. ನಾರಾಯಣ ಭಟ್ಟ, ಏಕಾಂಬರ ರಾವ್, ಡಾ. ಮುಕರ್ಜಿ, ಎಂ. ಎಸ್. ಮಾಧವರಾವ್ ಇವರ ಭಾಷಣವಾಗಿ ಶ್ರೀ. ಯಸ್. ಮುಕುಂದ ರಾವ್ ಇವರ ಠಾಗೂರ್ ಕವನವಾಚನವಿತ್ತು, ಅಧ್ಯಕ್ಷರು ವಿದ್ವತ್ಪೂರ್ಣ ಭಾಷಣಮಾಡಿದ ಮೇಲೆ ಶ್ರೀ. ಯಸ್. ಪಿ. ಭಟ್ಟರು ಕೃತಜ್ಞತೆ ಹೇಳಿದರು.

ಕುಂದಾಪುರದಲ್ಲಿ ಶ್ರೀ. ಠಾಗೂರರ ಸ್ಮಾರಕ ಸಭೆಯು ಶ್ರೀ. ಕೆ. ಗಣಪತಿ ಶರ್ಮರ ಅಧ್ಯಕ್ಷತೆಯಿಂದ ಜರಗಿ ಸಂತಾಪಸೂಚಕ ಠರಾವಾಯಿತು.

ಶ್ರೀ ಮೂಕಾಂಬಿಕಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟನಲ್ಲಿ ವಕೀಲ್ ಶ್ರೀ. ಪದ್ಮನಾಭ ಹೊಳ್ಳರ ಅಧ್ಯಕ್ಷತೆಯಿಂದ ಸಭೆ ಜರಗಿ ಠಾಗೂರರ ಭಾವಚಿತ್ರ ಅನಾವರಣವಾಯಿತು.

ಉಡುಪಿ ಮುನ್ಸಿಪಾಲಿಟಿಯಲ್ಲಿ ತಾ. ೧೩ರಂದು ಠಾಗೂರರ ಸಂತಾಪ ಸೂಚಕ ಠರಾವಾಯಿತು.

ಉಡುಪಿ ಜಿಮ್ನಾಸಿಯಮಿನಲ್ಲಿಯೂ ಠಾಗೂರರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು.

ನೀಲೇಶ್ವರ ರಾಜಾಸ್ ಹೈಸ್ಕೂಲಿನ ವಿದ್ಯಾರ್ಥಿಗಳ ಸಭೆಯು ಮುಖ್ಯೋಪಾಧ್ಯಾಯ ಶ್ರೀ. ಕೆ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿ ಠಾಗೂರರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು.

ಸಾರ್ವಜನಿಕ ಮಹಾಸಭೆಯೊಂದು ನೀಲೇಶ್ವರದಲ್ಲಿ ಮಹಾ ಕವಿ ಶ್ರೀ. ಕುಟ್ಟಮತ್ ಕುಂಞಕೃಷ್ಣ ಕುರುಪ್ಪುಗಳ ಅಧ್ಯಕ್ಷತೆಯಲ್ಲಿ ಸೇರಿ ಠಾಗೂರರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು.

ಕಾರ್ಕಳದ ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಸಭೆ ತಾ. ೧೭ರಂದು ಸೇರಿ ಠಾಗೂರರ ವಿಷಯ ಸಂತಾಪ ಸೂಚಕ ಠರಾವು ಮಾಡಿದರು.

ವಿಟ್ಲ ತಾ. ೧೭ರಂದು ವಿಟ್ಲದ ನಿತ್ಯಾನಂದ ವಾಚನಾಲಯದಲ್ಲಿ ಕವೀಂದ್ರ ರವೀಂದ್ರನಾಥ ಠಾಗೂರರ ನಿಧನದ ಸಂತಾಪ ಸೂಚನೆಗಾಗಿ ಶ್ರೀ ಎಸ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಕವಿಗಳ ಜೀವನ, ಗುಣಕಥನಗಳಾಗಿ ಸಂತಾಪ ಸೂಚಕ ಠರಾವಾಯಿತು.

ಮಂಗಲಪಾಡಿ ಬೋ. ಹಾ. ಎಲಿಮೆಂಟರಿ ಶಾಲೆಯ ತಾರ್ಕಿಕ ಮತ್ತು ಸಾಹಿತ್ಯ ಸಂಘದ ಸಭೆಯು ಶ್ರೀ. ಕೆ. ಎಸ್. ಪೈಗಳ ಅಧ್ಯಕ್ಷತೆಯಲ್ಲಿ ಸೇರಿ ರವೀಂದ್ರರ ಜೀವನಚರಿತ್ರೆಯನ್ನು ವಿವರಿಸಿದ ನಂತರ ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂಬ ಠರಾವು ಮಂಜೂರಾಯಿತು.

ಮಹಾಜನರಲ್ಲಿ ವಿನಂತಿ

ವಿಶ್ವಕವಿ ರವೀಂದ್ರನಾಥ ಠಾಗೋರರ ಪವಿತ್ರ ಸ್ಮರಣಾರ್ಥ ಅವರ ಪ್ರೀತಿಯ ಸಂಸ್ಥೆಗಳಾದ ಶಾಂತಿ ನಿಕೇತನ ಮತ್ತು ಶ್ರೀನಿಕೇತನಗಳ ಉನ್ನತಿಗಾಗಿ ಭಾರತೀಯರೆಲ್ಲರೂ ಸಾಧ್ಯವಾದ ಮಟ್ಟಿಗೆ ಸಹಾಯವನ್ನೀಯಬೇಕೆಂದು ಮಹಾತ್ಮಾಜಿಯವರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ. ಈ ಸಂಬಂಧದಲ್ಲಿ ಕಾಂಗ್ರೆಸ್ ವತಿಯಿಂದ ಮಂಗಳೂರಲ್ಲಿ ತಾ. ೧೭ರಂದು ಶ್ರೀ. ಎ. ಬಿ. ಶೆಟ್ರ ಯಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಕೂಡಿದ ಸಾರ್ವಜನಿಕ ಸಭೆಯಲ್ಲಿ ನಿರ್ಣಯಿಸಿದಂತೆ, "ಠಾಗೂರ್ ಸ್ಮಾರಕ" ನಿಧಿಗೆ ನಮ್ಮ ಜಿಲ್ಲೆಯಿಂದ ಸಾಧ್ಯವಾದಷ್ಟು ಧನಸಹಾಯ ಕಳುಹಿಸಿಕೊಡಬೇಕಾಗಿದೆ ಸಹಾಯವನ್ನು ಕಾಂಗ್ರೆಸ್ ಕಮಿಟಿಯ ಮೂಲಕ ಕಳುಹಿಸುವ ಏರ್ಪಾಡು ಮಾಡಿರುತ್ತದೆ ಆದುದರಿಂದ ಸರ್ವರೂ ಠಾಗೂರರ ಸ್ಮರಣಾರ್ಥವಾಗಿ ಅವರ ಪ್ರೀತಿಯ ಸಂಸ್ಥೆಗಳ ಉನ್ನತಿಗಾಗಿ ಉದಾರ ಸಹಾಯ ಕಳುಹಿಸಬೇಕೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿನಂತಿಯಿದೆ.

ಠಾಗೂರ್ ನಿಧಿ

ಶ್ರೀ. ಎ. ಬಿ ಶೆಟ್ಟಿ, ರೂ. ೫ ಶ್ರೀ. ಕೊಂಬಾಡಿ ಕೇಶವ ಶೆಣೈ ರೂ ೫, ಶ್ರೀ. ಬಿ., ದಾಮೋದರ ಬಾಳಿಗ ರೂ ೫

(ಮುಂದುವರಿಯುವುದು)

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಧನಸಹಾಯ

ಬೆಂಗ್ರೆ ಮೊಗವೀರ ಮಹಾಜನ ಸಭೆ ರೂ ೧೫, ಸಿ ಪಿ ಸಿ ಮೂಲಕ ರೂ ೨೦ ೧೧-೦, ಪೀಪ್ಲ್ಸ್ ಇನ್ಶೂರೆನ್ಸ್ ರೂ ೧೦೦, [ಶ್ರೀಮತಿ ಕೃಷ್ಣಾಬಾಯಿ ಪಂಜೀಕರರು (ಸೆರೆಮನೆಯಲ್ಲಿರುವರು) ರೂ ೫ನ್ನು ಕೊಟ್ಟಿರುವರೆಂದು ಧಾರವಾಡದಿಂದ ತಿಳಿದಿದೆ]

ಮಹಾಜನ ಫ್ಲಡ್ ರಿಲೀಫ್ ಕಮಿಟಿ
ಗಂಜಿಯ ಯೋಜನೆ ರದ್ದಾಗಿ ಕೆಲಸ ಕೊಡುವ ನಿರ್ಧಾರ

ದ. ಕ. ಜಿಲ್ಲಾ ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಮಹಾಸಭೆಯು ತಾ. ೧೭ರಲ್ಲು ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಕಟ್ಟಡದಲ್ಲಿ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಿಂದ ಕೂಡಿತ್ತು. ಕಯ್ಯೂರು, ವಿಟ್ಲ, ಕುಂಬಳೆ ಮತ್ತು ವೇಣೂರು ಈ ಕೇಂದ್ರಗಳಿಂದ ಬಂದ, ಈ ಮೊದಲು ಮಹಾಸಭೆಯಲ್ಲಿ ಇತ್ಯರ್ಥಸಿದ್ಧ ಒಪ್ಪೊತ್ತಿನ ಗಂಜಿಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವರೆ ಇದ್ದುವ ಅನಾನುಕೂಲತೆಗಳ ವಿಷಯದ ವರದಿಗಳನ್ನು ಓದಿ ಚರ್ಚಿಸಲಾಯಿತು. ಅಧ್ಯಕ್ಷರು ತಾವು ಸಂದರ್ಶಿಸಿ ಬಂದ ಪೆರಡಾಲ, ಬದಿಯಡ್ಕ, ವಿಟ್ಲ ಮೊದಲಾದ ಕೇಂದ್ರಗಳಲ್ಲಿನ ತಮ್ಮ ಸ್ವಾನುಭವವನ್ನೂ ಕಮಿಟಿಯ ಮುಂದಿಟ್ಟರು. ಒಪ್ಪೊತ್ತಿನ ಗಂಜಿಯ ಯೋಜನೆಯ ವಿಷಯವು ಈಗ ಅಗತ್ಯವಿಲ್ಲವೆಂದು ಅಭಿಪ್ರಾಯಪಡಲಾಯಿತು. ಆದರೆ ನೆರೆಯ ಸಂಬಂಧ ನಿರ್ಗತಿಕರಾಗಿ, ಇನ್ನೂ ಕೆಲಸವಿಲ್ಲದೆ ಇರುವ ಜನರಿಗೆ ಕೆಲಸಕೊಟ್ಟು ಪೋಷಿಸುವುದು ಅಗತ್ಯವೆಂದು ಕಮಿಟಿಯವರು ಅಭಿಪ್ರಾಯಪಟ್ಟರು. ಅದರ ಬಗ್ಗೆ, ಸಾರ್ವಜನಿಕ ಕಾಲುದಾರಿಗಳನ್ನು ಮತ್ತು ಮಾರ್ಗಗಳನ್ನು, ದುರುಸ್ತಿ ಅಥವಾ ಹೊಸದಾಗಿ ರಚಿಸುವ ಸಿಪಾರಸನ್ನು ಕೈಕೊಳ್ಳುವುದೆಂದಾಯಿತು ಅದಕ್ಕೆ ಅಗತ್ಯವುಳ್ಳ ಸಲಕರಣೆಗಳನ್ನೂ ಆಯಾಯ ಹಳ್ಳಿಗರಿಂದಲೇ ಸಹಾಯಹೊಂದಿ, ಮತ್ತು ಅತ್ಯಧಿಕ ಸಹಾಯಬೇಕಾದಲ್ಲಿ ಈ ಕಮಿಟಿಯವರು ಅಂಥಾ ಕೆಲಸಗಳನ್ನು ಕೈಕೊಳ್ಳಬೇಕಾಗಿಯೂ, ಮೇಲೆ ಹೇಳಿದ ರೀತಿಯಲ್ಲಿ ನೆರೆಯಿಂದ ನಿರ್ಗತಿಕರಾದವರಿಗೆ ಮಾತ್ರ ಅಂಥಾ ಕೆಲಸಗಳನ್ನು ಕೊಡುವುದೆಂದೂ, ಈ ಯೋಜನೆಗೆ ಮಾತ್ರ ಈಗ ಕಮಿಟಿಯ ವಶವಿರುವ ಮತ್ತು ಮುಂದೆ ವಸೂಲಾಗಲಿರುವ ಐವೇಜನ್ನು ಉಪಯೋಗಿಸಬೇಕಾಗಿಯೂ ನಿರ್ಣಯಿಸಲಾಯಿತು.

ಕಮಿಟಿಯ ಟ್ರೆಜರರ್ ಶ್ರೀ ವೆಂಕಟೇಶ ಪೈಗಳಿಗೆ ಮಹಾಜನ ಕಮಿಟಿ ಮುಖಾಂತರ ಖರ್ಚು ಮಾಡಬೇಕಾಗಿ ಕಳುಹಿಸಲಾದ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯಿಂದ ಬಂದ ರೂ ೫೦೦ನ್ನು ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಸಲಹೆಯಂತೆ, ನೆರೆಯಿಂದ ಸಂಕಷ್ಟ ಹೊಂದಿದ ಜನರ ಔಷಧೋಪಚಾರ ಮತ್ತು ಬಟ್ಟೆಬರೆಗಳಿಗೆ ವೆಚ್ಚ ಮಾಡಬೇಕಾಗಿಯೂ ನಿರ್ಣಯಿಸಲಾಯಿತು.

ದಿ ವಿದ್ಯಾದಾಯನಿ ಸಭಾ ಮುಂಬಯಿ

ದಿ ವಿದ್ಯಾದಾಯಿನಿ ಸಭೆಯು ಬಿಲ್ಲವ ಸಮಾಜ ಸೇವೆಗೋಸ್ಕರ ೧೯೩೦ರಲ್ಲು ಸ್ಥಾಪಿಸಲ್ಪಟ್ಟಿರುತ್ತದೆ. ಅಲ್ಲದೆ ಈ ವರೆಗೆ ಈ ಸಮಾಜ ಸೇವೆಯನ್ನು ಸಾಗಿಸಿಕೊಂಡು ಬಂದಿರುತ್ತದೆ. ಸಮಾಜೋದ್ಧಾರದ ಸಲುವಾಗಿ ಒಂದು ಧರ್ಮಾರ್ಥ ಪುಸ್ತಕಾಲಯ ಮತ್ತು ವಾಚನಾಲಯವನ್ನು ನಡಸಿಕೊಂಡುಬರುತ್ತದೆ ಕನ್ನಡ ಭಾಷಾ ಪ್ರೇಮಿಗಳು ಸದ್ರೀ ಪುಸ್ತಕಾಲಯ ಮತ್ತು ವಾಚನಾಲಯಕ್ಕೆ, ಪುಸ್ತಕ ವರ್ತಮಾನ ಪತ್ರಿಕೆ ಯಾ ಹಣ ಇತ್ಯಾದಿ ಸಹಾಯವನ್ನು ಕೊಟ್ಟು, ಈ ಒಂದು ಸಮಾಜ ಸೇವೆಯಲ್ಲಿ ತಾವೆಲ್ಲರೂ ಸಹಕರಿಸುವಂತೆ ಅತೀ ಆದಾರದಿಂದ ಬೇಡುತ್ತೇವೆ ಎಂದು. ದಿ ವಿದ್ಯಾದಾಯನಿ ಸಭಾ, 31 ರಘುನಾಥ ದಾದಾ ಸ್ಟ್ರೀಟ್, 14 ಫ್ಲೋರ್, ಫೋರ್ಟ್ ಬೊಂಬಾಯಿ, ಇದರ ಕಾರ್ಯದರ್ಶಿಯವರು ತಿಳಿಸುತ್ತಾರೆ.

ರೈಲುಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3 25 ಸಾಯಂ	6 50 ಸಾಯಂ.
ಕಣ್ಣನ್ನೂರು ವರೆಗೆ	5 52 ಸಾಯಂ.	9 40 ಪೂರ್ವಾಹ್ನ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ, 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ—ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer:— **Dr. D. N. JASANI**, Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಉಗ್ರ ತಪೋಜೀವನದಲ್ಲಿ ಅರವಿಂದರ ಸಾಧನೆಯೇನು?

ಮಹರ್ಷಿ ಅರವಿಂದಘೋಷರ ಸಾಹಸ ರಮ್ಯ ಜೀವನ



ಆಗಸ್ಟ್ ಹದಿನೈದು ಆಧುನಿಕ ಭಾರತದ ಇತಿಹಾಸದಲ್ಲಿ ಸ್ಮರಣೀಯವಾದೊಂದು ದಿನ; ಅದು ಭಾರತದ ಯುಗಪುರುಷರಲ್ಲೊಬ್ಬನು ಜನ್ಮವೆತ್ತಿದ ದಿನ; ಜಗತ್ತಿನಲ್ಲಿಯೇ ಪ್ರಖ್ಯಾತನಾದ ಮೇಧಾವೀ ವಿಚಾರವಂತನು, ಮಹಾಯೋಗಿ ಅರವಿಂದಘೋಷರು ಹುಟ್ಟಿದ ಪುಣ್ಯ ದಿನ. ಭರತ ಭೂಮಿಯ ಕೀರ್ತಿಯನ್ನು ಒಂದೊಂದು ವಿಧದಿಂದ, ಎತ್ತಿ ಹಿಡಿದು ಮೆರೆಸಿದ ಮಹನೀಯರು ಅನೇಕರಿದ್ದರೂ ರಾಜಕೀಯದಿಂದ, ಸಮಾಜಸೇವೆಯಿಂದ, ಧಾರ್ಮಿಕ ಕಾರ್ಯದಿಂದ ಹೀಗೆ ಸರ್ವತೋಮುಖವಾಗಿ ದುಡಿದು ಮಾತೃ ಭೂಮಿಯ ಘನತೆಯನ್ನು ಹೆಚ್ಚಿಸಿದವರು ಬಹಳ ವಿರಳ; ಅಂತಹ ವಿರಳ ಮಹಾತ್ಮರಲ್ಲಿ ಮಹರ್ಷಿ ಅರವಿಂದ ಘೋಷರು ಒಬ್ಬರಾಗಿದ್ದಾರೆ.

ಭರತ ಭೂಮಿಯು ಆಧ್ಯಾತ್ಮಿಕ ಮಹಾಪುರುಷರ ಹುಟ್ಟುನಾಡು; ಇಲ್ಲಿನ ರಾಜಕೀಯವಾದರೂ ಆಧ್ಯಾತ್ಮಿಕತೆಯನ್ನು ಬಿಟ್ಟುಹೋಗುವುದಿಲ್ಲ. ಹಲವು ಮಂದಿ ರಾಜಕೀಯ ಮುಖಂಡರು, ಕೊನೆಗೆ ಅಧ್ಯಾತ್ಮದ ಕಡೆಗೇ ಒಲಿಯುತ್ತಾರೆ ಅಂತಹ ಅಪೂರ್ವ ವ್ಯಕ್ತಿಗಳಲ್ಲಿ ಅರವಿಂದರೊಬ್ಬರು.

ಅಪೂರ್ವ ಸಂದರ್ಶನ

ವಿದೇಶದಲ್ಲಿ ವಿಶೇಷ ವಿದ್ಯಾಭ್ಯಾಸವನ್ನು ಪಡೆದು, ಸ್ವದೇಶದಲ್ಲಿ ಉನ್ನತ ಅಧಿಕಾರಕ್ಕೇರಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಕಡೆಗೆ ಜಗತ್ತಿನ ಸಂಪರ್ಕವನ್ನೇ ತೊರೆದುಬಿಟ್ಟು ಅಧ್ಯಾತ್ಮದ ಆಳವನ್ನು ಹುಡುಕಲು ಅವರು ಹೋದರು. ಈಗ ಪಾಂಡಿಚೇರಿಯ ಪುಣ್ಯಾಶ್ರಮದಲ್ಲಿ ಯೋಗ ನಿರತರಾಗಿದ್ದಾರೆ.

ಅವರ ದರ್ಶನವು ಅವರ ಜನ್ಮದಿನದಂದು ದೊರಕುವುದು. ಅವರ ದರ್ಶನಾಕಾಂಕ್ಷಿಗಳಾಗಿ ರಾಜವಂಶದವರು, ಉನ್ನತ ಪದವೀಧರರು, ಅಧಿಕಾರೀ ವರ್ಗದವರು, ರಾಜಕೀಯ ಮುಂದಾಳುಗಳು, ಕವಿವರರು, ತತ್ವಜ್ಞಾನಿಗಳು, ವೈಜ್ಞಾನಿಕರು, ಹಲವು ಮತಧರ್ಮಾನುಯಾಯಿಗಳು ಹಲವರು ಪ್ರಪಂಚದ ಎಲ್ಲಾ ಕಡೆಗಳಿಂದಲೂ ಬರುತ್ತಾರೆ. ಅವರೆಲ್ಲರೂ ಆ ಮಹಾಯೋಗಿಗೆ ತಲೆ ಬಾಗಿಸಿ ಗೌರವ ಭಕ್ತಿಗಳನ್ನು ಪ್ರದರ್ಶಿಸುತ್ತಾರೆ. ಅವರು ತಮ್ಮ ಅಪೂರ್ವ ದರ್ಶನದಿಂದ ಸಂದರ್ಶಕರಿಗೆ ಶಾಂತಿ ಆಶೀರ್ವಾದವನ್ನು ಕೊಟ್ಟು ಕಳುಹಿಸುತ್ತಾರೆ.

ಐ. ಸಿ. ಎಸ್. ವಿದ್ಯಾಭ್ಯಾಸ

ಅರವಿಂದರು ಬಂಗಾಳದ ಸಿರಿವಂತ ಕುಟುಂಬವೊಂದರಲ್ಲಿ ಹುಟ್ಟಿದರು. ಸಣ್ಣ ಪ್ರಾಯದಲ್ಲಿಯೇ ಅವರನ್ನು ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದರು. ಐ. ಸಿ. ಎಸ್. ಪರೀಕ್ಷೆಯಲ್ಲಿ ಕುದುರೆ ಸವಾರಿ ಮಾಡುವುದರಲ್ಲಿ ಸೋತ ಕಾರಣ ಉತ್ತೀರ್ಣನಾಗದೆ ಅವರು ಮಾತೃಭೂಮಿಗೆ ಮರಳಿ ಬಂದರು. ಅಂದು ಅವರು ಐ. ಸಿ. ಎಸ್.-ನಲ್ಲಿ ಉತ್ತೀರ್ಣರಾಗುತ್ತಿದ್ದರೆ ಬಹುಶಃ ಭರತ ಭೂಮಿಯು ಒಬ್ಬ ಮಹಾಪುರುಷನನ್ನು ಕಳೆದುಕೊಳ್ಳುತ್ತಿತ್ತೋ ಏನೋ?

ರಾಜಕೀಯ ರಂಗದಲ್ಲಿ

ಬರೋಡದ ಮಹಾರಾಜರು ಅವರನ್ನು ಉದ್ಯೋಗದಲ್ಲಿ ಸೇರಿಸಿಕೊಂಡರು, ಸಂಸ್ಥಾನದ ವಿದ್ಯಾ ಇಲಾಖೆಯ ಅಧಿಕಾರ ಅವರಿಗೆ ಒಪ್ಪಿಸಲ್ಪಟ್ಟಿತು. ಅಲ್ಲಿ ಅವರು ಬಹಳ ಪ್ರಸಿದ್ಧರಾಗಿಯೇ ಕೆಲಸ ಮಾಡಿದರು, ಆದರೆ ದೇಶದ ಸುತ್ತು ಗುಡುಗುಡಿಸುತ್ತಿದ್ದ ಸ್ವಾತಂತ್ರ್ಯ ಘೋಷವು ಅವರ ಚೇತನವನ್ನೂ ಕೆರಳಿಸಿತು. ಅರವಿಂದರು ತತ್‍ಕ್ಷಣ ಪ್ರತ್ಯಕ್ಷ ರಾಜಕೀಯಕ್ಕೆ ಧುಮುಕಿದರು. ಮುಂದೆ ಹದಿನೈದು ವರ್ಷಗಳ ಕಾಲ ಅವರು ಅವಿಶ್ರಾಂತರಾಗಿ ರಾಜಕೀಯ ರಂಗದಲ್ಲಿ ದುಡಿದರು. ಸ್ವದೇಶಿ, ಸ್ವಧರ್ಮ, ಸ್ವರಾಜ್ಯಗಳ ಸಂದೇಶವನ್ನು ದೇಶದ ಮೂಲೆ ಮೂಲೆಗಳಲ್ಲಿಯೂ ಸಾರಿದರು. 'ವಂದೇ ಮಾತರಂ' ಪತ್ರಿಕೆಯನ್ನು ಸ್ಥಾಪಿಸಿ, ಆ ಮೂಲಕ ಬಹಳ ಶಕ್ತಿಯುತವಾದ ವಾಣಿಯಿಂದ ತರುಣ ಭಾರತದ ಹೃದಯವನ್ನು ಜಾಗೃತಿಗೊಳಿಸಿದರು. ಸಾವಿರಾರು ತರುಣರು ಸ್ವಾತಂತ್ರ್ಯದ ರಣ ಕಹಳೆಯನ್ನು ಕೇಳಿ ಎಚ್ಚರಗೊಂಡರು!

ಅಂದು ವಂಗ ಭಂಗದ ಕಾಲ. ಸುರೇಂದ್ರನಾಥರಂತಹ ಮುಖಂಡರು, ಒಂದು ಕಡೆಯಿಂದ, ವಂಗ ವಿಭಜನೆಯನ್ನು ವಿರೋಧಿಸಿ ಜನತೆಯನ್ನು ಉದ್ರೇಕಿಸುತ್ತಿದ್ದರು. ಇನ್ನೊಂದು ಕಡೆಯಿಂದ ರವೀಂದ್ರನಾಥರಂತಹ ಅಮರ ಕವಿಗಳು ರಾಷ್ಟ್ರಗೀತೆಗಳನ್ನು ಹಾಡಿ ಹಾಡಿ ಜನತೆಯ ಹೃದಯದಲ್ಲಿ ಸ್ಫೂರ್ತಿ ಶಕ್ತಿಗಳನ್ನು ತುಂಬಿಸುತ್ತಿದ್ದರು. ಆಗ ಬಂಗಾಳದ ತರುಣರ ಹೃದಯದಲ್ಲಿ ಅಶಾಂತಿಯ ಅತೃಪ್ತಿಯ ಕಲ್ಲೋಲ ಮಸಗಿತ್ತು. ಅರವಿಂದಘೋಷರಂತಹ ರಾಜಕೀಯ ವಿಜ್ಞಾನಿಗಳು, ಭಾರತದ ಬಂಧವಿಮೋಚನಾ ಕಾರ್ಯಕ್ಕೆ ಇದೇ ಯುಕ್ತಕಾಲವೆಂದು ತಿಳಿದು ಸ್ವಾತಂತ್ರ್ಯದ ರಣಘೋಷವನ್ನು ಅಖಿಲ ಭಾರತದಲ್ಲಿ ಮೊಳಗಿಸಿದರು! ಪರಕೀಯ ದುರ್ಧರ ರಾಜ್ಯಭರಣವು ಕೊನೆಗೊಂಡು ಭಾರತವು ಸ್ವಾತಂತ್ರ್ಯ ಪಡೆಯುವುದೆಂದೂ, ಪಡಯಲೇ ಬೇಕೆಂದೂ ಅವರು ಅಂದು ಸಾರಿ ಹೇಳಿದರು.

ಚಿತ್ತರಂಜನರ ಭವಿಷ್ಯ

ಸರಕಾರವು ಈ ಚಟುವಟಿಕೆಗಳೆಲ್ಲವನ್ನೂ ನೋಡಿ ಬೆರಗಾಯಿತು, ದಿಗ್ಭ್ರಾಂತವಾಯಿತು. ತನ್ನ ದಬ್ಬಾಳಿಕೆಯನ್ನು ಹರಿಯಬಿಡಲು ತಡಮಾಡಲಿಲ್ಲ. ಸಾವಿರಾರು ಮಂದಿ ಸೆರೆಮನೆಗಳ ಕತ್ತಲೆ ಕೋಣೆಗಳನ್ನು ಸೇರಿದರು, ಅನೇಕರು ದೀರ್ಘಕಾಲದ ಕಠಿಣ ಶಿಕ್ಷೆಗಳಿಗೆ ಗುರಿಯಾದರು, ಅನೇಕರು ಬಂಧನಗಳಲ್ಲಿ ಬಳಲಿದರು. ಅರವಿಂದರ ಸೋದರ ಬರೀಂದ್ರರು ಬಂಗಾಳದ ಕ್ರಾಂತಿಕಾರರ ಗುಂಪಿಗೆ ಮುಂದಾಳುವಾಗಿದ್ದರೆಂಬುದರಿಂದ ಅರವಿಂದರೂ ಸರಕಾರದ ವಕ್ರ ದೃಷ್ಟಿಗೆ ಗುರಿಯಾದರು.



(ಶ್ರೀ ಅರವಿಂದರು ದರ್ಶನವೀಯುವ ಮಂಟಪ)

ಒಂದು ದಿನ ಪೋಲೀಸರು, ಅರವಿಂದರನ್ನು ಹಿಡಿದು, ಹಗ್ಗದಿಂದ ಕಟ್ಟಿ ಎಳೆದು ಬಂಧನಕ್ಕೊಯ್ದರು. ಬಾಂಬು ಸ್ಫೋಟನದ ಆರೋಪವು ಅವರ ಮೇಲೆ ಹಾಕಲ್ಪಟ್ಟಿತ್ತು. ದೇಶಬಂಧು ಚಿತ್ತರಂಜನ ದಾಸರು ಅರವಿಂದರ ಪರವಾಗಿ ವಕಾಲತ್ತು ವಹಿಸಿ ವಾದಿಸಿದರು. ಸರಕಾರದವರು 'ಪ್ರೊಸಿಕ್ಯೂಶನ್' ಕಡೆಯಿಂದ ಪ್ರಸಿದ್ಧ ನೋರ್ಟನನನ್ನು ನೇಮಿಸಿದ್ದರೂ ಅರವಿಂದರ ಮೇಲೆ ಹಾಕಲಾದ ಆರೋಪವು ತೆ

[ಮುಂದಿನ ಪುಟವನ್ನು ನೋಡಿ]

7 o'clock
7 ಒಕ್ಲೋಕ್
ಪೊಪ್ಯುಲರ್ ರೇಜರ್ ಸೆಟ್

ನಿಮ್ಮ ಕ್ಷೌರದಲ್ಲಿಯೂ ಹಣವನ್ನು ಉಳಿಸಲು ನೋಡಿರಿ. ಅದೂ ಬಹಳ ನಾಜೂಕಾಗಿ ನಿಮಗೆ ಕ್ಷೌರವಾಗಬೇಕಲ್ಲವೆ? ಹಾಗಾದರೆ 7 ಒಕ್ಲೋಕ್ ರೇಜರ್ ಸೆಟ್ ಒಂದನ್ನು ಪಡಕೊಳ್ಳಿರಿ. ಹೊಸ ರೀತಿಯ ಬ್ಲೇಡುಗಳು ಇದರಲ್ಲಿ ಇವೆ. ಇದರ ಹಿಡಿಯೂ ಬಹಳ ಉತ್ತಮ ತರಗತಿಯದಾಗಿರುತ್ತದೆ. ಎರಡು ಬದಿ ಹರಿತವಿರುವ ಎರಡು ಬ್ಲೇಡುಗಳೂ ಆ ಸೆಟ್ಟಿನೊಂದಿಗೇ ದೊರಕುವುದು. ಆ ಸೆಟ್ಟಿರುವ ಪೆಟ್ಟಿಗೆಯು ಬಹಳ ಆರೋಗ್ಯಕರವಾದ ರೀತಿಯಲ್ಲಿ ತಯಾರಿಸಿದ್ದಾಗಿದೆ.

ಉಗ್ರ ತಪೋಜೀವನದಲ್ಲಿ ಅರವಿಂದರ ಸಾಧನೆಯೇನು?

[೧೧ನೆಯ ಪುಟದಿಂದ ಮುಂದುವರಿದುದು]

ಗೆದು ಹಾಕಲ್ಪಟ್ಟಿತು. 'ಭಾರತದ ರಾಷ್ಟ್ರೀಯತೆಯ ಪ್ರವಾದಿಯಾಗಿ, ನೂತನ ಜಗನಿರ್ಮಾಣಿಕರಲ್ಲಿ ಪ್ರಾಥಮಿಕನಾಗಿ, ಭೂಮಿ ಸಮುದ್ರಗಳನ್ನು ದಾಟಿ ಪ್ರಪಂಚದ ಮೂಲೆ ಮೂಲೆಗಳಲ್ಲಿ ಒಂದು ದಿನ ಈತನ ನಾಮವು ಬೆಳಗುವುದು' ಎಂದು ಆ ಕಾಲದಲ್ಲಿ ಚಿತ್ತರಂಜನ ದಾಸರು ಅರವಿಂದರ ವಿಷಯ ಉಚ್ಚರಿಸಿದ್ದರು!

ತಪೋ ಜೀವನದಲ್ಲಿ

ಅರವಿಂದರ ಜೀವನದಲ್ಲಿ ಮತ್ತೆ ಹೊಸ ಅಧ್ಯಾಯವೊಂದು ಆರಂಭವಾಯಿತು ಜೀವಿತದ ಪ್ರಥಮ ಕಾರ್ಯವನ್ನು ಪೂರೈಸಿ, ಮುಂದೆ ಎರಡನೆಯ ಕರ್ತವ್ಯಸಾಧನೆಗಾಗಿ ಹೊರಡಬೇಕೆಂದೂ ಅವರು ನಿಶ್ಚಯಿಸಿದರು ಗುಪ್ತ ಪೋಲೀಸರು ಬೆನ್ನುಬಿಟ್ಟಿರಲಿಲ್ಲ ಒಂದು ದಿನ ಅವರು ಕಣ್ಮರೆಯಾದರು! ಅಖಿಲ ಭಾರತವೇ ಅವರು ಅದೃಶ್ಯರಾದ ವಾರ್ತೆ ಕೇಳಿ ದಿಗ್ಭ್ರಮೆಗೊಂಡಿತು ನಾಡಿಗೆ ನಾಡೇ ಗೊಂದಲಗೊಂಡಿತು, ಮತ್ತೆ ಅರವಿಂದರೇ ಒಂದು ದಿನ ಪಾಂಡಿಚೇರಿಯಲ್ಲಿ ತಾವಿರುವುದಾಗಿ ತಾನು ಅಲ್ಲಿಗೆ ಹೋದ ಕಾರಣದ ವಿಷಯವಾಗಿ ವಿವರಿಸಿ ಪತ್ರಬರೆದು ಪ್ರಕಟಿಸುವ ವರೆಗೆ ಯಾರಿಗೂ ಅವರ ಇರವು ತಿಳಿದಿರಲಿಲ್ಲ ಬ್ರಿಟಿಷ್ ಗುಪ್ತ ಪೋಲೀಸರು ಪಾಂಡಿಚೇರಿಗೆ ಹೋಗಿ ಅರವಿಂದರನ್ನು ಹಿಂಬಾಲಿಸುವುದು ಬಹಳ ಅಸಾಧ್ಯವಾಗಿತ್ತು ೧೯೧೦ರಲ್ಲಿ ಅವರು ಪಾಂಡಿಚೇರಿಗೆ ತೆರಳಿದರು ಅಲ್ಲಿ ಅವರು ಯೋಗಾಭ್ಯಾಸ ನಿರತರಾದರು, ೧೯೨೫ರ ವರೆಗೆ ಅವರು ತಮ್ಮ ವಿಚಾರಗಳನ್ನು ಲೇಖನಾದಿಗಳ ಮೂಲಕ ಆಗಾಗ ಪ್ರಕಟಿಸುತ್ತಿದ್ದರು. ೧೯೨೬ರಲ್ಲಿ ಅವರು ಪೂರ್ಣ ಏಕಾಂತ ಜೀವನವನ್ನೇ ಕೈಕೊಂಡರು ಅಂದಿನಿಂದ ಅವರನ್ನು ವರ್ಷದಲ್ಲಿ ಅವರು ದರ್ಶನವೀಯುವ ದಿನ ಮಾತ್ರ ಕಾಣಬಹುದಾಗಿದೆ.

ಏಕಾಂತದ ಉದ್ದೇಶ

ಅರವಿಂದರ ಏಕಾಂತ ಜೀವನದ ಉದ್ದೇಶವೇನೆಂಬ ವಿಷಯ ಅನೇಕಾನೇಕ ಊಹಾಪೋಹೆಗಳು ತಲೆಯೆತ್ತಿದ್ದವು; ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಲ್ಲು ಹೊರಟ ಅನೇಕ ಮಂದಿಯನ್ನು ನಿರಾಶೆಗೊಳಿಸಿ, ಅರವಿಂದರು ರಾಷ್ಟ್ರೀಯ ಕರ್ತವ್ಯವನ್ನು ಮರೆತು, ಅರ್ಧ-ಹಾದಿಯಲ್ಲಿ ಕೊಲಗ ಹೋಗುವ ಹೇಡಿಯಂತೆ ಹಿಡಿ ಏಕಾಂತವನ್ನು ಕೈಗೊಂಡರೆಂದೂ ಕೆಲವರು ಟೀಕಿಸಿದರು. ಹಲವರು, ಅವರ ಇಂದಿನ ತಪಸ್ಸು ಮಾತೃ ಭೂಮಿಯ ವಿಮೋಚನೆಗಾಗಿರುವ 'ಕ್ರಾಂತಿ ತಪಸ್ಸು' ಎಂದರು. ಮುಂದೆ ಬೇಗನೇ ಅವರು ರಾಜಕೀಯ ರಂಗಕ್ಕೆ ದುಮುಕುವರೆಂದು ಹಲವರು ಆಶಿಸಿದರು. ಹೀಗಾಗಿ ಪಾಂಡಿಚೇರಿಯಲ್ಲಿ ಅವರು ಆಶ್ರಮ ಕಟ್ಟಿ ಕುಳಿತು ಸಮಯ ಬ್ರಿಟಿಷ್ ಸರಕಾರಕ್ಕಾದರೂ ಬಹಳ ಗೊಂದಲವೇ ಇದ್ದಿತೆನಬಹುದು. ಆದರೆ ಇತ್ತೀಚೆಗೆ ಅವರ ಮೇಲಿನ ಸಂಶಯವು ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆಯೆಂದು ತಿಳಿದುಬರುತ್ತದೆ.

ಅರವಿಂದರು ತಮ್ಮ ವಿಚಾರ ವಾಹಿನಿಯನ್ನು ಪ್ರಪಂಚದಲ್ಲಿ ಹರಿಯಬಿಟ್ಟಿದ್ದಾರೆ ಅವರ ಯೋಗ ಸಾಧನೆಯ ವಿಚಾರವನ್ನು ವಿವರಿಸಿದ್ದಾರೆ. ಅರವಿಂದರು ಸ್ವಾತಂತ್ರ್ಯದ ವಿಷಯವಾಗಿ ನಿರಂತರ ಉತ್ಸುಕರಾಗಿದ್ದಾರೆ. ಅವರ ಸ್ವಾತಂತ್ರ್ಯ ಮೀಮಾಂಸೆಯು ಕೇವಲ ರಾಜಕೀಯ ಮಟ್ಟಿಗಿರದೆ ಆತ್ಮಕ್ಕೂ ಅನ್ವಯಿಸಿದೆ ಅಂತಹ ವ್ಯಕ್ತಿ ಸ್ವಾತಂತ್ರ್ಯವೂ ಲೋಕ ಕಲ್ಯಾಣವೂ ಅಭಿನ್ನವಾದುದೆಂದು ಅವರ ತಿಳಿದಿದ್ದಾರೆ. 'ಮಹಾಯೋಗ'ದಿಂದ ಇಂದಿನ ಜಗತ್ತಿನ ಮುಖವನ್ನೇ ಬದಲಾಯಿಸಿ ಹೊಸ ಜಗದ ನಿರ್ಮಾಣವೊಂದಕ್ಕೆ ಅವರು ಸಾಧಿಸುತ್ತಿರುವರೆಂದು ನಂಬುವವರು ತುಂಬಾ ಮಂದಿಯಿರುವರು. ಅಂತೂ ಅರವಿಂದರು ಪ್ರಾಚೀನ ಭಾರತದ ಮಹರ್ಷಿಗಳ ಪಂಕ್ತಿಗೆ ಸೇರುವ ಮಹಾತ್ಮರೊಬ್ಬರಾಗಿ ಇಂದು ತಪೋಜೀವನದಲ್ಲಿದ್ದಾರೆ.

—K K Rai

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 125/1941

ಮೀನಾಕ್ಷಿ ಹೆಗ್ಗಡ್ತಿ . . ವಾದಿಳು.

ಮತ್ತು

ಕೊರಗು ಕೂಡಾ . ಪ್ರತಿವಾದಿರು.,

ಇವರೊಳಗೆ

ಸದ್ರಿ ದಾವೆಯ 2ನೇ ಪ್ರತಿವಾದಿ ಸೋಮಯ್ಯ, 3ನೇ ಪ್ರತಿವಾದಿ ತನಿಯ, ಆಚ್ಚಮು ಶೆಟ್ಟಿನ ಮಕ್ಕಳು, 5ನೇ ಪ್ರತಿವಾದಿಳು ಸೂರು ಆಬಾರ್ತಿ ಕಾರ್ಕಳ ತಾಲ್ಲೂಕು ಕವದೂರು ಗ್ರಾಮದಲ್ಲಿರುವವರು ಇವರಿಗೆ ಈ ಮೂಲಕ ತಿಳಿಸುವುದೇನಂದ್ರೆ—

ನಿಮ್ಮ ಮೇಲೆ ವಾದಿ ಆಸ್ತಿ ಸ್ವಾಧೀನತೆ ವ ಹುಟ್ಟುವಳಿ ಬಗ್ಗೆ ಕೂಡಾ ವಾದಿಳು ಮಾಡಿದ ಸದ್ರಿ ದಾವೆಯು ನಿಮ್ಮ ಹಾಜ್ರತಿ ಬಗ್ಗೆ ತಾರೀಕು 15-9-1941ಕ್ಕೆ ಇಟ್ಟದೆ ನೀವು ಸದ್ರಿ ದಿನ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲು ದ್ವಾರಾ ಹಾಜ್ರಾಗಿ ಉದಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿ ಸಮ್ಮಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

Karkala 15-8-'41 } N. Mohandas Adyanthaya, Advocate for Plantiff

HALFTONE & LINE BLOCK MAKING UNDERTAKEN

Sharada Press, MANGALORE

ನಿಮ್ಮ ಕಾಲು ನೋವನ್ನು ಜ್ಯಾಂಬಕ್ ಉಪಯೋಗಿಸಿ ಗುಣಪಡಿಸಿರಿ

ಪ್ರತಿ ರಾತ್ರಿ ಅದನ್ನು ಹಾಕಿ ತಿಕ್ಕಿರಿ

ನೋವುಳ್ಳ ಕಾಲುಗಳಿಗೆ, ಬಾತು ಹೋದ ಮೊಣಗಂಟುಗಳಿಗೆ ಜ್ಯಾಂಬಕಿನಷ್ಟು ಗುಣಕಾರಿ ಜೀರಿಲ್ಲ. ಪ್ರತಿದಿನ ಇದನ್ನು ಕಾಲಲ್ಲಿ ನೋವಿರುವ ಕಡೆಗಳಿಗೆ, ಅಲ್ಲಲ್ಲಿ ಗಂಟುಗಳಿಗೆ ಹಾಕಿ ತಿಕ್ಕಿರಿ. ಜ್ಯಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿಸತ್ವವು ಚರ್ಮದೊಳಗೆ ಸೇರಿಕೊಳ್ಳುವುದು, ಅದರಿಂದ ಕೂಡಲೇ ನೋವು ಕಡಿಮೆಯಾಗಿ ಗುಣವಾಗುವುದು. ದಪ್ಪ ಚರ್ಮ ತೆಳುವಾಗುವುದು, ಒಳಿದ ಗಾಯ ಕೂಡುವುದು, ತಿರಿಗಿ ನೀವು ಹಿಂದಿನ ಸುಖ ಹೊಂದುವಿರಿ, ಜ್ಯಾಂಬಕ್ ಒಂದು ರೂಪಾಯಿ ಅಥವಾ ರೂ 2-4-0, ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ



ಏಜೆಂಟರು —ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಟಿ. ಮದರಾಸು.

ಯಾವಾಗಲೂ ಜ್ಯಾಂಬಕನ್ನೆ ಕೊಳ್ಳಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

AN INVITATION

Large Surplus Funds are awaiting investment. In order to invest this surplus, Loans will be granted at specially reduced rates against Gold, Market Produce, Government Securities, etc., etc,

You are invited to take advantage of thesn special terms

CANARA BANK LIMITED

ESTD. 1906.

ಧಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್,

ಕಂಕನಾಡಿ, ಮುಂಗಳೂರು

ಹೆಡ್ ಆಫೀಸು. ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು. ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ 9% ರೂ 26ರಿಂದ 100ರ ವರೆಗೆ ಸೇ. 8%

ರೂ. 101ರಿಂದ 500ರ ವರೆಗೆ ಸೇ. 7% ರೂ 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%

ನಿರಖು ಠೇವಣಾತಿ—12 ತಿಂಗಳಿಗೆ—4%

(Sd) B. Narayana Shetty,
Agent at Kankanady.

ಸಿನೆಮಾ ಸುದ್ದಿ

ಇಂಗ್ಲಿಷು ನಾಟಕಗಳ ಅಭಿನಯಕ್ಕಾಗಿ

ಸಿನೆಮಾ ನಟನಟಿಯರ ಕೂಟ

ಪೃಥ್ವೀರಾಜ, ದುರ್ಗಾಖೋಟೆ, ವನಮಾಲಾ ಮತ್ತು ಮುಬಾರಕ್, ಇವರು ಇಂಗ್ಲಿಷ ನಾಟಕಗಳನ್ನು ಅಭಿನಯಿಸುವ ಸಲುವಾಗಿ ಕೂಟವೊಂದನ್ನು ಮಾಡಿರುವರೆಂದು ಸುದ್ದಿಯಿದೆ.

ಕಲೆಗಳಲ್ಲಿ ಸಿನೆಮಾ ಅತ್ಯುತ್ತಮ

ಸರೋಜಿನಿದೇವಿ ಹೇಳುತ್ತಾರೆ

ನೇಶನಲ್ ಸ್ಟುಡಿಯೋದವರ ಸಿಸ್ಟರ್ ಚಿತ್ರ ತಯಾರಿಯ ಸಂದರ್ಭದಲ್ಲಿ ಅದನ್ನು ಸಂದರ್ಶಿಸಿದ ಸರೋಜಿನಿ ದೇವಿಯವರು ಎಲ್ಲಾ ಕಲೆಗಳಿಗಿಂತಲೂ ಅತ್ಯುತ್ತಮವಾದ ಕಲೆ ಸಿನೆಮಾ ಎಂದೂ, ಕುಲೀನ ವಿದ್ಯಾವಂತ ತರುಣತರುಣಿಯರು ವಿದೇಶಗಳಂತೆ ಮುಂದೆ-ಬಂದು ಆ ಕಲೆಗೆ ಪಾವಿತ್ರ್ಯಸಂಸ್ಕಾರಗಳನ್ನು ಕೊಡಬೇಕೆಂದೂ ಹೇಳಿದರು.

ಗೋಪೀನಾಥ ತಂಗಮಣಿಯರು ಪ್ರಹ್ಲಾದದಲ್ಲಿ

ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಇವರಿಂದ ರಚಿತವಾಗುವ ಪ್ರಹ್ಲಾದ ಎಂಬ ಮಲೆಯಾಳೀ ಚಿತ್ರವು ಪೂರ್ಣವಾಗಿದೆ ಪ್ರಸಿದ್ಧ ನರ್ತನಪಟುಗಳಾದ ಗೋಪೀನಾಥ ತಂಗಮಣಿಯರು ಇದರಲ್ಲಿ ನಟಿಸುವರು ಗೋಪೀನಾಥನು ಹಿರಣ್ಯಕಶಿಪು ಪಾತ್ರದಲ್ಲಿ ಕುಮಾರಿ ಲಕ್ಷ್ಮಿಯು ಪ್ರಹ್ಲಾದ ಪಾತ್ರಾಭಿನಯಿಸುವಳು

ಶಾಂತಾ ಆಪ್ಟೆಯ ಮತ್ತೊಂದು ಚಿತ್ರ

ಮದ್ರಾಸಿನ ರಾಯಲ್ ಟಾಕೀಸ್ ಡಿಸ್ಟ್ರಿಬ್ಯುಟರ್ಸ್ ಇವರು ನ್ಯೂ ಥಿಯೇಟರಿನ ಸ್ಟುಡಿಯೋದಲ್ಲಿ ಶಾಂತಾ-ಆಪ್ಟೆ ಅಭಿನಯಿಸಿದ ಸಾವಿತ್ರಿ ಚಿತ್ರವನ್ನು ಪೂರೈಸಿಬಂದವರು, ಬೇಗನೇ ಶಾಂತಾ-ಆಪ್ಟೆಯ ಅಭಿನಯ ಸಹಿತವಾದಿನ್ನೊಂದು ಚಿತ್ರವನ್ನು ಮಾಡುವುದರಲ್ಲಿರುವರೆಂದು ಸುದ್ದಿ

ನಯೀ ದುನಿಯಾ

ಶ್ರೀ ಕದಾರ್‌ರರು ಆ ಟಮ್ಮುಡ್ ಅಬ್ಬಾಸರ ನಯೀ ದುನಿಯಾ ಎಂಬೀ ಹೊಸ ಕಥೆಯನ್ನು ನಿರ್ದೇಶಿಸುವರು

ನವಾಬ್

ನ್ಯೂ ಥಿಯೇಟರ್ಸಿನ ನಟಶಿರೋಮಣಿ ಈತನು ಒಂದು ತಿಂಗಳ ರಜೆಯ ಮೇಲೆ ಮುಂಬಯಿಗೆ ಬಂದಿರುವನು.

ಬಿಬ್ಬೂ ಗಂಡನೊಡನೆ ರಾಜಿ ಮಾಡಿಕೊಂಡಳು

ಸಿನಿಮಾ ನಟಿ ಬಿಬ್ಬೂ ತನ್ನ ಗಂಡನು ತನಗೆ ಹೊಡೆದ ವಿಷಯವಾಗಿ ಕೋರ್ಟಿನಲ್ಲಿ ದಾವೆ ಮಾಡಿದ್ದಾಳೆಂದು ಹಿಂದೆ ಪ್ರಸಿದ್ಧವಾಗಿತ್ತಷ್ಟೆ, ಈಗ ಆ ದಾವೆಯು ರಾಜಿಯಲ್ಲಿ ತೀರಿರುವುದಾಗಿ ಸುದ್ದಿಯಿದೆ ತಾವು ಗಂಡ ಹೆಂಡಿರು ಆಗಾಗ ಹೀಗೆ ಲಡಾಯಿ ಮಾಡುವುದಿತ್ತೆಂದೂ, ಒಂದು ದಿನ ಸಿನೆಮಾಕ್ಕೆ ತಾನು ಹೋಗಿದ್ದವಳು ಬರುವಾಗ ರಾತ್ರಿ ಹೆಚ್ಚು ತಡವಾದುದಕ್ಕೆ ಗಂಡನು ಹೊಡೆದ ವಿಷಯವಾಗಿ ತನ್ನ ಸಹೋದರನು ಕೋರ್ಟಿನಲ್ಲಿ ಈ ದಾವೆ ಹೂಡಿದನೆಂದೂ ಅದರೆ ನಾವು ಜಗಳವಾಡಿಕೊಳ್ಳುವುದಿಲ್ಲವೆಂದೂ ಬಿಬ್ಬೂ ಕೋರ್ಟಿನಲ್ಲಿ ಹೇಳಿದಳಂತೆ.

ಮಾನನಷ್ಟ ರಾಜಿ

ಪಂಡಿತ ಇಂದ್ರರು ಶ್ರೀ ಅತ್ರೆಯವರ ಮೇಲೆ ಮಾಡಿದ ಮಾನನಷ್ಟದ ದಾವೆ ಕೋರ್ಟಿಗೆ ಹೋಗದೆ ಇತ್ಯರ್ಥವಾಯಿತು ವಿನಾಯಕ್ ಮತ್ತು ಬಾಬುರಾವ್ ಪಟೇಲರು ಮಧ್ಯಸ್ಥರಾಗಿ ತೀರ್ಮಾನಿಸಿದರು

ಜಯಂತ್ ಕಾಣೆ

ಸಿನೆಮಾ ನಟ ಜಯಂತ್ ಬೊಂಬಾಯಿಂದ ಕಾಣೆಯಾಗಿರುವನಂತೆ, ಆ ಸುಂದರ, ದೀರ್ಘಕಾಯದ ಯುವಕನು, ಹಲವು ಸ್ತ್ರೀ ಹೃದಯಗಳಲ್ಲಿ ನರ್ತಿಸುತ್ತಿದ್ದವನು ಬೊಂಬಯಿಯಿಂದ ಎಲ್ಲಿಗೆ ಹೋಗಿರುವನೆಂದು ಯಾರಿಗೂ ತಿಳಿದಿಲ್ಲ.

ಲಗನ್

ನಿತಿನ್ ಬೋಸರ ಈ ಚಿತ್ರವು ಬೊಂಬಯಿಯಲ್ಲಿ ಗನೆಯ ವಾರ ಪ್ರದರ್ಶಿತವಾಗುತ್ತಿದೆ, ಸೈಗಲ್ ಮತ್ತು ಕನನ್ ಬಾಲಾ ಅಭಿನಯದಿಂದ ಕೂಡಿದ್ದು, ನ್ಯೂ ಥಿಯೇಟರ್ಸಿನ ಅತ್ಯುತ್ತಮ ಚಿತ್ರ.

ಚಂದನ್

ಅಶೋಕ ಪಿಕ್ಚರ್ಸಿನವರು ಈ ಸಾಮಾಜಿಕ ಚಿತ್ರವೊಂದನ್ನು ರಚಿಸಿರುವರು. ಧೀರುಭಾಯಿ ದೇಸಾಯಿ ನಿರ್ದೇಶಿಸುವರು ನಜೀರ್, ಕಾಂತಾ, ಅಶಿಕ್ ಹುಸೇನ್, ಮಾಯದೇವಿ, ಲಲಿತಾ, ಡಬ್ಲ್ಯು. ಎಂ ಖಾನ್ ಮತ್ತು ಜಮ್ಶೇಡ್ಜಿ ಇವರ ಅಭಿನಯ. ಅವರ ಮುಂದಿನ ಚಿತ್ರ ಲಾಲಜ್ಞಾ.

ಮಿಸ್ ಕಟ್ಜು

ಅಲ್ಲಾಬಾದಿನ ಕಟ್ಜು ಮತ್ತು ನೆಹರು ವಂಶಕ್ಕೆ ಸಂಬಂಧಿಸಿದ ಕುಲೀನ ಕಾಶ್ಮೀರಿ ಬ್ರಾಹ್ಮಣ ಸ್ತ್ರೀ ಹದಿನಾಲ್ಕು ವರ್ಷದವಳು ಮಿಸ್ ಯಶೋಧರಾ ಕಟ್ಜು ಎಂಬವಳು ನೇಶನಲ್ ಫಿಲ್ಮ್ ಸ್ಟುಡಿಯೋಕ್ಕೆ ಸೇರಿರುವಳು.

ಲೀಲಾಚಿಟ್ನಿಸ್

ನಯಾ ಸಂಸಾರ್ ಪ್ರದರ್ಶಿತವಾಗುತ್ತಿದ್ದು, ಅಂಜನ್ ಪ್ರದರ್ಶನಕ್ಕೆ ತಯಾರಾಗುತ್ತಿದ್ದಂತೆ, ಲೀಲಾ ಚಿಟ್ನಿಸರ ಅಭಿನಯದಿಂದ ಕೂಡಿದ ಇನ್ನೊಂದು ಹೊಸ ಚಿತ್ರವನ್ನು ಬೊಂಬೇ ಟಾಕೀಸಿನವರು ತಯಾರಿಸುವರೆಂದು ತಿಳಿದಿದೆ.

ಲಘು ಸಿದ್ಧೌಷಧಗಳು

ಲೇಖಕ ಶ್ರೀ. ಎನ್. ಶ್ಯಾಮರಾಯ ನಾಯ್ಕರು

[ಪ್ರತಿ ಊರಿನಲ್ಲಿ ತಿರುಗಾಡಿ ವಿಚಾರಿಸಿದರೆ, ಯಾವುದಾದರೂ ಒಂದು ಮನೆಯಲ್ಲಿ ಅವರ ವಂಶಪಾರಂಪರ್ಯವಾಗಿ ಕೊಡುತ್ತಾ ಬರುವ ಒಂದು ಸಿದ್ಧೌಷಧಿ ಇದ್ದೇ ಇರುತ್ತದೆ ಸದ್ರಿ ಔಷಧಿಯನ್ನು ಆ ಒಂದು ರೋಗಕ್ಕೆ ಕೊಟ್ಟರೆ, ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗುವುದು ವೈದ್ಯರಿಂದಲೂ ಡಾಕ್ಟರರಿಂದಲೂ ಗುಣಮಾಡಲಿಕ್ಕೆ ಸಾಧ್ಯವಿಲ್ಲದ ರೋಗಗಳೂ ಅಂತಹ ಮದ್ದುಗಳಿಂದ ಗುಣವಾಗುತ್ತವೆ, ಮದ್ದಿಗೆ ಖರ್ಚು ಕಡಿಮೆ, ಕಾಡಿನಲ್ಲಿ ಸಿಕ್ಕುವ ಗಿಡಮೂಲಿಕೆಗಳು, ಅಂಥಾ ದಿವ್ಯವಾದ ಮದ್ದುಗಳು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿಯೂ ಇರುತ್ತವೆ. ಅಂತಹ ಔಷಧಿ ಪ್ರಯೋಗಗಳು ವೈದ್ಯ ಪುಸ್ತಕದಲ್ಲಿ ಸಿಕ್ಕುವುದಿಲ್ಲ, ಇದನ್ನು ಆಯಾ ಮನೆಯವರು ತಮ್ಮ ಅಂತ್ಯಕಾಲದಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಒಬ್ಬನಿಗೆ ಗುಟ್ಟಾಗಿ ಕಲಿಸುವರು, ಅವು ಒಬ್ಬರಿಂದ ಒಬ್ಬರಿಗೆ ಅದೇ ರೀತಿಯಲ್ಲಿ ವಂಶಪಾರಂಪರ್ಯವಾಗಿ ಮುಂದರಿಯುವುದು, ಇನ್ನು ಹಲವು ಕಡೆಗಳಲ್ಲಿ ಮದ್ದನ್ನು ಕಲಿಸಿಕೊಡುವ ಮೊದಲೇ ಅದನ್ನು ತಿಳಿದಿದ್ದವರು ತೀರಿಹೋಗಿ, ಅಂಥಾ ದಿವ್ಯ ಔಷಧಿಗಳು ಮಾಯವಾಗುವವು ಔಷಧಿಗಳನ್ನು ಪ್ರಚಾರ ಮಾಡಿದರೆ ನಮ್ಮ ಸಹೋದರ ಸಹೋದರಿಯರಿಗೆ ಬಹಳ ಸಹಾಯಮಾಡಿದಂತಾಗುವುದು ಅದ್ದರಿಂದ ಇಂಥಾ ದಿವ್ಯ ಔಷದಿಗಳು ನಾಶವಾಗದಂತೆಯೂ ಎಲ್ಲಾ ಜನರಿಗೆ ಪ್ರಯೋಜನ ಸಿಕ್ಕುವಂತೆಯೂ ಅದನ್ನು ಪ್ರಚಾರ ಮಾಡಬೇಕಾಗಿ ಅಂತಹ ಸಿದ್ಧೌಷಧಿಗಳನ್ನು ಕಲಿತಿರುವ ಜನರಲ್ಲಿ ಪ್ರಾರ್ಥಿಸುತ್ತೇನೆ ನನಗೆ ತಿಳಿದುಬಂದ ಕೆಲವು ಕೈಕಂಡ ಪ್ರಯೋಗಗಳನ್ನು (ಸಿದ್ಧೌಷಧಿಗಳನ್ನು) ಕೆಳಗೆ ಕೊಡುತ್ತಾ ಬರುತ್ತೇನೆ]

ರೋಗದ ಹೆಸರು: ಉಷ್ಣ ಹೊರಕಡೆ

ಮದ್ದು ತಯಾರಿಸುವ ವಿಧಾನ:— ಎಳೆತು ದಾಳಿಂಬೆಯನ್ನು ತಂದು ಅದರ ಒಂದು ಬದಿಗೆ ತೂತುಮಾಡಿ ಎರಡಾಣೆ ಪಾವಲಿ ತೂಕ ಕೊಡಚೀ ಬೀಜ ಎರಡಾಣೆ ಪಾವಲಿ ತೂಕ ಮೆಂತೆ ಇವುಗಳನ್ನು ಪುಡಿಮಾಡಿ ಅದಕ್ಕೆ ಎರಡಾಣೆ ಪಾವಲಿ ತೂಕ ಅಫೀಮು ಸೇರಿಸಿ ಅದನ್ನು ದಾಳಿಂಬದ ತೂತಿನೊಳಗೆ ಹಾಕಿ ಮುಚ್ಚಿ ಬಾಳೇ ಎಲೆಯನ್ನು ಸುತ್ತಿ ಅದಕ್ಕೆ ಮಣ್ಣು ಮೆತ್ತಿ ಒಣಗಿಸಿ ಕೆಂಬೂದಿಯಲ್ಲಿ ಹಾಕಿ ಬೆಂದ ಮೇಲೆ ತೆಗೆಯಬೇಕು ಸುಟ್ಟು ಹೋಗಬಾರದು ಇದನ್ನು ಮಜ್ಜಿಗೆಯಲ್ಲಿ ಚೆನ್ನಾಗಿ ಅರದು ಕಡ್ಲೆಗಾತ್ರ ಮಾತ್ರೆಗಳನ್ನು ಮಾಡಿ ಒಣಗಿಸಿ ಇಟ್ಟುಕೊಂಡು ಸದ್ರಿ ರೋಗ ಸುರು ಆದ ಕೂಡಲೆ ದೊಡ್ಡವರಿಗೆ ಸರ್ತಿಗೆ ಒಂದು ಮಾತ್ರೆಯಂತೆ ಎಮ್ಮೆ ಮಜ್ಜಿಗೆಯಲ್ಲಿ ಕಲಸಿ ಕೊಡುವುದು ಜ್ವರ ಇದ್ದರೆ ದಾಳಿಂಬದ ಓಡಿನ ಕಷಾಯದಲ್ಲಿ ಕೊಡುವುದು ದಾಳಿಂಬದ ಓಡಿನ ಅಂದರೆ ದಾಳಿಂಬದ ಸಿಪ್ಪೆಯ ತುಂಡನ್ನು ಹಾಕಿ ಗಂಜಿಮಾಡಿ ಆ ಗಂಜಿ ನೀರನ್ನು ಕೊಡುವುದು ಮಜ್ಜಿಗೆ ಕೊಡಬಹುದು. ರೋಗ ನಿಲ್ಲುವ ವರೆಗೆ ಮತ್ತೆ ಯಾವುದನ್ನೂ ಕೊಡಬಾರದು. ಮಾತ್ರೆಯನ್ನು ದಿನಕ್ಕೆ ಮೂರು ಸರ್ತಿ ಕೊಡಬೇಕು. ರೋಗ ವಾಸಿಯಾದ ಕೂಡಲೆ ಮಾತ್ರೆ ಕೊಡುವುದನ್ನು ನಿಲ್ಲಿಸಿಬಿಡಬೇಕು ಇಲ್ಲದಿದ್ದರೆ ಮಲಬದ್ಧತೆಯಾಗುವುದು ದೀರ್ಘ ಕಾಲದ ರೋಗಕ್ಕೆ ಎರಡು ಸರ್ತಿಯಂತೆ ಕೆಲವು ದಿವಸಗಳ ಪರಿಯಂತರ ಕೊಡಬೇಕಾಗುವುದು

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣವು. ನಿಮ್ಮ ಸೂಕ್ಷ್ಮವಾದ ಚರ್ಮ ರಂಧ್ರಗಳು ಧೂಳು, ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ.

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮು (Cuticura Ointment) ನಿಂದ ಮೊಡ್ಡೆ, ಛಿದ್ರ, ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಶೈತ್ಯಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನುಗಳು ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರವಾಸಕ್ಕೆ) ದೊರೆಯುತ್ತದೆ

ವಿಚಿತ್ರ ಪ್ರಪಂಚ

ಕಾಗದವು ಜಪಾನೀಯರ ದೇವರು

ಜಪಾನಿನಲ್ಲಿ ಅನೇಕ ಕಾಲದಿಂದ ಕಾಗದವು ದೇವರೆಂಬ ಪೂಜ್ಯತೆಯನ್ನು ಪಡೆದಿದೆ. ಜಪಾನೀಯರು ಕಾಗದಕ್ಕೆ 'ಕಮಿ' ಎನ್ನುವರು; ಕಮಿಯೆಂದರೆ ದೇವರೆಂದರ್ಥ.

ಪ್ರಾರಂಭದಲ್ಲಿ, ಪ್ರಾಚೀನ ಜಪಾನೀಯರು ದೇವತಾ ಪೂಜೆಗೆ ಪ್ರತಿಮೆಗಳನ್ನು ಉಪಯೋಗಿಸುತ್ತಿರಲಿಲ್ಲ. ಆದ್ದರಿಂದ ಶುದ್ಧ ಬಿಳಿ ಬಣ್ಣದ ಕಾಗದವನ್ನು ದೇವರ ಸಂಜ್ಞೆಯಾಗಿ ಅವರು ಆರಿಸಿದರು. 'ಮಲ್ಬರಿ'ಯೆಂಬ ಪ್ರಾಮುಖ್ಯ ಕಾಗದ ತಯಾರಿಸುವ ಸಾಧನ ಸಿಗುವ ಮರಕ್ಕೂ ಅವರು ದೇವತಾ ಭಾವವನ್ನು ಕಲ್ಪಿಸುವರು.

ಯೂರೋಪಿಯನರ ದುರ್ವಾಸನೆ!

ಈ ವಿಷಯದಲ್ಲಿ ಸರ್ ಹರ್ಬರ್ಟ್ ವಿಲ್ಕಿನ್ಸ್ ಇವರಿಗೂ ಅಚಮದ್ ಅಬ್ದುಲ್ಲಾರವರಿಗೂ ಒಮ್ಮೆ ಚರ್ಚೆ ನಡೆದಿತ್ತು. ಅಚಮದ್ ಅಬ್ದುಲ್ಲರವರು, ಬಿಳಿಮನುಷ್ಯನ ಮೈಮೇಲಿನ ವಾಸನೆ ಸಹಿಸಲು ಸಾಧ್ಯವಿಲ್ಲದುದು ಎಂದಿದ್ದರು. ಎಸ್ಕಿಮೋಗಳು ಪಾಶ್ಚಾತ್ಯರ ಹತ್ತಿರ ಇರುವುದಿಲ್ಲವಂತೆ; ಅವರ ದುರ್ವಾಸನೆಗಾಗಿ.

ಉದಾಹರಣೆಗೆ ಹಲವು ಎಸ್ಕಿಮೋ ಜನರನ್ನು ಒಂದು ಕೋಣೆಯಲ್ಲಿ ಹಾಕಿ ಒಬ್ಬನೋ ಇಬ್ಬರೋ ಯೂರೋಪಿಯನರು ಅಲ್ಲಿದ್ದರೆ ಅವರಿಗೆ ಅಲ್ಲಿ ಅಸಹನೀಯವೇನೂ ತೋರುವುದಿಲ್ಲವೆಂದೂ ಅದರ ಬದಲು ಹಲವು ಯೂರೋಪಿಯನರನ್ನು, ಕೆಲವು ಎಸ್ಕಿಮೋಗಳನ್ನೂ ಒಂದೆಡೆ ಹಾಕಿದರೆ, ವಾಸನೆ ಸಹಿಸದೆ ಎಸ್ಕಿಮೋಗಳು ಅಲ್ಲಿಂದ ಓಡಿಹೋಗುವವೆಂದೂ ತಿಳಿದಿದೆ.

ಗರ್ಭಸ್ಥ ಮಗುವಿಗೆ ತೊಂದರೆಯಾಗುವುದಿಲ್ಲ

ಹೊಟ್ಟೆಯೊಳಗಿನ ಮಗು, ತಾಯಿಗೆ ಯಾವುದೇ ದರ್ಶನ, ಶ್ರವಣ, ಚಲನಗಳಿಂದ ಉಂಟಾದ ತೊಂದರೆಗಳಿಗೆ ಒಳಗಾಗುವುದಿಲ್ಲವೆಂದು ಹೌಸ್‌ಹೋಲ್ಡ್ ಮೆಗಜಿನ್ ಪತ್ರಿಕೆಯಲ್ಲಿ ಲೇಖನ ಬಂದಿದೆ. ಪ್ರಕೃತಿಯು ಇಂತಹ ಸಂದರ್ಭಗಳಲ್ಲಿ ಮಗುವಿಗೆ ಅಪಾಯವಾಗಬಾರದೆಂದು ತಡೆಯನ್ನುಂಟುಮಾಡಿರುವುದು. ಇಂತಹ ಸಂದರ್ಭದಲ್ಲಿ ತಾಯಿಯ ಮತ್ತು ಮಗುವಿನ ನರಗಳಿಗೆ ಪ್ರತ್ಯಕ್ಷ ಸಂಬಂಧವೇ ಇಲ್ಲದಂತೆ ದೇಹರಚನೆಯಿರುವುದೆಂದೂ ತಿಳಿದುಬಂದಿದೆ.

ವಿವಾಹವಿಚ್ಛೇದದ ವಿಚಿತ್ರ ಕಾರಣಗಳು

ಯುರೋಪಿಯನರಲ್ಲಿ ವಿವಾಹ ವಿಚ್ಛೇದವಾಗುವ ಹಲವು ವಿಚಿತ್ರ ಕಾರಣಗಳು ಈಗ ಪ್ರಕಟವಾಗಿವೆ.

ವಿಲಿಯಂ ವಿಲ್ಸನನು ತನ್ನ ಹೆಂಡತಿ, ತನ್ನ ಕೃತ್ರಿಮ ಹಲ್ಲುಗಳನ್ನು ತೆಗೆದು ಬಿಟ್ಟಳೆಂದು ಅವಳ ಮೇಲೆ ಸೋಡ್ರಚೀಟಿ ಬಿಟ್ಟನು.

ಪ್ಯಾರಿಸಿನ ಒಬ್ಬ ಗೃಹಿಣಿ ತನ್ನ ಗಂಡನಿಂದ ತನಗೆ ಆರು ಮಕ್ಕಳಾದುವೆಂದು ವಿವಾಹವಿಚ್ಛೇದ ಮಾಡಿಕೊಂಡಳು.

ತನ್ನ ಗಂಡ ತನಗೆ ಹೊಡೆಯಲೇ ಇಲ್ಲವೆಂದು ಇನ್ನೊಬ್ಬಳು ಸೋಡಚೀಟಿ ಮಾಡಿದಳು.

ಗಂಡ ರಾತ್ರಿ ಮನೆಗೆ ಬರುವುದಿಲ್ಲವೆಂದು ಹೇಳಿದಕ್ಕೆ ಜಕ್ಲಹೋಮಿನ ಇನ್ನೊಬ್ಬಳು ಗಂಡನನ್ನು ಬಿಟ್ಟುಬಿಟ್ಟಳು.

ತನಗೆ ಆತನೊಡನೆ ಮದುವೆಯಾದ ಸಂಗತಿ ಗೊತ್ತಿಲ್ಲವೆಂದು ಇನ್ನೊಬ್ಬಳು ವಿವಾಹ ಸಂಬಂಧ ಮುರಿದುಕೊಂಡಳು.

ಒಳ್ಳೆಯ ಅಡಿಗೆ ಮಾಡಲು ತಿಳಿಯದಿದ್ದರೆ ಅಬಿಸೀನಿಯದವರು ಹೆಂಡಂದಿರನ್ನು ಬಿಟ್ಟುಬಿಡುವರು.

ವಿಜ್ಞಾನಯುಗ

ಕಡಿಮೆ ತಿನ್ನುವವರು ಹೆಚ್ಚು ಸಮಯ ಬಾಳುವರು?

ಅಮೇರಿಕದ ಆರೋಗ್ಯ ಇಲಾಖೆಯವರು ಒಂದು ಪರಿಶೋಧಮಾಡಿ, ಕಡಿಮೆ ಆಹಾರ ತಿಂದ ಸಪೂರ ಇಲಿಗಳು ತೋರ ಇಲಿಗಳಿಗಿಂತ ಹೆಚ್ಚು ಸಮಯ ಬದುಕುವವೆಂದು ಕಂಡುಹಿಡಿದಿರುವರು.

ಇಂತಹ ಇಲಿಗಳಲ್ಲಿ ಒಂದು ೧,೪೦೦ ವರ್ಷ ಬದುಕಿತ್ತಂತೆ. ಎಂದರೆ ಇದು ೧೬೩೩ನೆಯ ಇಸವಿಯಲ್ಲಿ ಮರಣಹೊಂದಿದ ಥೋಮಸ್ಸ್ ಪಾರ್ ಎಂಬ ೧೫೨ ವರ್ಷ ಮತ್ತು ಒಂಬತ್ತು ತಿಂಗಳು ಬದುಕಿದ ಮನುಷ್ಯನಂತೆ ದೀರ್ಘತಮವಾದ ಜೀವನ ಮಾಡಿದ ಇಲಿಯಾಗಿದೆ.

ಉಷ್ಣ ಮತ್ತು ಹಾಲು

ಮನುಷ್ಯನ ವಿಷಯದಲ್ಲಿ, ಉಷ್ಣವು, ಹಾಲಿನ ಆಹಾರ ಸತ್ವವನ್ನು ಕಡಿಮೆ ಮಾಡುವುದಿಲ್ಲವೆಂದು ತಿಳಿದಿದೆ. ಉಷ್ಣದಿಂದ ಹಾಲಿನಲ್ಲಿ ಆಗುವ ಕೊರತೆಯೆಂದರೆ ಸಿ. ವಿಟಮಿನ್ ಹೋಗುವುದು. ಇದನ್ನು ದನದ ಹಾಲಿನೊಡನೆ, ಹಣ್ಣು, ತರಕಾರಿ, ಅಥವಾ ಕಾಡ್ಲಿವರ್ ಎಣ್ಣೆ ಕೊಡುವುದರಿಂದ ಭರ್ತಿಮಾಡಿಕೊಳ್ಳಬಹುದೆಂದು ಸಂಶೋಧಿಸಿರುವರು.

ವ್ಯಕ್ತಿಗತ ಆರೋಗ್ಯ

ದೇಶದ ಆರೋಗ್ಯದಲ್ಲಿ ವ್ಯಕ್ತಿಗತ ಆರೋಗ್ಯವು (Personal Hygiene) ಪ್ರಾಮುಖ್ಯವಾಗಿದೆ. ಇಂದು ಭಾರತೀಯರು ಹಳೆಯ ಆಚಾರವೆಂಬ ಕಾರಣದಿಂದ ಹಿಂದಿನ ವ್ಯಕ್ತಿಗತ ಆರೋಗ್ಯ ಕ್ರಮವನ್ನು ಬಿಡುತ್ತಾ ಬಂದದ್ದು ಸರಿಯಾಗಲಿಲ್ಲವೆಂದು 'ಹೆಲ್ತ್' ಪತ್ರಿಕೆಯು ಬರೆಯುತ್ತದೆ.

ಮುಂಜಾನೆ ಹಲ್ಲು ಬಾಯಿ ತೊಳೆಯುವುದು, ಮತ್ತೆ ಸ್ನಾನಮಾಡುವುದು, ಸಂಜೆಗೆ ಇನ್ನೊಮ್ಮೆ ಸ್ನಾನಮಾಡುವುದು, ಪ್ರತಿಯೊಂದು ಸ್ನಾನದ ಬಳಿಕವೂ ಮಡಿಬಟ್ಟೆಗಳನ್ನುಡುವುದು ದಿನಕ್ಕೆರಡೇ ಊಟ ಮಾಡುವುದು ಇದು ಹಿಂದಿನವರ ಕ್ರಮವಾಗಿತ್ತು. ಆರೋಗ್ಯ ಜೀವನಕ್ಕೆ ಈ ಕ್ರಮಗಳು ಬಹಳ ಪ್ರಾಮುಖ್ಯವಾದವುಗಳು ಎಂದು ಆ ಪತ್ರಿಕೆಯು ಬರೆಯುತ್ತದೆ.

ಅಲಂಕಾರ ಸೌಂದರ್ಯಗಳಿಗೆ ಎಲೆಗಳು

ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಅಲಂಕಾರ ಭೂಷಣಗಳಿಗೆ, ವನವೃಕ್ಷಗಳು ಎಲೆಗಳು ಉಪಯೋಗಿಸಲ್ಪಡುತ್ತಿದ್ದವು. ಆದರೆ, ಇತ್ತೀಚೆಗೆ ಪಾಶ್ಚಾತ್ಯರ ಪ್ರಭಾವದ ಮೇಲೆ ಕ್ರೀಮುಗಳ ಉಪಯೋಗ ಬಂದು ಎಲೆಗಳನ್ನು ಸೌಂದರ್ಯಸಾಧನವಾಗಿ ಉಪಯೋಗಿಸುವುದು ಬಿಟ್ಟು ಹೋಗಿದೆ.

ಈಗ ಯುದ್ಧದಿಂದ ಪರದೇಶದ ಕ್ರೀಮುಗಳು ಸಿಗದಿದ್ದರೂ, ಕಾಲೇಜು ಹುಡುಗಿಯರು ವ್ಯಥೆಪಡಬೇಕಾಗಿಲ್ಲವೆಂದು ಕೆಮ್ರೀಸಿಕಲ್ ಪತ್ರಿಕೆಯಲ್ಲಿ ಲೇಖನವೊಂದು ಬಂದಿದೆ.

ನಿಂಬೆಯಲ್ಲಿ ಚರ್ಮವನ್ನು ಬಿಳಿಮಾಡುವ ಮತ್ತು ಮೃದುಮಾಡುವ ಶಕ್ತಿಗಳಿವೆಯಂತೆ. ಟೊಮೆಟೋದಲ್ಲಿ, ಕೇಬೇಜ್ ಎಲೆಗಳಲ್ಲಿ, ಪೊಟೆಟೋಗಳಲ್ಲಿ ಸಾತೆಕಾಯಿಗಳಲ್ಲಿ ಇವುಗಳ ಎಲೆಗಳಲ್ಲಿಯೂ ಸೌಂದರ್ಯಕಾರಕ ಶಕ್ತಿಗಳು ಕೂಡಿರುವುವೆಂದು ಅದರಲ್ಲಿ ವಿವರಿಸಿದೆ.

ಒಂದು ಮೈಲಿಗೆ ಎಷ್ಟು ಹೆಜ್ಜೆಗಳು?

ಸಾಮಾನ್ಯವಾಗಿ ಒಬ್ಬ ಮನುಷ್ಯನು ಒಂದು ಮೈಲು ನಡೆಯುವಾಗ, ೨,೨೦೦ ಹೆಜ್ಜೆಗಳನ್ನಿಡುವನೆಂದು ಗಣಿಸಲಾಗಿದೆ.

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"
Danthadavan Choorna

Economical in use. Cheapest in value
Genuine in quality and choiced by all.
Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"
ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

ಓಂಪೊನಾ

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-
ದಿ ಪ್ರೊವ್ಹಿನ್ಶಿಯಲ್ ಸ್ಟೋರ್ಸ್, ಮಂಗಳೂರು.

Stockists: —

Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

THE BANK OF MANGALORE LIMITED.

HEAD OFFICE MANGALORE ESTD 1931

Branches — MOODABIDRI & PADUBIDRI.

NOTICE

On and from 1st January 1941 the following are the revised rates of interest on deposits

FIXED DEPOSITS.

For 2 years or over	5 per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price **0-2-6** per Copy.

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—13—0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 22—8—1941   [ಸಂಚಿಕೆ 34]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊಡಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,— CALICUT—MADRAS,
TRIVANDRUM,—BANGALORE City, —and BOMBAY 4.

ಇಂದು ಪ್ರತಿಯೊಬ್ಬರೂ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI



ಯುದ್ಧ ಹಡಗದ ಒಳಗಡೆ ಸೈನಿಕರು ಚಾ ಪಾನಮಾಡುತ್ತಾರೆ.
ಒಂದರೆಗಳಿಗೆ ಇವರೆಲ್ಲರೂ ಒಟ್ಟುಗೂಡಿ ಹೀಗೆ ಹರ್ಷದಿಂದ ಚಾಪಾನ ಮಾಡುವರು, ಮುಂದೆ
ಉತ್ತರಕ್ಷಣದಲ್ಲಿ ಎಲ್ಲಿಯೋ ಯುದ್ಧರಂಗದಲ್ಲಿ ನಿಂತು ಕಾದಾಡಬೇಕಾಗುವುದ

KANNADA ILLUSTRATED WEEKLY

ನರನಾಡಿಗಳ ದೌರ್ಬಲ್ಯತೆಯಿಂದ ಜೀವವು ಕೆಡದಂತೆ ನೋಡಿಕೊಳ್ಳಿರಿ.

ಅಧಿಕ ಜನರು ಮೊದಲಾಗಲೀ, ಕಡೆಗಾಗಲಿ, ನರಗಳ ದೌರ್ಬಲ್ಯತೆಯಿಂದ, ನರಳಿ ಆರೋಗ್ಯವನ್ನು ಕಳೆದುಕೊಂಡು ಖಿನ್ನಚಿತ್ತರಾಗುತ್ತಾರೆ. ಈ ಪ್ರಕಾರವಾಗಿ ನೀವು ನರಳುವಿರಾದರೆ, ಅಮೂಲ್ಯ ಆಹಾರಪಾನೀಯವಾದ 'ಓವಲ್ಟಿನ್'ನ್ನು ಸ್ವಲ್ಪದಿನಗಳ ತನಕ ಕುಡಿದುನೋಡಿರಿ. ಆಗ್ಯೆ ಪುನಹ ಎಷ್ಟು ಉತ್ತಮ ಆರೋಗ್ಯದಿಂದಿದ್ದರೆಂಬುದು ನಿಮಗೆ ತಿಳಿಯುವದು; ನಿಮ್ಮ ನರನಾಡಿಗಳು ಹೊಸತಾಗಿ ಕಾಣುವವು. ಖಿನ್ನತೆಯು ಮಾಯವಾಗುವುದು. ಸುಖವಾದ ನಿದ್ರೆಯು ಬೀಳುವುದು.

'ಓವಲ್ಟಿನ್' ನರನಾಡಿನಳಿಗೆ ಪೋಷಣೆಯನ್ನೀಯುವುದು, ಜೀರ್ಣಶಕ್ತಿಯನ್ನುವೃದ್ಧಿಸುವುದು, ಮತ್ತು ಅದೇ ಸಮಯದಲ್ಲಿ ದೇಹವನ್ನೂ, ಮೆದುಳನ್ನೂ ಬಲಗೊಳಿಸುವುದು. 'ಓವಲ್ಟಿನ್'ನ್ನು ಯಾವಾಗಲೂ ಕುಡಿದು ನಿಮ್ಮ ಆರೋಗ್ಯವನ್ನು ಸರಿಯಾಗಿರಿಸಿರಿ.

ನೆನೆಯಹಾಕಿ ಮಾಗಿದ ಬಾರ್ಲಿ ದನದ ಹಸಿಹಾಲಿನ ಕೆನೆ, ಇತರ ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟಿದೆ 'ಓವಲ್ಟಿನ್' ಜಗತ್ತಿನ ಒಂದು ಉತ್ತಮ ಆಹಾರಪಾನೀಯ. ಇತರ ಎಲ್ಲಾ ನಕಲಿಯನ್ನು ತ್ಯಜಿಸಿರಿ.

'ಓವಲ್ಟಿನ್' ಒಂದು ರುಚಿಕರವಾದ ಆಹಾರ ಪಾನೀಯ ಟೋನಿಕಾಗಿರುತ್ತದೆ. ಇದನ್ನು ತಣ್ಣಗೆಯೂ ಬಿಸಿಯಾಗಿಯೂ ಸೇವಿಸಬಹುದು. ಅದಲ್ಲದೆ ಇದನ್ನು ತಯಾರಿಸುವುದು ಬಹೂ ಸುಲಭ ಮತ್ತು ತಯಾರಿಸುವ ವಿಧಾನವು ಟಿನ್ನಿನೊಂದಿಗಿದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

'ಓವಲ್ಟಿನ್ ಬಿಸ್ಕತ್ತು'ಗಳು

ರುಚಿಕರ, ಜೀರ್ಣಕಾರಿ, ಪೋಷಕ. 'ಓವಲ್ಟಿನ್' ಬಿಸ್ಕತ್ತುಗಳು ಕೊಂಡುಕೊಳ್ಳಲು ಅತ್ಯುತ್ತಮ. ಅಮೂಲ್ಯ ಗುಣವನ್ನೀಯುವ 'ಓವಲ್ಟಿನ್' ಇದರಲ್ಲಿರುವುದು. 4 ಔನ್ಸ್ ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿಯೂ ಒಂದು ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತವೆ.

ಡಿಸ್ಟ್ರಿಬ್ಯೂಟರ್ಸ್:—

ಗ್ರೇಹಮ್ಸ್ ಟ್ರೇಡಿಂಗ್ ಕೋ. (ಇಂಡಿಯಾ) ಲಿಮಿಟೆಡ್,

ಕ್ರೈಥನಸ್ ಹೋಲ್, 310/311, ಲಿಂಗಿಚೆಟ್ಟಿಸ್ಟ್ರೀಟ್, ಮದ್ರಾಸು, ಹಾಗೂ ಕಲ್ಕತ್ತಾ, ಬೊಂಬಾಯಿ, ಕರಾಚಿ ಮತ್ತು ರಂಗೂನ್.

OV/10/40

ಸಾದರ-ಸ್ವೀಕಾರ

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಇದರ ೧೯೪೦ನೆಯ ವರ್ಷದ ವರದಿ ಮತ್ತು ಲೆಕ್ಕಪತ್ರಗಳ ಪಟ್ಟಿಯು ನಮ್ಮ ಹಸ್ತಗತವಾಗಿದೆ. ಯುದ್ಧದ ದೆಸೆಯಿಂದ ಆರ್ಥಿಕ ಮುಗ್ಗಟ್ಟು ಹೆಚ್ಚಿರುವೀ ಕಾಲದಲ್ಲಾದರೂ ಕಂಪೆನಿಯು ೧೨.೨ ಲಕ್ಷ ರೂಪಾಯಿಗಳ ಹೊಸ ವ್ಯಾಪಾರ ಮಾಡಿರುವುದು ಪ್ರಶಂಸನೀಯವಾದುದು. ಕಂಪೆನಿಯ ರಿನ್ಯೂವಲ್ ಪ್ರೀಮಿಯಮ್ ಈ ವರ್ಷ ರೂ. ೩೩-೫೪ ಲಕ್ಷ; ಎಂದರೆ ಕಳೆದ ವರ್ಷಕ್ಕಿಂತಲೂ ರೂಪಾಯಿ ೨-೬೫ ಲಕ್ಷ ಹೆಚ್ಚು. ಲಾಭ, ಡಿವಿಡೆಂಡ್ ಮತ್ತು ಬಾಡಿಗೆಗಳಿಂದ ಕಂಪೆನಿಯ ನೆಟ್ ಇನ್‌ಕಮ್ ರೂ. ೫.೮೨; ಎಂದರೆ ಕಳೆದ ವರ್ಷಕ್ಕಿಂತ ರೂ. ೧೨,೦೦೦ ಹೆಚ್ಚಾಗಿದೆ.

೧೯೩೮ನೆಯ ಇಸವಿಯ ಇನ್ಶೂರೆನ್ಸ್ ಏಕ್ಟಿನ ಮೇಲೆ ರೂ. ೫೦೦೦ರ ಕೆಳಗಿನ ಇನ್ಶೂರೆನ್ಸ್ ಪಾಲಿಸಿಗಳನ್ನು ಕೊಡುವುದು ನಿಂತುಹೋಗಿದೆ. ಇದರಿಂದ ಬಹಳ ಹೆಚ್ಚಿನ ಮಂದಿ ಇನ್ಶೂರ್ ಮಾಡದಂತೆ ನಿರ್ಬಂಧ ಹಾಕಿದಂತಾಗಿತ್ತು. ಇಂತಹ ನಿರ್ಬಂಧವನ್ನು ಪರಿಹರಿಸಲು ಈ ಕಂಪೆನಿಯು ಸ್ವದೇಶಿ ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿಯೆಂಬ ರೂಪಾಯಿ ೧,೦೦,೦೦೦ ಮೂಲಧನದ ಹೊಸಕಂಪೆನಿಯೊಂದನ್ನು ಪ್ರಾರಂಭಿಸಿ ರೂ. ೫೦೦೦ರ ಕೆಳಗೂ ಪೋಲಿಸಿಕೊಡುವರೆ ಸೌಕರ್ಯ ಮಾಡಿದ್ದು ಅನೇಕ ಮಂದಿ ಬಡವರಿಗೆ ಹೆಚ್ಚಿನ ಸೌಕರ್ಯಕರವಾಗಿದೆ. ಕಂಪೆನಿಯು ಮುಂದಕ್ಕೆ ಒಳ್ಳೆಯ ವ್ಯಾಪಾರಾಭಿವೃದ್ಧಿ ಹೊಂದ ಹೆಚ್ಚು ಪ್ರೋತ್ಸಾಹ ಪಡೆಯಲಿ ಎಂದು ನಾವು ಆಶಿಸುತ್ತೇವೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

29–8–1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. [೨೯—೮—೧೯೪೧

ಸಮರ ಭೂಮಿಯ ಸಂಚಾರ

ಹತ್ತು ವಾರದೊಳಗೆ ರಶ್ಯದ ಕತೆಯನ್ನು ತೀರಿಸಿ ಬಿಡುವೆನೆಂದು, ಹಿಟ್ಲರನು ಅದರ ಮೇಲೆ ಯುದ್ಧ ಸಾರುವಂದು ಹೇಳಿದ ಹೆಮ್ಮೆಯ ಮಾತನ್ನು ವಾಚಕರು ಮರೆತಿರಲಿಕ್ಕಿಲ್ಲ. ರಶ್ಯ–ಜರ್ಮನ್ ಕಾಳಗವು ಆರಂಭವಾಗಿ ಇಂದಿಗೆ ಒಂಬತ್ತು ವಾರಗಳಾದುವು. ಹಿಟ್ಲರನಾದರೂ ತನ್ನ ಮಾತನ್ನು ಮರೆಸಿಬಿಡುವ ಸಲುವಾಗಿ ಅಸಾಧ್ಯವಾದ ಸ್ಫಾಹದಿಂದಲೇ ಕಾದಾಡಿದನು. ಛಳಿಗಾಲ ಆರಂಭವಾಗುವುದರೊಳಗೆ ಜರ್ಮನರಿಗೆ ರಶ್ಯದ ಯುದ್ಧ ಕೊನೆಗಾಣಿಸಬಿಡಬೇಕೆಂಬ ಹಠವಿರುವಂತೆ ತೋರುತ್ತದೆ. ಅದಕಾರಣವೇ ಇತ್ತೀಚೆಗೆ ರಣರಭಸವು ಹೆಚ್ಚಾಗುತ್ತಲಿದೆ.

ಲೆನಿನ್‌ಗ್ರಾಡ್ ರಕ್ಷಣೆಗಾಗಿ

ಯುದ್ಧದ ಮೊದಲನೆಯ ವಾರ ಜರ್ಮನರು ಬಹಳ ಮುಂದೊತ್ತಿ ಬಂದರು; ಕಾರಣ ರಶ್ಯನರು ಆಕಸ್ಮಿಕವಾಗಿ ಮುತ್ತಲ್ಪಟ್ಟಿದ್ದರು; ಆದರೆ ಮತ್ತೆ ಜರ್ಮನರ ಆಕ್ರಮಣ ಕುಂಠಿತವಾಗತೊಡಗಿತು; ಮತ್ತೆ ಏಳು ಎಂಟನೆಯ ವಾರಗಳಿಂದ ಮಾತ್ರ ಜರ್ಮನರು ಬಹಳ ತೀವ್ರರಾಗಿ ಕಾದಾಡತೊಡಗಿರುವರು; ಇಂದು ರಶ್ಯದ ಬಹುಭಾಗವು ಜರ್ಮನರ ಸ್ವಾಧೀನವಾಗಿದೆ. ಯುಕ್ರೇನು ಇಂದು ರಶ್ಯನರ ಕೈತಪ್ಪಿರುವುದು. ಲೆನಿನ್‌ಗ್ರಾಡನ್ನು ಕೈವಶಮಾಡಿಕೊಳ್ಳುವ ಕಾದಾಟವು ಮಹೋಗ್ರವಾಗಿ ಸಾಗುತ್ತಲಿದೆ. ಲೆನಿನ್‌ಗ್ರಾಡಿನ ನೈಋತ್ಯದಲ್ಲಿರುವ ಕಿಂಗಿಸೆಪ್ ಮತ್ತು ನೋವಾಗ್ರಾಡುಗಳ ಸಮೀಪದಲ್ಲಿ ಕಾಳಗವು ರಭಸವಾಗಿ ಸಾಗುತ್ತಿದೆ. ಲೆನಿನ್‌ಗ್ರಾಡನ್ನು ಕಾಪಾಡಿಕೊಳ್ಳಿರೆಂದು ರಶ್ಯನ್ ಸೇನಾಧಿಪತಿ ವ್ರೊರೊಶಿಲೋವ್ ನಾಗರಿಕರಲ್ಲಿ ಒಂದು ಕರುಣೆಯ ವಿನಂತಿಯನ್ನೇ ಮಾಡಿಕೊಂಡಿರುವನು. ತಮ್ಮ ಜೀವಹೋತ್ತಾದರೂ ರಶ್ಯನರು ಲೆನಿನ್‌ಗ್ರಾಡನ್ನು ರಕ್ಷಿಸಲು ಯತ್ನಿಸುವರು. ಫಿನ್ನರು ಉತ್ತರದಿಂದಲೂ ಇತರ ಕಡೆಗಳಿಂದ ಜರ್ಮನರೂ ಲೆನಿನ್‌ಗ್ರಾಡನ್ನು ಸುತ್ತುಗಟ್ಟಿರುವರು. ಸ್ಮೊಲೆನ್‌ಸ್ಕ ತಮ್ಮ ವಶವಾಗಿರುವುದೆಂದು ಜರ್ಮನರು ತಿಂಗಳ ಹಿಂದೆ ಸಾರಿದ್ದರೂ ಅಲ್ಲಿ ಇಂದಿಗೂ ಕಾಳಗ ನಡೆದೇ ಇರುವುದರಿಂದ ಜರ್ಮನರ ಆ ಘೋಷಣೆಯನ್ನು ನಂಬಲು ಆಗುವುದಿಲ್ಲ. ಒಡೆಸ್ಸಾ ನಿಕೊಲಾವುಗಳನ್ನು ವಶಪಡಿಸಲು ನಡೆದ ಹೋರಾಟದಲ್ಲಿ ಎರಡು ಕಡೆಯವರಿಗೂ ಬೇಕಾದಷ್ಟು ಹಾನಿನಷ್ಟಗಳಾದುವು. ಯುಕ್ರೇನನ್ನು ವಶಪಡಿಸಿ, ಅಲ್ಲಿಂದ ಜರ್ಮನರ ಮುಂದೊತ್ತುವಿಕೆಯು ಹೆಚ್ಚುತ್ತಿದೆ. ನಿಕೊಲೊವ್; ಕ್ರಿವೊಯಿಗಳು ತಮ್ಮ ಕೈಬಿಟ್ಟಿರುವುದಾಗಿ ರಶ್ಯನರೇ ಒಪ್ಪಿರುತ್ತಾರೆ. ಗೋಮೆಲ್ ಜರ್ಮನರ ವಶಬಿದ್ದಿರುವುದಾಗಿ ತಿಳಿಯುತ್ತದೆ. ಯುಕ್ರೇನಿನಂತೆ ಕಬ್ಬಿಣದ ಅದುರಿಗೆ ಪ್ರಸಿದ್ಧವಾದ ಕ್ರಿವಿಯುರಾಗ್ ಪಟ್ಟಣವೂ ಜರ್ಮನ್ ವಶವಾಗಿದೆ. ನೀಪರ್ ನದಿಯನ್ನು ದಾಟಲು ಜರ್ಮನರು ಯತ್ನಿಸುವರಾದರೂ, ಇದುವರೆಗೆ ಅವರು ದಾಟಬರಲಿಲ್ಲ. ನೀಪರ್ ನದಿಯ ವರೆಗಿನ ಪ್ರದೇಶಗಳೆಲ್ಲವೂ ಜರ್ಮನರ ವಶವಾಗಿರುತ್ತವೆ. ರಶ್ಯ ಜರ್ಮನ್ ಯುದ್ಧದಲ್ಲಿ ಬಹಳ ಸಂಧಿಯ ಕಾಲವು ಇದೀಗ ಬಂದೊದಗಿರುವುದೆಂದು ತಿಳಿಯಬೇಕಾಗಿದೆ.

ಯುಕ್ರೇನು ಸಂಪತ್ತಿನ ಖನಿ

ಯುಕ್ರೇನು ಕೈಬಿಟ್ಟದ್ದು ರಶ್ಯನರಿಗೆ ಬಹಳ ದೊಡ್ಡ ನಷ್ಟವೇ ಎನಬೇಕು. ಶೇಕಡಾ ೬೦ಕ್ಕಿಂತ ಮಿಕ್ಕಿದ ಕಬ್ಬಿಣವು ರಶ್ಯಕ್ಕೆ ಯುಕ್ರೇನಿನಿಂದಲೇ ಒದಗಿ ಬರುತ್ತಿತ್ತು. ಇದರ ವಿಸ್ತೀರ್ಣ ೪೫೧,೭೩೦ ಚದುರ ಮೈಲುಗಳಿದ್ದು ಇಲ್ಲಿ ಆಕ್ರಮಿಸಿದ ಜರ್ಮನರಿಗೆ ಸಾಕಾಗುವಷ್ಟು ಗೋಧಿಯೂ ಬೆಳೆಯುತ್ತದೆ. ರಶ್ಯಕ್ಕೆ ಬೇಕಾಗುವ ಸಕ್ಕರೆಯ ಬಹು ಮುಖ್ಯಭಾಗವು ಇಲ್ಲಿಯೇ ಉತ್ಪತ್ತಿಯಾಗುತಿತ್ತು. ಫ್ರಾನ್ಸ್, ಜಪಾನು; ಪೋಲೆಂಡುಗಳಿಗಿಂತ ಮೂರು ಪಾಲು ಕಲ್ಲಿದ್ದಲು ಇಲ್ಲಿ ಸಿಗುತ್ತದೆ. ಉಪ್ಪು, ಮ್ಯಾಂಗನೀಸ್, ತಾಮ್ರ, ಪಾದರಸ, ರಂಜಕ ಮೊದಲಾದವೂ ಇಲ್ಲಿ ಹೇರಳವಾಗಿದೆ. ಇದು ಜಗತ್ತಿನಲ್ಲಿಯೇ ಪ್ರಸಿದ್ಧವಾದ ವಿದ್ಯುಚ್ಛಕ್ತಿ ಕೇಂದ್ರವಾಗಿದೆ. ಇಷ್ಟು ಸಂಪದ್ಯುಕ್ತವಾದ ರಶ್ಯದ ಶಕ್ತಿ ಕೇಂದ್ರವಂತಿದ್ದ ಯುಕ್ರೇನು ಇಂದು ಕೈಬಿಟ್ಟದ್ದು ಬಹಳ ದೊಡ್ಡ ನಷ್ಟವಾಯಿತು. ಇದನ್ನು ಪಡೆದು ಬಿಡಬೇಕೆಂದು ಬಹುಕಾಲದಿಂದ ಹಿಟ್ಲರನು ಬಯಸಿ ಕನಸು ಕಾಣುತ್ತಿದ್ದುದು ಇಂದು ಅವನ ಮಟ್ಟಿಗೆ ಸಾರ್ಥಕವಾಯಿತು.

ಪೂರ್ವದ ಪರಿಸ್ಥಿತಿ

ಜಪಾನು ಪೂರ್ವದಲ್ಲಿ ಮುಂದೊತ್ತಿ ಬರುವ ಮನಸ್ಸು ಮಾಡಿದ ವಿಷಯ ಈಗ ಜಗಜ್ಜಾಹಿರವಷ್ಟೆ? ಆದರೆ ಅದು ಇನ್ನು ಯಾವಲ್ಲಿಗೆ ಧಾಳಿ ಮಾಡುವುದೆಂಬುದು ಖಾಡಿತವಾಗಿ ತಿಳಿದಿಲ್ಲ. ಬ್ರಿಟಿಷ್ ಅಮೇರಿಕಗಳ ವಿರುದ್ಧ ಜಪಾನು ಬಹಳ ಚಟುವಟಿಕೆ ನಡೆಸುತ್ತಲಿದೆ. ಈ ವಿಷಯದಲ್ಲಿ ಬ್ರಿಟಿಷ್ ಅಮೇರಿಕಗಳೂ ಎಚ್ಚರದಿಂದಿವೆ. ಜಪಾನು ಅಮೇರಿಕಗಳೊಳಗೆ ಒಂದು ಒಪ್ಪಂದ ಸೂಚನೆ ಬಂದಿರುವುದೆಂದೂ, ಅದು ಯೋಗ್ಯ ಹಾಗೂ ಸಮಾಧಾನ ರೀತಿಯಲ್ಲಿ ಆಗದಿದ್ದರೆ ತಾವು ಅಮೇರಿಕದ ಬೆಂಬಲ ನಿಲ್ಲುವೆವೆಂದೂ ಚರ್ಚಿಲ್ಲರು ಮೊನ್ನೆ ಆಕಾಶ ಭಾಷಣವೊಂದರಲ್ಲಿ ಹೇಳಿದರು. ಜಪಾನಿನ ಸೈನ್ಯಗಳು ಬರ್ಮಾ ಸಯಾಮುಗಳ ಗಡಿಗಳಲ್ಲಿ ತುಂಬುತ್ತಲಿರುವವೆಂದು ಸುದ್ದಿ. ಮಲಯದ ರಕ್ಷಣೆಗಾಗಿ ಸಿದ್ಧತೆಗಳು ಸಾಕಷ್ಟು ಜರಗುತ್ತಿವೆ. ಈಗ ಪರಿಸ್ಥಿತಿ ಶಾಂತವಾಗಿದ್ದರೂ, ಇದು 'ಬಿರುಗಾಳಿಯ ಮೊದಲಿನ ಶಾಂತಿ'ಯೇ ಎಂದು ಹಲವರ ಊಹನೆಯಾಗಿದೆ.

ಇರಾಣಿಗೆ ಸೈನ್ಯ ಸಾಗಿತು

ಇಷ್ಟರಲ್ಲಿ ರಶ್ಯನ್ ಬ್ರಿಟಿಷ್ ಸೈನ್ಯಗಳು ಇರಾಣಿನ ಕಡೆಗೆ ಸಾಗಿರುತ್ತವೆ. ಇರಾಣಿನಲ್ಲಿ ಜರ್ಮನರ ಚಟುವಟಿಕೆಗಳು ಕೆಲಕಾಲದಿಂದ ಬಹಳ ತೀವ್ರವಾಗಿ ಸಾಗುತ್ತಲಿದ್ದು ಅಲ್ಲಿ ಜರ್ಮನರ ಸಂಖ್ಯೆ ಬಹಳವಾದ ನಿಮಿತ್ತ ಇರಾಣ್ ಸರಕಾರವನ್ನು ಬ್ರಿಟಿಷ್ ಸರಕಾರವು ಎಚ್ಚರಿಸಿತು. ಇರಾಣಿನಲ್ಲಿ ಅವರ ಚಟುವಟಿಕೆಯು ಇತ್ತಕಡೆಯ ಅನೇಕ ರಾಷ್ಟ್ರಗಳ ಭದ್ರತೆಗೆ ಅಪಾಯವೆಂದು ಆ ಎಚ್ಚರಿಕೆಯಲ್ಲಿ ಹೇಳಲಾಗಿತ್ತು. ಈ ವಿಷಯದಲ್ಲಿ ಇರಾಣ್ ಸರಕಾರವು ಕೊಟ್ಟ ಉತ್ತರವು ಅಷ್ಟೊಂದು ಸಮರ್ಪಕವಾಗಿ ಬ್ರಿಟನಿಗೆ ತೋರಲಿಲ್ಲ. ಜರ್ಮನ್ ಆಕ್ರಮಣವನ್ನು ಇರಾಣ್ ತಡೆಯಲು ಸಮರ್ಥವಾಗಲಾರದೆಂದು ತಿಳಿದು ಮುಂಜಾಗ್ರತೆಗಾಗಿ ಬ್ರಿಟಿಷ್ ಸೇನೆಯನ್ನು ಅಲ್ಲಿಗೆ ಸಾಗಿಸಲಾಗಿದೆಯೆಂದೂ, ಅದನ್ನು ಹಿಂಬಾಲಿಸಿ ಸೋವಿಯೆಟ್ ದಲವು ಬಂದಿರುವುದೆಂದೂ ಹೇಳಿಕೆಯಾಗಿದೆ. ಇರಾಣನ್ನು ಆಕ್ರಮಿಸುವ ಸಲುವಾಗಿ ಹೀಗೆ ಸೈನ್ಯ ಸಾಗಿಸಲಿಲ್ಲವೆಂದೂ, ಜರ್ಮನರನ್ನು ನಿರ್ಬಂಧಿಸುವ ಸಲುವಾಗಿ ಇಂತಹ ಮುಂಜಾಗ್ರತೆ ವಹಿಸಬೇಕಾಯಿತೆಂದೂ ಅವರ ಪ್ರಕಟಣೆಯಿರುತ್ತದೆ. ಆದರೆ ಇರಾಣ್ ಸರಕಾರವು ಬ್ರಿಟಿಷ್ ರಶ್ಯನ್ ಸರಕಾರದ ಈ ಧೋರಣೆಯನ್ನು ಮೆಚ್ಚಿರುವುದಿಲ್ಲ. ತಾವು ತಟಸ್ಥವಾಗಿರುವಾಗ ತಮ್ಮ ಮೇಲೆ ಅನ್ಯಾಯದಿಂದ ಆಕ್ರಮಿಸಿರುವುದಾಗಿ ತಾವು ಇದನ್ನು ಎದುರಿಸುವುದಾಗಿಯೂ ಅಲ್ಲಿನ ಮುಖ್ಯಮಂತ್ರಿ ಹೇಳಿರುತ್ತಾನೆ. ಇದರ ಪ್ರತಿಕ್ರಿಯೆಗಳು ದಮನೀಯವಿದೆ.

AN INVITATION

Large Surplus Funds are awaiting investment. In order to invest this surplus, Loans will be granted at specially reduced rates against Gold, Market Produce, Government Securities, etc., etc.,

You are invited to take advantage of these special terms.

CANARA BANK LIMITED

ESTD 1906.

ಸ್ವದೇಶಾಭಿಮಾನಿ

ತಾರೀಕು 29—8—1941

ಇರಾಣ್

ಇರಾಣಿನ ಸುದ್ದಿಯು ಇತ್ತೀಚೆಗೆ ಪ್ರಾಮುಖ್ಯವಾಗತೊಡಗಿದೆ. ಅಲ್ಲಿ ನಾಜೀ ಚಟುವಟಿಕೆಗಳು ಹೆಚ್ಚುತ್ತಿರುವವೆಂದು ತಿಳಿದು, ಬ್ರಿಟಿಷ್ ಋಶ್ಯನ್ ಸೈನ್ಯಗಳು ಅಲ್ಲಿಗೆ ಪ್ರವೇಶಮಾಡಿದ ಸುದ್ದಿ ತಿಳಿದುಬಂದಿದೆ. ಇರಾಣಿನಲ್ಲಿ ಅಂಂಕ್ಕೆ ಮಿಕ್ಕಿದ ಜರ್ಮನರು ಸೇರಿರುವುದರಿಂದ ಅವರನ್ನು ಹೊರಹಾಕಬೇಕೆಂದು, ಬ್ರಿಟಿಷ್ ಸರಕಾರವು ಇರಾಣ್ ಸರಕಾರಕ್ಕೆ ಸೂಚನೆ ಕಳುಹಿಸಿತ್ತು. ಇದಕ್ಕೆ ಇರಾಣ್ ಸರಕಾರವು ಕೊಟ್ಟ ಉತ್ತರವು ಅಷ್ಟು ಸಮರ್ಪಕವಾಗಿ ತೋರಿಬರದಿರುವುದರಿಂದ, ಇರಾಣಿಗೆ ಜರ್ಮನಿಯಿಂದ ತೊಂದರೆ ಬರಲಿರುವುದೆಂಬ ವಿಷಯದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳುವರೆ ಈಗ ಬ್ರಿಟಿಷ್ ರಶ್ಯನ್ ಸೈನ್ಯಗಳು ಆ ಕಡೆ ಸಾಗಿರುವವಾಗಿ ಪ್ರಕಟವಾದ ಸುದ್ದಿಗಳಿಂದ ಗೊತ್ತಾಗುತ್ತದೆ.

ಇಂದಿನ ಯುದ್ಧದಲ್ಲಿ ಇರಾಣಿಗೆ ಇಷ್ಟು ಮಹತ್ವವು ಯಾಕೆ ಕೊಡಲಾಗಿದೆಯೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಿದೆ. ಲೋಕದ ಎಣ್ಣೆಯ ಕ್ಷೇತ್ರಗಳಲ್ಲಿ ಇರಾಣ್ ಬಹಳ ಪ್ರಾಮುಖ್ಯವಾದ ಒಂದು ಕ್ಷೇತ್ರವಾಗಿದೆ. ಯುದ್ಧದಲ್ಲಿ ಎಣ್ಣೆಯು ಎಂತಹ ಪ್ರಬಲ ಉಪಕಾರೀ ಸಾಧನವೆಂಬುದು ಎಲ್ಲರಿಗೂ ಗೊತ್ತಿದೆ. ಇರಾಣಿನ ಎಣ್ಣೆ ಕಂಪೆನಿಯಲ್ಲಿ ಬ್ರಿಟಿಷರ ದುಡ್ಡೇ ಹೆಚ್ಚಾಗಿರುವುದು. ರಶ್ಯ, ಅಮೇರಿಕ, ಹಿಂದುಸ್ತಾನ, ಜರ್ಮನಿ ದೇಶಗಳಿಗೂ ಅಲ್ಲಿಂದ ವ್ಯಾಪಾರ ಆಗುತ್ತಲಿದೆ. ಇರಾಕ್ ಇರಾಣ್‌ಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಜರ್ಮನಿಯು ಮೊದಲಿಂದಲೇ ಹೊಂಚುಹಾಕುತ್ತಲಿರುವುದು ಪ್ರಕಟವಾಗಿತ್ತು. ಇತ್ತೀಚೆಗೆ ಅಲ್ಲಿ ಜರ್ಮನ್ ಚಟುವಟಿಕೆಗಳೂ ಹೆಚ್ಚುತ್ತ ಬಂದುವು; ಇದೆಲ್ಲವನ್ನು ನೋಡಿ ಇರಾಣಿಗೆ ಜರ್ಮನಿಯಿಂದ ತೊಂದರೆ ಬರುವುದೆಂಬ ವಿಷಯವನ್ನು ಮೊದಲಾಗಿ ತಿಳಿದುಕೊಂಡು, ಮುಂಜಾಗ್ರತೆಗಾಗಿ ಬ್ರಿಟಿಷ್ ರಶ್ಯನ್ ಸೈನ್ಯಗಳು ಇರಾಣಿಗೆ ಸಾಗಿರುವುದಾಗಿ ಈಗ ಹೇಳಲಾಗಿದೆ.

ರಶ್ಯಕ್ಕೆ ಅಮೇರಿಕ ಬ್ರಿಟನುಗಳು ಸರ್ವಸಹಾಯವನ್ನೂ ಕೊಡುವುದಾಗಿ ಭರವಸೆಯಿತ್ತಿವೆ. ಈ ಸಹಾಯವನ್ನು ಅವುಗಳು ಕಳುಹಿಸುವುದಿದ್ದರೆ ಒಂದು ಸಾರ್ವಮಾರ್ಗವಾಗಿ; ಅದು ಈಗಾಗಲೇ ಜರ್ಮನ್ ಸ್ವಾಧೀನವಾಗಿದ್ದು ಅಲ್ಲಿಂದ ಕಳುಹಿಸುವುದು ಸಾಧ್ಯವಿಲ್ಲ. ಮತ್ತೆ ಸಿರಿಯಾ, ಇರಾಣ್, ಕಾಕೇಸಸ್ ಮಾರ್ಗವೊಂದು ಮಾತ್ರ ಉಳಿಯಿತು; ಹಿಟ್ಲರನು ಇರಾಣಿನಲ್ಲಿ ಮಾಡುವ ಚಟುವಟಿಕೆಗಳನ್ನು ನೋಡಿದರೆ ಅಲ್ಲಿಯೂ ರಶ್ಯಕ್ಕೆ ಸಹಾಯ ಕಳುಹಿಸುವರೆ ತಡೆಯನ್ನು ಮಾಡಬೇಕೆಂದು ಬಗೆದಂತೆ ತೋರುತ್ತದೆ. ಈ ವಿಷಯವನ್ನು ಮನದಂದು ಇರಾಣನ್ನು ಜರ್ಮನಿಯ ಹಿಡಿತದಿಂದ ತಪ್ಪಿಸಲು ಈಗ ಬ್ರಿಟನ್ ರಶ್ಯಗಳು ಈ ಮುಂಜಾಗ್ರತೆ ವಹಿಸಿರುವವೆಂದು ತಿಳಿಯಬಹುದು.

ಆದರೆ ಬ್ರಿಟಿಷ್ ರಶ್ಯನ್ ಸರಕಾರಗಳ ಈ ಧೋರಣೆಯನ್ನು ಇರಾಣ್ ಸರಕಾರವು ಸ್ವಾಗತಿಸಿಲ್ಲ. ಇವನ್ನು ಅನ್ಯಾಯವಾಗಿ ಹೀಗೆ ಆಕ್ರಮಿಸಿರುವರೆಂದು ಇರಾಣ್ ಪಾರ್ಲಿಮೆಂಟಿನ ಸಭೆಯಲ್ಲಿ ಅಲ್ಲಿನ ಮುಖ್ಯ ಮಂತ್ರಿ ಹೇಳಿದನು. ತಾವು ಈ ಯುದ್ಧದಲ್ಲಿ ತಟಸ್ಥರಾಗಿರುವುದಾಗಿ ಹೇಳಿದ್ದರೂ ತಮ್ಮ ಮೇಲೆ ಹೀಗೆ ಪಠಾತ್ತಯ ಮಾಡಲಾಯಿತೆಂದು ಅವನ ಹೇಳಿಕೆಯಿದೆ. ಬ್ರಿಟಿಷ್ ರಶ್ಯನ್ ಸರಕಾರಗಳು ಕೊನೆಯ ಎಚ್ಚರಿಕೆಯನ್ನು ಕೊಡುವ ಮೊದಲೇ ಸೈನ್ಯವನ್ನು ಈ ಕಡೆ ಸಾಗಿಸಿರುವುದಾಗಿ ಅವನ ಅಭಿಪ್ರಾಯವಾಗಿದೆ. ಈ ಪರಿಸ್ಥಿತಿಯನ್ನು ಇರಾಣ್ ಸರಕಾರವು ಎಲ್ಲಾ ವಿಧಗಳಿಂದಲೂ ಎದುರಿಸುವುದಾಗಿ ಆತನು ತಿಳಿಸಿದ್ದಾನೆ. ಜರ್ಮನಿಯಂತೂ ಈ ಸಂದರ್ಭದಲ್ಲಿ ಬ್ರಿಟಿಷ್ ರಶ್ಯನ್ ಧೋರಣೆಯನ್ನು ವಿರೋಧಿಸುವುದು ಖಂಡಿತವಾದುದು. ಮುಂದಿನ ವಿಚಾರಗಳು ಗಮನೀಯವಿವೆ.

ವಿದ್ಯಾರ್ಥಿಗಳ ಮೇಲೆ ಲಾಠಿ!

ಬೊಂಬಾಯಿ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಸಮಯದಲ್ಲಿ ಭಾಷಣಕೊಡಲು ಆಮಂತ್ರಿತರಾದ ಸರ್ ಮಾರಿಸ್ ಗ್ವಾಯರರ ವಿಷಯದಲ್ಲಿ ಶಾಂತರೀತಿಯಿಂದ ವಿರೋಧ ಪ್ರದರ್ಶನ ಮಾಡಿದ ಬಗ್ಗೆ ಅಲ್ಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಲಾಠೀ ಪ್ರಯೋಗ ಮಾಡಿದ ವಿಷಾದಮಯ ಸುದ್ದಿ ಮುಂಬಯಿ ವಿಶ್ವವಿದ್ಯಾನಿಲಯದ ಹಾಗೂ ಸರ್ ಗ್ವಾಯರರಂತಹ ಉನ್ನತ ಅಧಿಕಾರಸ್ಥರಿಂದವರ ಗೌರವಗಳಿಗೆ ಕುಂದುತರುವಂತಹುದಾಗಿ, ವಿದ್ಯಾ ಕ್ಷೇತ್ರದಲ್ಲಿಯೇ ಲಜ್ಜಾಸ್ಪದವಾದ ವಿಷಯವಾಗಿ, ಭಾರತದ ಇತಿಹಾಸದಲ್ಲಿಯೇ ಕಲಂಕ ಕಾರಕವೆನಿಸಿ ಬರೆಯಲ್ಪಡುವ ಘಟನೆಯಾಗಿ ಸಂಭವಿಸಿತು! ಇದರಿಂದ ಅಖಿಲ ಭಾರತದ ವಿದ್ಯಾರ್ಥಿ ಲೋಕವೇ ತಳಮಳಗೊಂಡದ್ದು ಮಾತ್ರವಲ್ಲದೆ ಭಾರತದ ಜನಮತವು ವಿಶೇಷ ಅಪಮಾನಗೊಂಡಿದೆ. ವಿದ್ಯಾಭಿಮಾನಿಗಳು ವಿದ್ಯಾರ್ಥಿಗಳ ಮೇಲೆ ಆದ ಇಂತಹ ಪಾಶವಿಕ ಪ್ರಯೋಗದ ಸುದ್ದಿ ಕೇಳಿ ಲಜ್ಜೆಯಿಂದ-ಉದ್ರೇಕದಿಂದ ತಲೆ ತಗ್ಗಿಸುವಂತಾಗಿದೆ.

ಸರ್ ಮಾರಿಸ್ ಗ್ವಾಯರರು ದೊಡ್ಡ ಮನಸ್ಕರು! ಬಹಳ ಉನ್ನತವಾದ ಅಧಿಕಾರಸ್ಥರಿಂದ ಯೋಗ್ಯ ಸಂಭಾವಿತರು. ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿರುವ ಗೌರವಾನ್ವಿತರು! ಮಾತ್ರವಲ್ಲದೆ ಡಿಲ್ಲಿ ವಿಶ್ವವಿದ್ಯಾನಿಲಯದ ವೈಸಛಾನ್ಸಲರಾಗಿ ಘನತೆ ಹೊಂದಿದವರು! ಇಂತಹವರ ವಿಷಯದಲ್ಲಿ ವಿದ್ಯಾರ್ಥಿಗಳು ವಿರೋಧ ಪ್ರದರ್ಶನ ನಡೆಸುವ ಕಾರಣವೇನಿತ್ತೆಂಬುದು ಮುಖ್ಯ ಗಮನಾರ್ಹವಾದ ವಿಚಾರವಾಗಿದೆ.

ಸರ್ ಗ್ವಾಯರರು ಕಳೆದ ನವಂಬರದಲ್ಲಿ, ಮುಷ್ಕರಮಾಡಲು ಪ್ರೇರೇಪಿಸಿದರೆಂಬ ಆರೋಪದಿಂದ ಎರಡು ವಿದ್ಯಾರ್ಥಿಗಳ ಮೇಲೆ ಪ್ರಯೋಗ ತೆಗೆದುಕೊಂಡು ಅವರನ್ನು ಒಂದು ವರ್ಷದ ವರೆಗೆ ತಡೆದು ನಿಲ್ಲಿಸಿದರು. ಭಾವನಾ ಪ್ರಧಾನರಾದ ವಿದ್ಯಾರ್ಥಿಗಳಿಗೆ ಒಮ್ಮಿಂದೊಮ್ಮೆಗೇ ಇಂತಹ ಶಿಕ್ಷೆ ವಿಧಿಸುವುದಕ್ಕಿಂತ ಅವರಿಗೆ ಎಚ್ಚರಿಕೆಯಿತ್ತಿದ್ದರೂ ಸಾಲದಿರುತ್ತಿದ್ದಿಲ್ಲ. ಆದರೆ ವಿದ್ಯಾರ್ಥಿಗಳು ಮುಂದೆ ಬಂದು ತಮ್ಮ ವಿಚಾರವನ್ನು ನಿಷ್ಪಕ್ಷಪಾತ ರೀತಿಯಿಂದ ವಿಚಾರಿಸಬೇಕೆಂದು ಕೇಳಿಕೊಂಡಾಗಲೂ ಹಿಂದುಸ್ಥಾನದ ದೊಡ್ಡ ನ್ಯಾಯಾಧೀಶರಾದ ಸರ್ ಗ್ವಾಯರರೇ ನ್ಯಾಯ ವಿಚಾರಣೆಯ ವಿಷಯ ಪುನರಾಲೋಚಿಸದೆ ವಿದ್ಯಾರ್ಥಿಗಳ ಕೇಳಿಕೆ ಕ್ಷುಲ್ಲಕವೆಂದು ಅಲ್ಲಗಳೆದು ಬಿಟ್ಟುದರ ಫಲವಾಗಿ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ತಮ್ಮ ವಿರೋಧ ಪ್ರದರ್ಶನವನ್ನು ಬಹಳ ಶಾಂತರೀತಿಯಿಂದ ಪ್ರದರ್ಶಿಸಿದ್ದರು. ವಿದ್ಯಾರ್ಥಿಗಳ ಮೇಲೆ ಈ ರೀತಿಯಾಗಿ ಬಲಾತ್ಕಾರ ಮಾಡಿದ ವಿಷಯದಲ್ಲಿ ಸರ್ ಗ್ವಾಯರರ ಮನೋವೃತ್ತಿಯನ್ನು ಮುಂಬಯಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅದೂರದರ್ಶಿತ್ವವನ್ನು ಪೋಲೀಸ್ ಅಧಿಕಾರಿಗಳ ಉದ್ಧಟವೃತ್ತಿಯನ್ನು ಖಂಡಿಸದಿರಲು ಸಾಧ್ಯವಿಲ್ಲ.

ನೋಟಗಳು

ಬ್ರಿಟನು ಅಮೇರಿಕಗಳು ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯ ಭರವಸೆಯ ಘೋಷಣೆಯೊಂದನ್ನು ಕಳೆದ ವಾರ ಮಾಡಿದುವಷ್ಟೆ? ಇದು ಹಿಂದೂದೇಶಕ್ಕೂ ಅನ್ವಯಿಸುತ್ತದೋ ಹೇಗೆ? ಯುದ್ಧ ಮುಗಿದ ಒಂದು ವರ್ಷದ ಮೇಲೆ ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ಭರವಸೆಯನ್ನು ಅಮೇರಿಕ ಕೊಡುವುದೇ ಹೇಗೆ? ಇದನ್ನು ಸ್ಪಷ್ಟಪಡಿಸಬೇಕು! ಎಂದು ಸಾವರ್ಕಾರರು ರೂಸ್‌ವೆಲ್ಟರನ್ನು ತಂತಿ ಮೂಲಕ ಪ್ರಶ್ನಿಸಿದ್ದಾರೆ.

ನಿಜವಾಗಿ ಇದೊಂದು ಬಹಳ ಉದ್ಧಟತನದ ಪ್ರಶ್ನೆ! ಆದರೆ, ಈ ದಿನಗಳಲ್ಲಿ ಅಂತಹ ತಂತಿಯು ರೂಸ್‌ವೆಲ್ಟರಿಗೆ ಮುಟ್ಟುವುದೇ ಎಂಬ ವಿಷಯದಲ್ಲಿಯೇ ಹಲವರಿಗೆ ಸಂಶಯವಿದೆ. ಇದೇ ರೀತಿಯ ಸ್ಪಷ್ಟೀಕರಣದ ಪ್ರಶ್ನೆಯೊಂದನ್ನು ಇತ್ತೀಚೆಗೆ ವಿಜಯನಗರದ ಮಹಾರಾಜಕುಮಾರರು ತಂತೀ ಮೂಲಕ ರೂಸ್‌ವೆಲ್ಟರೊಡನೆ ಕೇಳಿದ್ದು ಹಲವರು ಮರೆತಿರಲಿಕ್ಕಿಲ್ಲ. ಅದಕ್ಕೆ ಇದುವರೆಗೆ ಯಾವುದೇ ಉತ್ತರ ಬಂದದ್ದೂ ಇಲ್ಲ; ಆ ತಂತಿಯು ರೂಸ್‌ವೆಲ್ಟರಿಗೆ ತಲಪಿದೆಯೆಂಬ ಬಗ್ಗೆ ಒಂದು 'ಎಕ್ನಾಲಿಜ್‌ಮೆಂಟೂ' ಕಳುಹಿಸಿದ್ದೂ ಇಲ್ಲ.

ಸಾವರ್ಕಾರರ ತಂತಿಗೂ ಹೆಚ್ಚಿನ ಮಟ್ಟಿಗೆ ಅದೇ ಗತಿ ದೊರಕುವುದು ಸಂಭವವಿದೆ. ಆದರೆ ಸಾವರ್ಕಾರರು ಮಾತ್ರ ಈ ಸಲ, ತಮ್ಮ ಪ್ರಶ್ನೆಗೆ ಸ್ಪಷ್ಟೀಕರಣ ಸಿಗದಿದ್ದರೆ, ಈ ಬ್ರಿಟನ್ ಅಮೇರಿಕಗಳ ಸಂಯುಕ್ತ ಘೋಷಣೆಯು, ಬರಿಯ ಟೊಳ್ಳು ಘೋಷಣೆಯೆಂದು ಹಿಂದೂದೇಶವು ತಿಳಕೊಳ್ಳಬೇಕಾಗುವುದೆಂದು ಬೆದರಿಕೆ ಹಾಕಿರುವರು.

ಹಿಂದೂ ಮಹಾಸಭೆಯ ಅಧ್ಯಕ್ಷರಿಗಿರುವ ಘನತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದಷ್ಟು ದೂರದಲ್ಲಿ ರೂಸ್‌ವೆಲ್ಟರು ನೆಲಸಿರುವುದು ಬಹಳ ಪೇಚಾಟಕ್ಕೆ ಬಿದ್ದಿದೆ.

ಗಾಂಧಿಜಿ ಅಹಿಂಸೆಯಲ್ಲಿ ತಮಗೆ ವಿಶ್ವಾಸವು ಇನ್ನಷ್ಟು ಈಗ ಹೆಚ್ಚುತ್ತಿದೆಯೆಂದು ದೃಢೀಕರಿಸಿದರು.

ಕದನ ಕೋಲಾಹಲಗಳ ಮಧ್ಯೆ, ರಕ್ತದ ಕಾಲುವೆಗಳ ಪ್ರವಾಹದ ರಭಸದಲ್ಲಿ ಇಂದೂ ಗಾಂಧಿಜಿ ಅಹಿಂಸೆಯಲ್ಲಿ ತಮ್ಮ ವಿಶ್ವಾಸ ಹೆಚ್ಚುತ್ತಿರುವುದನ್ನು ದೃಢೀಕರಿಸುತ್ತಿದ್ದಾರೆ.

ಬ್ರಿಟನು ಅಮೇರಿಕಗಳ ಬಹಳ ಪ್ರಾಮುಖ್ಯವಾದ ಘೋಷಣೆಯ ಎಂಟು ಸೂತ್ರಗಳಲ್ಲಿ ಶಸ್ತ್ರಸನ್ಯಾಸವು ಒಂದು 'ಸೂತ್ರ'ವಾಗಿ ಸೇರಿರುವುದನ್ನು ನೋಡಿದರೆ ಗಾಂಧಿಜಿ ಅಹಿಂಸೆಯ ವಿಷಯವಾಗಿ ವಿಶ್ವಾಸವನ್ನು ದೃಢೀಕರಿಸಿದುದರಲ್ಲಿ ಆಶ್ಚರ್ಯವೇನೂ ತೋರಲಾರದು.

"ಅಹಿಂಸೆಗೆ ಇದೊಂದು ಮಹತ್ತಾದ ವಿಜಯ" ಎಂದು ಗಾಂಧಿಜಿಯು ಈ 'ಸೂತ್ರ'ದ ಕುರಿತು ಉದ್ಗಾರವೆತ್ತಿದರು.

"ಗಾಂಧಿಜಿಗೆ ಅಹಿಂಸೆಯಲ್ಲಿ ಹಿಮಾಲಯದ ಉನ್ನತಿಯನ್ನು ಮೀರಿದ ವಿಶ್ವಾಸವಿದೆ" ಎಂದು ಕೃಪಾಲನಿ ಒಂದು ಕಡೆ ಸಮರ್ಥಿಸುತ್ತಾರೆ. ಈ ಕಾರಣದಿಂದಲೇ ಈ ಎರಡು ಜನಾಂಗಗಳ 'ತಲೆಯ ಬರೆಹ'ವನ್ನು ಗಾಂಧಿಜಿ ಹೀಗೆ ಹಿಮಾಲಯದ ಶಿಖರವನ್ನೇರಿ ನಿಂತು ಓದಿ ನೋಡಿರಬಹುದು!

ಕಾಂಗ್ರೆಸು ಖಂಡಿತವಾಗಿ ಪುನಃ ಅಧಿಕಾರ ಹೊಂದುವುದು!

ರಾಜಕೀಯ-ಪರಿಸ್ಥಿತಿಯ ವಿಚಾರ ಕೃಪಾಲನಿ ಹೇಳಿಕೆ

ಗಾಂಧಿಜಿ ಮತ್ತು ಅವರ ಮುಂದಾಳುತನ

"ನಮಗೆ ಮಂತ್ರಿಪದವಿಗಳಿದ್ದುವು; ನಾವು ಮಂತ್ರಿಪದವಿಗಳನ್ನು ಬಿಟ್ಟೆವು; ಆದಕ್ಕಾಗಿ, ನಾವು ಪ್ರಯೋಜನವುಳ್ಳ ಪದವಿಗಳನ್ನು ಬಿಟ್ಟೆವೆಂದು ರಾಜನೀತಿ ಪಂಡಿತರು ನಮ್ಮನ್ನು ನಿಂದಿಸುತ್ತಾರೆ. ಹೌದು; ನಾವು ಅಧಿಕಾರ ಮತ್ತು ಪ್ರಯೋಜನಗಳುಳ್ಳ ಪದವಿಗಳನ್ನು ಬಿಟ್ಟೆವು ನಾವು ಗೊಂಡಾರಣ್ಯಕ್ಕೆ ನುಗ್ಗಿದೆವು; ನಾವು ಸೆರೆಮನೆಗಳನ್ನು ಸೇರಿದೆವು. ನಾವು ಅದನ್ನಾದರೂ ಮಾಡಲು ಮುಂದುವರಿದುದು, ಏಕೆಂದರೆ ನಾವು ಕೈಗೊಂಬೆಗಳಾಗಿ ಕುಣಿಯಲು ಇಷ್ಟವುಳ್ಳವರಾಗಲಿಲ್ಲ. ಸ್ವಲ್ಪ ಸ್ವಲ್ಪ ಪ್ರಯೋಜನವುಂಟೆಂದು ನಾವು ಮಹತ್ವಾದ ತತ್ವವನ್ನು ಬಿಟ್ಟುಬಿಡಲಿಲ್ಲ. ನಮ್ಮ ಸಂಸ್ಥೆ ಹೋರಾಡುವುದು ಸ್ವರಾಜಕ್ಕಾಗಿಯಲ್ಲದೆ ಅಲ್ಪ ಸ್ವಲ್ಪ ಪ್ರಯೋಜನಗಳಿಗಾಗಿಯಲ್ಲ"

—ಹೀಗೆಂದು ಅಲ್ಲಾಬಾದ್ ವಿಶ್ವವಿದ್ಯಾಲಯ ಸಂಘದ ಆಶ್ರಯದಲ್ಲಿ ಒಂದು ಭಾಷಣವೀಯುತ್ತಾ ಆಚಾರ್ಯ ಕೃಪಾಲನಿಯವರು ಕಾಂಗ್ರೆಸಿನ ನೀತಿಯನ್ನು ಸ್ಪಷ್ಟಗೊಳಿಸಿದರು.

ಅವರು ಮುಂದುವರಿಸಿ ಹೀಗೆಂದರು "ನಿಮಗೆಲ್ಲಾ ಗೊತ್ತಿದ್ದೆ ರಾಷ್ಟ್ರೀಯ ಸರಕಾರದ ವಿಷಯದಲ್ಲಿ ನಾವು ಸೂಚನೆಯೊಂದನ್ನು ಸರಕಾರದೊಡನೆ ಮಾಡಿದ್ದೆವೆಂಬುದು, ಆ ಸಂದರ್ಭದಲ್ಲಿ ನಾವು ನಮ್ಮ ಮಹಾಸೇನಾನಿಯನ್ನು ದೂರವಿರಿಸಬೇಕಾಯಿತು ನಾವು ಹಾಗೆ ಮಾಡಿದ್ದು ಏಕೆಂದರೆ, ನಾವು ಸ್ವಲ್ಪ ವಿಶ್ವಾಸದಿಂದ ಕೂಡಿದ ಸಣ್ಣ ಮನುಷ್ಯರಾದುದರಿಂದ, ಆದರೆ ಮಹಾತ್ಮರ ವಿಶ್ವಾಸವು ಹಿಮಾಲಯದ ಉನ್ನತಿಯನ್ನೂ ಮೀರಿದ್ದು

ಆಗಸ್ಟ್ ಕೊಡುಗೆ

"ಅವರು ಒಬ್ಬ ಧೀರರು ಅವರು ಅವರ ದಾರಿ ಹಿಡಿದರು, ಅವರ ವಿಶ್ವಾಸ ಸಾರಿದರು, ಆದರೆ ಕಡಿಮೆ ವಿಶ್ವಾಸವುಳ್ಳ ನಾವು ಬೇರೆ ರೀತಿ ವಿಚಾರಿಸಿದೆವು. ಅದರ ಫಲವಾಗಿಯೇ ಕಳೆದ ಮಹಾ 'ಆಗಸ್ಟ್ ಕೊಡುಗೆ'ಯು ನಮಗೆ ಸೂಚಿಸಲಾಯಿತು ಆದರೆ ನಾವು ಅದನ್ನು ತಿರಸ್ಕರಿಸಿದೆವು ನಾವು ರೊಟ್ಟಿಯನ್ನು ಕೇಳಿದೆವು, ನಮ್ಮ ಕಡೆಗೆ ಕಲ್ಲನ್ನು ಎಸೆದರು.

"ಮಹಾತ್ಮಾಜಿಯವರ ತತ್ವಕ್ಕೆ ಅನೇಕ ಮಂದಿ ಕಾಂಗ್ರೆಸಿನವರು ಒಪ್ಪುವುದಿಲ್ಲವೆಂದು ಅಮೆರಿ ಹೇಳುತ್ತಾರೆ. ನಾವೆಲ್ಲರೂ ಒಮ್ಮೆ ಮಹಾತ್ಮರ ತತ್ವಕ್ಕೆ ಅನುಗುಣವಾಗಿದ್ದಾಗ ಅಮೆರಿ ನಮಗೆ ಏನು ಮಾಡಿದರು? ಕೆಲವು ಸಂದರ್ಭಗಳಲ್ಲಿ ಅಮೆರಿ ಲೀಗಿನ ನೆರಳಲ್ಲಿ ಆಶ್ರಯ ಪಡೆದುಕೊಳ್ಳುತ್ತಾರೆ ಅವರಿಗೆ ಬೇಕಾದಂತೆ ಅವರು ಲೀಗನ್ನು ಉಪಯೋಗಿಸಿಕೊಳ್ಳುತ್ತಾರೆ.

ಆದರೆ ಅವರ ಬರಿಯ ಮೂಕ ಪ್ರದರ್ಶನವಾದ, ಆ ವೈಸರಾಯ್ ಕೌನ್ಸಿಲಿನ ವಿಚಾರ ಬಂದಾಗ, ಅದೇ ಲೀಗನ್ನೂ ಅವರು ವಿಚಾರಕ್ಕೆ ತಂದುಕೊಳ್ಳಲಿಲ್ಲ, ಅವರು ತಮ್ಮ ಜಿನ್ನರನ್ನು ಗಣ್ಯಮಾಡಲಿಲ್ಲ ಆಂಬೆಡ್ಕರರು ತಾವು ಅಧಿಕಾರ ಲಾಲಸೆಯವನಲ್ಲವೆಂದು ಅಮೆರಿಯವರನ್ನು ಬಿಟ್ಟುಬಿಟ್ಟರು. ನಮ್ಮ ಕೇಳಿಕೆಯೂ ತಿರಸ್ಕೃತವೇ ಆಯಿತು.

ನಮ್ಮ ಸಂಸ್ಥೆಯ ಗೌರವವುಳಿಸಲು

"ನಾವು ತಿರುಗಿ ನಮ್ಮ ಮಹಾ ಮುಂದಾಳುವಿನ ಬಳಿ ಹೋದೆವು ಅವರೇ ನಮಗೆ ದಾರಿ ತೋರಿಸ ಬಲ್ಲವರು. ನಾವು ನಮ್ಮ ಮೊದಲು ಬಡೆದು ಕೊಳ್ಳುತ್ತೇವೆ. ಆದರೆ ಅದರಿಂದ ಏನೆಂದೂ ಹೊರಡದ ಬಳಿಕ ನಾವು ಮಹಾತ್ಮರ ಸೂಚನೆಗಳನ್ನು ಒಪ್ಪಿಕೊಳ್ಳುತ್ತೇವೆ ನಾವು ಮಹಾತ್ಮರನ್ನು ಅಂಧವಾಗಿ ಅನುಸರಿಸುತ್ತೇವೆಂದು ದೂಷಿತರಾಗಿದ್ದೇವೆ. ಆದರೆ ಅವರನ್ನು ಎದುರಿಸುವ ನಾವು ನಿಜವಾದ ಸಂಕಷ್ಟಗಳನ್ನು ಬಲ್ಲೆವು

"ನಮ್ಮ ವಿನಂತಿಯಂತೆ, ಅವರು ತನ್ನ ನೀತಿಗೆ ಅನುಗುಣವಾಗಿ ಮುಂದಾಳುತನವನ್ನು ಕೈಕೊಳ್ಳುವರೆ ಒಪ್ಪಿಕೊಂಡರು. ಅವರು ಎಲ್ಲಾ ವಿಷಯಗಳನ್ನು ಮೂಲೆಪಾಲು ಮಾಡಿದರು "ಕೇವಲ ವಾಕ್ ಸ್ವಾತಂತ್ರ್ಯ"ವೊಂದನ್ನು ಮಾತ್ರ ತೆಗೆದುಕೊಂಡರು. ನಾವು ಅವರ ಸೂಚನೆಯನ್ನು ಅಂಗೀಕರಿಸಿಕೊಂಡೆವು.

"ನಾವಿಂದು ಬ್ರಿಟಿಷ್ ಸರಕಾರವನ್ನು ಪೇಚಾಟಕ್ಕೆ ಬೀಳಿಸುವುದಿಲ್ಲವೆಂಬುದನ್ನು ನೂರಾರು ಸಲ ಹೇಳುತ್ತೇವೆ. ಮಾತ್ರವಲ್ಲದೆ ನಾಜಿ ಶಾಹಿಗೆ ಜಯವನ್ನು ನಾವು ಹಾರೈಸುವುದಿಲ್ಲವೆಂದೂ ಮತ್ತೆ ನೂರಾರು ಸಲ ಹೇಳುತ್ತೇವೆ ಆದರೆ ನಮ್ಮ ದೇಶದ ಗೌರವವುಳಿಸಬೇಕಾಗಿದೆಯೆಂಬುದನ್ನೂ ನಾವು ಸಾರಿ ಹೇಳುತ್ತೇವೆ. ನಮ್ಮ ದೇಶದ ಗೌರವವುಳಿಸುವುದೆಂದರೆ ನಮ್ಮ ರಾಷ್ಟ್ರ ಸಂಸ್ಥೆಯ ಗೌರವವುಳಿಸುವುದಾಗಿದೆ ನಾವು ನಮ್ಮ ಪತಾಕೆಯು ಹಾರಾಡುತ್ತಿರುವುದನ್ನು ಖಂಡಿತವಾಗಿಯೂ ನೋಡಲಿಚ್ಛಿಸುತ್ತೇವೆ

ಜಯವು ಖಂಡಿತವಾದುದು

"ಪ್ರಮುಖರಲ್ಲದ ಸತ್ಯಾಗ್ರಹಿಗಳನ್ನು ನಾವು ಬಂಧಿಸಲಿಚ್ಛಿಸುವುದಿಲ್ಲವೆಂಬ ನಿಷ್ಪ್ರಯೋಜಕವಾದ ಈ ಹೇತುವಿನಿಂದ ಸರಕಾರವು ಈಗ ಹೆಚ್ಚು ಮಂದಿ ಸತ್ಯಾಗ್ರಹಿಗಳನ್ನು ಬಂಧಿಸುತ್ತಿಲ್ಲ. ಇದು ಅಪಹಾಸ್ಯಕರವಾದುದು ಸತ್ಯಾಗ್ರಹಿಗಳನ್ನು ಬಂಧಿಸುವ ಅವರ ಶಕ್ತಿ ಕಡಿಮೆಯಾಯಿತೆಂದು ಇದರ ಅರ್ಥವಾಗಿದೆ ತಾವು ಬಂಧಿಸಿಯೂ ಪ್ರಯೋಜನವಿಲ್ಲವೆಂಬುದನ್ನು ಅವರು ತಿಳಿಕೊಂಡಿದ್ದಾರೆ ಕೈದುಮಾಡಿ ಇಂತಹ ರಾಷ್ಟ್ರೀಯ ಆಂದೋಲನವನ್ನು ನಿಲ್ಲಿಸುವುದು ಸಾಧ್ಯವಿಲ್ಲವೆಂದು ಅವರಿಗೆ ಗೊತ್ತಾಗಿದೆ ಕಳೆದ ಆಂದೋಲನ ಕಾಲದಲ್ಲಿ ಗಾಂಧಿಜಿ ಆಗಾಗ ಗೊಂದಲಗೊಂಡಿದ್ದರು, ಆದರೆ ಈ ಸಲದ ಆಂದೋಲನದ ವಿಷಯವಾಗಿ ಗಾಂಧಿಜಿ ತುಂಬಾ ತೃಪ್ತರಾಗಿದ್ದಾರೆ. ಆಂದೋಲನವು ಮಂದಗತಿಯಿಂದಲಾದರೂ ಖಂಡಿತವಾಗಿಯೂ ಮುಂದುವರಿಯುವುದೆಂದು ಅವರು ಬಲ್ಲರು, ಕಾಂಗ್ರೆಸು ಬಹಳ ಪರಿಣಾಮಕಾರಿಯಾಗಿ ಮುಂದುವರಿಯುತ್ತಿದೆ. ಇದರ ಫಲಿತಾಂಶವು ಎಲ್ಲರಿಗೂ ತಿಳಿಯುವುದು ಕಾಂಗ್ರೆಸು ಖಂಡಿತವಾಗಿಯೂ ಅಧಿಕಾರವನ್ನು ಪಡೆಯುವುದು. ಜನರ ಮೇಲೆ ದರ್ಪ ತೋರಿಸುವ ಅಧಿಕಾರಿಯಾಗಿ ಮುಂದೆ ಅದು ಬರುವುದಲ್ಲ, ಜನಾಂಗದ 'ಟ್ರಸ್ಟಿ'ಯಾಗಿ ಅದು ಅಧಿಕಾರಕ್ಕೇರುವುದು"

Announcement

DONATIONS & CONTRIBUTIONS

Are received for credit of account

OF

The Mahajana Flood Relief Committee

Of South Kanara

At all our Branches free of all charges

ESTD. 1906. **THE CANARA BANKING CORPORATION, LIMITED**

(Incorporated in Br India)

ಮೆಕ್ಲೀನಿನಿಂದ

ನೀವು ನಿಮ್ಮ ಹಲ್ಲುಗಳನ್ನು ಶುಚಿಗೊಳಿಸಿದ್ದೀರಾ?

ಹೌದು ಶುಚಿಮಾಡಿದ್ದೇನೆ

ಹೊಳೆವ ಶುಭ್ರ ಹಲ್ಲುಗಳಿಗೆ, ಆರೋಗ್ಯಕರ ದಂತಪಂಕ್ತಿಗಳಿಗೆ, ಶ್ರೇಷ್ಠವಾದ ಹೊಸತಾಗಿ ತೋರುವ ಮುಖಕ್ಕೆ ಮೆಕ್ಲೀನು ಅತ್ಯಂತ ಸಹಕಾರಿಯಾಗಿದೆ ಇದು ಬೇಗನೇ ಕ್ರೆಗೆಯನ್ನು ದೂರ ಮಾಡುತ್ತದೆ. ಹಲ್ಲುಗಳನ್ನು ಬಿಳಿಮಾಡುತ್ತದೆ. ದವಡೆಗಳನ್ನು ಶುಚಿಗೊಳಿಸುತ್ತದೆ. ಇದರಿಂದ ಒಂದು ಸಲ ಕೊಳ್ಳಿರಿ.

ವಾರದ ಕತೆ:

ದಿವ್ಯ ಪ್ರೇಮ

ಲೇಖಕ: ಕೆ. ಎಸ್. ಶರ್ಮ

'ತಾರೆ, ತಾರೆ'—ಎಂಬ ಮೃದುವಾದ ಒಂದು ಕರೆಯುವಿಕೆಯು ಕೇಳಬಂತು. ಅಲ್ಲೇ ಮಲ್ಲಿಗೆಯ ಬಳ್ಳಿಯ ಬಳಿ ನಿಂತುಕೊಂಡು, ಮೌನ ಸಂಗೀತದಿಂದ ಹೂವನ್ನಾಯ್ದು ಕಟ್ಟುತ್ತಲಿರುವ ತಾರೆಯು ಫಕ್ಕನೆ ಹಿಂತಿರುಗಿ ನೋಡಿದಳು. ಆಕೆಗೆ ಯಾರೂ ಕಾಣಲಿಲ್ಲ. ಮಲ್ಲಿಗೆ ಬಳ್ಳಿಯ ಬಳಿಯಿರಿದ ಮೆಲ್ಲನೆ ಹಿಂದೆ ಸರಿದಳು. ಸುತ್ತಲೂ ಒಮ್ಮೆ ನೋಡಿದಳು. ಅಲ್ಲಿಯೂ ಯಾರನ್ನೂ ಕಾಣಲಿಲ್ಲ. ತಾರೆಯು ನಿರಾಶಳಾಗಿ ಹೂವಿನ ಬಳ್ಳಿಯ ಬಳಿಗೆ ಬಂದಳು.

'ತಾರೆ, ತಾರೆ' ಎಂದು ಪುನಃ ಕೇಳಬಂತು. ತಾರೆಯು ಈಗ ತೀರಾ ಉತ್ಸುಕಳಾದಳು. ಮಲ್ಲಿಗೆಯ ಬಳಿಯಿಂದ ಮೆಲ್ಲಗೆ ಆಕೆಯು ಮನೆಯ ಕಡೆ ಹೋಗುವಂತೆ ನಟಿಸಿದಳು. ಆಗ ಪುನಃ ಹಿಂಬದಿಯಿಂದ 'ತಾರೆ, ನಿಲ್ಲು, ಸ್ವಲ್ಪ ತಡೆ. ಏನಿಷ್ಟವಸರ?' ಎಂದು ಯಾರೋ ಹೇಳಿದರು. ತಾರೆಯು ಫಕ್ಕನೆ ಹಿಂದಿರುಗಿ ನೋಡಿದಳು. ತಾನು ಇರುವ ಹತ್ತಿರದ ಬಳಿಯ ಗೋಡೆಯ ಬದಿಯಲ್ಲಿ ಆನಂದನು ನಗುತ್ತಾ ನಿಂತಿದ್ದನು. ತಾರೆಯು ತೀರಾ ನಾಚಿಕೊಂಡಳು. ಸುಮಾರು ನಾಲ್ಕೈದು ವರ್ಷಗಳ ಬಳಿಕ ಈಗ ತಾನೇ ತಾರೆಗೆ ಆನಂದನ ದರ್ಶನ. ಇಂದಿನ ರೀತಿಗೂ, ಅಂದಿನ ರೀತಿಗೂ ತುಂಬಾ ಬದಲಾವಣೆಯಾಗಿದೆ. ಸುಂದರನು ಪ್ರೌಢ ಸುಂದರ ಯುವಕನಿದ್ದಾನೆ. ತಾರೆಯೂ ಈಗ ಹಿಂದಿನ ಬಾಲಕಿಯಾಗಿರಲಿಲ್ಲ. ತುಂಬಿದ ಯೌವನದಲ್ಲಿದ್ದಾಳೆ. ಅಂದಿನ ಸಲಿಗೆಯ ಮಾತುಗಳಿಗೆ ಇಂದು ನಿರಂಕುಶವಾಗಿ ಹೊರಗಿಳಿಯಲವಕಾಶವಿಲ್ಲ. ಮೌನವಾಗಿ ನೆಲವನ್ನೇ ನೋಡುತ್ತಾ ವಿಷಮವಾಗಿ ಮಾಲೆಯನ್ನು ಹೆಣೆಯುತ್ತಿದ್ದಳು. ಆನಂದನು ನಗುತ್ತಾ 'ತಾರೆ, ತಾರೆ. ಆನಂದನನ್ನು ಮರೆತುಬಿಟ್ಟೆಯೇನು?' ಎಂದನು.

ತಾರೆಯು ಏನೂ ಉತ್ತರಿಸಲಿಲ್ಲ. ಒಂದು ಮುಗುಳು ನಗುವನ್ನು ಮಾತ್ರ ಕಾಣಿಸಿದಳು. ಆನಂದನು ನಗುತ್ತಲೇ ಇದ್ದ. ಆನಂದನು ಅತ್ತಿತ್ತ ನೋಡುತ್ತ 'ತಾರೆ, ನಿನಗೆ ವಿವಾಹವಾಯಿತೇನು? ಯಾರೋ ಹೇಳಿದರು ನಿನಗೆ ವಿವಾಹವಾಯಿತೆಂದು' ಎಂದನು. ತಾರೆಯು ನಕ್ಕುಬಿಟ್ಟಳು. ಆನಂದನು 'ತಾರೆ, ಅದೇಕೆ ನಗುವೆ. ಯಾಕೆ ಮಾತಾಡಲೊಲ್ಲೆ—' ಎಂದನು. ತಾರೆಯು ನಗುವನ್ನು ಸುಧಾರಿಸಿಕೊಳ್ಳುತ್ತ 'ನೀನು ಯಾವಾಗ ಬಂದಿ ಆನಂದ? ಪರೀಕ್ಷೆ ಎಲ್ಲಾ ಮುಗಿಯಿತೇನು?' ಎಂದಳು. ಆನಂದನು 'ತಾರೆ, ನಿನ್ನೆ ರಾತ್ರಿ ಬಂದೆ. ಪರೀಕ್ಷೆ ಎಲ್ಲಾ ಮುಗಿಯಿತು. ನಾನು ಪಾಸಾಗಿಬಿಟ್ಟೆ' ಎಂದ.

'ಓಹೊ, ನೀನು ಪಾಸಾಗಿ ಬಿಟ್ಟೆ? ಪಾಸಾದುದಕ್ಕೆ ಬಹುಮಾನವಿಲ್ಲವೆ?'

'ಇದೆ ತಾರೆ, ನೋಡು ತೆಗೆದುಕೊ,' ಎಂದನ್ನುತ್ತಾ ಒಂದು ಸಣ್ಣ ಕಾಗದದ ಕಟ್ಟನ್ನು ಬಿಸಾಡಿದ. ತಾರೆಯು ಬಿಚ್ಚಿದಳು. ಚಂದವಾದ ಒಂದು ಚೌಕ. ಅಂದವಾದ ಎರಡು ರಿಬ್ಬನ್‌ಗಳು. ತಾರೆಯು ಒಮ್ಮೆ ನಕ್ಕುಬಿಟ್ಟಳು. 'ಇಷ್ಟೇ ತಾನೆ, ಆನಂದ?'

'ತಾರೆ, ಇನ್ನೇನು ತರಲಿ.' ತಾರೆಯನ್ನು ಆಕೆಯ ತಾಯಿಯು ಕರೆದರು. ತಾರೆಯು ಅವಸರವಾಗಿ ಹೋಗಲನುವಾದಳು. ಆನಂದನು 'ತಾರೆ, ನೋಡು ನನಗೆ ಆ ಮಾಲೆಯನ್ನು ಕೊಟ್ಟುಬಿಡು' ಎಂದನು. ತಾರೆಯು ಮುಗುಳುನಗುತ್ತಾ ಅಲ್ಲೇ ಅದನ್ನು ಆತನಿಗೆಬ್ಬಾಗಿ ಹಾಕಿ ನೇರಾಗಿ ನಡೆದುಬಿಟ್ಟಳು. ಆನಂದನು ಮನೆಯ ಕಡೆಗೆ ತೆರಳಿದನು.

❁ ❁ ❁

ಐದಾರು ದಿನಗಳು ಕಳೆದವು. ಆನಂದನು ಬೆಂಗಳೂರಿಗೆ ಹೋಗಿ ಹಿಂತಿರುಗಿ ಬಂದಿದ್ದನು. ಅದೇ ಬಂದದಿನವೇ ಆನಂದನು ಮಧ್ಯಾಹ್ನಕ್ಕೆ ಊಟ ತೀರಿಸಿ ಆರಾಮ ಕುರ್ಚಿಯಲ್ಲಿ ನಿದ್ದೆಹೋಗಿದ್ದ. ಸ್ವಲ್ಪ ಸಮಯದಲ್ಲೇ ಆತನು ಎಚ್ಚೆತ್ತನು. ಮೆಲ್ಲಗೆ ಜಗಲಿಯ ಬಳಿಗೆ ಬಂದನು. ಒಳಗಿನಿಂದ ಯಾರೋ ತಾಯಿಯೊಡನೆ ಮಾತನಾಡುವ ಸದ್ದು ಕೇಳಿಸಿತು. ಮೆಲ್ಲಗೆ ಒಳಬಂದನು. ಬಾಗಿಲ ಬಳಿಯಿಂದ ಒಳ ಇಣಕಿದನು. ತಾರೆಯೇ ತಾಯಿಯೊಡನೆ ಮಾತನಾಡುತ್ತಿದ್ದಳು. ಮೆಲ್ಲಗೆ ಅಡಿಯಿಟ್ಟನು. ತಾರೆಯು ಆನಂದನನ್ನು ಕಂಡೊಡನೆಯೇ ಓಡಿಬಿಟ್ಟಳು. ಆನಂದನು ತಾಯಿಯ ಬಳಿಬಂದ. 'ಅಮ್ಮಾ ತಾರೆಯೇಕಮ್ಮಾ ಬಂದುದು?' ಆನಂದನ ತಾಯಿಯ ಮುಖವು ಬಾಡಿತ್ತು. ಮುಖದಲ್ಲಿ ಸಂತೋಷವಿರಲಿಲ್ಲ. ಆನಂದನು ಸ್ವಲ್ಪ ಬೆದರಿದ. ಅಲ್ಲೇ ಕುಳಿತ. ಏನೋ ಸ್ವಲ್ಪ ಗಹನವಾದ ವಿಚಾರವು ಇದೆಯೆಂದು ಭಾವಿಸಿದ. ಪುನಃ 'ಅಮ್ಮ ತಾರೆಗೇನಾದರೂ ತೊಂದರೆ ಬಂತೇ? ಎಂದು ಕೇಳಿದ.

"ಸುಂದರ, ತಾರೆಯು ಮನೆಯವರೆಲ್ಲಾ ನಾಳೆ ಬೊಂಬಾಯಿಗೆ ಹೋಗುತ್ತಾರೆ. ಮುಂದೆ ಇಲ್ಲಿಗೆ ಬರುವುದಿಲ್ಲವಂತೆ. ಅದಕ್ಕಾಗಿ ಆಕೆ ಹೇಳಲು ಬಂದಿದ್ದಳು."

ಆನಂದನು ನಿಜವಾಗಿ ಬೆದರಿದ. ತನ್ನ ಜೀವನದಲ್ಲಿ ತಾರೆಯೊಡನೆ ಸುಖದಿಂದಿರಬೇಕೆಂದು ಭಾವಿಸಿದ್ದ, ಆದರೆ ಅದು ಸಾಧ್ಯವಾಗದೆ ಹೋಗುವದೇ ಎಂಬ ವ್ಯಸನವು ಆನಂದನ ತಲೆಗಡರಿತು. ಮೆಲ್ಲಗೆ ಹೊರಬಂದ. ಕಣ್ಣುಗಳು ಆರಕ್ತವಾಗಿದ್ದವು.

ಆನಂದನು ಜಗಲಿಯಲ್ಲೇ ಅಡ್ಡಾಡುತ್ತಲಿದ್ದ. ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆಗಳು ತಲೆಗಡರಿದುವು. ಅಲ್ಲೇ ಜಗಲಿಯಲ್ಲಿದ್ದ ಆರಾಮ ಕುರ್ಚಿಯಲ್ಲಿ ಮಲಗಿಕೊಂಡು ಎತ್ತಲೋ ನೋಡತೊಡಗಿದನು. ಫಕ್ಕನೆ ಆನಂದನ ದೃಷ್ಟಿಯು ತೋಟದಲ್ಲಿರುವ ಬಾವಿಯ ಕಡೆಗೆ ಹೋಯಿತು. ತಾರೆಯು ಬಾವಿಯ ಬಳಿ ನಿಂತಿದ್ದಳು. ಆನಂದನು ಅತ್ತಿತ್ತ ನೋಡಿ ನೇರಾಗಿ ನಡೆದನು. ತಾರೆಯು ಅಳುತ್ತಾ ಇದ್ದಳು. ಆನಂದನು ಬಹು ಬೇಗನೆ ಸಮೀಪಿಸಿ "ತಾರೆ, ಅಳಬೇಡ" ಎಂದನು. ತಾರೆಯ ಕಣ್ಣಿನಿಂದ ನೀರು ಧಾರೆಯಾಗಿ ಸುರಿಯಿತು. ಆನಂದನು ಮೆಲ್ಲಗೆ ತನ್ನ ಕರವಸ್ತ್ರದಿಂದ ಆಕೆಯ ಮುಖವನ್ನೊತ್ತಿದನು. ಆನಂದನು ಸಹಿಸಲಾರದ ದುಃಖದಿಂದ "ತಾರೆ, ಅಳಬಾರದು ನೋಡು. ನೀನು ತೆರಳುವಿಯೆಂದು ಕೇಳಿದೆ. ಅದಕ್ಕೆ ವ್ಯಸನಿಸಬೇಡ ತಿಳಿಯಿತೆ?"

ತಾರೆಯು ಅಳುತ್ತಾ 'ಆನಂದ, ನಾನು ಹೋಗುತ್ತೇನೆ. ಮುಂದೆ ಇನ್ನು ಕಾಣುವದಿದೆಯೆ?' ತಾರೆಯು ಅಳುತ್ತಲೇ ಹೇಳಿದಳು. ಆನಂದನ ಮನಸ್ಸಿನಲ್ಲಿ ಈಗ ತಡೆಯಲಾರದ ವ್ಯಸನ. "ತಾರೆ, ಇದೇನು ಈಗ ಬೊಂಬಾಯಿಗೆ ಹೋಗುವುದು?" "ತಂದೆಯವರಿಗೆ ಬೊಂಬಾಯಿಗೆ ವರ್ಗವಾಗಿದೆ. ಅಲ್ಲೇ ನಮ್ಮ ಸೋದರ ಮಾವನ ಮನೆಯಿದೆ."

ಆನಂದನು ಉಸುರೆತ್ತಲಿಲ್ಲ. ತಾರೆಯು ಅಳುತ್ತಲೇ ಇದ್ದಳು. ಆನಂದನು 'ತಾರೆ, ನೀನು ಹೋದರೂ ಮರೆಯಬಾರದು ಕಂಡೆಯಾ?"

'ಆಗಲಿ' ಆನಂದ, ನಾನು ಹೋಗುತ್ತೇನೆ ಎಂದಳು. ಆನಂದನು ಆಗಲೆನ್ನುತ್ತ ಆಕೆಯನ್ನು ಹೋಗಗೊಟ್ಟನು. ಆತನ ಕಣ್ಣುಗಳಲ್ಲಿ ಎರಡು ಹನಿ ಬಂದಿತು. ಆನಂದನು ಮೌನವಾಗಿ ಮನೆಯ ಕಡೆಗೆ ಬಂದ.

❁ ❁ ❁

ತಾರೆಯು ತೆರಳಿ ಕೆಲದಿನಗಳು ಕಳೆದವು. ಸುಂದರನ ಪರಿಸ್ಥಿತಿಯು ಈಗ ತೀರಾ ಬದಲಾಗಿದೆ. ಮನಸ್ಸಿನಲ್ಲಿ ಆತನಿಗೆ ಬಗೆಬಗೆಯ ಆಲೋಚನೆಗಳು.

ಒಂದು ಸಾಯಂಕಾಲ ಆನಂದನು ಮನೆಯ ಗೇಟಿನ ಬಳಿ ನಿಂತಿದ್ದ. ಟಪ್ಪಾಲ

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಅದುದರಿಂದ ಬಳಲುವ ಮಂದಿಗಲ್ಲ ನಮ್ಮ ವಿನಂತಿ ಏನೆಂದರೆ, "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ತ್ವವನ್ನು ತಿಳಿಯಿರೆಂಬುವೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್. (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

ಜಿಲ್ಲಾ ಸಮಾಚಾರಗಳು

ಶ್ರೀ ಯನ್. ಶೇಷಗಿರಿರಾಯರು ಎರಡನೆಯ ಸಲ ಬಂಧಿತರಾದರು

ದ. ಕ. ಜಿಲ್ಲೆಯಲ್ಲಿ ಎರಡನೆಯ ಸಲ ಸತ್ಯಾಗ್ರಹ ಮಾಡಿ, ಇಲ್ಲಿ ಆಡೆ ಯುದ್ಧ ಪ್ರಚಾರ ಮಾಡುತ್ತಾ ಮುಂದುವರಿಯುತ್ತಿದ್ದ ಶ್ರೀ ಎನ್. ಶೇಷಗಿರಿರಾಯರು ರಾಜೀವನ್ನೂರಲ್ಲಿ ಬಂಧಿತರಾದರೆಂದು ತಿಳಿಯುತ್ತೇವೆ.

ಬಿಡುಗಡೆ ಹೊಂದಿದ ದ. ಕ. ಸತ್ಯಾಗ್ರಹಿಗಳು

ದ. ಕ. ಜಿಲ್ಲಾ ಸತ್ಯಾಗ್ರಹಿಗಳಾದ ಶ್ರೀ. ಕುಳಾಲು ಅಣ್ಣಪ್ಪ ಭಂಡಾರಿ ಮತ್ತು ಎ. ಚಿಕ್ಕಯ್ಯ ನಾಯ್ಕರು ಯರವಾಡ ಸೆರೆಮನೆಯಿಂದಲೂ, ಶ್ರೀ. ಪ್ರಭಾಕರ ಶೆಟ್ಟರು ಹಿಂಡಲ್ಗಿ ಜೈಲಿನಿಂದಲೂ ಬಿಡುಗಡೆ ಹೊಂದಿ ಬಂದಿರುವರು.

ಭಾಷಣಗಳು

"ಭಾರತ ಕಲೆಗಳು":—ಈ ಕುರಿತು ಶ್ರೀ. ಶಿವರಾಮ ಕಾರಂತರು ಮಂಗಳೂರ ಸೈಂಟ್ ಎಲೋಶಿಯಸ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಭಾಷಣವಿತ್ತರು. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಭಾರತದ ಚಿತ್ರ, ಶಿಲ್ಪ, ಸಂಗೀತ ಸಾಹಿತ್ಯ ಕಲೆಗಳ ವಿಷಯವನ್ನೆತ್ತಿ ಹೇಳುತ್ತಾ ಭಾಷಣ ಕರ್ತರು, ಭಾರತೀಯರು ಇತರ ದೇಶದವರಿಂದ ಕಲಿತುಕೊಳ್ಳತಕ್ಕದ್ದೇನಿಲ್ಲವೆಂದೂ, ನಮ್ಮಲ್ಲಿ ಸ್ವತಃ ಸಿದ್ಧವಾಗಿರುವ ಕಲೆಗಳನ್ನೂರ್ಜಿತಗೊಳಿಸಬೇಕೆಂದೂ ಹೇಳಿದರು. ಕಾರ್ಯದರ್ಶಿ ಶ್ರೀ. ಎ. ಮುತ್ತಯ್ಯ ಗೌಡರು ಧನ್ಯವಾದಾರ್ಪಣೆ ಮಾಡಿದರು.

"ಕನ್ನಡದ ಸಮಸ್ಯೆಗಳು" ಈ ಕುರಿತು ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳು ಮಂಗಳೂರು ಗವರ್ನಮೆಂಟ ಟ್ರೈನಿಂಗ್ ಶಾಲೆಯ ಸಾಹಿತ್ಯ ಸಂಘದ ಆಶ್ರಯದಲ್ಲಿ ಒಂದು ಭಾಷಣವಿತ್ತರು. ಶ್ರೀ. ಬಿ. ನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಭಾಷೆ, ಕನ್ನಡ ಸಾಹಿತ್ಯಗಳ ಕಡೆಗೆ ಜನತೆಯು ಕೊಡುವ ಪ್ರೋತ್ಸಾಹವು ನಿರುತ್ಸಾಹಜನಕವಾದುದೆಂದು ಭಾಷಣ ಕರ್ತರು ಹೇಳಿದರು. ಕನ್ನಡವು ಉಳಿಯಬೇಕಾದರೆ ಜನರು ಆ ವಿಷಯ ಸಾರ್ಥಕವಾದ ಪ್ರೋತ್ಸಾಹ ನೀಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರು. ಕಾರ್ಯದರ್ಶಿ ಶ್ರೀ ಬಿ. ವಿಟ್ಠಲ ಶೆಟ್ಟರು ಧನ್ಯವಾದ ಹೇಳಿದರು.

ಮಹಾಜನ ವಸ್ತ್ರಭಂಡಾರ:—ದ. ಕ. ಚೇಂಬರ್ ಓಫ್ ಕಾಮರ್ಸಿನವರ ನೇತೃತ್ವದಿಂದ ಸ್ಥಳೀಕ ಜವುಳಿ ವ್ಯಾಪಾರಿಗಳು ವಸ್ತ್ರಕ್ಕೆ ಕ್ರಯ ಏರಿ ಕಷ್ಟವುಂಟಾಗಿದ್ದರೂ ಬಡ ಜನರಿಗೆ ಕಡಿಮೆ ದರದಲ್ಲಿ ವಸ್ತ್ರ ಕೊಡುವ ಬಗ್ಗೆ 'ಮಹಾಜನ ವಸ್ತ್ರ ಭಂಡಾರ'ವೆಂಬುದನ್ನು ತೆರೆದಿರುವರು. ಇದು ಮಂಗಳೂರು ಫೆಲಿಕ್ಸ್ ಪೈ ಬಜಾರಿನಲ್ಲಿ ತಾ. ೨೫ರಂದು ಶ್ರೀ. ವೆಂಕಟ್ರಾಯ ಬಾಳಿಗರಿಂದ ತೆರೆಯಲಾಯಿತು.

ಬಸ್ಸುಗಳು ಕಡಿಮೆಯಾಗಿವೆ:—ಪೆಟ್ರೋಲಿನ ಕಡಿತದಿಂದಾಗಿ ಜಿಲ್ಲೆಯಲ್ಲಿ ೩೦ರಲ್ಲಿ ೧ರಷ್ಟು ಬಸ್ಸುಗಳು ಕಡಿಮೆ ಮಾಡಲಾಗಿವೆಯೆಂದೂ ತಿಳಿಯುತ್ತದೆ. ಟಿಕೇಟಿನ ದರವೂ ಸ್ವಲ್ಪ ಏರಿರುತ್ತದೆ.

ಉದ್ಯಾವರ ನಾರಾಯಣಾಚಾರ್ಯರ ನಿಧನ

ಸುಪ್ರಸಿದ್ಧ ಉದ್ಯಾವರ ಶೆರಿಬಾಂಗ ಕರ್ತರೂ ಮಂಗಳೂರು ಧರ್ಮಪ್ರಕಾಶ ಛಾಪಖಾನೆಯ ವ್ಯವಸ್ಥಾಪಕರೂ ಆದ ಶ್ರೀ. ಉದ್ಯಾವರ ನಾರಾಯಣ ಆಚಾರ್ಯರು ತನ್ನ ೮೦ನೆಯ ವಯಸ್ಸಿನಲ್ಲಿ ತಾ. ೨೨ನೆಯ ಸಂಜೆ ದೈವಾಧೀನರಾದರೆಂದು ತಿಳಿಸಲು—ತುಂಬಾ ವಿಷಾದಿಸುತ್ತೇವೆ. ಇವರ ನಿಧನದಿಂದ ದುಃಖಿಸುವ ಇವರ ಪುತ್ರರೇ ಆದಿಯಾದ ಬಂಧುಗಳ ದುಃಖದಲ್ಲಿ ನಾವು ಸಹ ಸಂತಾಪವನ್ನು ಸೂಚಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಪ್ರತಿಜ್ಞೆಯ ನಿರ್ಣಯ:—ಮಂಗಳೂರು ಸ್ಟುಡೆಂಟ್ಸ್ ಯೂನಿಯನ್ ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ ಕಣ್ಣೂರಿನಲ್ಲಿ ಮಲಬಾರ್ ಸ್ಪೆಶಲ್ ಪೋಲೀಸರು ಮಾಡಿದ ಅತ್ಯಾಚಾರವನ್ನೂ, ನೀಲೇಶ್ವರದ ವಿದ್ಯಾರ್ಥಿಗಳೆಟ್ಟರ ಮೇಲೆ ಮಾಡಿದ ಆಕ್ರಮಣವನ್ನೂ ಖಂಡಿಸಿ ನಿರ್ಣಯಗಳಾದುವು.

ಬೀಡಿ ಕೆಲಸಗಾರರ ನಾಲ್ಕನೆಯ ಪರಿಷತ್ತು:—ತಾ. ೨೪ರಂದು ಅನೇಕ ಮಂದಿ ಬೀಡಿ ಕೆಲಸಗಾರರು ಮಂಗಳೂರಲ್ಲಿ ಮೆರವಣಿಗೆ ಹೊರಟು ಫೆಲಿಕ್ಸ್ ಪೈ ಬಜಾರಿನಲ್ಲಿ ಜನಾಬ್ ಎಫ್. ಎಚ್ ಒಡೆಯರ ಅಧ್ಯಕ್ಷತೆಯಿಂದ ಸಭೆ ಸೇರಿದರು. ಧ್ವಜಾರೋಹಣವನ್ನು ಶ್ರೀ ಕೇಶವ ಕಾಮತರು ನೆರವೇರಿಸಿದರು. ಯೂನಿಯನ್ ಅಧ್ಯಕ್ಷ ಜನಾಬ್. ಕೆ. ಅಹಮ್ಮದ್ ಬಾವರು ಸ್ವಾಗತ ಭಾಷಣಮಾಡಿದರು. ಅನೇಕರು ಮಾತನಾಡಿದರು. ಧಾರಣೆಗಳೇರಿರುವುದರಿಂದ ಬೀಡಿ ಕೆಲಸಗಾರರಿಗೆ ಯುದ್ಧ ಕಾಲದ ಭತ್ತೆಯಾಗಿ ಶೇಕಡಾ ೨೫ರಷ್ಟು ಹೆಚ್ಚು ಸಂಬಳ ಸಿಗಬೇಕೆಂಬ ವಿಚಾರ ಮುಖ್ಯವಾಗಿ ವಾದಿಸಲಾಗಿತ್ತು. ಜನಾಬ್ ಎಫ್. ಎಚ್. ಒಡೆಯರೂ, ಶ್ರೀ. ಕೆ. ಕೃಷ್ಣರಾಯರೂ ಬೀಡಿ ಮಾಲಕರಲ್ಲಿ ಭೇಟಿಯಾಗಿ ತುಟ್ಟಿ ಭತ್ತೆಯ ವಿಷಯ ಮಾತನಾಡಿದಾಗ ಸಿಕ್ಕಿದ ಉತ್ತರವು ತೃಪ್ತಿಕರವಾಗಿಲ್ಲವೆಂದು ಹೇಳಲಾಗಿತ್ತು. ಮದರಾಸು ಮೊದಲಾದ ಕಡೆಗಳಲ್ಲಿ, ಒಂಟಿವಾಳದಲ್ಲಿಯೂ ತುಟ್ಟಿ ಭತ್ತೆ ಕೊಡುತ್ತಿರುವಾಗ ಮಂಗಳೂರು ಬೀಡಿ ಮಾಲಕರು ತುಟ್ಟಿ ಭತ್ತೆ ಕೊಡಲು ಆಕ್ಷೇಪಿಸುವುದು ನ್ಯಾಯವಲ್ಲವೆಂದು ಹೇಳಲಾಯಿತು. ಕೊನೆಗೆ ನಾಲ್ಕು ನಿರ್ಣಯಗಳಾದುವು. ಅವುಗಳಲ್ಲಿ ಬೀಡಿಕೆಲಸಗಾರರು ನ್ಯಾಯವಾದ ತುಟಿಭತ್ತೆಯನ್ನು ಸಮಾಧಾನವಾದ ರೀತಿಯಲ್ಲಿ ಕೇಳಿಕೊಂಡು ನಿರರ್ಥಕವಾದರೆ ಶಾಂತರೀತಿಯ ಸಾರ್ವಜನಿಕ ಮುಷ್ಕರ ಹೂಡಬೇಕೆಂದೂ, ಸರಕಾರವು ನ್ಯಾಯವಾದ ತುಟ್ಟಿ ಭತ್ತೆಯನ್ನು ಮಾಲಕರಿಂದ ಕೊಡಿಸಬೇಕೆಂದೂ, ಪ್ರತಿಯೊಬ್ಬ ಕೆಲಸಗಾರರಿಗೆ ಸಾವಿರ ಬೀಡಿಯ ಮೇಲೆ ಎರಡಾಣೆಯಂತೆ ಹೆಚ್ಚಾಗಿ ತುಟ್ಟಿ ಭತ್ತೆ ಕೊಡಬೇಕಾಗಿಯೂ ಕೇಳಲಾಗಿದೆ.

ಭಾರತ ಪ್ರವಚನ:—ಸ್ಥಳೀಯ ಬ್ರಹ್ಮಣರ ಬೀದಿಯಲ್ಲಿರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಸದ್ರಿ ದೇವರ ಭಜಕರು ಕಳೆದ ಜುಲ್ಯಾ ತಾರೀಕ ೧೪ರ ಆರಂಭಿಸಿ ವಿದ್ವಾನ್ ಕೆ. ಶಂಕರನಾರಾಯಣ ಶಾಸ್ತ್ರಿಗಳ ಮೂಲಕ ನಡೆಯಿಸುತ್ತಿದ್ದ ಸಂಸ್ಕೃತ ಮಹಾಭಾರತದ ಪ್ರವಚನ ಕಾರ್ಯವು ಇದೇ ಅಗಸ್ಟ್ ತಾರೀಕು ೩೧ನೇ ಭಾನುವಾರ ದಿನ ಮಂಗಳೋತ್ಸವದೊಂದಿಗೆ ಕೊನೆಗೊಳ್ಳುವುದು.

ಗಣೇಶ ಚತುರ್ಥಿ:—ಶ್ರೀ ಜ್ಞಾನೋದಯ ಸಮಾಜ ಮಂದಿರದಲ್ಲಿ ಗಣೇಶ ಚತುರ್ಥಿ ಸಲುವಾಗಿ ಪ್ರಾತಃಕಾಲ ಹೋಮ ಹವನಗಳಾದ ತರುವಾಯ ಸಾಯಂಕಾಲ ಜರಗಿದ ಮಹಿಳೆಯರ ಸಭೆಯಲ್ಲಿ ಚೌತಿ ಗಣಪತಿಯ ವಿಚಾರವೂ ತಮ್ಮ ಜಾತಿಯ ಸ್ತ್ರೀಯರ ನಿರ್ಮಲತೆ ವಿದ್ಯಾವಿಹೀನತೆ ಮದುವೆ ಮೊದಲಾದ ಶುಭಕಾರ್ಯದಲ್ಲಿ ದುರ್ವ್ಯಯ ಮೊದಲಾದ ವಿಷಯಗಳ ಕುರಿತೂ ಬೋಧಪ್ರದವಾದ ಭಾಷಣವಿತ್ತರು. ಈ ಸಂದರ್ಭದಲ್ಲಿ ವಿದ್ವಾನ್ ಶ್ರೀ. ಕೆ. ಶಿ. ರೈಗಳಿಂದ ವಿರಚಿತವಾದ "ವಿರಾಗಿಣಿ" ಎಂಬ ನಾಟಕವನ್ನು ಬಾಲಕಿಯರು ಯಶಸ್ವಿಯಾಗಿ ಅಭಿನಯಿಸಿದರು.

ಜನ್ಮದಿನೋತ್ಸವ:—ಬ್ರಹ್ಮಶ್ರೀ. ನಾರಾಯಣ ಗುರು ಸ್ವಾಮಿಯವರ ಜನ್ಮದಿನೋತ್ಸವವು ಇದೇ ಸಪ್ಟಂಬರ ತಾ. ೫ನೇ ಶುಕ್ರವಾರ ಆಚರಿಸಲ್ಪಡುವದು. ಮನೆ, ಅಂಗಳ, ದೇವಗಳನ್ನು ಶುಚಿಯಾಗಿರಿಸಿ ಹಿರಿಯವರಿಗೆ ವಂದಿಸಿ, ಮನೆಯವರೆಲ್ಲರೂ ಒಟ್ಟಾಗಿ ಸೇರಿ, ಸಕಲ ಸಮಾಜಗಳಲ್ಲಿಯೂ ವಿದ್ಯೆಯೂ, ಬುದ್ಧಿಯೂ, ಅಹಿಂಸಾ ತತ್ವವೂ ಬೆಳೆಯಲೆಂದು ಪ್ರಾರ್ಥಿಸುವರ ಬ್ರಹ್ಮಶ್ರೀ. ನಾರಾಯಣ ಗುರು ಸ್ವಾಮಿಯವರಂತಹ ಮಹಾಪುರುಷರ ಜನ್ಮದಿನಾಚರಣೆಯನ್ನು ಮಾಡಿದಂತಾಗುವುದೆಂದು ಶ್ರೀ. ಎಂ. ಕೆ. ವೈದ್ಯರ್ ತಿಳಿಸುತ್ತಾರೆ.

ಜಿಲ್ಲಾ ಭೂಮಾಲಿಕರ ಅವಗಾಹನೆಗಾಗಿ

ಈ ವರ್ಷ ಮಳೆಯು ಸರಿಯಾದ ಸಮಯಕ್ಕೆ ಬಾರದೆಯೂ, ಬಂದರೂ ಮಳೆಯು ಬಹಳ ಕಡಿಮೆಯಾಗಿದ್ದ ಕಾರಣ ನಮ್ಮ ವರ್ಗದಾರರಲ್ಲಿ ಅನೇಕರು ತಮ್ಮ ಬೆಟ್ಟು ಗದ್ದೆಗಳನ್ನು ಸಾಗುವಳಿಮಾಡಲಿಕ್ಕೆ ಆಗದೆ ಬಂಜರು ಇಡಬೇಕಾದ ವಿಷಯಗಳನ್ನೂ, ಇನ್ನು ಕೆಲವರು ನೆರೆಹಾವಳಿಯಿಂದ ಹೊಯಿಗೆ ಬಿದ್ದ ಬೈಲುಗದ್ದೆಗಳನ್ನು ಬಂಜರು ಬಿಡಬೇಕಾಗಿ ಬಂದ ವಿಷಯಗಳನ್ನೂ ನಮಗೆ ತಿಳಿಸಿದ್ದಾರೆ. ಅಂಥಾ ವರ್ಗದಾರರೆಲ್ಲಾ ಅವುಗಳ ಕನ್ನಿಗೆ ಅನುಕೂಲವಾಗುವಂತೆ ತಮ್ಮ ಪಟ್ಟಾ ನಂಬ್ರ, ಗದ್ದೆಗಳ ವಿಸ್ತೀರ್ಣ, ಸರ್ವೆ ಸಬ್ ಡಿವಿಜನುಗಳನ್ನು ಕಾಣಿಸಿ ತೀರ್ವೆ ಮಾಫಿ ಬಗ್ಗೆ ಡಿಸ್ಟ್ರಿಕ್ಟ್ ಕಲೆಕ್ಟರಿಗೆ ಅರ್ಜಿ ಮೂಲಕ ಮನವಿಮಾಡಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ ಎಂದು ದ. ಕ. ಜಿಲ್ಲಾ ರೈತರ ಯಾ ಭೂಮಾಲಿಕರ ಸಂಘದ ಗೌ। ಕಾರ್ಯದರ್ಶಿ ಶ್ರೀ. ಕೆ. ಬಿ ಜಿನರಾಜ ಹೆಗ್ಡೆ, ಎಂ. ಎಲ್. ಎ. (ಕೇಂದ್ರ) ಇವರು ತಿಳಿಸುತ್ತಾರೆ.

ತೋನ್ಸೆ

ಜ್ವರಹಾವಳಿ:—ಇಲ್ಲಿ ಇಂದಿಗೆ ಸುಮಾರು ೩-೪ ತಿಂಗಳಲ್ಲಾಯ್ತು ಒಂದು ಬಗೆಯ ತರದ ಜ್ವರವು ತಲೆದೋರಿ ಈಗ ಇಡೀ ಊರಿನ ಜನರನ್ನು ಬಹಳವಾಗಿ ಪೀಡಿಸುತ್ತಿದೆ ಅಲ್ಲದೆ ಇದರ ಪರಿಣಾಮವಾಗಿ ಅನೇಕ ಮಂದಿ ಮೃತ್ಯುವಿನ ಬಾಯಿಗೆ ತುತ್ತಾದರು. ಆದಕಾರಣ ಈ ಜ್ವರದಿಂದಾಗಿ ಇಡೀ ಊರೇ ಕಠಿಣಾವಸ್ಥೆಯಲ್ಲಿದೆ. ಇಲ್ಲಿ ಧರ್ಮಾಸ್ಪತ್ರೆಗಳು ಇಲ್ಲದ ಕಾರಣ ಹಳ್ಳಿಯ ಬಡಜನರಗೋಳನ್ನು ಕೇಳುವವರಿಲ್ಲ. ಎಲ್ಲಾ ತರದ ವ್ಯಾಪಾರ ವಹಿವಾಟುಗಳಿಗೆ ಸಹ ಬಲವಾದ ಧಕ್ಕೆ ಉಂಟಾಗಿಯದೆ. ಸಂಬಂಧ ಪಟ್ಟ ಅಧಿಕಾರಿಗಳು ಈ ಕಡೆ ಗಮನ ಕೊಡುತ್ತಿದ್ದರೆ ತುಂಬಾ ಉಪಕಾರವಾಗುತಿತ್ತು. "ಬಾತ್ಮಿ"

ಕಾಸರಗೋಡು

ನಿರ್ಬಂಧಕಾಜ್ಞೆ.—ದ. ಕ. ಜಿಲ್ಲಾ. ಡಿ। ಬೋ। ಮೆಂಬರರೂ ನೀಲೇಶ್ವರದ ಪಂಚಾಯತ ಬೋರ್ಡು ಅಧ್ಯಕ್ಷರು, ಕಾಂಗ್ರೆಸ್ ಕೆಲಸಗಾರರೂ ಆದ ಶ್ರೀ. ಸಿ. ಕೆ ರಾಘವನ್ ನಂಬಿಯಾರರು ಸ್ವಗ್ರಾಮವನ್ನು ಬಿಟ್ಟು, ನಿರ್ಬಂಧಕಾಜ್ಞೆ ಹಿಂತೆಗೆವ ವರೆಗೆ ಹೊರಗೆ ಹೋಗಬಾರದೆಂದು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ನಿರ್ಬಂಧಿಸಲಾಗಿದೆಯೆಂದು ತಿಳಿಯುತ್ತದೆ.

ಆಲೆಚ ಬಿಡುಗಡೆ:—ಕಾಸರಗೋಡು ತಾಲೂಕು ಮುಳಿಯಾರು ಗ್ರಾಮದ ಕೃಷ್ಣ ಮತ್ತು ಇವನ ತಮ್ಮ ಶೇಷಪ್ಪ ಇವರನ್ನು ಇ. ಪಿ. ಕೋಡಿನ ಕಲಂ ಪ್ರಕಾರ ಸೆಶ್ಶನ್ ಕೋರ್ಟಿಗೆ ಕಮಿಟುಮಾಡಲಾಗಿತ್ತು. ತಾ ೬-೪-೪೧ರಲ್ಲಿ ೧ನೆಯ ಆಲೆಯು ಅದೇ ಗ್ರಾಮದ ಉಂಬು ಎಂಬವನನ್ನು ಚೂರಿಯಿಂದ ತಿವಿದುಕೊಂದನೆಂತಲೂ ಮೂರನೆಯ ಸಾಕ್ಷಿ ವೆಂಕಟ್ರಮಣ ಭಟ್ಟನಿಗೂ ೫ನೇ ಸಾಕ್ಷಿ ಮುತ್ತು ನಾಯರನಿಗೂ ಆಲೆಯು ಹಿಂಸೆಮಾಡಿದನೆಂತಲೂ ಹೇಳೋಣಾಗಿತ್ತು. ಆಲೆರ ೧೫ ವರ್ಷದ ತಂಗಿಯನ್ನು ವೆಂಕಟ್ರಮಣನು ಅತಿಕ್ರಮಿಸಲು ಆ ವಿಷಯ ೧ನೇ ಆಲೆಗೂ ವೆಂಕಟ್ರಮಣನಿಗೂ ಜಗಳವಾಗಿದ್ದು, ತಕ್ಷೀರಿನ ದಿನಬೆಳಗ್ಗೆ ಆಲೆರೂ ಅವರ ತಂಗಿಯೂ ಅವರ ಮೆಣಸಿನ ಗಿಡಗಳಿಗೆ ನೀರು ಹಾಕುವರೆ ಹೋಗುತ್ತಿರಲು ಉಂಬು ವೆಂಕಟ್ರಮಣವಗೈರರು ಬಂದು ಉಂಬುವು ೧ನೆಯ ಆಲೆಯ ತಲೆಗೆ ತನ್ನ ಕೈಯ ದೊಣ್ಣೆಯಿಂದ ಹೊಡೆಯಲು ೧ನೆಯ ಆಲೆಯು ಆತನನ್ನು ಚೂರಿಯಿಂದ ತಿವಿದನೆಂತಲೂ ಉಂಬುವು ಅಲ್ಲೇ ಮೃತಪಟ್ಟನೆಂದೂ, ತನ್ನ ಪ್ರಾಣರಕ್ಷಣೆ ಹಾಗೂ ತಂಗಿಯ ಮಾನ ರಕ್ಷಣೆಗಳಿಗಾಗಿ ತಾನು ಚೂರಿಯಿಂದ ತಿವಿಯಬೇಕಾಯಿತೆಂದೂ ಆಲೆಯ ಸಾಧನೆಯಾಗಿತ್ತು. ಎಸೆಸರರು ಆಲೆರ ತಪ್ಪುಗಾರರೆಂತಲೂ ಅಲ್ಲವೆಂತಲೂ ಭಿನ್ನಾಭಿಪ್ರಾಯಕೊಟ್ಟಿದ್ದರು. ಮಂಗಳೂರು ಸೆಶ್ಶನ್ ಜಡ್ಜರಾದ ಶ್ರೀ. ಕೆ. ಯನ್. ಗೋಪಾಲನವರು ಆಲೆರು ತಪ್ಪುಗಾರರಲ್ಲವೆಂದು ಬಿಟ್ಟು ಬಿಟ್ಟರು.

ಪೆರಡಾಲ

ಸಾಹಿತ್ಯ ಸಮಿತಿ: ಇದರ ವಾರ್ಷಿಕ ಸಭೆಯು ಶ್ರೀ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಈ ದಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಜರಗಲಿದೆ.

ಉಡುಪಿ

ಕೌನ್ಸಿಲ್ ಉಪಚುನಾವಣೆ:—ಉಡುಪಿ ಮುನ್ಸಿಪಲ್ ಕೌನ್ಸಿಲಿನ ಕಾಡುಬೆಟ್ಟು ವಾರ್ಡಿನ ಹೆಂಗಸರ ಸ್ಥಾನದ ಉಪಚುನಾವಣೆಯಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರು ಸ್ವತಿ ಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು.

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಧನ ಸಹಾಯ ಬಂದದ್ದು:—ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯಿಂದ ರೂ. ೧೫೦, ಇತರ ಒಟ್ಟು ರೂ. ೬-೩-೦.

ನೆರೆ ನಿರಾಶ್ರಿತರಿಗೆ ಸಹಾಯ:—ಬಂಟರಯಾನೆ ನಾಡವರ ಸಂಘದ ಆಶ್ರಯದಿಂದ ಅದರ ಅಧ್ಯಕ್ಷ ಶ್ರೀ. ಕೆ ಟಿ ಆಳ್ವರು ಕೊಟ್ಟ ಸುಮಾರು ರೂ. ೧೦೦ ಕ್ರಯದ ಬತ್ತವನ್ನು ಎಗ್ರಿ ಕಲ್ಚರಲ್ ಡೆಮೋನ್‌ಸ್ಟ್ರೇಟರರು ನೆರೆಹಾವಳಿಯಿಂದ ಸಂಕಷ್ಟಗೊಂಡ ರೈತರಿಗೆ ಹಂಚಿರುವರಾಗಿ ತಿಳಿದಿದೆ.

ಮಹಾಜನ ಫ್ಲಡ್ ರಿಲೀಫ್ ಕಮಿಟಿ

ಇವರ ಸ್ತುತ್ಯ ಕಾರ್ಯಗಳನ್ನು ಪ್ರಶಂಸಿಸಿ, ಈ ಸಲದ ನೆರೆಹಾವಳಿಯಲ್ಲಿ ಈ ಕಮಿಟಿಯವರು ಮಾಡಿದ ಕೆಲಸಗಳನ್ನು ಕೊಂಡಾಡಿ ಬಿಷೋಪರ ಅಧ್ಯಕ್ಷತೆಯಿಂದ ರಚಿತವಾದ ಸೌತ್ ಕೆನರಾ ಡಿಸ್ಟ್ರಿಕ್ಟ್ ಫ್ಲಡ್‌ರಿಲೀಫ್ ಮಂಡಿಸಿನವರು ಒಂದು ಅಭಿಮಾನದ ನಿರ್ಣಯವನ್ನು ಕಳುಹಿಸುವರಾಗಿ ತಿಳಿದಿದೆ.

ಬೊಂಬಯಿಯಲ್ಲಿ ಸಹಾಯ:—ಬೊಂಬಯಿ ಸಂಯುಕ್ತ ಕರ್ನಾಟಕ ಸಂಘದವರು ಮೇಯರ್ ಫಂಡಿನಿಂದ ದ. ಕ. ಜಿಲ್ಲಾ ನೆರೆಹಾವಳಿಯವರಿಗೆ ಸಹಾಯಕೊಡಬೇಕೆಂದು, ಮಹಾಜನ ಫ್ಲಡ್‌ರಿಲೀಫ್ ಕಮಿಟಿಯು ವಿನಂತಿ ಮೇರೆಗೆ, ಶಿಷ್ಟ ಮಂಡಳ ಸಹಿತ ಹೋಗಿ ಕೇಳಿಕೊಂಡಲ್ಲಿ ಅದಕ್ಕೆ ಯೋಗ್ಯನಿಗಾ ಕೊಡುವುದಾಗಿ ಅಲ್ಲಿಂದ ಭರವಸೆ ಘೋಷಿಸುವುದೆಂದು ತಿಳಿದಿದೆ.

ಧಾರವಾಡದಲ್ಲಿ ಸಹಾಯ:—ಧಾರವಾಡ ಆತ್ತಕಡೆ ಮಹಾಜನ ಫ್ಲಡ್ ರಿಲೀಫ್ ಕಮಿಟಿಯ ಕಡೆಯಿಂದ ನೆರೆಯಿಂದ ನೊಂದವರಿಗೆ ಸಹಾಯ ಕೇಳುವರೆ ಹೋದ ಶ್ರೀ. ದಾಮೋದರ ಬಾಳಿಗರು ಅಲ್ಲಿನ 'ಪ್ರಮುಖರ ಸಭೆ ಸೇರಿಸಿ, ಇಲ್ಲಿನ ಸ್ಥಿತಿಗತಿಗಳನ್ನು ವಿವರಿಸಿ ಸಹಾಯ ಧನ ಕೂಡಿಸುವ ಕಾರ್ಯ ಕೈಕೊಳ್ಳುತ್ತಿರುವರಾಗಿ ತಿಳಿದಿದೆ.

—ರಾಗೂರ್ ನಿಧಿ—

(ಮುಂದುವರಿದದು)

ಶ್ರೀ। ವೆಂಕಟ್ರಾಯ ಬಾಳಿಗ ರೂ. ೫, ಶ್ರೀ। ಕೆ. ಬಿ. ಜಿನರಾಜ ಹೆಗ್ಡೆ ರೂ. ೨, ಶ್ರೀ। ದಾಮೋದರ ಪೈ ರೂ. ೨, ಶ್ರೀ। ಎಲ್. ಸಿ. ಪ್ಯಾಸ ರೂ ೨, ಡಾ। ಯು. ಪಿ. ಮಲ್ಯ ರೂ. ೨, ಶ್ರೀ। ವೈಕುಂಠ ಬಾಳಿಗ ರೂ. ೨, ಶ್ರೀ। ಕೆ. ಆರ್. ಕಾರಂತ ರೂ. ೨, ಶ್ರೀ. ಯಂ. ವೆಂಕಟೇಶ ಪೈ ರೂ. ೨, ಶ್ರೀ. ಸೋಮಶೇಖರರಾವ್ ರೂ. ೨, ಶ್ರೀ. ಕಸ್ತೂರಿ ಲಕ್ಷ್ಮಣ ಪೈ ರೂ. ೨, ಶ್ರೀ. ಯು. ನಾರಾಯಣ ಮಲ್ಯ ರೂ. ೨, ಶ್ರೀ. ಕೆ ಪಿ. ಜನಾರ್ದನ ಪ್ರಭು ರೂ. ೨, ಶ್ರೀ. ಯಂ ಎಸ್. ಪಿತಾಂಬರ ರಾವ್ ರೂ. ೨, ಶ್ರೀ. ಸುಟೀರ್ ಕೇಶವ ನ್ಯಾಕ್ ರೂ. ೨, ಶ್ರೀ. ಯಚ್. ಕೆ ತಿರುಗಳಾಯ ರೂ. ೧, ಡಾ. ಯಸ್. ವಿ. ಅಡಪ್ಪ ರೂ. ೧, ಶ್ರೀ. ಬಿ. ವಿಠಲರಾವ್ ರೂ. ೧, ಶ್ರೀ. ಎಸ್. ನಾಗಪ್ಪ ನ್ಯಾಕ ರೂ. ೧, ಶ್ರೀ. ಎನ್. ನಾರಾಯಣ ನ್ಯಾಕ ರೂ. ೧, ಡಾ. ಎಸ್. ಉಪೇಂದ್ರ ಪೈ ರೂ. ೧, ಶ್ರೀ. ಪಿ ಸರ್ವೋತ್ತಮ ನ್ಯಾಕ ರೂ. ೧,

[ಮುಂದುವರಿಯುವುದು]

ಇರಾಣಿಗೆ ಬ್ರಿಟಿಷ್ ರಶ್ಯನ್ ಸೇನೆಗಳು ಹೋದುವು

ಅನ್ಯಾಯವಾಗಿ ಆಕ್ರಮಿಸಿದರೆಂದು ಇರಾಣ್ ಮಂತ್ರಿ ಹೇಳಿಕೆ

ರಶ್ಯದಲ್ಲಿ ಲೆನಿನ್‌ಗ್ರಾಡಿನ ಬಳಿ ಕಾಳಗವಾಗುತ್ತಿದೆ

ರಶ್ಯದಲ್ಲಿ ಜರ್ಮನರು ಮುಂದೊತ್ತಿಯೇ ಹೋಗಿದ್ದಾರೆ. ರಶ್ಯನರ ಪ್ರತಿಭಟನೆಯು ಅಸಾಧಾರಣವಿದೆ. ಲೆನಿನ್‌ಗ್ರಾಡಿನ ಸ್ವಾಧೀನತೆಗಾಗಿ ಈಗ ಘೋರ ಕಾಳಗವಾಗುತ್ತಿದೆ. ಜರ್ಮನರ ಚಟುವಟಿಕೆ ಇರಾಣಿನಲ್ಲಿ ಪ್ರಬಲವಾಯಿತೆಂದು ಬ್ರಿಟಿಷ್ ರಶ್ಯನ್ ಸೇನೆಗಳು ಇರಾಣಿಗೆ ಸಾಗಿದವು. ಇರಾಣ್ ಸರಕಾರವು ಇದನ್ನು ಮೆಚ್ಚಿರುವುದಿಲ್ಲ ಮಾತ್ರವಲ್ಲದೆ ಇದನ್ನು ಎದುರಿಸುವುದಾಗಿ ಅಲ್ಲಿನ ಮುಖ್ಯ ಮಂತ್ರಿ ಹೇಳಿರುವನು. ಜಪಾನು ಮುಂದೆ ಯಾವ ಕಡೆಗೆ ಧಾಳಿ ಮಾಡುವುದೆಂಬ ವಿಷಯ ತಿಳಿದು ಬರುವುದಿಲ್ಲ. ಆದರೂ ಪೂರ್ವದಲ್ಲಿ ಯುದ್ಧದ ಭೀತಿ ಹೆಚ್ಚುತ್ತಲಿದೆ. ರಶ್ಯ ಯುದ್ಧ ಮುಗಿದ ಮೇಲೆ ಇಂಗ್ಲೆಂಡಿನ ಮೇಲೆ ಧಾಳಿ ಮಾಡಲಾಗುವುದೆಂದು ಜರ್ಮನರು ಪ್ರಕಟಿಸಿದ್ದಾರೆ.

ಒಡೆಸ್ಸಾದಲ್ಲಿ ಕಾಳಗ

ರಶ್ಯಾ ಜರ್ಮನ್ ಸೇನೆಗಳಿಗೆ ಒಡೆಸ್ಸಾದಲ್ಲಿ ಭೀಕರ ಕಾಳಗವಾಗುತ್ತಿದೆ. ಈ ಕಾಳಗದಲ್ಲಿ ಗಾಯಗೊಂಡ ರುಮಾನಿಯನರ ಸಂಖ್ಯೆ ೯೦೦೦ಕ್ಕೆ ಮೀರಿದೆಯಂತೆ. ಸತ್ತ ರುಮಾನಿಯನರ ಸಂಖ್ಯೆ ೩೦೦೦ಕ್ಕೆ ಮೀರಿದೆಯಂತೆ. ರಶ್ಯನರು ಪ್ರತಿಧಾಳಿಯನ್ನು ಬಹಳ ಜೋರಾಗಿ ಮಾಡುತ್ತಿರುವರೆಂದು ತಿಳಿದಿದೆ.

ಕಪ್ಪು ಸಮುದ್ರದ ಹತ್ತಿರ ಜರ್ಮನ್ ಮುನ್ನಡೆ

ಕಪ್ಪು ಸಮುದ್ರ ಕರಾವಳಿಯಲ್ಲಿ ಒಡೆಸ್ಸಾ ಮತ್ತು ನೀಪರ್ ನದಿಗಳ ಮುಖದಲ್ಲಿರುವ ಒಕಿಕೋವ್ ಎಂಬ ಬಂದರವು ಜರ್ಮನರ ವಶವಾಗಿರುವುದಂತೆ.

ಲೆನಿನ್ ಗ್ರಾಡ್

ಇದರ ಆಗ್ನೇಯದಲ್ಲಿ ಸುಮಾರು ೧೧ ಮೈಲು ದೂರದಲ್ಲಿ ಎಂದರೆ ಪ್ರೋಪಸ್ ಮತ್ತು ಇಲ್ಮನ್ ಸರೋವರಗಳ ನಡುವೆ ಕಾಳಗವಾಗುತ್ತಿದೆಯೆಂದು ಜರ್ಮನ್ ಪ್ರಕಟಣೆ. ಕಿಂಗೀಪಸ್, ಸ್ಮೋಲೆನ್‌ಸ್ಕ್ ಮತ್ತು ನೋವೊ ಗ್ರಾಡುಗಳ ಸಮೀಪ ಉಗ್ರ ಕಾಳಗವಾಗುತ್ತಿದೆ.

ಇರಾಣಿಗೆ ಬ್ರಿಟಿಷ್ ರಶ್ಯ ಸೈನ್ಯ ಪ್ರವೇಶ

ಯೂರೋಪು ಮತ್ತು ಏಶಿಯಾ ಖಂಡಗಳ ನಡುವೆ ಇರುವ ಕೊನೆಯ ನೈಸರ್ಗಿಕ ಕೋಟೆಯೂ, ಸೋವಿಯೆಟ್ ರಶ್ಯವನ್ನು ಭಂಗುಗೊಳಿಸಿ ಸೋಲಿಸಬೇಕೆನ್ನುವ ನಾಜಿಗಳ ಕುತಂತ್ರಗಳಿಗೆ ಕೇಂದ್ರ ಸ್ಥಾನವೂ ಹಿಂದುಸ್ಥಾನದ ಮೇಲೆ ಸಹಜವಾಗಿ ಧಾಳಿಮಾಡಲು ಆಧಾರ ಭೂಮಿಯೂ ಆದ ಇರಾಣನ್ನು ಬ್ರಿಟಿಷ ಸೈನಿಕರು ಮೊದಲು ಪ್ರವೇಶಿಸಿದರೆಂದೂ, ಅವರನ್ನು ಹಿಂಬಾಲಿಸಿ ರಶ್ಯನ್ ಸೈನಿಕರೂ ಹೋದರೆಂದೂ ತಿಳಿದಿದೆ.

ಅಚ್ಚಿನ ರಾಷ್ಟ್ರಗಳು ಅಲ್ಲಿ ಮಾಡಿದ ಕುತಂತ್ರಗಳ ಪರಿಣಾಮವಾಗಿ ಹೀಗೆ ಮಾಡಬೇಕಾಯಿತೆಂದೂ, ಜರ್ಮನ್ ಪಂಚಮ ದಳದವರು ಇರಾಣಿನಲ್ಲಿ ತುಂಬುವುದು ತಮಗೆ ಬೇಡವಾಗಿತ್ತೆಂದೂ, ಈ ಪ್ರಕಾರ ಇರಾಣ್ ಸರಕಾರಕ್ಕೆ ತಿಳಿಸಿದರೂ, ಅವರು ತಮ್ಮ ಸಲಹೆ ಕೇಳದ ಕಾರಣದಿಂದ ಹೀಗೆ ಮಾಡಬೇಕಾಯಿತೆಂದೂ, ಇರಾಣಿನಲ್ಲಿ ಜರ್ಮನ್ ಪ್ರಾಬಲ್ಯವನ್ನು ಬಿಟ್ಟುಬಿಟ್ಟರೆ ಸಿರಿಯಾ, ಇರಾಕು ಮತ್ತು ಮಧ್ಯಪೂರ್ವಕ್ಕೆ ಗಂಡಾಂತರವಲ್ಲದೆ ಹಿಂದುಸ್ಥಾನಕ್ಕೂ ಆಪತ್ತಾಗುವುದೆಂದೂ, ಇದರಿಂದ ಇರಾಣಿನವರಿಗೆ ಜರ್ಮನರನ್ನು ತಡೆವುದು ಅಸಾಧ್ಯವಾಗುವ ನಿಮಿತ್ತ ಬ್ರಿಟಿಷ್ ರಶ್ಯನ್ ಸೈನ್ಯಗಳು ಈ ಮುಂಜಾಗ್ರತೆ ತೆಗೆದುಕೊಳ್ಳಬೇಕಾಯಿತೆಂದೂ ಹೇಳಿಕೆಯಾಗಿದೆ.

ಜರ್ಮನಿಗೆ ಬಲಿಯಾದ ರಾಷ್ಟ್ರಗಳಿಗೆ ಸ್ವಾತಂತ್ರ್ಯ

ಚರ್ಚಿಲರ ಆಕಾಶ ಭಾಷಣ

ಚರ್ಚಿಲ್ಲರು ಆಕಾಶವಾಣಿಯಲ್ಲಿ ಒಂದು ಭಾಷಣ ಮಾಡುತ್ತಾ ಮೊದಲು ರಶ್ಯ ಯುದ್ಧದ ವಿಷಯ ಹೇಳಿ, ಅಲ್ಲಿ ೩೦ ಲಕ್ಷ ಜರ್ಮನರು ನೆಲಸಮವಾದರೆಂದೂ, ರಶ್ಯನರ ಸಾಹಸವು ಸ್ತುತ್ಯವಾದುದೆಂದೂ ಹೇಳಿ, ಹಿಟ್ಲರ್ ಮುಸಲಿನಿಗಳಂತೆ ಸಾಮ್ರಾಜ್ಯ ಕಟ್ಟಲು ಆಶಿಸುತ್ತಿರುವ ಜಪಾನರು ಸಯ್ಯಾಮ್ ಸಿಂಗಾಪುರಗಳ ಮೇಲೆ ಧಾಳಿಮಾಡಿ ಇಂಗ್ಲೆಂಡಿನಿಂದ ಆಸ್ಟ್ರೇಲಿಯಕ್ಕೆ ಹೋಗುವ ಹಾದಿಯನ್ನು ಅಡ್ಡಗಟ್ಟಲು ಮನಮಾಡಿರುವರೆಂದೂ, ಫಿಲಿಪಾಯನ್ ದ್ವೀಪಗಳ ಮೇಲೂ ಗಂಡಾಂತರ ಬರಲಿದೆಯೆಂದೂ, ಇದು ಆಗದಂತೆ ಜಪಾನಿನ ಮುನ್ನಡೆಯನ್ನು ತಡೆಗಟ್ಟಬೇಕೆಂದೂ ಹೇಳಿದರು. ಆ ಬಳಿಕ ಚರ್ಚಿಲ್ಲರು ಜಪಾನು ಅಮೇರಿಕ ಸಂಧಾನದ ವಿಷಯವನ್ನೆತ್ತಿ, ಯೋಗ್ಯ ಹಾಗೂ ಸಮಾಧಾನಕರವಾದ ಈ ಒಪ್ಪಂದವು ಆಗದಿದ್ದರೆ ತಾವು ಅಮೇರಿಕದ ಪಕ್ಷ ವಹಿಸುವುದಾಗಿ ಹೇಳಿದರು.

ಅನಂತರ ಅವರು ಹಿಟ್ಲರ್ ಶಾಹಿಯನ್ನು ನಿರ್ಮೂಲ ಮಾಡಲು ಬ್ರಿಟನು ಅಮೇರಿಕಗಳು ಮಾಡಿದ ಪ್ರತಿಜ್ಞೆಯನ್ನು ಉಲ್ಲೇಖಿಸಿ, ತಾವು ಸಾರಿದ ಧ್ಯೇಯಗಳನ್ನು ಕಾರ್ಯರೂಪದಲ್ಲಿ ತರಲು ತಾವು ಅನೇಕ ಉಪಾಯಗಳನ್ನು ಕೈಗೊಂಡಿರುವುದಾಗಿ ಹೇಳಿದರು. ರಶ್ಯಕ್ಕೆ ಸಂಪೂರ್ಣ ಸಹಾಯಮಾಡಬೇಕೆಂದು ನಾವು ನಿರ್ಧರಿಸಿದ್ದೇವೆ ಎಂದರು. ಯುದ್ಧದಲ್ಲಿ ತಾವು ಗೆದ್ದರೆ, ಜರ್ಮನಿಯ ಬಲೆಗೆ ಬಿದ್ದ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಕೊಡುವುದಾಗಿ ಹೇಳಿದರು.

ಅಟ್ಲಾಂಟಿಕಿನಲ್ಲಿ ರೂಸ್‌ವೆಲ್ಟರೊಡನೆ ಆದ ಭೇಟಿಯ ವಿಷಯ ಹೇಳುತ್ತಾ, ತಾನು ಅವರೊಡನೆ ಮೂರು ದಿನಗಳು ಇದ್ದುದಾಗಿಯೂ, ನಮ್ಮ ಮತ್ತು ಅಮೇರಿಕದ ಅಧಿಕಾರಿಗಳು ಹಗಲಿರುಳು ಸಭೆಗೂಡಿ ವಿಚಾರವಿನಿಮಯ ಮಾಡಿ, ಮಹತ್ವದೊಂದು ಪ್ರಕಟಣೆ ಹೊರಡಿಸಿದುದಾಗಿ ಹೇಳಿದರು. "ತಪ್ಪಿತಸ್ಥ ರಾಷ್ಟ್ರಗಳನ್ನು ನಾವು ಸಂಪೂರ್ಣ ನಿಶ್ಶಸ್ತ್ರ ಮಾಡುತ್ತೇವೆ. ಆದರೆ ನಾವು ಮಾತ್ರ ನಮಗೆ ಬೇಕಾಗಿರುವಷ್ಟು ಶಸ್ತ್ರಾಸ್ತ್ರಗಳನ್ನಿಟ್ಟುಕೊಳ್ಳುತ್ತೇವೆ. ಯಾವ ದೇಶದ ವ್ಯಾಪಾರವನ್ನೂ ಹಾಳುಮಾಡುವುದಿಲ್ಲ" ಎಂದೂ ಹೇಳಿದರು.

ಅಫಘಾಣಿನ ತಾಟಸ್ಥ್ಯ

ಅಫಘಾಣ್ ಸರಕಾರವು ತಟಸ್ಥವಾಗಿರುವುದೆಂದೂ ಆದರೆ ಸ್ವಾತಂತ್ರ್ಯವನ್ನು ಉಳಿಸಲು ಕಾದಾಡುವುದೆಂದೂ, ಜಾಹೀರ್ ಶಹಾ ಇವರು ಘೋಷಿಸಿರುವರು.

ಗೋಮೆಲ್ ನಗರವು ಜರ್ಮನ್ ವಶ

ಲೆನಿನ್ ಗ್ರಾಡಿನಿಂದ ೧೫ ಮೈಲು ಮಾತ್ರ ದೂರ ಜರ್ಮನ್ ಸೈನ್ಯವಿದೆಯಂತೆ. ಕಿಂಗೀಸೆಪ್, ನೊವೊಗ್ರಾಡ್, ಮತ್ತು ಗೋಮಲ್‌ಗಳಲ್ಲಿ ಆದ ಕದನಗಳಲ್ಲಿ ಗೋಮೆಲ್ ಜರ್ಮನರ ವಶವಾಗಿರುವುದಂತೆ. ಜರ್ಮನರು ಇನ್ನೂ ನೀಪರ್ ನದಿ ದಾಟಿರುವುದಿಲ್ಲವೆಂದೂ, ಆ ನದಿಯನ್ನು ದಾಟಿ ಬರಲು ಬಹಳ ಕಷ್ಟವಾಗುವುದೆಂದೂ ಹೇಳಲಾಗಿದೆ.

ಟರ್ಕಿ ಗಡಿನಾಡಿನಲ್ಲಿ ಜರ್ಮನ್ ಸೈನ್ಯ

ಸಾಮೋಸ್ ಎಂಬ ಗ್ರೀಕ್ ದ್ವೀಪದ ಹತ್ತಿರ ಜರ್ಮನ್ ಹಡಗಗಳೂ, ಬಲ್ಗೇರಿಯದ ದಕ್ಷಿಣ ಜರ್ಮನ್ ಸೈನ್ಯಗಳೂ ಇವೆಯಂತೆ. ಟರ್ಕಿ ರಾಯಭಾರಿ ರಶ್ಯನ್ ರಣಭೂಮಿಗೆ ಹೋಗಿ ಹಿಟ್ಲರನನ್ನು ಕಂಡುಬಂದನಂತೆ.

ಲೆನಿನ್ ಗ್ರಾಡನ್ನು ಕಡೆ ತನಕ ರಕ್ಷಿಸಿರಿ

ವ್ಹೊರೋಶಿಲೋವ್ ಬಿನ್ನಹ

ಲೆನಿನ್‌ಗ್ರಾಡನ್ನು ಕೊನೆ ತನಕ ಸಂರಕ್ಷಿಸಿರೆಂದು ಮಾರ್ಶಲ್ ವರೋಶಿಲೋವರು ಲೆನಿನ್‌ಗ್ರಾಡಿನ ನಾಗರಿಕರಿಗೆ ವಿನಂತಿಸಿಕೊಂಡರು.

7 o'clock

7 ಓ'ಕ್ಲೋಕ್

ಮನ್ನಣೆ ಪಡೆದ ರೇಜರ್ ಸೆಟ್

7 ಓ'ಕ್ಲೋಕ್ ಸೆಟ್ಟಿನ ಕ್ರಯವು ಹೇಗೆ ಕಡಿಮೆಯೋ ಅದರಿಂದ ಮಾಡಿದ ಕ್ಷೌರವು ಅದಕ್ಕಿಂತಲೂ ಉತ್ತಮ. ಈ 7 ಓ'ಕ್ಲೋಕ್ ಸೆಟ್ಟಿನಲ್ಲಿ ಒಂದು ಅಚ್ಚುಕಟ್ಟಾದ ರೇಜರು ಒಂದು ಪೆಟ್ಟಿಗೆಯಲ್ಲಿಷ್ಟು ಎರಡು ಹೆಸರಿನಂತ ನಡುವೆ, ಸಿಗಿಯಲ್ಪಟ್ಟು ಇಕ್ಕಡೆಗಳಲ್ಲಿಯೂ ಹರಿತವಿರುವ ಎರಡು 7 ಓ'ಕ್ಲೋಕ್ ಬ್ಲೇಡುಗಳು. ರೇಜರಿಗೆ ಹೊಸ ಮಾದರಿಯ ರಕ್ಷಾ ಕವಚವಿದ್ದು ಇದರ ಹಿಡಿಯು ಜಾರದಂತೆ ಮಾಡಲ್ಪಟ್ಟಿದೆ. ಸಿಗಿಯಲ್ಪಟ್ಟ ಬ್ಲೇಡುಗಳು ಅತೀ ತ್ವರೆಯಲ್ಲಿ ಅನೇಕ ಸುಖಕರವಾದ ಕ್ಷೌರವನ್ನುಂಟುಮಾಡುವುವು



ಸತ್ಯಾಗ್ರಹವು ವಿಜಯಿಯಾಗುವುದು ಖಂಡಿತವಾದುದು.

ಸತ್ಯಾಗ್ರಹಕ್ಕೆ ವಿಜಯ ಸಿಗುವುದು ನಿಶ್ಚಯವೆಂದು ಗಾಂಧಿಜಿ ಅಭಿಪ್ರಾಯವಾಗಿದೆ. ವಲ್ಲಭಭಾಯಿಯವರನ್ನು ಅಸೌಖ್ಯದ ವಿಷಯವಾಗಿ ಬಿಡುಗಡೆ ಮಾಡಿದರು. ಸತ್ಯಮೂರ್ತಿ ಬಿಡುಗಡೆ ಹೊಂದಿ ಬಂದವರು, ಕಾಂಗ್ರೆಸು ಪುನಃ ಅಧಿಕಾರ ಸ್ವೀಕರಿಸುವುದು ಉತ್ತಮವೆಂದು ಅಭಿಪ್ರಾಯ ಸಾರಿರುವರು. ಸರ್ ಸಿಕಂದರರು ವೈಸರಾಯ್ ರಿತ್ತ ಸದಸ್ಯತ್ವಕ್ಕೆ, ಲೀಗಿನ ಸೂಚನೆಯಂತೆ ಅಲ್ಲವೆಂದರೂ ರಾಜಿನಾಮೆಯಿತ್ತವರು ಸರಿಯಾದ ಕಾರಣವಿಲ್ಲದೆ ರಾಜಿನಾಮೆ ಕೊಡಲಾರರೆಂದು ಹಕ್ಕರು ಹೇಳುತ್ತಾರೆ. ಸಾವರ್ಕಾರರು ರೂಸ್‌ವೆಲ್ಟರಿಗೆ ಹಿಂದುಸ್ಥಾನದ ಸ್ವಾತಂತ್ರ್ಯದ ಸ್ಪಷ್ಟೀಕರಣೆಗಾಗಿ ಒಂದು ತಂತಿ ಕಳುಹಿಸಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಆಫೀಸ್ ಸೆಕ್ರೆಟರಿ ಸಾದಿಕ್ ಅಲಿಯವರು ಈಗ ಕರ್ನಾಟಕ ಪ್ರವಾಸ ಮಾಡಿ ಮುಖಂಡರೊಡನೆ ಮುಂದಿನ ಕಾಂಗ್ರೆಸ್ ಕಾರ್ಯಕ್ರಮದ ವಿಚಾರದಲ್ಲಿ ವಿಚಾರವಿನಿಮಯ ಮಾಡುತ್ತಾರೆ

ಕಾಂಗ್ರೆಸ್ ಧೋರಣೆ

ಸಂಪೂರ್ಣ ಬದಲಾಗಬೇಕು

ಮಹಾತ್ಮರಲ್ಲಿ ನನ್ನ ವಿಶ್ವಾಸ ಅಚಲವಿದೆ

ಸತ್ಯಮೂರ್ತಿ ಹೇಳುತ್ತಾರೆ.

ಮದ್ರಾಸಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಶ್ರೀ ಸತ್ಯಮೂರ್ತಿಗಳು ಕಾಂಗ್ರೆಸಿನ ಧೋರಣೆಯಲ್ಲಿ ಈಗ ಸಂಪೂರ್ಣ ಬದಲಾವಣೆಯಾಗಬೇಕೆಂದು ಹೇಳಿದರು. ಕಾಂಗ್ರೆಸಿನ ವಿಶಿಷ್ಟ ಧೋರಣೆ ಮತ್ತು ವಿಶಿಷ್ಟ ಕಾರ್ಯಕ್ರಮದ ಬಗ್ಗೆ ತಮಗೆ ಭಿನ್ನಾಭಿಪ್ರಾಯ ವಿದ್ದರೂ ಕಾಂಗ್ರೆಸಿನ ಕೊನೆಯ ನಿರ್ಣಯ ಮತ್ತು ಶಿಸ್ತಿನಂತೆ ತಾನು ನಡೆಯಲು ಸಿದ್ಧನೆಂದೂ, ಗಾಂಧಿಜಿಯವರಲ್ಲಿ ತನಗೆ ಅಚಲ ವಿಶ್ವಾಸವಿದೆಯೆಂದೂ ಅವರು ಹೇಳಿದರು.

ಕೆಲವು ತಿಂಗಳಲ್ಲಿ ಆದ ಸ್ಥಿತ್ಯಂತರಗಳನ್ನು ಪರಿಶೀಲಿಸುತ್ತಾ ಅವರ ಪಾಕಿಸ್ತಾನ ಪರವಾದ ಮತ್ತು ವಿರುದ್ಧವಾದ ಮಾತುಗಳೇ ವ್ಯಾಪಿಸಿವೆಯೆಂದೂ ಆದ ಕಾರಣ ಕಾಂಗ್ರೆಸು ರಾಜಕಾರಣ ರಂಗಭೂಮಿಗೆ ಬಂದು ಧೈರ್ಯದಿಂದ ಕಾರ್ಯಕ್ರಮವನ್ನು ಕೈಕೊಳ್ಳದಿದ್ದರೆ ಈ ಪ್ರತ್ಯೇಕ ಭಾವನೆಗೆ ಮಹತ್ವದ ಸ್ಥಾನವು ದೊರಕುವುದೆಂದೂ ಹೇಳಿದರು.

ಯುದ್ಧದ ಪರಿಸ್ಥಿತಿಯನ್ನು ವಿವೇಚಿಸುತ್ತಾ ಅವರು ಭಾರತಕ್ಕೆ ಪೂರ್ವ ಮತ್ತು ಪಶ್ಚಿಮದ ಯುದ್ಧಪರಿಸ್ಥಿತಿಯಿಂದ ಪ್ರಬಲವಾದ ಅಪಾಯವು ಸಂಭವಿಸುವ ಲಕ್ಷಣಗಳಿವೆಯೆಂದರು. ಆಕಾರದ

ಮಹಾತ್ಮಾ ಗಾಂಧಿಯವರ ವಿಶ್ವಾಸ

ಮುಸ್ಲಿಂ ಲೀಗ ಸಿಕಂದರ್ ಹಕ್ಕರನ್ನು ರಾಜಿನಾಮೆ ಕೊಡಲು ಹೇಳಿದೆ

ಸಾವರ್ಕಾರರು ರೂಸ್‌ವೆಲ್ಟರಿಗೆ ತಂತಿ ಬಿಟ್ಟಿದ್ದಾರೆ

ಈ ಅಂತರಿಕ ಅವ್ಯವಸ್ಥೆ ಹಾಗೂ ಹೊರಗಿನ ಆಕ್ರಮಣಗಳಿಂದ ದೇಶವನ್ನು ಸಂರಕ್ಷಿಸುವ ಹೊಣೆಗಾರಿಕೆಯು ಪ್ರತಿಯೊಬ್ಬನ ಮೇಲೆಯೂ ಇದೆಯೆಂದೂ, ಆದರೆ ಇವೆಲ್ಲಾ ಕೆಲಸಮಾಡುತ್ತಿದ್ದಂತೆ ದೇಶದ ಸ್ವಾತಂತ್ರ್ಯ ಸಂಪಾದನೆಯ ಕೆಲಸಮಾಡುತ್ತಿರಬೇಕೆಂದೂ ಹೇಳಿದರು ಕಾಂಗ್ರೆಸು ಧೈರ್ಯದಿಂದ ಹೊಸ ಕಾರ್ಯಕ್ರಮವನ್ನು ವಹಿಸಿ ದೇಶದಲ್ಲಿ ರಾಜಕೀಯ ಅಧಿಕಾರವನ್ನು ತಮ್ಮ ಕಡೆಗೆ ತೆಗೆದುಕೊಳ್ಳಬೇಕೆಂದು ಅವರು ಹೇಳಿದರು.

ಬರ್ಮಾ ಭಾರತ ಒಪ್ಪಂದದ ವಿಷಯ

ಗಾಂಧಿಜಿ ಹೇಳಿಕೆ

ಈ ಒಪ್ಪಂದವು ಅಯೋಗ್ಯವಾದದ್ದು ಭಾರತ ಹಾಗೂ ಬರ್ಮಾದೇಶಗಳಿಗೆ ಕಲಂಕಪ್ರಾಯವಾದದ್ದೆಂದು ಗಾಂಧಿಜಿ ಹೇಳಿರುವುದಲ್ಲದೆ, ಬರ್ಮಾ ದೇಶದ ಜನರ ಮಹತ್ವದ ಕೇಳಿಕೆಗಳನ್ನು ಮಾನ್ಯ ಮಾಡದೆ ಇದು ಮಾಡಲ್ಪಟ್ಟಿರುವುದರಿಂದ, ಇದರಲ್ಲಿ ತನಗೆ ವಿಶ್ವಾಸವಿಲ್ಲವೆಂದೂ ಅವರು ಪ್ರಕಟಿಸಿರುವರು.

ಬರ್ಮಾದಲ್ಲಿ ಭಾರತೀಯರೂ, ಭಾರತದಲ್ಲಿಯ ಬರ್ಮಿಯರೂ ಪಾಶ್ಚಾತ್ಯರಂತೆ ಪರಕೀಯರಾಗಲಾರರೆಂದೂ ಇದು ಅನ್ಯಾಯವಾದುದೆಂದೂ ಗಾಂಧಿಜಿ ಹೇಳಿರುವರು, ಬರ್ಮಾದಲ್ಲಿ ನೆಲಸಿರುವ ಭಾರತೀಯರಿಗೆ ಈ ರೀತಿ ಉಗ್ರದಂಡ ವಿಧಿಸುವ ಕಾರಣವಿಲ್ಲವೆಂದೂ, ಈ ಒಡಂಬಡಿಕೆ ಮಾಡಿದಾಗ ಜನರ ಅಭಿಪ್ರಾಯ ಕೇಳಿಲ್ಲವೆಂದೂ ಗುಪ್ತವಾಗಿ ಗೂಢವಾಗಿ ಇದು ಮಾಡಲ್ಪಟ್ಟಿತೆಂದೂ ಮತ್ತೆ ಜನರ ಮೇಲೆ ಇದು ಹೊರಿಸಲ್ಪಟ್ಟಿತೆಂದೂ ಗಾಂಧಿಜಿ ಹೇಳಿದ್ದಾರೆ. ಈ ಎರಡು ರಾಷ್ಟ್ರಗಳು ಒಂದು ಒಪ್ಪಂದಮಾಡಿಕೊಳ್ಳಲು ಸ್ವತಂತ್ರವಾಗುವ ವರೆಗೆ—ಅದು ಬೇಗನೇ ಆಗುವುದ—ಬ್ರಿಟಿಷ್ ಮಂತ್ರಿಗಳೂ ಬ್ರಿಟಿಷ್ ಜನರೂ ತಾಳ್ಮೆಯಿಂದಿರಬೇಕೆಂದೂ ಅವರು ವಾದಿಸಿದರು.

ಸಿಕಂದರ—ಹಕ್ಕರೇ ಮೊದಲಾದವರು ರಾಜಿನಾಮೆ ಕೊಡಬೇಕು

ಲೀಗ್ ಕೌನ್ಸಿಲ್ ನಿರ್ಣಯ

ಮುಸ್ಲಿಂ ಲೀಗಿನೊಡನೆ ಕೇಳದೆ ವೈಸರಾಯ್ ಕೌನ್ಸಿಲಿನಲ್ಲಿ ಅಧಿಕಾರ ವಹಿಸಿದ ಸರ್ ಸಿಕಂದರ್, ಪಜ್ಲುಲ್ ಹಕ್ ಸಾದುಲ್ಲಾಖಾನ್ ಮೊದಲಾದವರು ರಾಷ್ಟ್ರೀಯ ಸಂರಕ್ಷಕ ಸಮಿತಿಗೆ ರಾಜಿನಾಮೆ ಕೊಡಬೇಕೆಂದೂ ಇಲ್ಲದಿದ್ದರೆ ಅವರ ಮೇಲೆ ಶಿಸ್ತು ಜಾರಿಯಾಗುವುದೆಂದೂ ಮುಂಬಯಿಯಲ್ಲಿ ಕೂಡಿದ್ದ ಲೀಗ್ ಕೌನ್ಸಿಲು ನಿರ್ಣಯ ಮಾಡಿದೆ.

ರೂಸ್‌ವೆಲ್ಟರಿಗೆ ಸಾವರ್ಕಾರರ ತಂತಿ

"ಬ್ರಿಟನು ಅಮೇರಿಕಗಳ ಪರವಾಗಿ ಚರ್ಚಿಲ್ ರೂಸ್‌ವೆಲ್ಟರು ಸಾರಿದ ಸಂಯುಕ್ತ ಘೋಷಣೆಯು ಹಿಂದೂಸ್ಥಾನಕ್ಕೂ ಅನ್ವಯಿಸುವುದೇ ಯುದ್ಧ ಮುಗಿದ ಮೇಲೆ ಒಂದು ವರ್ಷದ ಬಳಿಕ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಅಮೇರಿಕ ಭರವಸೆ ಕೊಡುವುದೇ?" ಎಂದು ಸಾವರ್ಕಾರರು ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಒಂದು ತಂತಿ ಕೊಡುತ್ತಾ ಇದಕ್ಕೆ ಸರಿಯಾದ ಉತ್ತರ ಕೊಡದಿದ್ದರೆ ನಿಮ್ಮ ಘೋಷಣೆ ಪೊಳ್ಳು ಪ್ರಚಾರದ ಬಗ್ಗೆ ಆದದೆಂದೂ ನಾವು ಗ್ರಹಿಸಬೇಕಾಗುವುದೆಂದು ಅದರಲ್ಲಿ ತಿಳಿಸಿರುವರು

ವಿದ್ಯಾರ್ಥಿಗಳ ಮೇಲೆ ಲಾಠೀಚಾರ್ಜು

ದೇಶ ಸರ್ವತ್ರ ಕಳವಳ

ದಿಲ್ಲಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರೂ, ಇಂಡಿಯಾ ಫೆಡರಲ್ ಕೋರ್ಟಿನ ನ್ಯಾಯಾಧೀಶರೂ ಆದ ಸರ್ ಮಾರಿಸ ಗ್ವಾಯರರನ್ನು ಮುಂಬಯಿ ಪದವೀದಾನ ಸಮಾರಂಭದ ಭಾಷಣ ಮಾಡಲು ಆಮಂತ್ರಿಸಲಾಗಿತ್ತು ಸರ್ ಗ್ವಾಯರರು ಕಳೆದ ವರ್ಷ ನವಂಬರ ತಿಂಗಳಲ್ಲಿ ಮುಷ್ಕರ ಹೂಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರೆನ್ನುವ ಆರೋಪದ ಮೇಲೆ ಡಿಲ್ಲಿ ವಿಶ್ವವಿದ್ಯಾನಿಲಯದ ಇಬ್ಬರು ವಿದ್ಯಾರ್ಥಿಗಳ ಮೇಲೆ ಶಿಸ್ತು ಕ್ರಮತೆಗೆದುಕೊಂಡು ಅವರ ಪದವಿಗಳನ್ನು ಒಂದು ವರ್ಷದ ತನಕ ತಡೆ ಹಿಡಿದರೆಂದು ಅವರ ಮೇಲೆ ಅಸಮಾಧಾನವುಂಟಾಗಿ ವಿದ್ಯಾರ್ಥಿಗಳು ಅವರ ವಿಷಯ ಅಸಮಾಧಾನ ತೋರಿಸಿದ್ದರು. ಆ ವಿದ್ಯಾರ್ಥಿಗಳ ಮೇಲಿನ ಆರೋಪದ ವಿಷಯವಾಗಿ ವಿಚಾರಣೆ ಸಹ ಮಾಡಲು ಒಪ್ಪದೆ ತಿರಸ್ಕರಿಸಿ ಬಿಟ್ಟ ವಿಷಯದಲ್ಲಿ ಅವರು ಈಗ ಮುಂಬಯಿಗೆ ಬಂದು ಭಾಷಣಮಾಡುವ ಕಾಲ ತಮ್ಮ ವಿರೋಧ ಪ್ರದರ್ಶಿಸಬೇಕೆಂದು ವಿದ್ಯಾರ್ಥಿನಿ ವಿದ್ಯಾರ್ಥಿಗಳು ವಿರೋಧ ಪ್ರದರ್ಶನ ಮಾಡಿದ್ದರು ಪೋಲೀಸರು ಕಪ್ಪು ನಿಶಾನೆ ಹಿಡಿದು ಶಾಂತ ಪ್ರದರ್ಶನ ಮಾಡುತ್ತಿದ್ದ ವಿದ್ಯಾರ್ಥಿಗಳ ಮೇಲೆ ಬೆತ್ತದ ಏಟು ಸುರಿಸಿದರು. ಇದರಿಂದ ಪರಿಸ್ಥಿತಿ ಭಯಂಕರವಾಗಿ ಎಲ್ಲೆಲ್ಲೂ ವಿದ್ಯಾರ್ಥಿಗಳು ದೇಶ ಸರ್ವತ್ರ ತಮ್ಮ ಅಸಂತೋಷ ತೋರಿಸಿರುವರು.

ಕೆ. ಟಿ. ಭಾಷ್ಯಂರರ ಬಂಧನ

ಮೈಸೂರು ಕಾಂಗ್ರೆಸಿನ ಹಿಂದಿನ ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರರನ್ನು ಸಾರ್ವಜನಿಕ ಭದ್ರತೆಯ ವಿಷಯದಲ್ಲಿ

ಕಫ ಮತ್ತು ಶೀತವನ್ನು ಗುಣಪಡಿಸಿರಿ

ತೊಂದರೆ ಕೊಡುವ ಕಫಗಳು, ಕೆಟ್ಟ ಶೀತಬಾಧೆಗಳು ನಿಮ್ಮ ಶರೀರ ಶಕ್ತಿಯನ್ನು ಕುಂದಿಸಿ ನಿಮ್ಮನ್ನು ತೀವ್ರ ಎದೆನೋವು ಮತ್ತು ಶ್ವಾಸಕೋಶದ ನೋವಿಗೆ ಗುಣಪಡಿಸುವವು ಆದ್ದರಿಂದ, ಕೂಡಲೇ ವಿಷಹಾರೀ ಶ್ವಾಸಯೋಗ್ಯ ಪೆಪ್ಸುಗಳನ್ನು ತೆಗೆದುಕೊಂಡು ಕಫ ಮತ್ತು ಶೀತಗಳನ್ನು ಗುಣಪಡಿಸಿಕೊಳ್ಳಿರಿ.

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಕರಗುವುದು, ಒಳ್ಳೆಯ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಡಿಸುವುದರಿಂದ, ಅದು ಶ್ವಾಸ ವಾಯುವಿನೊಡನೆ ನಿಮ್ಮ ಶ್ವಾಸಕೋಶಕ್ಕೆ ಹೋಗುವುದು ಹಾಗೆ ಪೆಪ್ಸು, ಕಂಠದ ಎಲ್ಲಾ ಬಗೆಯ ನೋವನ್ನು ಗುಣಪಡಿಸಿ ಕಫ, ಶೀತ, ಇಂಫ್ಲುಯೆಂಜಾ ನೋವುಗಳನ್ನು ಕೂಡಲೇ ಕಡಿಮೆ ಮಾಡುವುದು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಇದು ಒಂದು ರೂಪಾಯಿಗೆ ದೊರಕುವುದು

ಏಜೆಂಟ್ಸ್:- ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಟಿ ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಪುಸ್ತಕಾವಲೋಕನ:

ಗಳಿಗೆ ತಂದೆಯ ಓಲೆಗಳು*

ಪಂಡಿತ ಜವಾಹರಲಾಲ ನೆಹರುಗಳು ಮಕ್ಕಳಿಗಾಗಿ ಬರೆದ 'Father's letters to his daughter' ಪುಸ್ತಕದ ಕನ್ನಡ ಭಾಷಾಂತರವಿದು; ಕಲ್ಬುರ್ಗಿಯ ಕನ್ನಡಿಗರಾದ ಶ್ರೀ ಕವಟ್ರಾಳ ಕೃಷ್ಣರಾಯರು ಭಾಷಾಂತರಿಸಿದ್ದಾರೆ. ಹುಬ್ಬಳ್ಳಿ ಸಾಹಿತ್ಯ ಭಂಡಾರದ ಶ್ರೀ ಮಂಗಳೂರು ಗೋವಿಂದರಾಯರು ಪ್ರಕಾಶಿಸಿ 'ಕನ್ನಡ ನಾಡಿನ ಚಿಕ್ಕಮಕ್ಕಳಿಗೆ' ಇದನ್ನು ಅರ್ಪಿಸಿದ್ದಾರೆ. ಜಗತ್ತು, ಸೃಷ್ಟಿ, ಜೀವಜಂತುಗಳು ಭಾಷೆ, ಬರಹ ಇವೇ ಮೊದಲಾದ ಪ್ರಾಚೀನತೆಯ ವಿಷಯಗಳಿಂದ ಆರಂಭವಾಗಿ ರಾಮಾಯಣ ಭಾರತಕಾಲಗಳ ವರೆಗಿನ ವಿಷಯಗಳನ್ನು ಪಂಡಿತ ನೆಹರು ತನ್ನ ಮಗಳು ಇಂದಿರೆಗೆ ಪತ್ರರೂಪದಲ್ಲಿ ಬರೆದು ತಿಳಿಸುವುದರ ಮೂಲಕ ಪ್ರಪಂಚದ ಮಕ್ಕಳೆಲ್ಲರಿಗೆ ಎಂತಹ ಅಮೂಲ್ಯ ಜ್ಞಾನಭಂಡಾರವೊಂದನ್ನು ಒದಗಿಸಿ ಕೊಟ್ಟಿದ್ದಾರೆಯೆಂಬುದು ಈ ಪುಸ್ತಕವನ್ನೋದುವುದರಿಂದ ನಾವು ತಿಳಿದುಕೊಳ್ಳಬಹುದು.

ಪಂಡಿತ ನೆಹರುಗಳ ಈ ಗ್ರಂಥದ ಕುರಿತು ಪ್ರಶಂಸೆ ಯಾರದೂ ಬೇಕಾಗಿಲ್ಲ. ಇದು ಇಷ್ಟರಲ್ಲಿಯೇ ಜಗತ್ತಿನ ಪ್ರಖ್ಯಾತ ಗ್ರಂಥವೊಂದರ ಸಾಲಿನಲ್ಲಿ ಸೇರಿದೆ. ಆಂಗ್ಲಭಾಷೆಯನ್ನು ಬಲ್ಲವರನೇಕರು ಇದರ ಸೌಂದರ್ಯವನ್ನು,ಸವಿಯನ್ನುಕಂಡುಕೊಂಡಿರುವರು. ಭಾಷಾಶೈಲಿಯಲ್ಲಿ ವಿಷಯ ವಿವರಣೆಯಲ್ಲಿ, ಮನೋಹರತೆಯಲ್ಲಿ ನೆಹರುಗಳ ಲೇಖನಿಯು ಇತ್ತೀಚೆಗೆ ಪ್ರಪಂಚದ ಉತ್ತಮ ಸಾಹಿತ್ಯ ಪುರುಷರ ಮಟ್ಟವನ್ನು ಮೀರಿದೆ. ತನ್ನ ಆತ್ಮಕಥೆಯನ್ನು ಬರೆದ ಬಳಿಕ, ತಮ್ಮ ಬರಹಗಳಿಗಾಗಿ ಆಂಗ್ಲವಾಚಕ ಲೋಕವನ್ನು ನೆಹರು ಹಾತೊರೆದು ಕಾಯುವಂತೆ ಮಾಡಿಬಿಟ್ಟಿದ್ದಾರೆ.

ನೆಹರುಗಳು ಇದರಲ್ಲಿ, ಒಂದೊಂದು ಓಲೆಯಲ್ಲಿ ಒಂದೊಂದು ವಿಷಯವನ್ನೆತ್ತಿ ಬರೆಯುತ್ತಾರೆ. ಆ ವಿಷಯವನ್ನು ಬಹಳ ವಿಚಕ್ಷಣತೆಯಿಂದ ಬರೆದು ಮುಗಿಸುತ್ತಾರೆ; ವಿಷಯವನ್ನು ವೈಜ್ಞಾನಿಕ ದೃಷ್ಟಿಯಿಂದ ವಿವರಿಸುತ್ತಾರೆ. ಒಬ್ಬ ಉಪಾಧ್ಯಾಯನು, ಚಿಕ್ಕಮಕ್ಕಳಿಗೆ ತರಗತಿಯಲ್ಲಿ ಎಷ್ಟು ಸರಳವಾಗಿ ಹಿತವಾಗಿ ಬೋಧಿಸುವನೋ ಅಂತಹ ಬೋಧನಾ ಶೈಲಿಯಲ್ಲಿ ನೆಹರು ಪತ್ರವನ್ನು ಬರೆದಿರುತ್ತಾರೆ. ಒಂದು ವಿಷಯದಿಂದ ಇನ್ನೊಂದು ವಿಷಯ, ಅದರಿಂದ ಮತ್ತೊಂದು ಹೀಗೆ ವಿಶ್ವವ್ಯಾಪಿಯಾದ ವಿಸ್ತಾರ ಪ್ರಪಂಚದ ಸೃಷ್ಟಿಯ ಮೊದಲ್ಗೊಂಡಿರುವಾ ವಿಷಯಗಳೆಲ್ಲವನ್ನೂ ಹಸುಗೂಸು ಇಂದಿರೆಗೆ ಓಲೆಯ ಮೂಲಕ ಬರೆದು ತಿಳಿಸಿದೀ ಪುಸ್ತಕದ ವಿಷಯವು ಬಹಳ ಸ್ವಾರಸ್ಯವೂ ನೂತನವೂ ವಾಚನೀಯವೂ ಇದೆ. ಪುಸ್ತಕದ ಪ್ರತಿಯೊಂದು ವಾಕ್ಯದಲ್ಲಿ ನೆಹರುಗಳ ವ್ಯಕ್ತಿತ್ವವು ವಾಚಕರಿಗೆ ಎತ್ತಿತೋರುವಂತಿದೆ.

ಶ್ರೀ. ಕವಟ್ರಾಳ ಕೃಷ್ಣರಾಯರು ಭಾಷಾಂತರವನ್ನು ಬಹಳ ಚೆನ್ನಾಗಿಯೇ ಮಾಡಿರುವರು; ಮೂಲಲೇಖಕರ ಭಾವನೆಯನ್ನು ಸಾಕಷ್ಟು ಯಥಾವತ್ತಾಗಿ ಕನ್ನಡಿಗರ ಮುಂದಿಡಲು ಯತ್ನಿಸಿದ್ದಾರೆ ಭಾಷಾಂತರಕಾರರು. ಭಾಷಾಂತರವು ಆದಷ್ಟು ಸುಲಭವಾಗಿರಬೇಕೆಂಬ ದೃಷ್ಟಿಯಿಂದ ಪುಸ್ತಕ ಭಾಷೆಗಿಂತ ಹಳ್ಳಿಹಳ್ಳಿಗಳಲ್ಲಿರುವ ಬಳಕೆಯ ನುಡಿಗೇ ತಾನು ಮಹತ್ವ ಕೊಟ್ಟಿರುವುದಾಗಿ ಭಾಷಾಂತರಕಾರರು ಹೇಳಿಕೊಂಡಿದ್ದಾರೆ. ಮಕ್ಕಳಿಗಾಗಿ ಬರೆದ ಪುಸ್ತಕದ ವಿಷಯದಲ್ಲಿ ಇಂತಹ ಸಮಸ್ಯೆ ಬಂದದ್ದು ಸಹಜವಾಗಿದ್ದರೂ, ನೆಹರುಗಳ ಗ್ರಂಥವನ್ನು ಭಾಷಾಂತರಿಸುವಲ್ಲಿ, ಅಖಿಲ ಕರ್ನಾಟಕದ ದೃಷ್ಟಿಯಿಂದ ಸುಲಭ ರೀತಿಯ ಪುಸ್ತಕ ಭಾಷೆಯನ್ನು ಅನುಸರಿಸುತ್ತಿದ್ದರೇ ಹೆಚ್ಚು ಉಚಿತವಾಗುತಿತ್ತೆಂದು ನಮ್ಮ ಅಭಿಪ್ರಾಯ. ಆದರೂ ಪುಸ್ತಕದ ವಾಚನ ಸ್ವಾರಸ್ಯವು ಈ ಭಾಷಾಂತರದಲ್ಲಿ ಕೆಡುವಂತೆ ಆಗದಿರುವುದು ಸಂತೋಷದ ವಿಷಯ. ಇತರ ಕಡೆಗಳ ಸಣ್ಣ ಮಕ್ಕಳಿಗೆ ಬರಬಹುದಾದ ತೊಂದರೆಯನ್ನುತಿಳಕೊಂಡೇ ಭಾಷಾಂತರಕಾರರು ತಾನು ಉಪಯೋಗಿಸಿದ ಕನ್ನ ಬಳಕೆಯ ನುಡಿಗಳಿಗೆ ಕೊನೆಯಲ್ಲಿ ಅರ್ಥ ವಿವರಣೆ ಕೊಟ್ಟು ಪುಸ್ತಕವನ್ನು ನಿರ್ದೋಷವಾಗಿ ಮಾಡಲು ಯತ್ನಿಸಿರುವರು.

ಇಂತಹ ಸಾಹಸ ಕನ್ನಡ ನಾಡಿನಲ್ಲಿ ಕಡಿಮೆ. ನೆಹರುಗಳ ಆತ್ಮ ಚರಿತೆ ಮತ್ತು ಕೆಲವು ಚಿಕ್ಕ ಅನುಬಂಧಗಳ ಭಾಷಾಂತರದ ಹೊರತು ಅವರ ಮಹತ್ವವಾದ ಅನೇಕ ಗ್ರಂಥಗಳು ಕನ್ನಡಿಗರಿಗೆ ದೊರೆತಿಲ್ಲ. ಕನ್ನಡದ ಜನರು ಇಂತಹ ಉತ್ತಮ ಗ್ರಂಥಗಳ ಕಡೆಗೆ ವಿಶೇಷ ಆಸಕ್ತಿ ತೋರಿಸಿ ಉತ್ಸಾಹಿಗಳಾದ ಇಂತಹ ಭಾಷಾಂತರಕಾರರ ಲೇಖನಿಯಿಂದ, ಸಾಹಸಿಗಳಾದ ಇಂತಹ ಪ್ರಕಾಶಕರ ಮೂಲಕ ಇಚ್ಛಿಂತಲೂ ಅಮೂಲ್ಯ ಗ್ರಂಥಗಳನೇಕ ಕನ್ನಡ ಲೋಕಕ್ಕೆ ಒದಗುವಂತೆ ಮಾಡಿಸಿಕೊಳ್ಳಬೇಕಾಗಿ ಸೂಚಿಸುತ್ತೇವೆ.

—ಕಯ್ಯಾರ

* ಪುಟಗಳು ೧೪೪ ಆಕಾರೆದ ೧೧೪+೧೫=ಬೆಲೆ ೦-೧, ಪ್ರಕಾಶಕರು, ಸಾಹಿತ್ಯಭಂಡಾರ, ಹುಬ್ಬಳ್ಳಿ.

HALFTONE & LINE
BLOCK MAKING
UNDERTAKEN

Sharada Press,
MANGALORE

ಬೆಳೆಯ ಹಾನಿ—ತೀರ್ವೆ ರಿಯಾಯತಿ

ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಇವರು ಈ ವಿಷಯವಾಗಿ ಒಂದು ಲೇಖನ ಬರೆದು ಕಳುಹಿಸಿರುತ್ತಾರೆ. ಅದರಲ್ಲಿ ಅವರು ಹೀಗೆಂದು ಬರೆಯುತ್ತಾರೆ:—

ಕಳೆದ ಜೂನ್ ಮತ್ತು ಜುಲಾಯಿ ತಿಂಗಳಲ್ಲಿ ನಮ್ಮಲ್ಲಿ ಬಿದ್ದ ಮಳೆಯು ಕಳೆದ ಹಲವು ವರ್ಷಗಳ ಮಳೆಯ ಸರಾಸರಿಗೆ ಕಡಿಮೆಯೇ ಆಗಿದೆ. ಇದರಿಂದಾಗಿ ಕೃಷಿಯ ಕೆಲಸವು ಬಹಳ ಹಿಂದೆ ಬಿತ್ತು. ಮಾತ್ರವಲ್ಲದೆ ಮೊದಲನೆಯ ಬೆಳೆಗೆ ಬಹಳ ಆಘಾತವಾಯಿತು. ನಂಜ ಗದ್ದೆಗಳಲ್ಲಿ ಹಾಗೂ ಹೆಚ್ಚಾಗಿ ಎತ್ತರದ ಗದ್ದೆಗಳಲ್ಲಿ ಇದರಿಂದ ಬೆಳೆಗೆ ಬಹಳ ಹಾನಿಯಾಗಿರುವುದು. ಬೆಟ್ಟುಗದ್ದೆಗಳನ್ನು ಕೃಷಿಮಾಡದೆ ಹಾಗೆಯೇ ಬಿಟ್ಟುಬಿಡಬೇಕಾಯಿತು. ಜೂನ್ ತಿಂಗಳಲ್ಲಿ ಬಂದ ನೆರೆಯಿಂದಾಗಿ, ನದಿಗಳ ಬದಿಗಳಲ್ಲಿರುವ ಅನೇಕ ಬತ್ತದ ಗದ್ದೆಗಳು ಕೃಷಿಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯನ್ನು ಹೊಂದಿವೆ. ಈ ಋತುವಿನಲ್ಲಿ ಉಂಟಾದ ಇಂತಹ ಅಸಾಧಾರಣವಾದ ಅನಾನುಕೂಲತೆಯ ವಿಷಯವನ್ನು ರೆವಿನ್ಯೂ ಆಫೀಸರರು ಗಮನಕ್ಕೆ ತಂದುಕೊಂಡಿರಬೇಕು; ಅವರು ಬೆಳೆಗಳನ್ನು ಸರಿಯಾಗಿ ಪರೀಕ್ಷಿಸಿ ಯೋಗ್ಯವಾದ ವರದಿಗಳನ್ನು ತಯಾರಿಸಿ, ರೈತರಿಗೆ ಉತ್ತಮ ಸಹಾಯ ಸಲ್ಲುವಂತೆ ಸರಕಾರಕ್ಕೆ ಸೂಚನೆ ಕಳುಹಿಸಿರುವರೋ ಇಲ್ಲವೋ ಎಂದು ತಿಳಿದಿಲ್ಲ.

ರೆವಿನ್ಯೂ ಬೋರ್ಡಿನವರು ನಿರ್ಧರಿಸಿದ ಅನೇಕ ಕಠಿಣ ನಿಬಂಧಗಳನ್ನನುಸರಿಸಿಕೊಂಡು, ಸರಕಾರವು ಬೆಳೆಗಳಿಗೆ ಸ್ವಲ್ಪವಾಗಿ ಹಾಗೂ ವಿಶೇಷವಾಗಿ ಉಂಟಾದ ಹಾನಿಯ ಮೇಲೆ ತೀರ್ವೆಯ ರಿಯಾಯತಿ ಹಾಗೂ ಮಾಫಿಯನ್ನು ಮಾಡುವುದಾಗಿದೆ. ಸಾಮಾನ್ಯವಾಗಿ ಆಗುವ ಬೆಳೆಗಿಂತ ಒಂದುಮರೆ ಪಾಲು ಕಡಿಮೆಯಾಗುವಂತೆ ಬೆಳೆಗೆ ಅಘಾತವುಂಟಾಗಿದ್ದಲ್ಲಿ ಸರಕಾರದೊಡನೆ ರಿಯಾಯತಿ ಕೇಳಬಹುದಾಗಿದೆ. ಕೃಷಿಮಾಡದೆ ಇರುವ ಅಥವಾ ಬೆಳೆ ಸಂಪೂರ್ಣ ಹಾಳಾಗಿರುವ ಗದ್ದೆಗಳ ಪ್ರತಿಯೊಂದು ಬಯಲಿನ ಭಾಗವೂ ಒಂದು ಎಕ್ಕರೆಗಿಂತ ಕಡಿಮೆ ಪ್ರಮಾಣದ್ದಿರ ಕೂಡದು, ಪಟ್ಟೇದಾರರು, ತಮಗೆ ಯಾವ ಕಡೆಯಲ್ಲಿ ನಷ್ಟವಾಗಿರುವುದೋ ಆ ಗದ್ದೆಗಳ ವಿವರವನ್ನು ಸರ್ವೆ ನಂಬ್ರ, ಸಬ್ ಡಿವಿಜನ್, ಗದ್ದೆಯ ವಿಸ್ತಾರಗಳನ್ನೂ ವಿವರಿಸಿ ಸ್ವತಃ ಕಲೆಕ್ಟರರಿಗೆ ಮನವಿಮಾಡಿಕೊಳ್ಳಬಹುದು. ಈ ಮನವಿಯ ವಿಷಯವಾಗಿ ರೆವೆನ್ಯೂ ಆಫೀಸರರು ಬಂದು ತನಿಕೆಮಾಡುವರು. ಸಹಾಯ ಸಿಗುವ ವಿಷಯವು ಬರೀ ಗದ್ದೆಗಳಿಗೆ ಆದ ಹಾನಿಯನ್ನು ಮಾತ್ರ ಹೊಂದಿಕೊಂಡಿರದೆ, ಅರ್ಜಿದಾರನ ಒಟ್ಟು ಆಸ್ತಿಯ ನಷ್ಟವನ್ನೂ ಹೊಂದಿಕೊಂಡಿರುತ್ತದೆ. ಇದುದರಿಂದ ಸಹಾಯ ಸಿಗುವುದನ್ನು ಬಹಳ ಕಷ್ಟದ ಸಂದರ್ಭದಲ್ಲಿ ಮಾತ್ರ ಹಾರೈಸಬಹುದಾಗಿದೆ. ಆದರೂ ನೆರೆಯಿಂದ ಹಾಗೂ ಮಳೆಯಿಲ್ಲದುದರಿಂದ, ಯಾವ ರೈತರು ವಿಶೇಷ ಸಂಕಷ್ಟಕ್ಕೊಳಗಾಗಿರುವರೋ ಅವರು ಸಹಾಯದ ಬಗ್ಗೆ ಸರಕಾರಕ್ಕೆ ವಿನಂತಿಸಿಕೊಳ್ಳಬಹುದಾಗಿದೆ; ಇದು ಕೂಡಲೇ ಆಗಬೇಕಾದ ಕೆಲಸ.

ಕೃಷಿಕರಲ್ಲಿ ಯಾರ ಮನೆಗಳು ನೆರೆಯಿಂದ ಹಾಳಾಗಿವೆಯೋ ಅಂತಹವರು ಸರಕಾರಕ್ಕೆ 'ಲೋನಿ'ನಬಗ್ಗೆ ಬರೆದು ಸಹಾಯ ಪಡೆಯಬಹುದು. ಸರಕಾರವು ಸಂಕಷ್ಟದ ಸಹಾಯಕ್ಕೆ, ಭೂಮಿಯ ಅಭಿವೃದ್ಧಿಗೆ ಮತ್ತು ಕೃಷಿಯ ಬಗ್ಗೆ ಲೋನು ಕೊಡುತ್ತದೆ. ಕೃಷಿಕರು ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಿಂದ, ಹಾಗೂ ರೆವೆನ್ಯೂ ಆಫೀಸರರಿಂದ ಈ ವಿಷಯದಲ್ಲಿ ಬೇಕಾದ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

ಜೀವನದ ಪ್ರತಿಯೊಂದು ಅಂಶದಲ್ಲಿಯೂ ಅವರು ಸುಖಪಡುತ್ತಾರೆ. ಸಂಪೂರ್ಣ ಆರೋಗ್ಯಶಾಲಿಗಳಾಗಿರುವುದರಿಂದ ಅವರು ಸುಖಪಡುತ್ತಾರೆ.

ನೀವು ಎಷ್ಟೇ ಪ್ರಾಯಸ್ಥರಾಗಿರಿ, ಇಲ್ಲ, ಎಷ್ಟೇ ಅನಾರೋಗ್ಯ ಹೊಂದಿರಿ, ನೀವೂ ಪೂರ್ಣ ಆರೋಗ್ಯವನ್ನು ಹೊಂದಬಹುದು.

ಒಂದು ಬಾಟ್ಲಿ

ಜೀವಾಮೃತ

ವನ್ನು ಕೊಂಡುಕೊಳ್ಳಿರಿ.

ಸ್ತ್ರೀ ಪುರುಷರೆಲ್ಲರಿಗೂ ಹಿತಕರ ಶಕ್ತಿವರ್ಧಕ ಟಾನಿಕ್

ಕ್ರಮವಾಗಿ ಇದನ್ನು ತೆಗೆದುಕೊಳ್ಳಿರಿ. ನಿಮ್ಮಲ್ಲಿ ಹೊಸ ಜೀವನ ತುಂಬಿದ ಅನುಭವವಾಗುವುದು. ಎಂದಿಗೂ ಇದು ಗುಣಕೊಡದೆ ಇರುವುದಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಇದು ದೊರಕುತ್ತದೆ.

ತಯಾರು ಮಾಡುವವರು:
ಆಯುರ್ವೇದಾಶ್ರಮ,
ಮದರಾಸು.

ಸ್ಟೋಕಿಸ್ಟರು: ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

ಗಣೇಶ ಚತುರ್ಥಿ

ಈ ವಾರ ಹಿಂದುಗಳಿಗೆ ಬಹಳ ವಿಶೇಷವಾದೊಂದು ಹಬ್ಬ; ಗಣೇಶ ಚತುರ್ಥಿಯು ಭಾರತದಲ್ಲಿ ಎಲ್ಲೆಡೆಗಳಲ್ಲಿಯೂ, ಮಹಾ ಸಂಭ್ರಮದಿಂದ ಆಚರಿಸಲ್ಪಡುವುದು. ಗಣಪತಿಯ ಸುಂದರವಾದ ಕಲಾಮಯವಾದ ವಿಗ್ರಹಗಳನ್ನು ಮಾಡಿ ಅದಕ್ಕೆ ಮನೆಮನೆಗಳಲ್ಲಿ ಪೂಜೆಮಾಡುವರು. ಗಣಪತಿಯು ಎಲ್ಲಾ ವಿಘ್ನಗಳನ್ನೂ ಪರಿಹರಿಸುವನೆಂದೂ, ವಿದ್ಯಾಧಿದೇವತೆಯೆಂದೂ ಹಿಂದುಗಳ ನಂಬುಗೆ. ಎಲ್ಲಾ ಕಾರ್ಯಗಳನ್ನೂ ನಿರ್ವಿಘ್ನವಾಗಿ ಸಾಗಿಸಿ, ವಿಜಯವನ್ನು ಕೊಡುವ ಮಹಾ ಶಕ್ತಿಯನ್ನು ಸರ್ವರೂ ಹೀಗೆ ಭಕ್ತಿಯಿಂದ ಅರ್ಚಿಸಿ ಸಂತೋಷಗೊಂಡು ನಲಿಯುವರು.

ಗಂಧದ ಮೂರ್ತಿ

ಶಿವನ ಅರ್ಧಾಂಗಿಯಾದ ಪಾರ್ವತಿಯು, ತನ್ನ ಪತಿಯು ಯುದ್ಧಕ್ಕೆಂದು ದೂರ ತೆರಳಿದ್ದಾಗ, ಒಬ್ಬಳೇ ಇರಲು ಬೇಸರಗೊಂಡವಳಾಗಿ ಮೈಯ್ಯ ಗಂಧವನ್ನು ತೆಗೆದು ಅದರಿಂದ ಒಂದು ಮೂರ್ತಿಯನ್ನು ಮಾಡಿದಳು. ಅದಕ್ಕೆ ಜೀವದಾನ ಮಾಡಿ ಗಣೇಶನೆಂದು ಹೆಸರಿಟ್ಟಳು. ಆ ಬಾಲಕನಿಗೆ ಹುಟ್ಟುವಾಗಲೇ ಆನೆಯ ಮುಖವಿರಲಿಲ್ಲ; ಪಾರ್ವತಿಯು ಸ್ನಾನಕ್ಕೆ ತನ್ನ ಮೈಯ ಗಂಧದಿಂದ ಗಣಪತಿಯನ್ನು ಮಾಡಿ, ದ್ವಾರವನ್ನು ಕಾಯಲು ಕಾವಲಿರಿಸಿದಳು. ಶಿವನು ಹೊರ ಹೋಗಿರುವುದರಿಂದ, ಯಾರಾದರೂ ಒಳಗೆ ಬರಲು ಬಿಡದಂತೆ ಅಜ್ಞಾಪಿಸಿದ್ದಳು. ಶಿವನು ಮರಳಿ ಮನೆಗೆ ಬಂದಾಗ, ಬಾಗಿಲಲ್ಲಿ ಸಣ್ಣ ಹುಡುಗನೊಬ್ಬನು ಆತನನ್ನು ತಡೆಗಟ್ಟಿದನು, ಹೆದರಿಸಿದರೂ, ಹೇಳಿದರೂ, ಯಾವುದರಿಂದಲೂ ಆ ಹುಡುಗನು ಶಿವನನ್ನು ಒಳಗೆ ಹೋಗಲು ಬಿಡಲೇ ಇಲ್ಲ. ಶಿವನು ಸಿಟ್ಟುಗೊಂಡು ಹುಡುಗನ ಶಿರಚ್ಛೇದ ಮಾಡಿದನು!

ಗಜವದನ ಗಣಪತಿ

ಪಾರ್ವತಿ ಮಗನಿಗಾಗಿ ಬಹಳ ಮರುಗಿದಳು. ಶಿವನು ಆಕೆಯ ಮಗುವನ್ನು ಪುನಃ ಜೀವಂತವಾಗಿ ಕೊಡಲು ಒಪ್ಪುವವರೆಗೆ ಪಾರ್ವತಿಯು ಸಮಾಧಾನಗೊಳ್ಳಲೇ ಇಲ್ಲ! ಶಿವನು ಕೂಡಲೇ ತನ್ನ ಸೇವಕರಿಗೆ, ಉತ್ತರ ದಿಕ್ಕಿಗೆ ತಲೆಹಾಕಿ ಮಲಗಿರುವ ಮೊದಲನೆಯ ಜೀವಿಯ ತಲೆಯನ್ನು ಕಡಿದು ತರಬೇಕಾಗಿ ಆಜ್ಞೆಯಿತ್ತನು! ಅವರಿಗೆ ಮೊತ್ತ ಮೊದಲು ಸಿಕ್ಕಿದುದು ಆನೆ. ಅವರು ಆನೆಯ ಮುಖವನ್ನು ಕಡಿದು ತಂದರು! ಶಿವನು ಮಗುವಿನ ತಲೆಗೆ, ಅದನ್ನು ಅಂಟಿಸಿ ಜೀವದಾನ ಮಾಡಿದನು! ಹೀಗೆ ಗಣೇಶನಿಗೆ ಆನೆಯ ಮುಖವಾಯಿತು! ಉತ್ತರ ದಿಕ್ಕಿಗೆ ತಲೆಮಾಡಿ ಮಲಗಬಾರದು ಎಂಬುದು ಇದರಿಂದಲೇ ಆಚಾರವಾಗಿ ಬಂದಿರಬೇಕು!

ವಿಘ್ನ ವಿನಾಶಕ

ಹಿಂದೂ ಪುರಾಣಗಳಲ್ಲಿ, ಗಣಪತಿಗೆ ವಿಶೇಷವಾದೊಂದು ಸ್ಥಾನವಿದೆ; ಯಾವುದೇ ಕಾರ್ಯವನ್ನು ಆರಂಭಿಸಬೇಕಾದರೂ ಗಣಪತಿಯ ಪೂಜೆಯಾಗಿಯೇ ತೀರಬೇಕು. ಆತನು ಕಾರ್ಯಗಳನ್ನು ನಿರ್ವಿಘ್ನವಾಗಿ ಸಾಗಿಸಲು ಆಶೀರ್ವದಿಸುವವನೆಂದು ನಂಬಿಕೆ: ಅಂತೆಯೇ ಆತನನ್ನು ಕಾರ್ಯಾರಂಭದಲ್ಲಿ ಸ್ತುತಿಸಲು ಮರೆತರೆ, ಕಾರ್ಯವು ಎಷ್ಟೇ ಚಟುವಟಿಕೆಗಳಿಂದ ಆರಂಭಿಸಿದರೂ, ಎಷ್ಟೇ ಕುಶಲತೆಯಿಂದ ಮಾಡಿದರೂ, ಅದರಲ್ಲಿ ವಿಘ್ನಗಳು ಕಂಡುಬರುವವೆಂದೂ ಮರೆತಾದರೂ ಗಣಪತಿಯನ್ನು ಪೂಜಿಸದೆ ಇದ್ದರೆ ಅದರ ಫಲವು ತೋರ್ರಿಯೇ ತೋರುವುದೆಂದೂ ಅವರ ನಂಬುವರು. ಹೀಗಾಗಿ ಹಿಂದುಗಳು ಗಣಪತಿಯನ್ನು ಯಾವಾಗಲೂ ಮರೆಯುವ ಹಾಗಿಲ್ಲ! ಗಣಪತಿಯು ಏಕಾಂಗಿಯಾದವನು. ಉಜ್ವಲ ಬ್ರಹ್ಮಚಾರಿ; ಬ್ರಹ್ಮ, ವಿಷ್ಣು, ಶಿವ, ಇವರೆಲ್ಲರೂ ಸಂಸಾರವಂದಿಗರು. ಗಣೇಶನು ವಿದ್ಯಾಧಿದೇವತೆ. ಜ್ಞಾನದಾನವನ್ನು ಆತನೇ ಮಾಡುವುದಾಗಿ, ವಿದ್ಯಾರಂಭದಲ್ಲಿ ಗಣಪತಿಯ ವಂದನೆಯನ್ನು ಮಾಡುವರು.

ಗಣೇಶನಿಗೆ ಎಲ್ಲಾ ನೈವೇದ್ಯಗಳಿಗಿಂತಲೂ ಅಪ್ಪ ಕಜ್ಜಾಯಗಳಲ್ಲಿ ಪ್ರೀತಿಹೆಚ್ಚು. ಗಣಪತಿಗಾಗಿ ಅಪ್ಪ ಕಜ್ಜಾಯಗಳ ಹರಕೆ ಸಲ್ಲಿಸುವುದು ಎಲ್ಲೆಡೆಗಳಲ್ಲಿಯೂ ವಾಡಿಕೆಯಾಗಿದೆ.

ಭದ್ರವಾದ ಆಕೃತಿ

ಗಣೇಶನ ಆಕಾರವು ಭದ್ರವೂ ಗಂಭೀರವೂ ಆದುದು! ಸ್ಥಿರವಾದ ಆಸನದಲ್ಲಿ ಆತನು ಕುಳಿತಿರುವನು! ಶರೀರವು ವಿಶಾಲವಾದುದು! ಆನೆಯ ತಲೆಗೊಪ್ಪುವಂತಹುದೇ. ಸೊಂಡಿಲ ಕಾಂತಿಯು, ಸೂರ್ಯನ ಉದಯ ಪ್ರಕಾಶದಂತೆ ಜಾಜ್ವಲ್ಯಮಾನವಾಗಿರುವುದು! ಹಣಗಟ್ಟ ಕುಂಕುಮದ ಸೌಂದರ್ಯವು ಅರುಣ ಕಾಂತಿಯನ್ನು ಹೋಲುವಂತಹುದು! ತಲೆಯಲ್ಲಿರುವ ರತ್ನರಂಜಿತವಾದ ಕಿರೀಟವು ಜಗತ್ತನ್ನು ಬೆಳಗಿಸುವ ಸೂರ್ಯನಷ್ಟು ಕಾಂತಿಮತ್ತಾದುದು! ಹೀಗೆ ಶೋಭಾಯಮಾನವಾದ, ಭದ್ರಾಕಾರವಾದ ಮೂರ್ತಿ ಗಣೇಶನದು!

ಕಲಾಮಯ ಮೂರ್ತಿ

ಗಣೇಶ ಚತುರ್ಥಿಯಂದು, ಹೀಗೆ ಮನಮೋಹಕವಾಗಿ ಒಪ್ಪುವ ಗಣಪತಿಯ ಮೂರ್ತಿಯನ್ನು ಮಾಡಲು ಕಲಾವಂತರು ತಮ್ಮ ಎಲ್ಲಾ ಕಲಾ ಸಾಮರ್ಥ್ಯಗಳನ್ನೂ ಉಪಯೋಗಿಸುವರು! ದೈವಿಕ ಪೂಜ್ಯ ಭಾವನೆಯು ಹೊಳೆದು ತೋರುವಂತೆಯೂ, ತಮ್ಮ ಕಲಾಪ್ರತಿಭೆಯು ವ್ಯಕ್ತವಾಗುವಂತೆಯೂ ಮೂರ್ತಿಗೆ ಪೂರ್ಣತೆಯನ್ನು ತರುವಲ್ಲಿ ಅವರು ಸಾಕಷ್ಟು ಪರಿಶ್ರಮ ವಹಿಸುವರು.

ಬೊಂಬಾಯಿಯಂತಹ ಕಡೆಗಳಲ್ಲಿ, ಹೀಗೆ ಗಣೇಶ ಮೂರ್ತಿಯನ್ನು ಮಾಡುವುದು ಒಂದು ದೊಡ್ಡ ಉದ್ಯಮವೇ ಆಗಿದೆ! ಅವೆ ಮಣ್ಣಿನಿಂದ ಮೂರ್ತಿಯನ್ನು ಅವರು ಮಾಡುವರು. ನಿಸ್ಸಾರವಾದ ಮಣ್ಣಿನಿಂದ, ಶಿಲ್ಪಿಯು ನಿರ್ವಿಘ್ನ ದೇವತೆಯಾದ ಗಣೇಶನ ಸುಂದರ ವಿಗ್ರಹವನ್ನು ಕಡೆದು ತಯಾರಿಸುವನು!

ಸಾಧಾರಣ ಸುಂದರವಾದ ಗಣೇಶ ವಿಗ್ರಹಕ್ಕೆ ಐದು ರೂಪಾಯಿ ಬೆಲೆಯಾರುತ್ತದೆ! ಆ ಮೇಲೆ ಕೆಲವು ವಿಗ್ರಹಗಳಿಗೆ ೧೦೦ ರೂಪಾಯಿಗಳ ಬೆಲೆ ಬರುವುದೂ ಉಂಟು. ಅದು ಕೆಲಸದ ಉತ್ಕೃಷ್ಟತೆಯನ್ನು ಹೊಂದಿಕೊಂಡಿದೆ.

ರಾಷ್ಟ್ರೀಯ ಹಬ್ಬ

ಮಹಾರಾಷ್ಟ್ರದಲ್ಲಿ ಗಣೇಶ ಚತುರ್ಥಿಯು ರಾಷ್ಟ್ರೀಯ ಹಬ್ಬವಾಗಿದೆ. ಲೋಕಮಾನ್ಯ ತಿಲಕರು, ಇದನ್ನು ಮಹಾರಾಷ್ಟ್ರದ ನಾಡಹಬ್ಬವನ್ನಾಗಿ ಮಾಡಿದರು. ಸಾರ್ವಜನಿಕರ ಮೇಳಗಳಿಂದೂ ಗಣೇಶ ಚತುರ್ಥಿಯ ಹಬ್ಬವು ಮಹಾರಾಷ್ಟ್ರದ ಮನೆಮನೆಗಳಲ್ಲಿ ವಿಶೇಷ ವಿಜೃಂಭಣೆಗಳಿಂದ ನಡೆಯುತ್ತಿದೆ! ಆ ದಿನ, ಇಡೀ ಮಹಾರಾಷ್ಟ್ರವು ಹೊಸ ಉತ್ಸಾಹ, ಗೆಲವು, ಆನಂದಗಳಿಂದ ತುಂಬಿರುತ್ತದೆ! ಹೀಗೆ ಗಣೇಶ ಚತುರ್ಥಿಯು ಹಿಂದುಗಳ ಹಬ್ಬಗಳಲ್ಲಿ ಬಹಳ ಪ್ರಾಮುಖ್ಯವಾದೊಂದು ಹಬ್ಬವಾಗಿ ಗಣಿಸಲ್ಪಟ್ಟಿದೆ!

ನೆಸೆಟ್
ಡಿ ಲಕ್ಸ್

ಸುಖಮಯವಾದ ಕ್ಷೌರಕ್ಕೆ ಬಹಳ ಹೆಚ್ಚಿನ ಖರ್ಚೇನೂ ಇರುವುದಿಲ್ಲ. ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಬಹಳ ಹೆಚ್ಚು ಕ್ರಯದವುಗಳೇನೂ ಅಲ್ಲ. ಅವು ತುತುಳ್ಳವುಗಳಾಗಿದ್ದು ಹಲವುಸಲ ಕ್ಷೌರಕ್ಕೆ ಉಪಯೋಗಿಸಬಹುದಾದವುಗಳಾಗಿವೆ, ಅವುಗಳು ३ ಪಿನ್ ಮತ್ತು ಬಾರ್‌ಟೈಪ್ ರೇಜರುಗಳಿಗೂ ಅನುಕೂಲವಾಗಿವೆ.

ವಿಲಾಯತಿಯಲ್ಲಿ ಮಾಡಿದುದು

ಈ ತರದ ರೇಜರುಗಳಿಗೆ

ಸ್ಲೊಟೆಡ್ ಬ್ಲೇಡುಗಳು

ನನ್ನ ತಂದೆ ನನಗೊಂದು ಕೊಂಡುಕೊಡುತ್ತಾರೆ....

ಡಿಫೆನ್ಸ್
ಸೇವಿಂಗ್ಸ್
ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಿ ವಿವರಗಳಿಗೆ ನಿಮ್ಮ ಹತ್ತಿರದ ಪೋಸ್ಟ್ ಆಫೀಸಿನಲ್ಲಿ ಕೇಳಿ

KN. G. I. 40.

ದಿವ್ಯ ಪ್ರೇಮ

(೬ನೆಯ ಪುಟದಿಂದ ಮುಂದುವರಿದುದು)

ಪೇದೆಯು ಒಂದು ಕಾಗದವನ್ನಿತ್ತು ಹೊರಟುಹೋದನು. ಆನಂದನು ಪತ್ರವನ್ನು ತೆಗೆದುಕೊಂಡು ಕೋಣೆಗೆ ಬಂದನು. ಚಿಲಕವನ್ನು ಇಕ್ಕಿಕೊಂಡು ಒಳ ಕುಳಿತು ಪತ್ರವನ್ನು ಓದತೊಡಗಿದನು.

ಆನಂದ,

ನಾನು ಇಲ್ಲಿಗೆ ಬಂದು ಬಹುದಿನವಾಯಿತು. ನಿತ್ಯವೂ ನಾನು ದುಃಖದಲ್ಲೇ ಬೇಯುತ್ತಲಿದ್ದೇನೆ. ಈ ಜೀವನದಲ್ಲಿ ನನಗೆ ದೈವವು ಅನುಕೂಲವಾಗಲಾರದು. ನನ್ನನ್ನು-ನನ್ನ ಸೋದರ ಮಾವನ ಮಗನಿಗೆಕೊಡುವ ಆಲೋಚನೆಯನ್ನು ಮಾಡುತ್ತಿದ್ದಾರೆ. ಆದರೆ, ಆನಂದ, ನಾನದನ್ನು ಒಲ್ಲೆ. ನಿಶ್ಚಯವಾಗಿಯೂ ನಾನು ಒಬ್ಬನನ್ನೇ ಪತಿಯಾಗಿ ವರಿಸಿರುವೆನು. ನನ್ನ ಹೃದಯ ದೇವತೆಯನ್ನಾಗಿ ಸ್ವೀಕರಿಸಿರುವೆನು. ಆತನೇ ನನ್ನ ಪತಿಯು; ಆದರೆ ಆತನನ್ನು ಪಡೆಯುವ ನಿರಂಕುಶ ಸ್ವಾತಂತ್ರ್ಯವು ನನಗಿಲ್ಲ. ಆದರೆ ನಾನು ಮಾತ್ರ ಅದನ್ನು ಮುಂದಿನ ಜನ್ಮದಲ್ಲಾದರೂ ಪಡೆಯುವೆನು. ಅದೇ ನಾನು ಬಯಸಿದ ದಿವ್ಯವಾದ, ಸುಂದರವಾದ ವಸ್ತು ಅದೇ ಆನಂದನು.

ಆನಂದ, ನನ್ನ ಜೀವಿತವೆ, ನಾನು ಮಾತ್ರ ನಿನ್ನ ಹೊರತು ಅನ್ಯರನ್ನು ವಿವಾಹವಾಗಲಾರೆ. ನನ್ನ ತಂದೆತಾಯಿಯರು ನನ್ನನ್ನು ಒತ್ತಾಯಪಡಿಸಿದರೆ ನನ್ನ ಗತಿ ಮಾತ್ರ ಬೇರೆ. ಮುಂದೆ ನಿನಗೆಲ್ಲಾ ತಿಳಿಯಬಹುದು. ನನ್ನ ಆನಂದನು ಆನಂದನೆ ಇತಿ ನಿನ್ನವಳಾದ

"ತಾರೆ"

ಆನಂದನು ತೀರಾ ವ್ಯಸನಿಸಿದ. ಕಾಗದವು ತನ್ನಷ್ಟಕ್ಕೆ ಮೇಜಿಯ ಬಳಿ ಬಿತ್ತು. ಆತನು ಶೂನ್ಯವಾಗಿ ನೋಡಿದನು. ಆತನ ಕಣ್ಣುಗಳಿಗೆ ತಾರೆಯು ಕಾಣತೊಡಗಿದಳು.

ಒಂದೆರಡು ಕ್ಷಣಗಳಲ್ಲೇ ಆನಂದನು ಎದ್ದನು. ತಾನು ಬೊಂಬಾಯಿಗೆ ಪ್ರಯಾಣ ಬೆಳೆಸುವುದೆಂದು ನಿಶ್ಚಯಿಸಿದ. ಮನೆಯಲ್ಲಿ ತಿಳಿಸದೆಯೇ ಆನಂದನು ಹೊರಗಿಳಿದ. ತೆರಳಿಬಿಟ್ಟನು. ಒಂದೆರಡು ದಿನಗಳಲ್ಲಿ ಬೊಂಬಾಯಿಗೆ ತಲುಪಿದನು. ಅನೇಕರಲ್ಲಿ ತಾರೆಯ ಮನೆಯ ಪರಿಚಯವನ್ನು ಕೇಳಿ ತಿಳಕೊಂಡನು. ಆನಂದನು ತಾರೆಯ ಮನೆಯನ್ನು ತಲಪುವಷ್ಟರಲ್ಲಿ ರಾತ್ರಿಯಾಯಿತು. ತಾರೆಯ ಮನೆಯಲ್ಲಿ ತುಂಬಾ ಸಂಭ್ರಮ. ವಿವಾಹದ ಏರ್ಪಾಟುಗಳು ತಯಾರಾಗಿದ್ದುವು. ಆನಂದನ ಹೃದಯವೇ ಒಡೆಯಿತು. ತಾರೆಯ ವಿವಾಹವೆಂದು ತಿಳಿದೊಡನೆಯೇ ಆನಂದನಿಗೆ ತಲೆಗೆ ಸಿಡಿಲು ಬಿದ್ದಂತಾಯಿತು. ಮೆಲ್ಲಗೆ ಮನೆಯ ಬಳಿಗೆ ಬಂದು ಒಳನೋಡಿದ. ಒಳಗೆ ತಾರೆಯು ಹೆಂಗುಸರ ಮಧ್ಯದಲ್ಲಿ ಸಿಂಗರಿಸಿ ಕುಳಿತಿದ್ದಳು. ದಿಬ್ಬಣವು ಬಂದಿರಲಿಲ್ಲ. ತಾರೆಯ ಮುಖದಲ್ಲಿಯೂ ಒಂದು ಬಗೆಯ ಆನಂದವಿತ್ತು. ಆದರೆ ಆ ಆನಂದವು ಮಾತ್ರ ಊಹಿಸಲಸಾಧ್ಯ. ಆನಂದನಿಗೆ ಇದೆಲ್ಲಾ ಕಾಣಲಾಗಲಿಲ್ಲ. ಮೆಲ್ಲಗೆ ಕಿಸೆಯಿಂದ ತಾರೆಯ ಕಾಗದವನ್ನು ತೆಗೆದನು. ಚೂರುಚೂರಾಗಿ ಹರಿದುಬಿಟ್ಟನು, ನೇರಾಗಿ ಅಲ್ಲಿಂದ ನಡೆದುಬಿಟ್ಟನು.

ಸಮೀಪದಲ್ಲೇ ಒಂದು ನದಿಯಿತ್ತು. ಉದ್ದಕ್ಕೆ ಹರಿಯುತ್ತಿದ್ದಳು ಆ ಪಾವನ ಮಾತೆಯು. ಆನಂದನು ಅಲ್ಲಿಗೇ ಬಂದನು. ಮುಂದೆ ಹೋಗುವ ಆಸೆ ಆತನಿಗಿಲ್ಲ. ಅಲ್ಲೇ ಕುಳಿತ. ತನ್ನ ಜೀವನವು ಇಲ್ಲೇ ಕೊನೆಗೊಳ್ಳಲಿ. ತಾರೆಯ ಜೀವಿತವು ಸುಖದಿಂದ ಸಾಗಲಿ: ತನ್ನ ಹೃದಯದೇವತೆಯಾದ ತಾರೆಯ ಸಲುವಾಗಿ ಈ ವ್ರತವು ಕೊನೆಗೊಳ್ಳಲಿ. ತಾರೆ, ನಿನಗೆ ಸ್ವಾತಂತ್ರ್ಯವಿಲ್ಲ. ಸ್ವಾತಂತ್ರ್ಯವಿದ್ದಿದ್ದರೆ ನೀನು ಇಂದು ಹೀಗೆ ಮಾಡುತ್ತಿದ್ದಿಲ್ಲ. ಆಗಲಿ ಇದೇ ಒಳಿತು. ಇಲ್ಲವಾದರೆ ಸುಖಪಡುತ್ತಿದ್ದಿಲ್ಲ. ತಾರೆ, ನಾನು ಈಗ ತೆರಳುತ್ತೇನೆ—ಆನಂದನ ಕಣ್ಣುಗಳಲ್ಲಿ ನೀರು ಹರಿಯತೊಡಗಿತು. ಆನಂದನ್ನು ನೋಡುತ್ತಿರುವಂತೆಯೆ ಸಮೀಪದಲ್ಲೇ 'ದುಡುಂ' ಶಬ್ದವಾದಂತಾಯಿತು. ಆನಂದನು ಮೌನವಾಗಿ ನಿಂತು ಕೇಳಿದನು. "ಜಲದೇವಿ, ನನಗೆ ಆನಂದನ ದರ್ಶನವನ್ನು ಬರುವ ಜನ್ಮದಲ್ಲಿಯಾದರೂ ಕೊಡಿಸುವೆಯಾ?" ಅದು ತಾರೆಯ ಕಂಠಸ್ವರವಾಗಿತ್ತು. ಆನಂದನೂ ಓಡಿ ಬಂದು, 'ನನ್ನ ತಾರಾ ನನ್ನ ಜೀವಿತವೆ' ಎಂದನ್ನುತ್ತಾ ಹೊಳೆಗೆ ಹಾರಿಬಿಟ್ಟನು. ಜಲದೇವಿಯು ಆ ಪ್ರೇಮಮೂರ್ತಿಗಳನ್ನು ತನ್ನ ಮಡಿಲಲ್ಲಿರಿಸಿಕೊಂಡಳು.

ಹಿಂಬಂದಿಯಿಂದ ತಾರೆಯನ್ನು ಹುಡುಕಿ ಬಂದವರು, ದೂರದಲ್ಲಿ ಆ ಪಾವನೆ ನದಿಯ ಉದರದಲ್ಲಿ ತೇಲುಗೇಳುತ್ತಲಿರುವ ಆ ಪ್ರೇಮಮೂರ್ತಿಗಳನ್ನು ಕಂಡರು.

ರೈಲುಬಂಡಿಗಳ ಸಮಯ

ಇವೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪ್ಯಾಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ.	6·50 ಸಾಯಂ.
ಕಣ್ಣನ್ನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

ದಿ ಅತ್ತೂರು ಎಂಡ್ ಜನಾಹರ ಬೇಂಕ್ ಲಿಮಿಟೆಡ್,
ಕಂಕನಾಡಿ, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು: ಪೆಂಟ್ಲೆಂಡ್‌ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ. 9% ರೂ. 26ರಿಂದ 100ರ ವರೆಗೆ ಸೇ. 8%
ರೂ. 101ರಿಂದ 500ರ ವರೆಗೆ ಸೇ. 7% ರೂ.501 ಮೇಲ್ಪಟ್ಟ ಲೋನುಗಳಿಗೆ $6\frac{1}{4}$%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ—
ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ
ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—$3\frac{1}{2}$%
ನಿರಖು ಠೇವಣಾತಿ—12 ತಿಂಗಳಿಗೆ—4%

(Sd) B. Narayana Shetty,
Agent at Kankanady.

ಸಿನೆಮಾ ಸುದ್ದಿ

ಪತ್ರಿಕೋದ್ಯಮಿಯ ಮೇಲೆ ಸಿನೆಮಾ ನಟಿಯ ದಾವೆ

ಕೋರ್ಟು ತುಂಬಿಹೋಗಿತ್ತು

'ಅಧಿಕಾರ' ಎಂಬ ಪತ್ರಿಕಾ ಸಂಪಾದಕರಾದ ಶ್ರೀ. ಅತ್ತ ಉಲ್ಲಾಹಸ್ಮಿ ಎಂಬವರ ಮೇಲೆ ಮಾನನಷ್ಟಕ್ಕಾಗಿ ಮಿಸ್ ಮನೋರಮಾ ಎಂಬ ಸಿನೆಮಾ ನಟಿಯು ತನ್ನ ವಿಷಯದಲ್ಲಿ ಅಸಂಬದ್ಧ ಬರೆದರೆಂದು ದಾವೆಮಾಡಿದಳು.

ಮಿಸ್ ಮನೋರಮಾಳ ವ್ಯವಹರಣೆಯ ಕಾಲದಲ್ಲಿ ಅನೇಕಾನೇಕ ಮಂದಿ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೋರ್ಟಿನಲ್ಲಿ ತುಂಬಿದ್ದರು. ಅವರನ್ನು ಎರಡು ಸಲ ಮೆಜಿಸ್ಟ್ರೇಟರು ಹೊರಗೆ ಹಾಕಬೇಕಾಯಿತು. ಅವರಲ್ಲಿ ಒಬ್ಬನು ಮಿಸ್ ಮನೋರಮಾಳನ್ನು ಬಯ್ಯುತ್ತಾ, ಅವಳ ಕಡೆಯ ವಕೀಲನಿಗೆ ತುಳಿದ ಕಾರಣ ಅವನನ್ನು ಪೋಲೀಸರು ಬಂಧಿಸಬೇಕಾಯಿತು.

ತನ್ನ ವಿಷಯ ಏನಾದರೂ ಬರೆಯುವೆನೆಂದೂ, ಇಲ್ಲವಾದರೆ ತನಗೆ ೨೫೦ ರೂಪಾಯಿ ಕೊಡಬೇಕೆಂದೂ ಆ ಪತ್ರಿಕಾ ಸಂಪಾದಕನು ಹೇಳಿದುದಾಗಿಯೂ, ಅದಕ್ಕೆ ತಾನು ತಿರಸ್ಕರಿಸಿದ ನಿಮಿತ್ತ ಅವನು ಹಾಗೆ ಬರೆದಿರುವನೆಂದೂ ಅವಳ ಹೇಳಿಕೆಯಾಗಿದೆ. "ತನ್ನ ಹೊರತು ಮಿಕ್ಕ ನಟಿಯರೂ ಕೇವಲ ಬಜಾರಿಗಳು" ಎಂದು ಅವಳು ತನ್ನ ಸ್ಟುಡಿಯೋದ ವಿಚಾರವಾಗಿ ಹೇಳಿದಳಂತೆ.

ಚೂಡಾಮಣಿ

ಪುಷ್ಪವಲ್ಲಿ ಮತ್ತು ಸತ್ಯವತಿ ಇವರು ತೆಲುಗು ಚಿತ್ರ ಚೂಡಾಮಣಿಯಲ್ಲಿ ಅಭಿನಯಿಸುವರು.

ಸುಭದ್ರಾವನ್ನು ಮೈಸೂರು ಮಹಾರಾಜರು ನೋಡುವರಂತೆ!

ಬರುವ ದಸರಾ ಸಮಯದಲ್ಲಿ ಅರಮನೆಯ ಥಿಯೇಟರಿನಲ್ಲಿ ಮೈಸೂರು ಮಹಾರಾಜರು ರಾಜ ಮನೆತನದವರೊಡಗೂಡಿ, ಕನ್ನಡ ಸುಭದ್ರವನ್ನು ನೋಡಲಿರುವರೆಂದು ಮದ್ರಾಸಿನ ಸುದ್ದಿ.

ನ್ಯೂಥಿಯೇಟರ್ಸಿನ ಹೊಸ ಚಿತ್ರ

ಪಂಜಾಬೀ ಭಾಷೆಯಲ್ಲಿ ಸೈಗಲ್ ಪ್ರಧಾನ ಪಾತ್ರ ವಹಿಸುವ ಕಥೆಯೊಂದನ್ನು ನ್ಯೂಥಿಯೇಟರ್ಸಿನವರು ಬೇಗನೇ ಕೈಕೊಳ್ಳಲಿರುವರೆಂದು ಸುದ್ದಿ. ನಿರ್ದೇಶಕರು ಹೇಮಚಂದ್ರರಂತೆ.

ರಾಮಗೋಪಾಲ-ಮೃಣಾಲಿನಿ ನಾಟ್ಯಕೂಟ

ಪ್ರಸಿದ್ಧ ನರ್ತಕ ರಾಮಗೋಪಾಲ್, ಮೃಣಾಲಿನೀ ದೇವಿಯೊಡನೆ (ಶ್ರೀಮತಿ ಅಮ್ಮು ಸ್ವಾಮಿನಾಥನರ ಪುತ್ರಿ) ನರ್ತನಕೂಟವನ್ನು ಏರ್ಪಡಿಸುವನೆಂದು ತಿಳಿದಿದೆ. ರಾಮಗೋಪಾಲನು ಶಾಂತಿನಿಕೇತನದಲ್ಲಿ ಈಕೆಯ ಪರಿಚಯ ಹೊಂದಿದನು. ಶಾಂತಿನಿಕೇತನದಿಂದ ಮರಳಿದ ಬಳಿಕ ಆಕೆ ಬೆಂಗಳೂರಲ್ಲಿ ರಾಮಗೋಪಾಲನಲ್ಲಿಯೇ ನರ್ತನ ಅಭ್ಯಸಿಸುತ್ತಿದ್ದಳಂತೆ.

ಮೋತಿಲಾಲನು ಸಿನೆಮಾ ಕಂಪೆನಿ ಮಾಡುವನು?

ಪ್ರಸಿದ್ಧ ನಟ ಮೋತೀಲಾಲನು ಸ್ವತಃ ಸಿನೆಮಾ ಕಂಪೆನಿಯೊಂದನ್ನು ಪ್ರಾರಂಭಿಸುವನೆಂದು ಸುದ್ದಿ. ಪ್ರಖ್ಯಾತ ನಟನಟಿಯರು ತಮ್ಮದೇ ಕಂಪನಿಗಳನ್ನು ಇತ್ತೀಚೆಗೆ ಆರಂಭಿಸುತ್ತಿರುವುದು ಕಂಡುಬರುತ್ತದೆ.

ಕುಸುಮಾ ದೇಶ ಪಾಂಡೆ

'ಚರಣೋಕಿ ದಾಸಿ' ಚಿತ್ರದಲ್ಲಿ ಕುಸುಮಾ ದೇಶ ಪಾಂಡೆಯು ಪ್ರಸಿದ್ಧಿ ಹೊಂದಿರುವಳು. ದುರ್ಗಾ ಖೋಟೆಯೂ ಇದರಲ್ಲಿ ಅಭಿನಯಿಸುವಳು.

ಅಂಜನ್

ದೇವಿಕಾರಾಣಿ ಮತ್ತು ಅಶೋಕ್ ಕುಮಾರರ ಹೊಸ ಚಿತ್ರ 'ಅಂಜನ್' ತಯಾರಾಗುತ್ತದೆ. ದೇಸಾಯಿ, ಸುರೇಶ್, ಗಿರೀಶ್, ಗುಲಾಬ್, ಡಾವಿಡ್ ಮೊದಲಾದವರು ಅಭಿನಯಿಸುವರು.

ದರ್ಶನ್

'ನರ್ಸಿ ಭಗತ್' ಚಿತ್ರ ಪ್ರಖ್ಯಾತಿಯ ಪ್ರಕಾಶ ಕಂಪನಿಯವರ ಮುಂದಿನ ಚಿತ್ರ 'ದರ್ಶನ್'.

ನವಾಬ್

ಬೊಂಬಯಿಗೆ ರಜೆಯ ಮೇಲೆ ಬಂದಿರುವ ನ್ಯೂಥಿಯೇಟರ್ಸಿನ ನವಾಬನಿಗೆ, ಬೊಂಬಾಯಿಯ ಅನೇಕ ಮಂದಿ ಸಿನೆಮಾ ಸಂಚಾಲಕರು ಆಶಾದಾಯಕವಾದ ಆಹ್ವಾನವಿತ್ತಿರುವರೆಂದು ತಿಳಿದಿದೆ. ನವಾಬನು ನ್ಯೂಥಿಯೇಟರ್ಸಿನ ಸರ್ಕಾರರಿಗೆ ತನಗೆ ಬಂದು ಆಹ್ವಾನವನ್ನು ಅಂಗೀಕರಿಸಲು ಒಪ್ಪಿಗೆ ಕೊಡಬೇಕಾಗಿ ಬರೆದಿರುವನಂತೆ!

ವಸಂತ ಸೇನಾ

ಅತ್ರೆಪಿಕ್ಚರ್ಸಿನವರು 'ವಸಂತ ಸೇನಾ' ಎಂಬ ಹೊಸ ಚಿತ್ರವನ್ನು ತಯಾರಿಸುವುದಾಗಿ, ಪ್ರಭಾತದ ಸಂಗೀತ ನಿರ್ದೇಶಕ ಕೃಷ್ಣರಾವ್, ಪ್ರಭಾತ ಕಂಪೆನಿಯನ್ನು ಬಿಟ್ಟು ಅದನ್ನು ಸೇರುವನೆಂದು ತಿಳಿದಿದೆ.

ಲಲಿತಾ ಪವಾರ್ ಮತ್ತು ಪಂಡಿತ ಇಂದ್ರ

ನವಯುಗ ಪಿಕ್ಚರ್ಸಿನಲ್ಲಿ ಲಲಿತಾ ಪವಾರಳು ಅಭಿನಯಿಸಿದ ವಿಷಯವಾಗಿ, ಚಲಚಿತ್ರ ಲೇಖಕರಾದ ಪಂಡಿತ ಇಂದ್ರರು ಬಹಳ ಮೆಚ್ಚಿ ಆಕೆಯನ್ನು ಭೇಟಿಯಾದಾಗ ವಿನಯದಿಂದಲೂ, ಪ್ರೇಮದಿಂದಲೂ ಹೀಗೆ ಹೇಳಿದರಂತೆ "ನಿಮ್ಮ ಉತ್ತಮವಾದ ಅಭಿನಯವನ್ನು ಕೊಂಡಾಡಲು ಬರಿಯ ಶೇಕ್ ಹೇಂಡಿನಿಂದ ಮಾತ್ರ ನಾನು ಸಮರ್ಥನಾಗುವೆನೆ?" ಎಂದು. ಅದಕ್ಕೆ ಆಕೆ ನಗುತ್ತಾ, "ನೀವು ಯೋಗ್ಯರಾಗಿರುವ ಬಗೆಗೆ ಶೇಕ್ ಹೇಂಡಿನ ಅಭಿವಂದನೆಯೇ ಉತ್ತಮವಾದುದಾಗುವುದು" ಎಂದಳಂತೆ. ಹೀಗೆಂದು ಬೊಂಬಾಯಿಯಿಂದ ಸುದ್ದಿ ಬಂದಿದೆ.

ಅಕ್ತರ್ ಮಿನರ್ವಾದಲ್ಲಿ

ನೇಶನಲ್ ಸ್ಟುಡಿಯೋದ 'ರಾಧಿಕಾ' ಮತ್ತು 'ಸಿಸ್ಟರ್' ಚಿತ್ರಗಳಲ್ಲಿ ಅಭಿನಯಿಸಿದ ನಳಿನೀಜಯವಂತಳು ಅಮರ ಪಿಕ್ಚರ್ಸನ್ನು ಸೇರಿ ಶ್ರೀ., ದೇಸಾಯಿಯೊಡನೆ ಇರುವಳು. 'ವೂಮನ್' ಚಿತ್ರದಲ್ಲಿ ನಟಿಸಿದ ಸರ್ದಾರ್ ಅಕ್ತರಳು ಮಿನರ್ವಾವನ್ನು ಸೇರಿರುವಳಾಗಿ ಈಗ ಸುದ್ದಿ. ಆದರೆ, ಕುಮಾರಿ ಯಶೋಧರಾ ಕಟ್ಜು ಎಂಬಾಕೆ, ಕುಲೀನ ಸ್ತ್ರೀಯು, ಈಗ ಈ ಕಂಪನಿಯನ್ನು ಹೊಸತಾಗಿ ಸೇರಿರುವಳೆಂದು ಸುದ್ದಿಯಿದೆ. ಇವಳು ಇನ್ನೂ ತರಬೇತಿಯಾಗಬೇಕಷ್ಟೆ.

ಸಾದರ-ಸ್ವೀಕಾರ

ಓರಿಯೆಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರ ೧೯೪೦ನೆಯ ವರ್ಷದ ಡೈರೆಕ್ಟರರ ವರದಿಯು ನಮ್ಮ ಹಸ್ತಗತವಾಗಿದೆ. ಕಂಪೆನಿಯ ಹೊಸ ವ್ಯಾಪಾರವು ರೂ. ೭೪೯ ಲಕ್ಷದಷ್ಟಿದ್ದು ತೃಪ್ತಿಕರವಾಗಿರುತ್ತವೆ. ಕಂಪೆನಿಯ ಒಟ್ಟು ಪ್ರೀಮಿಯಮ್ ಆದಾಯವು ರೂ. ೩೭೩ ಲಕ್ಷದಷ್ಟಿದ್ದು ರೂ. ೪ ಲಕ್ಷಕ್ಕೆ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಪ್ರೀಮಿಯಮ್ ಆದಾಯದ ದಾಮಾಶಾಯಿಯನ್ನನುಸರಿಸಿ ಮೇನೇಜ್‌ಮೆಂಟ್ ಖರ್ಚು ಶೇಕಡಾ ೨೦.೮ ರಷ್ಟು ಆಗಿದೆ; ಅಂದರೆ ಇದೂ ಹಿಂದಿನ ವರ್ಷಗಳಿಗಿಂತ ಶೇಕಡಾ ೨ರಷ್ಟು ಕಡಿಮೆಯಾಗಿರುವುದು. ಈ ಕಂಪನಿಯ ಒಂದು ಓರ್ಗನೈಸಿಂಗ್ ಆಫೀಸು ಮಂಗಳೂರಲ್ಲಿಯೂ ಇರುವುದರಿಂದ ಕಂಪನಿಯ ವ್ಯಾಪಾರವು ಇನ್ನಷ್ಟು ಹೆಚ್ಚುವಂತಾಗುವುದೆಂದು ನಾವು ನಂಬುತ್ತೇವೆ.

ಪ್ರಪಂಚವನ್ನು ಕವಿದಿರುವ ಯುದ್ಧದ ಈ ಕಾಲದಲ್ಲಿ ಆರ್ಥಿಕ ಸ್ಥಿತಿಯು ಬಹಳ ಮಟ್ಟಿಗೆ ಹೆಚ್ಚಿರುವಾಗ, ಕಂಪೆನಿಯು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಾ ವ್ಯಾಪಾರೋದ್ಯಮದಲ್ಲಿ ಮುಂದೊತ್ತುತ್ತಿರುವುದು ತುಂಬಾ ಅಭಿನಂದನೀಯವಿದೆ.

ಹಿಂದೂದೇಶದ ಪ್ರಾಮುಖ್ಯ ಹಾಗೂ ಪ್ರಾಚೀನ ವಿಮಾ ಸಂಸ್ಥೆಗಳಲ್ಲಿ ಒಂದಾದ ಈ ಕಂಪನಿಯು ಇದುವರೆಗೆ ಮಾಡಿದ ವ್ಯಾಪಾರಾಭಿವೃದ್ಧಿಗಿಂತಲೂ ಹೆಚ್ಚಿನ ಅಭಿವೃದ್ಧಿಯನ್ನು ಮುಂದೆ ಹೊಂದಲೆಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಲು ಕಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು. ಅದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮಡ್ಡಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.



ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್

Cuticura Ointment

ವಿಚಿತ್ರ ಪ್ರಪಂಚ

೬೩ ಮೈಲು ಉದ್ದದ ಗಡ್ಡ

'ಮಿಲ್‌ಗೇಟ್' ಎಂಬ ಪತ್ರಿಕೆಯಲ್ಲಿ ಲೇಖಕರೊಬ್ಬರು ಆಧುನಿಕ ಯುದ್ಧ ಕಾಲದಲ್ಲಿ ಗಡ್ಡಬೆಳೆಸುವ ಅವಶ್ಯಕತೆಯ ವಿಚಾರವಾಗಿ ಒಂದು ಸ್ವಾರಸ್ಯದ ಲೇಖನವನ್ನು ಬರೆದಿರುವರು.

ಅವರ ಹೇಳಿಕೆಯೆಂದರೆ ಗಡ್ಡವನ್ನು ಬೆಳೆಸುವುದರಿಂದ ಉಳಿತಾಯವೂ ಇದೆ, ಸಮಯ ಲಾಭವೂ ಇದೆ, ಗೊಂದಲವೂ ಕಡಿಮೆಯಾಗುತ್ತದೆಯೆಂದು. ಯುದ್ಧ ಕಾಲದಲ್ಲಿ ಈ ಮೂರೂ ಅವಶ್ಯವಾಗಿ ಬೇಕಾಗುತ್ತದೆ.

ಒಬ್ಬ ಮನುಷ್ಯನು ೧೭ ವರ್ಷದಿಂದ ಪ್ರಾರಂಭಿಸಿ ೭೦ ವರ್ಷಗಳ ವರೆಗೆ ಕ್ಷೌರ ಮಾಡಿಸುತ್ತಾ ಹೋದರೆ ೬೩ ಮೈಲು ಉದ್ದದಷ್ಟು ಗಡ್ಡವನ್ನು ಒಬ್ಬನು ಬೋಳಿಸಬೇಕಾಗುವುದಂತೆ. ೭ ಫರ್ಲಾಂಗು ಮೀಸೆಗಳನ್ನು ಬೋಳಿಸಬೇಕಾಗುವುದಂತೆ. ಇದಕ್ಕೆ ೫೦ ಪೌಂಡಿನಿಂದ ೫೦೦ ಪೌಂಡು ವರೆಗೆ ಅವರವರ ತ್ರಾಣಕ್ಕೆ ಸರಿಯಾಗಿ ಖರ್ಚು ಮಾಡಬೇಕಾಗುವುದಂತೆ. ಮಾತ್ರವಲ್ಲದೆ ಕಡಿಮೆಯೆಂದರೆ ಆರು ತಿಂಗಳಷ್ಟು ಸಮಯವನ್ನೂ ವ್ಯಯಿಸಬೇಕಾಗುವುದಂತೆ. ಸೋಪು, ಟವೆಲು, ಬ್ರಶ್ಶುಗಳ ಖರ್ಚು ಬೇರೆಯೇ ಇದೆ. ಆದ್ದರಿಂದ ಕ್ಷೌರ ಮಾಡುವುದನ್ನೇ ಬಿಟ್ಟುಬಿಟ್ಟರೆ ಬಹಳ ಲಾಭವಿದೆಯೆಂದು ಆ ಲೇಖಕರ ಮತವಾಗಿದೆ.

ಗಳ್ಳತನದ ಅಪರಾಧ ಮಾಡಿದವ

ಎಲ್ಲಾ ತರದ ಅಪರಾಧಗಳನ್ನೂ ಮಾಡಿದವನು ಎಂದರೆ ೧೩೮ರ ತಪ್ಪುಗಳಿಗೆ ಗುರಿಯಾದ ಆಲ್ಫ್ರೆಡ್ ಜಾಳ್ ಎಂಬವನು. ಅವನ ವಿಷಯ 'ಆನ್ಸರ್ಸ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಎರಡು ವರ್ಷಗಳ ಹಿಂದೆ ಪೋಲೀಸನಲ್ಲಿ ಈತನ ವಿಚಾರಣೆಯಾದಾಗ ಈ ವಿಷಯವು ಪ್ರಕಟವಾಯಿತು.

ಈತನು ಮಾಡಿದ ಅನೇಕ ಅತ್ಯಂತ ವಿಚಿತ್ರ ಅಪರಾಧಗಳು ಬಹಳ ರೋಮಾಂಚಕ ಕಥೆಗಳಿವೆ.

ಹೈದರಾಬಾದಿನಲ್ಲಿ ೨೦೦೦ ವರ್ಷ ಹಿಂದಿನ ಪಟ್ಟಣ

ಪ್ರಾಚ್ಯವಸ್ತು ಸಂಶೋಧಕರು ಹೈದರಾಬಾದು ನಗರದಿಂದ ೬೦ ಮೈಲು ದೂರದಲ್ಲಿ ೨೦೦೦ ವರ್ಷಗಳ ಹಿಂದಿನ ಬುದ್ಧ ಕಾಲದ ನಾಗರಿಕತೆಯುಳ್ಳ ನಗರವೊಂದನ್ನು ಕಂಡು ಹುಡುಕಿರುವರು. ಅದು ಪ್ರಾಚೀನ ಆಂಧ್ರ ನಗರಿಯೆಂದು ತಿಳಿದಿದೆ. ಹಿಂದಿನ ಕಾಲದ ಜನರಲ್ಲಿ ಕಲಾಭಿರುಚಿ ಎಷ್ಟರಮಟ್ಟಿಗೆ ಇತ್ತೆಂದು ಅಲ್ಲಿನ ಕಲಾವಶೇಷಗಳು ತಿಳಿಸುತ್ತವೆ. ಅನೇಕ ಆಂಧ್ರ ನಾಣ್ಯಗಳು ಅಲ್ಲಿ ದೊರಕಿವೆ. ಬುದ್ಧ ನಾಗರಿಕತೆ ಅಲ್ಲಿ ಹರಡಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳು ಅಲ್ಲಿ ದೊರೆತಿವೆ.

ರೋಮನ್ ಹಿಂದುಸ್ತಾನಿ

ಪಂಡಿತ ಜವಾಹರಲಾಲರು ಒಮ್ಮೆ ರಾಷ್ಟ್ರೀಯ ಭಾಷೆ ಹಿಂದುಸ್ತಾನಿಗೆ ರೋಮನ್ ಲಿಪಿಯನ್ನು ಉಪಯೋಗಿಸಬೇಕಾಗಿ ಬರೆದಿದ್ದರು. ತಮ್ಮ ತಂಗಿಯ ಮದುವೆಯ ಆಮಂತ್ರಣ ಪತ್ರವನ್ನು ರೋಮನ್ ಲಿಪಿಯ ಹಿಂದುಸ್ತಾನೀ ಭಾಷೆಯಲ್ಲಿ ಮುದ್ರಿಸಬೇಕೆಂದೂ ಅವರು ಯೋಚಿಸಿದ್ದರಂತೆ. ಆದರೆ ಇತ್ತೀಚೆಗೆ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿರುವರು. ದೇವನಾಗರಿ ಮತ್ತು ಪರ್ಶಿಯನ್ ಎರಡು ಲಿಪಿಗಳನ್ನು ಸರಕಾರವು ಪ್ರೋತ್ಸಾಹಿಸಬೇಕು; ಯಾರಿಗೆ ಯಾವುದು ಸುಲಭವಾಗುವುದೋ ಅವರು ಅದರಲ್ಲಿ ಅಂಗೀಕರಿಸುವರೆಂದು ಇತ್ತೀಚೆಗೆ ಅವರು ಬರೆದಿರುವರು.

ವಿಜ್ಞಾನಯುಗ

ಹೊಸ ಬಾಂಬು 'ಗೋಪನ'

ಬಾಂಬು ಹೊಡೆದಾಗ ಗೋಪನಕ್ಕೆ (Shelter) ಈಗ ಅಮೇರಿಕದಲ್ಲಿ ಹೊಸ ತರದ ಏರ್ಪಾಡುಗಳಾಗುತ್ತಿವೆ. 8×12 ಫೀಟುಗಳ ಮೇಲೆ ಆವರಣವುಳ್ಳ ಒಂದು ಮೋಟರಿನಂತಹ ಕೋಣೆಯು ಯಂತ್ರದಿಂದ ನಡೆಯುವುದು ನಿರ್ಮಾಣವಾಗಲಾಗಿದೆ. ಇದರೊಳಗೆ ಕೋಣೆ, ಬಚ್ಚಲುಕೊಟ್ಟಿಗೆ, ಅಡಿಗೆ ಮನೆಗಳೂ ಇವೆ. ಇದನ್ನು ಎಲ್ಲಿಯೂ ಇಡಲು ಅನುಕೂಲ ಇದೆ.

ಪರಿಮಳದ ಜಾಹಿರಾತು

ಪತ್ರಿಕೆಗಳಲ್ಲಿ ಕೊಡುವ ಜಾಹೀರಾತನ್ನು ಪರಿಮಳ ಸಹಿತವಾಗಿ ಪ್ರಿಂಟು ಮಾಡುವ ಹೊಸ ತರದ ಏರ್ಪಾಡು ಈಗ ಮಾಡಲಾಗಿದೆ. ಪ್ರಕಟಣಾ ನಿಪುಣರು ಪ್ರಿಂಟು ಮಾಡುವ ಶಾಯಿಯೊಂದಿಗೆ ಪರಿಮಳ ದ್ರವ್ಯವನ್ನು ಚಿಮುಕಿಸಿ, ಶಾಯಿಯೊಡನೆ ಅದು ಸರಿಯಾಗಿ ಬೆರಕೆಯಾಗುವಂತೆ ಮಾಡಿ, ಜಾಹಿರಾತಿನ ಇಡೀ ಪುಟವೇ ಪರಿಮಳದಿಂದ ಗಮಗಮವಾಗುವಂತೆ ಮಾಡುತ್ತಿದ್ದಾರೆ. ಜಾಹೀರಾತು ಕೊಡುವವರಿಗೂ, ಪಡೆಯುವವರಿಗೂ, ಓದುಗರಿಗೂ ಇದರಿಂದ ಹೆಚ್ಚಿನ ಪ್ರಯೋಜನವಾಗಲಿದೆ.

ಆದರೆ ಎ. ಟಿ. ಶರೀಫ್ ಐ. ಸಿ. ಎಸ್. ಇವರು ತಿರುಗಿ ರೋಮನ್ ಲಿಪಿಯೇ ಆಗಬೇಕೆಂದು ಈಗ ವಾದಿಸತೊಡಗಿದ್ದಾರೆ. ಪರ್ಶಿಯನ್ ಲಿಪಿಗಿಂತ ಓದಲು ಅದು ಸುಲಭವೆಂದೂ ದೇವನಾಗರಿಗಿಂತ ಬರೆಯಲು ಅದು ಸೌಕರ್ಯವೆಂದೂ ಇದು ಇಡೀ ವಿಶ್ವದಲ್ಲಿಯೇ ಪ್ರಚಾರವಾದುದೆಂದೂ ಅವರ ವಾದ ಸರಣಿಯಾಗಿದೆ.

ಮದ್ಯಪಾನವನ್ನು ನಿಲ್ಲಿಸಲು

ಕೆಲವು ಡಾಕ್ಟರರು ಈಗ ಹೊಸ ತರದ ಒಂದು ಉಪಾಯವನ್ನು ಕಂಡು ಹುಡುಕಿರುವರಾಗಿ ತಿಳಿದಿದೆ.

ಸೀನು ಬರುವಂಥಾ ಒಂದು ಇಂಜೆಕ್ಷನನ್ನು ಕುಡಿಕನಾದವನಿಗೆ ಕೊಡುವುದು; ಆ ಮೇಲೆ ಆತನ ಎದುರುಗಡೆ, ಆತನಿಗೆ ಕುಡಿಯಬೇಕೆಂದು ಮನಸ್ಸಾದಾಗಲೆಲ್ಲಾ ಮದ್ಯದ ಬಾಟ್ಲಿ ಹಿಡಿಯುವುದು. ಆಗಲೂ ಆತನಿಗೆ ಸೀನು ಬರುತ್ತಲೇ ಇರುವುದು. ಈ ರೀತಿಯಿಂದ ಸುಮಾರು ಎರಡು ವಾರಗಳ ವರೆಗೆ ಮುಂದುವರಿಸುತ್ತಾ ಇದ್ದರೆ, ಮತ್ತೆ ಮದ್ಯದ ಬಾಟ್ಲಿ ಎದುರು ಹಿಡಿದ ಕೂಡಲೇ ಆತನು ಸೀನು ಬಂದು ಮುಂದೆ ಕುಡಿಯದಂತೆ ಆಗುವುದೆಂದು ಅವರ ಹೇಳಿಕೆಯಿದೆ.

ಸಾದರ ಸ್ವೀಕಾರ

ವಿವೇಕಾಭ್ಯುದಯ (ಮಾಸ ಪತ್ರಿಕೆ)

ಚಂದಾ ರೂ. 2, ಸಂಪಾದಕರು: ಶ್ರೀ. ಡಿ. ಪುಟ್ಟುಸ್ವಾಮಿ, ಬಿ. ಎ; ಬಿ. ಎಲ್. ವಿಳಾಸ: ವಿವೇಕಾಭ್ಯುದಯ ಕಾರ್ಯಾಲಯ, ವೀರಭವನ, ಮಂಗಳೂರು.

ಜೈನಧರ್ಮದ ಸಲುವಾಗಿ ಮೀಸಲಾಗಿರುವ ಈ ಪತ್ರಿಕೆಯು ಕಳೆದ ಎಂಟು ವರ್ಷಗಳಿಂದ ಮೈಸೂರಲ್ಲಿ ಶ್ರೀ. ಶಾಂತಿರಾಜ ಶಾಸ್ತ್ರಿಯವರ ಸಂಪಾದಕತ್ವದಿಂದ ನಡೆಯುತ್ತಿದ್ದು ಈಗ ಮಂಗಳೂರಲ್ಲಿ ಧರ್ಮಾಭಿಮಾನಿಗಳಾದ ಧರ್ಮಸ್ಥಳ ಹೆಗ್ಗಡೆಯವರ ಉಪಕಾರಾಶ್ರಯದಿಂದ ಸಂಚಲಿಸುತ್ತಿರುವುದು ಸಂತೋಷ. ಜೈನ ಧರ್ಮಾಭಿಮಾನಿಗಳೆಲ್ಲರೂ ಅವಶ್ಯ ಪ್ರೋತ್ಸಾಹಿಸಬೇಕು.

'ಪ್ರಭಾತ್'-ತರುಣ ಚಿತ್ರ

ಇದರಲ್ಲಿ ಶಾಂತಾ ಹುಬ್ಳೀಕರ್ ಈಗ ಹೊಸದಾಗಿ ಅಭಿನಯಿಸುತ್ತಾಳೆ.

ತಮಿಳು 'ಸಾವಿತ್ರಿ'

ಇದರಲ್ಲಿ ವೈ. ವಿ. ರಾವ್ ಮತ್ತು ಶಾಂತಾ ಆಪ್ಟೆಯವರು ದಂಪತಿಗಳಾಗಿ ಮತ್ತು ಸಾರಂಗಪಾಣಿ ಮತ್ತು ಕೃಷ್ಣವೇಣಿ ಇವರು ದಂಪತಿಗಳಾಗಿ ಅಭಿನಯಿಸುವರು.

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA
Danthadavan Choorna

Economical in use. Cheapest in value
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಬಲ್ಮಠ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

GET YOUNG

ನವ ಚೈತನ್ಯಕ್ಕೆ 'ಓಂಪ್ರೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:–

ದಿ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Stockists:—

Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines Unique Banking facilities to Businessmen and interested Public.

Apply for particulars—

K. R. GURU, *Managing Director*

THE BANK OF MANGALORE LIMITED.

HEAD OFFICE, MANGALORE ESTD 1931

Branches—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits.

FIXED DEPOSITS

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2—13—0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 29—8—1941 [ಸಂಚಿಕೆ 35]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City, —and BOMBAY 4.

ಇಂದು ಜಿಲ್ಲೆಯುದ್ದಕ್ಕೂ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಬಾನಿನಾಚೆಗೆ ನೋಟ!

ಮಿತ್ರ ವಿಮಾನವಿರಲಿ, ಶತ್ರು ವಿಮಾನವಿರಲಿ ಅವುಗಳ ಸಂಚಾರವನ್ನು ಈ ರೀತಿಯಿಂದ ನೋಡುವ ಕಾವಲುಗಾರರು ಬ್ರಿಟನಿನ ಸುತ್ತಲೂ ನೇಮಿಸಲ್ಪಟ್ಟಿರುವರು

KANNADA ILLUSTRATED WEEKLY

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 162/1941

ಸುಭದ್ರ ಯಾನೆ ರಾಧಾ ಬ್ಯಾಕಿಣಿ ಅಮ್ಮ ... ವಾದಿಳು

ಲೂಯಿಸ್ ಸಿಕ್ವೇರ ಸಹಾ ... ಪ್ರತಿವಾದಿರು.

2ನೇ ಪ್ರತಿವಾದಿ-ಇನಾಸ್ ಸಿಕ್ವೇರ, ಸ್ವಾರ್ ಸಿಕ್ವೇರ ಮಗ, ಕಾರ್ಕಳ ತಾಲೂಕು ದುರ್ಗ ಗ್ರಾಮದ ತೆಳ್ಳಾರು ಉಡ್ಡಫಳ್ಳೆ ಎಂಬಲ್ಲಿರುವವರೇಗೆ:—

1, 2ನೇ ಪ್ರತಿವಾದಿರು ಕೂಡಾ 3 ಜನರು ವಾದಿಳಿಗೆ ತಾರೀಕು 8–4–1935ರಲ್ಲು ರೂ. 500ಕ್ಕೆ ರಿಜಿಸ್ಟ್ರಿನಿಂ ಬರಕೊಟ್ಟ ಕೋರದವಿನ ಅಸಲು ಬಡ್ಡಿ ಕೂಡಾ ರೂಪ್ಯಾ 568-15-5 ಕ್ಕೆ ದಾವ್ಯಾದಾಕ್ಲು ಮಾಡಿದ್ದಾನೆ. ಸದ್ರಿ ದಾವೆಯು ತಾರೀಕು 30–9–41ಕ್ಕೆ ತನ್ನಿಗೆ ಇಟ್ಟದೆ. ಆದ್ದರಿಂದ ಸದ್ರಿ ತನ್ನಿ ತಾರೀಕಿನ ದಿವ್ಸ ಹಗಲು 10 ಘಂಟೆಗೆ 2ನೇ ಪ್ರತಿವಾದಿ ಆದ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜ್ರಾಗಿ ಉದಹರಿಸದಿದ್ರೆ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರುಹಾಜ್ರಿಯಲ್ಲಿ ಕೇಳಿ ಫೈಸಲು ಮಾಡೋಣಾದೀತೆಂತ ನೀವು ತಿಳಿದಿರತಕ್ಕದ್ದು.

ಕೋರ್ಟು ಹುಕುಂ ಪ್ರಕಾರ

ಕಾರ್ಕಳ 29–8–'41 } **M. Mukunda Kamath**, *Pleader for Plaintiff*

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 260/41.

ವಾದಿರು–ಉಡುಪಿ ಕೃಷ್ಣಾಪುರ ಮಠದ ಶ್ರೀ ಕಾಳಿಯಮರ್ದನ ಕೃಷ್ಣ ದೇವರು ಬಗ್ಗೆ ಶ್ರೀ ವಿದ್ಯಾರತ್ನ ತೀರ್ಥಸ್ವಾಮಿರು,

ಪ್ರತಿವಾದಿರು–1. ವೆಂಕಟರಮಣ ಹತ್ವಾರ 2. ಶೇಷಗಿರಿ ಹತ್ವಾರ ಶ್ರೀನಿವಾಸ ಹತ್ವಾರರ ಮಕ್ಕಳಿದ್ದವ್ರು, ಕುಂದಾಪುರ ತಾಲೂಕು ಹಂಗಲೂರು ಗ್ರಾಮದಲ್ಲಿರುವವರು,

ಸದರಿ ಪ್ರತಿವಾದಿರಿಗೆ ತಿಳುಹಿಸುವುದೇನಂದರೆ-

ಚಾಲಗೇಣಿ ಬಾಬತು ರೂಪಾಯಿ 308-15-0 ನ್ನು ಬರಮಾಡಿಕೊಳ್ಳುವರೆ ವಾದಿರು ಮಾಡಿದ ಸದರಿ ದಾವೆಯನ್ನು ತಾ. 15–9–41ಕ್ಕೆ ತನಿಕಿಗೆ ಇಟ್ಟಿರುತ್ತದೆ. ಈ ದಾವೆಯಲ್ಲಿ ನಿಮ್ಮ ಉದಾಹರಣೆ ಇದ್ದರೆ ಅದನ್ನು ತಕ್ಕ ಸಮಯದಲ್ಲಿ ಕೋರ್ಟಿನ ಮುಂದೆ ಜಾಹೀರು ಮಾಡಬೇಕಾಗಿ ಈ ಮೂಲಕ ತಿಳುಹಿಸಿಯದೆ. ನಿಮ್ಮ ಉದಾಹರಣೆ ಇಲ್ಲವಾದರೆ ನಿಮ್ಮ ಗೈರಹಾಜರಿಯಿಂದ ನಂಬ್ರವು ತೀರ್ಮಾನಿಸಲ್ಪಡುವುದು.

1–9–1941 ಕುಂದಾಪುರ } **M. M. URAL,** Advocate for Plaintiff.

TENDER NOTICE

Sealed tenders will be received up to 3 P. M. on 15-9-1941 for the purchase of about 425 cwts. of old iron materials lying in several localities of the District as per the list available for perusal in the District Board Engineer's office Mangalore at any time between 11 A. M. and 5 P. M. on any working day. The list with schedule of quantities and conditions of tender can be had on payment of Re. 0-8-0 per set, which amount will not be refunded.

Dt.Bd.Engineer's office, Mangalore, Dated 28-8-41. } **Sd. P.T. Narayanan Nayar,** Dt. Bd. Engineer.

ಮಕ್ಕಳಿಂದ ಹಿಡಿದು ಮುದುಕರ ವರೆಗೆ

ಇಡೀ ಕುಟುಂಬದವರಿಗೆಲ್ಲಾ ಇದು ಉತ್ತಮ ಪಾನೀಯವಾಗಿದೆ. ಆರೋಗ್ಯ ಶಕ್ತಿ ಮತ್ತು ಧಾತುಪುಷ್ಟಿಕರವಾಗಿದೆ!

ಓವಲ್ಟಿನನ್ನು ಪ್ರತಿಯೊಬ್ಬನೂ ಪ್ರೀತಿಸುತ್ತಾನೆ. ಅಜ್ಜ ಅಜ್ಜಿಯರು, ತಂದೆತಾಯಿಂದಿರು ಮಾತ್ರವಲ್ಲದೆ, ಮಕ್ಕಳಿಗೂ ಇದು ಹಿತಕರವಾಗಿದೆ. ಓವಲ್ಟಿನಿನಲ್ಲಿ ಪೂರ್ಣ ಆರೋಗ್ಯದ ವಸ್ತುಗಳಿರುವುದರಿಂದ ಇದು ಬಾಲಕರಿಂದ ಹಿಡಿದು ಮುದುಕರ ವರೆಗೂ ಪಾನಯೋಗ್ಯವಾಗಿಯೂ ಇರುವುದು.

ನಿಮ್ಮ ಕುಟುಂಬದಲ್ಲಿ ಓವಲ್ಟಿನನ್ನು ದಿನನಿತ್ಯ ಉಪಯೋಗಿಸಿ ನೋಡಿ. ಪ್ರತಿಯೊಬ್ಬರೂ ಹೇಗೆ ಸಂಪೂರ್ಣ ಆರೋಗ್ಯದಿಂದಿರುವರೆಂದು ಮತ್ತೆ ವಿಚಾರಿಸಿರಿ. ಅನಾರೋಗ್ಯದೆದುರು ಓವಲ್ಟಿನ್ ರಕ್ಷಾಕವಚವಾಗಿದೆ. ಮೈಗೆ ಶಕ್ತಿಯನ್ನಿತ್ತು ರೋಗಗಳನ್ನು ಅದು ತಡೆಯುತ್ತದೆ.

ಓವಲ್ಟಿನ್ನು ಸಂಪೂರ್ಣ ನೈಸರ್ಗಿಕ ಆಹಾರ. ಪಕ್ವವಾದ ಬಾರ್ಲಿಯಿಂದ ಮತ್ತು ಹೊಸ ದನದ ಹಾಲಿನಿಂದ ಈ ವಿಟಮಿನ್ ಮತ್ತು ಇನ್ನೂ ಅನೇಕ ಇತರ ಆಹಾರ ಸ್ಪರ್ಶಗಳಿಂದ ಕೂಡಿದ ಓವಲ್ಟಿನನ್ನು ಮಾಡಲಾಗಿದೆ. ಓವಲ್ಟಿನನ್ನು ಕೊಂಡುಕೊಳ್ಳಿರಿ. ನಕಲಿಗಳನ್ನು ಕುರಿತು ಜಾಗ್ರತೆಯಿಂದಿರಿ

ಓವಲ್ಟಿನ್ನು ಕುಡಿಯಲು ಹಿತಕರವಾಗಿದೆ ಬಿಸಿಯಾಗಿಯೂ ತಣುಪಾಗಿಯೂ ಇದನ್ನು ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹೂ ಸುಲಭದ ಕೆಲಸವಾಗಿದೆ. ಪ್ರತಿಯೊಂದು ಡಬ್ಬಿಯಲ್ಲಿಯೂ ತಯಾರಿಸುವ ಕ್ರಮವು ಬರೆದಿದೆ

ಓವಲ್ಟಿನ್ ಬಿಸ್ಕುಟು

ಓವಲ್ಟಿನ್ ಆರೋಗ್ಯಕರ, ಜೀರ್ಣಕರ ಮತ್ತು ಶಕ್ತಿಕರವಾದುದು. ಬಿಸ್ಕುಟುಗಳಲ್ಲಿ ಇರುವ ಉತ್ತಮ ಅದೇ ಉತ್ತಮವಾಗಿದೆ. ಈ ಬಿಸ್ಕುಟುಗಳಲ್ಲಿ ಕೂಡ ಓವಲ್ಟಿನ್ ಇರುವುದರಿಂದ ಬಹಳ ಹಿತವನ್ನುಂಟು ಮಾಡುತ್ತದೆ.

4 ಔನ್ಸ್ ಮತ್ತು 8 ಔನ್ಸುಗಳ ಪೆಕೆಟುಗಳಾಗಿಯೂ 1 ರಾತ್ತಲಿನ ಟಿನ್ನುಗಳಲ್ಲಿಯೂ ಮಾರಾಟವಾಗುತ್ತದೆ.

'ಓವಲ್‌ಟಿನ್'

OVALTINE

ಎಲ್ಲಾ ವ್ಯಾಪಾರಿಗಳಲ್ಲಿಯೂ ಮಾರಾಟಕ್ಕೆ ಇದು ಸಿಗುತ್ತದೆ

ಗ್ರೇಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್

ಕೈತ್‌ನೆಸ್ ಹೋಲ್, 310/311 ಲಿಂಗಿಚೆಟ್ಟಿ ಸ್ಟ್ರೀಟ್, ಮದ್ರಾಸು, ಹಾಗೂ ಕಲ್ಕತ್ತಾ, ಬೊಂಬಾಯಿ ಕರಾಚಿ ಮತ್ತು ರಂಗೂನ್

OV/53/40

ರಶ್ಯ ಜರ್ಮನಿ ಯುದ್ಧ

ಎರಡು ತಿಂಗಳ ನಷ್ಟ ಜೂನ್ ೨೨ ರಿಂದ ಆಗಸ್ಟ ೨೨ರ ವರೆಗೆ

ರಶ್ಯನರ ಪ್ರಕಟಣೆ

ಜರ್ಮನರಿಗೆ ಹಾನಿ:-ಸತ್ತ, ಗಾಯಗೊಂಡ, ಸೆರೆಯಾದ ಜರ್ಮನ್ ಸೈನಿಕರು ೨೦ ಲಕ್ಷ. ಇದಲ್ಲದೆ ೮೦೦೦ ಟ್ಯಾಂಕುಗಳು, ೧೦೦೦೦ ತೋಪುಗಳು, ೭೨೦೦ ವಿಮಾನಗಳು ನಾಶವಾದವಂತೆ.

ರಶ್ಯನರ ಹಾನಿ:-೧೫೦,೦೦೦ ಸತ್ತರು ೪೪೦,೦೪೦ ಗಾಯಗೊಂಡರು, ೧೦೦,೦೦೦ ಕಣ್ಮರೆಯಾಗಿರುವರು, ಅಲ್ಲದೆ, ೫೫೦೦ ಟ್ಯಾಂಕುಗಳು, ೭೫೦೦ ತೋಪುಗಳು, ೪೫೦೦ ವಿಮಾನಗಳು ನಾಶವಾಗಿವೆ.

ಸ್ವದೇಶಾಭಿಮಾನಿಯಲ್ಲಿ, ನಿಮ್ಮ ಜಾಹೀರಾತುಗಳನ್ನು ಕೊಡಿರಿ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

5—9—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೫—೯—೧೯೪೧

ಸಮರ ಭೂಮಿಯ ಸಂಚಾರ

ಹತ್ತು ವಾರಗಳ ಕಾಳಗದಲ್ಲಿ ರಶ್ಯವನ್ನು ಬಗ್ಗುಬಡಿವೆನೆಂಬ ಹಿಟ್ಲರನ ಭಾಷೆಯು ಬಂಜೆಯಾಯಿತು ಆದರೆ ರಶ್ಯದಲ್ಲಿ ಜರ್ಮನಿಯು ಅತ್ಯಂತ ವಿಜಯವನ್ನು ಸಂಪಾದಿಸಿಕೊಂಡಿದೆಯೆಂಬುದನ್ನು ಮರೆಮಾಡಲು ಸಾಧ್ಯವಿಲ್ಲ

ರಶ್ಯದಲ್ಲಿ ಮುಂದೊತ್ತಿದರು

ಯುಕ್ರೇನ್ ಪ್ರಾಂತದಲ್ಲಿ ಜರ್ಮನರು ಬಹು ದೂರ ನುಗ್ಗಿದರು ಒಡೆಸ್ಸಾವನ್ನು ಸುತ್ತುಗಟ್ಟಿರುವರು. ನಿಕಲೇವ್ ಬಂದರವನ್ನು ಕೈವಶಪಡಿಸಿಕೊಂಡರು. ನೀಪರ್ ನದಿಯ ಪಶ್ಚಿಮಕ್ಕಿರುವ ಕಬ್ಬಿಣದ ಕೇಂದ್ರಗಳನ್ನು ಸ್ವಾಧೀನ ಮಾಡಿರುವರು ಆದರೆ ನೀಪರ್ ನದಿಯನ್ನು ದಾಟಿಹೋಗುವ ಸಾಹಸದಲ್ಲಿ ಇದುವರೆಗೆ ಅವರು ಕೃತಾರ್ಥರಾಗಿಲ್ಲವೆಂದು ತಿಳಿಯುತ್ತದೆ ಈ ನೀಪರ್ ನದಿಯ ಕಾಳಗ ಬಹಳ ಪ್ರಾಮುಖ್ಯವಾದುದು. ಈ ನದಿಯು ಕೀವ್‌ನಿಂದ ಕಪ್ಪು ಸಮುದ್ರದ ವರೆಗೆ ಇರುತ್ತದೆ ಅನೇಕ ಕಡೆಗಳಲ್ಲಿ ನದಿಯ ಹತ್ತಿರ ಹತ್ತಿರಕ್ಕೆ ಮುನ್ನುಗ್ಗಿ ಬಂದಿರುವರೆಂದು ಈಗ ಸುದ್ದಿ ಬಂದಿದೆ.

ಗೊಮೆಲ್ ಕಡೆಯಲ್ಲಿಯೂ ಜರ್ಮನರಿಗೆ ವಿಜಯವೇ ದೊರೆತಿದೆ. ಈಗ ಅಲ್ಲಿ ಭಾರೀ ಮಳೆ ಬಂದು ಜರ್ಮನರ ಮುನ್ನಡೆಗೆ ಸ್ವಲ್ಪ ತಡೆಯುಂಟಾಯಿತೆಂದು ಸುದ್ದಿ ಗೊಮೆಲ್ ಕಡೆಯ ಧಾಳಿಯು ಮೋಸ್ಕೋದ ಕಡೆಗೆ ಹೋಗುವ ಸಿದ್ಧತೆಯೆಂದು ಹಲವರು ಅಭಿಪ್ರಾಯಪಡುವರು

ಲೆನಿನ್‌ಗ್ರಾಡ್ ಕಾಳಗ

ಉತ್ತರ ರಣಭೂಮಿಯಲ್ಲಿ ಎಂದರೆ ಲೆನಿನ್‌ಗ್ರಾಡ್‌ನ ಸುತ್ತು ಬಹಳ ಘೋರ ಕಾಳಗವೇ ನಡೆದಿದೆ ವಿಪುರಿಯನ್ನು ಪಿನ್ನರೂ ಟ್ಯಾಲಿನವನ್ನು ಜರ್ಮನರೂ ಆಕ್ರಮಿಸಿಕೊಂಡಿರುವರೆಂದು ಹೇಳಲಾಗಿದ್ದರೂ ಅದನ್ನು ರಶ್ಯನರು ಒಪ್ಪಿಲ್ಲ ಲೆನಿನ್‌ಗ್ರಾಡಿನ ಬಹಳ ಸಮೀಪಕ್ಕೆ ಜರ್ಮನರು ಬಂದಿರುವರೆಂಬುದು ನಿಶ್ಚಯ ನೋವಾ ಗ್ರಾಡಿನಲ್ಲಿ ರಶ್ಯನರು ಒಂದು ವಾರಗಳ ವರೆಗೆ ಕಾದಾಡಿ ಸೋತು ಹಿಂದಬಿದ್ದರು, ಜರ್ಮನರು ಲೆನಿನ್‌ಗ್ರಾಡಿಗೆ ಮೂರು ನಾಲ್ಕು ಕಡೆಗಳಿಂದ ಮುನ್ನುಗ್ಗಿ ಬರುವುದನ್ನು ನೋಡಿಯೇ ವೊರೊಶಿಲೋವ್ರೋ ವೈರಿಗಳನ್ನು ಎದುರಿಸುವ ವಿಷಯದಲ್ಲಿ ನಾಗರಿಕರನ್ನು ಹುರಿದುಂಬಿಸುವ ಒಂದು ವಿನಂತಿ ಮಾಡಿದನು. ಸುಮಾರು ಹತ್ತು ಲಕ್ಷ ಸೈನಿಕರು ಮತ್ತು ಕೋಟ್ಯಂತರ ನಾಗರಿಕರು ಲೆನಿನ್‌ಗ್ರಾಡಿನ ರಕ್ಷಣೆಗಾಗಿ ಕಾದಾಡಲು ಸೊಂಟಕಟ್ಟಿರುವರು.

ಲೆನಿನ್‌ಗ್ರಾಡ್ ಬಹಳ ಪ್ರಬಲವಾದ ಕೋಟೆಯಾಗಿದೆ ಅಂತಹ ಕೋಟೆ ಯೂರೋಪಿನಲ್ಲಿ ಬೇರೆ ಇಲ್ಲವೆಂದು ಹೇಳಲಾಗಿದೆ ಅದನ್ನು ಕೈವಶ ಪಡಿಸುವುದು ಜರ್ಮನರಿಗೆ ಅಷ್ಟೇನೂ ಸುಲಭದ ಕಾರ್ಯವಾಗಲಾರದು

ಮಧ್ಯ ರಣಭೂಮಿಯಲ್ಲಿ

ಮಧ್ಯ ರಣಭೂಮಿಯಲ್ಲಿಯೂ, ಕಾಳಗವು ವಿಷಮವಾಗಿಯೇ ನಡೆಯುತ್ತದೆ ಸ್ಮೊಲಿನ್‌ಸ್ಕ್ ನಗರವನ್ನು ಜರ್ಮನರು ಸ್ವಾಧೀನ ಪಡಿಸಿಕೊಂಡರೂ ಆ ಕಡೆ ಯುದ್ಧವು ಸಾಗುತ್ತಲೇ ಇರುವುದು, ಜರ್ಮನರು ಆ ಮೇಲೆ ರಶ್ಯನರ ಪ್ರತಿಘಟನೆಯನ್ನು ಬಗ್ಗಿಸಿ ಬಹಳ ಮುಂದುವರಿಯಲಿಲ್ಲ. ಗೊಮೆಲ್ ರಣಭೂಮಿಯಲ್ಲಿ ರಶ್ಯನರಿಗೆ ಬಹಳ ಪೆಟ್ಟಾಗಿದ್ದರೂ ಈಚೆಗೆ ಮಳೆಬಂದು ಜರ್ಮನರ ಮುನ್ನಡೆಗೆ ಬಹಳ ತೊಂದರೆಯಾಗಿರುವುದಂತೆ ಗೊಮೆಲಿನಿಂದ ಜರ್ಮನರು ನೀಪರ್ ನದಿಯ ದಾರಿಯನ್ನೇ ಹಿಡಿದು ಮುನ್ನುಗ್ಗಲು ಬಯಸಿದ್ದಾರೆ ನೀಪರ್ ನದಿಯನ್ನು ದಾಟಲು ಜರ್ಮನರು ನಾಲ್ಕಾರು ಕಡೆಗಳಿಂದ ಸಾಹಸ ಮಾಡುತ್ತಲಿರುವರು

ರಶ್ಯಕ್ಕೆ ಸಹಾಯಗಳು

ರಶ್ಯನರು ಬಹಳ ಕಲಿತನದಿಂದಲೇ ಕಾದಾಡಿದರೆನಲು ಯಾವ ಅಡ್ಡಿಯೂ ಇಲ್ಲ ಆದರೆ ಇದ ವರೆಗೆ ಅವರಿಗೆ ಉತ್ಸಾಹಕಾರಕವಾದ ಜಯವು ದೊರೆತಿಲ್ಲ ರಶ್ಯನರಿಗೆ ಹೆಚ್ಚು ಹೆಚ್ಚಿನ ಶಸ್ತ್ರಾಸ್ತ್ರಗಳ ಸಹಾಯಬೇಕು ಇಂದಿನ ಯುದ್ಧದಲ್ಲಿ ಜನರಿಗಿಂತಲೂ ಯಂತ್ರಶಕ್ತಿಯೇ ಮಿಗಿಲಾಗಿದೆ ಚರ್ಚಿಲ್ ರೂಸ್‌ವೆಲ್ಟರು ಮೊನ್ನೆ ಗುಪ್ತ ಮಾತುಕತೆ ನಡೆಸಿದುದರಲ್ಲಿ ಈ ವಿಷಯವಾಗಿಯೇ ಆಲೋಚಿಸಿದರೆಂದೂ ತರ್ಕಿಸಲಾಗುವುದು. ಬ್ರಿಟನ್ ಅಮೇರಿಕಗಳು ರಶ್ಯಕ್ಕೆ ಹೆಚ್ಚಿನ ಸಹಾಯ ಕೊಡಬೇಕೆಂದು ಯೋಚಿಸುತ್ತಿವೆ, ಈಗ ರಶ್ಯಕ್ಕೆ ಸಹಾಯ ಕೊಡುವುದೇ ನಿಜವಾಗಿ ಹಿಟ್ಲರನ ಬಲವನ್ನು ಮುರಿಯಬಲ್ಲ ಪ್ರಯೋಗವಾಗಿದೆ ಅದನ್ನು ಈ ರಾಷ್ಟ್ರಗಳು ವಿಚಾರಿಸದೆ ಇರಲು ಸಾಧ್ಯವಿಲ್ಲ

AN INVITATION

Large Surplus Funds are awaiting investment In order to invest this surplus, Loans will be granted at specially reduced rates against Gold, Market Produce, Government Securities, etc., etc,

You are invited to take advantage of these special terms

CANARA BANK LIMITED

ESTD 1906.

ನಾನು ಹೇಳುತ್ತಿದ್ದೆನಲ್ಲವೇ—

ಮೊದಲು ಪುರೋಹಿತ ಶ್ವಾಸಹಾರೀ ತೆಗೆದುಕೊಳ್ಳಿರಿ ಅಂತಾ—

ದಮ್ಮು ಒಮ್ಮೆಲೇ ನಿಲ್ಲಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕ ಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ ಪುರೋಹಿತ ಶ್ವಾಸಹಾರೀಯು ಇಂಥವಲ್ಲ, ಆದರೆ ದಮ್ಮನ್ನು ಒಂದೆರಡು ದಿನ ನಿಲ್ಲಿಸದೆ ಮೆಲ್ಲಮೆಲ್ಲಗೆ ನಿರ್ಮೂಲವಾಗಿ ಗುಣ ಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ಕಫ ಕಡಿಮೆಯಾಗುವುದು, ಎದೆಯ ಹೊಂದಿನ ... ಪಚನಕ್ರಿಯೆಯು ... ಶಕ್ತಿ ಹೆಚ್ಚಾಗಿ ... ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ಕೆಮ್ಮು, ಕಫ, ಗಂಟಲು ಉರಿಯುವಂಥದು ಮತ್ತೂ ಶ್ವಾಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು ಬದ್ಧಕೋಷ್ಠ ಮತ್ತೂ ಅಮ್ಲಪಿತ್ತ ... ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ... ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು ... ವಿಳಾಸ.

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ ಮೆ॥ ವನಮಾಳೀ ಭೀಖಾ ಮತ್ತು ಕಂ, ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ

ಪುರೋಹಿತ ಶ್ವಾಸಹಾರಿ

ಸ್ವದೇಶಾಭಿಮಾನಿ

ತಾರೀಕು 5—9—1941

ಯುದ್ಧದ ತೃತೀಯ ವರ್ಷ

ಈ ವಾರ ಯುದ್ಧವು ಮೂರನೆಯ ವರ್ಷಕ್ಕೆ ಕಾಲಿಟ್ಟಿದೆ. ಕಳೆದ ಎರಡು ವರ್ಷಗಳಲ್ಲಿ ಹಿಟ್ಲರನು ಬಹಳ ಉದ್ದಾಮ ಪರಾಕ್ರಮವನ್ನೇ ತೋರಿಸಿದ್ದಾನೆ. ಯೂರೋಪಿನ ರಾಷ್ಟ್ರರಾಷ್ಟ್ರಗಳನ್ನು ಶರಣುಗೊಳಿಸಿ ಮುಂದೊತ್ತಿ ಬಂದಿದ್ದಾನೆ. ರಕ್ತದ ಕಾಲುವೆಯನ್ನು ಹರಿಸಿ ವಿಜಯ ಪತಾಕೆ ಹಾರಿಸಿದ್ದಾನೆ. ಯುದ್ಧದ ಅವಸಾನವು ಇನ್ನೂ ಕಾಣಲೊಲ್ಲದಾದರೂ, ಈ ತೃತೀಯ ವರ್ಷದಲ್ಲಿ ಜರ್ಮನಿಯು ಬಹಳ ಭೀಕರ ಶತ್ರುವಿನೊಡನೆ ರಶ್ಯದೊಡನೆ ಸೆಣಸಾಡಲು ಸೊಂಟಕಟ್ಟಿ ನಿಂತಿದೆ.

ಹಿಂದೆ ಯೂರೋಪನ್ನು ನಡುಗಿಸಿ ಮುಂದೊತ್ತಿ ಬಂದ ನೆಪೋಲಿಯನನು ರಶ್ಯದಲ್ಲಿಯೇ ತನ್ನ ತಲೆ ತಗ್ಗಿಸಬೇಕಾಯಿತು. ಹಿಟ್ಲರನಿಗೂ 'ವಾಟರ್ಲೂ' ಸನ್ನಿಹಿತವಾಗಿದೆಯೇ ಎಂದು, ಕೆಲವರು ರಶ್ಯದ ಯುದ್ಧ ಆರಂಭವಾದೊಡನೆ ಊಹಿಸತೊಡಗಿದ್ದಾರೆ.

ಹತ್ತು ವಾರಗಳ ಅವಧಿಯಲ್ಲಿ ರಶ್ಯದ ಕತೆಯನ್ನು ತೀರಿಸಿಬಿಡುವುದಾಗಿ ಹಿಟ್ಲರನ ಹೇಳಿಕೆಯಿತ್ತು, ಆದರೆ ಆ ಭಾಷೆಯು ಇಂದು ಬಂಜೆಯಾಗಿದೆ. ಯೂರೋಪಿನ ಎರಡು ವರ್ಷಗಳ ಮಹಾಸಂಗ್ರಾಮದ ಸಂದರ್ಭದಲ್ಲಿ ನಾಜಿಗಳ ರಕ್ತವು ರಶ್ಯದ ರಣರಂಗದಲ್ಲಿ ಚೆಲ್ಲಾಟವಾದಷ್ಟು ಬೇರೆ ಕಡೆ ಆಗಿಲ್ಲವೆಂದೇ ಹೇಳಬಹುದು. ರಶ್ಯದ 'ಕೆಂಪು ಸೈನಿ'ಕರು ಶತ್ರುಗಳ ರಕ್ತವನ್ನು ಬಹಳವಾಗಿ ಹೀರತೊಡಗಿದ್ದಾರೆ.

ಇಷ್ಟು ವಿಶೇಷವಾದ ನಷ್ಟವೊದಗಿದರೂ ಹಿಟ್ಲರನು ಇನ್ನೂ ಬಲಶಾಲಿಯೇ ಆಗಿ ಕಾದಾಡುತ್ತಿದ್ದಾನೆ. ಹಿಟ್ಲರನ ಸೊಕ್ಕು ಇಳಿದ ಲಕ್ಷಣಗಳಾವುವೂ ತೋರಿಬರುವುದಿಲ್ಲ. ಆದರೆ ಹಿಮಗಾಲದ ಬರುವಿಕೆಯನ್ನೂ, ರಶ್ಯನರ ಕೇಂದ್ರ ರಣರಂಗದ ಹೋರಾಟದ ಸಾಹಸವನ್ನೂ ನಿರೀಕ್ಷಿಸಿದರೆ ನೆಪೋಲಿಯನನಂತೆ, ಹಿಟ್ಲರನು ಸಾಧಿಸಿದ ವಿಜಯಗೌರವಗಳಿಗೆ ರಶ್ಯ ರಣಭೂಮಿಯಲ್ಲಿ ಮಹಾ ಸಮಾಧಿ ನಿರ್ಮಾಣವಾಗುವುದೇ ಎಂಬ ನಿರೀಕ್ಷೆ ಹಲವರದಾಗಿದೆ.

ನೆಪೋಲಿಯನನೂ ಮೋಸ್ಕೋದ ಆಕ್ರಮಣಕ್ಕಾಗಿ ಕೊನೆಯ ಕಾಲದಲ್ಲಿ ಅಪ್ರತಿಮ ಸಾಹಸದಿಂದ ಕಾದಾಡಿದನು. ಹಿಟ್ಲರನ ಈ ಹೋರಾಟದ ವೀರಾವೇಶವು ಎಂತಹುದೆಂಬುದು ಇನ್ನೂ ನೋಡತಕ್ಕದ್ದಿದೆ.

ರಶ್ಯ ಮತ್ತು ಜಪಾನು

ಅಮೆರಿಕದಿಂದ ಶಾಂತ ಸಾಗರದ ಮೂಲಕ ರಶ್ಯಕ್ಕೆ ಸಾಧನ ಸಾಮಗ್ರಿಗಳು ಹೋಗುವುದನ್ನು ಜಪಾನು ಆಕ್ಷೇಪಿಸಿದ ವಿಷಯವು ಬಹಳ ಕುತೂಹಲ ಜನಕವಾಗಿದೆ. ಅಮೆರಿಕದಿಂದ ಎಣ್ಣೆ ಪೆಟ್ರೋಲು ಮೊದಲಾದ ಯುದ್ಧ ಸಾಮಗ್ರಿಗಳು ರಶ್ಯಾಕ್ಕೆ, ಜಪಾನಿನ ಗಡಿಯಲ್ಲಿಯೇ ದಾಟಿಹೋಗುತ್ತಿರುವುದು ತಮಗೆ ಹೆಚ್ಚಿನ ಕಳವಳದ ಪರಿಸ್ಥಿತಿಯನ್ನುಂಟುಮಾಡಿದೆಯೆಂದು ಜಪಾನು ತನ್ನ ಪ್ರತಿಭಟನೆಯಲ್ಲಿ ವಿವರಿಸಿತು.

ಜಪಾನಿಗೆ ಈ ಕುರಿತು ಕಳವಳವಾಗುವ ಕಾರಣವೇನಿರಬಹುದೆಂಬುದು ಜಪಾನನ್ನುಳಿದ ಇತರರಿಗೆ ಅರ್ಥವಾಗಲಾರದಾದರೂ ಜಪಾನು ಅರ್ಥವಿಲ್ಲದೆ ಹೀಗೆ ಹೇಳಿತೆನ್ನಲು ಆಗುವುದಿಲ್ಲ. ತಮಗೇ ಇಲ್ಲದಿರುವಂತಹ ಈ ಯುದ್ಧ ಸಾಮಗ್ರಿಗಳು ತಮ್ಮ ಕಣ್ಣ ಮುಂದೆಯೇ ಹೀಗೆ ರಶ್ಯಕ್ಕೆ ಸಾಗುತ್ತಿರುವುದನ್ನು ಹಾಗೂ ತನ್ನ ಮಿತ್ರರಾಷ್ಟ್ರವಾದ ಜರ್ಮನಿಯ ವಿರೋಧೀ ರಾಷ್ಟ್ರಕ್ಕೆ ಹೀಗೆ ಪ್ರವಾಹರೂಪವಾಗಿ ಸಹಾಯವು ಹೋಗುತ್ತಿರುವುದನ್ನು ನೋಡಿ ಜಪಾನು ಇಂತು ಕಳವಳಗೊಂಡಿದ್ದರೆ ಅದರಲ್ಲಿ ಆಶ್ಚರ್ಯಗೊಳ್ಳುವಂತಹುದೇನೂ ಇಲ್ಲವೆನಬಹುದು.

ರಶ್ಯವು ಈ ಸಂದರ್ಭದಲ್ಲಿ ಜಪಾನಿಗೆ ಯೋಗ್ಯ ಉತ್ತರವನ್ನೇ ಕೊಟ್ಟಿದೆ. ಜಪಾನಿಗಾದರೂ, ಹಲವು ಸಾಮಗ್ರಿಗಳು ಹೊರಗಣಿಂದಲೇ ಬರಬೇಕಾಗಿರುವುದರಿಂದ ತಮಗೆ ಹೀಗೆ ಪರದೇಶದಿಂದ ಸಹಾಯ ಬರುತ್ತಿರುವುದನ್ನು ನೋಡಿ ಜಪಾನು ದಿಗಿಲುಗೊಳ್ಳಬೇಕಾಗಿಲ್ಲವೆಂದೂ ನವಿನ್ನಾ ಹಾದಿಗೆ ಆತಂಕ ಮಾಡುವಲ್ಲಿ ಜಪಾನು ಎಚ್ಚರದಿಂದ ಇರಬೇಕೆಂದೂ ಅದು ತಿಳಿಸಿಬಿಟ್ಟಿದೆ.

ಜಪಾನು ಈ ಎಚ್ಚರಿಕೆಯನ್ನು ಮನಸ್ಸಿಗೆ ತಂದುಕೊಳ್ಳುವುದೆ? ರಶ್ಯದ ವಿರೋಧವನ್ನು ಅದು ಈಗ ಕಟ್ಟಿಕೊಳ್ಳಲು ಮುಂದೆ ಬರುವುದೆ? ಇವು ಬಹಳ ಕುತೂಹಲಾತ್ಮಕವಾದ ವಿಷಯಗಳಾಗಿರುತ್ತವೆ.

ಹೊಸ ಕಾರ್ಯಕಾರೀ ಮಂಡಲ

ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಲವು ಬೇಗನೇ ತನ್ನ ಕಾರ್ಯಕಲಾಪಗಳನ್ನು ಕೈಗೊಳ್ಳಲಿದೆ. ಈ ಸಂದರ್ಭದಲ್ಲಿ ಬ್ರಿಟನು ಉದ್ದೇಶಿಸಿದ ಗುರಿಯೆಂದರೆ ಈ ಕೌನ್ಸಿಲಿನ ಯತ್ನದಿಂದ ಹಿಂದೂದೇಶದ ರಕ್ಷಣೆಯು ಕೃತಾರ್ಥವಾಗಿ, ಪ್ರಜಾಪ್ರಭುತ್ವದ ಪಾಲನೆಯಾಗಬೇಕೆಂದಾಗಿದೆಯೆಂದು ಹಿಂದೆಯೇ ತಿಳಿಸಲಾಗಿದೆ. ಈ ಉದ್ದೇಶದ ವಿಷಯದಲ್ಲಿ ವಿಸ್ತರಿಸಿದ ಕಾರ್ಯಕಾರೀ ಮಂಡಳದಲ್ಲಿ ಹೊಸದಾಗಿ ಅಧಿಕಾರಕ್ಕೇರಿದವರದೂ ಸಂಪೂರ್ಣ ಒಪ್ಪಿಗೆಯೇ ಇದೆಯೆನ್ನಬೇಕು.

ರಾಷ್ಟ್ರದ ರಕ್ಷಣೆಯ ವಿಷಯದಲ್ಲಿ ಹಿಂದೂದೇಶದ ಎಲ್ಲಾ ಪಂಗಡದವರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಆದಕ್ಕಾಗಿ 'ರಾಷ್ಟ್ರೀಯ ಸರಕಾರ'ವನ್ನೇರ್ಪಡಿಸಬೇಕೆಂದೂ ಹಾಗಾದರೆ ಯುದ್ಧ ಯತ್ನದಲ್ಲಿ ತಾವೂ ಸಹಕರಿಸಲು ಸಮ್ಮತಿಸುವುದಾಗಿಯೂ ಕಾಂಗ್ರೆಸಿನವರೂ ಹೇಳಿದ್ದರು. ಆದರೆ ಆ ಕೇಳಿಕೆಗೆ ಅಷ್ಟೊಂದು ಮಾನ್ನತೆ ಕೊಡಲಾಗದೆ ಈಗ ವೈಸರಾಯ್ ಕೌನ್ಸಿಲಿನ ವಿಸ್ತರಣೆಮಾಡಿ, ಅದರಲ್ಲಿ ಹಿಂದೂ ದೇಶದ ಕೆಲವು ಪ್ರಮುಖರಿಗೆ ಅಧಿಕಾರ ಕೊಟ್ಟು ಬ್ರಿಟನು ತನ್ನ ಉದ್ದೇಶವನ್ನು ಕಾರ್ಯರೂಪದಲ್ಲಿ ತರಲು ಮನಮಾಡಿರುತ್ತದೆ.

ಅಣೆ, ಸರ್ಕಾರರಂತಹವರು ಬಹಳ ಆಶಾವಾದಿಗಳಾಗಿ ಈ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಉದ್ದೇಶಿಸಿದ ವಿಷಯವು ದೊರಕಲು ಅವರಿಗೆ ಸಂಪೂರ್ಣ ಸಂದರ್ಭವೊದಗಲಿ ಎಂದು ನಾವು ಹಾರೈಸಬೇಕಾಗಿದೆ. ಬ್ರಿಟನಾದರೂ ಜನತೆಯ ವಿಶ್ವಾಸವನ್ನು ಈ ಮಂಡಳದ ಕಾರ್ಯಕಲಾಪಗಳ ಮೂಲಕ ಸ್ವಲ್ಪ ಹೆಚ್ಚಾಗಿಯೇ ಪಡೆಯುವಂತೆ ಕೆಲಸ ಮಾಡಿದರೆ ಮುಂದಿನ ರಾಜ್ಯಘಟನೆಗೆ ಇದು ಹೆಚ್ಚಿನ ಸಹಕಾರಿಯಾಗುವದೆಂಬುದರಲ್ಲಿ ಏನೂ ಸಂಶಯವಿಲ್ಲ.

ಮುಸ್ಲಿಂ ಲೀಗಿನ ಒತ್ತಾಯ

ಪಾಕಿಸ್ಥಾನ ಯೋಜನೆಗೆ ಬ್ರಿಟಿಷ ಸರಕಾರದ ಒಪ್ಪಿಗೆ ಸಿಗದಿರುವುದರಿಂದ ಯುದ್ಧ ಪ್ರಯತ್ನದಲ್ಲಿ ಸರಕಾರದೊಡನೆ ಸಹಕರಿಸಲಾಗುವುದಿಲ್ಲವೆಂಬ ಮುಸ್ಲಿಂ ಲೀಗಿನ ಮೊದಲಿನ ನಿರ್ಣಯವನ್ನು ಮೂಲೆಗೊತ್ತಿ ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದಲ್ಲಿ ಹಾಗೂ ರಾಷ್ಟ್ರೀಯ ಸಂರಕ್ಷಕ ಸಮಿತಿಯಲ್ಲಿ ಮುಸ್ಲಿಂ ಲೀಗಿನ ಕೆಲ ಸದಸ್ಯರು ಅಧಿಕಾರ ಸ್ವೀಕರಿಸಿದುದರ ಬಗ್ಗೆ ಮುಂಬಯಿಯಲ್ಲಿ ಕಳೆದ ವಾರ ಕೂಡಿದ ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿ ಸಭೆಯಲ್ಲಿ ಅವರು ರಾಜಿನಾಮೆ ಕೊಡಬೇಕೆಂದೂ ಇಲ್ಲವಾದರೆ ಅವರ ಮೇಲೆ ಶಿಸ್ತು ಜಾರಿಮಾಡಲಾಗುವುದೆಂದೂ ಒತ್ತಾಯದ ನಿರ್ಣಯಮಾಡಲಾಗಿದೆ.

ಈ ವಿಷಯದಲ್ಲಿ ಸರ್ ಸಿಕಂದರ್ ಹೆಯ್ಯತ್ ಖಾನರೂ ಸರ್ ಮುಹಮ್ಮದ್ ಸಾದುಲ್ಲಾ ಇವರೂ ತಮ್ಮ ರಾಜಿನಾಮೆಯಿತ್ತಿರುವರು. ಮುಸ್ಲಿಂ ಲೀಗಿನವರು ಫಜುಲುಲ್ ಹಕ್ಕರಿಗೆ ಕೆಲವು ದಿನಗಳ ಅವಧಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕೆಲವರು ಮುಖ್ಯ ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಬೇಕಾಯಿತೆಂದೂ ಮುಸ್ಲಿಂ ಪ್ರತಿನಿಧಿಗಳಾಗಿಯಲ್ಲವೆಂದೂ ಹೇಳಿದ ವಿಷಯವನ್ನು ಜಿನ್ನರು ಮುಂಬಯಿ ಗವರ್ನರರ ಪತ್ರದ ಆಧಾರದಿಂದ ಅಲ್ಲಗಳೆದು ಅವರು ಅಲ್ಲಿ ಮುಸ್ಲಿಂ ಪ್ರತಿನಿಧಿಗಳಾಗಿಯೇ ಇರುವರೆಂದು ಋಜುವಡಿಸಿದ್ದಾರೆ. ಇದರ ಪ್ರತಿಕ್ರಿಯೆಯು ಮುಸ್ಲಿಂಲೀಗಿನ ಸದಸ್ಯರಾಗಿ ಅಧಿಕಾರ ಸ್ವೀಕರಿಸಿದ ಎಲ್ಲಾ ಜನರ ಮೇಲೆ ಯಾವ ರೀತಿಯಿಂದ ಆಗುವುದೋ ನೋಡತಕ್ಕದ್ದಿದೆ. ಮುಸ್ಲಿಂ ಲೀಗಿನ ಇತಿಹಾಸದಲ್ಲಿ ಇದು ಪ್ರಮುಖ್ಯವಾದೊಂದು ವಿಚಾರವಾಗಿದೆ.

ನೋಟಗಳು....

'ಮಹಾತ್ಮಾ ಗಾಂಧಿ, ಮಹಮ್ಮದಾಲಿ ಜಿನ್ನಾ ಇವರಿಬ್ಬರೂ ಹಣವಂತರ ಕೈಗೊಂಬೆಗಳು, ಕಾಂಗ್ರೆಸಿನಿಂದಾಗಲೀ, ಮುಸ್ಲಿಂ ಲೀಗಿನಿಂದಾಗಲಿ ಜನತೆಯು ಯಾವುದೇ ಸಂಕಷ್ಟನಿವಾರಣಾ ಕಾರ್ಯವನ್ನು ಹಾರೈಸಲು ಸಾಧ್ಯವಿಲ್ಲ. ಕಾಂಗ್ರೆಸು ಮತ್ತು ಲೀಗುಗಳನ್ನು ತುಳಿದು ಬಿಡಿರಿ, ಪತ್ರಿಕೋದ್ಯಮಿಗಳು ಕತ್ತೆಗಳ ಜಾತಿ'

—ಸರ್ ಚೊಟ್ಟು ರಾಮರೆಂಬ ಪಂಜಾಬಿನ ಮಂತ್ರಿಗಳೊಬ್ಬರು ಉದ್ಗರಿಸಿದ ಮಾತುಗಳಿವು! ಪಂಜಾಬಿನ ಜಮೀನ್ದಾರರ ಸಭೆಯೊಂದರಲ್ಲಿ ಅವರು ಈ ತರದಲ್ಲಿ ಆವೇಶಪೂರ್ಣರಾಗಿ ಮಾತನಾಡಿದರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

* * *

ಇಂತಹ 'ಆಣಿಮುತ್ತು'ಗಳನ್ನು ಚೆಲ್ಲಿದ ಬಗ್ಗೆ ಸರ್ ಚೊಟ್ಟು ರಾಮರನ್ನು ದೇಶದ ಅದ್ಯಂತವೂ ಪತ್ರಿಕೆಗಳು ಪಾರಾಯಣ ಮಾಡತೊಡಗಿದವು. ಆದರೆ, ಸರ್ ಚೊಟ್ಟುರಾಮರು ಈಗ ಹೇಳುತ್ತಾರೆ "ತುಳಿದು ಬಿಡಿರಿ" ಎಂಬೀ ಶಬ್ದವನ್ನು ನಾನು ಉಪಯೋಗಿಸಿದ್ದಿಲ್ಲ, ಅದು ಪತ್ರಿಕಾ ವರದಿಗಾರರ ತಪ್ಪು ಸುದ್ದಿಯೆಂದು.

* * *

ಆದರೆ ಆ ಬಾತ್ಮೀದಾರರು ತನ್ನ ವರದಿಯ ಅಂಶವೇ ಸರಿಯಾಗಿದೆಯೆಂಬುದಾಗಿ ಪ್ರಮಾಣೀಕರಿಸುತ್ತಾರೆ. "ಆ ದಿನದ ಸಭೆಯ ವರದಿ ಬರೆದ ದಾಖಲೆಗಳೆಲ್ಲವೂ ನನ್ನ ವಶದಲ್ಲಿವೆ, ಸರ್ ಚೊಟ್ಟುರಾಮರು ಹೇಳಿದ ಮುಖ್ಯ ಮುಖ್ಯ ಮಾತುಗಳನ್ನು ಅವರು ಭಾಷಣ ಮಾಡಿದ ಉರ್ದು ಭಾಷೆಯಲ್ಲಿಯೇ ನಾನು ಬರೆದುಕೊಂಡಿದ್ದೇನೆ. ಅದರಲ್ಲಿ ಅವರು 'ಲಾತ್ ಮಾರೋ ಕಾಂಗ್ರೆಸ್ ಔರ್ ಮುಸ್ಲಿ ಲೀಗ್ ಕೋ' ಎಂದು ಹೇಳಿದ ವಾಕ್ಯವಿದೆ ಎಂದು ವರದಿಗಾರರು ಹೇಳುತ್ತಾರೆ.

* * *

ಯಾರನ್ನು ನಂಬಬಹುದೆಂಬುದು ಸಾರ್ವಜನಿಕರಿಗೆ ಚೆನ್ನಾಗಿ ಗೊತ್ತು. ಸರ್ ಚೊಟ್ಟುರಾಮರು ಇಂತಹ ಉದ್ಗಾರದಿಂದ ಬಹಳ ಪ್ರಖ್ಯಾತಿಯನ್ನು ಪಡೆದರೆಂಬುದಂತೂ ಪ್ರಶಂಸನೀಯವಾಗಿದೆ.

ಭಾರತದ ರಾಜಕೀಯರಂಗವು ಸಮಸ್ಯಾಕೂಟವಾಗಿದೆ

ಕಾಂಗ್ರೆಸಿನ ಕಾರ್ಯನೀತಿಯಲ್ಲಿ ಬದಲಾವಣೆಯಿಲ್ಲ

ಮುಸ್ಲಿಂ ಲೀಗಿನ ಅಂತಃಕಲಹ!

ಆಣೆಯವರು ಆತ್ಮಸಮರ್ಥಕರು!

ಭಾರತದ ರಾಜಕಾರಣವು ಮುಂದೆ ಯಾವ ಗತಿಗೆ ಸಾಗುವುದೆಂಬ ವಿಷಯದಲ್ಲಿ ಈಗ ಸಂದೇಹಗಳಿರಗಳೇ ತಲೆಯೆತ್ತುತ್ತಿವೆ. ಸರ್ದಾರ ವಲ್ಲಭಭಾಯಿ ಪಟೇಲರು ಬಂಧಮುಕ್ತರಾಗಿ ಬಂದವರೇ ಒಂದು ಮಹತ್ವದ ಪ್ರಕಟಣೆ ಹೊರಡಿಸಿದರು. ಅದರಲ್ಲಿ ಸತ್ಯಾಗ್ರಹವು ಮುಂದುವರಿಯುವುದೆಂದೂ, ಕಾಂಗ್ರೆಸು ತನ್ನ ಕಾರ್ಯಕ್ರಮವನ್ನು ಈಗ ಬದಲಾಯಿಸುವ ಅವಶ್ಯಕತೆಯು ಬಂದಿಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ. ಮುಸ್ಲಿಂ ಲೀಗಿನ ಪರಿಸ್ಥಿತಿಯು ಈಗ ವಿಷಮದಲ್ಲಿದೆ. ವೈಸರಾಯ್ ಕೌನ್ಸಿಲಿನಲ್ಲಿ ಅಧಿಕಾರ ವಹಿಸಿದ ಬಗ್ಗೆ ಜಿನ್ನರು ಲೀಗಿನ ಕೆಲ ಸದಸ್ಯರ ಮೇಲೆ ಬಿಡುವ ಅಸ್ತ್ರಗಳ ತಾಗು ತಡೆಗಳು ನೋಡತಕ್ಕದ್ದಿದೆ. ವಿಸ್ತಾರಗೊಂಡ ವೈಸರಾಯ್ ಕೌನ್ಸಿಲು ತನ್ನ ಕಾರ್ಯ ಕಲಾಪಗಳನ್ನು ಕೈಗೊಳ್ಳಲಿದೆ. ಹೀಗೆ, ಭಾರತದ ರಾಜಕಾರಣ ರಂಗಸ್ಥಳವು ಒಂದು ಸಮಸ್ಯಾಕೂಟವಾಗಿ ಈಗ ಪರಿಣಮಿಸಿದೆ.

ಬದಲಾವಣೆಯಿಲ್ಲ

ಕಾಂಗ್ರೆಸು ಮುಂದಕ್ಕೆ ಏನು ಮಾಡಬೇಕೆಂಬುದಾಗಿ ಕೆಲವರ ಮನಸ್ಸಿನಲ್ಲಿ ಬಂದಿದ್ದ ಸಂದೇಹವನ್ನು ಸರ್ದಾರರ ಹೇಳಿಕೆ ಪರಿಹಾರಗೊಳಿಸಿದೆ. ಅವರು ವರ್ತಮಾನ ಪತ್ರಕರ್ತರ ಸಂದರ್ಶನದ ಮೂಲಕ ಇಡೀ ಜಗತ್ತಿಗೇ ಕಾಂಗ್ರೆಸಿನ ಕಾರ್ಯಕ್ರಮವನ್ನು ಸ್ಪಷ್ಟ ವಾಣಿಯಲ್ಲಿ ತಿಳಿಸಿದರು. ಕಾಂಗ್ರೆಸು ತನ್ನ ಬದಲಾವಣೆಯಿಲ್ಲದೆ ಮುಂದೊತ್ತುವುದೆಂದರು. ಕಾಂಗ್ರೆಸಿನ ಚಳವಳಿಯು ಉದ್ದೇಶಸಿದ್ಧಿಯ ಸಲುವಾಗಿ ಬಲಯುತವೆನಿಸಿ ಮುಂದುವರಿಸಲಾಗುವುದೆಂದು ಧೈರ್ಯ ಪೂರ್ವಕ ಸಾರಿದರು.

ಈ ವಿಷಯದಲ್ಲಿ ಸರ್ದಾರ ಪಟೇಲರು ಹೇಳಿಕೆಯಿತ್ತಿದ್ದರೂ ಇದು ಗಾಂಧಿಜಿಯವರ ಅಭಿಪ್ರಾಯಕ್ಕಿಂತ ಅಭಿನ್ನವಾದುದೆಂದೇ ಹೇಳಲು ಬರುವಂತಿದೆ. ಹಾಗಿಲ್ಲವಾದರೆ ಸರ್ದಾರರು ಯಾವ ಅಧಿಕಾರದಿಂದ, ಗಾಂಧಿಜಿಯವರ ಮುಂದಾಳುತನದಿಂದ ಮುಂದೊತ್ತುವ ಚಳವಳಿಯ ವಿಷಯ ಹೀಗೆ ಸ್ಪಷ್ಟ ಅಭಿಪ್ರಾಯ ಹೇಳುತ್ತಿದ್ದರು? ಗಾಂಧಿಜಿಯ ಸಮ್ಮತವಾಗಿರುವ ಮಾತನ್ನೇ ಹೀಗೆ ಸರ್ದಾರರು ಹೇಳಿಬಿಟ್ಟರೆಂದು ತಿಳಿಯುವುದು ಯಾರಿಗೂ ಪ್ರಯಾಸಕರವಾದ ಕೆಲಸವಾಗಿಲ್ಲ. ಶ್ರೀ ಸತ್ಯಮೂರ್ತಿಗಳಂಥವರು ಈಗ ಪರಿಸ್ಥಿತಿಯಲ್ಲಿ ಬದಲಾವಣೆಯಾಗಬೇಕೆಂದು ವಾದಿಸುವಾಗ ಅದು ಸಂಶಯ ನಿವಾರಿಸುವಂತಿದೆ.

ಹೀಗೆ ಕಾಂಗ್ರೆಸು ನಿಶ್ಚಯವಾದಿದ್ದರೆ ಸರಕಾರವಾದರೂ ತನ್ನ ಕಾರ್ಯಕ್ರಮ[illegible]

ದಲ್ಲಿ ಬದಲಾವಣೆ ಮಾಡುವಂತೆ ಕಂಡು ಬರುವುದಿಲ್ಲ. ರಾಜಕೀಯ ಕೈದಿಗಳನ್ನೆಲ್ಲರನ್ನು ಕೂಡಲೇ ಬಿಡುಗಡೆ ಮಾಡಲಾಗುವುದೆಂದು ಕೆಲವು ಕಡೆಗಳಲ್ಲಿ ಊಹನೆ ಹುಟ್ಟಿತ್ತಾದರೂ ಅದಕ್ಕೆ ಏನೂ ಆಧಾರವಿರುವುದಾಗಿ ತೋರುವುದಿಲ್ಲ. ಕಾಂಗ್ರೆಸು ಮತ್ತು ಸರಕಾರಗಳ ಮಧ್ಯೆ ಇರುವ ಸಂಬಂಧ ಮೊದಲಿನಂತೆಯೇ ಮುಂದೆಯೂ ಮುಂದುವರಿಯುವುದೆಂದು ಈಗಿನ ಪರಿಸ್ಥಿತಿಗಳಿಂದ ತಿಳಿದುಕೊಳ್ಳಲಾಗುತ್ತಿದೆ. ಸತ್ಯಾಗ್ರಹವು ದಿನದಿಂದ ದಿನಕ್ಕೆ ಬಹಳ ಸಮಾಧಾನಕರವಾಗಿ, ಸರಕಾರಕ್ಕೆ ಬಹಳ [illegible] ರೀತಿಯಲ್ಲಿಯೇ ಮುಂದೊತ್ತುವಂತೆ ಗಾಂಧಿಜಿಯವರು ಎಚ್ಚರವಹಿಸಿದರೆ ಸರಕಾರವು ಅವರ [illegible] ದ ಕಾರ್ಯಕ್ರಮದಲ್ಲಿ [illegible] ಮಾಡುವುದಿಲ್ಲ. ಸರಕಾರವು ಸತ್ಯಾಗ್ರಹಿಗಳನ್ನು ಸೆರೆಮನೆಗೆ ಸೇರಿಸುತ್ತಲೇ ಇದೆ; ಸತ್ಯಾಗ್ರಹವನ್ನು ಅದು ಒಂದು ನೀತಿಯಿಂದ ಸಹಿಸುತ್ತಲೂ, ಒಂದು ರೀತಿಯಿಂದ [illegible] ಇರುವಂತೆ ಕಾಣುತ್ತದೆ.

ಜಿನ್ನರ ಅಧಿಕಪ್ರಸಂಗ

ಜಿನ್ನರಿಗೆ ಮುಸ್ಲಿಂ ಲೀಗಿನಲ್ಲಿರುವ ಪ್ರಧಾನ ವ್ಯಕ್ತಿಯಾಗುವ [illegible] ತೋರುತ್ತದೆ. ಕಾಂಗ್ರೆಸು ತ್ರಿಪುರಿ ಅಧಿವೇಶನದ ಬಳಿಕ ಎದುರಿಸಬೇಕಾದ ಗಂಡಾಂತರಕ್ಕಿಂತ ಜಿನ್ನರು ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿ ಅಧಿವೇಶನದ ಬಳಿಕ [illegible]

ಹಾಗೂ ಇತರ ಕೆಲವರನ್ನು ತಾನು ಹೇಳಿದಂತೆ ತಲೆ ಬಾಗಿಸುವ ಜಿನ್ನರ ಹಟದಿಂದ ಬಹಳ ಅಧಿಕ ಪ್ರಸಂಗವೇ ಆದಂತೆ ತೋರುವುದು. ಜಿನ್ನರ ಮುಂದಾಳುತನವೇ ಇದರಿಂದ ತಲೆಕೆಳಗಾಗುವುದೇ ನೋಡತಕ್ಕದ್ದಿದೆ. ಪ್ರಕೃತ ಜಿನ್ನರ, ಮುಸ್ಲಿಂ ಲೀಗಿನ, ಅವರ ಅನುಯಾಯಿಗಳ ಹಾಗೂ ಇತರ ಮುಸ್ಲಿಂ ಮುಖಂಡರ ಪರಿಸ್ಥಿತಿಗಳೇನು ಎಂಬ ವಿಷಯದಲ್ಲಿ ಭವಿಷ್ಯವು ಸಂದೇಹಾಕುಲವಾಗಿಯೇ ಇದೆ. ಪಂಜಾಬಿನ ಮತ್ತು ಬಂಗಾಳದ ಪ್ರಧಾನ ಮಂತ್ರಿಗಳನ್ನು ರಾಷ್ಟ್ರೀಯ ರಕ್ಷಕ [illegible] ಮಿತಿಯಲ್ಲಿ ನೇಮಿಸಿದ್ದು, ಮುಸ್ಲಿಂ ಲೀಗಿನ ಪ್ರತಿನಿಧಿಗಳಾಗಿಯಲ್ಲ, ಪ್ರಾಂತಗಳ ಪ್ರಮುಖ ಮಂತ್ರಿಗಳೆಂಬ ನಿಮಿತ್ತದಿಂದ ಎಂಬ ವಿಷಯವನ್ನು ಜಿನ್ನರು ಅಲ್ಲಗಳೆದು ಬಿಟ್ಟಿದ್ದಾರೆ. ಜಿನ್ನರ ಪಾಕಿಸ್ತಾನ ಯೋಜನೆಗೆ ಬ್ರಿಟಿಷ್ ಸರಕಾರವು ಯಾವುದೇ ಭರವಸೆ ಕೊಡದಿರುವುದರಿಂದ ಜಿನ್ನರು ಮುಸ್ಲಿಂ [illegible] ದಲ್ಲಿ ಹೇಗೆ ತಕ್ಕೈಸಿಕೊಳ್ಳುವರು? ಅಲ್ಪಸಂಖ್ಯಾತ ಪಕ್ಷದೊಡನೆ ಸರಕಾರವು ಈ ಹಿಂದೆ ಆಡಿದಲ್ಲಿಯೂ ಹೀಗೆ ವೈಮನಸ್ಯವು ತೋರಿದ್ದು ಬಹಳ ವಿಶೇಷವಾಗಿ ನಮ್ಮ ಗಮನಕ್ಕೆ ಬರತಕ್ಕ ವಿಚಾರವಾಗಿದೆ.

ಆಣೆಯವರ ಆತ್ಮಸಮರ್ಥನೆ

ವೈಸರಾಯರ ವಿಸ್ತೃತ ಕೌನ್ಸಿಲು ಹೇಗೆಲ್ಲ ನಡೆಯಬೇಕಾಗಿರುವ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುವುದು. ಈ ಸಂದರ್ಭದಲ್ಲಿ ಆಣೆ ಮತ್ತು ಸರ್ಕಾರರು ಮಾಡುವ ಆತ್ಮಸಮರ್ಥನೆಯು ಬಹಳ ವಿಸ್ಮಯಗೊಳಿಸುವಂತಹುದಿದೆ. ಅದಕ್ಕೆ, ಇಂತಹ ಅಧಿಕಾರಗಳಿಗೆ, ಸ್ವಯೋಗ್ಯ ಮನುಷ್ಯರು, ತಮ್ಮ ಪಕ್ಷದವರು ಹಾಗೂ ಬಿಟ್ಟನಿಂದ ದೇಶವೇ ತಾವು ಅಧಿಕಾರ ವಹಿಸಿದ ವಿಷಯದಲ್ಲಿ ಅತೃಪ್ತಿ ಪ್ರಕಟಿಸುತ್ತಿರುವಾಗ ಅವರು ಯಾವುದಾದರೊಂದು ಸಮಾಧಾನಕರವಾದ ಆತ್ಮಸಮರ್ಥನೆ ಮಾಡದಿರಲು ಸಾಧ್ಯವಿಲ್ಲ. ಆದರೂ ಆಣೆಯವರು ಮಾಡಿದ ಆತ್ಮಸಮರ್ಥನೆಯು ಭಾರತೀಯರನ್ನು ಸಮಾಧಾನಪಡಿಸಿದ್ದು ಕಂಡುಬರುವುದಿಲ್ಲ. ಇಲ್ಲಿ ಆಣೆಯವರ ಆತ್ಮಸಮರ್ಥನೆಗಳೆಲ್ಲ ದಕ್ಕಿರಲೂ. ಅವರು ಮಾಡಿದ ಒಂದು ವಿವೇಕಶಾಲೀ ಕೆಲಸವೆಂದರೆ ಕಾಂಗ್ರೆಸಿನ ಪ್ರಾಥಮಿಕ ಸದಸ್ಯತ್ವಕ್ಕೆ, ಕಾಂಗ್ರೆಸ್ ನ್ಯಾಶನಲಿಸ್ಟ್ ಮತ್ತು ಹಿಂದೂ ಲೀಗ್ ಪಾರ್ಟಿ ಅಧ್ಯಕ್ಷತೆಗೆ ರಾಜಿನಾಮೆ ಕೊಟ್ಟದ್ದು. ಇವರೆಲ್ಲಾ ಎಷ್ಟೇ ದೊಡ್ಡ ಮನುಷ್ಯರಿರಲಿ, ಎಷ್ಟೇ ದೊಡ್ಡ ಅಧಿಕಾರ ಹೊಂದಲಿ ಇದರಿಂದಾಗಿ ಭಾರತದ ರಾಜಕೀಯ ಸಮಸ್ಯೆಯು ಒಂದಿಷ್ಟಾದರೂ ಪರಿಹಾರವಾದ ಸೂಚನೆಯು ನಮಗೆ ತೋರಿಬರುವುದಿಲ್ಲ.

ಸುಕ್ರ ಸಂಜೀವನ

ಭಾರತ ದೇಶದಿಂದ [illegible] ಗಳ [illegible] ಪ್ರತಿಯೊಬ್ಬ ಭಾರತೀಯನೂ [illegible] ತನ್ನ ಆತ್ಮಸಂಯಮವನ್ನು ಕಳೆದುಕೊಂಡಿದ್ದಾನೆ.

ಆದುದರಿಂದ ಬಳಲುವ ಸಂದಿಗ್ಧದಲ್ಲಿ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ಮಾಡಿಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ. ಸಿ. ಎಸ್. (ಅಮೇರಿಕ) ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ — ಷಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

ಗರ್ಭಿಣಿಯಾದ್ದಾಕೆ ಹೆತ್ತಳೇ?.. ಹೇಗೆ? ಮದುವೆಯಾಗುವ ಮೊದಲೇ ಹೆರುವದೆಂದರೆ?. ಮತ್ತೂ ಬದುಕುವದೆಂದರೆ? ಹಿಂದೆ ಕುಮಾರಿ ಕುಂತಿಯು ಹೆತ್ತು, ನದಿಗೆ ಒಗೆದಿದ್ದರೂ ಅದು ಸತ್ಯಕಾಲ ತಾನೆ? ಈ ಕಲಿಯುಗದಲ್ಲಿ ಇದೆಲ್ಲ ಮನೆಮಾತಾಗಿರುವುದರಿಂದಲೇ ಇನ್ನೂ ಯುದ್ಧವು ಮುಂದುವರಿಯುತ್ತಾ ಇರುವುದು! ಹಾಳು ಹಾಡ್ಡದ ಮಕ್ಕಳನ್ನು ಬದುಕಿಸಲಿಕ್ಕೆ ಹೋಗಿ, ತಂದೆಯು ಮಕ್ಕಳನ್ನೂ ನಾಶ ಮಾಡುವಂತೆ ಈ ಕಲಿಕಾಲಕ್ಕೆ ಬೆಂಬಲ ಸಿಕ್ಕಂತಾಗುತ್ತದೆ' ಎಂಬೀ ಗುಜುಗುಜು ಮಾತುಗಳು ಸುಳ್ಳು ನೆಪಕ್ಕಾಗಿ ಸತ್ಯನಾರಾಯಣ ಕಥೆ ಓದಿಸುವಲ್ಲೂ, ಲಗ್ನ-ಶ್ರಾದ್ಧಗಳ ಸುಖಪಂಗ್ತಿ ಸಂದರ್ಭಗಳಲ್ಲೂ, ನರೆತ ಹಿರಿಯರಲ್ಲಿ ವಿನಿಮಯವಾಗುತ್ತಿದ್ದುವು ಈ ಕಥೆಯು ನಡೆದು ಇಂದಿಗೆ ಸುಮಾರು ಕಾಲು ಶತಮಾನ ದಾಟಿದರೂ, ಇಂದೇಕೆ ಅದು ಒಗ್ಗರಣೆ ಪಲ್ಯದಂತೆ ಪಸರಿಸತೊಡಗಿತು?

❦

ಹೊಟ್ಟೂರೆಂಬುದು ಅಷ್ಟೊಂದು ಪ್ರಸಿದ್ಧವಲ್ಲವಾದರೂ, ಅಲ್ಲಿಯವರೆಲ್ಲಾ ಬಹಳ ಚಳವಳಗಾರರು ಅಲ್ಲಿ ತರುಣರದೊಂದು ಉತ್ಸಾಹೀ ಸಂಘ, ಅದರ ಚಳವಳಕ್ಕಾಗಿ ಕಳವಳಪಡುವ ಹಿರಿಯರದೊಂದು ಮಂಡಳಿಯೂ 'ಸಬ್‌ಮೆರಿನ್' ನಂತೆ ಪ್ರಭಾವ ಬೀರುತಿತ್ತು ವಿಮಾನ 'ಪೆರಂಕ್ಯೂಟ್'ಗಳ ಈ ಕಾಲದ ಕಲಿಯುಗದಲ್ಲಿ ತರುಣಸಂಘದ ಅಬ್ಬರದಪ್ರಚಾರವು, 'ಸಬ್‌ಮೆರಿನ್' ದಳವನ್ನು ಶ್ವಾಸ ಬಂದಾಗುವಂತೆ ಮಾಡುತ್ತಾ ಹೋಯಿತೆಂದರೆ ಆಶ್ಚರ್ಯವಲ್ಲ ಹೀಗಾಗಿ ಇಂದು ಹೊಟ್ಟೂರಲ್ಲಿ ಕರೆದಿದ್ದ ಬಾರಿ ಸಭೆಗೆ ಹಿರಿಕಿರಿಯರೆಲ್ಲ ಒಂದಾಗಿ ಆಗಮಿಸಿದ್ದು ಹೆಚ್ಚಲ್ಲಿ ಸಭಾಧ್ಯಕ್ಷರಾದ ಹೊರದೇಶದಿಂದ ಬಂದ ಮೋಹನ್‌ರಾವ್ ಗದ್ದುಗೆಯೇರುತ್ತಲೇ ಕರತಾಡನವಾಯಿತ 'ಇಂದಿನ ಹಿಂದುಸ್ತಾನ' ಎಂಬ ಕುರಿತು ಅಧ್ಯಕ್ಷರು ಭಾಷಣವೀಯುತ್ತಿದ್ದರು. ಅವರು ತನ್ನ ಪರಿಚಯವನ್ನು ಮೊದಲು ಅರೆತಾಸಿಗೆ ಮುಗಿಸಿ, ತಾನೂ ಇದೇ ಊರಿನವನೆಂದೂ, ಯಶೋದಾದೇವಿಯ ದತ್ತಪುತ್ರನೆಂದೂ ಹೇಳಿ, ಮುಂದರಿಸಿದ್ದರು ಅಧ್ಯಕ್ಷರ ತುಸು ಪರಿಚಯವಾಗುತ್ತಲೇ ಸಭೆಯ ಅರ್ಧಪಾಲು ಜನರಲ್ಲಿ ಗುಜುಗುಜು ಮಾತುಗಾರಂಭವಾಯಿತು. ಕೆಲವರೇನೋ ಭಾಷಣದ ಕಡೆಗೆ ಗಮನವಿತ್ತಿದ್ದರು. ಹೆಚ್ಚಿನವರು ತಂತಮ್ಮ ಸಂಶಯ ನಿವಾರಣೆಯ ತರ್ಕದಲ್ಲಿ ಮುಳುಗಿದ್ದರು. ಇಂದಿಯಾದ ನಮಗೆ ಇದೇನೂ ಹೊಸತಲ್ಲವಷ್ಟೆ. ನಮ್ಮ ಸಭಾಧರ್ಮವೇ ಹಾಗಾಗಿ ಹೋಗಿದೆ.

ಸಭೆಯೇನೋ ಚಲೋದಾಗಿ ಕೊನೆಗೊಂಡಿತು. ಸಭಾ ವಿಷಯದ ಕುರಿತು ಹೆಚ್ಚಿನವರಿಗೆ ಹೇಗೆ ತಿಳಿಯಬೇಕು? ಅದರೆ ಅವರ ಮನಸ್ಸಿಗೆ ಗೊಂದಲ ಕೂಡಾ ನಿವಾರಣೆಯಾಗಲಿಲ್ಲ. ತಮ್ಮ ಸಂಶಯವನ್ನು ಗಟ್ಟಿಯಾಗಿ ಕೇಳಿ ತಿಳಕೊಳ್ಳುವ

ವಾರದ ಕತೆ:

ಕಲಿಕಾಲದ ನಡೆ

[ಲೇಖಕ ಎಂ ಎಸ್. ಹೆಗ್ಡೆ 'ಪ್ರೇಮಾಯತನ', ತುಂಗಭದ್ರಾ]

ಧೈರ್ಯವಾದರೂ, ನಮ್ಮ ಪೂಜ್ಯ ಧರ್ಮರಾಯನ ಸಂತತಿಯವರಿಗೆ ಬರಲೂ ಇಲ್ಲ. ಇಂದಾ ಸಂದರ್ಭದಲ್ಲಿ ಅವರೆಲ್ಲ ಶುದ್ಧ ಮಹಾತ್ಮಾಜಿಯವರ ಅನುಯಾಯಿಗಳೇ ಆಗಿದ್ದರು ಹೌ, ತುಳಸೀ ದಳಗಳನ್ನು ಪ್ರತ್ಯೇಕವಾಗಿ ಕೊಯ್ಯಲು ಬಂದ ಪೂಜಾರಿಯು, ತೋಟಗಾರನ ಪ್ರಯೋಗಕ್ಷೇಮ, ಗೃಹಕೃತ್ಯಾದಿಗಳನ್ನ ಮೇಲ್ಮೇಲೆ ವಿಚಾರಿಸಿ, ಒಟ್ಟಿಗೆ ತುಂಬಿತೆಂದರೆ 'ಹೋಗುತ್ತೇನೆ' ಎನ್ನುವಷ್ಟರ ಉದಾರತೆಯೂ ಇಲ್ಲದೆ, ಜಾರಿ ಬಿದ್ದಂತೆ ಇಷದೂ ಸಭೆಗೆ ಬಂದರು, ತಾವೂ ಕೇಳದೆ ಇನ್ನೊಬ್ಬರಿಗೂ ಬಿಡದೆ ತಮ್ಮ ಪುರಾಣವನ್ನೇ ಕೊಚ್ಚುತ್ತಾ ಮನೆಯನ್ನು ಸೇರಿದರು. ರಾತ್ರಿ ನಿದ್ರೆಯಾಗಿ ಎದ್ದಾಗ ಅವರಾರಿಗೂ ಹಿಂದಿನ ಸಭೆಯು ನೆನಪಾಗಲಿ, ಸಂಶಯ ನಿವೃತ್ತಿಯ ಅಗತ್ಯವಾಗಲಿ ಇರಲೇ ಇಲ್ಲ. ಕೆಲವರಿಗಿದ್ದರೂ ಹೊತ್ತುಂಬದ ಉಸಾಬರಿಗೆ ತಮಗೇಕೆಂದು ಸುಮ್ಮಗಿರಬಹುದು ಅಂತೂ ಕಲಿಯುಗ ತಾನೇ?

❦

ಮೂಲ ಸಂಗತಿಯಾದರೂ ಹೀಗಿತ್ತು. ಹೊಟ್ಟೂರ ಆಢ್ಯ ಗೃಹಸ್ಥರಾದ ರಮೇಶರಾಯರಿಗೆ ಯಶೋದೆಯು ಏಕಮಾತ್ರ ಪುತ್ರಿ ಪುತ್ರನೂ ಪುತ್ರಿಯೂ ಆಕೆಯೇ ಎಂದು ಭಾವಿಸಿದ್ದ ರಾಯರು, ಅವಳನ್ನು ಪೂನಾದಲ್ಲಿ ಹೆಣ್ಣಿನ ವಿದ್ಯಾಭ್ಯಾಸಕ್ಕೆ ಕಳುಹಿದ್ದರು ಯಾರು ಏನೇ ಅಂದರೂ, ಅವರವರ ಬುದ್ಧಿಗೆ ಹಿಗ್ಗಿದ್ದನ್ನು ಮಾಡಲೂ, ಅದರಲ್ಲಿ ಕೀರ್ತಿಗಳಿಸಲೂ ಪ್ರಯತ್ನಿಸುವುದು ಪ್ರಕೃತಿ ಧರ್ಮ ತಾನೇ ಅದಕ್ಕೆ ಯಾವ ತಡೆಬಡೆಯಾಗಲಿ, ಕಷ್ಟನಿಷ್ಠುರವಾಗಲಿ ಎದುರಲ್ಲ. ಕಳ್ಳನಿಗಾದರೂ, ತಾನು ತನ್ನ ಕಳ್ಳತನದಿಂದ ಹೇರಳ ದುಡಿದು ಸಾರ್ವತ್ರಿಕ ಶ್ರೀಮಂತನ ನೆಲೆಗೆ ಬಂದ ಮೇಲೆ ಆ ಕೆಲಸವನ್ನು ಬಿಟ್ಟೇಬಿಡಬೇಕೆಂದು ತೋರುವುದೂ, ಜುಗಾರಿ, ಕುದುರೆ ರೇಸ್, ಕ್ರೋಸ್‌ವರ್ಡ್ ಸೊಲ್ಯೂಶನ್‌ಗಳ ವ್ಯವಸಾಯದವರೂ ಪ್ರಥಮ ಬಹುಮಾನ ಮತ್ತೆ ಹೇರಳ ಧನ ದೊರೆತೊಡನೆ ಅದನ್ನೆಲ್ಲ ಬಿಟ್ಟುಬಿಡಬೇಕೆಂದು ಎಣಿಸುವುದೂ, ಸ್ವಾಭಾವಿಕ ಹಣಗಾರನ ಹಿಂದಿನ ದುರ್ಗುಣಗಳು ಪರಾಕ್ರಮದ ಚಿಹ್ನೆಗಳಾಗಿ, ಕೀರ್ತಿಧ್ವಜಗಳಾಗಿ ನಿಲ್ಲುತ್ತವೆ, ಯಾವ ಕಲೆಯಲ್ಲಾದರೂ ಕೀರ್ತಿ ಬಂತೆಂದರೆ ಅದೇನೇ ಇದ್ದರೂ ಲೋಕಕ್ಕೆ ಸ್ವಭಾವವು ಪಸಂದು ತ್ತದೆ, ತರುಣ ರಕ್ತವು ಹಣಕ್ಕಿಂತ, ಕೀರ್ತಿ—ಹೆಸರಿಗೆ, ಹೆಚ್ಚಾಗಿ ಆತುರಪಡುತ್ತದೆ ಈ ಆತುರದ ಆವೇಶವು ಹಿರಿಯರ, ತನ್ನ ಆಗಿನ ಮಾರ್ಗದ, ಸ್ಥಿತಿಗತಿಯ ಕಡೆಗೆ ಲಕ್ಷ್ಯ ಹರಿಸುವುದೇ ಇಲ್ಲ. ಆ 'ಆವೇಶ'ವು ತನ್ನ ಶಕ್ತಿಯು ಲೋಕವನ್ನೇ ಜಿಂದಾಮಾಡುವಷ್ಟು ಅತಿಶಯವೂ ಸಾಧ್ಯವೂ ಉತ್ಪನ್ನವೆಂದು ಕನವರಿಸುತ್ತದೆ ಈ ವರೆಗೆ ಸಾಧ್ಯವಾಗದ್ದನ್ನು 'ಸಾಧ್ಯವಿದ' ಎಂದು ಪ್ರತ್ಯಕ್ಷ ತೋರಿಸಿ ಬಿಡುವ ಅದೊಂದು ಹುಚ್ಚಿನಿಂದ ಅದು ಮುಂದ ನುಗ್ಗುತ್ತ ಬಿಡುತ್ತದೆ. ಅದರ ಪರಿಣಾಮ, ಎಳೆ ತಪ್ಪಿದರೆ ನೆಲೆ ತಪ್ಪಿದಂತಾಗಿ ಬಿಡುತ್ತದೆ ಅಂತೆಯೇ ಅರಳುವ ಮೊಗ್ಗೆಯಂತೆ ಬೆಳೆಯುತ್ತಿದ್ದ ಯಶೋದೆಯ ಸ್ಥಿತಿಯೂ ಆಯಿತು. ಬಿ. ಎ. ಓದುತ್ತಿದ್ದಾಕೆಗೆ ಶಾಲಾ ಜೀವನವು ಬಂಧನದ ಮನೆಯಂತೆ ತೋರತೊಡಗಿತು. ಆಕೆಯ ಕ್ರಾಂತಿಮಯ ಮನದಲ್ಲಿ, ಮುಂದೆ ತಾನೇ ತಾನಾಗಿ ಬರುತ್ತಿದ್ದ ಚಲಚ್ಚಿತ್ರದ ಕಲ್ಪನೆಯಾಗತೊಡಗಿತು 'ಅದಕ್ಕೆ ಸೇರುತ್ತಲೇ ಹಾಗೆ ಆಗಬೇಕೆಂದೇನು? ಎಲ್ಲ ನಮ್ಮ ಕೈಯಲ್ಲಿದೆ. ಕಡಿವಾಣವಿಲ್ಲದ ಕುದುರೆಯಂತೆ ಮನಸ್ಸನ್ನು ಓಡಗೊಡಬಾರದು ಅದಿವಾನಾನಾದರೂ ಚಲಚ್ಚಿತ್ರ ಪ್ರಪಂಚದ ಅಪವಾದವನ್ನೇಕೆ ಕಳೆದು ಬಾಳಬಾರದು? ಆಗ ಎಲ್ಲರಿಗೂ ಕಣ್ಣಿಗೆ ಅಂಜನವಿಟ್ಟಂತಾದೀತಲ್ಲ? ಯಾರೇನೆಂದೂ ನನ್ನ ಮನಸ್ಸು ಇನ್ನೊಬ್ಬರ ಸ್ವಾಧೀನವಿಲ್ಲವಷ್ಟೆ? ಸಾಧಿಸಿಯೇ ತೀರಬೇಕು' ಎಂಬ ಯಶೋದೆಯ ಎಣಿಕೆಯು ಕಾರ್ಯರೂಪದಲ್ಲಿ ಬರುವ ದಿನವನ್ನೂ ಕಂಡುಬಿಟ್ಟಿತು ಕೋಲೆಜಿನ, ಮನೆಯ, ಬಂಧುಗಳ- ಘೋರ ತಡೆಯೂ ಅವಳ ನಿರ್ಧಾರ ಹಾಗೂ ನಿಶ್ಚಿತ ಮನದಮರು ಚಿಕಿಚಾಳಲಿಲ್ಲ ಸುರೂಪ, ತರುಣಿ, ವಿದ್ಯಾವತಿ, ಕೋಕಿಲ ಕಂಠದ ಆಕೆಯು 'ಡಿಮಾಂಡ್' ಮತ್ತು ಅನುಕೂಲತೆಗಳು ಹನುಮನ ಬಾಲದಂತೆ ಬೆಳೆಯುತ್ತ ಹೋದವು ಸ್ವಾಭಾವಿಕತೆಯಲಿ ಅವಳ ಪಾತ್ರವು ವಿಗಿಲಾಗಿತ್ತು. ಯುಕರನ್ನು ಸಾಕಷ್ಟು ದೊರೆಯಿತು

ಹೀಗಾಗಿ ಎರಡು ವರ್ಷ ದಾಟಿಲ್ಲ. ಆಕೆಯೊಂದು ದಿನ ರಾತ್ರಿ ತನ್ನ ಕಾರಿನಲ್ಲಿ ತನ್ನ ಹಳ್ಳಿ ಹೊಟ್ಟೂರಿಗೆ ಬಂದಳು ಮ್ಯ

[೧೩ನೆಯ ಪುಟವನ್ನು ನೋಡಿ]

Canara Industrial & Banking Syndicate Ltd.

(Incorporated in British India, Liability of Shareholders Limited)

STATEMENT OF AFFAIRS AS ON 30TH JUNE, 1941

LIABILITIES	Rs.	As	Ps	ASSETS	Rs	As	Ps
Paid-up Capital	5,76,246	0	0	Cash in hand & with Bankers at call	4,58,836	2	1
Reserve Funds	2,10,000	0	0	Investments on Govt. Securities	6,19,560	6	6
Deposits	26,61,363	5	11	on Shares of other Banks & Companies	99,929	6	0
Due to Bankers	2,01,030	12	0	Fully Secured Advances	14,04,254	8	10
Bills for Collection	2,70,628	14	0	Other advances, Bills discounted etc.	10,01,997	2	11
Sundries	4,05,760	2	10	Landed Properties etc., Office premises Safes, Furniture & fittings	2,34,943	7	6
				Bills for Collection (per contra)	2,70,628	14	0
				Sundries	2,34,893	2	11
Total Rs.	43,25,049	2	9	Total Rs.	43,25,049	2	9

"MUKUND NIVAS"
UDIPI
15th July, 1941.

T. M. A. PAI
Managing Director.

ಜಿಲ್ಲಾ ಸಮಾಚಾರಗಳು

ಮುನ್ಸಿಪಲ್ ಕೌನ್ಸಿಲ್

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯು ಹಿಂದಿನ 'ಕೋರಂ' ಇಲ್ಲದೆ ಮುಂದುವರಿದುದು, ಚೆಯರ್‌ಮಾನರಾದ ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಸಂಜೆ ೫ ಘಂಟೆಗೆ ಸೇರಿತು. ಕವಿ ರಾಗೋರರ ನಿಧನದ ದುಃಖ ಸೂಚನೆಯ ಬಗ್ಗೆ ಸಭೆ ಮುಂದರಿಸಲಾಯಿತು.

ಮಂಗಳೂರು ಮುನ್ಸಿಪಾಲಿಟಿ ವಿಸ್ತರಣದ ಯೋಜನೆಗೆ ವಿರುದ್ಧ ಚಳವಳ

ಕಂಕನಾಡಿ ಮತ್ತು ಜಪ್ಪಿನ ಮೊಗರು ಗ್ರಾಮಗಳ ನಿವಾಸಿಗಳ ಸಭೆಯೊಂದು ಕಳೆದ ೨೯ ತಾರೀಖಿನಲ್ಲು ಶ್ರೀ ಅಲೆಕ್ಸಿ ಎ ಪ್ಯಾಸರ ಅಧ್ಯಕ್ಷತೆಯಲ್ಲಿ ಕಂಕನಾಡಿಯಲ್ಲಿ ಜರಗಿತು.

ಕಳೆದ ತಾ ೩೧ರಲ್ಲು ಬಿಜೈ ಬೋರ್ಡು ಶಾಲೆಯಲ್ಲಿ ಕದ್ರಿ ಕೊಡಿಯಾಲ್‌ಬೈಲು ಮತ್ತು ದೇರೆಬೈಲು ಗ್ರಾಮಸ್ಥರ ಸಭೆಯು ಶ್ರೀ ಡಾ ಬಿ ವಿ ಮತಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ

ಆಶ್ರಮಕ್ಕೆ ಪ್ರೋತ್ಸಾಹ

ಶ್ರೀ ಕಾಪು ಮುದ್ದಣ್ಣ ಶೆಟ್ಟರವರು ಸ್ಥಳೀಯ ಶಬರಿ (ಹರಿಜನ) ಆಶ್ರಮಕ್ಕೆ ಹದಿನೆರಡು ಕಸಿ ಮಾವಿನ ಸಸಿಗಳನ್ನು ಪುಕ್ಕಟೆಯಾಗಿ ಕೊಟ್ಟು ಪ್ರೋತ್ಸಾಹಿಸಿದ್ದಾರೆ.

ಉಡುಪಿ

ಮುನ್ಸಿಪಲ್ ಮೀಟಿಂಗ್

ತಾ ೩೦ರಲ್ಲು ಸೇರಿ ಉಪಾಧ್ಯಕ್ಷರ ಚುನಾವಣೆಗಾಗಿ ಕರೆಯಲ್ಪಟ್ಟ ಮುನ್ಸಿಪಲ್ ಕೌನ್ಸಿಲಿನ ಸ್ಪೆಶಲ್ ಮೀಟಿಂಗ್‌ನಲ್ಲಿ ಮೀಟಿಂಗ್ ನೋಟೀಸ್ ಕೊಟ್ಟುದು ಸರಿಯಲ್ಲವೆಂದು ವೈಸ್ ಚೆಯರ್‌ಮೇನ್ ಚುನಾವಣೆ ನಡೆಯಲಿಲ್ಲ. ಶ್ರೀ. ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಈಗ ಹದ್ದಿಯಲ್ಲಿರುವಂತೆ ಮೂಲ್ಗೇಣಿ ಸ್ಥಳದ ಮೂಲದಾರರಿಂದ ಪ್ರೋಪರ್ಟಿ ಟೇಕ್ಸ್ ವಸೂಲುಮಾಡುವುದನ್ನು ಊರ್ಜಿತದಲ್ಲಿ ಡಬೇಕೆಂದೂ ನಿರ್ಣಯವಾಯಿತು.

೩೫೦ ಮಂದಿ ಜಿ ಬೋ. ಉಪಾಧ್ಯಾಯರು ನಿರುದ್ಯೋಗಿಗಳಾಗುವರೇ?

೩೩೩ ಬೋ ಎ ಶಾಲೆಗಳ ಮಂಜೂರಾತಿ ರದ್ದಿಯಾಗುವದಾಗಿ ಜಿಲ್ಲಾ ಬೋರ್ಡಿನವರು ೪ ವರ್ಷಗಳಿಗಿಂತ ಕಡಿಮೆ ಸರ್ವೀಸಿನ ೩೫೦ ಮಂದಿ ಉಪಾಧ್ಯಾಯರುಗಳ ಮೇಲೆ ಮೂರು ತಿಂಗಳ ನೋಟೀಸನ್ನು ಜಾರಿಮಾಡಿದ್ದಾರೆಂದು ತಿಳಿದು ಬಂದಿದೆ.

ನಿಯಮಗಳಿಗೆ ಸರಿಯಾಗಿ ಇಲ್ಲದ ೩೩೩ ಶಾಲೆಗಳ ಮಂಜೂರಾತಿಯನ್ನು ಏಕೆ ರದ್ದುಗೊಳಿಸಬಾರದೆಂದು ಜುಲೈ ತಿಂಗಳ ಅಂತ್ಯಕ್ಕೆ ಬೋರ್ಡಿನವರನ್ನು ಜಿಲ್ಲಾ ವಿದ್ಯಾಧಿಕಾರಿಗಳು ಪ್ರಶ್ನಿಸಿದ್ದರಂತೆ. ಜಿಲ್ಲೆಯ ೧೪೪ ಏಡೆಡ್ ಎಲಿಮೆಂಟರಿ ಶಾಲೆಗಳಿಗೂ ಇಂತಹ ಪ್ರಶ್ನೆಯನ್ನು ಹಾಕಲಾಗಿತ್ತಂತೆ. ಜಿಲ್ಲೆಯ ಎಲ್ಲಾ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರುಗಳ ಮತ್ತು ಜಿ ಬೋ ವಿದ್ಯಾಧಿಕಾರಿಗಳ ಸಭೆ ಜರಗಿ ಎಲಿಮೆಂಟರಿ ಎಜ್ಯುಕೇಶನ್ ಬಜೆಟಿನ ಕುರಿತು ಚರ್ಚಿಸಿದಾಗ, ಕೆಲವು ಹೆಚ್ಚು ವೆಚ್ಚದ ಶಾಲೆಗಳನ್ನು ತೆಗೆದುಹಾಕುವರೆ ಸಲಹೆಗಳು ಕೊಡಲ್ಪಟ್ಟುವೆಂದೂ, ಈ ಸಲಹೆಯಂತೆ ೬ ಹುಡುಗರ ಶಾಲೆಗಳೂ ೪ ಹುಡುಗಿಯರ ಶಾಲೆಗಳೂ ೬ ಹಾ ಎ ಶಾಲೆಗಳ ಮೇಲಿನ ಕ್ಲಾಸುಗಳೂ ತೆಗೆಯಲ್ಪಟ್ಟು, ಹಾ. ಎ. ಗ್ರೇಡಿನ ೧೩೫ ಮಂದಿ ಉಪಾಧ್ಯಾಯರುಗಳು ನಿರುದ್ಯೋಗಿಗಳಾಗುವರೆಂದೂ ತಿಳಿದು ಬಂದಿದೆ.

ಕಯ್ಯೂರ್ ಡಿಫೆನ್ಸ್ ಕಮಿಟಿ

ಕಾಸರಗೋಡಿನ ಕಯ್ಯೂರು ಗ್ರಾಮದಲ್ಲಿ ಪೋಲೀಸನೊಬ್ಬನನ್ನು ಕೊಂದ ಆರೋಪದ ಮೇಲೆ ೬೧ ಜನರ ಮೇಲೆ ಚಾರ್ಜುಶೀಟು ಹಾಕಲಾಗಿದೆ (ಅವರಲ್ಲಿ ಹಲವರು ಕಾಂಗ್ರೆಸ್ ಕೆಲಸಗಾರರೂ ಇರುವರು.) ಅವರ ವಿಚಾರಣೆಯು ಈಗ ನಡೆಯುತ್ತಿದೆ. ಈ ಗ್ರಾಮಸ್ಥರು ಆರ್ಥಿಕ ಸ್ಥಿತಿಯಲ್ಲಿ ಬಹು ಬಡವರಾಗಿರುವುದು ಮಾತ್ರವಲ್ಲದೆ ಇತ್ತೀಚೆಯ ನೆರೆಯಿಂದ ಅವರು ಉಭಯ ಹಾವಳಿಗೊಳಗಾಗಿ ಕಂಗಾಲಾಗಿರುವುದರಿಂದ ಅವರ ಡಿಫೆನ್ಸ್‌ಗಾಗಿ ಕಮಿಟಿಯೊಂದು ಶ್ರೀ ಯಂ. ಉಮೇಶರಾವ್, ವಕೀಲ. ಇವರ ಅಧ್ಯಕ್ಷತೆಯಿಂದ ರಚಿತವಾಗಿ ಮಹಾಜನರಿಂದ ಸಹಾಯ ಬಿನ್ನಹಕ್ಕಾಗಿ ಕರಪತ್ರವೊಂದು ಪ್ರಕಟಿಸಲಾಗಿದೆ.

ಶ್ರೀ. ವಿವೇಕಾನಂದ ಸಭೆ

ಕೆನರಾ ಹೈಸ್ಕೂಲ್ ಕೃಷ್ಣ ಮಂದಿರದಲ್ಲಿ ೭—೯—೧೯೪೧ ಪೂರ್ವಾಹ್ನ ಘಂಟೆ ಎಂಟರಿಂದ ೧೦ರ ವರೆಗೆ ಶ್ರೀ ನಾಬಾಜಿ ಶ್ರೀನಿವಾಸಾಚಾರ್ ಗೀತಾ ವಿಶಾರದ, ೧೪—೯—೧೯೪೧ ಶ್ರೀ ಗೋಕರ್ಣ ಮಾಧವಭಟ್ಟ ಗೀತಾ ವಿಶಾರದ, ೨೧—೯—೧೯೪೧ ಶ್ರೀ ಮೂಲ್ಕಿ ನರಸಿಂಹ ರಾವ್—ರಾಮಾವತಾರ ಮತ್ತು ಕೃಷ್ಣಾವತಾರಗಳ ತತ್ವಗಳು, ೨೮ ೯—೧೯೪೧ ಶ್ರೀ ಕಾರ್ಕಳ ವೆಂಕಟರಾವ್ ಶ್ರೀ ರಾಮಕೃಷ್ಣ ಪರಮ ಹಂಸರ ಚರಿತ್ರೆ ಮತ್ತು ವಚನಾಮೃತ, ವಿಷಯ ಭಾಷಣಮಾಡುವರು.

ಮಹಾತ್ಮರಿಗೆ ನೂಲಿನ ಕಾಣಿಕೆ

ಮಹಾತ್ಮಾಜಿಯವರ ಜಯಂತಿ ಸಂಬಂಧವಾಗಿ ಕರ್ನಾಟಕದ ನೆರೆಮನೆಯ ಸತ್ಯಾಗ್ರಹಿಗಳಿಂದ ಒಟ್ಟಿಗೆ ೯೩ಸಾವಿರ ಗ್ರಜ ನೂಲನ್ನು ಒಪ್ಪಿಸಲಾಗಿದ್ದು ಅ ಪೈಕಿ ದ ಕ ಜಿಲ್ಲೆಯಿಂದ ಶ್ರೀಗಳಾದ ಗೋವಿಂದಶೆಟ್ಟಿ, ಶೀನಶೆಟ್ಟಿ, ರಾಮಯ ರೈ ಮತ್ತು ಚಿಕ್ಕಯ ನಾಯ್ಕರು ತಲಾ ೫—೫ ಸಾವಿರ ಗಜ ನೂಲನ್ನು ಸಮರ್ಪಿಸಿರುವರೆಂದು ತಿಳಿದಿದೆ.

ಪ್ರೊಫೆಸರ್ ಯನ್. ಶೇಶಪ್ಪನವರಿಗೆ ಸತ್ಕಾರ ಕೂಟ

ಶ್ರೀ ಸೇಂಡೊ ಯನ್. ಶೇಶಪ್ಪನವರು ತನ್ನ ಹುಟ್ಟೂರಿಗೆ, ಮುಂಬಾಯಿಂದ ಬಂದವರಿಗೆ ಮಂಗ್ಳೂರಿನ "ದಿ ಶಿವಾಜಿ ಫಿಜಿಕಲ್ ಕಲ್ಚರ್ ಇನ್ಸ್‌ಟ್ಯೂಟಿನ" ಸದಸ್ಯರು ಸತ್ಕಾರ ಕೂಟವನ್ನು ಕಳೆದ ತಾ. ೩೧—೮—೪೧ನೇ ಆದಿತ್ಯವಾರ, ತಮ್ಮ ಶಾಲಾ ಪಾರಂಗಣದಲ್ಲಿ ಶ್ರೀ ಎಮ್. ಆರ್. ಭಟ್ಟರ ನೇತ್ರತ್ವದಲ್ಲಿ ಕೊಟ್ಟಿರುವರು.

ಡಾಕ್ಟರ್ ಮಿರಾಜ್ ಕಾರ್‌ರರು ಪ್ರೊ. ಶೇಷಪ್ಪನವರ ವಿಷಯವಾಗಿಯೂ ದೈಹಿಕಾರೋಗ್ಯದ ವಿಷಯವಾಗಿಯೂ ಮಾತನಾಡಿದರು.

ಶ್ರೀ. ಯು ಶ್ರೀನಿವಾಸ ಮಲ್ಯರ ಪ್ರಯಾಣ

ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಆಫೀಸ ಸೆಕ್ರೆಟರಿಗಳಾದ ಶ್ರೀ ಸಾದಿಕ್ ಅಲಿಯವರು ಕರ್ನಾಟಕಕ್ಕೆ ಬಂದಿದ್ದು, ಕರ್ನಾಟಕದ ಮುಖಂಡರ ಸಭೆಯನ್ನು ಧಾರವಾಡದಲ್ಲಿ ಕರೆದಿದ್ದರು ಅದಕ್ಕೆ ಶ್ರೀ ಯು.ಶ್ರೀನಿವಾಸ ಮಲ್ಯರು ಅಲ್ಲಿಗೆ ಹೋಗಿದ್ದರು.

ನಿಧನ

ಡಾ ಪಿ ರಾಮಚಂದ್ರ ರಾವ್ ಇವರು ಮದ್ರಾಸಿನಲ್ಲಿ, ತನ್ನ ೪೭ನೆಯ ವರ್ಷ ಪ್ರಾಯದಲ್ಲಿ ಟೈಫಾಯ್ಡ್ ರೋಗದಿಂದ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ದಕ್ಷಿಣ ಕನ್ನಡಿಗರು. ಇವ ಎಪಥೋಲಜಿ ಪ್ರೊಫೆಸರು. ಇವರು ಮದ್ರಾಸ್ ವಿಶ್ವವಿದ್ಯಾನಿಲಯದ ಮೆಡಿಸಿನ್ ಮತ್ತು ಸರ್ಜರಿ ಗ್ರೇಜುವೇಟರು ಮತ್ತು ಲಂಡನ್ ಯೂನಿವರ್ಸಿಟಿಯ ಡಾಕ್ಟರ್ ಓಫ್ ಫೆಥೋಲಜಿ ಡಿಗ್ರಿ ಪಡೆದವರು. ಬಹಳ ಉನ್ನತ ಕೀರ್ತಿ ಪಡೆದವರು ಉದಾರದಾನಿಗಳಾಗಿದ್ದರು.

ಡಿಸ್ಟ್ರಿಕ್ಟ್ ಬೋರ್ಡ್ ಸಭೆ

ದ ಕ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಕಳೆದ ಸೋಮವಾರ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕೂಡಿತು ೫ ನಿಮಿಷಗಳ ವರೆಗೆ ಪ್ರಾರಂಭದಲ್ಲಿ ಸಭಾಕಾರ್ಯ ಮುಂದರಿಸುವ ಸೂಚನೆಯಾಗಿ ಮೌನವಾಯಿತು. ಬೋರ್ಡಿನ ಪರ ಎಕ್ಸೈಜ್ ಕಮಿಟಿಗೆ ಶ್ರೀ ಎಫ್ ಸಿ ಅಲ್ಬುಕರ್ಕರ ಸದಸ್ಯತ್ವವನ್ನು ಊರ್ಜಿತಗೊಳಿಸಲಾಯಿತು. ಶ್ರೀ. ಎ ಮುಸಬ್ಬ ಇವರನ್ನು ಹೊಸ ಸದಸ್ಯರಾಗಿ ಸೇರಿಸಲಾಯಿತು. ಶ್ರೀ. ಬಿ ಸುಬ್ಬಣ್ಣ ಶೆಟ್ರ ಸದಸ್ಯತ್ವವನ್ನು ಊರ್ಜಿತಗೊಳಿಸಲಾಯಿತು. ಜಿಲ್ಲಾ ಬೋರ್ಡಿನ ೧೯೪೦—೪೧ನೇ ವಾರ್ಷಿಕ ಆಡಳಿತದ ವರದಿ ಹಾಗೂ ಲೆಕ್ಕಪತ್ರಗಳನ್ನು ಅದೇ ಅವಧಿಯ ಮೇಜರ್ ಪಂಚಾಯಿತಿಯ ಲೆಕ್ಕಪತ್ರದೊಂದಿಗೆ ಮಂಜೂರು ಮಾಡಲಾಯಿತು.

ಜಿಲ್ಲೆಯ ಛತ್ರ ವಿಶ್ರಾಂತಿ ಗೃಹಗಳು ವೆಚ್ಚಕ್ಕೆ ಮಾತ್ರ ಕಾರಣವಾಗಿವೆಯೆಂಬ ವಿಷಯ ಚರ್ಚೆಯಾಗಿ ಕಲೆಕ್ಟರರಿಗೆ ಬರೆದುಕೊಳ್ಳಬೇಕೆಂದಾಯಿತು. ಉಡುಪಿ ಬೋರ್ಡ್ ಹೈಸ್ಕೂಲನ್ನು ಅಲ್ಲಿಯ ಮುನ್ಸಿಪಾಲಿಟಿಗೆ ವಹಿಸಿಕೊಡಬೇಕೆಂಬ ಸರಕಾರದ ಅಪ್ಪಣೆಯಂತೆ, ಉಡುಪಿ ಮುನ್ಸಿಪಾಲಿಟಿಗೆ ಬರೆದುಕೊಳ್ಳಬೇಕೆಂದಾಯಿತು. ಬೋರ್ಡ್ ಎಲಿಮೆಂಟರಿ ಶಾಲೆಗಳಲ್ಲಿ ಕೆಲವು ಸರಕಾರದ ನಿಯಮಗಳನ್ನು ಪಾಲಿಸಿ ಅಭಿವೃದ್ಧಿ ತೋರಿಸಲು ಜಿಲ್ಲಾ ವಿದ್ಯಾಧಿಕಾರಿಗಳು ಕೊಟ್ಟ ಅವಧಿ ಹೆಚ್ಚಿಸುವರೆ ಬರೆಯಬೇಕೆಂದಾಯಿತು. ಬೋರ್ಡು ತನ್ನ ಖರ್ಚು ತಗ್ಗಿಸಲು ಯೋಚಿಸಿರುತ್ತದೆ.

ಕಾಸರಗೋಡು

ಸತ್ಯಾಗ್ರಹ

ತಾ ೩೬ರಲ್ಲಿ ಹೊಸದುರ್ಗ ತಾಲೂಕು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಪೀಟರ್ ನಾರೋಣಾ ಸಂಜೆಯರು ದ ಯನೂರ್ ಎಂಬಲ್ಲಿ ಯುದ್ಧ ವಿರುದ್ಧ ಘೋಷಣೆ ಸತ್ಯಾಗ್ರಹ ಮಾಡಿದರು. ಬಂಧಿತರಾಗಿಲ್ಲ.

ಹರಿಜನ ಸೇವಕ ಸಂಘ

ಕಾಸರಗೋಡು ತಾಲೂಕು ಮಂಗಲಪಾಡಿ ಗ್ರಾಮದ ಬೇಲ್ತೂರ್ ಶಾಲೆಯ ಹರಿಜನ ಮಕ್ಕಳಿಗೆ ಹರಿಜನ ಸೇವಾ ಸಂಘದ ವತಿಯಿಂದ ಮಧ್ಯಾಹ್ನದ ಊಟಕೊಡುವ ಆರಂಭವು ತಾ ೩೧ರಂದು ನಡೆಯಿತು. ಸಾವಿರನ್ನ ೬೦ ಮಕ್ಕಳಿಗೆ ಶಿರಿಯಾ ಪಟೇಲ್ ಶ್ರೀ ಕುಞ್ಞಾದು ಮಹಾಬಲ ಶೆಟ್ರ ಲೆಕ್ಕಕ್ಕೆ ಊಟವನ್ನು ಕೊಡಲಾಯ್ತು. ಆ ಮೇಲೆ ಶ್ರೀ ಎ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಸಭೆಯು ಜರಗಿತು. ಶ್ರೀಯುತರುಗಳಾದ ನಾರಾಯಣ ಕಿಲ್ಲೆ, ದಡ್ಡಂಗಡಿ ಚಿಕ್ಕಪ್ಪ ಶೆಟ್ಟಿ, ಶ್ರೀ ಬಾಬು, ಯಂ ಲಕ್ಷ್ಮಣ ಶೆಣೈ, ಬಿ ಜಗನ್ನಾಥ ರೈ ಮತ್ತು ಕೃಷ್ಣ ಮೊದಲಾದವರು ಭಾಷಣವಿತ್ತರು.

ತಾ ೩೫ ಮತ್ತು ೩೬ನೇ ದಿನಗಳಲ್ಲಿ ಶ್ರೀಯುತರುಗಳಾದ ನಾರಾಯಣ ಕಿಲ್ಲೆಯವರೂ ಜಗನ್ನಾಥ ರೈಗಳೂ ಇದೇ ಗ್ರಾಮದಲ್ಲಿ ಸಂಚರಿಸಿ ಹಣಸಂಗ್ರಹದ ಕೆಲಸಮಾಡಿರುವರು.

ಪಂಜ ಮಕ್ಕಳ ಹಬ್ಬ

ಸ್ಥಳೀಯ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೧ರಂದು ಮಕ್ಕಳ ತಿಂಗಳ ಹಬ್ಬವು ಶ್ರೀ ಕೆ ಮಹಾಲಿಂಗ ಶರ್ಮ, ಸಾಹಿತ್ಯ ಶಿರೋಮಣಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳಿಂದ ಚಟುವಟಿಕೆಯು ತೋರಿಸಲ್ಪಟ್ಟಿತು.

ಮಹಾಜನಫಂಡ್ ರಿಲೀಫ್ ಕಮಿಟಿಗೆ ಧನಸಹಾಯ

ಬಾಸೆಲ್ ಮಿಶನ್ ಬಲ್ಮಠ, ಜಪ್ಪು, ಬೋಕ್ಕಪಟ್ಣ ಈ ಮೂರು ಇಗರ್ಜಿಗಳಿಂದ, ರೂ ೨೫—೧—೦ ಕೊಡ್ಲಮೊಗ್ರು ಗ್ರಾಮದ ಕೆಲ ಗೃಹಸ್ಥರಿಂದ, ರೂ ೫—೧—೦

ನೆರೆಯಿಂದ ನೊಂದವರಿಗೆ ಕೆಲಸ

ಹಿಂದೆ ನಿಶ್ಚಯಿಸಿದಂತೆ ದ ಕ ಜಿಲ್ಲೆಯಲ್ಲಿ ನೆರೆಯಿಂದ ನೊಂದವರಿಗೆ ಕೆಲಸಕೊಟ್ಟು ಸಹಾಯ ಮಾಡುವ ಸಲುವಾಗಿ ಮಹಾಜನಫಂಡ್ ರಿಲೀಫ್ ಕಮಿಟಿಯವರು, ಗುರುಪುರ, ನೀಲೇಶ್ವರ, ಕಂಬಳ ಕೇಂದ್ರಗಳಲ್ಲಿ ಮಾರ್ಗ, ಕಾಲುವಾರಿಗಳನ್ನು ಮಾಡಿಸುವ ಕಾರ್ಯಕ್ರಮಗಳನ್ನು ಆರಂಭಿಸಿದ್ದಾರೆ.

ರಾಗೂರ್ ನಿಧಿ

(ಮುಂದುವರಿದುದು)

ಡಾ ಸಿ ಪಿ. ಕಾಮತ್ ರೂ. ೧, ಶ್ರೀ ಕಸ್ತೂರಿ ಪುಂಡಲೀಕ ಪೈ ರೂ. ೧, ಶ್ರೀ ಉಳ್ಳಾಲ ಗೋಪಾಲಕೃಷ್ಣನಾಯಕ ರೂ ೧, ಶ್ರೀ ಪಿ ಆರ್. ಆರ್ ಪೂಂಜ ರೂ. ೧, ಶ್ರೀ ಡಿ ಪುಟ್ಟಸ್ವಾಮಿ ರೂ ೧, ಶ್ರೀ ಪಿ. ಪಾಂಡುರಂಗ ಭಂಡಾರಿ ರೂ ೧, ಶ್ರೀ ಯಂ. ರಾಘುವೇಂದ್ರ ಲಿಂಗ ಪೈ ರೂ. ೧.

(ಮುಂದುವರಿಯುವುದು)

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಬಿಲ್ಲವರ ಎಸೋಸಿಯೇಶನಿನ ನೇತೃತ್ವದಲ್ಲಿ ಒಂದು ಧರ್ಮಾರ್ಥ ವಾಚನಾಲಯ ಮತ್ತು ಗ್ರಂಥ ಸಂಗ್ರಹಾಲಯವು ಆಗೋಸ್ತು ತಿಂಗಳ ತಾ. ೨೪ರಂದು ಮುಂಬಾಯಿ ಕೋಟೆಯೊಳಗಣ ರಘುನಾಥ ದಾದಾಜಿ ರಸ್ತೆಯ ೧೭ನೇ ನಂಬರದ ಕಟ್ಟಡದ ನಾಲ್ಕನೆಯ ಮಾಳಿಗೆಯ ಸದನದಲ್ಲಿ ಶೇಠ್ ಮಾಧವಲಾಲ ಯಂ. ಭಟ್ ಜೆ. ಪಿ. ಇವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.



ಯಾವುದೇ ಬಂದರೂ ಇದು ಸಿದ್ಧವಿರಲಿ!

ಚರ್ಮರೋಗಕ್ಕೆ ಜ್ಯಾಂಬಕ್

ಅಖಿಲ ಜಗತ್ತಿನಲ್ಲಿ ಯೇಪ್ರಸಿದ್ಧವಾದುದು

ಪ್ರತಿಯೊಂದು ಮನೆಯಲ್ಲಿಯೂ ಜ್ಯಾಂಬಕು ಅವಶ್ಯವಾಗಿ ಇರಲೇಬೇಕು. ಈ ವನೌಷಧಿಗಳಿಂದ ಮಾಡಿದ ಲೇಪವು ಚರ್ಮರೋಗಗಳಿಗೆ ಬಹಳ ಗುಣಕಾರಿಯಾದ ಔಷಧ ಇದರಿಂದ ನೋವು ಕಡಿಮೆಯಾಗುತ್ತದೆ, ಬಾತುಕೋದುದು ಕಡಿಮೆಯಾಗುತ್ತದೆ, ಮಂತ್ರದಂತೆ ಇದು ಅದ್ಭುತ ಗುಣಕೊಡುತ್ತದೆ ಜ್ಯಾಂಬಕನ್ನು ಡಾಕ್ಟರರೂ ನರ್ಸುಗಳೂ ಎಲ್ಲಾ ಕಡೆಗಳಲ್ಲಿಯೂ ಉಪಯೋಗಿಸುತ್ತಾರೆ. ಕಡಿತಕ್ಕೆ, ಗಾಯಕ್ಕೆ, ಸುಟ್ಟದಕ್ಕೆ, ಕಾಲುನೋವಿಗೆ, ತುರಿಕಜ್ಜಿ ವಿಷಗಾಯ ಮೊದಲಾದವುಗಳಿಗೆಲ್ಲಾ ಇಂದೇ ಒಂದು ಪೆಟ್ಟಿಗೆ ಜ್ಯಾಂಬಕ್ ಕೊಂಡುಕೊಳ್ಳಿರಿ. ಎಲ್ಲಾ ಮದ್ದಿನ ವ್ಯಾಪಾರಿಗಳಲ್ಲಿಯೂ ಜ್ಯಾಂಬಕನ್ನು ರೂ. 1 ಮತ್ತು ರೂ 2-4-0ರಂತೆ ಮಾರುತ್ತಾರೆ.

ಏಜೆಂಟರು: ಮೆಸರ್ಸ್ ದಾಧಾ ಮತ್ತು ಕಂ., ಪಿ. ಟಿ. ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಟರ್ಕಿಯ ಮೇಲೆ ಜರ್ಮನಿ ಧಾಳಿ ಮಾಡುವುದೆ?

ಅಮೇರಿಕನರಿಗೆ ರೂಸ್‌ವೆಲ್ಟರ ಎಚ್ಚರಿಕೆ

ಹಿಟ್ಲರ್ ಶಕ್ತಿಯನ್ನು ನಿರ್ಮೂಲಿಸುವ ನಿರ್ಧಾರ

ಟರ್ಕಿ ಗಡಿನಾಡಿನಲ್ಲಿ ಜರ್ಮನ್ ಸೈನ್ಯ ಸಂಗ್ರಹವಾಗುತ್ತಿರುವುದೆಂದೂ, ಟರ್ಕಿ ಮೇಲೆ ಜರ್ಮನ್ ಧಾಳಿಯಾಗುವುದೆಂದೂ ಸುದ್ದಿಯಿದೆ. ಅಮೇರಿಕದ ಪ್ರೆಸಿಡೆಂಟರು ಭಾಷಣವೊಂದರಲ್ಲಿ ಹಿಟ್ಲರ್ ಶಾಹಿಯನ್ನು ನಿರ್ಮೂಲ ಮಾಡುವ ನಿರ್ಧಾರ ಸಾರಿದರು. ರಶ್ಯದಲ್ಲಿ ಜರ್ಮನರು ಸಾಕಷ್ಟು ಮುಂದುವರಿದಿದ್ದರೂ ಲೆನಿನ್‌ಗ್ರಾಡ್ ಹಿಡಿವುದಾಗಲಿಲ್ಲ. ಉತ್ತರ ಆಫ್ರಿಕದಲ್ಲಿಯೂ ಜರ್ಮನರ ಚಟುವಟಿಕೆಯು ನಡೆದಿರುವುದಾಗಿ ತಿಳಿಯುತ್ತದೆ.

ನೀಪರ್ ನದಿಯನ್ನು ದಾಟಲು ಪ್ರಯತ್ನ

ಲೆನಿನ್‌ಗ್ರಾಡಿನ ಸುತ್ತಲೂ ಘೋರ ಕಾಳಗವಾಗುತ್ತಿದೆ. ಗೋಮೆಲ್ ರಣಭೂಮಿಯಲ್ಲಿ ಭಾರೀ ಮಳೆ ಬಂದು ಜರ್ಮನರ ಮುನ್ನಡೆ ನಿಂತಿದೆ. ಒಡೆಸ್ಸಾದ ಹತ್ತಿರ ಇನ್ನೂ ಕಾಳಗವಿದೆ. ನೀಪರ್ ನದಿಯ ಪ್ರದೇಶದಲ್ಲಿ ಜರ್ಮನರು ಬಹುದೂರ ನುಗ್ಗಿರುವರು. ಯುಕ್ರೇನ್ ಭಾಗದಲ್ಲಿಯೂ ಬಹು ದೂರದ ವರೆಗೆ ನುಗ್ಗಿರುವರು. ನಿಕಲೀವ್ ಬಂದರವನ್ನು ಗೆದ್ದಿರುವರು. ನೀಪರ್ ನದಿಯನ್ನು ಜರ್ಮನರು ಇನ್ನೂ ದಾಟಿಲ್ಲವಂತೆ. ಮೋಸ್ಕೋದ ಕಡೆಗೆ ಜರ್ಮನರು ಮುನ್ನುಗ್ಗುವ ಸಿದ್ಧತೆಯಿದೆಂದು ಹಲವರ ತರ್ಕ. ಮೋಸ್ಕೋ ಲೆನಿನ್‌ಗ್ರಾಡ್ ರೈಲ್ವೆಯನ್ನು ಕತ್ತರಿಸುವ ಯೋಚನೆಯಿದೆಯಂತೆ.

ರಶ್ಯನರ ಗುಪ್ತ ಶಿಷ್ಟಮಂಡಲ

ಸುಮಾರು ೪೪ ಜನರು ರಶ್ಯನರಿಂದ ಕೂಡಿದ ಎರಡು ರಶ್ಯನ್ ನೌಕಾ ವಿಮಾನಗಳು ಸೈಬೇರಿಯ ಮತ್ತು ಬೆಹರಿಂಗ್ ಜಲಸಂಧಿಗಳನ್ನು ದಾಟಿಹೋಗಿವೆ. ಇವು ಮೋಸ್ಕೋದಿಂದ ವಾಶಿಂಗ್‌ಟನ್ನಿಗೆ ಹೊರಟಿವೆಯೆಂದು ಸುದ್ದಿ.

ಆಸ್ಟ್ರೇಲಿಯದ ಪರಿಸ್ಥಿತಿ ಕದಡಿದೆ

ಆಸ್ಟ್ರೇಲಿಯದ ಹೊಸ ಮುಖ್ಯ ಮಂತ್ರಿ ಪೇಡನ್ನನು ಬರುವ ಬಜೆಟ್ ಅಧಿವೇಶನದಲ್ಲಿ ತೊಂದರೆಯಿಲ್ಲದೆ ಪಾರಾಗಿ ಬರುವ ವರೆಗೆ ಪರಿಸ್ಥಿತಿ ಶಾಂತವಾಗುವುದಿಲ್ಲವಾದರೂ ಅದರಿಂದ ಯುದ್ಧಪ್ರಯತ್ನಕ್ಕೆ ಅಡ್ಡಿ ಬರುವುದಿಲ್ಲವೆಂದು ತಿಳಿದಿದೆ.

ಇಂಗ್ಲೆಂಡ್ ಮೇಲೆ ಜರ್ಮನ್ ವಿಮಾನ

ತಾ. ೩ರಂದು ಇಂಗ್ಲೆಂಡಿನ ಮೇಲೆ ಜರ್ಮನ್ ವಿಮಾನಗಳು ಹಾರಿ ಬಾಂಬು ಸುರಿಸಿದವೆಂದು ತಿಳಿದಿದೆ.

ರೂಸ್‌ವೆಲ್ಟರ ಭಾಷಣ

ಜಗತ್ತನ್ನು ಗಂಡಾಂತರಕ್ಕೀಡು ಮಾಡಿದ ಯುದ್ಧ ಮುಗಿದಿಲ್ಲ, ಮುಂದೆ ಪರಿಸ್ಥಿತಿ ಕೆಡುವುದೇ ಸಂಭವನೀಯ. ಅದಕ್ಕಾಗಿ ನಾವು ಹೆಚ್ಚು ಯುದ್ಧ ಸಾಮಗ್ರಿಗಳನ್ನು ಮಾಡಬೇಕು. ಎಂದು ರೂಸ್‌ವೆಲ್ಟರು ಹೇಳಿದರು.

ಲಾವಲರ ಮೇಲೆ ಗುಂಡು

ಪೂರ್ವ ರಣಭೂಮಿಗೆ ಫ್ರೆಂಚ್ ಸ್ವಯಂ ಸೇವಕರನ್ನು ಕಳುಹಿಸಿದ ಸಂಬಂಧ ಸಮಾರಂಭ ವರ್ಸೆಲಿಯಲ್ಲಿ ನಡೆಯುತ್ತಿದ್ದಾಗ ಯಾರೋ ಒಬ್ಬನು ಲಾವಲ್ ಡೀಟ್ ದೆಬ್ರಿಗ್ನ್ಯಾಸ್ ಈ ಫ್ರೆಂಚ್ ಮುಖಂಡರ ಮೇಲೆ ಗುಂಡು ಹಾರಿಸಿದನು. ಲಾವಲರನ್ನು ಆಸ್ಪತ್ರೆಗೊಯ್ಯಲಾಗಿದೆ.

ಪಶ್ಚಿಮ ಮರುಭೂಮಿಯಲ್ಲಿ ಪುನಃ ಕಾಳಗ?

ಜರ್ಮನರು ಪಶ್ಚಿಮ ಮರುಭೂಮಿಯಲ್ಲಿ ಕಳೆದ ಕೆಲವು ತಿಂಗಳಿಂದ ಜೋರಾಗಿ ಯುದ್ಧ ಸಿದ್ಧತೆ ಮಾಡುತ್ತಿರುವುದಾಗಿ ಸುದ್ದಿ. ಅಮೇರಿಕದಿಂದ ಅವ್ಯಾಹತವಾಗಿ ಸಾಮಗ್ರಿ ಬರುತ್ತಿರುವುದರಿಂದ ಬ್ರಿಟಿಷರು ಉತ್ತೇಜಿತರಾಗಿರುವರೆಂದೂ, ಆದರೆ ಜರ್ಮನರು ಸುವೇಜ್ ಕಾಲುವೆಯ ಮೇಲೆ ರಾತ್ರಿಯಲ್ಲಿ ಸತತ ಬಾಂಬು ಸುರಿಸಿ ಬ್ರಿಟಿಷರ ಯತ್ನವನ್ನು ಮುರಿಯಲು ಸಾಹಸಪಡುತ್ತಿರುವರೆಂದೂ ತಿಳಿದಿದೆ.

ನಿಮ್ಮ ದೇಹವು ಆರೋಗ್ಯದಿಂದಿದ್ದರೆ ನೀವು ತರುಣರಂತೆ ಕಾಣುವಿರಿ. ದೇಹದ ಒಳಭಾಗವನ್ನು ನೈರ್ಮಲ್ಯದಲ್ಲಿಡಿ—ಮಲಬದ್ಧತೆಯನ್ನುಂಟುಮಾಡುವ ಮಲೀನ ಪದಾರ್ಥ—ಅಜೀರ್ಣ, ತಲೆಸಿಡಿತ ಮುಂತಾದ ಬಾಧೆಗಳಿಂದ ನಿವೃತ್ತರಾಗಿರಿ. ಅಂತರಂಗ ನೈರ್ಮಲ್ಯವು ನಿಮ್ಮನ್ನು ತರುಣರಂತೆ ಮಾಡುವುದು. ಒಂದು ಗ್ಲಾಸು ನೊರೆಬರುವ ಗುಣವುಳ್ಳ ತಂಪಾದ ಏಂಡ್ರೂಸ್ ಲಿವರ್ ಸಾಲ್ಟ್ ದೇಹದ ಒಳಭಾಗವನ್ನು ನೈರ್ಮಲಗೊಳಿಸುವುದು. ಇದೇ ದೇಹವನ್ನು ಬಲಪಡಿಸುತ್ತದೆ.

ದೇಹದ ಒಳಶುದ್ಧಿಗೆ ಯಾವಾಗಲೂ ಏಂಡ್ರೂಸ್ ಲಿವರ್ ಸಾಲ್ಟನ್ನು ಸೇವಿಸಿರಿ

ANDREWS
LIVER SALT

ಆರೋಗ್ಯಪಾನೀಯ ಮತ್ತು ವಿರೋಚಕ ಪಾನೀಯ.
ತಂಪನ್ನೀಯುವುದು
ಶುದ್ಧಗೊಳಿಸುವುದು
ದಣಿವಾರಿಸುವುದು
ಬಲಪಡಿಸುವುದು

ಸಣ್ಣ ಸೈಜು 11 ಆಣೆ
ದೊಡ್ಡ ಸೈಜು
ರೂ. 1-4-0

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

GONO KILLER

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಶೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಅಹಿಂಸಾ ಸತ್ಯಾಗ್ರಹವು ಕಾಂಗ್ರೆಸಿನ ಗೌರವ ಹೆಚ್ಚಿಸಿತು

ಸರೋಜಿನಿ ನಾಯಿಡು ಹೇಳಿದರು.

ಹಕ್—ಸಾಹೇಬರು ಜಿನ್ನಾ ಸಾಹೇಬರಿಗೆ ತಲೆ ಬಾಗಿಸುವರೆ?

ವೈಸರಾಯ್ ಕೌನ್ಸಿಲ್ ಸದಸ್ಯರಿಗೆ ಸಪ್ರುಗಳ ಸೂಚನೆ

ಭಾರತದ ರಾಜಕಾರಣದಲ್ಲಿ ಹೆಚ್ಚಿನ ವಿಶೇಷಗಳಾಗಿಲ್ಲ. ವೈಸರಾಯ್ ವಿಸ್ತೃತ ಕಾರ್ಯಕಾರೀ ಮಂಡಳವು ಬೇಗನೇ ಕಾರ್ಯಗಳನ್ನು ಕೈಗೊಳ್ಳಲಿದೆ. ಸಪ್ರುಗಳು ಅದರ ಸದಸ್ಯರಿಗೆ ಒಂದು ಹಿತಸೂಚನೆಯಿತ್ತಿದ್ದಾರೆ. ಹಕ್ ಸಾಹೇಬರು ಜಿನ್ನಾ ಸಾಹೇಬರ ಶಿಸ್ತು ಅಸ್ತ್ರಕ್ಕೆ ತಲೆ ತಗ್ಗಿಸಿದ್ದು ಇದುವರೆಗೂ ತಿಳಿದು ಬಂದಿಲ್ಲ. ಸತ್ಯಾಗ್ರಹದ ಮುಂದಿನ ವಿಚಾರದಲ್ಲಿ ಕಾಂಗ್ರೆಸ್ ಮುಖಂಡರ ಅಭಿಪ್ರಾಯವನ್ನು ತಿಳಿದುಕೊಂಡು ಸಾಲಕ್ ಅಲಿಯವರು ಗಾಂಧಿಜಿಗೆ ಒಪ್ಪಿಸಲು ಪ್ರವಾಸ ಮಾಡುತ್ತಿದ್ದಾರೆ. ಸರೋಜಿನಿ ನಾಯಿಡು ಭಾಷಣವೊಂದರಲ್ಲಿ ಅಹಿಂಸಾ ಸತ್ಯಾಗ್ರಹವು ಕಾಂಗ್ರೆಸಿನ ಘನತೆ ಹೆಚ್ಚಿಸಿತೆಂದರು.

ಸರಕಾರಕ್ಕೆ ಸಪ್ರುಗಳ ಸೂಚನ ವೈಸರಾಯ್ ಕೌನ್ಸಿಲಿಗೆ ಸಲಹೆ

ಕಲ್ಕತ್ತದಲ್ಲಿ ಶ್ರೀ ಸರ್ಕಾರರಿಗೆ ಸತ್ಕಾರಕೂಟವೊಂದು ಏರ್ಪಡಿಸಿದುದರಲ್ಲಿ ಭಾಷಣಮಾಡುತ್ತಾ ಸರ್ ತೇಜ ಬಹದ್ದೂರ್ ಸಪ್ರುಗಳು ಸಾಮ್ರಾಜ್ಯನಾದದಲ್ಲಿ ತನಗೆ ವಿಶ್ವಾಸವಿಲ್ಲವೆಂದೂ ರಾಷ್ಟ್ರೀಯ ಸರಕಾರವನ್ನು ಕೆಲವರು ಕೇಳಿದ್ದರೂ ಅದು ಸಿಗದಾಗ ವೈಸರಾಯ್ ಕೌನ್ಸಿಲಿನಂತಹ ಕಾರ್ಯದಲ್ಲಿ ಸಹಕರಿಸಿ ಯುದ್ಧಪ್ರಯತ್ನಕ್ಕೆ ಸಹಾಯ ಮಾಡುವುದಲ್ಲದೆ, ಭಾರತದ ಜನತೆಗೆ ತಕ್ಕಂತೆ ವರ್ತಿಸುವುದೆಂದೂ, ಯುದ್ಧ ಮುಗಿದ ನಂತರ ಭಾರತ ಬ್ರಿಟನುಗಳ ಸಂಬಂಧ ವಾವುದು ಎಂಬ ಬಗ್ಗೆ ಬ್ರಿಟಿಷರು ಈಗಲೇ ಸಾರಬೇಕೆಂದೂ, ನಾವು ಗುಲಾಮರಾಗಿಯೇ ಮತ್ತೂ ಉಳಿಯಕೂಡದೆಂದೂ, ಬ್ರಿಟನು ಇತರ ರಾಷ್ಟ್ರಗಳ ಭವಿಷ್ಯದ ಕುರಿತು ಘೋಷಣೆ ಮಾಡುತ್ತಿರುವಾಗ ಭಾರತದ ವಿಷಯ ಯಾಕೆ ಘೋಷಣೆ ಮಾಡಬಾರದೆಂದೂ ಹೇಳಿದರು.

ಹಿಂದೂಸ್ತಾನಕ್ಕೆ ಹೋಗದಂತೆ ಮಿಸ್ ಲೆಸ್ಟರಳಿಗೆ ನಿರ್ಬಂಧ

ಶಾಂತಿ ಚಳವಳಿಗಳ ಬ್ರಿಟಿಷ್ ಸಂಘಟಕಳಾದ ಮಿಸ್ ಲೆಸ್ಟರ್ ಇವಳು ಕ್ರಿಸಿಡಾರ್ಡ್ ಬಿಟ್ಟು ಹೋಗದಂತೆ ಬ್ರಿಟಿಷ್ ಅಧಿಕಾರಿಗಳು ನಿರ್ಬಂಧಿಸಿರುವರು. ಇವಳು ದಕ್ಷಿಣ ಅಮೇರಿಕದಿಂದ ಹೊರಟು, ಚೀನ ಜಪಾನು ಹಿಂದುಸ್ತಾನಗಳಲ್ಲಿ ಭಾಷಣಪ್ರವಾಸ ಕೈಗೊಳ್ಳುವುದಕ್ಕಿದ್ದಳು. ಇವಳ ಚಟುವಟಿಕೆ ಬ್ರಿಟಿಷ್ ಹಿತಸಂಬಂಧಗಳಿಗೆ ವಿರುದ್ಧವಾದದೆಂದು ಹೀಗೆ ನಿರ್ಬಂಧ ಹಾಕಲಾಗಿರುವುದೆಂದು ತಿಳಿದಿದೆ.

ಇವಳು ಶಾಂತಿಪ್ರಿಯಳು. ಗಾಂಧಿಜಿ ಎರಡನೆಯ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋದಾಗ ಇವಳ ಮನೆಯಲ್ಲಿ ಉಳಕೊಂಡಿದ್ದರು.

ಗವರ್ನರರು ಬಂದಾಗ ಸತ್ಯಾಗ್ರಹ ನಿಲ್ಲಿಸಿದರು

ಧಾರವಾಡ ಹುಬ್ಬಳ್ಳಿಗಳಿಗೆ ಮುಂಬಯಿ ಗವರ್ನರರು ಬಂದಾಗ ಸತ್ಯಾಗ್ರಹ ಮಾಡಕೂಡದೆಂದು ಕಾಂಗ್ರೆಸ್ ಕಮಿಟಿಯವರು ಸೂಚನೆಯಿತ್ತಿರು.

ಬಲುಚಿಸ್ತಾನಕ್ಕೆ ಜರ್ಮನರು ಬಂದರೆ?

ವೇಷ ಬದಲಾಯಿಸಿಕೊಂಡು ಸುಮಾರು ೧೦ ಮಂದಿ ಜರ್ಮನರು ಬಲೂಚಿಸ್ತಾನಕ್ಕೆ ಬಂದಿರುವರೆಂದು ಸ್ಪಷ್ಟದ ಕಡೆಯಿಂದ ಸುದ್ದಿಯಿದೆ.

ಕೇಂದ್ರ ಎಸೆಂಬ್ಲಿ ಸಭೆಗೆ ಕಾಂಗ್ರೆಸ್ ಸದಸ್ಯರ ಹಾಜರಿ ಕೂಡದು

ಶ್ರೀ ಸತ್ಯಮೂರ್ತಿಗಳು ಪತ್ರಬರೆದು ಕೇಳಿದಕ್ಕೆ, ಕೇಂದ್ರ ಎಸೆಂಬ್ಲಿಯ ಅಕ್ಟೋಬರ್ ಅಧಿವೇಶನಕ್ಕೆ ಕಾಂಗ್ರೆಸ್ ಸದಸ್ಯರಿಗೆ ಹೋಗಲು ಗಾಂಧಿಜಿ ಅನುಮತಿ ಕೊಡುವುದಿಲ್ಲವೆಂದು ತಿಳಿಬಡಿ.

ನಾಗಪುರ ಜೈಲಿನಲ್ಲಿ ರಾಜಕೀಯ ಕೈದಿಗಳ ಅನ್ನತ್ಯಾಗ

ನಾಗಪುರ ರಾಜಕೀಯ ಕೈದಿಗಳು ಅನ್ನತ್ಯಾಗಮಾಡಿದ ವಿಷಯ ಗಾಂಧಿಜಿ ಅಸಮ್ಮತಪಟ್ಟಿರುವರು.

ಚರಕಾ ಸಂಘಕ್ಕೆ ಹಣ ಬೇಕಾಗಿದೆ

ಅಖಿಲ ಭಾರತ ಚರಕಾ ಸಂಘವು ಇದುವರೆಗೆ ೨೭೬೦೦ ಜನರಿಗೆ ಕೆಲಸ ಕೊಟ್ಟಿದೆ. ೩೫ ರೂಪಾಯಿ ಕೂಲಿ ಹಂಚಿದೆ ಆದರೆ ಅದರ ಫಂಡ ಸಾಲದಾಗಿದೆಯೆಂದು ಅಖಿಲ ಭಾರತ ಚರಕಾ ಸಂಘದ ಪ್ರಕಟಣೆಯಿದೆ.

ಜಿನ್ನರ ಹೇಳಿಕೆಗೆ ಸಿಕಂದರರ ಪ್ರತಿಭಟನೆ

ಜಿನ್ನರು ಇತ್ತ ಹೇಳಿಕೆಯೊಂದರಲ್ಲಿ ವೈಸರಾಯರು ಸಿಕಂದರರನ್ನು ವಂಚಿಸಿದರೆಂದು ಬರೆದಿರುವ ವಿಷಯವಾಗಿ, ಸಿಕಂದರರು ಪ್ರತಿಭಟಿಸಿ ಅಂಥ ಅಭಿಪ್ರಾಯಕ್ಕೆ ತಾನೆಂದೂ ಆಸ್ಪದಕೊಟ್ಟಿಲ್ಲವೆಂದು ಸ್ಪಷ್ಟೀಕರಿಸಿರುವರು.

ಗಂಟಲು ನೋವುಗಳನ್ನು ಗುಣಪಡಿಸಿಕೊಳ್ಳಿರಿ

ನಿಮ್ಮ ಗಂಟಲಿನಲ್ಲಿ ಸ್ವಲ್ಪವಾದರೂ ನೋವು ನಿಮಗೆ ಆಗುವುದಿದ್ದರೆ ವಿಷಹಾರೀ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಇದರಿಂದ ಗಂಟಲು ನೋವು ಖಂಡಿತ ಗುಣವಾಗುವುದು.

ಪೆಪ್ಸ ಬಾಯಲ್ಲಿ ಹಾಕಿದ ಕೂಡಲೇ ಕರಗಿ ಒಳ್ಳೆಯ ಔಷಧಿ ಸತ್ವವನ್ನು ಉಂಟುಮಾಡಿ ನಿಮ್ಮ ಶ್ವಾಸದೊಡನೆ ಅದನ್ನು ಶ್ವಾಸಕೋಶಕ್ಕೊಯ್ಯುವುದು. ಹೀಗೆ ಪೆಪ್ಸ ಗಂಟಲು ನೋವನ್ನು ಕಡಿಮೆಮಾಡುವುದು ವಾಯು ನಾಳವನ್ನು ಅದು ಶುದ್ಧಗೊಳಿಸಿ ಎದೆಗೂ ಶ್ವಾಸಕೋಶಕ್ಕೂ ಹಾನಿ ತರುವ ಅಣುಗಳನ್ನು ನಾಶಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರಕುವುದು

ಏಜೆಂಟರು ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಟಿ ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು



ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು.—

ಮೆಸರ್ಸ್ ವೆದುಲ್ಲಪಳ್ಳಿ ಬ್ರದರ್ಸ್,
289 ಎಸ್ಪ್ಲಾನೆಡ್—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

೨ ವರ್ಷಗಳ ಯುದ್ಧ ಸಮಾಚಾರ

೧೯೩೯ನೆಯ ಇಸವಿ ಸಪ್ಟೆಂಬರ ಒಂದರಂದು ಮುಂಜಾನೆ ಜರ್ಮನ್ ಸೈನ್ಯವು, ಯುದ್ಧ ಸಾರುವ ಪ್ರಕಟಣೆಯನ್ನು ಮಾಡದೆ, ಪೋಲೆಂಡನ್ನು ಪ್ರವೇಶಿಸಿತು. ಸಪ್ಟೆಂಬರ ಮೂರರಂದು, ಪೋಲೆಂಡಿಗೆ ತಾವು ಪ್ರತಿಜ್ಞಾಬದ್ಧರೆಂತೆ, ಬ್ರಿಟನು ಮತ್ತು ಫ್ರಾನ್ಸು ಸಾಮ್ರಾಜ್ಯಗಳು ಜರ್ಮನಿಯ ವಿರುದ್ಧ ಯುದ್ಧ ಸಾರಿದುವು. ಮತ್ತೆ ಕೆಲವೇ ದಿನಗಳಲ್ಲಿ ಬ್ರಿಟಿಷ್ ಮತ್ತು ಫ್ರಾನ್ಸಿನ ಸಾಮ್ರಾಜ್ಯಾಂತರ್ಗತ ರಾಜ್ಯಗಳೂ ಜರ್ಮನಿಯ ವೈರಿಗಳಾಗಿ ಸಾರಲ್ಪಟ್ಟವು. ಐರ್ಲೆಂಡು ತಟಸ್ಥವಾಗಿ ನಿಂತಿತು.

ಜರ್ಮನರು ಅತ್ಯುತ್ತಮ ಸೈನಿಕರಿಂದ, ಯಂತ್ರಶಕ್ತಿಗಳಿಂದ ಪೋಲೆಂಡನ್ನು ಪ್ರವೇಶಿಸಿದರು, ಪೋಲರು ಧೈರ್ಯದಿಂದ ಕೆಲ ದಿನಗಳ ವರೆಗೆ ಕಾದಾಟ ಮಾಡಿದರೂ ಕೊನೆಗೆ ವಾರ್ಸೋ ಪತನವಾಗಲು ಅದರೊಡನೆ ಪೋಲೆಂಡಿನ ಕತೆಯೂ ಮುಗಿಯಿತು.

* * *

ಇಷ್ಟರಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಯುದ್ಧಪ್ರಯತ್ನ ಪ್ರಬಲವಾಗುತ್ತಾ ಬಂತು. ಯುದ್ಧ ಸಾಮಗ್ರಿಗಳು ಹೆಚ್ಚಾಗಿ ಸಜ್ಜಿತವಾದವು. ಇಷ್ಟಾಗುತ್ತಿರಲು ಕೆಲದಿನಗಳ ಮಟ್ಟಿಗೆ ಒಂದು ಅನೈಸರ್ಗಿಕವಾದ ಶಾಂತತೆಯು ನೆಲಸಿದಂತಿತ್ತು. ಆದರೆ ಸಮುದ್ರದಲ್ಲಿ ತೋಟಿ ಕಾಳಗದ ಮುಖಾಂತರ, ಜರ್ಮನ್ ಸಮುದ್ರ ನಿರ್ಬಂಧದ ಮೂಲಕ ಒಂದು ರೀತಿಯಿಂದ ಯುದ್ಧ ನಡೆದೇ ಇತ್ತೆಂದು ಎಣಿಸಬಹುದು. ಇಷ್ಟರಲ್ಲಿ ರಷ್ಯವು ಪೋಲೆಂಡಿನಲ್ಲಿ ಜರ್ಮನರು ಆಕ್ರಮಿಸಿದ ರಾಜ್ಯದಲ್ಲಿ ತನ್ನ ಕಾಲನ್ನೂ ಊರಿಕೊಂಡಿತು.

* * *

ಈ ಕಾಲದಲ್ಲಿ ಸ್ಟ್ಯಾಲಿನನು ಎಸ್ಟೋನಿಯಾ, ಲಾಟ್ವಿಯಾ, ಲಿಥುವೇನಿಯಗಳೊಳಗೆ ಒಂದು ಪರಸ್ಪರ ಸಹಾಯಕ ಒಪ್ಪಂದಮಾಡಿಕೊಂಡನು. ಈ ಒಪ್ಪಂದವು, ಈ ರಾಷ್ಟ್ರಗಳ ಗಡಿಗಳಲ್ಲಿ ನೌಕಾ ಮತ್ತು ವೈಮಾನಿಕ ಕೇಂದ್ರಗಳನ್ನು ರಷ್ಯವು ಇಡುವುದರಲ್ಲಿ ಪರಿಣಮಿಸಿತು. ಕೊನೆಗೆಂದರೆ ಈ ರಾಷ್ಟ್ರಗಳು ರಶ್ಯಾಂತರ್ಗತವಾದುವೆನಿಸಬೇಕು; ಫಿನ್ಲೆಂಡಿನೊಳಗೆ ಸುಮಾರು ನಾಲ್ಕು ತಿಂಗಳು ಕಾಳಗ ಮಾಡಿ ರಷ್ಯವು ಕೊನೆಗೆ ಫಿನ್ಲೆಂಡನ್ನು ತನ್ನ ಕಾರ್ಯದರ್ಪವಾಗಿ ಅನುಮೋದಿಸುವಂತೆ ಮಾಡಿಕೊಂಡಿತು.

* * *

ವಸಂತಕಾಲ ಪ್ರಾರಂಭವಾದೊಡನೆ, ಯುದ್ಧದಲ್ಲಿ ಹೊಸತೊಂದು ಚಟುವಟಿಕೆ ಹುಟ್ಟಿತೆನಬೇಕು. ೧೯೪೦ನೆಯ ಇಸವಿ ಎಪ್ರಿಲ್ ಒಂಬತ್ತರಂದು ಜರ್ಮನಿಯು ತಟಸ್ಥವಾಗಿದ್ದ ಸಣ್ಣ ರಾಷ್ಟ್ರಗಳ ಮೇಲೆ ನಾರ್ವೆ ಡೆನ್ಮಾರ್ಕುಗಳ ಮೇಲೆ ಆಕ್ರಮಣಮಾಡಿತು. ಡೆನ್ಮಾರ್ಕು ಕೆಲವೇ ತಿಂಗಳುಗಳೊಳಗೆ ಶರಣುಗೊಳಿಸಲ್ಪಟ್ಟಿತು. ನಾರ್ವೆ ಕೆಲಕಾಲದ ವರೆಗೆ ಮಿತ್ರಪಕ್ಷದ ಸೈನ್ಯಸಹಾಯದಿಂದ ಕಾದಾಡಿ ಎರಡು ತಿಂಗಳ ಬಳಿಕ, ಬ್ರಿಟಿಷ್ ಸೈನ್ಯವು ಹಿಂದೆಗೆದ ಮತ್ತೆ, ಅದೂ ಜರ್ಮನಿಗೆ ಶರಣಾಯಿತು.

* * *

ಮೇ ಹತ್ತರಂದು ಪಶ್ಚಿಮದಲ್ಲಿ ಭಯಂಕರ ಧಾಳಿ ನಡೆಯಿತು. ಮುಂದಿನ ಮೂಹತ್ತೇಳು ದಿನಗಳಲ್ಲಿ, ತೀವ್ರ ಪ್ರತಿಭಟನೆ ನಡೆದರೂ, ನೆತರ್ಲೆಂಡು, ಬೆಲ್ಜಿಯಂ, ಫ್ರಾನ್ಸುಗಳು ಜರ್ಮನಿಯ ಪದಹತಿಗೆ ಬೀಳಬೇಕಾಯಿತು.

* * *

ಹೀಗೆ ಜೂನ್ ಮಧ್ಯದಲ್ಲಿ, ಗ್ರೇಟ್ ಬ್ರಿಟನ್ ಒಂದನ್ನುಳಿದು, ನೋರ್ತ್‌ಕೇಪಿನಿಂದ ಪಿರೆನೀಸ್ ವರೆಗಿನ ಯೂರೋಪ್ರಭುವೇ ಹಿಟ್ಲರನಾದನು. ಬ್ರಿಟನು ಏಕಾಂಗಿಯಾಗಿ ಹಿಟ್ಲರನ ಆಕ್ರಮಣವನ್ನು ಮತ್ತೆ ಎದುರಿಸಬೇಕಾಯಿತು. ಬಳಿಕ ಕೆಲಕಾಲಗಳ ತನಕ ಬ್ರಿಟನಿಗೆ ಬಾಂಬಿನ ತೀವ್ರ ದಾಳಿಯು ಆಗುತ್ತಾ ಇತ್ತು. ಬ್ರಿಟಿಷ್ ವೈಮಾನಿಕ ದಳವು ಬ್ರಿಟನನ್ನು ಉಳಿಸಲು ಅತ್ಯಂತ ಸಾಹಸದಿಂದ ಕಾದಾಡಬೇಕಾಯಿತು.

* * *

ಹೀಗೆ ಬ್ರಿಟನನ್ನು ಶರಣುಗೊಳಿಸುವ ಕಾರ್ಯದಲ್ಲಿ ಹಿಟ್ಲರನು ಜಯಶೀಲನಾಗದೆ ಇರಲು, ಆತನು ಮತ್ತೆ ಯುದ್ಧದ ಎರಡನೆಯ ವರ್ಷದಲ್ಲಿ ತನ್ನ ಸೈನ್ಯಶಕ್ತಿಯನ್ನು ಅತ್ಲಾಂತಿಕ ಮತ್ತು ಮೆಡಿಟರೇನಿಯನ್ ಕಡೆಗೆ ತಿರುಗಿಸಿದನು. ಬ್ರಿಟಿಷ್ ಸೈನಿಕರು ಇಟಲಿನಿಯನ್ ಸೈನಿಕರಿಗೆ ಬಲವಂತವಾದ ಹೊಡೆತವನ್ನು ಆ ಸಮಯದಲ್ಲಿತ್ತರು. ಅನೇಕ ಇಟಲಿಯನರು ಆಗ ಬ್ರಿಟಿಷ ಬಂಧಿಗಳಾಗಿ ಶರಣಾದರು. ಲಿಬೀಯಾ, ಅಬಿಸೀನಿಯ, ಎರಿಟ್ರಿಯಾ ಮತ್ತು ಬ್ರಿಟಿಷ್ ಸೋಮಾಲಿಲೇಂಡುಗಳಲ್ಲಿ ಇಟಲಿಯನರಿಗೆ ಬಹಳ ಅಪಜಯವೇ ಒದಗಿತು. ಪೂರ್ವ ಆಫ್ರಿಕನ್ ಸಾಮ್ರಾಜ್ಯದಿಂದ ಇಟಲಿಯ ದಲವು ಕಾಲ್ತೆಗೆಯಿತು. ಅದೇ ಸಮಯದಲ್ಲಿ ಗ್ರೀಕರು ಮಾಡಿದ ಕಾದಾಟದಿಂದ ಮುಸಲನಿಗೆ ಅತ್ಯಂತ ಮುಖಭಂಗವೊದಗಿತು. ಅಥೆನ್ಸನ್ನು ಗ್ರೀಕರು ಇಟಲಿಯ ಆಕ್ರಮಣದಿಂದ ಕಾಪಾಡಿಕೊಂಡರು.

* * *

ಜರ್ಮನಿಯು ಮತ್ತೆ ಚಳಿಗಾಲದಲ್ಲಿ ರುಮೇನಿಯಾ, ಹಂಗೇರಿಯ ಮತ್ತು ಬಲ್ಗೇರಿಯಗಳನ್ನು ಶರಣುಗೊಳಿಸಿತು. ಶಸ್ತ್ರಸಜ್ಜಿತ ಸೈನ್ಯದೊಡನೆ ಹಿಟ್ಲರನು ಕಪ್ಪು ಸಮುದ್ರದ ಕಡೆಗೆ ಮುಂದೊತ್ತಿದನು. ಅಲ್ಲಿಂದ ಆತನು ಯುಗಸ್ಲೇವಿಯ ಮತ್ತು ಗ್ರೀಸು ದೇಶಗಳಿಗೆ ಆಕ್ರಮಿಸಿ ಅವುಗಳನ್ನೂ ಬಗ್ಗುಬಡಿದನು. ಗ್ರೀಸನ್ನು ತನ್ನ ವಶಮಾಡಿ, ಕ್ರೀಟನ್ನು ಕೈಗೆ ತೆಗೆದುಕೊಂಡು, ಹಿಟ್ಲರನು, ಇರ್ರಾಕ್, ಸಿರಿಯಾ, ಇರಾನ್‌ಗಳಲ್ಲಿ ತನ್ನ ದೃಷ್ಟಿಯನ್ನು ಪಸರಿಸಿ ಹೀಗೆ ಹತ್ತಿರ ಪೂರ್ವದಲ್ಲಿ ತನ್ನ ಆಕ್ರಮಣಕ್ಕೆ ಈಗ ಮನಮಾಡಿದಂತೆತೋರಿದೆ. ಸಿರಿಯದಲ್ಲಿ ಬ್ರಿಟಿಷ ಮತ್ತು ಸ್ವತಂತ್ರ ಫ್ರೆಂಚ ಸೈನಿಕರು ಜೂನಿನಲ್ಲಿ ಜರ್ಮನಿಯನ್ನು ಎದುರಿಸಿ ಕಾದಾಡಿ ಜಯಶಾಲಿಗಳಾದರು.

* * *

ಕಳೆದ ಜೂನ್ ೨೨ರಂದು ಹಿಟ್ಲರನು ರಶ್ಯಕ್ಕೆ ಮುತ್ತಿಗೆ ಹಾಕಿದನು. ರಶ್ಯಕ್ಕೆ ಹೀಗೆ ಮಿಂಚಿನ ಆಕ್ರಮಣಮಾಡಿ ಅಲ್ಲಿಂದ ತನಗೆ ಬೇಕುಬೇಕಾದ ಎಣ್ಣೆ ಮತ್ತು ಆಹಾರ ಪದಾರ್ಥಗಳನ್ನು ಸಂಪಾದಿಸಿಕೊಳ್ಳಬಹುದೆಂದು ಆತನು ಬಗೆದಿದ್ದನು. ರಶ್ಯದಲ್ಲಿ ಹಿಟ್ಲರನ ಸೈನ್ಯವು ಸಾಕಷ್ಟು ಮುಂದೊತ್ತಿ ಹೋಗಿರುವುದೆಂಬುದು ನಿಜವಾಗಿದ್ದರೂ, ಅಲ್ಲಿ ಜರ್ಮನ್ ಸೈನ್ಯಕ್ಕೆ ಒದಗಿದ ನಷ್ಟವು ಅಪಾರವೂ ಅಗಣಿತವೂ ಆಗಿದೆಯೆಂಬುದನ್ನು ಯಾರೂ ಮರೆಯತಕ್ಕದಲ್ಲ.

* * *

ಹೀಗೆ ಪೂರ್ವದಲ್ಲಿ ಯುದ್ಧಗತಿಯು ಹೆಚ್ಚುತ್ತಿರುವಲ್ಲಿ, ಜಪಾನೂ ಜುಲಾಯಿ ೨೭ರಂದು ಇಂಡೋಚೀನವನ್ನು ಆಕ್ರಮಿಸುವ ಮೂಲಕ ಪೂರ್ವದಲ್ಲಿ ಸಾಮ್ರಾಜ್ಯ ವಿಸ್ತಾರದ ಮನಸ್ಸು ಮಾಡಿದಂತೆ ಅದರ ಚಟುವಟಿಕೆಗಳಿಂದ ತೋರಿಬರುತ್ತದೆ. ಶಾಂತಸಾಗರದಲ್ಲಿ ಜಪಾನಿನ ಚಲನವಲನದಿಂದ ಬ್ರಿಟನ್ ಅಮೆರಿಕಗಳು ಬಹು ಎಚ್ಚರಗೊಂಡಿವೆ. ಇಂಡೋಚೀನದ ಹಾಗೂ ರಶ್ಯದ ಗಡಿಗಳಲ್ಲಿ ಜಪಾನು, ಸೈನ್ಯಸಂಗ್ರಹ ಮಾಡುತ್ತಿರುವುದರಿಂದ, ಸಿಂಗಾಪೂರ್, ಇಂಡಿಯಾ, ಆಸ್ಟ್ರೇಲಿಯಗಳ ರಕ್ಷಣೆಯ ವಿಷಯ ಬ್ರಿಟನು ಬಹು ಜಾಗರೂಕವಾಗಿರುತ್ತದೆ

* * *

ಹೀಗೆ ಎರಡನೆಯ ವರ್ಷದ ಯುದ್ಧದ ಗತಿಯು ಪೂರ್ವದೇಶಕ್ಕೂ ಹರಡತೊಡಗಿದೆ. ಅಮೇರಿಕದಲ್ಲಿ ಕಳೆದ ೧೯೪೦ನೆಯ ಇಸವಿ ಒಕ್ಟೋಬರಿನಲ್ಲಿ ಆದ ಚುನಾವಣೆಯಲ್ಲಿ ಪ್ರೆಸಿಡೆಂಟರಾಗಿ ರೂಸ್ವೆಲ್ಟರೇ ಆರಿಸಲ್ಪಟ್ಟ ಮೇಲೆ, ಬ್ರಿಟನಿಗೆ ಅಮೇರಿಕದಿಂದ ಹೆಚ್ಚು ಹೆಚ್ಚಿನ ಸಹಾಯಗಳು ದೊರಕುತ್ತಿವೆ. ಹೆಚ್ಚಿನ ಸಾಲರಿಯಾಯತಿಗಳು ಒದಗುತ್ತವೆ. ಅಮೇರಿಕದ ಸಾಮಾನುಗಳು ಬ್ರಿಟನಿಗೆ ಸರಾಗವಾಗಿ ಬರುತ್ತಲಿವೆ.

NACET BLADES

ಮೂರು ಗೂಟದ ರೇಜರುಗಳಿಗೆ



ನೆಸೆಟು ಬ್ಲೇಡುಗಳು

ಮೂರು ಗೂಟದ ರೇಜರುಗಳಿಗೆ ನೆಸೆಟು ಬ್ಲೇಡುಗಳನ್ನು ಉಪಯೋಗಿಸಿ. ನೂತನತೆಯಲ್ಲಿ ಬರಿ ಪ್ರತಿ ಬ್ಲೇಡು ಅದರ ಕಡಿಮೆ ಬೆಲೆಗಿಂತ ಮಿಕ್ಕಿದ ನುಣುಪೂ ನಯವೂ ಉತ್ತಮವೂ ಆದ ಕ್ಷೌರವನ್ನುಂಟುಮಾಡುವುದು.

INS

Announcement

DONATIONS & CONTRIBUTIONS
Are received for credit of account
OF
The Mahajana Flood Relief Committee
Of South Kanara
At all our Branches free of all charges

ESTD. 1906. THE CANARA BANKING CORPORATION, LIMITED
(Incorporated in Br. India)

ತುಳಿತಕ್ಕೆ ಜನಾಂಗ ಸಿಗದಾಗ ಹಿಟ್ಲರನು ಕಣ್ಣೀರಿಡುವನು!

ಬಾಲ್ಯ ಜೀವನದ ನಿರಾಶೆಗೊಂಡು ಈಗ ಪ್ರತೀಕಾರ ಬುದ್ಧಿಯೆ?

ಪಶುಶಕ್ತಿಗೆ ಮಾನವನ ಆತ್ಮಶಕ್ತಿ ಶರಣೆನಲಾರದು!

"ಹಿಟ್ಲರನಿಗೆ ಪ್ರಭುತ್ವ ಬೇಕಾಗಿದೆ. ಪ್ರಭುತ್ವ ಒಂದು ಉದ್ದೇಶವುಳ್ಳದ್ದಲ್ಲ; ಪ್ರಭುತ್ವ ಪ್ರಭುತ್ವದ ಸಲುವಾಗಿಯೇ. —ಪ್ರಭುತ್ವ—ಹೆಚ್ಚು—ಪ್ರಭುತ್ವ—ಮೊದಲು; ತನ್ನ ಪಕ್ಷದ ಮೇಲೆ ಪ್ರಭುತ್ವ ನಡೆಸಿದ ಬಳಿಕ ರಾಷ್ಟ್ರದ ಮೇಲೆ ಪ್ರಭುತ್ವ ಮಾಡುವುದು; ಅನಂತರ ಯೂರೋಪಿನ ಪ್ರಭುತ್ವ ಹೊರದುವುದು; ಯೂರೋಪಿನ ಪ್ರಭುತ್ವಹೊಂದಿದ ಬಳಿಕ ಜಗತ್ತಿನ ಪ್ರಭುತ್ವ ಪಡೆಯುವುದು ಮುಂದೆ ಜಯಿಸಲು ಜಗತ್ತು ಉಳಿಯಲಿಲ್ಲವೆಂದು ಅಲೆಕ್ಸಾಂಡರನು ಅತ್ತುಬಿಟ್ಟಿದ್ದನು, ಹಿಟ್ಲರನು ಕಾಲ ಕೆಳಗೆ ಹಿಡಿದೊತ್ತಲು ಮುಂದೆ ಜನಾಂಗವಿಲ್ಲದೆ ಆಗುವಾಗ ಕಣ್ಣೀರು ಸುರಿಸುವನು" ಹೀಗೆಂದು ಡಾಕ್ಟರ್ ಪರ್ಸಿವಲ್ ಸ್ಪೀಯರವರು ಒಂದು ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಹಿಟ್ಲರನ ಗುಣಗಳನ್ನು ವಿವರಿಸುತ್ತಾ ಅಭಿಪ್ರಾಯಪಟ್ಟರು.

ಅವರು ಆ ಭಾಷಣದಲ್ಲಿ ಮತ್ತೆ ಹೀಗಂದಿರುವರು,

ಶಕ್ತಿಯ ಆರಾಧಕ

"ಹಿಟ್ಲರನು ಶಕ್ತಿಯಲ್ಲಿ ತುಂಬಾ ವಿಶ್ವಾಸವಿಟ್ಟಿದ್ದಾನೆ. ಶಕ್ತಿಯಿಂದ ಆತನು ಒಳಗಿನ ಶತ್ರುಗಳನ್ನು ಹಿಡಿತಕ್ಕೆ ತಂದಿದ್ದಾನೆ. ಅವರ ಸಲುವಾಗಿ 'ಕಾನ್ಸಂಟ್ರೇಶನ್ ಕೇಂಪ್'ಗಳನ್ನು ಮಾಡಿರುತ್ತಾನೆ ನಾಜೀಸೈನ್ಯವನ್ನು ಬಲಪಡಿಸಿರುತ್ತಾನೆ ಶಕ್ತಿಯಿಂದ್ಲ ಈತನು ಜಗತ್ತಿನ ಗಲ್ಲಬಹುದೆಂದು ಬಗೆದಿದ್ದಾನೆ, ಶಕ್ತಿಗೂಡಿಸಿ, ಸೈನ್ಯ ನೇರಿಸಿ ಆಕ್ರಮಣ ಮಾಡುತ್ತಾನೆ ಪಟ್ಟಣ ಪಟ್ಟಣಗಳನ್ನು ಸುಡುಬೆಸೆದು ಜನರನ್ನು ಅಂಜಿಸಿ ಶರಣುಗೊಳಿಸಿದ್ದಾನೆ ರಜಪೂತರೊಡನೆ ಅಕಬರನು ತೋರಿಸಿದ ಉದಾರತೆಯಂತಹ ಗುಣ ಹಿಟ್ಲರನಲ್ಲಿ ನಾವು ಕಾಣಲಾರೆವು. ಮಾನವನ ಮೇಲ್ದಯೆ ತೋರಿಸುವುದು ದೌರ್ಬಲ್ಯವೆಂದು ಹಿಟ್ಲರನು ಬಗೆದಿರುವನು. ಪ್ರತಿಯೊಂದನ್ನೂ ಶಕ್ತಿಯಿಂದಲೇ ಪಡೆಯಲಾಗುತ್ತದೆಯೆಂದು ಆತನು ನಂಬಿರುವನು. ಹಾಗಾಗಿ ಆತನೆದುರು "ಕಡೆತನಕ" ಹೋರಾಡಿದ್ದ ರಾಷ್ಟ್ರವಾಗಲಿ, ಅರ್ಧದಿಂದ ಶರಣಾದುದಾಗಲಿ, ಮೊದಲೇ ಬಿಟ್ಟುಕೊಟ್ಟುದಾಗಲಿ ಎಲ್ಲವುಗಳ ಅವಸ್ಥೆಯೂ ಒಂದೇ. ಹಿಟ್ಲರನು ಒಬ್ಬ ವಿಚಿತ್ರ ತರದ ಮನುಷ್ಯನಾಗಿದ್ದಾನೆ.

ಬಾಲ್ಯದ ನಿರಾಶೆಯ ಫಲ?

ಹಿಟ್ಲರನು ಹುಡುಗನಾಗಿದ್ದಾಗಲೇ ಒಬ್ಬ ಆಶಾವಾದಿಯಲ್ಲ. ಸಾಹಸದ ಸಲುವಾಗಿ ಆತನು ಹೋರಾಡುವವನಲ್ಲ. ದೇಶ ಪ್ರೇಮದ ಸಲುವಾಗಿ ಆತನ ಕಾದಾಟವಲ್ಲ. ಪ್ರಸಿದ್ಧಿ ಪಡೆಯಬೇಕೆಂದು ಈ ಕಾಳಗವಲ್ಲ. 'ನನ್ನ ದೇಶ ಹೆಂಬಲು ಕದು ಸರಿಯಾಗಿರಲಿ ತಪ್ಪಾಗಿರಲಿ' ಇದು ಆತನ ಗುರಿಯಲ್ಲ. ಬಾಲಕನಾಗಿದ್ದಾಗ ಆತನು ಜೀವನದಲ್ಲಿ ಕಂಗಾಲಾಗಿದ್ದ, ನಿರಾಶನಾಗಿದ್ದ. ಅದರ ಪ್ರತೀಕಾರ ಸಲುವಾಗಿ ಆತನು ಈಗ ಈ ರೀತಿ ಪ್ರತೀಕಾರ ಮಾಡುತ್ತಿದ್ದಾನೆ.

ಆದರೆ ಎಳೆತನದಲ್ಲಿ ಕಂಗಾಲಾಗಿ ಬಳಿಕ ಪ್ರಸಿದ್ಧಿಗೆ ಬಂದವರು ಹಲವರಿದ್ದಾರೆ. ನಪೋಲಿಯನನು ಎಳೆತನದಲ್ಲಿ ಬಹಳ ಬಡತನದಿಂದಿದ್ದವನು. ಲಾಯಿಡ್ ಜಾರ್ಜನು ಒಬ್ಬ ಅನಾಥ ಹುಡುಗನಾಗಿದ್ದನು. ಅಬ್ರಹಾಮ್ ಲಿಂಕನನು ಒಬ್ಬ ಬಡ ಕೃಷಿಕನ ಮಗನು. ಸ್ಟಾಲಿನ್, ಮುಸೊಲಿನಿ ಇವರೆಲ್ಲರೂ ದಾರಿದ್ರ್ಯದಿಂದ ಪ್ರಸಿದ್ಧಿಗೇರಿದವರು. ಇವರೆ ಆದರೂ ಯಾರೂ ಹಿಟ್ಲರನಂತೆ ನಿರ್ದಯರಾಗಿಲ್ಲ. ಹಿಟ್ಲರನು ಹೆಚ್ಚು ಹೆಚ್ಚು ಅಧಿಕಾರ ಪ್ರಸಿದ್ಧಿ ಪಡೆದಂತೆ ಆತನು ಹೆಚ್ಚು ಹೆಚ್ಚು ನಿರ್ದಯನಾಗುತ್ತಾ ಹೋಗುತ್ತಾನೆ. ಅವನ ಅಧಿಕಾರಕ್ಕೆ ಏರಿದ್ದೇ ರಕ್ತದಿಂದ ತೋಯ್ದಿದ್ದು, ಶಿಕ್‌ರ್ ಸ್ಟ್ರಾಸರ್ ಶ್ಲೈಗರ್ ಇವರು ಆತನ ಕ್ರೌರ್ಯ ಬಿದ್ದಕ್ಕೆ ಗುರಿಯಾಗಿದ್ದಾರೆ. ರಾಷ್ಟ್ರರಾಷ್ಟ್ರಗಳನ್ನು ಸೀಳಿಸಿಕೊಂಡು ಆತನು ಇಂದು ಯೂರೋಪಿನ ಪ್ರಭುತ್ವ ನಡೆಸಲು ಹೊರಟಿದ್ದಾನೆ. ಪ್ರತೀಕಾರದ ಬುದ್ಧಿಶಕ್ತಿ ಹಿಟ್ಲರನಲ್ಲಿ ದಯಾದಾಕ್ಷಿಣ್ಯಗಳಿಲ್ಲದಂತೆ ಮಾಡಿದೆ. ಮಾನವ ಪ್ರಕೃತಿಯ ಅಂತರ್ಯವನ್ನು ಕೆಡಿಸುವುದು ಆತನ ಧ್ಯೇಯವಾಗಿದೆ.

ಜನಾಂಗ ವಿದ್ವೇಷ

"ಹಿಟ್ಲರನಲ್ಲಿ ಜನಾಂಗವಿದ್ವೇಷವು ವಿಪರೀತತೆಗೆ ಮುಟ್ಟಿದೆ. 'ಆರ್ಯನರನ್ನುಳಿದ ಜನಾಂಗದವರಲ್ಲಿ ನಾಗರಿಕತೆ ಸಂಸ್ಕೃತಿಗಳು ಇಲ್ಲವೇ ಇಲ್ಲ' ಹೀಗೆಂದು ಆತನ ನಂಬಿಕೆಯಿದೆ. ಆತನು ಬೇರೆ ಯಾವ ಜನಾಂಗದವರನ್ನೂ ಪ್ರೀತಿಸುವುದಿಲ್ಲ. ಆತನ ಎಣಿಕೆಯಲ್ಲಿ ಯೆಹೂದ್ಯರು ಬದುಕಲೂ ಯೋಗ್ಯರಲ್ಲ. ಆತನು ಯೆಹೂದ್ಯರನ್ನು ಪ್ರಾಣಿಜಂತುಗಳ ಸಮಾನವಾಗಿ ತಿಳಿಯುತ್ತಾನೆ. ಜನಾಂಗ ವಿದ್ವೇಷ ಆತನ ರಕ್ತಗತವಾಗಿದೆ.

"ಹಿಟ್ಲರನಿಗೆ ಆಕ್ರಮಣಾಧಿಕಾರ ಬೇಕಾಗಿದೆ. ಜಗತ್ತಿನ ಒಡೆತನ ಬೇಕಾಗಿದೆ. ಒಂದು ಜನಾಂಗ ಇನ್ನೊಂದು ಜನಾಂಗದ ತಲೆ ತುಳಿದು ನಿಲ್ಲುವ ಆದಿಕಾಲದ [illegible] ಅವನ ಪ್ರೀತಿಯ ಜನಾಂಗ ಒಂದು ಜೇಡಿಯೇ ಇದೆ. ಅದಕ್ಕೆ ಹಿಟ್ಲರ್, ಗೋರಿಂಗ, ಗೊಬೆಲ್ಸ್ ಹಿಮ್ಲರ್, ರಿಬನ್‌ಟ್ರಾಪ್ ಇವರೆಲ್ಲರೂ ಪ್ರಮುಖರು, ನಾಜಿಗಳು ಆ ಪಕ್ಷದ ಜನರ.

ಭೀತಿ ಹುಟ್ಟಿಸುವ ಪದ್ಧತಿ

"ಹಿಟ್ಲರನದು ಭೀತಿ ಹುಟ್ಟಿಸುವ ಪದ್ಧತಿಯಾಗಿದೆ. ಪ್ರಚಾರವು ಅದರಲ್ಲಿ ಪ್ರಧಾನವಾಗಿದೆ ಪ್ರಚಾರದಿಂದ ಸ್ವರ್ಗವನ್ನೂ ಆತನು ನರಕವನ್ನಾಗಿಸಬಲ್ಲನು. ನಾಜಿ ಪಕ್ಷವನ್ನು ಕಟ್ಟಿ ಆತನು ಬೆದರಿಸುವನು. ನಿಲ್ಲು ನಿಲ್ಲು ಭಯಂಕರವಾದ ವರ್ತನೆಯಿಂದ ಜನರು ಅದಕ್ಕೆ ಬಲಿಬೀಳ ಬೇಕು. ಭೀತಿ ಹುಟ್ಟಿಸಿಯೇ ಬಲಶಾಲಿಯಾಗುವನು. "ಜನರಿಗೆ ಬೆದರಿಕೆ ಹುಟ್ಟುವಂತೆ ಹದೇ ಬೇಕು" ಆತನು ಹೇಳುತ್ತಾನೆ. [illegible] ಆತನು ರಕ್ತದ ಸ್ನಾನವನ್ನೇ ಮಾಡಿದನು. ಜರ್ಮನಿಯಲ್ಲಿ ಹಿಟ್ಲರನು ಅಧಿಕಾರಕ್ಕೇರಿದ ಬಳಿಕ ಭೀತಿ ಬೆಳೆಯಿತು, ವಿಶ್ರಾಂತಿಯಿಲ್ಲದೆ ಹೊರಗಿನ ಪ್ರಪಂಚಕ್ಕೂ ಅದು ಪಸರಿಸಿತು. ಆತಂಕದಿಂದ, ಕಾವಟ್ಯದಿಂದ ಮಾನವನ ಪ್ರಕೃತಿಯಲ್ಲಿರುವ ದೌರ್ಬಲ್ಯವನ್ನು ಹಿಡಿದು ಕಾರ್ಯ ಸಾಧಿಸುವುದು. ನಾಜೀ ಪ್ರಭುತ್ವ ಪ್ರಾಪ್ತಿಯು ಭೀಷಣತರ ಪದ್ಧತಿಯಾಗಿದೆ.

ನೀತಿಯ ಸುಳಿಗೆ

"ಹಿಟ್ಲರನ ನ್ಯಾಯ ನೀತಿಗಳು ಆತನದೇ ಆಗಿದೆ. ಆತನದು ಸ್ವಾರ್ಥಕಾರಕ ನೀತಿ. ಅದೇ ಆತನ ನೀತಿ. ಆತನ "ಹೊಸ ವ್ಯವಸ್ಥೆ" ಆತನೇ ಒತ್ತಾಯದಿಂದ ಜನಾಂಗದ ಮೇಲೆ ಹೇರಿಸುವ ಒಂದು ವ್ಯವಸ್ಥೆ.

"ಆದರೆ ಆತನು ಇಷ್ಟೆಲ್ಲಾ ಪಡೆದ ದರ ಅರ್ಥವೇನು? ಎಂದರೆ ಸುಳಿಗೆಯೆಂಬುದೊಂದೇ ಇದಕ್ಕೆ ಉತ್ತರ. ಮಾನವನ ದೌರ್ಬಲ್ಯವನ್ನು ಆತನು ಹಿಡಿದು ಸುಳಿಗೆ ಮಾಡಿದನು. ಅದರಿಂದ ಪ್ರಾಬಲ್ಯ ಹೊಂದಿದನು.

"ಹಿಟ್ಲರನು ಹೇಳಿದ ತತ್ವದನ್ನು— ಹೊಂದಿ— ಬಯಸಿದ್ದನ್ನು— ಇನ್ನೂ ಹೊಂದಿಲ್ಲ. ಅವನ್ನು ಹೊಂದಬೇಕೆನ್ನುವ ದುರಾಶೆಯಲ್ಲಿ ಸಿಂಹ ಕಿರೀಟನಾಗಿದೆ. ಆತನು ಇದುವರೆಗೆ ಅದು ಆಗಲೇ ಬೇಕು. ಅನೇಕ ಹಿಂಸಾಕೃತ್ಯಗಳು, ವಿಪರೀತ ರಕ್ತಗಳು. ಮಾನವನ ಆತ್ಮಶಕ್ತಿಯನ್ನು ಒಗ್ಗಿಸಲಾರವು. ಹಿಟ್ಲರನ ಪಶುಶಕ್ತಿಯು ಖಂಡಿತವಾಗಿ ಅಪಜಯವನ್ನು ಹೊಂದಿಯೇ ಹೊಂದುವದು".



ಕಲಿಕಾಲದ ನಡೆ

[೩ನೆಯ ಪುಟದಿಂದ ಮುಂದುವರಿದುದು]

ತ್ಯುಶಯ್ಯೆಯಲ್ಲಿದ್ದ ತನ್ನ ತಂದೆಯನ್ನು ಕಂಡಳು. ಮಗಳ ಆಗಮನವು ಹಣ್ಣು ಮುದುಕನಿಗೆ ಬಹಳ ಪರಮಾನಂದವನ್ನುಂಟುಮಾಡಿತು ಮರುದಿನವೇ ಅದೇ ಅವನ ಪರಲೋಕ ಯಾತ್ರೆಗೆ ಊರುಗೋಲಾಗಿ ಬಿಟ್ಟಿತು! ಕೈಸಾಗದ ವಿಧವೆ ತಾಯಿ ಆಕೆ 'ಗೋಳೋ' ಎಂದು ಅತ್ತುಬಿಟ್ಟಳು. 'ನುಂಗಿದರೆ ಗಂಟಲು ಸುಡುತ್ತದೆ—ಉಗುಳಿದರೆ ವ್ರತಕೆಡುತ್ತದೆ' ಎಂಬ ಸ್ಥಿತಿ ಮನೆಯೊಳ್ಳಾಯಿತು. ಈ ಸಮಯದಲ್ಲಿ ರಮೇಶರಾಯರ ಬಾಲಸ್ನೇಹಿತನೊಬ್ಬನಿಲ್ಲವಾಗುತ್ತಿದ್ದರೆ, ಈ ಕಥೆಯು ಇಲ್ಲಿಗೇ ಅಂತ್ಯವಾಗಬೇಕಿತ್ತು, ಅಥವಾ ಒಳ್ಳೆದನ್ನೆಲ್ಲಾ ತಮ್ಮ ಹೆಂಡತಿ ಮಕ್ಕಳಿಗೆ ಕೊಟ್ಟು, ಕೆಟ್ಟದಕ್ಕೆಲ್ಲ ದೇವರು ಹೊಣೆಯೆಂದು ಕೂಗಿಕೊಳ್ಳುವ ಸಮಾಜದಿಂದ ಆ ಹೆಣ್ಣು ಜೀವಿಗಳೆರಡೂ ಬಹಿಷ್ಕಾರ ಹೊಂದಿ, ಊರು ಬಿಟ್ಟು ಎಲ್ಲಿಯೋ ಹೇಗೋ ಸಾಯಬೇಕಿತ್ತು! ಆದರೆ ಈಗ? ಸಮಾಜವು ತನ್ನ ಅರೆ ಕುರುಡು ಕಣ್ಣಿಗೆ ಕನ್ನಡಿಯೇರಿಸುವಾಗ ಹೊತ್ತು ಮೀರಿಹೋಯಿತು ಆದ್ದರಿಂದ ಯಶೋದೆಯು ವಿವಾಹಿತೆಯಾಗಿ ಆದರ್ಶ ದಾಂಪತ್ಯವನ್ನನುಭವಿಸುತ್ತಿದ್ದಾಳೆ, 'ಹಾಳಾಗದ ಬುದ್ಧಿಬಾರದು'—'ಸಾವಿರ ಹೇಳಿಕೆಗಿಂತ ಒಂದು ಅನುಭವವು ಮೇಲಾದುದು!' ಎಂಬ ಮಾತುಗಳನ್ನು ಚಿನ್ನದ ಅಕ್ಷರದಲ್ಲಿ ಬರೆಸಿ, ಅವಕ್ಕೆ ಯಶೋದೆಯು ದಿನಾಲೂ ಮಂಗಳಾರತಿ ಮಾಡುತ್ತಿದ್ದಾಳೆ. . ಆದರೆ ಸಮಾಜವು ೨೫ ವರ್ಷ ಪ್ರಾಯದ ಮೋಹನನಂಥಾ ಸಮರ್ಥ ಮುಂದಾಳುವನ್ನು ಕಣ್ಣಾರೆ ಕಂಡೂ ತನ್ನ ಸಂಶಯವನ್ನು ಇನ್ನೂ ನಿವಾರಿಸಿಕೊಳ್ಳಲೇ ಇಲ್ಲ, ಗಲಿಬಿಲಿ

ಯಶೋದೆಯು ಸಿನಿಮಾಲೋಕದಿಂದ ಹಿಂತಿರುಗಿ ಮನೆಗೆ ಬಂದಾಗ ಆಕೆಯು ಐದು ತಿಂಗಳ ಬಸುರಿಯಿದ್ದಳು, ಮದುವೆಯಾಗಿದ್ದಿಲ್ಲ! ಸತ್ಯಯುಗದ ವಿಶ್ವಾಮಿತ್ರ, ದುಷ್ಯಂತ, ವೇದವ್ಯಾಸ, ಅರ್ಜುನ, ಇವರು ಒಪ್ಪಿದ್ದರಲ್ಲವೇ ಈಗಿನ ಗಂಡಾಳುಗಳು ತಮ್ಮ ತೀಟೆ ತೀರಿದ ಮೇಲೆ 'ವಿವಾಹ'ಕ್ಕೆ ಸಮ್ಮತಿಸುವುದು? ಆದ್ದರಿಂದ ಆಕೆಗೆ ಮನೆಯೇ ಗತಿಯಾಯಿತು. ರಮೇಶರಾಯರ ಮಿತ್ರನು, ಇದನ್ನಾರಿಗೂ ತಿಳಿಸದೆ, ಆಕೆಯನ್ನು ಘಂಡರಾಪುರದ ಅಬಲಾಶ್ರಮದಲ್ಲಿ ಏಳು ತಿಂಗಳ ವರೆಗೆ ಇರಿಸಿ, ನಂತರ ಕರೆಸಿಕೊಂಡರು. ಯಶೋದೆಯು ಹೊಟ್ಟೆಯಲ್ಲಿ ಹುಟ್ಟಿ, ಇಲ್ಲಿ ಬೆಳೆದ ಮೋಹನನನ್ನು ನಾಲ್ಕು ವರ್ಷದ ಮೇಲೆ, ಸಮಾಜಕ್ಕೆ ನಂಬುಗೆಯಾಗುವಂಥಾ ಕಾರಣಗಳನ್ನು ಮುಂಡಿಟ್ಟು ಅವನನ್ನು ಯಶೋದೆಯು ಮನೆಗೆ ಕರೆಸಿಕೊಂಡಳು. ಅಂದಿನಿಂದ ಅವನು ಆಕೆಯ 'ದತ್ತಪುತ್ರ'ನಾಗಿಯೇ ಬೆಳೆದನು; ವಿದ್ಯಾವಂತನಾದನು. ಗಣನೀಯ ಸ್ಥಾನಿಕನಾಗಿ ಹುಟ್ಟೂರಿನ ಗೌರವದ ಭಾರವನ್ನು ಹೆಚ್ಚಿಸಿದನು.

ಯಶೋದೆಯು ಆ ಮೇಲೆ ನಾಲ್ಕು ಮಕ್ಕಳ ತಾಯಿಯಾದಳು. ಮೋಹನನು ಆಕೆಯ ಪಂಚಪ್ರಾಣನಾಗಿ ಉಳಿದನು.

ಮೋಹನನ ಹುಟ್ಟು ಇನ್ನೂ ಒಂದು ಸಮಸ್ಯೆಯಾಗಿಯೇ ಸಮಾಜದ ಮುಂದೆ ನಿಂತಿದೆ, ಆದರೆ ಅವನ ಸೇವೆಯನ್ನು ಮಾತ್ರ ಅದು ದೇವರ ಪ್ರಸಾದದಂತೆ ಮುಡಿದುಕೊಳ್ಳುತ್ತಿದೆ.

ಉದಯಶಂಕರ ನೃತ್ಯ ಕೇಂದ್ರದಲ್ಲಿ

ಠಾಗೂರ್ ಸ್ಮರಣೆ

ಡಾ. ರವೀಂದ್ರನಾಥ ಠಾಗೋರರ ನಿಧನ ವಾರ್ತೆಯನ್ನು ಕೇಳಿ ಭಾರತದ ಪ್ರಸಿದ್ಧ ನೃತ್ಯಪಟು ಉದಯಶಂಕರರು ಬಹಳವಾಗಿ ಕಳವಳಗೊಂಡರೆಂದು ಅವರ ನೃತ್ಯಕೇಂದ್ರದಿಂದ ಸುದ್ದಿ ಬಂದಿದೆ. ಒಂದು ದಿನ ಅವರ ನೃತ್ಯಾಲಯವು ಮುಚ್ಚಲಾಯಿತಂತೆ.

ಅವರು ತಮ್ಮ ವಿದ್ಯಾರ್ಥಿಗಳಿಗೆ ಕವಿಯ ಕುರಿತು ಹೀಗೆ ಹೇಳಿದರು.

"ನಾನು ಆ ದಿನವನ್ನು ಮರೆಯಲಾರೆ. ನಾನು ಆ ದಿನ ಶಾಂತಿನಿಕೇತನದ ಜಗಲಿಯಲ್ಲಿ ಕವಿಯೊಡನೆ ಮಾತನಾಡಿದೆ ಅವರು ಬಂಗಾಳಿಯಲ್ಲಿ ಮಾತನಾಡಿದರು, ಅವರ ಪ್ರತಿಯೊಂದು ಶಬ್ದವೂ ಕಲಾಪೂರ್ಣವಾಗಿತ್ತು, ಪ್ರತಿಭಾನ್ವಿತವಾಗಿತ್ತು, ಶಕ್ತಿವತ್ತಾಗಿತ್ತು. ಅವರಿಗೆ ನನ್ನ ಹೃದಯ ಭಾವನೆ ತಿಳಿದಂತೆ ನನಗೆ ತೋರಿತು, ಅವರು ಹೇಳಿದ ಪ್ರತಿಯೊಂದು ಶಬ್ದವೂ ಉತ್ಸಾಹ ಜನಕವಾಗಿತ್ತು. ಅವರ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತವೆ. "ನೀವು ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕು, ಭಿನ್ನಭಿನ್ನ ಕಲೆಗಳನ್ನು ಸಾಧಿಸಿರಿ, ನೃತ್ಯವನ್ನು ಪ್ರೋತ್ಸಾಹಿಸಿರಿ. ಆ ಮೂಲಕ ಬಿನ್ನಭಿನ್ನತೆಗಳೊಳಗೆ ಭಿನ್ನ ಭಿನ್ನ ಸಮಾಜ ಜಾತಿ ಧರ್ಮಗಳೊಳಗೆ ಐಕ್ಯವನ್ನುಂಟುಮಾಡಿರಿ" ಹೀಗೆಂದು ಕವಿ ನನಗೆ ಪ್ರೋತ್ಸಾಹಿಸಿದ್ದರು. ಈ ಮಾತನ್ನು ನಾನೆಂದೂ ಮರೆಯಲಾರೆ. ಇಂದಿನ ಈ ಕಲಾ ಕೇಂದ್ರದ ಉನ್ನತಿಯು ಬಹು ಹೆಚ್ಚಿನ ಯಶಸ್ಸು ಆ ಗುರುದೇವರದಾಗಿದೆ"

HALFTONE & LINE BLOCK MAKING UNDERTAKEN

Sharada Press, MANGALORE

ಕೆಲವು ಸಿದ್ಧೌಷಧಗಳು

ಲೇಖಕ- ಶ್ರೀ. ಎನ್. ಶ್ಯಾಮರಾಯ ನಾಯ್ಕರು

[ಪ್ರತಿ ಊರಿನಲ್ಲಿ ತಿರುಗಾಡಿ ವಿಚಾರಿಸಿದರೆ, ಯಾವುದಾದರೂ ಒಂದು ಮನೆಯಲ್ಲಿ ಅವರ ವಂಶಪಾರಂಪರ್ಯವಾಗಿ ಕೊಡುತ್ತಾ ಬರುವ ಒಂದು ಸಿದ್ಧೌಷಧಿ ಇದ್ದೇ ಇರುತ್ತದೆ. ಸದ್ರಿ ಔಷಧಿಯನ್ನು ಆ ಒಂದು ರೋಗಕ್ಕೆ ಕೊಟ್ಟರೆ, ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗುವುದು. ವೈದ್ಯರಿಂದಲೂ ಡಾಕ್ಟರರಿಂದಲೂ ಗುಣಮಾಡಲಿಕ್ಕೆ ಸಾಧ್ಯವಿಲ್ಲದ ರೋಗಗಳೂ ಅಂತಹ ಮದ್ದುಗಳಿಂದ ಗುಣವಾಗುತ್ತವೆ. ಮದ್ದಿಗೆ ಖರ್ಚು ಕಡಿಮೆ, ಕಾಡಿನಲ್ಲಿ ಸಿಕ್ಕುವ ಗಿಡಮೂಲಿಕೆಗಳು, ಅಂಥಾ ದಿವ್ಯವಾದ ಮದ್ದುಗಳು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿಯೂ ಇರುತ್ತವೆ. ಅಂತಹ ಔಷಧಿ ಪ್ರಯೋಗಗಳು ವೈದ್ಯ ಪುಸ್ತಕದಲ್ಲಿ ಸಿಕ್ಕುವುದಿಲ್ಲ, ಇದನ್ನು ಆಯಾ ಮನೆಯವರು ತಮ್ಮ ಅಂತ್ಯಕಾಲದಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಒಬ್ಬನಿಗೆ ಗುಟ್ಟಾಗಿ ಕಲಿಸುವರು, ಅದು ಒಬ್ಬರಿಂದ ಒಬ್ಬರಿಗೆ ಅದೇ ರೀತಿಯಲ್ಲಿ ವಂಶಪಾರಂಪರ್ಯವಾಗಿ ಮುಂದರಿಯುವುದು. ಇನ್ನು ಹಲವು ಕಡೆಗಳಲ್ಲಿ ಮದ್ದನ್ನು ಕಲಿಸಿಕೊಡುವ ಮೊದಲೇ ಅದನ್ನು ತಿಳಿದಿದ್ದವರು ತೀರಿಹೋಗಿ, ಅಂಥಾ ದಿವ್ಯ ಔಷಧಿಗಳು ಮಾಯವಾಗುವವು. ಔಷಧಿಗಳನ್ನು ಪ್ರಚಾರ ಮಾಡಿದರೆ ನಮ್ಮ ಸಹೋದರ ಸಹೋದರಿಯರಿಗೆ ಬಹಳ ಸಹಾಯಮಾಡಿದಂತಾಗುವುದು. ಆದ್ದರಿಂದ ಇಂಥಾ ದಿವ್ಯ ಔಷಧಿಗಳು ನಾಶವಾಗದಂತೆಯೂ ಎಲ್ಲಾ ಜನರಿಗೆ ಪ್ರಯೋಜನ ಸಿಕ್ಕುವಂತೆಯೂ ಅದನ್ನು ಪ್ರಚಾರ ಮಾಡಬೇಕಾಗಿ ಅಂತಹ ಸಿದ್ಧೌಷಧಿಗಳನ್ನು ಕಲಿತಿರುವ ಜನರಲ್ಲಿ ಪ್ರಾರ್ಥಿಸುತ್ತೇನೆ. ನನಗೆ ತಿಳಿದು ಬಂದ ಕೆಲವು ಕೈಗುಣದ ಪ್ರಯೋಗಗಳನ್ನು (ಸಿದ್ಧೌಷಧಿಗಳನ್ನು) ಕೆಳಗೆ ಕೊಡುತ್ತಾ ಬರುತ್ತೇನೆ]

ರೋಗದ ಹೆಸರು **ಮೂಲವ್ಯಾಧಿ**

ಮೊಳೆರೋಗ, ಮಲವಿಸರ್ಜನ ಸಮಯ ರಕ್ತ ಸುರಿಯುವುದು

ಇದು ಯಾವಾಗಲೂ ಕೂತು ಕೆಲಸ ಮಾಡುವವರಿಗೆ ಆಸನದ ಹತ್ತಿರ ಇರುವ ನಾಡಿಗಳಿಗೆ ವ್ಯಾಯಾಮ ಸಿಕ್ಕದೆ ಇರುವುದರಿಂದ ರಕ್ತಚಲನೆ ಸರಿಯಾಗದೆ ಇರುವುದರಿಂದ ಕೆಟ್ಟ ರಕ್ತ ಸೇರಿ ದುರ್ಮಾಂಸ ಬೆಳೆಯುವುದರಿಂದಲೂ ನಾಡಿಗಳಿಗೆ ಶಕ್ತಿ ಇಲ್ಲದೆ ಬಿಗಿಹಿಡಿಯುವುದರಿಂದಲೂ ಆಗುತ್ತದೆ. ಇನ್ನೂ ಬೇರೆ ಕಾರಣಗಳು ಸಹ ಇರುತ್ತವೆ. ಸದ್ರಿ ರೋಗವು ಹೆಚ್ಚು ಜನರಿಗಿರುತ್ತದೆ. ಕಷ್ಟವು ಅದರಿಂದ ಜೋರಾಗುತ್ತದೆ.

ಮದ್ದು: ಕನ್ನಡ ಸನ್ಯಾಸಿಗಡ್ಡೆ, ಮಲಿಯಾಳ ಚಂಗ್ರವಳ್ಳಿಕಂಡೆ, ಸಂಸ್ಕೃತ ಸೋಮನಾರ ಬೀಜ

ಸನ್ಯಾಸಿಗಡ್ಡೆಯಲ್ಲಿ ಕೆಂಪು ಮತ್ತು ಬಿಳಿ ಎರಡು ಜಾತಿ ಇರುತ್ತವೆ. ಅದರಲ್ಲಿ ಬಿಳೀ ಸನ್ಯಾಸಿಗಡ್ಡೆಯನ್ನು ತಂದು ಚೂರುಗಳಾಗಿ ಕೊಯ್ದು ಬಿಸಿಲಿನಲ್ಲಿ ಒಣಗಿಸಿ ಕುಟ್ಟಿ ವಸ್ತ್ರಗಾಳಿತ ಪುಡಿಮಾಡಿ ಎಂಟಾಣೆ ತೂಕ ಚೂರ್ಣವನ್ನು ತೆಗೆದು ಬಿಸಿನೀರಿಗೆ ಹಾಕಿ ಗಾಳಿಸಿ ಹಾಲು ಸಕ್ಕರೆ ಕೂಡಿಸಿ ಕಾಫಿ ತಯಾರಿಸುವ ಹಾಗೆ ಮಾಡಿ ದಿನಂಪ್ರತಿ ಬೆಳಿಗ್ಗೆ ಒಂದು ಸಾರಿ ಕುಡಿಯಬೇಕು. ಹೀಗೆ ಬಿಡದೆ ಒಂದು ತಿಂಗಳು ಕುಡಿಯಬೇಕು ಮತ್ತು ತಿಂಗಳಿಗೆ ಮೂರು ದಿವಸ ದಿವಸಕ್ಕೆ ಒಂದು ಮುಷ್ಟಿ ಹುಣಸೇ ಮರದ ಕೆತ್ತೆ ತಂದು ಜಜ್ಜಿ ವಸ್ತ್ರದಲ್ಲಿ ಕಟ್ಟಿ ಗಂಜಿಗೆ ಹಾಕಿ ಚೆನ್ನಾಗಿ ಗಂಜಿ ಬಂದ ಮೇಲೆ ಸದ್ರಿ ಮದ್ದಿನ ಗಂಟನ್ನು ತೆಗೆದು ಬಿಸಾಡಿ ಗಂಜಿಗೆ ದನದ ಹಾಲು ಹಾಕಿ ಊಟಮಾಡಬೇಕು. ಹೀಗೆ ೩ ತಿಂಗಳು ಮಾಡಬೇಕು. ತಿಂಗಳಿಗೆ ೩ ದಿವಸದಂತೆ ೩ ತಿಂಗಳಿಗೆ ೯ ದಿವಸ ಮಾತ್ರ ಗಂಜಿ ಪಥ್ಯ.

ಮೂಲವ್ಯಾಧಿಗೆ ಹೊರಗೆ ತಾಗಿಸುವ ಮುಲಾಮು—

ಮದ್ದಿನ ಹೆಸರು ಕನ್ನಡ ಹಿಟ್ಟುಳಿಗ, ತುಳು ತೊಟ್ಟುಗ, ಮಲಿಯಾಳ ಮೂಕ್ಕಿಂಪುಳಿ

ಸದ್ರಿ ಒಂದು ಗಿಡವನ್ನು ಸಮೂಲ ತಂದು ಒಳ್ಳೆ ಬಂಡೆ ಕಲ್ಲಿನಲ್ಲಿ ದನದ ಮಜ್ಜಿಗೆ ಹಾಕಿ ಬಿಸಿಮಾಡಿ ಸರಿಯಾದ ಪಾಕಕ್ಕೆ ಇಳಿಸಿ ಇದನ್ನು ಹೊರಗೆ ತಾಗಿಸಬೇಕು. ಪ್ರತಿದಿವಸ ಒಂದೆರಡು ವೈಲಾದರೂ ನಕ್ಕಿಯಬೇಕು. ಮೊಸರು ಬೆಣ್ಣೆ ಹಾಲು ತೆಗೆದುಕೊಳ್ಳಬೇಕು. ಸದ್ರಿ ರೋಗವು ಪೂರ್ಣ ವಾಸಿಯಾಗುವ ವರೇಗೆ ಬ್ರಹ್ಮಚರ್ಯದಲ್ಲಿರಬೇಕು. ತೀಕ್ಷ್ಣ ಪದಾರ್ಥಗಳನ್ನು ವರ್ಜಮಾಡಬೇಕು.

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12 39	ರೂ. 79½ ಕೋಟಿಗಿಂತ ಹೆಚ್ಚಿದೆ
ಫಂಡುಗಳು	"	ರೂ 25½ " "
ವಾರ್ಷಿಕ ಆದಾಯ	"	ಸುಮಾರು ರೂ 4½ ಕೋಟಿಗೆ "

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೋಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಅಥವಾ ದಿ ಇನ್‌ಸ್ಪೆಕ್ಟರ್

ಸೌತ್ ಪೆರೇಡ್, ಬೆಂಗಳೂರು. | ಕಾರ್ನಾಡ್ ಸದಾಶಿವರಾವ್ ರೋಡ್, ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

ಸಿನೆಮಾ ಸುದ್ದಿ

ನೆಹರುಗಳ ಸೊಸೆ ಸಿನೆಮಾ ನಟಿಯಾಗುವಳು

ಯಶೋಧರಾ ಕಟ್ಜು ಇವಳು ಜವಾಹರಲಾಲ ನೆಹರುಗಳ ಸೊಸೆಯಾಗ ವಳು ಸಿನೆಮಾಕ್ಕೆ ಸೇರಿರುವಳು. ಇವಳು ಸೀನಿಯರ್ ಕೇಂಬ್ರಿಜಿನಲ್ಲಿ ಓದುತ್ತಿದ್ದಳು. ಕಥಕ್ಕಳಿ ಮಣಿಪುರಿ ನೃತ್ಯಗಳಲ್ಲಿ ನಿಷ್ಣಾತಳು. ಇವಳು ಈಗ ನೇಶನಲ್ ಸ್ಟುಡಿಯೋದ 'ರೋಟಿ' ಚಿತ್ರದಲ್ಲಿ ಅಭಿನಯಿಸುವಳೆಂದು ತಿಳಿದಿದೆ

ಕಾಂಚನ್

ಲೀಲಾ ಚಿಟ್ನೀಸಳ ಚಿತ್ರಾ ಕಂಪನಿಯ ಪ್ರಥಮ ಚಿತ್ರ ಕಾಂಚನ್ ತಯಾರಾಗಿದೆ ಇದು ಪ್ರಥಮವಾಗಿ ಬೊಂಬಾಯಿಯಲ್ಲಿ ಪ್ರದರ್ಶಿತವಾಗುವುದಂತೆ

ಮಿಸ್ ರೋಸ್

ನೇಶನಲ್ ಸ್ಟುಡಿಯೋವನ್ನು ಮಿಸ್ ರೋಸಳು ತೊಲಗಿದಳೆಂದು ಸುದ್ದಿ. ಸ್ಟುಡಿಯೋದವರು ಆಕೆಗೆ ಯೋಗ್ಯ ಪಾತ್ರ ಕೊಡದಿರುವುದರಿಂದ ಎಂದೂ, ನಿರ್ದೇಶಕ ಮೆಹಬೂಬರ ವಿಷಯದಲ್ಲಿ ತಾಗಿಬಂದ ವಿಷಯವೆಂದೂ ಅವಳ ತೊಲಗುವಿಕೆಗೆ ಕಾರಣಗಳು ಹೇಳಲಾಗಿವೆ.

ಓಮರ್ ಖಯ್ಯಾಮ್

ಪ್ರಭಾತದವರು ಓಮರ್ ಖಯ್ಯಾಮ್ ಚಿತ್ರ ತಯಾರಿಯ ಬಗ್ಗೆ ಸಲಕರಣೆ ತಯಾರಿಸುತ್ತಿರುವರು

ಪ್ರಭಾತ ಕಂಪನಿ

ಪ್ರಭಾತ ಕಂಪನಿಯವರು ಸಂತಸಖು ಚಿತ್ರ ಮುಗಿದ ಮೇಲೆ ಕಾಳಿದಾಸ ಅಥವಾ ರಾಮಶಾಸ್ತ್ರಿ ಎಂಬ ಚಿತ್ರವನ್ನು ತಯಾರಿಸಲಿರುವರಂತೆ.

ರಾಜಕೀಯ ಚಿತ್ರಪ್ರದರ್ಶನ

ಭಾರತದ ಭಿನ್ನಭಿನ್ನ ರಾಜಕೀಯ ಪಂಗಡಗಳ ವಿಷಯದಲ್ಲಿ ಅಭಿಪ್ರಾಯ ಕೊಡುವ ಒಂದು ಚಿತ್ರವನ್ನು ಇಂಟರ್ನೇಶನಲ್ ಎಡ್ಯುಕೇಶನಲ್ ಫಿಲ್ಮ್ ಕಂಪೆನಿಯವರು ತಯಾರಿಸುವರಂತೆ. ಈ ವಿಷಯವಾಗಿ ಹಿಂದೂ ಮಹಾ ಸಭೆಯ ಅಭಿಪ್ರಾಯವನ್ನು ತಿಳಿಯಲು ಆ ಕಂಪನಿಯವರು ಬಂದಾಗ ಅದರ ಅಧ್ಯಕ್ಷರು ಅವರಿಗೆ ಸಂಪೂರ್ಣ ವಿವರ ತಿಳಿಸಿದರೆಂದು ಗೊತ್ತಾಗಿದೆ

ಶೈಕ್ಷಣಿಕ ಚಿತ್ರ

ಬಾಬುರಾವ್, ಪೆಂಡಾರ್ಕರ್, ಪಾಂಡುರಂಗ ನಾಯಕ್, ನಾರಾಯಣರಾವ್ ಕುಲಕರ್ಣಿ ಇವರು ಇಂಪೀರಿಯಲ್ ಕೌನ್ಸಿಲ್ ಓಫ್ ಎಗ್ರಿಕಲ್ಚರಲ್ ರಿಸರ್ಚ್ ಇವರ ಅನುಮತಿಯಂತೆ ಒಂದು ಶೈಕ್ಷಣಿಕ ಚಿತ್ರವನ್ನು—ಕೃಷಿ ವಿಷಯದಲ್ಲಿ—ತಯಾರಿಸಿರುವರಂತೆ

ಮಹಾತ್ಮಾ ಗಾಂಧಿ ಚಿತ್ರ ತಮಿಳಿನಲ್ಲಿ

ಮಹಾತ್ಮಾ ಗಾಂಧಿಜಿಯವರ ಜೀವನ ಚರಿತ್ರೆ ವಿವರವುಳ್ಳ ಚಿತ್ರವು ತಮಿಳಿನಲ್ಲಿ ರಚಿತವಾಗುವುದಂತೆ. ಈ ಚಿತ್ರವು ಬರ್ಮಾ ಭಾಷೆಯಲ್ಲೂ ಪ್ರಕಟವಾಗುವುದು

ಧರ್ಮಪತ್ನಿ ಎಂಬ ಚಿತ್ರದ ಒಂದು ದೃಶ್ಯ

ರಣಜಿತ್ ಕಂಪನಿ

ರಣಜಿತ್ ಕಂಪನಿಯವರು 'ಶಾದಿ' ಮತ್ತು 'ಸುಸಾಲ' ಎಂಬೀ ಎರಡು ಚಿತ್ರಗಳನ್ನು ತಯಾರಿಸಿರುವರು. 'ಮೆಹಮಾನ್' ಎಂಬ ಚಿತ್ರದ ತಯಾರಿಕೆಯು ನಡೆದಿದೆ

ರಾಜನರ್ತಕಿ ಇಂಗ್ಲಿಷಿನಲ್ಲಿ

ವಾಡಿಯಾ ಮುವಿಟೋನಿನವರ 'ರಾಜನರ್ತಕಿ' ಚಿತ್ರವು ಆಂಗ್ಲಭಾಷೆಯಲ್ಲಿ ಅಕ್ಟೋಬರ್ ಎರಡನೆಯ ತಾರೀಕಿಗೆ ಪ್ರಕಟವಾಗುವುದು. ಅದು ಒಮ್ಮೆಗೇ ಬೊಂಬಾಯಿ, ಕಲ್ಕತ್ತಾ, ಸಿಮ್ಲಾಗಳಲ್ಲಿ ಪ್ರಕಟವಾಗುತ್ತದೆ. ಸಾಧನಾ ಬೋಸಳೇ ಪ್ರಮುಖ ಪಾತ್ರದಲ್ಲಿ. ಪ್ರತಿಯೊಂದು ಪಾತ್ರವೂ ಭಾರತೀಯರಿಂದಲೇ ಅಭಿನಯಿಸಲ್ಪಡುವುದು.

ನ್ಯೂಥಿಯೇಟರ್ಸ್ ಚಿತ್ರಗಳು

'ಮೀನಾಕ್ಷಿ' ಮತ್ತು 'ಡಾಕ್ಟರ್' ಎಂಬ ಹೊಸತು ಎರಡು ಚಿತ್ರಗಳನ್ನು ನ್ಯೂಥಿಯೇಟರ್ಸಿನವರು ತಯಾರಿಸುವರಾಗಿ ತಿಳಿದಿದೆ. 'ಮೀನಾಕ್ಷಿ'ಯಲ್ಲಿ ಸಾಧನಳ ಅಭಿನಯವಿರುವುದು. 'ಡಾಕ್ಟರ್'ನಲ್ಲಿ ಜ್ಯೋತಿ ಪ್ರಕಾಶ-ಭಾರತಿ ಎಂಬ ತಾರಾದ್ವಯಗಳಿರುವರು.

ಸಿಕಂದರ್

ಮಿನೆರ್ವಾ ಚಿತ್ರ ಸಿಕಂದರಿನಲ್ಲಿ ಪೃಥ್ವಿರಾಜ, ವನಮಾಲಾ, ಸೊಹ್ರಾಬ್ ಮೋದಿ ಮೊದಲಾದವರು ಅಭಿನಯಿಸುವರೆಂದು ತಿಳಿದಿದೆ.

ಲೀಲಾದೇಸಾಯಿ ತಮಿಳು ಚಿತ್ರದಲ್ಲಿ

ಅಭಿನಯಿಸುವಳೆಂದು (ರಾಣಾ ಮಂಗಮ್ಮಳ್) ಕ ಟಿ ಪ್ರೊಡಕ್ಷನ್ಸಿನ ಮೇನೇಜರ್ ಶ್ರೀ. ರಾಜೀವ ಶೆಟ್ಟಿ ಹೇಳಿಕೆಯಿದೆ ಚಿತ್ರವು ನ್ಯೂಥಿಯೇಟರ್ಸ್ ಸ್ಟುಡಿಯೋದಲ್ಲಿ ರಚಿತವಾಗುವುದಂತೆ. ನಿತಿನ್ ಬೋಸ್ ಕಮಲದಾಸ ಗುಪ್ತರು ಇದರ ಮೇಲ್ವಿಚಾರಕರಿರುವರಂತೆ.



ಮಗುವನ್ನು ಮೀಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿರಿ. ಆಗ ಮಗುವಿಗೆ ರಾತ್ರಿ ಎಚ್ಚರವಾಗದು. ಅಂದರೆ ನೀವು ಕೂಡಾ ತೊಂದರೆಯಾಗದೆ ನಿದ್ರೆ ಬೀಳುವುದು. ಕುಟಿಕೂರಾ ಟಾಲ್ಕಮಿನ ಗುಣವು ಎಲ್ಲ ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ ತುರಿಸುವಿಕೆಯ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾನಿಯಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನು (Cuticura Talcum) ಶಿಫಾರಸು ಮಾಡುತ್ತಾರೆ. ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿ. ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕಂಕನಾಡಿ, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡ್ ... ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ ಕರಂಟ್, ಸೇವಿಂಗ್ ... ಠೇವಣಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುದು ... ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು.

ರೂ 1ರಿಂದ 25ರ ವರೆಗೆ ಸೇ 9 ... ರೂ 25ರಿಂದ 100 ವರೆಗೆ ಸೇ ...

ರೂ 101ರಿಂದ 500ರ ವರೆಗೆ ಸೇ 7 ... ರೂ 501 ಮೇಲ್ಪಟ್ಟು ... ಸೇ 6½

ಠೇವಣಾತಿಗಳ ಮೇಲಿನ ದರ

ಕರಂಟ್ ಠೇವಣಿ 2 ಪ್ರತಿದಿವಸ ...

ಸೇವಿಂಗ್ಸ್ ಬೇಂಕ್ ... ಪ್ರತಿದಿನದ ಶಿಲ್ಕಿನ ಮೇಲೆ

ನಿರಖು ಠೇವಣಾತಿ—3 ತಿಂಗಳಿಗೆ—3 ... ಠೇವಣಾತಿ— ... ತಿಂಗಳಿಗೆ

... ಠೇವಣಾತಿ—12 ತಿಂಗಳಿಗೆ—...

(Sd) **B Narayana Shetty,**
Agent at Kankanady.

ವಿಚಿತ್ರ ಪ್ರಪಂಚ

'ಹಿಟ್ಲರ್ ಹುಚ್ಚು' ರೋಗ

ಪೆಲ್ತ್ರಂನಲ್ಲಿರುವ ಹುಡುಗರ ಸೆರೆಮನೆಯಲ್ಲಿ ಬಿಸ್ತರ್ ಎಂಬ ಹದಿನೈದು ವರ್ಷದ ಪ್ರಾಯದ ಹುಡುಗನಿಗೆ 'ಹಿಟ್ಲರ್ ಹುಚ್ಚು' ಎಂಬ ರೋಗ ಹಿಡಿದಿರುವುದಾಗಿ, ಅಲ್ಲಿನ ಡಾಕ್ಟರ್ ಎ. ಸಿ. ರೊಸಿಟರ್ ಲಾಯೊಸರೆಂಬವರು ಒಂದು ಹೊಸ ಹೆಸರಿನ ರೋಗದ ನಾಮಕರಣಮಾಡಿದರು,

ಬಿಸ್ತರ್ ಮತ್ತು ಜೇಮ್ಸ್ ಚಾರ್ಲ್ಸ್ ಕಿಂಬರ್ ಎಂಬ ಹದಿನಾರು ವರ್ಷದ ಇನ್ನೊಬ್ಬ ಹುಡುಗನೂ ಒಟ್ಟುಗೂಡಿ ಕೆಲವು ಜನರಿಗೆ ಗಾಯಮಾಡಿದರಂತೆ. ಅವರು ತಾವು ಕಲಿಯುತ್ತಿದ್ದ ಶಾಲೆಯಲ್ಲಿರುವ ಅನೇಕ ಹುಡುಗರನ್ನು ಕೊಲ್ಲುವ ಹಂಚಿಕೆಯೊಂದನ್ನೂ ಮಾಡಿದರಂತೆ ಹೀಗೆ ಅವರು ಕೆಲಸ ಮಾಡುತ್ತಿರುವಲ್ಲಿ, ಅವರಿಗೆ ಹಾಗೆ ಮಾಡಲು 'ಅಂತರಿಕ ಸ್ವರ'ವೊಂದು ಹೇಳುತ್ತಿದೆಯೆಂದೂ ಅದ್ದರಿಂದ ತಾವು ಮಾಡುವುದು ಸರಿಯೆಂದೂ ಅವರ ಅಭಿಪ್ರಾಯವಾಗಿರುವುದಂತೆ.

ಮಾತ್ರವಲ್ಲದೆ ಆ ಹುಡುಗರು ನಾಜೀ ಪಕ್ಷಪಾತಿಗಳಾಗಿದ್ದು ಹಿಟ್ಲರನ ಅತ್ಯಂತ ಆರಾಧಕರಾಗಿರುವರಂತೆ ಹಾಗಾಗಿ ಡಾಕ್ಟರರು ಆ ಹುಡುಗರನ್ನು ಹುಚ್ಚರ ಆಸ್ಪತ್ರೆಗೆ ಹಾಕಿ ಅವರ ರೋಗಕ್ಕೆ 'ಹಿಟ್ಲರ್ ಹುಚ್ಚು' ಎಂದು ನಾಮಕರಣಮಾಡಿ, ಕಡಿಮೆ ಪಕ್ಷ ಮೂರು ವರ್ಷವಾದರೂ ಅವರಿಗೆ ಮದ್ದುಮಾಡಬೇಕೆಂದು ಸೂಚಿಸಿರುವರೆಂದು ತಿಳಿದಿದೆ.

ಮುದ್ದಿಸಿ ಮರುಳು ಮಾಡಿದಳು

ಆರು ವರ್ಷಗಳ ಪರಿಚಯದ ಮೇಲೆ, ತನ್ನ ಪ್ರಿಯಳು ತನಗೆ ಮುದ್ದಿಸಿದಳೆಂಬ ಸಂತೋಷದಿಂದ ಮರುಳನಾದ ಒಬ್ಬ ಯುವಕನು, ಲಂಡನಿನಲ್ಲಿ ಕಂಡಾ ಬಟ್ಟೆ ಮೋಟರ್ ಸಂಚಾರ ಮಾಡಿ ಬಂಧಿತನಾದನು. ಅತನು ಕಲಿಕೆಟ್ಟವನಂತೆ ಹಾಗೆ 'ಡ್ರೈವ್' ಮಾಡಿದುದರ ಕಾರಣವೇನೆಂದು ಕೋರ್ಟಿನಲ್ಲಿ ಕೇಳಲು ತನ್ನ ಮೇಲಿನ ಪ್ರಣಯ ಕಲಾಪವನ್ನು ಅತನೇ ವಿವರಿಸಿದನು. ಆಕೆ ಅತನನ್ನು ಮುದ್ದಿಸಿಯೂ ಮರುಳೇ ಮಾಡಿದಳು!

ಹಳೆಯ ಅಂಗಿಗಳಿಂದ ಬೇಂಕ್ ನೋಟುಗಳು

ಬ್ರಿಟನಿನೊಡನೆ ಫ್ರಾನ್ಸಿನ ವ್ಯಾಪಾರವು ನಿಂತುಹೋದುದರಿಂದ, ಬೇಂಕ್ ಒಫ್ ಇಂಗ್ಲೆಂಡಿಗೆ ಈಗ ಒಂದು ಅಡಚಣೆಯಾಗಿದೆ. ಫ್ರೆಂಚರ ಹಳೆಯ ಅಂಗಿಗಳನ್ನು ತೆಗೆದುಕೊಂಡು ಅದರಿಂದ ಬೇಂಕಿನವರು ತಮ್ಮ ನೋಟುಗಳನ್ನು ಮಾಡುತ್ತಿದ್ದರು. ಇಂಗ್ಲಿಷರು ಬಣ್ಣ ಬಣ್ಣದ ಅಂಗಿ ಹಾಕಿದ ಮೇಲೆ ಬೇಂಕಿನವರಿಗೆ ಫ್ರೆಂಚರೇ ಗತಿಯಾಗಿದ್ದರು. ಫ್ರೆಂಚರು ಯಾವಾಗಲೂ ಬಿಳಿಯ ಅಂಗಿಗಳನ್ನೇ ಧರಿಸುವರು. ಕಳೆದ ೨೦೦ ವರ್ಷಗಳಿಂದ ಇಂತಹ ನೋಟುಗಳನ್ನು ಹೇಂಪ್‌ಶಯರಿನ ಒಂದು ಕಾರ್ಖಾನೆಯಲ್ಲಿ ಮಾಡುತ್ತಿದ್ದರು. ಅಲ್ಲಿನ ಟೆಸ್ಟ್ ಎಂಬ ನದಿಯ ನೀರು ಅದರ ವಾಟರ್ ಮಾರ್ಕಿಗೆ ಬಹಳ ಉಪಯೋಗ ಬೀಳುತ್ತಿದ್ದಿತೆಂದೂ ತಿಳಿದಿದೆ

ಜಗತ್ತಿನ ಕೆಟ್ಟ ಪುಸ್ತಕಗಳು

ಇತ್ತೀಚೆಗೆ ಅಮೇರಿಕದ ಒಂದು ಪತ್ರಿಕೆಯು ಜಗತ್ತಿನ ಕೆಟ್ಟ ಪುಸ್ತಕಗಳ ಪಟ್ಟಿಯೊಂದನ್ನು (ಎಂದರೆ ಬಹುಜನರು ಓದಿ ಪ್ರಸಿದ್ಧವಾಗಿರುವ ಪುಸ್ತಕ) ಕೊಡಬೇಕಾಗಿ ಅಲ್ಲಿನ ವಿದ್ವಾಂಸರೊಡನೆ ಪ್ರಶ್ನೆಹಾಕಿತು. ಅದಕ್ಕೆ ಬಂದ ಉತ್ತರದಿಂದ ಈ ಕೆಳಗಿನ ಪುಸ್ತಕಗಳು ಜಗತ್ತಿನ ಕೆಟ್ಟ ಪುಸ್ತಕಗಳಾಗಿ ಪರಿಗಣಿತವಾಗಿವೆ.

ದಾಂಟೆಯ 'ಡಿವೈನ್ ಕೊಮಡಿ' ಗಿಬ್ಬನನ 'ಡಿಕ್ಲೈನ್ ಎಂಡ್ ಫಾಲ್, ಓಫ್ ದ ರೋಮನ್ ಎಂಪೈರ್' ಮಿಲ್ಟನನ 'ಪೆರಡೈಸ್ ಲಾಸ್ಟ್' ಮತ್ತು 'ಪೆರಡೈಸ್ ರಿಗೈನ್ಡ್' ಜೇಮ್ಸ್ ಜೋಯ್ಸಿಯ 'ಯುಲಿಸಿಸ್' ಮಾರ್ಸೆಲ್ ಪ್ರೌಸ್ಟನ 'ಸ್ವಾನ್ಸ್ ವೇ' ಥೋಮಸ್ ಕಾರ್ಲೈಲನ 'ಸಾರ್ಟರ್ ರಿಸಾರ್ಟಸ್' ಗೋಥೆಯ 'ಫಾಸ್ಟ್' ಮತ್ತು ಹಿಟ್ಲರನ 'ಮೈನ್ ಕೇಂಫ್'.

ವಿಜ್ಞಾನಯುಗ

ಗಂಡುಸರು ಹೆಚ್ಚು ತಿನ್ನುವವರು

ಗಂಡುಸರುಹಾಗೂ ಹೆಂಗುಸರ ಪೈಕಿ ಹೆಚ್ಚು ತಿನ್ನುವುದು ಗಂಡುಸರೇ ಎಂಬುದಾಗಿ ಈಗ ಒಬ್ಬ ಡಾಕ್ಟರನು ಕಂಡು ಹುಡುಕಿರುವನು. ಒಳ್ಳೆಯ-ಬಲಶಾಲೀ ಹೆಂಗುಸೂ ಹಾಗೂ ಬಚ್ಚಿ ಹೋಗಿರುವ ಗಂಡುಸೂ ಇವರ ಆಹಾರವನ್ನೇ ಹೋಲಿಸಿದರೂ ಗಂಡುಸು ಆ ಹೆಂಗುಸಿಗಿಂತ ಒಂದುವರೆ ಪಾಲು ಹೆಚ್ಚು ಆಹಾರ ತೆಗೆದು ಕೊಳ್ಳುವನೆಂದು ಆ ಡಾಕ್ಟರನು ಸಂಶೋಧಿಸಿ ಹೇಳಿರುವನು.

ಹೊಸ ಮೈಕ್ರೋಸ್ಕೋಪ್

ವಸ್ತುವನ್ನು ೧೮೦,೦೦೦ ಪಾಲುಗಳಿಗಿಂತ ದೊಡ್ಡದಾಗಿ ತೋರಿಸುವ ಒಂದು ಹೊಸ ತರದ ಮೈಕ್ರೋಸ್ಕೋಪನ್ನು ಈಗ ವೈಜ್ಞಾನಿಕರು ಕಂಡುಹಿಡಿದಿರುವರಾಗಿ ತಿಳಿದಿದೆ.

ಸಂಗೀತದಿಂದ ಬಾಂಬು ಹೆಚ್ಚುತ್ತದೆ.

ಸಂಗೀತವನ್ನು ಕಾರ್ಖಾನೆಗಳಲ್ಲಿ ಏರ್ಪಡಿಸಿದುದರ ಪರಿಣಾಮವಾಗಿ ಈಗ ಬಾಂಬಿನ ಕಾರ್ಖಾನೆಗಳಲ್ಲಿ ಮೊದಲಿಗಿಂತ ಶೇಕಡಾ ೩ರಂತೆ ಹೆಚ್ಚಿನ ಬಾಂಬುಗಳು ತಯಾರಾಗುತ್ತವೆಯಾಗಿ ತಿಳಿಯುತ್ತದೆ.

ವಿಟಮಿನ್ ಡಿ

ಛಳಿಗಾಲದ ಮೊದಲು ಒಂದು ವಿಟಮಿನ್‌ಡಿಯ ಡೋಸನ್ನು ಮಗುವಿಗೆ ಕೊಡುವುದರಿಂದ ರಿಕೆಟ್ಸ್ ರೋಗವು ಗುಣವಾಗುವುದಾಗಿ ಈಗ ನೂತನ ಶೋಧನೆ ಮಾಡಿರುತ್ತಾರೆ.

ಹೆಚ್ಚಾಗಿ ಮಕ್ಕಳು ವಿಟಮಿನ್ ಡಿ ಇರುವ ಕಾಡ್ಲಿವರ್ ಎಣ್ಣೆಯನ್ನು ಅದರ ಅಹಿತ ವಾಸನೆಗಾಗಿ ತೆಗೆದುಕೊಳ್ಳದೆ ನಿರ್ಬಲರಾಗುವ ನಿಮಿತ್ತ, ಈಗ ವಿಟಮಿನ್‌ಡಿಯ ಇಂಜೆಕ್ಷನ್ ಕೊಡುವ ಏರ್ಪಾಡೂ ಮಾಡುವರೆಂದು ಗೊತ್ತಾಗಿದೆ. ಕಾಡ್ಲಿವರ್ ಎಣ್ಣೆಗಿಂತ ಇಂಜೆಕ್ಷನ್ ಕಡಿಮೆ ಕ್ರಯದ್ದೂ ಆಗುವುದಂತೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 375/1941 in OS 441/34.

ಮನ್ನದೆ ಬ್ಯಾರಿ— ವಾದಿ ಅರ್ಜಿದಾರ

1. ಕಿಂಞಣ್ಣ ಶೆಟ್ಟಿ ಅಕ್ಕಯ್ಯನ ಮಗ ಪೆರುವ್ವಾ ಗ್ರಾಮ 2. ಚೋಮು ಅಕ್ಕಮ್ಮನ ಮಗಳು ಬಾಳಿಪುಣಿಗ್ರಾಮ, 3 ಬಿಮ್ಮಿಂಞ ಯಾನೆ ಸುಬ್ಬಪ್ಪ ಶೆಟ್ಟಿ 4 ಸಂಕಮ್ಮ ಹೆಂಗ್ಸು 5 ಚಂದಪ್ಪಶೆಟ್ಟಿ 6 ರಾಮಣ್ಣ ಶೆಟ್ಟಿ ಮಮ್ಮಕ್ಕ ಹೆಂಗ್ಸಿನ ಮಕ್ಕಳು ಕರೋಪಾಡಿಗ್ರಾಮ, 7 ವೆಂಕಪ್ಪಾಳ್ವ ಚೋಮುನ ಮಗ ಬಾಳಿಪುಣಿ ಗ್ರಾಮ 8 ಶಾಂತಾಳ್ವ 9 ಕುಂಞಾಳ್ವ ಕಿಂಞಣ್ಣ ಸೆಟ್ಟಿ ಅಳಿಯಂದಿರು ಬಾಳಿಪುಣಿಗ್ರಾಮ 10. ಚನ್ನಕ್ಕ ಸಂಕಮ್ಮನ ಮಗಳು ವಿಟ್ಲ ಮುಡ್ನೂರು ಗ್ರಾಮದ ಕಲ್ಪದೆ } ಪ್ರತಿವಾದಿಗಳು

ಇವರೆಲ್ಲರಿಗೆ ತಿಳಿಸುವದೇನಂದ್ರೆ —

ಅರ್ಜಿದಾರನು ವಾಕ್ಕುಮಾಡಿದ ಮೇಲೊತ್ತುವ ಅಮ್ಮಲ್‌ದಾರಿಯು ತಾ. 22-9-1941ಕ್ಕೆ ಏಲಂನ ಶರತ್ತುಗಳನ್ನು ನಿಶ್ಚಯಿಸುವ ಬಗ್ಗೆ ಮೇಲ್ತೋರುವ ಕೋರ್ಟಿನಲ್ಲಿ ಇಟ್ಟಿರುವದ್ರಿಂದ ಆ ದಿವಸ 10 ಘಂಟೆಗೆ ಹಾಜ್ರಾಗಿ ನಿಮಗೇನಾದ್ರು ಆಕ್ಷೇಪವಿದ್ದ ಪಕ್ಷದಲ್ಲಿ ಉದಹರಿಸದಿದ್ದರೆ ನಿಮ್ಮ ಗೈರಹಾಜರಿಯಲ್ಲಿ ಇತ್ಯರ್ಥಿಸಲಾಗುವುದು

By order of Court.

Puttur } D. MANGESHA RAO,
24-8-'41 } Pleader for petitioner.

BHUVANENDRA PRODUCTS LTD.,

Head Office and Factory:

KATAPADI S. Kanara

Depots:

1 Maharatha Galli, Hubli.
2 57 Big street, Triplicane, Madras.

" BHUVANENDRA "

Danthadavan Choorna

Economical in use. Cheapest in value
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು.—

ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚೆಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

‘ಓಂಪೋನಾ’

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-
ದಿ ಪಾಪ್ಯುಲರ್ ಸ್ಟೋರ್ಸ್
ಮಂಗಳೂರು.

Stockists —

Messrs. Dadha & Co., MADRAS.

THE PIE-MONEY BANK, LTD.

Maidan Road, MANGALORE

Undertakes all kinds of Banking Business Current Account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100 to Rs 5000 run regularly on systematic lines Unique Banking facilities to Businessmen and interested Public

Apply for particulars—

K. R. GURU, *Managing Director*

THE BANK OF MANGALORE LIMITED

HEAD OFFICE MANGALORE ESTD 1931

Branches —MOODABIDRI & PADUBIDRI

NOTICE

On and from 1st January 1941 the following are the revised rates of interest on deposits,

FIXED DEPOSITS

For 2 years or over	5 per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3 .

All kinds of banking business transacted

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,

The Combined Booking Agency, Mangalore

ಬಿಡಿ ಸಂಚಿಕೆ ಬೆಲೆ ಒಂದಾಣೆ. ವಾರ್ಷಿಕ ಚಂದಾ ರೂ. 3-0-0 ಅಂಚೆ ವೆಚ್ಚ ಸೇರಿ ರೂ. 3-13-0 Regd. No. M. 3480.

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 5-9-1941 [ಸಂಚಿಕೆ 36]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿವು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI, — MANGALORE, — CALICUT — MADRAS,
TRIVANDRUM, BANGALORE City, and BOMBAY 4.

ಇಂದು ಹಳ್ಳಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಪ್ರಪಂಚದಲ್ಲಿಯೇ ಅತ್ಯಂತ ಭೀಷಣವಾದ ಫಿರಂಗಿ!

ಪ್ರಪಂಚದಲ್ಲಿಯೇ ಬಲವಂತವಾದ ಮಹಾ ಫಿರಂಗಿಗಳಲ್ಲಿ ಇದೊಂದ ಇದು ಬ್ರಿಟಿಷರ ಸ್ವಾಧೀನದಲ್ಲಿದೆ. ಇದರ ಶಕ್ತಿ ಮತ್ತು ಗುಣಗಳ ವಿಷಯವು ಗುಟ್ಟಾಗಿಡಲಾಗಿದೆಯಂತೆ

KANNADA ILLUSTRATED WEEKLY

'ಓವಲ್‌ಟಿನ್'
OVALTINE
UNTOUCHED BY HAND
AN IDEAL BEVERAGE
A COMPLETE FOOD
TRADE MARK
OVALTINE
TONIC FOOD BEVERAGE
LARGE SIZE
★ ಆರೋಗ್ಯದಲ್ಲಿದ್ದ ಸಂಸಾರವೇ ★
ಸುಖಮಯ ಸಂಸಾರ
ನಿಮ್ಮ ಕುಟುಂಬದ ಪ್ರತಿ ಒಬ್ಬನಿಗೂ ಯಾವಾಗಲೂ "ಓವಲ್ಟಿನ್"ಕೊಡಿರಿ, ಪ್ರತಿ ಕಡೆಯಲ್ಲಿಯೂ ಸಾವಿರಾರು ಜನರು ಅನುಸರಿಸುತ್ತಿರುವ ಉದಾಹರಣೆಯನ್ನೇ ಅನುಸರಿಸಿರಿ. ಶ್ರೇಷ್ಠವಾದ ಪೋಷಣೆಯ ಗುಣವುಳ್ಳ ಈ ಪಾನೀಯವು ಆರೋಗ್ಯ, ಬಲ ಹಾಗೂ ಚೇತನವನ್ನೀಯುತ್ತದೆ.
ಮಕ್ಕಳು ಹಾಗೂ ಪ್ರಾಯಸ್ಥರು ಇದರ ರುಚಿಯನ್ನು ಬಹಳ ಮೆಚ್ಚುತ್ತಾರೆ. "ಓವಲ್ಟಿನ್"ನ ಪ್ರತೀ ಒಂದು ಹನಿಯೂ ಶ್ರೇಷ್ಠವಾದ ಪೋಷಣೆಯಿಂದ ಕೂಡಿದ್ದು ದೇಹ, ಮೆದುಳು ಹಾಗೂ ನರನಾಡಿಗಳನ್ನು ಉತ್ತೇಜನಸ್ಥಿತಿಯಲ್ಲಿರುತ್ತದೆ. ನಿಮ್ಮ ಮಕ್ಕಳು ಮುಂಗಳ ಸುಖವು ಅವರ ಆರೋಗ್ಯದ ಮೇಲೆ ಹೊಂದಿಕೊಂಡಿರುವುದೆಂದು
ನೆನಪಿನಲ್ಲಿಟ್ಟುಕೊಳ್ಳಿರಿ!
"ಓವಲ್ಟಿನ್" ಪ್ರಕೃತಿಯ ಶ್ರೇಷ್ಠ ಟಾನಿಕ್ ಆಹಾರಗಳ ತಯಾರಿಕೆಯಾಗಿರುತ್ತದೆ. ನೆನೆಯ ಹಾಕಿ ವಾಗಿದ ಬಾರ್ಲಿ—ಗನದ ಹಾಲು, ಶ್ರೇಷ್ಠವಾದ ನೈಸರ್ಗಿಕ ಜೀವಾತುಗಳು, ಮತ್ತು ಇತರ ನಕಲಿ ಪಾನೀಯಗಳನ್ನು ತ್ಯಜಿಸಿರಿ. "ಓವಲ್ಟಿನ್"ನ್ನು ಕೊಂಡುಕೊಳ್ಳಿರಿ
"ಓವಲ್ಟಿನ್" ರುಚಿಕರವಾದ ಆಹಾರಪಾನೀಯವಾಗಿರುತ್ತದೆ. ಇದು ಬಿಸಿಯಾಗಲೀ ತಣ್ಣಗಾಗಲೀ ಕುಡಿಯಬಹುದು. ಅದಲ್ಲದೆ ಓವಲ್ಟಿನ್ ಪಾನೀಯವನ್ನು ತಯಾರಿಸಲು ಬಲು ಸುಲಭ. ಪ್ರತಿ ಟಿನ್‌ಗಳ ಒಟ್ಟಿಗೆ ಮೇಲೆ ತಯಾರಿಸುವ ವಿಧಾನವಿದೆ.
ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ
— ದೊರಕಲ್ಪಡುತ್ತದೆ —
SAVE FOR VICTORY
ಡಿಸ್ಟ್ರಿಬ್ಯೂಟರ್ಸ್:
ಗ್ರಹಮ್ಸ್ ಟ್ರೇಡಿಂಗ್ ಕಂ.
(ಇಂಡಿಯಾ), ಲಿಮಿಟೆಡ್.
16, ಬೇಂಕ್ ಸ್ಟ್ರೀಟ್, ಬೊಂಬಾಯಿ ಮತ್ತು ಕಲ್ಕತ್ತ,
ಮದ್ರಾಸು, ಕರಾಚಿ, ರಂಗೂನ್‌ಗಳಲ್ಲಿ.
OV/61/40

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

19—9—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೯—೯—೧೯೪೧

ಸಮರ ಭೂಮಿಯ ಸಂಚಾರ

ಕಳೆದ ಮೂರು ವಾರಗಳಿಂದಲೂ ಲೆನಿನ್‌ಗ್ರಾಡಿನ ಕಾಳಗದ ವಿಷಯವಾಗಿ ನಾವು ಬರೆಯುತ್ತಾ ಬಂದಿದ್ದೇವೆ ಜರ್ಮನ್ ಸೇನೆಯಂತಹ ಉದ್ದಾಮ ದಲದೊಡನೆ ಇಷ್ಟು ಸಮಯಗಳ ವರೆಗೆ ಪ್ರತಿಭಟಿಸಿ ಲೆನಿನ್‌ಗ್ರಾಡನ್ನು ರಕ್ಷಿಸಿಕೊಂಡು ಬಂದ ಬಗ್ಗೆ ರಶ್ಯನರನ್ನು ಯಾರಾದರೂ ಕೊಂಡಾಡಲೇ ಬೇಕು, ರಶ್ಯನರ ಈ ಅಸಮ ಸಾಹಸದ ಹೋರಾಟದಿಂದಾಗಿ ಈಗ ಎಲ್ಲೆಲ್ಲೂ ಹೊಸ ಸ್ಫೂರ್ತಿ ಬಂದಿದೆ, ಬ್ರಿಟನೂ ಸ್ವಲ್ಪ ಹೆಚ್ಚಿನ ಧೈರ್ಯ ತಾಳಿದೆ. ಹಿಮಗಾಲವು ಸನ್ನಿಹಿತವಾಗುತ್ತಾ ಬರುವುದರಿಂದ, ರಶ್ಯನರಿಗೆ ಇನ್ನಷ್ಟು ಅನುಕೂಲ ಸಮಯವೇ ಬಂದೊದಗಿತು, ಇಷ್ಟರ ತನಕ ಶತ್ರುವನ್ನು ಎದುರಿಸಿದ ರಶ್ಯನರು ಮುಂದಿನ ಹಿಮಗಾಲದಲ್ಲಿ—ಜರ್ಮನರಿಗೆ ಬಹಳ ಪ್ರತಿಕೂಲವಾದ ವಾತಾವರಣವೇ ಇರುವಾಗ—ಅವರನ್ನು ತಲೆಯೆತ್ತಲು ಬಿಡಲಾರರೆಂದು ಹಲವರ ಊಹೆಯಾಗಿದೆ

ಇಲ್‌ಮೆನ್ ಸರೋವರದ ಬಳಿ

ಇಲ್‌ಮೆನ್ ಸರೋವರದ ದಕ್ಷಿಣ ಪ್ರದೇಶದಲ್ಲಿ ನಡೆದ ಭೀಕರವಾದ ಯುದ್ಧದಲ್ಲಿ ರಶ್ಯನರ ಸೈನ್ಯಗಳು ಪರಾಜಯ ಹೊಂದಿದುವೆಂದೂ, ೫೩,೦೦೦ಕ್ಕೆ ಮೇಲ್ಪಟ್ಟು ರಶ್ಯನರು ಸೆರೆಹಿಡಿಯಲ್ಪಟ್ಟರೆಂದೂ, ಅನೇಕ ರಶ್ಯನ್ ಯುದ್ಧ ಸಾಮಗ್ರಿಗಳು ನಾಶಗೊಳಿಸಲ್ಪಟ್ಟುವೆಂದೂ ಜರ್ಮನ್ ಸುದ್ದಿಖಾತೆಯು ಪ್ರಕಟಿಸಿದೆ. ಇದರಿಂದ ಇಲ್‌ಮೆನ್ ಸರೋವರದ ಬಳಿ ಜರ್ಮನರಿಗೆ ದೊಡ್ಡ ವಿಜಯವೇ ದೊರಕಿತೆಂದಾಯಿತು. ಕಳೆದ ವಾರ ಆ ಸರೋವರದ ಬಳಿ ಭೀಕರವಾದ ಕಾಳಗ ನಡೆದಿತ್ತು. ರಶ್ಯನರು ಒಳ್ಳೆಯ ವೀರಾವೇಶದಿಂದಲೇ ಕಾದಾಡಿದರು. ಈ ಸರೋವರವು ನೊವ್ರೋಗ್ರಾಡಿನ ಬಳಿಯಿದೆ. ಅದರ ದಕ್ಷಿಣದಲ್ಲಿ ವಲ್ಡಾಯ ಪರ್ವತ ಪ್ರದೇಶವೂ, ಅದರ ದಕ್ಷಿಣದಲ್ಲಿ ವಿಲೀಕಿಲೂಕಿ ಭಾಗವೂ ಇದೆ.

ರಶ್ಯನ್ ರಣಭೂಮಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಘೋರ ಕಾಳಗವು ಸದಾ ನಡೆಯುತ್ತಲೇ ಇದೆ. ಕಳೆದ ಶನಿವಾರ ಜರ್ಮನ್ ರುಮೇನಿಯನ್ ಸೈನ್ಯಗಳು ಒಡೆಸ್ಸಾವನ್ನು ನುಗ್ಗಲು ಬಹಳ ಸಾಹಸ ಪಟ್ಟವೆಂದು ತಿಳಿದಿದೆ. ಆ ಸಂದರ್ಭದಲ್ಲಿ ವರ್ಣನಾತೀತವಾದಂತಹ ಭೀಕರ ಯುದ್ಧ ನಡೆಯಿತು. ವೈರಿಗಳ ಸಂಖ್ಯೆ ಅಪರಿಮಿತವಾಗಿದ್ದರೂ ರಶ್ಯನರ ಹಡಗು ಪಡೆಯ ಸಹಾಯದಿಂದ ಉತ್ತಮವಾಗಿ ಪ್ರತಿಭಟಿಸಿದರು. ಜರ್ಮನರು ಅಸಿಲ್ ದ್ವೀಪದ ಮೇಲೆಯೂ ತಮ್ಮ ಸೈನ್ಯವನ್ನು ತಂದಿಳಿಸಲು ಯತ್ನಿಸಿದರು, ಆದರೆ ರಶ್ಯನರು ಅಲ್ಲಿಯೂ ತೀವ್ರವಾಗಿ ಪ್ರತಿಭಟನೆ ಮಾಡಿದರು. ಹೀಗೆ ಜರ್ಮನರನ್ನು ಇಷ್ಟರ ವರೆಗೆ ರಶ್ಯನರು ಪರಾಕ್ರಮದಿಂದ ಎದುರಿಸಿಕೊಂಡಿದ್ದಾರೆನಬಹುದು

ಫಿನ್ಲೆಂಡು ಹಿಂತೆಗೆಯಿತು

ಫಿನ್ಲೆಂಡು ರಶ್ಯದ ವಿರುದ್ಧವಾಗಿ ಜರ್ಮನಿಯ ಬೆಂಬಲ ನಿಂತು ಕಳೆದ ಕೆಲವು ಕಾಲದಿಂದ ಹೋರಾಟಕ್ಕಿಳಿದಿತ್ತು ಆದರೆ ಈಗ ಒಮ್ಮೆಗೇ ತನ್ನ ಸೈನ್ಯವನ್ನು ಯುದ್ಧರಂಗದಿಂದ ಹಿಂದಕ್ಕೆಳೆದಿದೆ ಫಿನ್ಲೆಂಡು ತನ್ನ ಗಡಿನಾಡಿನಲ್ಲಿ ಕಳಕೊಂಡ ಸ್ಥಳಗಳನ್ನು ಈ ಯುದ್ಧದಲ್ಲಿ ತಿರುಗಿ ಪಡಕೊಂಡಿತ, ಅದಾದ ಮೇಲೆ ಮುಂದೆ ಯುದ್ಧ ಮಾಡುವುದು ಬೇಡವೆಂದು ಅದರ ಅಭಿಪ್ರಾಯವಿದೆ ತಮ್ಮ ಕೆಲಸತೀರಿದ ಮೇಲೆ ತಾನು ಯಾರೊಡನೆಯೂ ಕಾದಾಡುವುದಿಲ್ಲವೆಂದು ಫಿನ್ಲೆಂಡಿನ ಮಂತ್ರಿಯು ಹೇಳಿದನು ಇದರಿಂದ ರಶ್ಯನರಿಗೂ ಹೆಚ್ಚಿನ ಹೊಟ್ಟೆಯುರಿ ಏಳುವಂತಿಲ್ಲ ಏಕೆಂದರೆ ಮೊದಲು ಅದರ ಸ್ವಾಧೀನವಿದ್ದುದನ್ನೇ ಈಗ ಫಿನ್ಲೆಂಡು ತಿರುಗಿ ಪಡಕೊಂಡಿತೆಂದು ಜರ್ಮನಿಗಾದರೂ ಕೋಪವಾಗುವಂತಿಲ್ಲ, ಫಿನ್ಲೆಂಡು ಅಷ್ಟಾದರೂ ರಶ್ಯನರನ್ನು ಹದಮಾಡಲು ಸಹಾಯ ಮಾಡಿತಷ್ಟೇ ಎಂದು ಹೀಗೆ ಫಿನ್ಲೆಂಡು ಬಹಳ ಬುದ್ಧಿವಂತಿಕೆಯ ಕಾರ್ಯವೊಂದನ್ನು ನಡೆಸಿಬಿಟ್ಟಿದೆಯೆಂದು ಅದು ತಿಳಕೊಂಡಿದೆ ಇದರ ಪರಿಣಾಮ ಈಗಿನ ವಂಚಕ ಜಗತ್ತಿನಲ್ಲಿ—ಹೇಗೆ ಆಗಲಿದೆಯೋ ನೋಡಬೇಕು ರಶ್ಯ ಫಿನ್ಲೆಂಡುಗಳೊಳಗೆ ಒಪ್ಪಂದ ಮಾಡಿಸಲು ಅಮೇರಿಕವು ಮಧ್ಯಸ್ಥಿಕೆ ವಹಿಸಿ ಕೆಲಸ ನಡೆಸುತ್ತಿದೆಯೆಂಬ ಸುದ್ದಿಯೂ ಈಗ ಕೇಳಿಬರುತ್ತದೆ.

ಅಮೇರಿಕಾ ಉಗ್ರವಾಗುತ್ತಿದೆ

ದಿನದಿಂದ ದಿನಕ್ಕೆ ಅಮೇರಿಕವು ಉಗ್ರವಾಗುತ್ತಾ ಬರುತ್ತಿದೆ ಅಮೇರಿಕದ ಹಡಗಗಳ ಮೇಲೆ ಜರ್ಮನ ಜಲಾಂತರ್ಗಾಮಿ ನಾವೆಗಳು ಒಂದೇ ಸಮನೆ ಧಾಳಿ ಮಾಡಲು ಸುರು ಹಚ್ಚಿವೆ, ಈ ಬಗ್ಗೆ ಅಮೇರಿಕವು ಎಚ್ಚರಿಸಿದರೂ ಧಾಳಿ ನಿಂತಂತೆ ಕಂಡು ಬರುವುದಿಲ್ಲ, ಇದರಿಂದ ಜರ್ಮನಿಯು ಅಮೇರಿಕವನ್ನು ಯುದ್ಧರಂಗಕ್ಕೆ ಆಹ್ವಾನಿಸಿದಂತೆಯಾಗಿದೆಯೆಂದೇ ಅಮೇರಿಕನರು ತಿಳಕೊಂಡಿದ್ದಾರೆ. ರೂಸ್ವೆಲ್ಟರೂ ಈ ವಿಷಯ ಬಹಳ ವೀರಾವೇಶಗೊಂಡು ಒಂದು ಭಾಷಣ ಮಾಡಿದರು. ಇದುವರೆಗೆ ತಟಸ್ಥವಾಗಿ ನಿಲ್ಲುವ ತತ್ವವನ್ನು ಅಮೇರಿಕದ ಸಾರಿದೆ, ಆದರೆ ಅಮೇರಿಕವು ಬ್ರಿಟನಿಗೆ ಕೊಡುತ್ತಿರುವ ಹೆಚ್ಚು ಹೆಚ್ಚಿನ ಬೆಂಬಲಗಳಿಂದ ಅದು ಅಪ್ರತ್ಯಕ್ಷವಾಗಿ ಹಿಂದೆಯೇ ಜರ್ಮನಿಯ ವಿರುದ್ಧ ಕಾಳಗ ಕಣಕ್ಕಿಳಿದಂತೆ ಆಗಿತ್ತು ಆದರೆ ಈಗ ತನ್ನ ಆ ತಟಸ್ಥ ಕಾಯಿದೆಯನ್ನೂ ರದ್ದು ಮಾಡಿ ಪ್ರತ್ಯಕ್ಷವಾಗಿ ಯುದ್ಧ ಸಾರುವ ಯೋಚನೆಯೂ ನಡೆಯುತ್ತಿದೆಯೆಂದೂ ಸುದ್ದಿ ಕೇಳುತ್ತದೆ

ಅಮೇರಿಕವು ಯುದ್ಧಕ್ಕಿಳಿವ ವಿಷಯದಲ್ಲಿ ಬಹಳ ಕಾಲದಿಂದ ಆಲೋಚಿಸುತ್ತಿದೆ, ಇಷ್ಟು ತಡವಾಗಿಯೂ ಅದರ ನಿರ್ಧಾರ ತಿಳಿಯದಾಗಿದೆ ಅದರ ನಿರ್ಧಾರವು ಇಂದಿನ ಯುದ್ಧದ ಇತಿಹಾಸದಲ್ಲಿ ಒಂದು ಮಹಾ ನಿರ್ಧಾರವಾಗಬಹುದೇ ಎಂದು ಹಲವರು ಭಾವಿಸುತ್ತಾರೆ

ಇರಾಣ್ ಶಾನ ರಾಜತ್ಯಾಗ

ಇರಾಣ್ ಇತ್ತೀಚೆಗೆ ಒಂದು ವಿಶೇಷವಾದ ಸುದ್ದಿ ಕೇಂದ್ರವಾಗಿದೆ ರಶ್ಯನ್ ಬ್ರಿಟಿಷ್ ದಳಗಳು ಅಲ್ಲಿಗೆ ಹೋಗಿ ಸರಾಗವಾಗಿ ಇರಾಣಿನಲ್ಲಿ ತಳವೂರಿದವು ಜರ್ಮನರ ಚಟುವಟಿಕೆಗಳನ್ನು ಆ ಕಡೆಯಲ್ಲಿ ಕಡಿಮೆ ಮಾಡುವ ನಿಮಿತ್ತ ಹಾಗೆ ಮಾಡಲಾಗಿದೆಯೆಂದು ಪ್ರಕಟವಾಗಿತ್ತು, ಮತ್ತೆ ಅಲ್ಲಿಂದ ಜರ್ಮನರನ್ನು ಬೆನ್ನಟ್ಟುವ ಕಾರ್ಯವೂ ಈಗ ರಶ್ಯ ಬ್ರಿಟಿಷರ ಒತ್ತಾಯದಿಂದ ಕೈಕೊಳ್ಳಲಾಗಿದೆ. ಇಷ್ಟರಲ್ಲಿ ಇರಾಣಿನ ಅರಸು ರೇಝಾ ಆಲಿಖಾನ್ ಪೆಹಲ್ವಿಯು ಸಿಂಹಾಸನಕ್ಕೆ ರಾಜಿನಾಮೆ ಕೊಟ್ಟಿರುವ ಸುದ್ದಿಯೊಂದೂ ಬಂದಿರುತ್ತದೆ. ಆತನ ಹಿರಿಯ ಮಗನು ಪಟ್ಟಕ್ಕೇರಿದನಂತೆ. ಈ ವಿಷಯದಲ್ಲಿ ಈಗ ಇರಾಣ್ ಪಾರ್ಲಿಮೆಂಟಿನ ವಿಶೇಷ ಸಭೆ ಕೂಡಿದೆ. ಆರೋಗ್ಯ ಚೆನ್ನಾಗಿಲ್ಲದ್ದರಿಂದ ಸಿಂಹಾಸನ ತ್ಯಾಗಮಾಡುವ ಪ್ರಸಂಗ ಬಂತೆಂದೂ ಒಂದು ಸುದ್ದಿ ಹರಡಲ್ಪಟ್ಟಿದೆ. ಆದರೆ ಇದರ ವಿವರವು ಬೇಗನೇ ನಮಗೆ ತಿಳಿಯಬಹುದು.

ದಿ ಅತ್ತೂರು ಎಂಡ್ ಜನಾಹರ ಬೇಂಕ್ ಲಿಮಿಟೆಡ್,
ಕಂಕನಾಡಿ, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ನಿರಖು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು. ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು

ರೂ. 5ರಿಂದ 25ರ ವರೆಗೆ ಸೇ 9% ರೂ 26ರಿಂದ 100ರ ವರೆಗೆ ಸೇ ೮%
ರೂ. 101ರಿಂದ 500ರ ವರೆಗೆ ಸೇ 7% ರೂ 501 ಮೇಲ್ಪಟ್ಟ ಲೋನುಗಳಿಗೆ 6¼%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ
ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ
ನಿರಖು ಠೇವಣಾತಿ—3 ತಿಂಗಳಿಗೆ—3% ನಿರಖು ಠೇವಣಾತಿ—6 ತಿಂಗಳಿಗೆ—3½%
ನಿರಖು ಠೇವಣಾತಿ—12 ತಿಂಗಳಿಗೆ—4%

(Sd) *B. Narayana Shetty,*
Agent at Kankanady.

ಸ್ವದೇಶಾಭಿಮಾನಿ

ತಾರೀಕು 19—9—1941

ಎದೆಗಾರಿಕೆಯುಂಟೋ?

ಚರ್ಚಿಲ್ ರೂಸ್‌ವೆಲ್ಟರು, ಜಗತ್ತಿನ ಮಹಾಪ್ರಭುತ್ವಗಳೆರಡರ ಈ ಪ್ರತಿನಿಧಿಗಳು ಅಟ್ಲಾಂಟಿಕಿನಲ್ಲಿ ಭೇಟಿಯಾಗಿ ಎಂಟು ಸೂತ್ರಗಳ ಒಂದು ಸಂಯುಕ್ತ ಶಾಸನವನ್ನು ಪ್ರಕಟಿಸಿದರು. ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯ ಶಾಸನವದೆಂದು ಹಲವರು ಹಿಗ್ಗಿಕೊಂಡರು; ಬ್ರಿಟನು ಭಾರತಗಳೊಳಗೆ ಮಧುರ ಸಂಬಂಧವಾಗಬೇಕೆಂದು ಹಾರೈಸುವ ಹಲವರು ಈ ಶಾಸನವು ಭಾರತಕ್ಕೂ ಅನ್ವಯಿಸಿದರೆ ಮುಂದಿನ ವಿಚಾರವು ಸುಗಮವಾಗುವುದೆಂದು ಹಾರೈಸಿದ್ದರು ಮೇಜರ್ ಅಟ್ಲಿಯವರೂ ಈ ಕುರಿತು ಒಂದು ಹೇಳಿಕೆ ಕೊಡುತ್ತಾ ಅದು 'ಬಿಳಿಯ'ರಿಗೆ ಮಾತ್ರವಲ್ಲ 'ಕರಿಯ'ರಿಗೂ ಅನ್ವಯಿಸುತ್ತದೆಯೆಂದು ಸಾರಿದ್ದರು. ಇಷ್ಟೆಲ್ಲಾ ಸಂಗತಿಗಳು ನಡೆದಿದ್ದಂತೆ, ಮೊನ್ನೆ ಮೊನ್ನೆ ಚರ್ಚಿಲರು, ಈ ಜನರ, ಹೆಚ್ಚಾಗಿ ಭಾರತೀಯರ ಮನಸ್ಸಿನಲ್ಲಿದ್ದ ಸಂದೇಹವನ್ನು ಪರಿಹರಿಸುವಂತೆ, ಪಾರ್ಲಿಮೆಂಟಿನಲ್ಲಿ ಒಂದು ಭಾಷಣವೀಯುತ್ತಾ ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂಬುದನ್ನು ಅಧಿಕಾರಯುತವಾಗಿ ಸ್ಪಷ್ಟಪಡಿಸಿದ್ದಾರೆ

ಚರ್ಚಿಲರ ಈ ತರದ ಸ್ಪಷ್ಟೋಕ್ತಿಗಾಗಿ, ಭಾರತೀಯರು ಅವರನ್ನು ಅಭಿನಂದಿಸಲೇಬೇಕು. ಈಗಾಗಲೇ ಹಲವರು ಭಾರತದ ಮುಖಂಡರು ಅವರ ಸ್ಪಷ್ಟೀಕರಣಕ್ಕಾಗಿ ಅಭಿನಂದಿಸಿದ್ದಾರೆ. ಅದರೊಡನೆ, ಭಾರತದ ವಿಷಯದಲ್ಲಿ ಇನ್ನೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ತಳೆದ ಧೋರಣವನ್ನು ಕಟುವ್ಯಗ್ರವಾಗಿ ಖಂಡಿಸಿದ್ದಾರೆ. ಪ್ರಪಂಚದ ಇತರ ರಾಷ್ಟ್ರಗಳಿಗೆ ಅದು ಸ್ವಾತಂತ್ರ್ಯಶಾಸನವಾಗಿದ್ದರೆ ಭಾರತದ ವಿಷಯದಲ್ಲಿ ಅದು ದಾಸ್ಯ ಶಾಸನವಾಗಿಯೇ ಉಳಿದುದರ ಬಗ್ಗೆ ಬಹಳ ಪಶ್ಚಾತ್ತಾಪ ಸೂಚಿಸಿದ್ದಾರೆ. ಬ್ರಿಟಿಷ್ ಹಿತಚಿಂತಕರನೇಕರು, ಬ್ರಿಟಿಷ್ ರಾಜಕಾರಣಿಗಳ ಈ ತರದ ಸಂಕೋಚ ದೃಷ್ಟಿಗಾಗಿ ನಾಚಿಕೊಂಡಿದ್ದಾರೆ. ಶ್ರೀ ಎನ್. ಆರ್. ಸರ್ಕಾರರಂತಹವರೇ, ಈ ಸಂದರ್ಭದಲ್ಲಿ ಬ್ರಿಟನಿಗೆ ಭಾರತದ ಬೆಂಬಲವನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡಬೇಕೆಂದು ಮುಂದೆಬಂದವರು, ಈ ಸ್ಪಷ್ಟೀಕರಣವನ್ನು ನೋಡಿ ಬೆರಗಾಗಿ ಉತ್ಸಾಹ ಹೀನರಾಗಿದ್ದಾರೆ.

ಚರ್ಚಿಲರು, ಈ ಸ್ಪಷ್ಟೀಕರಣದಿಂದ ಭಾರತದ ಸ್ವಾತಂತ್ರ್ಯಯೋಧರನ್ನು ಸಂಘಕ್ಕೆ ಕರೆದಂತಾಗಿದೆ. ಕಾಂಗ್ರೆಸಿನವರು ಅವರು ಪಂಥಕ್ಕೆ ಕರೆವ ಮೊದಲೇ ತಮ್ಮ ಹಜ್ಜೆಯನ್ನು ಮುಂದಿಟ್ಟಿದ್ದಾರೆ. ಅವರ ಗಮನ ಎಡೆಬಿಡದೆ ಸಾಗಿದೆ ಆದರೆ ಜಿನ್ನರು ಈ ಪಂಥವನ್ನು ಹೇಗೆ ತೆಗೆದುಕೊಳ್ಳುವರೋ ನೋಡಬೇಕಾಗಿದೆ ರೂಸ್‌ವೆಲ್ಟರಿಗೆ ಅಟ್ಲಾಂಟಿಕ್ ಘೋಷಣೆಯ ವಿಷಯ ಸ್ಪಷ್ಟೀಕರಣಕ್ಕಾಗಿ ತಂತಿ ಕೊಟ್ಟ ಸಾವರ್ಕರರಿಗೆ ಈಗ ತಕ್ಕ ಉತ್ತರ ಬಂದಂತಾಗಲಿಲ್ಲವೆ? ಅವರು ಮುಂದೇನು ಮಾಡಲಿರುವರೋ ನಿರೀಕ್ಷಿಸಬೇಕು ಬೊಂಬಾಯಿ ಪರಿಷತ್ತಿನ ಮಂದಪಕ್ಷದ ಮುಖಂಡರು ಈ 'ಕರೆ'ಗೆ ಹೇಗೆ ಉತ್ತರವೀಯುವರೋ ಗಮನಿಸತಕ್ಕದಾಗಿದೆ ಭಾರತದ ಹಿತಕ್ಕಾಗಿ ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದಲ್ಲಿ ಮಂಡಿಸಿರುವ ಸದಸ್ಯರು ಚರ್ಚಿಲರ ಮಾತನ್ನೇ ಪುಷ್ಟೀಕರಿಸಬೇಕಾಗುವುದೋ ನೋಡಬೇಕು. ಕಾಂಗ್ರೆಸೊಂದನ್ನುಳಿದು ಮಿಕ್ಕ ಯಾವ ಪಕ್ಷದವರಿಗೂ, ಗಾಂಧಿಜಿಯವರನ್ನುಳಿದು ಮಿಕ್ಕ ಬೇರೆ ಯಾವ ಮುಖಂಡರಿಗೂ ತಮ್ಮ ನಿಷೇಧವನ್ನು ಕಾರ್ಯರೂಪವಾಗಿ ತೋರಿಸಲು ಎದೆಗಾರಿಕೆಯುಂಟೋ ಎಂಬ ವಿಷಯವು ಅವಶ್ಯ ಗಮನಿಸಬೇಕಾಗಿದೆ.

ಅಮೆರಿಕವು ಕೆರಳಿದೆ

ಜರ್ಮನಿಯ ಜಲಾಂತರ್ಗಾಮಿನಾವೆಗಳು ಒಂದೇ ಸವನೆ—ಎಚ್ಚರ ಕೊಟ್ಟ ಬಳಿಕವೂ—ಅಮೆರಿಕದ ಹಡಗುಗಳಮೇಲೆ ಧಾಳಿಮಾಡುತ್ತಿರುವುದರಿಂದ ಅಮೆರಿಕವು ಕೆರಳಿದಂತೆ ತೋರುತ್ತದೆ ಇದರಿಂದ ಅಮೆರಿಕವನ್ನು ಜರ್ಮನಿಯು ಸಮರರಂಗಕ್ಕೆ ಆಹ್ವಾನಿಸಿದಂತಾಗಿದೆಯೆಂದು ಹಲವರು ತಿಳಕೊಂಡಂತೆ ಆಗಿದೆ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರಂತೂ ಆ ವಿಷಯದಲ್ಲಿ ಬಹಳ ಅಶಾಂತರಾಗಿ ಉದ್ರೇಕಗೊಂಡಿರುವರು ಮೊನ್ನೆ ಅವರು ಮಾಡಿದ ಭಾಷಣದಿಂದ ವ್ಯಕ್ತವಾಗುತ್ತದೆ. ಜರ್ಮನಿಯ ಮೇಲೆ ಅಮೆರಿಕವು ಅಘೋಷಿತವಾದ ಯುದ್ಧವನ್ನು ಸಾರಿದಂತೆಯೇ ಅವರ ಭಾಷಣದ ವೀರಾವೇಶದ ಮಾತುಗಳಿಂದ ಅರ್ಥವಾಗುತ್ತದೆ. ಅಮೆರಿಕದ ಒಪ್ಪಿಗೆಯಿಲ್ಲದೆ, ಅಮೆರಿಕದ ರಕ್ಷಣೆಗೆ ಅವಶ್ಯವಿದ್ದ ಸಮುದ್ರ ಪ್ರದೇಶಗಳಲ್ಲಿ ಜರ್ಮನ್ ಹಡಗು ಮತ್ತು ಜಲಾಂತರ್ಗಾಮಿಗಳಾವುವೂ ಬಂದರೆ ಅವುಗಳನ್ನು ಕೂಡಲೇ ನಾಶಪಡಿಸಬೇಕೆಂದು ರೂಸ್‌ವೆಲ್ಟರು ಆಜ್ಞೆ ಹೊರಡಿಸಿದ್ದಾರೆ.

ಜರ್ಮನಿಯು ಅಮೆರಿಕದ ಹಡಗುಗಳನ್ನು ಮುಳುಗಿಸುತ್ತಿರುವುದು ಕೇವಲ ತಪ್ಪು. ಅದರಿಂದ ಅಂತರ್ರಾಷ್ಟ್ರೀಯ ಶಾಂತಿಯನ್ನು ಅದು ಬೇಕೆಂದೇ ಕೆಣಕಲು ಇಚ್ಛೆಪಡುವಂತಾಯಿತು. ಆದರೆ ಅಮೆರಿಕವೇ ಅಂತರ್ರಾಷ್ಟ್ರೀಯ ಶಾಂತಿ ಪಾಲನೆಗೆ ಸಹಕರಿಸಿಲ್ಲವೆಂದು ಜರ್ಮನಿಯು ದೂರಲು ಎಡೆಯಿದೆ. ಏಕೆಂದರೆ ಬ್ರಿಟನಿಗೆ ಇಂದು ಅಮೆರಿಕವು ಪಕ್ಷಪಾತಿಯಾಗಿ ಕೊಡುವ ಸಕಲ ಸಹಾಯಗಳೂ ಅದರ ತಾಟಸ್ಥ್ಯ ನೀತಿಯನ್ನು ಕಾಪಾಡಿಕೊಂಡಂತೆ ಆಗುವುದಿಲ್ಲ. ಅಮೆರಿಕದ ಈ ಕಾರ್ಯಗಳಿಂದ, ಅದು ಸಾರಿದ ತಾಟಸ್ಥ್ಯ ನೀತಿಗೆ ತಪ್ಪಿರುವುದೆಂದು ಜರ್ಮನಿಯು ಆರೋಪ ಹಾಕಿದರೆ, ಅಂತಹ ಅಮೆರಿಕವನ್ನು ಜರ್ಮನಿಯು ಪ್ರತ್ಯಕ್ಷ ಯುದ್ಧಕ್ಕೆ ಕರೆಯುದವುದಾದರೆ, ಈ ರೀತಿಯ ವಾದದಲ್ಲಿ ಒಂದು ತೆರನ ಪಂಥವೇ ಅಡಕವಾಗಿದೆಯೆನಿಸಬಹುದು

ಹೇಗಿದ್ದರೂ ಜರ್ಮನಿಯ ಮೇಲೆ ರೂಸ್‌ವೆಲ್ಟರು ಕೆರಳಿದ ವಿಷಯವು ಸ್ಪಷ್ಟ ಇಷ್ಟರಲ್ಲಿಯೇ ಅಮೆರಿಕವು ತಾಟಸ್ಥ್ಯ ನೀತಿಯನ್ನು ಬಿಟ್ಟುಬಿಡುವ ನಿರ್ಧಾರ ಮಾಡುತ್ತಿದೆಯೆಂದು ಸುದ್ದಿಯಿದೆ. ಮುಂದಿನ ಘಟನೆಗಳು ಅತ್ಯಂತ ಕುತೂಹಲಪೂರ್ವಕ ಗಮನೀಯವಾಗಿದೆ.

ಮೋಟರ್ ಕೈಗಾರಿಕೆ

'ಭಾರತದಲ್ಲಿ ಈಗ ಮೋಟರು ಕೈಗಾರಿಕೆಯ ಕಾರ್ಯವನ್ನು ಪ್ರಾರಂಭಿಸಿದರೆ, ಅದರಿಂದ ಯುದ್ಧ ಯತ್ನಕ್ಕೆ ತೊಂದರೆಯುಂಟಾಗುವುದು' ಎಂದು ಅಮೆರಿಯವರು ಹೇಳಿದ ಮಾತನ್ನು ನಾವು ಒಪ್ಪಲಾರೆವು. ಶ್ರೀ ವಾಲಚಂದ ಹೀರಾಚಂದರು ಮೈಸೂರು ಸರಕಾರದ ಸಹಾಯದಿಂದ ಬೆಂಗಳೂರಲ್ಲಿ ಒಂದು ಮೋಟರು ಕೈಗಾರಿಕೆಯನ್ನು ಪ್ರಾರಂಭಿಸಲಿದ್ದುದು ಸರಕಾರದ ಆತಂಕದಿಂದಾಗಿ ನಿಲ್ಲಿಸಲ್ಪಟ್ಟಿತೆಂದು ಸ್ವಲ್ಪ ಸಮಯದ ಹಿಂದೆಯೇ ತಿಳಿದುಬಂದಿದೆ ಭಾರತದಲ್ಲಿ ಮೋಟರು ಕೈಗಾರಿಕೆಯು ಪ್ರಾರಂಭಿಸಲ್ಪಟ್ಟರೆ, ಈ ಸಮಯದಲ್ಲಿ ಅದು ಬೇಗನೇ ಪ್ರಗತಿಗೆಬಂದು, ಮುಂದೆ ಯುದ್ಧ ಮುಗಿದ ಬಳಿಕ ವಿದೇಶಿಯ ಭಂಡವಾಳಗಾರರಿಗೆ ಭಾರತದಿಂದ ಸಿಗುವ ಹಣದ ರಾಶಿ ಕಡಿಮೆಯಾದೀತೆಂದು ಹೀಗೆ ತಡೆಯುವ ಪ್ರಯತ್ನಮಾಡಲಾಗಿದೆಯೆಂಬುದಾಗಿ ಎಲ್ಲಾ ಕಡೆಗಳಿಂದಲೂ ಟೀಕೆಗಳು ಕೇಳಿಬರುತ್ತದೆ.

ಯುದ್ಧಕಾರ್ಯಕ್ಕೇ ಮೋಟರುಗಳು ಅತ್ಯಾವಶ್ಯವಿವೆ. ಭಾರತದಲ್ಲಿ ಮೊದಲಿದ್ದ ಸೈನಿಕರಿಗಿಂತ ಈಗ ಹೆಚ್ಚು ಸೈನಿಕರಿರುವರು; ಅವರಿಗೆಲ್ಲಾ ತುಂಬಾ ವಾಹನಗಳು ಬೇಕಾಗಿವೆ, ಇದನ್ನೊದಗಿಸುವುದು ಸರಕಾರದ ಕರ್ತವ್ಯ. ಇದು ಪರದೇಶದಿಂದ ಬರುವುದಕ್ಕಿಂತ ಸ್ವದೇಶದಲ್ಲಿಯೇ ಮಾಡಲಾದರೆ ವಿಹಿತವಲ್ಲವೇ? ಹೀಗಿರುವಾಗ ಭಾರತದಲ್ಲಿ ಒಂದು ಮೋಟರು ಕಾರ್ಖಾನೆ ಸ್ಥಾಪಿಸುವ ವಿಷಯ ಸರಕಾರವು ಆ ಕುರಿತು ನೆವನ ಹೇಳಿ ಅಡ್ಡಗಾಲು ಹಾಕುವುದು ಉಚಿತವಾದುದಲ್ಲ. ಭಾರತಕ್ಕೆ ಕಳೆದ ಎರಡು ವರ್ಷಗಳಲ್ಲಿ ೨೪ ಕೋಟಿ ರೂಪಾಯಿ ಬೆಲೆಬಾಳುವ ೬೦೦೦೦ ಮೋಟರುಗಳು ಬಂದಿದ್ದು ಅಷ್ಟು ಹಣವೂ ನೀರಿನಂತೆ ವಿದೇಶಕ್ಕೆ ನಮ್ಮಲ್ಲಿಂದ ಹರಿದುಹೋಗಿದೆ. ಇದು ದೊಡ್ಡ ಸುಲಿಗೆಯಾಗಿದೆ. ಭಾರತದಲ್ಲಿಯೇ ಒಂದು ಮೋಟರು ಕಾರ್ಖಾನೆಯನ್ನು ಸ್ಥಾಪಿಸಿದರೆ ರಾಷ್ಟ್ರಕ್ಕೆ ಹಿತವಿಲ್ಲವೆ? ಯುದ್ಧ ಯತ್ನಕ್ಕೆ ಆತಂಕವಿದೆಯೆಂಬ ಮಾತು ಕುಂಟು ನೆವನವಲ್ಲವೆ? ಭಾರತದಲ್ಲಿ ಮೋಟರು ಕೈಗಾರಿಕೆಗೆ ಬೇಕಾದ ಸಾಧನ ಸಂಪತ್ತುಗಳಿರುವಾಗ, ಸಾಹಸಿಗಳು ಮುಂದೆ ಬರುವಾಗ ಸರಕಾರವು ಅಡ್ಡ ಬರುವುದು ಸರಿಯಾದುದೆಂದು ನಾವು ಖಂಡಿತವಾಗಿಯೂ ಹೇಳಲಾರೆವು.

ನೋಟಗಳು

"ಕಾಂಗ್ರೆಸ್ ಮಂತ್ರಿ ಮಂಡಳಗಳು ಪ್ರಾಂತಗಳಲ್ಲಿ ಅಧಿಕಾರ ವಹಿಸದೆ ಚುನಾವಣೆ ನಡೆಸಿ ಪ್ರಯೋಜನವಿಲ್ಲ; ಆದರಿಂದ ರಾಜ್ಯ ಘಟನಾತ್ಮಕ ಸರಕಾರಕ್ಕೂ ಉಪಕಾರವಾಗುವಂತಿಲ್ಲ"—ಹೀಗೆಂದು ಭಾರತದಶಾಸನ ಸಭೆಗಳ ಚುನಾವಣೆಯನ್ನು ಮುಂದುವರಿಸುವ ನಿರ್ಣಯವನ್ನು ಕಾಮನ್ಸ್ ಸಭೆಯಲ್ಲಿ ಮಂಡಿಸಿ ಅಮೆರಿಯವರು ಅಭಿಪ್ರಾಯವಿತ್ತರು.

* * *

ಕಾಂಗ್ರೆಸ್ ಮಂತ್ರಿ ಮಂಡಳಗಳು ಅಧಿಕಾರ ವಹಿಸದಿದ್ದರೆ, ಭಾರತದ ಆಡಳಿತವು ಸರಿಯಾಗಿ ನಡೆಯಲಾರದು ಎಂಬುದು ಇದರಿಂದ ಅರ್ಥವಾಗುವುದಿಲ್ಲವೆ? ಭಾರತದಲ್ಲಿ ಈಗ (ಕಾಂಗ್ರೆಸ್ ಮಂತ್ರಿಗಳೆಲ್ಲರೂ ಸೆರೆಮನೆಗೆ ಸೇರಿಸಲ್ಪಟ್ಟಾಗಲೂ) ಆಡಳಿತವು ಸುಸೂತ್ರವಾಗಿ ಸಾಗುತ್ತಿದೆಯೆಂಬ ಬ್ರಿಟನಿನ ಆಶ್ವಾಸನೆಯಲ್ಲಿ ತಿರುಳಿಲ್ಲವೆಂಬುದು ಇದರಿಂದ ವ್ಯಕ್ತವಾಗುವುದಿಲ್ಲವೆ?

* * *

ಚುನಾವಣೆ ನಡೆಸಿದರೆ, ಈಗಿನ ಆಡಳಿತವು ಕಟುವಾದ ಟೀಕೆಗೆ ಗುರಿಯಾಗಬಹುದೆಂಬ ಸಂದೇಹವನ್ನು ಪಾರ್ಲಿಮೆಂಟಿನ ಸದಸ್ಯರೇ ಕೆಲವರು ಎತ್ತಿದರು ಕಾಂಗ್ರೆಸಿನ ಸತ್ಯಾಗ್ರಹಕ್ಕೆ ಅದರಿಂದ ಬಲ ದೊರಕಿದಂತಾಗಬಹುದೆಂದೂ ಕೆಲವರು ಅಂಜಿದರು. ಯುದ್ಧಯತ್ನದಲ್ಲಿ ಬ್ರಿಟನಿಗೆ ಭಾರತವು ಸ್ವೇಚ್ಛಾಪೂರ್ವಕ ಸಕಲ ಸಹಾಯಗಳನ್ನೂ ಕೊಡುತ್ತಿದೆಯೆಂಬ ಬ್ರಿಟನಿನ ಮಾತು ಕೇವಲ "ಬಾಯಿ ಬಡಾಯಿ" ಎಂಬ ವಿಷಯವು ಇದರಿಂದ ಸ್ಪಷ್ಟವಾಗುವುದಿಲ್ಲವೆ?

* * *

ಚುನಾವಣೆಗೆ ಎಡೆಕೊಟ್ಟರೆ ಜಾತೀಯ ಜಗಳವು ಹೆಚ್ಚಾಗುವುದೆಂದು ಹೇಳಿದ ಮಾತು ತೀರಾ ಅಪಹಾಸ್ಯವಾಗಿ ತೋರದಿರದು. ಕಳೆದ ಚುನಾವಣೆಯಲ್ಲಿ ಅಂತಹ ಪ್ರಸಂಗಗಳು ಬಂದೊದಗಿದ್ದು ಯಾರ ನೆನಪಿನಲ್ಲೂ ಇಲ್ಲ ಅಥವಾ ಈಗ ಸೆರೆಮನೆಗೆ ಸೇರಿಸಲ್ಪಟ್ಟ ಮುಖಂಡರು ಜಾತೀಯ ಜಗಳಕ್ಕೆ ಜವಾಬ್ದಾರರಾಗುವರೆಂಬ ಸಂಶಯವೂ ಯಾರಿಗೂ ಇಲ್ಲ. ಆದ್ದರಿಂದ ಇಂತಹ ಮಾತುಗಳನ್ನು ಆಡಲು ಬ್ರಿಟಿಷ್ ರಾಜಕಾರಣಿಗಳೇ ತಕ್ಕವರೆನಬೇಕು.

* * *

ನಿರಂಕುಶಾಧಿಕಾರ ನಡೆಸಲೇಬೇಕಾದರೆ ಚುನಾವಣೆಗೆ ಅನುಕೂಲ ಮಾಡಿಕೊಡದಿರುವುದೇ ಒಳ್ಳೆಯದು. ಏಕೆಂದರೆ ಚರ್ಚಿಲರೇ ಹೇಳಿದ್ದಾರೆ:—"ಭಾರತದ ಸಂಗತಿಯು ಪ್ರತ್ಯೇಕವಾದುದು" ಎಂದು.

ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆ?

ಬ್ರಿಟನು ಅಮೇರಿಕಗಳ ಯುದ್ಧೋದ್ದೇಶ ಸ್ಪಷ್ಟವಾಯಿತು

ಸ್ವಾತಂತ್ರ್ಯ ಘೋಷಣೆಯು ಟೊಳ್ಳು ಮಾತಾಯಿತು

— ಭಾರತದ ಮುಖಂಡರ ಉಗ್ರ ಟೀಕೆಗಳು

"ಅಟ್ಲಾಂಟಿಕ್ ಘೋಷಣೆಯು ಹಿಟ್ಲರನ ಹಿಡಿತಕ್ಕೆ ಸಿಕ್ಕಿರುವ ಯೂರೋಪಿನ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವುದಲ್ಲದೆ ಮಿಕ್ಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ರಾಷ್ಟ್ರಗಳಿಗೆ ಅನ್ವಯಿಸುವುದಿಲ್ಲ. ಭಾರತದ ಪ್ರಶ್ನೆಯೇ ಬೇರೆಯಾಗಿದೆ. ೧೯೪೦ನೆಯ ಇಸವಿಯ ಅಗಸ್ಟ್ ಘೋಷಣೆಯಂತೆ ಅದರ ವಿಷಯ ನೋಡಲಾಗುತ್ತದೆ. ಭಾರತಕ್ಕೂ ನಮಗೂ ಬಹುಕಾಲವಿದ್ದ ಸಂಬಂಧದಿಂದ, ಅಲ್ಲಿನ ಅನೇಕ ಜನಾಂಗ ಮತ್ತು ಹಿತಗಳ ಬಗ್ಗೆ ನಮ್ಮ ಜವಾಬ್ದಾರಿಯನ್ನು ಪೂರ್ಣಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ"

—ಹೀಗೆಂದು ಮೊನ್ನೆ ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ಭಾಷಣ ಮಾಡುತ್ತಾ ಹೇಳಿದರು. ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೂ ಅನ್ವಯಿಸುವುದು, ಅದು ಜಗತ್ತಿನ ಮಹತ್ತಾದೊಂದು ಸ್ವಾತಂತ್ರ್ಯ ಶಾಸನವೆಂದು ನಂಬಿದ್ದವರು ಇದರಿಂದ ಸಂಪೂರ್ಣ ಕಣ್ಣು ತೆರೆಯುವಂತಾಗಿದೆ, ಬ್ರಿಟನಿನ ರೀತಿನೀತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂತಾಗಿದೆ

ಈ ವಿಷಯದಲ್ಲಿ ಭಾರತದ ಮುಖಂಡರು ಕೊಟ್ಟ ಹಲವು ಹೇಳಿಕೆಗಳ ಸಾರಾಂಶವು ಕೆಳಗೆಕೊಡಲಾಗಿದೆ

ಆಚಾರ್ಯ ಕೃಪಾಲನಿಯವರು

"ಚರ್ಚಿಲ್ಲರ ಹೇಳಿಕೆಯಿಂದ ನಮಗೆ ಸಂತೋಷವಾಗಿದೆ, ಏಕೆಂದರೆ ಅವರು ವಿಷಯವನ್ನು ಮರೆಮಾಚದೆ, ಬ್ರಿಟನಿನ ಧೋರಣೆಯನ್ನು ಸ್ಪಷ್ಟವಾಗಿ ಹೇಳಿದರು. ಯುದ್ಧದ ಚಲನವಲನವೇನೇ ಇರಲಿ, ಸಾಧ್ಯವಾದಷ್ಟು ದೀರ್ಘಕಾಲ ಭಾರತವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂಬುದು ಬ್ರಿಟನಿನ ಬುದ್ಧಿಯಾಗಿದೆ ಜನಾಂಗಗಳ ಅದೃಷ್ಟವೂ ಭವಿಷ್ಯವೂ ವ್ಯಕ್ತಿಗಳ ಮೇಲೆ ಆಧರಿಸಿಲ್ಲ. ಆ ವ್ಯಕ್ತಿಗಳು ಎಂತಹ ಉನ್ನತ ಸ್ಥಾನದಲ್ಲಿದ್ದರೂ ಚಿಂತೆಯಿಲ್ಲ, ಜನಾಭಿಪ್ರಾಯವು ಐಕಮತ್ಯದಿಂದ ರೂಪುಗೊಂಡರೆ ಕೆಲವು ವ್ಯಕ್ತಿಗಳ ಹಂಚಿಕೆಯು ನಾಶವಾಗುವುದು. ಬ್ರಿಟಿಷ್ ಸಾಮ್ರಾಜ್ಯದೊಡನಾಗಲಿ, ಇನ್ನಾವ ಸಾಮ್ರಾಜ್ಯದೊಡನಾಗಲಿ ಭಾರತವು ಎಂದಿಗೂ ಬೆರೆಯುವುದಿಲ್ಲ."

ಶ್ರೀ ಕೆ ಎಂ ಮುನ್ಷಿ

"ರೂಸ್‌ವೆಲ್ಟ್ ಚರ್ಚಿಲ್ಲರ ಅಟ್ಲಾಂಟಿಕ್ ಘೋಷಣೆಯು ಜನಾಂಗದ ಮಹತ್ವದ ಘೋಷಣೆಯೆಂಬ ಬಣ್ಣದಿಂದ ಹೊರಬಿದ್ದಿತ್ತು. ಆದರೆ ಈಗ ಅದರ ಬಣ್ಣ ಬಯಲಾಯಿತು; ಭಾರತದ ಸಂಬಂಧದಲ್ಲಿ ಈ ಶಾಸನವು ಕೇವಲ ಒಂದು ಕಾಗದದ ಚೂರು ಎಂಬುದನ್ನು ಚರ್ಚಿಲರು ಈಗ ಎಲ್ಲರಿಗೂ ತೋರಿಸಿ ಬಿಟ್ಟಿದ್ದಾರೆ"

ಪಂಡಿತ ಮಾಲವೀಯರು

"ಭಾರತ ಮತ್ತು ಬ್ರಿಟನುಗಳೊಳಗೆ ಸ್ನೇಹಸಂಬಂಧವಾಗಬೇಕೆಂದಿಚ್ಛಿಸುವವರಿಗೆಲ್ಲಾ ಚರ್ಚಿಲರ ಭಾಷಣವು ತೀರಾ ನಿರಾಶೆಯನ್ನುಂಟುಮಾಡಿದೆ. ಮಹಾಯುದ್ಧದಿಂದ, ಭಾರತದ ವಿಷಯ ಚರ್ಚಿಲರ ಧೋರಣೆ ಏನೂ ಬದಲಾದಂತೆ ತೋರುವುದಿಲ್ಲ. ಚರ್ಚಿಲ್ಲರು ಇನ್ನು ಮೇಲಾದರೂ ತಮ್ಮ ಪುರಾಣ ಮತವಾದಿತ್ವವನ್ನು ಬಿಟ್ಟುಕೊಟ್ಟು ಅನಿರ್ಬಂಧವಾಗಿ ಭಾರತಕ್ಕೆ ಸ್ವಾತಂತ್ರ್ಯಕೊಡಲು ಮುಂದೆ ಬಂದಿದ್ದರೆ ಹಿತವಾಗುತ್ತಿತ್ತು"

ಸರ್ ತೇಜಬಹದ್ದೂರ್ ಸಪ್ರು

"ಭಾರತೀಯರ ಮೇಲೆ ಚರ್ಚಿಲ್ಲರ ಭಾಷಣವು ವಿಷಾದಕರ ಪರಿಣಾಮವನ್ನುಂಟುಮಾಡಿದ್ದರೆ, ಅದೇನೂ ಆಶ್ಚರ್ಯವಲ್ಲ. ಭಾರತದ ವಿಷಯ ಮುಖ್ಯಮಂತ್ರಿಗಳ ಧೋರಣೆ ಏನೂ ಬದಲಾಗಿಲ್ಲವೆಂದು ತೋರುತ್ತದೆ ಕಳೆದ ಅಗಸ್ಟ್ ಘೋಷಣೆಯ ವಿಷಯವಾಗಿ ಭಾರತೀಯರ ಬೆಂಬಲ ದೊರಕಿಸಲು ವೈಸರಾಯರ ಅವರಿಯ ರೂ ಅಲ್ಪಸಂಖ್ಯಗಳಾಗಿರುವರು ಒಂದು ಪಕ್ಷದವರನ್ನು ಇನ್ನೊಂದ ಪಕ್ಷದವರಿಗೆ ಎದುರು ನಿಲ್ಲಿಸುವ ಧೋರಣೆ ತತ್ಕಾಲಕ್ಕೆ ಹಿತವೆನಿಸಿದರೂ ಕಡೆಗೆ ಅದರಿಂದ ಅನಾಹುತವೇ ಆಗುವುದು ಚರ್ಚಿಲರಂತೂ ಈಗ ಸ್ಪಷ್ಟಪಡಿಸಿದ್ದಾರೆ ಆದರೆ ಲಿನ್‌ಲಿಥ್‌ಗೋ ಮತ್ತು ಅಮೆರಿಯವರು ಮುಂದೆಬಂದು ಚಕ್ರವರ್ತಿ ಸರಕಾರದ ಸ್ಪಷ್ಟ ಧೋರಣೆಯ ಅಗ ಮತೆ ಮಾಡಬೇಕು"

ರೈ। ಆ। ಶ್ರೀನಿವಾಸ ಶಾಸ್ತ್ರಿಗಳು

"ಇದರಿಂದ ನನಗೆ ಆಶ್ಚರ್ಯವೂ ಆಗಿಲ್ಲ, ನಿರಾಶೆಯೂ ಆಗಿಲ್ಲ ಅವರಿಂದ ಇದಕ್ಕೆ ಉತ್ತಮವಾದುದನ್ನು ನಾವು ಹಾರೈಸಲೇ ಇಲ್ಲ ಪ್ರಪಂಚದ ನಲ್ವತ್ತು ಕೋಟಿ ಜನರಿಗೆ ಅಟ್ಲಾಂಟಿಕ್ ಘೋಷಣೆ ಅನ್ವಯಿಸುವುದಿಲ್ಲವೆನ್ನುವುದು ಚರ್ಚಿಲರ ಸಾಹಸವೇ ಸರಿ. ಆದರೆ ಹೀಗೆ ಹೇಳುವಾಗ ಚರ್ಚಿಲರು ಎದೆಗುಂದಿರಲು ಸಾಕು, ಮುಖ್ಯ ಮಂತ್ರಿಗಳು, ಭಾರತ ಮಂತ್ರಿಗಳು, ಮತ್ತು ವೈಸರಾಯರು ಇವರೆಲ್ಲಾ ಕೂಡಿ ಭಾರತೀಯರ ಆಸೆ ಆಕಾಂಕ್ಷೆಗಳಿಗೆ ನೀರೆರೆಯುವುದು ವಿಷಾದಾಸ್ಪದವಾಗಿದೆ"

> **"ನನ್ನ ಮೌನವೇ ಹೆಚ್ಚು ಪರಿಣಾಮಕಾರಿಯಾಗುವುದು"**
>
> ಗಾಂಧೀಜಿಯೊಡನೆ ಚರ್ಚಿಲರ ಈ ಘೋಷಣೆಯ ಕುರಿತು ಪತ್ರಿಕಾ ಪ್ರತಿನಿಧಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದೆ ಸುಮ್ಮನಿರುವುದನ್ನು ನೋಡಿ, ಪತ್ರಿಕಾ ಪ್ರತಿನಿಧಿಯು "ನಾನು ನಿಮಗೆ ಕೇಳಿದ ಪ್ರಮುಖವಾದ ಪ್ರಶ್ನೆಗಳಿಗೆ ನೀವು ಉತ್ತರ ಕೊಡುವುದಿಲ್ಲ ಕಾಂಗ್ರೆಸು ಹೋರಾಡುತ್ತಿರುವ ಭಾರತದ ಸ್ವಾತಂತ್ರ್ಯ ಸಂಪಾದನೆಗೆ ನಿಮ್ಮ ಈ ಮೌನವು ಸಹಕಾರಿಯಾಗುವುದೆಂದು ನೀವು ತಿಳಿಯುತ್ತೀರಾ?" ಎಂದು ಪ್ರಶ್ನಿಸಿದನು ಆಗ ಗಾಂಧೀಜಿ ಅದಕ್ಕೆ ಉತ್ತರ ಕೊಡುತ್ತಾ "ನಾನು ಹಗೆಂದು ತಿಳಿಯದಿದ್ದರೆ, ನೀವು ಕೇಳುವುದಕ್ಕಿಂತ ಮೊದಲೇ ನಾನು ಚರ್ಚಿಲರ ಮಾತಿಗೆ ಉತ್ತರವಾಗಿ ಪ್ರಕಟನೆ ಹೊರಡಿಸುತ್ತಿದ್ದೆನು ನಾನು ಹೇಳಬಹುದಾದ ಯಾವುದೇ ಮಾತಿಗಿಂತಲೂ ಈ ವಿಷಯದಲ್ಲಿ ನನ್ನ ಮೌನವೇ ಹೆಚ್ಚು ವಿಶೇಷ ಪರಿಣಾಮಕಾರಿಯಾಗುವುದೆಂದು ನಾನು ಪ್ರಾಮಾಣಿಕ ಭಾವಿಸುತ್ತೇನೆ. ಮಾತುಗಳು ವಿಶೇಷಗಳಲ್ಲ ಕಾರ್ಯಗಳೇ ಪ್ರಯೋಜನವುಳ್ಳದ್ದು. ನನ್ನ ಕಾರ್ಯವು ಅಖಿಲ ಭಾರತದ ಮುಂದಿದೆ ಅಖಿಲ ಜಗತ್ತಿನ ಮುಂದಿದೆ"
>
> —ಗಾಂಧೀಜಿ

ಬಾಬು ರಾಜೇಂದ್ರ ಪ್ರಸಾದರು

"ತಮ್ಮ ಸಾಮ್ರಾಜ್ಯದ ರಕ್ಷಣೆಯ ಸಲುವಾಗಿಯೇ ಬ್ರಿಟಿಷರು ಹೋರಾಡುತ್ತಿದ್ದಾರೆಯೆಂಬ ವಿಷಯವಾಗಿ, ಯಾರಿ

ಗಾದರೂ ಸಂಶಯವಿದ್ದರೆ ಅದು ಇದರಿಂದ ಪರಿಹಾರವಾದಂತಾಯಿತು ಬ್ರಿಟಿಷ್ ಸಾಮ್ರಾಜ್ಯದಲ್ಲಿರುವ ದುರ್ದೈವೀ ರಾಷ್ಟ್ರಗಳು ಕೊನೆಯ ವರೆಗೆ ಹೀಗೆಯೇ ಕೊಳೆಯಬೇಕಾಗುವುದು ಕಾಂಗ್ರೆಸಿನ ಕಾರ್ಯನೀತಿಯು ಸರಿಯಾಗಿದೆಯೆಂಬುದು ಈಗ ಖಚಿತವಾಗಿ ಗೊತ್ತಾಗಬಹುದು ಕಾಂಗ್ರೆಸು ಚರ್ಚಿಲ್ಲರ ಈ ವ್ಯಾಖ್ಯಾನಕ್ಕಾಗಿ ಕೃತಜ್ಞತೆ ಸೂಚಿಸುತ್ತದೆ"

ವೀರ ಸಾವರ್ಕರರು

"ರೂಸ್‌ವೆಲ್ಟರಿಗೆ ತಾನು ತಂತಿ ಕಳುಹಿಸಿದ್ದು ಪರಿಣಾಮಕಾರಿಯಾಯಿತು, ಅಟ್ಲಾಂಟಿಕ ಘೋಷಣೆಯು ಕೇವಲ ಒಂದು ಕುಟಿಲ ತಂತ್ರವೆಂಬುದು ವ್ಯಕ್ತವಾಯಿತು ಇದು ಬರಿಯ ಉಪಚಾರದ ಮಾತು, ಬರಿಯ ವಂಚನೆಯೆಂಬುದು ಸ್ಪಷ್ಟವಾಯಿತು ಇಂಗ್ಲೆಂಡ್ ಅಮೇರಿಕದ ಯುದ್ಧದ ಉದ್ದೇಶವೇನೆಂಬುದು ಇದರಿಂದ ಬಯಲಾಯಿತು. ಈಗಿನ ಯುದ್ಧದಲ್ಲಿ ಸೇರಿದ ಪ್ರತಿಯೊಂದು ದೇಶವೂ ತನ್ನ ಸ್ವಾರ್ಥಕ್ಕಾಗಿ ಯುದ್ಧ ಮಾಡುತ್ತಿದೆ ರೂಸ್‌ವೆಲ್ಟರೂ ಚರ್ಚಿಲರು ಹೇಳಿದ್ದನ್ನು ಒಪ್ಪುವರೋ ನೋಡಬೇಕು"

ಶ್ರೀ ಎನ್ ಆರ್ ಸರ್ಕಾರ್

"ಬ್ರಿಟನಿಗೆ ಭಾರತದ ಯಾವತ್ತು ಸಹಾಯ ಬೇಕಾದಲ್ಲಿ ಚರ್ಚಿಲರು ಈ ರೀತಿ ಭಾಷಣ ಮಾಡಬಾರದಿತ್ತು ಚರ್ಚಿಲರಿಂದ ಈ ರೀತಿಯ ಮಾತುಗಳು ಹೊರಟದ್ದು ಬ್ರಿಟನಿಗೆ ಸಹಾಯ ಮಾಡಲು ಮುಂದೆ ಬಂದ ನಮ್ಮಂತಹವರ ಉತ್ಸಾಹವನ್ನು ಕುಗ್ಗಿಸುವುದು"

ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆ

"ಅಟ್ಲಾಂಟಿಕ್ ಘೋಷಣೆಯು ಭಾರತದ ವಿಷಯದಲ್ಲಿ ಕೇವಲ ಒಣಮಾತುಗಳ ಮಳೆಯೆಂದಂತಾಯಿತು ಬ್ರಿಟಿಷ್ ಸರಕಾರವು ಪರಕೀಯರು ಯುಗೊಸ್ಲಾವಿಯಕ್ಕೆ ಮಾಡಿದ್ದನ್ನು, ಸಾಮ್ರಾಜ್ಯದ ಮಾಣಿಕದಂತಿದ್ದ ಭಾರತಕ್ಕೆ ತಿರಸ್ಕರಿಸಿದಂತಾಯಿತು ಭಾರತ ಮತ್ತು ಭಾರತೀಯರ ವಿಷಯದಲ್ಲಿ ಚರ್ಚಿಲರು ನಿಂದಿನಿಂದಲೂ ಕಲುಷಿತ ಮನಸ್ಸಿನವರು 'ನ್ಯಾಯದ ಜೊತೆಗೆ ಸ್ವಲ್ಪ ಔದಾರ್ಯ ತೋರಿಸುವ ಸಮಯವು ಈಗ ಬಂದಿದೆ ಇದಕ್ಕೆ ತಪ್ಪಿದರೆ ಅಟ್ಲಾಂಟಿಕ್ ಘೋಷಣೆಯು ಕೋಟ್ಯನುಕೋಟಿ ಜನರಿಗೆ ಡಾಂಬಿಕವೆನಿಸುವುದು".

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS

Banking business of every description transacted.

Full particulars can be had from any of our Branches.

ಸ್ವದೇಶಾಭಿಮಾನಿ

ತಾರೀಕು 19—9—1941

ಎದೆಗಾರಿಕೆಯುಂಟೊ?

ಚರ್ಚಿಲ್ ರೂಸ್‌ವೆಲ್ಟರು, ಜಗತ್ತಿನ ಮಹಾಪ್ರಭುತ್ವಗಳೆರಡರ ಈ ಪ್ರತಿನಿಧಿಗಳು ಅಟ್ಲಾಂಟಿಕಿನಲ್ಲಿ ಭೇಟಿಯಾಗಿ ಎಂಟು ಸೂತ್ರಗಳ ಒಂದು ಸಂಯುಕ್ತ ಶಾಸನವನ್ನು ಪ್ರಕಟಿಸಿದರು. ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯ ಶಾಸನವದೆಂದು ಹಲವರು ಹಿಗ್ಗಿಕೊಂಡರು; ಬ್ರಿಟನು ಭಾರತಗಳೊಳಗೆ ಮಧುರ ಸಂಬಂಧವಾಗಬೇಕೆಂದು ಹಾರೈಸುವ ಹಲವರು ಈ ಶಾಸನವು ಭಾರತಕ್ಕೂ ಅನ್ವಯಿಸಿದರೆ ಮುಂದಿನ ವಿಚಾರವು ಸುಗಮವಾಗುವುದೆಂದು ಹಾರೈಸಿದ್ದರು. ಮೇಜರ್ ಅಟ್ಲಿಯವರೂ ಈ ಕುರಿತು ಒಂದು ಹೇಳಿಕೆ ಕೊಡುತ್ತಾ ಅದು 'ಬಿಳಿಯ'ರಿಗೆ ಮಾತ್ರವಲ್ಲ 'ಕರಿಯ'ರಿಗೂ ಅನ್ವಯಿಸುತ್ತದೆಯೆಂದು ಸಾರಿದ್ದರು. ಇಷ್ಟೆಲ್ಲಾ ಸಂಗತಿಗಳು ನಡೆದಿದ್ದಂತೆ, ಮೊನ್ನೆ ಮೊನ್ನೆ ಚರ್ಚಿಲರು, ಈ ಜನರ್‍ಕ ಹೆಚ್ಚಾಗಿ ಭಾರತೀಯರ ಮನಸ್ಸಿನಲ್ಲಿದ್ದ ಸಂದೇಹವನ್ನು ಪರಿಹರಿಸುವಂತೆ, ಪಾರ್ಲಿಮೆಂಟಿನಲ್ಲಿ ಒಂದು ಭಾಷಣವೀಯುತ್ತಾ ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂಬುದನ್ನು ಅಧಿಕಾರಯುತವಾಗಿ ಸ್ಪಷ್ಟಪಡಿಸಿದ್ದಾರೆ.

ಚರ್ಚಿಲರ ಈ ತರದ ಸ್ಪಷ್ಟೋಕ್ತಿಗಾಗಿ ಭಾರತೀಯರು ಅವರನ್ನು ಅಭಿನಂದಿಸಲೇಬೇಕು, ಈಗಾಗಲೇ ಹಲವರು ಭಾರತದ ಮುಖಂಡರು ಅವರ ಸ್ಪಷ್ಟೀಕರಣಕ್ಕಾಗಿ ಅಭಿನಂದಿಸಿದ್ದಾರೆ. ಅದರೊಡನೆ, ಭಾರತದ ವಿಷಯದಲ್ಲಿ ಇನ್ನೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ತಳೆದ ಧೋರಣವನ್ನು ಕಟ್ಟುಗ್ರವಾಗಿ ಖಂಡಿಸಿದ್ದಾರೆ. ಪ್ರಪಂಚದ ಇತರ ರಾಷ್ಟ್ರಗಳಿಗೆ ಅದು ಸ್ವಾತಂತ್ರ್ಯಶಾಸನವಾಗಿದ್ದರೆ ಭಾರತದ ವಿಷಯದಲ್ಲಿ ಅದು ದಾಸ್ಯಶಾಸನವಾಗಿಯೇ ಉಳಿದುದರ ಬಗ್ಗೆ ಬಹಳ ಪಶ್ಚಾತ್ತಾಪ ಸೂಚಿಸಿದ್ದಾರೆ. ಬ್ರಿಟಿಷ್ ಹಿತಚಿಂತಕರನೇಕರು, ಬ್ರಿಟಿಷ್ ರಾಜಕಾರಣಿಗಳ ಈ ತರದ ಸಂಕೋಚ ದೃಷ್ಟಿಗಾಗಿ ನಾಚಿಕೊಂಡಿದ್ದಾರೆ. ಶ್ರೀ. ಎನ್. ಆರ್. ಸರ್ಕಾರರಂತಹವರೇ, ಈ ಸಂದರ್ಭದಲ್ಲಿ ಬ್ರಿಟನಿಗೆ ಭಾರತದ ಬೆಂಬಲವನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡಬೇಕೆಂದು ಮುಂದೆಬಂದವರು, ಈ ಸ್ಪಷ್ಟೀಕರಣವನ್ನು ನೋಡಿ ಬೆರಗಾಗಿ ಉತ್ಸಾಹ ಹೀನರಾಗಿದ್ದಾರೆ.

ಚರ್ಚಿಲರು ಈ ಸ್ಪಷ್ಟೀಕರಣದಿಂದ ಭಾರತದ ಸ್ವಾತಂತ್ರ್ಯಯೋಧರನ್ನು ಪಂಥಕ್ಕೆ ಕರೆದಂತಾಗಿದೆ. ಕಾಂಗ್ರೆಸಿನವರು ಅವರು ಪಂಥಕ್ಕೆ ಕರೆವ ಮೊದಲೇ ತಮ್ಮ ಹಕ್ಕೆಯನ್ನು ಮುಂದಿಟ್ಟಿದ್ದಾರೆ. ಅವರ ಗಮನ ಎಡೆಬಿಡದೆ ಸಾಗಿದೆ. ಆದರೆ ಜಿನ್ನರು ಈ ಪಂಥವನ್ನು ಹೇಗೆ ತೆಗೆದುಕೊಳ್ಳುವರೋ ನೋಡಬೇಕಾಗಿದೆ. ರೂಸ್‌ವೆಲ್ಟರಿಗೆ ಅಟ್ಲಾಂಟಿಕ್ ಘೋಷಣೆಯ ವಿಷಯ ಸ್ಪಷ್ಟೀಕರಣಕ್ಕಾಗಿ ತಂತಿ ಕೊಟ್ಟ ಸಾವರ್ಕರರಿಗೆ ಈಗ ತಕ್ಕ ಉತ್ತರ ಬಂದಂತಾಗಲಿಲ್ಲವೆ? ಅವರು ಮುಂದೇನು ಮಾಡಲಿರುವರೋ ನಿರೀಕ್ಷಿಸಬೇಕು. ಬೊಂಬಾಯಿ ಪರಿಷತ್ತಿನ ಮುಂದವಕ್ಷದ ಮುಖಂಡರು ಈ 'ಕರೆ'ಗೆ ಹೇಗೆ ಉತ್ತರವೀಯುವರೋ ಗಮನಿಸತಕ್ಕದ್ದಾಗಿದೆ. ಭಾರತದ ಹಿತಕ್ಕಾಗಿ ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಳದಲ್ಲಿ ಮಂಡಿಸಿರುವ ಸದಸ್ಯರು ಚರ್ಚಿಲರ ಮಾತನ್ನೇ ಪುಷ್ಟೀಕರಿಸಬೇಕಾಗುವುದೋ ನೋಡಬೇಕು. ಕಾಂಗ್ರೆಸೊಂದನ್ನು ಳಿದು ಮಿಕ್ಕ ಯಾವ ಪಕ್ಷದವರಿಗೂ, ಗಾಂಧಿಜಿಯೋರ್ವರನ್ನುಳಿದು ಮಿಕ್ಕ ಬೇರೆ ಯಾವ ಮುಖಂಡರಿಗೂ ತಮ್ಮ ನಿಷೇಧವನ್ನು ಕಾರ್ಯರೂಪವಾಗಿ ತೋರಿಸಲು ಎದೆಗಾರಿಕೆಯುಂಟೋ ಎಂಬ ವಿಷಯವು ಅವಶ್ಯ ಗಮನಿಸಬೇಕಾಗಿದೆ.

ಅಮೆರಿಕವು ಕೆರಳಿದೆ

ಜರ್ಮನಿಯ ಜಲಾಂತರ್ಗಾಮಿನಾವೆಗಳು ಒಂದೇ ಸವನೆ—ಎಚ್ಚರ ಕೊಟ್ಟ ಬಳಿಕವೂ—ಅಮೆರಿಕದ ಹಡಗುಗಳಮೇಲೆ ಧಾಳಿಮಾಡುತ್ತಿರುವುದರಿಂದ ಅಮೆರಿಕವು ಕೆರಳಿದಂತೆ ತೋರುತ್ತದೆ ಇದರಿಂದ ಅಮೆರಿಕವನ್ನು ಜರ್ಮನಿಯು ಸಮರರಂಗಕ್ಕೆ ಆಹ್ವಾನಿಸಿದಂತಾಗಿದೆಯೆಂದು ಹಲವರು ತಿಳಕೊಂಡಂತೆ ಆಗಿದೆ. ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರಂತೂ ಆ ವಿಷಯದಲ್ಲಿ ಬಹಳ ಅಶಾಂತರಾಗಿ ಉದ್ರೇಕಗೊಂಡಿರುವರು. ಮೊನ್ನೆ ಅವರು ಮಾಡಿದ ಭಾಷಣದಿಂದ ವ್ಯಕ್ತವಾಗುತ್ತದೆ. ಜರ್ಮನಿಯ ಮೇಲೆ ಅಮೆರಿಕವು ಅಘೋಷಿತವಾದ ಯುದ್ಧವನ್ನು ಸಾರಿದಂತೆಯೇ ಅವರ ಭಾಷಣದ ವೀರಾವೇಶದ ಮಾತುಗಳಿಂದ ಅರ್ಥವಾಗುತ್ತದೆ. ಅಮೆರಿಕದ ಒಪ್ಪಿಗೆಯಿಲ್ಲದೆ, ಅಮೆರಿಕದ ರಕ್ಷಣೆಗೆ ಅವಶ್ಯವಿದ್ದ ಸಮುದ್ರ ಪ್ರದೇಶಗಳಲ್ಲಿ ಜರ್ಮನ್ ಹಡಗ ಮತ್ತು ಜಲಾಂತರ್ಗಾಮಿಗಳಾವುವೂ ಬಂದರೆ ಅವುಗಳನ್ನು ಕೂಡಲೇ ನಾಶಪಡಿಸಬೇಕೆಂದು ರೂಸ್‌ವೆಲ್ಟರು ಆಜ್ಞೆ ಹೊರಡಿಸಿದ್ದಾರೆ.

ಜರ್ಮನಿಯು ಅಮೆರಿಕದ ಹಡಗುಗಳನ್ನು ಮುಳುಗಿಸುತ್ತಿರುವುದು ಕೇವಲ ತಪ್ಪು. ಅದರಿಂದ ಅಂತರ್‍ರಾಷ್ಟ್ರೀಯ ಶಾಂತಿಯನ್ನು ಅದು ಬೇಕೆಂದೇ ಕೆಣಕಲು ಇಚ್ಛೆಪಡುವಂತಾಯಿತು. ಆದರೆ ಅಮೆರಿಕವೇ ಅಂತರ್‍ರಾಷ್ಟ್ರೀಯ ಶಾಂತಿಪಾಲನೆಗೆ ಸಹಕರಿಸಿಲ್ಲವೆಂದು ಜರ್ಮನಿಯೂ ದೂರಲು ಎಡೆಯಿದೆ. ಏಕೆಂದರೆ ಬ್ರಿಟನಿಗೆ ಇಂದು ಅಮೆರಿಕವು ಪಕ್ಷಪಾತಿಯಾಗಿ ಕೊಡುವ ಸಕಲ ಸಹಾಯಗಳೂ ಅದರ ತಾಟಸ್ಥ್ಯ ನೀತಿಯನ್ನು ಕಾಪಾಡಿಕೊಂಡಂತೆ ಆಗುವುದಿಲ್ಲ. ಅಮೇರಿಕದ ಈ ಕಾರ್ಯಗಳಿಂದ ಅದು ಸಾರಿದ ತಾಟಸ್ಥ್ಯ ನೀತಿಗೆ ತಪ್ಪಿರುವುದೆಂದು ಜರ್ಮನಿಯು ಆರೋಪ ಹಾಕಿದರೆ, ಅಂತಹ ಅಮೆರಿಕವನ್ನು ಜರ್ಮನಿಯು ಪ್ರತ್ಯಕ್ಷ ಯುದ್ಧಕ್ಕೆ ಕರೆಯುದವುದಾದರೆ, ಈ ರೀತಿಯ ವಾದದಲ್ಲಿ ಒಂದು ತೆರನ ಪಂಥವೇ ಅಡಕವಾಗಿದೆಯೆನಿಸಬಹುದು.

ಹೇಗಿದ್ದರೂ ಜರ್ಮನಿಯ ಮೇಲೆ ರೂಸ್‌ವೆಲ್ಟರು ಕೆಳಳಿದ ವಿಷಯವು ಸ್ಪಷ್ಟ ಇಷ್ಟರಲ್ಲಿಯೇ ಅಮೆರಿಕವು ತಾಟಸ್ಥ್ಯ ನೀತಿಯನ್ನು ಬಿಟ್ಟುಬಿಡುವ ನಿರ್ಧಾರ ಮಾಡುತ್ತಿದೆಯೆಂದು ಸುದ್ದಿಯಿದೆ. ಮುಂದಿನ ಘಟನೆಗಳು ಅತ್ಯಂತ ಕುತೂಹಲಪೂರ್ವಕ ಗಮನೀಯವಾಗಿದೆ.

ಮೋಟರ್ ಕೈಗಾರಿಕೆ

'ಭಾರತದಲ್ಲಿ ಈಗ ಮೋಟರು ಕೈಗಾರಿಕೆಯ ಕಾರ್ಯವನ್ನು ಪ್ರಾರಂಭಿಸಿದರೆ, ಅದರಿಂದ ಯುದ್ಧ ಯತ್ನಕ್ಕೆ ತೊಂದರೆಯುಂಟಾಗುವುದು' ಎಂದು ಅಮೆರಿಯವರು ಹೇಳಿದ ಮಾತನ್ನು ನಾವು ಒಪ್ಪಲಾರೆವು. ಶ್ರೀ ವಾಲಚಂದ ಹೀರಾಚಂದರು ಮೈಸೂರು ಸರಕಾರದ ಸಹಾಯದಿಂದ ಬೆಂಗಳೂರಲ್ಲಿ ಒಂದು ಮೋಟರು ಕೈಗಾರಿಕೆಯನ್ನು ಪ್ರಾರಂಭಿಸಲಿದ್ದುದು ಸರಕಾರದ ಆತಂಕದಿಂದಾಗಿ ನಿಲ್ಲಿಸಲ್ಪಟ್ಟಿತೆಂದು ಸ್ವಲ್ಪ ಸಮಯದ ಹಿಂದೆಯೇ ತಿಳಿದುಬಂದಿದೆ. ಭಾರತದಲ್ಲಿ ಮೋಟರುಕೈಗಾರಿಕೆಯು ಪ್ರಾರಂಭಿಸಲ್ಪಟ್ಟರೆ, ಈ ಸಮಯದಲ್ಲಿ ಅದು ಬೇಗನೇ ಪ್ರಗತಿಗೆಬಂದು, ಮುಂದೆ ಯುದ್ಧ ಮುಗಿದ ಬಳಿಕ ವಿದೇಶಿಯ ಬಂಡವಾಳಗಾರರಿಗೆ-ಭಾರತದಿಂದ ಸಿಗುವ ಹಣದ ರಾಶಿ ಕಡಿಮೆಯಾದೀತೆಂದು ಹೀಗೆ ತಡೆಯುವ ಪ್ರಯತ್ನಮಾಡಲಾಗಿದೆಯೆಂಬ-ದಾಗಿ ಎಲ್ಲಾ ಕಡೆಗಳಿಂದಲೂ ಟೀಕೆಗಳು ಕೇಳಿಬರುತ್ತದೆ.

ಯುದ್ಧಕಾರ್ಯಕ್ಕೇ ಮೋಟರುಗಳು ಅತ್ಯಾವಶ್ಯವಿವೆ. ಭಾರತದಲ್ಲಿ ಮೊದಲಿದ್ದ ಸೈನಿಕರಿಗಿಂತ ಈಗ ಹೆಚ್ಚು ಸೈನಿಕರಿರುವರು; ಅವರಿಗೆಲ್ಲಾ ತುಂಬಾ ವಾಹನಗಳು ಬೇಕಾಗಿವೆ; ಇದನ್ನೊದಗಿಸುವುದು ಸರಕಾರದ ಕರ್ತವ್ಯ. ಇದು ಪರದೇಶದಿಂದ ಬರುವುದಕ್ಕಿಂತ ಸ್ವದೇಶದಲ್ಲಿಯೇ ಮಾಡಲಾದರೆ ವಿಹಿತವಲ್ಲವೇ? ಹೀಗಿರುವಾಗ ಭಾರತದಲ್ಲಿ ಒಂದು ಮೋಟರು ಕಾರ್ಖಾನೆ ಸ್ಥಾಪಿಸುವ ವಿಷಯ ಸರಕಾರವು ಆ ಕುರಿತು ನೆವನ ಹೇಳಿ ಅಡ್ಡಗಾಲು ಹಾಕುವುದು ಉಚಿತವಾದುದಲ್ಲ. ಭಾರತಕ್ಕೆ ಕಳೆದ ಎರಡು ವರ್ಷಗಳಲ್ಲಿ ೨೪ ಕೋಟಿ ರೂಪಾಯಿ ಬೆಲೆಬಾಳುವ ೬೦೦೦೦ ಮೋಟರುಗಳು ಬಂದಿದ್ದ ಅಷ್ಟು ಹಣವೂ ನೀರಿನಂತೆ ವಿದೇಶಕ್ಕೆ ನಮ್ಮಲ್ಲಿಂದ ಹರಿದುಹೋಗಿದೆ. ಇದು ದೊಡ್ಡ ಸುಲಿಗೆಯಾಗಿದೆ. ಭಾರತದಲ್ಲಿಯೇ ಒಂದು ಮೋಟರು ಕಾರ್ಖಾನೆಯನ್ನು ಸ್ಥಾಪಿಸಿದರೆ, ರಾಷ್ಟ್ರಕ್ಕೆ ಹಿತವಿಲ್ಲವೆ? ಯುದ್ಧಯತ್ನಕ್ಕೆ ಆತಂಕವಿದೆಯೆಂಬ ಮಾತು ಕುಂಟು ನೆವನವಲ್ಲವೆ? ಭಾರತದಲ್ಲಿ ಮೋಟರು ಕೈಗಾರಿಕೆಗೆ ಬೇಕಾದ ಸಾಧನ ಸಂಪತ್ತುಗಳಿರುವಾಗ, ಸಾಹಸಿಗಳು ಮುಂದೆ ಬರುವಾಗ ಸರಕಾರವು ಅಡ್ಡ ಬರುವುದು ಸರಿಯಾದುದೆಂದು ನಾವು ಖಂಡಿತವಾಗಿಯೂ ಹೇಳಲಾರೆವು.

ನೋಟಗಳು...

"ಕಾಂಗ್ರೆಸ್ ಮಂತ್ರಿಮಂಡಳಗಳು ಪ್ರಾಂತಗಳಲ್ಲಿ ಅಧಿಕಾರ ವಹಿಸದೆ ಚುನಾವಣೆ ನಡೆಸಿ ಪ್ರಯೋಜನವಿಲ್ಲ; ಅದರಿಂದ ರಾಜ್ಯ ಘಟನಾತ್ಮಕ ಸರಕಾರಕ್ಕೂ ಉಪಕಾರವಾಗುವಂತಿಲ್ಲ"—ಹೀಗೆಂದು ಭಾರತದಶಾಸನ ಸಭೆಗಳ ಚುನಾವಣೆಯನ್ನು ಮುಂದುವರಿಸುವ ನಿರ್ಣಯವನ್ನು ಕಾಮನ್ಸ್ ಸಭೆಯಲ್ಲಿ ಮಂಡಿಸಿ ಅಮೆರಿಯವರು ಅಭಿಪ್ರಾಯವಿತ್ತರು.

❀ ❀ ❀

ಕಾಂಗ್ರೆಸ್ ಮಂತ್ರಿ ಮಂಡಳಗಳು ಅಧಿಕಾರ ವಹಿಸದಿದ್ದರೆ, ಭಾರತರ ಆಡಳಿತವು ಸರಿಯಾಗಿ ನಡೆಯಲಾರದು ಎಂಬುದು ಇದರಿಂದ ಅರ್ಥವಾಗುವುದಿಲ್ಲವೆ? ಭಾರತದಲ್ಲಿ ಈಗ (ಕಾಂಗ್ರೆಸ್ ಮಂತ್ರಿಗಳೆಲ್ಲರೂ ಸೆರೆಮನೆಗೆ ಸೇರಿಸಲ್ಪಟ್ಟಾಗಲೂ) ಆಡಳಿತವು ಸುಸೂತ್ರವಾಗಿ ಸಾಗುತ್ತಿದೆಯೆಂಬ ಬ್ರಿಟನಿನ ಆಶ್ವಾಸನೆಯಲ್ಲಿ ತಿರುಳಿಲ್ಲವೆಂಬುದು ಇದರಿಂದ ವ್ಯಕ್ತವಾಗುವುದಿಲ್ಲವೆ?

❀ ❀ ❀

ಚುನಾವಣೆ ನಡೆಸಿದರೆ, ಈಗಿನ ಆಡಳಿತವು ಕಟುವಾದ ಟೀಕೆಗೆ ಗುರಿಯಾಗಬಹುದೆಂಬ ಸಂದೇಹವನ್ನು ಪಾರ್ಲಿಮೆಂಟಿನ ಸದಸ್ಯರೇ ಕೆಲವರು ಎತ್ತಿದರು. ಕಾಂಗ್ರೆಸಿನ ಸತ್ಯಾಗ್ರಹಕ್ಕೆ ಅದರಿಂದ ಬಲ ದೊರಕಿದಂತಾಗಬಹುದೆಂದೂ ಕೆಲವರು ಅಂಜಿದರು. ಯುದ್ಧ ಯತ್ನದಲ್ಲಿ ಬ್ರಿಟನಿಗೆ ಭಾರತವು ಸ್ವೇಚ್ಛಾಪೂರ್ವಕ ಸಕಲ ಸಹಾಯಗಳನ್ನೂ ಕೊಡುತ್ತಿದೆಯೆಂಬ ಬ್ರಿಟನಿನ ಮಾತು ಕೇವಲ "ಬಾಯಿ ಬಡಾಯಿ" ಎಂಬ ವಿಷಯವು-ಇದರಿಂದ ಸ್ಪಷ್ಟವಾಗುವುದಿಲ್ಲವೆ?

❀ ❀ ❀

ಚುನಾವಣೆಗೆ ಎಡೆಕೊಟ್ಟರೆ ಜಾತಿಯ ಜಗಳವು ಹೆಚ್ಚಾಗುವುದೆಂದು ಹೇಳಿದ ಮಾತು ತೀರಾ ಅಪಹಾಸ್ಯವಾಗಿ ತೋರದಿರದು. ಕಳೆದ ಚುನಾವಣೆಯಲ್ಲಿ ಅಂತಹ ಪ್ರಸಂಗಗಳು ಬಂದೊದಗಿದ್ದು ಯಾರ ನೆನಪಿನಲ್ಲೂ ಇಲ್ಲ. ಅಥವಾ ಈಗ ಸೆರೆಮನೆಗೆ ಸೇರಿಸಲ್ಪಟ್ಟ ಮುಖಂಡರು ಜಾತೀಯ ಜಗಳಕ್ಕೆ ಜವಾಬ್ದಾರರಾಗುವರೆಂಬ ಸಂಶಯವೂ ಯಾರಿಗೂ ಇಲ್ಲ. ಆದ್ದರಿಂದ ಇಂತಹ ಮಾತುಗಳನ್ನು ಆಡಲು ಬ್ರಿಟಿಷ್ ರಾಜಕಾರಣಿಗಳೇ ತಕ್ಕವರೆನಬೇಕು.

❀ ❀ ❀

ನಿರಂಕುಶಾಧಿಕಾರ ನಡೆಸಲೇಬೇಕಾದರೆ ಚುನಾವಣೆಗೆ ಅನುಕೂಲ ಮಾಡಿಕೊಡದಿರುವುದೇ ಒಳ್ಳೆಯದು. ಏಕೆಂದರೆ ಚರ್ಚಿಲರೇ ಹೇಳಿದ್ದಾರೆ:—"ಭಾರತದ ಸಂಗತಿಯು ಪ್ರತ್ಯೇಕವಾದುದು" ಎಂದು.

ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆ?

ಬ್ರಿಟನು ಅಮೇರಿಕಗಳ ಯುದ್ಧೋದ್ದೇಶ ಸ್ಪಷ್ಟವಾಯಿತು

ಸ್ವಾತಂತ್ರ್ಯ ಘೋಷಣೆಯು ಟೊಳ್ಳು ಮಾತಾಯಿತು

— ಭಾರತದ ಮುಖಂಡರ ಉಗ್ರ ಟೀಕೆಗಳು —

"ಅಟ್ಲಾಂಟಿಕ್ ಘೋಷಣೆಯು ಹಿಟ್ಲರನ ಹಿಡಿತಕ್ಕೆ ಸಿಕ್ಕಿರುವ ಯೂರೋಪಿನ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವುದಲ್ಲದೆ ಮಿಕ್ಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ರಾಷ್ಟ್ರಗಳಿಗೆ ಅನ್ವಯಿಸುವುದಿಲ್ಲ. ಭಾರತದ ಪ್ರಶ್ನೆಯೇ ಬೇರೆಯಾಗಿದೆ. ೧೯೪೦ನೆಯ ಇಸವಿಯ ಅಗಸ್ಟ್ ಘೋಷಣೆಯಂತೆ ಅದರ ವಿಷಯ ನೋಡಲಾಗುತ್ತದೆ. ಭಾರತಕ್ಕೂ ನಮಗೂ ಬಹುಕಾಲವಿದ್ದ ಸಂಬಂಧದಿಂದ, ಅಲ್ಲಿನ ಅನೇಕ ಜನಾಂಗ ಮತ್ತು ಹಿತಗಳ ಬಗ್ಗೆ ನಮ್ಮ ಜವಾಬ್ದಾರಿಯನ್ನು ಪೂರ್ಣಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ."

—ಹೀಗೆಂದು ಮೊನ್ನೆ ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ಭಾಷಣ ಮಾಡುತ್ತಾ ಹೇಳಿದರು. ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೂ ಅನ್ವಯಿಸುವುದು, ಅದು ಜಗತ್ತಿನ ಮಹತ್ತಾದೊಂದು ಸ್ವಾತಂತ್ರ್ಯ ಶಾಸನವೆಂದು ನಂಬಿದ್ದವರು ಇದರಿಂದ ಸಂಪೂರ್ಣ ಕಣ್ಣು ತೆರೆಯುವಂತಾಗಿದೆ; ಬ್ರಿಟನಿನ ರೀತಿನೀತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂತಾಗಿದೆ.

ಈ ವಿಷಯದಲ್ಲಿ ಭಾರತದ ಮುಖಂಡರು ಕೊಟ್ಟ ಹಲವು ಹೇಳಿಕೆಗಳ ಸಾರಾಂಶವು ಕೆಳಗೆಕೊಡಲಾಗಿದೆ.

ಆಚಾರ್ಯ ಕೃಪಾಲನಿಯವರು

"ಚರ್ಚಿಲ್ಲರ ಹೇಳಿಕೆಯಿಂದ ನಮಗೆ ಸಂತೋಷವಾಗಿದೆ; ಏಕೆಂದರೆ ಅವರು ವಿಷಯವನ್ನು ಮರೆಮಾಚದೆ, ಬ್ರಿಟನಿನ ಧೋರಣೆಯನ್ನು ಸ್ಪಷ್ಟವಾಗಿ ಹೇಳಿದರು. ಯುದ್ಧದ ಚಲನವಲನವೇನೇ ಇರಲಿ, ಸಾಧ್ಯವಾದಷ್ಟು ದೀರ್ಘಕಾಲ ಭಾರತವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂಬುದು ಬ್ರಿಟನಿನ ಬುದ್ಧಿಯಾಗಿದೆ. ಜನಾಂಗಗಳ ಅದೃಷ್ಟವೂ ಭವಿಷ್ಯವೂ ವ್ಯಕ್ತಿಗಳ ಮೇಲೆ ಅಧರಿಸಿಲ್ಲ. ಆ ವ್ಯಕ್ತಿಗಳು ಎಂತಹ ಉನ್ನತ ಸ್ಥಾನದಲ್ಲಿದ್ದರೂ ಚಿಂತೆಯಿಲ್ಲ; ಜನಾಭಿಪ್ರಾಯವು ಐಕಮತ್ಯದಿಂದ ರೂಪುಗೊಂಡರೆ ಕೆಲವು ವ್ಯಕ್ತಿಗಳ ಹಂಚಿಕೆಯು ನಾಶವಾಗುವುದು. ಬ್ರಿಟಿಷ್ ಸಾಮ್ರಾಜ್ಯದೊಡನಾಗಲಿ, ಇನ್ನಾವ ಸಾಮ್ರಾಜ್ಯದೊಡನಾಗಲಿ ಭಾರತವು ಎಂದಿಗೂ ಬೆರೆಯುವುದಿಲ್ಲ."

ಶ್ರೀ ಕೆ. ಎಂ. ಮುನ್ಷಿ

"ರೂಸ್‌ವೆಲ್ಟ್ ಚರ್ಚಿಲ್ಲರ ಅಟ್ಲಾಂಟಿಕ್ ಘೋಷಣೆಯು ಜನಾಂಗದ ಮಹತ್ವದ ಘೋಷಣೆಯೆಂಬ ಬಣ್ಣದಿಂದ ಹೊರಬಿದ್ದಿತ್ತು. ಆದರೆ ಈಗ ಅದರ ಬಣ್ಣ ಬಯಲಾಯಿತು; ಭಾರತದ ಸಂಬಂಧದಲ್ಲಿ ಈ ಶಾಸನವು ಕೇವಲ ಒಂದು ಕಾಗದದ ಚೂರು ಎಂಬುದನ್ನು ಚರ್ಚಿಲರು ಈಗ ಎಲ್ಲರಿಗೂ ತೋರಿಸಿಬಿಟ್ಟಿದ್ದಾರೆ."

ಪಂಡಿತ ಮಾಲವೀಯರು

"ಭಾರತ ಮತ್ತು ಬ್ರಿಟನುಗಳೊಳಗೆ ಸ್ನೇಹಸಂಬಂಧವಾಗಬೇಕೆಂದಿಚ್ಛಿಸುವವರಿಗೆಲ್ಲಾ ಚರ್ಚಿಲರ ಭಾಷಣವು ತೀರಾ ನಿರಾಶೆಯನ್ನುಂಟುಮಾಡಿದೆ. ಮಹಾಯುದ್ಧದಿಂದ, ಭಾರತದ ವಿಷಯ ಚರ್ಚಿಲರ ಧೋರಣೆ ಏನೂ ಬದಲಾದಂತೆತೋರುವುದಿಲ್ಲ. ಚರ್ಚಿಲ್ಲರು ಇನ್ನು ಮೇಲಾದರೂ ತಮ್ಮ ಪುರಾಣ ಮತವಾದಿತ್ವವನ್ನು ಬಿಟ್ಟುಕೊಟ್ಟು ಅನಿರ್ಬಂಧವಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಮುಂದೆ ಬಂದಿದ್ದರೆ ಹಿತವಾಗುತ್ತಿತ್ತು"

ಸರ್ ತೇಜಬಹದ್ದೂರ್ ಸಪ್ರು

"ಭಾರತೀಯರ ಮೇಲೆ ಚರ್ಚಿಲ್ಲರ ಭಾಷಣವು ವಿಷಾದಕರ ಪರಿಣಾಮವನ್ನುಂಟುಮಾಡಿದ್ದರೆ, ಅದೇನೂ ಆಶ್ಚರ್ಯವಿಲ್ಲ. ಭಾರತದ ವಿಷಯ ಮುಖ್ಯ ಮಂತ್ರಿಗಳ ಧೋರಣೆ ಏನೂ ಬದಲಾಗಿಲ್ಲವೆಂದು ತೋರುತ್ತದೆ. ಕಳೆದ ಅಗಸ್ಟ್ ಘೋಷಣೆಯ ವಿಷಯವಾಗಿ, ಭಾರತೀಯರ ಬೆಂಬಲ ದೊರಕಿಸಲು ವೈಸರಾಯರೂ ಅಮೇರಿಯವರೂ ಆಯಶಸ್ವಿಗಳಾಗಿರುವರು. ಒಂದು ಪಕ್ಷದವರನ್ನು ಇನ್ನೊಂದು ಪಕ್ಷದವರಿಗೆ ಎದುರು ನಿಲ್ಲಿಸುವ ಧೋರಣೆ ತತ್ಕಾಲಕ್ಕೆ ಹಿತವೆನಿಸಿದರೂ ಕಡೆಗೆ ಅದರಿಂದ ಅನಾಹುತವೇ ಆಗುವುದು. ಚರ್ಚಿಲರಂತೂ ಈಗ ಸ್ಪಷ್ಟಪಡಿಸಿದ್ದಾರೆ. ಆದರೆ ಲಿನ್‌ಲಿಥ್‌ಗೋ ಮತ್ತು ಅಮೇರಿಯವರು ಮುಂದೆ ಬಂದು ಚಕ್ರವರ್ತಿ ಸರಕಾರದ ಸ್ಪಷ್ಟ ಧೋರಣೆಯು ಆಗುವಂತೆ ಮಾಡಬೇಕು"

ರೈ। ಆ। ಶ್ರೀನಿವಾಸ ಶಾಸ್ತ್ರಿಗಳು

"ಇದರಿಂದ ನಮಗೆ ಆಶ್ಚರ್ಯವೂ ಆಗಿಲ್ಲ; ನಿರಾಶೆಯೂ ಆಗಿಲ್ಲ. ಅವರಿಂದ ಇದಕ್ಕೆ ಉತ್ತಮವಾದುದನ್ನು ನಾವು ಹಾರೈಸಲೇ ಇಲ್ಲ. ಪ್ರಪಂಚದ ನಲ್ವತ್ತು ಕೋಟಿ ಜನರಿಗೆ ಅಟ್ಲಾಂಟಿಕ್ ಘೋಷಣೆ ಅನ್ವಯಿಸುವುದಿಲ್ಲವೆನ್ನುವುದು ಚರ್ಚಿಲರ ಸಾಹಸವೇ ಸರಿ. ಆದರೆ ಹೀಗೆ ಹೇಳುವಾಗ ಚರ್ಚಿಲರು ಎದೆಗುಂದಿರಲಾರರು; ಮುಖ್ಯ ಮಂತ್ರಿಗಳು, ಭಾರತ ಮಂತ್ರಿಗಳು, ಮತ್ತು ವೈಸರಾಯರು ಇವರೆಲ್ಲಾ ಕೂಡಿ ಭಾರತೀಯರ ಆಸೆ ಆಕಾಂಕ್ಷೆಗಳಿಗೆ ನೀರೆರೆಯುವುದು ವಿಷಾದಾಸ್ಪದವಾಗಿದೆ"

> **"ನನ್ನ ಮೌನವೇ ಹೆಚ್ಚು ಪರಿಣಾಮಕಾರಿಯಾಗುವುದು"**
>
> ಗಾಂಧಿಜಿಯೊಡನೆ ಚರ್ಚಿಲರ ಈ ಘೋಷಣೆಯ ಕುರಿತು ಪತ್ರಿಕಾ ಪ್ರತಿನಿಧಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದೆ ಸುಮ್ಮಗಿರುವುದನ್ನು ನೋಡಿ, ಪತ್ರಿಕಾ ಪ್ರತಿನಿಧಿಯು "ನಾನು ನಿಮಗೆ ಕೇಳಿದ ಪ್ರಮುಖವಾದ ಪ್ರಶ್ನೆಗಳಿಗೆ ನೀವು ಉತ್ತರ ಕೊಡುವುದಿಲ್ಲ, ಕಾಂಗ್ರೆಸು ಹೋರಾಡುತ್ತಿರುವ ಭಾರತದ ಸ್ವಾತಂತ್ರ್ಯ ಸಂಪಾದನೆಗೆ ನಿಮ್ಮ ಈ ಮೌನವು ಸಹಕಾರಿಯಾಗುವುದೆಂದು ನೀವು ತಿಳಿಯುತ್ತೀರಾ?" ಎಂದು ಪ್ರಶ್ನಿಸಿದನು, ಆಗ ಗಾಂಧಿಜಿ ಅದಕ್ಕೆ ಉತ್ತರ ಕೊಡುತ್ತಾ "ನಾನು ಹಾಗೆಂದು ತಿಳಿಯದಿದ್ದರೆ ನೀವು ಕೇಳುವುದಕ್ಕಿಂತ ಮೊದಲೇ ನಾನು ಚರ್ಚಿಲರ ಮಾತಿಗೆ ಉತ್ತರವಾಗಿ ಪ್ರಕಟಣೆ ಹೊರಡಿಸುತಿದ್ದೆನು, ನಾನು ಹೇಳಬಹುದಾದ ಯಾವುದೇ ಮಾತಿಗಿಂತಲೂ ಈ ವಿಷಯದಲ್ಲಿ ನನ್ನ ಮೌನವೇ ಹೆಚ್ಚು ವಿಶೇಷ ಪರಿಣಾಮಕಾರಿಯಾಗುವದೆಂದು ನಾನು ಪ್ರತ್ಯೂರ್ವಕ ಭಾವಿಸುತ್ತೇನೆ. ಮಾತುಗಳು ವಿಶೇಷಗಳಲ್ಲ, ಕಾರ್ಯವೇ ಪ್ರಯೋಜನವುಳ್ಳದ್ದು. ನನ್ನ ಕಾರ್ಯವು ಅಖಿಲ ಭಾರತದ ಮುಂದಿದೆ. ಅಖಿಲ ಜಗತ್ತಿನ ಮುಂದಿದೆ." —ಗಾಂಧಿಜಿ.

ಬಾಬು ರಾಜೇಂದ್ರ ಪ್ರಸಾದರು

"ತಮ್ಮ ಸಾಮ್ರಾಜ್ಯದ ರಕ್ಷಣೆಯ ಸಲುವಾಗಿಯೇ ಬ್ರಿಟಿಷರು ಹೋರಾಡುತ್ತಿದ್ದಾರೆಯೆಂಬ ವಿಷಯವಾಗಿ, ಯಾರಿಗಾದರೂ ಸಂಶಯ [redacted] ವಿದ್ದರೆ ಅದು ಇದ [redacted] ರಿಂದ ಪರಿಹಾರ [redacted] ವಾದಂತಾಯಿತು. ಬ್ರಿಟಿಷ್ ಸಾಮ್ರಾ [redacted] ಜ್ಯದಲ್ಲಿರುವ ದುರ್ದೈವೀ ರಾಷ್ಟ್ರಗಳು ಕೊನೆಯ ವರೆಗೆ ಹೀಗೆಯೇ ಕೊಳೆಯಬೇಕಾಗುವುದು. ಕಾಂಗ್ರೆಸಿನ ಕಾರ್ಯನೀತಿಯು ಸರಿಯಾಗಿದೆಯೆಂಬುದು ಈಗ ಖಚಿತವಾಗಿ ಗೊತ್ತಾಗಬಹುದು. ಕಾಂಗ್ರೆಸು ಚರ್ಚಿಲ್ಲರ ಈ ವ್ಯಾಖ್ಯಾನಕ್ಕಾಗಿ ಕೃತಜ್ಞತೆ ಸೂಚಿಸುತ್ತದೆ."

ವೀರ ಸಾವರ್ಕರರು.

"ರೂಸ್‌ವೆಲ್ಟರಿಗೆ ನಾನು ತಂತಿ ಕಳುಹಿಸಿದ್ದು ಪರಿಣಾಮಕಾರಿಯಾಯಿತು; ಅಟ್ಲಾಂಟಿಕ ಘೋಷಣೆಯು ಕೇವಲ ಒಂದು ಕುಟಿಲ ತಂತ್ರವೆಂಬುದು ವ್ಯಕ್ತವಾಯಿತು. ಇದು ಬರಿಯ ಉಪಚಾರದ ಮಾತು; ಬರಿಯ ವಂಚನೆಯೆಂಬುದು ಸ್ಪಷ್ಟವಾಯಿತು. ಇಂಗ್ಲೆಂಡ್ ಅಮೇರಿಕದ ಯುದ್ಧದ ಉದ್ದೇಶವೇನೆಂಬುದು ಇದರಿಂದ ಬಯಲಾಯಿತು. ಈಗಿನ ಯುದ್ಧದಲ್ಲಿ ಸೇರಿದ ಪ್ರತಿಯೊಂದು ದೇಶವೂ ತನ್ನ ಸ್ವಾರ್ಥಕ್ಕಾಗಿ ಯುದ್ಧ ಮಾಡುತ್ತಿದೆ. ರೂಸ್‌ವೆಲ್ಟರೂ ಚರ್ಚಿಲರು ಹೇಳಿದ್ದನ್ನೇ ಒಪ್ಪುವರೋ ನೋಡಬೇಕು"

ಶ್ರೀ ಎನ್. ಆರ್. ಸರ್ಕಾರ್.

"ಬ್ರಿಟನಿಗೆ ಭಾರತದ ಯಾವತ್ತು ಸಹಾಯ ಬೇಕಾದಲ್ಲಿ ಚರ್ಚಿಲರು ಈ ರೀತಿ ಭಾಷಣ ಮಾಡಬಾರದಿತ್ತು. ಚರ್ಚಿಲರಿಂದ ಈ ರೀತಿಯ ಮಾತುಗಳು ಹೊರಟದ್ದು ಬ್ರಿಟನಿಗೆ ಸಹಾಯ ಮಾಡಲು ಮುಂದೆ ಬಂದ ನಮ್ಮಂತಹವರ ಉತ್ಸಾಹವನ್ನು ಕುಗ್ಗಿಸುವುದು".

ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆ.

"ಅಟ್ಲಾಂಟಿಕ್ ಘೋಷಣೆಯು ಭಾರತದ ವಿಷಯದಲ್ಲಿ ಕೇವಲ ಬಣಮಾತುಗಳ ಮಳೆಯೆಂದಂತಾಯಿತು. ಬ್ರಿಟಿಷ್ ಸರಕಾರವು ಪರಕೀಯರು ಯುಗೊಸ್ಲವಿಯಕ್ಕೆ ಮಾಡಿದ್ದನ್ನು, ಸಾಮ್ರಾಜ್ಯದ ಮಾಣಿಕದಂತಿದ್ದ ಭಾರತಕ್ಕೆ ತಿರಸ್ಕರಿಸಿದಂತಾಯಿತು. ಭಾರತ ಮತ್ತು ಭಾರತೀಯರ ವಿಷಯದಲ್ಲಿ ಚರ್ಚಿಲರು ನಿಂದಿನಿಂದಲೂ ಕಲುಷಿತ ಮನಸ್ಸಿನವರು. ನ್ಯಾಯದ ಜೊತೆಗೆ ಸ್ವಲ್ಪ ಔದಾರ್ಯ ತೋರಿಸುವ ಸಮಯವು ಈಗ ಬಂದಿದೆ. ಇದಕ್ಕೆ ತಪ್ಪಿದರೆ ಅಟ್ಲಾಂಟಿಕ್ ಘೋಷಣೆಯು ಕೋಟ್ಯನುಕೋಟಿ ಜನರಿಗೆ ಡಾಂಬಿಕವೆನಿಸುವುದು".

The Canara Banking Corporation Ltd.
(Incorporated in British India)
Estd. 1906.
LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS.
Banking business of every description transacted.
Full particulars can be had from any of our Branches.

ಭಯಂಕರ ಕಳವು

(ಪತ್ತೇದಾರಿ ಕತೆ)

ಬರೆದವರು: ಕೆ. ಎಸ್. ಶರ್ಮಾ

ನಡುರಾತ್ರಿಯ ವೇಳೆ. ಅಂಧಕಾರ ಪ್ರಭುತ್ವದಿಂದ ರಾಜಿಸುತ್ತಿರುವ ಕರಾಳ ರಾತ್ರಿ. ಎಲ್ಲೆಲ್ಲೂ ಸದ್ದಡಗಿದೆ. ಮುಖ್ಯ ಪಟ್ಟಣವಾದ "ಜಯಪುರಿ"ಯಲ್ಲಂತೂ ತೀರಾ ನಿಶ್ಶಬ್ದ!

ಈ ವೇಳೆಯಲ್ಲಿ ಒಂದು ಕಾರು ಬಹು ರಭಸದಿಂದ ಬಂದು ಒಂದು ಬಂಗ್ಲೆಯ ಬಳಿ ನಿಂತಿತು. ಕಾರು ನಿಂತೊಡನೆಯೇ ಓರ್ವ ವ್ಯಕ್ತಿಯು ಇಳಿದು, ಬಂಗ್ಲೆಯನ್ನು ನೇರವಾಗಿ ಏರಿದನು.

"ಸರ್, ಸರ್" ಎಂದು ಬಂದ ವ್ಯಕ್ತಿಯು ಯಾರನ್ನೊ ಕೂಗಿದನು. ಓರ್ವ ಜವಾನನು ಒಳಗಿಂದಓಡಿಬಂದನು.

"ಯಾರದು? ಕರೆದವರು?

"ಸರ್, ನಾನು," ಎಂದಂದನು ಬಂದ ವ್ಯಕ್ತಿ. "ಏಕೆಕರೆದೆ? ಜವಾನನೆಂದನು.

ಸರ್, ನನಗೊಮ್ಮೆ ಇನ್ಸ್ಪೆಕ್ಟರರ ದರ್ಶನವಾಗಬೇಕು. ಜರೂರು ಕೆಲಸವಿದೆ". ಕೂಡಲೇ ಜವಾನನು ಶೀಘ್ರವಾಗಿ ಒಳಓಡಿದನು. ಎರಡು ನಿಮಿಷಗಳಲ್ಲಿಯೇ, ಸರ್ಕಲ್ ಇನ್ಸ್ಪೆಕ್ಟರರು ಹೊರ ಬಂದರು.

"ಯಾರದು ಬಂದವರು, ಏನು ಬಂದಿರುವಿರಿ?" ಎಂದು ಅವರು ಪ್ರಶ್ನಿಸಿದರು.

"ಸರ್, ಗೋವಿಂದರಾಯರಲ್ಲಿ ಭಯಂಕರ ಕಳವಾಗಿದೆ. ವಿಶೇಷವೆಂದರೆ ಅವರ ಮಗಳನ್ನು ಅಪಹರಿಸಿ, ರಾಯರನ್ನು ಬಂಧಿಸಿರುವರು. ಸರ್, ತಾವು ಕೂಡಲೇ ಬರಬೇಕೆಂದು ರಾಯರಂದಿರುವರು."

ನೀನಾರು? ಕೇಳಿದರು ಇನ್ಸ್ಪೆಕ್ಟರರು.

ಸರ್, ನಾನು ರಾಯರ ಕರಣಿಕ.—

ಸರಿ ಇನ್ಸ್ಪೆಕ್ಟರರು ಹೊರಟರು. ಕೂಡಲೆ ಇಬ್ಬರು ಜವಾನರೂ ಹೊರಟರು. ಕಾರು ಶೀಘ್ರವಾಗಿ ಓಡಿತು. ೫-೬ ನಿಮಿಷಗಳಲ್ಲೇ ಕಾರು ರಾಯರಲ್ಲಿ ತಲಪಿತು. ಇನ್ಸ್ಪೆಕ್ಟರರು ಒಳಓಡಿದರು. ತೀರಾ ಅಂಧಕಾರವಾಗಿತ್ತು. ಎಲ್ಲಾ ದೀಪಗಳೂ ನಂದಿದ್ದವು. ಜವಾನರು ವಿದ್ಯುದ್ದೀಪವನ್ನು ಉರಿಸಿದರು. ಸುತ್ತಲೂ ನೋಡಿದರು. ಒಂದು ಮೂಲೆಯಲ್ಲಿ ರಾಯರು ಬಂಧಿತರಾಗಿ ಬಿದ್ದಿದ್ದರು. ಜವಾನರವರನ್ನು ಬಿಡಿಸಿದರು. ರಾಯರೊಡನೆ ಇನ್ಸ್ಪೆಕ್ಟರರು ಇಡೀ ಮನೆಯನ್ನು ಶೋಧಿಸಿದರು. ಎಲ್ಲವೂ ಖಾಲಿಯಾಗಿತ್ತು. ರಾಯರ ಮಗಳನ್ನು ಅಪಹರಿಸಿದ್ದರು. ಇನ್ಸ್ಪೆಕ್ಟರರು ಇನ್ನೂ ಹುಡುಕುತ್ತಲೇ ಇದ್ದರು. ಥಟ್ಟನೆ, ಅವರ ದೃಷ್ಟಿಗೊಂದು ಕಾಗದವು ಗೋಡೆಯಲ್ಲಿ ಕಾಣಬಂತು. ಮೆಲ್ಲಗೆ ತೆಗೆದರು. ಓದಿದರು.

"ರಾಯರೆ,—

ನೀವು ಈ ದಿವಸದ ಕಳವಿನಿಂದ ನೊಂದಿರಬಹುದು. ಚಿಂತೆಇಲ್ಲ. ನಿಮ್ಮ ಮಗಳನ್ನಾದರೂ ನಾನು ನನ್ನಿಯೇ ಕಂಡು ಆಸೆಪಟ್ಟಿದ್ದೆ. ಅದರ ಫಲವಾಗಿ ಇಂದು ಅಪಹರಿಸಿದೆ. ನಮ್ಮನ್ನು ನೀವು ಹುಡುಕಬೇಕಾದ್ದಿಲ್ಲ. ಅಥವಾ ಹುಡುಕುವದಾದರೆ, ತೀರಾಪರಿಚಿತರಾದ, ಇನ್ಸ್ಪೆಕ್ಟರ್, ರಾಜಾರಾಮರಾಯರಲ್ಲಿಯೂ, ಪತ್ತೆದಾರ ವಿಜಯೀ ಪಂತರಲ್ಲಿಯೂ, ಹೇಳಿರಿ.

ಇತಿ

ನಿಮ್ಮ ತೀರಾಪರಿಚಿತ,

"ಮಾಧವ"

"ರಾಯರೆ, ತಾವು ಚಿಂತೆಪಡಬೇಕಾದುದಿಲ್ಲ. ಉತ್ಸಾಹದಿಂದ ಕೆಲಸಮಾಡಿ ಕೆಲವೇ ದಿನಗಳಲ್ಲಿ ಸುರಕ್ಷಿತವಾಗಿ ನಿಮಗೆ ಮಗಳನ್ನು ದೊರಕಿಸಿಕೊಡಬಲ್ಲೆ. ನೀವಿನ್ನು ಹೆದರಬೇಡಿರಿ; ನಾವೀಗ ತೆರಳಬೇಕಾಗಿದೆ". ಎಂದನ್ನುತ್ತಾ ಇನ್ಸ್ಪೆಕ್ಟರರು ಶೀಘ್ರವಾಗಿ ಕಾರು ಹತ್ತಿ ತೆರಳಿದರು.

ನೇರವಾಗಿ ಬಂಗ್ಲೆಯ ದಾರಿಯನ್ನು ಬಿಟ್ಟು ಪಂತರಲ್ಲಿಗೇ ಪ್ರಯಾಣ ಬೆಳಸಿದರು. ನಿಶ್ಶಬ್ದವಾದ ರಾತ್ರಿ. ಜಯಪುರಿಯಲ್ಲಿ ಅದೊಂದು ಕಾರಿನ ಸದ್ದು ಹೊರತು, ಉಳಿದಿನ್ನಾವ ಶಬ್ದವೂ ಇಲ್ಲ. ಕಾರು ಕೆಲನಿಮಿಷಗಳಲ್ಲಿ ಪಂತರ ಮನೆಯನ್ನು ಸೇರಿತು. ಇನ್ಸ್ಪೆಕ್ಟರರು ಕೆಳಗಿಳಿದರು. ನೇರವಾಗಿ ಮೆಟ್ಟಲುಗಳನ್ನೇರಿ ಬಾಗಿಲಬಳಿ ಬಂದರು. ಬಾಗಿಲಿಗೆ "ಟಕ್, ಟಕ್" ಎಂದು ತಟ್ಟಿದರು.

"ಯಾರದು" ಎಂದಂದರು ಒಳಗಿನಿಂದ.

ರಾಜಾರಾಮರಾವ್, ಎಂದೆಂದರು ಇನ್ಸ್ಪೆಕ್ಟರರು.

ತಟ್ಟನೆ ಪಂತರೇ ಬಾಗಿಲನ್ನು ತೆರೆದರು. ಇನ್ಸ್ಪೆಕ್ಟರರು ನೇರವಾಗಿ ಒಳ ಹೊಕ್ಕರು; ಒಂದೆಡೆ ಕುಳಿತರು.

"ಪಂತರೆ, ಬಹು ಗಂಭೀರವಾದ ಕಳವು ನಡೆದಿದೆ, ಗೋವಿಂದರಾಯರಲ್ಲಿ. ಅಲ್ಲದೆ ಸ್ತ್ರೀಯ ಅಪಹರಣವೂ ಆಗಿದೆ"

"ರಾಯರೆ, ಅದಾವ ಸ್ತ್ರೀಯು?"

"ಗೋವಿಂದರಾಯರ ಮಗಳಾದ ಕಮಲೆ."

"ರಾಯರೆ, ತೀರಾಭಯಂಕರ ಕಳವು ನಾವಿದರಲ್ಲಿ ಹೆಚ್ಚಿನ ಗಮನವಿಡಬೇಕು. ನಾಳೆಯಿಂದ ನನಗೀರ್ವರು ಗುಪ್ತಹೇರರನ್ನು ಕಳುಹಿಸಿಕೊಡಿ. ಉಳಿದ ಕೆಲಸಗಳನ್ನು ನಾನೇ ಮಾಡುತ್ತೇನೆ—"

ಪಂತರೆ, ಸರಿ, ಹಾಗಾದರೆ ನಾನು ಹೋಗುತ್ತೇನೆ. ಜಾಗ್ರತೆಯಾಗಿ ಕೆಲಸವನ್ನು ಸಾಧಿಸಿರಿ." ಎಂದನ್ನುತ್ತಾ ಕಾರು ಹತ್ತಿ ಇನ್ಸ್ಪೆಕ್ಟರರು ತೆರಳಿದರು.

* * *

ಮರುದಿನ ಮಧ್ಯಾಹ್ನ ಸುಮಾರು ೧೧ ಗಂಟೆಯಾಗಿದೆ. ಓರ್ವ ಸನ್ಯಾಸಿಯು ಜಯಪುರಿಯ ದಾರಿಹಿಡಿದು ಹೋಗುತ್ತಿದ್ದನು. ಶಾಂತವಾದ, ಮುಖಮುದ್ರೆ. ವಿಶಾಲವಾದ ಹಣೆ. ಅಚ್ಚುಕಟ್ಟಿನ ಪುಷ್ಟ ದೇಹ. ಯಾರೊಡನೆಯೂ ಮಾತನಾಡದೆ ಮೌನವಾಗಿ ಸಾಗುತ್ತಿದ್ದಾನೆ. ರಾಜಮಾರ್ಗವನ್ನು ಬಿಟ್ಟು ಆತನು ಹಳ್ಳಿಗಳೆಡೆ, ಮುಂದುವರಿದ. ಕೆಲವು ಗಂಟೆಗಳು ಕಳೆದುವು. ಸಂಧ್ಯೆಯಾಗುತ್ತಾ ಬಂತು. ಸನ್ಯಾಸಿಯು ಒಮ್ಮೆ ಸುತ್ತಲೂ ನೋಡಿದನು. ಸಮೀಪದಲ್ಲೇ ಒಂದು ಅಶ್ವತ್ಥ ಕಟ್ಟೆಯು ಕಾಣಬಂತು. ಸನ್ಯಾಸಿಯು ಉಪಾಯಾಂತರ ಕಾಣದೆ ಅಲ್ಲೇ ಒರಗಿದನು.

ರಾತ್ರಿಯೂ ಬಹಳವಾಯಿತು. ಸನ್ಯಾಸಿಯು ಮತ್ತೆ ಎಚ್ಚತ್ತನು. ಎದ್ದು ಕುಳಿತನು. ಪ್ರಕೃತಿಯಲ್ಲಿ ಯಾವ ತರದ ಮಾರ್ಪಾಟೂ ಕಾಣಬರುತ್ತಿಲ್ಲ. ಸನ್ಯಾಸಿಯು ಮೆಲ್ಲಗೆ ಎದ್ದು ನಾಲ್ಕಾರು ಹಜ್ಜೆಗಳನ್ನಿಟ್ಟನು. ಥಟ್ಟನೆ ನಿಂತನು. ತೀರಾ ಸಮೀಪದಲ್ಲೇ ಯಾರೋ ಬಲಾತ್ಕರಿಸುವಂತೆ ಕೇಳಿಬಂತು. ಸನ್ಯಾಸಿಯು ಉತ್ಸಾಹದಿಂದ ಮುಂದುವರಿದ. ಆತನು ಮುಂದೆ ಸಾಗುತ್ತಾ ಒಂದು ಮನೆಯನ್ನು ಕಂಡ. ಎಲ್ಲಾ ಕದಗಳೂ ಹಾಕಿದ್ದುವು. ಒಂದು ಕೋಣೆಯಿಂದ ಮಾತ್ರ ಒಂದು ಮಂದ ಪ್ರಕಾಶವು ಹೊರಬೀಳುತ್ತಿತ್ತು. ಸನ್ಯಾಸಿಯು ಕದದ ಬಳಿಗೆ ಬಂದ. ತೀರಾ ಭಯಂಕರ ಸನ್ನಿವೇಶಗಳನ್ನು ಕಂಡನು. ಒಮ್ಮೆ ಸನ್ಯಾಸಿಯು ಭೀತನಾದ. ಧೈರ್ಯಪಟ್ಟು ಗೋಡೆಯ ಬಳಿಗೆ ಬಂದನು. ಕಿಟಕಿಯಿಂದ ಮೆಲ್ಲಗೆ ಒಳಗೆ ಇಣಕಿದ. ಮಂದ ಪ್ರಕಾಶದಲ್ಲಿ ಓರ್ವ ಕಟ್ಟಾಳು ಒಂದೆಡೆ ಕುಳಿತಿರುವಂತೆ ಭಾಸವಾಯಿತು. ಸನ್ಯಾಸಿಯು ಅನಕ್ಕಾದನು. ಒಮ್ಮೆ ಸುತ್ತಲೂ ನೋಡಿದನು. ಒಳಗಿನ ಸಂಭಾಷಣೆಯನ್ನು ಕೇಳುವ ಕೌತುಕದಿಂದ ಗೋಡೆಯಬಳಿಯಲ್ಲೇ ಕಿವಿಇಟ್ಟು ಆಲಿಸತೊಡಗಿದನು.

"ಕಮಲೆ, ಹೆಚ್ಚಿನ ಅಸಮ್ಮತಿಗೆ ಹೋಗಬಾರದು. ಇಗೋ ಒಂದು ಬಾರಿ ಬೇಡುತ್ತೇನೆ. ನಿನ್ನ ಛಲವನ್ನು ಬಿಡು. ನನ್ನವಳಾಗು."

"ಛೀ, ದುಷ್ಟಾ, ನನ್ನನ್ನು ಸ್ಪರ್ಶಿಸಬಾರದು. ನನ್ನನ್ನು ಅಪಹರಿಸಿ ತಂದುದಾದರೂ ಈ ತೆರದ ಪ್ರಾರ್ಥನೆಗೇನೊ? ನನ್ನಲ್ಲಿ ಈ ತೆರದ ನಿನ್ನ ಕುಟಿಲಯಾಚನೆ ಬೇಡ."

"ಕಮಲೆ, ಬಾಲಭಾವದಿಂದ ಏನಾದರೂ ಅನ್ನಬೇಡ. ಈ ಮಾತಿಗೆ ಕಿವಿಗೊಡುವವನು ನಾನಲ್ಲ. ನೀನು ನನ್ನವಳಾಗಲೇ ಬೇಕು. ಇರಲಿ, ಇನ್ನೂ ನಿನಗೆ ಬುದ್ಧಿ ಬಂದಿಲ್ಲ. ಹಿಂದಿನಿಂದ ನೋಡುವೆನು" ಎಂದನ್ನುತ್ತಾ ಆ ಕಟ್ಟಾಳು ರಭಸದಿಂದ ಹೊರಟು ಹೋದನು.

ಸನ್ಯಾಸಿಯು ಮೆಲ್ಲಗೆ "ಅಮ್ಮಾ" ಎಂದು ಕರೆದನು. ತರುಣಿಯು ಅವಾಕ್ಕಾದಳು. ಒಮ್ಮೆಗೇ ಆಕೆಗೆ ಸಮೀಪಿಸಲು ಧೈರ್ಯಬರಲಿಲ್ಲ. ಮರುಕ್ಷಣದಲ್ಲೇ ಇನ್ನೊಮ್ಮೆ ಸನ್ಯಾಸಿಯು ಕರೆದನು. ಆಕೆ ಈಗ ಸಮೀಪಬಂದಳು.

"ಅಮ್ಮಾ, ನೀವಾರು ಗೋವಿಂದರಾಯರ ಮಗಳೆ?"

ಉಸಿರಲಿಲ್ಲಾ ತರುಣಿ.

ಪುನಃ ಸನ್ಯಾಸಿಯು "ಅಮ್ಮ, ನಿಮ್ಮ ಬಿಡುಗಡೆಗೆ ಬಂದಿರುವೆ. ಬೇಗ ಹೇಳಿರಿ."

"ಅಹುದು" ಎಂದಳು.

ಅಮ್ಮಾ ನೀವೀಗ ನನ್ನೊಂದಿಗೆ ಬರುವಿರಾ? ಎಂದಂದನು ಸನ್ಯಾಸಿ.

ಅಯ್ಯಾ, ಅದು ಸಾಧ್ಯವಾಗದ ಕೆಲಸ. ಹೊರಗೆ ಬಹಳವಾದ ಪಹರೆಯಿದೆ. ಅದೂ ಅಲ್ಲದೆ, ನನ್ನ ಕಾವಲಿನವಳೂ ಈಗಲೇ ಬರುವಳು ಎಂದಳು ತರುಣಿ.

"ಅಮ್ಮಾ ಹಾಗಾದರೆ, ನಾಳೆ ಇದೇ ವೇಳೆಗೆ ಬರುವೆ. ನನ್ನ ಸಂಗಾತಿಗಳೂ ಬರುವರು. ಜಯಪುರಿಯ ಗುಪ್ತಹೇರನಾದ ರಘುನಾಥನು ನಾನು" ಸನ್ಯಾಸಿಯು ಅಲ್ಲಿಂದ ಮೆಲ್ಲಗೆ ಸರಿದನು.

ಕತ್ತಲೆಯ ರಾತ್ರಿ ಸನ್ಯಾಸಿಯು ಹೊರಗಿಳಿದು ಉದ್ಯಾನದ ದಾರಿಹಿಡಿದು ಹೋಗತೊಡಗಿದನು.

ಹಿಂದಿನಿಂದ ಒಣಗಿದೆಲೆಗಳ ಸದ್ದಾಯಿತು. ಸನ್ಯಾಸಿಯು ತಿರುಗಿ ನೋಡಿದ. ತೀರಾ ಸಮೀಪದಲ್ಲೇ ಇಬ್ಬರು ಕರಾಳರು ಬರುತ್ತಿದ್ದರು. ಬರುತ್ತಿದ್ದಂತೆಯೇ ಅವರು "ಯಾರದು" ಎಂದರು. ಸನ್ಯಾಸಿಯು ಉತ್ತರವೀಯದೆ ಪಲಾಯನಕ್ಕಾರಂಭಿಸಿದ. ಸಿಟ್ಟಿಗೆದ್ದ ಕರಾಳರು ಸನ್ಯಾಸಿಯನ್ನು ಓಡಿಹಿಡಿದು ಬಂಧಿಸಿದರು. ಒಂದೆರಡು ಏಟುಗಳು ಸನ್ಯಾಸಿಯ ಕೆನ್ನೆಗೆ ಬೀಳತೊಡಗಿದೊಡನೆಯೇ ಸನ್ಯಾಸಿಯ ಗಡ್ಡ ಮೀಸೆಗಳುದುರಿದುವು. ಕರಾಳರು ಚಕಿತರಾದರು. ಸನ್ಯಾಸಿಯನ್ನೊಬ್ಬ ಪತ್ತೆಯವನೆಂದರಿದರು. ಬಲವಾಗಿ ಬಂಧಿಸಿ ಒಳಗೊಯ್ದರು. ಕಳ್ಳರ ಗುಟ್ಟನ್ನೆಲ್ಲಾ ತಿಳಿದು ಎಷ್ಟಡೇ ನಿಮಿಷಗಳಲ್ಲಿ ಅವರ ಬಂಧನವು ಆಗುತ್ತದೆ ಎನ್ನುವಾಗಲೇ ತನಗಾದ ಈ ಘೋರಸ್ಥಿತಿಯನ್ನು ಕಂಡು ಭೀತನಾದ. ಆದರೇನು: ಬಲವಾದ ಬಂಧನದಲ್ಲಿ ಇಟ್ಟರು. ತೀರಾ ಭಯಂಕರವಾಸನೆಯು, ಅಂಧಕಾರದ ನೆಲವೀಡಾದ ಸೆರೆಮನೆಯು ಸನ್ಯಾಸಿಯ ನಿವಾಸ ಭೂಮಿಯಾಯಿತು.

[ಮರೆದಿನ ಸಂಚಿಕೆಯಲ್ಲಿ ಮುಗಿಯುವುದು].

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳ[illegible]ನಂತಿವೆ.

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್ಪ್ರೆಸ್ (ಮೈಲ್)	9.5 ಬೆಳಗ್ಗೆ	5.15 ಸಾಯಂ
ಚಾಲೂರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ
ಕಾಸರಗೋಡು ವರೆಗೆ	3.25 ಸಾಯಂ.	6.50 ಸಾಯಂ
ಕಣ್ಣಾನೂರು ವರೆಗೆ	5.52 ಸಾಯಂ.	9.40 [illegible]

ಬಂಟವಾಳ ಕುಂದಾಪುರಗಳಿಗೆ ಪ್ಲೇಗು ರೋಗವು ಹರಡಿದೆ!

ಕೆಲವು ಜನರು ಮರಣ ಹೊಂದಿರುವರು!

ಬಂಟ್ವಾಳ
ಪ್ಲೇಗು

ಅಲ್ಲಿಗೆ ತಂಕೆರೆ ಕಡೆಯಿಂದ ಒಬ್ಬನು ಅಲ್ಲಿಗೆ ಹೋದವನು ಬಂದಿದ್ದು, ಪ್ಲೇಗು ರೋಗದಿಂದ ಸತ್ತನೆಂದು ತಿಳಿದಿದೆ ತುಂಬೆ ವರೆಗೂ ಈಗ ಪ್ಲೇಗು ರೋಗ ಹರಡಿದೆ ಘಂಟೆ ಇಪ್ಪತ್ತರಲ್ಲಿಯೇ ೧೩ ಜನರು ಸತ್ತು ಹೋದರೆಂದೂ ಇದು ನಿಮೋನಿಯಾ ಪ್ಲೇಗೆಂದು ಹೇಳಲಾಗಿದೆ ವಿಶೇಷ ಜಾಗರೂಕತೆ ತೆಗೆದುಕೊಳ್ಳಲಾಗಿದೆ. ಬಂಟವಾಳದ ಶಾಲೆಗಳು ಮುಚ್ಚಲ್ಪಟ್ಟವೆ. ಬಂಟವಾಳ ಪೇಟೆಯ ನೆರೆಕರೆಯಲ್ಲಿಯೂ ಈಗ ರೋಗ ಹರಡಿದೆ. ಹೆಲ್ತ್ ಆಫೀಸರರೂ ಜಿಲ್ಲಾ ಕಲೆಕ್ಟರರೂ ಅಲ್ಲಿಗೆ ಹೋಗಿ ರೋಗ ಹರಡದಂತೆ ತಕ್ಕ ನಿಗಾ ತೆಗೆದುಕೊಂಡಿರುವರೆಂದು ತಿಳಿದಿದೆ

ಕುಂದಾಪುರದ ಬೀಜಾಡಿ ಎಂಬಲ್ಲಿಗೆ ಮೈಸೂರಿನಿಂದ ಪ್ಲೇಗಿನ ಸೋಂಕಿರುವ ೪ ಮಂದಿ ಬಂದಿದ್ದು ಅವರಲ್ಲೊಬ್ಬರು ಮೃತರಾಗಿರುವರೆಂದು ತಿಳಿದಿದೆ.

ಮುನ್ಸಿಪಲ್ ಮೀಟಿಂಗು

ಮಂಗಳೂರು ಮುನ್ಸಿಪಲ್ ಮೀಟಿಂಗ್ ಬರುವ ತಾ ೩೦ರಂದು ಸಂಜೆ ೫-೩೦ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಜರಗಲಿದೆ.

ಜಿಲ್ಲಾ ಕಾಂಗ್ರೆಸಿಗರಿಗೆ ಆಮಂತ್ರಣ

ಬರುವ ತಾ ೩೦ನೇ ಸೆಪ್ಟಂಬರ ೧೯೪೧ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಜಿಲ್ಲೆಯ ಕಾಂಗ್ರೆಸಿಗರ ಸಭೆಯೊಂದು ಆ ದಿನ ಅಪರಾಹ್ನ ಎರಡು ಗಂಟೆಗೆ ಜರಗಲಿದೆ ಆ ದಿನ ಪ್ರಾಮುಖ್ಯ ಕಾಂಗ್ರೆಸ್ ವಿಚಾರಗಳು ಚರ್ಚಿಸಲಿಕ್ಕಿರುವುದರಿಂದ ಜಿಲ್ಲೆಯ ಕಾಂಗ್ರೆಸಿಗರು ತಪ್ಪದೆ ಹಾಜರಾಗಬೇಕಾಗಿ ಈ ಮೂಲಕ ವಿನಂತಿಸುತ್ತೇನೆ. ಈ ಸಭೆಯು ತಾ ೨೨ಕ್ಕೆ ಕೂಡುವುದೆಂದು ಕೆಲವು ಪತ್ರಿಕೆಯಲ್ಲಿ ಜಾಹೀರಾಗಿದ್ದರೂ, ಬಹು ಮಂದಿಯ ಸೂಚನೆಯ ಮೇರೆಗೆ ತಾ ೩೦ಕ್ಕೆ ಮುಂದುವರಿಸಿದ ವಿಷಯವನ್ನು ಪ್ರತಿಯೊಬ್ಬರೂ ಗಮನಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ ಸತ್ಯಾಗ್ರಹಿಗಳು ಕಡ್ಡಾಯವಾಗಿ ಬರಬೇಕಾಗಿದೆ ಪ್ರತಿಯೊಬ್ಬರಿಗೂ ಬೇರೆ ಬೇರೆ ಆಮಂತ್ರಣ ಕಳುಹಿಸುವರೆ ಅನಾನುಕೂಲವಾದ ಕಾರಣ ಪ್ರತಿಯೊಬ್ಬರೂ ಈ ಜಾಹೀರಾತನ್ನೇ ಆಮಂತ್ರಣವಾಗಿ ಭಾವಿಸಿ ಸಭೆಗೆ ಹಾಜರಾಗಬೇಕಾಗಿ ಪುನಃ ವಿನಂತಿಸಿಕೊಳ್ಳುತ್ತೇನೆ ಎಂದು ಜಿಲ್ಲಾ ಕಾಂ ಕ. ಸಂಚಾಲಕರು ತಿಳಿಸುತ್ತಾರೆ

ಬಂಟರ ಯಾನೆ ನಾಡವರ ಸಂಘ
ಮದ್ರಾಸು

ಇದರ ಅಧಿವೇಶನವು ಆಗಸ್ಟ ೩೧ರಂದು ಮದ್ರಾಸಿನ ಲಾಕೋಲೇಜಿನಲ್ಲಿ ಡಾ. ಮಂಜುನಾಥ ರೈಗಳ ಅಧ್ಯಕ್ಷತೆಯಿಂದ ಸೇರಿತು ಡಾ। ಮಹಾಬಲ ಭಂಡಾರಿಯವರು ಈ ವರ್ಷ ಡಿಗ್ರಿ ಪಡೆದ ಯುವಕರನ್ನಭಿನಂದಿಸಿ ಭಾಷಣವಿತ್ತರು. ಡಾ। ನಾಗಪ್ಪ ಆಳ್ವರು ಶ್ರೀ ಆನಂದ ಶೆಟ್ಟರು ಶ್ರೀ. ಪ್ರಹ್ಲಾದ ಹೆಗ್ಡೆಯವರು ಮತ್ತು ಶ್ರೀ ಮಹಾಬಲ ಚೌಟರು ಸಮಯೋಚಿತ ಭಾಷಣ ಮಾಡಿದರು. ಸಮಾಜದ ನಿರುದ್ಯೋಗಿ ವಿದ್ಯಾವಂತ ಯುವಕರ ಪಟ್ಟಿಯೊಂದನ್ನು ತಯಾರಿಸಿ ಅವರಿಗೆ ಉದ್ಯೋಗಗಳನ್ನು ಕೊಡಿಸುವರೆ ಜಿಲ್ಲೆಯ ನೆರೆಪೀಡಿತರಿಗೆ ಸಹಾಯ ಕೊಡುವರೆ ನಿರ್ಣಯಗಳಾದುವು. ಆ ಸ್ಥಳದಲ್ಲಿಯೇ ರೂ ೫೦ ಸಂಗ್ರಹವಾಯಿತೆಂದು ತಿಳಿಯುತ್ತದೆ.

ಮೊಸರು ಕುಡಿಕೆ

ಕಳೆದ ಆದಿತ್ಯವಾರ ಶ್ರೀ ಕೃಷ್ಣ ಜಯಂತ್ಯುತ್ಸವ ಕಮಿಟಿಯ ಆಶ್ರಯದಲ್ಲಿ, ಅತ್ತಾವರದಲ್ಲಿ ವರ್ಷಂಪ್ರತಿ ಆಗುವ ಮೊಸರು ಕುಡಿಕೆ ಉತ್ಸವವು ವಿಜೃಂಭಣೆಯಿಂದ ಜರಗಿತು. ನೃತ್ಯ, ಸಂಗೀತ, ಮೆರವಣಿಗೆ, ತಾಳಮದ್ದಲೆ, ಮತ್ತು ವಿವಿಧ ವಿನೋದಾವಳಿಗಳೂ ಇದ್ದುವು.

ನಾನ್ ಮಿಶನ್ ಏಡೆಡ್ ಎಲಿಮೆಂಟರಿ ಸ್ಕೂಲ್ ಫೆಡರೇಶನ್

ಇದರ ಸಭೆಯೊಂದು ಇದೇ ಸಪ್ಟಂಬರ ೩೦ನೇ ದಿವಸ ಅಪರಾಹ್ನ ೩.೩೦ಕ್ಕೆ ಮಂಗಳೂರು ಡಿ. ಸಿ ಎಂ. ಶಾಲೆಯಲ್ಲಿ ಜರಗಲಿದೆ

ಕೊಂಬಾಡಿ ಶಾರದಾ ಮಹೋತ್ಸವ

ರಾಮಾಶ್ರಮಾ ಹ್ಯಾಯರ್ ಎಲಿಮೆಂಟರಿ ಶಾಲೆ, ಕೊಂಬಾಡಿ, ಇಲ್ಲಿ ತಾ. ೨೬ರಿಂದ ೩೦ರ ವರೆಗೆ ವಿವಿಧ ಚಟುವಟಿಕೆಯಿಂದ ಜರಗಲಿದೆ.

ವರ್ಗದಾರರಿಗೆ ಸರಕಾರದಿಂದ ಸಾಲ

ಕಳೆದ ನೆರೆಯ ಹಾವಳಿಯಿಂದ ಗದ್ದೆಗಳ ಮೇಲೆ ಹೊಗೆ ಬಿದ್ದು, ಕಟ್ಟಪುಣಿ ವಗೈರೆ ಹಾಳಾಗಿ ಬಂಜರು ಬೀಳಲು ಸಂಭವವಿರುವ ಗದ್ದೆಗಳನ್ನು ದುರುಸ್ತಿ ಪಡಿಸುವ ಬಗ್ಗೆ ಬೇಕಾದ ಧನಸಹಾಯವನ್ನು ಸರಕಾರದವರು ತಕ್ಕಿ ನಡಿಸಿ ಸಾಲರೂಪವಾಗಿ ಒದಗಿಸಿಕೊಡಲು ತಯಾರಿರುತ್ತಾರಾಗಿಯೂ, ತಸಿಲ್‌ದಾರ್, ಡಿ ತಸಿಲ್‌ದಾರರಿಗೆ ವರ್ಗದಾರರು ಅರ್ಜಿ ಮಾಡಿಕೊಳ್ಳಬಹುದಾಗಿಯೂ, ಜಿಲ್ಲಾ ಕಲೆಕ್ಟರರು ನಮಗೆ ತಿಳಿಸುತ್ತಾರೆ

ಆದ್ದರಿಂದ ವರ್ಗದಾರರು ತಮಗೆ ಆವಶ್ಯವಿರುವ ಸಾಲಗಳಿಗಾಗಿ ತಸಿಲ್‌ದಾರ್ ವ ಡಿ ತಸಿಲ್‌ದಾರರಿಗೆ ಅವರ ಪಟ್ಟಾ ನಂಬ್ರ, ಸರ್ವೆ ನಂಬ್ರ, ವಿಸ್ತೀರ್ಣ ಅಂದಾಜು ಖರ್ಚು ವಗೈರೆ ತಪ್ಸೀಲುಗಳನ್ನು ಕಾಣಿಸಿ ಅರ್ಜಿ ಬರಕೊಳ್ಳಬೇಕಾಗಿ ಅಪೇಕ್ಷಿಸಲಾಗಿಯದೆ. ಎಂದು ದ ಕ. ಜಿಲ್ಲಾ ಭೂಮಾಲಕ ಸಂಘದ ಗೌ। ಕಾರ್ಯದರ್ಶಿ ಶ್ರೀ ಕೆ. ಜಿನರಾಜ ಹೆಗ್ಡೆ ಇವರು ತಿಳಿಸುತ್ತಾರೆ.

ಬೈಂದೂರು
ಸತ್ಯಾಗ್ರಹಿಗಳ ಸಂಚಾರ

ಶ್ರೀ. ನಕ್ರೆ ಶ್ಯಾಮರಾಯನಾಯ್ಕರು ಮತ್ತು ಶ್ರೀ. ಬಿ ಶೇಷಪ್ಪ ಆಳ್ವರು, ಕಾರ್ಕಳದಿಂದ ತಾ ೭-೯-೪೧ಕ್ಕೆ ಹೊರಟವರು ಪಡುಬಿದ್ರೆ, ಕಾಪು, ಕಟ್ಪಾಡಿ, ಉಡ್ಪಿ, ಕಲ್ಯಾಣಪುರ, ಬ್ರಹ್ಮಾವರ, ಬಾರಕೂರು, ಕೋಟ, ಕೋಟೇಶ್ವರ, ಕುಂದಾಪುರ, ಗಂಗೊಳ್ಳಿ ಮೊದಲಾದ ಸ್ಥಳಗಳಲ್ಲಿ ಮತ್ತು ಸಣ್ಣ ಸಣ್ಣ ಊರುಗಳಲ್ಲಿಯೂ ಕೂಡಾ ಯುದ್ಧ ವಿರುದ್ಧ ಘೋಷಣೆ ಮಾಡುತ್ತಾ ಇಲ್ಲಿಗೆ ಬಂದಿರುತ್ತಾರೆ ಇಲ್ಲಿ ಡಿ ಬೋರ್ಡು ಮೆಂಬರರಾದ ಬಿ. ಸುಬ್ಬಣ್ಣ ಸೆಟ್ಟರ ಮನೆಯಲ್ಲಿ ಅತಿಥಿಗಳಾಗಿರುತ್ತಾರೆ ಇಲ್ಲಿಂದ ಉತ್ತರ ಕನ್ನದ ಜಿಲ್ಲೆಗೆ ಮುಂದರಿಸುವರು

ಕಾಸರಗೋಡು
ಎರ್ವಕಟ್ಟೆ

ಇದೇ ತಾ ೪-೯-೪೧ರಲ್ಲಿ ಎರ್ವಕಟ್ಟೆ ಶಾಲೆಯಲ್ಲಿ ಶ್ರೀ ಕಳಂಜೋಡಿ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಹೆತ್ತವರ ಕೂಟವೂ ಹೊಸ ಶಾಲಾ ಕಟ್ಟಡದ ಬಗ್ಗೆ ಸಭೆಯೂ ಜರಗಿತು. ಶಾಲಾವರದಿಯನ್ನು ಟೀಚರ್ ಮೆನೇಜರರಾದ ಶ್ರೀ ಅಣ್ಣಯ ಶೆಟ್ಟರು ಹೇಳುತ್ತಾ, ವಿದ್ಯಾಭಿಮಾನಿಗಳೆಲ್ಲರೂ ಈ ಶಾಲೆಗೆ ಅಗತ್ಯವಿರುವ ಒಂದು ಕಟ್ಟಡವನ್ನು ಒದಗಿಸುವುದರಲ್ಲಿ ಸಹಕರಿಸಬೇಕೆಂದೂ ತ್ವರೆಯದಲ್ಲೇ ಕಟ್ಟಡವನ್ನು ಒದಗಿಸದಿದ್ದರೆ ಶಾಲಾ ಮಂಜೂರಾತಿ ರದ್ದಾಗುವುದೆಂದೂ ಕೇಳಿಕೊಂಡರು. ಆ ಮೇಲೆ ಶ್ರೀ ಕೆ. ಎಚ್, ಗೋಪಾಲ ಕೃಷ್ಣರೂ, ಶ್ರೀ ಕೃಷ್ಣೋಜಿರಾಯರೂ ಶಾಲಾ ಏಳಿಗೆಯ ಕುರಿತಾಗಿ ಭಾಷಣವಿತ್ತರು ಅಧ್ಯಕ್ಷರು ಶಾಲಾ ಶ್ರೇಯಸ್ಸಿಗಾಗಿ ಹೆತ್ತವರೂ ವಿದ್ಯಾಭಿಮಾನಿಗಳು ಹೇಗೆ ದುಡಿಯಬೇಕೆಂದೂ ಈಗಿನ ವಾತಾವರಣದಲ್ಲಿ ಶಾಲೆಯಿಂದಾಗಿ ಹೇಗೆ ಜನಾಂಗವು ರೂಪುಗೊಳ್ಳುವುದೆಂದೂ ಹೆತ್ತವರ ಜವಾಬ್ದಾರಿ ಎಂತಿದೆ ಎಂದೂ, ಹೊಸಕಟ್ಟಡ ಒದಗಿಸದಿದ್ದರೆ ಎಂತಹ ತೊಂದರೆಯನ್ನು ಊರಿನವರೆಲ್ಲರೂ ಪಡಬೇಕಾಗಬಹುದೆಂದೂ ವಿವರಿಸಿ ಭಾಷಣವನ್ನಿತ್ತರು. ಆ ಮೇಲೆ ಶಾಲೆಯ ಹೊಸ ಕಟ್ಟಡದ ಬಗ್ಗೆ ಕಮಿಟಿಯನ್ನು ರಚಿಸಿದ ತರುವಾಯ ಶ್ರೀ. ಗೋಪಾಲ ಕೃಷ್ಣ ಭಟ್ಟರ "ಪುತ್ರಕಾಮೇಷ್ಟಿ" ಎಂಬ ಹರಿಕೀರ್ತನೆಯು ಶ್ರೀ ಪಾಂಗಳ ಈಶ್ವರಪ್ಪಯ್ಯನವರ ಮೃದಂಗವಾದನದೊಂದಿಗೆ ಜರಗಿತು.

ಪೆರಡಾಲ
ದಸರಾ ಮಹೋತ್ಸವ

ಬದಿಯಡ್ಕದ ಪ್ರೇಮಕೂಟದವರು ಈ ವರ್ಷವೂ ಹಿಂದಿನ ವರ್ಷದಂತೆ ಮೂರು ದಿನಗಳ (ತಾ ೨೬, ೨೭ ಮತ್ತು ೨೮) ದಸರಾ ಮಹೋತ್ಸವವನ್ನು ಭಾಷಣ, ವಿವಿಧ ವಿನೋದಾವಳಿ ಸ್ಪರ್ಧೆ ಮೊದಲಾದುವುಗಳಿಂದ ಕೂಡಿ ಆಚರಿಸಲಿರುವರೆಂದು ತಿಳಿದಿದೆ. ಶ್ರೀಯುತ ಕೆ. ಆರ್. ಕಾರಂತ ಎಂ ಎಲ್. ಎ ಶ್ರೀ ಜಿನರಾಜ ಹೆಗ್ಡೆ ಎಂ. ಎಲ್ ಎ (ಸೆಂಟ್ರಲ್) ಇವರೇ ಮೊದಲಾದವರು ದಸರಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಮಂತ್ರಿತರಾಗಿರುವರೆಂದು ತಿಳಿದು ಬಂದಿದೆ.

ಕಾರ್ಕಳ
ಆ। ಬೆಂ। ಮೆಜಿಸ್ಟ್ರೇಟ್

ಮಿಸೆಸ್ ಲಿಲ್ಲಿ ಲೂಯಿಸ್ ಇವರು ಕಾರ್ಕಳದ ಆನರರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಕ ಹೊಂದಿರುವರೆಂದು ತಿಳಿದಿದೆ.

ಉಡುಪಿ
ವರ್ಗ

ಸರಕಾರೀ ಆಸ್ಪತ್ರೆಯ ಲೇಡೀ ಡಾಕ್ಟರ್ ಶಾರದಾ ಬಾಯಿ ಅಮ್ಮಾಳ್ ಇವರಿಗೆ ಕಾಂಜೀವರಮಿಗೆ ವರ್ಗವಾಗಿದೆ.

ಕರ್ನಾಟಕದಲ್ಲಿ-ಕೃಪಾಲನಿ ಪ್ರವಾಸ

ಆಚಾರ್ಯ ಕೃಪಾಲನಿಯವರು ಕರ್ನಾಟಕ ಪ್ರಾಂತದ ಪ್ರವಾಸವನ್ನು ಬೇಗನೇ ಕೈಗೊಳ್ಳಲಿರುವರೆಂದೂ ಅವರ ಬಗ್ಗೆ ಕರ್ನಾಟಕ ಪ್ರಾಂತಾಧ್ಯಕ್ಷರಿಂದ ಆಮಂತ್ರಿತರಾಗಿ ಶ್ರೀ. ಬಿ ದಾಮೋದರ ಬಾಳಿಗರು ಧಾರವಾಡಕ್ಕೆ ತೆರಳಿರುವರೆಂದೂ ತಿಳಿದು ಬರುತ್ತದೆ.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P No 41/1941.

ಶೀಮಂತಿ ಯಾನೆ ಮುಘುರಾ ಬ್ಯಾ—ಅರ್ಜಿದಾರಳು

ಮತ್ತು

ಪ್ರೊಸಾರ ಕೇಶವ ಕಾಮತ ವಗೈರೆರು—ರೆಸ್ಪಾಂಡೆಂಟರು

ಇವರೊಳಗೆ

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದಲ್ಲಿದ್ದು ಮೃತನಾದ, ಅರ್ಜಿದಾರಳ ಗಂಡ ರಾಮಚಂಪು ಕೇಶವ ಕಮ್ತಿರ ಬಸ್ರೂರು ಹಿಂದುಸ್ಥಾನ ಕೊಪೊರೇಟಿವ್ ಇನ್ಶುರೆನ್ಸ್ ಸೊಸೈಟಿ ಲಿಮಿಟೆಡ್ ಕಲ್ಕತ್ತಾ ಈ ಕಂಪನಿಯ ನಂಬ್ರ 119715ನೇ ಪೋಲಿಸಿ ಪ್ರಕಾರ ಬರತಕ್ಕ ರೂಪಾಯಿ 525–3–0ನ್ನು ತನ್ನ ಗಂಡನ ವೀಲು ಪ್ರಕಾರ ಪಡೆಯುವರೆ ತಾನು ಹಕ್ಕುದಾರಳಾದುದರಿಂದ ಆ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಮಾಡಿರುವ ಮೇಲ್ಕಂಡ ಅರ್ಜಿಯು ತಾರೀಕು 11–10–1941ನೇ ಶನಿವಾರ ತನಿಖೆಗ ಇಟ್ಟಿರುತ್ತದೆಂತಲೂ ಆಕ್ಷೇಪ ಇರುವವರು ಸದ್ರಿ ತಾರೀಕು ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉಪಹರಿಸಬಹುದಂತಲೂ ಈ ಮೂಲಕ ತಿಳಿಯಪಡಿಸೋಣಾಗುತ್ತದೆ

(By order of the Court)

ಉಡ್ಪಿ 9-9-1941 } S Shridhara Prabhu, Advocate for Petitioner



ಲೆನಿನ್‌ಗ್ರಾಡನ್ನು ರಕ್ಷಿಸಲು ರಶ್ಯನರು ಪ್ರತಿಭಟಿಸುತ್ತಾರೆ

ರಶ್ಯ—ಜರ್ಮನರ ಸಂಗ್ರಾಮವು ನಿರಂತರವಾಗಿ ಸಾಗುತ್ತಿದೆ; ಲೆನಿನ್ ಗ್ರಾಡನ್ನು ಜರ್ಮನರು ಸುತ್ತು ಗಟ್ಟಿರುವರಂತೆ. ರಶ್ಯನರು ಬಹಳ ಸಾಹಸದಿಂದ ಕಾದಾಡುತ್ತಿರುವರು. ಇರಾಣಿನ ಶಾ ರಾಜತ್ಯಾಗ ಮಾಡಿದನು. ಅಮೆರಿಕವು ಜರ್ಮನಿಯ ಮೇಲೆ ಮತ್ತಷ್ಟು ಉಗ್ರವಾಗಿದೆ. ಫಿನ್ಲೆಂಡು ರಶ್ಯ ರಣರಂಗದಿಂದ ಹಿಂಜರಿಯಿತು. ಅಮೆರಿಕ ಜಪಾನು ಮಾತುಕತೆಯಲ್ಲಿ ಚೀನದ ವಿಷಯ ಬಂದರೆ ಅದನ್ನು ಕರೆಸಲಾಗುವುದಂತೆ. ಯೂರೋಪಿನ ರಾಷ್ಟ್ರಗಳ ಪರಿಸ್ಥಿತಿಯು ಎಲ್ಲೆಲ್ಲೂ ವಿಷಮವಾಗಿದೆ; ಕೋಲಾಹಲಗಳಿಂದ ಕೂಡಿದೆ.

ಅಮೆರಿಕದಲ್ಲಿ ಮುಷ್ಕರಗಳು.

ಹಡಗ ಸಂಚಾರ ರದ್ದು

ಉತ್ತರ ಅಮೆರಿಕದ ಅಂಕರ್ ರಾಷ್ಟ್ರೀಯ ನಾವಿಕ ಸಂಘದವರು ಗುರುವಾರದಿಂದ ಮುಷ್ಕರ ಹೂಡಿದ್ದಾರೆ. ಇದರಿಂದ ಒಂಬತ್ತು ಹಡಗಗಳ ಸಂಚಾರ ರದ್ದಾಗಿರುವುದು. ಇದಲ್ಲದೆ ಫಿಟ್ಸ್ ಬರ್ಗ್ ಕಲ್ಲಿದ್ದಲು ಗಣಿಯ ಸುಮಾರು ೩೫೦೦೦ ಕೆಲಸಗಾರರು ಮುಷ್ಕರ ಹೂಡಲಿರುವರೆಂದು ತಿಳಿದಿದೆ.

ಹಡಗ ಮುಳುಗಿತು.

ಬಲ್ಗೇರಿಯದ ಹಡಗ ಸ್ಕಿವಾ ಎಂಬುದು (೪ ಸಾವಿರ ಟನ್ ಭಾರ) ಕಪ್ಪು ಸಮುದ್ರದಲ್ಲಿ ಜಲಸಮಾಧಿ ಹೊಂದಿತೆಂದು ತಿಳಿದಿದೆ

ರಶ್ಯಕ್ಕೆ ಬ್ರಿಟಿಷ್ ಹಡಗ ಸಹಾಯ?

ರಶ್ಯಕ್ಕೆ ಬ್ರಿಟಿಷ್ ಹಡಗಸಹಾಯ ಹೋಗುತ್ತದೆಯೆಂದೂ ಆದರೆ ಅದರ ವಿವರವನ್ನು ತಿಳಿಸಿದರೆ ಜರ್ಮನರಿಗೆ ಸಹಾಯವಾಗುವುದರಿಂದ ಅದನ್ನು ಹೇಳುವುದಿಲ್ಲವೆಂದೂ ಬ್ರಿಟಿಷ್ ನೌಕಾಮಂತ್ರಿ ಹೇಳಿದನು.

ರಾಜಧಾನಿ ಬಿಟ್ಟು ಹೋಗಬೇಕು.

ಇರಾಣ್ ಆಜ್ಞೆಯಿತ್ತಿದೆ.

ಮಂಗಳವಾರದೊಳಗೆ, ಇರಾಣಿನಲ್ಲಿರುವ ಜರ್ಮನ್, ಇಟಲಿ, ರುಮೇನಿಯ ಮತ್ತು ಹಂಗೇರಿ ರಾಷ್ಟ್ರಗಳ ಜನರು ರಾಜಧಾನಿಯನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಹೊರಟಿದೆ.

ಲೆನಿನ್‌ಗ್ರಾಡಿಗೆ ಜರ್ಮನ್ ಎಚ್ಚರಿಕೆ

ಧ್ವಂಸಮಾಡುವರಂತೆ!

ಲೆನಿನ್‌ಗ್ರಾಡ್ ಕಾಳಗವನ್ನು ಆದಷ್ಟು ಬೇಗ ಮುಗಿಸಬೇಕೆಂದು ಜರ್ಮನರ ಇಚ್ಛೆಯಿದೆಯಂತೆ. ಲೆನಿನ್‌ಗ್ರಾಡನ್ನು ಹಾಳುಮಾಡದೆ ಸ್ವಾಧೀನ ಮಾಡಲು ಸಾಧ್ಯವಾಗದಿದ್ದರೆ ಸಂಪೂರ್ಣ ಧ್ವಂಸ

ಜಪಾನು ಅಮೇರಿಕಗಳ ಸಂಧಿಯ?

ಇರಾಣಿನ ಶಹಾ ರಾಜತ್ಯಾಗಮಾಡಿದನು

ಮಾಡುವುದಾಗಿ ಜರ್ಮನರು ಬೆದರಿಕೆ ಹಾಕಿರುವರು

ಜರ್ಮನ್ ಇಟಲಿಯನ್ ಹಡಗಗಳಿಗೆ

ಅಮೆರಿಕದ ಎಚ್ಚರಿಕೆ

"ಗ್ರಿಯರ್" ಹಡಗವನ್ನು ಜರ್ಮನರು ಧಾಳಿಮಾಡಿದ ಮೇಲೆ ಅಮೆರಿಕನರು ಉಗ್ರರಾಗಿದ್ದಾರೆ. ಈ ವಿಷಯ ರೂಸ್‌ವೆಲ್ಟರು ಒಂದು ಭಾಷಣ ಮಾಡುತ್ತಾ ಜರ್ಮನರು, ನಮ್ಮ ಹಡಗಗಳನ್ನು ಮುಳುಗಿಸಲು ದೊಡ್ಡ ಯೋಜನೆಯೊಂದನ್ನು ಮಾಡಿರುವುದಾಗಿ ಹೇಳಿದರು. ಇಟಲಿಯನ್ ಮತ್ತು ಜರ್ಮನ್ ಹಡಗಗಳು ಅಮೆರಿಕದ ಸಂರಕ್ಷಣ ಕ್ಷೇತ್ರದಲ್ಲಿ ಕಾಲಿಟ್ಟರೆ ಅಪಾಯವಾಗುವುದೆಂದು ಎಚ್ಚರವಿತ್ತರು. ರೂಸ್‌ವೆಲ್ಟರ ಈ ಘೋಷಣೆಯಿಂದ ಅಮೆರಿಕವು ಜರ್ಮನಿಯ ಮೇಲೆ ಅಘೋಷಿತವಾದ ಯುದ್ಧಸಾರಿತೆಂದು ಹೇಳಲಾಗಿದೆ. ರೂಸ್‌ವೆಲ್ಟರು ಇದರಿಂದ ಯುದ್ಧರಂಗಕ್ಕಿಳಿವರೇ ಎಂದು ಹಲವರ ಹೇಳಿಕೆಯಾಗಿದೆ

ಹಿಟ್ಲರನ ಮತ್ತೊಂದು ಗುಪ್ತಾಸ್ತ್ರ.

ಜರ್ಮನರು ಮತ್ತೊಂದು ಬಗೆಯ ಗುಪ್ತಾಸ್ತ್ರವನ್ನು ಉಪಯೋಗಿಸುತ್ತಿರುವರೆಂದು ಚರ್ಚಿಲರು ಪಾರ್ಲಿಮೆಂಟಿನಲ್ಲಿ ಹೇಳಿದರು. ಅದು "ಅಕೌಸ್ಟಿಕ್ ಮೈನ್" ಎಂಬ ಹೆಸರಿನದಂತೆ.

ಹಿಟ್ಲರ್ ಪಾಪೆನ್ ಮತ್ತು ರಿಬನ್ ಟ್ರಾಪರ ಗುಪ್ತಚರ್ಚೆ

ಟರ್ಕಿಯ ಬಗ್ಗೆ ನಿರ್ಣಯ

ಹಿಟ್ಲರ್, ರಿಬನ್ ಟ್ರಾಪ್ ಮತ್ತು ಹೆರ್ ವಾನ್ ಪಾಪೆನರು ಟರ್ಕಿಯ ಬಗ್ಗೆ ವಿಚಾರ ವಿನಿಮಯ ಮಾಡುವರೆಂದು ತಿಳಿದಿದೆ. ಟರ್ಕಿಯ ಸಂಬಂಧ ವಿಚಾರ ಮಾಡಲಾಗುವುದೆಂದೂ ಆದರೆ ಸದ್ಯಕ್ಕೆ ಜರ್ಮನಿಯು ಟರ್ಕಿಯ ಮೇಲೆ ಧಾಳಿ ಮಾಡುವ ಸಂಭವವಿಲ್ಲವೆಂದೂ ಟರ್ಕಿಯ ಗಡಿನಾಡಿನಲ್ಲಿ ಮತ್ತು ಬಲ್ಗೇರಿಯದಲ್ಲಿ ಜರ್ಮನರು ವಿಶೇಷ ಸೈನ್ಯವನ್ನು ಸಂಗ್ರಹಿಸುತ್ತಿರುವರೆಂದೂ ತಿಳಿದಿದೆ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S 82/41.

1. ನಾರಾಯಣ ರಾವ್, 2 ಶ್ಯಾಮ ರಾವ್, ಮುಗ್ಗ ರಾಮಕೃಷ್ಣಯ್ಯನವರ ಮಕ್ಕಳು. 1ನೆಯವರು ಕಾರ್ಕಳ ತಾಲೂಕು ಕೊಕ್ರಾಡಿ ಗ್ರಾಮದಲ್ಲಿಯೂ 2ನೆಯವರು ಸದ್ರಿ ತಾಲೂಕು ಸುಕ್ಷೇರಿ ಗ್ರಾಮದಲ್ಲಿಯೂ ಇರುತ್ತಾರೆ. ಅಳ್ದಂಗಡಿ ಪೋಸ್ಟು. } ವಾದಿರು

ಮತ್ತು

1. ಶಿದ್ದಪ್ಪ ಪೂವಣಿ 2. ಮಂಜಪ್ಪ ಪೂವಣಿ 3. ಜ್ವಾಲಿನಿ 4. ಶಾಂತು ಪೂವಣಿ, ಬ್ರಹ್ಮಯ್ಯ ಅತಿಕಾರಿಗಳ ಮಕ್ಕಳು, ಕಾರ್ಕಳ ತಾಲೂಕು ಹೊಸಂಗಡಿ ಗ್ರಾಮಸ್ಥರು 5. ಚನ್ನಪ್ಪ 6. ಪೂವಪ್ಪ ತುಂಗಯ್ಯ ಸೆಟ್ಟಿ ಮಕ್ಕಳು ಕಾರ್ಕಳ ತಾಲೂಕು ಪೆರಾಡಿ ಗ್ರಾಮಸ್ಥರು } ಪ್ರತಿವಾದಿ

ವಾದಿರು ಪ್ರತಿವಾದಿರ ಮೇಲೆ ಮೂಲಗೇಣಿ ರೂಪಾ 128-3-4ಕ್ಕೆ ವಗೈರೆಮಾಡಿದ ಮೇಲ್ಕಾಣಿಸಿದದಾವೆಯು 6ನೆ ಪ್ರತಿವಾದಿಗೆ ನೋಟೀಸಿನ ಬಗ್ಗೆ ತಾರೀಕು 30-9-41ಕ್ಕೆ ಇಟ್ಟಿರುತ್ತದೆ ಆ ದಿವಸ ಸದ್ರಿಯವರು ಈ ಕೋರ್ಟಿನ ಮುಂದೆ ಘಂಟೆ 10ರ ಒಳಗೆ ಬಂದು ಉದಹರಿಸದಿದ್ದರೆ ಸದ್ರಿಯವರನ್ನು ಶಿಷ್ಯಾ ಮಾಡಿ ವಾದಿರ ಗುಣಕ್ಕೆ ಪ್ಲೈಂಟನಲ್ಲಿ ನಮೂದಿಸಿದಂತೆ ಡಿಕ್ರಿ ಕೊಡಲಾದೀತು.

(ಕೋರ್ಟಿನ ಹುಕುಂ ಪ್ರಕಾರ)

I S. Rao,
Advocate

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ್ ಎಂಬ ವಿಷಹಾಧಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು

ಬೆಲೆ. 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent. **Appah & Co, China Bazar, Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಪಂಡಿತ ಮಾಲವೀಯರು ಚರ್ಚಿಲರಿಗ ಉತ್ತರಕೊಡುತ್ತಾರೆ

ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರೆಂದು
ಕರ್ನಾಟಕದಲ್ಲಿ ಕೃಪಾಲನಿಯರ ಸಂಚಾರ

ಭೂಲಾಭಾಯಿ ಅನಾರೋಗ್ಯದ ನಿಮಿತ್ತ ಬಿಡುಗಡೆ ಹೊಂದಿದರು ಬರುವ ತಿಂಗಳಮಧ್ಯದಲ್ಲಿ ರಾಜಾಜಿ ಬಿಡುಗಡೆ ಹೊಂದುವರು. ಕೃಪಾಲನಿ ಅಖಿಲ ಭಾರತ ಪ್ರವಾಸ ಹೊರಟವರು ಈ ವಾರ ಕರ್ನಾಟಕದಲ್ಲಿ ಸಂಚಾರ ಮಾಡುತ್ತಾರೆ. ಭಾರತದ ಶಾಸನ ಸಭೆಗಳ ಚುನಾವಣೆ ಮುಂದುವರಿಸಲಾಗುವುದೆಂಬ ನಿರ್ಣಯ ಪಾರ್ಲಿಮೆಂಟಿನಲ್ಲಿ ಮಂಜೂರಾಯಿತು ಹಕ್ಕರು ರಾಜಿನಾಮೆ ಕೊಟ್ಟಮೇಲೂ ಜಿನ್ನ ಹಕ್ಕರ ಜಗಳ ಬೆಳೆಯುತ್ತಿದೆ. ರಾಜೇಂದ್ರ ಪ್ರಸಾದರು ಅಸ್ವಸ್ಥದಿಂದ ವರ್ಧಾದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಎರಡನೆಯ ಸಲ ಸತ್ಯಾಗ್ರಹಮಾಡುವವರು ಕಡಿಮೆಯಾಗಿರುವರಾದರೂ ಸತ್ಯಾಗ್ರಹ ಸಮರವು ಸಾಗುತ್ತಲೇ ಇದೆ. ಜನಸಂಖ್ಯೆ ಬೇಕಾಗಿಲ್ಲವೆಂದು ಗಾಂಧಿಜಿ ಸತ್ಯಾಗ್ರಹ ಆರಂಭಿಸುವಾಗಲೇ ಹೇಳಿದ್ದಾರೆ.

ಚರ್ಚಿಲರಿಗೆ ಉತ್ತರ

ಪಂಡಿತ ಮಾಲವೀಯರು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರೆಂದು ಚರ್ಚಿಲರಿಗೆ ಉತ್ತರ ಕೊಡುತ್ತಾರೆ.

ಗಾಂಧಿ ಅಲ್ಲಾಭಕ್ಷ ಭೇಟಿ

ಅಲ್ಲಾಭಕ್ಷರು ಈಗ ವೈಸರಾಯರ ರಾಷ್ಟ್ರೀಯ ಸಂರಕ್ಷಕ ಸಮಿತಿಯಲ್ಲಿ ಭಾಗವಹಿಸಿದ ನಿಮಿತ್ತ ಇದು ವರೆಗೆ ಅಲ್ಲಾ ಭಕ್ಷ ಮಂತ್ರಿಮಂಡಲದೊಡನೆ ಸಹಕರಿಸಿದ ಸಿಂಧ ಅಸೆಂಬ್ಲಿ ಕಾಂಗ್ರೆಸ ಪಕ್ಷದವರು ಮುಂದೇನು ಮಾಡಬೇಕೆಂದು ಕೇಳುವರೆ ಕಾಂಗ್ರೆಸ್ ಪಕ್ಷದ ನಾಯಕರಾದ ಸಿದ್ವಾರು ಅಲ್ಲಾ ಭಕ್ಷರೊಡನೆ ಮಹಾತ್ಮರ ಸಂದರ್ಶನಕ್ಕಾಗಿ ತೆರಳಿರುವರು.

ಭಾರತ - ಸಿಲೋನ್ ಪರಿಷತ್ತು

ಕೋಲೊಂಬೊದಲ್ಲಿ ಕೂಡಿದೆ ಉದ್ವೇಗ ಕರವಾದ ವಾತಾವರಣವುಂಟಾಗಿದೆಯೆಂದೂ ಮಾತುಕತೆಯು ಯಶಸ್ವಿಯಾಗುವ ಸಂದರ್ಭ ತೋರುವುದಿಲ್ಲವೆಂದೂ ಸುದ್ದಿಯಿದೆ.

ಭಾರತದ ಮೋಟರು ಕೈಗಾರಿಕೆ ವಿಷಯ ಸರಕಾರದ ನೀತಿಯನ್ನು ಪಾರ್ಲಿಮೆಂಟಿನಲ್ಲಿ ಖಂಡಿಸಿದರು.

ಭಾರತದಲ್ಲಿ ಮೋಟರ್ ಕೈಗಾರಿಕೆಯೊಂದನ್ನು ಸ್ಥಾಪಿಸಬೇಕೆಂದು ಶ್ರೀ ಲಾಲಚಂಧ ಹೀರಾಚಂದ, ಶ್ರೀ. ಎಂ. ವಿಶ್ವೇಶ್ವರಯ್ಯ ಮೊದಲಾದವರು ಮಾಡಿದ ಪ್ರಯತ್ನವು ಸರಕಾರದಿಂದ ನಿರಾಶೆಗೊಳಿಸಲ್ಪಟ್ಟ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳಾಗಿ ಕೂಲಿಗಾರ ಪಕ್ಷದ ಆಮನರು ಸರಕಾರದ ಧೋರಣವನ್ನು ಖಂಡಿಸಿದರು.

ಪಾರ್ಲಿಮೆಂಟಿನಲ್ಲಿ ಭಾರತದ ವಿಷಯ ಚರ್ಚೆ

ಕೂಲಿಗಾರ ಪಕ್ಷದ ಸೊರೆನ್ಸನರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಭಾರತ ಮಂತ್ರಿ ಅಮೆರಿಯವರು ಈಗ ಭಾರತದಲ್ಲಿ ೧೨೧೮ ರಾಜಕೀಯ ಕೈದಿಗಳಿರುವರೆಂದೂ, ಅವರಲ್ಲಿ ೨೩ ಹಿಂದಿನ ಮಂತ್ರಿಗಳೆಂದೂ ೨೯೦ ಶಾಸನ ಸಭೆಗಳ ಸದಸ್ಯರೆಂದೂ ಹೇಳಿದರು.

ಅನೇಕ ಕೂಲಿಗಾರ ಪಕ್ಷದ ಸದಸ್ಯರು ಈ ಚರ್ಚೆಯಲ್ಲಿ, ಭಾಗವಹಿಸಿದ್ದರು. ಜಾತಿಯ ವೈಷಮ್ಯದ ಮೂಲಕ ಭಾರತದ ಎಸೆಂಬ್ಲಿ ಚುನಾವಣೆಯನ್ನು ಮುಂದುವರಿಸುವುದು ಅಸಂಬದ್ಧವೆಂದು ಡೇವಿಸರು ಹೇಳಿದರು. ಯುದ್ಧ ಸಮಯದಲ್ಲಿ ತಮ್ಮ ಚುನಾವಣೆಗೆ ಆಸ್ಟ್ರೇಲಿಯಕ್ಕೂ ಸ್ವತಂತ್ರವಿರುವಾಗ ಭಾರತೀಯರಿಗೆ ಯಾಕೆ ಇಲ್ಲ? ೧೨೦೦೦ ಮಂದಿ ರಾಜಕೀಯ ಕೈದಿಗಳು ಸಾಮಾನ್ಯ ಜನರ ಧುರೀಣರಿದ್ದು ಅವರಿಗೂ ಜಾತಿ ವೈಷಮ್ಯಕ್ಕೂ ಸಂಬಂಧವೇನು? ಹೀಗೆ ಮೊದಲಾಗಿ ಪ್ರಶ್ನೆ ಹಾಕಲಾಯಿತು.

ಹಕ್ಕರು ಜಿನ್ನರನ್ನು ದೂರುತ್ತಾರೆ.

ಪಜುಲುಲ್ ಹಕ್ಕರು ವೈಸರಾಯರ ರಾಷ್ಟ್ರೀಯ ಸಂರಕ್ಷಕ ಸಮಿತಿಯಲ್ಲಿ ಭಾಗವಹಿಸಿದ ನಿಮಿತ್ತ ಅವರು ರಾಜಿನಾಮೆ ಕೊಡದಿದ್ದರೆ ಲೀಗಿನವರು ಶಿಸ್ತು ಜಾರಿ ಮಾಡುವರೆಂದು ಅವರಿಗೆ ಬೆದರಿಕೆ ಹಾಕಿದ ಕಾರಣ ಹಕ್ಕರು ತನ್ನ ರಾಜಿನಾಮೆ ಕೊಡುತ್ತಾ ಜಿನ್ನರ ಸರ್ವಾಧಿಕಾರೀ ನೀತಿಯನ್ನು ಪ್ರಬಲವಾಗಿ ಖಂಡಿಸಿರುವರು. ಅವರ ಆರೋಪಗಳನ್ನು ಮುಸ್ಲಿಂ ಲೀಗ್ ಸೆಕ್ರೆಟರಿಗಳು ಅಲ್ಲಗಳೆದಿರುವರು

ಭೂಲಾಭಾಯಿ ಅನಾರೋಗ್ಯ

ಭೂಲಾಭಾಯಿಯವರಿಗೆ ಸೆರೆಮನೆಯಲ್ಲಿ ಅನಾರೋಗ್ಯವಾಗಿದ್ದು ಪಸೂನ್ ಆಸ್ಪತ್ರೆಯಲ್ಲಿ ಅವರ ದೇಹ ಪರೀಕ್ಷೆ ನಡೆಯಿತು.

ಭೂಲಾಭಾಯಿ ಬಿಡುಗಡೆ ಅನಾರೋಗ್ಯದ ನಿಮಿತ್ತ

ಅನಾರೋಗ್ಯದ ನಿಮಿತ್ತ ಭೂಲಾಭಾಯಿ ದೇಸಾಯಿಯವರು ತಾ. ೧೬ ರಂದು ಬಿಡುಗಡೆಮಾಡಲ್ಪಟ್ಟರು.

'ಹಿಂದೂಸ್ಥಾನ್ ಟೈಮ್ಸ್' ಮೇಲೆ ಖಟ್ಲೆ

ಶ್ರೀ ದೇವದಾಸ - ಗಾಂಧಿಯವರ ಸಂಪಾದಕತ್ವದಿಂದ ಅಲ್ಲಾಬಾದಿನಿಂದ ಹೊರಡುವ ಹಿಂದುಸ್ತಾನಟೈಮ್ಸ್ ಪತ್ರಿಕೆಯಲ್ಲಿ ಅದರ ವಿಶಾರತ್ ಸುದ್ದಿಗಾರನು ಕೋರ್ಟಿನಲ್ಲಿ ನ್ಯಾಯಾಧಿಕಾರಿಗಳು ಯುದ್ಧನಿಧಿ ಸಂಗ್ರಹಿಸಿದರೆಂದು ಬರೆದು ಕಳುಹಿಸಿದ ಸುದ್ದಿಯ ಪ್ರಕಟಣೆ ನಿಮಿತ್ತ ಆದ ಖಟ್ಲೆ ವಿಚಾರಣೆಯಾಗುತ್ತಿದೆ. ಶ್ರೀ ದೇವದಾಸ ಗಾಂಧಿಯ ಪರವಾಗಿ ಸರ್ ತೇಜಬಹದ್ದೂರ್ ಸಪ್ರೂಗಳು ವಕಾಲತ್ತು ವಹಿಸಿರುವರು.

ರಾಜೇಂದ್ರಪ್ರಸಾದರಿಗೆ ಅಸೌಖ್ಯ

ಉಬ್ಬಸದಿಂದ ಕಷ್ಟಪಡುತ್ತಿರುವ ರಾಜೇಂದ್ರಪ್ರಸಾದರಿಗೆ ವಿಶ್ರಾಂತಿ ತೆಗೆದುಕೊಳ್ಳುವರೆ ಡಾಕ್ಟರರು ಸೂಚಿಸಿದಂತೆ ಅವರು ವರ್ಧಾದಲ್ಲಿ ಒಂದು ತಿಂಗಳ ವಿಶ್ರಾಂತಿಹೊಂದುವರೆಂದು ತಿಳಿದಿದೆ.

ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚೆ?

ಚರ್ಚಿಲರು ಅಟ್ಲಾಂಟಿಕ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದ ವಿಷಯ ಕೇಂದ್ರ ಎಸೆಂಬ್ಲಿಯಲ್ಲಿ ಒಂದು ಸೂಚನೆಯನ್ನು ರಾಷ್ಟ್ರೀಯ ಸದಸ್ಯರು ತಂದು ಚರ್ಚಿಸುವರೆಂದು ತಿಳಿದಿದೆ.

ನಾನು ಹೇಳುತ್ತಿದ್ದೆನಲ್ಲವೇ—

ಮೊದಲು ಪುರೋಹಿತ ಶ್ವಾಸಹಾರೀ ತೆಗೆದುಕೊಳ್ಳಿರಿ ಅಂತಾ—

ದಮ್ಮು ಒಮ್ಮೆಲೇ ನಿಲ್ಲಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕ ಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೋಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಕೆಮ್ಮ, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ **ಪುರೋಹಿತ ಶ್ವಾಸಹಾರಿ** ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ, ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು **ಶ್ವಾಸಹಾರಿ ಕಂಪೌಂಡ** (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ ೨-೨, ರೂ, ೬-೮ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ —

ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಇಲ್ಲವೇ ಮೆ॥ ವನಮಾಳೀ ಭೀಖಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ



ಪುರೋಹಿತ ಶ್ವಾಸಹಾರಿ

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ. 4



ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು —

ಮೆಸರ್ಸ್ ವೆದುಲ್ಲಪಲ್ಲಿ ಬ್ರದರ್ಸ್,

389 ಎಸ್ಪ್ಲಾನಡೆ—ಮದರಾಸು

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು — ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಯಾಕೆ ಮೂಲವ್ಯಾಧಿಯ ನೋವಿನಿಂದ ನರಳುತ್ತೀರಿ?

ಈ ದಿನವೇ ಜಾಂಬಕ್ ಲೇಪವನ್ನು ದಿನನಿತ್ಯ ಉಪಯೋಗಿಸಿರಿ.

ನೋವನ್ನುಂಟುಮಾಡುವ, ಬಾತುಕೊಂಡಿರುವ ಮೂಲವ್ಯಾಧಿಯ ಬಾಧೆಯಿಂದ ಯಾಕೆ ನರಳುತ್ತೀರಿ? ಜಾಂಬಕ್ ಮದ್ದು ಇರುವಾಗ, ಅದರ ನಿತ್ಯದ ಬಾಧೆಯಿಂದ ನೀವು ಬಲಹೀನರಾಗಬೇಕೇಕೆ? ಈ ಅತ್ಯಂತ ಗುಣಕಾರಿಯಾದ ವನೌಷಧಿಗಳಿಂದಲೇ ತಯಾರಿಸಿದ ಲೇಪವು ಸಾವಿರಾರು ಮಂದಿಗೆ ಅಮೃತ ಸಮಾನವಾದ ಗುಣವನ್ನು ತಂದಿದೆ. ಇದರಲ್ಲಿರುವ ಮಹತ್ವದ ಔಷಧಿ ಗುಣದಿಂದ, ನೆತ್ತರು ಸುರಿಯುವುದು ನಿಂತು ಹೋಗಿ ಮೂಲವ್ಯಾಧಿಯು ಕೂಡಲೇ ಮಾಯವಾಗುವುದು. ಆದಕಾರಣ ಮುಂದೆ ಮೂಲವ್ಯಾಧಿಯಿಂದ ನರಳಬೇಡಿರಿ. ಜಾಂಬಕ್ ಪಡಕೊಳ್ಳಿರಿ. ಎಲ್ಲಾ ಮದ್ದಿನ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಮತ್ತು ಒಂದು ಕಾಲು ರೂಪಾಯಿಗಳಿಗೆ ಸಿಗುತ್ತವೆ.

ಏಜೆಂಟರು:—

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಬಿ. ಮದ್ರಾಸ್

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬಿನಿಂದ ವಿರಹಿತವಾದುದು.

"ಕೈಗಾರಿಕೆಗಳನ್ನು ಬೆಳೆಸಿರಿ; ಇಲ್ಲವಾದರೆ ಪತನಹೊಂದುವಿರಿ"

ಭಾರತೀಯರಿಗೆ ಸರ್ ವಿಶ್ವೇಶ್ವರಯ್ಯನವರ ಜೀವನ ಸಂದೇಶ

ಆರನೆಯ ಜನ್ಮ ದಿನೋತ್ಸವ

"ಕೈಗಾರಿಕೆಗಳನ್ನು ಬೆಳೆಸಿರಿ, ಇಲ್ಲವಾದರೆ ಪತನಹೊಂದುವಿರಿ" ಎಂಬೀ ದಿವ್ಯ ಸಂದೇಶವನ್ನು ನಿದ್ರಿತ ಭಾರತೀಯರಿಗಿತ್ತ ಅಂತರಾಷ್ಟ್ರೀಯ ಕೀರ್ತಿಶಾಲಿಯಾದ ವ್ಯಕ್ತಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ತಮ್ಮ ವಿಶೇಷ ಪ್ರತಿಭೆಯಿಂದ ಇಡಿಯ ಜಗತ್ತನ್ನೇ ಬೆರಗುಗೊಳಿಸಿದ ಮಹಾ ಮೇಧಾವಿಗಳು ಅವರು. ವಿಶ್ವೇಶ್ವರಯ್ಯನವರನ್ನು ಪಡೆದು ಮೈಸೂರು ಮಹಿಮಾನ್ವಿತವಾಯಿತು, ಕನ್ನಡನಾಡು ಕೃತಾರ್ಥವೆನಿಸಿತು, ಭರತ ಮಾತೆ ಭಾಗ್ಯ ಸಂಪನ್ನಳಾದಳು. ಸರ್ ವಿಶ್ವೇಶ್ವರಯ್ಯನವರು ದೇಶಕ್ಕಿತ್ತ ಜ್ಞಾನದಾನವು ಅಪಾರವಾದುದು, ಅಮೂಲ್ಯವಾದುದು.

ಅವರ ಆರನೆಯ ಹುಟ್ಟು ಹಬ್ಬವು ಈ ತಿಂಗಳ ೧೫ನೆಯ ತಾರೀಕಿಗೆ ಬಂದಿದೆ. ಈ ಸಂದರ್ಭದಲ್ಲಿ ಆ ಮಹಾ ಪುರುಷನಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮೆಲ್ಲರ ಅವಶ್ಯ ಕರ್ತವ್ಯ. ಅವರು ದೀರ್ಘಾಯುಗಳಾಗಿ ಇತೋಪ್ಯತಿಶಯ ವಿಶಾಲ ಕೀರ್ತಿಶಾಲಿಗಳಾಗಿ ನಮ್ಮ ನಾಡಿನ ಯಶಸ್ಸನ್ನು ಬೆಳಗಿಸಲಿ ಎಂದು ನಾವೆಲ್ಲರೂ ಹಾರ್ದಿಕವಾಗಿ ಹಾರೈಸಬೇಕಾಗಿದೆ.

ನೂತನ ಭಾರತದ ಪ್ರವಾದಿ

ಸರ್ ವಿಶ್ವೇಶ್ವರಯ್ಯನವರೆಂದಾಗ ಅದ್ಭುತವಾದ ಪ್ರತಿಭಾ ಸಂಪನ್ನ ವ್ಯಕ್ತಿಯೋರ್ವರು ಕಣ್ಣಮುಂದೆ ಬಂದುನಿಲ್ಲುತ್ತಾರೆ, ತನ್ನ ಬುದ್ಧಿಶಕ್ತಿಯಿಂದ ಲೋಕವನ್ನೇ ಬೆರಗುಗೊಳಿಸಿದ ಮೇಧಾವಿಯ ಸ್ಮರಣೆಯಾಗುತ್ತದೆ. ವಿಶ್ವೇಶ್ವರಯ್ಯನವರು ಮೈಸೂರ ಮಕ್ಕಳೆಂಬುದ. ಮೈಸೂರಿನವರಿಗೊಂದು ಹೆಮ್ಮೆ, ಕನ್ನಡನಾಡಿನವರೆಂಬುದು ಕನ್ನಡಿಗರೆಲ್ಲರಿಗೂ ಅಭಿಮಾನ, ಭಾರತೀಯರೆಂಬುದು ಭರತ ಭೂಮಿಗೇ ಒಂದು ಗೌರವ. ಬಂಗಾಳ, ಗುಜರಾಥ್, ಮರಾಠಾ ಪ್ರಾಂತಗಳು ಠಾಗೂರ್, ಗಾಂಧಿ, ತಿಲಕ ನೆಹರುಗಳಂತಹ ಹಲವು ಮಂದಿ ವಿಶ್ವವಿಖ್ಯಾತ ಕೀರ್ತಿಶಾಲಿಗಳನ್ನು ಪಡೆದಿದ್ದರೆ, ಕನ್ನಡಮಾತೆ ಸರ್ ವಿಶ್ವೇಶ್ವರಯ್ಯನವರಂತಹ ಒಬ್ಬ ಮಹಾ ಮೇಧಾವಿಯನ್ನು ಪಡೆದು ಹೆಸರು ಹೊಂದಿದಳೆಂಬುದು ಕನ್ನಡಿಗರೆಲ್ಲರೂ ಅಭಿಮಾನಪಟ್ಟುಕೊಳ್ಳತಕ್ಕಂತಹ ಒಂದು ವಿಷಯ.

ಭಾರತವು ಅನ್ಯಾಕ್ರಾಂತವಾಗಿ ಶತಮಾನದಾಟಿತ್ತು. ಭಾರತದ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕ್ಷೀಣದರಿದ್ರವಾಗತೊಡಗಿತು. ದೇಶದ ಆರ್ಥಿಕ ಶೋಷಣೆಯು ಮಿತಿಮೀರುತ್ತಾ ಹೋಗಿತ್ತು. ಬಡತನ ಸಂಕಷ್ಟಗಳು ಎಲ್ಲೆಲ್ಲೂ ಎಲ್ಲೆಮೀರಿದ್ದುವು. ವ್ಯಾಪಾರ ಉದ್ಯಮಗಳು ಕುಂಠಿತವಾಗಿದ್ದುವು. ಇಂತಹ ನಿಕೃಷ್ಟ ಪರಿಸ್ಥಿತಿಯನ್ನು ಕಂಡು ಎಚ್ಚರಗೊಂಡು ಭಾರತದ ಹಲವು ಮಂದಿ ಪ್ರತಿಭಾಶಾಲಿಗಳು ಅಹರ್ನಿಶಿ ದುಡಿಯಲು ನಿಶ್ಚಯಿಸಿದರು. ತಿಲಕ, ಗಾಂಧಿ, ದಾಸ್, ನೆಹರುಗಳಂತಹವರು ರಾಜಕೀಯ ರಂಗಕ್ಕಿಳಿದು ಹೋರಾಡಿದರು. ರಾಮಮೋಹನರಾಯ್ ದಯಾನಂದರಂತಹವರು ಸಾಮಾಜಿಕ ಕ್ಷೇತ್ರದಲ್ಲಿ ದುಡಿದರು. ಸರ್ ವಿಶ್ವೇಶ್ವರಯ್ಯರಂತಹವರು ದೇಶದ ಆರ್ಥಿಕ ಅಭಿವೃದ್ಧಿಯ ಕಾರ್ಯದಲ್ಲಿ ಕೈಹಾಕಿದರು. ಭವಿಷ್ಯ ಭಾರತದ ಸುವರ್ಣ ದಿನಗಳನ್ನು ಕನವರಿಸಿಕೊಂಡು ಈ ಮಹಾ ಪುರುಷರು ನಿರಂತರ ಮಾಡಿದ ಮತ್ತು ಮಾಡುತ್ತಿರುವ ಸಾಹಸಗಳಿಂದ ಇಂದು ನಮ್ಮ ರಾಷ್ಟ್ರವು ಈ ನೆಲೆಗಾದರೂ ಬಂದು ಮುಟ್ಟಿದೆಯೆಂಬುದನ್ನು ಯಾರೂ ಮರೆಯ ಬಾರದು. ನೂತನ ಭಾರತದ ಪ್ರವಾದಿಗಳಲ್ಲಿ ಸರ್ ವಿಶ್ವೇಶ್ವರಯ್ಯರೂ ಒಬ್ಬರು. ಜಗತ್ತಿನ ಇತರ ರಾಷ್ಟ್ರಗಳ ಸಾಲಿಗೆ ಭಾರತವೂ ಏರಬೇಕೆಂದು ಸಾಧಿಸಿದ ಮಹರ್ಷಿಯರಲ್ಲಿ ಅವರೂ ಓರ್ವರು.

ಪ್ರಾರಂಭದ ದಿನಗಳು

ವಿಶ್ವೇಶ್ವರಯ್ಯನವರು ೧೮೬೧ ನೆಯ ಇಸವಿಯಲ್ಲಿ ಜನ್ಮವೆತ್ತಿದರು; ಅವರ ಹುಟ್ಟೂರು ಮೈಸೂರು ಪ್ರಾಂತದ ಕೋಲಾರು. ಆಗರ್ಭ ಶ್ರೀಮಂತನಾಗಿ ವಿಶ್ವೇಶ್ವರಯ್ಯನವರು ಹುಟ್ಟಿರಲಿಲ್ಲ. ಪ್ರಕೃತಿಯ ಗರ್ಭದಲ್ಲಿ ಅಡಗಿರುವ ಅದ್ಭುತ ಶಕ್ತಿ, ಅದರಿಂದ ಮಾನವ ಜೀವನಕ್ಕೊದಗಬಹುದಾದ ಸೌಂದರ್ಯಗಳ ಕಲ್ಪನೆಗಳು ವಿಶ್ವೇಶ್ವರಯ್ಯನವರಿಗೆ ಬಾಲ್ಯದಿಂದಲೇ ಉಂಟಾಗಿತ್ತು. ಅವರು ಜನರ ಗುಂಪನ್ನು ಬಿಟ್ಟು ಯಾವಾಗಲೂ ಏಕಾಂಗಿಯಾಗಿರುವರು. ಏಕಾಂಗಿಯಾಗಿದ್ದ ವಿಶ್ವೇಶ್ವರಯ್ಯರ ವಿಶ್ವಮಾತೆಯ ಗರ್ಭದಲ್ಲಿ ಗೂಢವಾಗಿರುವ ಉಜ್ವಲ ಸಂಪತ್ತಿನ ಖನಿಯ ಕಡೆಗೆ ಸದಾ ದೃಷ್ಟಿ ಬೀರುತ್ತಿರುವರು.

ಅವರ ಪ್ರಾರಂಭದ ವಿದ್ಯಾಭ್ಯಾಸವು ಅವರ ಹುಟ್ಟೂರಾದ ಕೋಲಾರಿನಲ್ಲಿಯೇ ಆಯಿತು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅವರು ತಮ್ಮ ೨೦ನೆಯ ವಯಸ್ಸಿನಲ್ಲಿ ಗ್ರಾಜ್ಯುವೇಟ್ ಆದರು. ದಿವಾನ್ ರಂಗಾಚಾರ್ಲು ಇವರ ಮೇಧಾಶಕ್ತಿಗೆ ಮೆಚ್ಚಿದ್ದರು. ಅವರಿಗೆ ಸರಕಾರೀ ವಿದ್ಯಾರ್ಥಿವೇತನವು ದೊರಕಿತು, ಅವರು ಪೂನದ ಎಂಜಿನಿಯರಿಂಗ್ ಕಾಲೇಜಿಗೆ ಸೇರಿ ಅಲ್ಲಿ ಎ ಸಿ ಇ ಪರೀಕ್ಷೆಯಲ್ಲಿ ಸರ್ವ ಪ್ರಥಮರಾಗಿ ಉತ್ತೀರ್ಣರಾದರು.

ಬೊಂಬಾಯಿ ಸರಕಾರದಲ್ಲಿ ಅಸಿಸ್ಟೆಂಟ್ ಇಂಜಿನಿಯರಾಗಿ ಅವರು ತಮ್ಮ ಉದ್ಯೋಗ ಜೀವನವನ್ನು ಪ್ರಾರಂಭಿಸಿದರು. ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಲು ಆ ಉದ್ಯೋಗವು ಅವರಿಗೆ ಯೋಗ್ಯ ಸಂದರ್ಭವನ್ನು ಒದಗಿಸಿತು. ನೀರಾವರಿಯ ಯೋಜನೆಯು ಅವರ ಮೆಚ್ಚಿನ ಕೆಲಸವಾಗಿತ್ತು. ವಿಶ್ವೇಶ್ವರಯ್ಯನವರು ಸ್ವಲ್ಪ ಕಾಲದಲ್ಲಿಯೇ ತಮ್ಮ ಪ್ರತಿಭೆಯನ್ನು ತೋರಿಸಿದರು. ಮುಂದೆ ಸ್ವಲ್ಪ ಸಮಯದಲ್ಲಿ ಅವರು ಎಕ್ಸಿಕ್ಯುಟಿವ್ ಎಂಜಿನಿಯರಾಗಿ ನೇಮಕ ಹೊಂದಿ ಆ ಅಧಿಕಾರದಲ್ಲಿ ೧೯೦೪ರ ವರೆಗೆ ಇದ್ದರು. ಸೆನಿಟರಿ ಇಂಜಿನಿಯರಾಗಿ ಅವರು ಸರಕಾರದ ಉದ್ಯೋಗದಿಂದ ನಿವೃತ್ತಿಹೊಂದಿದರು. ಅಷ್ಟರಲ್ಲಿಯೇ ಅವರು ತಮ್ಮ ಕಾರ್ಯಕೌಶಲ್ಯದಿಂದ ದೇಶದಲ್ಲೆಲ್ಲಾ ಗೌರವ ಪಡೆದಿದ್ದರು, ವಿಶ್ವವಿಖ್ಯಾತಿ ಹೊಂದಿದ್ದರು. ಅವರು ಶೋಧಿಸಿದ "ತಾನಾಗಿ ಚಲಿಸುವ ಬಾಗಿಲು"ಗಳ ಪ್ರಯೋಜನವನ್ನು ಜಗತ್ತಿನ ರಾಷ್ಟ್ರಗಳೆಲ್ಲವೂ ಪಡೆದುವು. ಪನಾಮಾ ಕಾಲುವೆಯಲ್ಲಿಯೂ ಅದೇ ಬಾಗಿಲು ಉಪಯೋಗಿಸಲ್ಪಟ್ಟಿದೆ. ಪ್ರಕೃತಿಯೊಡನೆ ಸದಾ ಆಟವಾಡಿ ಅದರಿಂದ ಅದ್ಭುತಗಳನ್ನು ಹೊರತೆಗೆವ ಶಕ್ತಿ ಅವರದಾಗಿದೆ. ತನ್ನ ವಿಶೇಷ ಬುದ್ಧಿಶಕ್ತಿಯಿಂದಾಗಿ ಸಾಮಾನ್ಯ ಮನುಷ್ಯನ ನೆಲೆಯಿಂದ ಜಗದ್ವಿಖ್ಯಾತಿಗೇರಿದ ವ್ಯಕ್ತಿತ್ವ ಅವರದು. ಮುಂದೆ ಅವರು ಪ್ರಪಂಚ ಪರ್ಯಟನಕ್ಕೆ ಹೊರಟರು, ಅದರಿಂದಲೂ ಅವರ ಕೀರ್ತಿ ಮತ್ತಷ್ಟು ಹೆಚ್ಚಿತು. ಸುತ್ತು ಪ್ರಪಂಚವನ್ನು ಸಂಚರಿಸಿದಾಗ ಅವರು ಎಲ್ಲಾ ಕಡೆಗಳಿಂದಲೂ ವಿಶೇಷ ಅಭ್ಯಾಸವನ್ನೇ ಮಾಡಿಕೊಂಡು ಮರಳಿದರು.

ಮೈಸೂರು ದಿವಾನರಾಗಿ

ಮೈಸೂರು ದಿವಾನ ಪದವಿಯು ಅವರ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು. ದಿವಾನ ಪದವಿಯೆಂದರೆ ಐಶ್ವರ್ಯವನ್ನು ಗಳಿಸಲು ದರ್ಪವನ್ನು ಮೆರೆಸಲು ಒಂದು ಸಂದರ್ಭವಾಗಿ ಹಲವರಿಗೆ ತೋರುತ್ತದೆ; ಆದರೆ ವಿಶ್ವೇಶ್ವರಯ್ಯನವರಿಗೆ ಅದು ಪ್ರಗತಿ ಕಾರ್ಯವನ್ನು ಮುಂದುವರಿಸುವರೆ ಒದಗಿದ ಸುವರ್ಣ ಸಂಧಿಯಾಯಿತು. ಸಂಪತ್ತಿನಲ್ಲಿ, ಕೈಗಾರಿಕೆಯಲ್ಲಿ, ಹೀಗೆ ವಿವಿಧ ಚಟುವಟಿಕೆಗಳಲ್ಲಿ ಮೈಸೂರನ್ನು ಅಮೇರಿಕಾ, ಜಪಾನು, ಇಂಗ್ಲೆಂಡುಗಳೊಡನೆ ಸಮ ಭುಜನಾಗಿಸಿ ನಿಲ್ಲುವಂತೆ ಮಾಡಬೇಕೆಂದು ಅವರು ಅಹರ್ನಿಶಿ ದುಡಿದರು. ತನ್ನ ೬ ವರ್ಷಗಳ ದಿವಾನ ಪದವಿಯ ಕಾಲದಲ್ಲಿ ಪ್ರತಿಯೊಂದು ನಿಮಿಷವನ್ನೂ ಅವರು ಮೈಸೂರನ್ನು ಮೇಲೆತ್ತುವುದರಲ್ಲಿಯೇ ವ್ಯಯಿಸಿದರು; ಅವರು ಮೈಸೂರನ್ನು ಬೆಳಗಿಸಿದರು. ಶ್ರೀ ಕೃಷ್ಣರಾಜ ಸಾಗರ ಆಣೆಕಟ್ಟು, ಭದ್ರಾವತಿಯ ಕಬ್ಬಿಣ ಕಾರ್ಖಾನೆ ಮೊದಲಾದ ಹಲವು ಕಾರ್ಯ ವಿಶೇಷಗಳು ಮೈಸೂರಿನ ಇತಿಹಾಸದಲ್ಲಿ ಅವರ ಹೆಸರು ಸುವರ್ಣಾಕ್ಷರಗಳಿಂದ ಉಲ್ಲಖಿತವಾಗುವಂತೆ ಮಾಡಿವೆ. ಮೈಸೂರು ಇಂದಿನ ಮೈಸೂರಾಗಿರುವುದರ ಬಹುಭಾಗದ ಕೀರ್ತಿ ವಿಶ್ವೇಶ್ವರಯ್ಯನವರಿಗೆ ಸಲತಕ್ಕುದಾಗಿದೆ.

ಭಾರತದ ಸೇವೆಯಲ್ಲಿ

ದಿವಾನ ಪದವಿಯಿಂದ ನಿವೃತ್ತರಾದ ಮೇಲೆ ಅವರು ತಮ್ಮ ಕಳೆದ ೨೨ ವರ್ಷಗಳ ಸೇವೆಯನ್ನು ಅಖಿಲ ಭಾರತದ ಉನ್ನತಿ ಸಲುವಾಗಿ ಸಲ್ಲಿಸಿದ್ದಾರೆ. ಭಾರತವು ಪ್ರಗತಿ ಹೊಂದಬೇಕಾದರೆ ಕೈಗಾರಿಕೆಯ ಉನ್ನತಿಯಾಗದೆ ಸಾಧ್ಯವಿಲ್ಲವೆಂಬುದನ್ನು ಅವರು ಸಾರಿ ಸಾರಿ ಹೇಳಿದ್ದಾರೆ. ಅದರೊಂದಿಗೆ, ನಮ್ಮ ರಾಷ್ಟ್ರವು ಯಾವುದೇ ತರದಲ್ಲಿ ಅಭಿವೃದ್ಧಿ ಹೊಂದಬೇಕಾದರೂ, ವಿದೇಶೀಯ ಪ್ರಭುತ್ವವು ಹೋಗಿ ಸ್ವತಂತ್ರ ರಾಜ್ಯಾಧಿಕಾರವಾಗದೆ ಸಾಧ್ಯವಿಲ್ಲವೆಂದು ಅವರು ತಿಳಿದಿದ್ದಾರೆ. ಸರ್ ವಿಶ್ವೇಶ್ವರಯ್ಯನವರಂತಹ ವಿಶೇಷ ಪ್ರತಿಭಾಶಾಲಿಗಳಿಗೆ ಪರತಂತ್ರವಾದ ರಾಷ್ಟ್ರದಲ್ಲಿ ಯಾವ ಸೌಕರ್ಯವೂ ಒದಗುವುದು ಸಾಧ್ಯವಿಲ್ಲ. ಮೋಟಾರು ಕೈಗಾರಿಕೆಯ ವಿಷಯದಲ್ಲಿ ವಿಶೇಷ ಅಭ್ಯಾಸಮಾಡಿದ ಅವರು ಅದರ ಅಭಿವೃದ್ಧಿಯ ಕಾರ್ಯವನ್ನು ನಮ್ಮ ರಾಷ್ಟ್ರದಲ್ಲಿ ಕೈಕೊಳ್ಳುವ ಯೋಜನೆಯೊಂದನ್ನು ತಯಾರಿಸಿದ ಸುದ್ದಿ ಕೇಳಿ ಸರ್ವರೂ ಸಂತೋಷಗೊಂಡಿದ್ದರು. ಆದರೆ ವಿದೇಶಿಯ ಪ್ರಭುತ್ವವು ಅವರಿಗೆ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡಲಿಲ್ಲವೆಂಬ ವಿಷಯವು ತುಂಬಾ ವಿಷಾದಿಸಬೇಕಾದುದಾಗಿದೆ. ಸರ್ ವಿಶ್ವೇಶ್ವರಯ್ಯನವರು 'ನೇಶನಲ್ ಪ್ಲಾನಿಂಗ್ ಕಮಿಟಿ' ಸದಸ್ಯರಲ್ಲೊಬ್ಬರಾಗಿ ಭವಿಷ್ಯ ಭಾರತದ ಯೋಜನೆಯನ್ನು ರೂಪಿಸಲು ಬದ್ಧ ಕಂಕಣರಾಗಿ ದುಡಿಯುತ್ತಿದ್ದಾರೆ. ತಮ್ಮ ೮೧ನೆಯ ವಯಸ್ಸಿನ ಆಯುಸ್ಸಿನಲ್ಲಿಯೂ ಅವರು ನಮ್ಮ ಮಧ್ಯೆ ಬಾಳಿರುವುದು ನಮ್ಮ ರಾಷ್ಟ್ರದ ಮಹಾಭಾಗ್ಯವಾಗಿದೆ. ಅವರಿಗೆ ಇತೋಪ್ಯತಿಶಯ "ಆಯುರಾರೋಗ್ಯಗಳು" ಒದಗಿ ನಮ್ಮ ರಾಷ್ಟ್ರಕ್ಕೆ ಅವರ ವಿಶೇಷ ಬುದ್ಧಿಶಕ್ತಿಯಿಂದ ಅಮೂಲ್ಯ ಜ್ಞಾನದಾನವೊದಗಲಿಯೆಂದು ನಾವು ಸದಾ ಹಾರೈಸುತ್ತೇವೆ, ಹಂಬಲಿಸುತ್ತೇವೆ.

—K K Rai

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಪುಸ್ತಕ ವಿಮರ್ಶೆ

ಶ್ರೀಮಾನಸಸ್ಮೃತಿಯು

(ಶ್ರೀಷಡ್ಮಜೀ ವೆಂಕಟರಾಮಾಚಾರ್ಯ ಕೃತ) ಅನುವಾದಕರು: ಆರ್. ಎಸ್. ಶೇಷಗಿರಿ ರಾವ್ ಪ್ರಕಾಶಕರು.

ಚೊಕ್ಕಾನ ಹಳ್ಳಿ ಜಾಗೀರ್ದಾರ್ ಪಿ ಕೃಷ್ಣರಾಯ ಅದವಾನಿ, ೧/೮ ಆಕಾರದ ೭೧+೪+೨ ಪುಟಗಳ -ಬೆಲೆ ನಾಲ್ಕಾಣೆ

ಶ್ರೀವ್ಯಾಸ ತತ್ವಜ್ಞರು ತಮ್ಮ ಪೂರ್ವಾಶ್ರಮದಲ್ಲಿ ರಚಿಸಿದ ಸಂಸ್ಕೃತ ಮಾನಸಸ್ಮೃತಿಯು ಶ್ರೀ ಶೇಷಗಿರಿ ರಾಯರ ಕನ್ನಡ ಅನುವಾದದೊಡನೆ ಈಗ ಪ್ರಕಾಶಿತವಾಗಿದೆ. ದೇವರ ಅಪರೋಕ್ಷಜ್ಞಾನ ಮತ್ತು ಸ್ವರೂಪಜ್ಞಾನದ ವಿಷಯ ಉಪನಿಷತ್ ಗ್ರಂಥಗಳ ಆಧಾರದಿಂದ ಇದರಲ್ಲಿ ಮನಸ್ಸಿಗೆ ಸಂಬಂಧಿಸಿದ ಆಧಿವ್ಯಾಧಿಗಳ ನಿವೃತ್ತಿ ಕ್ರಮವೂ ವರ್ಣಿತವಾಗಿರುತ್ತದೆ

ಸಂಸ್ಕೃತ ಗ್ರಂಥವೊಂದನ್ನು ಅರ್ಥ ಸಹಿತವಾಗಿ ಪ್ರಕಟಿಸಿದ ಅನುವಾದಕರು ಮತ್ತು ಪ್ರಕಾಶಕರು ತುಂಬಾ ಅಭಿನಂದನೀಯರಾಗಿರುವರು

ಸ್ವೀಕಾರ

In Memorium

ದಿವಂಗತ ವಿಶ್ವಕವಿ ಡಾ। ರವೀಂದ್ರನಾಥ ಠಾಗೂರರ ಕುರಿತು ಡಾಕ್ಟರ್ ಸಾಧನಾ ಔಷಧಾಲಯ ದರು ಈ ಪ್ರಕಟಣೆ ಹೊರಡಿಸಿರುತ್ತಾರೆ ಇದರಲ್ಲಿ ದೇಶದ ವಿದೇಶದ ಮುಖಂಡರು ಪ್ರಮುಖಪತ್ರಿಕೆಗಳು ಗತಿಸಿದ ವಿಶ್ವಕವಿಯ ಕುರಿತು ಸೂಚಿಸಿದ ಸಂತಾಪ ಸೂಚನೆಗಳೇ ತುಂಬಿರುತ್ತವೆ. ಈ ಸಂಗ್ರಹವು ವಾಚನೀಯವಿದೆ.

NOTICE

It is hereby notified for public information that the power of attorney granted by me on 12-4-1940 in favour of Mr B. A. Wilson, son of Luther Bangera, Mangalore, stands Cancelled

Mangalore, 11-9-1941 } (sd) M Peres

ಬಲ್ಗೇರಿಯವೂ ಯುದ್ಧಕ್ಕೆ ಸಿದ್ಧವಾಯಿತು?

ಬಲ್ಗೇರಿಯ ಸರಕಾರವು ಯುದ್ಧಕ್ಕೆ ಸಿದ್ಧವಾಗುತ್ತಿದೆ ಸೈನಿಕರು ಕೂಡಲೇ ಕೆಲಸಕ್ಕೆ ಹಾಜರಾಗಬೇಕೆಂದು ಆಜ್ಞೆ ಹೊರಡಿದೆ ಬಲ್ಗೇರಿಯದ ಸಂಚು ಟರ್ಕಿಯ ವಿರುದ್ಧವಿರದೆ ರಶ್ಯದ ವಿರುದ್ಧವಿರಬಹುದೆಂದು ತಿಳಿದಿದೆ

ಲೆನಿನ್‌ಗ್ರಾಡು ಸುತ್ತು ಸೈನ್ಯ

ಲೆನಿನ್‌ಗ್ರಾಡಿಗೆ ಸುತ್ತು ಜರ್ಮನ್ ಸೈನ್ಯವು ಬಲವಂತವಾಗಿ ನಿಲ್ಲಿಸಲ್ಪಟ್ಟಿರುವುದೆಂದು ತಿಳಿದಿದೆ ಜರ್ಮನರ ಚಕ್ರವ್ಯೂಹವು ಬಲವಾಗಿದೆಯೆಂದು ಸುದ್ದಿ

ಕೀವ್ ಒಡೆಸ್ಸಾ ಲೆನಿನ್‌ಗ್ರಾಡ್ ಯುದ್ಧ

ಉತ್ತರ ದಿಕ್ಕಿನಲ್ಲಿ ಜಲಮಾರ್ಗವಾಗಿ ಲೆನಿನ್‌ಗ್ರಾಡಿಗೆ ಸೈನ್ಯ ಕಳುಹಿಸಲು ಜರ್ಮನರು ಮಾಡಿದ ಪ್ರಯತ್ನ ಯಶಸ್ವಿಯಾಗಲಿಲವಂತೆ ಒಡೆಸ್ಸಾ ಮತ್ತು ಕೀವ್‌ನಲ್ಲಿಯೂ ಘನಘೋರ ಕಾಳಗವಾಗುತ್ತಿದೆಯೆಂದು ಹೇಳಲಾಗಿದೆ ಒಡೆಸ್ಸಾದ ಹೊರಭಾಗದಲ್ಲಿ ೨೦೦೦೦ ರುಮೇನಿಯಾನರು ನಾಶಹೊಂದಿದರಂತೆ



ಹೌದು, ಪುಟ್ಟ ಹುಡುಗನೇ, ಈ ಸಿಪಾಯಿಯೇ ನಿನ್ನ ತಂದೆ ನಿನ್ನೊಂದಿಗೆ ಕಾಪಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ ಯೋಧನಾಗಲು ನೀನು ತೀರಾ ಚಿಕ್ಕವನಿರುವೆ ಆದರೆ ನೀನು ಮತ್ತು ನಿಮ್ಮ ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಹಣಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಬಲಗೊಳ್ಳಲು ಸಹಾಯಕರಾಗಬಹುದು

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೪/೬/- ಲಾಭ ಕೊಡುತ್ತೆ
ಪೋಸ್ಟ್ ಆಫೀಸ್‌ನಲ್ಲಿ ವಿವರಗಳನ್ನು ತಿಳಿಯಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

6K 49 Kn

ಜೀವನದ ಪ್ರತಿಯೊಂದು ಅಂಶದಲ್ಲಿಯೂ ಅವರು ಸುಖಪಡುತ್ತಾರೆ ಸಂಪೂರ್ಣ ಆರೋಗ್ಯಶಾಲಿಗಳಾಗಿರುವುದರಿಂದ ಅವರು ಸುಖಪಡುತ್ತಾರೆ.

ನೀವು ಎಷ್ಟೇ ಪ್ರಾಯಸ್ಥರಾಗಿರಿ, ಇಲ್ಲ, ಎಷ್ಟೇ ಅನಾರೋಗ್ಯ ಹೊಂದಿರಿ, ನೀವೂ ಪೂರ್ಣ ಆರೋಗ್ಯವನ್ನು ಹೊಂದಬಹುದು

ಒಂದು ಬಾಟ್ಲಿ

ಜೀವಾಮೃತ

ವನ್ನು ಕೊಂಡುಕೊಳ್ಳಿರಿ.

ಸ್ತ್ರೀ ಪುರುಷರೆಲ್ಲರಿಗೂ ಹಿತಕರ ಶಕ್ತಿವರ್ಧಕ ಟಾನಿಕ್

ಕ್ರಮವಾಗಿ ಇದನ್ನು ತೆಗೆದುಕೊಳ್ಳಿರಿ. ನಿಮ್ಮಲ್ಲಿ ಹೊಸ ಜೀವನ ತುಂಬಿದ ಅನುಭವವಾಗುವುದು ಎಂದಿಗೂ ಇದು ಗುಣಕೊಡದೆ ಇರುವುದಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಇದು ದೊರಕುತ್ತದೆ

ತಯಾರು ಮಾಡುವವರು

ಆಯುರ್ವೇದಾಶ್ರಮ, ಮದರಾಸು.

ಸ್ಟಾಕಿಸ್ಟರು: ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಸಿನೆಮಾ ಸುದ್ದಿ

ಕಾನನ್ ದೇವಿ ನ್ಯೂ ಥಿಯೇಟರ್ಸ್ ಬಿಟ್ಟಳು.

ನ್ಯೂ ಥಿಯೇಟರ್ಸಿನೊಡನೆ ಶ್ರೀಮತಿ ಕಾನನ್ ದೇವಿಯು ಮಾಡಿಕೊಂಡ ಕರಾರು ಈ ತಿಂಗಳಿಗೆ ಕೊನೆಗೊಳ್ಳುವ ನಿಮಿತ್ತ ಮುಂದೆ ಆಕೆಯು ಆ ಕಂಪನಿಯನ್ನು ಬಿಟ್ಟು ಎಂ. ಪಿ. ಪಿ. ಲಿಮಿಟೆಡ್ ಇದರಲ್ಲಿ ಕೆಲಸಮಾಡುವಳೆಂದು ಆಕೆ ಅಮೃತಬಜಾರ್ ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದಿರುತ್ತಾಳೆ

ಅನೇಕ ಸಮಯಗಳಿಂದ ನ್ಯೂ ಥಿಯೇಟರ್ಸಿನ ಒಬ್ಬ ಉಜ್ವಲತಾರೆಯಾಗಿ ಬೆಳಗಿದ ಕಾನನಳು ಈಗ ಅದನ್ನು ತೊಲಗಿಹೋಗುವಳೆಂಬ ಸುದ್ದಿಯನು ಕೇಳಿ ಅನೇಕರು ಆಶ್ಚರ್ಯಗೊಳ್ಳಲಿದೆ ಕಾನನ್ ಮತ್ತು ನ್ಯೂ ಥಿಯೇಟರ್ಸ್ ಈ ಉಭಯ ವ್ಯಕ್ತಿ ಸಂಸ್ಥೆಗಳಿಗೂ ಅನ್ಯೋನ್ಯ ಸಹಕಾರದಿಂದ ಕೀರ್ತಿ ಲಾಭಗಳು ಹೆಚ್ಚಿದೆ.

ಕಾನನ ದೇವಿಯು ಶ್ರೀ ಪಿ. ಸಿ. ಬರುವಾರವರಿಂದ ನಿರ್ದೇಶಿಸಲ್ಪಡುವ ಒಂದು ಹಿಂದಿ ಇನ್ನೊಂದು ಬಂಗಾಳೀ ಹೀಗೆ ಉಭಯಚಿತ್ರಗಳಲ್ಲಿ ಅಭಿನಯಿಸುವಳೆಂದು ತಿಳಿದಿದೆ ಕಾನನಳ ಪ್ರಥಮ ನ್ಯೂ ಥಿಯೇಟರ್ಸ್ ಚಿತ್ರ 'ಮುಕ್ತಿ'ಯೆಂಬುದು, ಇದು ಅಖಿಲ ಭಾರತದಲ್ಲಿ ವಿಖ್ಯಾತವಾಗಿ ಧಾರಾಳ ದ್ರವ್ಯ ಸಂಪಾದಿಸಿದೆ ಮುಂದಿನ ಅವಳ ಹಿಂದೀ ಚಿತ್ರದ ಹೆಸರು 'ಶಾಂತಿ' ಎಂಬುದಾಗಿ ಇರುವುದೆಂದು ತಿಳಿದಿದೆ. ಬಂಗಾಳಿ ಚಿತ್ರದ ಹೆಸರು "ಇಂದ್ರನಾಥ" ಎಂಬುದಾಗಿಯೂ ಸುದ್ದಿಯಿದೆ

ವರ್ಷ ಒಂದರ ೩,೦೦೦ ರೂಪಾಯಿಗಳ ಸಂಬಳದಲ್ಲಿ ಅವಳು ಹೊಸ ಕಂಪನಿಯಲ್ಲಿ ಕೆಲಸಮಾಡಲು ಒಪ್ಪಿರುವಳೆಂದು ತಿಳಿದುಬರುತ್ತದೆ

ಬಾಬುರಾವ್ ಪೆಂಡಾರ್ಕರ್ ತೆಲುಗು ಚಿತ್ರದಲ್ಲಿ

ಉತ್ತರ ಭಾರತದ ಸಿನೆಮಾ ತಾರೆಗಳಲ್ಲಿ ಒಬ್ಬರ ಮೇಲೆ ಒಬ್ಬರಾಗಿ ದಕ್ಷಿಣ ಭಾರತ ಚಿತ್ರದಲ್ಲಿ ಅಭಿನಯಿಸುವ ವಿಷಯವಾಗಿ ಸುದ್ದಿ ಕೇಳಿಬರುತ್ತಿದೆ ಶಾಂತಾಆಪ್ಟೆ ತಮಿಳು ಚಿತ್ರದಲ್ಲಿ ಅಭಿನಯಿಸಿದಳು. ಈಗ ಬಾಬುರಾವ್ ಪೆಂಡಾರ್ಕರ್ ತೆಲುಗು ಚಿತ್ರವೊಂದರಲ್ಲಿ ಅಭಿನಯಿಸುವ ಸುದ್ದಿ ಕೇಳುತ್ತದೆ

ವಿಷ್ಣುಪಂತ್ ಪಗ್ನೀಸ್.

ಪ್ರಸಿದ್ಧ ಭಕ್ತ ನಟ ವಿಷ್ಣು ಪಗ್ನಿಸನ ಭಜನೆಯೊಂದನ್ನು ಕಳೆದ ವಾರ ಬೊಂಬಯಿಯಲ್ಲಿ ಗಣೇಶ ಉತ್ಸವದಂಥ ಮಾಧವ ಭಾಗಿನ ದೇವಾಲಯವೊಂದರಲ್ಲಿ ಭಜನೆಯೊಂದನ್ನು ಏರ್ಪಾಡಿಸಿದ್ದರು. ಭಜನೆ ಪ್ರಾರಂಭವಾಗಬೇಕಾದರೆ ೫೦೦೦ ಮಂದಿ ಅಲ್ಲಿ ಸೇರಿದರು. ಮತ್ತೆ ಭಜನೆಯು ಮೊದಲನೆಯ ಅಭಂಗ ಹಾಡಲು ಆರಂಭಿಸುವಾಗ ಮತ್ತು ಎರಡು ಸಾವಿರ ಮಂದಿ ಸೇರಿತು ಮತ್ತೆ ಆ 'ಹಾಲಿ'ಗೆ ಜನರನ್ನು ಸೇರಿಸುವುದು ಅಸಾಧ್ಯವಾಗಿ ಅಧಿಕಾರಿಗಳು ತಡೆದಾಗ ಜನರು ಕಲ್ಲುಗಳನ್ನು ಎಸೆಯತೊಡಗಿ ಮಾರಾಮಾರಿ ಮಾಡಿದರು. ಸಾವಿರಾರು ರೂಪಾಯಿಯಷ್ಟು ದೇವಳಕ್ಕೆ ನಷ್ಟವಾಯಿತು. ದಿನದ ಕಾರ್ಯಕ್ರಮ ವಂತೂ ನಿಲ್ಲಿಸಲೇ ಬೇಕಾಯಿತು

ಶೋಭನಾ ಸಮರ್ಥ.

ಆಶಾ ಚಿತ್ರ ಕಂಪನಿಯ ಮರಾಠೀ ಚಿತ್ರ 'ರಾಜಾರಾಣಿ'ಯಲ್ಲಿ ಮುಂದೆ ಕೆಲಸಮಾಡಲು ಶೋಭನಾ ಸಮರ್ಥಳು ತಿರಸ್ಕರಿಸಿದಳೆಂದು ಸುದ್ದಿಯಿದೆ. ಅದನ್ನು ಆಕೆಯ ಗಂಡ ಕುಮಾರಸೇನನೇ ನಿರ್ದೇಶಿಸುವನಂತೆ ಸ್ಟುಡಿಯೋದ ಕಾರ್ಯಕರ್ತರ ನಡತೆಯು ಆಕೆಗೆ ಸರಿಬೀಳಲಿಲ್ಲವಾಗಿ ಹೀಗೆ ಮಾಡಿದಳೆಂದು ತಿಳಿದಿದೆ

ತಾಜ್ ಮಹಾಲ್.

ಮೋಹನ್ ಪಿಕ್ಚರ್ಸಿನವರ 'ತಾಜ್ ಮಹಾಲ್' ಚಿತ್ರದಲ್ಲಿ ಸರೋಜಿನಿಯು ಮುಮ್ತಾಜ್ ಮಹಾಲಳ ಪಾತ್ರವನ್ನು ಅಭಿನಯಿಸುವಳು

ಅಮೃತ

'ಅಮೃತ' ಚಿತ್ರದಲ್ಲಿ ವಿನಾಯಕ್ ಮತ್ತು ಮೀನಾಕ್ಷಿ ಇವರು ಪ್ರೇಮಿಗಳಾಗಿ ಅಭಿನಯಿಸುತ್ತಾರೆ

ರಾಜನರ್ತಕಿ - ಇಂಗ್ಲಿಷಿನಲ್ಲಿ

ವಾಡಿಯಾದ ಫಿಲ್ಮ 'ರಾಜನರ್ತಕಿ'ಯು (ಸಾಧನಾಬೋಸಳು ಅಭಿನಯಿಸುವ) ಇಂಗ್ಲಿಷಿನಲ್ಲಿ ತಯಾರಾಗಿದೆ ಬೊಂಬಯಿ ಕಲ್ಕತ್ತಗಳಲ್ಲಿ ಅದು ಒಂದೇ ದಿನಗಳಲ್ಲಿ ಪ್ರಕಟವಾಗುವುದಾಗಿ ತಿಳಿದಿದೆ ಇದು ಅಮೇರಿಕದಲ್ಲಿಯೂ ಪ್ರಕಟವಾಗುವ ಏರ್ಪಾಡು ಆಗಿರುವುದಾಗಿ ಸುದ್ದಿ

'ಅಂಜನ್' ಚಿತ್ರದಲ್ಲಿ ಮಣಿಪುರ ನೃತ್ಯ:

ಬೊಂಬಯಿ ಟಾಕೀಸಿನ ಹೊಸ ಚಿತ್ರವಾದ 'ಅಂಜನ್'ದಲ್ಲಿ ಮಣಿಪುರ ನೃತ್ಯವು ಶುದ್ಧವಾಗಿ ಅಭಿನಯಿಸಲಾಗಿದೆಯೆಂದು ತಿಳಿಯುತ್ತದೆ ತರುಣ ಕುಮಾರರು ನೃತ್ಯನಿರ್ದೇಶಕರು

ಲೀಲಾ ಚಿಟ್ನಿಸ್ ಸಿನೆಮಾ ಲೇಖಕಳು.

ಜಗತ್ತಿನಲ್ಲಿಯೇ ಸರ್ವ ಪ್ರಥಮವಾಗಿ ಲೀಲಾ ಚಿಟ್ನಿಸಳು ಸಿನೆಮಾ ಲೇಖಕಳಾಗಿ ಪ್ರಸಿದ್ಧಳಾದಳು "ಕಾಂಚನ್" ಚಿತ್ರವು ಅವಳಿಂದ ಲಿಖಿತವಾದುದಾಗಿ ತಿಳಿದಿದೆ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪೆಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಮನ್ನೇ (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT.



ಕೆಮ್ಮು, ಶೀತ ಮೊದಲಾದ ಬಾಧೆಗಳಿಂದ ಎದೆಯನ್ನು ರಕ್ಷಿಸಿರಿ!

ಕೆಮ್ಮು ಶ್ವಾಸಕೋಶಗಳನ್ನು ಬಲಗುಂದಿಸುವ ಶೀತ ಚಳಿಜ್ವರ ಮೊದಲಾದುವುಗಳಿಂದ ನರಳುವಿರಾದರೆ ಕೂಡಲೇ ಪೆಪ್ಸನ್ನು ಸೇವಿಸುವಂತೆ ಜಾಗ್ರತೆಯಾಗಿರಿ, ಈ ವಿಷಹಾರಿ ಶ್ವಸನೀಯ ಗುಳಿಗೆಗಳು ಸೇವಿಸಲು ಬಹಳ ರುಚಿಕರ ಮತ್ತು ಯಾವತ್ತೂ ಬಾಧೆಗಳನ್ನು ಗುಣಪಡಿಸುವಷ್ಟು ಶಕ್ತಿಯುಳ್ಳದ್ದು.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಒಳವಾಗಿ ಹೊಕ್ಕಿ ಅಲ್ಲಿರುವ ವಿಷಕಾರಿ ಕ್ರಿಮಿಗಳನ್ನು ನಾಶಮಾಡಿ ಗಂಟಲನ್ನೂ ಎದೆಯ ಬಾಧೆಯನ್ನೂ ಶಮನಗೊಳಿಸುತ್ತದೆ. ಇವು ಶೀತಜ್ವರ ಮೊದಲಾದುವುಗಳಿಗೆ ತಕ್ಕುದಾದ ಔಷಧಿ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ. 1ರಂತೆ ಮಾರುತ್ತಾರೆ.

ಏಜಂಟ್ಸ್ —

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದರಾಸು

ಯಾವಾಗಲೂ ಪೆಪ್ಸನ್ನು ಪಯೋಗಿಸಿರಿ.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ವಿಚಿತ್ರ ಪ್ರಪಂಚ

ಪರಿಮಳವೂ ಸಸಿಗೆ ರೋಗವಾಗಿದೆ.

ಸೊಗಸಾದ ಪರಿಮಳವು ಹೊರಡುವುದು ಗುಲಾಬಿ ಹೂವಿನ ಬುಡಕ್ಕೆ ರೋಗ ತಗಲಿದ ಲಕ್ಷಣವೆಂಬುದಾಗಿ ಕಂಡು ಹುಡುಕಿದ್ದಾರೆ. ಆ ರೋಗವು ತಗಲಿದರೆ ಗುಲಾಬಿ ಗಿಡದಿಂದ, ಮೊದಲೇ ಪರಿಮಳದ ಹೂವುಳ್ಳ ಗಿಡದಿಂದ— ಅತ್ಯಂತ ಪರಿಮಳವು ಸುತ್ತ ಮುತ್ತಲೂ ಹರಡುವುದಂತೆ. ಹೀಗಾಗಿ ಇತ್ತೀಚೆಗೆ ಗುಲಾಬಿ ಹೂವಿನ ತೋಟಗಾರರು ಆ ಗಿಡದಿಂದ ಹೊರಡುವ ಪರಿಮಳದಿಂದಾಗಿ ಹೆಚ್ಚು ಉಲ್ಲಾಸಪಟ್ಟು ಕೊಳ್ಳುವುದಿಲ್ಲ.

ತೋರ ಮತ್ತು ಸಪೂರ ಆಗುವುದು.

ತೋರ ಇದ್ದವರು ಕಡಿಮೆ ಊಟ ಮಾಡುವುದರಿಂದ ಸಪೂರ ಆಗುತ್ತಾರೆ; ಆದರೆ ಹೆಚ್ಚಾಗಿ, ಸಪೂರ ಇದ್ದವರು ಹೆಚ್ಚು ಊಟಮಾಡಿ ತೋರ ಆಗಲು ಸಾಧ್ಯವಾಗುವುದಿಲ್ಲ. ಕೊಲೊಂಬಿಯಾದ ಡಾ। ಆಲ್ಫ್ರೆಡ್ ಎಂಬವರು ಹಲವು ಸಪೂರದವರನ್ನು ಪುಡಿಮಾಡಿದ ಕತ್ತಿಯ ಆಹಾರದಿಂದ ತೋರವಾಗಿ ಮಾಡಿದ್ದರೆಂದು ತಿಳಿದುಬರುತ್ತದೆ. ಕೆಲವೇ ತಿಂಗಳಲ್ಲಿ ಅವರು ೫ರಿಂದ ೧೬ ಪೌಂಡುಗಳಷ್ಟು ಭಾರ ಹೆಚ್ಚಿದ್ದರೆಂದು ಹೇಳಲಾಗಿದೆ.

ರಾಜಕುಮಾರಿಗೆ ೩ ಮಿಲಿಯ ಪವನು!

ಕಾಪೂರ್ತಲದ ರಾಜಕುಮಾರಿಯೊಬ್ಬಳು ಫ್ರಾನ್ಸಿನಲ್ಲಿ ಜರ್ಮನರ ಕೈಸೆರೆಯಲ್ಲಿರುವಳಂತೆ. ಅವಳನ್ನು ಬಿಡಬೇಕಾದರೆ ತಮಗೆ ೩ ಮಿಲಿಯ ಪವನು ಕೊಡಬೇಕಾಗಿ ನಾಜಿಗಳು ಕೇಳುತ್ತಿರುವರೆಂದು ಲಂಡನಿನ ನ್ಯೂಸ್ ರಿವ್ಯೂ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಫ್ರಾನ್ಸನ್ನು ನಾಜಿಗಳು ವಶಪಡಿಸುವ ಸಂದರ್ಭ ಆಕೆಯ ಗಂಡನು ಅಲ್ಲಿಂದ ತಪ್ಪಿಸಿಕೊಂಡು ಹೋದವನು, ಅಷ್ಟಾದರೂ ದ್ರವ್ಯವನ್ನು ಕೊಟ್ಟು ಅವಳನ್ನು ಬಿಡುಗಡೆ ಮಾಡಲು ಈಗ ಒಪ್ಪಿರುವನಂತೆ. ಆದರೆ ಬ್ರಿಟಿಷ್ ಸರಕಾರವು ಅದನ್ನು ತಡೆದಿರುವುದಂತೆ.

ಕಾಪೂರ್ತಲದ ರಾಣಿಯೊಬ್ಬಳು ಹೀಗೆ ಬಂಧಿತಳಾಗಿರುವಳೆಂಬ ವಿಚಾರವನ್ನು ನಾವು ಭಾರತೀಯರಾರೂ ಇದ್ದುವರೆಗೆ ಕೇಳದಿರುವುದಿದ್ದರೂ ಆಂಗ್ಲೇಯರಲ್ಲಿ ಇಷ್ಟೊಂದು ಪ್ರಚಾರವಾಗಿರುವುದು ವಿಚಿತ್ರ. ಈ ವಿಷಯದಲ್ಲಿ ಹೆಚ್ಚಿನ ವಿವರವನ್ನು ನಾವು ಬೇಗನೇ ತಿಳಿಯಲು ಅವಕಾಶವಾಗಬಹುದೆ?

ವಿಜ್ಞಾನಯುಗ

ಪ್ರಾಣಿಗಳಿಗೆ ಎಕ್ಸ್‌ರೇ

ಎಕ್ಸ್‌ರೇಗಳು ಅವುಗಳ ಎಲ್ಲಾ ಪ್ರಯೋಜನಗಳಲ್ಲಿಯೂ ಸಂಪೂರ್ಣ ಸಾರ್ಥಕವಾಗದೇ ಇದ್ದರೂ ವೈದ್ಯಕೀಯ ವಿಷಯದಲ್ಲಿ ಅವುಗಳಿಂದಾಗುವ ಪ್ರಯೋಜನವು ಅಮೂಲ್ಯವಾಗಿದೆ. ಮನುಷ್ಯರು ಎಕ್ಸ್‌ರೇಯಿಂದ ಪ್ರಯೋಜನ ಹೊಂದುವಂತೆ ಪ್ರಾಣಿಗಳೂ ಹೊಂದುವವೆಂದು ಈಗ ತಿಳಿದು ಬಂದಿದೆ.

ನ್ಯೂಯಾರ್ಕಿನ ಒಂದು ಆಸ್ಪತ್ರೆಯಲ್ಲಿ ಕಳೆದ ಒಂದು ವರ್ಷ ೩೧,೦೦೦ ಪ್ರಾಣಿಗಳು ಎಕ್ಸ್‌ರೇಯಿಂದ ಚಿಕಿತ್ಸಿತವಾದುವೆಂದು ತಿಳಿದಿದೆ. ನಾಯಿಯು ಮಾಂಸದೊಡನೆ ಎಲುಬನ್ನೂ ಗಬಗಬನೆ ನುಂಗಿ ಬಹಳ ನರಳುತ್ತಿರುವುದಾದರೆ ಎಕ್ಸ್‌ರೇ ಮೂಲಕ ಎಲುಬು ಇರುವ ಸ್ಥಳವನ್ನು ಹುಡುಕಿ ತೆಗೆಯಬಹುದಾಗಿದೆ.

ಹತ್ತು ಇಂಚು ದಪ್ಪದ ಲೋಹವನ್ನು ನೋಡುವ ಕಣ್ಣುಗಳು!

ಹತ್ತು ಇಂಚು ದಪ್ಪದ ಲೋಹದ ಕೆಳಗೆ ನೋಡುವ 'ದೃಷ್ಟಿಗಳನ್ನು' ಅಮೆರಿಕದಲ್ಲಿ ಕಂಡು ಹುಡುಹುಡುಕಿರುವರು. ನೌಕಾ ಪಡೆಯನ್ನು ರಚಿಸುವರೆ ಉಪಯೋಗಿಸುವ ಲೋಹದ ಭದ್ರತೆಯನ್ನು ಪರೀಕ್ಷಿಸುವಾಗ ಇವುಗಳನ್ನು ಉಪಯೋಗಿಸುತ್ತಾರೆಂದು ತಿಳಿದಿದೆ.

ಈ 'ದೃಷ್ಟಿಗಳು' ರೇಡಿಯಂನಿಂದ ಕೂಡಿದ್ದು 'ಮಿಲಿಯ ವೋಲ್ಟಿ'ನ ಕಿರಣವನ್ನು ಅದು ಹರಡುವುದು. ಇದರಲ್ಲಿ ಹೆಚ್ಚು ಶಕ್ತಿಯುಳ್ಳದ್ದು ೫೦೦ ಮಿಲಿಗ್ರಾಮಿನಷ್ಟು ಭಾರವಿರುವುದು. ಇದಕ್ಕೆ ೩೦೦೦ ಪವನು ಕ್ರಯವಿದೆ. ಇದನ್ನು ಉಪಯೋಗಿಸುವ ವಿಷಯದಲ್ಲಿ ಬಹಳ ಜಾಗರೂಕತೆಯಿರಬೇಕೆಂದು ಪ್ರಕಟಿಸಲಾಗಿದೆ. ಇದರಲ್ಲಿರುವ ರೇಡಿಯಂ ಬಹಳ ಅಪಾಯಕರವಾಗಿದೆ.

ವಿಮಾನಗಳಿಂದ ರೋಗ ಕ್ರಿಮಿಗಳು

ಬ್ರೇಜಿಲ್‌ನಲ್ಲಿ ಮಲೇರಿಯಾ ಸಾಂಕ್ರಾಮಿಕ ರೋಗವು ಕೆಲವು ವರ್ಷಗಳಿಂದ ವಿಶೇಷವಾಗಿ ಹರಡುತ್ತಿದೆ. ಇದು ಪಶ್ಚಿಮ ಆಫ್ರಿಕದಿಂದ ಬಂದ ಮಲೇರಿಯಾ ಕ್ರಿಮಿಗಳಿಂದಾಗಿ ಹೆಚ್ಚಿತು ಎಂದು ಈಗ ತಿಳಿದುಬಂದಿದೆ. ಅಲ್ಲಿಂದ ಆಕಾಶದಲ್ಲಿ ಹಾರುವ ವಿಮಾನಗಳ ಮೂಲಕ ಈ ರೋಗ ಕ್ರಿಮಿಗಳು ಬ್ರೇಜಿಲಿಗೆ ಬಂದುವಂತೆ. ಅದನ್ನು ತಡೆಯುವ ಸಲುವಾಗಿ, ವಿಮಾನಗಳಿಗೆ ಅನೇಕ ತರದ ಔಷಧಿಗಳನ್ನು, ನಿರ್ಬಂಧಗಳನ್ನು ಕಳೆದ ಹಲವು ಸಮಯಗಳಿಂದ ಅಲ್ಲಿನ ಆರೋಗ್ಯ ಇಲಾಖೆಯವರು ಮಾಡುತ್ತಾ ಬರುತ್ತಾರೆ; ಆದರೆ ಇದು ವರೆಗೆ ಅವರ ನಿರ್ಬಂಧವು ಸಾಕಷ್ಟು ಫಲಕಾರಿಯಾಗಿಲ್ಲ. ಹಾಗಾಗಿ ವೈಜ್ಞಾನಿಕರು ಈ ವಿಷಯ ಹೆಚ್ಚಿನ ಸಂಶೋಧನೆ ನಡೆಸುತ್ತಿರುವರೆಂದು ತಿಳಿದಿದೆ.

CHANGE OF OFFICE HOURS

To suit the convenience of customers Business Hours at this office from 1st October, 1941 will be as under:

Week days: 10 A. M. to 3 P. M.
Saturdays: 10 A. M. to 12 Noon

CANARA BANK LIMITED
BELTHANGADY.
ESTD 1906.

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57, Big street, Triplicane, Madras.

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ವೀಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. L. A. L. ಬೆಳ್ತಂಗಡಿ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಓಂಪ್ರೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:- ಓ ಪೊಸ್ಯುಲರ ಸ್ಟೋರ್ಸ್ ಮಂಗಳೂರು.

Stockists. – **Messrs. Dadha & Co., MADRAS.**

THE PIE-MONEY BANK, LTD.

Maidan Road, MANGALORE

Undertakes all kinds of Banking Business Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs. 5000 run regularly on systematic lines Unique Banking facilitie to Businessmen and interested Public

Apply for particulars–

K. R. GURU, *Managing Director*

The Bank of Mangalore Limited.

Branches—MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3% to 5%.

INTEREST PAYABLE QUARTERLY.

Interest on Savings Bank Deposits allowed at at 2½%

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy.

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:– **THE JOINT MANAGERS,**

The Combined Booking Agency, Mangalore.

ಬಿಡಿ ಸಂಚಿಕೆಯ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3-12-0 | Regd. No. M-3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 19—9—1941 [ಸಂಚಿಕೆ 37]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಥಕ್ಕರ್ ಬಾಪಾ

ವಿಶ್ರಾಂತಿಯಿಲ್ಲದ, ವಿಶ್ರಾಂತಿ ಬಯಸದ ಥಕ್ಕರ್ ಬಾಪಾರವರು ತನ್ನ ಈ ಇಳಿವಯಸ್ಸಿನಲ್ಲಿಯೂ ಹರಿಜನಸೇವೆಗಾಗಿ ಪತಿತರ ಉದ್ಧಾರಕ್ಕಾಗಿ ದುಡಿಯುತ್ತಿದ್ದಾರೆ. ಈ [illegible] ದಕ್ಷಿಣಕನ್ನಡದಲ್ಲಿ ಸೇವಾ [illegible] ಸಂಚರಿಸುತ್ತಿದ್ದಾರೆ. ಮಹಾತ್ಮಾಜಿಯವರ ಅತ್ಯಂತ ಆಪ್ತವರ್ಗದಲ್ಲೊಬ್ಬರಾದ ಇವರು ಗಾಂಧಿಜಿಯವರ ಅತೀವ ಪ್ರೀತಿಯ ಹರಿಜನ ಸೇವೆಯ ಕಾರ್ಯವನ್ನು ಕೈಕೊಂಡು ಶ್ರಮಿಸುತ್ತಿದ್ದಾರೆ. ಇವರಿಗೆ ದೀರ್ಘಾಯುರಾರೋಗ್ಯಗಳು ಲಭಿಸಿ ಇವರಿಂದ ಇದಕ್ಕೂ ಹೆಚ್ಚಿನ ಸೇವೆಯು ಮಾತೃಭೂಮಿಗೆ ದೊರಕುವಂತಾಗಲಿ!

KANNADA ILLUSTRATED WEEKLY

ಜರ್ಮನಿಯ ಆಕ್ರಮಣವಾದರೆ ಟರ್ಕಿಯ ಗತಿಯೇನು

ಬ್ರಿಟನು ರಶ್ಯಗಳು ಸಹಾಯ ಮಾಡುವವೆ?

ಡಾರ್ಡನೆಲ್ಸ್ ನುಗ್ಗಲು ಜರ್ಮನರ ಸಿದ್ಧತೆ?

ಜರ್ಮನಿಯು ಟರ್ಕಿಯ ಮೇಲೆ ಧಾಳಿ ಮಾಡುವುದೇ ಎಂಬ ವಿಚಾರವು ಇತ್ತೀಚೆಗೆ ಬಲವಂತವಾಗಿ ಕೇಳಿಬರುತ್ತಿದೆ. ಸುವೇಜ್ ಕಾಲುವೆಯನ್ನು ವಶಪಡಿಸಿಕೊಂಡು, ಭಾರತದ ಕಡೆಗೆ ಜರ್ಮನರು ಮುನ್ನುಗ್ಗಲು ಹಂಚಿಕೆ ಹೂಡಿರಬಹುದೆಂಬ ಯೋಚನೆಗೆ ಈಗ ಇರಾಕ್ ಇರಾಣ್‌ಗಳಲ್ಲಿ ಬ್ರಿಟಿಷ್ ರಶ್ಯನ್ ಸೈನ್ಯಗಳು ಇರುವುದರಿಂದ ಆತಂಕವೊದಗಿದಂತಾಗಿದೆ. ಹೀಗಾಗಿ ವಿಶ್ವದಲ್ಲಿ ಜರ್ಮನರ ಪ್ರಾಬಲ್ಯವು ಕಡಿಮೆಯಾಗ್ತಹತ್ತಿದೆ. ಅದನ್ನು ಪುನರುಜ್ಜೀವನಗೊಳಿಸಲು ಜರ್ಮನಿಯು ಟರ್ಕಿಗೆ ಧಾಳಿ ಮಾಡುವುದೊಂದೇ ಹಾದಿಯುಳಿಯಿತು. ಆದುದರಿಂದ ಯುಕ್ರೇನಿನ ರಣಭೂಮಿಯಿಂದ ನೇರಾಗಿ ಕಾಕೇಶಿಯದ ಕಡೆಗೆ ಜರ್ಮನರು ಹೋಗಲಿರುವ ಊಹೆಯುದ್ಭವಿಸಿದೆ.

ಕಪ್ಪು ಸಮುದ್ರದಲ್ಲಿ ಸದ್ಯಕ್ಕೆ ರಶ್ಯನ್ ಹಡಗು ಸೈನ್ಯವು ಬಲವಾಗಿದೆ. ಜರ್ಮನಿಯ ಹತ್ತಿರ ವಿಶೇಷ ಹಡಗು ಸೈನ್ಯಗಳೇ ಇಲ್ಲ. ಆದರೆ ರುಮೇನಿಯ ಮತ್ತು ಬಲ್ಗೇರಿಯಗಳ ನೆರವೊದಗಿದರೆ ಜರ್ಮನಿಗೆ ಸ್ವಲ್ಪ ಬಲ ದೊರಕುವುದು. ಡಾನ್ಯೂಬ್ ನದಿಯ ಮೂಲಕವಾಗಿ ಕೆಲವು ಹಡಗುಗಳನ್ನು ತರಬಹುದಾಗಿದೆ; ದೊಡ್ಡ ಹಡಗಗಳು ಹೋಗಲು ಉಪಾಯವಿಲ್ಲ. ಆದ್ದರಿಂದಲೇ ಇಟಲಿಯನ್ ಹಡಗಗಳನ್ನು ತರಲು ಜರ್ಮನರು ಡಾರ್ಡನೆಲ್ಸ್ ಜಲಸಂಧಿಯನ್ನು ಸ್ವಾಧೀನ ಪಡಿಸುವ ಯೋಚನೆಯಲ್ಲಿರುವರೆಂದು ತಿಳಿಯುತ್ತದೆ.

ಡಾರ್ಡನೆಲ್ಸ್ ಜಲಸಂಧಿಯ ಮೂಲಕವಾಗಿ ಯುದ್ಧ ಹಡಗಗಳು ಪ್ರವೇಶಿಸಿದರೆ ಮಾಂಟ್ರಿಯೋ ಒಪ್ಪಂದವನ್ನು ಮುರಿದಂತಾಗುತ್ತದೆ. ಇದಕ್ಕೆ ಟರ್ಕಿ ಒಪ್ಪಲಿಕ್ಕಿಲ್ಲ. ಟರ್ಕರು ಈ ಜಲಸಂಧಿಯನ್ನು ಉಳಿಸಿಕೊಳ್ಳುವ ಸಲುವಾಗಿ ಹಿಂದೆ ಅನೇಕ ಸಲ ಹೋರಾಡಿದ್ದಾರೆ. ಹಾಗಾಗಿ ಜರ್ಮನಿ ಒತ್ತಾಯಹಾಕಿ ಯುದ್ಧ ಹಡಗಗಳನ್ನು ತರಲು ಯತ್ನಿಸಿದರೆ ಟರ್ಕಿಯೊಡನೆ ಯುದ್ಧವಾಗುವುದು ಸಂಭವ. ಅಂತೂ ಈಗ ಟರ್ಕಿಯ ಮೇಲೆ ಗಂಡಾಂತರವೊದಗಿದೆಯೆಂದು ತಿಳಿದುಕೊಳ್ಳಲು ಅವಕಾಶವಾಗಿದೆ.

ಟರ್ಕಿಯೊಂದರಲ್ಲಿಯೇ ಜರ್ಮನಿಯನ್ನು ಎದುರಿಸುವಷ್ಟು ಸಾಮರ್ಥ್ಯವು ಇಲ್ಲ. ಇದು ಮಾತ್ರವಲ್ಲದೆ ಟರ್ಕಿಯ ಬಳಿಯ ಗ್ರೀಕ್ ದ್ವೀಪಗಳನ್ನು ಜರ್ಮನರು ಇಟಲಿಯನರು ಆಕ್ರಮಿಸಿಕೊಂಡಿರುತ್ತಾರೆ. ಗ್ರೀಸ್ ಮತ್ತು ಕ್ರೀಟ್‌ಗಳು ಜರ್ಮನರ ವಶವಿಳುವುದರಿಂದ ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷ್ ಹಡಗ ಸೈನ್ಯಗಳು ಟರ್ಕಿಗೆ ಯಶಸ್ವಿಯಾದ ಬೆಂಬಲ ಕೊಡುವುದು ಪ್ರಯಾಸವಾಗಬಹುದು. ಡಾರ್ಡನಲ್ಸಿನ ಬಾಗಿಲಿನಲ್ಲಿರುವ ಲೆಮ್ನಾಸದ್ವೀಪವೂ ಜರ್ಮನರ ಕೈವಶವಿದೆ. ಟರ್ಕಿಯ ಅತ್ಯಂತ ಮಹತ್ವದ ಬಂದರ ಮತ್ತು ವ್ಯಾಪಾರೀ ಕೇಂದ್ರವಾದ ಮಿಟಿಲಿನ್ ದ್ವೀಪವೂ ಜರ್ಮನರ ಸ್ವಾಧೀನವಿದೆ. ಇಟಲಿಯನರ ಡಾಡೆಕನೀಸ್ ಮತ್ತು ರೊಡ್ಸ್ ದ್ವೀಪಗಳು ಟರ್ಕಿಯ ಕರಾವಳಿಯಲ್ಲಿವೆ. ಹೀಗಾಗಿ ಜರ್ಮನಿಯು ಟರ್ಕಿಯ ಮೇಲೆ ಒಮ್ಮೆಲೇ ಧಾಳಿಯಿಟ್ಟರೆ ಟರ್ಕಿಗೆ ಜಯದೊರಕುವುದು ಕಷ್ಟವಿದೆ.

ಇಂತಹ ಸಮಯದಲ್ಲಿ ಟರ್ಕಿಗೆ ಗತಿಯೇನು? ಟರ್ಕಿಗೆ ತೊಂದರೆಯೊದಗಿದರೆ ತಾವು ಸಹಾಯ ಕೊಡುವುದಾಗಿ ಬ್ರಿಟಿಷ್ ರಶ್ಯಗಳು ಸಾರಿವೆ. ಬ್ರಿಟಿಷರು ಪಲೆಸ್ತೈನ್, ಸಿರಿಯ ಮತ್ತು ಡಮಾಸ್ಕಸ್ ಮಾರ್ಗವಾಗಿ ಸಹಾಯ ಕಳುಹಿಸಬಹುದು. ಪರ್ಶಿಯನ್ ಆಖಾತ ದಾರಿಯಾಗಿ ಇರಾಕ್ ಇರಾಣ್ ಹಿಂದುಸ್ಥಾನಗಳ ಮೂಲಕವೂ ಸಹಾಯ ಕೊಡಬಹುದು. ರಶ್ಯವೂ ನೊವೊರ್‌ಸ್ಸೀಸ್, ಪೋಟಿ ಮತ್ತು ಬೇಟಮ್ ಮೊದಲಾದ ಕಪ್ಪು ಸಮುದ್ರದ ಬಂದರಗಳಿಂದ ಸಹಾಯ ಮೀಯಬಹುದು. ಆದರೆ ಬ್ರಿಟನು ರಶ್ಯಗಳೇ ತಮಗೆ ಬೇಕಾದ ಯುದ್ಧ ಸಾಮಗ್ರಿಗಳಿಗಾಗಿ ಅಮೇರಿಕದೊಡನೆ ಬೇಡುತ್ತಿರುವಾಗ ಜರ್ಮನರ ಧಾಳಿಯಾದರೆ, ಟರ್ಕಿಯ ಗತಿಯೇನೆಂದು ಹೇಳಬರುವಂತಿಲ್ಲ.

ಅಜಂತ

ಚಿತ್ರಕಲೆಗಳು

1

ಭಾರತೀಯ ಮಹಿಳೆಯರ, ಪೂರ್ಣ ಆರೋಗ್ಯ, ಸೌಂದರ್ಯ, ಶೋಭೆಗಳನ್ನು ಪ್ರದರ್ಶಿಸುವ ಅಜಂತದ ಸುಂದರ ಚಿತ್ರಗಳಿಗೆ ಇಂದು ಸರಿಸಮಾನವಾದವುಗಳೇ ಇಲ್ಲ. ಮಹಿಳೆಯರು, ಮಾತೆ ಪದವಿಗೇರಲು ಬೇಕಾದ ಆದರ್ಶ ಆರೋಗ್ಯವನ್ನು ಇತ್ತೀಚೆಗೆ ಕಳಕೊಳ್ಳುತ್ತಿದ್ದಾರೆ.

ನಮ್ಮ ಅರುಣವನ್ನು ಯಾವಾಗಲೂ ಸೇವಿಸುವುದರಿಂದ ಮುಟ್ಟುದೋಷ, ಮತ್ತು ಹೆಂಗಸರ ಇತರ ಬಾಧೆಗಳು ಮಾಯವಾಗಿ ಸಂಪೂರ್ಣ ಆರೋಗ್ಯ ಸೌಂದರ್ಯಗಳು ಕೂಡಿಬರುವವು.

ಅರುಣ

ಅತ್ಯಂತ ಫಲಕಾರೀ ಟಾನಿಕ್

ಮುಟ್ಟುದೋಷವನ್ನು ಅದು ಗುಣಪಡಿಸುತ್ತದೆ, ಸಂಪೂರ್ಣ ಮಾತೃತ್ವಕ್ಕೆ ಆರೋಗ್ಯವನ್ನು ಒದಗಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿ ಮತ್ತು ಸ್ಟೋರುಗಳಲ್ಲಿ ಅದು ಮಾರಾಟಕ್ಕಿದೆ.

ತಯಾರಿಸುವವರು

ಆಯುರ್ವೇದಾಶ್ರಮ, ಮದ್ರಾಸು.

ಸ್ಟೋಕಿಸ್ಟ್ ಪೋಪ್ಯುಲರ್ ಸ್ಟೋರ್ಸ್, ಕಾರ್‌ಸ್ಟ್ರೀಟ್, ಮಂಗಳೂರು

ರೋಗ ವಾಸಿಯಾದ ಕೂಡಲೇ, ದಿನನಿತ್ಯ ಓವಲ್‌ಟಿನನ್ನು ಕುಡಿದು, ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಅದರ ಹಿತಕರವಾದ ಸವಿಯನ್ನು ಕೊಂಡಾಡುವಿರಿ. ನಿಶ್ಯಕ್ತವಾದ ಶರೀರಕ್ಕೆ ದುರ್ಬಲವಾದ ನರಗಳಿಗೆ, ಅದು ತಿರಿಗಿ ಶಕ್ತಿಯನ್ನು ಉಂಟುಮಾಡಿ, ಸುಖ ನಿದ್ರೆಯನ್ನುಂಟುಮಾಡುವುದಲ್ಲದೆ ಶರೀರವನ್ನು ಕ್ರಮಪ್ರಕಾರ ಬಲಗೊಳಿಸುವುದು

ಓವಲ್‌ಟಿನ್ ಶುದ್ಧ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅವನ್ನು ಕುಡಿಯಿರಿ. ಇತರ ನಕಲಿ ಮಾಲುಗಳನ್ನು ಉಪಯೋಗಿಸದಿರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಅಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಡಿಸ್ಟ್ರಿಬ್ಯೂಟರ್ಸ್—ಗ್ರಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬೆ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಓವಲ್‌ಟಿನ್
OVALTINE

OV/26/40

ಮೋಸ್ಕೋದ ಕಡೆಗೆ ಜರ್ಮನರ ಧಾಳಿ?

ಕೀವ್ ಪಟ್ಟಣವನ್ನು ಸ್ವಾಧೀನ ಪಡಿಸಿದ ಮೇಲೆ ಜರ್ಮನರು ಮೋಸ್ಕೋದ ಕಡೆಗೆ ಯಾವ ರೀತಿಯಲ್ಲಿ ಧಾಳಿ ಮಾಡಬಹುದೆಂಬುದಾಗಿ ಯೋಚಿಸುತ್ತಿರುವರಂತೆ. ಭಿಯಾನಸ್ಕ್ ಮತ್ತು ಪೊಲ್ಟಾವಗಳಲ್ಲಿ ಒಂದು ಕಡೆ ಸೇರಿ ಜರ್ಮನ್ ಸೈನ್ಯಗಳು ಮೋಸ್ಕೋದ ಕಡೆಗೆ ನುಗ್ಗಬಹುದೆಂದೂ, ಅತ್ತ ಲೆಲಿಕ ಅಲಗಿಯಲ್ಲಿರುವ ಜರ್ಮನ್ ಸೈನ್ಯಗಳು ಈಶಾನ್ಯಕ್ಕೆ ಹೊರಟು ಮೋಸ್ಕೋದ ಕಡೆಗೆ ನುಗ್ಗಬಹುದೆಂದೂ ಅಂದಾಜು ಮಾಡಲಾಗಿದೆ. ಪೊಲ್ಟಾವವು ಜರ್ಮನರ ಕೈವಶವಾಗಿದೆಯೆಂದು ಪ್ರಕಟನೆಯಿದೆ. ಬಾಲ್ಟಿಕ್ ಸಮುದ್ರದ ಪರ್ಮ ಮತ್ತು ಮೆರಾನ್ ದ್ವೀಪಗಳೂ ಜರ್ಮನರ ವಶವಾಗುವಂತೆ ಲೆನಿನ್‌ಗ್ರಾಡಿನಲ್ಲಿ ರಶ್ಯನರು ಪ್ರತಿಧಾಳಿ ಕೊಡುತ್ತಾ ಬರುತ್ತಿದೆಯೆಂದು ತಿಳಿದಿದೆ.

ಆಫೀಸು ಸಮಯದ ಬದಲಾವಣೆ

ಗಿರಾಕಿಗಳಿಗೆ ಅನುಕೂಲವಾಗುವಂತೆ ನಮ್ಮ ವಹಿವಾಟಿನ ಸಮಯವನ್ನು 1941ನೆ ಅಕ್ಟೋಬರ ತಿಂಗಳಿಂದ ಈ ರೀತಿ ಬದಲಾಯಿಸಿದೆ

ವಾರದ ದಿನಗಳು: ಪೂರ್ವಾಹ್ನ 10ರಿಂದ ಅಪರಾಹ್ನ 3ರ ವರೆಗೆ
ಶನಿವಾರಗಳು: ಪೂರ್ವಾಹ್ನ 10ರಿಂದ ಮಧ್ಯಾಹ್ನ 12ರ ವರೆಗೆ

ಕೆನರಾ ಬೇಂಕ್ ಲಿಮಿಟೆಡ್, ಬೆಳ್ತಂಗಡಿ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

[ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—9—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೯—೧೯೪೧

ಸಮರ ಭೂಮಿಯ ಸಂಚಾರ

ಕಳೆದ ಮೂರು ವಾರಗಳಿಂದ ರಶ್ಯದಲ್ಲಿ ಆದ ಯುದ್ಧವು ಬಹು ಭೀಷಣವಾಗಿದೆ. ಅಲ್ಲಿನ ಪರಿಸ್ಥಿತಿಯೂ ಈಗ ಬಹಳ ಗಂಭೀರವಾಗಿದೆ. ಭಯಾನಕ ನರಹತ್ಯಾಕಾಂಡ ನಡೆದಿದೆ. ಹೆಣದ ರಾಶಿಗಳು, ವಿಮಾನಗಳ ರಾಶಿಗಳು, ಟೇಂಕು ಫಿರಂಗಿಗಳು ಅಸಂಖ್ಯಾತ ಯುದ್ಧ ಭೂಮಿಯಲ್ಲಿ ಚೆಲ್ಲಿಹೋಗಿವೆ. ಪ್ರಳಯ ಕಾಲದ ದೃಶ್ಯವಿಂತು ರಶ್ಯನ್ ರಣಭೂಮಿಯಲ್ಲಿ ಕಳೆದವಾರ ಕಂಡು ಬಂತು. ಇಂತಹ ಪನಘೋರ ಪ್ರತಿಭಟನೆ ಮಾಡಿದ ಬಳಿಕವೂ ರಶ್ಯವು ತನ್ನ ಪ್ರಸಿದ್ಧ ಸ್ಥಳಗಳನ್ನು ಜರ್ಮನರಿಗೆ ಬಿಟ್ಟುಕೊಡಬೇಕಾಗಿ ಬಂದುದು ಆಶ್ಚರ್ಯಕರವಾಗಿದೆ. ಕೀವ್ ಪಟ್ಟಣವೂ ಜರ್ಮನರ ಕೈಗೆ ಬಿತ್ತೆಂದು ಈಗ ವಾರ್ತೆಯಿದೆ. ಲೆನಿನ್ ಗ್ರಾಡನ್ನು ಭೇದಿಸುವ ಸಾಹಸದಲ್ಲಿ ಜರ್ಮನರು ಕಳೆದ ಕೆಲವುವಾರಗಳಿಂದ ನಿರತರಾಗಿರುವುದು ಜಗತ್ತಿಗೇ ಗೊತ್ತುಂಟು. ಆದರೆ ಆ ಸಾಹಸ ಇದುವರೆಗೆ ಯಶಸ್ವಿಯಾಗಿಲ್ಲ.

ಹಿಮಗಾಲದ ಹೋರಾಟ

ರಶ್ಯನ್ ರಣಭೂಮಿಯಲ್ಲಿ ಹಿಮಗಾಲದ ಹೋರಾಟವು ಮುಂದೆ ನೋಡತಕ್ಕದ್ದಿದೆ. ರಶ್ಯದ ಬಹು ಭಾಗವು ಬರುವ ನವಂಬರ್ ತಿಂಗಳಿಂದ ಹಿಮಾಚ್ಛಾದಿತವಾಗುವ ಕಾರಣ ಜರ್ಮನರಿಗೆ 'ಅಲ್ಲಿ ಕಾದಾಡಲು ಅಸಾಧ್ಯವಾಗಬಹುದೆಂದು ಹೇಳಲಾಗುತ್ತದೆ. ಛಳಿಗಾಲವು ಬರುವ ತನಕ ಯುದ್ಧವನ್ನು ಮುಂದೆ ದೂಡಿದ್ದರೆ ಜರ್ಮನರೇ ಕಾಳಗವಾಡಲು ಅಸಾಧ್ಯವಾಗಿ ಹಿಂತೆಗೆವರೆಂದು ರಶ್ಯನರು ತಿಳಿಕೊಂಡಿದ್ದಾರೆ. ಬಹುಶಃ ಜರ್ಮನರಿಗಾದರೂ ಹಿಮಗಾಲದ ಈ ಅಂಜಿಕೆಯಿರಬೇಕು, ಅದಾಗಿಯೇ ಹಿಮಗಾಲವು ಬರುವ ಮೊದಲೇ ರಶ್ಯದ ಕತೆಯನ್ನು ಕೊನೆಗಾಣಿಸಿ ಬಿಡಬೇಕೆಂಬ ಹಠದಿಂದ ಈಗ ಜರ್ಮನರು ಹೊಡೆದಾಡುವಂತೆ ಕಾಣುತ್ತದೆ.

ಕೀವ್ ಖಾಲಿಯಾಯಿತು

ಕೀವ್ ನಗರವನ್ನು ರಶ್ಯನರು ಅನೇಕ ದಿನಗಳ ಹೋರಾಟ ಹೂಡಿದ ಬಳಿಕವೂ ಉಳಿಸಿಕೊಳ್ಳಲಾರದೆ ಬಿಟ್ಟುಬಿಟ್ಟರು. ಅಲ್ಲಿ ರಶ್ಯನ್ ಸೈನ್ಯವು ಜರ್ಮನರಿಗೆ ಶರಣಾಗಿದೆ. ಕೀವ್ ನಗರದ ಪತನದಿಂದ ರಶ್ಯನರಿಗೆ ಬಹಳ ದೊಡ್ಡ ಪೆಟ್ಟು ಬಿದ್ದಂತಾಯಿತು. ಅನೇಕ ರಶ್ಯನ್ ಸೈನ್ಯಗಳೂ ಅಲ್ಲಿ ಸಿಕ್ಕಿಬಿದ್ದಿವೆ. ಹೊಸಗಿರುವ ರಶ್ಯನ್ ಸೈನ್ಯಗಳ ಸಹಾಯದಿಂದ ಒಳಗಿನ ಈ ಸೈನ್ಯಗಳು ಜರ್ಮನರ ಚಕ್ರವ್ಯೂಹವನ್ನು ಮುರಿದು ಹೊರಬರುವುದು ಸಾಧ್ಯವುಂಟೇ ಎಂಬ ಪ್ರಶ್ನೆಯುಳಿದಿದೆ. ೧೫೦೦೦೦ ರಶ್ಯನರು ಕೈಸೆರೆ ಬಿದ್ದಿರುವರಂತೆ. ಇವಲ್ಲದೆ ಬೇರೆ ಯುದ್ಧ ಸಾಮಗ್ರಿಗಳೂ ಸಿಕ್ಕಿವೆಯೆಂದು ತಿಳಿದಿದೆ. ಎಸ್ತೋನಿಯಕ್ಕೆ ಸೇರಿದ ಅಸೆಲ್ ದ್ವೀಪದ ರಾಜಧಾನಿ ಅರೆನ್ಸಬರ್ಗ್ ಎಂಬುದೂ ಜರ್ಮನರ ವಶವಾಯಿತು. ಜರ್ಮನರು ಲೆನಿನ್‌ಗ್ರಾಡಿನ ಬಳಿ ಬಂದು ಬಹಳ ದಿವಸಗಳಾದುವಷ್ಟೆ? ಆದರೆ ಅಲ್ಲಿಂದ ಹೆಜ್ಜೆ ಮುಂದೊತ್ತಿ ಹೋಗುವರೆ ಅವರಿಂದ ಆಗಲಿಲ್ಲವಾಗಿ ತೋರುತ್ತದೆ. ಜರ್ಮನ್ ಸೈನಿಕರು ಅಲ್ಲಿ ಒಂದೇ ಸಮನೆ ವೈಮಾನಿಕ ಧಾಳಿ ಮಾಡುತ್ತಿರುವರು.

ಬಲ್ಗೇರಿಯಕ್ಕೆ ಒತ್ತಾಯ

ರಶ್ಯದ ವಿರುದ್ಧ ಯುದ್ಧ ಸಾರಲು ಬಲ್ಗೇರಿಯಕ್ಕೆ ಜರ್ಮನಿಯು ಒತ್ತಾಯ ಹಾಕುತ್ತಿದೆ. ಒತ್ತಾಯದಂತೆ ಬಲ್ಗೇರಿಯವು ರಶ್ಯದ ವಿರುದ್ಧ ಯುದ್ಧ ಸಾರಿದರೂ ಸಾರಬಹುದೆಂದು ತಿಳಿದಿದೆ. ಏಕೆಂದರೆ ಜರ್ಮನಿಯ ಹೇಳಿಕೆ ಕೇಳದಿದ್ದರೆ, ಬಲ್ಗೇರಿಯಕ್ಕೆ ಹೇಗಿದ್ದರೂ ಜರ್ಮನಿಯ ಹೊಡೆತವು ತಪ್ಪಿದ್ದಲ್ಲ. ಅನೇಕ ತಿಂಗಳಿಂದ ಟರ್ಕಿಯ ಗಡಿನಾಡಿನಲ್ಲಿ ಬಲ್ಗೇರಿಯನ್ ಸೈನ್ಯಗಳು ಹೋಗಿ ಸೇರಿರುವವೆಂದು ಸುದ್ದಿಯಿದೆ.

ರಶ್ಯದ ರಣಭೂಮಿಯಲ್ಲಿರುವ ಹಿಟ್ಲರನನ್ನು ಕುರಿತು ಮಾತನಾಡಲು ಬಲ್ಗೇರಿಯದ ಅರಸರು ಹೋಗಿರುವರೆಂದು ಒಂದು ವಾರ್ತೆ. ರಶ್ಯದ ವಿರುದ್ಧ ಯುದ್ಧ ಸಾರಲು ಬಲ್ಗೇರಿಯವನ್ನು ಪ್ರೇರೇಪಿಸುವುದೇ ಈ ಮಾತುಕತೆಯ ಉದ್ದೇಶವೆಂದು ಎಲ್ಲೆಲ್ಲೂ ಪ್ರಕಟವಾಗಿದೆ. ರಶ್ಯದ ವಿರುದ್ಧ ಯುದ್ಧ ಸಾರಿದರೆ ಬಲ್ಗೇರಿಯದ ಜನರು ಬಂಡಾಯವೆಬ್ಬಿಸುವರೆಂದು ಊಹೆಯಿದೆ. ಛಳಿಗಾಲದಲ್ಲಿ ಯುದ್ಧವನ್ನು ಮುಂದುವರಿಸಬೇಕೆಂದು ಜರ್ಮನರು ಈಗ ಬಲ್ಗೇರಿಯವನ್ನೂ ತಮ್ಮೊಡನೆ ಸೇರಿಸಿಕೊಳ್ಳಲು ಈ ಜಟ ಹೂಡಿರುವರೆಂದು ತಿಳಿದಿದೆ. ಬಲ್ಗೇರಿಯದ ಬೋರಿಸ್ ಅರಸರು ಮಂತ್ರಿಗಳ ವಿಶೇಷ ಸಭೆಯೊಂದನ್ನು ಕರೆದಿರುವರೆಂದು ತಿಳಿಯುತ್ತದೆ.

ಕ್ರಿಮಿಯಾದ ಮೇಲೆ

ಕ್ರಿಮಿಯಾವನ್ನು ವಶಪಡಿಸಿಕೊಂಡು ಜರ್ಮನರು ಜಯಶ್ರೀಯನ್ನು ಒಲಿಸಿಕೊಳ್ಳಲು ಹಂಚಿಕೆ ಮಾಡುತ್ತಿರುವಂತೆ ತೋರುತ್ತದೆ. ಜರ್ಮನರು ರಶ್ಯನ್ ರಣಭೂಮಿಯಲ್ಲಿ ಮಾಡುತ್ತಿರುವ ಚಟುವಟಿಕೆಗಳನ್ನು ಪರಿಶೀಲಿಸಿದರೆ ಯಾವುದಾದರೊಂದು ಕಡೆಯಿಂದ ನುಗ್ಗಿ ಹಿಮಗಾಲದ ಮೊದಲು ಜಯಪಡೆವಂತೆ ಆಗಬೇಕೆಂದು ಅವರು ಯತ್ನಿಸುವುದು ಕಂಡು ಬರದಿರದು. ಕೀವ್ ಖಾರ್ಕೋವ ಮತ್ತು ಕ್ರಿಮಿಯಗಳನ್ನು ವಶಪಡಿಸಿಕೊಂಡರೆ ಜರ್ಮನರ ಪ್ರಚಾರಕ್ಕೆ ಬಹಳ ಆಸ್ಪದ ಸಿಕ್ಕಿದಂತಾಗುವುದು. ನೀಪರ್ ನದಿಯ ಕೆಳಭಾಗದಲ್ಲಿ ಕ್ರೆಮನ್ ಚಗ್ ಎಂಬಲ್ಲಿ ಜರ್ಮನ್ ಸೈನ್ಯಗಳು ತಳವೂರಿರುವವು. ಅಲ್ಲಿಂದ ಉತ್ತರಕ್ಕೆ ಹೋಗಿ ಚರ್ನಿಗೋವದಿಂದ ದಕ್ಷಿಣಕ್ಕೆ ನುಗ್ಗಿ ಬರುವ ಸೈನ್ಯವನ್ನು ಕೂಡಿ ಕೊಂಡು ಕೀವನ್ನು ಕೈವಶಪಡಿಸಿಕೊಂಡುದಾಯಿತು. ಕ್ರೆಮನ್ ಚಗ್ ನಿಂದ ಕೆಲವು ಸೈನ್ಯಗಳು ಈಶಾನ್ಯಕ್ಕೆ ನುಗ್ಗಿ ಪೊಲ್ಟಾವದಿಂದ ಖಾರ್ಕೋವದ ಕಡೆಗೆ ಹೋಗಬೇಕೆಂದಿವೆ. ಇಲ್ಲಿಂದ ಅವು ಮೋಸ್ಕೋದ ಕಡೆಗೂ ನುಗ್ಗಬಹುದು. ಈ ಧಾಳಿಯು ಮುಖ್ಯವಾಗಿ ಕ್ರಿಮಿಯವನ್ನು ವಶಪಡಿಸುವ ಸಲುವಾಗಿದೆ. ಜರ್ಮನ್ ಸೈನಿಕರು ರಶ್ಯದಂತಹ ವಿಶಾಲ ಪ್ರದೇಶದಲ್ಲಿ ಅಪ್ರತಿಮ ಯೋಧರೊಡನೆ ಬಹಳ ಯುಕ್ತಿಗಳಿಂದಲೂ ಸಾಹಸಗಳಿಂದ ಕಾದಾಟ ಹೂಡುತ್ತಿದ್ದಾರೆ. ಯುದ್ಧದ ಸೋಲುಗೆಲವುಗಳಾವವು ಈಗ ಹೇಳಬರುವುದಿಲ್ಲ.

ಸ್ವದೇಶಾಭಿಮಾನಿಯಲ್ಲಿ,
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ಈ ದಿನ ನಿಮ್ಮ ಹಲ್ಲುಗಳನ್ನು
ಮೆಕ್ಲೀನಿನಿಂದ
ಶುಚಿಗೊಳಿಸಿದ್ದೀರಾ?

ಖಂಡಿತವಾಗಿ, ಹೊಸತು!
ಶುಭ್ರವಾದ ಬೀಯ ಹಲ್ಲುಗಳಿಗೆ, ಆರೋಗ್ಯಕರವಾದ ದವಡೆಯ ಮಾಂಸಗಳಿಗೆ, ತಂಪಾದ ಹೊಸ ಮುಖಕ್ಕೆ ಮೆಕ್ಲೀನನ್ನು ಉಪಯೋಗಿಸುವುದೊಂದೇ ಉಪಾಯ. ಅಶುದ್ಧವನ್ನು ಇದು ಕೂಡಲೇ ತೆಗೆದು, ಹಲ್ಲುಗಳನ್ನು ಶುಚಿಗೊಳಿಸುತ್ತದೆ, ಉಪಯೋಗಿಸಲು ಖರ್ಚು ಕಡಿಮೆಯಾಗಿದೆ



ಸ್ವದೇಶಾಭಿಮಾನಿ

ತಾರೀಕು 26—9—1941

ನಾಡಹಬ್ಬ

ದಸರಾ ಮಹೋತ್ಸವವು ಕನ್ನಡಿಗರ ನಾಡಹಬ್ಬವಾಗಿದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ—ನಗರ ಗ್ರಾಮಗಳಲ್ಲಿ ನವರಾತ್ರಿಯ ಸಮಯ ವಿವಿಧ ಕಾರ್ಯಕ್ರಮಗಳನ್ನೇರ್ಪಡಿಸಿ ಕನ್ನಡಿಗರು ಈ ಉತ್ಸವವನ್ನು ಆಚರಿಸುತ್ತಾರೆ ಕನ್ನಡ ಮಾತೆಯ ಸೇವೆಯನ್ನು ವಿವಿಧ ಮುಖವಾಗಿ ಮಾಡಬೇಕೆಂಬ ಅನ್ವಿತ ಉತ್ಸಾಹವು ತುಂಬಿರುತ್ತದೆ. ಈಗ ರಾಜಕೀಯ, ಧಾರ್ಮಿಕ, ಸಾಹಿತ್ಯ ಕಲಾ ವಿಷಯಗಳಲ್ಲಿ ಪ್ರಮುಖರಾದ ಕನ್ನಡಿಗರು ದಸರಾ ಮಹೋತ್ಸವದ ಸಮಯದಲ್ಲಿ ಕನ್ನಡ ನಾಡಿನ ಏಳಿಗೆಯನ್ನು ತಮ್ಮ ತಮ್ಮ ಹಾದಿಯಲ್ಲಿ ಸಾಧಿಸುವ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ವಿದ್ವಾಂಸರಾದವರು ಉಪನ್ಯಾಸಗಳ ಮೂಲಕ ಜನತೆಗೆ ಜ್ಞಾನದ ಅಮೂಲ್ಯ ದಾನ ಮಾಡುತ್ತಾ ಸಂಚರಿಸುತ್ತಾರೆ ಕನ್ನಡ ನಾಡಿನಲ್ಲಿ ಪಂಡಿತರೆನ್ನದೆ ಪಾಮರರೆನ್ನದೆ ಸರ್ವರೂ ದಸರಾ ಮಹೋತ್ಸವದ ಕಾಲ ಸಂತೋಷದಿಂದ ನಲಿದಾಡುವರು ಪ್ರಸನ್ನವಾಗಿರುವ ಪ್ರಕೃತಿಯೂ ಅವರ ಸಂತಸಕ್ಕೆ ಹಿನ್ನೆಲೆಯಾಗಿ ನಿಂತು ಕನ್ನಡಿಗರ ಜೀವನದಲ್ಲಿ ಹೊಸತೊಂದು ಉಲ್ಲಾಸವನ್ನೇ ಹುಟ್ಟಿಸುತ್ತದೆ. ಹೀಗೆ ದಸರೆಯು ನವರಾತ್ರಿಯ ಉತ್ಸವವು ಕನ್ನಡಿಗರ ನಾಡಹಬ್ಬವಾಗಿದೆ

ತಮ್ಮ ಜೀವನ, ತಮ್ಮ ನಾಡಿನ ಜೀವನ, ತಮ್ಮ ರಾಷ್ಟ್ರದ ಜೀವನವು ಭವಿಷ್ಯವಾಗಬೇಕೆಂದು ಪ್ರತಿ ವ್ಯಕ್ತಿಯೂ ಚಿಂತಿಸುವಂತೆ ಮಾಡುವುದು ಇಂತಹ ನಾಡಹಬ್ಬಗಳ ಆಚರಣೆಯಿಂದ ಒದಗುವ ಫಲವಾಗಿದೆ. ಮಾನವನ ಬುದ್ಧಿ ಹೃದಯಗಳ ವಿಕಾಸವಾಗುವಂತೆ ಮಾಡುವುದು ಇಂತಹ ಉತ್ಸವಗಳ ಕಾರ್ಯವಾಗಿದೆ. ವಿಶಾಲ ವಿಶ್ವದಲ್ಲಿ ನಾವು ಕನ್ನಡಿಗರೂ ಶಕ್ತಿಶಾಲಿಗಳಾದ ಜನರೆಂದು ಆತ್ಮವಿಶ್ವಾಸವುಳ್ಳವರಾಗಿರುವುದು ನಮ್ಮ ಜೀವನದಲ್ಲಿ ಮಹತ್ವದ ಸಂಗತಿಯಾಗಿದೆ ಅಂತಹ ಆತ್ಮವಿಶ್ವಾಸವನ್ನು ಇಟ್ಟುಕೊಳ್ಳಲು ತಕ್ಕ ಸಾಧನ ಸಾಮಗ್ರಿಗಳು ನಮ್ಮಲ್ಲಿವೆಯೇ ಎಂಬ ಧೈರ್ಯವನ್ನು ಕೊಡುವಂತೆ ಈ ನಾಡಹಬ್ಬವು ಆಚರಿಸಲ್ಪಡಬೇಕಾಗಿದೆ. ನಮ್ಮ ನೆರೆಯ ರಾಷ್ಟ್ರಗಳು ತಮಿಳು, ಆಂಧ್ರ, ಕೇರಳ, ಮರಾಠಿ, ಗುಜರಾಥ, ಬಂಗಾಳ ಮೊದಲಾದುವುಗಳ ವಿವಿಧ ಜೀವನ ಸಂಸ್ಕೃತಿಗಳಲ್ಲಿ ಉನ್ನತಿಗೊಂಡಿದ್ದರೆ, ಅವುಗಳಿಗಿಂತಲೂ ಮಿಕ್ಕಿದ ಮಹಿಮೋನ್ನತಿ ಪಡೆದ ಉಜ್ವಲ ಆಕಾಂಕ್ಷೆ ಹುಟ್ಟುವಂತೆ ಇಂತಹ ನಾಡಹಬ್ಬಗಳ ಆಚರಣೆಯಿಂದ ಆಗಬೇಕಾಗಿದೆ. ಈ ದೃಷ್ಟಿಯನ್ನು ಮುಂದಿಟ್ಟುಕೊಂಡೇ ಸಾಧಾರಣ ಹದಿನೈದು ವರ್ಷಗಳಿಂದೀಚೆ ನವರಾತ್ರಿಯ ಹಬ್ಬವು ಕೇವಲ ಹಿಂದುಗಳ ಧಾರ್ಮಿಕ ಉತ್ಸವವೆಂಬಷ್ಟು ಸಂಕುಚಿತ ಭಾವದಿಂದಲ್ಲ, ಕನ್ನಡಿಗರೆಲ್ಲರ ನಾಡಹಬ್ಬವಾಗಿದೆಯೆಂಬಷ್ಟು ವಿಶಾಲ ಭಾವದಿಂದ ಆಚರಿಸಲ್ಪಡುತ್ತದೆ. ಆದರ ಪರಿಣಾಮಗಳು ಯಶಸ್ವಿಯಾಗಿಯೇ ಒದಗದಿರಲಾರವು ಕನ್ನಡಿಗರು ಹಲವು ವರ್ಷಗಳಿಂದ ದಸರಾ ಮಹೋತ್ಸವವನ್ನು ಮಿಗಿಲಾದ ಉತ್ಸಾಹದಿಂದ ಆಚರಿಸುತ್ತಾ ಬರುತ್ತಿದ್ದಾರೆ.

ಇಷ್ಟರಿಂದಲೇ ಕನ್ನಡಿಗರು ಮಾಡುವ ಕೆಲಸ ಮುಗಿಯಿತೆಂದು ನಾವಿಂದು ಕೃತಾರ್ಥರೆಂದೂ ತಿಳಿಯಕೂಡದು; ಇಂದು ಕನ್ನಡ ನಾಡಿನಲ್ಲಿ ಕೇವಲ ಉತ್ಸಾಹದ ಅಲೆಗಳು ಮಾತ್ರ ಕಾಣುತ್ತಿವೆ, ಅಖಂಡ ಕನ್ನಡದ ನೋಟವು, ಆ ದಿವ್ಯ ಸ್ವಪ್ನವೊಂದು ಕನ್ನಡಿಗರನ್ನು ಜಾಗೃತಿಗೊಳಿಸಿದೆ, ಆದರೆ ಕನ್ನಡದ ದೈನ್ಯದಾರಿದ್ರ್ಯಗಳು ಇನ್ನೂ ಪರಿಹಾರವಾಗಿಲ್ಲ, ಛಿದ್ರವಾದ ಕನ್ನಡವು ಇನ್ನೂ ಭದ್ರವಾಗಿಲ್ಲ. ಕನ್ನಡದ ಕಾರ್ಯಗಳು ಯಾವವೂ ಸಾಕಷ್ಟು ಸಂಘಟಿತ ರೂಪದಲ್ಲಿ ಮುಂದುವರಿಯುತ್ತಿಲ್ಲ, ಕನ್ನಡಿಗರು ಜೀವನದಲ್ಲಿ ಜಯಶಾಲಿಗಳಾಗಲು ಸಾಕಷ್ಟು ಶಕ್ತಿ ಸಂಪಾದಿಸಿಕೊಂಡಿಲ್ಲ. ಕರ್ನಾಟಕ ಏಕೀಕರಣವು ಇನ್ನೂ ಕನಸಿನ ಕೊಪ್ಪರಿಗೆಯಾಗಿಯೇ ಉಳಿದಿದೆ ಕನ್ನಡದ ಭಾಷಾಸೇವಕರು ಉತ್ಸಾಹಿತರಾಗಿಲ್ಲ ಇವೆಲ್ಲವುಗಳ ಸಲುವಾಗಿ ನಮ್ಮಲ್ಲಿರುವ ಎಲ್ಲಾ ಬಗೆಯ ಲೋಪದೋಷಗಳ ಪರಿಹಾರದ ಸಲುವಾಗಿ ನಾವು ಶತಪ್ರಯತ್ನ ಮಾಡಬೇಕು. ಇಂದಿನ ಮುಂದಿನ ನಾಡಹಬ್ಬಗಳ ದಿನಗಳಲ್ಲಿ ನಾವು ಶಕ್ತಿ ಸಂಪನ್ನರಾಗುವಂತೆ, ವೀರ್ಯವಂತರಾಗುವಂತೆ, ತಲೆಯೆತ್ತಿ ಬಾಳುವಂತೆ ಆಗುವ ಕಾರ್ಯಯೋಜನೆಗಳನ್ನು ಕೈಗೊಳ್ಳಬೇಕು ಕನ್ನಡ ನಾಡಿನ ವಿವಿಧ ಕಾರ್ಯಕಲಾಪಗಳು ಪೂರ್ಣಯಶಸ್ವಿಗಳಾಗುವಂತೆ ನಾವು ಸಾಧ್ಯವಾದ ಸಾಹಸ ಪಡಬೇಕು. ಕನ್ನಡನಾಡು ಬೇಗನೇ ಉದಯವಾಗಬೇಕು.

ಸತ್ಯಾಗ್ರಹದ ಭವಿಷ್ಯ?

ಸತ್ಯಾಗ್ರಹ ಸಮರವು ಮುಂದೆ ಯಾವ ಹಾದಿ ಹಿಡಿಯುವುದೆಂಬ ವಿಚಾರವು ಇಂದು ಭಾರತದ ರಾಜನೀತಿಜ್ಞರ ಮತಿಯನ್ನು ಮಂಥನ ಮಾಡುತ್ತಿರುವಂತೆ ತೋರುತ್ತದೆ. ಸತ್ಯಾಗ್ರಹವನ್ನು ನಿಲ್ಲಿಸಿ ಅಧಿಕಾರ ಸ್ವೀಕರಿಸಿ ಬ್ರಿಟಿಷರ ಯುದ್ಧ ಯತ್ನದಲ್ಲಿ ಸಹಕರಿಸಬೇಕೆಂದು ಕೆಲವರು ವಾದಿಸುತ್ತಾರೆ; ಕೆಲವರು, ಸತ್ಯಾಗ್ರಹವು ನಡೆಯುತ್ತಿದ್ದಂತೆ ಅಧಿಕಾರವನ್ನೂ ನಡೆಸಬೇಕೆನ್ನುತ್ತಾರೆ. ಕೆಲವರು ಜನತಾ ಸತ್ಯಾಗ್ರಹವಾಗಬೇಕೆನ್ನುತ್ತಾರೆ. ಇಷ್ಟರಲ್ಲಿಯೇ ಹಲವು ಮಂದಿ ಭಾರತದ ಪ್ರಧಾನಮನುಷ್ಯರೇ ಗಾಂಧಿಜಿಯವರಿಗೆ ಕಿವಿಗೊಟ್ಟು ಪದವಿ ಗೌರವಗಳನ್ನು ತಿರಸ್ಕರಿಸಿ ಸತ್ಯಾಗ್ರಹ ಹೂಡಿ ಸೆರೆಮನೆಗೆ ಸೇರಿದ್ದಾರೆ. ಗಾಂಧಿಜಿ ಇಚ್ಛಿಸುವಂತೆ ತಿರುಗಿಯೂ ಸತ್ಯಾಗ್ರಹ ಹೂಡುವವರು ಮಾತ್ರ ಕೇವಲ ಕೆಲವೇ ಮಂದಿ ಮಾತ್ರ ಕಂಡುಬರುತ್ತಾರಾದರೂ ಇಷ್ಟರ ವರೆಗಿನ ಸತ್ಯಾಗ್ರಹವು ತೀರಾ ಯಶಸ್ವಿಯಾಗಿದೆಯೆಂದು ಗಾಂಧಿಜಿ ವಿಶ್ವಾಸವಿಟ್ಟುಕೊಂಡಿರುವರೆಂದು ತಿಳಿದು ಬರುವುದು ಇದರಲ್ಲಿ ಪ್ರಾಮುಖ್ಯವಾಗಿ ಗಮನಿಸತಕ್ಕ ವಿಚಾರವಾಗಿದೆ.

ಇತ್ತೀಚೆಗೆ ಕೃಪಾಲನಿಯವರು ಸತ್ಯಾಗ್ರಹದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿದರು. ಸತ್ಯಾಗ್ರಹದ ವಿಷಯವಾಗಿ ಗಾಂಧಿಜಿ ಸಂಪೂರ್ಣ ತೃಪ್ತಿಪಟ್ಟಿರುವರೆಂದು ಅವರು ಸಾರಿದರು ಸತ್ಯಾಗ್ರಹದಲ್ಲಿ ಖಂಡಿತ ಜಯ ದೊರಕುವುದೆಂದು ಗಾಂಧಿಜಿ ಅಭಿಪ್ರಾಯಪಟ್ಟಿರುವುದಾಗಿ ಅವರು ತಿಳಿಸಿದರು ಗಾಂಧಿಜಿ ಮಾತ್ರ ಭಾರತವನ್ನು ಜಯದಿಂದ ವಿಜಯದ ಹಾದಿಗೆ ಮುನ್ನಡೆಸಬಲ್ಲವರೆಂದೂ, ಕಾಂಗ್ರೆಸಿನವರು, ಇಂದು ಅವರ ಸೈನಿಕರಾಗಿದ್ದು, ಸೇನಾಪತಿ ಹೇಳಿದ ಆಜ್ಞೆಯನ್ನು ಶಿರಸಾವಹಿಸುವುದಲ್ಲದೆ ಪ್ರಶ್ನೆ ಹಾಕುವುದು ತಪ್ಪಾಗಿದೆಯೆಂದೂ ವಾದಿಸಿದರು ಈ ಸಂದರ್ಭದಲ್ಲಿ, ಗಾಂಧಿಜಿ ಐದು ವರ್ಷಗಳ ವರೆಗಾದರೂ ಸತ್ಯಾಗ್ರಹವು ನಡೆಯುವುದೆಂದು ಕೊಟ್ಟ ಸ್ಪಷ್ಟೀಕರಣವೊಂದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದಿದೆ. ಇತ್ತೀಚೆಗೆ ಕಟ್ಟಕ್ಕಿನ ಅಖಿಲ ಭಾರತ ಕಮಿಟಿಯ ಸದಸ್ಯರಾದ ಶ್ರೀ ಪ್ರಾಣಕೃಷ್ಣ ಪರಿಹಾರಿಯವರು ಗಾಂಧಿಜಿಯವರ ಸತ್ಯಾಗ್ರಹದಲ್ಲಿ ಬದಲಾವಣೆ ಮಾಡುವ ವಿಷಯ ಕಾಂಗ್ರೆಸ್ ಕಮಿಟಿ ಸಭೆ ಕರೆಯಬೇಕೆಂದು ಆಮಂತ್ರಣವಿತ್ತಿದ್ದ ಸರ್ದಾರ್ ಶಾರ್ದೂಲ ಸಿಂಗರಿಗೆ ಪತ್ರಬರೆಯುತ್ತಾ, "ಚರ್ಚಿಲರ ಹೇಳಿಕೆಯನ್ನೋದಿದ ಬಳಿಕ ನನಗೆ ಈ ಸತ್ಯಾಗ್ರಹದಲ್ಲಿ ಬದಲಾವಣೆ ಬೇಡವೆನ್ನಿಸುತ್ತದೆ" ಎಂದು ತಿಳಿಸಿದ ವಿಷಯವೂ ವಿಚಾರಿಸದಿರತಕ್ಕುದಲ್ಲ.

ತ್ರಿಚಿನಾಪಳ್ಳಿಯಿಂದ ಬಿಡುಗಡೆಹೊಂದಿದ ಡಾ. ರಾಜನ್‌ರವರು ಕೆಲವು ವಿಷಯ ವಿವರಿಸಿದರು. ಸತ್ಯಾಗ್ರಹದ ವಿಷಯ ಸಂಶಯಾತ್ಮರಾದವರು ರಾಜಾಜಿಯವರ ಬಿಡುಗಡೆ ವರೆಗೆ ಕಾದು ನಿಲ್ಲಬೇಕೆಂದೂ ರಾಜಾಜಿ ಬಿಡುಗಡೆಹೊಂದಿದವರು ಕೂಡಲೇ ವರ್ಧಾಕ್ಕೆ ತೆರಳಿ ಗಾಂಧಿಜಿಯವರೊಡನೆ ಮಾತುಕತೆ ಮಾಡಿ ಸತ್ಯಾಗ್ರಹದ ಮುಂದಿನ ಕಾರ್ಯಕಲಾಪಗಳನ್ನು ಗೊತ್ತುಮಾಡುವರೆಂದೂ ಹೇಳಿದ್ದಾರೆ.

ನೋಟಗಳು . . .

ಮಿಸ್ ಮೇಯೋಳ ಸೋದರಿಯೆನಿಸಿದ ಮಿಸ್ ರಥಬೋನಳ ವಿಷಯವಾಗಿ, ವಾಸರ್ ಯುನಿವರ್ಸಿಟಿ ಲೆಕ್ಚರರಾಗಿದ್ದ ಕಲ್ಕತ್ತದ ಡಾ। ಹಿರಣ್ಮಯ ಘೋಷಾಲರೆಂಬವರು ಸುಮಾರು ಹತ್ತು ವರ್ಷಗಳ ಹಿಂದಿನ ಒಂದು ಮನೋರಂಜಕವಾದ ಸುದ್ದಿಯನ್ನು ಹೊರಗೆಡವಿದ್ದಾರೆ.

* * *

'ಒಂದು ಶುಭ ವಸಂತದ ಸಮಯ; 'ಕ್ಲಬ್'ನಲ್ಲಿ ಕೂಟವೊಂದು ಕೂಡಿತ್ತು. ಮಿಸ್ ರಥ್‌ಬೋನಳು ಅಲ್ಲಿ ಮಾತನಾಡುತ್ತಾ ಭಾರತೀಯರನ್ನು ಮುನ್ನೂರ ಯ್ವತ್ತು ಮಿಲಿಯ ರಾಕ್ಷಸರೆಂದು ಹೇಳಿಬಿಟ್ಟಳು!

* * *

'ಗುಲಾಮರ ವ್ಯಾಪಾರ, ಸತೀಪದ್ಧತಿ ಬಾಲ್ಯವಿವಾಹ, ಜಾತಿಭೇದ ಈ ತರದ ಅನಾಚಾರದ ಪಟ್ಟಿಗಳನ್ನು ಅವಳು ವಿವರಿಸುತ್ತಾ ತನ್ನ ವಾದವನ್ನು ಸಮರ್ಥಿಸಿ ಬ್ರಿಟಿಷ್ ಒಡೆಯರ ಕೃಪೆಯಿಂದಾಗಿ ಮಾತ್ರ ಅವುಗಳು ಈಗ ನಿಂತುಹೋದುವುದೆಂದಳು ಆದರೆ ಇನ್ನೂ ಭಾರತೀಯರು ಅನಾಗರಿಕ ವನ್ಯಪಶುಗಳಂತಿರುವರೆಂದು ಆಕೆ ವರ್ಣಿಸಿದಳು

* * *

'ಸುಮಾರು ೨೦೦ ವರ್ಷಗಳ ಆಡಳಿತದ ಬಳಿಕವಾದರೂ ಭಾರತೀಯರು ಅನಾಗರಿಕ ವನ್ಯಪಶುಗಳಾಗಿದ್ದರೆ, ಬ್ರಿಟಿಷರ ಆಡಳಿತಕ್ಕೇ ಅದೊಂದು ಕುಂದಲ್ಲವೇ ಎಂದು ನಾವೆಲ್ಲರೂ ಯೋಚಿಸುತ್ತಿದ್ದೆವು

* * *

ನನ್ನ ಗೆಳೆಯ ಶ್ರೀ ಪ್ರಸನ್ನಬೀಹಾರೀ ಮುಖರ್ಜಿ, ಬಾರ್ ಎಟ್-ಲಾ ಇವರು ಅವಳಿಗೆ ಆ ಸಭೆಯಲ್ಲಿ ಉತ್ತರ ಕೊಡಲು ಎದ್ದು ನಿಂತರು ಮಿಸ್ ರಥ್‌ಬೋನಳಿಗಿಂತಲೂ, ಬಹುಶಃ ಆಂಗ್ಲೇಯ ಇತಿಹಾಸವನ್ನು ಚೆನ್ನಾಗಿ ಅಭ್ಯಾಸಿಸಿದವರಾದ ಆ ನನ್ನ ಗೆಳೆಯರು ಇನ್ನೂರು ವರ್ಷಗಳ ಹಿಂದೆ ಇಂಗ್ಲೆಂಡು ಯಾವ ಹೀನದೀನ ಪರಿಸ್ಥಿತಿಯಲ್ಲಿ ಇತ್ತೆಂಬುದನ್ನೂ ಆ ಕಾಲದಲ್ಲಿನ ಭಾರತದ ಸ್ವರ್ಣಯುಗದ ಚಿತ್ರವನ್ನೂ ಸಭಿಕರ ಮುಂದಿಟ್ಟರು.

* * *

'ಓದುಗರು ಅಚ್ಚರಿಪಡಬಹುದು ನನ್ನ ಗೆಳೆಯರು ಮಾತನಾಡಿ ಕುಳಿತ ಕೂಡಲೇ ಸಭಿಕರು ಪ್ರಚಂಡ ಕರತಾಡನಮಾಡಿದರು' ಹೀಗೆಂದು ಡಾ। ಘೋಷಾಲರು ಬರೆದಿರುತ್ತಾರೆ.

* * *

ಇದು ಸುಮಾರು ಹತ್ತು ವರ್ಷಗಳ ಹಿಂದಿನ ಮಾತು, 'ಮಿಸ್ ರಥ್‌ಬೋನಳಿಗೆ' ಮೇಲಿನ ಹತ್ತು ವರ್ಷಗಳ ಬಳಿಕವೂ ಬುದ್ಧಿ ಬರಲಿಲ್ಲವೆಂದರೆ?

* * *

ನಾಗಪುರದಲ್ಲಿ ಕೂಡಿದ ಯುದ್ಧ ಕಮಿಟಿ ಸಭೆಯಲ್ಲಿ ಮಾತನಾಡುತ್ತಾ [ಮೂರನೆಯ ಕಲಂನ್ನು ನೋಡಿರಿ]

ನೆಹರುಗಳನ್ನು ಡೆಪ್ಯುಟಿ ಕಮಿಶನರು "ವಂಚಕ"ರೆಂದು ಹೇಳಿದಾಗ್ಗ, ಸಭೆಯಿಂದ ಚೋದುಗಳ, ಕಸಬರಿಕೆಗಳ, ಕಲ್ಲುಗಳ ಮಳೆಯೇ ಅವರ ಮೇಲೆ ಸುರಿಯಿತಂತೆ! ಅಖಿಲ ಜಗತ್ತಿನಲ್ಲಿಯೇ ಪ್ರಸಿದ್ಧನಾದ ಒಬ್ಬ 'ದೇಶಾಭಿಮಾನಿ'ಯನ್ನು 'ವಂಚಕ'ನೆಂದು ಕರೆಯಬೇಕಾದರೆ ಆ ಅಧಿಕಾರಿಗಳಿಗಾದರೂ ಬಹಳ ಎದೆ ಗಟ್ಟಿ ಇರಬೇಕು; ಹೃದಯವು ಪರುಷ ಪಾಷಾಣವೇ ಆಗಿರಬೇಕು.

ಚೀನವು ಭಾರತದಿಂದ ಜ್ಞಾನದ ನಿಧಿಯನ್ನು ಪಡೆಯಿತು

ಆದರೆ ಚೀನದಿಂದ ದೊರೆತ ಪ್ರತಿಫಲವೇನು?

ಚೀನದ ವಿದ್ವಾಂಸರೊಬ್ಬರು ಬರೆಯುತ್ತಾರೆ

“ಬಹು ಕಾಲದಿಂದ ಚೀನಾ ದೇಶವು ಕೊರಿಯಾ, ಜಪಾನು, ಅನ್ನಾಮ್ ಮತ್ತು ಸಾಯೆಮ್ ಮೊದಲಾದ ದೇಶಗಳ ಗುರುವಾಗಿದೆ; ಆದರೆ ಅನಾದಿಕಾಲದಿಂದಲೇ ಚೀನವು ಭಾರತದ ಶಿಷ್ಯವೃತ್ತಿಯನ್ನೇ ಪಡೆದಿತ್ತು. ಪ್ರಾಚೀನ ಕಾಲದಲ್ಲಿ ಹೊರಗಿನ ದೇಶಗಳ ಜನರು ವಿದ್ಯಾಭ್ಯಾಸದ ಸಲುವಾಗಿ ಚೀನಕ್ಕೆ ಹೋಗುತ್ತಿದ್ದರು; ಆದರೆ ಅದೇ ರೀತಿ ಅನೇಕ ಮಂದಿ ಚೀನದ ಬುದ್ಧ ಸನ್ಯಾಸಿಗಳು ಮತ್ತು ವಿದ್ವಾಂಸರು, ಪ್ರಕೃತಿಯ ಪ್ರತಿರೋಧಗಳನ್ನೆಲ್ಲಾ ಎದುರಿಸಿಕೊಂಡು ತರಂಗತರಂಗವಾಗಿ ಭಾರತಕ್ಕೆ ಬಂದರು ಇಲ್ಲಿ ಧರ್ಮ ನೀತಿ ವಿದ್ಯಾ ಸಂಸ್ಕೃತಿಗಳನ್ನು ಕಲಿತರು”.

—ಹೀಗೆಂದು ‘ಶಾಂತಿನಿಕೇತನ’ದ ‘ಚೀನಾಭವನ’ದ ನಿರ್ದೇಶಕರಾದ ‘ಟಾನ್‌ಯುನ್—ಶಾನ್’ ಇವರು ಲೇಖನವೊಂದರಲ್ಲಿ ಬರೆಯುತ್ತಾರೆ. ಅವರು ಚೀನಾದೇಶವು ಭಾರತದಿಂದ ಪಡೆದ ಅಮೂಲ್ಯ ಜ್ಞಾನಭಂಡಾರದ ವಿಷಯವಾಗಿ ವರ್ಣಿಸುತ್ತಾ, ಅದಕ್ಕೆ ಪ್ರತಿಫಲವಾಗಿ ಚೀನವು ಭಾರತಕ್ಕೆ ಏನನ್ನೂ ಕೊಡಲಾಗಲಿಲ್ಲವೆಂದೂ ಅದರಲ್ಲಿ ಹೇಳುತ್ತಾರೆ.

ಅವರ ಲೇಖನ ಸಾರಾಂಶವು ಹೀಗಿದೆ—

ಚೀನವು ಭಾರತಮಯ!

“ಚೀನದ ಇನ್ನೂರು ಮಂದಿ ಸನ್ಯಾಸಿಗಳು ಭಾರತದಲ್ಲಿ ಕಲಿಯುತ್ತಿದ್ದರೆಂದು ‘ಸನ್ಯಾಸಿಗಳ ಜೀವನ’ ಎಂಬ ಚೀನಾ ಪುಸ್ತಕವೊಂದರಲ್ಲಿ ಉಲ್ಲಿಖಿತವಾಗಿದೆ. ಹೀಗೆ ಇನ್ನೂರು ಜನರು ಭಾರತಕ್ಕೆ ಬಂದು ಕಲಿಯುತ್ತಿದ್ದರೆ, ಅಲ್ಲಿಂದ ಭಾರತಕ್ಕೆ ಬರುವ ಸಾಹಸಮಯ ಪ್ರಯಾಣದಲ್ಲಿ, ಮಧ್ಯಮಾರ್ಗದಲ್ಲಿ ಹಲವರು ಮೃತ್ಯುವಶರಾಗಿರಬಹುದೆಂದು ಊಹೆ ಮಾಡಿಕೊಳ್ಳುವುದು ಅಸಮಂಜಸವಾಗಲಾರದು.

“ಭಾರತವು ಚೀನಾದೇಶಕ್ಕಿತ್ತ ಸಾಂಸ್ಕೃತಿಕ ಜ್ಞಾನವು ಮಾತಿನಿಂದ ಅಳೆಯಲು ಸಾಧ್ಯವಿಲ್ಲದಷ್ಟು ಅಮೂಲ್ಯವಾದುದು. ಚೀನಾದಲ್ಲಿ ಇಂದು ಪ್ರತಿಯೊಬ್ಬನೂ ಬಲ್ಲ ಬೌದ್ಧ ಧರ್ಮವು ಭಾರತದಿಂದ ದೊರಕಿತು. ಭಾರತವು ಚೀನಕ್ಕೆ ತನ್ನ ವಿಜ್ಞಾನತತ್ವ, ಧರ್ಮ, ಕಲೆ, ಸಾಹಿತ್ಯ, ಸಂಗೀತ, ಶಿಲ್ಪ, ಹೀಗೆ ಚೀನದ ನಾಗರಿಕತೆಯನ್ನು ಬೆಳಗಬೇಕಾದುದೆಲ್ಲವನ್ನೂ ದಾನಮಾಡಿತು. ಬುದ್ಧಧರ್ಮವು ಚೀನದಲ್ಲಿ ಪ್ರಯೋಗಕ್ಕೆ ಬಂದ ಮೇಲೆ, ಅಲ್ಲಿ ವಿಶ್ವತೋಮುಖವಾಗಿ, ಪ್ರತಿದಿನದ ಜೀವನದಲ್ಲಿ ತೊಟ್ಟಿಲಿಂದ ಸುಡುವವರೆಗೆ ಭಾರತದ ಪ್ರಭಾವವೇ ಎದ್ದು ತೋರುತ್ತದೆ. ಚೀನದ ಜೀವನವು ಪ್ರತಿಯೊಂದು ಕ್ಷೇತ್ರದಲ್ಲಿಯೂ ಭಾರತಮಯವಾಗಿದೆಯೆಂದು ಹೇಳಬಹುದು. ಜೀವನ ಮರಣ, ಪುನರಪಿ ಜೀವನ, ಪುನರಪಿ ಮರಣದ ತತ್ವ, ತಪ್ಪು ಒಪ್ಪುಗಳಿಗೆ ಒಳ್ಳೆದು ಕೆಡುಕುಗಳಾಗುವ ಸ್ವರ್ಗ ನರಕ ಭಾವನೆ ಇವುಗಳು ಭಾರತದ ಧರ್ಮತತ್ವಗಳಿಂದಲೇ ಚೀನಾ ಪಡೆಯಿತು. ಇದು ಭಾರತದಲ್ಲಿರುವಂತೆ ಚೀನದ ಸಾಮಾನ್ಯ ಜನರ ಜೀವನದಲ್ಲಿಯೂ ಇಂದು ಅಂತರ್ಗತವಾಗಿದೆ.

‘ನಮೋ ಅಮಿತಾಭಯ ಬುದ್ಧಾಯ’

“ಬೌದ್ಧ ಧರ್ಮವೆಂಬುದು ಚೀನದ ರಾಷ್ಟ್ರೀಯ ಧರ್ಮಮಾತ್ರವಲ್ಲ ಜನತಾ ಜೀವನದಲ್ಲಿ ಆಳವಾಗಿ ಸೇರಿದ ಧರ್ಮವಾಗಿದೆ. “ಹೆಚ್ಚಿನ ಪ್ರಸಿದ್ಧ ಗುಡ್ಡಪರ್ವತಗಳೆಲ್ಲವೂ ಬೌದ್ಧ ಸನ್ಯಾಸಿಗಳಿಂದ ಆಕ್ರಮಿತವಾಗಿವೆ” ಎಂದು ಅಲ್ಲಿ ಜನರಲ್ಲಿ ನಾಣ್ಣುಡಿಯೇ ಇದೆ. ರಾಷ್ಟ್ರೀಯ ಸರಕಾರದ ಮುಖ್ಯಾಧಿಕಾರಿಯಿಂದ ಹಿಡಿದು, ಹಳ್ಳಿಯ ಸಾಮಾನ್ಯ ಕೃಷಿಕನವರೆಗೆ ಬುದ್ಧದೇವನ ಹೆಸರು ಕೇಳದವನು ಯಾರೂ ಅಲ್ಲಿ ಸಿಗಲಾರನು “ನಮೋ ಅಮಿತಾಭಯ ಬುದ್ಧಾಯ” ಎಂಬುದು ಪ್ರತಿಯೊಬ್ಬನ ತುಟಿಯ ಮೇಲಿರುವ ಪರಿಚಿತ ಮಂತ್ರವಾಗಿದೆ.

“ಚೀನದ ವಿದ್ವಾಂಸರು, ಬೌದ್ಧ ಸನ್ಯಾಸಿಗಳು ಅನೇಕ ಭಾರತದ ಗ್ರಂಥಗಳನ್ನು ಭಾಷಾಂತರಮಾಡಿದರು. ಧರ್ಮ, ವಿಜ್ಞಾನ, ತತ್ವಗ್ರಂಥಗಳನೇಕ ಭಾಷಾಂತರವಾಗಿದೆ ಚೀನಾ ಲಿಪಿಯು ಸಂಸ್ಕೃತ ಲಿಪಿಯ ಆಧಾರದ ಮೇಲೆ ರೂಪಿತವಾಯಿತು.

ನವಜಾಗ್ರತಿ ಹುಟ್ಟಿತು

“ಮೇಲೆ ವಿವರಿಸಿದ ಅಂಶಗಳಿಂದ ಭಾರತದ ಪ್ರಭಾವವು ಭಾರತದ ದಾನವು ಚೀನಕ್ಕೆ ಎಷ್ಟು ಅಮೂಲ್ಯವಾಗಿದೆಯೆಂದು ತಿಳಿಯಬಹುದಾಗಿದೆ. ಇತ್ತೀಚೆಗೆ ಡಾ। ರವೀಂದ್ರನಾಥ ಠಾಗೂರರು ಚೀನಕ್ಕೆ ಬಂದಾಗ, ಚೀನದ ಇತಿಹಾಸದಲ್ಲಿಯೇ ಅದೊಂದು ಅಪೂರ್ವ ಘಟನೆಯಾಯಿತು. ‘ಗುರುದೇವ’ನ ಹೆಸರನ್ನು ನಾವು ಹಿಂದೆಯೇ ಕೇಳಿದ್ದೆವು, ಆದರೆ ಗುರುದೇವನ ಸನ್ನಿಧಿ, ಚೀನದ ಜನರನ್ನು ಎಚ್ಚರಿಸಿತು. ಹೊಸಸ್ಫೂರ್ತಿ ಕೊಟ್ಟಿತು. ರಶ್ಯದಲ್ಲಿ ಆಗುವ ಹೊಸರಾಷ್ಟ್ರೀಯ ಕ್ರಾಂತಿಗೆ ಅದು ಹೊಸ ಶಕ್ತಿ ಕೊಟ್ಟಿತು. ಪಂಡಿತ ಜವಾಹಿರಲಾಲರ ಇತ್ತೀಚಿನ ಚೀನಾ ಸಂದರ್ಶನವು ಇನ್ನೊಂದು ನವ ಜಾಗ್ರತಿಗೆ ಕಾರಣವಾಯಿತು ಚೀನಾ ಭಾರತಗಳ ಸಂಬಂಧವನ್ನು ಸವಿಸ್ತಾರವೂ ಮಧುರವೂ ಆಗಿಮಾಡಿತು

ಚೀನದ ಧನ್ಯವಾದ

“ಹೀಗಾದರೆ ಒಂದು ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ ಇಷ್ಟೊಂದು ಉಪಕಾರ ಮಾಡಿದ ಭಾರತಕ್ಕೆ ಚೀನವು ಏನು ಪ್ರತ್ಯುಪಕಾರ ಮಾಡಿದೆಯೆಂದು. ಈ ವಿಚಾರವನ್ನು ನಾನು ಮಾಡಿದಾಗ ಸ್ವಲ್ಪ ನಾಚಿಕೆಪಡುತ್ತೇನೆ ಚೀನದಲ್ಲಿ ಭಾರತದ ಪ್ರಭಾವ ಎಲ್ಲಿಯೂ ಕಾಣುತ್ತದೆ. ಆದರೆ ಭಾರತದಲ್ಲಿ ಚೀನದ ಪ್ರಭಾವವನ್ನು ಎಲ್ಲಿಯೂ ನಾವು ಕಾಣಲಾರೆವು ಆದರೆ, ಭಾರತದಿಂದ ಬೇರೆ ಬೇರೆ ಕಾಲದಲ್ಲಿ ಚೀನವು ಯಾವ ನಿಧಿಯನ್ನು ಪಡೆದುಕೊಂಡಿದೆಯೋ ಅದನ್ನು ಕಾಪಾಡಿಕೊಂಡು, ಅಭಿವೃದ್ಧಿ ಪಡಿಸಿಕೊಂಡು ಬೆಳಗಲು ಅದು ಬಹಳ ಜಾಗರೂಕತೆಯಿಂದ ಯತ್ನಿಸುವುದು. ಅನೇಕ ವಿದ್ವಾಂಸರು ಭಾರತದ ವಿಷಯ ಈಗಾಗಲೇ ಸಂಶೋಧನೆಗೆ ತೊಡಗಿದ್ದಾರೆ. ಆದರೂ ನಾನು ಖಂಡಿತವಾಗಿ ಹೇಳುತ್ತೇನೆ, ಚೀನವು ಭಾರತದಿಂದ ಬಹಳ ಪಡೆಯಿತು ಪ್ರತಿಯಾಗಿ ಬಹಳ ಕಡಿಮೆ ಕೊಟ್ಟಿತು ಆದರೆ ಅದು ತನ್ನ ಧನ್ಯವಾದವನ್ನು ಕಾರ್ಯರೂಪದಲ್ಲಿ ಭಾರತಕ್ಕೆ ಕೊಡುವುದು ಅವಶ್ಯವಿದೆ.”

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತರ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಕಾರರು:—

ಮೆಸರ್ಸ್ ವೆದಲ್ಪಪಳ್ಳಿ ಬ್ರದರ್ಸ್,

289 ಎಸ್ಪ್ಲಾನಡೆ—ಮದರಾಸು.

ದಕ್ಷಿಣಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ. ಮುಹಮ್ಮದಾಲಿ ರೋಡ್, ಮಂಗಳೂರು.

ಗಾಂಧಿ ಜಯಂತಿ.

ಕೃಪಾಲನಿ ಹೇಳಿಕೆ

ಗಾಂಧಿ ಜಯಂತಿಯಲ್ಲಿ ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾಗುವಷ್ಟು ಉತ್ತಮಕಾರ್ಯ ಬೇರೊಂದಿಲ್ಲ. ಖಾದಿ ಮತ್ತು ಗ್ರಾಮಕೈಗಾರಿಕೆಗಳು ಬಡವರ ಭಾಗ್ಯ ಈ ಕಾರ್ಯಗಳನ್ನು ಮಾಡಿ ತೋರಿಸಿದವರು ಈಗ ನಮ್ಮ ಮುಂದೆಯೇ ಇರುವರು.

ಲೆನಿನ್‌ಗ್ರಾಡಿನ ಮೇಲೆ ೧೨೦೦ ವಿಮಾನಗಳು

ಕೀವ್ ಭಾಗದಲ್ಲಿ ಘೋರ ಕಾಳಗ ನಡೆಯುತ್ತಿದ್ದು ಲೆನಿನ್‌ಗ್ರಾಡಿನ ಮೇಲೆ ೧೨೦೦ ವಿಮಾನಗಳು ಹಾರಾಡುತ್ತಿವೆಯೆಂದು ಪ್ರಕಟವಾಗಿದೆ.

ಭಯಂಕರ ಕಳವು

(ಪತ್ತೇದಾರಿ ಕತೆ)

ಲೇಖಕ. ಕೆ. ಎಸ್. ಶರ್ಮಾ

[ಕತೆಯ ಹಿನ್ನೆಲೆ:—ಗೋವಿಂದರಾಯರ ಮನೆಗೆ ನುಗ್ಗಿ ಕಳ್ಳರು ಕಳವು ಮಾಡಿ ಅವರ ಮಗಳನ್ನೂ ಕದ್ದೊಯ್ದಿದ್ದರು ಇನಸ್ಪೆಕ್ಟರರು ಪತ್ತೆಹಚ್ಚುವುದಕ್ಕೆ ತೊಡಗಿದ್ದರು. ಕಳ್ಳರ ಗುರು 'ಮಾಧವ'ನು ಭಯಂಕರ ವ್ಯಕ್ತಿಯಾಗಿದ್ದ, ಕಳ್ಳರ ಒಳಸಂಚು ಹುಡುಕುವರೆ ಹೋಗಿ ರಘುನಾಥನೆಂಬ ಪತ್ತೇದಾರನು ಕಳ್ಳರ ಕೈವಶವಾಗಿದ್ದನು ಕಮಲೆಯು ಹಾಗೂ ಕಳ್ಳರ ವಿಚಾರ ಯಾರಿಗೂ ಯಾವುದೂ ಇದು ವರೆಗೆ ತಿಳಿದು ಬಂದಿಲ್ಲ.]

ಒಂದು ಮಧ್ಯಾಹ್ನ, ಇನ್‌ಸ್ಪೆಕ್ಟರರು, ಪತ್ತೆಗಾಗಿ ಹೋದ ರಘುನಾಥನ ಕುರಿತು ಆಲೋಚಿಸುತ್ತಾ, ಬಲವಾದ ಒಂದು ಆಲೋಚನೆಯಿಂದ ರಿಕಾರ್ಡಿನ್ನು ನೋಡುತ್ತಾ ಕುಳಿತಿದ್ದರು. ಓರ್ವ ಜವಾನನು ಒಳಬಂದನು.

"ಸರ್, ಗೋವಿಂದರಾಯರು ಬಂದಿರುವರು."

"ಸರಿ, ಅವರನ್ನಿತ್ತ ಬರಹೇಳು,"

ರಾಯರು ಒಳಬಂದರು. ಇನ್‌ಸ್ಪೆಕ್ಟರರು ಕುಳ್ಳಿರಲೊಂದು ಕುರ್ಚಿಯನ್ನಿತ್ತರು.

"ರಾಜಾ ರಾಮರಾಯರೆ, ಸ್ವಲ್ಪ ಏಕಾಂತದಲ್ಲಿ ಮಾತಾಡಲಿದೆ." ಇನ್‌ಸ್ಪೆಕ್ಟರರು, ಜವಾನನ್ನು ಹೊರಹೋಗ ಹೇಳಿದರು. ತಾವು ಈ ಕೇಸಿನ ಕುರಿತು ಹೆಚ್ಚಿನ ಗಮನವಿಡುವದೇನೋ ನಿಜ ಆದರೆ, ನನ್ನ ಮಗಳು ಸುರಕ್ಷಿತವಾಗಿ ಸಿಗುವಂತೆ ಮಾಡಬೇಕು" ಎಂದರು ಗೋವಿಂದ ರಾಯರು.

"ರಾಯರೆ, ಅದೇನು ತೊಂದರೆಇಲ್ಲ. ಅದಕ್ಕಾಗಿ ನಾನು ಕೆಲಸಮಾಡುವ ವಿಷಯವನ್ನು ಈ ರಿಕಾರ್ಡುಗಳಿಂದಲೇ ತಿಳಿಯಬಹುದು."

"ಸ್ವಾಮಿ, ತಾವು ಬಹಳ ಉದಾರರು" ಎಂದನ್ನುತ್ತಾ ಇನ್ನೂ ಕೆಲಸಂಗತಿಗಳನ್ನು ಮಾತನಾಡುತ್ತಾ ಸಿಗರೇಟೊಂದನ್ನು ತೆಗೆದು, ಮೇಜಿನಲ್ಲಿಟ್ಟರು. ಇನ್‌ಸ್ಪೆಕ್ಟರರೂ ಸಿಗರೇಟಿಗೆ ಕೈಹಚ್ಚಿದರು.

ಸಿಗರೇಟು ಎಳೆಯುತಿದ್ದಂತೆಯೇ ಇನ್‌ಸ್ಪೆಕ್ಟರರ ಕಣ್ಣುಗಳು ತಿರುಗಲಾರಂಭಿಸಿದವು ಮಾತುಗಳು ತೊದಲ ತೊಡಗಿದವು. ಹೆಚ್ಚೇನು, ರಾಯರು ಕುರ್ಚಿಯಲ್ಲಿ ಬಿದ್ದುಬಿಟ್ಟರು ಈ ವೇಳೆಗೆ ಗೋವಿಂದ ರಾಯರು ಮೇಜಿನಲ್ಲಿರುವ ರಿಕಾರ್ಡುಗಳನ್ನು ತೆಗೆದುಕೊಂಡು ಒಂದು ಕಾಗದವನ್ನು ಬರೆದು ತೆರಳಿಬಿಟ್ಟರು. ಜವಾನನು ನಿಸ್ಸಂಶಯವಾಗಿ ಅವರನ್ನು ಹೋಗಗೊಟ್ಟನು. ರಾಯರು ತೆರಳಿದಕೂಡಲೇ ಜವಾನನು ಒಳಬಂದನು. ನೋಡುವದೇನು? ಭೀಕರ ದೃಶ್ಯ. ಜವಾನನು ಸಿಳ್ಳು ಹಾಕಿದ ಐದಾರು ಪೋಲೀಸರು ಬಂದರು ಜಬ್ಬನು ಕ್ಷಣದಲ್ಲಿ ತೆರಳಿ ಅವನನು ಕೂಡಿ ಬಂದನು ಪಂತನು ವಿಚಾರಿಸಿದನು. ರಾಯರಿಗೆ ಉಪಚಾರಗಳು ನಡೆದುವು ಒಂದೆರಡು ಕ್ಷಣದಲ್ಲಿ ರಾಯರಿಗೆ ಸ್ಮೃತಿಬಂತು ಕೆಲನಿಮಿಷಗಳಲ್ಲಿ ತೀರಾ ಸೌಖ್ಯವಾದರು. ಸುತ್ತಲೂ ನೋಡಿದರು. ರಿಕಾರ್ಡುಗಳೊಂದೂ ಇಲ್ಲ. ಒಂದೂ ಬಿಡದೆ ನಡೆದ ಸಂಗತಿಯನ್ನು ಪಂತರಿಗರುಹಿದರು. ಪಂತರು ಚಕಿತರಾದರು ನೋಡು ನೋಡುತ್ತಿರುವಂತೆಯೇ ಮೇಜಿನಲ್ಲೊಂದು ಕಾಗದವು ದೊರಕಿತು. ಓದಿದರು:

"ಪ್ರಿಯ ರಾಜಾರಾಮ್,

ಈಗ ಯಾರು ಬಂದವರು. ಗೋವಿಂದರಾವ್ ತಿಳಿಯಿತೆ? ತಮ್ಮ ರಿಕಾರ್ಡು ದೊರೆಕಿತು. ಇನ್ನು ನಿಮ್ಮ ಕಾರಸ್ಥಾನ ನಡೆಯಲಿ. ತಮ್ಮ ಪ್ರಯತ್ನ ಸರಾಗವಾಗಿ ಸಾಗಲಿ. ನಾವು ಮಾತ್ರ ನಿಮಗೆ ಆಗಾಗ ಕಾಣಿಸಿಗುತ್ತೇವೆ. ಪ್ರೀತಿಯಿರಲಿ. ಇತಿ,

ಕಳ್ಳರ ಮುಖಂಡನಾದ,

"ಮಾಧವ"

ಎಲ್ಲರೂ ಆಶ್ಚರ್ಯ ಪಟ್ಟರು.

❀ ❀ ❀

ರಾತ್ರಿ ಸುಮಾರು ಹತ್ತುಗಂಟೆ ಪಂತರು ಕೋಣೆಯಲ್ಲಿ ಕುಳಿತು ತನ್ನ ಕಾರ್ಯಪ್ರಯತ್ನಗಳನ್ನು ಆಲೋಚಿಸುತ್ತಿದ್ದಾರೆ. ಇದ್ದಕ್ಕಿದ್ದಂತೆಯೇ ಕೋಣೆಯ ದೀಪಗಳು ನಂದಿಹೋದುವು. ಪಂತರು ಧುಗ್ಗನೆ ಎದ್ದರು. ತನ್ನ ಜವಾನನ್ನು ಕರೆದು ಲಾಂದ್ರವನ್ನುರಿಸೆ ಹೇಳಿದರು. ಜವಾನನು ಬಂದನು, ಇಬ್ಬರೂ ಹುಡುಕತೊಡಗಿದರು. ನೋಡು ನೋಡುತ್ತಿರುವಂತೆಯೇ ಒಂದೆಡೆಯಲ್ಲಿ ಒಂದು ಪೆಟ್ಟಿಗೆಯನ್ನು ಕಂಡರು. ಪಂತರು ಜವಾನನ್ನು ಪೆಟ್ಟಿಗೆಯನ್ನು ತೆಗೆಯುವಂತೆ ಹೇಳಿದರು. ಜವಾನನು ನಡುಗುತ್ತಾ ತೆರೆದನು. ಹಾಯ್, ನೋಡುವದೇನು ಖಂಡಖಂಡವಾದ ಒಂದು ಸ್ತ್ರೀದೇಹ ವಿಚಿತ್ರ ರೀತಿಯಿಂದ ಖಂಡಿಸಿದ್ದಾತು, ಪಂತರು ಬೆರಗಾದರು ಸುಂದರವಾದ ದೇಹ. ನಿಷ್ಕರುಣೆಯಿಂದ ಅಸಹನೀಯ ರೀತಿಯಲ್ಲಿ ಕತ್ತರಿಸಿದ್ದಾರೆ ಪಂತರು ಕೂಡಲೇ ಇನ್‌ಸ್ಪೆಕ್ಟರರನ್ನು ಬರಹೇಳಿದರು ಕೆಲನಿಮಿಷಗಳಲ್ಲಿಯೇ ಅವರೂ ಬಂದರು. ಇಬ್ಬರೂ ಒಟ್ಟಾಗಿ ಕಲೆತು ಪರೀಕ್ಷಿಸತೊಡಗಿದರು. ಇಬ್ಬರಿಗೂ ಬಗೆಹರಿಯಲಿಲ್ಲ. ಕಟ್ಟಕಡೆಗೆ ಅದನ್ನು ಗುಪ್ತವಾಗಿ ಇಡುವಂತೆ ಆಲೋಚಿಸಿ, ಭದ್ರವಾದ ಸ್ಥಳದಲ್ಲಿರಿಸಿದರು. ಗೋವಿಂದರಾಯರ ಪುತ್ರಿ ಇರಬಹುದೇ ಎಂಬ, ಸಂದೇಹವಾದರೂ ಅವರಿಗೆ ಬಾರದೆ ಹೋಗಲಿಲ್ಲ. ಆದರೆ ಪಂತರು ಇದೆಲ್ಲಾ ಕಳ್ಳರ ತಂತ್ರವೆಂದೇ ಬಗೆದರು. ಇಬ್ಬರೂ ಒಂದೆಡೆ ಕುಳಿತರು. ಕುಳಿತಿರುವಂತೆಯೇ ಮೇಜಿನಲ್ಲೊಂದು 'ಭಾವಚಿತ್ರ'ವಿರುವದನ್ನು ಕಂಡರು ಪಂತರು ಚಕಿತರಾಗಿ ನೋಡತೊಡಗಿದರು. ಚಿತ್ರದ ಕೆಳಗಡೆ "ಮಾಧವ" ಎಂದಿತ್ತು ಪಂತರು ಈಗ ತುಂಬಾ ಕಾತರರಾದರು ಕಟ್ಟಕಡೆಗೆ "ರಾಜಾರಾಮರಾಯರೆ ಇದಕ್ಕೆಲ್ಲಾ ಹೆದರಬಾರದು. ನಾಳೆಯೇ ನಾನು ಇದರ ಕಾರ್ಯವನ್ನುಗೊತ್ತು ಹಚ್ಚಿಬರುವೆನು" ಎಂದನ್ನುತ್ತಾ ಕಿವಿಯಲ್ಲಿ ಏನೋ ಹೇಳಿ, ಇನ್‌ಸ್ಪೆಕ್ಟರರನ್ನು ಕಳುಹಿಸಿ, ಶಯನಕ್ಕೆ ತೆರಳಿದರು.

❀ ❀ ❀

ಯಾವ ರಾತ್ರಿಯಲ್ಲಿ ಪಂತರಲ್ಲಿ ಈ ಘಟನೆ ಆಯಿತೋ, ಅದರ ಮರುದಿನ ಓರ್ವ ಭಿಕ್ಷುಕನು ಸುಮಾರು ಮಧ್ಯಾಹ್ನ ಎರಡು ಗಂಟೆಗೆ ವಿಜಯಪುರಿಯ ಮಾರ್ಗದಿಂದ ಹೋಗುತ್ತಿದ್ದನು ಎಲ್ಲಾ ಭಿಕ್ಷುಕರಂತೆಯೇ ಆತನದು ಸಾಧಾರಣ ಉಡುಪು ಆದರೆ ಶಾಂತವಾದ ಮುಖ ಬಲಿತದೇಹ ಆತನದು ಭಿಕ್ಷುಕನು ಮುಂದೆ ಮುಂದೆ ಹೋಗುತ್ತಾ ಹಳ್ಳಿಗಿಳಿದನು. ಹಾಗೆಯೇ ಕೆಲಮೈಲಿಗಳನ್ನು ದಾಟಿ ಸಂಜೆಯಾದುದರಿಂದ ಒಂದು ಮನೆಯ ಬಾಗಲಿಗೆ ಬಂದನು. ಹೊರಗಿನಿಂದ ಮುರುಕಾದ ಹಾಗೆ ಕಂಡರೂ, ಒಳಗೆ ಬಲು ಭದ್ರವಿರುವಂತೆ ಮನೆಯು ತೋರುತ್ತಿತ್ತು. ಭಿಕ್ಷುಕನು ದೀನ ಸ್ವರದಲ್ಲಿ ಮನೆಯವರನ್ನು ಕರೆದನು.

ಆ ವೇಳೆಗೆ ಸರಿಯಾಗಿ ಓರ್ವ ೩೦ ವರುಷ ಪ್ರಾಯದ ಸ್ತ್ರೀಯು ಹೊರ ಬಂದಳು. ಬಂದ ಹಾಗೆ ಏನಾಗಬೇಕು? ಎಂದನ್ನುತ್ತಾ, ತೀವ್ರವಾದ ನೋಟದಿಂದ ಒಂದು ಬಾರಿ ಭಿಕ್ಷುಕನನ್ನು ಸರಿಯಾಗಿ ನೋಡಿದಳು. ಭಿಕ್ಷುಕನು ಕೊಂಚ ಬೆದರಿದ. ಸ್ತ್ರೀಯು ಒಳಹೋಗಿ, ಒಂದಿಷ್ಟು ಅಕ್ಕಿಯನ್ನು ತಂದು ಕೊಟ್ಟಳು. ಪುನಃ ಹಿಂದಿರುಗಲೆತ್ನಿಸುವಾಗ,

"ನೀವೆಲ್ಲಿ ಉಳುಕೊಳ್ಳುವಿರಿ?" ಎಂದಂದಳು.

"ಅಮ್ಮಾ ಎಲ್ಲಾದರೂ ಉಳುಕೊಳ್ಳಬೇಕು." ಎಂದಂದನು ಭಿಕ್ಷುಕನು.

"ಸರಿ, ಹಾಗಾದರೆ ಇಲ್ಲೆ ಇರುವಿರಾ?" ಎಂದು ಅವಳಂದಳು. ಭಿಕ್ಷುಕನು, ಸಂತೋಷದಿಂದ ಒಪ್ಪಿಕೊಂಡನು ಸ್ತ್ರೀಯು ಆತನನ್ನು ಒಂದು ಕೊಠಡಿಗೆ ಕರೆದೊಯ್ದಳು. ಅಲ್ಲೇ ಇರುವಂತೆ ಆತನಿಗೆ—ಹೇಳಿ ತಾನೀಗ ಏನಾದರೂ ಆಹಾರ ತರುವೆನೆಂದು ಹೇಳಿ ಒಳನಡೆದಳು ಭಿಕ್ಷುಕನು ತೀರಾ ಸಂದೇಹಗ್ರಸ್ತನಾದ ಮೆಲ್ಲಗೆ ಕೊಠಡಿಯಿಂದ ಹೊರಗಿಳಿದನು ಒಂದೆರಡು ಹೆಜ್ಜೆಗಳನ್ನು ಹೊರಗಿಡುವ ವೇಳೆಯಲ್ಲೇ 'ಧಕ್, ಧಕ್' ಎಂಬ ಶಬ್ದವಾಯಿತು. ಭಿಕ್ಷುಕನು ತಿರುಗಿದನು ತಾನು ಕುಳಿತಿದ್ದ ಕೊಠಡಿಯ ಬಾಗಿಲು ಬಲವಾಗಿ ಹಾಕಿದಂತೆ ತೋರಿತು. ಒಳಗೆ ತೀರಾ ಕತ್ತಲೆಯಾಯಿತು. ಭಿಕ್ಷುಕನು ತೀರಾ ಅವಕ್ಕಾದನು. ಮುಂದಿನ ಆಲೋಚನೆಯನ್ನೇ ತಿಳಿಯದಾದ ಆದರೂ ಧೈರ್ಯಮಾಡಿ ಮೆಲ್ಲಮೆಲ್ಲಗೆ ಒಂದೊಂದೇ ಕೊಠಡಿಯನ್ನೇ ದಾಟಿದ ಹೋಗು ಹೋಗುತ್ತಿದ್ದಂತೆಯೇ ಒಂದೆಡೆ ಯಾರೋ ನರಳುತ್ತಿರುವಂತೆ ಭಾಸವಾಯಿತು. ಭಿಕ್ಷುಕನು ಮೆಲ್ಲಗೆ ಅಲ್ಲಿಗೆ ಬಂದ. ಬಾಗಿಲ ಬಳಿ ನಿಂತ. ಅತ್ತಿತ್ತ ನೋಡಿದ 'ಯಾರದು ಯಾರದು' ಎಂದನು. ಒಳಗಿನ ವ್ಯಕ್ತಿಯು ಸಮೀಪಕ್ಕೆ ಬಂದಿತು. ತೀರಾ ಸಮೀಪ ಬಂದೊಡನೆಯೆ, ಭಿಕ್ಷುಕನು ಮತ್ತೊಮ್ಮೆ "ಯಾರದು." ಎಂದನು. ಆಗ ಸುಲಭದಲ್ಲೇ ಒಳಗಿನ ವ್ಯಕ್ತಿಗೆ ಹೊರಗಿನ ವ್ಯಕ್ತಿಯು ಸ್ವರಪರಿಚಯವಾಯಿತು. ಕೂಡಲೆ, "ನಾನು ರಘುನಾಥನು" ಎಂದಂದುತ್ತರಬಂತು. ಭಿಕ್ಷುಕನು ಮೆಲ್ಲಗೆ ಜೋಳಿಗೆಗೆ ಕೈಹಾಕುತ್ತಾ ಸುತ್ತಲೂ ನೋಡಿದನು. ಒಡನೆಯೇ ಜೋಳಿಗೆಯಿಂದ ಒಂದು ಉಳಿಯನ್ನು ತೆಗೆದು

[ಐನೆಯ ಪುಟವನ್ನು ನೋಡಿ]

NACET BLADES

ಮೂರು ಗೂಟದ ರೇಜರುಗಳಿಗೆ



ನೆಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಮುಖಕ್ಷೌರವಾಗಬೇಕಾದರೆ, ಹರಿತ, ಸುಖ ಮತ್ತು ನಯ ಇವು ಮೂರು ಗುಣಗಳು ಇರಬೇಕು. ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾಗುವಷ್ಟು ಕಡಿಮೆ ಕ್ರಯದಲ್ಲಿ ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರಮಾಡಲುಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡಲಿರುವಿರಿ.

I.N.B.Z.

ಜಿಲ್ಲಾ ಸಮಾಚಾರಗಳು

ಭಟ್ಕಳದಲ್ಲಿ ದ. ಕ. ಸತ್ಯಾಗ್ರಹಿಗಳ ಬಂಧನ

ದ. ಕನ್ನಡ ಜಿಲ್ಲೆಯ ಸತ್ಯಾಗ್ರಹಿಗಳಾದ ನೆಕ್ರೆ ಶ್ಯಾಮರಾಯ ನಾಯ್ಕರನ್ನೂ ೩ನೇ ಸಜ ಸತ್ಯಾಗ್ರಹ ಮಾಡಿದ ಶ್ರೀ. ಬಿ. ದೇವಪ್ಪ ಆಳ್ವರನ್ನೂ ತಾ. ೧೮ರಂದು ೯ ಘಂಟೆಯ ಸಮಯಕ್ಕೆ ಭಟ್ಕಳದಲ್ಲಿ ಯುದ್ಧ ವಿರೋಧ ಘೋಷಣೆ ಮಾಡುತ್ತಾ ಹೋಗುವಾಗ ಕೈದುಮಾಡಿದರು

ಡಾ। ಕೆ. ವಿಠ್ಠಲ ಶೆಟ್ರು ಬಿಡುಗಡೆ

ಸತ್ಯಾಗ್ರಹ ಹೂಡಿ ಬಂಧಿತರಾದ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಡಾ। ಕೆ. ವಿಟ್ಠಲ ಶೆಟ್ರು ತಮ್ಮ ಸತ್ಯಾಗ್ರಹ ಶಿಕ್ಷೆಯ ಅವಧಿ ತೀರಿಸಿ ತ್ರಿಚುನಾಪಳ್ಳಿ ಸೆರೆಮನೆಯಿಂದ ಬಿಡುಗಡೆಯಾಗಿ ತಾ ೧೯ರಂದು ಸಂಜೆಗೆ ಮಂಗಳೂರಿಗೆ ಬಂದು ತಲಪಿದರು. ರೈಲ್ವೆ ಸ್ಟೇಶನಿನಲ್ಲಿ ಅನೇಕ ಮಂದಿ ಕಾಂಗ್ರೆಸಿನವರೂ, ಮಹಾ ಜನರೂ, ಬಂಧು ಮಿತ್ರರೂ ಅವರನ್ನು ಸ್ವಾಗತಿಸಿದರು.

ಜಿಲ್ಲಾ ಕಾಂಗ್ರೆಸಿಗರ ಸಭೆ

ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆಯೊಂದು ತಾ ೨೩ರಂದು ೨ ಗಂಟೆಗೆ ಜಿ। ಕಾಂ। ಕಚೇರಿಯಲ್ಲಿ ಜರಗಿತು. ಶ್ರೀ ದಾಮೋದರ ಬಾಳಿಗರು ಜಿಲ್ಲಾ ಕಾಂಗ್ರೆಸ್ ಚಟುವಟಿಕೆಗಳ ವಿಚಾರವನ್ನು ವಿವರಿಸಿ ನಮ್ಮ ಜಿಲ್ಲೆಯು ಇದು ವರೆಗೆ ಒಹಳ ಯೋಗ್ಯ ರೀತಿಯಿಂದ ಸತ್ಯಾಗ್ರಹವನ್ನು ಮುಂದುವರಿಸಿದೆಯೆಂಬುದಾಗಿ ವಿವರಿಸುತ್ತಾ, ಮುಂದೆಯೂ ಕಾಂಗ್ರೆಸ್ ಪತಾಕೆಯ ಗೌರವವು ಉಳಿಯುವಂತೆ ಮಾಡುವುದು ನಮ್ಮ ಕರ್ತವ್ಯವೆಂಬುದಾಗಿ ತಿಳಿಸಿ ಜಿಲ್ಲೆಯ ಕಾಂಗ್ರೆಸು ಪಕ್ಷದವರಾದ ಸ್ಥಳೀಕ ಸಂಸ್ಥೆಗಳ ಸದಸ್ಯರು, ಇನ್ನಷ್ಟು ಹೆಚ್ಚಿಗೆ ರಚನಾತ್ಮಕ ಕಾರ್ಯಕ್ರಮಗಳಿಗೆ ಗಮನಕೊಡಬೇಕೆಂದೂ ಹೇಳಿ, ಸಾದಿಕ್ ಅಲಿ ಕೃಪಾಲನಿಯವರೊಡನೆ ಚರ್ಚಿಸಿದ ವಿಷಯ ವಿವರಿಸಿದರು ಆ ಮೇಲೆ ರಚನಾತ್ಮಕ ಕಾರ್ಯಕ್ರಮಗಳನ್ನು ಮುಂದುವರಿಸುವರೆ ಹಾಗೂ ಖಾದೀ ಪ್ರಸಾರ ಕಾರ್ಯಮಾಡುವರೆ ಒಂದು ಕಮಿಟಿ ರಚಿಸಲಾಯಿತು. ಗಾಂಧಿ ಜಯಂತಿಯನ್ನು ಆಚರಿಸುವ ಕಾರ್ಯಕ್ರಮವು ನಿರ್ಣಯವಾಯಿತು.

ಜಿಲ್ಲಾ ಕಾಂಗ್ರೆಸಿಗರಿಗೆ ಕೃಪಾಲನಿಯವರ ಸಂದೇಶ

ಕರ್ನಾಟಕ ಪ್ರಾಂತದ ಪ್ರವಾಸಕ್ಕೆ ಬಂದಿದ್ದ ಆಚಾರ್ಯ ಕೃಪಾಲನಿಯವರನ್ನು ಜಿಲ್ಲಾ ಸತ್ಯಾಗ್ರಹ ಸಂಚಾಲಕರಾದ ಶ್ರೀ ಬಿ. ದಾಮೋದರ ಬಾಳಿಗರು ಧಾರವಾಡದಲ್ಲಿ ಹೋಗಿ ಸಂದರ್ಶಿಸಿ, ಜಿಲ್ಲೆಯ ಕಾಂಗ್ರೆಸ್ ಚಟುವಟಿಕೆಗಳ ವಿಚಾರವಾಗಿ ಮಾತನಾಡಿ ಮರಳಿದುವರು ಆಚಾರ್ಯ ಕೃಪಾಲನಿಯವರು ಶ್ರೀ ಬಿ ಬಾಳಿಗರ ಮುಖಾಂತರ ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರಿಗೆ ಈ ರೀತಿ ಸಂದೇಶವಿತ್ತಿದ್ದಾರೆ! "You must not get disheartened. Gandhiji—our leader satisfied with the things as they are going on. He holds that we shall succeed; All the world forces are moving in that direction. So let no body loose heart"

("ನೀವು ಧೈರ್ಯಗೆಡಬಾರದು ಇಂದು ಆಗುವ ಕಾರ್ಯಕಲಾಪಗಳಿಂದ ನಮ್ಮ ಮುಂದಾಳುವಾದ ಗಾಂಧಿಜಿ ತೃಪ್ತಿಗೊಂಡಿದುವರು; ನಾವು ವಿಜಯಿಗಳಾಗಲೇ ಬೇಕೆಂದು ಅವರು ಖಂಡಿತ ಮಾಡಿದ್ದಾರೆ. ಜಗತ್ತಿನ ಶಕ್ತಿಗಳೆಲ್ಲವೂ ಈಗ ಆ ಕಡೆಗೆ ಚಲಿಸುತ್ತಿವೆ. ಆದಕಾರಣ ಯಾರೂ ಧೈರ್ಯಗೆಡಬಾರದು")

ಮುನ್ಸಿಪಾಲಿಟಿ

ಮಂಗಳೂರು ಮುನ್ಸಿಪಾಲಿಟಿ ಸಭೆಯು ತಾ ೨೨ರಂದು ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಿಂದ ಕೂಡಿತು. ಸತ್ಯಾಗ್ರಹ ಮಾಡಿ ಸೆರೆಮನೆಯಿಂದ ಮರಳಿ ಬಂದ ಶ್ರೀ. ಡಾ। ವಿಟ್ಠಲ ಶೆಟ್ರನ್ನು ಸ್ವಾಗತಿಸುವ ಠರಾವಾಯಿತು. ಶ್ರೀ ಭಕ್ತರಿಗೆ ಮಾನಪತ್ರ ಕೊಡುವ ನಿರ್ಣಯವಾಯಿತು. ವೆಬ್ಸ್ಟರ್ ಮಾರ್ಕೆಟಿಗಾಗಿ ಪಡೆದ

ರೂ ೮೦ ಸಾವಿರವನ್ನು ಅದರ ಬಡ್ಡಿಸಹಿತ ಸರಕಾರಕ್ಕೆ ಹಿಂದೆ ಕಳುಹಿಸುವುದೆಂದಾಯಿತು. ಆ ಮಾರ್ಕೆಟಿನ ಜೀರ್ಣೋದ್ಧಾರ ಮುಂದೆ ಬಿತ್ತು.

ದಕ್ಷಿಣ ಕನ್ನಡದಲ್ಲಿ ಪ್ಲೇಗಿನ ವಿವರ

ತಾ. ೧೮-೯-೪೧ ರ ವರೆಗೆ ದಕ್ಷಿಣ ಕನ್ನಡದಲ್ಲಿ ಪ್ಲೇಗುರೋಗ ಸೋಂಕಿದವರ ಮೃತರಾದವರ ವಿವರವು ಹೀಗಿದೆ. ಬಂಟ್ವಾಳ ಮೂಡು ಸೋಂಕಿದ್ದು ೧೪, ಮೃತ ೧೧, ತುಂಬೆ ಸೋಂಕಿದ್ದು ೪, ಮೃತ ೩ ಬಂಟ್ವಾಳ ಕಸಬಾ ಸೋಂಕಿದ್ದು ೨; ಮೃತ ೨, ಕುರ್ನಾಡು ಸೋಂಕಿದ್ದು ೪, ಮೃತ ೪, ಕುರಿಯಾಳ ಸೋಂಕಿದ್ದು ೧, ವಿಟ್ಲ ಪಡ್ನೂರು ಸೋಂಕಿದ್ದು ೧, ಮೃತ ೧. ಪುತ್ತೂರು ಪ್ರಯಾಣಿಕರ ಬಂಗ್ಲೆ ಬಳಿ ಬಿದ್ದ ಇಲಿ, ಪ್ಲೇಗು ಸೋಂಕಿದಲ್ಲವೆಂದು ತಿಳಿದಿದೆ

ಗವರ್ನರ ಎಡ್ವೈಸರರು

ಗವರ್ನರ ಎಡ್ವೈಸರರಲ್ಲೊಬ್ಬರಾದ ಆಸ್ಟಿನ ರವರು ಅಕ್ಟೋಬರ್ ತಾ ೫ ರಂದು ಮಂಗಳೂರಿಗೆ ಬರುವರೆಂದು ತಿಳಿದಿದೆ

ಎಕ್ಸೈಜ್ ಅಸಿ। ಕಮಿಶನರು

ಎಕ್ಸೈಜ್ ಖಾತೆಯ ಅ। ಕಮಿಶನರ್ ರಾ। ಸಾ। ಬಿ. ಎಸ್. ಪ್ರಸಾದರಾವ್ ಇವರು ಮಂಗಳೂರಿಗೆ ಬಂದಿದ್ದು ಉಡುಪಿ ಕಡೆ ತೆರಳಿದರು.

ಹಳೆ ವಿದ್ಯಾರ್ಥಿ ದಿನಾಚರಣೆ

ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿಗಳ ದಿನಾಚರಣೆಯು ಇದೇ ಬರುವ ತಾ ೨೯ ರಲ್ಲು ಗಣಪತಿ ಹ್ಯಾಸ್ಕೂಲಿನ ಶಾಲಾ ಭವನದಲ್ಲಿ ನಡೆಯಲಿರುವುದು. ಶಾಲೆಯ ಹಳೆ ವಿದ್ಯಾರ್ಥಿಗಳೆಲ್ಲರಿಗೂ ಸುಸ್ವಾಗತವಿದೆ

ದ ಕ ಉಪಾಧ್ಯಾಯರ ಪರಿಷತ್ತು.

ವಿದ್ಯಾ ಇಲಾಖೆಯ ಡೈರೆಕ್ಟರವರು ಒಕ್ಟೋಬರ ಎರಡನೆಯ ವಾರದಲ್ಲಿ ದ ಕ ಜಿಲ್ಲೆಯನ್ನು ಸಂದರ್ಶಿಸುವವರಿದ್ದಾರೆ ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಗಳು ಅವುಗಳ ಅಧ್ಯಾಪಕರ ಮತ್ತು ಪ್ರಾಥಮಿಕ ಶಿಕ್ಷಣ ಸಂಬಂಧವಾದ ವಿಷಯಗಳನ್ನು ಚರ್ಚಿಸಿ ಡೈರೆಕ್ಟರರ ಮುಂದಿಡುವ ಉದ್ದೇಶ ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಒಂದು ಪರಿಷತ್ತನ್ನು ಡೈರೆಕ್ಟರರ ಸಂದರ್ಶನದ ಸಮಯದಲ್ಲಿ ಮಂಗಳೂರಲ್ಲಿ ಜರಗಿಸುವುದು ಅಗತ್ಯವೆಂದು ಹಲವರಿಂದ ಒಂದ ಸೂಚನೆ ಪ್ರಕಾರ ಆ ಪರಿಷತ್ತನ್ನು ಕರೆಯುವ ಏರ್ಪಾಡುಗಳನ್ನು ಮಾಡುವರೆ ಜಿಲ್ಲೆಯ ಸೆಂಟರ್ ಸಂಘಗಳ ಕಾರ್ಯದರ್ಶಿಗಳ ಸಭೆಯೊಂದನ್ನು ಒಕ್ಟೋಬರ ತಾ ೫ನೇ ಆದಿತ್ಯವಾರ ಅಪರಾಹ್ನ ೩ಗಂಟೆ ಕ್ಕೆ ಮಂಗಳೂರು ಜೇಡಿಗುಡ್ಡೆ ಬಿ. ಸಿ. ಮಿಶನ್ ಶಾಲೆಯಲ್ಲಿ ಕರೆಯುವುದೆಂದು ನಿಶ್ಚಯಿಸಿದುವುದರಿಂದ ಸದ್ರಿ ಸಭೆಗೆ ಎಲ್ಲಾ ಸೆಂಟರುಗಳ ಕಾರ್ಯದರ್ಶಿಗಳೂ ತಪ್ಪದೆ ಬರಬೇಕಾಗಿ ವಿನಂತಿ.

ಬಡವರಿಗೆ ಅಕ್ಕಿ ಭಂಡಾರ

ಬಡವರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿ ಕೊಡಿಸುವ ಏರ್ಪಾಡು ಮಾಡುವರೆ ಮಂಗಳೂರಿನ ನಾಗರಿಕರ ಕಮಿಟಿಯೊಂದು ತಾ ೨೧ ರಂದು ಕೆನರಾ ಚೆಂಬರ್ ಓಫ್ ಕಾಮರ್ಸಿನ ಆಶ್ರಯದಲ್ಲಿ ಸೇರಿತು. ಆ ಬಗ್ಗೆ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಸೇಠ್ ವಿಟ್ಠಲ್ ಜಿ ಪುರುಷೋತ್ತಮ್, ಮಣೆಲ್ ಅಣ್ಣಪ್ಪನಾಯಕ್, ಎಫ್. ಪಿ. ಎಸ್. ಆಲ್ಬುಕರ್ಕ್, ಪಿ. ಸಿ. ಲೋಬೋ, ಕಸ್ತೂರಿ ಲಕ್ಷ್ಮಣ ಪೈ, ಮಣೆಲ್ ರಘುನಾಥನಾಯಕ್, ಪಿ. ಆರ್. ಆರ್. ಪೊಂಜ ಮತ್ತು ಮಾರಿಸ್ ಕುಟಿಞ ಇವರಿಂದ ಕೂಡಿದ ಕಮಿಟಿಯೊಂದು ರಚಿತವಾಗಿದೆ. ಕಡಿಮೆಯಂದರೆ ಮೂರು ತಿಂಗಳ ಮಟ್ಟಿಗಾದರೂ ಸೇರಿಗೆ ೨ ಆಣೆಯಂತೆ ಬಡವರಿಗೆ ಅಕ್ಕಿಯನ್ನೊದಗಿಸುವ ಏರ್ಪಾಡು ಮಾಡುವುದಾಗಿ ನಿಶ್ಚಯವಾದರಾಗಿದೆ ಸಭಾಸ್ಥಳದಲ್ಲಿಯೇ ರೂ ೬೦೦೦ ರಷ್ಟು ವಂತಿಗೆ ಕೂಡಿತು.

ದಸರಾ ಸಾಹಿತ್ಯೋತ್ಸವ, ಮಿತ್ರಮಂಡಳಿ, ಮಂಗಳೂರು.

ಸ್ಥಳ: ಕೆನರಾ ಹಾಯ್‌ಸ್ಕೂಲ್.

ತಾ. ೨೭ನೇ ಶನಿವಾರ "ಜನ್ನನ ಯಶೋಧರ" ಶ್ರೀ ಕೆ. ವೆಂಕಟರಾಮಪ್ಪ, ಎಮ್. ಎ. ಮೈಸೂರು, ಭಾಷಣ ೧. "ಮದುವೆಯ ಮರುಳು" (ನಾಟಕ ಪ್ರಕಾಶ ಎಸೋಸಿಯೇಶನ್) ೨. ಇತರ ವಿನೋದಗಳು. ತಾ. ೨೮ನೇ ರವಿವಾರ "ಕರ್ನಾಟಕ ಸಂಸ್ಕೃತಿ" ಶ್ರೀ ದೇವುಡು ನರಸಿಂಹ ಶಾಸ್ತ್ರಿ ಎಮ್. ಎ., ಬೆಂಗಳೂರು. ಭಾಷಣ ೧. "ರಂಗಭೂಮಿ" (ನಾಟಕ (ಕರ್ನಾಟಕ ಥಿಯೇಟರ್ಸ್) ೨. ಇತರ ವಿನೋದಗಳು ತಾ. ೨೯ನೇ ಸೋಮವಾರ ಆಧುನಿಕ ಗದ್ಯ (ಸಾಹಿತ್ಯಗೋಷ್ಠಿ (೧) "ದೇವದರ್ಶನ" (ನಾಟಕ) (೨) ನೃತ್ಯ (೩) ಸಂಗೀತ (೪) ಕೋಲಾಟ (ಪ್ರಭಾತ ಲಲಿತಕಲಾ ಮಂಡಳಿಯವರಿಂದ)

ಥಕ್ಕರ್ ಬಾಪಾ ಸಂಚಾರ ದ ಕನ್ನಡ ಜಿಲ್ಲೆಯಲ್ಲಿ ಅ. ಭಾ. ಹರಿಜನ ಸೇವಕ ಸಂಘದ

ಜನರಲ್ ಸೆಕ್ರೇಟರಿಯವರೂ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಯಾಟಿಯ ಉಪಾಧ್ಯಕ್ಷರೂ ಆದ ಶ್ರೀ। ಎ. ವಿ ಥಕ್ಕರ್ ರವರ ಕಾರ್ಯಕ್ರಮ. ತಾ ೨೫ನೇ ಗುರುವಾರ, ೪-೧೦ ಘ, ಅಪರಾಹ್ನ ಕಾಸರಗೋಡಿಗೆ ಗಮನ, ಸಾರ್ವಜನಿಕ ಸಭೆ ಘ ೫, ಕಾಸರಗೋಡು ತಾಲೂಕು ಸಂಘದ ಸಭೆ ೭ ರಾತ್ರಿ ಅಲ್ಲೇ ವಿಶ್ರಾಂತಿ ತಾ ೨೬, ಬೆಳಿಗ್ಗೆ ಸೀತಂಗೋಳಿಗೆ ಸಂದರ್ಶನ ೨-೪೫ ಘ ಅಪರಾಹ್ನ ಮಂಗಳೂರಿಗೆ ಆಗಮನ ೩-೩೦ ಘ ಬೆಸೆಂಟ್ ರಾಷ್ಟ್ರೀಯ ಶಾಲೆಗೆ ಸಂದರ್ಶನ ೪-೩೦ ಘ ಅದೇ ಶಾಲೆಯಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ಸಭೆ ೬-೩೦ ಘ ಬಿ ಸಿ. ಯಂ. ನ ಗೀತಾ ತರಗತಿಗೆ ಸಂದರ್ಶನ. ೬ ಘ. ಮೈದಾನಿನಲ್ಲಿ ಸಾರ್ವಜನಿಕ ಸಭೆ. ೮ ಘ. ಬಾಬುಗುಡ್ಡೆ ಹರಿಜನ ವಸತಿಗೆ ಸಂದರ್ಶನ. ಗೆಳೆಯರ ಕೂಟದವರ ಸ್ವಾಗತ, ಮರುದಿನ ತಾ. ೨೭ ಪೂರ್ವಾಹ್ನ ಬಿ. ಸಿ ಯಂ ಶಾಲೆಗಳಿಗೆ ಸಂದರ್ಶನೆ. ೪ ಘ. ಭಗಿನಿ ಸಮಾಜಕ್ಕೆ ಸಂದರ್ಶನ, ೪-೩೦ ಘ ಕೆನರಾ ಹೈಸ್ಕೂಲುಗ್ರೌಂಡಿನಲ್ಲಿ ಪಂದ್ಯಾಟಗಳು ಮತ್ತು ತಿಂಡಿಗಳನ್ನು ಹಂಚುವಿಕೆ. ೫ ಘ. ಬಿ. ಸಿ. ಯಂ. ಮಹಾ ಸಭೆ. ೭. ೩೦ ಘ. ಜಿಲ್ಲಾ ಹರಿಜನ ಲೀಗಿನ ಸ್ವಾಗತ ತಾ. ೨೮. ಕಾರ್ಕಳಕ್ಕೆ ನಿರ್ಗಮನ. ೯-೩೦ ಘ. ಶಬರಿ ಆಶ್ರಮಕ್ಕೆ ಸಂದರ್ಶನ. ೧೦ ಘ. ಸಾರ್ವಜನಿಕ ಸಭೆ. ೧೧ ಘ. ಉಡುಪಿಗೆ ನಿರ್ಗಮನ. ೧೨-೩೦ಕ್ಕೆ ಉಡುಪಿಯ ಹರಿಜನ ಬೋರ್ಡಿಂಗ್ ಹೌಸಿಗೆ ಸಂದರ್ಶನ. ೩-೩೦ ಘ. ಅಪರಾಹ್ನ, ಪುತ್ತೂರು ವಸತಿಗೆ ಸಂದರ್ಶನ. ೪-೩೦ ಘ. ಸಾರ್ವಜನಿಕ ಸಭೆ ೫-೪೫ ಘ, ಮಂಗಳೂರಿಗೆ ನಿರ್ಗಮನ. ೨೯ ರಂದು ಮಂಗಳೂರಿನಿಂದ ನಿರ್ಗಮನ.

-ಹರಿಜನ ವಾರ-(೯-ದಿವಸಗಳು)- ೨೪-೯-೪೧ ದಿಂದ ೨-೧೦-೪೧ ರ ವರೆಗೆ

ತಾ. ೨೪. ಹರಿಜನರ ಸಾರ್ವಜನಿಕ ಸಭೆ-ಸ್ಥಳ. ಉಳ್ಳಾಲ ರಘುನಾಥಯ್ಯ ಸ್ಮಾರಕಮಂದಿರ. ವಿಷಯ ಪೂನ ಒಪ್ಪಂದದ ದಿನ ಸಮಯ. ಸಾಯಂ ಘ. ೫-೩೦ ತಾ. ೨೫ ಬೆಳಿಗ್ಗೆ ಹರಿಜನ ಕೊಲನಿಗೆ ಸಂದರ್ಶನ ತಾ. ೨೬ ಸಾರ್ವಜನಿಕ ಸಭೆ ಲೈನ್ ಮೈದಾನದಲ್ಲಿ ಸಾಯಂ ಘಂ ೬ಕ್ಕೆ. ಬಾಬು ಗುಡ್ಡೆ ಹರಿಜನ ಕೊಲನಿಗೆ ಸಂದರ್ಶನ ತಾ. ೨೭ ಅಂತರ ಶಾಲಾ ಆಟಗಳ ಸ್ಪರ್ಧೆ, ಕೆನರಾ ಹೈಸ್ಕೂಲ್ ಮೈದಾನದಲ್ಲಿ ಸಾಯಂ ಘಂ ೪ರಿಂದ ೬ರ ವರೆಗೆ; ಹರಿಜನ ಮಕ್ಕಳಿಗೆ ತಿಂಡಿ ಹಂಚೋಣ ಮತ್ತು ಸೂಟ ರ್ ಪೇಟೆ ಹರಿಜನ ಕೊಲನಿಗೆ ಸಂದರ್ಶನ. ೨೮, ೨೯, ೩೦, ಮತ್ತು ೧ರಲ್ಲಿ ಕ್ರಮವಾಗಿ ಉಳ್ಳಾಲ ಕಾಟಿಪಳ್ಳ, ನೆಲ್ಲಿಪಾಡಿ, ಪಾಂಡೇಶ್ವರ ಮತ್ತು

ಹೊಯ್ಗೆ ಬಜಾರ್ ಹರಿಜನ ಕೊಲನಿಗಳಿಗೆ ಸಂದರ್ಶನ. (ಸಮಯ- ಪ್ರತಿದಿನ ಸಾಯಂ ಘಂ ೫ರಿಂದ ೭ರ ವರೆಗೆ) ತಾ. ೨ ಸಾರ್ವಜನಿಕ ಸಭೆ.

ಕಯ್ಯೂರು ವಿಚಾರಣೆ.

ಕಯ್ಯೂರಿನಲ್ಲಿ ಪೋಲೀಸ್ ಕಾನ್ಸ್ಟೇಬಲನೊಬ್ಬನನ್ನು ಕೊಂದ ಆಪಾದನೆಯಲ್ಲಿ ೬೦ಜನರು ಆಪಾದಿತರ ವಿಷಯ ಆಜ ಸಾಕ್ಷಿ ವಿಚಾರಣೆಯಾಗಿದೆ. ಪ್ರೊಸಿಕ್ಯೂಶನ್ ಕಡೆಯಿಂದ ಶ್ರೀ ಆನಂದ ತಲ್ವಾರರು ವಾದಿಸಿದರು.

ಮಹಾಜನ ಫ್ಲಡ್ ರಿಲೀಫ್ ಕಮಿಟಿ

ಇದರ ಸಭೆಯೊಂದು ಸೇರಿತು. ಗುರ್ಪುರ, ಕುಂಟ್ಪೈ ಕೇಂದ್ರಗಳಿಗೆ ಮಾರ್ಗ ಮಾಡಿಸುವರೆ ಐವೆಜು 'ಸೇಂಕ್ಷನ್' ಆಯಿತು

ಪೂನಾ ಒಪ್ಪಂದ ದಿನಾಚರಣೆ

ತಾ. ೨೪ ರಂದು ಸಂಜೆ ಸ್ಥಳೀಯ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಪೂನಾ ಒಪ್ಪಂದ ದಿನಾಚರಣೆಯು ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಿಂದ ನೆರವೇರಿತು ಶ್ರೀ. ಗೋಪಾಲ ಸಾಲೆನ್ಸ ಯು ಲಕ್ಷ್ಮಣ, ಕೆ. ಈಶ್ವರ, ಚಂದ್ರ ಶೇಖರ, ಊ. ಗೋವಿಂದ ದಾಸ್, ನಾರಾಯಣ ಶಿಲ್ಲೆ ಇವರು ಭಾಷಣವಿತ್ತರು.

ಮೂಲ್ಕಿ

ಶ್ರೀ. ಎ ಬಿ. ಶೆಟ್ಟರ ಭಾಷಣ

ಮೂಲ್ಕಿ ಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರು 'ಹಿಂದೂದೇಶವೂ ಅದರ ಭವಿಷ್ಯವೂ' ಎಂಬ ವಿಚಾರವಾಗಿ ಭಾಷಣವಿತ್ತರು.

ಪುತ್ತೂರು

ರಾಮಕುಂಜ

ಕಳೆದ ತಾ. ೧೩ರಲ್ಲು ಇಲ್ಲಿ ಸೌರ ಶ್ರೀ ಕೃಷ್ಣ ಜಯಂತ್ಯುತ್ಸವವು ಆಚರಿಸಲ್ಪಟ್ಟಿತು. ವಿಟ್ಲಪಿಂಡಿ ಹಬ್ಬದ ದಿನ ಇಲ್ಲಿಯ ಎಡ್ವಾನ್ಸ್ಡ್ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಕೆ ನಾರಾಯಣಾಚಾರರ ಅಧ್ಯಕ್ಷತೆಯಲ್ಲೊಂದು ಸಭೆಯು ಜರಗಿತು ಊರ ಮಹನೀಯರೂ ಹಾಜರಿದ್ದರು ಶ್ರೀ ಕೃಷ್ಣ ಪರಮಾತ್ಮನ ವಿಷಯವಾಗಿ ಭಾಷಣವಾದುವು

ಕಾರ್ಕಳ

ಉಪಾಧ್ಯಾಯರಿಗೆ ಸೂಚನೆ

ಕಾರ್ಕಳ ತಾಲೂಕಿನ ಬೋರ್ಡು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಒಂದು ಸಭೆಯು ತಾ ೨೧ರ ದಿನ ಶಾಲಾ ಡಿಪ್ಟಿ ಇನ್ಸಪೆಕ್ಟರ್ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕೂಡಿ, ಸರಕಾರದ ಶಿಕ್ಷಣ ಪ್ರಚಾರ ಸಂಬಂಧವಾದ ಹೊಸ ನೀತಿಯಂತೆ ಇಲ್ಲದಿರುವ ಬೋರ್ಡಿನ ನೂರಾರು ಶಾಲೆಗಳ ಮಂಜೂರಾತಿ ಹೋಗುವ ದುರ್ಧರ ಪ್ರಸಂಗವನ್ನೆತ್ತಿ, ಬೋರ್ಡು ಶಾಲಾ ಉಪಾಧ್ಯಾಯರು ತಮ್ಮ ಹಿತಕ್ಕಾಗಿಯೂ ಸಾಕ್ಷರತೆಯ ಪ್ರಚಾರಕ್ಕಾಗಿಯೂ ಸರಕಾರವು ಪ್ರಕಟಿಸಿದ ಆ ನಾಲ್ಕು ಕಟ್ಟಳೆಗಳಂತೆ ನಡೆದು ಶಾಲೆಗಳ ಮಂಜೂರಾತಿಯನ್ನು ಉಳಿಸಿಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟು ಜಿಲ್ಲಾ ಬೋರ್ಡು ಡಿ. ಇ. ಓ. ರಾವ್ ಶ್ರೀ ಕೆ. ಸಂಜೀವ ಭಟ್ಟರವರು ಒಂದು ಭಾಷಣವನ್ನು ಕೊಟ್ಟರು

ಹರಿಜನ ಸಪ್ತಾಹ

ಎಲ್ಲೆಲ್ಲಿಯಂತೆ ಇಲ್ಲಿಯೂ ಸ್ಥಳೀಯ ಹರಿಜನ ಸೇವಾಸಂಘದ ಕಡೆಯಿಂದ ಹರಿಜನವಾರವು ಆಚರಿಸಲ್ಪಟ್ಟು, ಸಭೆ, ಭಾಷಣ, ಹಣ ಸಂಗ್ರಹ, ಇತ್ಯಾದಿ ಕಾರ್ಯಕ್ರಮಗಳು ನಡೆದಿವೆ.

ಉಡುಪಿ

ಏಯಿಡೆಡ್ ಶಾಲಾ-ಉಪಾಧ್ಯಾಯರ ಸಭೆ

ಉಡುಪಿ ಮೋಡೆರ್ನ ಹಾ। ಎ। ಶಾಲೆಯಲ್ಲಿ ಶ್ರೀ ಮಾಲಿಕ್ಕಿ ನಾರಾಯಣಾಚಾರ್ಯರ ಅಧ್ಯಕ್ಷತೆಯಿಂದ ಜರಗಿತು. ಟ್ರೈನಿಂಗ್ ಆಗದ ಮತ್ತು

[೧೧ನೇ ಪುಟವನ್ನು ನೋಡಿ]

ಗಾಂಧಿಜಿ ಸತ್ಯಾಗ್ರಹದ ವಿಷಯದಲ್ಲಿ ತೃಪ್ತಿಗೊಂಡಿರುವರು

ಚರ್ಚಿಲರು ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದ ಮೇಲೆ, ಭಾರತದ ರಾಜಕೀಯ ಮುಖಂಡರೆಲ್ಲರಿಗೂ ಬಹಳ ಸಂತಾಪವಾಗಿದೆ, ಗಾಂಧಿಜಿಯವರ ಸತ್ಯಾಗ್ರಹ ಸಮರವು ಸಾಗುತ್ತಲಿದೆ. ಕೃಪಾಲನಿ ತಿಳಿಸುವಂತೆ ಗಾಂಧಿಜಿಯು ಇದುವರೆಗಿನ ಸತ್ಯಾಗ್ರಹ ರೀತಿ ನೀತಿಗಳಿಂದ ಸಂಪೂರ್ಣ ತೃಪ್ತರಾಗಿರುವರೆಂದು ಗೊತ್ತಾಗುತ್ತದೆ. ಮದ್ರಾಸು ಪ್ರಾಂತದ ಸ್ಥಳೀಕ ಸಂಸ್ಥೆಗಳ ಸದಸ್ಯತ್ವದ ಅವಧಿ ಬರುವ ಎಪ್ರಿಲ್ ವರೆಗೆ ಮುಂದುವರಿಸಲಾಯಿತು. ಡಾ ರಾಜನರು ತ್ರಿಚಿನಾಪಳ್ಳಿಯಿಂದ ಬಿಡುಗಡೆ ಹೊಂದಿ ಬಂದವರು ರಾಜಾಜಿ ಬೇಗನೇ ಬಿಡುಗಡೆ ಹೊಂದಿ, ಬಂದವರು ವರ್ಧಾಕ್ಕೆ ತೆರಳುವರೆಂದೂ ಆ ಮೇಲೆ ಮಹತ್ವದ ನಿರ್ಣಯವಾಗುವುದೆಂದೂ ಹೇಳಿದರು. ಭುಲಾಬಾಯಿ ಆರೋಗ್ಯ ಹೊಂದುತ್ತಾರೆ. ಕೃಪಾಲನಿ ಕರ್ನಾಟಕ ಪ್ರವಾಸದಲ್ಲಿದ್ದಾರೆ

ರಾಜೇಂದ್ರ ಪ್ರಸಾದರಿಗೆ ಶಾರ್ದೂಲ ಸಿಂಗರ ಪತ್ರ

ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಆಲೋಚಿಸುವುದಕ್ಕಾಗಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಯನ್ನು ಕೂಡಿಸಲು ತಾವು ಸಮ್ಮತಿ ಕೊಡಬೇಕೆಂದು ವರ್ಧಾದಲ್ಲಿ ಈಗ ವಿಶ್ರಾಂತಿಯಿಂದಿರುವ ರಾಜೇಂದ್ರ ಪ್ರಸಾದರಿಗೆ ಶಾರ್ದೂಲ ಸಿಂಗರು ಒಂದು ಪತ್ರ ಬರೆದಿರುವರೆಂದು ತಿಳಿದು ಬಂದಿದೆ

ಸಿಂಧ ಮಂತ್ರಿಮಂಡಳಕ್ಕೆ ಕಾಂಗ್ರೆಸಿನವರು ಬೆಂಬಲ ಕೊಡಬೇಕು

ಗಾಂಧಿಜಿ ಸಮ್ಮತಿಸಿದರು

ಖಾ! ಬ| ಅಲ್ಲಾಭಕ್ಷ ಮತ್ತು ಆರ್. ಕೆ ಸಿಧ್ವರು ಸಿಂಧ ಅಸೆಂಬ್ಲಿಯ ವಿಷಯ ಮಾತನಾಡುವರೆ ಗಾಂಧಿಜಿಯವರಲ್ಲಿಗೆ ತೆರಳಿದ್ದು ರಾಷ್ಟ್ರಪತಿ ಅಜಾದರ ಅಭಿಪ್ರಾಯವನ್ನು ಗಾಂಧಿಜಿ ಒಪ್ಪಿ ಕಾಂಗ್ರೆಸ್ ಪಕ್ಷದವರು ಅಲ್ಲಾಭಕ್ಷ ಮಂತ್ರಿಮಂಡಳದೊಡನೆ ಸಹಕರಿಸುವರೆ ಸಮ್ಮತಿಸಿರುವರಂತೆ.

ಕೇಂದ್ರ ಅಸೆಂಬ್ಲಿಯಲ್ಲಿ ರಣವು

ಸರ್ದಾರ ಸಂತ ಸಿಂಗರು, ಬರುವ ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ, ವೈಸರಾಯರ ಯುದ್ಧ ಸಲಹೆಯ ಮಂಡಳಿ, ಪ್ರಯೋಜನವಿಲ್ಲವೆಂಬ ಠರಾವು ಮಂಡಿಸುವರೆ ಕಳುಹಿಸಿರುವರೆಂದು ತಿಳಿದಿದೆ.

ವೈಸರಾಯರ ಅವಧಿ ಹೆಚ್ಚಿತು

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರ ಅಧಿಕಾರಾವಧಿ ಎಪ್ರಿಲ್ ೧೯೪೨ ರಿಂದ, ಎಪ್ರಿಲ್ ೧೯೪೩ ನೆಯ

ಆಚಾರ್ಯ ಕೃಪಾಲನಿ ವಿವರಿಸಿದರು

ಸಾವರ್ಕಾರರು ತಿರುಗಿ ರೂಸ್‌ವೆಲ್ಟರೊಡನೆ ಪ್ರಶ್ನಿಸುತ್ತಾರೆ! ಚರ್ಚಿಲ್ ವಿವರಣೆಯ ಬಗ್ಗೆ ಅಸಮಾಧಾನ

ವರ್ಷದ ವರೆಗೆ ಮುಂದುವರಿಸಲಾಗುವುದು ಎಂದು ಬ್ರಿಟನಿನ ಮುಖ್ಯ ಮಂತ್ರಿಗಳ ನಿವಾಸಸ್ಥಾನದಿಂದ ಪ್ರಕಟಿಸಲಾಯಿತು.

ಕಮಲಾದೇವಿಯರ ಆಗಮನ

ಅಮೆರಿಕ, ಜಪಾನು, ಚೀನಗಳನ್ನು ಸಂದರ್ಶಿಸಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಕೊಲೊಂಬೋದಲ್ಲಿ ಬಂದಿಳಿದಿರುವರು.

ರೂಸ್‌ವೆಲ್ಟರೊಡನೆ ಸಾವರ್ಕಾರರ ಪ್ರಶ್ನೆ

ಯುದ್ಧದ ಧ್ಯೇಯವೇನು?

ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಸಾವರ್ಕಾರರು ಬ್ರಿಟಿಷ್ ಅಮೆರಿಕನ್ ಪತ್ರಿಕೆಗಳಿಗೆ ಕೆಳಗಿನಂತೆ ಒಂದು ತಂತಿಕೊಟ್ಟಿರುವರು

"ಅಟ್ಲಾಂಟಿಕ ಘೋಷಣೆಯ ಮೇಲಿದ್ದ ಮುಸುಕನ್ನು ಚರ್ಚಿಲರು ತನ್ನ ಕೈಯಿಂದ ತೆಗೆದು ಹಾಕಿ ಬ್ರಿಟಿಷರ ಹೊರತು ಉಳಿದವರ ಆಕ್ರಮಣಗಳನ್ನು ತಡೆಯುವುದು ಹಾಗೂ ಹಿಂದೂಸ್ಥಾನದ ಉದ್ಧಾರದ ಹೊರತು ಉಳಿದವರ ಉದ್ಧಾರ ಮಾಡುವುದು ಯುದ್ಧಧ್ಯೇಯವೆಂದು ಸಾರಿದರು ಇನ್ನು ಅಧ್ಯಕ್ಷ ರೂಸ್‌ವೆಲ್ಟರು ಚರ್ಚಿಲರ ಈ ಹೇಳಿಕೆಯನ್ನು ನಿರಾಕರಿಸುವರೋ ಅಥವಾ ಒಪ್ಪುವರೋ ನೋಡಬೇಕಾಗಿದೆ"

ಅಂತರ್ ರಾಷ್ಟ್ರೀಯ ಕೆಲಸಗಾರರ ಪರಿಷತ್ತಿಗೆ ಪ್ರತಿನಿಧಿ

ಶ್ರೀ. ಎನ್. ಎಂ. ಜೋಶಿ. ನ್ಯೂಯಾರ್ಕಿನಲ್ಲಿ ಸೇರಲಿರುವ ಅಂತರ್ ರಾಷ್ಟ್ರೀಯ ಕೆಲಸಗಾರರ ಪರಿಷತ್ತಿನ ಶ್ರೀ. ಎನ್. ಎಂ ಜೋಶಿಯವರು ಹೋಗಲಿರುವರೆಂದು ತಿಳಿದಿದೆ.

ಡಿಪ್ಯುಟಿ ಕಮಿಶನರು ಕ್ಷಮೆ ಬೇಡಿದರು

ನೆಹರುಗಳನ್ನು ನಿಂದಿಸಿದ್ದಕ್ಕೆ

ನಾಗಪುರದ ಡಿಪ್ಯುಟಿ ಕಮಿಶನರು ಯುದ್ಧ ಕಮಿಟಿಯ ಸಭೆಯಲ್ಲಿ ಮಾತನಾಡುತ್ತಾ ನೆಹರುಗಳನ್ನು ದೇಶದ್ರೋಹಿ ವಂಚಕರೆಂದು ಹೇಳಿದರು; ಸಭೆಯಿಂದ ಅವರಿಗೆ ಜೋಡುಗಳ, ಕಸಬರಿಕೆಗಳ, ಕಲ್ಲುಗಳ ಪ್ರಸಾದ ದೊರಕಿತು. ಕಡೆಗೆ ನೆಹರುಗಳ ಗೌರವ ಕಡಿಮೆ ಮಾಡಲು ತಾನು ಉದ್ದೇಶಿಸಿಲ್ಲವೆಂದು ಅವರು ಕ್ಷಮೆಬೇಡಿದರು.

ಕೇಂದ್ರ ಅಸೆಂಬ್ಲಿ ಅಧಿವೇಶನ

ಕಾಂಗ್ರೆಸು ಸದಸ್ಯರು ಹೋಗಬಹುದೆ?

ಎಂಬ ವಿಚಾರವು ಇನ್ನೂ ಆಗುತ್ತಲಿದೆ. ತಮ್ಮ ಸದಸ್ಯತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಮಾತ್ರ ಹೋಗಬಹುದೆಂದೂ, ಆದರೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸ ಕೂಡದೆಂದೂ ಅವರು ಕಾಂಗ್ರೆಸ್ ಕಡೆಯ ಕೇಂದ್ರ ಅಸೆಂಬ್ಲಿ ಸದಸ್ಯರಿಗೆ ಒಪ್ಪಿಗೆ ದೊರಕಿದೆಯೆಂದೂ ಸುದ್ದಿಯಿದೆ.

ವಿದ್ಯಾರ್ಥಿಗಳಿಗೆ ಕೃಪಾಲಿನಿ ಉಪದೇಶ

ಶೀಲವಂತರು ಶಕ್ತಿಶಾಲಿಗಳಾಗಬೇಕು: ಜಾಣರಾಗದಿದ್ದರೂ ಅಡ್ಡದಾರಿ ಹಿಡಿಯಬಾರದು.

ವಿದ್ಯಾರ್ಥಿಗಳು ಯಾವ ಪಕ್ಷವನ್ನು ಸೇರಬಾರದು. ಎಲ್ಲವನ್ನು ವಿಚಾರಿಸಿ ಕಾರ್ಯಕ್ರಮ ಮಾಡಬೇಕು ಅವರು ಜಾಣರಾಗದಿದ್ದರೂ ಅಡ್ಡದಾರಿ ಹಿಡಿಯಬಾರದು ಅವರಲ್ಲಿ ಶಕ್ತಿ ಇರಬೇಕು. ಅಂತರ್‌ರಾಷ್ಟ್ರೀಯ ರಾಜಕಾರಣದಲ್ಲಿ ತಲೆ ಕೆದರಬೇಡಿ, ಅದು ನಿಜವಾಗಿ ಗೊತ್ತಿರುವವನು ಹಿಟ್ಲರನೊಬ್ಬನೆ. ಚರ್ಚಿಲ್, ಮುಸಲನಿ, ಸ್ಟಾಲಿನ್ ಇವರಾರೂ ಅದನ್ನು ತಿಳಿದಿಲ್ಲ. ಇಂಗ್ಲೆಂಡಿನ ಎಲ ವಂಗಡದ ರಾಜಕಾರಣಿಗಳ ಹೃದಯದಲ್ಲಿಯೂ ಪೇಸಿಸಂ ತುಂಬಿದೆ. ನೀವು ಕ್ರಾಂತಿ ವಿಷಯ ಮಾತನಾಡಬಹುದು, ಇಂದಿನ ಕಾಲದ ನಿಜವಾದ ಕ್ರಾಂತಿ ಪುರುಷ ಗಾಂಧಿಜಿ. ನಮ್ಮ ದೇಶದ ರಾಜಕಾರಣಿಗಳು ತ್ಯಾಗ ವೀರರು. ನಮಗೆ ಸುಖವಿಲ್ಲ. ಮಹಾತ್ಮರೆನ್ನು ನಾವು ಅನೇಕ ಸಲ ದೂರ ಮಾಡಿದೆವು - ಆದರೆ ಅವರನ್ನು ಬಿಟ್ಟು ಪಶ್ಚಾತ್ತಾಪವಾಯಿತು. ನಮಗೆ ಮಹಾತ್ಮರನ್ನು ಬಿಟ್ಟರೆ ಗತ್ಯಂತರವಿಲ್ಲ. ವಿದ್ಯಾರ್ಥಿಗಳು ಒಂದು ಉದ್ಯೋಗ ಸಂಪಾದಿಸಿ, ಸುಂದರ ಹೆಂಡತಿ ಕೈಹಿಡಿದು, ಮಕ್ಕಳನ್ನು ಹುಟ್ಟಿಸುವ ವಿಚಾರ ಮಾಡುವರು, ನಮ್ಮ ದೇಶದಲ್ಲಿ ಕೈಗಾರಿಕೆಗಳು ನಾಶವಾದರೂ ಈ ಮಕ್ಕಳನ್ನು ಹುಟ್ಟಿಸುವ ಕೈಗಾರಿಕೆ ನಾಶವಾಗಿಲ್ಲ. ನಾವು ವಿದ್ಯಾರ್ಥಿಗಳ ವಿಚಾರ ವರುಷವಾಗಿ ಮಾತನಾಡುತ್ತೇನೆ ಅವರು ವಿಚಾರಿಸಲೇಕೆಂದು ನೀವು ಮಹಾತ್ಮರನ್ನು ಹಿಂಬಾಲಿಸಬೇಕು, ನಿರಕ್ಷರತೆಯನ್ನು ಹೋಗಲಾಡಿಸಬೇಕು. ಜಾತಿಐಕ್ಯತೆ ಸಾಧಿಸಬೇಕು. ಹೀಗೆಂದು ಧಾರವಾಡದಲ್ಲಿ ಅವರು ಭಾಷಣವಿತ್ತರು.

ಸಿಂಧ ಕಾಂಗ್ರೆಸಿನವರು ಸತ್ಯಾಗ್ರಹ ಮಾಡಕೂಡದು

ಸದ್ಯದ ಸಿಂಧದ ಪರಿಸ್ಥಿತಿಯನ್ನು ನೋಡಿದ್ದರೆ ಅಲ್ಲಿನ ಕಾಂಗ್ರೆಸಿನವರು ಸತ್ಯಾಗ್ರಹ ಮಾಡಕೂಡದೆಂದು ಅವರಿಗೆ ಗಾಂಧಿಜಿ ತಿಳಿಸಿರುವರಂತೆ. ಮೌಲಾನ ಅಜಾದರು ಈ ಅಭಿಪ್ರಾಯವನ್ನು ಮೊದಲೇ ಹೇಳಿದ್ದನ್ನು ಗಾಂಧಿಜಿ ಈಗ ಒಪ್ಪಿರುವರೆಂದು ಹೇಳಲಾಗಿದೆ.

ಯಾವಾಗಲೂ ಆತನು ಉತ್ಸಾಹ ಹೀನನಾಗಿದ್ದನು.

★ ಶರೀರದೊಳಗಡೆ ನಿರ್ಮಲವಾದುದರಿಂದ ಆತನು ಉತ್ತಮ ಸ್ಕೌಟಾದನು' ★

ಅದ್ವಿತೀಯ ಸ್ಕೌಟ್ ಆಗಬೇಕಾಗಿದ್ದರೆ, ನೀವು ಶಕ್ತಿ ಮತ್ತು ಆರೋಗ್ಯಶಾಲಿಗಳಾಗಿರಬೇಕು. ಆದ್ದರಿಂದ ನಿಮ್ಮ ಶರೀರದೊಳಭಾಗವು ನಿತ್ಯ ಶುಚಿಯಾಗಿರುವುದು ಅತ್ಯಂತ ಅವಶ್ಯವೆಂದು ನೆನಪಿನಲ್ಲಿಡಿರಿ. ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿಟ್ಟರೆ, ಅಶುದ್ಧ ವಸ್ತುಗಳು ಹೊಟ್ಟೆಯೊಳಗೆ ಸೇರಿ ನಿಮ್ಮ ಆರೋಗ್ಯವು ಹಾಳಾಗಲಾರದು ನಿಮ್ಮ ಮೆದುಳು ಮತ್ತು ಶರೀರಗಳ ಶಕ್ತಿಗಳು ಕುಂದಲಾರವು' ದಿನನಿತ್ಯ ಒಂದು ಗ್ಲಾಸು ತಂಪುಕೊಡುವ ಅಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ ಮಲಬದ್ಧತೆಯು ಬರಲಾರದು, ಹಾಗಾಗಿ ಮತ್ತೆ ದೇಹದೊಳಗಿನ ಕೊಳೆಯು ಉಳಿಯಲಾರದು. ಶರೀರವು ನಿರ್ಮಲವಾಗಿರುವುದು. ದೇಹವು ಶಕ್ತಿಗೊಳ್ಳುವುದು.

ಅಂತರಂಗ ನೈರ್ಮಲ್ಯಕ್ಕೆ ದಿನನಿತ್ಯವೂ ನೀವು ಅಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿರಿ.

ANDREWS LIVER SALT



ಆರೋಗ್ಯಕರ ಮತ್ತು ಶುಚಿಕರ ಪಾನೀಯ ಶುದ್ಧವಾದ ತಂಪುಕರ, ಮತ್ತು ಹಿತಕರ ಆನಂದಕರವಾದುದು.

ಸಣ್ಣ ಸೈಜಿಗೆ ಆ. 11

ದೊಡ್ಡ ಸೈಜಿಗೆ ರೂ. 1-4-0.

ಕೀವ್ ನಗರವು ರಶ್ಯನರ ಕೈಬಿಟ್ಟಿತು!

ಲೆನಿನ್‌ಗ್ರಾಡಿನ ಸುತ್ತು ಚಕ್ರವ್ಯೂಹ

ಬಲ್ಗೇರಿಯವು ರಶ್ಯವನ್ನು ಆಕ್ರಮಿಸುವರೆ ಹಿಟ್ಲರ್ ಒತ್ತಾಯ? ಅಮೇರಿಕವು ತಾಟಸ್ಥ್ಯನೀತಿ ಮುರಿಯುವುದೆ?

ರಶ್ಯದ ಭೀಕರ ಕಾಳಗದಲ್ಲಿ ಕೀವ್ ಪಟ್ಟಣವೊಂದು ಜರ್ಮನರ ಸ್ವಾಧೀನವಾಯಿತು. ಲೆನಿನ್‌ಗ್ರಾಡಿನ ಸುತ್ತು ಜರ್ಮನ್ ಚಕ್ರವ್ಯೂಹವು ಬಲವಂತಾಗಿ ಬಿಗಿದಿದೆ. ರಶ್ಯನರು ಜೀವ ಹಿಡಿದು ಹೋರಾಡುತ್ತಿರುವರು. ಬಲ್ಗೇರಿಯದ ಮೇಲೆ ಜರ್ಮನರು ಒತ್ತಾಯ ಹಾಕಿ ರಶ್ಯದೊಡನೆ ಯುದ್ಧ ಸಾರುವಂತೆ ಪ್ರೇರೇಪಿಸಿದ್ದಾರೆ. ಅದರ ಪೂರ್ಣ ನಿರ್ಣಯವಾಗಿಲ್ಲ. ಒಡೆಸ್ಸಾದ ಕಾಳಗದ ರಶ್ಯನರು ಶಸ್ತ್ರಗಳನ್ನು ಹಿಂದೇ ಹಾಕಿದರಂತೆ. ಫಿನ್ಲೆಂಡು ರಶ್ಯದ ಮೇಲೆ ಧಾಳಿಮಾಡುವ ವಿಷಯದಲ್ಲಿ ಬ್ರಿಟನ್ನು ಅದನ್ನು ಎಚ್ಚರಿಸಿದೆ. ಅಮೆರಿಕವು ತಾಟಸ್ಥ್ಯವನ್ನು ಮುರಿದು ಯುದ್ಧಕ್ಕಿಳಿಯಬೇಕೆಂದು ಅಲ್ಲಿನ ಕೆಲವು ಮುಖಂಡರು ವಾದಿಸುತ್ತಿದ್ದಾರೆ

ಇರಾಣ್ ಶಾರ ರಾಜತ್ಯಾಗದಿಂದ ಗಡಿಬಿಡಿ

ಇರಾಣ್ ಶಾರ ರಾಜತ್ಯಾಗದಿಂದ ಇರಾಣಿನಲ್ಲಿ ಆಶ್ಚರ್ಯ ಗಡಿಬಿಡಿಗಳು ಹುಟ್ಟಿವೆಯೆಂದೂ ಬ್ರಿಟಿಷ್ ರಶ್ಯನ್ ಸೈನ್ಯಗಳು ಗಡಿಬಿಡಿ ಕಡಿಮೆ ಮಾಡಲು ಯತ್ನಿಸುತ್ತಿವೆಯೆಂದು ಸುದ್ದಿ. ರಾಜತ್ಯಾಗ ಮಾಡಲು ಬ್ರಿಟಿಷ ರಾಯಭಾರಿಯೇ ಸೂಚಿಸಿದನಂತೆ. ಕೆಲವು ಅನಿರೀಕ್ಷಿತ ಘಟನೆಗಳಾಗುವ ಸಂಭವವಿದೆಯೆಂದು ಹೇಳಲಾಗಿದೆ

ಕ್ರಿಮಿಯದ ಕಡೆಗೆ ಜರ್ಮನ ಧಾಳಿ?

ಕ್ರಿಮಿಯದಲ್ಲಿರುವ ರಶ್ಯನ್ ಸೈನ್ಯಗಳನ್ನು ಮುರಿದಿಕ್ಕಲು ಅಸಂಖ್ಯಾತ ಜರ್ಮನ್ ವಿಮಾನಗಳು ಆಕಾಶದಲ್ಲಿ ಕೆರೆಗಳಂತೆ ಮಾರಾಡುತ್ತಿವೆಯೆಂದು ತಿಳಿದುಬಂದಿದೆ.

ಡಾರ್ಡನೆಲ್ಸ್ ಮೇಲೆ ಧಾಳಿ?

ಜರ್ಮನರು ಇನ್ನೂ ಕೆಲಸಮಯಗಳಲ್ಲಿ ಡಾರ್ಡನೆಲ್ಸ್ ಮತ್ತು ಬಾಸ್ಪರಸ್‌ಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಧಾಳಿ ಮಾಡುವರೆಂದು ಊಹೆಯಿದೆ.

ಸೆಯಾಮ್ ಯುದ್ಧದಲ್ಲಿ ಸೇರುವುದೆ?

ಗಂಭೀರ ಪರಿಸ್ಥಿತಿ

"ಪರಿಸ್ಥಿತಿ ಗಂಭೀರವಾಗಿದೆ ಸಯಾಮೂ ಯುದ್ಧದಲ್ಲಿ ಸೇರುವಂತಹ ಪರಿಸ್ಥಿತಿಯೊದಗಿದೆ." ಎಂದು ಅಲ್ಲಿನ ಮುಖ್ಯ ಮಂತ್ರಿ ಫೀಲ್ಡ್ ಮಾರ್ಶಲ್ ಲಿವ್ಸಾಂಗ್ ಪಿಬುಲ್‌ಗೆಂಗ್ರಾ ಹೇಳಿದರು.

ಯುಕ್ರೇನ್ ರಣಭೂಮಿಯಲ್ಲಿ ಪ್ರಳಯ ದೃಶ್ಯ!

ರಶ್ಯನರೊಡನೆ ಕೈಕೈ ಕಾಳಗ

ಜರ್ಮನ್ ವಿಮಾನಗಳು ಉಗ್ರ ಧಾಳಿಗೆ ಪ್ರಾರಂಭಿಸಿವೆ. ಲೆನಿನ್ ಗ್ರಾಡಿನ ಉಪನಗರಗಳು ಉರಿಯುತ್ತಿವೆಯಂತೆ ರಶ್ಯನ್ ಮತ್ತು ಜರ್ಮನ್ ಸೈನಿಕರಿಗೆ ಕೈಕೈ ಹೋರಾಟವೂ ನಡೆಯಿತು. ಲೆನಿನ್‌ಗ್ರಾಡಿನ ಸುತ್ತಲೂ ಅತ್ಯಂತ ಭೀಷಣ ಕಾಳಗವಾಗುತ್ತಿದೆ ಜಗತ್ತು ಹಿಂದೆಂದೂ ಕಂಡಿರದಂಥಾ ಭೀಕರ ಕಾಳಗವಿಂದು ರಶ್ಯದ ರಣಭೂಮಿಯಲ್ಲಿ ಆಗುತ್ತಿದೆ. ಕೀವಿನಿಂದ ಉತ್ತರದಿಂದ ಕಪ್ಪುಸಮುದ್ರದ ವರೆಗೆ ಇರುವ ವಿಶಾಲವಾದ ರಣಭೂಮಿಯಲ್ಲಿ ರಶ್ಯನರನ್ನು ಸೋಲಿಸುವುದಕ್ಕಾಗಿ ಜರ್ಮನರು ರುಮೇನಿಯನರು ಮತ್ತು ಹಂಗೇರಿಯಾನರು ತಮ್ಮಲ್ಲಿರುವ ಎಲ್ಲಾ ಬಗೆಯ ಯುದ್ಧ ಸಾಧನಗಳಿಂದ ಸಜ್ಜಿತರಾಗಿ ಮುನ್ನುಗ್ಗುತ್ತಿರುವರು. ಕೀವ್ ಮತ್ತು ಒಡೆಸ್ಸಾಗಳೆರಡರ ಮೇಲೂ ಭಯಂಕರ ಗಂಡಾಂತರ ಬಂದಿದೆ. ಕೀವ್ ಪಟ್ಟಣದ ಪತನವಾಗುವುದು ಖಂಡಿತವೆಂದು ಹೇಳಲಾಗಿದೆ. ಕೀವ್ ಪಟ್ಟಣದ ಸುತ್ತೆ ಲಕ್ಷ ರಶ್ಯನರು ಸಿಕ್ಕಿಬಿದ್ದಿರುವರೆಂದು ಪ್ರಕಟಿಸಲಾಗಿದ ಮರ್ಮನಸ್ಕ್ ಭಾಗದ ಹೋರಾಟದಿಂದ ಜರ್ಮನರಿಗೂ ವಿಪರೀತ ಹಾನಿಯಾಗಿದೆಯಂತೆ. ಹೆಣದ ರಾಶಿಯಿಂದ ಮುರಿದು ಬಿದ್ದ ಟೇಂಕ್ ಫಿರಂಗಿಗಳ ರಾಶಿಯಿಂದ ಯುಕ್ರೇನ್ ರಣಭೂಮಿಯು ಪ್ರಳಯ ಕಾಲದ ದೃಶ್ಯವಾಗಿರುವುದಂತೆ. ರಶ್ಯನರು ಜೀವದಾಸೆ ತೊರೆದು ಭಯಂಕರ ಧಾಳಿ ಮಾಡುತ್ತಿರುವರೆಂದು ತಿಳಿದಿದೆ. ಯುಕ್ರೇನ್ ರಣಭೂಮಿಯನ್ನು ಭೇದಿಸಿ ಕಾಕಸಸದ ಕಡೆಗೆ ಮುನ್ನುಗ್ಗಬೇಕೆಂದು ಹಿಟ್ಲರನು ಆಜ್ಞೆಯಿತ್ತಿರುವುದಾಗಿ ಸುದ್ದಿಯಿದೆ ಜರ್ಮನರು ಅದರಿಂದ ಅತಿ ರಭಸದಿಂದ ಮುನ್ನುಗ್ಗುತ್ತಿರುವರಂತೆ ಜರ್ಮನರು ಕೀವನ್ನು ಪ್ರವೇಶಿಸಿದರೆಂದು ತಿಳಿದಿದೆ.

ಫ್ರಾನ್ಸಿನಲ್ಲಿ ಜರ್ಮನ್ ಸೈನ್ಯ ಸಂಗ್ರಹ?

ಆಫ್ರಿಕೆಯಲ್ಲಿ ಯುದ್ಧವೆ?

ಜರ್ಮನ್ ಸೈನ್ಯಗಳು ತಂಡತಂಡವಾಗಿ ಫ್ರಾನ್ಸಿಗೆ ಹೋಗುತ್ತಿವೆಯೆಂದು ಸುದ್ದಿ. ಜರ್ಮನರಿಂದ ಆಕ್ರಮಿತವಾದ ಪ್ರದೇಶದಲ್ಲಿ ಮತ್ತು ವಿಚಿ ಸರಕಾರದ ಆಧೀನದಲ್ಲಿರುವ ಮಾರ್ಸೆಲ್ಸಿನಲ್ಲಿ ಅಸಂಖ್ಯಾತ ಸೈನ್ಯಗಳು ಸಂಗ್ರಹಿಸಲಾಗಿದೆಯಂತೆ. ಬಹುಶಃ ಇದೆಲ್ಲಾ ಚಳಿಗಾಲದಲ್ಲಿ ಆಫ್ರಿಕದಲ್ಲಿ ಯುದ್ಧ ಪ್ರಾರಂಭಿಸಲು ಸಿದ್ಧತೆಯಿರಬಹುದೇ ಎಂದು ಊಹಿಸಲಾಗಿದೆ. ವಿವರಗಳು ತಿಳಿದುಬರಲಿಲ್ಲ.

೨೦,೦೦೦ ಅಮೇರಿಕನರು ಮುಷ್ಕರ ಹೂಡಿದರು

ರಣಕ್ಷೇತ್ರದಲ್ಲಿ ತಾವು ಪ್ರವೇಶಿಸಬೇಕಾದರೆ ಹೆಚ್ಚಿನ ಸಂಬಳಕೊಡಬೇಕೆಂದು ಅಮೆರಿಕದ ನಾವಿಕ ಸಂಘದವರು ಕೇಳಿ ಮುಷ್ಕರ ಹೂಡಿದ್ದಾರೆ. ಇದರಲ್ಲಿ ಸುಮಾರು ೨೦,೦೦೦ ಮಂದಿ ಸೇರಿರುವರೆಂದು ತಿಳಿದು ಬಂದಿದೆ. ೧೧ ಹಡಗಗಳ ಪ್ರಯಾಣವು ಇದರಿಂದ ರದ್ದಾಗಿರುವುದಂತೆ.

ರಶ್ಯನರಿಗೆ ಕಡ್ಡಾಯ ಸೈನ್ಯ ಶಿಕ್ಷಣ

೧೬ ರಿಂದ ೫೦ ವರ್ಷದ ಒಳಗಿನವರೆಲ್ಲ

೧೬ ರಿಂದ ೫೦ ವರ್ಷದ ಒಳಗಿನವರೆಲ್ಲ ಕಡ್ಡಾಯ ಸೈನ್ಯ ಶಿಕ್ಷಣ ಪಡೆಯಬೇಕೆಂದು ರಶ್ಯ ಸರಕಾರವು ವಿಧಿಸಿರುವುದಾಗಿ ತಿಳಿದಿದೆ.

ಲೆನಿನ್‌ಗ್ರಾಡ್ ನುಗ್ಗಲು ಜರ್ಮನ್ ಸಾಹಸ!

ಕೀವ್‌ವ್ಯೂಹದಲ್ಲಿ ಜರ್ಮನ್ ಪ್ರವೇಶ?

ಲೆನಿನ್‌ಗ್ರಾಡನ್ನು ಪ್ರವೇಶಿಸಲು ಜರ್ಮನರು ಭಗೀರಥ ಪ್ರಯತ್ನ ಮಾಡುತ್ತಿರುವರು' ಹಗಲಿರುಳು ಆ ಭಾಗದಲ್ಲಿ ಕಾಳಗ ನಡೆಯುತ್ತಿದೆ. ಲೆನಿನ್‌ಗ್ರಾಡಿನ ಉತ್ತರದಲ್ಲಿ ಫಿನ್ಲೆಂಡು ಸೈನ್ಯಗಳೂ ಮುನ್ನುಗ್ಗುತ್ತಿವೆಯಂತೆ

ಜರ್ಮನರು ಎಚ್ಚರಿಕೆಯಿತ್ತರು

ಲೆನಿನ್‌ಗ್ರಾಡ್ ನಾಗರಿಕರು ಇನ್ನು ಮುಂದೆ ಹೋರಾಟ ನಿಲ್ಲಿಸಿ, ಲೆನಿನ್‌ಗ್ರಾಡನ್ನು ಒಪ್ಪಿಸದಿದ್ದರೆ ಅದನ್ನು ನಿರ್ನಾಮ ಮಾಡುವುದಾಗಿ ಜರ್ಮನ್ ಪ್ರಕಟಣೆಗಳು ಸಾರಿವೆ

ಅಮೆರಿಕದ ಸಹಾಯಕ್ಕೆ ಹಿಂದೂಸ್ಥಾನದಿಂದ ಸಾಮಗ್ರಿ ಪಡೆಯಲು ರೂಸ್‌ವೆಲ್ಟರ ಜನ ಬಂದಿದೆ

ಅಮೆರಿಕ ಬ್ರಿಟಿಷ್ ಸಾಮ್ರಾಜ್ಯಗಳಿಗೆ ಯುದ್ಧಕಾರ್ಯದಲ್ಲಿ ಹೆಚ್ಚಿನ ಸಾಮಗ್ರಿ ಪಡೆಯಲು ಹಿಂದೂದೇಶಕ್ಕೆ ಡಾ| ಹೆನ್ರಿ ಗ್ರೇಡ್ ಎಂಬವರನ್ನು ರೂಸವೆಲ್ಟರು ಕಳುಹಿಸಿರುವರು. ಅವರು ಕಲ್ಕತ್ತೆಗೆ ಬಂದಿದ್ದಾರೆ. ಹಿಂದುಸ್ಥಾನದಲ್ಲಿ ಕೃಷಿ ಮತ್ತು ಖನಿಜ ಸಂಪತ್ತು ಹೆಚ್ಚಿದ್ದು ಆ ಬಗ್ಗೆ ಯುದ್ಧಕ್ಕೆ ಹೆಚ್ಚಿನ ಬೆಂಬಲವು ಆ ಮೂಲಕ ದೊರೆಯುವ ವಿಷಯವಾಗಿ ಇವರು ವಿಚಾರಮಾಡುವರು. ಅವರು ಈಗಾಗಲೇ ಅಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿರುವರು.

ಅಮೆರಿಕದಿಂದ ರಶ್ಯಕ್ಕೆ ೧೦ ಕೋಟಿ ಡಾಲರು ಸಾಲ

ಯುದ್ಧದ ಸಲುವಾಗಿ ರಶ್ಯವು ಅಮೆರಿಕದಿಂದ ಸಾಲ ತೆಗೆಯಬೇಕಾಯಿತು. ಈಗಾಗಲೇ ಅಮೆರಿಕವು ೧೦ ಕೋಟಿ ಡಾಲರು ಸಾಲಕೊಟ್ಟಿರುವುದಾಗಿ ತಿಳಿದು ಬಂದಿದೆ.

ಅಮೆರಿಕದ ಹಡಗು ಸೈನ್ಯವು ಕಾರ್ಯರಂಗಕ್ಕಿಳಿಯಿತು

ಕಡ ಒತ್ತಿ ಕಾಯಿದೆ ಪ್ರಕಾರ ಅಮೆರಿಕದಿಂದ ಅಯಿಸ್ ಲೆಂಡಿನ ವರೆಗೆ ಸಾಮಾನುಗಳನ್ನು ಒಯ್ಯುವ ಅಮೆರಿಕನ್ ಹಡಗಗಳನ್ನು ಸಂರಕ್ಷಿಸುವುದಕ್ಕಾಗಿ ಅಮೆರಿಕದ ಅಟ್ಲಾಂಟಿಕ್ ಹಡಗು ಸೈನ್ಯವು ಹೊರಡಿತು ಇದು ಬ್ರಿಟನಿಗೆ ಸಾಮಾನು ಒಯ್ಯುವ ಹಡಗುಗಳನ್ನು ಸಂರಕ್ಷಿಸುವುದಕ್ಕಾಗಿಯೇ ಹೊರಟಿದೆಯೆಂದು ತಿಳಿದಿದೆ.

ಅಮೆರಿಕದ ಈ ಧೋರಣೆಯ ಬಗ್ಗೆ ಅನೇಕ ತರದ ಊಹಾಪೋಹೆಗಳು ಎದ್ದಿವೆ. ಜರ್ಮನಿಯ ಜಲಾಂತರ್ಗಾಮಿ ನಾವೆಗಳನ್ನು ಕಂಡಕೂಡಲೇ ಅವುಗಳಿಗೆ ಹೊಡೆಯಬೇಕೆಂದು ರೂಸ್‌ವೆಲ್ಟರು ಹೇಳಿದ್ದಾರೆ ನೌಕಾ ಮಂತ್ರಿ ಕರ್ನಲ್ ನೌಕ್ಸರೂ ಈ ವಿಷಯ ಸಾರಿದ್ದಾರೆ. ಈ ಬಗ್ಗೆ ಅಮೆರಿಕವು ಧೈರ್ಯದಿಂದ ಹೀಗೆ ಮುಂದಡಿಯಿಟ್ಟಿದೆಯೋ ಎಂದು ಹೇಳಲಾಗಿದೆ ಇವು ಸಶಸ್ತ್ರ ಹಡಗುಗಳಾಗಿವೆ. ಒಟ್ಟು ಇದರಲ್ಲಿ ೧೨೫ ಹಡಗುಗಳಿವೆಯಂತೆ. ಇದರಲ್ಲಿ ಒಟ್ಟು ೧೭ ಯುದ್ಧ ಹಡಗಗಳಿವೆಯೆಂದು ತಿಳಿದಿದೆ

"ಕೆಲವು ದಿನಗಳಿಂದ ನಡೆದ ಘಟನೆಗಳನ್ನು ನೋಡಿದರೆ ಅಮೆರಿಕವು ಯುದ್ಧರಂಗದ ಸಮೀಪ ಬರುತ್ತಿದೆಯೆಂದು ಅಮೆರಿಕನ್ ನೌಕಾ ಖಾತೆಯ ಅಧಿಕಾರಿಯೊಬ್ಬನು ಹೇಳಿದನು

ಜಪಾನ್ ಅಮೆರಿಕಾ ಒಪ್ಪಂದ?

ಇದು ಆಗಿದ್ದರೂ ಅದನ್ನು ತಿಳಿಸಲು ಕೆಲವು ಆಕ್ಷೇಪಗಳಿವೆಯೆಂದು ಹೇಳಲಾಗಿದೆ. ಈ ವಿಷಯ ಮುಂದೆ ಪ್ರಕಟವಾಗುವರಂತೆ

ನೀಪರ್ ನದಿಯಿಂದ ಜರ್ಮನ್ ಮುನ್ನಡೆ

ಜರ್ಮನರ ಕೆಲವು ಸೈನ್ಯಗಳು "ಲುಫ್ತವಫ್" ವಿಮಾನಗಳ ಸಹಾಯದಿಂದ ಯುಕ್ರೇನಿನಲ್ಲಿ ಯಶಸ್ವಿಯಾಗಿ ಧಾಳಿ ಮಾಡಿ ನೀಪರ್ ನದಿಯ ಮೇಲೆ ಮಹತ್ವದ ಕೋಟೆ ಕಟ್ಟಿರುವೆಂದು ಜರ್ಮನ್ ಪ್ರಕಟಣೆ ತಿಳಿಸಿದೆ.

ಫಿನ್ನರು ತೋಫಿನ ಮಳೆ ಸುರಿಸಿದ್ದರು

ವರ್ಮೋಸಾ ಆಕ್ರಮಣ

ಬಾಲ್ಟಿಕ್ ಸಮುದ್ರದಲ್ಲಿರುವ ಡಾಗೊ ಮತ್ತು ಆಸಿಲ್ ದ್ವೀಪಗಳ ಮಧ್ಯದಲ್ಲಿರುವ ವರ್ಮೋಸಾ ಎಂಬ ದ್ವೀಪವನ್ನು ಜರ್ಮನರು ಆಕ್ರಮಿಸಿದರೆಂದು ಸುದ್ದಿ ಆಲೋಟೋಸಟ್ಸ್ ಪ್ರಾಂತದಲ್ಲಿ ರಶ್ಯನರ ವಿರೋಧವನ್ನು ಸಂಪೂರ್ಣ ಕುಗ್ಗಿಸಲಾಗಿದೆಯಂತೆ. ಫಿನ್ನರ ತೋಫುಗಳು ಲೆನಿನ್ ಗ್ರಾಡಿನ ಮೇಲೆ ಗುಂಡಿನ ಮಳೆ ಕರೆದುವೆಂದು ತಿಳಿದಿದೆ. ಜರ್ಮನರು ಕರೆಟೂಪ್ ಮತ್ತು ಕ್ರೆಮೆನ್‌ಚಗ್ ಎಂಬ ಎರಡು ಊರುಗಳನ್ನು ಹಿಡಿದರಂತೆ.

“ಗಾಂಧಿ ಜಯಂತಿ”

ಮಂಗಳೂರಲ್ಲಿ ಕಾರ್ಯಕ್ರಮ

೨—೧೦—೪೧ರಲ್ಲು

೫ ಪೂ. ಗ.	ಪ್ರಭಾತ ಫೇರಿ
೭ ,,	ಧ್ವಜ ವಂದನೆ
೯ ,,	ಬಡಬಗ್ಗರಿಗೆ ಅಕ್ಕಿ ಹಂಚುವುದು ಮತ್ತು ಖಾದಿ ಮಾರಾಟ
೫.೩೦ ಅ. ಗ.	ಮೆರವಣಿಗೆ
೬-೩೦ ,,	ಸಾರ್ವಜನಿಕ ಸಭೆ (ಮೈದಾನಿನಲ್ಲಿ)

೩—೧೦—೪೧ರಲ್ಲು

೮ ಪೂ. ಗ.	ಖಾದಿ ಮಾರಾಟ
೨ ಅ. ಗ.	ನೂಲುವ ಸ್ಪರ್ಧೆ
೬-೩೦ ,,	ಸಾರ್ವಜನಿಕ ಸಭೆ (ಬತ್ತೇರಿಯ ಬಳಿ)

೪—೧೦—೪೧ರಲ್ಲು

೮ ಪೂ. ಗ.	ಖಾದಿ ಮಾರಾಟ
೨ ಅ. ಗ.	ಹಿಂದೀ ಭಾಷಣ ಸ್ಪರ್ಧೆ (ಗಣಪತಿ ಹೈಸ್ಕೂಲಿನಲ್ಲಿ)
೬ ,,	ಸಾರ್ವಜನಿಕ ಸಭೆ (ಕಂಕನಾಡಿಯಲ್ಲಿ)

೫—೧೦—೪೧ರಲ್ಲು

೮ ಪೂ. ಗ.	ಖಾದಿ ಮಾರಾಟ
೨ ಅ. ಗ.	ಕನ್ನಡ ಭಾಷಣ ಸ್ಪರ್ಧೆ (ಗಣಪತಿ ಹೈಸ್ಕೂಲಿನಲ್ಲಿ)
೬-೩೦ ,,	ಸಾರ್ವಜನಿಕ ಸಭೆ (ಮೈದಾನಿನಲ್ಲಿ)

೬—೧೦—೪೧ರಲ್ಲು

೮ ಪೂ. ಗ.	ಖಾದಿ ಮಾರಾಟ
೨ ಅ. ಗ.	ಸೂತ್ರಯಜ್ಞ
೬ ೩೦ ,,	ಸಾರ್ವಜನಿಕ ಸಭೆ (ಹೊಗೆ ಬಜಾರಿನಲ್ಲಿ)

೭—೧೦—೪೧ರಲ್ಲು

೮. ಪೂ. ಗ.	ಖಾದಿ ಮಾರಾಟ
೨ ಅ. ಗ.	ಸೂತ್ರಯಜ್ಞ
೬-೩೦ ,,	ಸಾರ್ವಜನಿಕ ಸಭೆ (ಉರ್ವ ಮೈದಾನಿನಲ್ಲಿ)

೮—೧೦—೪೧ರಲ್ಲು

೮ ಪೂ. ಗ.	ಖಾದಿ ಮಾರಾಟ
೨ ಅ.ಗ.	ಗ್ರಾಮ ಕೈಗಾರಿಕೆ ಪ್ರದರ್ಶನ
೬-೩೦ ,,	ಸಾರ್ವಜನಿಕ ಸಭೆ (ಮೈದಾನಿನಲ್ಲಿ)

ವಿ. ಸೂ: ಕನ್ನಡ ಹಿಂದೀ ಭಾಷಣ ಸ್ಪರ್ಧೆಗಳಲ್ಲಿ ಜಿಲ್ಲೆಯ ಯಾವತ್ತೂ ಮಹನೀಯರಿಗೂ ಮಹಿಳೆಯರಿಗೂ ಪ್ರವೇಶವಿದೆ ಇದಕ್ಕೆ ಪ್ರತ್ಯೇಕವಾಗಿ ಎರಡೆರಡು ಅಮೂಲ್ಯ ಬಹುಮಾನಗಳಿವೆ. ಗ್ರಾಮ ಕೈಗಾರಿಕೆಯ ಪ್ರದರ್ಶನಕ್ಕೆ ಜಿಲ್ಲೆಯ ಯಾವತ್ತೂ ಗ್ರಾಮ ಗುಡಿ ಕೈಗಾರಿಕೆಗಳವರು ತಮ್ಮ ಕೈಗಾರಿಕೆಗಳನ್ನು ಕಳುಹಿಸಿದರೆ ಪ್ರದರ್ಶಿಸಿ ಉತ್ತಮವಾದವುಗಳಿಗೆ ಬಹುಮಾನ ಪ್ರಶಸ್ತಿ ಪತ್ರಗಳು ಕೊಡಲಾಗುವುವು.

ಗಾಂಧಿ ಜಯಂತಿಯನ್ನು ಜಿಲ್ಲೆಯ ಎಲ್ಲಾ ಪೇಟೆ ಪಟ್ಟಣ ಹಳ್ಳಿ ಪಳ್ಳಿಗಳಲ್ಲಿಯೂ ಈ ವರ್ಷ ವಿಶೇಷ ವಿಜೃಂಭಣೆಯಿಂದ ಆಚರಿಸತಕ್ಕದ್ದು. ಗಾಂಧಿಜಿಯವರ ಜೀವನ ತತ್ವ ಸಂದೇಶಗಳನ್ನು ರಾಷ್ಟ್ರದ ಮೂಲೆ ಮೂಲೆಗಳಲ್ಲಿಯೂ ಸಾರುವುದು. ಮೇಲೆ ತೋರಿಸಿದ ಕಾರ್ಯಕ್ರಮಗಳಲ್ಲಿ ಅನುಕೂಲವಾದವುಗಳನ್ನು ಜಿಲ್ಲೆಯ ಬೇರೆಬೇರೆ ಭಾಗಗಳಲ್ಲಿ ಅನುಸರಿಸಬಹುದು. ರಚನಾತ್ಮಕ ಕಾರ್ಯಕ್ರಮಗಳಿಗೆ ಗಾಂಧಿ ಜಯಂತಿಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗಿ ಜಿಲ್ಲೆಯ ಎಲ್ಲಾ ದೇಶಾಭಿಮಾನಿಗಳಲ್ಲಿಯೂ ವಿನಂತಿಯಿದೆ. ಸಭೆ ಕಾರ್ಯಕ್ರಮಗಳನ್ನು ಮಾಡಿದ ವರದಿಯ ದ್ವಿಪ್ರತಿಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿಗೆ ಕಳುಹಿಸಿಕೊಡಬೇಕಾಗಿಯೂ ವಿನಂತಿಸಿಕೊಳ್ಳುತ್ತೇನೆ.

ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸು, ಮಂಗಳೂರು ೨೫—೯—೪೧

ಬಿ. ದಾಮೋದರ ಬಾಳಿಗ,
ಅಧ್ಯಕ್ಷ.

ಪ್ಲೇಗು

ಮಹಾಜನರಲ್ಲಿ ಹೇಳಿಕೆ.

ಮಂಗಳೂರು ನಗರದಿಂದ ಸರ್ವಸಾಮಾನ್ಯ ೧೨ ಮೈಲುಗಳ ದೂರವಿರುವ ಬಂಟ್ವಾಳದಲ್ಲಿ ಭಯಂಕರವಾದ ಪ್ಲೇಗು ಎಂಬ ಅಂಟುರೋಗವು ಹಬ್ಬಿರುವುದು. ಈ ಸಾಂಕ್ರಾಮಿಕ ರೋಗವು ಈ ನಗರದಲ್ಲಿ ಹಬ್ಬದಂತೆ ಮುಂಜಾಗ್ರತೆಯಿಂದಿರುವುದು ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ. ಒಂದು ರೋಗವು ತಗಲಿದ ನಂತರ ಅದನ್ನು ಗುಣಪಡಿಸಲು ಯತ್ನಿಸುವುದಕ್ಕಿಂತ ಆ ರೋಗವು ಬಾರದಂತೆ ಜಾಗ್ರತೆಯಿಂದಿರುವುದೇ ಉತ್ತಮ. ಆದುದರಿಂದ ಮಹಾಜನರು ಈ ಕೆಳಗೆ ಕಾಣಿಸಿದಂತೆ ಎಚ್ಚರಿಕೆಯಿಂದಿರುವುದು ಅಗತ್ಯ.

೧. ಈ ನಗರದಲ್ಲಿ ಯಾರಿಗಾದರೂ ಪ್ಲೇಗು ರೋಗವು ಅಕಸ್ಮಾತ್ತಾಗಿ ಅಂಟಿದರೆ ಅದನ್ನು ಕೂಡಲೇ ಈ ನಗರದ ಹೆಲ್ತ್ ಆಫೀಸರರಿಗೆ ತಿಳಿಸತಕ್ಕದ್ದು.

೨. ಇಲಿಗಳ ಬೀಳೋಣವನ್ನು ತತ್‍ಕ್ಷಣವೇ ತಿಳಿಸತಕ್ಕದ್ದು.

೩. ಸತ್ತ ಇಲಿಗಳನ್ನು ಹೊರಗೆ ಬಿಸಾಡದೆ ಕೂಡಲೇ ಹೆಲ್ತ್ ಡಿಪಾರ್ಟ್‌ಮೆಂಟಿಗೆ ಕೊಂಡ್ಯೊಯ್ದು ಪರೀಕ್ಷಿಸುವ ಬಗ್ಗೆ ಕಳುಹಿಸತಕ್ಕದ್ದು.

೪. ಪ್ಲೇಗು ರೋಗವು ಹಬ್ಬಿದ ಊರಿನ ಸಂಸರ್ಗವನ್ನು ಈ ಸಮಯದಲ್ಲಿ ತಪ್ಪಿಸತಕ್ಕದ್ದು. ಅಂತಹ ಊರಿನಿಂದ ನಮ್ಮ ಊರಿಗೆ ಮನುಷ್ಯ ಯಾ ಇತರ ಸಾಮಗ್ರಿಗಳನ್ನು ಮುಖ್ಯವಾಗಿ ದವಸಧಾನ್ಯಗಳನ್ನು ಬರಗೊಡಬಾರದು.

೫. ಈ ರೋಗವು ಹಬ್ಬಿರುವ ಮನೆಗಳಿಗೆ ಯಾರಿಗಾದರೂ ಹೋಗಬೇಕಾಗಿರುವ ಅನಿವಾರ್ಯ ಸಂದರ್ಭದಲ್ಲಿ ಕಡಿಮೆಯೆಂದರೆ ಎಂಟು ದಿವಸಗಳಿಗೆ ಮುಂಚಿತವಾಗಿ ಅವರು ಪ್ಲೇಗಿನ ದಾಕು ಹಾಕಿಸಿಕೊಳ್ಳತಕ್ಕದ್ದು.

೬. ನಿಮ್ಮ ಮನೆ ಮತ್ತು ಸುತ್ತು ಮುತ್ತಲಿನ ಜಾಗಗಳನ್ನು ನಿರ್ಮಲವಾಗಿಡತಕ್ಕದ್ದು. ಆಹಾರ ಮತ್ತು ದವಸ ಧಾನ್ಯಗಳನ್ನು ಮುಚ್ಚಿಡತಕ್ಕದ್ದು.

೭. ಮನೆಯ ಸುತ್ತು ಮುತ್ತಲು ಕಸಕಡ್ಡಿಗಳ ರಾಶಿಯನ್ನಿರಗೊಡಿಸಕೂಡದು.

೮. ಇಲಿಗಳನ್ನು ನಾಶಪಡಿಸುವುದು ಪ್ರಾಮುಖ್ಯ. ಆದಷ್ಟು ಬೇಗನೇ ಅವುಗಳನ್ನು ಹಿಡಿದು ನಾಶಪಡಿಸತಕ್ಕದ್ದು.

೯. ಪ್ಲೇಗು ಹಬ್ಬಿದ ಊರಿನಿಂದ ಬಂದ ಸಾಮಾನುಗಳೆಂದು ಸಂಶಯ ಕಂಡುಬಂದಲ್ಲಿ ಅವುಗಳನ್ನು ಸೂರ್ಯರಶ್ಮಿಯಲ್ಲಿ ಕಡಿಮೆಯೆಂದರೆ ಮೂರು ತಾಸುಗಳ ವರೆಗಾದರೂ ಇಡತಕ್ಕದ್ದು.

೧೦. ಪ್ಲೇಗು ರೋಗವಿರುವ ಸ್ಥಳಗಳಿಂದ ರೋಗಾಣುಗಳನ್ನು ಒಯ್ಯತಕ್ಕ ಯಾವ ತರದ ಜೀನಸು ಯಾ ಸಾಮಾನುಗಳನ್ನು ಅದಕ್ಕಾಗಿ ಏರ್ಪಡಿಸಿದ ಅಧಿಕಾರಿಗಳಿಂದ ರೋಗಾಣುಗಳು ನಾಶಪಡಿಸಲ್ಪಡದ ವಿನಹ ಯಾರೂ ತೆಗೆದುಕೊಳ್ಳಕೂಡದು.' ಎಂದು ಮಂಗಳೂರು ಮುನಿಸಿಪಲ್ ಕಮಿಶನರು ತಿಳಿಸುತ್ತಾರೆ.

[೬ನೆಯ ಪುಟದಿಂದ ಮುಂದುವರಿದುದು]

ಟ್ರೈನಿಂಗ್ ಪರೀಕ್ಷೆಯಲ್ಲಿ ಪೈಲಾದ ಜಿಲ್ಲೆಯ ಎರಡು ತಾಲೂಕಿನ ಅಧ್ಯಾಪಕ ಅಧ್ಯಾಪಕಿಯರಿಗೆ ಜೂನ್ ಅಂತ್ಯಕ್ಕೆ ಸಿಗಬೇಕಾದ ಗ್ರಾಂಟಿನ ಬಟ್ವಾಡೆಯನ್ನು ನಿಲ್ಲಿಸಿ, ಎಡ್ವಾನ್ಸ್ ಕೊಟ್ಟ ಗ್ರಾಂಟನ್ನು ಸಹ ವಜಾಮಾಡಿದ ಬಗ್ಗೆ ವಿಷಾದ, ಹೊಸ ಬಿಲನ್ನು ಬೇಗನೇ ಅನುಗ್ರಹಿಸುವಂತೆ ಸಂಬಂಧಪಟ್ಟವರಿಗೆ ವಿನಂತಿ; ಅಧ್ಯಾಪಕ ವೃಂದದವರು ಶಾಲಾಕ್ಷೇತ್ರದಲ್ಲಿ ಖಾಯಂ ವಾಸಮಾಡಿಕೊಂಡಿರತಕ್ಕದ್ದು, ಇತರ ಸ್ಥಳಗಳಲ್ಲಿರಬೇಕಾದರೆ ಡಿ. ಇನ್ಸ್‌ಪೆಕ್ಟರರ ಅನುಮತಿಬೇಕೆಂಬ ಸರ್ಕಿಲಾರಿನ ನಿಷೇಧ, ಖಾಸಗಿ ಶಾಲಾ ಉಪಾಧ್ಯಾಯರಿಗೂ ಅವರ ಗ್ರಾಂಟಿನಲ್ಲಿ ಯುದ್ಧ ಮುಗಿವ ವರೆಗಾದರೂ ಭತ್ತಿ ಕೊಡಬೇಕೆಂಬ ಸೂಚನೆ ಮೊದಲಾದ ಠರಾವುಗಳಾದವು.

ಉಡುಪಿ ಬೋರ್ಡು ಶಾಲಾ ಉಪಾಧ್ಯಾಯರ ಸಭೆ

ಉಡುಪಿ ಬೋರ್ಡು ಹೈಸ್ಕೂಲಲ್ಲಿ ಜರಗಿತು. ಜಿಲ್ಲಾ ಬೋರ್ಡು ಎಜ್ಯುಕೇಶನಲ್ ಆಫೀಸರರಾದ ಶ್ರೀ. ಸಂಜೀವ ಭಟ್ಟರ ಅಧ್ಯಕ್ಷತೆ ವಹಿಸಿದ್ದರು. ಡ್ಯಾರೆಕ್ಟರರ, ಪ್ರಾಥಮಿಕ ಶಾಲಾ ಧೋರಣೆಯನ್ನು ವಿವರಿಸುತ್ತಾ ಸಾಧಾರಣ ೨೦೩ ಶಾಲೆಗಳ ಅಸ್ತಿತ್ವವು ಸ್ಫುಟಕ್ಕೆ ಹಾಕಲಾಗಿದೆಯೆಂದೂ ಖಾಸಗಿ ಶಾಲೆಗಳು ಮಾಡಿದಂತೆ ಬೋರ್ಡು ಶಾಲೆಗಳೂ ಡೈರೆಕ್ಟರರ ಹುಕುಮನ್ನು ಪಾಲಿಸಬೇಕೆಂದೂ, ಇಲ್ಲವಾದರೆ ಉಪಾಧ್ಯಾಯರು ದಂಡನೆಗೊಳಗಾಗುವರೆಂದೂ ಹೇಳಲಾಯಿತು.

ರೈತರ ಸಂಘ ಕಟಪಾಡಿ

ಉಡುಪಿಯ ಎಗ್ರಿಕಲ್ಚರಲ್ ಡಿಮೊನ್‌ಸ್ಟ್ರೇಟರರಾದ ಶ್ರೀ. ಕೆ. ಸಂಜೀವ ಶೆಟ್ರು ಸಾಹಸದಿಂದ ಉದ್ಯಾವರ, ಕೋಟ್ಟೆ, ಯೇಣಗುಡ್ಡೆ, ಮಟ್ಟು, ಮೂಡುಬೆಟ್ಟು, ಪಾಂಗಾಳ ಮತ್ತು ಉಳಿಯಾರಗೋಳಿಗ್ರಾಮಗಳ ರೈತರ ಒಂದು ಸಭೆಯು, ಶ್ರೀಮಾನ್ ಸೀತಾರಾಮ ದೊರೆ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಪ್ತಂಬರ ತಿಂಗಳ ೧೦ನೇ ತಾರೀಕು ಬುಧವಾರ, ಕಟಪಾಡಿ S. V S ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು.

ಕುಂದಾಪುರ

ದಸರಾ ಮಹೋತ್ಸವ

ಸ್ಥಳೀಯ ಕರ್ನಾಟಕ ಸಾಹಿತ್ಯಸಂಘದವರು ತಾ. ೨೬ರಿಂದ ೩೦ರವರೆಗೆ ದಸರಾ ಮಹೋತ್ಸವವನ್ನಾಚರಿಸುವರು ಪ್ರತಿದಿನ ಭಾಷಣ, ಸಂಗೀತ, ಭಾರತ ವಾಚನ ಮೊದಲಾದ ಕಾರ್ಯಕ್ರಮವನ್ನೇರ್ಪಡಿಸುವರು

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 718/1934.

ಅಚ್ಚಣ್ಣ ಕಡಂಬಾ— ವಾದಿ

ಪುಟ್ಟು ಹೆಂಗ್ಸು ಕೂಡಾ—ಪ್ರತಿವಾದಿರು

ಮುತ್ತು ಹೆಂಗ್ಸು, 1ನೆ ಪ್ರತಿವಾದಿ ಪುಟ್ಟು ಹೆಂಗ್ಸಿನ ಮಗಳು, ಬೇಸಾಯಗಾರಳು, ಕಾರ್ಕಳ ತಾಲೂಕು ಹಿರ್ಗಾನ ಗ್ರಾಮದ ಬೂಂಕುಳ ಎಂಬಲ್ಲಿರುವವಳು Post Mooroor ಇವರಿಗೆ

ವಾದಿಯು ಪ್ರತಿವಾದಿರ ಮೇಲೆ ಆಸ್ತಿ ಸ್ವಾಧೀನತೆ ಮ ಹುಟ್ಟುವಳ್ಳಿ ಬಗ್ಗೆ ರೂಪಾಯಿ 223–4–2ಕ್ಕೆ ದಾಖಲ್ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ನಿಮ್ಮ ಹಾಜರಾತಿ ಬಗ್ಗೆ ತಾ. 30–9–1941ಕ್ಕೆ ಇಡೋಣಾಗಿಯದೆ. ಮೃತ 1ನೆ ಪ್ರತಿವಾದಿಳ ವಾರಿಸ್ಸಾರಳಾಗಿ ನಿಮ್ಮನ್ನು ಕಕ್ಷಿಯಲ್ಲಿ ಸೇರಿಸುವರೆ ವಾದಿಯು ದಾಖಲ್ಮಾಡಿದ R. I. A 1070/41ನೆ ಅರ್ಜಿ ಕೂಡಾ ನಿಮ್ಮ ಹಾಜ್ರಾತಿ ಬಗ್ಗೆ ತಾ. 30–9–41ಕ್ಕೆ ಇಡೋಣಾಗಿಯದೆ. ಕೆಳಗೆ ವಿವರಿಸಿದ ಆಸ್ತಿಯನ್ನು ಜಪ್ತು ಮಾಡುವರೆ ವಾದಿಯು ದಾಖಲು ಮಾಡಿದ R.I.A-946/1941ನೆ ಅರ್ಜಿ ಕೂಡಾ ನಿಮ್ಮ ಹಾಜರಾತಿ ಬಗ್ಗೆ ಅದೇ ತಾರೀಕಿಗೆ ಇಡೋಣಾಗಿಯದೆ. ಆದುದರಿಂದ ತಾ. 30–9–1941ನೆ ಬೆಳಿಗ್ಗೆ 10 ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಿ, ನಿಮ್ಮ ಆಕ್ಷೇಪಗಳನ್ನು ಮ ಉದಾಹರಣೆಯನ್ನು ಹಾಜರು ಪಡಿಸದೆ ಇದ್ದಲ್ಲಿ, ನಿಮ್ಮನ್ನು ಶಿವ್ವಾ ಮಾಡಿ ಸದ್ರಿ ವ್ಯಾಜ್ಯ ವ ಅರ್ಜಿಗಳು ತನ್ನಿ ಮಾಡಲ್ಪಡುವವು ಎಂತ ಈ ಮೂಲಕ ತಿಳಿಸೋಣಾಗುತ್ತದೆ. ಆಸ್ತಿ ವಿವರ: — ಕಾರ್ಕಳ ತಾಲೂಕು ಮಣೆಲ್ ಗ್ರಾಮದ ಬ್ಯಾಬ್ತು ಸರ್ವೆ ನಂಬ್ರ 76ರಲ್ಲಿ 2, 3, 8, 11, 12, 5, 4, 7, 1, 10, 9ನೆ ಸಬ್ ಡಿವಿಜನ್ ಸ್ಥಳಗಳು.

ಕಾರ್ಕಳ 26–9–41

K. B. Joishi,
Pleader for Plaintiff.

ಕನ್ನಡಿಗರ ನಾಡಹಬ್ಬ ದಸರಾ ಬಂದಿದೆ.....

ಪ್ರಕೃತಿ ದೇವಿಯು ಪ್ರಸನ್ನಳಾಗಿರುತ್ತಾಳೆ

ದಸರೆ ಜೀವನದಲ್ಲಿ ಹೊಸ ಸಂತಸವನ್ನು ತರುತ್ತದೆ

ಕನ್ನಡಿಗರ ಹಬ್ಬ ದಸರಾ ಬಂದಿದೆ, ಅಖಿಲ ಕರ್ನಾಟಕದ ನಗರ ಗ್ರಾಮಗಳಲ್ಲಿ ಈ ಉತ್ಸವವು ವಿವಿಧ ಕಾರ್ಯಕ್ರಮಗಳಿಂದ ವಿಶೇಷ ವಿಜೃಂಭಣೆಯಿಂದ ಜರಗುತ್ತಿದೆ. ಕನ್ನಡ ನಾಡಿನ ಕಲೆ, ಸಂಸ್ಕೃತಿ ಸಾಹಿತ್ಯಗಳ ಸೇವೆ ಸಾಗುತ್ತಿದೆ, ಕರ್ನಾಟಕದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪ್ರಗತಿಗಳ ಕುರಿತು ಮುಂದಡಿಯಿಡುವ ಸಾಹಸ ಆಗುತ್ತಿದೆ ದಸರಾ ಕಾಲವು ಕನ್ನಡಿಗರಿಗೆ ಹೊಸತೊಂದು ಸ್ಫೂರ್ತಿ ಚೈತನ್ಯವನ್ನು ತುಂಬಿಸಲು ಬರುತ್ತದೆ. ಜನತೆಯ ಜೀವನದಲ್ಲಿ ನವೀನ ಉಲ್ಲಾಸವು ತುಂಬಿ ಹರಿಯ ತೊಡಗುತ್ತದೆ. ಪ್ರಕೃತಿ ಮಾತೆಯು ಶಕ್ತಿ ಸಂಪತ್ ವಿದ್ಯೆಗಳೆಂಬ ತ್ರಿರೂಪಗಳಿಂದ ಮಹಾಕಾಳಿ, ಮಹಾಲಕ್ಷ್ಮಿ, ಮಹಾ ಸರಸ್ವತಿಯಾಗಿ ಆರಾಧಿಸಲ್ಪಡುತ್ತಾಳೆ ನಿಸರ್ಗವು ನಿತಾಂತ ರಮಣೀಯವಾಗಿ ರಂಜಿಸತೊಡಗುತ್ತದೆ ಎಲ್ಲೆಲ್ಲೂ ಹೊಸ ಹೂಗಳು ಅರಳುತ್ತವೆ; ತುಂಬಿಗಳು ಝೇಂಕರಿಸುತ್ತವೆ, ಭೂಮಿಫಲ ಬೆಳೆಗಳಿಂದ ತುಂಬಿರುತ್ತದೆ, ಹೀಗೆ ನವರಾತ್ರಿಯ ಸಮಯದಲ್ಲಿ ಪ್ರಕೃತಿದೇವಿಯು ಪ್ರಸನ್ನಳಾಗಿರುತ್ತಾಳೆ!

❀ ❀ ❀

ಜೀವನದಲ್ಲಿ ಹೊಸತು ಉಲ್ಲಾಸವನ್ನು ತುಂಬಿಸಲು ಪ್ರತಿ ವರ್ಷವೂ ದಸರಾ ಬರುತ್ತದೆ ಪ್ರಕೃತಿಯೇ ಅಂತಹ ನಾವೀನ್ಯವನ್ನು ತರುತ್ತದೆ ಸಸ್ಯಶ್ಯಾಮಲೆಯಾದ ಧರಣಿ ತುಂಬು ಸಂಪನ್ನಳಾಗಿ ಮೆರೆಯುತ್ತಾಳೆ, ಹೊಲಗಳು ಬೆಳೆಗಳ ಫಲಭಾರದಿಂದ ಕೂಡಿರುತ್ತವೆ, ನದಿಗಳು ಶುಭ್ರವಾದ ನೀರನ್ನು ಹೊತ್ತು ಹರಿಯುತ್ತವೆ. ಕಾಡುಗುಡ್ಡಗಳು ಹಸುರಾದ ತರುಲತಾ ವೃಕ್ಷಗಳಿಂದ ಕಂಗೊಳಿಸುತ್ತವೆ, ಭೋರೆನುವ ಮಳೆಗಾಲವು ಮುಗಿದು ಹೊಸತು ಹೇಮಂತ ಋತು ಕಾಲಿಡುತ್ತದೆ, ಚೆಲುವಿನ ಮುತ್ತಿನ ಮಳೆಯಂತೆ ಸುತ್ತಲೂ ಇಬ್ಬನಿಗಳು ರಂಜಿಸುವವು ಯುವ ಜನದ ಹೊಸ ಹೃದಯಗಳು ಈ ತರದ ನವೋತ್ಸಾಹದಿಂದ ನಲಿಯ ತೊಡಗುವವು

❀ ❀ ❀

ದಸರೆಯು ತನ್ನ ಒಂದು ಮಾಂತ್ರಿಕ ಸ್ಪರ್ಶದಿಂದ ಲೋಕವನ್ನು ಸುಂದರ ಸೌಭಾಗ್ಯ ಮಂದಿರವಾಗಿ ಪರಿವರ್ತಿಸುವುದು ಬಣ್ಣ ಬಣ್ಣಗಳ ವೇಷಗಳಿಂದ ಜನರು ಕುಣಿಯುವರು, ಮನುಷ್ಯನಿಗೆ ಕುಣಿತದಲ್ಲಿ ಮನಸ್ಸು ತೇಲಬೇಕಾದರೆ ಹೃದಯದಲ್ಲಿ ಆನಂದದ ತೆರೆಗಳೇಳಲೇಬೇಕು. ನವೀನ ಸ್ಫೂರ್ತಿಯೆದ್ದು ಚಿಮ್ಮಬೇಕು; ಜೀವನದಲ್ಲಿ ಅಭ್ಯುದಯ ಆಶೆಗಳು ತಲೆದೋರಬೇಕು; ಬಾಲವೃದ್ಧರಾದಿಯಾಗಿ ಇಡಿಯ ನಾಡೇ ನವರಾತ್ರಿಯ ಸಮಯ ಬಂದಲ್ಲೊಂದು ತೆರದಲ್ಲಿ ನಲಿಯುವುದು. ಸಾಮುರರು ಹುಲಿವೇಷಗಳನ್ನು ಕಟ್ಟಿ ಕುಣಿದಾಡಿದರೆ, ನಾಗರಿಕರು, ನಾಟಕ ವಿನೋದಾವಳಿಗಳನ್ನೇರ್ಪಡಿಸಿ ನಲಿದಾಡುವರು, ಕವಿಗಳು ಹೊಸಗಾಲದ ಹಾಡನ್ನು ಹಾಡುವರು, ಕಲಾವಿದರು ಪ್ರಕೃತಿಯ ಹೊಸ ಚಿತ್ರದಲ್ಲಿ ತನ್ಮಯರಾಗುವರು; ವಿದ್ಯಾಕ್ಷಂತರು, ಸಂಸ್ಕೃತಿ ಜೀವಿಗಳು ನಾಡಿನ ವಿದ್ಯಾ ಸಂಸ್ಕೃತಿಗಳ ಏಳಿಗೆಯನ್ನು ಆಲೋಚಿಸಿ ಹುರುಪು ಹೆಚ್ಚಿ ಮುಂದಡಿಯಿಡುವರು. ದಸರೆಯು ತನ್ನೊಂದು ಮಾಂತ್ರಿಕ ಸ್ಪರ್ಶದಿಂದ ಲೋಕವನ್ನು ಹೊಸತೊಂದು ಸುಂದರ ಸೌಭಾಗ್ಯ ಮಂದಿರವಾಗಿ ಪರಿವರ್ತಿಸುವುದು ಅಲ್ಲಿ ಎಲ್ಲರೂ ಕುಣಿಯುತ್ತಿರುವರು, ಎಲ್ಲರೂ ಹಾಡುತ್ತಿರುವರು, ಎಲ್ಲರೂ ತಾಳಹಾಕುವರು, ಎಲ್ಲರೂ ವೇಷ ಧರಿಸುವರು, ನವರಾತ್ರಿಯಲ್ಲಿ ನವೋಲ್ಲಾಸ ಪಡೆದ ಜನರಿಲ್ಲ.

❀ ❀ ❀

ಕನ್ನಡಿಗರು ನವರಾತ್ರಿಯನ್ನು ತಮ್ಮ ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತಾರೆ; ಇಂದು ಕನ್ನಡನಾಡು ಹರಿದು ಹಾಳಾಗಿದ್ದರೂ, ಮುರಿದು ಮೂರುಪಾಲಾಗಿದ್ದರೂ ಅಖಂಡ ಕರ್ನಾಟಕದ ಚಿತ್ರವು ಕನ್ನಡಿಗರ ಕಣ್ಣ ಮುಂದೆ ಬಂದು ನಿಲ್ಲುವುದು, ಕನ್ನಡ ತಾಯಿಗೆ ದಸರೆಯ ಕಾಲದಲ್ಲಿ ಅಖಿಲ ಕರ್ನಾಟಕದ ಸೇವೆ ಸಲ್ಲುತ್ತದೆ, ಕನ್ನಡಿಗರೆಲ್ಲರೂ ಒಟ್ಟು ಕೂಡಿ ಆ ದೇವಿಯನ್ನು ನೆನೆಯುತ್ತಾರೆ, ಆಕೆಯ ಗುಣಗಾನ ಮಾಡುತ್ತಾರೆ, ತಾವೆಲ್ಲರೂ ಒಂದೇ ತಾಯ ಮಕ್ಕಳು ಎಂಬುದನ್ನು ಅರಿತುಕೊಳ್ಳುತ್ತಾರೆ, ಪರಸ್ಪರ ಭ್ರಾತೃಭಾವದಿಂದ ಬೆರೆಯುತ್ತಾರೆ, ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿ ಕಲೆಗಳ ವಿಚಾರ ಮಾಡುತ್ತಾರೆ, ಸಾಮಾಜಿಕ ಧಾರ್ಮಿಕ ರಾಜಕೀಯಗಳ ಕುರಿತು ಹಂಚಿಕ ಹೂಡುತ್ತಾರೆ ಮಂಗಳೂರು, ಬೆಂಗಳೂರು, ಧಾರವಾಡ, ಕಾರವಾರಗಳೆಲ್ಲವೂ ಹತ್ತಿರ ಹತ್ತಿರವಾಗುತ್ತವೆ. ಕನ್ನಡಿಗರು ಆನಂದ ಪರವಶರಾಗಿ ನಲಿಯುತ್ತಾರೆ. ಕನ್ನಡನಾಡಿನ ನಗರ ನಗರಗಳಿಗೆ, ಹಳ್ಳಿಪಳ್ಳಿಗಳಿಗೆ ದಸರೆಯು ಹೊಸತು ಸಂತಸವನ್ನು ತರುತ್ತದೆ.

❀ ❀ ❀

ದಸರಾ ಎಂದಾಗ ಮೈಸೂರಿನ ನೆನಪಾಗದವರು ಇರಲಾರರು ಮೈಸೂರಿನ ದಸರೆ ಎಲ್ಲೆಲ್ಲೂ ಪ್ರಸಿದ್ಧ, ಕನ್ನಡನಾಡಿನ ಕಿರೀಟ ಪತಿಗಳ ಸನ್ನಿಧಿಯಲ್ಲಿ ಮೈಸೂರಲ್ಲಿ ಕನ್ನಡಿಗರ ನಾಡಹಬ್ಬವು ಅಷ್ಟು ವಿಜೃಂಭಣೆಯಿಂದ ಜರಗುವುದು ತಕ್ಕುದೇ ಆಗಿದೆ, ಮೈಸೂರಿನ ಬೆಡಗು, ಮೈಸೂರಿನ ಸೊಬಗು, ಮೈಸೂರಿನ ಮಹಿಮೆ ಉಜ್ವಲೋಜ್ವಲವಾಗಿ ಬೆಳಗಿ ತೋರುವುದು ದಸರೆಯ ಕಾಲದಲ್ಲಿ, ಮೈಸೂರಿನ ಒಡೆಯರು ದಸರಾ ಕಾಲದಲ್ಲಿ ಪ್ರಸನ್ನರಾಗಿರುವರು ಮೈಸೂರಿನ ಪ್ರಜೆಗಳು ಸಂತಸದಿಂದ ನಲಿಯುವರು; ದಸರಾ ಸಮಯದಲ್ಲಿ ಮೈಸೂರನ್ನು ಒಮ್ಮೆ ನೋಡುವುದು ಸೌಂದರ್ಯದ ಸಂಪತ್ತಿನ, ಆನಂದದ ಮಾತೃಸ್ಥಾನವೊಂದನ್ನು ಸಂದರ್ಶಿಸಿದಂತೆ! ಸಂದರ್ಶಿಸಿ ಹಿರಿಯ ಸಂತಸಪಟ್ಟಂತೆ! ಬಾಳುವೆಯನ್ನು ಕೃತಾರ್ಥಮಾಡಿಕೊಂಡಂತೆ!

❀ ❀ ❀

ಇಂದಿದು ಭೀಷಣ ಸಂಗ್ರಾಮದ ಸಮಯ! ಪಶ್ಚಿಮದ ಭೂದೇವಿ ಪ್ರಳಯನರ್ತನಕ್ಕೆ ತೊಡಗಿದ್ದಾಳೆ ಪಾಶ್ಚಾತ್ಯರ ಅನ್ಯಾಯವು ಸಹಿಸಲಾರದಾಯಿತೋ ಏನೋ ಅಥವಾ? ಅಂತೂ ಆಕೆ ಕೆರಳಿದ್ದಾಳೆ! ವಿಷಮ ಸಮರಹತ್ಯೆ ಎಡೆಬಿಡದೆ ಸಾಗುತ್ತಿದೆ! ಆದಕ್ಕೆ ಮಾತೆ ಬಾರತಿ ಇದಕ್ಕಾಗಿ ಅನುತಾಪ ಪಡದಿರಲು ಸಾಧ್ಯವೆ? ನವರಾತ್ರಿಯ ಈ ಹಬ್ಬದ ಮೂಲಕ—ಭಾರತ ಮಾತೆ ಮಾನವ ಲೋಕಕ್ಕೆ ಬಾಂಧವ್ಯ ಪ್ರೇಮವನ್ನು ಸಾರುತ್ತಿದ್ದಾಳೆ! ಬಾಳುವೆಯಲ್ಲಿ ಪ್ರೇಮ ಸಂತಸಗಳು ತುಂಬಿರಬೇಕೆಂದು ಬೋಧಿಸಲು ಈಗ ದಸರಾ ಬಂದಿದೆ, ಜಗತ್ತಿಗೆ ಜೀವನ ಶಾಂತಿಯನ್ನು ಸಾರಿ ದಸರೆಯು ನವಿಸಾಪಿಸಿದೆ

K. K. Rai.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ. ಎ., ಎಫ್. ಸಿ. ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜಂಟ್ ಷಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9 25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	1 0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಿಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3 25 ಸಾಯಂ.	6 50 ಸಾಯಂ.
ಕಣ್ಣನ್ನೂರು ವರೆಗೆ	5 52 ಸಾಯಂ.	9 40 ಪೂರ್ವಾಹ್ನ

ಭಯಂಕರ ಕಳವು

[ಹಿಂದಿನ ಪುಟದಿಂದ ಮುಂದುವರಿದುದು]

ಬೀಗವನ್ನು ತುಂಡಿಸಿದನು. ಬೀಗವು ಮುರಿಯಿತು. ಬಾಗಿಲು ತೆರೆಯಿತು. ರಘುನಾಥನು ಹೊರಬಂದನು. ಮೊದಲಿನಂತೆಯೇ ಬೀಗವನ್ನು ಹಾಕಿದನು. ಭಿಕ್ಷುಕನು ಮೆಲ್ಲಗೆ ಆತನೊಡನೆ ಹೊರಬಂದನು. ಬೇಗನೆ ಮುಂದುವರಿದರು. ಒಂದೆಡೆ ಕುಳಿತರು. ಭಿಕ್ಷುಕನು ಒಂದೊಂದಿಯಾಗಿ ತರುಣನನ್ನು ಪ್ರಶ್ನಿಸುತ್ತಾ ಆತನಿಗಾದ ವಿಷಯಗಳನ್ನೆಲ್ಲಾ ತಿಳಿಸಿದನು ಅದೂ ಅಲ್ಲದೆ ಕಮಲೆಯು ಇರುವಿಕೆಯನ್ನೂ ತಿಳಕೊಂಡನು

"ರಘುನಾಥ್, ನಿನಗೆ ಕಳ್ಳರ ಪರಿಚಯ ಇದೆಯೆ?" ಎಂದು ಕೇಳಿದನು ಭಿಕ್ಷುಕನು.

"ಸರ್, ನಾನಿದ್ದ ಕೋಣೆಯ ಎದುರು ಭಾಗದಲ್ಲೇ ಅವರ ಸಭೆಯು ಯಾವಾಗಲೂ ಬೆಳಗ್ಗೆ ಆರು ಗಂಟೆಗೆ ಸೇರುತ್ತಿದೆ. ಇಷ್ಟು ಮಾತ್ರ ನಾನು ಬಲ್ಲೆ." ಭಿಕ್ಷುಕನು ಉತ್ಸಹಾಗೊಂಡನು. ರಘುನಾಥನನ್ನು ಏಕಾಂತದಲ್ಲಿ ಕರೆದು, "ಇನ್‌ಸ್ಪೆಕ್ಟರರೂ, ಸಿಪಾಯಿಗಳೂ ನಾಳೆ ಪ್ರಾತಃಕಾಲಕ್ಕೆ ಬಂದು ಸೇರಲಿ" ಎಂದು ಹೇಳಿ ಶೀಘ್ರವಾಗಿ ಆತನನ್ನು ಕಳುಹಿದನು. ತಾನೂ ಒಂದೆಡೆ ಹೋಗಿ ವಿಶ್ರಮಿಸಿದನು.

❀ ❀ ❀

ಸರಿ, ಬೆಳಗಾಗುವದರೊಳಗೆ ಸಿಪಾಯಿಗಳೆಲ್ಲರೂ, ಬಂದರು. ಗುಪ್ತವಾಗಿ ಎಲ್ಲರೂ ಒಂದೆಡೆ ಸೇರಿದರು. ಬೆಳಗ್ಗಿನ ಸಮಯ ಕ್ಲಪ್ತವಾಗಿ ೬ ಗಂಟೆಗೆ ರಘುನಾಥನು ಹೇಳಿದಂತೆ ಎಲ್ಲಾ ಕಳ್ಳರೂ ಒಟ್ಟಾಗಿ ಕಲೆತು ಒಂದೆಡೆ ಕುಳಿತರು. ತಮ್ಮ ತಮ್ಮ ಆಲೋಚನೆಗಳನ್ನು ವಿವೇಚಿಸ ತೊಡಗಿದ್ದರು

ಪಂತರು, ಇನ್‌ಸ್ಪೆಕ್ಟರರಿಗೂ, ಉಳಿದವರಿಗೂ ಬೇಕಾದ ಸಂಜ್ಞೆಯಿತ್ತು ಮೆಲ್ಲಗೆ ಒಳಬಂದರು ಭೀಕರವಾದ ಕರಾಳಪುರುಷರು ಒಳಗೆ ಮಂಡಿಸಿದ್ದರು. ತನ್ನನ್ನು ವಂಚಿಸಿದ ಸ್ತ್ರೀಯನ್ನೂ ಕಂಡರು. ಪಂತರು ಅವಾಕ್ಕಾದರು ಮುಂದೆ ಓರ್ವನಾ ಕಮಲೆಯು ದುಷ್ಕೃಟವನ್ನು ಇನ್ನೂ ಬಿಟ್ಟಿಲ್ಲ. ಮುಂದೆ, ಆಕೆಯನ್ನು ಯಾವರೀತಿಯಿಂದ ಪಳಗಿಸಬೇಕು' ಎಂಬುದಾಗಿ ಆಲೋಚನೆಯನ್ನು ಮಾಡತೊಡಗಿದ್ದನು.

"ಕಮಲೆಯು ಜೀವಂತಳಾಗಿರುವ ಕಡೂ, ವ್ಯಕತವಟ್ಟಿರುವವಳು ಬಹುಶಃ ಶ್ರೀಧರರಾಯರ ಮನೆಯ ಸ್ತ್ರೀಯಿರಬಹುದೆಂದೂ ತಿಳಿದು ಪಂತರು ಧೈರ್ಯಗೊಂಡರು.

ಪಂತರು ಒಂದು ಸಿಳ್ಳು ಹಾಕಿದರು. ಒಡನೆಯೇ ನೂರಾರು ಸಿಪಾಯಿಗಳು ಒಳಹೊಕ್ಕರು. ಕೋಣೆಯನ್ನು ಮುತ್ತಿದರು. ಸಿಪಾಯಿಗಳು ಒಬ್ಬರನ್ನೂ ಬಿಡದೆ ಬಂಧಿಸಿದರು. ಜಯಪುರಿಗೆ ನೇರವಾಗಿ ಕೊಂಡೊಯ್ದರು.

"ಮಾಧವನು" ಎಷ್ಟು ಬಿಡಿಸಲು ಯುಕ್ತಿಸಿದರೂ ಆತನ ಯತ್ನವು ನಿಷ್ಫಲವಾಯಿತು. ಸರಿ, ಪಂತರೂ, ಇನ್‌ಸ್ಪೆಕ್ಟರರೂ, ಮನೆಯನ್ನು ಶೋಧಿಸಿದರು ಶೋಧಿಸುತ್ತ ಅವರೊಂದು ರಂಧ್ರವನ್ನು ಕಂಡರು, ಧೈರ್ಯವಾಗಿ ಒಳಹೊಗ್ಗಿದರು. ಸಮೀಪದಲ್ಲೇ ಒಂದು ಕೋಣೆಯು ಕಾಣಬಂತು. ಪಂತನು ಅದನ್ನು ಮುರಿದನು. ಒಳಗಡೆ ಕಮಲೆ ಇದ್ದಳು. ಪಂತರು ಆಕೆಯನ್ನು ಕರೆದುಕೊಂಡರು. ಪಂತರೂ ಇನ್‌ಸ್ಪೆಕ್ಟರರೂ ಜಯಪುರಿಗೆ ಬಂದರು.

❀ ❀ ❀

ಶ್ರೀಧರರಾಯರ ಸಂಬಂಧಿಕಳನ್ನು ಕೊಂದ ತಪ್ಪಿಗಾಗಿ ಕಳ್ಳರಲ್ಲಿ ಕೆಲವರಿಗೆ ಫಾಶಿಯೂ, ಇನ್ನುಳಿದವರಿಗೆ ದ್ವೀಪಾಂತರವಾಸವೂ ವಿಧಿಸಲಾಯಿತು. ಕಮಲೆಯನ್ನು ಗೋವಿಂದರಾಯರಿಗೆ ತಲಪಿಸಿದರು. ಇನ್‌ಸ್ಪೆಕ್ಟರರು ಪಂತರಿಗೂ, ಉಳಿದ, ಜವಾನರಿಗೂ ಬೇಕಾದ ಮನ್ನಣೆಯನ್ನು ಕೊಡಿಸಿದರು. ಈ ಭಯಂಕರ ಕಳವಿನ ಕಾಲದಲ್ಲಿ ಜಯಪುರಿಯೇ ತತ್ತರಗೊಂಡಿತ್ತು! ಇಂತಹ ಕಳವಿನಲ್ಲಿ ಉತ್ಸಾಹವಿಟ್ಟು ಕೆಲಸಮಾಡಿದ "ರಾಜಾರಾಮರಾಯರ"ನ್ನು ಆ ನಗರದ ನಾಗರಿಕರೆಲ್ಲರೂ ಕೊಂಡಾಡಿದರು

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 209/1941

ಯಸ್. ಕೆ. ವೆಂಕಟ್ರಮಣ ಭಟ್ಟ— ವಾದಿ

ಮತ್ತು

ಶೇಷಮ್ಮ ಕೂಡಾ — ಪ್ರತಿವಾದಿರು

ಸದ್ರಿ ವ್ಯಾಜ್ಯದ 4ನೇ ಪ್ರತಿವಾದಿ ಈಗ ಹಾಲಿ ಬೊಂಬಾಯಿಯಲ್ಲಿರುವ ಪುತ್ತೂರು ತಾಲೂಕು ಕಬಕ ಗ್ರಾಮದ ದುಗ್ಗಮ್ಮ ಹೆಂಗಸಿನ ಮಗ ನಾಗರಾಜನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ತಾ. 1-3-1938ರಲ್ಲು ದುಗ್ಗಮ್ಮ ಕೂಡಾ 4 ಜನರು ಸ್ಥಿರಾಸ್ತಿ ಜವಾಬುದಾರಿಯಿಂದ ರಿಜಿಸ್ಟ್ರಿ ಸಿಹಿ ರೂ. 750-0-0ಕ್ಕೆ ಮೇಲಿನ ವಾದಿಗೆ ಬರಕೊಟ್ಟ ಆಡವು ದಸ್ತಾವೇಜಿನ ಬಾಬ್ತು ತಾ. 1-3-1940 ಮತ್ತು ತಾ. 1-3-41ನೇ ವರ್ಷಗಳ ಬಾಬ್ತು ಬಹಾ ಬಡ್ಡಿ ಐವೇಜುಗಳ ವಸೂಲಿಗೆ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತನ್ನಿಗೆ ತಾ. 2-10-1941ಕ್ಕೆ ಇಟ್ಟಿರುತ್ತದೆ ಆದ್ದರಿಂದ ಅದಕ್ಕೆ ನಿಮ್ಮ ಆಕ್ಷೇಪವಿದ್ದ ಪಕ್ಷದಲ್ಲಿ ಆ ದಿವಸ ಸದ್ರಿ ಕೋರ್ಟಿನಲ್ಲಿ ಸ್ವತಃ ವಾ ವಕೀಲರ ಮೂಲಕ 10 ಘಂಟೆಗೆ ದಾಖಲು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲಾಗುವುದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ.

(By order of the Court)

ಪುತ್ತೂರು 9-9-1941 } (sd) P. Krishna Bhat Vakil for Plaintiff.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಕೆಲವು ಸಿದ್ಧೌಷಧಗಳು

ಶ್ರೀ. ಎನ್. ಶ್ಯಾಮರಾಯ ನಾಯ್ಕರು

[ಪ್ರತಿ ಊರಿನಲ್ಲಿ ತಿರುಗಾಡಿ ವಿಚಾರಿಸಿದರೆ, ಯಾವುದಾದರೂ ಒಂದು ಮನೆಯಲ್ಲಿ ಅವರ ವಂಶಪಾರಂಪರ್ಯವಾಗಿ ಕೊಡುತ್ತಾ ಬರುವ ಒಂದು ಸಿದ್ಧೌಷಧಿ ಇದ್ದೇ ಇರುತ್ತದೆ. ಸದ್ರಿ ಔಷಧಿಯನ್ನು ಆ ಒಂದು ರೋಗಕ್ಕೆ ಕೊಟ್ಟರೆ, ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗುವುದು. ಈ ಔಷಧಿ ಪ್ರಯೋಗಗಳು ವೈದ್ಯ ಪುಸ್ತಕದಲ್ಲಿ ಸಿಕ್ಕುವುದಿಲ್ಲ; ಇದನ್ನು ಆಯಾ ಮನೆಯವರು ತಮ್ಮ ಅಂತ್ಯಕಾಲದಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಒಬ್ಬನಿಗೆ ಗುಟ್ಟಾಗಿ ಕಲಿಸುವರು; ಅದು ಒಬ್ಬರಿಂದ ಒಬ್ಬರಿಗೆ ಅದೇ ರೀತಿಯಲ್ಲಿ ವಂಶಪಾರಂಪರ್ಯವಾಗಿ ಮುಂದರಿಯುವುದು. ಇನ್ನು ಹಲವು ಕಡೆಗಳಲ್ಲಿ ಮದ್ದನ್ನು ಕಲಿಸಿಕೊಡುವ ಮೊದಲೇ ಅದನ್ನು ತಿಳಿದಿದ್ದವರು ತೀರಿಹೋಗಿ, ಅಂಥಾ ದಿವ್ಯ ಔಷಧಿಗಳು ಮಾಯವಾಗುವವು. ಔಷಧಿಗಳನ್ನು ಪ್ರಚಾರ ಮಾಡಿದರೆ ನಮ್ಮ ಸಹೋದರ ಸಹೋದರಿಯರಿಗೆ ಬಹಳ ಸಹಾಯಮಾಡಿದಂತಾಗುವುದು. ಆದ್ದರಿಂದ ಇಂಥಾ ದಿವ್ಯ ಔಷಧಿಗಳು ನಾಶವಾಗದಂತೆಯೂ ಎಲ್ಲಾ ಜನರಿಗೆ ಪ್ರಯೋಜನ ಸಿಕ್ಕುವಂತೆಯೂ ಅದನು ಪ್ರಚಾರ ಮಾಡಬೇಕಾಗಿ ಅಂತಹ ಸಿದ್ಧೌಷಧಿಗಳನ್ನು ಕಲಿತಿರುವ ಜನರಲ್ಲಿ ಪ್ರಾರ್ಥಿಸುತ್ತೇನೆ.

ರೋಗದ ಹೆಸರು:-ತುಳು: ಕೋರ.

ಈ ರೋಗ ಸುರು ಆಗುವ ಮೊದಲು ಜ್ವರ ಬಂದು ೩ ದಿವಸದ ನಂತರ ಕಜ್ಜಿಗಳು ಮೇಲೆ ಕಾಣುತ್ತವೆ.

ಮದ್ದು:—ಒಣಗಿಸಿದ ಉಡುವಿನ ತಲೆ ಮತ್ತು ಖಡ್ಗಪಾತ್ರ (ಖಡ್ಗ ಮೃಗದ ಕೊಂಬು) ಸಾವೆ ಅಕ್ಕಿ ಗಂಜಿ ನೀರಿನಲ್ಲಿ ತೇದಿ ೪ ಆಣೆ ಪಾವಲಿ ತೂಕ (ಕಾಲುತೊಲೆ) ಒಡಲಿಗೆ ಕೊಡಬೇಕು. ಮತ್ತು ಅದನ್ನೆ ಅಂದರೆ ಸದ್ರಿ ಔಷಧಿಗಳನ್ನು ತೇದಿ ಹೊರಗೆ ಮೈಗೆ ತಾಗಿಸಬೇಕು ಕೋರದ ಕಜ್ಜಿ ಸರಿಯಾಗಿ ಹೊರಗೆ ಬೀಳದಿದ್ದರೆ ಘುರಡಾಮಲ್ಲಿಗೆ ಸೊಪ್ಪು ಒಂದು ಮುಷ್ಟಿ ಪಚ್ಚೆ ತೆನೆ ಸೊಪ್ಪು ಒಂದು ಮುಷ್ಟಿ ಬಿಸಿ ನೀರಿನಲ್ಲಿ ತಿವಿಚಿ ಅರ್ಧ ಕುತ್ತೆ ಕುಡಿಯಲಿಕ್ಕೆ ಕೊಡಬೇಕು

ರೋಗದ ಹೆಸರು:—ಮಕ್ಕಳ ಕೆಂಪು ರೋಗ

ರೋಗದ ಲಕ್ಷಣ:—ಮಕ್ಕಳ ಮೈ ಚರ್ಮ ದಪ್ಪವಾಗಿ ಕೆಂಪು ಚಡ್ಡಿ ಹಾಕಿದ ಹಾಗೆ ಆಗುವುದು ಕೆಂದಾಳಿ ರೋಗ ವೆಂತಲೂ ಹೇಳುತ್ತಾರೆ.

ಮದ್ದು:—ರಕ್ತ ಚಂದನ ಮತ್ತು ಬಿಳೀ ಕೇಪಳ ಹೂವಿನ ಬೇರು ಇವುಗಳನ್ನು ಗೆಂದಾಳಿ ಸೀಯಾಳದ ನೀರಿನಲ್ಲಿ ಅಥವಾ ಅದರ ಸಿಪ್ಪೆಯ ರಸದಲ್ಲಿ ತೇದಿ ಮೈಗೆ ಹಚ್ಚುವುದು ಮತ್ತು ಸ್ವಲ್ಪ ಕುಡಿಸುವುದು ತಾಯಿಗೆ ಸಹ ಕುಡಿಯಲಿಕ್ಕೆ ಕೊಡುವುದು ತಾಯಿ ಸಹ ಪಥ್ಯದಲ್ಲಿಯೂ ಇರಬೇಕು

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್,
ಕಂಕನಾಡಿ, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡ್ ಬ್ರಾಂಚು ಪೆಂಟ್ಲೆಂಡ್ ಪೇಟೆ

ನಮ್ಮಲ್ಲಿ, ಕರೆಂಟ್, ಸೇವಿಂಗ್ ಠರಾವು ಠೇವಣಾತಿ ಮತ್ತು ಇತರ ಎಲ್ಲಾ ಬೇಂಕ್ ವಹಿವಾಟು ನಡೆಸಲ್ಪಡುವುವು ಚಿನ್ನಾಭರಣಗಳ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಈ ಕೆಳಗಿನ ದರದ ಬಡ್ಡಿಯಲ್ಲಿ ಹಣ ಸಾಲಕೊಡಲಾಗುವುದು.

ರೂ. 5ರಿಂದ 25ರ ವರೆಗೆ ಸೇ 9%	ರೂ. 26ರಿಂದ 100ರ ವರೆಗೆ ಸೇ 8%
ರೂ. 101ರಿಂದ 500ರ ವರೆಗೆ ಸೇ 7%	ರೂ 501 ಮೇಲ್ಪಟ್ಟ ಲೋನುಗಳಿಗೆ 6½%

ಠೇವಣಾತಿಗಳ ಮೇಲಿನ ದರ

ಕರೆಂಟ್ ಠೇವಣಾತಿ—2% ಪ್ರತಿದಿನದ ಶಿಲ್ಕಿನ ಮೇಲೆ

ಸೇವಿಂಗ್ಸ್ ಬೇಂಕ್—3% ಪ್ರತಿದಿನದ ಶಿಲ್ಕಿನ ಮೇಲೆ

ಠರಾವು ಠೇವಣಾತಿ—3 ತಿಂಗಳಿಗೆ—3% ಠರಾವು ಠೇವಣಾತಿ—6 ತಿಂಗಳಿಗೆ—3½%

ಠರಾವು ಠೇವಣಾತಿ—12 ತಿಂಗಳಿಗೆ—4%

(Sd) ***B. Narayana Shetty,***
Agent at Kankanady.

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS AGAINST APPROVED SECURITIES, GRANTED AT EASY RATES OF INTEREST & ATTRACTIVE TERMS.

Banking business of every description transacted.

Full particulars can be had from any of our Branches.

ಸಿನೆಮಾ ಸುದ್ದಿ

ದುರ್ಗಾಖೋಟೆ ನೇಶನಲ್ 'ಸ್ಟುಡಿಯೋದಲ್ಲಿ'

ನೇಶನಲ್ ಸ್ಟುಡಿಯೋದವರು ನೂತನ ನಟನಟಿಯರನ್ನು ಪಡೆವ ಸಾಹಸ ಮಾಡುತ್ತಿರುವಂತೆ ತೋರುತ್ತದೆ. ದುರ್ಗಾಖೋಟೆಯು ಆ ಕಂಪನಿಯವರೊಡನೆ ಕರಾರುಮಾಡಿಕೊಂಡಳೆಂದು ಒಂದು ವದಂತಿ.

ಮಿಸ್ ಮರಾಠೆ

ಪ್ರಭಾತ ಕಂಪನಿಯವರು ಇನ್ನೊಬ್ಬ ಬಾಲಿಕಾ ನಟಿಯನ್ನು ತಯಾರಿಸುವರೆಂದು ತಿಳಿದಿದೆ. ಆಕೆಯ ಹೆಸರು ಮಿಸ್ 'ಮರಾಠೆಯೆಂಬುದಾಗಿ ಸುದ್ದಿ.

ಕೇದಾರ ಶರ್ಮ

ಚಿತ್ರಲೇಖದ ಶ್ರೀ. ಕೇದಾರ ಶರ್ಮಾ, ರಣಜಿತ್ ಕಂಪನಿಯನ್ನು ಸೇರಿದನಾಗಿ ವಾರ್ತೆ.

ಪ್ರಭಾತದವರ 'ಕಾಳಿದಾಸ'

ಈ ಚಿತ್ರಕ್ಕೆ ನಾಯಕಾ ಮತ್ತು ನಾಯಿಕಾ ಪಾತ್ರ ವಹಿಸುವ ಇಬ್ಬರು ನಟನಟಿಯರನ್ನು ಅವರು ಹುಡುಕುತ್ತಿರುವರು. ಉಮೇದ್ವಾರರಾದವರು, ಫೇಮಸ್ ಪಿಕ್ಚರ್ಸ್, ಸಾಂಡ್‌ಹರಸ್ಟ್ ಬ್ರಿಜ್, ಬೊಂಬೇ ಇಲ್ಲಿಗೆ ಅರ್ಜಿಮಾಡಬಹುದೆಂದು ತಿಳಿಸಲಾಗಿದೆ.

ಜಯಶ್ರೀ ಶಾಂತಾರಾಮನ ಪರಿಣಯ?

ಪ್ರಶ್ನೆ: ಜಯಶ್ರೀಗೆ ಮದುವೆಯಾಯಿತೆಂದೂ ಆಕೆಯ ಗಂಡನು ಪ್ರಭಾತ ಕಂಪನಿಯ ನಿರ್ದೇಶಕ ವರ್ಗದಲ್ಲಿ ಒಬ್ಬನೆಂದೂ ನಾನು ಕೇಳುತ್ತೇನೆ. ಆತನ ಹೆಸರೇನೆಂದು ತಿಳಿಸುವಿರಾ?

ಉತ್ತರ. ನೀವು ಆತನನ್ನು ಗುರುತು ಹಿಡಿಯುವಿರೋ ಇಲ್ಲವೋ ಎಂದು ನನಗೆ ಸಂಶಯವಿದೆ. ಆತನು ಯಾರಿಗೂ ತಿಳಿಯದ ಮನುಷ್ಯ. ಆದರೂ ನಾನು ಆತನ ಹೆಸರು ಹೇಳುತ್ತೇನೆ. ಆತನ ಹೆಸರು ವಿ. ಶಾಂತಾರಾಮ. ಎಂದು. ಆತನ ವಿಷಯವನ್ನು ಯಾವಾಗಲಾದರೂ ನೀವು ಕೇಳಿದ್ದೀರಾ?

—ಫಿಲ್ಮ್ ಇಂಡಿಯಾ

ಅಂಜನ್

ದೇವಿಕಾ ಮತ್ತು ಅಶೋಕರ ನಟನೆಯುಳ್ಳ ಬೊಂಬೇ ಟಾಕೀಸಿನ ಅಂಜನ್ ಚಿತ್ರವು ಸಪ್ಟಂಬರ ೨೭ರಂದು ಬೊಂಬಯಿಯಲ್ಲಿ ಪ್ರದರ್ಶಿತವಾಗುವುದು.

ಜಗದೀಶ ಸೆಟ್ಟಿ

ಸ್ಟೇಶನ್ ಮಾಸ್ಟರ್ ಚಿತ್ರದಲ್ಲಿ ಈತನು ಮುಖ್ಯಪಾತ್ರವಹಿಸುವನು.

ಹಂಸಾ ವಾಡ್ಕರ್

ಪ್ರಭಾತದ ಕರಾರು ಮುಗಿದ ಬಳಿಕ ಹಂಸಾ ವಾಡ್ಕರ್ 'ರಾಜಾರಾಣಿ' ಚಿತ್ರದಲ್ಲಿ ಅಭಿನಯಿಸುವುದಾಗಿ ತಿಳಿದಿದೆ.

ಪೂಂಜಿ

ಪಂಚೋಲಿ ಆರ್ಟ್ ಪಿಕ್ಚರ್ಸಿನವರ ಮುಂದಿನ ಹಿಂದೀ ಸಮಾಜಿಕ ಚಿತ್ರದ ಹೆಸರು 'ಪೂಂಜಿ' ಎಂಬುದಾಗಿ ತಿಳಿದಿದೆ. ಕಜಾಂಚಿ ಚಿತ್ರ ನಿರ್ದೇಶಕ ಗಿದ್ವಾನಿಯೇ ಇದನ್ನೂ ನಿರ್ದೇಶಿಸುವನು.

"ಸಂತಸಖೂ"— ಶನಿವಾರ ಪ್ರದರ್ಶನ

'ಸಂತ ಸಖು' ಪ್ರಭಾತದವರ ಹೊಸ ಚಿತ್ರ ಈ ಶನಿವಾರ ಬೊಂಬಯಿಯಲ್ಲಿ ಪ್ರದರ್ಶಿತವಾಗುವುದೆಂದು ತಿಳಿಬದೆ. ಭಕ್ತಿ ಚಿತ್ರಗಳನ್ನು ತಯಾರಿಸುವುದರಲ್ಲಿ ಪ್ರಭಾತದವರು ಪ್ರಸಿದ್ಧಿ ಪಡೆದಿರುವರು. ಹಂಸಾ ವಾಡ್ಕರ್ ಇದರಲ್ಲಿ ಸಖುಪಾತ್ರ ಅಭಿನಯಿಸುವಳು.

ಮಜಾರ್ ಖಾನ್

ಗ್ರೇಟ್ ಇಂಡಿಯಾ ಪಿಕ್ಚರ್ಸಿನವರ ಅಕೇಲಾದಲ್ಲಿ ಮಜಾರ್ ಖಾನ್ ಅಭಿನಯಿಸುತ್ತಾನೆ.

ಬರೀದೀದಿ

ಶರಚ್ಚಂದ್ರರ ಕಥೆ ಬರೀದೀದಿಯು ನ್ಯೂಥಿಯೇಟರ್ಸಿನವರಿಂದ ಚಿತ್ರಿತವಾಗಿದೆ. ಇದರಲ್ಲಿ ಮೇನಕಾ, ಮೊಲಿನಾ, ಪಹಾಡಿಸ ನ್ಯಾಲ್, ಚಂದ್ರಾವತಿ, ಜಗದೀಶ್, ಗುಲಾಬ್, ಬೇಲಾ, ನವಾಬ್ ಮೊದಲಾದವರು ಅಭಿನಯಿಸುವರು. ಅಮರ ಮಲ್ಲಿಕರ ನಿದೇಶಕತ್ವ.

ಸೋದರಿ

ನೇಶನಲ್ ಸ್ಟುಡಿಯೋದವರ 'ಸೋದರಿ' ಚಿತ್ರವು ಬೊಂಬಯಿಯಲ್ಲಿ ಆರನೆಯವಾರ ನಡೆಯುತ್ತದೆ. ನಲಿನೀ ಜಯವಂತಳು ಇದರಲ್ಲಿ ನಟಿಸುವಳು.

ಪೂರ್ವಿ

ಬೊಂಬಯಿಯ ನೇಶನಲ್ ಆರ್ಟಿಸ್ಟ್ ಎಂಬ ಹೊಸ ಕಂಪನಿಯವರು ಹಿಂದೂ ಮುಸ್ಲಿಂ ಐಕ್ಯ ಕಥಾವಸ್ತುವುಳ್ಳ ಪೂರ್ವಿ ಎಂಬ ಚಿತ್ರವನ್ನು ತಯಾರಿಸುವರು. ಮಿಸ್ ಕೌಸಲ್ಯ, ಹರಿಶಿವ್ ದಾನಾನಿ ಹಸೇನ್, ಮಜಿದ್, ಗೋಪೆ ಮೊದಲಾದವರು ಇದರಲ್ಲಿ ಅಭಿನಯಿಸುವರು.

"ನಮ್ಮ ದೇಶದಲ್ಲಿ ನಮ್ಮ ಸರಕಾರ"

ಮಾಲವೀಯರ ಹೇಳಿಕೆ.

"ನಮ್ಮ ದೇಶಕ್ಕೆ ನಮ್ಮ ಸರಕಾರ ಬೇಕು, ನಮ್ಮ ಜನರೆಲ್ಲಾ ಒಟ್ಟಾಗಬೇಕು; ಬ್ರಿಟಿಷರು ವಚನವನ್ನು ಕಾಪಾಡಬೇಕು ಎಂಬುದಾಗಿ ಪಂಡಿತ ಮದನಮೋಹನ ಮಾಲವೀಯರು ಕಾಶಿಯಲ್ಲಿ ಒಂದು ಭಾಷಣಮೀಯುತ್ತಾ ಹೇಳಿದರು.

HALFTONE & LINE BLOCK MAKING UNDERTAKEN

Sharada Press, MANGALORE.

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕ್ಯುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೇಕಡಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ಸುಖವಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕ್ಯುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಾರೆ. ತಾಯಂದಿರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳೆದುಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಆರೋಗ್ಯಯುಕ್ತವಾಗಿಯೂ ಇರಿಸುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

		ರಿಂದ	ವರೆಗೆ
1.	(a) ಭತ್ತ ಅವ್ವಲ್ ತರದ ಗುಡ್ಡೆ ಮುಡಿಗೆ	—	—
	(b) ,, ಮಧ್ಯಂ ,, ,, ,,	—	—
2.	(a) ಅಕ್ಕಿ ಅವ್ವಲ್ ತರದ ಗುಡ್ಡೆ ಮುಡಿಗೆ	6— 6—0	6— 9—0
	(b) ,, ಮಧ್ಯಂ ,, ,, ,,	6— 2—0	6—4—0
3.	(a) ,, ಅವ್ವಲ್ ,, ಸುಗ್ಗಿ ,,	6— 2—0	—
	(b) ,, ಮಧ್ಯಂ ,, ,, ,,	6— 0—0	—
4.	(a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	35— 0—0	40— 0—0
	(b) ,, ಸಿಪ್ಪೆಯಿದ್ದದ್ದು ,,	37— 8—0	42— 8—0
5.	(a) ಕೊಬ್ಬರಿ ಆಫೀಸು ಖಂಡಿಗೆ	63—12—0	—
	(b) ,, ದೇವಿ ,,	—	—
	(c) ,, ದಿಲ್‌ಪಸಂದ್ ,,	—	—
6.	ತೆಂಗಿನ ಎಣ್ಣೆ ಮಣಕ್ಕೆ	4— 8—0	—
7.	(a) ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2— 8—0	3— 0—0
	(b) ಸುಲಿದ ಅಡಿಕೆ ಖಂಡಿಗೆ (ಹಳ್ತು)	120— 0—0	145— 0—0
	(ಹೊಸ್ತು)	— 0—0	— 0—0
8.	ಗೇರುಬೀಜ ಮುಡಿಗೆ	6— 0—0	6— 4—0
9.	ಕಬ್ಬಿನ ಬೆಲ್ಲ ಖಂಡಿಗೆ	35— 0—0	42— 8—0
10.	ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	15— 8—0	16— 8—0
11.	(a) ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5— 0—0	7— 4—0
	(b) ಹುಡಿಯ ,, ,,	6— 0—0	8— 0—0
12.	(a) ಮೈಸೂರು ಏಲಕ್ಕಿ ಮಣಕ್ಕೆ	— 0—0	— 0—0
	(b) ಕೊಡಗಿನ ,, ,,	70— 0—0	75— 0—0
13.	(a) ಕುಮಟೆಯ ಮೆಣಸು ಖಂಡಿಗೆ	85— 0—0	95— 0—0
	(b) ಕಾಸರಗೋಡು ,, ಮಣಕ್ಕೆ	3—12—0	—
	(c) ಊರಿನ ,, ,,	4— 0—0	— 0

ವಿಜ್ಞಾನಯುಗ

ಉಪವಾಸದಿಂದ ನಿರೋಗಿಯಾಗಬಹುದು?

ಉಪವಾಸ ಮಾಡಿದರೆ ಯಾವುದೇ ರೋಗದಿಂದಲೂ ಮನುಷ್ಯನು ವಿಮುಕ್ತನಾಗಬಹುದೆಂದು ಮಿಸೆಸ್ ಫ್ರೆಡ್ ಮಾಟರ್ನ್ ಎಂಬಾಕೆ ಬರೆಯುತ್ತಾಳೆ.

"ಮನುಷ್ಯರು ಹೆಚ್ಚಾಗಿ ಅವಶ್ಯವಿರುವುದಕ್ಕಿಂತ ಇಮ್ಮಡಿ ಮುಮ್ಮಡಿ ತಿನ್ನುವರು. ಆದ ಕಾರಣವೇ ಹಲವರು ಹಲವು ತರದ ರೋಗಗಳಿಗೆ ಬಲಿಬಿದ್ದು ಸಾಯುವರು. ಕಡಿಮೆ ಊಟಮಾಡಿ ಸಾಯುವವರು ಇಲ್ಲ. ದಿನಕ್ಕೆ ಬಹಳ ಕಡಿಮೆ ಊಟ ಮಾಡುವ ಕೀಳು ಜಾತಿಯ ಜನರೂ ದೃಢಕಾಯರಾಗಿಯೂ, ನಿರೋಗಿಗಳಾಗಿಯೂ, ದೀರ್ಘಾಯುಗಳಾಗಿಯೂ ಇರುವರು" ಎಂದು ಆಕೆ ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬಹಳ ದೀರ್ಘವಾದೊಂದು ಲೇಖನ ಬರೆದು ವಿವರಿಸಿರುವಳು. ಮೂರು ನಾಲ್ಕು ದಿನಗಳ ವರೆಗೆ ಯೋಗ್ಯ ರೀತಿಯಿಂದ ಉಪವಾಸ ಮಾಡಿದರೆ ಮನುಷ್ಯನು ನಿರೋಗಿಯಾಗಬಹುದೆಂದು ಆಕೆಯ ಅಭಿಪ್ರಾಯವಿದೆ.

ಚಿಂತೆಯನ್ನು ದೂರಮಾಡಲು ಮಾಡಲು ಶಸ್ತ್ರ ಚಿಕಿತ್ಸೆ

ಚಿಂತೆಯನ್ನು ದೂರಮಾಡಲು ಬ್ರಿಟನಿನಲ್ಲಿ ಒಬ್ಬ ಸರ್ಜನರು ಶಸ್ತ್ರ ಚಿಕಿತ್ಸೆ ಮಾಡಿರುವರು. ಅವರು ತಲೆಯಲ್ಲಿನ ಮಿದುಳಿನೊಳಗಿನ ನರದ ಸಂಬಂಧವೊಂದನ್ನು ತಪ್ಪಿಸುವರಂತೆ. ಆದರೆ ಇಂತಹ ಶಸ್ತ್ರ ಚಿಕಿತ್ಸೆಯಿಂದ ಆಗುವ ದೋಷವೆಂದರೆ ಒಮ್ಮೊಮ್ಮೆ ಚಿಂತೆಯನ್ನು ಹೋಗಲಾಡಿಸುವ ನರದ ಸಂಬಂಧವನ್ನು ಇಲ್ಲದೆ ಮಾಡುವುದರಿಂದ ಮನುಷ್ಯನು ಜವಾಬ್ದಾರಿಯಿಲ್ಲದವನಾಗಿ ಬಿಡುತ್ತಾನಂತೆ. ಹೀಗಾಗಿ ಈ ಶಸ್ತ್ರ ಚಿಕಿತ್ಸೆಯಲ್ಲಿ ತೊಂದರೆಯೂ ಇರುವುದಾಗಿ ತಿಳಿದಿದೆ. ಜರ್ಮನರ ಮೇಲೆ ವಿಮಾನ ದಾಳಿ ಮಾಡುವವರಿಗಾಗಿ ಈ ಚಿಕಿತ್ಸೆ ಮೊದಲು ಪ್ರಾರಂಭಿಸಲ್ಪಟ್ಟಿತೆಂದೂ ತಿಳಿದಿದೆ.

ನಿದ್ರೆಯೆಂದರೇನು?

ನಿದ್ರೆಯೆಂದರೇನೆಂಬ ವಿಷಯವಾಗಿ ಇದು ವರೆಗೆ ಯಾರೂ ಇತ್ಯರ್ಥಿಸಿ ಹೇಳಿದವರಿಲ್ಲ. ಅನೇಕರು ನಿದ್ರೆಯ ವಿಷಯ ಅನೇಕ ವಿವರಗಳನ್ನು ಕೊಟ್ಟಿರುವರು. ಪ್ರತಿಯೊಂದೂ ಪ್ರಯೋಜನಕಾರಿಯಾಗಿಲ್ಲ.

ನಮ್ಮ ಮಿದುಳು ವಿಶ್ರಾಂತಿಯನ್ನು ಪಡೆಯುವುದೇ ನಿದ್ರೆಯೆಂದು ಹಲವರ ಅಭಿಪ್ರಾಯವಿದೆ. ಆದರೆ ನಿದ್ದೆ ಬಿದ್ದ ಕೆಲಕಾಲದ ವರೆಗೂ ನಮಗೆ ಹೊರಗಿನ ಸದ್ದು ಕೇಳುತ್ತಾ ಇರುತ್ತದೆ. ಮತ್ತೆ ಗಾಢನಿದ್ರೆ ಬಿದ್ದರೂ ಹೆಚ್ಚಿನ ಶಬ್ದದಿಂದ ನಾವು ಎಚ್ಚರವಾಗುವುದುಂಟು. ಇದರಿಂದ ನಿದ್ರೆಯಲ್ಲಿಯೂ ನಾವು ಸಂಪೂರ್ಣ ವಿಶ್ರಾಂತಿ ಪಡೆಯುವುದಿಲ್ಲವೆಂದು ಅರ್ಥವಾಗುವುದಲ್ಲವೆ?

೧೫೨ ವರ್ಷ ಬದುಕಿದನು

೧೫೨ ವರ್ಷ ಬದುಕಿದವನು ಥೋಮಸ್ ಪಾರ್ ಎಂಬವನು. ಅವನು ೧೬೩೫ರಲ್ಲಿ ತೀರಿಹೋದನು. ಅವನು ತನ್ನ ಜೀವಮಾನದ ದೀರ್ಘಕಾಲ ಬ್ರಹ್ಮಚಾರಿಯಾಗಿಯೇ ಇದ್ದನು. ತನ್ನ ೮೦ನೆಯ ವರ್ಷದ ಪ್ರಾಯದಲ್ಲಿ ಆತನಿಗೆ ಮೊದಲನೆಯ ಸಲ ವಿವಾಹವಾಯಿತು. ಮತ್ತೆ ೧೨೦ ವರ್ಷ ದಾಟಿದ ಬಳಿಕ ಎರಡನೆಯ ಸಲ ಮದುವೆಯಾದನು. ತನ್ನ ಮುದಿ ಪ್ರಾಯದಲ್ಲಿ ಆರೈಕೆಗೆ ಒಬ್ಬಳು ತನಗೆ ಅವಶ್ಯಬೇಕಾಗಿದೆಯೆಂಬ ಅಭಿಪ್ರಾಯದಿಂದ ಆತನು ಮದುವೆಯಾಗಿದ್ದನಂತೆ!

ವಿಚಿತ್ರ ಪ್ರಪಂಚ

ಹಳೆಯ ಸ್ಟ್ಯಾಂಪುಗಳಿಗೆ ದ್ವೀಪದ ಬೆಲೆ?

೧೨,೦೦೦,೫೦೦ ಅಮೆರಿಕನರು ವರ್ಷ ಒಂದರ ೫೦ ಮಿಲಿಯ ಡೋಲರನ್ನು ಹಳೆಯ ಸ್ಟ್ಯಾಂಪುಗಳನ್ನು ಸಂಗ್ರಹಿಸುವುದರ ಬಗ್ಗೆ ವ್ಯಯ ಮಾಡುತ್ತಿದ್ದಾರೆ. ಅವರಿಗೆ ಸ್ಟ್ಯಾಂಪುಗಳು ಒಂದು ವಿನೋದ ಕಾರ್ಯವೂ (Holly) ದೊಡ್ಡ ವ್ಯಾಪಾರವೂ ಆಗಿದೆ.

"ನಾರ್ತ್ ಅಮೆರಿಕದ ಸ್ಟ್ಯಾಂಪು ಸಂಗ್ರಹಗಳಿಗೆ ಬದಲಾಗಿ ಮನಾಚೊಸೆಟ್ ಎಂಬ ಸೌತ್ ಶೋರಿನ ಒಂದು ಚೆಲುವಾದ ದ್ವೀಪವು ಮಾರಲ್ಪಡುವುದು."

—ಎಂಬುದಾಗಿ ನ್ಯೂಯಾರ್ಕಿನ ಪತ್ರಿಕೆಯು ಒಂದು ಜಾಹೀರಾತನ್ನು ಪ್ರಕಟಿಸಿತು. ಅಮೆರಿಕದಲ್ಲಿ ೧,೦೦೦,೦೦೦ ಡೋಲರುಗಳಷ್ಟು ಬೆಲೆ ಬಾಳುವ ಪ್ರತ್ಯೇಕ ೧೫ ಸ್ಟ್ಯಾಂಪು ಸಂಗ್ರಹಗಳಿವೆಯೆಂದು ತಿಳಿದುಬರುತ್ತದೆ.

ಸಿರಿವಂತರ ಮಕ್ಕಳಿಗೆ ಯಾವುದೂ ದೊಡ್ಡದಲ್ಲ!

ಭೂಮಿ ಸ್ತಬ್ಧವಾಗುವುದಂತೆ!

೩,೦೦೦ ವರ್ಷಗಳ ಹಿಂದೆ ಭೂಮಿಯು ಹೇಗೆ ಚಲಿಸುತ್ತಿತ್ತೋ ಹಾಗೆ ಈಗ ಅದು ಚಲಿಸುವುದಿಲ್ಲವೆಂದೂ ಮುಂದೆ ೧,೬೦೦,೦೦೦೦೦೦ ವರ್ಷಗಳ ಬಳಿಕ ಭೂಮಿಯು ಚಲನೆಯಿಲ್ಲದೆ ತೀರಾ ಸ್ತಬ್ಧವಾಗುವುದೆಂದೂ ಒಬ್ಬ ಪ್ರೊಫೆಸರರು ಹೇಳುತ್ತಾರೆ.

ಹಿಂದೂ ಹುಡುಗಿಯರು ಮುಸಲ್ಮಾನರನ್ನು ಮದುವೆಯಾಗುವರು?

ಅಮರಾವತಿಯಲ್ಲಿ ಹೀಗೆಂದು ಒಂದು ಪ್ರಕಟಣೆಯು ಜಾಹೀರು ಮಾಡಲಾಗಿತ್ತು. ಮೂವರು ಬ್ರಾಹ್ಮಣ ಹುಡುಗಿಯರು ಹೀಗೆ ಜಾತಿಬಿಟ್ಟು ಪರ ಜಾತಿಯ ಗೃಹಸ್ಥರನ್ನು ಮದುವೆಯಾಗುತ್ತಾರೆಂಬ ವರ್ತಮಾನವು ಹರಡಿದ್ದನ್ನು ಕೇಳಿ ಹಿಂದುಗಳಲ್ಲಿ ಸಹಜವಾಗಿ ಬಹಳ ಕುತೂಹಲವೇ ಹುಟ್ಟಿತು. ಅವರು ಅದರ ಸತ್ಯಾಂಶವನ್ನು ತಿಳಿಯಲು ಕೋರ್ಟಿಗೆ ಹೋಗಿ ಅಂತಹ ಮದುವೆಯ ವಿಷಯವಾಗಿ ನೋಟೀಸು ಬಂದಿದೆಯೇ ಎಂದು ಕೇಳಿದರು. ಅಲ್ಲಿಂದ 'ಇಲ್ಲ' ಎಂಬ ಉತ್ತರ ಬಂತು.

ಕಡೆಗೆ ಈಗ ಈ ಸುದ್ದಿಯ ಸತ್ಯಾಂಗವು ಪ್ರಕಟವಾಗಿದೆ. ಒಬ್ಬ ಮುಸ್ಲಿಂ ಸ್ನೇಹಿತಳು ತನ್ನ ಮೂವರು ಹಿಂದೂ ಗೆಳತಿಯರನ್ನು ಅವಳ ಮನೆಗೆ ಆಹ್ವಾನಿಸಿದ್ದಳಂತೆ. ಆ ವಿಷಯದಲ್ಲಿ ಅವರು ಅಲ್ಲಿಗೆ ಹೋಗಿದ್ದರು. ಇದನ್ನೇ ಒದ್ದಾಡಿ ಕತೆ ಮಾಡಿ ಹಾಗೆ ಪ್ರಕಟಿಸಿದರು!

೧೬ ವರ್ಷದಲ್ಲಿ ೭೮ ಶಾಲೆಗಳಿಗೆ ಹೋದವಳು

ಅಮೆರಿಕದ ವ್ಯಾಪಾರೀ ಸಂಚಾರಿಯೊಬ್ಬನ ಮಗಳು ಜೂನೆ ಹಾಂಡ್ ಎಂಬ ೧೬ ವರ್ಷದ ಹುಡುಗಿ ೭೮ ಶಾಲೆಗಳಲ್ಲಿ ಅಭ್ಯಾಸಿಸಿದಳೆಂದೂ, ಅಮೆರಿಕದ ೪೮ ಸಂಸ್ಥಾನಗಳಲ್ಲಿ ೪೭ರಲ್ಲಿ ಆಕೆ ಶಾಲೆಗೆ ಹೋಗಿದ್ದಳೆಂದೂ ತಿಳಿದಿದೆ. ಕೆನಡಾ ಮೆಕ್ಸಿಕೋಗಳಲ್ಲಿಯೂ ಅವಳು ಅಭ್ಯಾಸಿಸುತ್ತಿದ್ದಳಂತೆ.

ಹಲವು ಶಾಲೆಗಳನ್ನು ನೋಡಿದವರು ನಮ್ಮಲ್ಲಿಯೂ ಹಲವರಿರಬಹುದು. ಆದರೆ ಇವಳು ಬಹುಶಃ ಜಗತ್ತಿನಲ್ಲಿಯೇ ಬಹಳ ವಿಶೇಷದವಳೆನಬಹುದು!

BHUVANENDRA PRODUCTS LTD.,

Head Office and Factory: KATAPADI S Kanara.

Depots: 1. Maharatha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು.—

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.

ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್.

ಡೋಂಗರೆ
ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ
'ಓಂಪ್ರೋನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಥಳೀಯ ಸ್ಟಾಕಿಸ್ಟರು:-
ದಿ ಪೊಪ್ಯುಲರ್ ಸ್ಟೋರ್ಸ್
ಮಂಗಳೂರು.

Stockists—
Messrs. Dadha & Co., MADRAS.

THE PIE-MONEY BANK, LTD.
Maidan Road, MANGALORE
Undertakes all kinds of Banking Business. Current account at 2½% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs 5000 run regularly on systematic lines Unique Banking facilitie to Businessmen and interested Public
Apply for particulars—
K. R. GURU, *Managing Director*

The Bank of Mangalore Limited.
Branches—MOODABIDRI & PADUBIDRI
HEAD OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3% to 5%
INTEREST PAYABLE QUARTERLY
Interest on Savings Bank Deposits allowed at at 2½%

THE
Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-12-0 Regd. No. M. 3480

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 26-9-1941 [ಸಂಚಿಕೆ 38]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಶ್ವಾಸ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶ್ರೀ ಕಂಪೆನಿಯಲ್ಲಿ ದೊರೆಯುವುದು

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM, BANGALORE City, and BOMBAY 4.

ಇಂದು ಹಳ್ಳಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

സ്വദേശാഭിമാനി

Swadeshabhimani. Estd 1906

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS.

Banking business of every description transacted.

Full particulars can be had from any of our Branches.

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12-39	ರೂ. 79¼ ಕೋಟಿಗಿಂತ ಮಿಕ್ಕಿದೆ
ಫಂಡುಗಳು	,,	ರೂ. 25¼ ,, ,,
ವಾರ್ಷಿಕ ಆದಾಯ	,,	ಸುಮಾರು ರೂ. 4¾ ಕೋಟ್ಯಗೆ ,,

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರಾಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಸೆಕ್ರೆಟರಿ

ಓ ರಿ ಯ ಂ ಟ ಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸೌತ್ ಪೆರೇಡ್, ಬೆಂಗಳೂರು. ಅಥವಾ ದಿ ಇನ್‌ಸ್ಪೆಕ್ಟರ್ ಕಾರ್ನಾಡ್-ಸದಾಶಿವರಾವ್ ರೋಡ್, ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

			ರಿಂದ	ವರೆಗೆ
1.	(a)	ಭತ್ತ ಅವ್ವಲ್ ತರದ ಗುಡ್ಡೆ ಮುಡಿಗೆ	—	—
	(b)	,, ಧುಯಂ ,, ,, ,,	—	—
2.	(a)	ಅಕ್ಕಿ ಅವ್ವಲ್ ತರದ ಗುಡ್ಡೆ ಮುಡಿಗೆ	6—6—0	6—8—0
	(b)	,, ದುಯಂ ,, ,, ,,	6—2—0	6—4—0
3.	(a)	,, ಅವ್ವಲ್ ,, ಸುಗ್ಗಿ ,,	6—2—0	—
	(b)	,, ದುಯಂ ,, ,, ,,	6—0—0	—
4.	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	35—0—0	40—0—0
	(b)	,, ಸಿಪ್ಪೆಯಿದ್ದದ್ದು ,,	37—8—0	42—8—0
5.	(a)	ಕೊಬ್ಬರಿ ಆಫೀಸು ಖಂಡಿಗೆ	63—12—0	—
	(b)	,, ದೀವಿ ,,	—	—
	(c)	,, ದಿಲ್‌ಪಸಂದ್ ,,	—	—
6.		ತೆಂಗಿನ ಎಣ್ಣೆ ಮಣಕ್ಕೆ	4—8—0	—
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	3—0—0
	(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	120—0—0	145—0—0
		(ಹೊಸ್ತು)	—0-0	—0—0
8.		ಗೇರುಬೀಜ ಮುಡಿಗೆ	6—0—0	6—4—0
9.		ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
10.		ಒಳ್ಳೆ ಮೆಣಸು ಹಂಡ್ರೆಡ್ ವೇಟೇಗೆ	15—8—0	16—8—0
11.	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5—0—0	7—4—0
	(b)	ಹುಡಿಯ ,, ,,	6—0—0	8—0—0
12.	(a)	ಮೈಸೂರು ಏಲಕ್ಕಿ ಮಣಕ್ಕೆ	—0-0	—0—0
	(b)	ಕೊಡಗಿನ ,, ,,	70—0—0	75—0—0
13.	(a)	ಕುಮಟೆಯ ಮೆಣಸು ಖಂಡಿಗೆ	85—0—0	95—0—0
	(b)	ಕಾಸರಗೋಡು ,, ಮಣಕ್ಕೆ	3—12—0	—
	(c)	ಊರಿನ ,, ,,	4—0—0	0— —

ಸಾಂಕ್ರಾಮಿಕ ಕಫಗಳು ಬೇಗನೆ ಗುಣಹೊಂದುತ್ತವೆ

ಆ ಉಪದ್ರವಕಾರೀ ಕಫವು ನಿಮ್ಮ ಕುತ್ತಿಗೆಗೆ ನೋವನ್ನು ಉಂಟುಮಾಡುತ್ತದೆ. ಅದು ಮೃದುವಾದ ವಾಯುನಾಳವನ್ನು ಉದ್ರೇಕಗೊಳಿಸಿ ಹಲವು ಕಲ ವಿಶೇಷ ಗಾಟುಗೊಳಿಸುತ್ತದೆ. ಆದ್ದರಿಂದ ಅಂತಹ ನೋವು ಕಂಡೊಡನೆ ಅಥವಾ ತೋರಿತೆಂದಾಗಲೇ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಪೆಪ್ಸ್ ಕರಗುತ್ತದೆ; ಕರಗಿ ಉತ್ತಮ ಔಷಧ ಸತ್ವವನ್ನು ಹೊರಡಿಸುವುದು. ಆ ಸತ್ವವು ಶ್ವಾಸದೊಡನೆ ಶ್ವಾಸಕೋಶಕ್ಕೆ ಸೇರುವುದು; ಅಲ್ಲಿ ರೋಗಕಾರಿ ಅಣುಗಳನ್ನು ನಾಶಗೊಳಿಸುವುದು, ನೋವನ್ನು ಗುಣಪಡಿಸಿ, ಎದೆನೋವನ್ನು ಇಲ್ಲದೆ ಮಾಡಿ ಬಹಳ ಕೆಟ್ಟ ತರದ ಕಫವನ್ನೂ ಶೀತವನ್ನೂ ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುತ್ತದೆ.



ಏಜಂಟ್ಸ್:—

ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಿ. ಟಿ. ಮದ್ರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ನಿಮ್ಮ ಇನ್ಸ್ಪೇಟು ಪೆಟ್ಟಿಗೆಗಳನ್ನು ಪಡೆಯಲು ನೀವು

ನೆಸೆಟ್ ಬ್ಲೇಡ್ ಒಟ್ಟುಮಾಡುವುದಿದ್ದರೆ

ತ್ವರೆಮಾಡಿರಿ!

ಪ್ರಚಾರದಲ್ಲಿ ಅನೇಕ ಬರಹಗಳುಳ್ಳ ನೆಸೆಟ್ ಬ್ಲೇಡುಗಳೂ, ಅನೇಕ ಧರ್ಮಾರ್ಥದ ಇನ್ಸ್ಪೇಟು ಪೆಟ್ಟಿಗೆಗಳು ಇರುವವಾದರೂ ಈಗ ಬಂದ ಈ ಹೊಸ ಬ್ಲೇಡುಗಳು ಬರಹವಿಲ್ಲದವುಗಳಾಗಿವೆ.

ಹೇಗಿದ್ದರೂ, ಬರಹವುಳ್ಳ ನೆಸೆಟ್ ಬ್ಲೇಡುಗಳು ಸ್ಟೋಕು ಮುಗಿವ ವರೆಗೆ ಮತ್ತು ಅವುಗಳು ಸಿಗುವ ತನಕ, ಸಂಪೂರ್ಣ ಸೆಟ್ಟಿನ ನೆಸೆಟ್ ಬ್ಲೇಡುಗಳು ಇನ್ಸ್ಪೇಟು ಪೆಟ್ಟಿಗೆಗಳಿಗೆ ಬದಲಾವಣೆ ಮಾಡಲಾಗುವವು. ಇನ್ನೂ ಸಮಯವಿರುವಾಗ ತ್ವರೆಮಾಡಿ ನಿಮ್ಮ ಸೆಟ್ಟನ್ನು ತೇರಗೊಳಿಸಿರಿ.

NACET BLADES



ನೆಸೆಟ್ ಬ್ಲೇಡುಗಳು

ಮುಲ್ಲರ್ ಎಂಡ್ ಪಿಪ್ಸ್ (ಇಂಡಿಯಾ) ಲಿಮಿಟೆಡ್,

15, ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು.

"ನ ನಿಶ್ಚಿತಾರ್ಥಾನ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

3–10–1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೩–೧೦–೧೯೪೧

ಸಮರಭೂಮಿಯ ಸಂಚಾರ

ಇಂದಿನ ಯುದ್ಧದಲ್ಲಿ ಅತ್ಯಂತ ಭೀಕರ ವೆನಿಸಿ ಕ್ರಿಮಿಯದ ಕಾಳಗವು ನಡೆಯಲಿದೆಯೆಂದು ತಿಳಿದುಬರುತ್ತದೆ ಕ್ರಿಮಿಯದ ಮೇಲಿರುವ ಕಿರಿಕೋಪ ಭೂಖಂಡದ ಹತ್ತಿರ ಜರ್ಮನರು ಸೈನ್ಯ ಸಂಗ್ರಹಿಸಿರುವರು. ಕ್ರೀಟಿನಿಂದ ಕ್ರಿಮಿಯವನ್ನು ಮಿಂಚಿನ ವೇಗದಿಂದ ಗೆಲಬೇಕೆಂಬ ಸಿದ್ಧತೆಗಳು ನಡೆಯುವಂತೆ ತೋರುತ್ತದೆ. ಜರ್ಮನರ ಉಗ್ರ ವೈಮಾನಿಕ ಧಾಳಿ ಈಗಾಗಲೇ ಪ್ರಾರಂಭವಾಗಿದೆ ರೈಲ್ವೆ ಮತ್ತು ಮೋಟರು ರಸ್ತೆಗಳ ಮೇಲೆ ಜರ್ಮನರು ಬಾಂಬಿನ ಮಳೆಗರೆದಿರುವರು. ಕ್ರಿಮಿಯವನ್ನು ವಶಪಡಿಸಲು ಜರ್ಮನರು ಮಾಡಿದ ಸಿದ್ಧತೆಗಳು ಭಯಾನಕವಿರುವವು ರಶ್ಯನರು ಅದಷ್ಟು ಪರಾಕ್ರಮದಿಂದ ಧಾಳಿಯನ್ನು ಪ್ರತಿಭಟಿಸುತ್ತಿದ್ದಾರೆ

ರಶ್ಯನ್ ರಣಭೂಮಿಯಲ್ಲಿ

ಎಲ್ಲಾ ಕಡೆಗಳಲ್ಲಿಯೂ ಈಗ ಕಾದಾಟವಾಗುತ್ತಿದೆ ಯುಕ್ರೇನಿನಲ್ಲಿ ರಶ್ಯನ್ ಸೈನ್ಯಗಳ ಮುಖ್ಯ ಸೇನಾಪತಿ ಬುಡೆನಿ ಜರ್ಮನರ ವ್ಯೂಹದಿಂದ ಪಾರಾದನೆಂದು ಸುದ್ದಿ ೨೦೦,೦೦೦ ರಶ್ಯನ್ ಸೈನಿಕರು ಇನ್ನೂ ಜರ್ಮನರ ವಶವಿರುವರು ರಶ್ಯನರು ಯಾನೋರ್ ನೀಪರ್ ನದಿಯನ್ನು ದಾಟಿ ಅಝೋವ ಸಮುದ್ರದ ವರೆಗೆ ಮುನ್ನುಗ್ಗಿ ಬಂದಿರುವರು ಲೆನಿನ್‌ಗ್ರಾಡಿನ ಮತ್ತು ಅನೇಕ ಕಡೆಗಳಲ್ಲಿ ಕಾಳಗವಾಗುತ್ತಿದೆ ಲೆನಿನ್‌ಗ್ರಾಡನ್ನು ಭೇದಿಸಲು ಜರ್ಮನರಿಗೆ ಇದುವರೆಗೆ ಆಗಲಿಲ್ಲ ರಶ್ಯದ ವಿರುದ್ಧ ಯುದ್ಧಮಾಡುವುದನ್ನು ನಿಲ್ಲಿಸಬೇಕೆಂದೂ, ಇಲ್ಲವಾದರೆ ಫಿನ್ಲೆಂಡನ್ನು ಶತ್ರುರಾಷ್ಟ್ರವಾಗಿ ಪರಿಗಣಿಸಲಾಗುವುದೆಂದೂ ಬ್ರಿಟನು ರಶ್ಯಕ್ಕೆ ಎಚ್ಚರಿಕೆಯಿತ್ತಿರುವುದಾಗಿ ತಿಳಿದಿದೆ.

ಬಲ್ಗೇರಿಯ ಆಕ್ರಮಣ

ಕ್ರಿಮಿಯಾದ ಮೇಲೆ ಭೂವೈಮಾನಿಕ ಧಾಳಿ ನಡೆಸಬೇಕಾದರೆ ಬಲ್ಗೇರಿಯದ ವಿಮಾನ ಗೃಹಗಳನ್ನು ಮತ್ತೆ ಕಪ್ಪು ಸಮುದ್ರದ ಬಂದರುಗಳನ್ನು ಸ್ವಾಧೀನಪಡಿಸಬೇಕೆಂದು ಜರ್ಮನಿಯ ಹಂಚಿಕೆಯಿದೆಯಂತೆ. ಬಲ್ಗೇರಿಯನ್ ಗಡಿ

ನಾಡಿನಲ್ಲಿ ಜರ್ಮನ್ ಸೈನ್ಯಗಳು ಕೂಡಿರುವವು

ರಶ್ಯದ ಮೇಲೆ ಯುದ್ಧ ಸಾರುವಂತೆ ಜರ್ಮನರು ಜಪಾನಿಗೆ ಒತ್ತಾಯಮಾಡುತ್ತಿರುವರೆಂದು ಚೀನ ಪತ್ರಿಕೆಯ ಸುದ್ದಿ

ಬೊಹೆಮಿಯಾ ಮತ್ತು ಮೊರೆವಿಯಾಗಳ ಆರು ಜಿಲ್ಲೆಗಳಲ್ಲಿ ಗಂಡಾಂತರವೊದಗಿದೆಯೆಂದು ಪ್ರಕಟಮಾಡಲಾಗಿದೆ ಬೊಹೆಮಿಯ ಸರಕಾರದ ಮುಖ್ಯಮಂತ್ರಿ ಎಲಾಯಸನನ್ನು ಅಕ್ಷನ್ಯ ಅಪರಾಧದ ಮೇಲೆ ಬಂಧಿಸಲಾಗಿದೆ ಜನರು ಜರ್ಮನಿಯ ವಿರುದ್ಧ ಪ್ರಚಾರಮಾಡುವುದನ್ನು ತಡೆವ ಸಲುವಾಗಿ ಈ ರೀತಿ ನಿರ್ಬಂಧವೆಂದು ತಿಳಿದು ಬರುತ್ತದೆ

ತ್ರಿರಾಷ್ಟ್ರ ಒಪ್ಪಂದ

ಬ್ರಿಟನ್ ಅಮೆರಿಕ ರಶ್ಯಗಳ ನಡುವೆ ಒಂದು ಒಪ್ಪಂದವಾಗುವ ಪರಿಷತ್ತು ಮೋಸ್ಕೋದಲ್ಲಿ ಜರಗುತ್ತಿದೆ ರಶ್ಯದ ವಿದೇಶ ಮಂತ್ರಿ ಮೊಲೊಟೋವರು ಇದರ ಅಧ್ಯಕ್ಷತೆ ವಹಿಸಿದರು ಬ್ರಿಟನಿನ ಪರವಾಗಿ ಲಾರ್ಡ್ ಬ್ರಿವರ್ ಬ್ರೂಕರೂ ಅಮೆರಿಕದ ಪರವಾಗಿ ಹ್ಯಾರಿಮೆನ್‌ರೂ ಹೋಗಿದ್ದರು. ರಶ್ಯಕ್ಕೆ ಈ ಯುದ್ಧದಲ್ಲಿ ಸಂಪೂರ್ಣ ಸಹಾಯ ಕೊಡುವ ವಿಷಯದಲ್ಲಿ ಅವರು ಯೋಚಿಸುತ್ತಿದ್ದಾರೆ

ತಟಸ್ಥ ಕಾಯಿದೆ

ಅಮೆರಿಕವು ತಟಸ್ಥ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಸಿನೆಟರ್ ಮಾರ್ಕ್‌ಮಿಲರು ಒಂದು ನಿರ್ಣಯವನ್ನು ಸಿನೆಟ್ ಸಭೆಯಲ್ಲಿ ಮಂಡಿಸಿದರು. ರೂಸ್‌ವೆಲ್ಟರು ಅದಕ್ಕಿಂತಲೂ ಒಂದು ಹೆಜ್ಜೆ ಮುಂದಿಡುವ ವಿಚಾರ ಮುಂದಿನ ವಾರ ಕೂಡಲಿರುವ ಕಾಂಗ್ರೆಸಿನಲ್ಲಿ ಅಭಿಪ್ರಾಯ ಸೂಚಿಸುವರೆಂದು ತಿಳಿದಿದೆ

ಅಟ್ಲಾಂಟಿಕ್ ಸಾಗರದಲ್ಲಿ ಪನಮಾ ಧ್ವಜವನ್ನು ಹಚ್ಚಿಕೊಂಡು ಸಂಚರಿಸುತ್ತಿದ್ದ 'ಪ್ರಿನಿದಪದ್' ಎಂಬ ಅಮೆರಿಕದ ಹಡಗವೊಂದು ಮುಳುಗಿರುವುದಾಗಿ ತಿಳಿದಿದೆ ಇದರಿಂದ ಅಮೆರಿಕವು ಮತ್ತಷ್ಟು ಕೆರಳುವಂತಾಗಿದೆ

HALFTONE & LINE BLOCK MAKING UNDERTAKEN

Sharada Press, MANGALORE.

NOTICE

In the Court of the District Munsif of Mangalore

S C no 565/1911

Between

Toledar Shesha shet & sons merchants Bunder, Mangalore } Plaintiffs

and

Narayana Kinjava nephew of Pattoli Ramanna Shetty residing in Konaje village of Mangalore Taluk } Defendant

Notice is hereby given that the above suit filed by the plaintiffs against the defendant for recovery of Rs 118-14-0 due under a pronote dated J 5-1940 is posted to 16-10 41 for hearing and if the defendant fails to appear before the Court at 11 A m on the said date either in person or by pleader the suit will be proceeded with exparte.

(By order of the Court)

Mangalore, 2-10-1948. } **B Srinivasa Pai** Vakil for Plaintiff



ಸ್ವದೇಶಾಭಿಮಾನಿ

ತಾರೀಕು 3—10—1941

ಗಾಂಧಿ ಜಯಂತಿ

ಮಹಾತ್ಮಾ ಗಾಂಧಿಜಿ, ಇಂದು ತನ್ನ ಎಪ್ಪತ್ತೆರಡನೆಯ ವರ್ಷವನ್ನು ದಾಟಿ ನಿಂದಿರುವರು. ದೇಶದ ಕಲ್ಯಾಣಕ್ಕಾಗಿ, ಲೋಕದ ಕಲ್ಯಾಣಕ್ಕಾಗಿ ಗಾಂಧಿಜಿ ಇದುವರೆಗೆ ಹಲಕಾಲದಿಂದ ಮಾಡುತ್ತಾ ಬಂದ ಸೇವಾಕಾರ್ಯಗಳನ್ನು ಗಮನಕ್ಕೆ ತಂದು ಕೊಂಡು ದೇಶಕ್ಕೆ ದೇಶವೇ ಗಾಂಧಿಜಯಂತಿಯ ಈ ಸಂದರ್ಭದಲ್ಲಿ ಅವರ ಆಯುರಾರೋಗ್ಯಗಳ ಸಲುವಾಗಿ ಪ್ರಾರ್ಥಿಸುತ್ತಿದೆ. ಘೋರ ಹಿಂಸಾಮಯ ಕಾಳಗವು ಸುತ್ತಲೂ ನಡೆಯುತ್ತಿರುವೀಕಾಲದಲ್ಲಿ, ಅಹಿಂಸೆಯ ಶಾಂತಿ ಸಂದೇಶವನ್ನು ಸಾರುವ ಜಗದುದ್ಧಾರಕ ಯುಗ ಪುರುಷನನ್ನು ಲೋಕದ ಜನತೆಯೆಲ್ಲವೂ ಸ್ಮರಿಸಿಕೊಂಡಾಡುತ್ತದೆ.

ಲೋಕವು ಇಂದು ಯುದ್ಧಾಸಕ್ತವಾಗಿರುವಾಗ, ಹಿಂಸೆಗೆ ಪ್ರತಿ ಹಿಂಸೆಯೆದ್ದು ಘೋರ ರೂಪವನ್ನು ತಾಳಿರುವಾಗ, ಪ್ರಳಯ ಸದೃಶ ದೃಶ್ಯವು ಸುತ್ತಲೂ ಪ್ರತ್ಯಕ್ಷವಾಗಿ ಸಾಗುತ್ತಿರುವಾಗ, ಮನುಷ್ಯನ ಸ್ವಾರ್ಥ ಪಿಶಾಚಿಯು ಹೀಗೆ ರುದ್ರಾಕಾರವನ್ನು ತಾಳಿರುವಾಗ, ಮಹಾತ್ಮಾಜಿ ಸತ್ಯ ಅಹಿಂಸೆಗಳನ್ನು ಸಾರುವ ಮಹಾಪುರುಷನಾಗಿ ನಮ್ಮ ನಡುವೆ ಬಾಳಿಕೊಂಡಿರುವುದು ಭಾರತೀಯರ ಭಾಗ್ಯವೆನಬೇಕು. ಇಂದು ರಣಮತ್ತ ಜನರೆದುರು ಅಹಿಂಸಾತತ್ವವನ್ನು ಹೇಳುವುದು ಅಪಹಾಸ್ಯವಾಗಿ ತೋರಿ ಬಂದರೂ, ಮುಂದೆ ಇಡಿಯ ಜಗತ್ತೇ ಸುಖ ಶಾಂತಿಗಳನ್ನು ಕಾಣಬೇಕಾದರೆ ಅಹಿಂಸಾ ಪ್ರವೃತ್ತಿಗೆ ಮರಳದೆ ಇರಲು ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ಖಂಡಿತವಾಗಿ ತಿಳಿಯಬೇಕಾಗಿದೆ. ಇಂದು ಸಂದೇಹ ಸಾವಿರಗಳ ಕಗ್ಗತ್ತಲೆಯಲ್ಲಿ ಕಂಗೆಡುತ್ತಿರುವ ಜಗತ್ತಿಗೆ ಗಾಂಧಿಜಿಯವರ ಅಹಿಂಸಾತತ್ವವು ಒಂದೇ ಒಂದು ಬದುಕುವ ಭರವಸೆಯನ್ನುಹುಟ್ಟಿಸುವುದಾಗಿದೆ. ಇದನ್ನು ಪಾಶ್ಚಿಮಾತ್ಯ ವಿದ್ವಾಂಸರೂ ಅನೇಕರು ಒಪ್ಪಿಕೊಂಡಿರುವರು.

ಗಾಂಧಿಜಿಯವರಿಗೆ ಭಾರತದ ಜನತಾಜೀವನದಲ್ಲಿರತಕ್ಕ ಗೌರವವು ಬೇರೆ ಯಾರಿಗೂ ಇಲ್ಲ. ಇಂದು ಕಾಂಗ್ರೆಸಿನ ಏಕೈಕ ಧುರೀಣನಾಗಿ ದೇಶದ ಅದೃಷ್ಟವನ್ನು ನಿಶ್ಚಯಿಸುವ ಮಹಾ ಸಾಧನೆಯನ್ನು ಅವರು ಕೈಕೊಂಡಿದ್ದಾರೆ. ಗಾಂಧಿಜಿ ನಮ್ಮನ್ನು ಜಯದಿಂದ ವಿಜಯದ ಹಾದಿಗೆ ಸಾಗಿಸುವ ಮಹಾಮುಂದಾಳುವೆಂದು ಜನತೆ ಅವರನ್ನು ಹಿಂಬಾಲಿಸಿ ನಿಂತಿದೆ. ಗಾಂಧಿಜಿ ತಮ್ಮ ಜೀವನದ ಈ ಕಡೆಯ ಕಾಲದಲ್ಲಿ, ವೃದ್ಧಾಪ್ಯದಲ್ಲಿಯಾದರೂ ಬಹಳ ಹೊಣೆಗಾರಿಕೆಯನ್ನು ಹೊತ್ತು ದೇಶದ ಏಳಿಗೆ ಸಾಧಿಸಲು ನಿರತರಾಗಿದ್ದಾರೆ. ಭಾರತದ ಬಂಧ ವಿಮೋಚನೆಯೊಡನೆ ಅಖಿಲ ಜಗತ್ತಿನ ಬಂಧವಿಮೋಚನೆಯಾಗಬೇಕೆಂಬಷ್ಟು ವಿಶಾಲ ತತ್ವವು ಮಹಾತ್ಮರದಾಗಿದೆಯೆಂಬುದು ಅವರ ಜೀವನವನ್ನು ಅಭ್ಯಸಿಸಿದವರಿಗೆ ತಿಳಿಯದಿರದು.

ಗಾಂಧಿಜಿ ಹದಿಮೂರು ಸೂತ್ರಗಳ ರಚನಾತ್ಮಕ ಕಾರ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ. ಎಲ್ಲದಕ್ಕಿಂತಲೂ ಹೆಚ್ಚು ಇವರಿಗೆ ಖಾದಿ ಪ್ರಚಾರವು ಪ್ರಿಯವಾದುದು. ಮಹಾತ್ಮರಲ್ಲಿ ಭಕ್ತಿಯುಳ್ಳವರು ಖಾದಿಯ ಪ್ರಚಾರಕ್ಕೆ ಪಣತೊಡುವುದು ಆಗತ್ಯ. ಅದರಿಂದ ನಾವು ಮಹಾತ್ಮರ ಮೇಲಿನ ನಮ್ಮ ಗೌರವವನ್ನು ತೋರಿಸುವುದು ಮಾತ್ರವಲ್ಲ ದೇಶದ ಬಡತನವನ್ನು ಪರಿಹರಿಸಲು ನೆರವಾದಂತಾಗುವುದು; ರಾಷ್ಟ್ರದ ಸ್ವಾತಂತ್ರ್ಯ ಸುಖ ಶಾಂತಿಗಳಿಗೆ ಸಹಾಯ ಮಾಡಿದಂತಾಗುವುದು. ಕಾಂಗ್ರೆಸಿನವರು ಮಾತ್ರವಲ್ಲ, ಗಾಂಧಿಜಿಯ ಮೇಲೆ ಭಕ್ತಿ ಗೌರವಗಳುಳ್ಳವರೆಲ್ಲರೂ ಇದನ್ನು ಮಾಡಬೇಕಾಗಿ ನಮ್ಮ ವಿನಂತಿಯಿದೆ. ಗಾಂಧಿಜಿಗೆ ದೀರ್ಘಾಯುರಾರೋಗ್ಯಗಳು ಒದಗಿ ಅವರಿಂದ ಭಾರತದ ಬಂಧವಿಮೋಚನೆಯಾಗಲಿ ಎಂಬುದು ನಮ್ಮೆಲ್ಲರ ಪ್ರಾರ್ಥನೆಯಾಗಿದೆ.

ವೈಸರಾಯರ ಅವಧಿ

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರ ಅಧಿಕಾರಾವಧಿಯು ಈಗ ಇನ್ನೊಂದು ವರ್ಷಕ್ಕೆ ಮುಂದುವರಿಸಲಾಗಿದೆ. ಭಾರತದ ಆಡಳಿತ ಮಾಡಿದ ವಿಷಯದಲ್ಲಿ ಲಿನ್‌ಲಿತ್‌ಗೋ ಸಾಹೇಬರ ಕುರಿತು ಚರ್ಚಿಲ್ ಸಾಹೇಬರಿಗೆ ತುಂಬಾ ವಿಶ್ವಾಸವಿದೆಯೆಂಬುದಿಷ್ಟು ಇದರಿಂದ ವ್ಯಕ್ತವಾದಂತಾಯಿತು. ಇಂದಿನಂತಹ ಬಹಳ ವಿಷಮ ಕಾಲದಲ್ಲಿ ಇನ್ನೊಂದು ವರ್ಷದ ವರೆಗೆ ಭಾರತದ ರಾಜ್ಯಸೂತ್ರವನ್ನು ನಡೆಸಲು ಬ್ರಿಟಿಷ್ ಸರಕಾರದಿಂದ ನಿಯುಕ್ತರಾದ ಲಾರ್ಡ್ ಲಿನ್‌ಲಿತ್‌ಗೋರವರು ಭಾರತದ ಜನಮತವನ್ನು ಎಷ್ಟರ ಮಟ್ಟಿಗೆ ತೃಪ್ತಿಪಡಿಸಬೇಕಾದ ಹೊಣೆಗಾರಿಕೆಯಿದೆಯೆಂಬುದು ಅವಶ್ಯ ಅವರು ವಿಚಾರಿಸತಕ್ಕದ್ದಿದೆ.

ಇಂದಿನ ಕಾಲವು ರಾಷ್ಟ್ರರಾಷ್ಟ್ರಗಳ ಇತಿಹಾಸದಲ್ಲಿ ಬಹಳ ಸಂಧಿಯ ಕಾಲವಾಗಿದೆ. ಬ್ರಿಟನು ಜರ್ಮನಿಯೆದುರು ಇಂದು ಘನ ಘೋರವಾದ ಕಾಳಗಕ್ಕಿಳಿದಿದೆ. ಜರ್ಮನಿಯ ನಾಜೀ ರಾಜ್ಯಭಾರದ ನೀತಿಯನ್ನಂತೂ ಭಾರತೀಯರು ಖಂಡಿಸಿರುತ್ತಾರೆ. ಬ್ರಿಟನು ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಸಲುವಾಗಿ ಜರ್ಮನಿಯೆದುರು ಹೋರಾಡುತ್ತಿದೆಯೆಂದು ಹೇಳತೊಡಗಿದೆ. ಇಷ್ಟಿರುವಾಗಲೂ ಭಾರತದ ಜನಮತವನ್ನು, ಭಾರತದ ಮುಖಂಡರನ್ನು ಸಮಧಾನ ಪಡಿಸಿ ರಾಜಕೀಯ ತೊಡಕನ್ನು ಬಗೆ ಹರಿಸಲು ವೈಸರಾಯರು ಅಸಮರ್ಥರಾದುದು ಅವರಲ್ಲಿ ಕಾರ್ಯ ನೈಪುಣ್ಯವುಂಟೆಂಬುದನ್ನು ತೋರಿಸುವುದಿಲ್ಲ. ಕೃಷಿಯ ವಿಷಯವಾಗಿ ವೈಸರಾಯರು ಅತ್ಯಾಸಕ್ತಿ ವಹಿಸುತ್ತಿರುವರೆಂದು ಅಖಿಲ ಭಾರತವೇ ಅವರ ಕಡೆಗೆ ಆಶಾತುರವಾಗಿ ಒಮ್ಮೆ ನೋಡಿತ್ತು. ಆದರೆ ಕೆಲವೊಂದು "ಬೀಜದ ಹೋರಿ" ಗಳನ್ನು ಬಿಟ್ಟರೆ ಹೆಚ್ಚಿನ ಫಲಿತಾಂಶವು ಆ ವಿಷಯದಲ್ಲಿಯೂ ಕಂಡು ಬರಲಿಲ್ಲ. ಹೀಗಾಗಿ ಅವರ ಹಿಂದಿನ ಕಾರ್ಯಕಲಾಪಗಳು ಜನಮತವನ್ನು ತೃಪ್ತಿ ಪಡಿಸಲು ಸಾಕಷ್ಟು ಸಹಕಾರಿಗಳಾಗಿಲ್ಲ.

ಆದರೆ ಇನ್ನು ಮುಂದೆ ಬಹಳ ದೊಡ್ಡ ಹೊಣೆಗಾರಿಕೆಯುಳಿದಿದೆ. ಬ್ರಿಟನು ಭಾರತದ ಕಡೆ ಹೆಚ್ಚಿನ ಸಹಾನುಭೂತಿ ತೋರಿಸುವಂತೆ ಮಾಡುವ ದೊಡ್ಡ ಜವಾಬ್ದಾರಿ ಅವರದಿದೆ; ಚರ್ಚಿಲರ ವಿಶಾಲ ದೃಷ್ಟಿಯಲ್ಲಿ ಭಾರತವು ಅಡಗದಿರುವ ಕೊರತೆಯನ್ನು ಪರಿಹರಿಸಲು ವೈಸರಾಯರು ಪ್ರಯತ್ನಿಸತಕ್ಕದ್ದಿದೆ. ಹೊಸದಾಗಿ ರಚಿತವಾದ ವೈಸರಾಯ ಕೌನ್ಸಿಲಿನ ಸದಸ್ಯರಿಂದ ಹೆಚ್ಚಿನ ದೇಶೋಪಕಾರೀ ಕಾರ್ಯಗಳು ನಡೆಯುವಂತೆ ನೋಡಬೇಕಾಗಿದೆ. ಪ್ರಾಂತಿಕ ಅಧಿಕಾರಗಳು ಜನತೆಯ ಹೊಣೆಗಾರಿಕೆಯವುಗಳಾಗುವಂತೆ ಮಾಡಬೇಕಾಗಿದೆ. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವಿರುವಂತೆ ಪ್ರಯತ್ನಿಸಬೇಕಾಗಿದೆ. ಒಟ್ಟಿನಿಂದ ಭಾರತದಲ್ಲಿರುವ ರಾಜಕೀಯ ಸಮಸ್ಯೆಯನ್ನು ಪರಿಹರಿಸಿ ಬ್ರಿಟನಿಗೂ ಭಾರತಕ್ಕೂ ಮಧುರ ಸಂಬಂಧ ಬೆಳೆಸಿ, ಉಭಯ ರಾಷ್ಟ್ರಗಳೂ ಏಳಿಗೆ ಹೊಂದುವ ಹಂಚಿಕೆಯನ್ನು ವೈಸರಾಯರು ಮಾಡುವುದು ಅವಶ್ಯವಿದೆ. ಈ ವಿಷಯಗಳನ್ನು ವೈಸರಾಯರು ತಮ್ಮ ಮುಂದಿನ ವರ್ಷದ ಅಧಿಕಾರ ಅವಧಿಯಲ್ಲಿ ನೆನಪಿನಲ್ಲಿಟ್ಟು ಕೊಳ್ಳಲಾರರೆ?

ಟಿಪ್ಪಣಿಗಳು...

ಭಾರತ ಮಂತ್ರಿ ಅಮೆರಿಯವರು ಭಾರತದಲ್ಲಿ ಬ್ರಿಟನು ಅನುಸರಿಸುವ ನೀತಿಯು ನ್ಯಾಯವೆಂಬ ಕುರಿತು ಅಮೆರಿಕನರು ಕೆಲವರು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಒಂದು ಆಕಾಶ ಭಾಷಣಮಾಡಿದರು.

● ● ●

ಅಮೆರಿಯವರು ಈ ಆಕಾಶ ಭಾಷಣ ಮಾಡಿ, ಅಮೆರಿಕನರು ಬ್ರಿಟನಿನ ನ್ಯಾಯ ನೀತಿಗಳ ವಿಷಯ ಸಂದೇಹ ಗ್ರಸ್ತರಾಗದಂತೆ ಮಾಡಲು ಯತ್ನಿಸಿದರು. ಬಹು ಚಂದವಾದ ವಾದ ಸರಣಿಯನ್ನು ಅಮೆರಿಕನರ ಮುಂದೆ ಅವರು ಮಂಡಿಸಿದರು.

● ● ●

"ಬ್ರಿಟನು ಭಾರತದಿಂದ ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ ತೆರಿಗೆಗಳನ್ನು ಎತ್ತುತ್ತದೆಯೆ?" ಇದು ಅಮೆರಿಯವರಿಗೆ ಅಮೆರಿಕನರೊಬ್ಬರ ಪ್ರಶ್ನೆಯಾಗಿತ್ತು!

● ● ●

"ಭಾರತದಿಂದ ಬ್ರಿಟನು ತೆರಿಗೆ ಎತ್ತುವುದಕ್ಕಿಂತ, ಭಾರತದ ರಕ್ಷಣೆಯ ಸಲುವಾಗಿ ಬ್ರಿಟನೇ ಅನೇಕ ಡೋಲರುಗಳನ್ನು ವೆಚ್ಚಮಾಡುತ್ತದೆಯಲ್ಲಾ!" ಅಮೆರಿಯವರು ಹೀಗೆಂದು ಉತ್ತರ ಹೇಳಿ ಬ್ರಿಟನಿನ ಪರೋಪಕಾರೀ ಬುದ್ಧಿಯನ್ನು ಅಮೆರಿಕನರ ಮುಂದೆ ಬಿಚ್ಚಿಬಿಟ್ಟರು!

● ● ●

"ಭಾರತವು ಬ್ರಿಟನಿಗೆ ಇಂತಹ ದೊಡ್ಡ ಹೊರೆಯಾಗಿದ್ದರೆ, ಬ್ರಿಟನು ಭಾರತವನ್ನು ಅದರ ಪಾಲಿಗೇ ಯಾಕೆ ಬಿಟ್ಟು ಬಿಡಬಾರದು?" ಹೀಗೆಂದು ಅಮೆರಿಕನರೇ ಯಾಕೆ ಪ್ರಪಂಚದ ಯಾವುದೇ ಪ್ರಾಣಿಯಾದೂ ಪ್ರಶ್ನೆ ಹಾಕಬಹುದಲ್ಲವೆ?

● ● ●

"ನಾಲ್ಕು ಜನ ಆಂಗ್ಲೆಯರಲ್ಲಿ ಒಬ್ಬನಂತೆ ಭಾರತದಿಂದಾಗಿ ಬದುಕುತ್ತಾನೆ" ಎಂದು ಅಂತರಾಷ್ಟ್ರೀಯ ಸಂಘವೊಂದು ನಿರ್ಣಯಿಸಿರುವುದನ್ನು ಅಮೆರಿಯವರು ತಿಳಿದಿರಲಾರರೆ?

● ● ●

ಇದರಿಂದ ಭಾರತಕ್ಕೆ ಬ್ರಿಟನು ತೆರಿಗೆ ಹೊರಿಸಿದಂತಾಗುವುದೆಂದು ಅಮೆರಿಯವರು ಬಹುಶಃ ಒಪ್ಪಲಿಕ್ಕಿಲ್ಲ. "ಆಳುವುದಕ್ಕೂ" ತೆರಿಗೆ ಹಾಕುವುದಕ್ಕೂ ವ್ಯತ್ಯಾಸವಿರಬೇಕು. ಭಾರತವನ್ನು "ಆಳುವುದರಿಂದ" ಬ್ರಿಟನು ಅಲ್ಲಿಂದ ಅಷ್ಟು ಲಾಭವನ್ನು ಪಡೆಯುವುದು ಸರಿಯಾದರೆ, ಅದನ್ನು ತೆರಿಗೆ ಹಾಕುವುದೆನ್ನಲು ಬರುವುದಿಲ್ಲವೆಂದು ಅಮೆರಿ ಅಭಿಪ್ರಾಯ ಪಟ್ಟಿರಬೇಕು.

● ● ●

ಭಾರತದ ಹಿತಕ್ಕಾಗಿ ಬ್ರಿಟನು ಅದನ್ನು ಆಳುತ್ತಿರುವಾಗ ಭಾರತದಿಂದ ಬ್ರಿಟಷರಿಗೆ ಲಾಭವಾಗಿದ್ದರೆ "ಆಳಿದುದರ

[೩ನೆಯ ಕಾಲಮನ್ನು ನೋಡಿ]

ಪ್ರತಿಫಲವು ದೊರಕಿದಂತಾಯಿತಲ್ಲದೆ ಅದು ತೆರಿಗೆ ಹೊರಿಸಿದಂತಾಗಲಿಲ್ಲವೆಂದು ಅಮೆರಿ ಖಂಡಿತ ವಾದಿಸಿರಬೇಕು.

● ● ●

ಹೇಗಿದ್ದರೂ ಅಮೆರಿಯವರು ಅಮೆರಿಕನರ ಮೇಲೆ ತಮ್ಮ ಪ್ರಭಾವ ಬೀರಲು ಯತ್ನಿಸಿದರು.

● ● ●

ಅಮೆರಿಕದಲ್ಲಿಯೂ ಬುದ್ಧಿವಂತರು ಇರಬಹುದು; ಅಮೆರಿಕನರು ಅಮೆರಿಯವರು ಹೇಳಿದ್ದೆಲ್ಲ ವೇದವಾಕ್ಯವೆಂದು ತಿಳಿದುಕೊಳ್ಳುವಷ್ಟು ಮೂಢರೆನಲು ಸಾಧ್ಯವಿಲ್ಲ.

ಬಾಬು ಸುಬಾಸಬೋಸರು ಎಲ್ಲಿದ್ದಾರೆ?

ಲಿನ್‌ಲಿತ್‌ಗೋರವರಿಗೆ ಅಪ್ಪಣೆ ಕೊಡಿರಿ

ಮೆಂಚೆಸ್ಟರ್ ಗಾರ್ಡಿಯನ್ ಟೀಕಿಸಿತು

ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸ್ ಪಕ್ಷ ಹೋಗಕೂಡದು



ಸುಬಾಸ ಬೋಸರೆಲ್ಲಿ?

"ಇಂದು ನಮ್ಮ ಮುಂದಾಳು ನಮ್ಮ ಮಧ್ಯದಲ್ಲಿಲ್ಲ. ಯಾರಿಗೂ ತಿಳಿಯದಂತೆ ಅವರು ಮನೆ ಬಿಟ್ಟು ಹೋದರು. ಅವರು ಎಲ್ಲಿರುವರೆಂದು ತಿಳಿದುಕೊಳ್ಳಲು ನಮಗೆ ಸಾಧ್ಯವಿಲ್ಲ ಆದರೆ ಅವರ ಆದರ್ಶ ಮತ್ತು ಕಾರ್ಯಕ್ರಮಗಳು ನಮ್ಮ ಮುಂದಿವೆ. ಅವರ ಮುಗಿಸದ ಕಾರ್ಯಗಳನ್ನು ಮುಂದುವರಿಸಿ ನಾವೀಗ ಮುಂದಡಿಯಿಡುವ ತಮ್ಮ ಜೀವನದಲ್ಲಿ ಬಹಳ ಉತ್ತೇಜನಕಾರಿಯೂ, ಪ್ರಿಯಕರವೂ ಆದ ಭಾರತದ ಸೇವಾ ಕಾರ್ಯವನ್ನು ಅವರು ಇನ್ನೊಮ್ಮೆ ಹೆಚ್ಚಿನ ಶಕ್ತಿ ಮತ್ತು ಸಾಮರ್ಥ್ಯಗಳಿಂದ ಮಾಡಿ ಮರಳಿಬಂದು ನಮ್ಮನ್ನು ಮುನ್ನಡೆಸಲಿ. ಹೀಗೆಂದು "ರಾಮಘರ್‌ನಿಂದ ದಿಲ್ಲಿಗೆ" ಎಂಬೀ ಪುಸ್ತಕದ ಮುನ್ನುಡಿಯಲ್ಲಿ ಶ್ರೀ ಮುಕುಂದಲಾಲ ಸರ್ಕಾರರು ಉದ್ಘೋಷಿಸಿದ್ದಾರೆ.

ಅಣೆ ಗಾಂಧಿ ಭೇಟಿ

ಲೋಕನಾಯಕ ಎಂ. ಎಸ್ ಅಣೆಯವರು ವರ್ಧಾಕ್ಕೆ ಬಂದು ಗಾಂಧಿಜಿಯ ಭೇಟಿ ಮಾಡಿದರು

ಅಮೇರಿಕದಲ್ಲಿ ಭಾರತದ ವಿಚಾರ ಸಹಾನುಭೂತಿಯಿದೆ

ಕಮಲಾ ದೇವಿ ಹೇಳಿದರು

ಜಗತ್ ಪ್ರವಾಸ ಮುಗಿಸಿ ಮುಂಬಯಿಗೆ ಮರಳಿಬಂದ ಕಮಲಾ ದೇವಿಯವರು ಪತ್ರಿಕಾ ಪ್ರತಿನಿಧಿಗಳ ಭೇಟಿಯ ಸಮಯದಲ್ಲಿ ಅಮೆರಿಕದಲ್ಲಿ ಹೆಚ್ಚಾಗಿ ಭಾರತದ ವಿಷಯ ಜನರಿಗೆ ಗೊತ್ತಿಲ್ಲ. ತಿಳಿಸಿದರೆ ಅವರಿಗೆ ಸಹಾನುಭೂತಿಯಾಗುತ್ತಿದೆ ಅಲ್ಲಿ ಪ್ರಚಾರ ಮಾಡಬೇಕಾಗಿದೆಯೆಂದು ಹೇಳಿದಳು.

ಸತ್ಯಾಗ್ರಹದ ಬಗ್ಗೆ ಗಾಂಧಿಜಿಯವರೊಡನೆ ವಿಚಾರ ವಿನಿಮಯ

ಕೆಲವು ಕಾಂಗ್ರೆಸ್ ಮುಖಂಡರು ಮುಂದಿನ ತಿಂಗಳಲ್ಲಿ ಗಾಂಧಿಜಿಯವರೊಡನೆ ವಿಚಾರ ವಿನಿಮಯ ಮಾಡಲಿರುವರೆಂದು ತಿಳಿದಿದೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೇರುವ ಸಂಭವವಿರುವುದಿಲ್ಲವೆಂದು ಸುದ್ದಿ.

ಸ್ವರಾಜ್ಯ ಒಮ್ಮೆಲೇ ಸಿಗದು

ಅಣೆ ಹೇಳುತ್ತಾರೆ

ಸ್ವರಾಜ್ಯವು ಒಮ್ಮೆಲೇ ಸಿಗದಾದ್ದರಿಂದ ಸಿಕ್ಕಿದಷ್ಟನ್ನು ಪರಿಗ್ರಹಿಸಿ ಹೆಚ್ಚಿನದಕ್ಕೆ ಕೆಲಸಮಾಡಬೇಕು. ಕಾಂಗ್ರೆಸು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟದ್ದು ತಪ್ಪು. ಸತ್ಯಾಗ್ರಹಕ್ಕೆ ಇದು ತಕ್ಕ ಸಮಯವಲ್ಲವೆಂದು ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಅಧಿಕಾರ ವಹಿಸಿದ ಅಣೆ ಹೇಳಿದರು

ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸ್ ಪಕ್ಷ ಹೋಗಕೂಡದು

ಯಾವ ಕಾರಣದಿಂದ ಎಸೆಂಬ್ಲಿಗೆ ಕಾಂಗ್ರೆಸ್ ಪಕ್ಷದ ಸದಸ್ಯರು ಬಹಿಷ್ಕಾರ ಹಾಕಿದರೋ ಆ ಕಾರಣವು ಇನ್ನೂ ಇರುವುದರಿಂದ ಕಾಂಗ್ರೆಸ್ ಪಕ್ಷವು ಎಸೆಂಬ್ಲಿಗೆ ಹೋಗಕೂಡದೆಂದು ರಾಜೇಂದ್ರ ಪ್ರಸಾದರು ಹೇಳಿದರು ಸತ್ಯಮೂರ್ತಿಯವರು ಹೋಗಬೇಕಾಗಿ ರಾಜೇಂದ್ರ ಪ್ರಸಾದ ಮತ್ತು ಗಾಂಧಿಜಿಯವರಿಗೆ ಬರೆದಿದ್ದರು

ಎಮೆರಿ ಲಿನ್‌ಲಿತ್ ಗೋರವರಿಗೆ ಅಪ್ಪಣೆ ಕೊಡಿರಿ

ಮೆಂಚೆಸ್ಟರ್ ಗಾರ್ಡಿಯನ್ ಹೇಳಿಕೆ

ಭಾರತದ ವೈಸರಾಯರಾದ ಲಾರ್ಡ ಲಿನ್‌ಲಿತ್‌ಗೋ ಮತ್ತು ಭಾರತ ಮಂತ್ರಿ ಯಾದ ಎಮೆರಿ ಇವರಿಂದ ಶಾಂತಿ ಕಾರ್ಯವು ನೆರವೇರದಿರುವುದರಿಂದ ಅವರಿಗೆ ಇನ್ನು ಆ ಅಧಿಕಾರ ಬಿಟ್ಟು ಹೋಗುವುದಕ್ಕೆ ಅಪ್ಪಣೆ ಕೊಡುವುದು ಒಳ್ಳೆಯದು ಎಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಬರೆಯುತ್ತದೆ.

ರಾಷ್ಟ್ರೀಯ ಸಂರಕ್ಷಕ ಸಮಿತಿ

ಇದರ ಸಭೆಯು ವೈಸರಾಯರ ಅಧ್ಯಕ್ಷತೆಯಲ್ಲಿ ೬-೧೧-೪೧ಕ್ಕೆ ಸೇರಿ ಮೂರು ದಿನಗಳವರೆಗೆ ಕೆಲಸಮಾಡುವುದು. ವೈಸರಾಯರು ಪ್ರಾರಂಭ ಭಾಷಣ ಮಾಡುವರು.

ನಾವು ಯಾವ ಖಾದಿ ಕೊಂಡುಕೊಳ್ಳಬಹುದು?

ಗಾಂಧಿಜಿಯವರ ಉಪದೇಶ

"ಅಳವಾಗಿ ಬೇರುಬಿಟ್ಟ ನಮ್ಮ ದೇಶದ ಬಡತನವನ್ನು ಕಿತ್ತು ಹಾಕುವ ಸಾಮರ್ಥ್ಯವು ಖಾದಿಯಲ್ಲಿದೆ. ಅಖಿಲ ಭಾರತ ಚರಕಾ ಸಂಘದ ಪ್ರಶಸ್ತಿಯ ಖಾದಿಯನ್ನು ಪಡಕೊಂಡರೆ ನೀವು ಭಾರತದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಹಾಗೂ ಸ್ವಾತಂತ್ರ್ಯ ಸಾಧನೆಗೆ ಸರಳ ಮಾರ್ಗ ಮಾಡಿಕೊಟ್ಟಂತಾಗುವುದು. ಒಂಭತ್ತು ಲಕ್ಷ ಜನರನ್ನು ಪೋಷಿಸುತ್ತಿರುವ ಒಡತನವನ್ನು ಖಾದಿಯ ಸಹಾಯದಿಂದ ತೊಡೆದು ಹಾಕಬೇಕಾದರೆ, ಅದಕ್ಕೆ ಸರಕಾರ ಮತ್ತು ಇತರ ಸಂಸ್ಥೆಗಳ ಸಹಾಯ ಅವಶ್ಯ. ಅಖಿಲ ಭಾರತ ಚರಕಾ ಸಂಘದ ಪ್ರಶಸ್ತಿಯ ಖಾದಿಯನ್ನು ಮಾರಾಟ ಮಾಡುವವರು ಖಾದಿ ಕೆಲಸಗಾರರ ಉತ್ಪತ್ತಿಯನ್ನು ಕಸಿದುಕೊಳ್ಳುತ್ತಾರೆ. ಆದುದರಿಂದ ಅಂಥ ಖಾದಿಯನ್ನು ಕೊಂಡುಕೊಳ್ಳುವುದರಿಂದ ಕಳವಿನ ಮಾಲನ್ನು ಕೊಂಡುಕೊಂಡಂತಾಗುವುದು. ಆದುದರಿಂದ ಅಂಥವರು ಆ ವ್ಯಾಪಾರವನ್ನು ಬಿಟ್ಟು ಬಿಡಬೇಕು. ಸಾರ್ವಜನಿಕರು ಅಖಿಲ ಭಾರತ ಚರಕಾಸಂಘದ ಭಂಡಾರಗಳಿಂದಲೇ ಖಾದಿಯನ್ನು ಸ್ವಲ್ಪ ಬೆಲೆ ಹೆಚ್ಚಾದರೂ ಕೊಂಡುಕೊಳ್ಳಬೇಕು."

— ಮಹಾತ್ಮ ಗಾಂಧಿ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊ ಕಿಲರ್' ಎಂಬ ಸೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ, ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಪರಾಜಯ

Some for a gentle dream will die,
Some for an Empire's majesty,
Some for a loftier human kind,
Some to be true as cloud and wind.

ಅನುವಾದ: ಶ್ರೀ. ಕೆ. ಪಾಂಡುರಂಗ ನಾಯಕ್

ಪ್ರಕೃತಿಯ ಪೂಜಾರಿಯಾದ ಆ ಸನ್ಯಾಸಿಯು ನಿರ್ಜನವಾದ ಸ್ಥಾನದಲ್ಲಿ ಒಂದು ಕುಟೀರವನ್ನು ರಚಿಸಿ ಇರುತ್ತಿದ್ದನು. ಆ ಸ್ಥಾನವು "ಮೃಗ ಕಾನನ" ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಮೃಗ ಕಾನನವು ಪ್ರಾಕೃತಿಕ ಉಪಹಾರಗಳಿಂದ ಪರಿಪೂರ್ಣವಾಗಿ ಅತ್ಯಂತ ರಮಣೀಯ ಸ್ಥಾನವಾಗಿತ್ತು. ಅಲ್ಲದೆ ಹಚ್ಚಗೆ ಹಸುರಾದ ಲತಾ ವೃಕ್ಷಗಳ ನಡುವೆ ಸನ್ಯಾಸಿಯ ಎಳೆಚಿಗುರುಗಳಿಂದ ಕೂಡಿದ ಕುಟೀರವು ಸೌಂದರ್ಯದ ಪ್ರತಿಮೆಯೆಂಬಂತೆ ತೋರಿಬರುತ್ತಿತ್ತು. ಕಾಳಿದಾಸನ ಲೇಖನಿಯಿಂದ ವರ್ಣಿತವಾದ ಕಣ್ವಋಷಿಯ ನಿವಾಸಸ್ಥಾನದಂತೆ ಭಾಸವಾಗುತ್ತಿತ್ತು.

ಆ ಕುಟೀರದ ನಾಲ್ಕೂ ಕಡೆಗಳಲ್ಲಿಯೂ ಕಣ್ವಋಷಿಯ ಆಶ್ರಮದ ಹಾಗೆ ಸುಂದರ ಮೃಗಗಳು ಸಂಚರಿಸುತ್ತಿದ್ದವು. ಆದರೆ ಶಕುಂತಳೆ ಮತ್ತು ಶಕುಂತಳೆಯ ಸಖಿಯರ ಸ್ಥಾನವನ್ನು ಸ್ವೀಕರಿಸಲು ಯಾರೂ ಅಲ್ಲಿರಲಿಲ್ಲ. ಸನ್ಯಾಸಿಯಾದರೂ ಒಬ್ಬಂಟಿಗನಾಗಿಯೇ ಇರುತ್ತಿದ್ದನು. ಕಾಡು ಹೂ-ಹಣ್ಣುಗಳೇ ಆತನ ಸಂಪತ್ತಾಗಿದ್ದುವು. ಜೀವಜಂತುಗಳೇ ಆತನ ಪರಿವಾರಂತ ವ್ಯಕ್ತಿಗಳಾಗಿದ್ದರು ಮತ್ತು ಆ ದೃಷ್ಟಪುಷ್ಟವಾದ ಮೃಗಶಾವಕಗಳೇ ಆತನ ಗೆಳೆಯರಾಗಿದ್ದವು.

ಸನ್ಯಾಸಿಯು ಈ ನಂದನ ವನದ ಕೃಷ್ಣನೋ ಮತ್ತು ಆ ಕಪ್ಪಾದ ನೇತ್ರಗಳುಳ್ಳ ಶ್ವೇತವರ್ಣದ ಮೃಗಶಾವಕಗಳು ಗೋಪಿಕೆಯರೋ ಎಂದು ಭಾಸವಾಗುತ್ತಿತ್ತು. ಸನ್ಯಾಸಿಯು ನೆರಳಿನಲ್ಲಿ ಆಸನಾರೂಢನಾಗಿ ಕೊಳಲಿನ ಮನಮೋಹನವಾದ ಧ್ವನಿಗೈಯುತ್ತಿದ್ದನು. ಮೃಗಶಾವಕದ ಸಮೂಹವು ತಮ್ಮ ಕೃಷ್ಣನ ಚಿತ್ರವನ್ನು ಕಣ್ಣುಗಳ ಮುಂದಕ್ಕೆ ತಂದು ತಟಸ್ಥವಾಗಿ ನಿಂತುಕೊಳ್ಳುತ್ತಿದ್ದವು. ರಜನಿಯು ಚಂದ್ರದೇವನಿಂದ ಅಪ್ಪಣೆ ತೆಗೆದುಕೊಂಡು ತನ್ನ ಕಪ್ಪಾದ ಸೀರೆಯ ಸೆರಗನ್ನು ಸರಿಮಾಡುತ್ತಾ ಮಂದಗತಿಯಿಂದ ಹೊರಟು ಹೋದ ಕೂಡಲೇ ಸನ್ಯಾಸಿಯ ಈ ಅದ್ಭುತವಾದ ರಾಸಲೀಲೆಯು ಅಂತ್ಯವಾಗುತ್ತಿತ್ತು. ಈ ಜೀವನದಲ್ಲಿ ಸನ್ಯಾಸಿಯು ಅತ್ಯಂತ ಸಂತುಷ್ಟನಾಗಿದ್ದನು. ಅವನಿಗೆ ಮಾನಸಿಕ ಶಾಂತಿಯು ದೊರಕುತ್ತಿತ್ತು

೨

ಸನ್ಯಾಸಿಯು ಮೊದಲು ಜನನೀ ಜನ್ಮಭೂಮಿಯ ಸೇವಕನಾಗಿದ್ದನು. ಮತ್ತು ಒಂದು ಸಮಯದಲ್ಲಿ ಪ್ರಖ್ಯಾತ ಮುಖಂಡನೂ ಆಗಿದ್ದನು. ಇದೇ ಅಪವಾದದಿಂದ ಆತನಿಗೆ ೧೨ ವರ್ಷ ಕಠಿಣ ಕಾರಾಗೃಹ ವಾಸವನ್ನು ಅನುಭವಿಸಬೇಕಾಗಿ ಬಂತು. ಕಾರಾಗೃಹ ವಾಸದಿಂದ ಮುಕ್ತನಾದ ಬಳಿಕ ಆತನು ದೇಶದಲ್ಲಿ ಪ್ರಚಲಿತ ಆಂದೋಲನದಲ್ಲಿ ಭಾಗವನ್ನು ವಹಿಸಲಿಲ್ಲ. ಮಾನವ ಸಮಾಜದಿಂದ ತನ್ನ ಸಂಬಂಧವೆಲ್ಲವನ್ನೂ ಕಡಿದು "ಮಲ್ಲಿಕಾ" ರಾಜ್ಯದ ಒಂದು ಘೋರ ಅರಣ್ಯದಲ್ಲಿ ತನ್ನ ನಿವಾಸ ಸ್ಥಾನವನ್ನು ರಚಿಸಿಕೊಂಡಿದ್ದನು. ಇಲ್ಲಿಯೇ ಅವನು ಸ್ವಾತಂತ್ರ್ಯ ದೇವಿಯನ್ನೂ ಪ್ರತಿಷ್ಠಿಸಿ ಅದರ ಉಪಾಸಕನಾಗಿದ್ದನು.

ಜನ ಸಮೂಹವು ಈಗಲೂ ಕೂಡ ಸನ್ಯಾಸಿಯನ್ನು ಮರೆಯಲಿಲ್ಲ. ಆದರೆ ಅವನು ಪರಾಜಿತನಾಗಿ ಯಾರ ಸಮ್ಮುಖವೂ ಬರಲು ಇಚ್ಛಿಸುವುದಿಲ್ಲ ಎಂದು ಕೆಲವರ ಅಭಿಪ್ರಾಯವಿತ್ತು. ಸನ್ಯಾಸಿ ತನ್ನ ನೇತೃತ್ವವನ್ನು ಗ್ರಹಣ ಮಾಡಿಕೊಂಡು ಏನೆಲ್ಲಾ ಮಾಡಲು ಶಕ್ಯನಿದ್ದನೋ ಅದೆಲ್ಲವನ್ನೂ ಅವನು ಇಂದು ದೂರದಲ್ಲಿ ಇದ್ದುಕೊಂಡು ಕೂಡಾ ಮಾಡುತ್ತಾ ಇರುವನೆಂಬ ಅಭಿಪ್ರಾಯವು ಕೆಲವರದಾಗಿತ್ತು.

೩

ಮಲ್ಲಿಕಾ ರಾಜ್ಯದ ಶಾಸಕನಾದ ಮಹಾ ಬಲಿಷ್ಠ ವಿಕ್ರಮಶೀಲನು ತನ್ನ ರಾಜಧಾನಿಯಲ್ಲಿ ಒಂದು ವಿಶಾಲವಾದ ಮೃಗಾಲಯವನ್ನು (Zoo) ರಚಿಸಿದ್ದನು. ಆ ಮೃಗಾಲಯಕ್ಕೆ ವಿಕ್ರಮನು ಅಮಿತ ಧನವನ್ನು ವ್ಯಯಮಾಡಿದ್ದನು. ಆ ಮೃಗಾಲಯವು ಒಂದು ಆಶ್ಚರ್ಯ ಜನಕವಾದ ವಸ್ತುವಾಗಬೇಕು ಎಂದಿಚ್ಛೆಯಿತ್ತು ವಿಕ್ರಮನಿಗೆ. ತನ್ನ ಮೃಗಾಲಯವನ್ನು ನೋಡುವವರು ತಾವು ಒಂದು ಮೃಗಾಲಯವನ್ನು (Zoo) ನೋಡುತ್ತಾ ಇದ್ದೇವೋ ಅಥವಾ ವಾಸ್ತವಿಕ ಪ್ರಾಕೃತಿಕ ವಾತಾವರಣದಲ್ಲಿ ಪಶುಪಕ್ಷಿಗಳ ಆನಂದ ಲೀಲೆಯನ್ನು ಅವಲೋಕಿಸುತ್ತಿದ್ದೇವೋ ಎಂದು ವಿಸ್ಮಿತರಾಗಬೇಕು ಎಂದು ಆತನ ಆಶೆಯಾಗಿತ್ತು.

ವಿಕ್ರಮನಿಗೆ ಅತ್ಯಧಿಕ ಮೃಗಗಳನ್ನು ಒಟ್ಟುಮಾಡುವ ಚಟ(Hobby)ವಿತ್ತು. ಒಂದು ವಿಸ್ತಾರವಾದ ಮೈದಾನು ನಾಲ್ಕೂ ಕಡೆಗಳಿಂದ ಆವರಣಗಳಿಂದಲೂ ಆವರಿಸಲ್ಪಟ್ಟಿದ್ದಿತು. ಅದರಲ್ಲಿ ಸಾವಿರಾರು ಮೃಗಗಳು ಬಂಧಿಸಲ್ಪಟ್ಟಿದ್ದವು. ಮೈದಾನಿನ ನಡುವೆ ಒಂದು ಪೀಠವಿತ್ತು. ವಿಕ್ರಮಶೀಲನು ತನ್ನ ಪ್ರಸಿದ್ಧ ಸಂಗೀತಜ್ಞರನ್ನು ಒಡಗೂಡಿ ರಾತ್ರಿಯಲ್ಲಿ ಅಲ್ಲಿ ಬಂದು ಕೂತುಕೊಳ್ಳುತ್ತಿದ್ದನು. ಕುಶಲ ಕಲಾಕಾರರು ತಮ್ಮ ಸಂಗೀತದ ಮೂಲಕ ಜಂತುಗಳನ್ನು ತಮ್ಮ ಕಡೆಗೆ ಆಕರ್ಷಿಸುವಂತೆ ಪ್ರಯತ್ನಮಾಡುತ್ತಿದ್ದರು. ವಿಕ್ರಮನ ಜೀವನದಲ್ಲಿ ಇದೊಂದು ಮಹತ್ವಪೂರ್ಣ ಕಾರ್ಯಕ್ರಮವಾಗಿದ್ದಿತು. ಆದರೆ ಯಾವ ರೀತಿಯಲ್ಲಿಯೂ ಅವನ ಇಚ್ಛೆಯು ಪೂರ್ಣವಾಗುತ್ತಿದ್ದಿಲ್ಲ.

ಒಂದು ದಿನ ವಿಕ್ರಮನಿಗೆ ಸನ್ಯಾಸಿಯ ಮೃಗಮಂಡಲಿಯ ಸಮಾಚಾರವು ತಿಳಿಯಿತು. ವಿಕ್ರಮನು ಸ್ವತಃ ತನ್ನ ಕಣ್ಣುಗಳಿಂದ ಆ ದೃಶ್ಯವನ್ನು ಒಂದು ಸಲ ನೋಡಲು ಉದ್ಯುಕ್ತನಾದನು. ಅದೇ ಪೂರ್ಣಿಮೆಯ ರಾತ್ರಿಯಲ್ಲಿ ಆನೆಯ ಮೇಲೆ ಕುಳಿತುಕೊಂಡು ಅವನು ಅರಣ್ಯವನ್ನು ಪ್ರವೇಶಿಸಿದನು.

ಸನ್ಯಾಸಿಯು ಕೊಳಲನ್ನು ಬಾರಿಸುವುದರಲ್ಲಿ ತಲ್ಲೀನನಾಗಿದ್ದಾನೆ. ಮತ್ತು ಮೃಗಗಳು ಮೋಹಿತರಾಗಿ ಆತನನ್ನು ಮುತ್ತಿಕೊಂಡಿವೆ. ಇದನ್ನು ವಿಕ್ರಮನು ದೂರದಿಂದ ನೋಡಿದನು. ವಿಕ್ರಮನು ಅಲೌಕಿಕವಾದ ರಾಗ ಮತ್ತು ಅದ್ಭುತವಾದ ದೃಶ್ಯವನ್ನು ನೋಡಿ ಆಶ್ಚರ್ಯ ಚಕಿತನಾದನು. ಇಂಥಹ ದೃಶ್ಯವನು ಆತನು ತನ್ನ ಮೃಗಾಲಯದಲ್ಲಿರಿಸಿ ಅಖಿಲ ಸಂಸಾರದ ದೃಷ್ಟಿಯನ್ನು ಆ ಕಡೆ ಸೆಳೆಯ ಬಲ್ಲನಾಗಿದ್ದನು. ಹೇಗಾದರೂ ಮಾಡಿ ಆ ಎಲ್ಲಾ ಮೃಗಗಳನ್ನು ತನ್ನ ವಶಪಡಿಸಬೇಕು ಎಂದವನೆಣಿಸಿದನು. ಸನ್ಯಾಸಿಯನ್ನು ತನ್ನ ಕೈವಶ ಮಾಡುವುದೊಂದೇ ಉಪಾಯವಾಗಿತ್ತು.

ವಿಕ್ರಮನು ಆನೆಯಿಂದಿಳಿದು ತನ್ನ ಸೈನಿಕರೊತನೆ ಸನ್ಯಾಸಿಯ ಬಳಿಗೆ ನಡೆದನು ಕಾಲುಗಳ ಶಬ್ದವನ್ನು ಕೇಳಿ ಸನ್ಯಾಸಿಯು ಕೊಳಲನ್ನು ಕೆಳಗಿಟ್ಟನು. ಮತ್ತು ಒಂದು ವಿಚಿತ್ರವಾದ ಧ್ವನಿಯಿಂದ ಆಪತ್ತಿನ ಸಂಕೇತವನ್ನು ಮಾಡಿದನು. ಮೃಗಗಳು ಅತ್ತಿತ್ತ ಚದರಿ ಓಡಿದುವು.

೪

"ಮಹಾಸ್ವಾಮಿ! ಏನಪ್ಪಣೆ" ರಾಜನನ್ನು ನಮಸ್ಕರಿಸುತ್ತ ಸನ್ಯಾಸಿಯು ಕೇಳಿದನು

ವಿಕ್ರಮನೆಂದನು — "ಅದ್ಭುತವಾದ ರಾಗವಾಗಿದೆ ನಿನ್ನದು, ಸನ್ಯಾಸಿಯೇ' ನಾನು ಮುಗ್ಧನಾಗಿ ಬಿಟ್ಟೆನು. ನನ್ನ ಹತ್ತಿರ ಎಷ್ಟು ಉತ್ತಮ ಕಲಾಕಾರರಿದ್ದಾರೆ? ಆದರೆ ಯಾರಲ್ಲಿಯೂ ಮೃಗಗಳನ್ನು ತಮ್ಮ ಸಂಗೀತದಿಂದ ವಶಪಡಿಸುವ ಶಕ್ತಿಯು ಲೇಶ ಮಾತ್ರವೂ ಇಲ್ಲ. ನಿನ್ನ ಕೊಳಲಿನಲ್ಲಿ ವಿಚಿತ್ರ ಶಕ್ತಿ ಇದೆಯೇ?"

"ಮಹಾರಾಜಾ! ನಾನು ಸಂಗೀತ ಕಲೆಯಲ್ಲಿ ಪ್ರವೀಣನಲ್ಲ ಈ ನನ್ನ ಹಾಳು ರಾಗವು ಪಶುಪಕ್ಷಿಗಳಿಗೆನೇ ಯೋಗ್ಯವಾದದು" ಸನ್ಯಾಸಿಯು ಉತ್ತರವಿತ್ತನು.

"ನಿನ್ನಂತಹ ಸಂಗೀತಜ್ಞರನ್ನು ನಾನು ಈ ವರೆಗೆ ನೋಡಲಿಲ್ಲ. ನಾನು ಆಶ್ಚರ್ಯ ಚಕಿತನಾಗಿದ್ದೇನೆ ನಾನು ನಿನ್ನನ್ನು ಸಹಜವಾಗಿಯೂ ಗೌರವಿಸುತ್ತೇನೆ. ಸನ್ಯಾಸಿಯೇ ಇದೋ ಈ ಕಾನನದಲ್ಲಿ ಬೇಟೆಯಾಡಲು ಆಜ್ಞೆಯನ್ನೂ ನನ್ನ ಸೈನಿಕರಿಗೆ ಕೊಡುವುದಿಲ್ಲ ಎಂದು ನಿನಗೆ ವಚನವನ್ನು ಕೊಟ್ಟೆನು."

ರಾಜಾ — ನಿನ್ನ ಈ ಉದಾರತೆಯು ನನಗೆ ಸದಾಕಾಲವೂ ನೆನಪಿರುವುದು. ನಾನು ಅತ್ಯಂತ ಕೃತಜ್ಞನು. ಇವತ್ತು ತಾವು ಇಲ್ಲಿ ದಯಮಾಡಿಸಿದ್ದೀರಿ. ನನ್ನ ಯಾವ ಸೇವೆಯನ್ನು ತಾವು ಅಪೇಕ್ಷಿಸುತ್ತೀರಿ?

"ಸನ್ಯಾಸಿಯೇ ನನ್ನ ಒಂದು ಆಶೆಯನ್ನು ಪೂರೈಸುವಿಯೊ?"

"ಬೇರೆಯವರಿಗೆ ಅಹಿತವಾಗದ ತಮ್ಮ ಎಲ್ಲಾ ಆಜ್ಞೆಗಳನ್ನು ಪಾಲಿಸಲು ನಾನು ಸಿದ್ಧನಿರುವೆನು."

ಆದರ ಭಾವದಿಂದ ವಿಕ್ರಮನು ಹೀಗೆಂದನು:—

'ಆಜ್ಞೆಯಲ್ಲ' ಸನ್ಯಾಸಿಯೇ ಒಂದು ಪ್ರಾರ್ಥನೆಯಾಗಿದೆ. ಒಂದು ಸಲ ನನ್ನ ರಾಜಧಾನಿಗೆ ಬಂದು ನನ್ನ ಮೃಗಾಲಯದಲ್ಲಿರುವ ಮೃಗಗಳನ್ನು ನಿನ್ನ ಸುರಾಗದಿಂದ ಆಕರ್ಷಿಸಿಕೊಂಡು ಬಾ. ಲೋಕವು ನನ್ನ ಮೃಗಾಲಯದ ವಿಶೇಷತೆಯನ್ನು ಕಂಡು ಬೆರಗಾಗಿ ಹೋಗಲಿ. ನಿನ್ನ ಕೃಪೆಯಿಂದಲೇ ಈ ನನ್ನ ಇಚ್ಛೆಯು ಪೂರ್ಣವಾಗುವುದು.

"ಮಹಾರಾಜಾ ಜನಸಮಾಜದಲ್ಲಿ ಕಾಲಿಡಲು ನನಗೆ ಇಚ್ಛೆ ಇಲ್ಲ. ಆದಾಗ್ಯೂ ವಚನ ಕೊಟ್ಟುದರಿಂದ ನಾನು ಸಿದ್ಧನಿರುವೆನು. ಆದರೆ ಅರಸನ ಮೃಗಗಳ ಮೇಲೆ ನನ್ನ ಕೊಳಲಿನ ಪ್ರಭಾವವು ಸ್ವಲ್ಪ ಮಾತ್ರವೂ ಬೀಳಲಿಕ್ಕಿಲ್ಲ. ಈ ಕಾಡು ಮೃಗಗಳು ಸದಾ ನನ್ನಸಂಗಡವೇ ಇರುವುದರಿಂದ ನನ್ನೊಡನೆ ಅತಿ ಮೈತ್ರಿಭಾವದಿಂದಿವೆ."

"ಹಾಗಾದರೆ ನಿನ್ನ ಈ ಕೊಳಲು ನನ್ನ ಮೃಗಗಳನ್ನು ಆಕರ್ಷಿಸಲಾರದೇ?"

"ಇಲ್ಲ ಸ್ವಾಮಿ"

"ಹಾಗಾದರೆ ನಿನ್ನ ಈ ಮೃಗಗಳನ್ನು ನನಗೆ ಕೊಟ್ಟುಬಿಡು."

"ಈ ಸೇವಕನಿಗೆ ತನ್ನ ಮೇಲೆ ಅಧಿಕಾರವಿದೆ ಆದರೆ ಈ ಮೃಗಗಳ ಮೇಲೆ ಲೇಶ ಮಾತ್ರವೂ ಅಧಿಕಾರವಿಲ್ಲ",

"ಸನ್ಯಾಸೀ, ನೀನು ಕೊಟ್ಟ ಮಾತಿಗೆ ತಪ್ಪುತ್ತೀ"

[ಮುಂದಿನ ಸಂಚಿಕೆಯಲ್ಲಿ ಮುಗಿಯುವುದು]

NOTICE

IN the Court of the District Munsiff of Mangalore

S. C No. 347/1941.

Between:—

N. R Nayak & N. P. Nayak— *Plaintiffs*

and

M. Devadas Srinivas Pai— *Defendant*

To

The defendant—M Devadas Srinivas Pai, merchant, Kadri, Mangalore.

Please take notice that the plaintiffs above-named have filed the above suit for recovery of Rs. 216-13-1 due in respect of dealings and that the same stands posted to 6-10-1941 for final disposal.

Mangalore, 27-9-1941. **M. A. Talwar,** Vakil for Plaintiff.

'ಸೆರೆಮನೆಯಲ್ಲಿಯೇ ನಾನು ಸಾಯಲೂ ಬಹುದು'

ಲೋಕಪ್ರಸಿದ್ಧ ಪತ್ರಿಕೋದ್ಯಮಿಯೊಡನೆ ಗಾಂಧಿಜಿ ಹೇಳಿದರು

— ಗಾಂಧಿಜಿಯವರೊಡನೆ ನಡೆದ ಕೆಲವು ಪ್ರಶ್ನೋತ್ತರಗಳು —

ಜಗತ್ ಪ್ರಸಿದ್ಧ ಅಮೇರಿಕನ್ ಪತ್ರಿಕೋದ್ಯಮಿ ವೆಬ್ ಮಿಲ್ಲರರು ಗಾಂಧಿಜಿಯನ್ನು ಕೊಂಡಾಡಿ ಒಂದು ಉದಾತ್ತ ಲೇಖನ ಬರೆದಿರುವರು. ವೆಬ್ ಮಿಲ್ಲರ್ ಇವರು, ಲೋಕದ ಎಲ್ಲಾ ಮಹಾ ಪುರುಷರನ್ನೂ ಕಂಡಿರುವರು; ಲೋಕದಲ್ಲಿ ಕಳೆದ ಇಪ್ಪತ್ತು ವರ್ಷಗಳ ಬಳಿಕ ಆದ ಎಲ್ಲಾ ಆಂದೋಲನಗಳನ್ನು ಅವರು ನೋಡಿದವರು. ಅವರು ಪ್ರತಿಯೊಂದು ರಣರಂಗವನ್ನು ಸಂದರ್ಶಿಸಿದವರು; ಪ್ರತಿಯೊಂದು ಕ್ರಾಂತಿಯ ಮೂಲ ಸ್ಥಾನದಲ್ಲಿ ಇದ್ದವರು. ಇಂತಹ ಮಹಾ ಪತ್ರಿಕೋದ್ಯಮಿಯು, ಭಾರತಕ್ಕೆ ಬಂದು ಗಾಂಧಿಜಿಯವರ ಸತ್ಯಾಗ್ರಹ ಸಮರವನ್ನೂ ಪ್ರತ್ಯಕ್ಷ ಕಂಡರು; ಬೊಂಬಯಿ ಧರ್ಶನಗಳಲ್ಲಿ ಸತ್ಯಾಗ್ರಹಿಗಳು ಪೋಲೀಸರ ನಿಷ್ಕರುಣ ಲಾಠೀ ಪೆಟ್ಟುಗಳನ್ನು ಧೈರ್ಯದಿಂದಲೂ ದೃಢತೆಯಿಂದ ಶಾಂತಿಯಿಂದಲೂ ಎದುರಿಸುವ ಉದಾತ್ತ ಶಕ್ತಿಯನ್ನು ಕಂಡು ಬೆರಗಾದರು. ಆ ಮಹಾ ಆಂದೋಲನದ ನಾಯಕರಾದ ಗಾಂಧಿಜಿಯ ಅಪೂರ್ವ ವ್ಯಕ್ತಿತ್ವವನ್ನು ಮೆಚ್ಚಿ ಬರೆದ ಲೇಖನವನ್ನು ಕೆಳಗೆ ಕೊಡಲಾಗಿದೆ.

“ಇತಿಹಾಸದಲ್ಲಿಯೇ ಪ್ರಸಿದ್ಧವಾದ ಶಾಂತಿಯ ಕಾಳಗವನ್ನು, ಸತ್ಯಾಗ್ರಹ ಸಮರವನ್ನು ಆರಂಭಿಸಿದ ಆ ಕಿರಿಯ ಕಂದು ಬಣ್ಣದ ವ್ಯಕ್ತಿಯನ್ನು ನೋಡಲಾರದೆ ನಾನು ಭಾರತದಿಂದ ಮರಳಬೇಕಾಯಿತು. ಅವರು ಆಗ ಸೆರೆಮನೆಯೊಳಗೆ ಸೇರಿಸಲ್ಪಟ್ಟಿದ್ದರು. ನಾನು ಎಷ್ಟು ಆಗ್ರಹಪಟ್ಟರೂ ನನಗೆ ಅವರ ದರ್ಶನವಾಗಲಿಲ್ಲ; ದುಂಡು ಮೇಜಿನ ಪರಿಷತ್ತಿಗೆ ಅವರು ಲಂಡನಿಗೆ ಬರುವ ವರೆಗೆ ನನಗೆ ಅವರ ಸಂದರ್ಶನದ ಪುಣ್ಯ ಒದಗಲಿಲ್ಲ.

“ನಾನು ಅವರನ್ನು ಲಂಡನಿನ ಹೋಟೇಲೊಂದರಲ್ಲಿ ಟೀಪಾರ್ಟಿಯ ಕಾಲದಲ್ಲಿ ಕಂಡೆನು. ಅಲ್ಲಿನ ವೇಷಧಾರಿಗಳ ಮಧ್ಯೆ ಇವರದು ಒಂದು ಬಹಳ ವಿಶಿಷ್ಟವಾದ ರೀತಿಯಾಗಿತ್ತು. ಕೈನೂಲಿನ ಬಟ್ಟೆಯ ಉಟ್ಟಧೋತಿ; ಬರಿಗಾಲು, ಕಾಲಿನಡಿಗೆ ದೇಶೀಯ ಜೋಡು ಇವುಗಳಿಂದ ಅವರು ಅಲಂಕೃತರಾಗಿದ್ದರು. ನನ್ನನ್ನು ಅವರು ತಮ್ಮ ಸಮೀಪ ಕರೆದರು; “ನೀವು ಭಾರತದಲ್ಲಿದ್ದಾಗ ಏಕೆ ನನ್ನನ್ನು ಕಾಣಲು ಬರಲಿಲ್ಲ” ಎಂದು ಅವರು ಪ್ರಶ್ನಿಸಿದರು.

ಸೆರೆಮನೆಯಲ್ಲಿ ಸಾವು

“ನೀವು ಆಗ ಸೆರೆಮನೆಯಲ್ಲಿದ್ದಿರಿ— ಅವರು ನಿಮ್ಮನ್ನು ನೋಡಲು ಬಿಡಲಿಲ್ಲ” ನಾನು ಉತ್ತರವಿತ್ತೆನು. ತನ್ನ ಕನ್ನಡಕದೆಡೆಯಿಂದ ನೋಡುತ್ತಾ, ಹಲ್ಲಿಲ್ಲದ ಆ ಕಿರಿಯ ವ್ಯಕ್ತಿ ಹೇಳಿದರು: ‘ಹೌದು ನಾನು ನನ್ನ ಬಾಳುವೆಯ ಬಹು ಭಾಗ್ಯವನ್ನು ಸೆರೆಮನೆಯಲ್ಲಿಯೇ ಕಳೆದೆನು’— “ನಿಮ್ಮ ಜೀವನದಲ್ಲಿ ಎಷ್ಟು ಕಾಲ ನೀವು ಸೆರೆಮನೆಯಲ್ಲಿ ಕಳೆದಿರುವಿರಿ” ನಾನು ಕೇಳಿದೆ. ‘ಬೆರಳಿಂದ ಎಣಿಕೆ ಮಾಡುತ್ತಾ ಗಾಂಧಿಜಿ ಹೇಳಿದರು.

“ನನಗೆ ಸರಿಯಾಗಿ ಹೇಳಲು ಬರುವಂತಿಲ್ಲ. ನಾನು ಏಳು ಅಥವಾ ಎಂಟು ಇಲ್ಲವೇ ಹತ್ತು ಸಲ ಸೆರೆಮನೆ ಸೇರಿರಬಹುದು. ಒಟ್ಟು ಎಷ್ಟು ವರ್ಷಗಳೆಂದು ನಾನು ಸರಿಯಾಗಿ ನೆನಪಿನಲ್ಲಿಟ್ಟುಕೊಂಡಿಲ್ಲ. ೧೯೦೭ರ ಬಳಿಕ ನಾನು ಹಲವು ಸಲ ಸೆರೆಮನೆ ಕಂಡೆನು. ಇದರಿಂದ ನನಗೇನೂ ಬೇಸರ ಆಗುವುದಿಲ್ಲ. ಏಕೆಂದರೆ ಸೆರೆಮನೆಯು ನನಗೆ ಹೊರಗಡೆಯಿರುವುದಕ್ಕಿಂತ ಹೆಚ್ಚು ವಿಚಾರ ಮಾಡಲು, ಚೆನ್ನಾಗಿ ಬರೆಯಲು ಸಂದರ್ಭವೊದಗಿಸುತ್ತದೆ. ನನಗೆ ಸೆರೆಮನೆಯಲ್ಲಿ ಅಷ್ಟೊಂದು ತೊಂದರೆಯಾಗುವುದಿಲ್ಲ. ಅವರು ಯಾವಾಗಲೂ ಸೆರೆಮನೆಯಲ್ಲಿ ನನ್ನನ್ನು ಚೆನ್ನಾಗಿ ನೋಡಿರುವರು. ನಾನು ಇನ್ನೂ ಬಹುಶಃ ಸೆರೆಮನೆಯಲ್ಲಿ ಬಹುಕಾಲ ಕಳೆಯಬಲ್ಲೆನು; ನಾನು ಸೆರೆಮನೆಯಲ್ಲಿ ಸಾಯಲೂ ಬಹುದು.

ಒಬ್ಬ ಸಸ್ಯಾಹಾರ ಪ್ರಿಯನಾಗಿ ನಾನು ಅವರ ಆಹಾರದ ವಿಷಯವಾಗಿ ಅವರ ಸಧ್ಯ ಆಹಾರ, ಆಗಾಗ ಮಾಡುವ ಉಪವಾಸಗಳ ಸಂಗತಿ ತಿಳಿಕೊಳ್ಳಲು ಬಯಸಿದೆನು. ಅವರು ಜೀವನದಲ್ಲಿ ಒಮ್ಮೆ ಮಾತ್ರ ಮಾಂಸದ ರುಚಿ ನೋಡಿರುವರೆಂದು ನನಗೆ ಹೇಳಿದರು.

“ನಾನು ಮುಂಜಾನೆ ನಾಲ್ಕು ತಾಸಿಗೆ ಏಳುವೆನು. ಒಂದು ತಾಸು ಪ್ರಾರ್ಥನೆ ಮಾಡುವೆನು. ಒಂದು ತಾಸು ತನಕ ಪತ್ರ ಬರೆಯುವೆನು. ಅರ್ಧ ತಾಸಿನ ಸಂಚಾರ ಮಾಡುವೆನು. ಆ ಮೇಲೆ ಆರು ತಾಸಿಗೆ ಆಹಾರ. ಆಡಿನ ಹಾಲು ಹಣ್ಣು ಹಂಪಲುಗಳು. ಸತ್ಯಾಗ್ರಹ ಸಮರವು ಆರಂಭವಾದ ಬಳಿಕ ಆರು ಗಂಟೆಯಿಂದ ಒಂಭತ್ತು ಗಂಟೆಯ ವರೆಗೆ ನಾನು ಹತ್ತಿ ಹಿಂಜಿ ನೂಲುಬಿಡುವುದು ಮೊದಲಾದ ಕೆಲಸ ಮಾಡುವೆನು. ಪ್ರತಿದಿನವೂ ಕಡಿಮೆಯೆಂದರೆ ೨೦೦ ಗಜ ನೂಲು ತೆಗೆವ ಪಣತೊಟ್ಟಿರುವೆನು. ನನ್ನ ಜನರು ತಮಗೆ ಬೇಕಾದ ಬಟ್ಟೆಯನ್ನು ತಾವೇ ಮಾಡಿಕೊಳ್ಳುವಂತೆ ಮಾಡಿ ಇಂಗ್ಲೆಂಡಿನಿಂದ ಹೋಗುವ ಬಟ್ಟೆಗಳು ನಿಲ್ಲುವಂತೆ ಮಾಡಲು ನಾನು ಇಚ್ಛಿಸುತ್ತೇನೆ. ಮಧ್ಯಾಹ್ನ ರೊಟ್ಟಿ, ಆಡಿನ ಹಾಲು, ತರಕಾರಿ, ಟೊಮೆಟೋಗಳನ್ನು ತೆಗೆದುಕೊಳ್ಳುವೆನು. ಸ್ವಲ್ಪ ವಿಶ್ರಾಂತಿ ಪಡೆದು ಮತ್ತೆ ಓದುವೆನು. ಮತ್ತೆ ಸ್ವಲ್ಪ ಕಾಲ ಧ್ಯಾನವಮಾಡಿ ಸಂದರ್ಶಕರ ಬೇಟಿ ತೆಗೆದುಕೊಳ್ಳುವೆನು. ರಾತ್ರಿಯ ಕಾಲ ನಾನು ಆಹಾರ ತೆಗೆದುಕೊಳ್ಳುವುದಿಲ್ಲ. ಒಂಭತ್ತರ ಗಂಟೆಗೆ ನಾನು ನಿದ್ದೆಗೆ ಹೋಗುವ ಮೊದಲು ನನ್ನ ದಿನಚರಿ ಬರೆಯುವೆನು. ನಾನು ಇತ್ತೀಚೆಯವರೆಗೆ ನೆಲದಲ್ಲಿ ಮಲಗುತ್ತಿದ್ದೆ; ಆದರೆ ಈಗ ಮುದುಕನಾಗಿ ಕಬ್ಬಿಣದ ಹಾಸಿಗೆ ಮೇಲೆ ಮಲಗುವೆನು. ಪ್ರತಿ ಸೋಮವಾರ ಮೌನದ ದಿನವಾಗಿದೆ. ನಾನು ಆ ದಿನ ಎಷ್ಟೇ ಅಗತ್ಯದ ವಿಷಯವಿದ್ದರೂ ಯಾರೊಡನೆಯೂ ಮಾತನಾಡುವುದಿಲ್ಲ.” ಹೀಗೆಂದು ಅವರು ತಮ್ಮ ಆಹಾರ ದಿನಚರಿಗಳ ವಿಷಯ ಹೇಳಿದರು.

ತೋರೋವಿನ ತತ್ವ.

ಗಾಂಧಿಜಿ ಹೇಳಿದರು: “ಇಡಿಯ ಜಗತ್ತಿನಲ್ಲಿ ನನ್ನದೆಂಬವುಗಳು ಇಷ್ಟು ಮಾತ್ರ; ಒಂದು ಜತೆ ಧೋತಿ; ಒಂದು ಕಂಬಳಿ, ಒಂದು ವಾಚು, ಒಂದು ಸಣ್ಣ ನೂಲುವ ಚರಖಾ, ಬರೆಯುವ ಸಾಧನ ಮತ್ತು ಕೆಲವು ಸಾಮಾನುಗಳು. ಶಾಸನ ಭಂಗವು ಆರಂಭವಾದಾಗ ನಾನು ನನ್ನ ಆಸ್ತಿಯನ್ನೆಲ್ಲಾ ಬಿಟ್ಟುಕೊಟ್ಟು, ಬಡತನ ಮತ್ತು ಸನ್ಯಾಸ ಜೀವನದ ಪ್ರತಿಜ್ಞೆ ತೊಟ್ಟುಕೊಂಡೆನು. ನನ್ನ ಆಶ್ರಮವಾಸಿಗಳಿಗೂ ನನ್ನ ಪ್ರತಿಜ್ಞೆಯನ್ನೇ ಕಲಿಸಿದೆನು.” ಗಾಂಧಿಜಿಯ ಮಾತಿನಲ್ಲಿ ನನಗೆ ಪ್ರಸಿದ್ಧ ಅಮೆರಿಕನ್ ಗ್ರಂಥಕರ್ತನಾದ ತೋರೋವಿನ ತತ್ವಗಳು ತೋರಿದವು. “ನೀವೂ ಹೆನ್ರಿ ಡಿ. ತೋರೋವಿನ ಪುಸ್ತಕವನ್ನೋದಿರುವಿರಾ?” ನಾನು ಕೇಳಿದೆ. ಅವರ ಕಣ್ಣುಗಳು ಹೊಳೆದವು. “ಹೌದು, ನಿಜವಾಗಿಯೂ ನಾನು ತೋರೋವಿನ ಗ್ರಂಥವೋದಿರುವೆನು. ವಾಲ್ಡನ ಗ್ರಂಥವನ್ನು ನಾನು ಆಫ್ರಿಕದಲ್ಲಿ ಓದಿದೆ. ಅವನ ತತ್ವಗಳು ನನ್ನಲ್ಲಿ ಬಹಳ ಪ್ರಭಾವಬೀರಿದವು. ಭಾರತದ ಸ್ವಾತಂತ್ರ್ಯ ಸಾಧನೆಯ ವಿಷಯದಲ್ಲಿ ತೋರೋವಿನ ತತ್ವಗಳು ನನಗೆ ಹೆಚ್ಚಿನ ಸಹಕಾರಿಗಳಾಗುವವೆಂದು ನಾನು ತಿಳಕೊಂಡೆನು. “ಶಾಸನ ಭಂಗದ ಕರ್ತವ್ಯಗಳು” ಎಂಬ ತೋರೋವಿನ ಪ್ರಬಂಧದಿಂದ ನಾನು “ಶಾಸನ ಭಂಗ” ಎಂಬ ಹೆಸರನ್ನು ತೆಗೆದುಕೊಂಡೆನು. ನನ್ನ ಭಾರತೀಯ ಹೆಸರಾದ ‘ಸತ್ಯಾಗ್ರಹ’ಕ್ಕೆ ಸರಿಯಾದ ಆಂಗ್ಲ ಭಾಷಾ ಶಬ್ದವು ಆ ಪ್ರಬಂಧವನ್ನು ಓದುವ ವರೆಗೆ ನನಗೆ ದೊರಕಲಿಲ್ಲ. ತೆರಿಗೆ ತೆರುವುದನ್ನು ತಿರಸ್ಕರಿಸಿದ ತೋರೋ ಶಾಸನ ಭಂಗಮಾಡಿ ಸರಕಾರವನ್ನು ಎದುರಿಸಿ ಸೆರೆಮನೆಗೆ ಹೋದನು. ಭಾರತದ ನನ್ನ ಚಳವಳಿಕ್ಕೆ ತೋರೋವಿನ ತತ್ವಗಳು ಹೆಚ್ಚು ಪ್ರಭಾವಬೀರಿದವು.”

ಅಹಿಂಸಾತ್ಮಕ ಶಾಸನಭಂಗ ಚಳವಳವನ್ನು ಈ ಹಿಂದೀ ಮುಂದಾಳುವು ಪಾಶ್ಚಾತ್ಯ ರಾಜ ಕಾರಣಿಯಿಂದ ಕಲಿತುಕೊಂಡನೆಂಬ ವಿಷಯವನ್ನು ಮೊತ್ತಮೊದಲಾಗಿ ಅರಿತುಕೊಂಡವನು ನಾನೆಂದು ತಿಳಿಯುತ್ತೇನೆ. ಜಗತ್ತಿನ ಪ್ರಬಲ ಸಾಮ್ರಾಜ್ಯ ಶಕ್ತಿಯನ್ನೆದುರಿಸುವ ವೀರ ಸತ್ಯಾಗ್ರಹೀ ದಲವು ‘ಶಾಂತಿಯಿಂದ ಧೈರ್ಯದಿಂದ ಸಾವಿರಾರು ಮಂದಿ ಸೆರೆಮನೆಗೆ ಮುನ್ನುಗ್ಗುವ ಸಾಹಸವು ಇಂದು ಭಾರತೀಯ ಸತ್ಯಾಗ್ರಹೀ ವೀರರಲ್ಲಿ ತುಂಬಿತುಳುಕುತ್ತಿದೆ. ತೋರೋವಿನ ಗ್ರಂಥಗಳನ್ನು ಓದಿದಂತೆ ಅತನು ಆ ತತ್ವವನ್ನು ಭಾರತದ ಸಾಹಿತ್ಯದಿಂದ ಕಲಿತುಕೊಂಡನೆಂಬುದು ನನಗೆ ತಿಳಿದು ಬರುತ್ತದೆ. ವಾಲ್ಡನನು ವೇದ ಮತ್ತು ಇತರ ಹಿಂದೂ ತತ್ವ ಗ್ರಂಥಗಳ ವಿಷಯವನ್ನು ಹೇಳುತ್ತಾನೆ. ಹೀಗಾಗಿ ಹಿಂದೂ ತತ್ವವು ಪಾಶ್ಚಾತ್ಯ ದೇಶಕ್ಕೆ ಹೋಗಿ ಅಲ್ಲಿಂದ ಶುಭ್ರ ಸ್ಫಟಿಕರೂಪದಲ್ಲಿ ಮರಳಿ ಅದನ್ನು ಭಾರತೀಯರು ಗ್ರಹಿಸಿರೆಂದು ತಿಳಿಯಬೇಕಾಗಿದೆ. ಆದ್ದರಿಂದಲೇ ಹಿಂದೂ ಬುದ್ಧಿಯು ಅದನ್ನು ಬಹಳ ಬೇಗ ಅಂಗೀಕರಿಸಿಕೊಂಡಿತು.

ಗಾಂಧಿಜಿ ಹಸ್ತಾಕ್ಷರ

ನನ್ನ ಸಿಗರೇಟು ಪೆಟ್ಟಿಗೆಯಲ್ಲಿ ಗಾಂಧಿಜಿಯ ಹಸ್ತಾಕ್ಷರವನ್ನು ನಾನು ಕೇಳಿದೆ. ಜಗತ್ತಿನ ಅನೇಕ ಪ್ರಸಿದ್ಧ ಪುರುಷರ ಹಸ್ತಾಕ್ಷರಗಳು ಅದರಲ್ಲಿದ್ದವು. ಗಾಂಧಿಜಿ ಪೆಟ್ಟಿಗೆಯನ್ನು ತೆಗೆದುಕೊಂಡು ಪರೀಕ್ಷಿಸಿ ಹೇಳಿದರು: “ಇದು ಸಿಗರೇಟ

(೧೫ನೆಯ ಪುಟವನ್ನು ನೋಡಿ)

ಭಾರತ ಭಾಗ್ಯವಿಧಾತಾ

ಮಹಾತ್ಮಾ ಗಾಂಧಿಜಿ ಎಂತಹ ಪ್ರಭಾವಶಾಲಿಯಾದ ವ್ಯಕ್ತಿ! ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯಶೀಲ ಧೀರಯೋಧನಾಗಿ, ಸತ್ಯ-ಅಹಿಂಸೆಗಳ ಪವಿತ್ರ ಶಾಂತಿ ಸಂದೇಶವನ್ನು ಜಗತ್ತಿಗೆ ಸಾರುತ್ತಿರುವ ಮಹಾವಿಭೂತಿ ಪುರುಷನಾಗಿ, ಸತ್ಯಸಂಶೋಧನೆಯಿಂದ ದೈವಸಾಕ್ಷಾತ್ಕಾರವನ್ನು ಸಾಧಿಸುವ ಉಜ್ವಲ ತಪಸ್ವಿಯಾಗಿ, ಪತಿತರ, ದೀನರ ಅಸ್ಪೃಶ್ಯರ ಭಾಗ್ಯವಿಧಾತನಾಗಿ, ಹೀಗೆ ಜನಗಣಮನ ಅಧಿನಾಯಕನಾಗಿ ಮೆರೆವ ಮಹಾತ್ಮಾ ಗಾಂಧಿಯವರ ವರ್ಚಸ್ಸು ಇಡೀ ಜಗತ್ತಿನಲ್ಲಿಯೇ ತುಂಬಿದೆ, ಮಹಾಯುದ್ಧದ ಅಲ್ಲೋಲ ಕಲ್ಲೋಲದಲ್ಲಿ ಅದ್ದಿರುವ ಜೀವಲೋಕವು ಶಾಂತಿಗಾಗಿ ಇವರ ಕಡೆಗೆ ಉತ್ಕಂಠಿತವಾಗಿ ನಿರೀಕ್ಷಿಸುತ್ತಿದೆ! ಸ್ವಾತಂತ್ರ್ಯದ ಹಾದಿಯಲ್ಲಿ ಮುನ್ನಡೆವ ಭಾರತವನ್ನು ಜಯದಿಂದ ವಿಜಯದ ಸಂಧಿಗೆ ಸಾಗಿಸಿ, ಸ್ವರಾಜ್ಯದ ಸುಂದರ ಸುವರ್ಣ ಮಂದಿರವನ್ನು ಮುಗಿಲು ಮುಟ್ಟಿಸುವ ಕಾರ್ಯದಲ್ಲಿ ಗಾಂಧಿಜಿ ಇಂದು ನಿರತರಾಗಿದ್ದಾರೆ!

ಬಾಲ್ಯ—ವಿದ್ಯಾಭ್ಯಾಸ

ಗಾಂಧಿ ಮನೆತನದವರು ವೈಶ್ಯ ಜಾತಿಯವರು, ಪೋರಬಂದರ ರಾಜಕೋಟೆಗಳ ದಿವಾನರಾಗಿದ್ದ, ನ್ಯಾಯ ಪಕ್ಷಪಾತಿಯೂ, ಸಚ್ಚರಿತರೂ, ಸತ್ಯಸಂಧರೂ, ಶೂರ ಉದಾರಿಗಳೂ ಎಂದು ಪ್ರಸಿದ್ಧರಾದ ಕರಮಚಂದಗಾಂಧಿ ಮತ್ತು ದೈವಭಕ್ತಳೂ, ಸದಾ ಚಾರಳೂ, ಸಾಧ್ವೀಮಣಿಯೂ ಆದ ಪುತಲೀಬಾಯಿ, ಇವರ ಪುತ್ರರಾಗಿ ಮೋಹನದಾಸ ಗಾಂಧಿಯವರು ೧೮೬೯ ಇಸವಿ ಅಕ್ಟೋಬರ ಎರಡನೆಯ ತಾರೀಕಿನ ದಿನ ಜನ್ಮವೆತ್ತಿದರು

ಹುಟ್ಟೂರಲ್ಲಿ ಅವರಿಗೆ ಮೆಟ್ರಿಕ್ ತನಕ ವಿದ್ಯಾಭ್ಯಾಸವಾಯಿತು ಗಾಂಧಿಯವರಿಗೆ ತನ್ನ ಹದಿಮೂರನೆಯ ವಯಸ್ಸಿನಲ್ಲಿಯೇ ಕಸ್ತೂರಿಬಾಯಿಯರೊಡನೆ ವಿವಾಹವಾಯಿತು ಮೆಟ್ರಿಕ್‌ನಲ್ಲಿ ಉತ್ತೀರ್ಣರಾದ ವೇಳೆ ಗಾಂಧಿಜಿಯವರನ್ನು ವಕಾಲತ್ ಕಲಿಯಲಿಕ್ಕಾಗಿ ವಿಲಾಯತಿಗೆ ಕಳುಹಿಸಿದರು ಸಣ್ಣದಿರುವಂದೇ ಗಾಂಧಿಯವರಲ್ಲಿ ಸತ್ಯಸಂಧತೆ, ನಿಷ್ಟವ್ರತ, ಹೆತ್ತವರ ಮೇಲೆ ಭಕ್ತಿಯು ತುಂಬಿತ್ತು ವಿಲಾಯತಿಗೆ ವಕಾಲತು ಕಲಿಯಲು ಹೋಗುವಾಗ ಗಾಂಧಿಯವರು ತಾನು ಅಲ್ಲಿಯೂ ಮದ್ಯಮಾಂಸಗಳನ್ನು ಮುಟ್ಟುವುದಿಲ್ಲವೆಂದೂ ಪರಸ್ತ್ರೀಯರನ್ನು ಕೂಡುವುದಿಲ್ಲವೆಂದೂ ತಾಯಿಗೆ ಪ್ರತಿಜ್ಞೆಕೊಟ್ಟಿದ್ದರು ಯೂರೋಪಿನ ವಿದ್ಯಾ ಜೀವನದ ಕಾಲದಲ್ಲಿ ತನ್ನ ಪ್ರತಿಜ್ಞೆಯನ್ನು ಅವರು ತಪ್ಪದೆ ಪಾಲಿಸಿದರು ೧೮೯೧ನೇ ಇಸವಿಯಲ್ಲಿ ಅವರು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸ್ವದೇಶಕ್ಕೆ ಮರಳಿ ಬಂದರು

ಆಫ್ರಿಕಾದಲ್ಲಿ ಸತ್ಯಾಗ್ರಹ

ಗಾಂಧಿಜಿ ಕೆಲಸಮಯ ಬೊಂಬಾಯಿಯಲ್ಲಿ ವಕೀಲತ್ತು ನಡೆಸಿ, ಆ ಮೇಲೆ ರಾಜಕೋಟೆಗೆ ಹೋಗಿ ಅಲ್ಲಿ ಉದ್ಯೋಗ ಮಾಡಿಕೊಂಡಿದ್ದರು ಆಫ್ರಿಕಾದಲ್ಲಿ ವ್ಯಾಪಾರಿಗಳಾಗಿದ್ದ ದಾದಾ ಅಬ್ದುಲ್ಲಾ ಕಂಪೆನಿಯವರ ಒಂದು ವ್ಯವಹರಣೆಯನ್ನು ನಡೆಸಲು ಆಮಂತ್ರಿತರಾಗಿ ಮುಂದೆ ಆಫ್ರಿಕಾಕ್ಕೆ ತೆರಳಿದರು ಹೋದ ಕೆಲವೇ ದಿನಗಳಲ್ಲಿಯೇ ಗಾಂಧಿಯವರಿಗೆ ಅಲ್ಲಿನ ಬಿಳಿಯರ ಸರಕಾರದೊಡನೆ ಹೋರಾಟ ಸುರುವಾಯಿತು ಅಲ್ಲಿ ನೆಲೆಸಿದ್ದ ಭಾರತೀಯರನ್ನು ಬಿಳಿಯ ಜನರು, ಕೇವಲ ಕೂಲಿಮಾಡಿಸಿಕೊಂಡು ಅವರ ಧಿಮುಗಿದ ಮೇಲೆ ತಮ್ಮ ಸಾಹಸದಿಂದಾದರೂ ಅಲ್ಲಿ ವ್ಯಾಪಾರ ಉದ್ಯೋಗ ನಡೆಸಲಿಕ್ಕಾಗಲಿ, ಅಲ್ಲಿ ಭೂಮಿಯನ್ನು ಪಡೆದುಕೊಳ್ಳಲಿಕ್ಕಾಗಲಿ, ಎಲ್ಲ ಬಿಟ್ಟು ಅಲ್ಲಿನ ಮಾರ್ಗದಲ್ಲಿ ನಡೆದುಕೊಂಡು ಹೋಗುವುದಕ್ಕಾಗಲಿ ಅವರಿಗೆ ಸ್ವಾತಂತ್ರ್ಯ ಕೊಡುತ್ತಿರಲಿಲ್ಲ, ಸ್ವದೇಶ ಬಾಂಧವರ ಈ ಸಂಕಷ್ಟದ ಪರಿಸ್ಥಿತಿಯನ್ನು ನೋಡಿ, ಅವರ ಹಕ್ಕು ಪಾಲನೆಗಾಗಿ ಗಾಂಧಿಜಿಯವರು ಅಲ್ಲಿ ಸಹನಾತೀತವಾದ ಸಂಕಷ್ಟವನ್ನು ಅನುಭವಿಸ ಹೋರಾಡಬೇಕಾಯಿತು

ತಾನು ಹೋಗಿದ್ದ ದಾವೆಯು ರಾಜಿಯಿಂದ ಇತ್ಯರ್ಥವಾಗಲು, ಗಾಂಧಿಜಿಯವರು ಅಂತರಾತ್ಮನ ಪ್ರೇರಣೆಯಂತೆ ಸಮಾಜಸೇವೆಗೆ ಮನಸ್ಸು ಮಾಡಿದರು ಅಲ್ಲಿ ಎಲ್ಲಾ ಮತಧರ್ಮಗಳನ್ನೂ ಮನನಮಾಡಿಕೊಂಡರು ಅಲ್ಲಿ ನೆಲಸಿದ ಭಾರತೀಯರ ಹಿತಕ್ಕಾಗಿ ದುಡಿಯಲು ೧೮೯೪ನೇ ಇಸವಿ ಮೇ ತಿಂಗಳ ೨೨ನೇ ತಾರೀಕಿನದಿನ ನೇಟಾಳದ ಭಾರತೀಯರ ಕಾಂಗ್ರೆಸು ಎಂಬ ಸಂಸ್ಥೆಯನ್ನು ಸ್ಥಾಪಿಸಿದರು ಅದಕ್ಕೆ ಅಲ್ಲಿನ ಭಾರತೀಯರು ಹೆಚ್ಚು ಮಂದಿ ಸದಸ್ಯರಾದರು, ವ್ಯವಹಾರ ಕುಶಲರಾದ ಭಾರತೀಯರನ್ನು ದ್ರೋಹಗೊಳಿಸುವ ಬುದ್ಧಿಯಿಂದ ಅಲ್ಲಿನ ಸಂಯುಕ್ತ ಸರಕಾರವು ಪ್ರತಿಯೊಬ್ಬ ಭಾರತೀಯನ ಮೇಲೆ ವರ್ಷ ಒಂದರ ೩೦೦ ರೂಪಾಯಿಗಳ ತಲೆ ತೆರಿಗೆ ಹೊರಿಸಿತ್ತು ಇಂತಹ ಸಂದರ್ಭದಲ್ಲಿ ಜನ ಸೇವೆಯೇ ದೇವ ಸಾಕ್ಷಾತ್ಕಾರವೆಂದು ಮನಗಂಡ ಗಾಂಧಿಜಿಯವರು ಸಮಾಜ ಸೇವೆಗಿಳಿದರು ಭಾರತೀಯರ ಪರವಾಗಿ ಸಹಾನುಭೂತಿ ಹುಟ್ಟುವಂತೆ ದೇಶ ವಿದೇಶಗಳಲ್ಲಿ ಪ್ರಚಾರ ಕಾರ್ಯ ಮಾಡಿದರು ಈ ಸಮಯದಲ್ಲಿ ಗಾಂಧಿಜಿಯವರು ಎಷ್ಟೋ ಸಲ ಮರಣಾಂತಿಕವಾದ ಸಂಕಷ್ಟವನ್ನು ಎದುರಿಸಬೇಕಾಗಿತ್ತು ಭಾರತೀಯರನ್ನು ಒಂದುಗೂಡಿಸಿ ಅಹಿಂಸೆಯನ್ನನುಸರಿಸಿ ಸತ್ಯಾಗ್ರಹ ಮಾಡುವಂತೆ ಗಾಂಧಿಜಿಯವರು ಬೋಧಿಸಿದರು ಭಾರತೀಯ ಕೆಲಸಗಾರರು ಮುಷ್ಕರ ಹೂಡಿದರು ಅನೇಕ ಭಾರತೀಯ ಮಹಿಳೆಯರೂ ಸೆರೆಮನೆಗೊಯ್ಯಲ್ಪಟ್ಟರು ಈ ಸುದ್ದಿಯಿಂದ ಎಲ್ಲಾ ಕಡೆ ಅತ್ಯಂತ ಜಾಗೃತಿ ಹೆಚ್ಚಿತು ಗಾಂಧಿಜಿಯವರಿಗೆ ಬಂಧನವಾಯಿತು ಇತ್ತ ಭಾರತದಲ್ಲಿ ಆಫ್ರಿಕಾ ಸರಕಾರದ ಈ ವರ್ತನೆಯನ್ನು ಭಾರತೀಯ ಮುಖಂಡರೂ ಅಂದಿನ ವೈಸರಾಯರೂ ಖಂಡಿಸಿದರು, ಕಡೆಗೆ ಆಫ್ರಿಕಾ ಸರಕಾರವು ಗಾಂಧಿಜಿಯವರ ಕೂಡೆ ತನ್ನ ಅಪಜಯವನ್ನು ಒಪ್ಪಿಕೊಂಡಿತು ಈ ಸಂದರ್ಭದಲ್ಲಿಯೇ ಗಾಂಧಿಜಿಯವರು ಅಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ, ಕೃಷಿಯೇ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಕೈಕೊಂಡು ದೇಶಸೇವೆಯ ಮೂಲಭೂತ ತತ್ವಗಳನ್ನು ಜನರಿಗೆ ಬೋಧಿಸಿದರು!

ಭಾರತದ ಸೇವೆಗೆ

ಗಾಂಧಿಜಿಯವರು ಭಾರತಕ್ಕೆ ಬರುವ ಹೊತ್ತಿನಲ್ಲಿ, ಇಲ್ಲಿಯೂ ರಾಷ್ಟ್ರೀಯ ಜಾಗ್ರತಿಯು ಹುಟ್ಟಿತು. ಪರಕೀಯರ ಬಂಧನದಲ್ಲಿ ಬೇಸತ್ತ ಭಾರತೀಯರು ತಮ್ಮ ನ್ಯಾಯವಾದ ಹಕ್ಕು ಸ್ವಾತಂತ್ರ್ಯಗಳಿಗಾಗಿ ಚಡಪಡಿಸುತ್ತಿದ್ದರು! ಕಾಂಗ್ರೆಸು ಎಂಬ ಸಂಸ್ಥೆಯು ಸ್ಥಾಪಿತವಾಗಿ, ಹಲವು ವರ್ಷಗಳು ಕಳೆದಿದ್ದುವು ಗೋಖಲೆ, ತಿಲಕ ಮೊದಲಾದವರ ನೇತೃತ್ವದಲ್ಲಿ ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಲು ಅಣಿಮಾಡುತ್ತಿದ್ದರು! ಇಂತಹ ಸುದಿನದಲ್ಲಿ ಮಾತೃಭೂಮಿಗೆ ಮರಳಿ ಬಂದ ಗಾಂಧಿಜಿಯವರು, ತಮ್ಮ ವಕಾಲತ್ತು ಜೀವನಕ್ಕೆ ತಿಲಾಂಜಲಿಯಿತ್ತು, ರಾಷ್ಟ್ರಸೇವೆಗೆ ಬದ್ಧ ಕಂಕಣರಾದರು ಗಾಂಧಿಜಿಯವರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದ ಮೇಲೆ, ರಾಜಕೀಯದಲ್ಲಿ ನೂತನ ಚೇತನವು ಹರಿಯಿತು ಅದುವರೆಗೆ ಕೇವಲ ಬಿನ್ನಹಗಳಿಂದ ಕಾಂಗ್ರೆಸಿನವರು ಸರಕಾರದೊಡನೆ ಬಿನ್ನವಿಸಿಕೊಳ್ಳುತ್ತಿದ್ದರು ಗಾಂಧಿಜಿಯವರು ಪರದೇಶಿ ವಸ್ತು ಬಹಿಷ್ಕಾರ, ಅಸಹಕಾರ, ಸ್ವದೇಶೀ ಪ್ರೋತ್ಸಾಹ ಮೊದಲಾದ ಕಾರ್ಯ ರೂಪಗಳಿಂದ ಸ್ವಾತಂತ್ರ್ಯದ ಕೇಳಿಕೆಯನ್ನು ಬಲಶಾಲಿಯಾಗಿ ಮಂಡಿಸುತ್ತಿದರು

ಸತ್ಯಾಗ್ರಹಾಂದೋಲನ

ಸತ್ಯಾಗ್ರಹದ ಶಿಕ್ಷಣ ಕೊಡಲು ಒಂದು ಆಶ್ರಮವನ್ನು ನಡೆಸಿದರು, ಕೂಲಿಕಾರರ ಹೇತುವಾಗಿ ಚಂಪಾರಣ್ಯದಲ್ಲಿ ಸತ್ಯಾಗ್ರಹವು ನಡೆಯಿತು ಆ ಮಧ್ಯೆ ಯೂರೋಪಿನ ಮಹಾಯುದ್ಧವು ಆರಂಭವಾಗಲು ಗಾಂಧಿಜಿಯವರು ಸರಕಾರಕ್ಕೆ ಬೆಂಬಲವನ್ನು ಕೊಟ್ಟರು ಆದರೆ ಮಹಾಯುದ್ಧವು ಮುಗಿದ ಮೇಲೂ ಭಾರತದ ಪರಿಸ್ಥಿತಿಯು ಊರ್ಜಿತಗೊಳ್ಳಲಿಲ್ಲ ರೌಲತ್ ಕಾನೂನನ್ನು ಸರಕಾರದವರು ಜಾರಿಗೆ ತಂದರು ಗಾಂಧಿಜಿಯವರು ಸರಕಾರದ ನೀತಿಯನ್ನು ವಿರೋಧಿಸಲು ಸತ್ಯಾಗ್ರಹ ಆಂದೋಲನವನ್ನು ಹೂಡಲು ನಿರ್ಧಾರ ಮಾಡಿದರು ೧೯೨೦—೨೧ರ ಕಾಲಕ್ಕೆ ಇಡೀ ಭಾರತದ ವಿಶಾಲತೆಯಲ್ಲಿ ಅಸಹಕಾರ ಚಳವಳವು ಆರಂಭವಾಯಿತು ಸರಕಾರವು ತೀವ್ರ ದಬ್ಬಾಳಿಕೆ ನಡೆಸಿತು ಭಾರತೀಯರಲ್ಲಿ ಸತ್ಯಾಗ್ರಹ ಮಾಡಿ, ಮುಖಂಡನೇಕರು ಬಂಧನಕ್ಕೊಳಗಾದರು ಗಾಂಧಿಜಿಯವರೂ ಸೆರೆಹಿಡಿಯಲ್ಪಟ್ಟರು ಅನೇಕ ಮಹಿಳೆಯರೂ ಸೆರೆಮನೆಯನ್ನು ಸಂತೋಷದಿಂದ ಸೇರಿದರು. ಭಾರತದಲ್ಲಿ ಸ್ವಾತಂತ್ರ್ಯ ಪ್ರೇಮವು ಉಕ್ಕಿ ಹರಿಯ ತೊಡಗಿತು ಅನೇಕರು ತಮ್ಮ ಪದವಿ ಬಿರುದು ಸ್ಥಾನಮಾನಗಳಿಗೆ ತಿಲಾಂಜಲಿಯಿತ್ತು, ಸರಕಾರದೊಡನೆ ಅಸಹಕಾರ ಹೂಡಿದರು ಜನತೆಯು ಸತ್ಯಾಗ್ರಹ ಸಮರವನ್ನು ಸರಿಯಾಗಿ ನಡೆಸಲು ಸಿದ್ಧವಾಗಿಲ್ಲವೆಂದು ಎಣಿಸಿ ಚಳವಳವನ್ನು ಗಾಂಧಿಜಿ ನಿಲ್ಲಿಸಿ ಬಿಟ್ಟರು ಆ ಮೇಲೆ ಗಾಂಧಿಜಿ ರಚನಾತ್ಮಕ ಕಾರ್ಯಗಳ ಕಡೆಗೇ ಮನಸ್ಸು ಕೊಟ್ಟರು ಖಾದಿ ಪ್ರಚಾರ, ಗ್ರಾಮ ಕೈಗಾರಿಕೆಗಳ ಅಭ್ಯುದಯ ಇವುಗಳಿಂದ ರಾಷ್ಟ್ರದ ಏಳಿಗೆಯೆಂದು ತಿಳಿದು ಆ ದಾರಿಯಲ್ಲಿ ತಮ್ಮ ಚಟುವಟಿಕೆಗಳನ್ನು ಹೆಚ್ಚುಮಾಡಿದರು

೧೯೩೦ರಲ್ಲಿ ಗಾಂಧಿಜಿಯವರು ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದರು ಅದು ದೇಶದ ವಿಶಾಲತೆಯಲ್ಲಿ ಪ್ರಚಂಡವಾಗಿ ನಡೆಯಿತು ಹಲವರು ದೇಶಾಭಿಮಾನಿ

ಗಳು ಸ್ವಾತಂತ್ರ್ಯಕ್ಕಾಗಿ ಅತುಲ ಬಲಿದಾನ ಮಾಡಿದರು! ಬಂದನಗಳಿಗೆ ಲೆಕ್ಕ ಮಿತಿಯಿರಲಿಲ್ಲ ದಬ್ಬಾಳಿಕೆಗೆ ಮೇರೆಯಿರಲಿಲ್ಲ! ಆದರೂ ಜನರು ಸಹಿಸಿ ಸತ್ಯಾಗ್ರಹಗಳನ್ನು ನಿಶ್ಚಲವ್ರತವಾಗಿ ಕಾದಾಡಿದ್ದರು ಸರಕಾರವು ಎಚ್ಚೆತ್ತಿತ್ತು ವೈಸರಾಯರು ಗಾಂಧಿಜಿಯವರೊಡನೆ ಒಪ್ಪಂದಕ್ಕೆ ಬಂದರು ಗಾಂಧಿ—ಅರ್ವಿನ್ ಒಪ್ಪಂದವಾಯಿತು ಜನತೆಯ ನಿರೀಕ್ಷೆಯು ಅದರಿಂದ ತೃಪ್ತಿಗೊಳ್ಳದಿದ್ದರೂ ಗಾಂಧಿಜಿ ಸತ್ಯಾಗ್ರಹವನ್ನು ಅಲ್ಲಿಗೆ ನಿಲ್ಲಿಸಿಬಿಟ್ಟರು

ರಾಜಕೀಯ ಸನ್ಯಾಸಿ

ಇಷ್ಟರಲ್ಲಿ ಕಾಂಗ್ರೆಸಿನಲ್ಲಿ ಗಾಂಧಿಜಿಯವರದೇ ಏಕೈಕ ಅಧಿಕಾರವೆಂಬಂತಿತ್ತು ತನ್ನ ಒಬ್ಬನ ಮಾತೇ ನಡೆಯಬಾರದೆಂದೂ, ಬೇರೆ ಬೇರೆ ರಾಜಕೀಯ ಪಕ್ಷದವರಿಗೂ ಅಲ್ಲಿ ಆಶ್ರಯ ಸಿಗಬೇಕೆಂದೂ, ಅವರು ಕಾಂಗ್ರೆಸಿನ ಸದಸ್ಯತೆಯಿಂದಲೇ ದೂರ ನಿಂತು ವಾರ್ಧಾದ ಹಳ್ಳಿಯೊಂದರಲ್ಲಿ ಆಶ್ರಮ ಕಟ್ಟಿ ನೆಲಸಿದರು

ಗಾಂಧಿಜಿ ರಾಜಕೀಯದಿಂದ ದೂರ ತಿಂತು ಸಾಮಾಜಿಕ ಆರ್ಥಿಕ ಸುಧಾರಣೆಯ ಕಾರ್ಯಗಳಲ್ಲಿ ಪ್ರವೃತ್ತರಾದರು ಹದಿಮೂರು ವಿಧದ ರಚನಾತ್ಮಕ ಕಾರ್ಯಗಳಿಗೆ ವಿಶೇಷ ಗಮನವಿತ್ತು ವಾರ್ಧಾದಲ್ಲಿ ಕೆಲಸಮಾಡತೊಡಗಿದರು ಕಾಂಗ್ರೆಸಿನಲ್ಲಿ ತೀವ್ರಗಾಮಿಗಳು, ಸಮಾಜ ಸಮತಾವಾದಿಗಳೇ ಮೊದಲಾದವರು ಮುಂದೆ ಬಂದು ತಮ್ಮ ರಾಜಕೀಯ ಅಭಿಪ್ರಾಯಗಳನ್ನು ಮುಂದಿಟ್ಟು ವಾದಿಸತೊಡಗಿದರು ಆದರೂ ಕಾಂಗ್ರೆಸು ವಿಶೇಷವಾದ ಯಾವುದೇ ಕಾರ್ಯಕ್ರಮವನ್ನು ಕೈಕೊಳ್ಳುವುದಿದ್ದರೂ ಗಾಂಧಿಜಿಯ ಅನಿವಾರ್ಯದವನ್ನು ಪಡೆಯದೆ ಇರುತ್ತಿರಲಿಲ್ಲ

೧೯೩೭ರಲ್ಲು ಹೊಸ ರಾಜ್ಯಘಟನೆ ಪ್ರಾರಂಭವಾಗಿ ಕಾಂಗ್ರೆಸು ಚುನಾವಣೆಯನ್ನು ದೂರಿಸಿ ಭಾರತದ ಹನ್ನೊಂದು ಪ್ರಾಂತಗಳಲ್ಲಿ ಏಳು ಪ್ರಾಂತಗಳ ಅಧಿಕಾರ ವಹಿಸಿಕೊಂಡಿತು ಕಾಂಗ್ರೆಸು ಮಂತ್ರಿಗಳು ಎಷ್ಟು ಚೆನ್ನಾಗಿ ಜನಪ್ರಿಯವಾಗಿ ಅಧಿಕಾರ ನಡೆಸಿದರೆಂಬುದನ್ನು ಬ್ರಿಟನಿನ ಪ್ರತಿನಿಧಿಗಳು - ವೈಸರಾಯ್ ಭಾರತ ಮಂತ್ರಿಯವರೇ ಕಂಠೋಕ್ತ ಹೊಗಳಿದ್ದಾರೆ

ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅಲ್ಲೋಲ ಕಲ್ಲೋಲವು ಮಸಗಿತು ಪಾಶ್ಚಾತ್ಯ ರಾಷ್ಟ್ರಗಳು ಹಿಂಸಾಕ್ರಮಕ್ಕಿಳಿದುವು ದುರ್ಬಲ ರಾಷ್ಟ್ರಗಳನ್ನು ನುಂಗಲು ಪ್ರಬಲ ರಾಷ್ಟ್ರಗಳು ನೆರವಾದುವು, ಒತ್ತದುವು, ಮುಂದಾದುವು ಈ ಸ್ವಾರ್ಥಲಾಲಸೆಯು ಮಿತಿಮೀರಿದಾಗ ಅನ್ಯೋನ್ಯ ಘರ್ಷಣೆಯಾಗಿ ಮಹಾರಾಷ್ಟ್ರಗಳೊಳಗೆ ಕಾಳಗ ಮಸಗಿತು, ಜರ್ಮನಿಯ ಮೇಲೆ ಬ್ರಿಟನು ರಣಘೋಷಮಾಡಿತು, ಬ್ರಿಟನು ಭಾರತವನ್ನೂ ಅದರ ಯಾವ ಪ್ರತಿನಿಧಿಗಳೊಡನೆಯೂ ಕೇಳದೆ ಯುದ್ಧಾಸಕ್ತ ರಾಷ್ಟ್ರವೆಂದು ಸಾರಿತು

ಬ್ರಿಟನು ಭಾರತವನ್ನು ಅದರ ಪ್ರತಿನಿಧಿಗಳೊಡನೆ ಒಂದು ಮಾತನ್ನೂ ಕೇಳದೆ ಯುದ್ಧಾಸಕ್ತವೆಂದು ಸಾರಿದಾಗ, ಕಾಂಗ್ರೆಸ್ ಮಂತ್ರಿಮಂಡಳಗಳು ತಮ್ಮ ಅಸಮ್ಮತಿ ವ್ಯಕ್ತಪಡಿಸಿದವು ಅಸಮ್ಮತಿ ವ್ಯಕ್ತಪಡಿಸಿ ಅಧಿಕಾರದಲ್ಲಿದ್ದರೂ, ತಾವು ಯುದ್ಧಕ್ಕೆ ನೆರವಾಗಬೇಕೆಂದು ತಿಳಿದು ಅಧಿಕಾರಕ್ಕೆ ತಿಲಾಂಜಲಿ ಯೆರೆದು ಹೊರಬಂದವು ಕಾಂಗ್ರೆಸು ಇದು ವರೆಗೆ ಮುಂದಿಡುತ್ತಾ ಬಂದ ಯಾವ ಭಾರತದ ಸ್ವಾತಂತ್ರ್ಯ ವಿಚಾರವಿದೆಯೋ ಅದಕ್ಕೆ ಬೆಂಬಲ ದೊರೆತರೆ ತಾವು ಬ್ರಿಟನಿಗೆ ಯುದ್ಧದಲ್ಲಿ ಸಹಾಯ ಮಾಡುವುದಾಗಿಯೂ ತಿಳಿಸಿದವು

ಬ್ರಿಟನು ಅದನ್ನು ಅಲ್ಲಗಳೆಯಿತು, ಕಾಂಗ್ರೆಸು ತನ್ನ ಜೀವಂತ ಸ್ಥಿತಿಯನ್ನು ಕಾರ್ಯರೂಪದಲ್ಲಿ ತೋರಿಸದಿರಲು ಸಾಧ್ಯವಿರಲಿಲ್ಲ ಯಾವ ವಿಧದಲ್ಲಿ ಮುಂದಿನ ಕಾರ್ಯಕ್ರಮವನ್ನು ಮುಂದೊತ್ತುವುದಾಗಿ ಯಾರಿಗೂ ತಿಳಿಯಲಿಲ್ಲ ಕಾಂಗ್ರೆಸು ವಾರ್ಧಾದ ರಾಜಕೀಯ ಸನ್ಯಾಸಿಯನ್ನು, ಗಾಂಧಿಜಿಯನ್ನು ಶರಣು ಹೊಕ್ಕಿತು ಗಾಂಧಿಜಿಗೆ ಕಾಂಗ್ರೆಸು ಸರ್ವಾಧಿಕಾರ ಕೊಟ್ಟಿತು ರಾಷ್ಟ್ರದ ಮುಂದಿನ ಮಾರ್ಗದರ್ಶಕರವರೆಂದು ಕತ್ತಲೆಯ ಕಾಲದಲ್ಲಿ ಅವರು ದಾರಿ ತೋರಿಸಬೇಕೆಂದು ಕಾಂಗ್ರೆಸ್ ಮುಂಧಾಳುಗಳ ಮಹಾತ್ಮರನ್ನು ಕೇಳಿಕೊಂಡರು

ಬ್ರಿಟನಿಗೆ ಯುದ್ಧದಲ್ಲಿ ಗೆಲುವಾಗಬೇಕೆಂದು ಗಾಂಧಿಜಿ ಯುದ್ಧವು ಆರಂಭವಾದಂದಿನಿಂದಲೇ ಆಶಿಸಿದರು. ಆದರೆ ಹಿಂಸಾಯುದ್ಧದಲ್ಲಿ ನರವಾಗುವುದು ಸಾಧ್ಯವಿಲ್ಲ ಹಿಂಸೆಯು ಗಾಂಧಿಜಿಯವರ ಲೋಕದಲ್ಲಿ ಇಲ್ಲ ಹಾಗೆ ಹಿಂಸಾಮಯವಾದ ಈ ಯುದ್ಧದಲ್ಲಿ ಭಾರತವು ಸೇರಿದೆಯೆಂದು ಬ್ರಿಟನು ಉದ್ಘೋಷಿಸಿರಲು ಅದು ಪ್ರಜಾಪ್ರಭುತ್ವ ಹಾಗೂ ನ್ಯಾಯ ಸಮ್ಮತವಲ್ಲವೆಂದು ತಿಳಿದು, ಭಾರತವು ಹಿಂಸಾಮಯವಾದೀ ಯುದ್ಧಕ್ಕೆ ಜನ ಧನದ ಸಹಾಯ ಕೊಡಬಾರದೆಂದು ಸಾರುವ ವಾಕ್ ಸ್ವಾತಂತ್ರ್ಯದ ಸತ್ಯಾಗ್ರಹವನ್ನು ಪ್ರಾರಂಭಿಸಿದರು ಈ ವಾಕ್ ಸ್ವಾತಂತ್ರ್ಯದ ಸತ್ಯಾಗ್ರಹವು ಜನತಾ ಆಂದೋಲನವಾಗದೆ ಕೇವಲ ವ್ಯಕ್ತಿಗತವಾಗಿ ಸೂಕ್ಷ್ಮವಾಗಿಯೇ ಇರಲೆಂದು ಗಾಂಧಿಜಿ ಇದನ್ನು ಬಹಳ ಸಂಕೋಚಮಾಡಿದರು ಸರಕಾರವು ವಾಕ್ ಸ್ವಾತಂತ್ರ್ಯವನ್ನೀಯಲು ಒಪ್ಪದ ನಿಮಿತ್ತ ಸತ್ಯಾಗ್ರಹವು ಆರಂಭವಾಗಿ ಎಂತೆಂತಹ ಮಹನೀಯರು ಕತ್ತಲುಕೋಣೆಗಳಿಗೆ ಸೇರಿ ಸಂಕಷ್ಟಗಳನ್ನನುಭವಿಸಬೇಕಾಯಿತೆಂಬುದನ್ನು ಇತ್ತೀಚಿಯ ಭಾರತದ ಇತಿಹಾಸವನ್ನು ನೋಡಿದವರಿಗೆಲ್ಲರಿಗೂ ತಿಳಿದಿದೆ ಗಾಂಧಿಜಿ ಅಖಿಲ ಪ್ರಪಂಚದಲ್ಲಿಯೇ ಪ್ರಬಲವಾದೊಂದು ಸರಕಾರದ ಎದುರು ಅತ್ಯಂತ ವಿಶಿಷ್ಟವಾದ ಸತ್ಯಾಗ್ರಹವೊಂದನ್ನು ಆರಂಭಿಸಿದ್ದಾರೆ ಸತ್ಯಸಾಧಕರಿಗೆ, ಸತ್ಯಾಗ್ರಹಿಗಳಿಗೆ, ಖಂಡಿತ ಜಯದೊರಕುವುದೆಂದು ಅವರು ನಂಬಿದ್ದಾರೆ ಕಾಂಗ್ರೆಸಿನ, ಭಾರತದ ನಾಡಿಯು ಬಹುಕಾಲದಿಂದಲೂ ಗಾಂಧಿಜಿಯವರ ಇಚ್ಛೆಯಂತೆಯೇ ಮಿಡಿಯುತ್ತದೆ

ರಚನಾತ್ಮಕ ಕಾರ್ಯಕ್ರಮ

ಭಾರತದ ಭಯಂಕರ ದಾರಿದ್ರ್ಯವು ಗಾಂಧಿಜಿಯವರ ಹೃದಯವನ್ನು ಕರಗಿಸಿತು ಜನರಿಗೆ ದಿನನಿತ್ಯ ದುಡಿತದ ದಾರಿಯಾಗಬೇಕು ಖಾದಿಯೇ ಸ್ವರಾಜ್ಯದ ಹಾದಿಯೆಂದು ಅವರು ತಿಳಿಸಿದರು ಖಾದಿಗಾಗಿ ನಿಧಿಯೆತ್ತಿದರು ಅಖಿಲ ಭಾರತ ಚರಕಾ ಸಂಘವನ್ನು ಸ್ಥಾಪಿಸಿದರು ದೇಶವಿಡೀ ಅದರ ಶಾಖೆಗಳು ತೆರೆಯಲ್ಪಟ್ಟವು ಹೆಚ್ಚು ಹೆಚ್ಚಾಗಿ ಖಾದಿಯನ್ನು ಪ್ರೋತ್ಸಾಹಿಸುವುದೆಂದರೆ ದೇಶದ ಸೇವೆಯನ್ನ ಬಹುಳವಾಗಿ ಮಾಡಿದಂತೆಯೆಂಬುದನ್ನು ಇಂದು ನಾವು ತಿಳಕೊಳ್ಳಬೇಕಾಗಿದೆ

ಮಹಾತ್ಮಾಜಿಯವರ 'ಹರಿಜನ'ರೆಂದು ಕರೆಯುವ ಅಸ್ಪೃಶ್ಯರ ಉದ್ಧಾರಕ್ಕಾಗಿ ಬಹಳ ಪ್ರಯತ್ನವಾದಿದರು ಅಖಿಲಭಾರತದಲ್ಲಿ ಪ್ರಚಾರ ಮಾಡಿ ಅದಕ್ಕಾಗಿ ನಿಧಿಯೆತ್ತಿದರು ಹರಿಜನ ಸೇವಕ ಸಂಘವೆಂಬ ಅಖಿಲಭಾರತ ಸಂಘವೊಂದನ್ನು ಸ್ಥಾಪಿಸಿದರು 'ಹರಿಜನ'ವೆಂಬ ಆಂಗ್ಲ ಗುಜರಾಥೀ ಹೆಸರಿನ ವಾರಪತ್ರಿಕೆಗಳ ಮೂಲಕ ಅವರು ವಾರವಾರವೂ ಅಖಿಲ ಜಗತ್ತಿಗೆ ಅಮೃತ ಸಂದೇಶವನ್ನು ಸಾರುತ್ತಿದ್ದರು ಇತ್ತೀಚೆಗೆ ಸರಕಾರವು ಹೊರಡಿಸಿದ ಪತ್ರಿಕಾ ನಿರ್ಬಂಧಕಾಜ್ಞೆಯ ಪ್ರತಿರೋಧವಾಗಿ ಗಾಂಧಿಜಿ ಆ ಪತ್ರಿಕೆಯನ್ನು ನಿಲ್ಲಿಸಿರುವರು ಗಾಂಧಿಜಿಯವರು ರಚನಾತ್ಮಕ ಕಾರ್ಯಗಳಿಗೆ ವಿಶೇಷ ಮಹತ್ವಕೊಡುತ್ತಾರೆ

ಈಗ ಗಾಂಧಿ ಯುಗವೇ ಆರಂಭವಾಗಿದೆ. ಖಾದಿ ಪ್ರಚಾರ ಗ್ರಾಮ ಕೈಗಾರಿಕೆ, ಅಸ್ಪೃಶ್ಯತಾ ನಿವಾರಣೆ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಮಾಡಿ ತೋರಿಸಿದ ಗಾಂಧಿಜಿಯವರು, ಭಾರತೀಯ ರಾಜಕೀಯಕ್ಕೆ ಅನ್ವಯಿಸುವ ಹೊಸ ರಾಜಕೀಯ ತತ್ವವನ್ನು ತಿಳಿಸಿದ್ದಾರೆ ಗಾಂಧಿಜಿಯವರ ಮಾತು ಕೃತಿಗಳಲ್ಲಿ ಭಾರತದ ಸಂಸ್ಕೃತಿಯು ಜೀವ ಜೀವಾಳವೇ ಅಡಕವಾಗಿದೆ! ಅವರು ಯಾವುದನ್ನು ಹೇಳುತ್ತಾರೋ ಅದನ್ನು ಮನಃಪೂರ್ವಕ ಹೇಳುತ್ತಾರೆ, ಅದನ್ನು ಮಾಡಿತೋರಿಸುತ್ತಾರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರಷ್ಟು ಮಹಾ ಸಾಹಸಮಾಡಿದ ಮಹಾಪುರುಷರು, ಅವರ ಹಾಗೆ ಜಾಗೃತಿಯನ್ನು ಹುಟ್ಟಿಸಿದ ಮುಖಂಡರು ಬೇರೆ ಕಂಡುಬರುವಂತಿಲ್ಲ

ಶಾಂತಿಸಂದೇಶ

ಗಾಂಧಿಜಿಯವರ ರಾಜಕೀಯವು ಅಪೂರ್ವವಾದುದು ಸಾಮ್ರಾಜ್ಯಲಾಲಸೆಗಾಗಿ, ಅಧಿಕಾರಕ್ಕಾಗಿ, ಸ್ವಾರ್ಥಕ್ಕಾಗಿ ಇಂದು ಕತ್ತಿಕಟ್ಟಿ ನಿಂತ ಜನರು ಗಾಂಧಿಜಿಯವರ ಸಂದೇಶಕ್ಕೆ ಕಿವಿಗೊಡುವ ಸಂದರ್ಭದಲ್ಲಿ ಜಗತ್ತಿನಲ್ಲಿ ಎಂತಹ ಅಪೂರ್ವ ಆನಂದವು ಹರಿದೀತು? ಆಯಾಯ ರಾಷ್ಟ್ರಗಳ ಸ್ವಾತಂತ್ರ್ಯವು ಆಯಾಯ ದೇಶೀಯರ ಪಾಲಿಗಿರಬೇಕು ಯುದ್ಧ ಉಪಕರಣಗಳನ್ನು ಕಳೆಗಿಟ್ಟು ಪ್ರತಿಯೊಬ್ಬರೂ ಪ್ರೇಮ ಸೌಹಾರ್ದಗಳಿಂದ ನಡೆಯಬೇಕು ವಿಶ್ವಬಾಂಧವ್ಯವು ಬೆಳೆಯ ಬೇಕು ಸತ್ಯ-ಅಹಿಂಸೆಗಳು ನಮ್ಮ ಜೀವನದ ಮಾರ್ಗದರ್ಶಕಗಳಾಗಿರಬೇಕು ಅನ್ಯಾಯ ವಂಚನೆ ಕಾಪಟ್ಯ ಅಸತ್ಯ ಹಿಂಸೆಗಳಿಗೆ ಜಗತ್ತಿನಲ್ಲಿ ಆಶ್ರಯ ವಿಲ್ಲ ಎಂಬೀ ಪವಿತ್ರ ಸಂದೇಶದ ಕಡೆ ಸಾರ್ಥದಿಂದ ಅಂಧತೆಯನ್ನುಹೊಂದಿದ ಈ ಜಗತ್ತು ಎಂದು ಕಿವಿಗೊಡುವುದೋ ಅಂದೇ ನಿಜವಾಗಿ ಲೋಕ ಕಲ್ಯಾಣವಾಗುವುದು

—K. L. Rai

ಸೆರೆಮನೆಯಲ್ಲಿಯೇ ನಾನು ಸಾಯಲೂ ಬಹುದು

(೭ನೆಯ ಪುಟದಿಂದ ಮುಂದುವರಿದ ದು)

ಪೆಟ್ಟಿಗೆ ಹೊಗೆಸೇದುವ ವಿಷಯದಲ್ಲಿ ನನ್ನ ಅಭಿಪ್ರಾಯ ನಿಮಗೆ ಗೊತ್ತಿರಬೇಕು ನನ್ನ ಹೆಸರು ಸಿಗರೇಟಿನ ಹೊಗೆಯಿಂದ ಮುಚ್ಚಿರುವುದನ್ನ ನಾನು ಬಯಸುವುದಿಲ್ಲ ನೀವು ಇನ್ನು ಮುಂದೆ ಇದರಲ್ಲಿ ಸಿಗರೇಟು ಹಾಕುವುದಿಲ್ಲವೆಂದು ಭರವಸೆಯಿತ್ತರೆ ನಾನದರಲ್ಲಿ ನನ್ನ ಹೆಸರು ಬರೆಯುವೆನು

ನಾನು ಗಾಂಧಿಜಿಗೆ ಭರವಸೆಯಿತ್ತೆ ಅವರು ಅದರಲ್ಲಿ ತಮ್ಮ ಹೆಸರು ಬರೆದರು, ಅಲ್ಲಿ ಬರೆದಿರುವ ಹೆಸರುಗಳಲ್ಲಿ ಗಾಂಧಿಜಿಯ ಹೆಸರೇ ಬಹಳ ಸ್ಪಷ್ಟವಾದುದು, ಬಹಳ ಅಸ್ಪಷ್ಟವಾದ ಹೆಸರು ಹಿಟ್ಲರನದು, ಬಹಳ ದೊಡ್ಡದಾದ ಹೆಸರು ಡೊಲ್ಫುಸ್‌ನದು (ಆಸ್ಟ್ರಿಯದ ಚಾನ್ಸ್‌ಲರ್) ನದು ಆತನ ಮರಣದ ಕೆಲದಿನಗಳ ಹಿಂದೆ ವಿಯೆನ್ನದಲ್ಲಿ ತಾನು ಹಸ್ತಾಕ್ಷರ ನನಗೆ ಕೊಡುವಾಗ ಅವನು ಹೇಳಿದ್ದ "ನಾನು ಸಣ್ಣ ಮನುಷ್ಯ, ಬರೆಯುವುದು ದೊಡ್ಡದಾಗಿ" ಎಂದು

ನಾವು ಮಾತನಾಡುತ್ತಿದ್ದಂತೆ ಗಾಂಧಿಜಿ ನೂಲು ತೆಗೆಯುತ್ತಾ ಇದ್ದರು ನಾನು ಕೇಳಿದ ಪ್ರಶ್ನೆಗೆ ಎಲ್ಲಿ ಸ್ವಲ್ಪ ವಿಚಾರಿಸಿ ಉತ್ತರ ಹೇಳಬೇಕಾಗಿತ್ತೋ ಆಗ ಗಾಂಧಿಜಿ ಹತ್ತಿಯನ್ನ ಕೈಯಿಂದ ಸ್ವಲ್ಪ ಬಡಿಸಿಕೊಳ್ಳುತ್ತಿದ್ದರು ನಾನು ಕಂಡ ಜಗತ್ತಿನ ಅನೇಕ ಮಹನೀಯರಲ್ಲಿ ಗಾಂಧಿಜಿ ಬಹಳ ವಿಶೇಷದವರು ಅವರು ಶುದ್ಧ ಸ್ಪಷ್ಟ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು, ಹೆಚ್ಚಾಗಿ ತಲೆಬಗ್ಗಿಸಿ ಅವರು ಮಾತುಕತೆ ಮಾಡುವರು ಯಾವುದಾದರೂ ಒಂದು ವಿಷಯ ಸ್ಪಷ್ಟೀಕರಿಸುವಲ್ಲಿ ತಲೆಯೆತ್ತುವರು ಅವರ ಕಣ್ಣು ಬುದ್ಧಿವಂತಿಕೆ ಮತ್ತು ವಿನೋದಗಳಿಂದ ಕೂಡಿವೆ ಅವರ ಹಣೆ ಒನಿದಾಗಿ ಒಂದು ಶಕ್ತಿಯಂತಿವೆ

'ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಒಂದು ನಾಗರಿಕತೆಯಿದೆ' ಅವರು ಹೇಳಿದರು 'ಯೂರೋಪು ವಸ್ತ್ರವಿಹೀನ ಜನಾಂಗವಾಗಿದ್ದ ಕಾಲದಲ್ಲಿ ನಾವು ನಾಗರಿಕರಾಗಿದ್ದೆವು ನಮಗೆ, ಯುರೋಪಿನ ಯಾಂತ್ರಿಕ ನಾಗರಿಕತೆ ಬೇಡ ನಮ್ಮ ಜನರ ಬುದ್ಧಿವಂತಿಕೆಗೆ ಸರಿಯಾಗಿ ಸ್ವತಂತ್ರವಾಗಿ ನಾವು ಬೆಳೆಯಬೇಕಾಗಿದೆ ಹೋಗುವುದು ನಮಗೆ ಬೇಕಾಗಿದೆ ನಮ್ಮ ಜನರು ಹುಟ್ಟಿನಿಂದಲೇ ಸರಲಜೀವಿಗಳು ಎಂದರು ಗಾಂಧಿಜಿಯವರ

ಊಂಡನಲಿರುವ ಅಮೇರಿಕನ್ ಪತ್ರಿಕೊದ್ಯೋಗಿಗಳ ಸಂಘ ಅವರನ್ನು ಒಂದು ಭೋಜನ ಕೂಟಕ್ಕೆ ಕರೆದೆವು ಅವರ ಸಲುವಾಗಿ ನಾವು ಶಾಕಾಹಾರ ಮಾಡಿಸಿದ್ದೆವು ಅವರೊಡನೆ ಅವರ ಶಿಷ್ಯಳಾದ ಆಂಗ್ಲ ಮಹಿಳೆ ಮೆಡಲಿನ್ ಸ್ಲೇಡಳು, ಭಾರತೀಯ ವೇಷದಂರಣೆಯಾಗಿ ಬಂದಿದ್ದಳು ಅವರ ಆ ದಿನ ಹೇಳಿದರು, ನಾನು ನಿಮಗೆ ವಿಶೇಷ ಹೇಳತಕ್ಕದ್ದೇನೂ ಇಲ್ಲ ನಾನು ಹೇಳಿದ್ದನ್ನ ನೀವು ಬರೆದ ಕೇಳ ವಿರಿ ಆದರೆ ಆಗಾಗ ನಾವು ವಿಶ್ರಾಂತಿಪಡೆಯ ಒಕ್ಕು ಪತಿಕಾವ್ಯವಸಾಯದವರಿಗೂ ವಿಶ್ರಾಂತಿಬೇಕು ನಾನ ಹೇಳಿದದನ್ನ ಇಂದು ನೀವು ಬರೆಯೊಳ್ಳಬೇಡಿ ನಾವು ಅವರು ಹೇಳುವ ಮಾತುಗಳನ್ನೆಲ್ಲಾ ಬರೆಯಲು ಬಂದಿದ್ದೆವಾದರೂ ಅವರ ಹೇಳಿಕೆಯನ್ನು ಮನ್ನಿಸಲೇಬೇಕಾಯಿತು.

ಗಾಂಧಿಜಿ ಮಹಾ ಪುರುಷರು, ಅವರ ದೇಶದ ಜನರು ಅವರನ್ನು ಮಹಾತ್ಮನೆಂದ ಗೌರವಿಸುತ್ತಾರೆ

ವೀರರಲ್ಲಿ ಮಹಾ ವೀರ

ಗಾಂಧಿಯವರ ಪರಿಚಯ ನನಗಿರುವುದೆಂಬುದು ನನ್ನ ಜೀವನದಲ್ಲಿ ನನಗೊಂದು ಸೌಭಾಗ್ಯ, ಈ ಜೀವಲೋಕದಲ್ಲಿ ಗಾಂಧಿಯವರಿಗಿಂತ ಶುದ್ಧವಾದ, ಗೌರವ ಪೂರ್ಣವಾದ ಧೀರವಾದ ಹಾಗೂ ಪವಿತ್ರವಾದ ಆತ್ಮವುಳ್ಳವರು ಬೇರೆ ಸಿಗಲಾರರು ಗಾಂಧಿಯವರು ಮನುಷ್ಯರಲ್ಲಿ ಒಬ್ಬ ಮಹಾ ಮನುಷ್ಯನೆನಿಸಿದ್ದಾರೆ ವೀರರಲ್ಲಿ ಒಬ್ಬ ಮಹಾ ವೀರರೆನಿಸಿದ್ದಾರೆ ದೇಶಪ್ರೇಮಿಗಳಲ್ಲಿ ಒಬ್ಬ ಮಹಾ ದೇಶಪ್ರೇಮಿಯೆನಿಸಿದ್ದಾರೆ

(A man among men, a hero among heroes a patroit among patroits)

—ಗೋಖಲೆ

ಗಾಂಧೀಯ ಅರ್ಥಶಾಸ್ತ್ರ

(Gandhian Economics)

ಜೆ. ಸಿ. ಕುಮಾರಪ್ಪನವರಿಂದ

ಪ್ರಾಚೀನ ಅರ್ಥಶಾಸ್ತ್ರವು ತುಂಬಾ ಸುಳ್ಳುಸಂಭವಗಳಿಂದ ಕೂಡಿದ್ದು ಬಹಳ ಅವ್ಯವಹಾರ್ಯವಾಗಿದೆ. ಅರ್ವಾಚೀನ ಅರ್ಥ ಶಾಸ್ತ್ರವನ್ನು ಕೇಳಿದರೆ ಹಿಂದಿನವರಿಗೆ ಸಿಡಿಲು ಬಡಿದಂತಾಗುವುದು ಮಾತ್ರವಲ್ಲದೆ ಈ ತರದ ಅಭಿಪ್ರಾಯವನ್ನು ಅವರು ತೆಗಳಬಹುದು.

ನಮ್ಮ ಅರ್ಥ ಶಾಸ್ತ್ರಜ್ಞರು ಬಂಗಾರವು ಬೆಲೆಯ ಮಾಪಕವೆಂದು ಹೇಳುತ್ತಿದ್ದರು. ಪ್ರತಿಯೊಂದೂ ಬಂಗಾರದ ಬೆಲೆಯಿಂದ ನಿಶ್ಚಯಿಸಲ್ಪಡುತ್ತಿತ್ತು. ದುಡ್ಡಿನ ಬೆಲೆಯೇ ದೊಡ್ಡದಲ್ಲ; ನೈತಿಕ ಬೌದ್ಧಿಕ ಬೆಲೆಯೂ ಪ್ರಾಮುಖ್ಯವಾಗಿದೆಯೆಂಬುದನ್ನು ನಾವು ಸ್ವಲ್ಪ ವಿಚಾರ ಮಾಡಿ ತಿಳಕೊಳ್ಳಬಹುದು.

ಒಂದು ಮಗುವನ್ನು ಕೊಂದು, ಅದರ ಕೊರಳಲ್ಲಿದ್ದ ಬಂಗಾರದ ಆಭರಣವನ್ನು ತೆಗೆದು, ಕ್ರಯಕ್ಕೆ ಕೊಳ್ಳುವಂತೆ ನಿಮ್ಮೊಡನೆ ಹೇಳಿದರೆ ಅದನ್ನು ಪಡೆಕೊಳ್ಳಲು ಎಷ್ಟು ಮಂದಿ ಮುಂದೆ ಬರಬಹುದು. ಖಂಡಿತವಾಗಿಯೂ ಕೆಲವೇ ಮಂದಿ. ಏಕೆಂದರೆ ಆ ಕೊಲೆಪಾತಕದಲ್ಲಿ ಆ ಕೊರಳ ಆಭರಣವನ್ನು ಪಡಕೊಂಡವನೂ ಪಾಲುಗಾರನಾಗುವನು. ಇದನ್ನೇ ನಾನು ಹೇಳುವುದು ಅರ್ಥ ಶಾಸ್ತ್ರದಲ್ಲಿ ಮಾನವೀಯ ಬೆಲೆಯೂ ಉಂಟೆಂದು.

ನೀವು ಒಂದು ಡಬ್ಬಿ ಕೊಕ್ಕೋ ಐದಾಣೆ ಕ್ರಯಕ್ಕೆ ಪಡಕೊಂಡಾಗ ನಿಮಗೆ ಅದರಲ್ಲಿ ಬರಿಯ ಐದಾಣೆಯ ಬೆಲೆ ಮಾತ್ರ ತೋರುವುದಲ್ಲ. ಆ ಕೊಕ್ಕೋದಲ್ಲಿ ಮಾನವ ರಕ್ತ, ಬೆವರು, ಕೂಲಿಕಾರರ ಕಣ್ಣೀರುಗಳನ್ನು ನೀವು ಕಾಣಬಹುದು. ಕೊಕ್ಕೋ ತಯಾರು ಮಾಡಿದ ಪರಿಸ್ಥಿತಿಯನ್ನು ನೀವು ವಿಚಾರ ಮಾಡಬಹುದು. ಆಗ ನಿಮಗೆ ಆ ವಸ್ತುವಿನಲ್ಲಿರುವ ನೈತಿಕ ಮತ್ತು ಮಾನವೀಯ ಬೆಲೆಯು ಅರ್ಥವಾಗುವುದು. ಗಾಂಧಿಜಿ ಅರ್ಧ ಶರೀರವನ್ನು ಮಾತ್ರ ಮುಚ್ಚಿಕೊಳ್ಳುತ್ತಾರೆ; ಅದರಿಂದ ತನ್ನ ಸುತ್ತಲಿರುವ ಜನರ ಬಡತನವನ್ನು ಅವರು ಅರಿತುಕೊಂಡಂತೆ ಆಗಿರುತ್ತದೆ.

ಇದು ಖಾದಿ ಆಂದೋಲನ ಹಾಗೂ ಗ್ರಾಮ ಕೈಗಾರಿಕೆ ಆಂದೋಲನದ ಮೂಲ ಭೂತ ತತ್ವವಾಗಿದೆ. ನೀವು ಕಡಿಮೆ ಬೆಲೆಯ ಪರದೇಶೀ ಗಿರಣಿ ವಸ್ತ್ರ ಸಾಮಾನುಗಳನ್ನು ಪಡಕೊಳ್ಳಲು ಹಿಂಜರಿಯುವಿರಿ. ಅಂತಹದರಲ್ಲಿ ಭದ್ರವಾದ ಅರ್ಥ ಶಾಸ್ತ್ರವಿದೆ. ವಿದೇಶೀಯ ಗಿರಣಿ ಸಾಮಾನುಗಳಲ್ಲಿ ನಿಮ್ಮ ನೆರೆಕರೆಯವರ ನಿರುದ್ಯೋಗ ಹಬ್ಬಿದ ಕಾರಣವನ್ನು ನೀವು ತಿಳಕೊಳ್ಳದಿದ್ದರೆ ಅರ್ಥ ಶಾಸ್ತ್ರದ ಪ್ರಯೋಜನವೆಲ್ಲಿದೆ?

ನಿಮ್ಮ ಸುತ್ತು ಮುತ್ತು ನೋಡಿ ನಿಮ್ಮ ಆರ್ಥಿಕ ಪರಿಸ್ಥಿತಿ ಇಟ್ಟುಕೊಳ್ಳಬೇಕಾಗಿದೆ; ಇಲ್ಲವಾದರೆ ನೀವು ಒಂದು ಹುಲಿಯಂತಾಗಿ ನಿಮ್ಮ ತೃಪ್ತಿ ಮಾತ್ರ ನೋಡಿಕೊಂಡು ಅನ್ಯರ ರಕ್ತ ಹೀರಿದಂತಾಗುತ್ತದೆ. ಹುಲಿಯ ನಾಗರೀಕತೆ ನಮಗೆ ಬೇಡವಾಗಿದೆ.

ಜನರಿಗೆ ಬೇಡವಿರಲಿ, ಬೇಕಾಗಿರಲಿ, ಬಂಡವಾಳಗಾರರು ತಾವು ತಯಾರಿಸಿದ ಸಾಮಾನುಗಳನ್ನು ಜನರ ಮೇಲೆ ಹೊರಿಸುತ್ತಾರೆ. ಹೀಗೆ ಮಾಡಿ ಅವರು ರಾಜಕೀಯ ಪ್ರಭುತ್ವ ಪಡೆಯುತ್ತಾರೆ. ಧ್ವಜವು ವ್ಯಾಪಾರದ ಬಳಿಕ ಬರುತ್ತದೆ. ವ್ಯಾಪಾರದಿಂದ ಸಾಮ್ರಾಜ್ಯ ಕಟ್ಟಲಾಗುತ್ತದೆ. ಅಂತಹ ಸಾಮ್ರಾಜ್ಯ ಖಡ್ಗದ ಮೊನೆಯಿಂದ ಆಳಲ್ಪಡುತ್ತದೆ. ಇದೇ ಇಂದು ಭಾರತ ಚೀನಾ ಮತ್ತು ಅಬಿಸೀನಿಯಗಳಲ್ಲಿ ಆಗುವುದು. ಇದನ್ನು ಮರೆಮಾಡಲು ನಮಗೆ ಹೇಳುತ್ತಾರೆ: ಪ್ರತಿಯೊಂದೂ ನಾಗರಿಕತೆಯನ್ನು ಬೆಳೆಸಲು ಮಾಡುತ್ತೇವೆ ಎಂದು.

ಈಗ ನೋಡಿದರೆ ಭೂಮಿಯಾಗಲಿ, ಬಂಡವಾಳವಾಗಲಿ ಕೆಲಸವಾಗಲಿ ಉತ್ಪತ್ತಿ ಸಾಧನವಾಗಿರುವುದಿಲ್ಲ. ಇಂದು ಬೊಂಬು ಮತ್ತು ಮೆಶಿನ್ ಕೋವಿಗಳು ಉತ್ಪತ್ತಿ ಸಾಧನಗಳಾಗಿವೆ. ನೀವು ಪರಿಣಾಮಕಾರಿಯಾಗಿ ಹಿಂಸೆ ಮಾಡಿದರೆ ಪ್ರತಿಯೊಂದೂ ನಿಮಗೆ ದೊರಕುತ್ತದೆ. ಇಂಥ ಅರ್ಥ ಶಾಸ್ತ್ರದ ತಾರ್ಕಿಕ ಪರಿಣಾಮವು ಇದಾಗಿದೆ. ಈ ಅರ್ಥ ಶಾಸ್ತ್ರವನ್ನು ನೀವು ಕಾಲೇಜುಗಳಲ್ಲಿ ಕಲಿಯಬೇಕು. ನೀವು ಇದನ್ನು ಅಲ್ಲಗಳೆದದ್ದಾದರೆ, ಅಧ್ಯಾಪಕರು ನಿಮಗೆ ಸೊನ್ನೆ ಸುತ್ತುವರು. ಏಕೆಂದರೆ ಕಾಲೇಜುಗಳೆಲ್ಲವೂ ವಿಶ್ವ ವಿದ್ಯಾಲಯಗಳ ಅಧೀನವಿವೆ. ವಿಶ್ವವಿದ್ಯಾಲಯಗಳು ಪ್ರಾಂತಿಕ ಸರಕಾರಗಳ ಕೈ ಕೆಳಗಿವೆ. ಪ್ರಾಂತಿಕ ಸರಕಾರಗಳು ಭಾರತ ಸರಕಾರದ ಅಧೀನದಲ್ಲಿದೆ. ಭಾರತಸರಕಾರವು ಬ್ರಿಟಿಷ್ ಸರಕಾರದ ಅಧೀನವಿದೆ., ಬ್ರಿಟಿಷ್ ಸರಕಾರವು ಚರ್ಚಿಲರ ಕಂಪನಿಯವರ ಕೈಯ್ಯಲ್ಲಿದೆ.

ನಮ್ಮ ಬುದ್ಧಿವಂತರಾದ ಆರ್ಥಿಕ ವಿಜ್ಞಾನಿಗಳು ನಮ್ಮ ದೇಶದ ಜನರ ಉತ್ಪತ್ತಿ ವರ್ಷಕ್ಕೆ ರೂಪಾಯಿ ೫೦ ಎಂದು ತಿಳಿಸಿದ್ದಾರೆ. ಬಡತನದಿಂದ ಕೂಡಿದ ಕೃಷಿಕನು ತನ್ನ ಬಡ ಗುಡಿಸಲಿನಿಂದ ರೂ ೫೦ನ್ನು ಗಳಿಸುತ್ತಾನೆಯೆ? ಜಗತ್ತಿನಲ್ಲಿರುವ ಎಲ್ಲಾ ಸುಖಗಳನ್ನು ಪಡೆಯಬಲ್ಲ ಭಾರತದ ವೈಸರಾಯರ ಕೇವಲ ರೂ ೫೦ರಿಂದ ಜೀವನ ಮಾಡಬಲ್ಲನೆ? ಜೀವನದ ಸತ್ಯಸಂಗತಿಗಳನ್ನು ತಿಳಿಯದ ಅರ್ಥಶಾಸ್ತ್ರವೇಕೆ? ಹೀಗೆ ಮಾಡದಿದ್ದರೆ ಈ ದೇಶವು ರಾಜಕೀಯ ಮತ್ತು ಬೌದ್ಧಿಕ ದಾಸ್ಯಗಳಲ್ಲಿ ನಿರಂತರ ಮುಳುಗಿಕೊಂಡೇ ಇರಬೇಕಾಗುವುದಲ್ಲವೆ?

'ಪೆಡಂಭೂತ'ದ ಸೊಕ್ಕು ಇಳಿಯಿತು!

ಅಥವಾ

'ಖಾದಿ ಸ್ವರಾಜ್ಯದ ಹಾದಿ'

—ಸಿ. ಪಿ. ಕಾಮತ್

ಮಹಾ ಶಕ್ತಿಸಾಧಕನಾದ ಮುನೀಶ್ವರನ ಬಳಿಯಲ್ಲೊಂದು "ಪೆಡಂಭೂತ"ವು ಇತ್ತು. ಇಚ್ಛಿಸಿದ್ದನ್ನು ಕ್ಷಣಮಾತ್ರದಲ್ಲಿ ಒದಗಿಸುವ ಶಕ್ತಿಯು ಅದಕ್ಕಿತ್ತು. ಐಹಿಕ ವಿಷಯ ಸಾಧಕನೊಬ್ಬನು ಆ ಭೂತವನ್ನು ತನ್ನ ಸ್ವಾಧೀನ ಕೊಡಬೇಕೆಂದು ಮುನೀಶ್ವರನನ್ನು ಅಂಗಲಾಚಿ ಬೇಡುತ್ತಿರಲು ಆ ಯೋಗಿಯು "ಎಲೈ! ಈ ಭೂತವು ಅಪಾಯಕಾರಿಯಾದುದು. ಒಂದು ಕ್ಷಣ ನೀನದಕ್ಕೆ ಕೆಲಸವನ್ನು ಕೊಡದೆ ಇದ್ದರೆ ಅದು ನಿನ್ನನ್ನೇ ಧ್ವಂಸ ಮಾಡುವುದು. ಅದು ಸಾಧ್ಯವಿದ್ದರೆ ಅದನ್ನು ನಿನ್ನ ಸ್ವಾಧೀನ ಮಾಡಲು ನನ್ನಡ್ಡಿಯಿಲ್ಲ" ಎನ್ನಲಾಗಿ ಆ ಮನುಷ್ಯನು ಹಿಂದುಮುಂದು ಯೋಚಿಸದೆ "ಅದೇನು ದೊಡ್ಡ ಕೆಲಸವೇ ಸ್ವಾಮಿ. ನಾನು ಹಾಗೇ ಮಾಡುವೆನು. ಒಂದು ಸಲ ಅದು ನನ್ನ ಸೇವಕನಾಗಲಿ" ಎಂದನು. ಆ ಭೂತವು ಮನುಷ್ಯನ ಸೇವಕನಾಯಿತು.

ಮನುಷ್ಯನು ತನ್ನ ಸ್ವಾರ್ಥ ಸಾಧನೆಯ ಇಚ್ಛೆಯನ್ನು ಪ್ರದರ್ಶಿಸಿದ ಕ್ಷಣದಲ್ಲಿ ಆ ಭೂತವು ಅದನ್ನು ಪೂರೈಸಿತು! ಇದೇ ಪ್ರವೃತ್ತಿಯೇ ಆ ಮನುಷ್ಯನ ಅಂಕಿತವಾಯಿತು. ಮತ್ತೆ ಭೂತವು ಬಂದು "ಏನಪ್ಪಣೆ ನನಗೆ ಕೆಲಸವನ್ನು ಕೊಡು; ಇಲ್ಲದಿದ್ದರೆ ನಿನ್ನನ್ನು ನಾಶಮಾಡುವೆ" ಎನ್ನುತ್ತಿರಲು ದಾರಿಕಾಣದೆ ಆ ಮನುಷ್ಯನು ಗಾಬರಿಯಾಗಿ ಮುನೀಶ್ವರನ ಬಳಿಗೆ ಓಡಿಬಂದು "ದೇವಾ, ರಕ್ಷಿಸು ಈ ಭೂತದಿಂದ ನನ್ನನ್ನು ರಕ್ಷಿಸು" ಎಂದು ಕೂಗಿದನು. ಕರುಣಾಮಯನಾದ ಆ ಜ್ಞಾನಿಯು "ಎಲೈ! ಅದೋ ಆ ನಾಯಿಯ ಬಾಲವನ್ನು ಕತ್ತರಿಸಿ ಆ ಭೂತದ ಕೈಯಲ್ಲಿ ಕೊಟ್ಟು ನೇರಗೊಳಿಸುವಂತೆ ಆಜ್ಞಾಪಿಸು; ಅಂದರೆ ನೀನು ಬದುಕುವೆ" ಎನ್ನಲು, ಆ ಮನುಷ್ಯನು ಹಾಗೇ ಮಾಡಿದನು. ನಾಯಿಯ ಬಾಲದೊಡನೆ ಆ ಭೂತದ ಆಟ ಸಾಗಲಿಲ್ಲ. ಮನುಷ್ಯನು ಆಶ್ಚರ್ಯಪಟ್ಟನು.

ನಮ್ಮ ಯಾಂತ್ರಿಕ ನಾಗರೀಕತೆಯ ಅವಸ್ಥೆಯಾದರೂ ಇದೇ ಆಗಿರುವುದು. ಅಂತ್ಯದಲ್ಲಿ ಇದು ಮಾನವ ಜನಾಂಗವನ್ನೇ ನಿರ್ನಾಮಗೊಳಿಸುವುದೆಂಬುದಕ್ಕೆ ನಿದರ್ಶನಗಳು ಒಂದೆರಡು ಮಹಾಯುದ್ಧಗಳಿಂದಲೇ ಕಾಣಬಹುದು. ನೂರು ಜನರನ್ನು ದುಡಿಸಿ ಮೂರು ಜನರು ಉಣ್ಣುವ ಧ್ಯೇಯವು ಎಂದಿಗೆ ಮಾಯವಾಗುವುದೋ ಅಂದಿಗೇ ಜಗತ್ತಿನ ಉದ್ಧಾರವಾಗುವುದು.

ಹೊಟ್ಟೆಯಷ್ಟೇ ಬಟ್ಟೆಯೂ ಮುಖ್ಯವಾದದ್ದು. ಈ ತೊಂದರೆಯನ್ನು ಬಗೆಹರಿಸುವ ಸಾಧನವು ಚರಖಾ. ಚರಖಗಳು ಹೆಚ್ಚಿ ಪ್ರತಿಯೊಂದು ಸಂಸಾರವು ಬಟ್ಟೆಯ ಮಟ್ಟಿಗೆ ಸ್ವಾವಲಂಬಿಯಾದರೆ ಸ್ವಾತಂತ್ರ್ಯವು ಅರ್ಧಕ್ಕಿಂತಲೂ ಹೆಚ್ಚು ಸಿಕ್ಕಿದಂತಾಗುವುದು.

ಮಿಲ್ಲುಗಳು—ಕೋಟ್ಯಾಂತರ ಶ್ರಮಜೀವಿಗಳ ಹೊಟ್ಟೆಯನ್ನು ಬರಿದುಮಾಡಿದೆ. ಮಿಲ್ಲುಗಳು ನಮ್ಮ ಜನಾಂಗದ ಪ್ರಗತಿಗೆ ಇವು ಕಂಟಕಪ್ರಾಯಗಳೇ ಸರಿ. ನವನಾಗರೀಕತೆಯಲ್ಲಿ ಅವಕ್ಕೆ ಸ್ಥಾನ ಸಿಗಬಾರದು. ಪ್ರತಿಯೋರ್ವನು ಸ್ವಾವಲಂಬಿಯಾದರೆ ಅವು ಮೂಲೆ ಬೀಳದಿರುವವೆ?

ಮಹಾತ್ಮಾ ಗಾಂಧಿಯವರು ಈ ಚಿಕ್ಕ ರಾಟೆಯ ಮಹತ್ವವನ್ನು ನಮಗೆ ಸಾರುವುದರಲ್ಲಿ ಏನೂ ಯೋಚಿಸಿಲ್ಲವೆ? ಅವರೇನು ಈಗ ೭೩ ವರ್ಷದ ಮುದುಕರಾದರೂ ಅಮೋಘ ಚಟುವಟಿಕೆಯ ಮಿದುಳು ಅವರದು. ಗೇಣುದ್ದ ಉಡುತ್ತಿರುವರಾದರೂ ಬ್ರಿಟಿಷ ಸಾಮ್ರಾಜ್ಯದ ರಾಜಧಾನಿಯನ್ನು ಹೊಕ್ಕು ಹೊರಟವರು ಅತ್ಯಾಧುನಿಕ ಐರೋಪ್ಯನ ಆಡಂಬರವನ್ನು ಶೂನ್ಯವೆಂದು ತೋರಿಸುವ ಸರಳತೆ ಅವರದು!

ನೂಲುವುದು ಒಂದು ಸಾಧನ ಮಾತ್ರವಲ್ಲ, ಅದೊಂದು ವಿಚಾರ. ಮಾನವೀಯತೆಯ ಅತ್ಯುಚ್ಚ ಶೀಲಗಳು ಅದರಲ್ಲಿ ಅಡಕವಾಗಿದ್ದು ಮನುಷ್ಯನ ಆರ್ಥಿಕ, ನೈತಿಕ, ಮತ್ತು ಸಾಮಾಜಿಕ ಉನ್ನತಿಯ ಜೀವಾಳವು ಅದರಲ್ಲಿದೆ. ಖಾದಿ ಸ್ವರಾಜ್ಯದ ಹಾದಿ ಖಾದಿಧಾರಿಯು ಒರ್ವ ಆದರ್ಶ ಜೀವಿಯಾಗಿರಬೇಕು.

ಖಾದಿಯೊಂದಿಗೆ ಸ್ಪರ್ಶಭಾವನೆಯಿರಬೇಕು; ಏಕೀಯತೆ ಇರಬೇಕು; ಮದ್ಯಪಾನ ನಿಷೇಧ (ತಂಬಾಕು ಕೂಡಾ) ಮಿತವ್ಯಯಗಳಿರಬೇಕು. ಸತ್ಯ ಅಹಿಂಸೆಗಳು ಅದರ ಆಧಾರ ಸ್ತಂಭಗಳು. ಗ್ರಾಮ ಸುಧಾರಣೆ, ಶಿಕ್ಷಣ ಪ್ರಚಾರ; ಸ್ವದೇಶಿ ಇವೂ ಅದರ ಅಂಗಗಳು. ಪಾಶ್ಚಾತ್ಯ ನಾಗರೀಕತೆಯ, ರೀತಿನೀತಿಯ ಟೊಳ್ಳುತನ ತಿಳಿದ ಮೇಲಾದರೂ ನಾವು ಸ್ವದೇಶಿಯನ್ನು ಪ್ರೋತ್ಸಾಹಿಸುವುದು ಸಮಂಜಸವಲ್ಲವೇ?

ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವದಲ್ಲಿ ಆ ಮಹಾ ಪುರುಷನಿಗೆ ಆ ಅನಾಸಕ್ತ ಕರ್ಮಯೋಗಿಗೆ ನಾವೇನು ಕಾಣಿಕೆ ಕೊಡಬಲ್ಲೆವು? ಖಾದಿಯ ವಿಚಾರಕ್ಕಿಂತ ಹೆಚ್ಚಿನ ಕಾಣಿಕೆಯು ಬೇರೊಂದಿಲ್ಲ.

ಬಂಧುಗಳೇ ನೂಲಿರಿ, ದಿನಕ್ಕೊಂದು ತಾಸಿನಂತೆ ನೂಲಿರಿ. ಮಕ್ಕಳು ಮರಿಗಳು ನೂಲಲಿ. ಮನೆಗೊಂದು ಮಹಾತ್ಮರಾಗಲಿ. ನಾಯಿಯ ಬಾಲವು 'ಪೆಡಂಭೂತ'ವನ್ನು ಸೋಲಿಸಿದಂತೆ ಈ ಚರಕವು ಯಂತ್ರ ರಾಕ್ಷಸನನ್ನು ಮುರಿದಿಕ್ಕುವುದು.

ಜಿಲ್ಲಾ ಸಮಾಚಾರಗಳು

ಶ್ರೀ ಎಸ್. ಶ್ಯಾಮರಾಯನಾಯಕ್ ಮತ್ತು ಶ್ರೀ. ಬಿ. ದೇವಪ್ಪಾಳ್ವರಿಗೆ ಶಿಕ್ಷೆ

ತಾ. ೧೮ರಂದು ಭಟ್ಕಳದಲ್ಲಿ ಬಂಧಿತರಾದ ಶ್ರೀ ಎಸ್. ಶ್ಯಾಮರಾಯ ನಾಯಕ್ (೬೩ ವರ್ಷ ಪ್ರಾಯದ, ಕಾರ್ಕಳ ಹೈಸ್ಕೂಲಿನ ನಿವೃತ್ತ ಉಪಾಧ್ಯಾಯರು) ಮತ್ತು ಶ್ರೀ. ಬಿ. ದೇವಪ್ಪಾಳ್ವರು (ಎರಡನೆಯ ಸಲ ಸತ್ಯಾಗ್ರಹ ಮಾಡಿದವರು) ಇವರಿಬ್ಬರನ್ನು ಕುಮಟೆಗೆ ಕರೆದುಕೊಂಡು ಹೋಗಿ ಅಲ್ಲಿ ವಿಚಾರಣೆ ನಡೆಸಿ ತಾ. ೨೩ರಂದು ಪ್ರತಿಯೊಬ್ಬರಿಗೂ ಆರಾರು ತಿಂಗಳ ಕಠಿನ ಶಿಕ್ಷೆ ವಿಧಿಸಿ ಬೆಳಗಾವಿ ಜಿಲ್ಲೆಯ ಹಿಂಡಲಗಿ ಸೆರೆಮನೆಯಲ್ಲಿ 'ಸಿ' ಕ್ಲಾಸಿನಲ್ಲಿ ಸೇರಿಸಿರುವರು.

ಡಾ। ಎಂ. ಆರ್. ಭಟ್ರರಿಗೆ ಶಿಕ್ಷೆ.

ಮಂಗಳೂರು ಮುನ್ಸಿಪಲ್ ಕೌನ್ಸಿಲರಾದ ಶ್ರೀ. ಡಾ. ಎಂ. ಆರ್. ಭಟ್ಟರು ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಮಾಡಿದರು. ಅವರಿಗೆ ೩ ತಿಂಗಳ ಕಠಿನ ಶಿಕ್ಷೆ ವಿಧಿಸಿ ಸಿ ಕ್ಲಾಸಿಗೆ ಸೇರಿಸಿರುವರು.

ಗಾಂಧಿ ಜಯಂತಿ

ತಾ. ೨ರಂದು ಮಂಗಳೂರಲ್ಲಿ ಆರಂಭವಾಗಿದೆ. ಮುಂಜಾನೆ ಪ್ರಭಾತ ಫೇರಿಯಾಗಿ, ಶ್ರೀ. ದಾಮೋದರ ಬಾಳಿಗರಿಂದ ಧ್ವಜವಂದನೆ ನಡೆಯಿತು. ಮತ್ತೆ ಬಡವರಿಗೆ ಅಕ್ಕಿ ಹಂಚುವುದು, ಖಾದಿ ಮಾರಾಟ, ಸಂಜೆಗೆ ಮೆರವಣಿಗೆ ಸಾರ್ವಜನಿಕ ಸಭೆಗಳಾದುವು.

ಮಿತ್ರಮಂಡಳಿಯ ದಸರೆ

ಮಂಗಳೂರು ಮಿತ್ರಮಂಡಳಿಯವರು ತಾ. ೨೬ರಿಂದ ೩೦ರ ವರೆಗೆ ಭಾಷಣ, ನಾಟಕ, ವಿವಿಧ ವಿನೋದಾವಳಿಗಳಿಂದ ಕೂಡಿ ದಸರಾ ಸಾಹಿತ್ಯೋತ್ಸವವನ್ನು ಈ ವರ್ಷವೂ ಆಚರಿಸಿದರು. ತಾ. ೨೭ರಂದು ಶ್ರೀ ಕ. ವೆಂಕಟರಾಮಪ್ಪನವರು 'ಜನ್ನನ ಯಶೋಧರ ಚರಿತೆ'ಯ ವಿಷಯ ಭಾಷಣವಿತ್ತರು. ಶ್ರೀ. ಎಂ. ತಿಮ್ಮಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ರಾತ್ರಿ ಪ್ರಕಾಶ ವಿನೋದಿನೀ [illegible]ನವರು "ಮಡದಿಯ ಮರುಳು" ಎಂಬ ನಾಟಕವಾಡಿದರು. ತಾ. ೨೮ರಂದು ಶ್ರೀ. ನಂಜುಂಡ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು, 'ಕರ್ನಾಟಕ ಸಂಸ್ಕೃತಿ'ಯ ವಿಷಯ ಭಾಷಣವಿತ್ತರು. ಕರ್ನಾಟಕ ಥಿಯೇಟರ್ಸಿನವರಿಂದ 'ರಂಗಭೂಮಿ' ಯೆಂಬ ನಾಟಕವು ಆಡಲಾಯಿತು. ತಾ. ೨೯ರಂದು ಶ್ರೀ ಮಂಜೇಶ್ವರರ ಅಧ್ಯಕ್ಷತೆಯಿಂದ ಸಾಹಿತ್ಯ ಗೋಷ್ಠಿಯಿತ್ತು. ಶ್ರೀಗಳಾದ ಟಿ. ಶೀನಪ್ಪ ಹೆಗ್ಡೆ, ಟಿ. ರಂಗರಾವ್, ಎಸ್. ಕೃಷ್ಣ ಭಟ್ಟ, ಎಂ. ತಿಮ್ಮಪ್ಪಯ್ಯ ಇವರು ಭಾಷಣವಿತ್ತರು. ಪ್ರಭಾತ ಲಲಿತಕಲಾ ನಾಟಕ ಮಂಡಳಿಯವರಿಂದ 'ದೇವದರ್ಶನ' ಎಂಬ ನಾಟಕವಿತ್ತು. ನೃತ್ಯ ಸಂಗೀತ, ಕೋಲಾಟಗಳೂ ಇದ್ದುವು.

ದ. ಕನ್ನಡದಲ್ಲಿ ಥಕ್ಕರ್ ಬಾಪಾರ ಸಂಚಾರ

ಅಖಿಲ ಭಾರತ ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಗಳಾದ ಶ್ರೀ. ಅಮೃತ ಲಾಲ ಥಕ್ಕರರು ಕಳೆದ ತಾ. ೨೫ರಿಂದ ೨೯ರ ವರೆಗೆ ದಕ್ಷಿಣ ಕನ್ನಡದಲ್ಲಿ ಸಂಚಾರ ಮಾಡಿದರು. ತಾ. ೨೫ರಂದು ಕಾಸರಗೋಡಿಗೆ ಬಂದಿಳಿದು ಅಲ್ಲಿ ಜಿಲ್ಲಾ ಕಾಂಗ್ರೆಸ್ ಕೆಲಸಗಾರರು, ಹರಿಜನ ಕೆಲಸಗಾರರಿಂದ ಸ್ವಾಗತಿಸಲ್ಪಟ್ಟು ಸಾರ್ವಜನಿಕ ಭಾಷಣಮಾಡಿ, ಮಾನಪತ್ರಗಳನ್ನು ಅಂಗೀಕರಿಸಿ, ತಾಲೂಕು ಹರಿಜನ ಸೇವಕ ಸಂಘದ ಸಭೆಯಲ್ಲಿ ಮಾತನಾಡಿ, ರಾತ್ರಿ ಅಲ್ಲಿಯೇ ಇದ್ದು, ಮರುದಿನ ಅಲ್ಲಿಂದ ಶೀತಂಗೋಳಿಯನ್ನು ಸಂದರ್ಶಿಸಿ ಅಲ್ಲಿ ತೆರೆಯಲಿರುವ ಹರಿಜನ ಕೋಲನಿ ವಿಷಯ ಸಂತೋಷ ಸೂಚಿಸಿದರು. ಹಾದಿಯಲ್ಲಿ ಬದಿಯಡ್ಕದಲ್ಲಿ ಇಳಿದು ಅಲ್ಲಿ ಕೂಡಿದ ಸಾರ್ವಜನಿಕ ಹಾಗೂ ಹರಿಜನರಿಗೆ ಸದುಪದೇಶವಿತ್ತು ಆ ದಿನವೇ ಮಂಗಳೂರಿಗೆ ಬಂದರು. ಮಂಗಳೂರಲ್ಲಿ ಕಾಂಗ್ರೆಸ್ ಕೆಲಸಗಾರರಿಂದ ಹಾಗೂ ಹರಿಜನ ಕೆಲಸಗಾರರಿಂದ ಸ್ವಾಗತಿಸಲ್ಪಟ್ಟು ಬೆಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲನ್ನು ಸಂದರ್ಶಿಸಿ ಜಿಲ್ಲಾ ಹರಿಜನ ಸೇವಕ ಸಂಘದ ಸಭೆಯಲ್ಲಿ ಮಾತನಾಡಿ, ಸಂಜೆ ಮೈದಾನಿನಲ್ಲಿ ಭಾಷಣವಿತ್ತರು. ಮಂಗಳೂರು ಮುನ್ಸಿಪಾಲಿಟಿಯವರಿತ್ತ ಮಾನಪತ್ರವನ್ನು ಅಂಗೀಕರಿಸಿದರು. ಮರುದಿನ ಡಿಪ್ರೆಸ್ಡ್ ಕ್ಲಾಸ್ ಮಿಶನ್ ಸಂದರ್ಶಿಸಿ ಭಗಿನೀ ಸಮಾಜಕ್ಕೆ ಭೇಟಿಕೊಟ್ಟು, ಕೆನರಾ ಹೈಸ್ಕೂಲ್ ಗ್ರೌಂಡಿನಲ್ಲಿ ನಡೆದ ಆಟ ಮತ್ತು ತಿಂಡಿ ಹಂಚೋಣಗಳನ್ನು ಸಂದರ್ಶಿಸಿ ಡಿ. ಸಿ. ಎಂ. ಮೀಟಿಂಗಿನಲ್ಲಿ ಭಾಗವಹಿಸಿ ಜಿಲ್ಲಾ ಹರಿಜನ ಲೀಗಿನ ಮಾನಪತ್ರವನ್ನು ಅಂಗೀಕರಿಸಿದರು. ಮರುದಿನ ಕಾರ್ಕಳಕ್ಕೆ ತೆರಳಿ ಅಲ್ಲಿನ ಶಬರೀ ಆಶ್ರಮವನ್ನು ಸಂದರ್ಶಿಸಿ, ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತು, ಉಡುಪಿಗೆ ತೆರಳಿ, ಅಲ್ಲಿನ ವಿದ್ಯಾರ್ಥಿಭವನವನ್ನು ಸಂದರ್ಶಿಸಿ, ಹರಿಜನ ಕೊಲೊನಿಗೆ ಹೋಗಿ, ಸಾರ್ವಜನಿಕ ಭಾಷಣಗೈದು ತಿರುಗಿ ಮಂಗಳೂರಿಗೆ ಬಂದು ತಾ. ೨೯ರಂದು ಮಂಗಳೂರಿಂದ ತೆರಳಿದರು.

ಮಹಾಜನ ಬಡವರ ಅಕ್ಕಿ ಭಂಡಾರ

ಮಹಾಜನ ಬಡವರ ಅಕ್ಕಿ ಭಂಡಾರವು ಶ್ರೀ. ವಿಟ್ಠಲ್ಜಿ ಪುರುಷೋತ್ತಮ ಶೇಟ್‌ರವರಿಂದ ತಾ. ೧ರಂದು ವೆಬ್‌ಸ್ಟರ್ ಮಾರ್ಕೆಟಿನ ಬಳಿಯಲ್ಲಿ ತೆರೆಯಲ್ಪಟ್ಟಿತು. ಬಡವರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿಯನ್ನು ಅಲ್ಲಿ ಒದಗಿಸುವ ಏರ್ಪಾಡನ್ನು ಮಂಗಳೂರಿನ ಕೆಲವು ಮಹಾಜನರು ಕೈಕೊಂಡಿರುವರು. ಬಡವರಾದವರು ಈ ಸಂದರ್ಭದ ಒಳ್ಳೆಯ ಉಪಯೋಗವನ್ನು ಮಾಡಿಕೊಳ್ಳುವುದು ಯೋಗ್ಯವಿದೆ.

ಡಿ। ಬೋ। ಸಭೆ

ಡಿ। ಬೋ। ವಿಶೇಷ ಸಭೆಯೊಂದು ತಾ ೨೬ರಂದು ಪ್ರಾತಃ ೧೦ ಗಂಟೆಗೆ ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಪ್ರೆಸಿಡೆಂಟ್ ಡಾ। ವಿಟ್ಠಲ ಶೆಟ್ರ ಅಧ್ಯಕ್ಷತೆಯಿಂದ ಕೂಡಿತು. ಜಿಲ್ಲಾ ಬೋರ್ಡಿಗೆ ಸರಕಾರದಿಂದ ಬಂದ ವಿದ್ಯಾಭ್ಯಾಸ ಇಲಾಖೆಯ ವಿಷಯ ಚರ್ಚೆ ಮಾಡಲಾಯಿತು. ಬೋರ್ಡು ಸರಕಾರವು ಸೂಚಿಸಿದ ೧೩೮ ಉಪಾಧ್ಯಾಯರನ್ನು ತೆಗೆವ ವಿಷಯ, ಒಪ್ಪಿಕೊಂಡಿತು. ಅದರೊಡನೆ ಈ ಜಿಲ್ಲೆಯಲ್ಲಿ ಭೂತರಿಗೆ ಹೆಚ್ಚಿದ ವರ್ಗ ವಿದ್ಯಾ ತೆರಿಗೆ ಹಾಕಬೇಕೆಂಬ ಸರಕಾರದ ಸೂಚನೆಯನ್ನು ಒಪ್ಪಲಿಲ್ಲ. ಶಾಲೆಗಳನ್ನು ಮುಚ್ಚುವಂತೆ ಸರಕಾರವು ಮಾಡುವುದರಿಂದ ಅಕ್ಷರಾಭ್ಯಾಸಕ್ಕೆ ಹೆಚ್ಚಿನ ತೊಂದರೆಯಾಗುವುದೆಂದು ಬೋರ್ಡು ನಿರ್ಣಯಿಸಿತು. ಶಿರೂರು ಜ್ಯೂನಿಯರ್ ಎಲಿಮೆಂಟರಿ ಶಾಲೆಯನ್ನು ಮುಚ್ಚುವ ಸರಕಾರದ ಧೋರಣೆಯು ಸರಿಯಲ್ಲವೆಂದು ನಿರ್ಣಯಿಸಿತು. ಮೂಲ್ಕಿ ಬೋರ್ಡು ಹೈಸ್ಕೂಲಲ್ಲಿ ಕೆಮಿಸ್ಟ್ರಿ ಹಾಗೂ ಫಿಸಿಕ್ಸ್ ವಿಭಾಗ ತೆರೆಯಲಿಕ್ಕೆ ಶ್ರೀ. ವಾಮನ ಕುಡ್ವರಿಂದ ಬರದ ರೂ. ೧೫೦೦ರ ಉದಾರ ದಾನವನ್ನು ಅಂಗೀಕರಿಸಿತು. ಬೇಗನೆ ಆ ವಿಭಾಗ ತೆರೆಯುವಂತೆ ಆಲೋಚಿಸಲಾಯಿತು.

ಶ್ರೀ। ಗೋಪಾಲ ಪೈಗಳ ಸತ್ಯಾಗ್ರಹ

ಮೂಡುಬಿದ್ರೆಯ ಶ್ರೀ। ಗೋಪಾಲ ಪೈಗಳು ತಾ. ೨೪ರಂದು ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಾಗಿದೆ.

ಒಂದು ಖಾತ್ರಿ
ಮಂಗಳೂರಲ್ಲಿ ಮುಸ್ಲಿಂ ಹೋಸ್ಟೆಲ್ ಅಗತ್ಯವಾಗಿದೆ.

ಮಂಗಳೂರಿಗೆ ಪರ ಊರುಗಳಿಂದ ಬಂದು ಕಲಿಯುವ ಮುಸ್ಲಿಂ ವಿದ್ಯಾರ್ಥಿಗಳಿಗೆ ಊಟಕ್ಕೆ ಮತ್ತು ನಿವಾಸಕ್ಕೆ ಅನುಕೂಲವಾಗಿ ಒಂದು ವಿದ್ಯಾರ್ಥಿ ಭವನವು ಇಲ್ಲದಿರುವುದರಿಂದ ಬಹಳ ತೊಂದರೆಯಾಗುವ ಸಂಗತಿಯು ಎಲ್ಲರಿಗೂ ತಿಳಿಯಬಹುದಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಸುಮಾರು ಹದಿನೈದು ವರ್ಷಗಳ ಹಿಂದೆ ಒಂದು ಮುಸ್ಲಿಂ ಹೋಸ್ಟೆಲನ್ನು ಮಂಗಳೂರಲ್ಲಿ ಸ್ಥಾಪನೆ ಮಾಡುವರೆ ನಿಧಿಯೊಂದನ್ನು ಎತ್ತಿರುವರಾಗಿ ನಾನು ತಿಳಿಯುತ್ತೇನೆ. ಮಂಗಳೂರು ಶಹರಿನಲ್ಲಿರುವ ಮಿಲಿಟರಿ ಮಸೀದಿಯ ಬಳಿಯಲ್ಲಿರುವ ಜಾಗದಲ್ಲಿ ಹೋಸ್ಟೆಲಿಗೆ ಶಂಕುಸ್ಥಾಪನೆ ಮಾಡಿ ಬಳಿಕ ಅದು ನಿಂತುಹೋಗಿರುವುದೆಂದೂ ಕೇಳಬರುತ್ತದೆ. ಆ ಕಟ್ಟೋಣವು ಇದು ವರೆಗೂ ಮೇಲೆ ಬರಲಿಲ್ಲ. ಮುಸ್ಲಿಂ ಜನಾಂಗದ ಏಳಿಗೆಗಾಗಿ ಮಡಿಯುವ ಅನೇಕ ಮಂದಿ ಹಿರಿಯರೂ, ತರುಣರೂ ಕೂಡಾ ಉತ್ಸಾಹೀ ಕೆಲಸಗಾರರು ಮಂಗಳೂರಲ್ಲಿಯೂ ಜಿಲ್ಲೆಯ ಬೇರೆ ಕಡೆಗಳಲ್ಲಿಯೂ ಇದ್ದು ಇಂತಹ ಕೆಲಸವು ಹೀಗೆ ಬಾಕಿಯುಳಿದಿರುವುದು ಶೋಚನೀಯವಾಗಿದೆ. ಬೇರೆ ಮತಸ್ಥರು ತಮ್ಮ ಜಾತಿಯ ಸ್ತ್ರೀಯರಿಗೂ ಹೋಸ್ಟೆಲನ್ನು ಮಂಗಳೂರಲ್ಲಿ ಏರ್ಪಡಿಸಿರುತ್ತಾರೆ. ಪತಿತರೆನಿಸಿದ ಹರಿಜನರಿಗೂ ಪ್ರತ್ಯೇಕ ಹೋಸ್ಟೆಲು ಇದೆ. ಹೀಗಿರುತ್ತಾ ಮುಸ್ಲಿಂ ವಿದ್ಯಾರ್ಥಿಗಳಿಗೆ ಯೋಗ್ಯವಾದೊಂದು ಹೋಸ್ಟೆಲು ಆಗದಿರುವುದು ತುಂಬಾ ವ್ಯಸನಾಸ್ಪದವಾದುದು. ಇನ್ನಾದರೂ ಮುಂದಾಳುಗಳಾಗಿರುವ ನಮ್ಮ ಮುಸ್ಲಿಂ ಬಾಂಧವರು ದಕ್ಷಿಣ ಕನ್ನಡ, ಕೇರಳ ಮೊದಲಾದ ಕಡೆಗಳಿಂದ ಬರುವ ಮುಸ್ಲಿಂ ವಿದ್ಯಾರ್ಥಿಗಳ ಸಲುವಾಗಿ ಒಂದು ಹೋಸ್ಟೆಲನ್ನು ತೆರೆಯುವಂತೆ ಪ್ರಯತ್ನಿಸಲಾರರೆ?' ಎಂದು ಕಾರ್ಕಳದ ಜನಾಬ್ ಎಫ್. ಎ. ಶುಕುರ್ ಇವರು ಬರೆಯುತ್ತಾರೆ.

ಪೆರಡಾಲಿನಲ್ಲಿ ದಸರಾ ಮಹೋತ್ಸವ

ಬದಿಯಡ್ಕ 'ಪ್ರೇಮಕೂಟ'ದವರು ಈ ವರ್ಷದ ದಸರಾ ಸಮಯದಲ್ಲಿ ತಾ. ೨೬, ೨೭, ೨೮ ಮತ್ತು ೨೯ ಈ ನಾಲ್ಕು ದಿನಗಳು ವಿದ್ವಾಂಸರಿಂದ ವಿವಿಧ ಭಾಷಣಗಳನ್ನೇರ್ಪಡಿಸಿದ್ದು ಮಾತ್ರವಲ್ಲದೆ ಸ್ಪರ್ಧೆ, ನಾಟಕ ವಿನೋದಾವಳಿಗಳನ್ನೂ ಏರ್ಪಡಿಸಿದ್ದರು.

ಮೊದಲನೆಯ ದಿನ ಶ್ರೀ ಜಿನರಾಜ ಹೆಗ್ಡೆ ಎಂ. ಎಲ್. ಎ. (ಸೆಂಟ್ರಲ್) ಇವರು ಗ್ರಾಮೋದ್ಧಾರದ ಕುರಿತು ಭಾಷಣವಿತ್ತರು: ಗ್ರಾಮಗಳ ಉದ್ಧಾರವಾಗದೆ ರಾಷ್ಟ್ರದ ಉದ್ಧಾರವಾಗದೆಂದೂ ಇಂದಿನ ಕರಕಂದಾಯಗಳಿಂದ ರೈತನ ಹೊರೆಯು ಹೆಚ್ಚಿರುವುದೆಂದೂ ಆ ಬಗ್ಗೆ ಗ್ರಾಮಸ್ಥರೇ ತಮ್ಮ ಉದ್ಧಾರ ವಿಚಾರ ಯೋಚಿಸಿ ಕಾರ್ಯಕ್ರಮಗಳನ್ನು ನಿಶ್ಚಯಿಸಿಕೊಳ್ಳಬೇಕೆಂದೂ ಹಲವು ಸೂಚನೆಗಳನ್ನು ಕೊಟ್ಟು ಭಾಷಣವಿತ್ತರು. ಎರಡನೆಯದಿನ ಶ್ರೀ ಬಿ. ದಾಮೋದರ ಬಾಳಿಗರು 'ಭಾರತದ ಹಳ್ಳಿಗಳ ಉದ್ಧಾರಕ್ಕೆ ವಿಜ್ಞಾನದ ಬೆಂಬಲ' ಎಂಬ ಕುರಿತು ಉಪನ್ಯಾಸವಿತ್ತರು. ಯಂತ್ರಯುಗದಿಂದಾಗುವ ಅನರ್ಥವನ್ನು ವಿವರಿಸಿದರು. ಕೇಂದ್ರೀಕೃತ ಕೈಗಾರಿಕೆಗಳು ಮಾಯವಾಗಿ ಪ್ರತಿಯೊಂದು ಕೈಗಾರಿಕೆಯೂ ಸ್ವಾವಲಂಬನ ಪದ್ಧತಿಯಿಂದ ಆಗಬೇಕೆಂದೂ, ಹಳ್ಳಿಯ ಗುಡಿ ಕೈಗಾರಿಕೆಗಳ ಉದ್ಧಾರವೇ ನಮ್ಮ ದೇಶದ ಉದ್ಧಾರವೆಂದೂ ಅವರು ಹೇಳಿದರು.

ಮೂರನೆಯ ದಿನ ಶ್ರೀ ಕೆ. ಆರ್. ಕಾರಂತ ಎಂ. ಎಲ್. ಎ. ಇವರು ಭಾಷಣವಿತ್ತು, ಸಣ್ಣ ಸಣ್ಣ ಹಳ್ಳಿಗಳ ಕೇಂದ್ರ ಸ್ಥಳಗಳಲ್ಲಿ ಜನರು ಒಟ್ಟಾಗಿ ಕಲೆತು, ಜಾತಿ ಮತ ಮತ್ಸರಗಳನ್ನು ಮರೆತು ಗ್ರಾಮಗಳ ಏಳಿಗೆಯ ವಿಚಾರವನ್ನಾಡಬೇಕೆಂದರು. ಖಾದಿ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯ ಇವುಗಳ ಆವಶ್ಯಕತೆಯನ್ನೊತ್ತಿ ಹೇಳಿ, ಪ್ರಕೃತ ರಾಜಕೀಯದ ವಿಷಯ ವಿವರಿಸುತ್ತಾ ಗಾಂಧೀಜಿಯವರ ಇಂದಿನ ಸತ್ಯಾಗ್ರಹವು ಬಹಳ ವಿಶಿಷ್ಟ ರೀತಿಯದೆಂದೂ, ಅವರ ನ್ಯಾಯ, ಧರ್ಮ ತಪಸ್ಸು, ಆತ್ಮಶಕ್ತಿಗಳ ಬಲದಿಂದ, ಖಂಡಿತವಾಗಿ ಸತ್ಯಾಗ್ರಹವು ಯಶಸ್ವಿಯಾಗುವುದೆಂದೂ, ಸತ್ಯಾಗ್ರಹ ಪ್ರಾರಂಭವಾದ ಕಾಲದಲ್ಲಿ ಬಿಸಿಯೇರಿದ ನೀರಿಗೆ ಗಾಂಧೀಜಿ ತಣ್ಣೀರೆರೆದು ಈಗ ಬೇಕೆಂದೇ ಸಪ್ಪೆಮಾಡಿದ್ದರೂ, ಹೀಗೆ ಗರ್ಭಗುಡಿಯೊಳಗೆ ಮಾತ್ರ ಬೆಳಗುತ್ತಿರುವ ನಂದಾದೀಪದ ಜ್ಯೋತಿ ಬೇಕಾದಾಗ, ಬೇಕಾದಂತೆ ಬೇಕಾದಷ್ಟು ವಿಸ್ತಾರದಲ್ಲಿ ಹರಡಿ ನಿಲ್ಲಲು ಸಮರ್ಥವೆಂದೂ ಸಾರಿದರು.

ಮರುದಿನ ಆಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಇನಾಮು ಹಂಚುವ ಸಭೆ ಕೂಡಿ ಇನಾಮು ಹಂಚಲಾಯಿತು. ಶಾಲಾ ವಿದ್ಯಾರ್ಥಿಗಳು ಮಾತ್ರವಲ್ಲದೆ ಹಳ್ಳಿಯವರನೇಕರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಪ್ರತಿದಿನ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ, ಹಾಗೂ ಪ್ರೇಮಕೂಟದ ಉತ್ಸಾಹೀ ಸದಸ್ಯರಿಂದ ನಾಟಕ ವಿವಿಧವಿನೋದಗಳು ಇದ್ದುವು. ನಾಲ್ಕು ದಿನಗಳ ಕಾರ್ಯಕ್ರಮಗಳು ತುಂಬಾ ಉತ್ಸಾಹ ಪೂರ್ಣವಾಗಿದ್ದುವು.

ಠಾಗೂರ್ ನಿಧಿ

ವಿಶ್ವ ಕವಿ ರವೀಂದ್ರರ ನಿಧಿಯು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ಎತ್ತಲ್ಪಟ್ಟು ಸುಮಾರು ರೂ [illegible]ರಷ್ಟು ಮಾತ್ರ ಇದು ವರೆಗೆ ಸಂಗ್ರಹವಾಗಿದೆ. ಅವಷ್ಟು ಹಣವನ್ನು ಬೇಗನೆ ಒಟ್ಟು ಮಾಡಿ ಗಾಂಧಿ ಜಯಂತಿ ಮುಗಿದ ಕೂಡಲೇ ಅದನ್ನು ಕಳುಹಿಸುವ ಏರ್ಪಾಡು ಮಾಡಲಾಗುವುದೆಂದೂ ಆದುದರಿಂದ ಜಿಲ್ಲೆಯ ಮಹಾಜನರು ವಿಶ್ವಕವಿಗಳ ಸ್ಮಾರಕವಾಗಿ ತಮ್ಮ ಧನ ರೂಪದ ಸಹಾಯವನ್ನು ಬೇಗನೇ ಕಳುಹಿಸಿ ಕೊಟ್ಟಲ್ಲಿ ಹೆಚ್ಚಿನ ಪ್ರೋತ್ಸಾಹ ವಿತ್ತಂತಾಗುವುದೆಂದೂ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳು ತಿಳಿಸುತ್ತಾರೆ.

ಧಾರವಾಡ
ಶ್ರೀ. ಹ. ಪಿ. ಜೋಶಿಯವರ ಶೋಚನೀಯ ನಿಧನ

ಸುಪ್ರಸಿದ್ಧ ಕನ್ನಡ ಲೇಖಕರಾದ ಶ್ರೀಮಾನ್ ಹ. ಪಿ. ಜೋಶಿಯವರು ತಾ ೨೭ರಂದು ಮಧ್ಯಾಹ್ನ ವಿಷಮ ಜ್ವರದಿಂದ ಮರಣಹೊಂದಿದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಮರಣ ಸಮಯದಲ್ಲಿ ಇವರಿಗೆ ಕೇವಲ [illegible] ವರ್ಷಗಳಾಗಿದ್ದುವು. ಇವರ ಹಲವಾರು ಕತೆಗಳು 'ಜಯ ಕರ್ನಾಟಕ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುವವಲ್ಲದೆ, ರಾಜವಲ್ಲಭೆ (ನಾಟಕ) ಮನಸಿನ ತೋಲು [ಕಾದಂಬರಿ] ಫ್ರಮ್ ಎಫಾರ್ (ಇಂಗ್ಲೀಷ ನಾಟಕ) ಇವು ಪ್ರಸಿದ್ಧವಾಗಿರುವವು. ಇನ್ನು ಒಂದೆರಡು ಇವರ ಪುಸ್ತಕಗಳು ಅರ್ಧ ಅಚ್ಚಾಗಿರುವವೆಂದು ತಿಳಿಯುತ್ತದೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಆಫೀಸು ಸಮಯದ ಬದಲಾವಣೆ

ಗಿರಾಕಿಗಳಿಗೆ ಅನುಕೂಲವಾಗುವಂತೆ ನಮ್ಮ ವಹಿವಾಟಿನ ಸಮಯವನ್ನು 1941ನೆ ಅಕ್ಟೋಬರ ತಿಂಗಳಿಂದ ಈ ರೀತಿ ಬದಲಾಯಿಸಿದೆ

ವಾರದ ದಿನಗಳು: ಪೂರ್ವಾಹ್ನ 10ರಿಂದ ಅಪರಾಹ್ನ 3ರ ವರೆಗೆ

ಶನಿವಾರಗಳು: ಪೂರ್ವಾಹ್ನ 10ರಿಂದ ಮಧ್ಯಾಹ್ನ 12ರ ವರೆಗೆ

ಕೆನರಾ ಬೇಂಕ್ ಲಿಮಿಟೆಡ್, ಬೆಳ್ತಂಗಡಿ.

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ,— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದ್ರಾವಿಡ ಮತ್ತು ಆಂಧ್ರ ದೇಶದ ವಿತರಣಾಕಾರರು —
ಮೆಸರ್ಸ್ ವೆದಲ್ಲಪಲ್ಲಿ ಬ್ರದರ್ಸ್,
289 ಎಸ್ಪ್ಲಾನಡೆ—ಮದರಾಸು
ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು — ಕೊರನೇಷನ್ ಟ್ರೇಡಿಂಗ್ ಕೊ
ಮುಹಮ್ಮದಾಲಿ ರೋಡ್, ಮಂಗಳೂರು.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇನೆ

ಆದುದರಿಂದ ಬೆಳೆಯುವ ಮುಂದಿನೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ' ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ, ಎಫ್. ಸಿ ಎಸ್ (ಲಂಡನ್) ಎಂ ಸಿ ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ
ಸಾಧನಾ ಔಷಧಾಲಯ
— ಡಾಕ್ಕಾ, ಬಂಗಾಲ —
ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್ ಪಾ ಕಂಪನಿ, ಹಂಪನಕಟ್ಟಾ ಮಂಗಳೂರು

BHUVANENDRA PRODUCTS LTD.,

Head Office and Factory:	***Depots:***
KATAPADI S Kanara	1 Maharatha Galli, Hubli.
	2 57 Big street, Triplicane, Madras.

" BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"
ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B B. S ಸಿ. ಪಿ. ಸಿ ಬಿಲ್ಡಿಂಗ್.

ಸಿನೆಮಾ ಸುದ್ದಿ

ಕನ್ನಡ ವಸಂತ ಸೇನಾ

ಸರಸ್ವತಿ ಟಾಕೀಸಿನವರ ಕನ್ನಡ ವಸಂತ ಸೇನಾ ಚಿತ್ರವು ತಯಾರಾಗುತ್ತಿದೆ. ಪ್ರಗತಿ ಸ್ಟುಡಿಯೋದಲ್ಲಿ ತಯಾರಾಗುತ್ತಿದೆ. ಅದರಲ್ಲಿ ಸುಬ್ಬಯ್ಯ ನಾಯಿಡು ಚಾರುದತ್ತ ಪಾತ್ರದಲ್ಲಿ ಹಾಗೂ ಲಕ್ಷ್ಮೀಬಾಯಿ ವಸಂತ ಸೇನಾ ಪಾತ್ರದಲ್ಲಿ ಅಭಿನಯಿಸುವರು.

ನಾಸೀಮ್—ಪೃಥ್ವಿರಾಜ್

ಭಾರತದ ಪ್ರಸಿದ್ಧ ನಟನಟಿಯರಾದ ನಾಸೀಮ್ ಪೃಥ್ವಿರಾಜರು ತಾಜ್ ಮಹಾಲ್ ಪಿಕ್ಚರ್ಸಿನವರ ಉಜಾಲದಲ್ಲಿ ಅಭಿನಯಿಸುವರು. ಮುಬಾರಕ್, ಪ್ರೊತಿಮಾ ದಾಸಗುಪ್ತ, ಮಿರ್ಜಾ ಮುಶರಾಫ್ ಮೊದಲಾದವರು ಬೇರೆ ನಟವರ್ಗದವರೆಂದು ತಿಳಿದು ಬರುತ್ತದೆ. ಮುಗ್ನಿಯವರು ಈ ಕಥೆಯ ಲೇಖಕರು ಕಮಲ್ ಅಮ್ರೋಹಿಯವರು ಸಂಭಾಷಣಾ ಲೇಖಕರು ವಾಡಿಯಾ ಸ್ಟುಡಿಯೋದಲ್ಲಿ ಇದನ್ನು ಪ್ರಾರಂಭಿಸಿರುವರು. ಮುಲ್ತಾನೀ ನಿರ್ದೇಶಕನು.

ಭಾರತ್ ಮಿಲಾಫ್

ಭಾರತ್ ಮಿಲಾಫ್ ಚಿತ್ರವನ್ನು ತಯಾರಿಸುವುದರಲ್ಲಿ ನಿರ್ದೇಶಕ ಕಾನೂ ದೇಸಾಯಿ ನಿರತರಾಗಿರುವರು, ಈಗಾಗಲೇ ೫,೦೦೦ ಜನರನ್ನು ಇದರಲ್ಲಿ ನೇಮಿಸಿದ್ದಾರೆ ರಾಮಾಯಣದಿಂದ ಇದರ ಕಥಾವಸ್ತುವು ಉದ್ಧೃತವಾಗಿದೆ ಪ್ರೇಮ ಅದೀಬ್, ದುರ್ಗಾಖೋಟೆ, ಶೋಭನಾ ಸಮರ್ಥ, ಶಾಹೂ ಮೋಡಕ್ ವಿಮಲಾ ವಸಿಷ್ಠ ಮೊದಲಾದವರು ಇದರಲ್ಲಿ ಅಭಿನಯಿಸುವರು.

ಸರ್ದಾರ್ ಅಖ್ತರ್

ಇವಳು ನಾಯಿಕಾ ಪಾತ್ರವಹಿಸುವ ಕಥೆಯೊಂದು ಸೊಹ್ರಾಬ್ ಮೋಡಿಯವರ ನಿರ್ದೇಶಕತ್ವದಿಂದ ಮಿನರ್ವಾ ಪ್ರೊಡಕ್ಷನ್ಸಿನವರಿಂದ ತಯಾರಿಸಲ್ಪಡುವುದು.

ಸಿನೆಮಾದವರ ನಾಟಕ ಕಂಪನಿ

ಕೇಶವ ರಾವ್ ದಾತೆ, ಗಜಾನನ ಜಾಗೀರ್ದಾರ್ ಮತ್ತು ಕೆಲವು ಸಿನೆಮಾ ನಟರು ನಾಟ್ಯಕಂಪನಿಯೊಂದನ್ನುಮಾಡಿ ಮರಾಠೀ ನಾಟಕಗಳನ್ನು ಅಭಿನಯಿಸುವ ಯೋಜನೆ ಮಾಡುತ್ತಿರುವರೆಂದು ತಿಳಿದಿದೆ.

ಕಿಶೋರ ಶಾಹು

ಕಿಶೋರ ಶಾಹು ಗ್ರೇಟ್ ಇಂಡಿಯಾ, ಪಿಕ್ಚರ್ಸ್ ಕಂಪನಿಯನ್ನು ಸೇರಿರುವುದಾಗಿ ತಿಳಿದು ಬರುತ್ತದೆ.

ಪ್ರಭಾತ್ ಮರಾಠೀ ವ್ಯಾಜ್ಯ

ಪ್ರಭಾತ ಕಂಪನಿಯ ಆದ್ಮಿ-ಚಿತ್ರದ ಪ್ರಚಾರದಲ್ಲಿ ಹಾಕಲಾಗಿರುವ ಒಂದು ವ್ಯಂಗ ಚಿತ್ರವು ತನ್ನನ್ನು ಹೋಲಿಸಿರುವುದೆಂದು ಆ ಕಂಪನಿಯ ಮೇಲೆ ಮಾನನಷ್ಟ ವ್ಯಾಜ್ಯ ಮಾಡಿದ ವಸಂತ ಮರಾಠೆ ಎಂಬವನ ವ್ಯಾಜ್ಯವು ರಾಜಿಯಿಂದ ಈಗ ಇತ್ಯರ್ಥವಾಯಿತೆಂದು ತಿಳಿದುಬರುತ್ತದೆ.

ಸರಾಸರಿ ಸಿನೆಮಾ ಒಂದಕ್ಕೆ ರೂ.೮೦,೦೦೦ ಖರ್ಚಾಗುತ್ತದೆ

ಭಾರತದಲ್ಲಿ ತಯಾರಾಗುವ ಸಿನೆಮಾಗಳ ಖರ್ಚಿನ ಅಂದಾಜನ್ನು ನೋಡಿದ್ದಲ್ಲಿ ಸರಾಸರಿ ಒಂದು ಸಿನೆಮಾಕ್ಕೆ ೮೦,೦೦೦ ರೂಪಾಯಿಗಳಷ್ಟು ದ್ರವ್ಯ ಬೇಕಾಗುವುದೆಂದು ಸರ್, ನೃಪೇನ್ ಸರ್ಕಾರರು ಸಿಮ್ಲಾದಲ್ಲಿ ಒಂದು ಭಾಷಣದಲ್ಲಿ ಹೇಳಿದರು.



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನು-(Cuticura Toilet Medicaetd Soap) ಹೆಚ್ಚಿನ ಮನ್ನಣೆಯ ಸಂರಕ್ಷಣೆಯು ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಆದರೆ ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣವಿದೆ-ಇಂಥ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಮೈಯನ್ನು ತಂಪಾಗಿರಿಸುತಿಸುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powd) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್
CUTICURA SOAP

The Canara Industrial & Banking Syndicate Ltd.

(Incorporated in British India, Liability of Share-holders Limited)

STATEMENT OF AFFAIRS—AS ON 31ST AUGUST, 1941

LIABILITIES	Rs.	As	Ps	ASSETS	Rs	As	Ps
Paid-up Capital	5,81,758	0	0	Cash in hand and at Bankers at call	4,71,694	10	2
Reserve-Funds	2,10,000	0	0	Investments on Govt. Securities	11,57,230	7	6
Deposits	32,45,857	4	11	" on Shares of other Banks & Companies	1,00,100	12	0
Due to Bankers	96,185	6	7	Fully Secured Advances	13,85,337	3	7
Bills for Collection	2,89,402	3	1	Other advances, Bills discounted etc.	9,05,364	0	4
Sundries including Revenue items.	4,23,010	4	3	Landed Properties etc, Office premises Safes, Furniture & fittings	2,46,882	15	6
				Bills for Collection (per contra)	2,89,402	3	1
				Sundries including Revenue items.	2,87,200	14	8
Total Rs.	48,46,213	2	10	Total Rs.	48,46,213	2	10

"MUKUND NIVAS",
UDIPI
12th September, 1941.

T. M. A. PAI
Managing Director.

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ॥ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು ಹೊರಡುವ ಗಂಟೆ, ತಲ್ಪುವ ಗಂಟೆ
ಗೂಡ್ಸು ಬಂಡಿ 8 45 ರಾತ್ರಿ 9.25 ರಾತ್ರಿ
ನೀಲೇಶ್ವರದವರೆಗೆ 7 32 ಬೆಳಗ್ಗೆ 10 ಅಪರಾಹ್ನ
ಮಲಬಾರು ಎಕ್ಸ್
ಪ್ರೆಸ್ (ಮೈಲ್) 9.5 ಬೆಳಗ್ಗೆ 5.15 ಸಾಯಂ.
ಜೋಲಾರ್ ಪೇಟೆ
ಪೆಸೆಂಜರ್ 12.0 ಮಧ್ಯಾಹ್ನ 2 55 ಸಾಯಂ.
ಕಾಸರಗೋಡು
ವರೆಗೆ 3.25 ಸಾಯಂ. 6·50 ಸಾಯಂ.
ಕಣ್ಣನ್ನೂರು
ವರೆಗೆ 5·52 ಸಾಯಂ. 9 40 ಪೂರ್ವಾಹ್ನ

ಸ್ವದೇಶಾಭಿಮಾನಿಯಲ್ಲಿ,
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ವಿಜ್ಞಾನಯುಗ ವಿಚಿತ್ರ ಪ್ರಪಂಚ

ರಕ್ತ ಹರಿಸುವುದು.

ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ರಕ್ತ ಹರಿಸುವುದು, ಪ್ರಯೋಗದಲ್ಲಿದೆ. ಇಂತಹ ಪ್ರಯೋಗದಿಂದ ಮನುಷ್ಯನು ಆರೋಗ್ಯ ಪಡೆಯುವಂತಾಗುತ್ತದೆ. ಆದರೆ ಇದರಲ್ಲಿಯೂ ಕೆಲವು ಸೂಕ್ಷ್ಮ ವಿಚಾರಗಳಿವೆ.

ಪ್ರತಿಯೊಂದು ಮನುಷ್ಯನ ರಕ್ತವನ್ನು ಎ, ಬಿ, ಎಬಿ ಅಥವಾ ಒ ಎಂಬುದಾಗಿ ವಿಭಾಗಿಸಿರುವರು. ರಕ್ತ ಕೊಡುವವನ ರಕ್ತವು ತೆಗೆದು ಕೊಳ್ಳುವವನ ರಕ್ತಕ್ಕೆ ಸರಿಯಾಗಿಲ್ಲವಾದರೆ ಅದರಿಂದ ತೊಂದರೆಯುಂಟಾಗುತ್ತದೆಯೆಂದೂ ಈಗ ತಿಳಿದಿದೆ.

ಹಾಗಾಗಿ ಈಗ ಪ್ರತಿಯೊಂದು ತರದ ರಕ್ತವನ್ನು ಕೆಲ ಪದಾರ್ಥಗಳನ್ನು ಹಾಕಿ ಎಲ್ಲಾ ಶರೀರಗಳಿಗೂ ಕೊಡುವಂತೆ ಮಾಡಿದ್ದಾರೆ. ಇಂತಹ ರಕ್ತಗಳನ್ನು ಆಸ್ಪತ್ರೆಗಳಲ್ಲಿ ಅಲ್ಲಿ ಅಲ್ಲಿಯೇ ತಯಾರಿಸುವರು. ಇಷ್ಟರಲ್ಲಿಯೇ ಲಂಡನಿನ ಡಾಕ್ಟರರು ಈ ಪ್ರಯೋಗವನ್ನು ನೂರಾರು ಜನರ ಮೇಲೆ ಉಪಯೋಗಿಸಿರುವರು

ಜರ್ಮನರಿಗೆ ಮಾತ್ರೆಗಳು ಆಹಾರವಾಗಿಲ್ಲ

ಇತ್ತೀಚೆಗೆ ಎಲ್ಲೆಲ್ಲಿಯೂ ಜರ್ಮನ್ ಯೋಧರು ಆಹಾರ ಸತ್ವಗಳಿಂದ ಕೂಡಿದ ಮಾತ್ರೆಗಳನ್ನು ಉಪಯೋಗಿಸುತ್ತಾರೆಂಬ ನಂಬಿಗೆಯು ಪ್ರಸಿದ್ಧವಾಗಿರುವುದಷ್ಟೆ? ಆದರೆ ಅದು ಸರಿಯಲ್ಲ; ಎಂದು ವೆನಿಸ್‌ನ ಡಾ| ಮೇಕ್ಸ್ ಬೆರ್ನಾರ್ಡ್ ಇವರು ಬರೆಯುತ್ತಾರೆ.

ಜರ್ಮನ್ ವೈಜ್ಞಾನಿಕರು ವಿಟಮಿನ್‌ಗಳಿಂದ ಕೂಡಿದ ವಸ್ತುಗಳನ್ನು ತಮ್ಮ ಬ್ರೆಡ್ ಮೊದಲಾದ ಆಹಾರಗಳಲ್ಲಿ ಉಪಯೋಗಿಸಿ ನೋಡಿದರು, ಆದರೆ ಅದರಿಂದ ತಾತ್ಕಾಲಿಕವಾಗಿ ಮಾತ್ರ ಪರಿಹಾರಕಂಡದ್ದಲ್ಲದೆ ವಿಶೇಷ ಪ್ರಯೋಜನವೇನೂ ದೊರೆಯಲಿಲ್ಲವಂತೆ. ಆದರೆ ಯೋಧರಿಗೆ ಸ್ಪೆಶಲಾಗಿ ಮಾಡಿದ ಆಹಾರವನ್ನು ಜರ್ಮನರು ಒದಗಿಸುತ್ತಿರುವರೆಂದು ತಿಳಿದಿದೆ.

ವಿಮಾನ 'ಸೂಟು'ಗಳು

ವಿದ್ಯುಚ್ಛಕ್ತಿಯಿಂದ ಬಿಸಿಮಾಡಿದ ೧೨,೦೦೦ 'ಸೂಟು'ಗಳಿಗೆ ಅಮೇರಿಕವು 'ಆರ್ಡರ್' ಕೊಟ್ಟಿದೆ. ಇಂತಹ ಹೊಸ ಸೂಟುಗಳನ್ನು ಹಾಕಿ ವೈಮಾನಿಕರು ಶೀತ ಪ್ರದೇಶದಲ್ಲಿಯೂ ಬಹಳ ಹಾರಾಡಬಲ್ಲರಂತೆ. ಇದು ಬೇರೆ ಸೂಟುಗಳಿಗಿಂತ ಲಘುವಾಗಿರುವುದೆಂದೂ ತಿಳಿದಿದೆ.

ಸಂಕ ಅಗಲವಾಯಿತು

ಕೈರೋದಲ್ಲಿ ಹವೆಯ ಉಷ್ಣವು ೧೧೩ ಡಿಗ್ರಿಗೆ ಏರಿದಾಗ ಕ್ರೆಸ್—ಎರ್—ನಿಲ್ ಎಂಬ ಸಂಕವು ಅಗಲವಾಗಿ ಅದರ ಬಾಗಿಲು ತೆರೆಯುವುದೇ ಅಸಾಧ್ಯವಾಗಿ ಬಿಟ್ಟಿತಂತೆ. ಈ ಸಂದರ್ಭದಲ್ಲಿ ಹವೆಯ ಉಷ್ಣದ ಕಾರಣ ಆ ದೇಶದಲ್ಲಿ ಸಾವಿರಾರು ಹಕ್ಕಿಗಳು ಸತ್ತುಬಿದ್ದುವೆಂದೂ ತಿಳಿದಿದೆ. ಉಷ್ಣ ಹೆಚ್ಚಾದರೆ ಮನುಷ್ಯರಿಗೆ ಸ್ಮರಣಶಕ್ತಿಯೂ ಕುಂದುವುದೆಂದು ಗೊತ್ತಾಗಿದೆ. ಲಂಡನಿನ ಕಳೆದುಹೋದ ಸಾಮಾನುಗಳನ್ನು ಕೂಡಿಸಿಡುವ ಆಫೀಸಿನಲ್ಲಿ ಒಟ್ಟು ಸೇರಿಸಿದ ಸಾಮಾನುಗಳನ್ನು ಪರಿಶೀಲಿಸಿದಾಗ, ಉಷ್ಣದ ಹವೆಯಲ್ಲಿ ಆ ವಸ್ತುಗಳು ದೊಡ್ಡದಾಗಿರುವುದು ಕಂಡುಬಂತಂತೆ ಜೇನುನೊಣಗಳ ಗೂಡಿನಲ್ಲಿ ಜೇನು ಉಷ್ಣಕಾಲದಲ್ಲಿ ಹೆಚ್ಚುವುದೆಂದೂ ಕಂಡುಹಿಡಿದಿರುವರು

ಅಮೇರಿಕನರ ದೃಷ್ಟಿ

೧,೦೦೦ ಅಮೇರಿಕನರಲ್ಲಿ ೩೪ ಜನರಿಗೆ ಮಾತ್ರ ಸರಿಯಾದ ದೃಷ್ಟಿ ಇದೆ.

ಮಂಗಳೂರು
ಲೋಕ ಸಂಚಾರಿಯ ಆಗಮನ
ಅದ್ಭುತ ದೃಶ್ಯಗಳ ಪ್ರದರ್ಶನ
ರಚನಾತ್ಮಕ ಕಾರ್ಯಕ್ರಮಕ್ಕೆ ಸಹಾಯ

ಲೋಕ ಸಂಚಾರಿಯಾಗಿ, ಇಟಲಿ, ಜರ್ಮನ್, ಅಮೇರಿಕಾ, ಫ್ರಾನ್ಸ್ ಇಂಗ್ಲಂಡ್ ಮೊದಲಾದ ಕಡೆಗಳಲ್ಲಿ ಸೈಕಲ್ ಮೂಲಕ ಪ್ರಯಾಣ ಮಾಡಿ, ವೈಸರಾಯ, ಮಹಾತ್ಮಾ ಗಾಂಧಿ, ಸುಬಾಸ ಬೋಸ್, ನೆಹರು ಮೊದಲಾದ ಮಹನೀಯರಿಂದ ಪ್ರಶಸ್ತಿ ಪಡೆದ ಶ್ರೀ ಮಂಗೇಶಕುಮಾರ್ ಇವರು ಈಗ ತಾನೇ ಮಂಗಳೂರಿಗೆ ಬಂದಿರುವರು, ಇಲ್ಲಿ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದ ಸಹಾಯದ ಸಲುವಾಗಿ ಸದ್ಯದಲ್ಲಿಯೇ ವಿವಿಧ ಅದ್ಭುತ ಭಯಾನಕ, ಮಾಯಾ ಜಾಲಗಳನ್ನು ಪ್ರದರ್ಶಿಸಲಿರುವರೆಂದು ತಿಳಿದಿದೆ. ಇಡೀ ಜಗತನ್ನೇ ಬೆರಗು ಪಡೆಸಿದಂಥಾ ಆಕಾಶದಲ್ಲಿ ಆಧಾರವಿಲ್ಲದೆ ಹಗ್ಗವನ್ನು ನೆಟ್ಟಗೆ ನಿಲ್ಲಿಸಿ ಅದರ ಮೇಲೆ ನರ್ತನ ಮಾಡುವುದು, ವಿಷದ ಹಾವು ತಿನ್ನುವುದು, ಮೊದಲಾದ ಶಕ್ತಿ ಯುಕ್ತಿ ಪ್ರದರ್ಶಕ ಅನೇಕ ಆಟಗಳನ್ನು ಅವರು ಪ್ರದರ್ಶಿಸಲಿರುವರೆಂದು ತಿಳಿದಿದೆ.

ಅದರಲ್ಲಿ ಕೋವಿಗಳನ್ನಿಟ್ಟುಕೊಳ್ಳಲು ಆಸ್ಪದವಿರುವುದೆಂದು ಗೊತ್ತಾಗಿದೆ.



ಮಗು ಇದು ನಿನಗೆ!

ಈ ಮಗುವು ಯುವಕನಾದಾಗ, ಕೂಡಿಟ್ಟ ಪ್ರತಿ ೧೦ ರೂಗೆ, ಅವನು ರೂ. ೧೩|೯ ಯನ್ನು ಪೋಸ್ಟ್ ಆಫೀಸ್‌ನಲ್ಲಿ ಪಡೆಯಬಹುದು. ೧೦ ರೂ. ನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಂಡು ತನ್ಮೂಲಕ ತಮ್ಮ ಮಕ್ಕಳಿಗೆ ಹಣ ಕೂಡಿಡುವುದು ಪ್ರತಿಯೊಬ್ಬ ಪ್ರೀತಿಯ ತಂದೆತಾಯಿಗಳ ಕರ್ತವ್ಯವಾಗಿದೆ. ಪ್ರತಿ ಒಂದು ಮಗುವೂ, ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಅಂಟಿಸುವ ತನ್ನದೇ ಆದ ಡಿಫೆನ್ಸ್ ಸೇವಿಂಗ್ಸ್ ಕಾರ್ಡ್ ಹೊಂದಬಹುದು ಈ ಸ್ಟಾಂಪುಗಳು





ಪೋಸ್ಟ್ ಆಫೀಸ್‌ನಲ್ಲಿ ೪ ಅಣೆ, ೮ ಅಣೆ ಮತ್ತು ರೂ. ೧ ಕ್ಕೆ ಒಂದರಂತೆ ಸಿಗುತ್ತವೆ. ಎಲ್ಲಾ ವಯಸ್ಸಿನ ಮಕ್ಕಳೂ ಸ್ಟಾಂಪ್‌ಗಳನ್ನು ಶೇಖರಿಸಲು ಆನಂದಿಸುತ್ತಾರೆ, ಆದರೆ ಈ ವಿಧಾನದಲ್ಲಿ ಅವರು ಕೂಡಿಟ್ಟ ಹಣವು ಮುಂದೆ, ಪಟ್ಟಣದಲ್ಲಿ ಶಿಕ್ಷಣ ಹೊಂದಲು ಅನುಕೂಲವಾಗುತ್ತೆ.



ಅವರು ತಮಗೆ ತಾವೆ ಸಹಾಯ ಮಾಡಿಕೊಂಡು ವಿಫುಲವಾದ ಲಾಭ ಹೊಂದಲು ನೆರವಾಗಿರಿ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೆಟ್ಸ್

GI 6UH

ಡೋಂಗರೆ
ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ



ನವ ಚೈತನ್ಯಕ್ಕೆ
'ಒಂಪ್ರೊನಾ'
ದೇಹದ ರಕ್ತ, ಗ್ರಂಥಿ,
ನರನಾಡಿಗಳನ್ನು ಬಲ
ಪಡಿಸಿ ಶಕ್ತಿಯನ್ನೀ
ಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:-
ದಿ ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists: –
Messrs. Dadha & Co., MADRAS.

THE PIE-MONEY BANK, LTD
Maidan Road, MANGALORE
Undertakes all kinds of Banking Business Current account at 2¼% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public
Apply for particulars–
K. R. GURU, *Managing Director*

The Bank of Mangalore Limited.
Branches—MOODABIDRI & PADUBIDRI
HEAD OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3 to 5%
INTEREST PAYABLE QUARTERLY
Interest on Savings Bank Deposits allowed at at 2½%

THE
Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price **0-2-6** per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— THE JOINT MANAGERS,
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3-13-0 | *Regd. No. M. 3460*

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 3-10-1941 [ಸಂಚಿಕೆ 39]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂತಾದ ಬೇನೆ, ವಕ್ರವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI, MANGALORE,—CALICUT— MADRAS,
TRIVANDRUM, BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಲೀಲಾ ಚಿಟ್ನೀಸ್ ಬಿ. ಎ.
ಶೀಘ್ರದಲ್ಲಿಯೇ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವ
ಬೊಂಬೆ ಟಾಕೀಸಿನವರ "ಬಂಧನ್" ಚಿತ್ರದಲ್ಲಿ.

KANNADA ILLUSTRATED WEEKLY

NOTICE

In the Court of the District Munsiff of Mangalore.

Small Cause Suit No. 294/1941

Between:—

Mrs. J. V. Saldanha — Plaintiff

and

Mark Fernandes, son of Casmir Fernandes, C/O Simon Furtado, Pin Mansion, New Dock Yard Street, Mazagaon, Bombay — Defendant

Whereas the plaintiff has instituted a suit against you, for the reliefs claimed in the plaint (Rs. 263-8-4) you are hereby informed to appear in this Court in person or by a pleader duly instructed, and able to answer all material questions relating to the suit on the 25th day of October 1941 at 11 o'clock in the forenoon before this Court, in default of your apearance on the said date, the suit will be heard and determined in your absence.

Mangalore, 6-10-1941 — **Basil Lobo, B.A., B.L.** Advocate for Plaintiff

ಪ್ರಕಟಣೆ

"ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನ"

ಶ್ರೀ ದೇವಸ್ಥಾನದಲ್ಲಿ ಇದೇ ಬರುವ 19-11-1941 ರಿಂದ 25-11-1941ರ ವರೇಗೆ ಜರಗುವ ಶ್ರೀ ಷಷ್ಠಿ ಮಹೋತ್ಸವಗಳ ಉದ್ದಿಶ್ಯ ಅಗತ್ಯವಿರುವ ಜೀನಸುಗಳನ್ನು ಒದಗಿಸಿ ಕೊಡಬಹುದೆಂದು ಅಪೇಕ್ಷಿಸುವವರು ಜೀನಸಗಳ ಕ್ರಯವನ್ನು ನಮೂದಿಸಿ ಸೆಂಪಲ್ ಸಮೇತ ತಾ. 25-10-1941ರ ವಳಗೆ ಕವರುಗಳಲ್ಲಿ ಹಾಕಿ ಬಂದ್ ಮಾಡಿ ಶ್ರೀ ಭಂಡಾರದ ಎಕ್ಸಿಕ್ಯೂಟಿವ್ ಆಫೀಸರರ ಹೆಸರಿನಲ್ಲಿ ಟೆಂಡರು ಗಳನ್ನು ರವಾನಿಸಿಕೊಡತಕ್ಕದ್ದು. ತಾ. 1-11-41 ರಲ್ಲು ಸದ್ರಿ ಟೆಂಡರುಗಳು ತೆರೆಯಲ್ಪಟ್ಟು ಸೆಂಪಲ್ ಪರೀಕ್ಷಿಸಿ ಅಗತ್ಯವುಳ್ಳ ಹುಕುಂ ಮಾಡಲಾಗುವದು.

ಶರತ್ತುಗಳು:—

1. ಜೀನ್ಸುಗಳು ಉತ್ತಮ ತರದ್ದು ಆಗಿರತಕ್ಕದ್ದು. 2. ಜೀನ್ಸುಗಳನ್ನು ಭಂಡಾರದ ಶ್ರೀ ಧರ್ಮ ಅಗ್ರಹಾರದಲ್ಲಿ ಅಳತೆ ಸರಿ ಒಪ್ಪಿಸಿಕೊಡತಕ್ಕದ್ದು. 3. ನಾಜೂಕಾಗದೆ ಸಮಧಾನಕರವಲ್ಲದ ಜೀನ್ಸುಗಳನ್ನು ವಾಪಾಸು ಮಾಡಲಾಗುವದು. 4. ಎಲ್ಲಾ ಜೀನ್ಸುಗಳು ಒಪ್ಪಿಸಿಕೊಟ್ಟ ಕೂಡಲೇ ಸದ್ರಿ ಜೀನ್ಸುಗಳ ಕ್ರಯದ ಐವೇಜನ್ನು ಬಿಲ್ ಮೇರೆಗೆ ವಸೂಲು ಕೊಡಲಾಗುವುದು. 5. ಜೀನ್ಸುಗಳ ಬಗ್ಗೆ ಎಷ್ಟನ್ನಾದರೂ ಅಂಶ ಅಡ್ವಾನ್ಸ ಕೊಡಲಾಗಲಿಕ್ಕಿಲ್ಲ. 6. ಜೀನ್ಸುಗಳ ಕುಲಂಕುಶ ಪಟ್ಟಿಯನ್ನೂ ಶ್ರೀ ಧರ್ಮ ಅಗ್ರಹಾರದಿಂದ ಪಡಕೊಳ್ಳಬಹುದು.

M. V. Bhatt.
Manager (in charge)
ಶ್ರೀ ಧರ್ಮ ಅಗ್ರಹಾರ ಆಫೀಸು,
ಮಂಜೇಶ್ವರ,
7-10-1941

ಚರ್ಚಿಲ್ ಭಾಷಣ.

ಛಳಿಗಾಲ ಬರುತ್ತಿರುವುದಾದರೂ ರಷ್ಯದ ಮೇಲಿನ ಜರ್ಮನ ಒತ್ತಾಯ ಕಡಿಮೆಯಾಗುವಂತೆ ಕಾಣುವುದಿಲ್ಲ. ಹಿಮಗಾಲದಲ್ಲಿ ಬ್ರಿಟನಿಗೆ ಯುದ್ಧಭೀತಿ ತಪ್ಪಿದೆಯೆಂದು ತಿಳಿಯಬಾರದು; ಬರುವ ಬೇಸಗೆಯಲ್ಲಿ ಘೋರ ಕಾಳಗ ನಡೆವುದು; ಲಂಡನಿನ ಮೇಲೆ ತೀವ್ರ ಆಕ್ರಮಣವೊಂದನ್ನು ನಿರೀಕ್ಷಿಸಬೇಕಾಗಿದೆ ಎಂದು ಮೊದಲಾಗಿ ಚರ್ಚಿಲರು ಮೊನ್ನೆಯೊಂದು ಭಾಷಣದಲ್ಲಿ ಹೇಳಿದರು.

ಆಸ್ಟ್ರೇಲಿಯಾ ಸರಕಾರ.

ಆಸ್ಟ್ರೇಲಿಯದ ಕೂಲಿಗಾರ ಪಂಗಡದವರು ಅಲ್ಲಿನ ರಾಜ ಸಭೆಯಲ್ಲಿ ಮಂಡಿಸಿದ ಸರಕಾರದ ವಿರುದ್ಧವಾದ ಆಕ್ಷೇಪಣೆಯು ಠರಾವು ಮಂಜೂರಾಗಿ ಸರಕಾರವು ಸೋತಿದೆ. ಇದರ ಪರಿಣಾಮ ಅಲ್ಲಿನ ಪ್ರಧಾನಿ ಫೇಡನರು ರಾಜಿನಾಮೆ ಕೊಟ್ಟರು. ಹೊಸ ಮಂತ್ರಿಮಂಡಳ ರಚಿತವಾಗುವುದು.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

10—10—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೦—೧೦—೧೯೪೧

ಸಮರಭೂಮಿಯ ಸಂಚಾರ

ಲೆನಿನ್‌ಗ್ರಾಡಿನ ದಕ್ಷಿಣಕ್ಕೆ ಈಗ ಘೋರ ಕಾಳಗವಾಗುತ್ತಿದೆ. ಲೆನಿನ್‌ಗ್ರಾಡಿನಿಂದ ಹತ್ತು ಮೈಲು ದೂರಕ್ಕೆ ಜರ್ಮನ್ ಸೈನ್ಯ ನಿಲ್ಲಿಸಲಾಗಿದೆಯಂತೆ. ಅನೇಕ ದಿನಗಳಿಂದ ಆ ಭಾಗದಲ್ಲಿ ಕಾಳಗ ನಡೆಯುತ್ತಲೇ ಇದೆ. ಮಧ್ಯ ರಣಭೂಮಿಯಲ್ಲಿ ಜರ್ಮನರು ಆತ್ಮ ರಕ್ಷಣೆಮಾಡಿಕೊಳ್ಳುತ್ತಿರುವರು. ದಕ್ಷಿಣದಲ್ಲಿ ಕ್ರಿಮಿಯದ ಭೂಕಂಠದಲ್ಲಿ ಘೋರ ಯುದ್ಧವಾಗುತ್ತದೆ. ಇತ್ತೀಚೆಯ ಸುದ್ದಿಗಳಿಂದ, ಲೆನಿನ್‌ಗ್ರಾಡ್ ರಣಭೂಮಿಯಲ್ಲಿ ಜರ್ಮನರಿಗೆ ಪರಾಜಯವೊದಗುತ್ತಿದೆಯೆಂದು ತಿಳಿದಿದೆ. ರಶ್ಯದ ಸೋವಿಯಟ್ ಸೈನ್ಯಗಳು ಬಲವಂತವಾಗಿ ಕಾದಾಡಿ ಜರ್ಮನರನು ಹಿಂದಟ್ಟಿದವಂತೆ. ಜರ್ಮನ್ ವಿಮಾನಗಳು ಆಗಾಗ ಮೋಸ್ಕೋ ಲೆನಿನ್ ಗ್ರಾಡುಗಳ ಮೇಲೆ ಬಾಂಬು ಸುರಿಸಲು ಸಾಹಸಪಡುತ್ತಿವೆ. ಮಿತ್ರರಾಷ್ಟ್ರಗಳಿಂದ ರಶ್ಯಕ್ಕೆ ಸಾಕಷ್ಟು ಸಹಾಯ ದೊರಕಬಿದ್ದರೂ, ಮುಂದಕ್ಕೆ ಛಳಿಗಾಲ ಬಂದುದರಿಂದ ರಶ್ಯನರು ಅಷ್ಟು ಅಂಜಿಕೊಳ್ಳಲು ಕಾರಣವಿಲ್ಲವೆಂಬುದು ಕೆಲವರ ಖಂಡಿತಾಭಿಪ್ರಾಯವಾಗಿದೆ

ಲೆನಿನ್‌ಗ್ರಾಡ್ ಒಡೆಸ್ಸಾಗಳಲ್ಲಿ

—ಲೆನಿನ್‌ಗ್ರಾಡ್ ಕಳೆದ ಹಲವು ದಿನಗಳಿಂದ ಜರ್ಮನರ ಮುಂದೊತ್ತುವ ಗುರಿಯೆನಿಸಿ ಅಭೇದ್ಯವಾಗಿ ಇದು ವರೆಗೆ ಉಳಿದಿದೆ. ಇಂದಿನೀ ರಶ್ಯಾ ಜರ್ಮನ್ ಕಾಳಗದಲ್ಲಿ ಲೆನಿನ್‌ಗ್ರಾಡ್ ಯುದ್ಧವು ಬಹಳ ಅದ್ಭುತ ಸಾಹಸಮಯ ಘಟನೆಗಳಿಂದ ಕೂಡಿರುತ್ತದೆ. ಲೆನಿನ್‌ಗ್ರಾಡು ಪಶ್ಚಿಮ ಸಮುದ್ರದಿಂದ ರಶ್ಯವನ್ನು ಪ್ರವೇಶಿಸಲು ಒಂದು ಹೆಬ್ಬಾಗಿಲಿನಂತೆ ಇದೆ. ರಶ್ಯದ ಭೂಪಟವನ್ನು ನಿರೀಕ್ಷಿಸಿದರೆ, ಲೆನಿನ್ ಗ್ರಾಡಿನ ಪ್ರಾಮುಖ್ಯತೆ ತಿಳಿಯದಿರದು, ಅದಾಗಿಯೇ ರಶ್ಯನರು ಹೀಗೆ ಜೀವದ ಹಂಗುತೊರೆದು ಕಾದಾಡಿ ಅದರ ರಕ್ಷಣೆಮಾಡುತ್ತಾ ಬಂದಿರುವರು. ಈಗಲಾದರೂ ಲೆನಿನ್‌ಗ್ರಾಡಿಗೆ ಶತ್ರುಗಳಿಂದ ಭೀತಿ ತಪ್ಪಿರುವುದಿಲ್ಲವೆನಬೇಕು.

ಒಡೆಸ್ಸಾದ ಬಳಿಯಲ್ಲಿಯೂ ಅಂತೆಯೇ ಕಾಳಗವಾಗುತ್ತಿರುವುದು. ಇದನ್ನು ಕಪ್ಪುಸಮುದ್ರದ ಲೆನಿನ್‌ಗ್ರಾಡ್ ಎಂದು ಕರೆಯಬಹುದು. ಅದರ ಸುತ್ತು ಮೂರು ಬಲವಾದ ಸೇನೆಗಳನ್ನಿರಿಸಿ ರಶ್ಯನರು ಅದರ ರಕ್ಷಣೆಯ ವಿಷಯ ವಿಶೇಷ ಜಾಗರೂಕತೆ ವಹಿಸಿಕೊಂಡಿರುವರು! ಕಪ್ಪುಸಮುದ್ರದಲ್ಲಿ ರಶ್ಯನ್ ನೌಕಾಬಲದ ಶಕ್ತಿ ಇರುವ ವರೆಗೆ ಒಡೆಸ್ಸಾ ಶತ್ರುಗಳ ಬಲೆಗೆ ಬೀಳುವುದು ಸಾಧ್ಯವಿಲ್ಲ.

ಹಿಟ್ಲರನ ಭಾಷಣ

ಹಿಟ್ಲರನು ಈ ವಾರ ಬರ್ಲಿನಿನಲ್ಲಿ ಒಂದು ಭಾಷಣ ಮಾಡಿದನು. ಅದರಲ್ಲಿ ರಶ್ಯವನ್ನು ಜರ್ಮನಿಯು ಇಷ್ಟರಲ್ಲಿಯೇ ಸದೆಬಡೆದಿರುವುದೆಂದು ಹೇಳಿದನು. 'ಜರ್ಮನಿಯ ಮೇಲೆ ರಶ್ಯವು ಆಕ್ರಮಣ ಮಾಡುವ ಸಿದ್ಧತೆ ಮಾಡುತ್ತಿದ್ದುದು ನಮಗೆ ತಿಳಿದು ಬಂದುದರಿಂದ ಮೊದಲಾಗಿ ನಾವೇ ರಶ್ಯವನ್ನು ಹೀಗೆ ಆಕ್ರಮಿಸಬೇಕಾಯಿತು' ಎಂದು ಹಿಟ್ಲರನು ಹೇಳಿದನು. ತನ್ನ ಜೀವಮಾನದಲ್ಲಿ ಇದು ಒಂದು ಕಠಿಣವಾದ ನಿರ್ಣಯವೆಂದೂ, ಜಗತ್ತಿನ ಇತಿಹಾಸದಲ್ಲಿಯೇ ಇದು ಒಂದು ಪ್ರಚಂಡಕಾಳಗವೆಂದೂ ಇದುವರೆಗೆ ಎಲ್ಲವೂ ನಮ್ಮ ಯೋಜನೆಯ ಪ್ರಕಾರ ನಡೆದಿದೆಯೆಂದೂ, ವೈರಿಯನ್ನು ನಾವು ಈಗಾಗಲೇ ಸದೆಬಡೆದಿರುವೆವೆಂದೂ ಹಿಟ್ಲರನು ಸಾರಿದನು. ತನ್ನ ಹೆಸರನ್ನು ಶಾಶ್ವತಮಾಡಲು ತಾನು ಹೀಗೆ ಯುದ್ಧಮಾಡುವುದಿಲ್ಲವೆಂದೂ, ಶಾಂತಿಕಾಲದ ತನ್ನ ಕೆಲಸಗಳಿಂದಲೇ ತನಗೆ ಬೇಕಾದಷ್ಟು ಕೀರ್ತಿಬರಬಹುದೆಂದೂ, ಆದರೆ ಜರ್ಮನಿಯ ಸ್ವಾತಂತ್ರ್ಯದ ಸಲುವಾಗಿ ನಾವು ಈ ಯುದ್ಧಮಾಡಬೇಕಾಯಿತೆಂದೂ ಆತನು ವಾದಿಸಿದನು. ಇಟಲಿ ಜಪಾನುಗಳವಿಷಯ ಜರ್ಮನಿಯು ಸ್ನೇಹದಿಂದಿರುವುದೆಂದನು. ಹಿಟ್ಲರನು ಈ ಭಾಷಣಕೊಡುವುದರ ಸಲುವಾಗಿ ರಶ್ಯನ್ ರಣಭೂಮಿಯಿಂದ ಬರ್ಲಿನಿಗೆ ಬಂದಿದ್ದನು

ರಶ್ಯದ ನಿರ್ಧಾರ

ರಶ್ಯವು ಈ ಯುದ್ಧದಲ್ಲಿ ಕೊನೆಯ ತನಕ ಹೋರಾಡುವುದೆಂದು ಅಲ್ಲಿನ ವಿದೇಶ ಮಂತ್ರಿ ಮೊಲೋಟೋವ್ ಭಾಷಣವೊಂದರಲ್ಲಿ ಹೇಳಿದ್ದಾರೆ. ಪ್ರಜಾಸತ್ತಾತ್ಮಕ ರಾಷ್ಟ್ರಗಳು ಇಂದು ಒಕ್ಕಟ್ಟಾಗಿರುವುದರಿಂದ, ಹಿಟ್ಲರನಿಗೆ ಕೊನೆಗೆ ಜಯವಿಲ್ಲವೆಂದು ಮೊಲೊಟೋವನ ಭರವಸೆಯಿದೆ.

ಛಳಿಗಾಲದಲ್ಲಿ ಲಂಡನಿಗೆ ಜರ್ಮನರು ಆಕ್ರಮಿಸಬಹುದೆಂದು ಬ್ರಿಟಿಷ್ ವೈಮಾನಿಕ ಸೆಕ್ರೆಟರಿ ಸಿಂಕ್ಲೇರರು ಒಂದು ಎಚ್ಚರಿಕೆಯ ಮಾತು ಹೇಳಿದರು. ಛಳಿಗಾಲವು ನಮ್ಮ ಪರೀಕ್ಷೆಯ ಕಾಲವಾಗುವುದೆನ್ನುವರು ಅವರು.

ಬಲ್ಗೇರಿಯಾ ಕಾದುವುದೆ?

ಇತ್ತೀಚೆಗೆ ರಶ್ಯದ ಎದುರು ಬಲ್ಗೇರಿಯವನ್ನು ಕಾದುವಂತೆ ಮಾಡಲು ಜರ್ಮನಿಯು ಶತಪ್ರಯತ್ನ ಮಾಡುತ್ತಿರುವುದು ಕಂಡುಬಂದಿದೆ. ಟರ್ಕಿಯು ಬಲ್ಗೇರಿಯದ ಚಲನವಲನಗಳ ವಿಷಯ ವಿಶೇಷ ಜಾಗರೂಕವಾಗಿದೆ. ಬಲ್ಗೇರಿಯದಲ್ಲಿ ಜರ್ಮನರ ಪರವಾದ ಚಟುವಟಿಕೆಗಳು ನಡೆದಿದ್ದು ಯುದ್ಧ ಸಿದ್ಧತೆಯಾಗುತ್ತದೆಯೆಂದು ಇತ್ತೀಚೆಗೆ ಸುದ್ದಿ ಬಂದಿದೆ

ರುಮೇನಿಯಾ ಹಂಗೇರಿಯಗಳೂ ಬಲ್ಗೇರಿಯವನ್ನು ಒಪ್ಪಳವಾಗಿ ಒತ್ತಾಯಪಡಿಸುತ್ತಿದ್ದು ಜರ್ಮನ್ ಪರವಾಗಿ ಅದು ರಶ್ಯದ ವಿರುದ್ಧ ಕಾಳಗ ಹೂಡಲು ನೆವನ ಹುಡುಕುವುದು ಕಂಡುಬರುತ್ತದೆ. "ರಶ್ಯದ ವಿರಚೋಟುಗಳು ಬಂದಿಳಿದವು; ರಶ್ಯದ ಸಬ್ ಮೆರಿನುಗಳು ನಮ್ಮ ಹಡಗುಗಳನ್ನು ಮುಳುಗಿಸಿದುವು" ಎಂಬಿತ್ಯಾದಿ ದೂರುಗಳು ಕೇಳುತ್ತವೆ. ಅಂತೂ ರಣರಂಗಕ್ಕೆ ಬಲ್ಗೇರಿಯವು ಧುಮುಕುವುದು ಅತ್ಯಂತ ಸ್ವಲ್ಪ ಕಾಲದ ಅವಧಿಯೆಂದು ಈಗ ಊಹಿಸಲಾಗಿದೆ. ಬಲ್ಗೇರಿಯದ ಸೈನ್ಯವು ಜರ್ಮನಿಯ ಬೆಂಬಲಕ್ಕೆ ಇಷ್ಟರಲ್ಲಿಯೇ ಸಾಗಿರುವದೆಂದು ಇತ್ತೀಚೆಯದೊಂದು ಸುದ್ದಿ

A TIP FROM LAND OF "GOOD EARTH"!

Paper currency was in vogue in China even as early as 2000 B. C. Curiously enough it was similar in appearance to the Bank notes of to-day. For instance the notes were dated, their values were indicated both in words and in figures and on each appeared the signature of a Government Officer. There was however one difference. The Chinese Government never let slip an opportunity of advising and educating the people. The following maxim was therefore inscribed on the border of the notes "However much you possess, strive to be thrifty" True four thousand years ago it is also very true to-day

CANARA BANK LIMITED.
Estd: 1906.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 191/1941

ವಾದಿ— ರಾವ್ ಸಾಹೇಬ ಡಾಕ್ಟರ್ ತ್ರಾಸಿ ಶಿವರಾವ್

ಪ್ರತಿವಾದಿಗಳು— ಅನಂತ ಶ್ರೀನಿವಾಸಪಾಧ್ಯಾಯ.

ಕೂಡಾ

ಸದ್ರಿ ವ್ಯಾಜ್ಯದ 7ನೆ ಪ್ರತಿವಾದಿಯು ಮಂಗಳೂರು ತಾಲೂಕು ಬಾಳ ಗ್ರಾಮದಲ್ಲಿರುವ ಅನಂತ ಕೃಷ್ಣಪಾಧ್ಯಾಯರ ವಿಧವೆ ಸುಶೀಲಾ ಇವರಿಗೆ

ವಾದಿಯು ಸದ್ರಿ ಪ್ರತಿವಾದಿರ ಮೇಲೆ ಅಡವಿನ ಅಸಲು ಬಡ್ಡಿಯ ಕುರಿತು ಮಾಡಿದ ಸದರಿ ವ್ಯಾಜ್ಯವು 1941ನೆ ಯಿಸ್ವಿ ಅಕ್ಟೋಬರ 21ನೇ ತಾರೀಕಿಗೆ ಈ ಕೋರ್ಟಿನ ಮುಂದೆ ತನಿಖೆಗಿಟ್ಟಿರುವದರಿಂದ ನೀವು ಆ ದಿವಸ ಹಗಲು 10 ಗಂಟೆಗೆ ಬುದ್ಧಿಸಂದಾಗಲೀ ವಕೀಲರ್ವ್ದಾರಾಗಲಿ ಹಾಜರಾಗಿ ಉತ್ತರಿಸಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಸಲಾದೀತು.

ಪುತ್ತೂರು 2-10-1941 } S. Ananda Rao Advocate for Plaintiff

ಸ್ವದೇಶಾಭಿಮಾನಿ

ತಾರೀಕು 10—10—1941

ಯುದ್ಧ ಪರಿಸ್ಥಿತಿ

ಇಂದು ಯುದ್ಧವು ರಶ್ಯ ಜರ್ಮನಿಗಳೊಳಗೆ ನಡೆಯುತ್ತಿದೆ. ಲೆನಿನ್‌ಗ್ರಾಡನ್ನು ಆಕ್ರಮಿಸಿ ವಶಪಡಿಸಿಕೊಳ್ಳಬೇಕೆಂಬ ಜರ್ಮನರ ಸಾಹಸವು ಪೂರ್ಣ ಯಶಸ್ವಿಯಾಗಿಲ್ಲವೆಂದು ತಿಳಿದುಬಂದಿದೆ. ಅಲ್ಲಿನ ವಿವರವು ಸರಿಯಾಗಿ ಗೊತ್ತಾಗದಿದ್ದರೂ ಎರಡು ಪಕ್ಷದವರೂ ನಿಕರ ಹೋರಾಟ ನಡೆಸುತ್ತಿರುವರೆಂಬುದಷ್ಟು ಸ್ಪಷ್ಟ. ರಶ್ಯದಂತಹ ವಿಪುಲ ಸಾಧನ ಸಾಮಗ್ರಿಗಳಿರುವ ದೇಶದಲ್ಲಿ, ಸಾಕಷ್ಟು ಜನಧನ ಸಂಗ್ರಹವಿರುವ ಆ ರಾಷ್ಟ್ರದಲ್ಲಿ ಯುದ್ಧವು ಬಹುಕಾಲದ ವರೆಗೆ ಸಾಗಲು ಸಾಧ್ಯವಿದೆಯೆಂದು ಯುದ್ಧದ ಪ್ರಾರಂಭದಿನಗಳಲ್ಲಿಯೇ ಎಲ್ಲರೂ ಊಹಿಸಿದ್ದರು. ಆ ಊಹೆಯಂತೂ ಈಗ ಖಚಿತವಾಗುತ್ತಾ ಬಂದಿದೆ. ಯುದ್ಧವು ಅಕಸ್ಮಾತ್ತಾಗಿ ರಶ್ಯದ ಮೇಲೆ ಸಾರಲ್ಪಟ್ಟ ಕಾರಣ ಅವರು ಜರ್ಮನ್ ಆಕ್ರಮಣದ ಬಳಿಕವೇ ತನ್ನ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿ ಬಂತು. ಹಾಗಾದುದರಿಂದ ಪ್ರಾರಂಭದಲ್ಲಿ ರಶ್ಯನರಿಗೆ ಬಹಳ ಪರಾಜಯವೂ ಜರ್ಮನರಿಗೆ ವಿಜಯವೂ ದೊರಕಿದವು. ಆ ಬಳಿಕದ ಯುದ್ಧದಲ್ಲಿ ರಶ್ಯವು ಜೀವದ ಹಂಗು ತೊರೆದೇ ಕಾದಾಡಿದೆ. ಫ್ಯಾಸಿಸ್ಟ್ ಆಕ್ರಮಣದೆದುರು ರಶ್ಯವು ಅಖಿಲ ಪ್ರಪಂಚದ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿಯೆಂಬಂತೆ ಅಪ್ರತಿಮ ಸಾಹಸದಿಂದ ಇಂದು ಹೋರಾಡುತ್ತಿದೆ.

ಜರ್ಮನರು ಸಾಹಸದಿಂದ ಇಂದು ಹೋರಾಡುತ್ತಿರುವುದು ಮೋಸ್ಕೋ, ಲೆನಿನ್‌ಗ್ರಾಡ್ ಮತ್ತು ಯುಕ್ರೇನುಗಳನ್ನು ತನ್ನ ಕೈವಶಪಡಿಸಿಕೊಳ್ಳಲು. ಈ ಪ್ರಾಂತಗಳೆಂದರೆ ರಶ್ಯದ ಜೀವಾಳವಿದ್ದಂತೆಯೆಂಬುದನ್ನು ಭೂಗೋಳದ ಅಭ್ಯಾಸಿಗಳೆಲ್ಲರೂ ಬಲ್ಲರು. ಈ ಪ್ರಾಂತಗಳನ್ನು ಬಿಟ್ಟುಕೊಟ್ಟು ರಶ್ಯವಾದರೂ ಬದುಕುವುದು ಸಾಧ್ಯವಿಲ್ಲ. ರಶ್ಯದ ಯಂತ್ರಸಾಮಗ್ರಿಗಳು, ಕಾರಖಾನೆಗಳು ಉತ್ಪತ್ತಿ ಸಂಪತ್ತುಗಳು ಈ ಪ್ರದೇಶದಲ್ಲಿಯೇ ಕೂಡಿವೆ. ಇವುಗಳನ್ನು ಉಳಿಸಲು ರಶ್ಯನರು ಇದುವರೆಗೆ ಮಾಡಿದ ಸಾಹಸವು ಪ್ರಶಂಸನೀಯವಾದರೂ ಜರ್ಮನ್ ಆಕ್ರಮಣವನ್ನು ಯಶಸ್ವಿಯಾಗಿ ಮುಂದೆಯೂ ರಶ್ಯವು ಇದಿರಿಸಿ ಗೆಲ್ಲಬಹುದೆಂಬ ಭರವಸೆಯು ಯಾರಿಗೂ ಇಲ್ಲ. ರಶ್ಯಕ್ಕೆ ಬ್ರಿಟನು ಅಮೆರಿಕಗಳು ಇದುವರೆಗಂತೂ ವಿಶೇಷ ಬೆಂಬಲ ಕಳುಹಿಸಿರುವುದಿಲ್ಲ. ಇನ್ನು ಮುಂದೆ ರಶ್ಯಕ್ಕೆ ಆ ರಾಷ್ಟ್ರಗಳಿಂದ ಎಷ್ಟರ ಮಟ್ಟಿಗೆ ಸಹಾಯ ದೊರಕುವುದೋ ನೋಡಬೇಕಾಗಿರುತ್ತದೆ. ಚರ್ಚಿಲ್ ರೂಸ್‌ವೆಲ್ಟರು ಒಟ್ಟುಗೂಡಿ ಮಾತನಾಡಿ ಹಲವು ದಿನಗಳು ಸಂದವು. ಅಮೆರಿಕವು ಇನ್ನೂ ತಾಟಸ್ಥ್ಯವನ್ನು ಮುರಿಯಬೇಕೋ ಬೇಡವೋ ಎಂಬ ಚರ್ಚೆಯಲ್ಲಿಯೇ ಇದೆ. ಹೀಗೆ ಬ್ರಿಟನು ಅಮೆರಿಕಗಳಿಂದ ತೀವ್ರವೂ ಪರಿಣಾಮಕಾರಿಯೂ ಆದ ಸಹಾಯ ಸಿಗದಿದ್ದಲ್ಲಿ ಜರ್ಮನಿಯ ದುರ್ದಾಂತ ಶಕ್ತಿಯ ಎದುರು ರಶ್ಯವು ಎಷ್ಟರ ಮಟ್ಟಿಗೆ ಕಾದಾಡಿ ಯಶಸ್ವಿಯಾಗುವುದೋ ಎಂಬುದು ಸಂದೇಹಾಸ್ಪದವಾಗಿರುತ್ತದೆ. ಆದರೂ ಯುದ್ಧವು ಇನ್ನೂ ಸ್ವಲ್ಪ ಕಾಲ ಮುಂದುವರಿಯುವುದೆಂಬುದಷ್ಟು ಖಂಡಿತವಾದುದು.

ಸಮಸ್ಯಾ ಪರಿಹಾರ

ರಶ್ಯದಲ್ಲಿ ಜರ್ಮನರು ಮುಂದೊತ್ತುತ್ತಿದ್ದಂತೆ ಯುದ್ಧವು ಭಾರತದ ಬಾಗಿಲಿಗೆ ಸಮೀಪಿಸುತ್ತಿದೆಯೆಂಬುದು ಸ್ಪಷ್ಟವೇ ಆದುದು. ಈ ಬಗ್ಗೆ ಸರಕಾರದವರೂ ಎಚ್ಚರಗೊಂಡಂತೆ ಕಂಡುಬರುತ್ತದೆ. ಅಲ್ಲಲ್ಲಿ ವಿಮಾನ ಧಾಳಿಗಳ ಪ್ರಯೋಗವು ನಡೆಯುತ್ತಿದೆ. ಇಷ್ಟಿದ್ದರೂ ಜನಸಾಮಾನ್ಯರು ಜಾಗರೂಕರಾಗಿರುವುದು ಕಂಡುಬರುವುದಿಲ್ಲ. ಇಂಗ್ಲೆಂಡಿನಲ್ಲಿ, ರಶ್ಯದಲ್ಲಿ ಅಥವಾ ಜರ್ಮನಿಯಲ್ಲಿ ಇಂದು ಜನ ಸಾಮಾನ್ಯರು ತಮ್ಮ ರಾಷ್ಟ್ರದ ಏಳಿಗೆಗಾಗಿ ಯಾವ ಪಂಥದಿಂದ ಹೋರಾಡುತ್ತಿರುವರೋ, ಅಂತಹ ಪಂಥವನ್ನು ಭಾರತೀಯರು ತಾಳುವ ಸಿದ್ಧತೆಗಳು ತೋರುವುದಿಲ್ಲ. ಭಾರತೀಯರ ಮನಸ್ಸಿನಲ್ಲಿ ಆ ರೀತಿಯ ಪರಿಣಾಮವು ಹುಟ್ಟದಿರಲು ಅದಕ್ಕೆ ಇಂದಿನ ರಾಜಕೀಯ ಬಿಕ್ಕಟ್ಟೇ ಕಾರಣವಲ್ಲದೆ ಬೇರೇನೂ ಅಲ್ಲ. ಇಂತಹ ಮನೋಗತವನ್ನು ಮಾರ್ಪಡಿಸಿ ಇಂದಿನ ಯುದ್ಧವು ಭಾರತೀಯರ ಸ್ವಾತಂತ್ರ್ಯಕ್ಕಾಗಿ ಆಗುವ ಯುದ್ಧವೆಂದೂ ಭಾರತದ ಜನಸಾಮಾನ್ಯರೆಲ್ಲರೂ ಇದರಲ್ಲಿ ತಮ್ಮ ಸ್ವಾರ್ಥ ತ್ಯಾಗ ಮಾಡಿ ವಿಜಯವನ್ನು ಸಂಪಾದಿಸುವಂತೆ ಕೆಲಸ ಮಾಡಬೇಕೆಂದೂ ಸಾಧಿಸುವುದು ಸರಕಾರದವರ ಕೈಯಲ್ಲಿಯೇ ಇದೆ.

ಆದರೆ ಬ್ರಿಟಿಷ್ ಪ್ರಭುತ್ವದವರು ಭಾರತೀಯರ ಮನವೊಲಿಸಲು ಇಚ್ಛಿಸಿದಂತೆ ಕಂಡುಬರುವುದಿಲ್ಲ. ಚರ್ಚಿಲರಂತೂ ನೊನ್ನೆ ಮೊನ್ನೆ ಪ್ರಪಂಚದ ಎಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯದ ವಿಷಯದಲ್ಲಿ ಅತ್ಲಾಂಟಿಕ್ ಘೋಷಣೆಯು ಅನ್ವಯಿಸುವುದಿದ್ದರೂ ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿ ಭಾರತೀಯರಲ್ಲಿ ಆಶಾವಾದಿಗಳಾಗಿದ್ದ ಹಲವರನ್ನು ನಿರಾಶೆಯ ಪ್ರಪಾತದಲ್ಲಿ ಅದ್ದಿದ್ದಾರೆ. ಅಧಿಕಾರಿಯರು ಹಿಂದಿನಂತೆಯೇ ಇಂದೂ ಕೂಡಾ ಸಮಸ್ಯಾತ್ಮಕವಾದ ವಾದಸರಣಿಯನ್ನು ಮುಂದಿಟ್ಟುಕೊಂಡು ವಾದಿಸುತ್ತಿರುವರಲ್ಲದೆ ನಿಜವಾಗಿ ರಾಜಕೀಯ ಸಮಸ್ಯೆಯ ಪರಿಹಾರಕ್ಕೆ ಕೈಕೊಟ್ಟಂತೆ ತೋರುವುದಿಲ್ಲ. ವೈಸರಾಯರು ತಮ್ಮ ಕೌನ್ಸಿಲ್ ವಿಸ್ತರಣಾ ಮಾತ್ರದಿಂದ-ಅದನ್ನ ಭಾರತದ ಮುಖ್ಯ ಪಂಗಡಗಳು ತಿರಸ್ಕರಿಸಿ ಬಿಟ್ಟಿದ್ದರೂ—ತೃಪ್ತರಾಗಿ ಮೌನವಾಗಿದ್ದಾರೆ. ಅಮೆರಿಕಾ ಮೊದಲಾದ ದೇಶಗಳಿಂದ ಬ್ರಿಟನ್ನಿಗೆ ಭಾರತದ ಸಮಸ್ಯಾ ಪರಿಹಾರಕ್ಕಾಗಿ ಆಗಾಗ ಕೆಲವು ಸೂಚನೆಗಳು ಬಂದರೂ ಆ ಕಡೆಗೆ ಬ್ರಿಟಿಷ್ ಪ್ರಭುತ್ವದವರು ಗಮನಕೊಟ್ಟಂತೆ ತೋರುವುದಿಲ್ಲ.

ಸಹಕರಿಸಿದವರು

ವೈಸರಾಯರ ಕಾರ್ಯಕಾರೀ ಮಂಡಳವು ಈಗ ತನ್ನ ಕಾರ್ಯಕಲಾಪಗಳನ್ನು ಕೈಗೊಳ್ಳುವರೆ ಪ್ರಾರಂಭಿಸಿದೆ. ಕಾಂಗ್ರೆಸ್ಸಾಗಲಿ, ಮುಸ್ಲಿಂ ಲೀಗಾಗಲಿ, ಹಿಂದು ಮಹಾ ಸಭೆಯಾಗಲಿ ವೈಸರಾಯರ ವಿಸ್ತೃತ ಕೌನ್ಸಿಲಿನೊಡನೆ ಸಹಕರಿಸಲು ಇಷ್ಟಪಡದಿದ್ದರೂ ಕೆಲವು ಮಂದಿ ಆಶಾವಾದಿಗಳಾದವರು ಸರಕಾರದೊಡನೆ ಸಹಕರಿಸಿದ್ದಾರೆ. ಅವರು ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಯುಕ್ತಿಸುವರೆಂಬ ವಿಚಾರವು ಕೇಳಿಬರುತ್ತದೆ. ಈ ವಿಚಾರದಲ್ಲಿ ತೀವ್ರಗಾಮಿಗಳಾದವರು, ಕಾಂಗ್ರೆಸ್ ಪಕ್ಷದವರು ಏನೇನೂ ಆಶಾತುರರಾಗಿಲ್ಲವಾದರೂ, ಆ ಎಂಟು ಮಂದಿ ಸದಸ್ಯರು ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಒಂದು ಯೋಜನೆ ನಿರ್ಣಯಿಸಿದರೆ ಅದು ಕಾಂಗ್ರೆಸಿಗೂ ಇತರ ಪಕ್ಷದವರಿಗೂ ಬ್ರಿಟಿಷ ಪ್ರಭುತ್ವಕ್ಕೂ ಅಂಗೀಕಾರಾರ್ಹವಾದರೆ ಅದರಿಂದ ಏನಾದರೂ ಫಲಿತಾಂಶವು ದೊರಕಬಹುದಾಗಿದೆಯೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಬ್ರಿಟಿಷರ ಯುದ್ಧೋದ್ಯೋಗದಲ್ಲಿ ಸಹಕರಿಸಿ ಭಾರತಕ್ಕೆ ಹಿತ ಸಾಧಿಸಬೇಕೆಂದು ಅಧಿಕಾರ ವಹಿಸಿದ ಈ ಹೊಸ ಸದಸ್ಯರ ಮೇಲೆ ಹೆಚ್ಚಿನ ಹೊಣೆಗಾರಿಕೆಯಿದೆ. ಅಧಿಕಾರೀ ವರ್ಗವು ಯಾವುದೇ ರಾಜಕೀಯ ಪ್ರಗತಿಗೂ ಒಪ್ಪದೆ, ಕಾಂಗ್ರೆಸಿನ ಹಾಗೂ ಅನೇಕ ಮುಖಂಡರ ಹಲವು ಸೂಚನೆಗಳನ್ನು ತೆಗೆದುಹಾಕಿ, ಕೇವಲ ವೈಸರಾಯರ ಅಗಸ್ಟ್ ಘೋಷಣೆಯೊಂದನ್ನೇ ಪುಷ್ಟೀಕರಿಸಿತೋ ಆ ಯೋಜನೆಯೊಂದು ಕಾರ್ಯರೂಪಕ್ಕೆ ಬರಲಿದೆ. ಆ ಯೋಜನೆಯಿಂದ ಭಾರತದ ಹಿತವಾಗಲಿದೆಯೆಂದು ಸಾರಿದ ಅಧಿಕಾರೀ ವರ್ಗದವರು ತಮ್ಮ ಮಾತಿನ ಸತ್ಯಾಂಶವನ್ನು ತೋರಿಸಬೇಕಾಗಿದೆ. ಭಾರತದ ಹಿತಸಾಧಿಸುವೆವೆಂದು ಸಹಕರಿಸಿದ ಆಸೆ ಪ್ರಭೃತಿಗಳಾದರೂ ತಮ್ಮ ರಾಷ್ಟ್ರೀಯ ಮನೋಗತವನ್ನು ಸ್ಪಷ್ಟಪಡಿಸಬೇಕಾಗಿದೆ. ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಇವರು ಹೆಣಗಾಡುವರೇ? ಬ್ರಿಟಿಷ್ ಪ್ರಭುತ್ವವು ಇವರಿಗೆ ಅನುಕೂಲತೆಗಳನ್ನೊದಗಿಸುವುದೆ? ಬಂಧವು ಎಂತಹುದು ಎಂಬುದು ಖಚಿತವಾಗುವುದು. ಹಾಗಾಗಿ ಅತ್ಲಾಂಟಿಕ ಘೋಷಣೆಯ ಚರ್ಚಿಲ್ ವ್ಯಾಖ್ಯಾನವು ದಿಗಿಲುಗೊಳಿಸುವಂತಹುದೇನೂ ಅಲ್ಲ.

ನೋಟಗಳು....

ಧಾರವಾಡದಲ್ಲಿ ಬ್ಯಾರಿಸ್ಟರ್ ಜಯಕರರು ಮಾತನಾಡುತ್ತಾ ಚರ್ಚಿಲರಿಗೆ ಭಾರತದ ವಿಷಯದಲ್ಲಿರುವ ಅಸಡ್ಡೆಯನ್ನು ಉದಾಹರಿಸಿ, ದುಂಡು ಮೇಜಿನ ಪರಿಷತ್ತಿನ ಕಾಲದಲ್ಲಿ ಚರ್ಚಿಲರೊಡನೆ ಅವರು ಹಾಕಿದ ಪ್ರಶ್ನಾವಳಿಗಳ ವಿಷಯವನ್ನು ಕೆಳಗಡೆ ಕೊಟ್ಟಂತೆ ಅಲ್ಲಿ ಎತ್ತಿ ಹೇಳಿದರು:

ಚರ್ಚಿಲ್: ಭಾರತವು ಸ್ವಾತಂತ್ರ್ಯಾರ್ಹವಲ್ಲ.

ಜಯಕರ್: ಚರ್ಚಿಲರೇ, ನೀವು ಅಲ್ಲಿಂದ ಎಂದು ಬಂದಿರಿ.

ಚರ್ಚಿಲ್: ನಲ್ವತ್ತು ವರ್ಷಗಳ ಹಿಂದೆ.

ಜಯಕರ್: ಅಲ್ಲಿ ಎಷ್ಟು ದಿವಸ ಇದ್ದಿರಿ?

ಚರ್ಚಿಲ್: ನಾಲ್ಕೈದು ತಿಂಗಳು.

ಜಯಕರ್: ಅಲ್ಲಿ ಏನಾಗಿದ್ದಿರಿ?

ಚರ್ಚಿಲ್: ಒಬ್ಬ ಸೈನಿಕನಾಗಿ.

ಜಯಕರ್: ಅಲ್ಲಿ ಎಲ್ಲಿರುತ್ತಿದ್ದಿರಿ?

ಚರ್ಚಿಲ್: ಬರಾಕಿನಲ್ಲಿ.

ಜಯಕರ್: ನೀವು ಯಾವಾಗಲಾದರೂ ಅಲ್ಲಿನ ಒಬ್ಬ ರಾಜಕೀಯ ಮುಖಂಡನನ್ನು ಕಂಡು ಮಾತನಾಡಿದ್ದಿರಾ?

ಚರ್ಚಿಲ್: ಇಲ್ಲ.

ಜಯಕರ್: ನಲ್ವತ್ತು ವರ್ಷದಿಂದೀಚೆಗೆ ಭಾರತದಲ್ಲಿ ಏನಾಗಿದೆಯೆಂದು ನಿಮಗೆ ಗೊತ್ತಿದೆಯೆ?

ಚರ್ಚಿಲ್: ಇಲ್ಲ.

ಜಯಕರ್: ಚರ್ಚಿಲರೇ, ಭಾರತದಲ್ಲಿ ಬಹಳ ಕಾಲವಿದ್ದು, ಅಲ್ಲಿನ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿದ ಸರ್ ಜಾರ್ಜ್ ಶೂಸ್ಟರ್ ಮೊದಲಾದವರು ಭಾರತವು ಸ್ವಾತಂತ್ರ್ಯಾರ್ಹವಾಗಿದೆಯೆಂದು ಅಭಿಪ್ರಾಯಪಡುತ್ತಾರೆ. ಆದರೆ ನೀವು ಮಾತ್ರ ಹೀಗನ್ನುವಿರಿ. ನಿಮ್ಮ ಮಾತನ್ನು ಹೇಗೆ ಸಮ್ಮತಿಸುವುದು?

ಚರ್ಚಿಲ್: ಮೌನ.

ಭಾರತದ ಬಗ್ಗೆ ಚರ್ಚಿಲರ ಜ್ಞಾನವೆಷ್ಟಿದೆಯೆಂದು ಇದರಿಂದ ವ್ಯಕ್ತವಾಗುವುದು. ಅವರೇ ಹಿಂದೊಮ್ಮೆ ಗಾಂಧಿಜಿಯನ್ನು 'ಅರ್ಧನಗ್ನ ಫಕೀರ' (Half-naked Fakir) ಎಂದೂ ಕರೆದವರು.

ಭಾರತದ ವಿಷಯ ಚರ್ಚಿಲರು ಕಣ್ಣುಮುಚ್ಚಿರುವರೆಂದೂ ತಾನು ಇನ್ನೊಮ್ಮೆ ಇಂಗ್ಲೆಂಡಿಗೆ ಹೋದರೆ, ಚರ್ಚಿಲರು ಓದಿದ ಶಾಲೆಯಲ್ಲಿ ಕಲಿಸುವ 'ನಲ್ವತ್ತು ವರ್ಷಗಳ ನಂತರ' ಎಂಬ ಕವಿತೆಯನ್ನು ತಿರಿಗೊಮ್ಮೆ ಅವರಿಗೆ ಓದಲು ಹೇಳುವೆನೆಂದೂ ಅವರ ಬಗ್ಗೆ ನಾವು ಯೋಚಿಸಬೇಕಾಗಿಲ್ಲವೆಂದೂ, ನಾವು ಬಲಿಷ್ಠರಾದರೆ ಅವರು ತಾವಾಗಿಯೇ ಒಪ್ಪಬೇಕಾಗುವುದೆಂದೂ ಜಯಕರ್ ಹೇಳಿದರು.

ಇದರಿಂದ ಚರ್ಚಿಲ್—ಭಾರತ ಸಂ

[೩ನೇ ಕಲಮನ್ನು ನೋಡಿ]

ಮಂತ್ರಿಗಳಾಗಿದ್ದವರು ಸೆರೆಮನೆಗಳಿಗೆ ಸಾಗಿದರೇಕೆ?

ಭಾರತದ ಮನೋಗತವನ್ನು ಕೇಳಿರೆಂದು ಹೇಳಿದ್ದಕ್ಕಾಗಿ!

ಪ್ರಜಾಪ್ರಭುತ್ವವೆಲ್ಲಿದೆಯೆಂದು ಅಮೆರಿಕಾ ಪ್ರಶ್ನಿಸುತ್ತಿದೆ

"ಇಂದು ಸತ್ಯಾಗ್ರಹ ಆಂದೋಲನವು ಸಂಕುಚಿತಗೊಳಿಸಲ್ಪಟ್ಟಿರಬಹುದು, ಆದರೆ ಗಾಂಧಿಜಿಯವರು ಈ ಸತ್ಯಾಗ್ರಹದಲ್ಲಿ ಸ್ವಾತಂತ್ರ್ಯದ ತತ್ವವನ್ನು ಕಾಣುತ್ತಾರೆ ಹಾಗೂ ಇಂದಿನ ಸತ್ಯಾಗ್ರಹವು ನಮ್ಮ ಮುಂದಿನ ಹೋರಾಟದ ಸಿದ್ಧತೆಯಿದೆ, ಇತ್ತೀಚೆಗೆ ಚರ್ಚಿಲ್ಲರು ಅಟ್ಲಾಂಟಿಕ ಘೋಷಣೆಯ ವ್ಯಾಖ್ಯಾನ ಮಾಡಿದ ಬಳಿಕ ಎಲ್ಲಾ ಪಂಗಡಗಳ ಮುಖಂಡರೂ ಗಾಂಧಿಜಿಯವರನ್ನು ಹಿಂಬಾಲಿಸಿ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡದೆ ಗತ್ಯಂತರವಿಲ್ಲವೆಂದು ತಿಳಕೊಂಡಿದ್ದಾರೆ ಸ್ವಾತಂತ್ರ್ಯವೆಂಬುದು ನಮಗೆ ಯಾರಾದರೂ ಕೊಡುವ ದಾನವಲ್ಲ, ಅದನ್ನು ನಾವು ಹೋರಾಟ ಮತ್ತು ಬಲಿದಾನಗಳಿಂದ ಪಡೆದುಕೊಳ್ಳಬೇಕು. ಇಂದು ಅದರ ಸಲುವಾಗಿ ಗಾಂಧಿಜಿ ಹೋರಾಡುತ್ತಿದ್ದಾರೆ"

—ಹೀಗೆಂದು ಮದ್ರಾಸಿನ ಮಾಜಿ ಮಂತ್ರಿವರ್ಯರಲ್ಲೊಬ್ಬರಾದ ಡಾ|| ಸುಬ್ಬರಾಯನರು ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯ ವಿಷಯ ಬರೆದ ಒಂದು ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ ಅವರು ಆ ಲೇಖನದಲ್ಲಿ ಸದ್ಯದ ಪರಿಸ್ಥಿತಿಯನ್ನು ಬಹಳ ಸ್ವಾರಸ್ಯವೂ ವಿಶದವೂ ಆಗಿ ಈ ರೀತಿಯಿಂದ ಹೇಳಿರುವರು.

ನಿಷೇಧ ಸೂಚನೆಗಾಗಿ

ಇಂದಿನ ಸತ್ಯಾಗ್ರಹಾಂದೋಲನವು ಸ್ವಾತಂತ್ರ್ಯವನ್ನು ಸಾಧಿಸಲು ಸಹಕಾರಿಯಾಗಲಿಲ್ಲವೆಂದು ತರುಣರು ಕೆಲವರು ಟೀಕಿಸುತ್ತಾರೆ. ಆದರೆ ಅಂಥವರು ಗಾಂಧಿಜಿಯ ಸತ್ಯಾಗ್ರಹ ತತ್ವವನ್ನೇ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಅಹಿಂಸೆಯಲ್ಲಿ ನಿಶ್ಚಲ ವಿಶ್ವಾಸವುಳ್ಳವರಾಗಿ ಗಾಂಧಿಜಿ, ಬ್ರಿಟಿಷರ ಈ 'ಜೀವನ ಮರಣ' ಹೋರಾಟದ ಕಾಲದಲ್ಲಿ ಅವರಿಗೆ ಮತ್ತೂ ಸಂಕಷ್ಟ ಕೊಡಬೇಕೆಂದು ಬಗೆಯಲಾರರು. ವಿನೋಬಾಜಿಯವರನ್ನು ಮೊದಲನೆಯ ಸತ್ಯಾಗ್ರಹಿಯಾಗಿ ಗಾಂಧಿಜಿ ಆರಿಸಿದಾಗಲೇ ಈ ವಿಷಯವು ಸ್ಪಷ್ಟವಾಗಿರುವುದು. ವಿನೋಬಾಜಿ ಸಂಪೂರ್ಣ ಅಹಿಂಸೆಯ ಗುರುತಾಗಿ ಆರಿಸಲ್ಪಟ್ಟರು. ಗಾಂಧಿಜಿ ಪಶುಶಕ್ತಿಗೆ ಬೆಲೆ ಕೊಡುವುದಿಲ್ಲ. ಅದರಲ್ಲೂ ಶತ್ರುವಿಗೆ ಕಷ್ಟವೊದಗಿದರೆ ಆಗ ಆತನಿಗೆ ತೊಂದರೆ ಕೊಟ್ಟು ನಾವು ನಮ್ಮ ಪ್ರಯೋಜನ ಪಡೆಯುವುದು ಸರಿಯಲ್ಲವೆಂದು ಗಾಂಧಿಜಿ ವಿಶದೀಕರಿಸಿದ್ದಾರೆ. ಆದರೆ ನೆಹರು, ಜಯ ಪ್ರಕಾಶ, ಡಾ| ರಾಮ ಮನೋಹರ ಲೋಹಿಯಾ ಮೊದಲಾದವರನ್ನು ಬಾಧಿಸಿದ್ದರಿಂದ ಚಳವಳಿದ ಕ್ಷೇತ್ರವನ್ನು ಅವರು ವಿಸ್ತರಿಸಬೇಕಾಯಿತು. ಶಾಸನ ಸಭಾಸದಸ್ಯರನ್ನು ಕಾಂಗ್ರೆಸ್ ಕಮಿಟಿ ಸದಸ್ಯರನ್ನು ಅವರು ವೈಯುಕ್ತಿಕ ಸತ್ಯಾಗ್ರಹಮಾಡುವರೆ ಕರೆಯಬೇಕಾಯಿತು. ಭಾರತವನ್ನು ಯುದ್ಧಕ್ಕೆ ಎಳೆದದ್ದು ಸರಿಯಲ್ಲವೆಂದು ನಿಷೇಧ ಸೂಚನೆಗಾಗಿ ಈ ವೈಯುಕ್ತಿಕ ಸತ್ಯಾಗ್ರಹವು ಮಾಡಲಾಯಿತು ಎಂದು ಗಾಂಧಿಜಿ ಹೇಳಿದ್ದಾರೆ.

ರಾಜಾಜಿ ಸಹಾಯ ಹಸ್ತ

ಗಾಂಧಿಜಿ, ಇಂದು ಕಾಂಗ್ರೆಸಿನ ಗೌರವವನ್ನು ಉಳಿಸಿದ್ದಾರೆ. ಒಮ್ಮೆ ಜನತಾ ಪ್ರತಿನಿಧಿಗಳಾಗಿ ಚುನಾಯಿತರಾಗಿ ಅಧಿಕಾರಕ್ಕೇರಿದ ಮಂತ್ರಿವರ್ಯರು ಇಂದು ಸೆರೆಮನೆಗೆ ನಡೆದರೇಕೆಂಬ ವಿಚಾರವು ಅಮೆರಿಕನರಿಗೆ ಹಲವರಿಗೆ ಗೊತ್ತಾಗಿದೆ. ಬ್ರಿಟನು ಯಾವ ಪ್ರಜಾಪ್ರಭುತ್ವಕ್ಕಾಗಿ ಇಂದು ಹೋರಾಡುತ್ತದೆಯೆಂದು ಹೇಳಲಾಗುತ್ತದೆಯೋ ಆ ಪ್ರಜಾಪ್ರಭುತ್ವವು ಎಲ್ಲಿದೆಯೆಂದು ಅಮೆರಿಕನರು ಬ್ರಿಟಿಷರೊಡನೆ, ಮೊನ್ನೆ ಪಾರ್ಲಿಮೆಂಟಿನಲ್ಲಿ ಕರ್ನಲ್ ವೆಜ್‌ವುಡ್ಡರು ಕೇಳಿದಂತೆ, ಪ್ರಶ್ನಿಸುತ್ತಿದ್ದಾರೆ.

ಭಾರತವನ್ನು ಯುದ್ಧಕ್ಕೆ ಎಳೆವ ಮೊದಲು ಭಾರತದ ಮನೋಗತವನ್ನು ಕೇಳಬೇಕೆಂದು ಜನತೆಯ ಪ್ರತಿನಿಧಿಗಳು ಹೇಳಿದ್ದಕ್ಕಾಗಿ ಅವರನ್ನು ಇಂದು ಸೆರೆಮನೆಯೊಳಗೆ ತಳ್ಳಲಾಗಿದೆ ಪರಿಸ್ಥಿತಿ ಹೀಗಿದ್ದರೂ ಪ್ರಸಿದ್ಧ ಪೂನಾ ನಿರ್ಣಯದಿಂದ, ಮದ್ರಾಸಿನ ಮಾಜಿ ಪ್ರಧಾನಾಮಾತ್ಯ ರಾಜಾಜಿಯವರು, ಸರಕಾರವು, ಕೇಂದ್ರ ಶಾಸನ ಸಭೆಗೆ ಹೊಣೆಗಾರವುಳ್ಳ ರಾಷ್ಟ್ರೀಯ ಸರಕಾರವನ್ನು ಯುದ್ಧ ಮುಗಿವತನಕ ಸ್ಥಾಪಿಸಿದರೆ ರಾಷ್ಟ್ರದ ರಕ್ಷಣೆಗೆ ನಾವು ಸಹಾಯ ಮಾಡಬಹುದೆಂದು ಕೇಳಿದ್ದರೆಂಬ ವಿಷಯವೂ ಎಲ್ಲರಿಗೂ ಗೊತ್ತುಂಟು. ಇದರಿಂದ ಗಾಂಧಿಜಿಯವರ ಮುಂದಾಳುತನವನ್ನು ರಾಜಾಜಿ ದೂರ ಮಾಡಿಕೊಂಡಂತೆ ಆಯಿತೆಂದು ಹಲವರು ತಿಳಕೊಂಡರು, ಆದರೂ ರಾಜಾಜಿ ಆಧೈರ್ಯ ಮಾಡಿದ್ದರು. ಆದರೆ ಸರಕಾರವು ರಾಜಾಜಿಯವರ ಆ ಸಹಾಯ ಹಸ್ತವನ್ನು ಹಿಂದಕ್ಕೆ ದೂಡಿತು!

ಪ್ರಜಾಪ್ರಭುತ್ವಕ್ಕೆ ಅರ್ಥವೇನು?

ಸರಕಾರದ ಪ್ರತಿನಿಧಿಯಾಗಿ ಅಮೆರಿಯವರು ಒಂದು ಕಡೆಯಿಂದ ಮುಸ್ಲಿಂ ಲೀಗಿನ ಪ್ರತಿನಿಧಿಯಾಗಿ ಜಿನ್ನಾ ಸಾಹೇಬರು ಇನ್ನೊಂದು ಕಡೆಯಿಂದ ಕಾಂಗ್ರೆಸಿನಲ್ಲಿ ಗಾಂಧಿಜಿಯವರು ಫ್ಯಾಸಿಸ್ಟ್ ಸರ್ವಾಧಿಕಾರಿಯಂತಿರುವರೆಂದು ಹೇಳುತ್ತಿದ್ದಾರೆ. ನೇಶನಲ್ ಡಿಫೆನ್ಸ್ ಕೌನ್ಸಿಲಿನಲ್ಲಿ ಅಧಿಕಾರ ವಹಿಸಿದ ತನ್ನ ಸಂಗಾತಿಗಳ ಮೇಲೆ ಶಿಸ್ತು ಜಾರಿಮಾಡಿ ಜಿನ್ನರಿಗೆ ಈ ಫ್ಯಾಸಿಸ್ಟ್ ಸರ್ವಾಧಿಕಾರೀ ಬಿರುದು ಹೆಚ್ಚಾಗಿ ಈಗ ಒಪ್ಪುವಂತಿದೆ. ಅಮೆರಿಯವರು ಪ್ರತಿಯೊಂದು ಸಲ ಮಾತನಾಡುವಾಗಲೂ ಕಾಂಗ್ರೆಸಿನ ಸುದ್ದಿಯೆತ್ತಿ ಗಾಂಧಿಜಿಯವರು ತನ್ನ ವಿರುದ್ಧ ತತ್ವವನ್ನು ಮಾಡುತ್ತಿದ್ದಾರೆಂದು ಹೇಳುತ್ತಾ ಚುನಾವಣೆ ನಡೆದರೆ ಅದರಿಂದ ತೊಂದರೆಯಾಗಿ ಕಾಂಗ್ರೆಸು ಬಹುಮತ ಪಡೆಯಬಹುದೆಂಬ ಅಂಜಿಕೆ ಮಾಡಿದ್ದಾರೆ. ಪ್ರಜಾಪ್ರಭುತ್ವವೆಂಬ ಮಾತಿಗೆ ಏನಾದರೂ ಅರ್ಥವುಂಟೆಂದಾದರೆ, ಸರಕಾರವು ಈಗ ಕಾಂಗ್ರೆಸಿನ ಈ ಪ್ರಮುಖನಾಯಕರಾದ ಗಾಂಧಿಜಿಯವರ ಮುಖಾಂತರ ಭಾರತದ ರಾಜಕೀಯ ಪರಿಸ್ಥಿತಿಯ ಕುರಿತು ವಿಚಾರವಿನಿಮಯ ಮಾಡುವುದು ಯೋಗ್ಯವೆನಿಸುತ್ತದೆ

ರಚನಾತ್ಮಕ ಕಾರ್ಯಕ್ರಮ

ಗಾಂಧಿಜಿಯವರು ರಚನಾತ್ಮಕ ಕಾರ್ಯಕ್ರಮಗಳ ವಿಷಯ ಇಷ್ಟೊಂದು ಮಹತ್ವ ಕೊಡುವುದು ಅವರಿಗೆ ಜನತೆಯ ಮೇಲೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಬಹು ಮಂದಿ ಕಾಂಗ್ರೆಸಿನವರು ಖಾದಿ ಮತ್ತು ಗ್ರಾಮಕೈಗಾರಿಕೆಗಳಿಗೆ ಗಮನಕೊಡಬೇಕೆಂದು ಅವರು ಹೇಳುವುದು ಏಕೆಂದರೆ, ಭಾರತದ ಮಿಲಿಯಾಂತರ ಬಡಜನರ ಆರ್ಥಿಕ ದಾರಿದ್ರ್ಯವು ನೀಗಬೇಕೆಂದು. ಹಿಂದೂ ಮುಸ್ಲಿಂ ಐಕ್ಯದ ಕುರಿತು ಗಾಂಧಿಜಿ ಮಾಡುವ ಒತ್ತಾಸೆಯನ್ನು ವಿಚಾರಿಸಿದರೆ ಈ ಉಭಯ ಜಾತಿಗಳು ಕೂಡಿ ನಡೆಯದಿದ್ದರೆ ಸ್ವಾತಂತ್ರ್ಯವು ಇರಲಾರದೆಂದು ಅವರು ತಿಳಿದಿರುವರೆಂದು ಗೊತ್ತಾಗುವುದು. ಗಾಂಧಿಜಿ ಹೀಗೆ ಹೇಳುವುದು ಪ್ರಗತಿಗೆ ಹಾನಿಯೆಂದು ಹಿಂದೂ ಮಹಾಸಭಾ ಮುಖಂಡರು ಭಾವಿಸುತ್ತಾರೆಂದು ನನಗೆ ಗೊತ್ತಿದೆ ಆದರೆ ಅಲ್ಪ ಸಂಖ್ಯಾಕರನ್ನು ತೃಪ್ತಿಪಡಿಸದೆ ರಾಷ್ಟ್ರೀಯ ಸರಕಾರವೆಂಬುದು ಆಗಲು ಸಾಧ್ಯವಿಲ್ಲವೆಂಬುದನ್ನು ಅವರು ತಿಳಿದಿರಬೇಕು ಘಟನಾತ್ಮಕ ಮಂಡಲಿ(Constituent Assembly)ಯ ಕುರಿತು ಅವರು ಬರೆದ ಲೇಖನವನ್ನೋದಿದರೆ, ಅಲ್ಪ ಸಂಖ್ಯಾಕರ ಹಿತ ಸಂರಕ್ಷಿಸುವಂತಹ ಪ್ರಜಾಪ್ರಭುತ್ವ ರಾಜಪದ್ಧತಿಗೆ ಅವರು ಅನುಕೂಲರೆಂದು ತಿಳಿದುಕೊಳ್ಳಬಹುದು ಮುಸ್ಲಿಮರ ಧರ್ಮ, ಭಾಷೆ ಹಕ್ಕುಗಳನ್ನು ಸ್ವತಂತ್ರವಾದ ಭಾರತವು ಕಾಪಾಡುವುದೆಂದು ಅವರು ಮುಸ್ಲಿಮರಿಗೆ ಭರವಸೆಯಿತ್ತಿರುವರು. ಗಾಂಧಿಜಿ ಇಂದು ಈ ಉನ್ನತ ನೆಲೆಯಲ್ಲಿ ನಮ್ಮ ಮಧ್ಯೆ ವಿರಾಜಮಾನರಾಗಿದ್ದಾರೆ!

ಡೋಂಗರೆ
ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

WANTED

A Tracer under this District Board in a permanent vacancy. Persons possessing qualifications prescribed in G. O. No. 4038 L A. dated 21-11-1940 to apply to the undersigned by 25th October 1941, stating their age, qualifications and caste and previous experience if any. Scale of pay 28-2/2-42-1/2-45.

South Kanara Dt Board office Mangalore 2-10-1941

(sd) K. Vittal Shetty, President, District Board South Kanara

HALFTONE & LINE BLOCK MAKING UNDERTAKEN

Sharada Press, MANGALORE.

ಪರಾಜಯ

Some for a gentle dream will die,
Some for an Empire's majesty,
Some for a loftier human kind,
Some to be free as cloud and wind.

ಕಥೆಯ ಹಿನ್ನೆಲೆ:—'ಮೃಗಕಾನನ'ದ ಕುಟೀರವೊಂದರಲ್ಲಿ ಆ ಸನ್ಯಾಸಿಯು ವಾಸವಾಗಿದ್ದನು. ಹಿಂದೊಮ್ಮೆ ಆತನು ಜನನೀ ಜನ್ಮಭೂಮಿಯ ಸೇವಕನಾಗಿದ್ದನು. ಆಗ ವೈರಾಗ್ಯ ತಾಳಿ ಆಶ್ರಮವಾಸಿಯಾಗಿರುವನು. ಅಲ್ಲಿನ ಮೃಗಗಳು ಆತನ ಪರಿವಾರಗಳು. ಮಲ್ಲಿಕಾ ರಾಜ್ಯದ ಅರಸು ವಿಕ್ರಮನು ತನ್ನ ಮೃಗಾಲಯಗಳಿಗೆ ಮೃಗಗಳನ್ನು ಒಟ್ಟು ಮಾಡುವುದರಲ್ಲಿದ್ದನು. ಸನ್ಯಾಸಿಯ ಆಶ್ರಮವಾಸೀ ಮೃಗಗಳು ಬುದ್ಧಿಯ ಮೃಗಗಳೆಂದು ಕೇಳಿ ಅವುಗಳನ್ನು ತನಗೆ ಕೊಡಬೇಕಾಗಿ ವಿಕ್ರಮನು ಸನ್ಯಾಸಿಯೊಡನೆ ಕೇಳಿದನು. ಸನ್ಯಾಸಿಯು ಹೇಳಿದನು, ಮೃಗಗಳ ಮೇಲೆ ತನಗೆ ಅಧಿಕಾರವಿಲ್ಲವೆಂದು. ರಾಜನಿಗೆ ಸಿಟ್ಟಾಗುವುದು.

ಅನುವಾದ: ಶ್ರೀ ಕೆ. ಪಾಂಡುರಂಗ ನಾಯಕ್

ಎಷ್ಟೆಷ್ಟೂ ಇಲ್ಲ. ... ಬೇರೆಯವರಿಗೆ ಅಹಿತವಾಗದೆ ಪ್ರಶ್ನೆಯ ಆಜ್ಞೆಯನ್ನು ಪಾಲಿಸಲು ಸಿದ್ಧನಿದ್ದೇನೆ ಎಂದು ಮೊದಲೇ ನಿವೇದನೆ ಮಾಡಿಕೊಂಡಿದ್ದೇನೆ''

ತುಸು ಹೊತ್ತು ಮೌನ ವ್ರತವನ್ನು ಧಾರಣೆ ಮಾಡಿಕೊಂಡು ಅರಸನು ಹೀಗೆಂದನು—

''ನಾನು ಮೃಗಗಳ ಸುಖಕ್ಕಾಗಿ ಶತಪ್ರಯತ್ನಗಳನ್ನು ಮಾಡುವೆನು. ಇವುಗಳಿಗೆ ಮೃಗಾಲಯದಲ್ಲಿ ಯಾವ ಪ್ರಕಾರದ ಕಷ್ಟವೂ ಇರಲಾರದು.''

ಮುಗುಳು ನಗಾಡುತ್ತಾ ಸನ್ಯಾಸಿಯು ಉತ್ತರವಿತ್ತನು—''ರಾಜನೇ ಸ್ವಾತಂತ್ರ್ಯ ನಷ್ಟವಾದ ಬಳಿಕ ಇವುಗಳು ಜೀವದಿಂದ ಇದ್ದು ಸತ್ತಂತೆ ಆಗುವುವು. ಇದಕ್ಕಿಂತ ಅವುಗಳನ್ನು ಬೇಟೆಯಾಡುವುದೇ ಉತ್ತಮ.''

''ಏನೇ ಆಗಲಿ. ಈ ಮೃಗಗಳನ್ನು ನನಗೆ ಮೃಗಾಲಯದ ಅಲಂಕಾರಕ್ಕಾಗಿ ಕೊಡಲೇ ಬೇಕು'' ಎಂದು ವಿಕ್ರಮನು ತುಸು ಕ್ರೂರ ಸ್ವರದಿಂದ ಹೇಳಿದನು.

''ನಾನು ಮೊದಲೇ ಹೇಳಿದ್ದೆನಲ್ಲ. ಮೃಗಗಳ ಮೇಲೆ ನನ್ನ ಅಧಿಕಾರವಿಲ್ಲ.''

ಆಗ ವಿಕ್ರಮನು ಬಹು ಬಹು ಕೋಪಗೊಂಡನು.

''ನನ್ನ ಆಜ್ಞೆಗೆ ಇದೊಂದು ಕೊರತೆ. ನಿನ್ನ ಅಧಿಕಾರವು 'ಮೃಗಗಳ ಮೇಲೆ ಇಲ್ಲದಿದ್ದರೆ ನನ್ನ ಅಧಿಕಾರವಿದೆ. ಒಂದು ವೇಳೆ ನೀನು ನನಗೆ ಸಹಾಯ ಮಾಡದಿದ್ದರೆ ಇವುಗಳ ಅಹಿತವಾಗುವುದು.''

''ಕಾಡು ತಮ್ಮದಾಗಿದೆ. ಮಹಾರಾಜರ ಇಚ್ಛೆಯನ್ನು ಒಂದು ಸಲ ಸ್ಮರಿಸುವುದು ನನ್ನ ಕರ್ತವ್ಯವಾಗಿದೆ. ಈ ಕಾಡಿನಲ್ಲಿ ಬೇಟೆಯಾಡುವುದಿಲ್ಲ ಎಂದು ವಚನವನ್ನು ತಾವು ಕೊಟ್ಟಿದ್ದೀರಿ'' ಎಂದು ಸನ್ಯಾಸಿಯು ಹೇಳಿದನು,

''ನೀನು ನಿನ್ನ ವಚನವನ್ನು ತಪ್ಪಿದ್ದೀ. ಅದೇ ರೀತಿಯಲ್ಲಿ ನಾನು ಕಾಡಿನಲ್ಲಿ ಬೇಟೆಯಾಡುವುದು ಮಾತ್ರವಲ್ಲ ಕಾಡಿಗೆ ಬೆಂಕಿಯನ್ನೂ ಕೊಡಿಸಬಲ್ಲೆನು.''

ಸನ್ಯಾಸಿಯು ಮೌನನಾದನು. ಆದರೆ ವಿಕ್ರಮನು ಇನ್ನೂ ಹೆಚ್ಚು ಕೋಪಗೊಂಡನು.

''ಸನ್ಯಾಸಿಯೇ ನಾನು ನಿನ್ನನ್ನು ಗೌರವಿಸುತ್ತೇನೆ. ನಿನ್ನ ಮೇಲೆ ನನಗೆ ಶ್ರದ್ಧೆ ಇದೆ. ಆದರೆ ಅಪಮಾನವನ್ನು ಸಹಿಸಲಾರೆನು. ನೀನು ನನ್ನ ರಾಜ್ಯದಲ್ಲಿದ್ದೀ. ನಿನಗೆ ನಾನು ಶಿಕ್ಷೆಯನ್ನೂ ಕೂಡ ಕೊಡಬಲ್ಲೆನು'' ಎಂದು ಅರಸನು ಹೇಳಿದನು.

''ಕೊಡಬಲ್ಲಿರಿ! ಮಹಾರಾಜರೇ'' ಸನ್ಯಾಸಿಯು ಮೆಲ್ಲನೆ ಉತ್ತರವಿತ್ತನು. ಈ ನಮ್ರ ಉತ್ತರವು ವಿಕ್ರಮನಿಗೆ ಮತ್ತಷ್ಟು ಉತ್ತೇಜನ ಕೊಟ್ಟಿತು.

''ಕೊನೆಯ ಉತ್ತರವನ್ನು ಕೊಡು. ಮೃಗಗಳನ್ನು ಹಿಡಿಯಲು ಸಹಾಯಕನಾಗುವಿಯೋ?'' ಅರಸನೆಂದನು.

ಸನ್ಯಾಸಿಯು ತಲೆಯನ್ನೆತ್ತಿ ಧೈರ್ಯದಿಂದ ''ಎಂದಿಗೂ ಇಲ್ಲ'' ಎಂದನು.

ಅರಸನು ''ಸೈನಿಕರೇ ಈತನನ್ನು ಕೈದು ಮಾಡಿರಿ'' ಎಂದು ಆಜ್ಞೆ ಇತ್ತನು.

ಹಾಗೆಯೇ ತನ್ನ ಮಸ್ತಕವನ್ನು ಮೇಲೆ ಮಾಡಿ ಸನ್ಯಾಸಿಯು ಆನಂದದಿಂದ ಕೈಗಳಿಗೆ ಬೇಡಿಯನ್ನು ಧರಿಸಿಕೊಂಡನು.

*

ಸಾಧಾರಣ ಅರ್ಧ ಮಾರ್ಗವು ಸಮಾಪ್ತವಾದೊಡನೆ ಆನೆಯನ್ನು ನಿಲ್ಲಿಸಿ ವಿಕ್ರಮನು ತಿರುಗಿ ಹೀಗೆಂದನು. ''— ಸನ್ಯಾಸೀ! ಮೃಗಗಳು ನಿನ್ನ ವಶ ಇವೆ. ನನ್ನ ಮೃಗಾಲಯದಲ್ಲಿ ಇರಿಸಿ, ನೀವು ಅವುಗಳಿಗೆ ಉಪಕಾರದನ್ನೇ ಮಾಡುತ್ತೀ ಅಲ್ಲವಾದರೆ ನಿನ್ನ ಹಟದಿಂದ ಈ ಕಾಡಿನ ಪಶುಪಕ್ಷಿಗಳ ಪ್ರಾಣವು ಹೋಗುವುದು.'' ಕ್ಷಣ ಹೊತ್ತು ನಿಂತು ಸನ್ಯಾಸಿಯು ''ಆಲೋಚನೆ ಮಾಡುವುದಕ್ಕಾಗಿ ಪ್ರಾತಃಕಾಲದ ವರೆಗೆ ಸಮಯವನ್ನು ಕೊಡಬೇಕು'' ಎಂದು ಬೇಡಿಕೊಂಡನು. ವಿಕ್ರಮನು ಆತನನ್ನು ಬಿಡಲಿಕ್ಕೆ ಅಪ್ಪಣೆಯನ್ನು ಕೊಟ್ಟು ಪ್ರಸನ್ನವದನನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ಸನ್ಯಾಸಿಯು ತನ್ನ ಸ್ಥಾನವನ್ನು ಮುಟ್ಟಿದನು. ಈ ಹೊತ್ತು ಶಂಖದ ನಾದವನ್ನು ಕೇಳುವ ಮೊದಲೇ ಎಲ್ಲಾ ಪಶುಗಳೂ ಅಲ್ಲಿ ಬಂದು ಕೂಡಿದ್ದವು. ಮತ್ತು ಸನ್ಯಾಸಿಯನ್ನು ಕಾಣದೆ ವ್ಯಾಕುಲ ದೃಷ್ಟಿಯಿಂದ ನಾಲ್ಕು ಕಡೆಗೂ ನೋಡುತ್ತಲಿದ್ದವು. ಈ ನೂತನ ದೃಶ್ಯವನ್ನು ನೋಡಿ ಸನ್ಯಾಸಿಗೂ ಆಶ್ಚರ್ಯವಾಯಿತು. ಸನ್ಯಾಸಿಯನ್ನು ನೋಡಿ ಮೃಗಗಳು ಆನಂದವನ್ನು ಪ್ರಕಟಿಸ ತೊಡಗಿದವು.

ಜನನೀ ಜನ್ಮಭೂಮಿಗೆ ವಂದಿಸಿ ಸನ್ಯಾಸಿಯು ವಾದ್ಯವನ್ನು ಎತ್ತಿದನು. ಮೃಗಗಳೂ ಕೂಡ ತಲೆಬಾಗಿ ನಿಂತವು.

''ಸುಹಾಸಿನೀಂ, ಸುಮಧುರ ಭಾಷಿಣೀಂ ಸುಖದಾಂ,ವರದಾಂ, ಮಾತರಂ'' ಒಟ್ಟಿಗೆ ವಂದನೆಯನ್ನು ಸಮಾಪ್ತಿಗೊಳಿಸಿ ಸನ್ಯಾಸಿಯು ತೀವ್ರ ಧ್ವನಿಯನ್ನೂ ಮಾಡಿದನು.

''ಜನನೀ ಜನ್ಮಭೂಮಿಶ್ಚಸ್ವರ್ಗಾದಪಿ ಗರೀಯಸೀ''

ನಿತ್ಯಾನುಸಾರ ಎಲ್ಲಾ ಮೃಗಗಳೂ ಹಿಂತಿರುಗ ತೊಡಗಿದವು. ಆಗ ಸನ್ಯಾಸಿಯು ಚಿಂತಿತ ವದನದಿಂದ ಹೇಳತೊಡಗಿದನು—''ಮಿತ್ರರೇ ನಿಮ್ಮೊಡನೆ ನನ್ನ ಈ ಸ್ನೇಹವು ಕೊನೆಯದಾಗಿದೆ. ಇಂದು ರಾತ್ರಿಯ ಗಾಯನದ ನಂತರ ನಾನು ನಿಮ್ಮನ್ನು ಬೀಳ್ಕೊಳ್ಳುವೆನು. ಮತ್ತು ಬಹುಶಃ ಆಗ ನಾನು ನಿಮ್ಮನ್ನು ಕೊನೆಯದಾಗಿ ನೋಡುವುದಾಗಿದೆ.

ಮೃಗಗಳ ಮೇಲೆ ವಜ್ರಪಾತವಾದಂತಾಯಿತು. ಅವುಗಳಿಗೆ ಬಹುಶಃ ಸನ್ಯಾಸಿಯ ಭಾಷೆಯು ಪರಿಚಿತವಾಗಿತ್ತು. ಅಧೀರವಾಗಿ ಸನ್ಯಾಸಿಯ ಕಾಲಬುಡದಲ್ಲಿ ಹೊರಳಾಡಿದವು. ಆಗ ಕಣ್ಣೀರನ್ನು ಒರಸಿ ಸನ್ಯಾಸಿಯು ಹೇಳತೊಡಗಿದನು—

''ನನ್ನ ಪ್ರಿಯ ಮಿತ್ರರೇ! ನಾನು ನನ್ನ ಇಚ್ಛೆಯಿಂದ ನಿಮ್ಮನ್ನು ಬಿಟ್ಟುಹೋಗುವುದಲ್ಲ. ಇಲ್ಲಿಯ ಅರಸನಾದ ವಿಕ್ರಮನು ನಿಮ್ಮ ಮೇಲೆ ಮೋಹಿತನಾಗಿದ್ದಾನೆ. ನಿಮ್ಮನ್ನೆಲ್ಲಾ ಅವನ ಮೃಗಾಲಯಕ್ಕಾಗಿ ಹಿಡಿಸಿಕೊಡಬೇಕು ಎಂದು ಆತನ ಅಪ್ಪಣೆ ನನಗಿದೆ. ಆದರೆ ನಾನು ಸ್ವಾತಂತ್ರ್ಯತೆಯ ಉಪಾಸಕನು, ಸ್ವಾತಂತ್ರ್ಯದ ಮೌಲ್ಯವನ್ನೂ ಅರಿತವನು. ನಿಮ್ಮೊಡನೆ ಹಗೆತನವನ್ನು ಹೇಗೆ ಬೆಳೆಸಬಲ್ಲೆನು? ನಾನು ವಿಕ್ರಮನ ಆಜ್ಞೆಯನ್ನು ಉಲ್ಲಂಘಿಸಿದೆನು. ಇದೇ ಅಪರಾಧದ ಮೇಲೆ ಆತನು ನನ್ನನ್ನು ಬಂದಿಯನ್ನಾಗಿ ಮಾಡಿದ್ದನು. ಕೇವಲ ನಿಮ್ಮನ್ನು ಬೀಳ್ಕೊಳ್ಳುವುದಕ್ಕೆ ಮತ್ತು ನಮಗಿರುವ ವಿಪತ್ತನ್ನು ಸೂಚಿಸುವುದಕ್ಕೆ ಪ್ರಾತಃಕಾಲದ ವರೆಗೆ ಸಮಯವನ್ನು ಪಡೆದು ಬಂದಿರುವೆನು. ನಿಮ್ಮೆಲ್ಲರ ಮೇಲೆ ಸಂಕಟವು ಬಂದೊದಗಲಿದೆ. ರಾಜನು ನನ್ನನ್ನು ಕೈದುಮಾಡಿಯೂ ಕೂಡ ನಿಮ್ಮನ್ನು ಹಿಡಿಯುವ ಉಪಾಯವನ್ನು ಮಾಡುವ ಸಂಭವವಿದೆ. ನೀವೆಲ್ಲರೂ ಆತನ ಮೃಗಾಲಯದಲ್ಲಿರಲು ಸಿದ್ಧರಿದ್ದೀರೋ?''

ಎಲ್ಲಾ ಮೃಗಗಳಲ್ಲಿಯೂ ಒಂದು ನವೀನ ಉತ್ಸಾಹವು ಉತ್ಪನ್ನವಾಯಿತು. 'ನಮಗೆ ನಮ್ಮ ಕಾಡು ಬಹಳ ಪ್ರೀತಿಯದ್ದಾಗಿದೆ. ಗುರುವರ್ಯರೇ, ಇದನ್ನು ಬಿಟ್ಟು ನಾವು ಜೀವ ರಕ್ಷೆಯನ್ನು ಇಚ್ಛಿಸುವುದಿಲ್ಲ. ಮೃಗಾಲಯದಲ್ಲಿ ಬಂಧಿಗಳಾಗಿ ಇರುವುದಕ್ಕಿಂತ ನಮ್ಮ ಕಾಡಿನಲ್ಲಿಯೇ ಸಿಂಹದ ಬಾಯಿಗೆ ತುತ್ತಾಗುವುದು ಉತ್ತಮ ಎಂಬುದನ್ನು ಹೇಳುತ್ತವೋ ಎಂಬಂತೆ ಅವೆಲ್ಲವೂ ಹಚ್ಚಗೆ ಹಸುರಾದ ಹುಲ್ಲು ವೃಕ್ಷಗಳ ತೂಗುವ ಗೆಲ್ಲು ಮತ್ತು ಪರ್ವತಗಳ ಎತ್ತರವಾದ ತುದಿಗಳನ್ನು ಕರುಣಾ ದೃಷ್ಟಿಯಿಂದ ನೋಡತೊಡಗಿದವು. ಅವುಗಳು ತಮ್ಮ ಕಾಡಿನ ಸೌಂದರ್ಯದ ಮೇಲೆ ಮುಗ್ಧವಾಗಿ ಅದನ್ನು ನೋಡುವುದರಲ್ಲಿಯೇ ತಲ್ಲೀನವಾದವು. ಸನ್ಯಾಸಿಯು ತಲ್ಲೀನತೆಯನ್ನು ಭಂಗವಾಡಿದನು—

''ಪ್ರಿಯ ಮಿತ್ರರೇ! ಈಗ ಹೋಗಿರಿ. ರಾತ್ರಿಯಲ್ಲಿ ತಿರುಗಿ ಒಟ್ಟಾಗುವಾ''—

ಮೃಗಗಳು ಇಂದು ಸನ್ಯಾಸಿಯ ಹತ್ತಿರದಿಂದ ಹೋಗಲು ತಯಾರಿರಲಿಲ್ಲ. ಅವೆಲ್ಲವೂ ಕೆಲವೊಮ್ಮೆ ಸನ್ಯಾಸಿಯ ಕಾಲಬುಡದಲ್ಲಿ ಹೊರಳಾಡುತ್ತಲೂ ಕೆಲವೊಮ್ಮೆ ವ್ಯಾಕುಲವಾಗಿ ಬೊಬ್ಬಿಡುತ್ತಲೂ ಅಳುತ್ತಲೂ ಕೆಲವೊಮ್ಮೆ ಆತನನ್ನು ಏಕದೃಷ್ಟಿಯಿಂದ ನೋಡುತ್ತಲೂ ಅಲ್ಲಿಯೇ ನಿಂತವು. ಸನ್ಯಾಸಿಯ ಆಕೃತಿಯ ಸಜೀವ ಚಿತ್ರವನ್ನು ತಮ್ಮ ಕಣ್ಣುಗಳಲ್ಲಿ ಎಳೆದುಕೊಳ್ಳುತ್ತವೋ ಎಂಬಂತೆ ನಿಂತುಕೊಂಡವು. ಮೃಗ ಶಾವಕಗಳೂ ಭಯದಿಂದ ಸನ್ಯಾಸಿಯ ಮುಖವನ್ನು ನೋಡುತ್ತಾ ಇದ್ದವು. ಸನ್ಯಾಸಿಯು ಕೂಡ ಅವುಗಳ ಮೇಲೆ ಕೈಯನ್ನು ಆಡಿಸುತ್ತ ಅವುಗಳಂತೆ ಅಳುತ್ತಿದ್ದನು.

ಇಂದು ಚಂದ್ರನ ಬೆಳದಿಂಗಳಲ್ಲಿ ಸನ್ಯಾಸಿಯು ಕೊಳಲನ್ನು ಬಾರಿಸುವುದರಲ್ಲಿಯೇ ತಲ್ಲೀನನಾಗಿದ್ದನು. ಅವನು ಸ್ವಾತಂತ್ರ್ಯದಗೀತವನ್ನು ಹಾಡುತ್ತಿದ್ದನು. ಮೃಗಗಳು ಇಂದಿನ ಸಂಗೀತ ಸಮುದ್ರದ ಮಂಥನವನ್ನು ಮಾಡಿ ಸ್ವಾತಂತ್ರ್ಯದ ಅಮರತೆಯನ್ನು ಹುಡುಕುವರೋ ಎಂಬಂತೆ ನಿಂತುಕೊಂಡಲ್ಲೇ ತೂಗುತಿದ್ದವು.

ಈ ತಲ್ಲೀನತೆಯಲ್ಲಿಯೇ ಸಂಪೂರ್ಣ ರಾತ್ರಿಯು ಪ್ರತ್ಯೇಕವಾಯಿತೆಂದು ಯಾರಿಗೂ ತಿಳಿಯಲಿಲ್ಲ. ಉಷಾದೇವಿಯ ಸೌಂದರ್ಯವು ಹರಡಿದ ಕೂಡಲೇ ಸನ್ಯಾಸಿಯು ಕೊಳಲನ್ನು ಕೆಳಗಿಟ್ಟನು ಮತ್ತು ಹೀಗೆಂದನು—''ಮಿತ್ರರೇ ಈಗ ನನ್ನನ್ನು ಹೋಗಬಿಡಿರಿ. ಪರಮಾತ್ಮನು ನಿಮ್ಮ ಸ್ವಾತಂತ್ರ್ಯಕ್ಕೆ ಅಮರತ್ವವನ್ನು ಕೊಡಲಿ.''

ಎಲ್ಲಾ ಮೃಗಗಳೂ ಒಂವೇ ಸಮನೆ ಸನ್ಯಾಸಿಯನ್ನು ಮುತ್ತಿದವು. ವ್ಯಥೆಯಿಂದ ಅವನ ಹೃದಯವು ಕರಗಿತು. ಅದೇ ಸಮಯದಲ್ಲಿ ರಾಜನ ಸೈನ್ಯವು ಬರುವ ಶಬ್ದವು ಕೇಳಬಂತು.

''ಸರಿ, ಸಹೋದರರೇ! ಈಗ ನನ್ನನ್ನು ಬೀಳ್ಕೊಳ್ಳಿರಿ; ನನ್ನ ಮೋಹವನ್ನು ಬಿಟ್ಟು ಬಿಡಿರಿ'' ಎಂದು ಸನ್ಯಾಸಿಯು ಕಠಿಣತೆಯಿಂದ ಹೇಳಿದನು. ಮೃಗಗಳು ಸತೃಷ್ಣ ನೇತ್ರಗಳಿಂದ ತಿರುಗಿ ತಿರುಗಿ ಸನ್ಯಾಸಿಯನ್ನು ನೋಡುತ್ತ ಹೋದವು.

''ವಿಚಾರವೇನು ಹೇಳು. ನಾನು ಮೃಗಗಳನ್ನು ಹಿಡಿಯಲು ಸಕಲ ಸಲಕರಣೆ ಸಾಮಾನುಗಳನ್ನೂ ತೆಗೆದುಕೊಂಡು ಬಂದಿದ್ದೇನೆ. ನನಗೆ ಸಹಾಯವನ್ನು

(೧೧ನೆಯ ಪುಟವನ್ನು ನೋಡಿ)

ಶ್ರೀ. ಗೋಪಾಲ ಪೈಗಳಿಗೆ ಶಿಕ್ಷೆ

ಮೂಡಬಿದ್ರೆಯಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾದ ಶ್ರೀ ಗೋಪಾಲ ಪೈಗಳಿಗೆ ೩ ತಿಂಗಳ ಶಿಕ್ಷೆ ಹಾಗೂ ೧೦೦ ರು. ಜುಲ್ಮಾನೆ ಮತ್ತು 'ಬಿ' ಕ್ಲಾಸು ವಿಧಿಸಿರುವರು. ಅವರನ್ನು ಹಿಂಡಲಗಿ ಸೆರೆಮನೆಗೆ ಕಳುಹಿಸಲಾಗಿದೆ.

ಮಂಗಳೂರಲ್ಲಿ ಗಾಂಧಿ ಜಯಂತಿ

ಮಂಗಳೂರಲ್ಲಿ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ ೭ರಿಂದ ೮ರ ವರೆಗೆ ಒಂದು ವಾರ ಗಾಂಧಿ ಜಯಂತಿ ವಿವಿಧ ಕಾರ್ಯಕ್ರಮಗಳಿಂದೊಡಗೂಡಿ ಯಶಸ್ವಿಯಾಗಿ ಜರಗಿತು. ತಾ. ೨ರಂದು ಪ್ರಾತಃಕಾಲ ಪ್ರಭಾತ ಫೇರಿ ಧ್ವಜ ವಂದನೆಗಳಾಗಿ ಬಡವರಿಗೆ ಅಕ್ಕಿ ಹಂಚುವುದು ನೆರವೇರಿತು. ಸಂಜೆಗೆ ಮೆರವಣಿಗೆಯಿಂದ ಮಂಗಳೂರು ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಡಾ। ಯು ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿತು. ಆ ದಿನ ಸಭೆಯಲ್ಲಿ ಗಾಂಧಿಜಿಯವರ ಕುರಿತು ಶ್ರೀಗಳಾದ ಕು ಶಿವರಾವ್, ದಾಮೋದರ ಬಾಳಿಗ ಇವರು ಮಾತನಾಡಿದರು. ತಾ. ೩ರಂದು ಸಂಜೆಗೆ ಸಾರ್ವಜನಿಕ ಸಭೆಯು ಬೋಳೂರು ಬತ್ತೇರಿಯ ಬಳಿ ಶ್ರೀ ಈಶ್ವರ ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ದಾಮೋದರ ಬಾಳಿಗ, ಸಕೂರ್ ಸಾಹೇಬ್, ಕೆ. ಕೆ. ರೈ, ಎಚ್. ಕೆ. ತಿಂಗಳಾಯ ಪಿ. ಮೆಂಡನ್, ಇವರು ಭಾಷಣವಿತ್ತರು ತಾ ೪ರಂದು ಕಂಕನಾಡಿಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಬಿ ದಾಮೋದರ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಚ್. ಕೆ. ತಿಂಗಳಾಯ, ಪ್ರಭಾಕರ ಶೇಟ್, ಕೆ. ಕೆ. ರೈ ಇವರು ಭಾಷಣಗಳನ್ನಿತ್ತರು. ತಾ. ೫ರಂದು ಸಾರ್ವಜನಿಕ ಸಭೆಯು ಮೈದಾನಿನಲ್ಲಿ ಜರಗಿತು ಶ್ರೀ ಎಚ್. ಕೆ ತಿಂಗಳಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೃಷ್ಣರಾವ್, ದಾಮೋದರ ಬಾಳಿಗ, ಎನ್. ಕೆ. ಬಾಲಕೃಷ್ಣನ್ ಇವರು ಭಾಷಣಗಳನ್ನಿತ್ತರು ತಾ. ೬ರಂದು ಪ್ಯೂಗೆಯಲ್ಲಿ ಶ್ರೀ ಬಿ. ಎಂ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀಗಳಾದ ಬಿ ಎಲ್. ವಿದ್ಯಾರ್ಥಿ, ಕೆ ಕೆ. ರೈ, ದಾಮೋದರ ಬಾಳಿಗ ಇವರು ಭಾಷಣವಿತ್ತರು ತಾ. ೭ರಂದು ಉರ್ವ ಮೈದಾನಿನಲ್ಲಿ ಸಾರ್ವಜನಿಕ ಸಭೆ ಶ್ರೀ ದಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು, ಶ್ರೀಗಳಾದ ಈಶ್ವರ ಎಂ. ಎಲ್. ಎ ಎಚ್. ಕೆ. ತಿಂಗಳಾಯ ಇವರು ಭಾಷಣವಿತ್ತರು. ತಾ. ೮ರಂದು ಮೈದಾನಿನಲ್ಲಿ ಶ್ರೀ ಎ ಬಿ. ಶೆಟ್ಟಿ ಎಂ. ಎಲ್. ಇವರ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಎಂ ಡಿ. ಅಧಿಕಾರಿ ದಾಮೋದರ ಬಾಳಿಗ ಇವರು ಭಾಷಣವಿತ್ತರು. ಆ ದಿನ ಹಿಂದಿನ ಬೇರೆ ಬೇರೆ ದಿನಗಳಲ್ಲಿ ಏರ್ಪಡಿಸಲಾದ ಹಿಂದೀ ಕನ್ನಡ ವಾಕ್ ಸ್ಪರ್ಧೆ, ನೂಲುವ ಸ್ಪರ್ಧೆ, ಗ್ರಾಮ ಕೈಗಾರಿಕೆಗಳ ಪ್ರದರ್ಶನ ಇವುಗಳಲ್ಲಿ ಜಯಹೊಂದಿದವರಿಗೆ ಹಾಗೂ ಪ್ರಶಸ್ತಿ ಪಡೆದವರಿಗೆ ಇನಾಮು ಪ್ರಶಸ್ತಿ ಪತ್ರಗಳನ್ನು ಕೊಡಲಾಯಿತು.

ನೂಲುವ ಸ್ಪರ್ಧೆಯಲ್ಲಿ ಶ್ರೀಮತಿ ಡಿ ರತ್ನಾ ಇವರಿಗೆ ಪ್ರಥಮ ಬಹುಮಾನವೂ, ಶ್ರೀಮತಿ ಸರಸ್ವತಿ ಬಾಯಿ ಇವರಿಗೆ ದ್ವಿತೀಯ ಬಹುಮಾನವೂ ದೊರೆತಿದೆ. ಹಿಂದೀ ವಾಕ್ ಸ್ಪರ್ಧೆಯಲ್ಲಿ ಶ್ರೀ ಎಂ. ರಾಮಚಂದ್ರ ಪ್ರಭು ಇವರಿಗೆ ಪ್ರಥಮ ಬಹುಮಾನವೂ, ಶ್ರೀ ಶ್ರೀನಿವಾಸ ಭೋರ್ಕರ್ ಇವರಿಗೆ ದ್ವಿತೀಯ ಬಹುಮಾನ ದೊರೆತಿದೆ. ಕನ್ನಡ ವಾಕ್ ಸ್ಪರ್ಧೆಯಲ್ಲಿ ಶ್ರೀ ಕು. ಶಿವರಾವ್ ಇವರಿಗೆ ಪ್ರಥಮ ಬಹುಮಾನವೂ ಶ್ರೀ ಬಿ. ಎಂ. ಇದಿನಬ್ಬ ಇವರಿಗೆ ದ್ವಿತೀಯ ಬಹುಮಾನವೂ ದೊರೆತಿದೆ. ಗ್ರಾಮ ಕೈಗಾರಿಕೆಯ ಪ್ರದರ್ಶನದಲ್ಲಿ ಶ್ರೀ ಬೇಲಂಪಾಡಿ ಸುಬ್ರಾಯ ಪಂತರಿಗೆ ಪ್ರಥಮ ಬಹುಮಾನವೂ ಶ್ರೀಗಳಾದ ನಂದಾವರ ವಾಸುದೇವ ನಾಯಕ್ ಮತ್ತು ಪೂವಪ್ಪ ಬೆಳ್ಚಡ ಎಂಡ್ ಸನ್ಸ್ ಇವರಿಗೆ ದ್ವಿತೀಯ ಬಹುಮಾನಗಳೂ ದೊರೆತಿವೆ.

ಹೀಗೆ ವಿಪುಲ ಕಾರ್ಯಕ್ರಮಗಳಿಂದ ಕೂಡಿದ ಗಾಂಧಿಜಯಂತಿಯು ಮಂಗಳೂರಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು.

ಮಂಗಳೂರು ಸಮಾಚಾರ

ಕನ್ನಡ ಸಾಹಿತಿಗಳಿಗೆ ಸತ್ಕಾರ

ಕನ್ನಡ ಪ್ರಸಿದ್ಧ ಸಾಹಿತಿಗಳಾದ ಬೆಂಗಳೂರಿನ ಶ್ರೀ. ವಿ. ಸೀತಾರಾಮಯ್ಯ, ಧಾರವಾಡದ ಶ್ರೀ. ಜಿ. ಬಿ. ಜೋಶಿ, ಉತ್ತರ ಕನ್ನಡದ ಶ್ರೀ. ವಸಂಜೆರೆಕರ್ ಪ್ರಭೃತಿಗಳನ್ನು ತಾ. ೩ರಂದು ಸಿ. ಪಿ ಸಿ. ಮೆನೆಜಿಂಗ್ ಡೈರೆಕ್ಟರರಾದ ಶ್ರೀ. ವಿ. ಎಸ್. ಕುಡ್ವರು ಒಂದು ಟೀಪಾರ್ಟಿ ಕೂಟವನ್ನೇರ್ಪಡಿಸಿ ಸತ್ಕರಿಸಿದರು. ಆ ದಿನದ ಕೂಟದಲ್ಲಿ ಜಿಲ್ಲೆಯ ಹಾಗೂ ಮಂಗಳೂರಿನ ಹಲವು ಮಂದಿ ಸಾಹಿತಿಗಳು ಆಮಂತ್ರಿತರಾಗಿ ಭಾಗವಹಿಸಿದ್ದರು

ಕಲ್ಚರಲ್ ಎಸೋಸಿಯೇಶನಿನಲ್ಲಿ

ಶ್ರೀ. ಜಿ ಬಿ ಜೋಶಿ ಮತ್ತು ಶ್ರೀ ವಿ ಸೀತಾರಾಮಯ್ಯ ಪ್ರಭೃತಿಗಳನ್ನು ಮಂಗಳೂರು ಕಲ್ಚರಲ್ ಎಸೋಸಿಯೇಶನಿನವರು ತಾ. ೩ರಂದು ಆಮಂತ್ರಿಸಿ ಸತ್ಕರಿಸಿದ್ದರು ಆ ಕೂಟಕ್ಕೆ ಹಲವು ಮಂದಿ ಜಿಲ್ಲೆಯ ಸಾಹಿತಿಗಳೂ ಕಲಾವಿದರೂ ಆಮಂತ್ರಿತರಾಗಿದ್ದರು. ದಸರೆಯ ಉತ್ಸವವನ್ನು ಇನ್ನಷ್ಟು ಯಶಸ್ವಿಯಾಗಿ ಹೇಗೆ ಆಚರಿಸಬಹುದೆಂಬ ವಿಷಯವಾಗಿ ವಿಚಾರವಿನಿಮಯ ಮಾಡಲಾಯಿತು ಶ್ರೀಗಳಾದ ಎನ್ ಎಸ್ ಕಿಲ್ಲೆ ಮತ್ತು ಸುಬ್ರಾಯಶಾಸ್ತ್ರಿಗಳೊಡನೆ ಅತಿಥಿಗಳು ಯಕ್ಷಗಾನದ ವಿಚಾರವಾಗಿ ಅನೇಕ ಪ್ರಶ್ನೆಗಳನ್ನು ಕೇಳಿದರು. ಜಿಲ್ಲೆಯ ವಿಶಿಷ್ಟ ಕಲೆಯಾದ ಯಕ್ಷಗಾನದ ಕುರಿತು ತಿಳಕೊಳ್ಳಲು ಅವರು ಹೆಚ್ಚಿನ ಆತುರವಿದ್ದಂತೆ ತೋರಿತು

ದ. ಕ. ಪ್ರೆಸ್ ವರ್ಕರ್ಸ್ ಯೂನಿಯನಿನ ಇದರ ಮಹಾಸಭೆ

ಮೇಲಿನ ಯೂನಿಯನಿನ ವಾರ್ಷಿಕ ಮಹಾಸಭೆಯು ಕನಿಷ್ಠ ಹಾಜರಿ ಇಲ್ಲದ ಕಾರಣ ಸಪ್ಟಂಬರ ತಾ ೨೭ರಲ್ಲಿ ಜರಗದೆ ಇದೇ ಅಕ್ಟೋಬರ ತಾ. ೫ರ ಸಾಯಂ. ೪ ಗಂಟೆಗೆ ಮುಂದುವರಿಸಲಾಯಿತು ಆ ದಿನ ಕೂಡಾ ಕನಿಷ್ಠ ಹಾಜರಿ ಇಲ್ಲದುದರಿಂದ ಪುನಃ ಅದನ್ನು ಇದೇ ಅಕ್ಟೋಬರ ತಾ. ೧೨ನೇ ಭಾನುವಾರ ಸಾಯಂ ಘಂಟೆ ೪ಕ್ಕೆ ಯೂನಿಯನ್ ಆಫೀಸಿನಲ್ಲಿ ಜರಗಿಸಲು ಹಾಜರಿದ್ದ ಮಹಾಸಭೆಯ ಸದಸ್ಯರು ನಿರ್ಧರಿಸಿದ್ದಾರೆ. ಆದುದರಿಂದ ಅಕ್ಟೋಬರ ತಾ ೧೨ನೇ ಭಾನುವಾರ ಸಾಯಂ ಘಂಟೆ ೪ಕ್ಕೆ ಯೂನಿಯನ್ ಆಫೀಸಿನಲ್ಲಿ ನಡೆಯುವ ಮಹಾಸಭೆಗೆ ಯೂನಿಯನಿನ ಎಲ್ಲಾ ಸದಸ್ಯರು ತಪ್ಪದೆ ಬರಬೇಕಾಗಿ ಈ ಮೂಲಕ ವಿನಂತಿಸಲಾಗಿದೆ. ಹೊಸವರ್ಷದ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆಗಳಾಗಬೇಕಾದುದರಿಂದ ಸಭೆಯು ಅತೀ ಮುಖ್ಯವಾದುದು. ಎಲ್ಲಾ ಸದಸ್ಯರೂ, ಕಾರ್ಯಕಾರಿ ಮಂಡಳಿಯ ಸದಸ್ಯರೂ ಈ ಪತ್ರಿಕಾ ಪ್ರಕಟಣೆಯನ್ನು ಆಮಂತ್ರಣವಾಗಿ ತಿಳಿದು ಅಗತ್ಯವಾಗಿ ಬರಬೇಕೆಂದು ವಿನಂತಿ

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗ್

ಇದೇ ತಿಂಗಳ ತಾ. ೫ರಂದು ಇದರ ಒಂದು ಮಹಾ ಸಭೆಯು ಬೋಳೂರು ಸಂಗಮ ಹರಿಜನರ ಕೊಲನಿಯಲ್ಲಿ ಶ್ರೀ ಕೆ. ಈಶ್ವರ, ಎಂ. ಎಲ್ ಎ ಯವರ ಅಧ್ಯಕ್ಷತೆಯಲ್ಲಿ ಜರಗಿತು ಇದೇ ತಿಂಗಳ ಅಂತ್ಯದೊಳಗೆ ಮುಂಡಾಲರ ಒಂದು ಸಭೆಯನ್ನು ಕರೆಯಬೇಕೆಂದು ನಿರ್ಣಯ ಮಾಡಲಾಯಿತು. ಲೀಗಿನ ಆಶ್ರಯದಲ್ಲಿ ಒಂದು ಭಜನೆಯನ್ನು ಬೋಳೂರು ಸಂಗಮದಲ್ಲಿರುವ ಹರಿಜನ ಕೊಲನಿಯಲ್ಲಿ ಮಾಡಬೇಕೆಂದು ಪಾಸುಮಾಡಲಾಯಿತು ವಿದ್ಯಾವಂತರನ್ನು ಮೆಂಬರರನ್ನಾಗಿ ಸೇರಿಸುವ ವಿಷಯದಲ್ಲಿ ಅನೇಕ ಮಂದಿ ಭಿನ್ನ ಅಭಿಪ್ರಾಯ ಕಟ್ಟದರಿಂದ ಈ ಕುರಿತು ಶ್ರೀ ಕೆ. ಈಶ್ವರನವರು ಅಗತ್ಯವಾಗಿ ತೆಗೆದುಕೊಳ್ಳಬೇಕೆಂದು ಎಷ್ಟು ಒತ್ತಾಯ ಮಾಡಿದರೂ ಸಂಘದ ಮೆಂಬರರು ಒಪ್ಪದೆ ಕಡೆಗೆ ಈ ವಿಷಯವನ್ನು ಮುಂದರಿಸಲಾಯಿತು. ಸಂಘದ ಆಶ್ರಯದಲ್ಲಿ ನಡೆಯುವಂಥಾ, ಮದುವೆ ಮರಣ, ಇತ್ಯಾದಿ ಕಾರ್ಯಗಳನ್ನು ಮಾಡಲಿಕ್ಕೆ ೧೫ ಮಂದಿಯಿಂದ ಕೂಡಿದ ಒಂದು ಕೂಟವನ್ನೂ ನೇಮಕ ಮಾಡಲಾಯಿತು.

ಫಲಪುಷ್ಪ ಪ್ರದರ್ಶನ

ಮಂಗಳೂರು ೬ನೆಯ ಫಲಪುಷ್ಪ ಪ್ರದರ್ಶನವು ಕಳೆದ ಆದಿತ್ಯವಾರ ಮಧ್ಯಾಹ್ನ ೧೧ಗಂಟೆಗೆ ಗವರ್ನಮೆಂಟ್ ಕಾಲೇಜಿನಲ್ಲಿ ಜರಗಿತು.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಬಿಲ್ಲವರ ಎಸೋಸಿಯೇಶನಿನ ನೇತೃತ್ವದಲ್ಲಿ ಪ್ರತಿ ರವಿವಾರ ಸಾಯಂಕಾಲ ೫.೩೦ ಗಂಟೆಗೆ ಸರಿಯಾಗಿ ಪೂಜ್ಯ ಬ್ರಹ್ಮ ಶ್ರೀ ನಾರಾಯಣಗುರು ದೇವರ ಪೂಜೆಯನ್ನು ಎಸೋಸಿಯೇಶನಿನ ಸದನದಲ್ಲಿ (೧೭ ರಘುನಾಥ ದಾದಾಜಿ ರಸ್ತೆ, ಮುಂಬಾಯಿ ಕೋಟೆ) ಆಚರಿಸಲಿರುವುದೆಂದೂ, ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ. ಬಿಲ್ಲವರ ಎಸೋಸಿಯೇಶನಿನ ಸದಸ್ಯರಾಗಲು 'ಬೆಲ್ಚಡ' ಯಾನೆ ಮಳಯಾಳಿ ಬಿಲ್ಲವರಿಗೂ ಏನೊಂದು ಆತಂಕವಿರುವುದಿಲ್ಲವೆಂದೂ ಕಾರ್ಯದರ್ಶಿಯವರು ವಿನಂತಿಸುತ್ತಾರೆ

ಶ್ರೀ ನಾರಾಯಣ ಕಿಲ್ಲೆಯವರ ಭಾಷಣ

ಬೆಳಗಾವಿಯಲ್ಲಿ ಶ್ರೀ ಗಂಗಾಧರ ರಾವ್ ದೇಶಪಾಂಡೆಯವರ ಅಧ್ಯಕ್ಷತೆಯಿಂದ ಕೂಡಿದ ಖಾದಿ ಸಂತೆಯ ಸಮಾರೋಪ ಸಭೆಯಲ್ಲಿ ಶ್ರೀ ನಾರಾಯಣ ಕಿಲ್ಲೆಯವರು ಖಾದೀ ಹಾಗೂ ಗಾಂಧಿಜಿಯವರ ಜೀವನ ಇವುಗಳ ವಿಷಯ ಭಾಷಣವಿತ್ತರು.

ಮಂಗಳೂರು ಸ್ಟೂಡೆಂಟ್ಸ್ ಯೂನಿಯನ್

ಇದರ ಕಾರ್ಯಕಾರೀ ಸಮಿತಿಯ ಸಭೆಯು ತಾ ೩ರಲ್ಲು ಶ್ರೀ ಜನರಾಜ ಹೆಗ್ಡೆ ಎಂ ಎಲ್ ಎ (ಸೆಂಟ್ರಲ್) ಇವರ ಅಧ್ಯಕ್ಷತೆಯಿಂದ ಜರಗಿ ರಷ್ಯಕ್ಕೆ ಸಹಾನುಭೂತಿ ಪ್ರಕಟಿಸಿ, ಅದರ ಬಗ್ಗೆ ಸೋವಿಯೆಟ್ ದಿನಾಚರಣೆ ಮಾಡಬೇಕೆಂದು ನಿರ್ಣಯವಾಗಿದೆ ಅಖಿಲ ಭಾರತ ವಿದ್ಯಾರ್ಥಿ ಸಂಘದ ಜನರಲ್ ಸೆಕ್ರೆಟರಿ ಜನಾಬ್ ಫರೂಕಿಯರನ್ನೂ ಸ್ಟೂಡೆಂಟ್ಸ್ ಪತ್ರಿಕಾ ಸಂಪಾದಕರಾದ ಶ್ರೀ ಲಲಿತಾ ಶಂಕರರನ್ನೂ ಬಿಡುಗಡೆ ಮಾಡುವ ಬಗ್ಗೆ ಸರಕಾರವನ್ನು ಪ್ರಾರ್ಥಿಸುವರಾಯಿತು

ಹಿಂದೂ ಮಹಾ ಸಭಾ ಪರಿಷತ್ತು

ದ. ಕ. ಜಿಲ್ಲಾ ಹಿಂದೂ ಮಹಾ ಸಭಾ ಪರಿಷತ್ತು ಈಸ್ಟರಿನಲ್ಲಿ ಮಂಗಳೂರಲ್ಲಿ ಜರಗಿಸಬೇಕೆಂದು ಡಾ। ಮೂಂಜೆಯವರನ್ನು ಅದಕ್ಕೆ ಆಹ್ವಾನಿಸಬೇಕೆಂದೂ ನಿರ್ಣಯವಾಗಿರುವುದಾಗಿ ತಿಳಿದು ಬಂದಿದೆ

ರೆವಿನ್ಯೂ ಬೋರ್ಡ್ ಮೆಂಬರ್

ಮದ್ರಾಸು ಪ್ರಾಂತದ ರೆವಿನ್ಯೂ ಬೋರ್ಡ್ ಮೆಂಬರರಾದ ಜೆ. ಬಿ. ಬ್ರೌನರು ತಾ ೧೩ಕ್ಕೆ ನಮ್ಮ ಜಿಲ್ಲೆಗೆ ಬರಲಿರುವರೆಂದು ತಿಳಿದಿದೆ

ಆಸ್ಟಿನರ ಆಗಮನ

ಮದ್ರಾಸು ಗವರ್ನರರ ಎಕ್ಸಿಕ್ಯುಟಿವ್ ಕೌನ್ಸಿಲರರಾದ ಆಸ್ಟಿನರು ಕಳೆದ ವಾರ ಮಂಗಳೂರಿಗೆ ಬಂದಿದ್ದರು ಇಲ್ಲಿ ಯುದ್ಧಕ್ಕೆ ಸಹಾಯ ನೀಡಬೇಕೆಂದು ಒಂದು ಭಾಷಣವಿತ್ತರು

ಸೆಂಟ್ರಲ್ ಕೋಪರೇಟಿವ್ ಸ್ಟೋರ್

ಮಂಗಳೂರು ಸೆಂಟ್ರಲ್ ಕೋಪರೇಟಿವ್ ಸ್ಟೋರಿನ ಶಾಖೆಯೊಂದನ್ನು ಇದೇ ೫ನೇ ತಾರೀಕಿನ ಬೆಳಗ್ಗೆ ೮-೩೦ ಗಂಟೆಗೆ ಪೆಂಟಲೆಂಡ್ ಪೇಟೆಯಲ್ಲಿ ಶ್ರೀ ವಿಟ್ಠಪ್ಪನವರಿಗೆ ಸಂಬಂಧ ಪಟ್ಟ ಒಂದು ಅಂಗಡಿಯಲ್ಲಿ ಮಂಗಳೂರಿನ ಸಹಕಾರಿ ಸಂಘಗಳ ಡೆಪ್ಯುಟಿ ರಜಿಸ್ಟ್ರಾರರಿಂದ ತೆರೆಯಲಾಯಿತು.

ಮುನ್ಸಿಪಲ್ ಸಭೆ

ಬರುವ ಮಂಗಳೂರು ಮುನ್ಸಿಪಲ್ ಸಭೆಯು ತಾ. ೧೩ರಂದು ಸಂಜೆ ೫.೩೦ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಜರಗುವುದು.

ಸ್ಥಳೀಯ ಬಾಲಾಜಿ ಟೋಕೀಸಿನಲ್ಲಿ ಅತಿ ಶೀಘ್ರದಲ್ಲಿಯೇ ಲೋಕವಿಖ್ಯಾತವಾದ 'ಬಂಧನ್' ಚಿತ್ರವು ಪ್ರದರ್ಶಿಸಲ್ಪಡುವುದು.

ವಿದ್ಯಾ ಇಲಾಖೆ ಡೈರೆಕ್ಟರರ ಆಗಮನ

ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರ್ ಸ್ಟೇಂತರವರು ಕೊಯಂಬುತ್ತೂರು ಡಿವಿಜನಲ್ ಇನ್‌ಸ್ಪೆಕ್ಟರರೊಡನೆ ತಾ. ೩ರಲ್ಲು ದ. ಕನ್ನಡ ಜಿಲ್ಲೆಗೆ ಬಂದಿದ್ದು ಇಲ್ಲಿನ ಡಿ ಇ. ಓ. ಇನ್‌ಸ್ಪೆಕ್ಟರರೊಡನೆ ಸಂಭಾಷಿಸಿ ಕಾರ್ಕಳ ಮಾರ್ಗವಾಗಿ ಕುಂದಾಪುರಕ್ಕೆ ಹೋಗಿ ಅಲ್ಲಿ ಉಡುಪಿ ಕುಂದಾಪುರ ಡಿ. ಇನ್‌ಸ್ಪೆಕ್ಟರರೊಡನೆ ಮಾತನಾಡಿ ಬೈಂದೂರು ಮಿಡ್ಲ್ ಸ್ಕೂಲನ್ನು ಸಂದರ್ಶಿಸಿ ತಾ ೪ರಂದು ಇಲ್ಲಿಂದ ಹೊರಟುಹೋದರೆಂದು ತಿಳಿದಿದೆ

ಬಿಸೆಂಟ್ ದಿನಾಚರಣೆ

ತಾ. ೧ರಲ್ಲು ಬಿಸೆಂಟ್ ದಿನಾಚರಣೆಯು ಬಿಸೆಂಟ್ ಹುಡುಗಿಯರ ಶಾಲೆಯಲ್ಲಿ ಶ್ರೀ. ಎ. ಬಿ. ಶೆಟ್ಟಿ ಅಧ್ಯಕ್ಷತೆಯಿಂದ ಜರಗಿತು. ಶ್ರೀಮತಿ ಘಂಶಾರದಾಂಬಾಳ್ ಇವರು ಬಿಸೆಂಟರ ಜೀವನದ ಕುರಿತು ಭಾಷಣವಿತ್ತರು.

ಸೋವಿಯೆಟ್ ದಿನಾಚರಣೆ

ಮಂಗಳೂರು ವಿದ್ಯಾರ್ಥಿ ಸಂಘದವರು ಸೋವಿಯೆಟ್ ದಿನಾಚರಣೆಯನ್ನು ತಾ. ೯ರಂದು ಆಚರಿಸಿದರು ಧ್ವಜವಂದನೆ, ಮೆರವಣಿಗೆ ಸಾರ್ವಜನಿಕ ಸಭೆಗಳಿದ್ದುವು

[೮ನೆಯ ಪುಟವನ್ನು ನೋಡಿ]

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 23/1941

ಕೃಷ್ಣಪ್ಪ ಸಹಾ — ಅರ್ಜಿದಾರರು.

ಸೋಮಕ್ಕ ಸಹಾ — ಎದುರು

10ನೇ ಎದುರು ಸುಬಮ್ಮ - ಕೋಟ್ಯಪ್ಪ ಬೋಳ್ನಿನ ಮಗಳು ನ್ಯಾಯತರ್ಪು ಗ್ರಾಮದಲ್ಲಿರುವವಳು—

ಇವಳಿಗೆ

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರರು ಕುಟುಂಬದ ಆಸ್ತಿ ಮೇಲಾದ ರೂ 1000ದ ಅರುವಾರು ದಸ್ತವೇಜು ರದ್ದಿನ ಬಗ್ಗೆ ಮತ್ತು ಇತರ ವಾದಿಗಳ ಬಾಧ್ಯತೆಗಳ ಮೇಲೂ ನೀವು ದಾವಾ ಅರ್ಜಿದಾರರು ಹಾಕಿದ ಸದ್ರಿ ಅರ್ಜಿ ವಿವರಣೆಯು ತಾ 28 10 1941ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆ ಬಗ್ಗೆ ಇಟ್ಟಿರುತ್ತದೆ. ಸದ್ರಿ ಅರ್ಜಿದಾರರು ವಾಪಾಸು ಎಂಬ ಸಂಬಂಧದಲ್ಲಿ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ತಾರೀಕಿನೊಳಗೆ ಕೋರ್ಟಿಗೆ ಹಾಜರುಮಾಡಿಕೊಳ್ಳತಕ್ಕದ್ದು ಸದ್ರಿ ತ್ಯಾದಿ ದಿವಸ ಪೂರ್ವಾಹ್ನ 11 ಘಂಟೆಗೆ ಉದಹರಿಸುವರೆ ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನ ಮಾಡಲಾಗುವದೆಂದು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿರುತ್ತದೆ.

ಪುತ್ತೂರು } N V. Kolathaya
7-10 41 } Vakil for Petitioners

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 553/41.

ಅನಂತ ಕಂಮ್ತಿ — ವಾದಿ.

ಮತ್ತು

ಅಬ್ದುಲ್ಲ ಬ್ಯಾರಿ — ಪ್ರತಿವಾದಿ

ಮೇಲಿನ ವಾದಿಯು ನಿಮ್ಮ ಮೇಲೆ ನೋಟಿನ ಐವಜಿನ ವಸೂಲಿ ಬಗ್ಗೆ ದಾವಾಮಾಡಿರುತ್ತಾನೆ, ಸದ್ರಿ ದಾವೆಯು ಮೇಲಿನ ಕೋರ್ಟಿನಲ್ಲಿ ತಾ. 25-10-1941ಕ್ಕೆ ತನಿಖೆಗೆಯಿಟ್ಟಿರುತ್ತದೆ. ಆ ದಿವಸ 10 ಘಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗುವದು ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸ್ ಪಾರ್ಟಿಯಾಗಿ ಮಾಡಲಾಗುವದು.

(ಕೋರ್ಟು ಹುಕುಂ ಪ್ರಕಾರ)

ಮಂಗಳೂರು } N Krishna Bhat,
7-10-1941 } Counsel for Plaintiff.

ಪರಾಜಯ

Some for a gentle dream will die,
Some for an Empire's majesty,
Some for a loftier human kind,
Some to be free as cloud and wind.

ಕಥೆಯ ಹಿನ್ನೆಲೆ:—'ಮೃಗಕಾನನದ ಕುಟೀರವೊಂದರಲ್ಲಿ ಆ ಸನ್ಯಾಸಿಯು ವಾಸವಾಗಿದ್ದನು. ಹಿಂದೊಮ್ಮೆ ಆತನು ಜನನೀ ಜನ್ಮಭೂಮಿಯ ಸೇವಕನಾಗಿದ್ದನು. ಆಗ ವೈರಾಗ್ಯಶಾಲಿ ಆಶ್ರಮವಾಸಿಯಾಗಿರುವನು. ಅಲ್ಲಿನ ಮೃಗಗಳು ಆತನ ಪರಿವಾರಗಳು. ಮಲ್ಲಿಕಾ ರಾಜ್ಯದ ಅರಸು ವಿಕ್ರಮನು ತನ್ನ ಮೃಗಾಲಯಗಳಿಗೆ ಮೃಗಗಳನ್ನು ಒಟ್ಟು ಮಾಡುವುದರಲ್ಲಿದ್ದನು. ಸನ್ಯಾಸಿಯ ಆಶ್ರಮವಾಸೀ ಮೃಗಗಳು ಬುದ್ಧಿಯ ಮೃಗಗಳೆಂದು ಕೇಳಿ ಅವುಗಳನ್ನು ತನಗೆ ಕೊಡಬೇಕಾಗಿ ವಿಕ್ರಮನು ಸನ್ಯಾಸಿಯೊಡನೆ ಕೇಳಿದನು. ಸನ್ಯಾಸಿಯು ಹೇಳಿದನು, ಮೃಗಗಳ ಮೇಲೆ ತನಗೆ ಅಧಿಕಾರವಿಲ್ಲವೆಂದು. ರಾಜನಿಗೆ ಸಿಟ್ಟಾಗುವುದು.

ಅನುವಾದ: ಶ್ರೀ. ಕೆ. ಪಾಂಡುರಂಗ ನಾಯಕ್

ವಿಷ್ಪಕಷ್ಟ ಇಲ್ಲ. ಬೇರೆಯವರಿಗೆ ಅಧೀನವಾಗದೆ ಪ್ರತ್ಯೇಕ ಆಜ್ಞೆಯನ್ನು ಪಾಲಿಸಲು ಸಿದ್ಧನಿದ್ದೇನೆ ಎಂದು ಮೊದಲೇ ನಿವೇದನೆ ಮಾಡಿಕೊಂಡಿದ್ದೇನೆ.''

ತುಸು ಹೊತ್ತು ಮೌನ ವ್ರತವನ್ನು ಧಾರಣೆ ಮಾಡಿಕೊಂಡು ಅರಸನು ಹೀಗೆಂದನು—

"ನಾನು ಮೃಗಗಳ ಸುಖಕ್ಕಾಗಿ ಶತಪ್ರಯತ್ನಗಳನ್ನು ಮಾಡುವೆನು. ಇವುಗಳಿಗೆ ಮೃಗಾಲಯದಲ್ಲಿ ಯಾವ ಪ್ರಕಾರದ ಕಷ್ಟವೂ ಇರಲಾರದು.''

ಮುಗುಳು ನಗಾಡುತ್ತಾ ಸನ್ಯಾಸಿಯು ಉತ್ತರವಿತ್ತನು—"ರಾಜನೇ ಸ್ವಾತಂತ್ರ್ಯ ನಷ್ಟವಾದ ಬಳಿಕ ಇವುಗಳು ಜೀವಚ್ಛವದಂತೆ ಇದ್ದು ಸತ್ತಂತೆ ಆಗುವುವು. ಇದಕ್ಕಿಂತ ಅವುಗಳನ್ನು ಬೇಟೆಯಾಡುವುದೇ ಉತ್ತಮ.''

"ಏನೇ ಆಗಲಿ. ಈ ಮೃಗಗಳನ್ನು ನನಗೆ ಮೃಗಾಲಯದ ಅಲಂಕಾರಕ್ಕಾಗಿ ಕೊಡಲೇ ಬೇಕು!'' ಎಂದು ವಿಕ್ರಮನು ತುಸು ಕ್ರೂರ ಸ್ವರದಿಂದ ಹೇಳಿದನು.

"ನಾನು ಮೊದಲೇ ಹೇಳಿದ್ದೆನಲ್ಲ. ಮೃಗಗಳ ಮೇಲೆ ನನ್ನ ಅಧಿಕಾರವಿಲ್ಲ.''

ಈಗ ವಿಕ್ರಮನು ಬಹು ಬಹು ಕೋಪಗೊಂಡನು.

"ನನ್ನ ಆಜ್ಞೆಗೆ ಇದೊಂದು ಕೊರತೆ. ನಿನ್ನ ಅಧಿಕಾರವು. ಮೃಗಗಳ ಮೇಲೆ ಇಲ್ಲದಿದ್ದರೆ ನನ್ನ ಅಧಿಕಾರವಿದೆ. ಒಂದು ವೇಳೆ ನೀನು ನನಗೆ ಸಹಾಯ ಮಾಡದಿದ್ದರೆ ಇವುಗಳ ಅಹಿತವಾಗುವುದು.''

"ಕಾಡು ತಮ್ಮದಾಗಿದೆ. ಮಹಾರಾಜರ ಇಚ್ಛೆಯನ್ನು ಒಂದು ಸಲ ಸ್ಮರಿಸುವುದು ನನ್ನ ಕರ್ತವ್ಯವಾಗಿದೆ. ಈ ಕಾಡಿನಲ್ಲಿ ಬೇಟೆಯಾಡುವುದಿಲ್ಲ ಎಂದು ವಚನವನ್ನು ತಾವು ಕೊಟ್ಟಿದ್ದೀರಿ'' ಎಂದು ಸನ್ಯಾಸಿಯು ಹೇಳಿದನು.

"ನೀನು ನಿನ್ನ ವಚನವನ್ನು ತಪ್ಪಿದ್ದೀ. ಅದೇ ರೀತಿಯಲ್ಲಿ ನಾನು ಕಾಡಿನಲ್ಲಿ ಬೇಟೆಯಾಡುವುದು ಮಾತ್ರವಲ್ಲ, ಕಾಡಿಗೆ ಬೆಂಕಿಯನ್ನೂ ಕೊಡಿಸಬಲ್ಲೆನು.''

ಸನ್ಯಾಸಿಯು ಮೌನನಾದನು. ಆದರೆ ವಿಕ್ರಮನು ಇನ್ನೂ ಹೆಚ್ಚು ಕೋಪಗೊಂಡನು.

"ಸನ್ಯಾಸಿಯೇ ನಾನು ನಿನ್ನನ್ನು ಗೌರವಿಸುತ್ತೇನೆ. ನಿನ್ನ ಮೇಲೆ ನನಗೆ ಶ್ರದ್ಧೆ ಇದೆ. ಆದರೆ ಅಪಮಾನವನ್ನು ಸಹಿಸಲಾರೆನು. ನೀನು ನನ್ನ ರಾಜ್ಯದಲ್ಲಿದ್ದೀ. ನಿನಗೆ ನಾನು ಶಿಕ್ಷೆಯನ್ನೂ ಕೂಡ ಕೊಡಬಲ್ಲೆನು'' ಎಂದು ಅರಸನು ಹೇಳಿದನು.

"ಕೊಡಬಲ್ಲಿರಿ! ಮಹಾರಾಜರೇ'' ಸನ್ಯಾಸಿಯು ಮೆಲ್ಲನೆ ಉತ್ತರವಿತ್ತನು. ಈ ನಮ್ರ ಉತ್ತರವು ವಿಕ್ರಮನಿಗೆ ಮತ್ತಷ್ಟು ಉತ್ತೇಜನ ಕೊಟ್ಟಿತು.

"ಕಡೆಯ ಉತ್ತರವನ್ನು ಕೊಡು. ಮೃಗಗಳನ್ನು ಹಿಡಿಯಲು ಸಹಾಯಕನಾಗುವಿಯೋ?'' ಅರಸನೆಂದನು.

ಸನ್ಯಾಸಿಯು ತಲೆಯನ್ನು ಎತ್ತಿ ಧೈರ್ಯದಿಂದ "ಎಂದಿಗೂ ಇಲ್ಲ'' ಎಂದನು.

ಅರಸನು "ಸೈನಿಕರೇ ಈತನನ್ನು ಕೈದು ಮಾಡಿರಿ'' ಎಂದು ಆಜ್ಞೆ ಇತ್ತನು.

ಹಾಗೆಯೇ ತನ್ನ ಮಸ್ತಕವನ್ನು ಮೇಲೆ ಮಾಡಿ ಸನ್ಯಾಸಿಯು ಆನಂದದಿಂದ ಕೈಗಳಿಗೆ ಬೇಡಿಯನ್ನು ಧರಿಸಿಕೊಂಡನು.

೩

ಸಾಧಾರಣ ಅರ್ಧ ಮಾರ್ಗವು ಸಮಾಪ್ತವಾದೊಡನೆ ಆನೆಯನ್ನು ನಿಲ್ಲಿಸಿ ವಿಕ್ರಮನು ತಿರುಗಿ ಹೀಗೆಂದನು. "— ಸನ್ಯಾಸೀ! ಮೃಗಗಳು ನಿನ್ನ ವಶ ಇವೆ. ನನ್ನ ಮೃಗಾಲಯದಲ್ಲಿ ಇರಿಸಿ, ನೀವು ಅವುಗಳಿಗೆ ಉಪಕಾರವನ್ನೇ ಮಾಡುತ್ತೀ. ಅಲ್ಲವಾದರೆ ನಿನ್ನ ಹಟದಿಂದ ಈ ಕಾಡಿನ ಪಶುಪಕ್ಷಿಗಳ ಪ್ರಾಣವು ಹೋಗುವುದು.'' ಕ್ಷಣ ಹೊತ್ತು ನಿಂತು ಸನ್ಯಾಸಿಯು "ಆಲೋಚನೆ ಮಾಡುವುದಕ್ಕಾಗಿ ಪ್ರಾತಃಕಾಲದ ವರೆಗೆ ಸಮಯವನ್ನು ಕೊಡಬೇಕು'' ಎಂದು ಬೇಡಿಕೊಂಡನು. ವಿಕ್ರಮನು ಆತನನ್ನು ಬಿಡಲಿಕ್ಕೆ ಅಪ್ಪಣೆಯನ್ನು ಕೊಟ್ಟು ಪ್ರಸನ್ನವದನನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ಸನ್ಯಾಸಿಯು ತನ್ನ ಸ್ಥಾನವನ್ನು ಮುಟ್ಟಿದನು. ಈ ಹೊತ್ತು ಶಂಖದ ನಾದವನ್ನು ಕೇಳುವ ಮೊದಲೇ ಎಲ್ಲಾ ಪಶುಗಳೂ ಅಲ್ಲಿ ಬಂದು ಕೂಡಿದ್ದವು. ಮತ್ತು ಸನ್ಯಾಸಿಯನ್ನು ಕಾಣದೆ ವ್ಯಾಕುಲ ದೃಷ್ಟಿಯಿಂದ ನಾಲ್ಕೂ ಕಡೆಗೂ ನೋಡುತ್ತಲಿದ್ದವು. ಈ ನೂತನ ದೃಶ್ಯವನ್ನು ನೋಡಿ ಸನ್ಯಾಸಿಗೂ ಆಶ್ಚರ್ಯವಾಯಿತು. ಸನ್ಯಾಸಿಯನ್ನು ನೋಡಿ ಮೃಗಗಳು ಆನಂದವನ್ನು ಪ್ರಕಟಿಸ ತೊಡಗಿದವು.

ಜನನೀ ಜನ್ಮಭೂಮಿಗೆ ವಂದಿಸಿ ಸನ್ಯಾಸಿಯು ವಾದ್ಯವನ್ನು ಎತ್ತಿದನು. ಮೃಗಗಳೂ ಕೂಡ ತಲೆವಾಗಿ ನಿಂತವು.

"ಸುಹಾಸಿನೀಂ, ಸುಮಧುರ ಭಾಷಿಣೀಂ ಸುಖದಾಂ, ವರದಾಂ, ಮಾತರಂ'' ಒಟ್ಟಿಗೆ ವಂದನೆಯನ್ನು ಸಮಾಪ್ತಿಗೊಳಿಸಿ ಸನ್ಯಾಸಿಯು ತೀವ್ರ ಧ್ವನಿಯನ್ನು ಮಾಡಿದನು.

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ''

ನಿತ್ಯಾನುಸಾರ ಎಲ್ಲಾ ಮೃಗಗಳೂ ಹಿಂತಿರುಗ ತೊಡಗಿದವು. ಆಗ ಸನ್ಯಾಸಿಯು ಚಿಂತಿತ ವದನದಿಂದ ಹೇಳತೊಡಗಿದನು—"ಮಿತ್ರರೇ ನಿಮ್ಮೊಡನೆ ನನ್ನ ಈ ಪೂಜೆಯು ಕೊನೆಯದಾಗಿದೆ. ಇಂದು ರಾತ್ರಿಯ ಗಾಯನದ ನಂತರ ನಾನು ನಿಮ್ಮನ್ನು ಬೀಳ್ಕೊಳ್ಳುವೆನು. ಮತ್ತು ಬಹುಶಃ ಆಗ ನಾನು ನಿಮ್ಮನ್ನು ಕೊನೆಯದಾಗಿ ನೋಡುವುದಾಗಿದೆ.

ಮೃಗಗಳ ಮೇಲೆ ವಜ್ರಪಾತವಾದಂತಾಯಿತು. ಅವುಗಳಿಗೆ ಬಹುಶಃ ಸನ್ಯಾಸಿಯ ಭಾಷೆಯು ಪರಿಚಿತವಾಗಿತ್ತು. ಅಧೀರವಾಗಿ ಸನ್ಯಾಸಿಯ ಕಾಲಬುಡದಲ್ಲಿ ಹೊರಳಾಡಿದವು. ಆಗ ಕಣ್ಣೀರನ್ನು ಒರಸಿ ಸನ್ಯಾಸಿಯು ಹೇಳತೊಡಗಿದನು—

"ನನ್ನ ಪ್ರಿಯ ಮಿತ್ರರೇ! ನಾನು ನನ್ನ ಇಚ್ಛೆಯಿಂದ ನಿಮ್ಮನ್ನು ಬಿಟ್ಟು ಹೋಗುವುದಲ್ಲ. ಇಲ್ಲಿಯ ಅರಸನಾದ ವಿಕ್ರಮನು ನಿಮ್ಮ ಮೇಲೆ ಮೋಹಿತನಾಗಿದ್ದಾನೆ. ನಿಮ್ಮನ್ನೆಲ್ಲಾ ಅವನ ಮೃಗಾಲಯಕ್ಕಾಗಿ ಹಿಡಿಸಿಕೊಡಬೇಕು ಎಂದು ಆತನ ಅಪ್ಪಣೆ ನನಗಿದೆ. ಆದರೆ ನಾನು ಸ್ವಾತಂತ್ರ್ಯತೆಯ ಉಪಾಸಕನು. ಸ್ವಾತಂತ್ರ್ಯದ ಮೌಲ್ಯವನ್ನೂ ಅರಿತವನು. ನಿಮ್ಮೊಡನೆ ಹಗೆತನವನ್ನು ಹೇಗೆ ಬೆಳೆಸಬಲ್ಲೆನು? ನಾನು ವಿಕ್ರಮನ ಆಜ್ಞೆಯನ್ನು ಉಲ್ಲಂಘಿಸಿದೆನು. ಇದೇ ಅಪರಾಧದ ಮೇಲೆ ಆತನು ನನ್ನನ್ನು ಬಂದಿಯನ್ನಾಗಿ ಮಾಡಿದ್ದನು. ಕೇವಲ ನಿಮ್ಮನ್ನು ಬೀಳ್ಕೊಳ್ಳುವುದಕ್ಕೆ ಮತ್ತು ನಿಮಗಿರುವ ವಿಪತ್ತನ್ನು ಸೂಚಿಸುವುದಕ್ಕೆ ಪ್ರಾತಃಕಾಲದ ವರೆಗೆ ಸಮಯವನ್ನು ಪಡೆದು ಬಂದಿರುವೆನು. ನಿಮ್ಮೆಲ್ಲರ ಮೇಲೆ ಸಂಕಟವು ಬಂದೊದಗಲಿದೆ. ರಾಜನು ನನ್ನನ್ನು ಕೈದು ಮಾಡಿಯೂ ಕೂಡ ನಿಮ್ಮನ್ನು ಹಿಡಿಯುವ ಉಪಾಯವನ್ನು ಮಾಡುವ ಸಂಭವವಿದೆ. ನೀವೆಲ್ಲರೂ ಆತನ ಮೃಗಾಲಯದಲ್ಲಿರಲು ಸಿದ್ಧರಿದ್ದೀರೋ?''

ಎಲ್ಲಾ ಮೃಗಗಳಲ್ಲಿಯೂ ಒಂದು ನವೀನ ಉತ್ಸಾಹವು ಉತ್ಪನ್ನವಾಯಿತು. 'ನಮಗೆ ನಮ್ಮ ಕಾಡು ಬಹಳ ಪ್ರೀತಿಯದ್ದಾಗಿದೆ. ಗುರುವರ್ಯರೇ, ಇದನ್ನು ಬಿಟ್ಟು ನಾವು ಜೀವ ರಕ್ಷೆಯನ್ನು ಇಚ್ಛಿಸುವುದಿಲ್ಲ. ಮೃಗಾಲಯದಲ್ಲಿ ಬಂಧಿಗಳಾಗಿ ಇರುವುದಕ್ಕಿಂತ ನಮ್ಮ ಕಾಡಿನಲ್ಲಿಯೇ ಸಿಂಹದ ಬಾಯಿಗೆ ತುತ್ತಾಗುವುದು ಉತ್ತಮ ಎಂಬುದನ್ನು ಹೇಳುತ್ತವೋ ಎಂಬಂತೆ ಅವೆಲ್ಲವೂ ಹಚ್ಚಗೆ ಹಸುರಾದ ಹುಲ್ಲು ವೃಕ್ಷಗಳ ಕೂಗುವ ಗೆಲ್ಲು ಮತ್ತು ಪರ್ವತಗಳ ಎತ್ತರವಾದ ತುದಿಗಳನ್ನು ಕರುಣಾ ದೃಷ್ಟಿಯಿಂದ ನೋಡತೊಡಗಿದವು. ಅವುಗಳು ತಮ್ಮ ಕಾಡಿನ ಸೌಂದರ್ಯದ ಮೇಲೆ ಮುಗ್ಧವಾಗಿ ಅದನ್ನು ನೋಡುವುದರಲ್ಲಿಯೇ ತಲ್ಲೀನವಾದವು. ಸನ್ಯಾಸಿಯು ತಲ್ಲೀನತೆಯನ್ನು ಭಂಗಮಾಡಿದನು—

"ಪ್ರಿಯ ಮಿತ್ರರೇ! ಈಗ ಹೋಗಿರಿ. ರಾತ್ರಿಯಲ್ಲಿ ತಿರುಗಿ ಒಟ್ಟಾಗುವಾ''—

ಮೃಗಗಳು ಇಂದು ಸನ್ಯಾಸಿಯ ಹತ್ತಿರದಿಂದ ಹೋಗಲು ತಯಾರಿರಲಿಲ್ಲ. ಅವೆಲ್ಲವೂ ಕೆಲವೊಮ್ಮೆ ಸನ್ಯಾಸಿಯ ಕಾಲಬುಡದಲ್ಲಿ ಹೊರಳಾಡುತ್ತಲೂ ಕೆಲವೊಮ್ಮೆ ವ್ಯಾಕುಲವಾಗಿ ಬೊಬ್ಬಿಡುತ್ತಲೂ ಅಳುತ್ತಲೂ ಕೆಲವೊಮ್ಮೆ ಆತನನ್ನು ಏಕದೃಷ್ಟಿಯಿಂದ ನೋಡುತ್ತಲೂ ಅಲ್ಲಿಯೇ ನಿಂತವು. ಸನ್ಯಾಸಿಯ ಆಕೃತಿಯ ಸಜೀವ ಚಿತ್ರವನ್ನು ತಮ್ಮ ಕಣ್ಣುಗಳಲ್ಲಿ ಎಳೆದುಕೊಳ್ಳುತ್ತವೋ ಎಂಬಂತೆ ನಿಂತುಕೊಂಡವು. ಮೃಗ ಶಾವಕಗಳೂ ಭಯದಿಂದ ಸನ್ಯಾಸಿಯ ಮುಖವನ್ನು ನೋಡುತ್ತಾ ಇದ್ದವು. ಸನ್ಯಾಸಿಯು ಕೂಡ ಅವುಗಳ ಮೇಲೆ ಕೈಯನ್ನು ಆಡಿಸುತ್ತ ಅವುಗಳಂತೆ ಅಳುತ್ತಿದ್ದನು.

೪

ಇಂದು ಚಂದ್ರನ ಬೆಳದಿಂಗಳಲ್ಲಿ ಸನ್ಯಾಸಿಯು ಕೊಳಲನ್ನು ಬಾರಿಸುವುದರಲ್ಲಿಯೇ ತಲ್ಲೀನನಾಗಿದ್ದನು. ಅವನು ಸ್ವಾತಂತ್ರ್ಯದ ಗೀತವನ್ನು ಹಾಡುತ್ತಿದ್ದನು. ಮೃಗಗಳು ಇಂದಿನ ಸಂಗೀತ ಸಮುದ್ರದ ಮಂಥನವನ್ನು ಮಾಡಿ ಸ್ವಾತಂತ್ರ್ಯದ ಅಮರತೆಯನ್ನು ಹುಡುಕುವರೋ ಎಂಬಂತೆ ನಿಂತುಕೊಂಡಲ್ಲೇ ತೂಗುತಿದ್ದವು.

ಈ ತಲ್ಲೀನತೆಯಲ್ಲಿಯೇ ಸಂಪೂರ್ಣ ರಾತ್ರಿಯು ಪ್ರತ್ಯೇಕವಾಯಿತೆಂದು ಯಾರಿಗೂ ತಿಳಿಯಲಿಲ್ಲ. ಉಷಾದೇವಿಯು ಸೌಂದರ್ಯವು ಹರಡಿದ ಕೂಡಲೇ ಸನ್ಯಾಸಿಯು ಕೊಳಲನ್ನು ಕೆಳಗಿಟ್ಟನು ಮತ್ತು ಹೀಗೆಂದನು—"ಮಿತ್ರರೇ ಈಗ ನನ್ನನ್ನು ಹೋಗಬಿಡಿರಿ. ಪರಮಾತ್ಮನು ನಿಮ್ಮ ಸ್ವಾತಂತ್ರ್ಯಕ್ಕೆ ಅಮರತ್ವವನ್ನು ಕೊಡಲಿ.''

ಎಲ್ಲಾ ಮೃಗಗಳೂ ಒಂದೇ ಸವನೆ ಸನ್ಯಾಸಿಯನ್ನು ಮುತ್ತಿದವು. ವ್ಯಥೆಯಿಂದ ಅವನ ಹೃದಯವು ಕರಗಿತು. ಅದೇ ಸಮಯದಲ್ಲಿ ರಾಜನ ಸೈನ್ಯವು ಬರುವ ಶಬ್ದವು ಕೇಳಬಂತು.

"ಸರಿ, ಸಹೋದರರೇ! ಈಗ ನನ್ನನ್ನು ಬೀಳ್ಕೊಳ್ಳಿರಿ; ನನ್ನ ಮೋಹವನ್ನು ಬಿಟ್ಟುಬಿಡಿರಿ'' ಎಂದು ಸನ್ಯಾಸಿಯು ಕಠಿಣತೆಯಿಂದ ಹೇಳಿದನು. ಮೃಗಗಳು ಸತೃಷ್ಣ ನೇತ್ರಗಳಿಂದ ತಿರುಗಿ ತಿರುಗಿ ಸನ್ಯಾಸಿಯನ್ನು ನೋಡುತ್ತ ಹೋದವು.

"ವಿಚಾರವೇನು ಹೇಳು. ನಾನು ಮೃಗಗಳನ್ನು ಹಿಡಿಯಲು ಸಕಲ ಸಲಕರಣೆ ಸಾಮಾನುಗಳನ್ನೂ ತೆಗೆದುಕೊಂಡು ಬಂದಿದ್ದೇನೆ. ನನಗೆ ಸಹಾಯವನ್ನು

[೧೧ನೆಯ ಪುಟವನ್ನು ನೋಡಿ]

ಮಂಗಳೂರು ಸಮಾಚಾರ

ಶ್ರೀ ಗೋಪಾಲ ಪೈಗಳಿಗೆ ಶಿಕ್ಷೆ

ಮೂಡಬಿದ್ರಿಯಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾದ ಶ್ರೀ ಗೋಪಾಲ ಪೈಗಳಿಗೆ ೩ ತಿಂಗಳ ಶಿಕ್ಷೆ ಹಾಗೂ ೧೦೦ ರು ಜುಲ್ಮಾನೆ ಮತ್ತು ಬಿ ಕ್ಲಾಸು ವಿಧಿಸಿರುವರು. ಅವರನ್ನು ಹಿಂಡಲಗಿ ಸೆರೆಮನೆಗೆ ಕಳುಹಿಸಲಾಗಿದೆ.

ಮಂಗಳೂರಲ್ಲಿ ಗಾಂಧಿ ಜಯಂತಿ

ಮಂಗಳೂರಲ್ಲಿ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ. ೨ರಿಂದ ೮ರ ವರೆಗೆ ಒಂದು ವಾರ ಗಾಂಧಿ ಜಯಂತಿ ವಿವಿಧ ಕಾರ್ಯಕ್ರಮಗಳಿಂದೊಡಗೂಡಿ ಯಶಸ್ವಿಯಾಗಿ ಜರಗಿತು. ತಾ. ೨ರಂದು ಪ್ರಾತಃಕಾಲ ಪ್ರಭಾತ ಫೇರಿ ಧ್ವಜ ವಂದನೆಗಳಾಗಿ ಬಡವರಿಗೆ ಅಕ್ಕಿ ಹಂಚುವುದು ನೆರವೇರಿತು. ಸಂಜೆಗೆ ಮೆರವಣಿಗೆಯಿಂದ ಮಂಗಳೂರು ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿತು. ಆ ದಿನ ಸಭೆಯಲ್ಲಿ ಗಾಂಧಿಜಯವರ ಕುರಿತು ಶ್ರೀಗಳಾದ ಕು. ಶಿವರಾವ್, ದಾಮೋದರ ಬಾಳಿಗ ಇವರು ಮಾತನಾಡಿದರು. ತಾ. ೩ರಂದು ಸಂಜೆಗೆ ಸಾರ್ವಜನಿಕ ಸಭೆಯು ಬೋಳೂರು ಬಸ್ತೀಬಿಯ ಬಳಿ ಶ್ರೀ ಈಶ್ವರ ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ದಾಮೋದರ ಬಾಳಿಗ, ಸಕೂರ್ ಸಾಹೇಬ್, ಕೆ. ಕೆ. ರೈ, ಎಚ್. ಕೆ. ತಿಂಗಳಾಯ ಪಿ. ಮೆಂಡನ್, ಇವರು ಭಾಷಣವಿತ್ತರು ತಾ ೪ರಂದು ಕಂಕನಾಡಿಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ. ಬಿ. ದಾಮೋದರ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಚ್. ಕೆ. ತಿಂಗಳಾಯ, ಪ್ರಭಾಕರ ಶೆಟ್ಟಿ, ಕೆ ಕೆ. ರೈ, ಇವರು ಭಾಷಣಗಳನ್ನಿತ್ತರು. ತಾ. ೫ರಂದು ಸಾರ್ವಜನಿಕ ಸಭೆಯು ಮೈದಾನಿನಲ್ಲಿ ಜರಗಿತು ಶ್ರೀ ಎಚ್. ಕೆ. ತಿಂಗಳಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೃಷ್ಣರಾವ್, ದಾಮೋದರ ಬಾಳಿಗ, ಎಸ್. ಕೆ. ಬಾಲಕೃಷ್ಣನ್ ಇವರು ಭಾಷಣಗಳನ್ನಿತ್ತರು. ತಾ. ೬ರಂದು ಬೊಕ್ಕಪಟ್ಣದಲ್ಲಿ ಶ್ರೀ ಬಿ. ಎಂ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀಗಳಾದ ಬಿ ಎಲ್. ವಿದ್ಯಾರ್ಥಿ, ಕೆ. ಕೆ. ರೈ, ದಾಮೋದರ ಬಾಳಿಗ ಇವರು ಭಾಷಣವಿತ್ತರು. ತಾ. ೭ರಂದು ಉರ್ವ ಮೈದಾನಿನಲ್ಲಿ ಸಾರ್ವಜನಿಕ ಸಭೆ ಶ್ರೀ ದಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು, ಶ್ರೀಗಳಾದ ಈಶ್ವರ ಎಂ. ಎಲ್. ಎ. ಎಚ್. ಕೆ ತಿಂಗಳಾಯ ಇವರು ಭಾಷಣವಿತ್ತರು ತಾ. ೮ರಂದು ಮೈದಾನಿನಲ್ಲಿ ಶ್ರೀ ಎ ಬಿ. ಶೆಟ್ಟಿ ಎಂ. ಎಲ್. ಇವರ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಎಂ ಡಿ ಅಧಿಕಾರಿ ದಾಮೋದರ ಬಾಳಿಗ ಇವರು ಭಾಷಣವಿತ್ತರು ಆ ದಿನ ಹಿಂದಿನ ಬೇರೆ ಬೇರೆ ದಿನಗಳಲ್ಲಿ ಏರ್ಪಡಿಸಲಾದ ಹಿಂದೀ ಕನ್ನಡ ವಾಕ್‌ಸ್ಪರ್ಧೆ, ನೂಲುವಸ್ಪರ್ಧೆ, ಗ್ರಾಮಕೈಗಾರಿಕೆಗಳ ಪ್ರದರ್ಶನ ಇವುಗಳಲ್ಲಿ ಜಯಹೊಂದಿದವರಿಗೆ ಹಾಗೂ ಪ್ರಶಸ್ತಿ ಪಡೆದವರಿಗೆ ಇನಾಮು ಪ್ರಶಸ್ತಿ ಪತ್ರಗಳನ್ನು ಕೊಡಲಾಯಿತು.

ನೂಲುವ ಸ್ಪರ್ಧೆಯಲ್ಲಿ ಶ್ರೀಮತಿ ಡಿ. ರತ್ನಾ ಇವರಿಗೆ ಪ್ರಥಮ ಬಹುಮಾನವೂ, ಶ್ರೀಮತಿ ಸರಸ್ವತಿ ಬಾಯಿ ಇವರಿಗೆ ದ್ವಿತೀಯಬಹುಮಾನವೂ ದೊರೆತಿದೆ ಹಿಂದೀ ವಾಕ್‌ಸ್ಪರ್ಧೆಯಲ್ಲಿ ಶ್ರೀ ಎಂ. ರಾಮಚಂದ್ರ ಪ್ರಭು ಇವರಿಗೆ ಪ್ರಥಮ ಬಹುಮಾನವೂ, ಶ್ರೀ ಶ್ರೀನಿವಾಸ ಭೋರ್ಕರ್ ಇವರಿಗೆ ದ್ವಿತೀಯ ಬಹುಮಾನ ದೊರೆತಿದೆ ಕನ್ನಡ ವಾಕ್ ಸ್ಪರ್ಧೆಯಲ್ಲಿ ಶ್ರೀ ಕು. ಶಿವರಾವ್ ಇವರಿಗೆ ಪ್ರಥಮ ಬಹುಮಾನವೂ ಶ್ರೀ ಬಿ. ಎಂ. ಇದಿನಬ್ಬ ಇವರಿಗೆ ದ್ವಿತೀಯ ಬಹುಮಾನವೂ ದೊರೆತಿದೆ. ಗ್ರಾಮಕೈಗಾರಿಕೆಯ ಪ್ರದರ್ಶನದಲ್ಲಿ ಶ್ರೀ ದೇಲಂಪಾಡಿ ಸುಬ್ರಾಯ ತಂತ್ರಿಗಳಿಗೆ ಪ್ರಥಮ ಬಹುಮಾನವೂ ಶ್ರೀಗಳಾದ ನಂದಾವರ ವಾಸುದೇವ ನಾಯಕ್ ಮತ್ತು ಪುಟ್ಟಪ್ಪ ಬೈಲ್ಪಡ ಎಂಡ್ ಸನ್ಸ್ ಇವರಿಗೆ ದ್ವಿತೀಯ ಬಹುಮಾನಗಳೂ ದೊರೆತಿವೆ.

ಹೀಗೆ ವಿಪುಲ ಕಾರ್ಯಕ್ರಮಗಳಿಂದ ಕೂಡಿದ ಗಾಂಧಿಜಯಂತಿಯು ಮಂಗಳೂರಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು.

ಕನ್ನಡ ಸಾಹಿತಿಗಳಿಗೆ ಸತ್ಕಾರ

ಕನ್ನಡ ಪ್ರಸಿದ್ಧ ಸಾಹಿತಿಗಳಾದ ಬೆಂಗಳೂರಿನ ಶ್ರೀ. ವಿ. ಸೀತಾರಾಮಯ್ಯ, ಧಾರವಾಡದ ಶ್ರೀ. ಜಿ. ಬಿ. ಜೋಶಿ, ಉತ್ತರ ಕನ್ನಡದ ಶ್ರೀ. ಮಾಂಜೆರೆಕರ್ ಪ್ರಭೃತಿಗಳನ್ನು ತಾ. ೨ರಂದು ಸಿ ಪಿ ಸಿ ಮೆನೆಜಿಂಗ್ ಡೈರೆಕ್ಟರಾದ ಶ್ರೀ. ವಿ ಎಸ್. ಕುಡ್ವರು ಒಂದು ಔತಣ ಕೂಟವನ್ನೇರ್ಪಡಿಸಿ ಸತ್ಕರಿಸಿದರು. ಆ ದಿನದ ಕೂಟದಲ್ಲಿ ಜಿಲ್ಲೆಯ ಹಾಗೂ ಮಂಗಳೂರಿನ ಹಲವು ಮಂದಿ ಸಾಹಿತಿಗಳು ಆಮಂತ್ರಿತರಾಗಿ ಭಾಗವಹಿಸಿದ್ದರು

ಕಲ್ಚರಲ್ ಎಸೋಸಿಯೇಶನಿನಲ್ಲಿ

ಶ್ರೀ. ಜಿ ಬಿ ಜೋಶಿ ಮತ್ತು ಶ್ರೀ ವಿ ಸೀತಾರಾಮಯ್ಯ ಪ್ರಭೃತಿಗಳನ್ನು ಮಂಗಳೂರು ಕಲ್ಚರಲ್ ಎಸೋಸಿಯೇಶನಿನವರು ತಾ ೨ರಂದು ಆಮಂತ್ರಿಸಿ ಸತ್ಕರಿಸಿದ್ದರು ಆ ಕೂಟಕ್ಕೆ ಹಲವು ಮಂದಿ ಜಿಲ್ಲೆಯ ಸಾಹಿತಿಗಳೂ ಕಲಾವಿದರೂ ಆಮಂತ್ರಿತರಾಗಿದ್ದರು. ದಸರೆಯ ಉತ್ಸವವನ್ನು ಇನ್ನಷ್ಟು ಯಶಸ್ವಿಯಾಗಿ ಹೇಗೆ ಆಚರಿಸಬಹುದೆಂಬ ವಿಷಯವಾಗಿ ವಿಚಾರವಿನಿಮಯ ಮಾಡಲಾಯಿತು ಶ್ರೀಗಳಾದ ಎಸ್ ಎಸ್ ಕಿಲ್ಲೆ ಮತ್ತು ಸುಬ್ರಾಯಾಚಾರಿಗಳೊಡನೆ ಅತಿಥಿಗಳು ಯಕ್ಷಗಾನದವಿಚಾರವಾಗಿ ಅನೇಕ ಪ್ರಶ್ನೆಗಳನ್ನು ಕೇಳಿದರು. ಜಿಲ್ಲೆಯ ವಿಶಿಷ್ಟ ಕಲೆಯಾದ ಯಕ್ಷಗಾನದ ಕುರಿತು ತಿಳಿಕೊಳ್ಳಲು ಅವರು ಹೆಚ್ಚಿನ ಆತುರರಿದ್ದಂತೆ ತೋರಿತು

ದ. ಕ. ಪ್ರೆಸ್ ವರ್ಕರ್ಸ್ ಯೂನಿಯನಿನ ಇದರ ಮಹಾಸಭೆ

ಮೇಲಿನ ಯೂನಿಯನಿನ ವಾರ್ಷಿಕ ಮಹಾಸಭೆಯು ಕನಿಷ್ಟ ಹಾಜರಿ ಇಲ್ಲದ ಕಾರಣ ಸಪ್ಟಂಬರ ತಾ ೨೭ರಲ್ಲಿ ಜರಗದೆ ಇದೇ ಅಕ್ಟೋಬರ ತಾ. ೫ರ ಸಾಯಂ. ೪ ಗಂಟೆಗೆ ಮುಂದುವರಿಸಲಾಯಿತು ಆ ದಿನ ಕೂಡಾ ಕನಿಷ್ಟ ಹಾಜರಿ ಇಲ್ಲದುದರಿಂದ ಪ್ರಶ್ನೆ ಅದನ್ನು ಇದೇ ಅಕ್ಟೋಬರ ತಾ. ೧೨ನೇ ಭಾನುವಾರ ಸಾಯಂ ಘಂಟೆ ೪ಕ್ಕೆ ಯೂನಿಯನ್ ಆಫೀಸಿನಲ್ಲಿ ಜರಗಿಸಲು ಹಾಜರಿದ್ದ ಮಹಾಸಭೆಯ ಸದಸ್ಯರು ನಿರ್ಧರಿಸಿದ್ದಾರೆ. ಆದುದರಿಂದ ಅಕ್ಟೋಬರ ತಾ ೧೨ನೇ ಭಾನುವಾರ ಸಾಯಂ ಘಂಟೆ ೪ಕ್ಕೆ ಯೂನಿಯನ್ ಆಫೀಸಿನಲ್ಲಿ ನಡೆಯುವ ಮಹಾಸಭೆಗೆ ಯೂನಿಯನಿನ ಎಲ್ಲಾ ಸದಸ್ಯರು ತಪ್ಪದೆ ಬರಬೇಕಾಗಿ ಈ ಮೂಲಕ ವಿನಂತಿಸಲಾಗಿದೆ ಹೊಸವರ್ಷದ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆಗಳಾಗಬೇಕಾದುದರಿಂದ ಸಭೆಯು ಅತೀ ಮುಖ್ಯವಾದುದು. ಎಲ್ಲಾ ಸದಸ್ಯರೂ, ಕಾರ್ಯಕಾರಿ ಮಂಡಳಿಯ ಸದಸ್ಯರೂ ಈ ಪತ್ರಿಕಾ ಪ್ರಕಟಣೆಯನ್ನು ಆಮಂತ್ರಣವಾಗಿ ತಿಳಿದು ಅಗತ್ಯವಾಗಿ ಬರಬೇಕೆಂದು ವಿನಂತಿ.

ದ. ಕ., ಜಿಲ್ಲಾ ಹರಿಜನ ಲೇಬರ್ ಲೀಗ್

ಇದೇ ತಿಂಗಳ ತಾ. ೫ರಂದು ಇದರ ಒಂದು ಮಹಾ ಸಭೆಯು ಬೋಳೂರು ಸಂಗಮ ಹರಿಜನರ ಕೊಲನಿಯಲ್ಲಿ ಶ್ರೀ ಕೆ. ಈಶ್ವರ, ಎಂ. ಎಲ್ ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು, ಇದೇ ತಿಂಗಳ ಅಂತ್ಯದೊಳಗೆ ಮುಂದಾಲದ ಒಂದು ಸಭೆಯನ್ನು ಕರೆಯಬೇಕೆಂದು ನಿರ್ಣಯ ಮಾಡಲಾಯಿತು. ಲೀಗಿನ ಆಶ್ರಯದಲ್ಲಿ ಒಂದು ಭಜನೆಯನ್ನು ಬೋಳೂರು ಸಂಗಮದಲ್ಲಿರುವ ಹರಿಜನ ಕೊಲನಿಯಲ್ಲಿ ಮಾಡಬೇಕೆಂದು ಪಾಸುಮಾಡಲಾಯಿತು— ವಿದ್ಯಾವಂತರನ್ನು ಮೆಂಬರರನ್ನಾಗಿ ಸೇರಿಸುವ ವಿಷಯದಲ್ಲಿ ಅನೇಕ ಮಂದಿ ಭಿನ್ನ ಅಭಿಪ್ರಾಯ ಪಟ್ಟವರಿಂದ ಈ ಕುರಿತು ಶ್ರೀ ಕೆ. ಈಶ್ವರನವರು ಆಗತ್ಯವಾಗಿ ತೆಗೆದುಕೊಳ್ಳಬೇಕೆಂದು ಎಷ್ಟು ಒತ್ತಾಯ ಮಾಡಿದರೂ ಸಂಘದ ಮೆಂಬರರು ಒಪ್ಪದೆ ಕಡೆಗೆ ಈ ವಿಷಯವನ್ನು ಮುಂದರಿಸಲಾಯಿತು. ಸಂಘದ ಆಶ್ರಯದಲ್ಲಿ ನಡೆಯುವಂಥಾ ಮದುವೆ ಮರಣ, ಇತ್ಯಾದಿ ಕಾರ್ಯಗಳನ್ನು ಮಾಡಲಿಕ್ಕೆ ೧೫ ಮಂದಿಯಿಂದ ಕೂಡಿದ ಒಂದು ಕೂಟವನ್ನೂ ನೇಮಕ ಮಾಡಲಾಯಿತು.

ಫಲಪುಷ್ಪ ಪ್ರದರ್ಶನ

ಮಂಗಳೂರು ೯ನೆಯ ಫಲಪುಷ್ಪ ಪ್ರದರ್ಶನವು ಕಳೆದ ಆದಿತ್ಯವಾರ ಮಧ್ಯಾಹ್ನ ೧೧ಗಂಟೆಗೆ ಗವರ್ನಮೆಂಟ್ ಕಾಲೇಜಿನಲ್ಲಿ ಜರಗಿತು.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಬಿಲ್ಲವರ ಎಸೋಸಿಯೇಶನಿನ ನೇತೃತ್ವದಲ್ಲಿ ಪ್ರತಿ ರವಿವಾರ ಸಾಯಂಕಾಲ ೫-೩೦ ಗಂಟೆಗೆ ಸರಿಯಾಗಿ ಪೂಜ್ಯ ಬ್ರಹ್ಮ ಶ್ರೀ ನಾರಾಯಣಗುರು ದೇವರ ಪೂಜೆಯನ್ನು ಎಸೋಸಿಯೇಶನಿನ ಸದನದಲ್ಲಿ (೧೭ ರಘುನಾಥ ದಾದಾಜಿ ರಸ್ತೆ, ಮುಂಬ್ಯಾ ಕೋಟೆ) ಆಚರಿಸಲಿರುವುದೆಂದೂ, ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ ಬಿಲ್ಲವರ ಎಸೋಸಿಯೇಶನಿನ ಸದಸ್ಯರಾಗಲು 'ಬೆಲ್ಚಡ' ಯೆಂಬ ಮಳಯಾಳಿ ಬಿಲ್ಲವರಿಗೂ ಏನೊಂದು ಆತಂಕವಿರುವುದಿಲ್ಲವೆಂದೂ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಶ್ರೀ ನಾರಾಯಣ ಕಿಲ್ಲೆಯವರ ಭಾಷಣ

ಬೆಳಗಾವಿಯಲ್ಲಿ ಶ್ರೀ ಗಂಗಾಧರ ರಾವ್ ದೇಶಪಾಂಡೆಯವರ ಅಧ್ಯಕ್ಷತೆಯಿಂದ ಕೂಡಿದ ಖಾದಿ ಸಂತೆಯ ಸಮಾರೋಪ ಸಭೆಯಲ್ಲಿ ಶ್ರೀ ನಾರಾಯಣ ಕಿಲ್ಲೆಯವರು ಖಾದೀ ಹಾಗೂ ಗಾಂಧಿಜಿಯವರ ಜೀವನ ಇವುಗಳ ವಿಷಯ ಭಾಷಣವಿತ್ತರು.

ಮಂಗಳೂರು ಸ್ಟುಡೆಂಟ್ಸ್ ಯೂನಿಯನ್

ಇದರ ಕಾರ್ಯಕಾರೀ ಸಮಿತಿಯ ಸಭೆಯು ತಾ ೩ರಲ್ಲು ಶ್ರೀ ಜಿನರಾಜ ಹೆಗ್ಡೆ ಎಂ ಎಲ್ ಎ (ಸೆಂಟ್ರಲ್) ಇವರ ಅಧ್ಯಕ್ಷತೆಯಿಂದ ಜರಗಿ ರಷ್ಯಕ್ಕೆ ಸಹಾನುಭೂತಿ ಪ್ರಕಟಿಸಿ, ಅದರ ಬಗ್ಗೆ ಸೋವಿಯೆಟ್ ದಿನಾಚರಣೆ ಮಾಡಬೇಕೆಂದು ನಿರ್ಣಯವಾಗಿದೆ, ಅಖಿಲ ಭಾರತ ವಿದ್ಯಾರ್ಥಿ ಸಂಘದ ಜನರಲ್ ಸೆಕ್ರೆಟರಿ ಜನಾಬ್ ಫರೂಕಿಯರನ್ನೂ ಸ್ಟುಡೆಂಟ್ ಪತ್ರಿಕಾ ಸಂಪಾದಕರಾದ ಶ್ರೀ ಲಲಿತಾ ಶಂಕರರನ್ನೂ ಬಿಡುಗಡೆ ಮಾಡುವ ಬಗ್ಗೆ ಸರಕಾರವನ್ನು ಪ್ರಾರ್ಥಿಸುವಠರಾವಾಯಿತು

ಹಿಂದೂ ಮಹಾ ಸಭಾ ಪರಿಷತ್ತು

ದ ಕ. ಜಿಲ್ಲಾ ಹಿಂದೂ ಮಹಾ ಸಭಾ ಪರಿಷತ್ತು ಈಸ್ಟರಿನಲ್ಲಿ ಮಂಗಳೂರಲ್ಲಿ ಜರಗಿಸಬೇಕೆಂದು ಡಾ। ಮೂಂಜೆಯವರನ್ನು ಅದಕ್ಕೆ ಆಹ್ವಾನಿಸಬೇಕೆಂದೂ ನಿರ್ಣಯವಾಗಿರುವುದಾಗಿ ತಿಳಿದುಬಂದಿದೆ

ರೆವಿನ್ಯೂ ಬೋರ್ಡ್ ಮೆಂಬರ್

ಮದ್ರಾಸು ಪ್ರಾಂತದ ರೆವಿನ್ಯೂ ಬೋರ್ಡ್ ಮೆಂಬರರಾದ ಜೆ ಬಿ ಬ್ರೌನರು ತಾ ೧೩ಕ್ಕೆ ನಮ್ಮ ಜಿಲ್ಲೆಗೆ ಬರಲಿರುವರೆಂದು ತಿಳಿದಿದೆ.

ಆಸ್ಟಿನರ ಆಗಮನ

ಮದ್ರಾಸು ಗವರ್ನರರ ಎಡ್ವೈಸರರಲ್ಲೊಬ್ಬರಾದ ಆಸ್ಟಿನರು ಕಳೆದ ೬ರ, ಮಂಗಳೂರಿಗೆ ಬಂದಿದ್ದರು ಇಲ್ಲಿ ಯುದ್ಧಕ್ಕೆ ಸಹಾಯ ನೀಡಬೇಕೆಂದು ಒಂದು ಭಾಷಣವಿತ್ತರು

ಸೆಂಟ್ರಲ್ ಕೋಪರೇಟಿವ್ ಸ್ಟೋರ್

ಮಂಗಳೂರು ಸೆಂಟ್ರಲ್ ಕೋಪರೇಟಿವ್ ಸ್ಟೋರಿನ ಶಾಖೆಯೊಂದನ್ನು ಇದೇ ೫ನೇ ತಾರೀಕಿನ ಬೆಳಗ್ಗೆ ೮-೩೦ ಗಂಟೆಗೆ ಸೆಂಟ್ರಲ್ ಮಾರ್ಕೆಟ್ ಪೇಟೆಯಲ್ಲಿ ಶ್ರೀ ವಿಟ್ಟಪ್ಪನವರಿಗೆ ಸಂಬಂಧ ಪಟ್ಟ ಒಂದು ಅಂಗಡಿಯಲ್ಲಿ ಮಂಗಳೂರಿನ ಸಹಕಾರಿ ಸಂಘಗಳ ಡೆಪ್ಯುಟಿ ರೆಜಿಸ್ಟ್ರಾರರಿಂದ ತೆರೆಯಲಾಯಿತು.

ಮುನ್ಸಿಪಲ್ ಸಭೆ

ಬರುವ ಮಂಗಳೂರು ಮುನ್ಸಿಪಲ್ ಸಭೆಯು ತಾ. ೧೩ರಂದು ಸಂಜೆ ೫-೩೦ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಜರಗುವುದು.

ಸ್ಥಳೀಯ ಬಾಲಾಜಿ ಟೋಕೀಸಿನಲ್ಲಿ ಅತಿ ಶೀಘ್ರದಲ್ಲಿಯೇ ಲೋಕವಿಖ್ಯಾತವಾದ 'ಬಂಧನ್' ಚಿತ್ರವು ಪ್ರದರ್ಶಿಸಲ್ಪಡುವುದು.

ವಿದ್ಯಾ ಇಲಾಖೆ ಡೈರೆಕ್ಟರರ ಆಗಮನ

ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರ್ ಸ್ಟೇಥರವರು ಕೊಯಂಬುತ್ತೂರು ಡಿವಿಜನಲ್ ಇನ್‌ಸ್ಪೆಕ್ಟರರೊಡನೆ ತಾ. ೩ರಲ್ಲು ದ. ಕನ್ನಡ ಜಿಲ್ಲೆಗೆ ಬಂದಿದ್ದು ಇಲ್ಲಿನ ಡಿ. ಇ. ಓ. ಇನ್‌ಸ್ಪೆಕ್ಟರರೊಡನೆ ಸಂಭಾಷಿಸಿ ಕಾರ್ಕಳ ಮಾರ್ಗವಾಗಿ ಕುಂದಾಪುರಕ್ಕೆ ಹೋಗಿ ಅಲ್ಲಿ ಉಡುಪಿ ಕುಂದಾಪುರ ಡಿ. ಇನ್‌ಸ್ಪೆಕ್ಟರರೊಡನೆ ಮಾತನಾಡಿ ಬೈಂದೂರು ಮಿಡ್ಲ್ ಸ್ಕೂಲನ್ನು ಸಂದರ್ಶಿಸಿ ತಾ. ೩ರಂದು ಇಲ್ಲಿಂದ ಹೊರಟುಹೋದರೆಂದು ತಿಳಿದಿದೆ.

ಬಿಸೆಂಟ್ ದಿನಾಚರಣೆ

ತಾ ೧ರಲ್ಲು ಬಿಸೆಂಟ್ ದಿನಾಚರಣೆಯು ಬಿಸೆಂಟ್ ಹುಡುಗಿಯರ ಶಾಲೆಯಲ್ಲಿ ಶ್ರೀ. ಏ ಬಿ. ಶೆಟ್ರ ಅಧ್ಯಕ್ಷತೆಯಿಂದ ಜರಗಿತು ಶ್ರೀಮತಿ ಯಂ ಶಾರದಾಂಬಾಳ್ ಇವರು ಬಿಸೆಂಟರ ಜೀವನದ ಕುರಿತು ಭಾಷಣವಿತ್ತರು.

ಸೋವಿಯೆಟ್ ದಿನಾಚರಣೆ

ಮಂಗಳೂರು ವಿದ್ಯಾರ್ಥಿ ಸಂಘದವರು ಸೋವಿಯೆಟ್ ದಿನಾಚರಣೆಯನ್ನು ತಾ. ೯ರಂದು ಆಚರಿಸಿದರು ಧ್ವಜಾರೋಹಣ, ಮೆರವಣಿಗೆ ಸಾರ್ವಜನಿಕ ಸಭೆಗಳಿದ್ದುವು

[೮ನೆಯ ಪುಟವನ್ನು ನೋಡಿ]

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 23/1941

ಕೃಷ್ಣಪ್ಪ ಸಹಾ — ಅರ್ಜಿದಾರರು.

ಸೋಮಯ್ಯ ಸಹಾ — ಎದುರು.

10ನೇ ಎದುರು ಸುಮಮ್ಮ-ಕೋಟ್ಯಪ್ಪ ಹೆಂಗ್ಸಿನ ಮಗಳು ನ್ಯಾಯತರ್ಪು ಗ್ರಾಮದಲ್ಲಿರುವವಳು— ಇವಳಿಗೆ

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರರು ಕುಟುಂಬದ ಆಸ್ತಿ ಮೇಲಾದ ರೂ. 1000ದ ಆರುವಾರು ದಸ್ತಾವೇಜು ರದ್ದಿನ ಬಗ್ಗೆ ಮೈನರ್ ಮಕ್ಕಳಿಗೆ ಬಾಧಿಸತಕ್ಕದಲ್ಲವೆಂಬ ಸಬೂಸಿನ ಮೇಲೂ ದಾವಾ ಅರ್ಜಿದಾರರು ಮಾಡಿ ಸದ್ರಿ ಅರ್ಜಿ ವಿಚಾರಣೆಯು ತಾ 23-10 1941ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆ ಬಗ್ಗೆ ಇಟ್ಟಿರುತ್ತದೆ. ಸದ್ರಿ ಅರ್ಜಿದಾರರು ಪ್ರಾರ್ಥಿಸಿದ ಸಬೂಸಿನಲ್ಲಿ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ವಾಯಿದೆ ದಿವಸ ಕೋರ್ಟಿಗೆ ಹಾಜರುಮಾಡಿಕೊಳ್ಳತಕ್ಕದ್ದು ಸದ್ರಿ ವಾಯಿದೆ ದಿನ್ನ ಪೂರ್ವಾಹ್ನ 11 ಘಂಟೆಗೆ ಉದಜರಿಸುವರೆ ತಪ್ಪಿದ್ದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನವಾಗುವದೆಂದು ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಸಲಾಗಿರುತ್ತದೆ.

ಪುತ್ತೂರು 7-10-41 } N. V. Kolathaya Vakil for Petitioners

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ ೫೬೩/41.

ಅನಂತ್ತ ಕಂಪ್ತ — ವಾದಿ.

ಮತ್ತು

ಅಬ್ದುಲ್ಲಬ್ಯಾರಿ — ಪ್ರತಿವಾದಿ

ಮೇಲಿನ ವಾದಿಯು ನಿಮ್ಮ ಮೇಲೆ ನೋಟಿನ ಐವೇಜಿನ ವಸೂಲಿ ಬಗ್ಗೆ ದಾವಾಮಾಡಿರುತ್ತಾನೆ. ಸದ್ರಿ ದಾವೆಯು ಮೇಲಿನ ಕೋರ್ಟಿನಲ್ಲಿ ತಾ. 25-10-1941ಕ್ಕೆ ತನಿಖೆಗೆಯಿಟ್ಟಿರುತ್ತದೆ. ಆ ದಿವಸ 10 ಘಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗುವರೆ ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸ್ ಪಾರ್ಟಿಯಾಗಿ ಮಾಡಲಾಗುವುದು.

(ಕೋರ್ಟು ಹುಕುಂ ಪ್ರಕಾರ)

ಮಂಗಳೂರು 7-10-1941 } N. Krishna Bhat, Counsel for Plaintiff.

ಲೆನಿನ್‌ಗ್ರಾಡಿನಿಂದ ಕ್ರಿಮಿಯದ ವರೆಗೆ ಘೋರ ಸಂಗ್ರಾಮ

ಮೋಸ್ಕೋವನ್ನು ಸುತ್ತುಗಟ್ಟುವ ಪ್ರಯತ್ನ

ಅಮೆರಿಕನ್ ಹಡಗುಗಳು ರಣಕ್ಷೇತ್ರಕ್ಕೆ ಹೋಗುವವೆ?

ರಶ್ಯದ ರಾಜಧಾನಿಯಾದ ಮೋಸ್ಕೋವನ್ನು ಸುತ್ತುಗಟ್ಟುವುದಕ್ಕಾಗಿ ಜರ್ಮನರು ಲೆನಿನ್‌ಗ್ರಾಡಿನಿಂದ ಕ್ರಿಮಿಯದ ವರೆಗೆ ಸುಮಾರು ೨೦೦ ಮೈಲು ವಿಸ್ತಾರದ ರಣಭೂಮಿಯಲ್ಲಿ ಯುದ್ಧ ಪ್ರಾರಂಭಿಸಿರುವರು. ಈ ಯುದ್ಧವು ದಿನದಿಂದ ದಿನಕ್ಕೆ ಉಗ್ರವಾಗುತ್ತಿದೆ. ಉತ್ತರ ಮತ್ತು ದಕ್ಷಿಣ ಎರಡು ಕಡೆಗಳಿಂದಲೂ ಜರ್ಮನರು ಧಾಳಿಗೈಯ್ಯುತ್ತಿರುವರು. ಮೋಸ್ಕೋದ ಸಂರಕ್ಷಣೆಯಲ್ಲಿ ತೊಡಗಿದ ರಶ್ಯನ್ ವೈಮಾನಿಕರು ಕೆಲವು ಜರ್ಮನ್ ವಿಮಾನಗಳನ್ನುರುಳಿಸಿದರಂತೆ. ಜರ್ಮನ್ ವಿಮಾನಗಳು ಒಂದರ ಹಿಂದೊಂದರಂತೆ ಮೋಸ್ಕೋಗೆ ಬಾಂಬೆಸೆಯಲು ಪ್ರಯತ್ನ ಮಾಡಿದುವಂತೆ. ಪೂರ್ವದ ರಣಭೂಮಿಯ ಮಧ್ಯ ಭಾಗವು ಭೇದಿಸಲ್ಪಟ್ಟಿತೆಂದು ಹೇಳಲಾಗಿದೆ.

ಅಮೆರಿಕನ್ ಹಡಗುಗಳು ರಣಕ್ಷೇತ್ರಕ್ಕೆ ಹೋಗುವವೆ?

ತಾಟಸ್ಥ್ಯ ನಿರ್ಣಯದ ತಿದ್ದುಪಡಿ

ತಾಟಸ್ಥ್ಯ ನಿರ್ಣಯದ ತಿದ್ದುಪಡಿ ಮಾಡುವ ವಿಷಯ ಅಮೆರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಅಧಿಕಾರಿಗಳೊಡನೆ ಈಗ ಮಾತುಕತೆ ನಡೆಸುತ್ತಾ ಇದ್ದಾರೆ. ಬೇಗನೇ ಕೊನೆಯ ನಿರ್ಣಯವಾಗುವುದೆಂದು ತಿಳಿದಿದೆ. ಅಮೆರಿಕನ್ ವ್ಯಾಪಾರೀ ಹಡಗಗಳು ಯುದ್ಧಾಸ್ತ್ರಗಳಿಂದ ಸಜ್ಜಿತವಾಗಿ ರಣಕ್ಷೇತ್ರಕ್ಕೆ ಮತ್ತು ಯುದ್ಧೋದ್ಯಮ ರಾಷ್ಟ್ರಗಳ ಬಂದರಗಳಿಗೆ ಹೋಗುವುದಕ್ಕೆ ಅವಕಾಶ ಕೊಡುವಂತೆ ತಾಟಸ್ಥ್ಯ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ರೂಸ್‌ವೆಲ್ಟರ ಅಭಿಪ್ರಾಯವಂತೆ. ಈ ತಿದ್ದುಪಡಿಗಳಿಗೆ ಅಮೆರಿಕನ್ ಕಾಂಗ್ರೆಸ್ ಪ್ರಮುಖರು ಒಪ್ಪಿರುವರೆಂದೂ ತಿಳಿದಿದೆ.

ಮಧ್ಯ ರಣಭೂಮಿಯ ಕಾಳಗ

ಮಧ್ಯ ರಣಭೂಮಿಯ ವ್ಯಾಜಮಾ ಮತ್ತು ಬ್ರಿಯಾನ್‌ಸ್ಕಗಳಲ್ಲಿ ಘೋರ ಕಾಳಗವಾಗುತ್ತಿದೆ

ಕೈದಿಗಳನ್ನೂ ಅದಲುಬದಲು ಮಾಡುವುದು

ಜರ್ಮನ್ ಮತ್ತು ಬ್ರಿಟಿಷ್ ಕೈದಿಗಳನ್ನು ಅದಲುಬದಲು ಮಾಡುವ ವಿಚಾರವು ಉಭಯ ರಾಷ್ಟ್ರಗಳಲ್ಲಿಯೂ ನಡೆಯುತ್ತಿದೆ.

ರಶ್ಯನ್ ಯುದ್ಧ ಕೊನೆಗಾಣಿಸಲು

ರಶ್ಯನ್ ಯುದ್ಧವನ್ನು ಕೊನೆಗಾಣಿಸಲು ಜರ್ಮನರು ಒಂದು ಪ್ರಚಂಡ ಧಾಳಿಮಾಡಿರುವರೆಂದು ತಿಳಿದುಬಂದಿದೆ. ಕೀವ್ ಪಟ್ಟಣದ ಪತನವಾದ ಮೇಲೆ ರಶ್ಯನರು ಸ್ವಲ್ಪ ಹಿಂಜರಿಯಬೇಕಾಯಿತೆಂಬುದು ನಿಜವಾದರೂ ಆ ಅವಧಿಯಲ್ಲಿ ರಶ್ಯನರೂ ತಮ್ಮ ಸೈನ್ಯವನ್ನು ಪುನರ್ಘಟಿಸಿಕೊಂಡಿರುವರೆಂದು ತಿಳಿಯುತ್ತದೆ

ರಶ್ಯನ್ ರಣಭೂಮಿಗೆ ಬ್ರಿಟಿಷ್ ಸೇನಾಪತಿಗಳು.

ಜರ್ಮನ್ ಯುದ್ಧ ಕ್ರಮವನ್ನು ನೋಡಿಬರಲು ಮೂವರು ಬ್ರಿಟಿಷ್ ಸೇನಾಪತಿಗಳು ರಶ್ಯನ್ ರಣಭೂಮಿಗೆ ಹೋಗಿರುವರಂತೆ.

ಮೋಸ್ಕೋದ ಕಡೆಗೆ ಧಾಳಿಯಿಡುತ್ತಾರೆ.

ಜರ್ಮನರು ಕ್ರಿಮಿಯದಲ್ಲಿ ಕಾಲಿಟ್ಟಿಲ್ಲವಾದರೂ ಅದರ ದ್ವಾರದಲ್ಲಿ ಅತ್ಯಂತ ಭೀಕರವಾದ ಕಾಳಗವು ನಡೆಯುತ್ತಿದೆ. ಪೆರಿಕೋಪ ಭೂಕಂಠವನ್ನು ವಶಪಡಿಸಲು ಜರ್ಮನರಿಗೆ ಸಾಧ್ಯವಾಗಲಿಲ್ಲ. ಕ್ರಿಮಿಯದ ರಕ್ಷಣೆಯ ಸಲುವಾಗಿ ರಶ್ಯನರು ಬಹಳ ಸಿದ್ಧತೆ ಮಾಡಿರುವರು. ಜರ್ಮನರು ಲೆನಿನ್ ಗ್ರಾಡಿನಿಂದ ಹತ್ತುಹನ್ನೆರಡು ಮೈಲು ದೂರದಲ್ಲಿರುವುದಾಗಿ ತಿಳಿದುಬಂದಿದೆ

ಬಲ್ಗೇರಿಯ ಸೈನ್ಯವು ಜರ್ಮನ್ ಸಹಾಯಕ್ಕೆ ಹೊರಟಿತು.

ಬಲ್ಗೇರಿಯದ ತಾಟಸ್ಥ್ಯವು ದಿನದಿಂದ ದಿನಕ್ಕೆ ಸಡಿಲಾಗುತ್ತಾ ಬರುತ್ತಿದೆಯೆಂದು ತಿಳಿದುಬಂದಿದೆ. ಬಲ್ಗೇರಿಯನ್ ಬಂದರಗಳಿಂದ ಕೆಲವು ಹಡಗಗಳು ರುಮೇನಿಯನ್ ಕರಾವಳಿ ಮಾರ್ಗವಾಗಿ ಅಕೆರಮನ್ ಹಾಗೂ ನಿಕಲೋವ ಕಡೆಗೆ ಹೋಗಿರುವುದೆಂದು ತಿಳಿದಿದೆ.

ಡಿವೆಲರ ಭಾಷಣ

ಹಲವು ಕಡೆಗಳಲ್ಲಿ ದೊಡ್ಡ ರಾಷ್ಟ್ರಗಳು ಸಣ್ಣ ರಾಷ್ಟ್ರಗಳ ವಿಷಯದಲ್ಲಿ ಏನೇನೂ ಆಸ್ಥೆ ವಹಿಸಿಲ್ಲವಾದರೂ, ನಮ್ಮ ತಾಟಸ್ಥ್ಯವನ್ನು ಇದು ವರೆಗೆ ಇಂಗ್ಲೆಂಡು ಕಾಪಾಡಿಕೊಂಡು ಬಂದಿರುವುದೆಂದು ಐಯರ್ಲಂಡಿನ ಮುಖ್ಯ ಮಂತ್ರಿ ಡಿವೆಲರಾ ಒಂದು ಭಾಷಣದಲ್ಲಿ ಹೇಳಿದರು.



ಪ್ರಕಾಶಂ

ಚೀನ—ಜಪಾನ್ ಕಾಳಗ

ಹುನಾನ್ ಪ್ರಾಂತದಲ್ಲಿ ಭರದಿಂದ ಆಗುತ್ತಿದೆ. ಚೀನಿಯರು ೫೦ ಸಾವಿರ ಜಪಾನೀ ಸೇನೆಯನ್ನು ಸುತ್ತು ಹಾಕಿರುವರು.

ತಾಲೂಕು ಸಮಾಚಾರ

[೬ನೆಯ ಪುಟದಿಂದ ಮುಂದುವರಿದುದು]

ಶಾರದಪೂಜೆ ರಾಮಕುಂಜ

ಶ್ರೀ ಶಾರದಾ ಪೂಜೆಯು ಕಳೆದ ತಾ. ೩೦ರಂದು ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯಲ್ಲಿ 'ಭಾರತೀ ವಿಲಾಸ ಸಮಾಜ'ದ ಆಶ್ರಯದಲ್ಲಿ ಜರಗಿತು. ಬಹು ಸಂಖ್ಯೆಯಲ್ಲಿ ಊರ ಮಹನೀಯರೂ ನೆರೆದಿದ್ದರು. ಶಾರದಾ ಪೂಜೆ, ಸರಸ್ವತೀ ಪ್ರಾರ್ಥನೆ, ಭಾಷಣ, ಉಪಹಾರ ಮೊದಲಾದ ಕಾರ್ಯಕ್ರಮಗಳಿದ್ದುವು.

ಕಾಸರಗೋಡು

ಸುವರ್ಣ ನದಿಯಲ್ಲಿ ನೆರೆ!

ತಾ ೨೦-೯ನೆಯ ದಿನ ರಾತ್ರಿ ಸುಮಾರು ೧೨ ಗಂಟೆ ಸಮಯಕ್ಕೆ ಮಳೆ ಪ್ರಾರಂಭಿಸಿ, ವಿಪರೀತ ಸುರಿದು ೨, ೩, ಗಂಟೆ ರಾತ್ರಿಗೆ ಪೊಸಡಿ ಗುಂಪೆ ಗುಡ್ಡೆಯಿಂದ ಹರಿಯುತ್ತಿರುವ ಸುವರ್ಣ ನದಿಯು ನೆರೆಯಿಂದ ತುಂಬಿ ಅದು ಹಾದು ಬರುತ್ತಿರುವ ಗ್ರಾಮಗಳ ಪೈಕಿ, ಕೈಯ್ಯಾರು, ಕುಬಣೂರು, ಮಂಗಳಪಾಡಿ, ವಗೈರೆ ಗ್ರಾಮಗಳಲ್ಲಿ ವಿಪರೀತ ನೆರೆ ಬಂದಿರುತ್ತದೆ. ಸುಮಾರು ಒಂದು ಶತಮಾನ ಕಾಲದಿಂದೀಚೆಗೆ ಇಷ್ಟು ನೆರೆ ಬಂದಿರುವುದಿಲ್ಲವೆಂತ ಊರ ಜನರು ಅಭಿಪ್ರಾಯಪಡುತ್ತಾರೆ. ಈ ನೆರೆಯಿಂದಾಗಿ ಕಟಾವಿಗೆ ತಯಾರಾದ ಬೆಳೆಗಳೂ, ಇನ್ನು ಕೆಲವೆಡೆ ಅರ್ಧ ಕಟಾಯಿಸಿ ಗದ್ದೆಯಲ್ಲೇ ಬಿಟ್ಟಿರುವ ಪೈರುಗಳೆಲ್ಲಾ ನೆರೆ ಕೊಚ್ಚಿಕೊಂಡು ಹೋಗಿ ಬಡ ಜನರಿಗೆ ತುಂಬಾ ನಷ್ಟವಾಗಿರುವುದು. ಇಷ್ಟು ಮಾತ್ರವಲ್ಲದೆ, ಅಧಿಕ ತೋಟ ಕೃಷಿಕರಿಗೆ ವಿಶೇಷ ನಷ್ಟವಾಗಿರುತ್ತದೆ. ನೆರೆಹಾವಳಿಯಿಂದಾಗಿ ಕೆಲವು ಮನೆಗಳು ಕೂಡಾ ಬಿದ್ದು ಹೋಗಿವೆ. ಇಟ್ಟಾರೆ ನೆರೆಯು ಕೃಷಿಕರಿಗೆ ತುಂಬಾ ಹಾನಿಕರವಾಗಿದೆ. ಈ ವರೆಗೆ ಪ್ರಾಣಹಾನಿಯಾದ ವರ್ತಮಾನ ದೊರಕಲಿಲ್ಲ.

ವರ್ಗಾವರ್ಗಿ

ಕೆಯ್ಯೂರು ವಿಚಾರಣೆಯಾಗಿ ಸ್ಪೆಶಲ್‌ಡ್ಯೂಟಿಯಲ್ಲಿದ್ದ ಶ್ರೀ. ಎಂ. ಬಿ. ಶಂಕರ್ ರಾವ್ ಇವರು ಕುಂದಾಪುರ ತಹಶಿಲ್ದಾರರಾಗಿಯೂ, ಕುಂದಾಪುರ ಹಂಗಾಮಿ ತಹಶಿಲ್ದಾರರಾದ ಶ್ರೀ. ಯು. ಜನಾರ್ದನ ಇವರು ಕಾಸರಗೋಡು ಸ್ಪೆಶಲ್ ಮಜಿಸ್ಟ್ರೇಟರಾಗಿಯೂ ನೇಮಕಹೊಂದಿದ್ದಾರೆ. ಮಂಗಳೂರು ಅಸಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ ಶ್ರೀ. ಸೊಲೊಮನ್ ಜೋಶ್ವರು ೩ ತಿಂಗಳ ರಜೆ ಮೇಲಿರುವುದರಿಂದ ಅವರ ಸ್ಥಾನಕ್ಕೆ ಕಾಸರಗೋಡು ಅಸಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಶ್ರೀ ತಿಮ್ಮಪ್ಪ ಶೆಟ್ಟಿರೂ ಅವರ ಸ್ಥಾನಕ್ಕೆ ಕಾಸರಗೋಡು ಸ್ಪೆಶಲ್ ಮ್ಯಾಜಿಸ್ಟ್ರೇಟರಾದ ಶ್ರೀ ಪಳ್ಳಿಬಟ್ಯರಿಯವರೂ ನೇಮಕ ಹೊಂದಿದ್ದಾರೆ.

ಬಂಟ್ವಾಳ

ಮನಾರುಲ್ ಇಸ್ಲಾಮ್ ಪಾಠಶಾಲೆ

ಪ್ರಾಮುಖ್ಯವಾಗಿ ಇಸ್ಲಾಮಿಯಾ ಬಾಲಿಕೆಯರಿಗೆ ಕೈಗಾರಿಕೆಯೊಂದಿಗೆ ಧಾರ್ಮಿಕದೊಡನೆ ಲೌಕಿಕ ವಿದ್ಯಾಭ್ಯಾಸ ಕೊಡಿಸುವ ಪ್ರಯತ್ನವು ಕೆಲವಾರು ವರುಷಗಳಿಂದ ಪ್ರಯತ್ನವಾಗುತ್ತಿತ್ತು. ಕಾರಣಾಂತರಗಳಿಂದ ಅದು ಕೈಗೂಡದಿದ್ದು ಕಳೆದ ತಾ. ೧-೯-೪೧ರಲ್ಲಿ ಮೇಲಿನ ಹೆಸರಿನಿಂದ ಇಸ್ಲಾಮಿಯಾ ಸಮಾಜದ ಬಾಲಕ ಬಾಲಿಕೆಯರಿಗೆ ಶಿಕ್ಷಣವನ್ನೀಯಲು ಈ ಶಾಲೆಯನ್ನು ತೆರೆಯಲಾಯಿತು.

ಉಡುಪಿ

ಶ್ರೀ. ಎ. ಬಿ. ಶೆಟ್ರ ಭಾಷಣಗಳು

'ಅಂತರಾಷ್ಟ್ರೀಯ ರಾಜಕೀಯ ಆರ್ಥಿಕ ಬಿಕ್ಕಟ್ಟು ಮತ್ತು ಪ್ರಕೃತದ ರಾಜಕೀಯ ಅತೃಪ್ತಿ' ಎಂಬೀ ವಿಷಯವಾಗಿ ಶ್ರೀ. ಎ ಬಿ. ಶೆಟ್ಟಿ ಎಂ. ಎಲ್. ಎ ಇವರು ಉಡುಪಿಯ ಲೈಸಿಯಮ್ಮಿನಲ್ಲಿ ಒಂದು ಭಾಷಣವಿತ್ತರು. ಶ್ರೀಯುತರು ಅಂಕೆ ಸಂಖ್ಯೆಗಳನ್ನು ಕೊಟ್ಟು ತಮ್ಮ ಅರ್ಥಗರ್ಭಿತವಾದ ಭಾಷಣವನ್ನು ಬಹಳ ಸ್ವಾರಸ್ಯವಾಗಿ ಮಾಡಿದರು.

'ಸದ್ಯದ ಪರಿಸ್ಥಿತಿ'

ಈ ಕುರಿತು ಉಡುಪಿಯಲ್ಲಿ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ ಇವರು ಸಾರ್ವಜನಿಕ ಭಾಷಣವಿತ್ತರು ಶ್ರೀ. ಹಳದೀಪುರಕರ್ ಇವರು ಅಧ್ಯಕ್ಷರಾಗಿದ್ದರು.

ಸ್ಕೌಟ್ ದಲಗಳಿಗೆ ಶ್ರೀ ಎ ಬಿ ಶೆಟ್ಟರ ಹಿತೋಕ್ತಿ

ಸ್ಕೌಟ್ ತತ್ವಗಳನ್ನು ಮನಸ್ಸಿನಲ್ಲಿ, ಮಾತಿನಲ್ಲಿ ಮತ್ತು ಕಾರ್ಯಗಳಲ್ಲಿ ಅನುಸರಿಸಿ, ಸ್ಕೌಟರು ಉತ್ತಮ ಪ್ರಜೆಗಳಾಗಬೇಕೆಂದು ಹೇಳುತ್ತಾ ಶ್ರೀ ಬಿ. ಎ. ಶೆಟ್ಟಿ ಎಂ. ಎಲ್. ಎ. ಇವರು ಉಡುಪಿ ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ ಚಟುವಟಿಕೆಗಳನ್ನು ಪ್ರಶಂಸಿಸಿದರು.

ತಾ ೫-೧೦-೪೧ರಂದು ಉಡುಪಿಯಲ್ಲಿ ಈ ಸಂಘದ ೨೪ ಶಾಖೆಗಳು ಸುಮಾರು ೪೦೦ ಸ್ಕೌಟುಗಳ ಒಂದು ಉತ್ಸವವು ಉಡುಪಿ ಬೋರ್ಡು ಹೈಸ್ಕೂಲನ್ನು ಶ್ರೀ ಎ. ಬಿ. ಶೆಟ್ಟಿ ಎಂ ಎಲ್. ಎ ಇವರ ಅಧ್ಯಕ್ಷತೆಯಿಂದ ಜರಗಿತು.

ಕಾರ್ಕಳ

ಸಪ್ತಾಹ ಸಮಾರಂಭಗಳು

ಹಿಂದ್ರೀ ಪ್ರಚಾರ ಸಪ್ತಾಹ, ಹರಿಜನ ಸಪ್ತಾಹ ಗಾಂಧೀ ಸಪ್ತಾಹ, ಹಿಂದುಸ್ಥಾನ ಸ್ಕೌಟ ಸಪ್ತಾಹ ಮತ್ತು ದಸರೆಯ ಸಮಾರಂಭಗಳು ಇಲ್ಲಿ ಮೆರವಣಿಗೆ, ಸಭೆ, ಭಾಷಣಾದಿಗಳ ಮೂಲಕ ನಡೆದುವು

ಉಪಾಧ್ಯಾಯರ ಸಭೆ

ಕಾರ್ಕಳ ಕೇಂದ್ರದ ಉಪಾಧ್ಯಾಯರ ಸಭೆಯು ಶ್ರೀ. ಎನ್ ನಾರಾಯಣ ಕುಡ್ವ, ಬಿ. ಎ. ಯವರ ಅಧ್ಯಕ್ಷತೆಯಲ್ಲಿ ತಾ ೪ರ ದಿನ ನಡೆಯಿತು.

ಶ್ರೀ ಥಕ್ಕರ ಬಾಪರು

ಕೇಂದ್ರ ಹರಿಜನ ಸೇವಾ ಸಂಘದ ಜನರಲ್ ಸೆಕ್ರೆಟರಿ ಶ್ರೀ ಅಮೃತಲಾಲ ವಿ ಥಕ್ಕರು ತಾ. ೪ರ ದಿನ ಕಾರ್ಕಳದ ಹರಿಜನ ಆಶ್ರಮವನ್ನು ಸಂದರ್ಶಿಸಿ, ಶ್ರೀ ವಕೀಲ ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು.

ಮೈಸೂರು

ನಿ. ಕ. ಆಯುರ್ವೇದ ಸಮ್ಮೇಳನ

೧೨ನೆಯ ನಿಖಿಲ ಕರ್ನಾಟಕದ ವೈದ್ಯ ಸಮ್ಮೇಳನವನ್ನು ಡಿಸೆಂಬರ ತಿಂಗಳಲ್ಲಿಯೇ ಆ ಸಮ್ಮೇಳನವನ್ನು ಮತ್ತು ಮೈಸೂರು ಸಂಸ್ಥಾನದ ಪ್ರಥಮ ವೈದ್ಯ ಸಮ್ಮೇಳನವನ್ನು ರಾಜಧಾನಿಯಲ್ಲಿ ನಡೆಯಿಸತಕ್ಕದೆಂದು ತೀರ್ಮಾನಿಸಿದೆ. ಸಮ್ಮೇಳನದ ಆಫೀಸು, ೩, ವಾಣೀವಿಲಾಸ, ಮಾರ್ಕೆಟು ಬಿಲ್ಡಿಂಗ್ಸ್, ಮೈಸೂರು.

ರಾಜಾಜಿ ಪ್ರಕಾಶಂ ರೆಡ್ಡಿಯವರು ಬಿಡುಗಡೆ ಹೊಂದಿದರು

ಪೇಶಾವರ ಲಾಹೋರುಗಳಲ್ಲಿ ವಿಮಾನ ಧಾಳಿ ಪ್ರಯೋಗ

ಅಖಿಲ ಭಾರತದಲ್ಲಿ ಗಾಂಧಿ ಜಯಂತ್ಯುತ್ಸವ

ಮೈಸೂರು ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದವರ ಸಭಾತ್ಯಾಗ



ಭಾರತ ರಾಜಕೀಯದಲ್ಲಿ ವಿಶೇಷವಾಗಿ ಹೇಳುವಂತಹ ಘಟನೆಯೊಂದೂ ಉಂಟಾಗಿಲ್ಲ. ಪೇಶಾವರ ಲಾಹೋರು ಕಡೆಗಳಲ್ಲಿ ಸರಕಾರದವರು ವಿಮಾನ ಧಾಳಿಯ ಪ್ರಯೋಗವನ್ನು ಮಾಡಿತೋರಿಸುತ್ತಾರೆ. ಯುದ್ಧ ವಿರುದ್ಧ ಸತ್ಯಾಗ್ರಹವು ಇಂದು ಬಿಡದೆ ಯಶಸ್ವಿಯಾಗಿಯೇ ಸಾಗುತ್ತಿದೆ. ತ್ರಿಚನಾಪಳ್ಳಿ ಸೆರೆಮನೆಯಿಂದ ರಾಜಜಿ ಪ್ರಭೃತಿಗಳು ಬಿಡುಗಡೆ ಹೊಂದಿದರು. ರಾಜಾಜಿ ಬೇಗನೇ ವರ್ಧಾಕ್ಕೆ ತೆರಳಿ ಮಹಾತ್ಮಾಜಿಯವರನ್ನು ಕಂಡುಬರುವರಂತೆ ಆಗ ವಿಶೇಷವೊಂದು ಘಟನೆ ನಡೆಯಲಿದೆಯೆಂದು ತಿಳಿಯುತ್ತದೆ ವೈಸರಾಯ್ ವಿಸ್ತಾರಿತ ಕೌನ್ಸಿಲ್ ಸದಸ್ಯರು ಬೇಗನೇ ಅಧಿಕಾರ ವಹಿಸುತ್ತಾರೆ.

ರಾಜಾಜಿ

ಠಾಗೂರ್ ಭಾವಚಿತ್ರ 'ಅನಾವರಣ

ತ್ರಿಚನಾಪಳ್ಳಿ ಸೈಂಟ್ ಜಾಸೆಫ್ ಕಾಲೇಜಿನಲ್ಲಿ ರಾಜಾಜಿಯವರು ಠಾಗೂರರ ಭಾವಚಿತ್ರ ಅನಾವರಣ ಮಾಡಿ, ಕವಿಗಳನ್ನು ಬಹಳವಾಗಿ ಕೊಂಡಾಡಿ ಅವರ ಪ್ರಶಸ್ತಿ ನಿಧಿಗಾಗಿ ಸಾರ್ವಜನಿಕರು ಸಾಕಷ್ಟು ಸಹಾಯ ಮಾಡಬೇಕೆಂದು ಕೇಳಿಕೊಂಡರು.

ವಿಮಾನಧಾಳಿ ಪ್ರಯೋಗ

ಪೇಶಾವರ, ಲಾಹೋರ್, ರಾವಲ್ಪಿಂಡಿ ಮೊದಲಾದ ಕಡೆಗಳಲ್ಲಿ ವಿಮಾನ ಧಾಳಿ ಪ್ರಯೋಗವು ಭರದಿಂದ ನಡೆದಿದೆ ಶತ್ರುಗಳು ಭಾರತಕ್ಕೆ ಬಂದು ವಿಮಾನ ಧಾಳಿ ಮಾಡಿದರೆ ಹೇಗಾಗಬಹುದೆಂಬದನ್ನು ಸಾರ್ವಜನಿಕರಿಗೆ ತೋರಿಸಿ ಅವರ ಗಾಬರಿ ತಪ್ಪಿಸಲು ಈ ಯೋಜನೆಯಿದೆ.

ಮೈಸೂರು ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದವರ ಸಭಾತ್ಯಾಗ

ವಿ. ಎಸ್. ಜಿ. ಫ್ರೊಬರ್ ಇವರನ್ನು ಇಲೆಕ್ಟ್ರಿಕ್ ಇಂಜಿನಿಯರಾಗಿ ನೇಮಿಸಿದ ವಿಷಯ ಹಾಗೂ ಚರ್ಚಿಸಬೇಕಾದ ಇತರ ವಿಷಯದಲ್ಲಿ ಸುಮಾರು ೧೧೦ ಮಂದಿ ಕಾಂಗ್ರೆಸ ಪಕ್ಷದ ಹಾಗೂ ಇವರ ಸದಸ್ಯರು ಎಸೆಂಬ್ಲಿಗೆ ನಿಲುವಳಿ ಸೂಚನೆಗಾಗಿ, ನೋಟೀಸು ಕೊಟ್ಟಿದ್ದರು ದಿವಾಣ ಅಧ್ಯಕ್ಷರು ಅದಕ್ಕೆ ಅಪ್ಪಣೆ ಕೊಡದಿರುವುದರಿಂದ ಕಾಂಗ್ರೆಸ ಪಕ್ಷದವರು ಹಾಗೂ ಇತರ ಕೆಲವು ಸ್ವತಂತ್ರ ಸದಸ್ಯರು ಸಭಾತ್ಯಾಗ ಮಾಡಿರುವರು.

ಶ್ರೀ ರಾಜಾಜಿ ಪ್ರಕಾಶಂ ರೆಡ್ಡಿಯರ ಬಿಡುಗಡೆ

ತ್ರಿಚನಾಪಳ್ಳಿ ಸೆರೆಮನೆಯಿಂದ ಮದ್ರಾಸಿನ ಮಾಜಿ ಮಂತ್ರಿಗಳಾದ ರಾಜಾಜಿ, ಪ್ರಕಾಶಂ, ಗೋಪಾಲ ರೆಡ್ಡಿಯರು ಬಿಡುಗಡೆ ಹೊಂದಿ ಬಂದರು. ಡಾಕ್ಟರ್ ರಾಜನ್ ಮೊದಲಾದವರು ಅವರನ್ನು ಸ್ವಾಗತಿಸಿದರು. ರಾಜಾಜಿಯವರು ವರ್ಧಾಕ್ಕೆ ಬೇಗನೇ ತೆರಳುವರೆಂದು ತಿಳಿದಿದೆ. ಈ ಸಂದರ್ಭದಲ್ಲಿ ವಲ್ಲಭಭಾಯಿಯವರೂ ಹೋಗಬಹುದೆಂದು ಊಹಿಸಲಾಗಿದೆ.

ಕಾಂಗ್ರೆಸಿನ ಮುಂದಿನ ರೀತಿನೀತಿ ವಿಚಾರ?

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಲ್ಲಿ ಇನ್ನೂ ಐದು ಮಂದಿ ಸೆರೆಮನೆಯಲ್ಲಿರುವುದರಿಂದ ಸದ್ಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯನ್ನು ಕರೆಯುವಂತೆ ಕಂಡುಬರುವುದಿಲ್ಲ ಸತ್ಯಮೂರ್ತಿಗಳು. ತಾ. ೧೦ಕ್ಕೆ ವರ್ಧಾಕ್ಕೆ ಹೋಗುವರಂತೆ ಅವರು ಹಾಗೂ ಇತರ ಬಿಡುಗಡೆ ಹೊಂದಿದ ಮುಖಂಡರು ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳ ವಿಚಾರವಾಗಿ ಗಾಂಧಿಜಿಯವರೊಡನೆ ವಾದಿಸುವರೆಂದು ಊಹಿಸಲಾಗಿದೆ

ಅಖಿಲಭಾರತ ಚರಖಾ ಸಂಘ ಉತ್ಪನ್ನಕರದ ಬಗ್ಗೆ ಅಪೀಲು

ಅಖಿಲಭಾರತ ಚರಖಾ ಸಂಘದ ಸಭೆಯೊಂದು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿ ಅದನ್ನು ಒಂದು ಟ್ರಸ್ಟ್ ರೂಪದಲ್ಲಿ ನಡೆಸುವ ಯೋಜನೆ ವಿಚಾರಿಸಲಾಯಿತು. ಸಂಘದ ಲಾಭದ ಮೇಲೆ ಉತ್ಪನ್ನಕರ ಹಾಕಿದ ವಿಷಯ ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡುವ ವಿಚಾರವೂ ನಡೆದಿದೆ.

ಹಿಂದುಗಳು ಸೈನ್ಯಕ್ಕೆ ಸೇರಬೇಕು

ಸಾವರ್ಕರರ ಹೇಳಿಕೆ.

ಇಂದಿನ ಸಂದರ್ಭದ ಸದುಪಯೋಗ ಮಾಡಿಕೊಂಡು ಹಿಂದುಗಳು ಸಾವಿರ ಗಟ್ಟಲೆಯಿಂದ ಸೈನ್ಯದಲ್ಲಿ ಸೇರಿ ಸೈನಿಕ ಶಿಕ್ಷಣ ಪಡೆಯಬೇಕೆಂದು ಸಾವರ್ಕರರು ಹೇಳುತ್ತಾರೆ.

ಢಾಕಾ ದಲಭ

ಢಾಕಾದಲ್ಲಾದ ಜಾತೀಯ ಗಲಭೆ ನಿಮಿತ್ತ ೧೨೦ ಜನರ ಬಂಧನವಾಗಿದೆ

ಪ್ಯಾರೇಲಾಲರಿಗೆ ಮೂರನೆಯ ಸಲ ಶಿಕ್ಷೆ

ಗಾಂಧಿಜಿಯವರ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಪ್ಯಾರೇಲಾಲರು ಮೂರನೆಯ ಸಲ ಸತ್ಯಾಗ್ರಹಮಾಡಿ ಶಿಕ್ಷೆಯನ್ನು ಅನುಭವಿಸುತ್ತಾರೆ ಅವರಿಗೆ ಈ ಸಲ ೧೮ ತಿಂಗಳ ಶಿಕ್ಷೆವಿಧಿಸಲಾಗಿದೆ.

ನೆಲ್ಲೂರು ಗಲಭೆ

ದಸರಾ ಉತ್ಸವದ ನಿಮಿತ್ತ ನೆಲ್ಲೂರಲ್ಲಿ ಜಾತೀಯ ಜಗಳದ ವಿಚಾರಣೆಗಾಗಿ ಕಂದಾಯ ಮಂಡಳಿದ ಪ್ರಥಮ ಸಭಾಸದರಾದ ಜಿ ಡಬ್ಲ್ಯೂ ಪ್ರಿಸ್ಟಲಿಯವರು ನೇಮಕಹೊಂದಿರುವರು.

ಕಾಂಗ್ರೆಸ್ ಮೆಂಬರರ ರಾಜಿನಾಮೆ

ಬಿಹಾರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಆಜ್ಞೆ ಮೇರೆಗೆ ಲಾಹೋರಿನ ಮುನ್ಸಿಪಾಲಿಟಿ ಡಿಸ್ಟ್ರಿಕ್ಟ ಬೋರ್ಡುಗಳ ಕೆಲವು ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವರು .

ಎಂ. ಎಸ್. ಆಣೆ

ಇವರು ತನ್ನ ಅಧಿಕಾರವನ್ನು ತಾ. ೫ರಂದು ವಹಿಸಿಕೊಳ್ಳುವರಂತೆ. ಅವರು ವೈಸರಾಯರ ಭೇಟಿಮಾಡಿದರು ಆಣೆಯವರಿಗೆ ಜಿ ಎಸ್ ಬಜಮನ್ನರು ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟರು

ನೂನರ ಹೇಳಿಕೆ

ಪತ್ರಿಕಾ ಪ್ರತಿನಿಧಿಗೆ ಭೇಟಿಕೊಡುತ್ತಾ ಶ್ರೀ. ಫಿರೋಜಖಾನ ನೂನರು ಭಾರತವು ಬ್ರಿಟಿಷ್ ಕಾಮನ್ ವೆಲ್ತಿನಲ್ಲಿ ಸಹಭಾಗಿಯಾಗಬೇಕೆಂದು ಅನೇಕ ಬ್ರಿಟಿಷರಿಗೆ ಮನವರಿಕೆಯಾಗಿದ್ದರೂ ಕಾಂಗ್ರೆಸ್ ಲೀಗುಗಳ ಒಡಂಬಡಿಕೆಯಾಗದೆ ಅದು ಕೈಗೂಡುವುದಿಲ್ಲವೆಂದೂ ಹೇಳಿದರು.

ಅಂತರ್ ರಾಷ್ಟ್ರೀಯ ಕೂಲಿಗಾರ ಪರಿಷತ್ತಿಗೆ ಪ್ರತಿನಿಧಿ

ಆಗ ಹಿಂದೂ ದೇಶದಿಂದ ಟ್ರೇಡ್ ಯೂನಿಯನ್ ಕಾಂಗ್ರೆಸಿನವರು ಶ್ರೀ. ಎ ಆರ್. ಕಾಳಪ್ಪನವರನ್ನು ಕಳುಹಿಸುವರಂತೆ ಆದರೆ ಸರಕಾರದ ಒಪ್ಪಿಗೆ ಸಿಗುವುದು ದುರ್ಲಭವೆಂದು ತಿಳಿದಿದೆ.

ರಾಜಕೀಯ ಕೈದಿಗಳನ್ನು ಬಿಡಬೇಕು

ಜೋಶಿಯವರ ಸೂಚನೆ

ಕೇಂದ್ರ ಅಸೆಂಬ್ಲಿಗೆ ಶ್ರೀ. ಎನ್. ಎಂ ಜೋಶಿಯರು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬ ಸೂಚನೆ ಕಳುಹಿಸಿರುವರು.

ಅತಿ ಪೂರ್ವದಲ್ಲಿ ಗಂಡಾಂತರ

ಅತಿ ಪೂರ್ವದಲ್ಲಿ ಇನ್ನೊಂದು ಗಂಡಾಂತರ ಸೂಚನೆಯಿದೆ ಜಪಾನು ಸೈನ್ಯವು ಈಗ ವಿಶೇಷ ಚಟುವಟಿಕೆ ಮಾಡುತ್ತಿದೆಯಂತೆ ಜಪಾನು ಹೀಗೆ ಗಡಿಬಿಡಿ ಮಾಡಿದರೆ ಪೂರ್ವದಲ್ಲಿ ಶಾಂತಿ ಕದಡುವುದು.

ಜರ್ಮನಿಯಲ್ಲಿ ಜನರ ಕೊರತೆ?

ರಶ್ಯ ಯುದ್ಧದ ನಿಮಿತ್ತ ಜರ್ಮನಿಯಲ್ಲಿ ಜನರ ಕೊರತೆಯುಂಟಾಗಿರುವುದರಿಂದ ಜರ್ಮನ್ ಸರಕಾರದವರು ವಿದೇಶದಲ್ಲಿರುವ ತಮ್ಮ ಜನರನ್ನು ಕರೆಸಿಕೊಳ್ಳುತ್ತಿರುವರು.

NACET BLADES

ಮೊಳಕು ಗೊಟಿದ ರೇಜರುಗಳಿಗೆ

ನೆಸೆಟು ಬ್ಲೇಡುಗಳು

ನಿಜವಾದ ಕ್ಷೌರ ಸುಖಕ್ಕೆ ಹದವಾದ ಅಲಗುಗಳು ಬೇಗನೇ ಉತ್ತಮವಾಗಿ ಆಶ್ಚರ್ಯಕರ ರೀತಿಯಲ್ಲಿ ನಯವಾದ ಕ್ಷೌರವು ಬೇಕಾದಲ್ಲಿ ಅತೀ ಕಡಿಮೆ ಕ್ರಯದ ನೆಸಟು ಬ್ಲೇಡುಗಳಲ್ಲಿ ಭರವಸೆಯನ್ನಿಡಿರಿ.



INBI.

ಪುಸ್ತಕಾವಲೋಕನ

ಬಾಪೂ*

“ಕೋಟ್ಯಾಧೀಶರು, ಗಾಂಧಿಜಿಯವರ ಪ್ರಭಾವಳಿಯಲ್ಲಿಯ ಓರ್ವ ಮುಖ್ಯ ಗೃಹಸ್ಥರು, ಹರಿಜನ ಸೇವಕ ಸಂಘದ ಅಧ್ಯಕ್ಷರು ಆದ ಶ್ರೀ ಘನಶ್ಯಾಮದಾಸ ಬಿರ್ಲಾ ಇವರು ಗಾಂಧಿಜಿಯವರನ್ನು ಕುರಿತು ಬರೆದ” ಒಂದು ಹಿಂದೀ ಪುಸ್ತಕದ ಭಾಷಾಂತರವಿದು. ಶ್ರೀರಂಗನಾಥ ದಿವಾಕರರು ಕನ್ನಡಿಸಿದವರು. “ಬಾಪೂ” ಎಂದರೆ ಗುಜರಾಥಿಯಲ್ಲಿ ‘ಅಪ್ಪ’ ಯೆಂದರ್ಥ.’ ಗಾಂಧಿಜಿಯವರ ಬಳಗದವರು ಪಂಡಿತ ಜವಾಹಿರಲಾಲ ಮುಂತಾದವರು ಅವರನ್ನು “ಬಾಪೂ” ಎಂಬ ಭಕ್ತಿ ಗೌರವಪೂರ್ಣ ಹೆಸರಿನಿಂದ ಸಂಬೋಧಿಸುವರು “ಕಳೆದ ಇಪ್ಪತ್ತೈದು ವರ್ಷಗಳಿಂದ ಅವರ ಅತ್ಯಂತ ಸಮೀಪ ಇದ್ದು ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಯಾವುದೊಂದು ವಸ್ತುವನ್ನು ಪರೀಕ್ಷಿಸಿ ನೋಡುವಂತೆ ನಾನು ಅವರ ಜೀವನವನ್ನು ಅಭ್ಯಸಿಸಿರುವೆನು.” ಹೀಗೆಂದು ಶ್ರೀ ಬಿರ್ಲಾರವರು ತಮ್ಮ ಪುಸ್ತಕದಲ್ಲಿಯೇ ಒಂದು ಕಡೆ ಹೇಳಿದ್ದಾರೆ. ಗಾಂಧಿಜಿಯವರ ತತ್ವಗಳನ್ನು ವಿಮರ್ಶಿಸಿ, ಅವುಗಳಲ್ಲಿ ದೋಷಗಳನ್ನೂ ಕಂಡು ಹುಡುಕಲು ಯತ್ನಿಸಿ, ಕೊನೆಗೆ ಅವರ ತತ್ವಕ್ಕೆ ಶರಣಾದ ಗಾಂಧೀ ಭಕ್ತಾಗ್ರಣಿಯೊಬ್ಬನ ಲೇಖನವಿದು.

ಈ ಪುಸ್ತಕಕ್ಕೆ ಶ್ರೀ ಮಹಾದೇವ ದೇಸಾಯಿಯವರು ಚಂದವಾದ ಮುನ್ನುಡಿಯನ್ನು ಬರೆದು ಶ್ರೀ ಬಿರ್ಲಾರ ಯೋಗ್ಯತೆಯನ್ನು ವಿವರಿಸಿ ಕೊಂಡಾಡಿದ್ದಾರೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಶ್ರೀ. ರಂಗನಾಥ ದಿವಾಕರರು, ಮೊನ್ನೆ ಸತ್ಯಾಗ್ರಹ ಮಾಡುವ ಪ್ರತಿಜ್ಞೆ ತೊಟ್ಟವರೇ, ಅದರ ಭರದಲ್ಲಿದ್ದಾಗ ,ಇಂತಹ ಅಮೂಲ್ಯ ಪುಸ್ತಕದ ಭಾಷಾಂತರವನ್ನೂ ಮಾಡಿ ಮುಗಿಸಿ, ಪ್ರಕಟಿಸಿ ಕನ್ನಡಿಗರಿಗೆ ಒದಗಿಸುವಂತಹ ಮಹಾ ಸಾಹಸಮಯ ಉಪಕಾರವನ್ನು ಮಾಡಿದ್ದಾರೆಂಬುದು ನಾವು ಮರೆಯಬಾರದ ವಿಷಯ. ಶ್ರೀ ದಿವಾಕರರ ಕನ್ನಡ ಶೈಲಿಯ ಸರಲತೆಯನ್ನು ಬಲ್ಲವರೆಲ್ಲರೂ, ಗಾಂಧಿ ಪ್ರಿಯವರ ಜೀವನ ಪರಿಚಯಾತ್ಮಕವಾದ ಗ್ರಂಥವೊಂದನ್ನು ಕನ್ನಡಿಸಲು ಅವರಷ್ಟು ಯೋಗ್ಯರು ಬೇರೆ ಸಿಗುವುದು ದುರ್ಲಭವೆಂದು ತಿಳಿಯದಿರಲಾರರು.

ಇಪ್ಪತ್ತು ಸಣ್ಣ ಸಣ್ಣ ಅಧ್ಯಾಯಗಳಿರುವ ಪುಸ್ತಕವಿದು. ಗಾಂಧಿಜಿಯವರ ಹನ್ನೆರಡು ವಿವಿಧ ಸುಂದರ ಚಿತ್ರಗಳಿಂದ ಅಲಂಕೃತವಾಗಿ ನವೀನವೂ ರಮ್ಯವೂ ಆಗಿದೆ. ಈ ಪುಸ್ತಕವನ್ನು ಗಾಂಧಿಜಿಯವರ ಎಪ್ಪತ್ತೊಂದು ವರ್ಷ ಪ್ರಾಯದಲ್ಲಿ ಎಂದರೆ ಒಂದು ವರ್ಷದ ಹಿಂದೆ ಶ್ರೀ. ಬಿರ್ಲಾರವರು ಬರೆದರು. ಹಾಗಾಗಿ ಅಲ್ಲಿನ ವರೆಗಿನ ಗಾಂಧಿಜಿಯವರ ಚಟುವಟಿಕೆಗಳ ಸೂಕ್ಷ್ಮ ಸಿಂಹಾವಲೋಕನವು ಇದರಲ್ಲಿದೆ. ‘ಗಾಂಧಿಜಿಯವರ ಅವತಾರವೆಂದರೆ ಇಂದಿನೀ ಹಿಂಸಾಕುಲ ನಿರಾಶಾಮಯ ಯುಗಗಳಲ್ಲಿ ಹೊಸತೊಂದು ಶಾಂತಿಯ ಆಶಾಮಯ ಕಿರಣವೊಂದು ಉದಯಿಸಿದಂತೆ’ ಎಂದು ಶ್ರೀ. ಬಿರ್ಲಾರವರು ಖಚಿತಪಡಿಸಿದ್ದಾರೆ.

ಲೇಖಕರೊಡನೆ ಗಾಂಧಿಜಿಯವರ ಪ್ರಥಮ ದರ್ಶನ; ಗಾಂಧಿಜಿ ‘ಪೋಸ್ಟ್ ಕಾರ್ಡಿ’ನಲ್ಲಿ ಉತ್ತರಬರೆದುದು. ಗಾಂಧಿ ಸಮಸ್ಯಾತ್ಮಕ ವ್ಯಕ್ತಿಯಾಗಿರುವುದು, ವಿಲ್ಲಿಂಗ್ಡನರು ಗಾಂಧಿ ಸಂದರ್ಶನಕ್ಕೆ ಬೆದರಿದುದು, ಗಾಂಧಿಜಿಯವರ ಜೀವನದ ಗುರಿ, ಮಹಾತ್ಮರ ವಾದಿಸುವ ಅಹಿಂಸೆಯ ವಿವೇಚನೆ, ಹರಿಜನ ಸೇವೆ, ರಾಜಕಾರಣವೂ ಅಹಿಂಸೆಯೂ, ಕರುವನ್ನು ಕೊಂದವಿಚಾರ, ಗಾಂಧಿಜಿಯವರ ಇಂದಿನ ಸ್ಥಾನಮಾನ, ಸತ್ಯಾಗ್ರಹ ವಿಚಾರ, ಗಾಂಧಿಜಿಯವರ ಸತ್ಯ ನಿಷ್ಠೆ ಮತ್ತು ದೈವಭಕ್ತಿ, ಗಾಂಧಿಜಿಯವರ ತತ್ವವು ವ್ಯವಹಾರ್ಯವೇ? ಗಾಂಧಿಜಿಯವರ ಅಂತರ್ವಾಣಿ, ಅವರ ಉಪವಾಸ ವಿಚಾರ, ಗಾಂಧಿಜಿಯವರ ಯುದ್ಧನೀತಿ, ಗಾಂಧಿಜಿಯವರ ನಿರ್ಣಯ ರೀತಿ, ಅವರ ಆತ್ಮ ಪ್ರೇರಣೆ, ನಿರಹಂಕಾರ ಭಾವ, ಗಾಂಧಿಯವರ ಸೂಕ್ಷ್ಮ ದೃಷ್ಟಿ, ದಿನಚರಿ, ಇವೇ ಮೊದಲಾದ ಅತ್ಯಂತ ವಿಚಾರಾತ್ಮಕವಾದ ವಿಷಯಗಳನ್ನು ಬಹಳ ಮನೋಹರವೂ ಸ್ಪಷ್ಟವೂ ಆದ ಶೈಲಿಯಲ್ಲಿ ಶ್ರೀ ಬಿರ್ಲಾರವರು ವಿವರಿಸಿದ್ದಾರೆ. ಗಾಂಧೀ ಸಾಹಿತ್ಯದಲ್ಲಿ ಇದು ಒಂದು ಉತ್ತಮ ಗ್ರಂಥ ಗಾಂಧಿಜಿಯವರ ವಿಚಾರದಲ್ಲಿ ಬರೆದ ಅನೇಕ ಗ್ರಂಥಗಳು, ಸ್ವತಃ ಅವರ ಆತ್ಮ ಚರಿತ್ರೆಯೇ ಇದ್ದರೂ, ಈ ಪುಸ್ತಕವು ಅವರ ಕುರಿತು ಹೊಸತೊಂದು ಬೆಳಕನ್ನು ತೋರಿಸುತ್ತದೆ

—ಕಯ್ಯಾರ.

* ಪುಟಗಳು ಕ್ರೌನ್ ೧/೮ ಆಕಾರದ ೬೯+೧೭+೧೫೯, ಬೆಲೆ ಒಂದು ರೂಪಾಯಿ. ಪ್ರಕಾಶಕರು: ರಂ. ರಾ. ದಿವಾಕರ, ಕಾರ್ಯದರ್ಶಿ, ಕರ್ನಾಟಕ ಶಿಕ್ಷಣ ಸಮಿತಿ, ಹುಬ್ಬಳ್ಳಿ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 367/1941

ಲಕ್ಷ್ಮಿ ಹೆಂಗ್ಸು— ಅರ್ಜಿದಾರಳು

1. ಕೊರಪೊಳು ಹೆಂಗ್ಸು. 2. ದ್ಯಾಕೆ ಹೆಂಗ್ಸು, 3 ರಾಮಯ ಭಂಡಾರಿ, 4. ಮುತ್ತ ಭಂಡಾರಿ, 5. ತ್ಯಾರಪಣ್ಣ ಭಂಡಾರಿ 6. ಅಪ್ಪು ಹೆಂಗ್ಸು, 7 ಕೊರಗ ಭಂಡಾರಿ, 8. ಅಂತಕ್ಕೆ ಹೆಂಗ್ಸು—

ರೆಸ್ಪೊಂಡೆಂಟರು

1ನೇ ರೆಸ್ಪೊಂಡೆಂಟಳು ಕೊರಪೊಳು ಹೆಂಗ್ಸಿಗೆ 2ನೇ ರೆಸ್ಪೊಂಡೆಂಟಳು ದ್ಯಾಕೆ ಹೆಂಗ್ಸಿಗೆ, 4ನೇ ರೆಸ್ಪೊಂಡೆಂಟ ಮುತ್ತ ಭಂಡಾರಿಗಳಿಗೆ, 6ನೇ ರೆಸ್ಪೊಂಡೆಂಟಳು ಅಪ್ಪು ಹೆಂಗ್ಸಿಗೆ, 7ನೇ ರೆಸ್ಪೊಂಡೆಂಟ ಕೊರಗ ಭಂಡಾರಿಗಳಿಗೆ, 8ನೇ ರೆಸ್ಪೊಂಡೆಂಟ ಅಂತಕ್ಕ ಹೆಂಗ್ಸಿಗೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ದಾಖಲು ಮಾಡಿದ ಏಲಂ ಇಸ್ತಿಹಾರಿನ ಶರ್ತಗಳ ನಿರ್ಣಯದ ಬಗ್ಗೆ ಮೇಲಿನ ಅಮಲ್ಜಾರಿಯು ತಾ. 17-10-1941ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆ ದಿವಸ ಸದ್ರಿ ರೆಸ್ಪೊಂಡೆಂಟರು ಹಾಜರಾಗಿ ವ್ಯವಹರಿಸುವರೆ ತಪ್ಪಿದ್ದಲ್ಲಿ ಸದ್ರಿಯವರ ಶಿವಾಯ್ ಮೇಲಿನ ನಂಬ್ರ ತೀರ್ಮಾನಿಸಲ್ಪಡುವುದು ಯೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಮಂಗಳೂರು } B. Vyasarayacharya
6-10-1941 } Advocate for Pltff.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 401/1941.

ವಿಕ್ಟರ್ ದೇಸಿಸ್ ಟಿಕ್ಸಾಷ್ಟ —ವಾದಿ.

ರಾಮಚಂದ್ರ ಶೆಟ್ಟಿ ಕೂಡಾ— ಪ್ರತಿವಾದಿರು

ಗಣಪತಿ ಶೆಟ್ಟಿ ಪದ್ಮನಾಭ ಶೆಟ್ಟಿರ ಮಗ ಹೊಗಾಳ ಗ್ರಾಮ —2ನೇ ಪ್ರತಿವಾದಿ.

ನೀವು ವಗೈರೆರು ವಾದಿಗೆ ತಾರೀಕು 9-8-1934ರಲ್ಲಿ ಬರಕೊಟ್ಟ ಈಡು ದಸ್ತಾವೇಜಿನ ಆಸ್ತಿ ಬದ್ಧಿ ಹಣ ಬರಮಾಡಿಕೊಳ್ಳುವ ಬಗ್ಗೆ ವಾದಿಯು ನೀವು ವಗೈರೆರ ಮೇಲೆ ಹೂಡಿದ ಸದ್ರಿ ದಾವೆಯು ತಾರೀಕು 25-10 1941ಕ್ಕೆ ಇಟ್ಟಿದೆ. ಏನು ಆಕ್ಷೇಪಣೆಗಳಿದ್ದರೆ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡತಕ್ಕದ್ದು.

ಕುಂದಾಪುರ } K. Ramappayya
3-10-41 } Advocate for Plaintiff

ಟರ್ಕಿ ಜರ್ಮನಿ ವ್ಯಾಪಾರಿ ಒಪ್ಪಂದ

ಟರ್ಕಿ ಮತ್ತು ಜರ್ಮನಿಗಳೊಳಗೆ ಒಂದು ವ್ಯಾಪಾರೀ ಒಪ್ಪಂದವು ಮುಂದಿನ ಸಪ್ಪುರದಲ್ಲಿ ಸಹಿಯಾಗುವುದೆಂದು ತಿಳಿದಿದೆ.

ಡಪ್ ಕೂಪರರು ಭಾರತಕ್ಕೆ ಬರುವರು

ಡಪ್ ಕೂಪರರು ರಂಗೂನಿಗೆ ಬಂದಿದ್ದು ಅಲ್ಲಿಂದ ಭಾರತಕ್ಕೆ ಬರುವರೆಂದು ತಿಳಿದಿದೆ.

ಅಜೀರ್ಣ ಅರುಚಿಗಳ ಬಾಧೆಯಿಂದ ಅವನ ಬುದ್ಧಿ ಮತ್ತು ಶರೀರಗಳು ಜಾಡ್ಯ ಹೊಂದಿದ್ದವು— ಹಾಗಾಗಿಯೇ ಆತನು ಅಷ್ಟು ಹುಷಾರಾಗಿರಲಿಲ್ಲ!



ಅಜೀರ್ಣ ಅರುಚಿ ಮತ್ತು ತಲೆನೋವು ಇನ್ನು ಮುಂದೆ ಆತನನ್ನು ಬಾಧಿಸಲಾರವು

ಏಕೆಂದರೆ ಈಗ ಆತನ ಒಳಗೂ ನಿರ್ಮಲತೆಯುಂಟಾಗಿದೆ.

ನಿಮ್ಮ ಹೊಟ್ಟೆಯೊಳಗಡೆ ಅಶುದ್ಧ ವಸ್ತುಗಳಿದ್ದರೆ ನೀವು ಜಯಶೀಲರಾಗಿರಲೂ ಸಂತುಷ್ಟರಾಗಿರಲೂ ಸಾಧ್ಯವಿಲ್ಲ. ಆಗಾಗ ಅಜೀರ್ಣ ಅರುಚಿ ತಲೆನೋವುಗಳು ನಿಮ್ಮನ್ನು ಯಾವ ಕೆಲಸದಲ್ಲಿಯೂ ನಿಷ್ಪ್ರಯೋಜನಕರನ್ನಾಗಿ ಮಾಡುವವು ಮಿದುಳು ಮತ್ತು ಶರೀರದೊಳ ಭಾಗವನ್ನು ನೀವು ಶುಚಿಯಾಗಿಡಬೇಕು. ದಿನನಿತ್ಯ ತಂಪಾದ ‘ಅಂಡ್ರೂಸ್ ಲಿವರ್’ ಸಾಲ್ಟಿನ ಒಂದು ಪಾನೀಯ ತೆಗೆದುಕೊಳ್ಳುವುದರಿಂದ ನೀವು ಸಂಪೂರ್ಣ ಆನಂದದಗೊಳ್ಳುವಿರಿ, ಅದು ಬಾಯಿ ಮತ್ತು ನಾಲಗೆಗಳನ್ನು ಶುಚಿಗೊಳಿಸುತ್ತದೆ, ಹೊಟ್ಟೆಯನ್ನು ಕ್ರಮದಲ್ಲಿ ಇಡುತ್ತದೆ. ಹೊಟ್ಟೆಯ ಸರ್ವಾಯವಗಳನ್ನೂ ಶುದ್ಧಿಗೊಳಿಸುತದೆ. ಹೊಟ್ಟೆಗೆ ತಂಪನ್ನುಂಟುಮಾಡಿ ಕರುಳನ್ನು ಶುದ್ಧಿಗೊಳಿಸುತ್ತದೆ

ಹೊಟ್ಟೆಯೊಳಗಡೆಯ ನೈರ್ಮಲ್ಯಕ್ಕೆ ದಿನನಿತ್ಯ ಅಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ

ANDREWS LIVER SALT



ಆರೋಗ್ಯಕರ ಪಾನೀಯ—ಶಕ್ತಿವರ್ಧಕವಾದ ಔಷಧಿ—ರುಚಿಕರ—ತಂಪುಕರ—ಆನಂದಕರ—ಆಮೋದಕರ

ಆಶ್ಯಾಖಂಡವು ಇನ್ನೊಮ್ಮೆ ತಲೆಯೆತ್ತಿ ನಿಲ್ಲುವುದು!

ಚೀನಾ-ಜಪಾನು-ಭಾರತಗಳು ಐಕ್ಯಗೊಳಬೇಕು

ಅನಿಮಿತ್ತ ಕಲಹದಿಂದ ವಿದೇಶಿಯರ ಸುಲಿಗೆ ನಡೆಯುವುದು

ಜಪಾನು ಉದ್ಯೋಗ ಕೈಗಾರಿಕೆಗಳಲ್ಲಿ ಮುಂದುವರಿಯುತ್ತಾ ಪಾಶ್ಚಾತ್ಯ ರಾಷ್ಟ್ರಗಳ ಸರಿಸಮಾನವಾಗಿ ಮುನ್ನಡೆಯುತ್ತಿರುವುದನ್ನು ನೋಡಿ ಭಾರತವು ಹೆಚ್ಚು ಆನಂದ ಕುತೂಹಲಗಳಿಂದ ಅದರ ಕಡೆಗೆ ಈ ಶತಮಾನದ ಆದಿಯಲ್ಲಿ ನೋಡತೊಡಗಿತು. ಆಶ್ಯಾ ಖಂಡದ ಇತರ ಹಲವು ಸೋದರೀ ರಾಷ್ಟ್ರಗಳಂತೆ ಭಾರತವೂ ಜಪಾನಿನ ಈ ಜಯಪ್ರಗತಿಗಳ ಬಗ್ಗೆ ಅಭಿಮಾನ ತಾಳಿತು.

ಆಶ್ಯಾ ಖಂಡದ ಹಲವು ರಾಷ್ಟ್ರಗಳ ಹಣೆ ಬರಹವಾಗಿರುವ ಪಾರತಂತ್ರ್ಯದ ನೊಗದ ಭಾರದಿಂದ ಜಪಾನು ತಪ್ಪಿಸಿಕೊಂಡಿದೆ. ಅದು ಸ್ವತಂತ್ರವಾದೊಂದು ರಾಷ್ಟ್ರ ಮಾತ್ರವಲ್ಲ, ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿ ಇಂದು ಪರಿಗಣಿಸಲ್ಪಟ್ಟಿದೆ. ಜಪಾನಿನ ಈ ಜಯವನ್ನು ಕಂಡು ಆಶ್ಯಾ ಖಂಡದ ಬೇರೆಬೇರೆ ರಾಷ್ಟ್ರಗಳೆಲ್ಲವೂ ತಮ್ಮ ಮನೆಗಳಲ್ಲಿ ತಾವು ಒಡೆಯರಾಗುವ ಆಸೆ ಭರವಸೆ ತಾಳಿದ್ದವು.

ಹಳದಿ ಭಯ

ಹಿಂದಿನ ಸನಾತನ ರೀತಿಯಿಂದ ಇಂದಿನ ಆಧುನಿಕ ರೀತಿಗೆ ಜಪಾನು ಬಂದು ಕೈಗಾರಿಕೆಗಳಲ್ಲಿ ಮುಂದುವರಿದು, ಜಗತ್ತಿನ ಸಂತೆಯನ್ನು ಆಕ್ರಮಿಸಿದಾಗ, ಪಾಶ್ಚಾತ್ಯರು ಅದರಿಂದ ಬೆರಗಾದರು, ಜಪಾನನ್ನು ನಿಂದಿಸುವ ಪ್ರಚಾರ ಕಾರ್ಯಕ್ಕೆ ಲೇಖಕರು ತಲೆಯೆತ್ತಿದರು 'ಹಳದಿ ಭಯ' ಎಂಬುದು ಕೆಲಕಾಲದ ವರೆಗೆ ಲೇಖಕರ ಪ್ರಚಾರ ಕಾರ್ಯವೇ ಆಗಿತ್ತು. ಜಪಾನು ತನ್ನ ಸತ್ವವನ್ನು ತಿಳಿದ ಪ್ರದರ್ಶಿಸಿದಂತೆ ಆಶ್ಯಾ ಖಂಡದ ಇತರ ರಾಷ್ಟ್ರಗಳೂ ಮುಂದುವರಿದು ಕೆಲಸ ಮಾಡಿದ್ದರೆ, ಆಶ್ಯಾ ಖಂಡವು ಇಂದು ಅಸದೃಶವಾದ ಪ್ರಗತಿಯನ್ನು ಹೊಂದುತ್ತಿದ್ದಿತು.

ಇತಿಹಾಸವನ್ನೋದಿದವರಿಗೆ ಗೊತ್ತಿದೆ, ಹಿಂದೊಮ್ಮೆ ಪಾಶ್ಚಾತ್ಯ ಭೂಭಾಗದ ಮೇಲೆ ತನ್ನ ಸೈನಿಕರನ್ನು ಸಾಗಿಸಿದ ಆಶ್ಯಾ ಖಂಡವು ಇಂದು ಹೇಗೆ ಪರಕೀಯರ ಸಾಮ್ರಾಜ್ಯಶಾಹೀ ಪದಹತಿಯಲ್ಲಿ ಜರ್ಜರಿತವಾಗುತ್ತಿದೆಯೆಂಬುದು. ಆಶ್ಯಾ ಖಂಡವನ್ನು ಯೂರೋಪು ಆಳಬೇಕು, ಇಲ್ಲವೇ ಯೂರೋಪನ್ನು ಆಶ್ಯಾಖಂಡ ಆಳಬೇಕು ಎಂಬುದು ಒಂದು—ಪಂಥವಿದ್ದಂತೆ ತೋರುತ್ತದೆ— ಇಂದು ಜಗತ್ತಿನಲ್ಲಿ ಆಗುತ್ತಿರುವ ಕ್ರಾಂತಿಯು—ಯುದ್ಧ ಕ್ರಾಂತಿಯು—ಜಗತ್ತಿನ ಇಂದಿನ ಪರಿಸ್ಥಿತಿಗಳೆಲ್ಲವನ್ನೂ ತಲೆಕೆಳಗು ಮಾಡಲು ಸಾಧ್ಯವಿದೆ.

ಎಷ್ಟೇ ತೊಂದರೆ ತಡೆಗಳಿರಲಿ, ಪ್ರತಿಯೊಂದು ದೇಶದ ಮಾನವ ಜನತೆಯೂ ಸ್ವಾತಂತ್ರ್ಯ ಸುಖಗಳನ್ನು ಬಯಸದೆ ಇಲ್ಲ ಪ್ರತಿಯೊಂದು ರಾಷ್ಟ್ರವೂ ಪ್ರಗತಿಯ ಕಡೆಗೆ ತಲೆಯೆತ್ತದೆ ಇಲ್ಲ. ಇದು ಆಶ್ಯಾ ಖಂಡದ ಜನರಲ್ಲಿಯೂ ಅನ್ವಯಿಸದೆ ಇಲ್ಲ. ಜಪಾನು ಹೊಂದಿದ ಬಲವಂತವಾದ ಪ್ರಗತಿಯೇ, ಭಾರತವು ಅವಕಾಶವೊದಗಿದರೆ ಒಂದು ಬಲವಂತ ಪ್ರಾಗತಿಕ ರಾಷ್ಟ್ರವಾಗಬಹುದೆಂಬುದಕ್ಕೆ ಸಮೀಪದ ಪ್ರತ್ಯಕ್ಷ ನಿದರ್ಶನವಾಗಿದೆ.

ಸಂಸ್ಕೃತಿಗಳ ಸಾಮೀಪ್ಯ

ಭಾರತ, ಚೀನ, ಜಪಾನುಗಳ ಸಂಸ್ಕೃತಿಗಳಲ್ಲಿ ಬಹಳ ಸಾಮೀಪ್ಯವಿದೆ. ಈ ರಾಷ್ಟ್ರಗಳ ಜನರನ್ನು ಒಟ್ಟುಗೂಡಿಸುವ ಬೌದ್ಧಿಕ ಸಂಸ್ಕಾರವು ಒಂದೇ ಆಗಿದೆ. ಬರ್ಮಾ, ಸಯ್ಯಾಮ್, ಅನ್ನಾಮ್, ಕ್ಯಾಂಬೋಡಿಯಾ, ಜಾವಾ ಮತ್ತು ಡಚ ಈಸ್ಟ್ ಇಂಡಿಸ್ ಮೊದಲಾದ ಆಶ್ಯಾ ಖಂಡದ ಹಲವು ಚಿಕ್ಕ ಚಿಕ್ಕ ದ್ವೀಪಗಳ ಸಂಸ್ಕೃತಿಯನ್ನೂ ಜನತಾ ಜೀವನವನ್ನೂ ನೋಡಿದರೆ ಹಿಂದೊಮ್ಮೆ ಆಶ್ಯಾಖಂಡ ಉಜ್ವಲ ಸಂಸ್ಕೃತಿ ನಾಗರಿಕತೆಗಳಲ್ಲಿ ಪ್ರಾಗೆ ಇವೆಲ್ಲವುಗಳಲ್ಲಿ ಒಂದೇ ಬೆಳಕು ಹರಡಿತ್ತೆಂದು ತೋರಿಬರದಿರದು

ಜಪಾನು ಚೀನಗಳು ಇಂದು ಬಡಿದಾಡಿಕೊಳ್ಳುವುದಿದ್ದರೂ, ಆ ಎರಡು ರಾಷ್ಟ್ರಗಳು ಬಹಳ ಸಮೀಪ ಸಂಬಂಧವುಳ್ಳವುಗಳಾಗಿ ಅನೇಕ ಸಾಮ್ಯವನ್ನು ಹೊಂದಿವೆ, ಬಹುತರದ ಬಾಂಧವ್ಯವನ್ನು ಪಡೆದಿವೆ. ಅನ್ಯೋನ್ಯ ಋಣಿಗಳಾಗಿವೆ. ಭಾರತದಲ್ಲಿ ಹಿಂದೂ—ಮುಸ್ಲಿಂ ಜಗಳ ಎಂಬುದು ಇದ್ದರೆ, ಅದಕ್ಕೆ ಯಾವ ಕಾರಣವು ಎಂದು ಹೇಳಲು ಸಾಧ್ಯವಿದೆಯೋ, ಅಂತಹ ಕಾರಣವೇ ಜಪಾನ ಚೀನಗಳ ಜಗಳಕ್ಕೂ ಕಾರಣವಾಗಿದೆ ಹಿಂದುಗಳೂ ಮುಸ್ಲಿಮರೂ ತಮ್ಮ ಪರಿಸ್ಥಿತಿ ಸಂಬಂಧಗಳನ್ನು ಒಮ್ಮೆ ತಿಳಕೊಂಡರೆ ಮುಂದೆ ಎಂದೂ ಅವರು ಜಗಳಾಡಿಕೊಳ್ಳಲಾರರು. ಅಂತೆಯೇ ಜಪಾನು ಚೀನೀಯರೂ ಕೂಡಾ. ಇವುಗಳೆಲ್ಲಾ ಬರಿಯ ಊಹಾತ್ಮಕ ಭ್ರಮಾತ್ಮಕ ಕಲ್ಪಿತ ಪ್ರೇರಿತ ಅಭಿಪ್ರಾಯ ವ್ಯತ್ಯಾಸಗಳಾಗಿವೆಯಲ್ಲದೆ ಇಂತಹ ಕಲಹಗಳಿಗೆ ಸರಿಯಾಗಿ ಕಾರಣಗಳಿಲ್ಲ. ಇದರಿಂದ ವಿದೇಶೀಯರ ಲೂಟಿ ಸುಲಿಗೆಗಳಿಗೆ ಒಳ್ಳೆಯ ಅವಕಾಶವೊದಗಿಸಿಕೊಟ್ಟಂತೆ ಆಗುತ್ತದೆ.

ಭಾರತ, ಚೀನಾ, ಜಪಾನುಗಳು ತಮ್ಮ ತಮ್ಮೊಳಗೆ ಮಧುರ ಸಂಬಂಧವನ್ನು ತಿಳಿದು ಪ್ರಗತಿಯ ಹಾದಿಯನ್ನು ಹಿಡಿದಾಗ ಆಶ್ಯಾ ಖಂಡವು ಪುನರಪಿ ತಲೆಯೆತ್ತಿ ನಿಲ್ಲುವುದು.

ಪರಾಜಯ

[ಹಿನೆಯ ಪುಟದಿಂದ ಮುಂದುವರಿದುದು]

ಮಾಡುವಿಯಲ್ಲ?'' ಎಂದು ಅರಸನು ಹತ್ತಿರಕ್ಕೆ ಬಂದು ಕೇಳಿದನು.

''ನಾನು ಪುನಃ ವಿಚಾರಮಾಡಿ ನೋಡಿದೆನು. ಮೃಗಗಳ ಮೇಲೆ ನನ್ನದೇನೂ ಅಧಿಕಾರವಿಲ್ಲ. ಸೇವಕನು ದಂಡನೆಗೆ ಸಿದ್ಧನಾಗಿದ್ದಾನೆ'' ಎಂದು ಸನ್ಯಾಸಿಯು ಹೇಳಿದನು.

''ಮೃಗಗಳ ಮೇಲೆ ನಿನ್ನ ಎಂತಹ ಅಧಿಕಾರವಿದೆ? ಇದನ್ನು ನಾನು ತಿಳಿಯುತ್ತೇನೆ ಜಲದಲ್ಲಿದ್ದು ನೀನು ಮೊಸಳೆಯೊಡನೆ ವೈರವನ್ನು ಮಾಡುತ್ತಿದ್ದಾದರೆ ಪರಿಣಾಮವೇನಾಗುವುದು ಎಂಬುದನ್ನು ನೀನು ಈಗಲೇ ನಿನ್ನ ಕಣ್ಣುಗಳಿಂದ ನೋಡುವೆ'' ಎಂದು ವಿಕ್ರಮನು ಸನ್ಯಾಸಿಯೊಡನೆ ಹೇಳಿ ತನ್ನ ಸೈನಿಕರಿಗೆ ಹೀಗೆಂದು ಆಜ್ಞೆಯಿತ್ತನು—''ಇದೀ ಕಾಡಿನಲ್ಲಿ ಪ್ರಚಂಡ ಅಗ್ನಿಯನ್ನು ಪ್ರಜ್ವಲಿತ ಮಾಡಿ ಮತ್ತು ಕಾಡಿನ ಹೊರಗೆ ನಾಲ್ಕೂ ಕಡೆಗಳಲ್ಲಿ ಬಲೆಯನ್ನು ಬೀಸಿರಿ.''

ಸ್ವಲ್ಪ ಸಮಯದಲ್ಲಿಯೇ ಅರಣ್ಯವು ಅಗ್ನಿಕುಂಡವಾಗಿ ಪರಿಣಮಿಸಿತು ಎಲ್ಲಾ ಪಶುಪಕ್ಷಿಗಳು ವ್ಯಾಕುಲವಾಗಿ ಚೀತ್ಕಾರವನ್ನು ಮಾಡಿದವು.

ಅಗ್ನಿದೇವನು ತನ್ನ ಪ್ರಲಯಕಾರಿ ರೂಪವನ್ನು ಧಾರಣೆ ಮಾಡಿದ್ದನು. ಆಗ ಅಗ್ನಿಯ ತುಫಾನು ಬರುತಿತ್ತೋ ಎಂದು ತೋರುತಿತ್ತು. ಆಕಾಶವು ಬೆಂಕಿಯ ಮಳೆಯನ್ನು ಸುರಿಸುವಂತೆ ಕಾಣಬರುತಿತ್ತು. ಪಶುಪಕ್ಷಿಗಳ ಚೀತ್ಕಾರದಿಂದ ಪೃಥ್ವಿಯು ಅಲ್ಲಾಡುತಿತ್ತು. ದೊಡ್ಡ ದೊಡ್ಡ ವೃಕ್ಷಗಳು ದೊಡ್ಡ-ಶಬ್ದದೊಂದಿಗೆ ಕೆಳಗೆ ಬಿದ್ದವು

ರಾಜನ ಸಮೀಪವೇ ನಿಂತು ಸನ್ಯಾಸಿಯು ಕೊಳಲನ್ನು ಎತ್ತಿದನು. ಮತ್ತು ರಣಬೇರಿಯ ಧ್ವನಿಯನ್ನು ಮಾಡಿದನು.

''ಅಧೀನವಾಗಿ ಬದುಕುವದಕ್ಕಿಂತ, ಸಾಯುವುದು ಚಿತ ಸ್ವತಂತ್ರವಾಗಿ'' ಅದೇ ಸಮಯದಲ್ಲಿ ಮೃಗಗಳ ಸಮೂಹವು ಅಗ್ನಿಯ ಕಡೆಗೆ ಓಡುವುದು ತೋರಿಬಂತು. ಅವುಗಳು ದೂರದಿಂದ ಸನ್ಯಾಸಿಯ ಧ್ವನಿಯ ಕಡೆಗೆ ಮುಖವನ್ನು ಮಾಡಿ ಕ್ಷಣಮಾತ್ರ ನಿಂತವು ಮತ್ತು ಸನ್ಯಾಸಿಯ ಸಂಗೀತಕ್ಕೆ ತಾಳವನ್ನು ಹಾಕುತ್ತ ಪ್ರಜ್ವಲಿತ ಅಗ್ನಿಯಲ್ಲಿ ದುಮುಕಿದವು

ನೋಟೀಸು

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮ ನಂಬ್ರ 23/1941

ವೆಂಕಟ್ರಾಯ ನ್ಯಾಸಭಾ ಕೂಡಾ ವಾದಿರು

ಮತ್ತು

ಶಂಕರನಾರಯಣ ಹೆಬ್ಬಾರ ಕೂಡ.

—ಪ್ರತಿವಾದಿರು

1, 5, 9ನೆ ಪ್ರತಿವಾದಿರು, ಉಡುಪಿ ತಾಲ್ಲು ಮಟ್ಟಾರು ಗ್ರಾಮದಲ್ಲಿರುವ ಕೃಷ್ಣ ನ್ಯಾಕರ ಮಗ ಲಕ್ಷ್ಮಣ ನ್ಯಾಕ. ಪಂಮಯ್ಯ ನ್ಯಾಕರ ಮಗ ಕೃಷ್ಣಯ ನ್ಯಾಕ ಲಕ್ಷ್ಮಣ ನ್ಯಾಕರ ಮಗ ಮಾಧವ ನ್ಯಾಕ ಕೂಡಾಯಿವರಿಗ

ಸೋಕಿನ ವಾದಿರು ಪ್ರತಿವಾದಿರ ಮೇಲೆ ಮೇಲಂಡ ಕೋರ್ಟಿನಲ್ಲಿ ಮಾಡಿದ ದಾವೆಯು ತಾ 13-10-1941ಕ್ಕೆ ನೀವೈರು ತಮಗೆ ಯುಕ್ತವಾದರಿಂದ ನೀವು ಆ ದಿನ ಪೂರ್ವಾಹ್ನ 10 30 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪವನ್ನು ಜ್ಯಾಹೀರು ಮಾಡದಿದ್ದರೆ, ನಿಮ್ಮನ್ನು ಎಕ್ಸ್‌ಪಾರ್ಟಿಯಾಗಿ ಮಾಡಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯ ತಿರ್ಮಾನ ಮಾಡಲಾಗುವದೆಂತ ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ

ಮಂಗಳೂರು } K. Suryanarayana Adiga
3-10-1941 } Advocate for Peff

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.52 ಬೆಳಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಗ್ಗೆ	5.15 ಸಾಯಂ.
ಜೋಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ	6.50 ಸಾಯಂ.
ಕಣ್ಣನ್ನೂರು ವರೆಗೆ	5 52 ಸಾಯಂ.	9.40 ಪೂರ್ವರಾತ್ರ

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS

Banking business of every description transacted.

Full particulars can be had from any of our Branches.

ನೋಡಯ್ಯ! ದೇಶದ ಧೀಮಂತರೆಲ್ಲರೂ ಈ ಸೆರೆಮನೆಯೊಳಗಿದ್ದಾರೆ

ತ್ರಿಚಿನಾಪಳ್ಳಿ ಸೆರೆಮನೆಯ ಅಧಿಕಾರಿ ಸೇವಕನಿಗೆ ಹೇಳಿದನು

ಡಾ| ಸುಬ್ಬರಾಯನರು 'ಸರ್' ಪದವಿ ತಿರಸ್ಕರಿಸಿದರು

ತೆಂಗಿನೆಣ್ಣೆ ಬಿಡಲಿಲ್ಲ; 'ಕೊಬ್ರಿಕಾ ತೇಲ್' ದೊರಕಿತು!

"ಇಲ್ಲಿ ನೋಡಯ್ಯ! ಈ ದೇಶದ ಧೀಮಂತರೆಲ್ಲರೂ ಈ ಸೆರೆಮನೆಯೊಳಗಿದ್ದಾರೆ! ನೀನು ನಮ್ಮೊಡನೆ ಸಹಕರಿಸಿ ಅವರನ್ನು ತೃಪ್ತಿ ಪಡಿಸಲಾರೆಯಾದರೆ ಇಲ್ಲಿಂದ ಹೊರಟುಹೋಗಬಹುದು"

—ಹೀಗೆಂದು ತ್ರಿಚಿನಾಪಳ್ಳಿ ಸೆರೆಮನೆಯ ಹೊಸ ಸುಪರಿಂಟೆಂಡೆಂಟರಾದ ಕೆಪ್ಟನ್ ಹಚಿನ್ ಎಂಬ ಆಂಗ್ಲೇಯರು ಅಲ್ಲಿನ ಸೇವಕನೊಬ್ಬನೊಡನೆ ಹೇಳಿದನು.

ಆ 'ದೇಶದ ಧೀಮಂತರು' ಎಂದರೆ ಸೆರೆಮನೆಗೆ ಸೇರಿದ್ದ ರಾಜಕೀಯ ಕೈದಿಗಳು-ರಾಜಾಜಿ ಪ್ರಭೃತಿಗಳು!

ಈ ರೀತಿಯಲ್ಲಿ ಕೆಲವು ಸಾರಸ್ಯವಾದ ವಿಷಯಗಳನ್ನು ಶ್ರೀ. ಎಲ್. ಎಸ್. ಕರಯಾಲರ್ ಎಂ. ಎಲ್. ಎ. ಇವರು 'ತ್ರಿಚಿನಾಪಳ್ಳಿಸೆರೆಮನೆಯೊಳಗೆ' ಎಂಬ ತನ್ನ ಹೊಸ ಪುಸ್ತಕವೊಂದರಲ್ಲಿ ವರ್ಣಿಸಿದ್ದಾರೆ. ಲೇಖಕರು ಐದು ತಿಂಗಳ ತನಕ ರಾಜಕೀಯ ಕೈದಿಯಾಗಿ ತ್ರಿಚಿ ಸೆರೆಮನೆಯಲ್ಲಿದ್ದು, ಅಲ್ಲಿ ಕೂಡಿದ ಹಲವಾರು ವ್ಯಕ್ತಿಗಳ ಪರಿಚಯವನ್ನೂ ಘಟನೆಗಳನ್ನೂ ಸೆರೆಮನೆಯ ಜೀವನದ ವಿವರಗಳನ್ನೂ ಅದರಲ್ಲಿ ಅವರು ವಿವರಿಸಿದ್ದಾರೆ. ಹಲವು ಸಂಗತಿಗಳು ಅದರಲ್ಲಿ ಬಹಳ ಸ್ವಾರಸ್ಯಕರವಾಗಿವೆ.

● ● ●

ತ್ರಿಚಿನಾಪಳ್ಳಿ ಸೆರೆಮನೆಯಲ್ಲಿ ರಾಷ್ಟ್ರದ ಭವಿಷ್ಯ ನಿರ್ಮಾಪಕರೆಂಬವರು ಹಲವರು ಇದ್ದರು. ರಾಜಾಜಿಯವರಿಂದ ಹಿಡಿದು ಮದ್ರಾಸು ಪ್ರಾಂತದ ಮಾಜಿ ಮಂತ್ರಿವರ್ಯರು ಶಾಸನ ಸಭಾಸದಸ್ಯರು, ಕಾಂಗ್ರೆಸ್ ಮುಖಂಡರು ಅನೇಕ ಮಂದಿಯಿದ್ದರು. ಅವರೊಡನೆ ಸೆರೆಮನೆಯಲ್ಲಿ ಕಳೆದ ಕಾಲ, ಅವರ ದಿನಚರಿಯನ್ನು ನೋಡುತ್ತಿರುವ ಸಂದರ್ಭ, ಅವರೊಡನೆ ವ್ಯವಹಾರ ಬೆಳೆಸುವ ಅನುಕೂಲಗಳ ವಿಷಯದಲ್ಲಿ ಶ್ರೀ ಕರಯಾಲರು ಬಹಳ ಸ್ವಾರಸ್ಯವಾಗಿ ಅನೇಕ ಸಂಗತಿ ಬರೆದಿದ್ದಾರೆ.

ಆ ಸೆರೆಮನೆಯಲ್ಲಿದ್ದ ಪ್ರಮುಖರ ಸ್ವರೂಪ ಚಿತ್ರಗಳನ್ನು ಅವರು ಅದರಲ್ಲಿ ಕೊಟ್ಟಿರುವರು. ಸೆರೆಮನೆಯೆಂಬುದರ ಕಲ್ಪನೆ ನಿಜವಾಗಿಸ್ವಲ್ಪ ಭೀಕರವಾದುದೇ, ತಮ್ಮ ಬಂಧು ಬಾಂಧವರನ್ನು ಅಲ್ಲಿನವರು ನೋಡಲು ಸಾಧ್ಯವಿಲ್ಲ, ತಮ್ಮ ವಿಶಿಷ್ಟ ಕಾರ್ಯಗಳಿಗೆ ಅಲ್ಲಿ ಎಡೆಯಿಲ್ಲ; ತಮಗೆ ಬೇಕಾದ ಪುಸ್ತಕಗಳಿಗೆ ಅಲ್ಲಿ ಆಸ್ಪದವಿಲ್ಲ— ಏಕಾಂತ ಜೀವನ ಅಲ್ಲಿ ದೊರೆಯುತ್ತದೆ; ಏಕಾಂತ ನಿಜವಾಗಿಯೂ ಭೀಷಣ.

● ● ●

ರಾಜಕೀಯ ಕೈದಿಗಳು ಎಂದರೆ ಕಪಟಿಗಳಲ್ಲ; ವಂಚಕರಲ್ಲ; ದ್ರೋಹಿಗಳಲ್ಲ; ಕೊಲೆಪಾತಕಿಗಳಲ್ಲ; ಸದ್ಗೃಹಸ್ಥರು, ಒಮ್ಮೆ ಅಧಿಕಾರಕ್ಕೇರಿನಿಂತವರೇ ಬಹುಮಂದಿ ಅಲ್ಲಿದ್ದರು. ಆದರೆ ಅಂತಹವರಿಗೂ ಸಾಮಾನ್ಯಕೊಲೆಪಾತಕಿಗಳಾದ ಕೈದಿಗಳಿಗೂ ಕೂಡಿಬರುವ ಕಾಲವಿತ್ತು; ಅವರೊಡನೆ ವ್ಯವಹಾರ ಮಾಡುವ ಸಂದರ್ಭವಿತ್ತು: ಅವರ ಜೀವನವನ್ನು ಅಭ್ಯಸಿಸುವ ಸಂದರ್ಭವಿತ್ತು. ಹೀಗಾಗಿ ಲೇಖಕರು ಹೇಳುತ್ತಾರೆ; ಶಾಸನ ಸಭಾ ಸದಸ್ಯರಾದವರು ಅವಶ್ಯ ಹೋಗಲೇ ಬೇಕು; ಏಕೆಂದರೆ ಸೆರೆಮನೆಗಳೆಂದರೆ ನರಕ ಕುಂಡಗಳಾಗಿರದೆ, ಮಾನವನ ತಪ್ಪನ್ನು ತಿದ್ದಲು ಆಸ್ಪದವಿರುವ ಸ್ಥಳಗಳಾಗಿ ಸೆರೆಮನೆಗಳನ್ನು ಸುಧಾರಿಸಲು; ಅಂತಹ ಸುಧಾರಣೆಗೆ ಶಾಸನ ಸಭಾ ಸದಸ್ಯರು ಯತ್ನಿಸಬಹುದು, ಅವರಿಗೆ ಆ ಅನುಭವ ದೊರಕಬೇಕಾದರೆ ಅವರು ಸೆರೆಮನೆಯ ವಾಸವನ್ನು ಒಮ್ಮೆಯಾದರೂ ಅನುಭವಿಸಲೇ ಬೇಕು.

● ● ●

ಲೇಖಕರು ಮಲಬಾರಿನ ಮಂಜುನಾಥರಾಯರ ವ್ಯಕ್ತಿತ್ವವನ್ನು ಬಹಳ ಕೊಂಡಾಡುತ್ತಾರೆ. ಕಳೆದ ಶಾಸನ ಭಂಗ ಕಾಲದಲ್ಲಿ ಅವರ ಮೇಲೆ ಪೋಲೀಸರು ಮಾಡಿದ ಅನ್ಯಾಯವು ಸ್ಮರಣೀಯವಿದೆ, ಅವರ ಶರೀರ ದೃಢವಾಗಿದೆ, "ಅವರಿಂದು ಪ್ರತಿಯಾದ ಅಂಚೆ ಇಲಾಖೆ ನಡೆಸುತ್ತಾರೆ, ಅವರು ಒಂದು ಪ್ರತಿಯಾದ ಸರಕಾರವನ್ನೇ ನಡೆಸಬಹುದು. ರಾಯರೆಂದರೆ ಒಬ್ಬ ಸ್ಥಳೀಯ ಡಿವೆಲೆರಾ ಆಗಿದ್ದಾರೆ"— ಹೀಗೆಂದು ಅವರ ವಿಷಯ ಲೇಖಕರು ಬರೆದಿರುತ್ತಾರೆ

'ಒಮ್ಮೆ ಸೆರೆಮನೆಗೆ ಜೈಲ್ ಸುಪರಿಂಟೆಂಡೆಂಟ್, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಹಾಗೂ ಜೈಲರ್ ಇವರು ಬಂದಿದ್ದರು; ಕೈದಿಗಳ ಅನಾನುಕೂಲ ವಿಚಾರಣೆಗಾಗಿ ಮದ್ರಾಸಿನ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ-ಶ್ರೀ. ವಿಶ್ವನಾಥನ್ ಅವರೊಡನೆ ಹೇಳಿದರು. "ನೋಡಿರಯ್ಯ ಇದೇನು? ನೀವಿದನ್ನು ರೊಟ್ಟಿಯೆನ್ನುತ್ತೀರಾ? ಇಲ್ಲಿ ಒಂದು ನಾಯಿಯಿದೆಯಲ್ಲ; ನೋಡೋಣ ಅದಾದರೂ ಈ ರೊಟ್ಟಿಯನ್ನು ತಿನ್ನುತ್ತದೋ ಎಂದು" ಹೀಗೆನ್ನುತ್ತಾ ತಮಗಿಟ್ಟಿದ್ದ ರೊಟ್ಟಿಯ ತುಂಡನ್ನು ಅಲ್ಲಿದ್ದ ನಾಯಿಯ ಮುಂದೆಸೆದರು. ನಾಯಿ ಮುಟ್ಟಲಿಲ್ಲ ಜೈಲ್ ಸುಪರಿಂಟೆಂಡೆಂಟರ ಮುಖ ಕಪ್ಪಾಯಿತು! ಕೈದಿಗಳೆಲ್ಲರೂ ಖೊಳ್ಳೆಂದುನಕ್ಕರು'

● ● ●

ಸೆರೆಮನೆಯೊಳಗೆ ತೆಂಗಿನೆಣ್ಣೆ ಬಿಡುವುದಿಲ್ಲ. ಆದರೆ ತುಪ್ಪ ಹಾಗೂ ಜೇನನ್ನು ಬಿಡುತ್ತಾರೆ. ಸರ್ದಾರ್ ಚೋಕ್ಕಲಿಂಗರ 'ಚಿಳ್ಳೆಯವರು ಒಮ್ಮೆ "ಕೊಬ್ರಿಕಾ ತೇಲ್"ಗೆ ಹೇಳಿದರು. ಜೈಲರ್ ಆಗಬಹುದು" 'ಎಂದ. ಮರುದಿನ ಒಂದು ದೊಡ್ಡ 'ಕೊಬ್ರಿಕಾ ತೇಲ್'ದ ಡಬ್ಬಿಯೇ ಬಂತು; ಬಹುಶಃ ಸ್ವಲ್ಪವೇ ಹೊತ್ತಿನಲ್ಲಿ ಜೈಲರ್ ತಿಳಿದಿರಬಹುದು—ಕೊಬ್ರಿಕಾ—ತೇಲ್ ಎಂದರೆ ತೆಂಗಿನೆಣ್ಣೆಯೆಂದು!

● ● ●

ಡಾ| ಸುಬ್ಬರಾಯನರ ವಿಷಯ ಒಂದು ವಿಶೇಷ ಸಂಗತಿ ಇದರಲ್ಲಿದ್ದೆ. ಡಾ| ಸುಬ್ಬರಾಯನರು ಓದುತ್ತಿದ್ದರು: ಟೆಲಿಫೋನ್ ಕೇಳಿಸಿತು. ಗವರ್ನರರ ಪ್ರೈವೇಟ್ ಸೆಕ್ರೆಟರಿ ಗ್ರೀನ್ ಸಾಹೇಬರದು. ಡಾ| ಸುಬ್ಬರಾಯನರಿಗೆ 'ಸರ್' ಪದವಿ ದೊರೆತ ವಿಷಯ ಅಭಿವಂದನೆಯದು!

"ಮಿಸ್ಟರ್ ಗ್ರಿನ್ ನಾನು ಗವರ್ನರರನ್ನು ಈಗ ನೋಡಬೇಕಾಗಿದೆ" ಡಾ| ಸುಬ್ಬರಾಯನ್ ಮಾತನಾಡಿದರು. "ಏನು! ಈಗ ಹತ್ತು ಗಂಟೆ" ಸೆಕ್ರೆಟರಿಯ ಉತ್ತರಬಂತು. "ಮಿ| ಗ್ರೀನ್, ಚಿಂತೆಯಿಲ್ಲ, ಅವಶ್ಯ ನೋಡಲೇಬೇಕು" "ಆಗಬಹುದು" ಉತ್ತರ ಬಂತು. ತನಗೆ ಅಧಿಕಾರಿಗಳಿಂದ ಯಾವುದೇ ಬಹುಮಾನವಾಗಲಿ, ಪದವಿಯಾಗಲಿ, ಬಿರುದಾಗಲಿ ಬೇಡವೆಂದು ಡಾ| ಸುಬ್ಬರಾಯನರು ಹೇಳಿದ್ದನ್ನು ಕೇಳಿ ಗೋಶನ್ ದೊರೆಗಳು ಬೆರಗುಗೊಂಡಿರಬೇಕು. ಡಾ| ಸುಬ್ಬರಾಯನರ ಹೆಸರು ಗಜೇಟಿನಲ್ಲಿ ಅಚ್ಚಾಗಿದ್ದು ಗವರ್ನರರು ಸಮುಸ್ಯೆಗೊಂಡರಂತೆ; ಕಡೆಗೆ ಅದರ ಮೇಲೆ ಬಿಳಿ ಕಾಗದ ಚೀಟು ಹಚ್ಚಲಾಯಿತಂತೆ!

ಕೆಲದಿನಗಳಲ್ಲಿ ಗೋಶನ್ ದೊರೆಗಳು ಶ್ರೀಮತಿ ಸುಬ್ಬರಾಯನರನ್ನು ಕಂಡು "ನಿಮ್ಮನ್ನು ಲೇಡಿ ಸುಬ್ಬರಾಯನ್ ಎಂದು ಕರೆವ ಮನ್ನಣೆಯನ್ನು ನಿಮ್ಮ ಪತಿಯರು ತಿರಸ್ಕರಿಸಿ ಬಿಟ್ಟುಕೊಟ್ಟರು" ಎಂದು ವಿವರಿಸಿದರಂತೆ! ಅದಕ್ಕೆ ಶ್ರೀಮತಿ ರಾಧಾಭಾಯಿ ಸುಬ್ಬರಾಯನರು ಈ ರೀತಿ ಉತ್ತರಿಸಿದರಾಗಿ ಲೇಖಕರು ಬರೆಯುತ್ತಾರೆ. "ಹೌದು ನನ್ನ ಪತಿ ಮಾಡಿದ್ದು ಸರಿಯಾಯಿತು. ಬಿರುದು ಭಾವಲಿಗಳು, ರಿಟೈರ್ ಆದವರಿಗೆ ಅವರಿನ್ನೂ ರಿಟೈರ್ ಆಗಲಿಲ್ಲ. ಕೆಲಸ ಮಾಡುತ್ತಲೇ ಇದ್ದರೆ! ಇನ್ನೂ ಕೆಲಕಾಲ ಕೆಲಸದಲ್ಲಿಯೇ ಅವರಿರಬೇಕಾಗುವುದು'

ಬ್ರಿಟನಿನಲ್ಲಿ ವಿದ್ಯೆ ಪಡೆದವರು, ಕಳೆದ ಯುದ್ಧದಲ್ಲಿ ಬ್ರಿಟನಿಗೆ ಸಹಾಯಮಾಡಿದವರು—ಯುದ್ಧಮಂತ್ರಿಗೆ ಪ್ರೈವೆಟ್ ಸೆಕ್ರೆಟರಿಯಾಗಿದ್ದವರು ತನ್ನ ಮಕ್ಕಳನ್ನು ಬ್ರಿಟನಿಗೇ ವಿದ್ಯಾರ್ಜನೆಗೆ ಕಳುಹಿಸಿದವರು—ಡಾ| ಸುಬ್ಬರಾಯನ್ ಇಂದು ಬ್ರಿಟಿಷರ ಯುದ್ಧಯತ್ನಕ್ಕೆ ವಿರುದ್ಧ ನಿಂತಿದ್ದಾರೆ! ಇದಕ್ಕೆ ಬ್ರಿಟಿಷ್ ಸರಕಾರವೇ ಉತ್ತರ ಕೊಡಬೇಕಲ್ಲವೆ?

● ● ●

ಇಂತಹ ಹಲವಾರು ಸಂಗತಿಗಳಿಂದ ಕೂಡಿದ ಪುಸ್ತಕವು ರಮ್ಯ ವಾಚನೀಯವಿದೆ. ಸೆರೆಮನೆಯ ಸಾಹಿತ್ಯಗಳು ಇತ್ತೀಚೆಗೆ ಬೆಳೆಯುತ್ತಾ ಹೋಗುತ್ತಿವೆ; ಅಂತಹವುಗಳಲ್ಲಿ ಇದು ಒಂದು ವಿಶೇಷದ್ದಾಗಬಹುದು.

—Free India



ಈ ದಿನ ನೀವು ನಿಮ್ಮ ಹಲ್ಲುಗಳನ್ನು

ಮೆಕ್ಲೀನಿನಿಂದ

ತೊಳೆದಿದ್ದೀರಾ?

ನಾನೆಂದೂ ಮಾಡದಿರುವುದಿಲ್ಲ

ಸುಂದರ ಶುಭ್ರ ಹಲ್ಲುಗಳಿಗೆ, ಆರೋಗ್ಯಕರ ಅಂಟನ್ನು ಕೊಡುವ, ಬಾಯಿಯನ್ನು ಹೊಸತೂ ತಂಪೂ ಮಾಡುವ ಮೆಕ್ಲೀನನ್ನು ಉಪಯೋಗಿಸಿ, ಅದು ಕೂಡಲೇ ನೋವನ್ನು ಗುಣಪಡಿಸುತ್ತದೆ. ದವಡೆಯನ್ನು ಬಿಗಿಗೊಳಿಸುತ್ತದೆ. ಉಪಯೋಗಿಸಿದರೆ ಖರ್ಚು ಕಡಿಮೆಯಾಗುವುದು

ಸಿನೆಮಾ ಸುದ್ದಿ

ನವಯುಗದವರ "ಸಂಗಂ"

ನವಯುಗ ಚಿತ್ರಪಟದವರು ತಯಾರಿಸಿದ ಸಂಗಂ ಎಂಬ ಚಿತ್ರವು ಬರುವ ದೀಪಾವಳಿಯಲ್ಲಿ ಬೊಂಬಾಯಿಲ್ಲಿ ಪ್ರದರ್ಶಿತವಾಗಲಿದೆಯೆಂದು ತಿಳಿದಿದೆ. ಮಾಸ್ಟರ್ ವಿನಾಯಕ್ ಇದರ ನಿರ್ಮಾಣಕರ್ತರು, ಶ್ರೀ ಜುನ್ನಾರ್ಕರ್ ನಿರ್ದೇಶಕರು

'ರೋಟಿ'ಯಲ್ಲಿ ಭಿಕ್ಷುಕರು

ನೇಶನಲ್ ಸ್ಟುಡಿಯೋದವರು ತಯಾರಿಸುವ 'ರೋಟಿ' ಚಿತ್ರದಲ್ಲಿ ನಿಜವಾದ ಭಿಕ್ಷುಕರೇ ಭಿಕ್ಷುಕರ ಪಾತ್ರವಹಿಸುವಂತೆ ನಿರ್ದೇಶಕ ಮೆಹಬೂಬರು ಮಾಡಿರುವರೆಂದು ತಿಳಿದಿದೆ

ಭಕ್ತಪೋತನ್.

'ವಾಹಿನಿ' ಚಿತ್ರ ಪಟದವರು 'ಭಕ್ತಪೋತನ್' ಎಂಬ ಆಂಧ್ರ ಕವಿಯ ಜೀವನ ಚರಿತ್ರೆಯನ್ನು ಚಲಚ್ಚಿತ್ರ ನಿರ್ಮಿಸುವರು ಅವರ ಹಿಂದಿನ ಚಿತ್ರಗಳು ವಂದೇ ಮಾತರಂ, ಸುಮಂಗಲಿ ಮತ್ತು ದೇವತಾ ಇವು ಮೂರು.

ದೇಶವಿದೇಶಗಳ ಸಿನೆಮಾ ವ್ಯವಸಾಯ.

ಜಪಾನಿನ ಟೋಕ್ಯೋದಲ್ಲಿ ಇಂಪೀರಿಯಲ್ ಕಾಲೇಜ್ ಆಫ್ ಆರ್ಟ್ಸ್ ಎಂಬಲ್ಲಿ ಸಿನೆಮಾ ಉದ್ಯೋಗದ ಶಿಕ್ಷಣ ಕೊಡುತ್ತಾರೆ ಜಪಾನಿನಲ್ಲಿ ಎರಡೇ ದೊಡ್ಡ ಸ್ಟುಡಿಯೋಗಳಿವೆ ಅಲ್ಲಿನ ೧೦% ದಷ್ಟು ಕೆಮರಾ ಮೆನ್ನರು ಅಮೆರಿಕನರು ಅಲ್ಲಿನ ಫಿಲ್ಮುಗಳು ಸರಾಸರಿ ೧೦,೦೦೦ ಸೀಟು ದೀರ್ಘವುಳ್ಳವುಗಳು. ಒಳ್ಳೆಯ ಫಿಲ್ಮೊಂದರ ರಚನೆಗೆ ೫೦,೦೦೦ ರೂಪಾಯಿಗಿಂತ ಹೆಚ್ಚು ವೆಚ್ಚಗಳಾಗದು. ಅಲ್ಲಿನ ನಟನಟಿಯರಿಗೆ ಭಾರತದ ನಟನಟಿಯರಂತೆ ವಿಪರೀತ ಸಂಬಳವಿಲ್ಲ ಜಪಾನೀಯರು ಪೌರಾಣಿಕ ಸಾಮಾಜಿಕ ಎರಡು ಬಗೆಯ ಚಿತ್ರಗಳನ್ನು ತಯಾರಿಸುವರು.

ಜಪಾನಿನ ನಟನಟಿಯರು ಬಹಳ ಕಷ್ಟಪಟ್ಟು ದುಡಿಯುವರು, ಕೆಲವು ವೇಳೆ ಅವರು ದಿನಕ್ಕೆ ೧೬ ತಾಸೂ ದುಡಿಯುವುದಿದೆ ಟೋಕಿಯೋ ಅಲ್ಲಿನ ಪ್ರಸಿದ್ಧ ಸಿನೆಮಾ ಪೇಟೆ, ಹೆಚ್ಚಿನ ಸಿನೆಮಾ ಗೃಹಗಳಲಿ ಒಂದೇ ತರಗತಿ ಒಂದೇ ತರದ ಬೆಲೆ. ಪ್ರತಿಯೊಂದು ಪ್ರದರ್ಶನಕ್ಕೂ ಅವರು ಎರಡೆರಡು ಚಿತ್ರ ತೋರಿಸುವರು.

ಅಮೆರಿಕದಲ್ಲಿ ಫಿಲ್ಮು ಉದ್ಯೋಗವು ಅಲ್ಲಿನ ಎರಡನೆಯ ಉದ್ಯೋಗ ಹೋಲಿವುಡ್ಡಿನ (ಫಿಲ್ಮು ರಾಜಧಾನಿ) ಜನಸಂಖ್ಯೆ ೩೦೦,೦೦೦ ಇದೆ ಇದರಲ್ಲಿ ⅔ ಪಾಲಷ್ಟು ಜನರು ಪ್ರತ್ಯಕ್ಷ ಅದವಾ ಅಪ್ರತ್ಯಕ್ಷ ಸಿನೆಮಾ ಉದ್ಯೋಗಕ್ಕೆ ಸಂಬಂಧಿಸಿದವರು. ಅಲ್ಲಿ ಕೇವಲ ೬ ದೊಡ್ಡ ಸ್ಟುಡಿಯೊಗಳಿಗೆ. ಮೆಟ್ರೋ ಗೋಲ್ಡ್‌ವಿನ್ ಮೇಯರ್ ಅದರಲ್ಲಿ ಬಹಳ ದೊಡ್ಡದು ಪರಮೌಂಟ್, ಟ್ವೆಂಟಿಯತ್ ಸೆಂಚುರಿ ಫೋಕ್ಸ್, ಯುನಿವರ್ಸಲ್, ಕೊಲಂಬಿಯಾ ಮತ್ತು ವಾರ್ನರ್ ಬ್ರೋಸ್ ಇವುಗಳೂ ಇವೆ. ಅಲ್ಲಿನ ಸಿನೆಮಾ ತಾರೆಗಳಿಗೆ ಬಹಳ ಸಂಬಳವಿದೆ ಪ್ರತಿಯೊಂದೂ ದೊಡ್ಡ ಚಿತ್ರ ಕಂಪನಿ ವರ್ಷ ಸರಾಸರಿ ೬೦ ಚಿತ್ರಗಳನ್ನು ೩೦೦ ಸಣ್ಣ ಚಿಕ್ಕಗಳನ್ನೂ ತಯಾರಿಸುವುದು. ಸುಮಾರು ೧೦೦ ನ್ಯೂಸ್ ರೀಲುಗಳನ್ನೂ ತೆಗೆವುದು. ಅಲ್ಲಿನ ಪ್ರತಿಯೊಂದು ಫಿಲ್ಮಿಗೆ ಕಡಿಮೆ ವೆಚ್ಚವೆಂದರೆ ೫೦,೦೦೦ ಡಾಲರ್. ಕೆಲವು ಚಿತ್ರಗಳಿಗೆ ಮಿಲಿಯಾಂತರ ವೆಚ್ಚ, ಮಾಡುವರು ಅಮೆರಿಕದಲ್ಲಿ ಒಟ್ಟಾಗಿ ೩೦,೦೦೦ ಸಿನೆಮಾ ಸದನಗಳಿವೆ

ಇಂಗ್ಲೆಂಡಿನಲ್ಲಿ ಅಷ್ಟೊಂದು ಒಳ್ಳೆಯ ಫಿಲ್ಮುಗಳಾಗುವುದಿಲ್ಲ. 'ಅಲೆಕ್ಸಾಂಡರ್ ಕೋರ್ಡ' ಇಂಗ್ಲೆಂಡಿನಿಂದ ಪ್ರಸಿದ್ಧ ಸಿನೆಮಾ ಕಂಪನಿ ಅಲೆಕ್ಸಾಂಡರ್ ಕೋರ್ಡನೂ ಆಂಗ್ಲೇಯನಲ್ಲ ಹಂಗೇರಿಯನು ಅಲ್ಲಿ ಕೆಲಸ ಮಾಡುವವರಲ್ಲಿ ಬಹು ಮಂದಿ ವಿದೇಶೀಯರು ಲಂಡನಿನಲ್ಲಿ ಜಗತ್ತಿನಲ್ಲಿರುವುದಕ್ಕಿಂತ ಹೆಚ್ಚು ನ್ಯೂಸ್‌ರೀಲ್ ಥಿಯೇಟರುಗಳಿವೆ.

ಜರ್ಮನಿಯಲ್ಲಿ ಉಫಾ ದೊಡ್ಡ ಕಂಪನಿ. ಈಗ ಹೆಚ್ಚಾಗಿ ಸಿನೆಮಾ ಕಂಪನಿಗಳು ಗೋಬೆಲ್ಸನ ಕೈ ಕೆಳಗೆ ಪ್ರಚಾರ ಕಾರ್ಯವನ್ನೇ ಮಾಡುತ್ತವೆ. ಪ್ರಚಾರದ ಸಿನೆಮಾಗಳನ್ನು ತಯಾರಿಸುವುದರಲ್ಲಿ ರಷ್ಯ ಹೆಸರು ಪಡೆದದ್ದು. ಐಯರ್ಲೆಂಡ್ ಮತ್ತು ಫಿನ್ಲೆಂಡು ಬಿಟ್ಟರೆ ಯೂರೋಪಿನ ಪ್ರತಿಯೊಂದು ರಾಷ್ಟ್ರದಲ್ಲಿಯೂ ಸ್ಟುಡಿಯೋಗಳಿವೆ. ಇಟೆಲಿಯಲ್ಲಿ ಸರಕಾರವೇ ಬಹಳ ದೊಡ್ಡ ಸ್ಟುಡಿಯೋ ಕಟ್ಟಿಸಿವೆ. ಭಾರತದಲ್ಲಿ ಸಾಮಾನ್ಯ ೮೦ ಸ್ಟುಡಿಯೋಗಳಿವೆ ೩,೦೦೦ ಥಿಯೇಟರುಗಳಿ-

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticurra Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುಳುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura) ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣವುಳ್ಳದ್ದು

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪೆಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರು

ಅಂಗಡಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT



ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಾನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿದ್ದಾರೆ. ಪ್ರಾಚೀನ ಸಂಸ್ಕೃತಿಯು ಳಿವೇ ಇಲ್ಲದುದರಿಂದಲೂ ರಕ್ತ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

¼ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು, ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜಂಟ್ — ಶಾ ಕಂಪನಿ, ಹಂಪನಕಟ್ಟಾ, ಮಂಗಳೂರು

ವಿಚಿತ್ರ ಪ್ರಪಂಚ ವಿಜ್ಞಾನಯುಗ

ಹಿಟ್ಲರನು ಮೊದಲೇ ನಿಶ್ಚಯಿಸಿದ್ದನು?

ಹಿಟ್ಲರನು ಮುಂದಿನ ಕಾರ್ಯಕ್ರಮಗಳ ಕುರಿತು ೧೯೩೪ರಿಂದ ೧೯೪೮ರ ವರೆಗಿನ ಕಾರ್ಯಕಲಾಪಗಳನ್ನು ಮೊದಲೇ ಸಿದ್ಧಪಡಿಸಿಕೊಂಡು ಅದರಂತೆ ಕೆಲಸಗಳನ್ನು ಮುಂದುವರಿಸುತ್ತಾ ಹೋದುದಾಗಿ ಇತ್ತೀಚೆಗೆ ಆತನು ಪ್ರಸಿದ್ಧಿಸಿದ ಒಂದು ಭೂಪಟದಿಂದ ತಿಳಿದು ಬರುತ್ತದೆ. ಅದರಲ್ಲಿ ಅವನು ೧೯೪೧ರಲ್ಲಿ ಯುಕರಿನ್ ಹಿಡಿಯುವುದಾಗಿ ಅಭಿಪ್ರಾಯಪಟ್ಟಿದ್ದಾನೆ. ೧೯೪೮ರಲ್ಲಿ ಇಡೀ ಯುರೋಪಿನ ದೊರೆಯಾಗುವ ತಯಾರಿಕೆ ಅವನದೆಂದು ಆ ಭೂಪಟವು ತಿಳಿಸುತ್ತದೆ. ಹಿಟ್ಲರನು ಹೀಗೆ ತನ್ನ ಕೆಲಸಗಳನ್ನು ಮೊದಲೇ ಆಲೋಚಿಸಿ ಮುಂದುವರಿಯುವುದಾಗಿ ತಿಳಿದಿದೆ.

◆ ◆

ಜಗತ್ತಿನಲ್ಲಿ ದೊಡ್ಡದಾದ ಆಣೆಕಟ್ಟು

ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಆಣೆಕಟ್ಟು ಅಮೆರಿಕದ ವಾಶಿಂಗ್‌ಟನ್ನಿನಲ್ಲಿರುವ ಗ್ರೇಂಡ್ ಡೇಮ್ ಎಂಬುದು. ನೈಗಾರಕ್ಕಿಂತಲೂ ಅದರ ಜಲಪ್ರವಾತವು 2½ ಪಾಲು ಅಧಿಕವಾಗಿರುವುದು.

ಇದನ್ನು ಕಟ್ಟಲು ಏಳು ವರ್ಷಗಳು ಹಿಡಿದಿದೆ. ೧೨೦೦೦೦೦ ಎಕ್ರೆ ಬಂಜರು ಸ್ಥಳವು ಇದರಿಂದ ಫಲವತ್ತಾದ ಭೂಮಿಯಾಗಿ ಮಾರ್ಪಡುವಂತಾಗಿದೆ. ಇದರ ವೆಚ್ಚ ೧೩,೦೦೦,೦೦೦ ಪವನುಗಳಷ್ಟು.

ಇದಕ್ಕೆ ಸಾಮಾನ್ಯ ಸರಿಯಾಗಿರುವ ಇನ್ನೊಂದ ಆಣೆಕಟ್ಟು ನೆವಾಡ ಅಂಜೋನದಲ್ಲಿರುವ ಬಾಲ್ಡರ್ ಡಾಮ್ ಎಂಬುದು. ಇದನ್ನು ಕಟ್ಟಿ ಮುಗಿಸಲು ೫ ವರ್ಷಗಳು ಹಿಡಿದಿವೆಯೆಂದು ಗೊತ್ತಾಗಿದೆ. ರಶ್ಯದ ದೊಡ್ಡದಾದ ನೀಪರ್ ಆಣೆಕಟ್ಟು ಕೂಡಾ ಬಾಲ್ಡರ್ ಆಣೆಕಟ್ಟಿನ ಅರ್ಧದಷ್ಟಿದೆಯಂತೆ.

◆ ◆

ಅನಾಗರಿಕರಿಗೂ ಶಾಸ್ತ್ರೀಯ ಸಂಗೀತದಲ್ಲಿ ಅಭಿಲಾಷೆಯಿದೆ

ದಕ್ಷಿಣ ಅಮೆರಿಕದ ಅನಾಗರಿಕ ಜನರು ಬಹಳ ಹಿಂದಿನ ಕಾಲದವರು. ಸಾಂಸ್ಕೃತಿಕ ಜಗತ್ತಿನ ಸಂಪರ್ಕ ಅವರಿಗಿಲ್ಲ. ಅವರು ಕಾಡು ಗುಡ್ಡೆಗಳಲ್ಲಿ ವಾಸಿಸುತ್ತಾರೆ. ಅವರಿರುವ ಕಾಡಿನಲ್ಲಿ ಶಾಸ್ತ್ರೀಯ ಸಂಗೀತ ಹೇಳುವ ರೇಡಿಯೋ ಇಟ್ಟಿತು; ಅವರು ಅದರಿಂದ ಈಗ ಬಹಳ ಆಕರ್ಷಿತರಾಗಿರುವರೆಂದು ತಿಳಿದಿದೆ. ಹೆಚ್ಚು ಹೆಚ್ಚಾಗಿ ಸಂಗೀತದಲ್ಲಿ ಅವರು ದಿನದಿನಕ್ಕೆ ತಲ್ಲೀನರಾಗುತ್ತಾ ಹೋಗುವರಂತೆ. ಅವರಿಗೆ ಶಾಸ್ತ್ರೀಯವಲ್ಲದ ಸಂಗೀತವನ್ನು ಹೇಳಿದರೆ ಅದರಿಂದ ಬೇಸರವೂ ಹುಟ್ಟುವುದಂತೆ.

ರಾಯಲ್ ನೌಕಾ ಬಲದಲ್ಲಿ ಎಕ್ಸ್‌ರೇ ಪ್ರಯೋಗ

ರಾಯಲ್ ನೌಕಾ ಪಡೆಯಲ್ಲಿರುವ ಹದಿನೈದು ಸಾವಿರ ಮಂದಿ ಎಕ್ಸ್‌ರೇ ಮೂಲಕ ಪರೀಕ್ಷಿಸಲ್ಪಟ್ಟರು. ಜನರನ್ನು ಹೀಗೆ ಒಟ್ಟಾಗಿ ಪರೀಕ್ಷಿಸಲು ಪ್ರತ್ಯೇಕ ಸಾಧನವೊಂದು ಇದೆ. ೩೦೦ ಜನರನ್ನು ಒಂದೇ ಸಲ ಅದರಿಂದ ಪರೀಕ್ಷಿಸಲಾಗುತ್ತದೆ. ಒಂದು ಮಿನಿಟಿಗೆ ನಾಲ್ವರಂತೆ ಫೊಟೋ ತೆಗೆವ ವಿದ್ಯುತ್‌ಶಕ್ತಿ ಸಂಯುಕ್ತವಾದ ಕೆಮರವು ಆ ಸಾಧನಕ್ಕೆ ಇಡಲಾಗಿದೆ. ಇಂತಹ ಎಕ್ಸ್‌ರೇ ಪರಿಶೋಧವು ಇತರ ಔದ್ಯೋಗಿಕ ಸಂಸ್ಥೆಗಳಿಗೂ ವಿಸ್ತರಿಸಲಾಗುವುದು. ಕ್ಷಯ ಮೊದಲಾದಂತಹ ಅಸಾಧಾರಣ ರೋಗಗಳ ಪರೀಕ್ಷೆಯ ಸಲುವಾಗಿ ಹೀಗೆ ಎಕ್ಸ್‌ರೇ ಪ್ರಯೋಗವು ಅತ್ಯಂತ ಸಹಕಾರಿಯಾಗುತ್ತದೆ

◆ ◆

ತಿಮಿಂಗಲು ಮೀನೋ? ಪ್ರಾಣಿಯೋ?

ತಿಮಿಂಗಿಲವು ಮೀನೋ ಪ್ರಾಣಿಯೋ ಎಂಬ ಬಗ್ಗೆ ಈಗ ಚರ್ಚೆಯೆದ್ದಿರುವುದು. ಅದು ಹೆಚ್ಚು ಸಮಯವನ್ನು ನೀರಿನಲ್ಲಿಯೇ ವ್ಯಯಿಸುವುದಿದ್ದರೂ ಅದು ಪ್ರಾಣಿಯೆಂಬುದಾಗಿ ಹಲವರ ಅಭಿಪ್ರಾಯವಿದೆ. ಉಪ್ಪು ನೀರಿನಲ್ಲಿ ಜೀವಿಸುವಂದಾ ಅದು ಪ್ರತಿಯೊಂದು ಪ್ರಾಣಿಗೂ ಜೀವಿಸಲು ಅವಶ್ಯವಾದ ಶುದ್ಧ ನೀರನ್ನು ಹೇಗೆ ಪಡೆಯುತ್ತದೆ ಎಂಬುದು ಸಂದೇಹವಾಗಿದೆ.

ಇತ್ತೀಚೆಗೆ ಮಾಡಿದ ಒಂದು ಸಂಶೋಧನೆಯಿಂದ ತಿಮಿಂಗಿಲವು ತನ್ನ ಆಹಾರದಿಂದ, ಶರೀರದೊಳಗೆಯೇ ಶುದ್ಧನೀರಿನ ಸಂಗ್ರಹ ಮಾಡುತ್ತಿರುವುದೆಂದು ಹೇಳಲಾಗಿದೆ. ಈ ರೀತಿಯ ಶರೀರ ರಚನೆ ತಿಮಿಂಗಿಲದ್ದಾಗಿರುವುದೆಂದು ಆ ಸಂಶೋಧಕರ ಹೇಳಿಕೆ.

◆ ◆

ಹೊಸತರದ ಬೆಂಕಿಪೆಟ್ಟಿಗೆ

ಮೋಸ್ಕೋ ಸಂಶೋಧನಾಲಯದಲ್ಲಿ ಈಗ ಹೊಸ ತರದ ಒಂದು ಬೆಂಕಿಪೆಟ್ಟಿಗೆಯನ್ನು ಕಂಡುಹುಡುಕಿರುವರು, ಅದರಲ್ಲಿ ಕೆಂಪು; ನೀಲಿ, ಹಸುರು ಮೊದಲಾದ ಹಲವು ಬಣ್ಣಗಳ ಜ್ವಾಲೆಗಳು ಹಾರಾಡುತ್ತದೆಯಂತೆ! ಇದನ್ನು ಸೈನಿಕರಿಗೆ ಎಚ್ಚರ ಕೊಡಲು ಉಪಯೋಗಿಸುವರಂತೆ. ಕಾಲು ಮೈಲು ದೂರಕ್ಕೆ ಇದರ ಬೆಳಕು ಕಾಣುವುದಂತೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ.



BHUVANENDRA PRODUCTS LTD.,

Head Office and Factory:
KATAPADI S Kanara

Depots:
1 Maharatha Galli, Hubli
2 57 Big street, Triplicane, Madras

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್.

THE PIE-MONEY BANK, LTD
Maidan Road, MANGALORE

Undertakes all kinds of Banking Business—Current account at 2½% per annum Savings Bank Deposits at 1½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%
Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars
K. R. GURU, *Managing Director*

The Bank of Mangalore Limited.

Branches — MOODABIDRI & PADUBIDRI
HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3 to 5%

INTEREST PAYABLE QUARTERLY

Interest on Savings Bank Deposits allowed at at 2½%

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—12—0   Regd. No. M 2460

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 10—10—1941   [ಸಂಚಿಕೆ 40]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS · BOMBAY · MADRAS · CALCUTTA

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದು ವಿಲಿಯಾಗಿಟ್ಟಿಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

'ದೀಪಾವಳಿ' ಚಿತ್ರದಲ್ಲಿ ಮಾಧುರಿ
ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ.

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 3-0-0   ಅಂಚೆ ವೆಚ್ಚ ಸೇರಿ ರೂ. 3-12-0   Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 10-10-1941   [ಸಂಚಿಕೆ 40]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಛಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದಮ್ಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು)

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

'ದೀಪಾವಳಿ' ಚಿತ್ರದಲ್ಲಿ ಮಾಧುರಿ
ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ

KANNADA ILLUSTRATED WEEKLY

ದಕ್ಷಿಣ ಕನ್ನಡ ಜಿಲ್ಲೆಯ ನೆರೆ ಹಾವಳಿಯ ಸಂಕಷ್ಟ ನಿವಾರಣೆಗೆ ಮುಂಬಯಿ ಮೇಯರ ಫ್ಲಡ್ ರಿಲೀಫ್ ಫಂಡಿನಿಂದ ಹೆಚ್ಚಿನ ಸಹಾಯ

ಮುಂಬಯಿ ಸಂಯುಕ್ತ ಕರ್ನಾಟಕ ಸಂಘದವರು, ಮುಂಬಯಿ ಮೇಯರರ ಕಡೆಗೆ ಆಗಸ್ಟ ತಿಂಗಳ ಕೊನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನೆರೆಹಾವಳಿಯ ಸಂಕಷ್ಟ ನಿವಾರಣೆಯ ವಿಷಯದಲ್ಲಿ ಒಬ್ಬ ಶಿಷ್ಟ ಮಂಡಳದ ಪ್ರಯತ್ನಗಳ ಫಲವಾಗಿ ಮೇಯರ ಫ್ಲಡ್ ರಿಲೀಫ್ ಕಮಿಟಿಯವರು ಕಳೆದ ಸಪ್ಟಂಬರ ತಿಂಗಳ ಕೆನ್ನ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಾಗಿ ೨೦೦೦ ರೂಪಾಯಿಗಳನ್ನು ಮಂಜೂರ ಮಾಡಿದರು. ಹಾಗೂ ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ಅಧ್ಯಕ್ಷರಾದ ದಿ. ಬ. ರಾಜ ಕಾರ್ಯಪ್ರಸಕ್ತ ಕೆ. ರಾಮಸ್ವಾಮಿಯವರನ್ನೂ, ಗೌರವ ಕಾರ್ಯದರ್ಶಿಗಳಾದ ಶ್ರೀ. ಜಿ. ಕೆ. ಚಟಗೇರಿಯವರನ್ನೂ ಕಮಿಟಿಯ ಸಭಾಸದರನ್ನಾಗಿ ಆರಿಸಿಕೊಂಡರು. ಈ ೨೦೦೦ ರೂಪಾಯಿಗಳು ಈಗಾಗಲೇ ಮಂಗಳೂರಿನ ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಕಳುಹಿಸಿಕೊಡಲ್ಪಟ್ಟಿವೆ. ಮೊನ್ನೆ ಅಕ್ಟೋಬರ ೧ನೇ ತಾರೀಖಿನ ದಿನ ಜರುಗಿದ ಮೇಯರ ಫ್ಲಡ್ ರಿಲೀಫ್ ಕಮಿಟಿಯ ಸಭೆಗೆ ಶ್ರೀ. ಚಟಗೇರಿಯವರು ಹೋಗಿದ್ದರು. ಸದ್ಯಕ್ಕೆ ಫಂಡಿನಲ್ಲಿದ್ದ ೧೫೦೦೦ ರೂಪಾಯಿಗಳನ್ನು ಹಂಚುವ ಪ್ರಶ್ನೆಯು ವಿಚಾರಕ್ಕಾಗಿ ಬಂದಿತ್ತು. ೧೨೦೦೦ ರೂಪಾಯಿ ಗುಜರಾತಕ್ಕೂ ೩೦೦೦ ರೂಪಾಯಿ ಮಲಬಾರಿಗೂ ಹಂಚಬೇಕೆಂಬ ಮುಖ್ಯ ಸೂಚನೆಯು ಸಭೆಯ ಮುಂದಿಡಲ್ಪಟ್ಟಿತು. ಆಗ್ಗೆ ಶ್ರೀ. ಚಟಗೇರಿಯವರು ಎದ್ದು ನಿಂತು ದಕ್ಷಿಣ ಕನ್ನಡ ಜಿಲ್ಲೆಯ ಸಂಕಷ್ಟಗಳನ್ನೂ ಬಡತನವನ್ನೂ ವರ್ಣಿಸಿ ಕನಿಷ್ಟ ಪಕ್ಷಕ್ಕೆ ೩೦೦೦ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲೇಬೇಕೆಂದು ಪ್ರತಿವಾದಿಸಿದರು. ಹಾಗೂ ಗುಜರಾತಿಗೆ ಇತರ ಮಾರ್ಗಗಳಿಂದ ದೊರೆತಿರುವ ಲಕ್ಷಗಟ್ಲೆ ಹಣದ ಸಹಾಯವನ್ನು ಲಕ್ಷ್ಯದಲ್ಲಿ ತಂದುಕೊಂಡು ಹಣ ಹಂಚುವ ವಿಚಾರಮಾಡಬೇಕೆಂದು ಬಿನ್ನವಿಸಿಕೊಂಡರು. ಈ ಬಗ್ಗೆ ಬಹುವೇಳೆ ಚರ್ಚೆಯಾಗಿ ಕೊನೆಗೆ ೧೦೦೦೦ ರೂಪಾಯಿಗಳನ್ನು ಗುಜರಾತಿಗೂ, ೩೦೦೦ ರೂಪಾಯಿಗಳನ್ನು ಮಲಬಾರಿಗೂ ೨೦೦೦ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೂ ಹಂಚಬೇಕೆಂಬ ಉಪಸೂಚನೆಯು ಸ್ವೀಕೃತವಾಯಿತು; ಮತ್ತು ಈ ಹಣವನ್ನು ಮಂಗಳೂರಿನ ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಕೂಡಲೆ ಕಳುಹಿಸಿಕೊಡಬೇಕೆಂದು ನಿರ್ಧಾರವಾಯಿತು. ಈ ರೀತಿ ದಕ್ಷಿಣ ಕನ್ನಡ ಜಿಲ್ಲೆಗೆ ಮೇಯರ ಫಂಡಿನಿಂದ ಒಟ್ಟು ೪೦೦೦ ರೂಪಾಯಿಗಳು ಈ ವರೆಗೆ ದೊರಕಿದಂತಾಯಿತು. ಹೆಚ್ಚು ಹಣ ಕೊಡಿಸುವ ಬಗ್ಗೆ ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ಪ್ರಯತ್ನಗಳು ಬಲವಾಗಿ ನಡೆದಿವೆ ಎಂದು ತಿಳಿದು ಬಂದಿದೆ.

[redacted]

ಸುಕ್ರ ಸಂಜೀವನ

ಭಾರತ ದೇಶದಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವ್ಯಾಯಾಮವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ. ಎ., ಎಫ್. ಸಿ. ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್, ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸಮಶೀತಲವಾದ ರುಚಿಕರ ಓವಲ್‌ಟಿನ್

ಬಿಸಿಲು ದಿನಗಳಲ್ಲಿ ಒಂದು ಗ್ಲಾಸ್ ತಣ್ಣನೆಯ ಓವಲ್‌ಟಿನ್ ರುಚಿಕರವಾದ ಪಾನೀಯವಾಗಿರುವದಲ್ಲದೆ ಇಡೀ ದೇಹಕ್ಕೆ ಪೋಷಣೆಯನ್ನೂ, ಚೈತನ್ಯವನ್ನೂ ಕೊಡುತ್ತದೆ. ಇದನ್ನು ತಯಾರಿಸುವುದು ಬಹು ಸುಲಭ. ಒಂದು ಗ್ಲಾಸ್ ತಣ್ಣನೆಯ ಹಾಲಿಗೆ ಸುಮ್ಮನೇ ಎರಡು ಟೀ ಚಂಚದಷ್ಟು "ಓವಲ್‌ಟಿನ್" ಅದನ್ನು ಸೇರಿಸಿರಿ ಮತ್ತು ನಿಮಗೆ ಬೇಕಾದರೆ ಸಕ್ಕರೆಯನ್ನು ಬೆರಸಿ, ನಂತರ ಚೆನ್ನಾಗಿ ಕಲಕಬಿಡಿ. ನೆನಪಿನಲ್ಲಿಡಿ, ಬಿಸಿ "ಓವಲ್‌ಟಿನ್" ನಿಮಗೆ ಎಷ್ಟು ಒಳ್ಳೆಯದೋ ತಣ್ಣನೆಯ "ಓವಲ್‌ಟಿನ್" ಅಷ್ಟು ಒಳ್ಳೆಯದು—ಅಷ್ಟೇ ಪೋಷಣೆ ಕೊಡುತ್ತೆ, ಆನಂದದಾಯಕ, ಚೈತನ್ಯದಾಯಕವಾಗಿರುತ್ತೆ. ಎಲ್ಲಾ ಔಷಧ ಮಾರುವವರಲ್ಲೂ ಮತ್ತು ಅಂಗಡಿಗಳಲ್ಲೂ ದೊರೆಯುತ್ತದೆ.

ಓವಲ್‌ಟಿನ್
OVALTINE

ಡಿಸ್ಟ್ರಿಬ್ಯೂಟರ್ಸ್—ಗ್ರಹಮ್ಸ್ ಟ್ರೇಡಿಂಗ್ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬಾಯಿ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

OV/11/40

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17-10-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೭-೧೦-೧೯೪೧

ರಶ್ಯದ ಯುದ್ಧವು ಇತ್ತೀಚೆಗೆ ಬಹಳ ಗಂಡಾಂತರ ಪರಿಸ್ಥಿತಿಗೆ ಬಂದು ಮುಟ್ಟಿದೆ ಜರ್ಮನರು ಮೋಸ್ಕೋವನ್ನು ಮುತ್ತಿಗೆ ಹಾಕಿ ಮುಂದೊತ್ತುತ್ತಿರುವರೆಂದು ತಿಳಿದಿದೆ ಈಗಾಗಲೇ ಜರ್ಮನ್ ಸೈನ್ಯವು ಮೋಸ್ಕೋ ನಗರದ ಪಶ್ಚಿಮದಲ್ಲಿ ೬೫ ಮೈಲುಗಳ ಅಂತರಕ್ಕೆ ಬಂದು ಮುಟ್ಟಿರುವುದರಿಂದ ಗಡಿಬಿಡಿ ಹೆಚ್ಚತೊಡಗಿರುವುದು. ವ್ಯಾಝ್ಮ-ಮತ್ತು ಬ್ರಿಯಾನಸ್ಕಗಳಲ್ಲಿ ಬಹಳ ಅಮಾನುಷ ಕಾಳಗವಾಗುತ್ತಿದ ಇಂಥದೇ ಕಡೆ ಯುದ್ಧವಾಗುತ್ತಿದೆಯೆಂದು ಹೇಳ ಬರುವುದಿಲ್ಲವೆಂದೂ ಇಡೀ ಪ್ರದೇಶದ ಎಲ್ಲೆಲ್ಲೂ ಅನೇಕ ಸೈನ್ಯಗಳು ದ್ವಂದ್ವ ಯುದ್ಧಗಳಲ್ಲಿ ತೊಡಗಿ ಹೊಡೆದಾಡಿಕೊಳ್ಳುತ್ತಿರುವವೆಂದೂ ಸುದ್ದಿ ಬರುತ್ತಿದೆ

ಹೊಸಹೊಸ ಸೈನ್ಯಗಳು

ಜರ್ಮನರು ರಶ್ಯದ ಯುದ್ಧವನ್ನು ಆದಷ್ಟು ಶೀಘ್ರ ಕೊನೆಗಾಣಿಸಬೇಕೆಂಬ ಸಲುವಾಗಿ, ಎಷ್ಟು ಅಪಾರ ಹಾನಿಯೊದಗುತ್ತಿದ್ದರೂ, ಹೊಸಹೊಸ ಸೈನ್ಯಗಳನ್ನು ರಣಕ್ಷೇತ್ರಕ್ಕೆ ತರುತ್ತಾ ಇದ್ದಾರೆ. ರಶ್ಯನ್ ಸೈನ್ಯಗಳೂ ಎದೆಗುಂದದೆ ಮೇಲೆ ಬೀಳುವ ಜರ್ಮನರನ್ನು ಹೋರಾಡಿ ಹಿಂದಕ್ಕಟ್ಟುತ್ತಿವೆ. ಯುಕ್ರೇನಿನಲ್ಲಿ ಜರ್ಮನರು ಬಹಳ ಮುಂದೆ ನುಗ್ಗಿರುವುದರಿಂದ ಅಲ್ಲಿನ ಪರಿಸ್ಥಿತಿ ಬಹು ಕೆಟ್ಟಿರುವುದೆಂಬುದನ್ನು ರಶ್ಯನರೇ ಒಪ್ಪಿಕೊಂಡಿದ್ದಾರೆ ಅಝೋವ ಸಮುದ್ರ ಕರಾವಳಿಯಲ್ಲಿ ರೋಸ್ಟೋವಿಗೆ ೪೦ ಮೈಲು ದೂರವಿರುವ ಊರನ್ನು ಜರ್ಮನರು ಸ್ವಾಧೀನ ಪಡಿಸಿದರೆಂದು ಸಾರಲಾಗಿದೆ.

ಘೋರ ವಿಪತ್ತು ಬಂದಿದೆ

'ನಮಗೆ ಘೋರ ವಿಪತ್ತು ಬಂದಿದೆ; ನಮ್ಮ ದೇಶದ ಅಸ್ತಿತ್ವವೇ ಅಳಿದುಹೋಗುವ ಸಂದರ್ಭವು ಸಮೀಪಿಸುವಂತಿದೆ. ಈ ಸಮಯದಲ್ಲಿ ಕ್ಷುಲ್ಲಕ ವಿಚಾರ ಮಾಡುತ್ತಿರದೆ ಎಲ್ಲರೂ ಯುದ್ಧಸನ್ನದ್ಧರಾಗಿರುವುದು' ಎಂದು ರಶ್ಯದ ಮುಖ್ಯ ಪತ್ರಿಕೆ 'ಪ್ರವಾದ'ವು ಬರೆಯುತ್ತದೆ. ರಶ್ಯದ ರಣಭೂಮಿಯಲ್ಲಿ ಈ ರೀತಿ ವಿಪತ್ತು ಬಂದು ನಾಟಿರುವುದನ್ನು ನೋಡಿ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಬಹಳ ಕಳವಳಗೊಂಡಿರುವರೆಂದು ಹೇಳ

ಸಮರಭೂಮಿಯ ಸಂಚಾರ

ಲಾಗಿದೆ ರಶ್ಯದ ರಾಜಧಾನಿ ಮೋಸ್ಕೋದಿಂದ ಸ್ಥಳಾಂತರಿಸಲ್ಪಟ್ಟರೂ, ಮೋಸ್ಕೋ ರಶ್ಯದ ಕೈಬಿಟ್ಟರೂ ರಶ್ಯನರು ಜರ್ಮನರನ್ನು ಗಾಸಿ ಪಡಿಸುವರೆಂದು ಅಮೇರಿಕದಲ್ಲಿ ವಿಶ್ವಾಸವುಳಿದಿದೆಯೆಂದು ಹೇಳಲಾಗಿದೆ ರಶ್ಯಕ್ಕೆ ಪ್ರತಿ ದಿನವೂ ಈಗ ಅಮೇರಿಕವು ಯುದ್ಧ ಸಾಮುಗ್ರಿಗಳನ್ನು ಕಳುಹಿಸುತ್ತಿರುವುದು ಮಾತ್ರವಲ್ಲದೆ, ಶಕ್ಯವಿದ್ದಷ್ಟು ಸಹಾಯ ಮಾಡುತ್ತೇವೆಂದೂ, ಮೋಸ್ಕೋ ಪರಿಷತ್ತಿನಲ್ಲಿ ಭರವಸೆ ಕೊಟ್ಟಷ್ಟು ಟೇಂಕುಗಳನ್ನು ಈ ತಿಂಗಳ ಅಂತ್ಯದೊಳಗೆ ರಶ್ಯಕ್ಕೆ ಕಳುಹಿಸುವೆವೆಂದೂ ರೂಸ್‌ವೆಲ್ಟರು ರಶ್ಯಕ್ಕೆ ಭರವಸೆಯಿತ್ತಿರುವರು

ಕತ್ತರಿ ಕಾಳಗ

ರಶ್ಯದಲ್ಲಿ ಜರ್ಮನರು ಕತ್ತರಿ ಕಾಳಗ ಮಾಡುತ್ತಿದ್ದಾರೆ. ಎಲ್ಲಾ ಕಡೆಗಳಿಂದಲೂ ಬಂದು ಶತ್ರುಗಳನ್ನು ಮುತ್ತಿ ಮುರಿದಿಕ್ಕುವುದು ಅವರ ಸಾಧನೆಯಾಗಿದೆ. ರಶ್ಯದ ರಾಜಧಾನಿ ಮೋಸ್ಕೋವನ್ನು ಆಕ್ರಮಿಸಿದ್ದನ್ನು ನೋಡಿದರೆ ಹಿಟ್ಲರನದ್ದು ಹೆಚ್ಚಿನ ಸಾಹಸವೇ ಎನಬೇಕು, ಲೆನಿನ್‌ಗ್ರಾಡ್ ಒಡೆಸಾಗಳು ಇನ್ನೂ ಸ್ವಾಧೀನ ಒರದಿರುವಾಗ, ಕ್ರಿಮಿಯದಲ್ಲಿ ಗೆಲ್ಲಲು ಇನ್ನೂ ಸಂಪೂರ್ಣ ಸಾಧ್ಯವಾಗದಿರುವಾಗ ಹಿಟ್ಲರನು ಮೋಸ್ಕೋವನ್ನು ಹಿಡಿಯಲು ಹೊರಟದ್ದು ಬೆರಗುಗೊಳಿಸುತ್ತದೆ. ಆದರೆ ಇಷ್ಟರ ರಶ್ಯನ್ ಯುದ್ಧದ ಸಂಗತಿಗಳನ್ನು ನೋಡಿದರೆ ಮೋಸ್ಕೋ ಆಕ್ರಮಣದಲ್ಲಿ ಜರ್ಮನರಿಗೆ ವಿಶೇಷ ತಡೆಯಾಗುವುದು ತೋರಿಬರುವುದಿಲ್ಲ ಲೆನಿನ್‌ಗ್ರಾಡಿನಲ್ಲಿ ಮಾರ್ಶಲ್ ವೊರೊಶಿಲೋವನ ಕೈಕೆಳಗೆ ಪ್ರತ್ಯೇಕ ಸೈನ್ಯವಿದೆ ರಶ್ಯನ್ ಸೈನ್ಯವು ಅಲ್ಲಿಂದ ಹೊರಬರುವುದು ಸಾಧ್ಯವಿಲ್ಲ. ಜರ್ಮನರು ಒಂದು ರೀತಿಯಿಂದ ಚಕ್ರವ್ಯೂಹ ಕಟ್ಟಿ ಯುದ್ಧ ಸಾಗಿಸುತ್ತಿರುವುದಾಗಿ ಹೇಳಬಹುದು ದಕ್ಷಿಣದಲ್ಲಿ ಎಂದರೆ ಯುಕ್ರೇನಿನಲ್ಲಿ ರಶ್ಯನರ ಪರಿಸ್ಥಿತಿ ತುಂಬಾ ಶೋಚನೀಯವೇ ಆಗಿದೆ ಒಡೆಸ್ಸಾ ರಶ್ಯನರ ಕೈಬಿಟ್ಟಿಲ್ಲವೆನ್ನುವುದಿದ್ದರೂ ಮಹತ್ವದ ಪ್ರದೇಶಗಳು ಸ್ವಾಧೀನ ತಪ್ಪಿವೆ ರಶ್ಯನ್ ಸೇನಾಪತಿ ಬುಡೆನಿಯು ಅಸಂಖ್ಯಾತ ಸೈನಿಕರನ್ನು ಕಳೆದುಕೊಂಡು ರೋಸ್ಟೋವಿನ ಪೂರ್ವದಲ್ಲಿ ತಳವೂರಿದವನು ಇವನ ಸೈನ್ಯ ಸದ್ಯಕ್ಕೆ ಜರ್ಮನರನ್ನು ಮುತ್ತಲಾರದು ಹೀಗಾಗಿ ಜರ್ಮನರು ರಶ್ಯನ್ ದಂಡುಗಳನ್ನು ಕತ್ತರಿ ಕಾಳಗದಲ್ಲಿ ಸಿಲುಕಿಸಿ ಇಂದ ಎಲ್ಲಾ ಕಡೆ ಹೋರಾಡುತ್ತಿದ್ದಾರೆ

ಜಪಾನಿಗೆ ನಿರ್ಬಂಧ

ಜಪಾನು ಇಂಡೋ ಚೀನವನ್ನು ಆಕ್ರಮಿಸಿದ ಮೇಲೆ ಅದರ ವಿಷಯದಲ್ಲಿ ಎಲ್ಲರಿಗೂ ಬಹಳ ಸಂಶಯ ದೃಷ್ಟಿಯೇ ಇದೆ ಜರ್ಮನಿಯ ಮಿತ್ರರಾಷ್ಟ್ರವಾಗ ನೇತಿಕೊಂಡು ಪೂರ್ವದಲ್ಲಿ ಕಾಳುಚಾಚಲು ಜಪಾನಿಗೆ ಮಹತ್ವಾಕಾಂಕ್ಷೆಯಿರುವದು ಸಾಧ್ಯವಿದೆ ಜಪಾನಿನ ಆರ್ಥಿಕ ಮತ್ತು ವ್ಯಾಪಾರ ಕಾರ್ಯಗಳಿಗ ಬ್ರಿಟಿಷರು ನಿರ್ಬಂಧ ಹಾಕಲು ಪ್ರಾರಂಭಿಸಿರುವರು ಅಮೇರಿಕವೂ, ಡಚ್ ಸರಕಾರವೂ ಅದನ್ನೇ ಅನುಸರಿಸಿ ಜಪಾನಿಗೆ ಎಣ್ಣೆಯ ಸರಬರಾಯಿ ನಿಲ್ಲಿಸಿವೆ ಮಲಯದಿಂದ ಹೋಗುವ ರಬ್ಬರ್ ಟಿನ್ ಮೊದಲಾದವುಗಳೂ ಈಗ ನಿಂತಿವೆ

ಖೈಬರ್ ಕಣಿವೆಯಲ್ಲಿ

ಭಾರತಕ್ಕೆ ದಂಡೆತ್ತಿ ಬಂದ ಪ್ರಸಿದ್ಧ ಮಾರ್ಗಗಳಲ್ಲಿ ಖೈಬರ್ ಕಣಿವೆ ಇತಿಹಾಸ ಪ್ರಸಿದ್ಧವಾದುದು ಯುದ್ಧವು ಈಗ ಏಶ್ಯಾ ಖಂಡಕ್ಕೆ ಹಬ್ಬಬಹುದೆಂದು ಆಲೋಚಿಸುತ್ತಿರುವೀ ಕಾಲದಲ್ಲಿ, ಅಲ್ಲಿ ಎಲ್ಲಾ ಬಗೆಯ ಯುದ್ಧಸಿದ್ಧತೆಗಳನ್ನು ಸರಕಾರದವರು ಮಾಡುತ್ತಿರುವರೆಂದು ತಿಳಿದು ಬಂದಿದೆ ಆರ್ಯರಿಂದ ಮೊದಲ್ಗೊಂಡು ಭಾರತಕ್ಕೆ ಅನೇಕರು ಧಾಳಿಯಿಟ್ಟುದು ಈ ಮಾರ್ಗದ ಮುಖಾಂತರವಾಗಿಯೇ ಹಾಗಾಗಿ ಇಂದಿನೀ ಘೋರ ಪ್ರಪಂಚ ಯುದ್ಧದ ಕಾಲದಲ್ಲಿ, ಹೀಗೆ ಜಾಗರೂಕತೆ ವಹಿಸಿದುದು ಬಹಳ ಸ್ತುತ್ಯವೆನಬೇಕು

ಟರ್ಕಿ ಜರ್ಮನಿ ಒಪ್ಪಂದ

ಟರ್ಕಿ ಮತ್ತು ಜರ್ಮನಿಗಳೊಳಗೆ ಒಂದು ವ್ಯಾಪಾರೀ ಒಪ್ಪಂದವಾಯಿತು. ಟರ್ಕಿಯು ಜರ್ಮನಿಗೆ ಹಸಿ ಪದಾರ್ಥ, ಆಹಾರ ಸಾಮುಗ್ರಿಗಳನ್ನೊದಗಿಸಿ ಜರ್ಮನಿಯಿಂದ ಕೈಗಾರಿಕೆಯ ಪದಾರ್ಥಗಳನ್ನು ಯುದ್ಧ ಸಾಮುಗ್ರಿಗಳನ್ನು ಪಡೆಯುವುದು. ಟರ್ಕಿ ಇದು ವರೆಗೆ ತಾಟಸ್ಥ್ಯವನ್ನು ಕಾಪಾಡಿಕೊಂಡಿರುತ್ತದೆ.

ಶಕ್ತಿ ಮತ್ತು ಆರೋಗ್ಯ

ಬಲ ಸಂವರ್ಧನೆಯ ರಹಸ್ಯ

ಮನುಷ್ಯನ ಜೀವನದಲ್ಲಿ ಶಕ್ತಿ ಆರೋಗ್ಯ ಮತ್ತು ರೋಗವನ್ನು ತಡೆವ ಚೈತನ್ಯಗಳು ಇವು ಇರಬೇಕಾದುದು ಅವಶ್ಯ ಅನೇಕ ವರ್ಷಗಳ ಅನುಭವದಿಂದ ಪಂಡಿತ ಡಿ. ಗೋಪಾಲಾಚಾರ್ಯರವರ 'ಜೀವಾಮೃತ'ವು ಶಕ್ತಿ ಆರೋಗ್ಯಗಳನ್ನುಂಟುಮಾಡುವ ಸತ್ವಗಳಿಂದ ಕೂಡಿರುವುದೆಂದು ಜಗದ್ವಿಖ್ಯಾತಿ ಪಡೆದಿದೆ ಇದು ನರಗಳ ಶಕ್ತಿ ಹೆಚ್ಚಿಸುತ್ತದೆ ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಇದು ಹೆಚ್ಚಿಸುತ್ತದೆ. ಹೀಗಾಗಿ ಇದು ಆರೋಗ್ಯವನ್ನುಂಟು ಮಾಡಿ ಇಡೀ ಶರೀರದಲ್ಲಿ ನವಚೈತನ್ಯವನ್ನು ತುಂಬುತ್ತದೆ ಜೀವಾಮೃತವು ಅತ್ಯುಚ್ಚ ವನೌಷಧಿಗಳಿಂದ ಅನೇಕ ವರ್ಷಗಳ ಸಂಶೋಧನೆಯ ಬಳಿಕ ತಯಾರಿಸಿದ ಉತ್ತಮ ಔಷಧಿಯಾಗಿದೆ

ಚೈತನ್ಯ ಶಕ್ತಿ ಮತ್ತು ಆರೋಗ್ಯಗಳಿಗೆ **ಜೀವಾಮೃತ**

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುವುದು

ತಯಾರಿಸುವವರು: ಆಯುರ್ವೇದಾಶ್ರಮಂ, ಮದರಾಸು.

ಸ್ಟೋಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

ತಾರೀಕು 17—10—1641

ಸತ್ಯಾಗ್ರಹದಲ್ಲಿ ಪರಿವರ್ತನೆಯುಂಟೆ?

ಕಾಂಗ್ರೆಸು ಇಂದು ಗಾಂಧಿಜಿಯವರ ಮುಂದಾಳುತನದಿಂದ ವೈಯುಕ್ತಿಕ ಸತ್ಯಾಗ್ರಹವನ್ನು ನಡೆಸುತ್ತಿದೆ. ಅನೇಕ ಮಂದಿ ಸೆರೆಮನೆಗಳಿಗೆ ಹೋದರು. ಅನೇಕ ಮಂದಿ ಬಿಡುಗಡೆಹೊಂದಿ ಬಂದರು. ಮೊದಲಿನಷ್ಟು ಇಲ್ಲದಿದ್ದರೂ, ಕೆಲವರಂತೂ ಬಿಡದೆ ಮತ್ತೂ ಸತ್ಯಾಗ್ರಹ ಹೂಡುತ್ತಾರೆ. ಗಾಂಧಿಜಿ ಸತ್ಯಾಗ್ರಹಿಗಳನ್ನು ಆರಿಸುವುದರಲ್ಲಿ ಹೊಸ ಕ್ರಮವನ್ನನುಸರಿಸಿ ಬಹುಮಂದಿ ಮುಂದೆ ಬರಲು ಸಾಧ್ಯವಿಲ್ಲದಂತೆ ನಿರ್ಬಂಧಿಸಿರುತ್ತಾರೆ. ಬ್ರಿಟನಿಗೆ ತೊಂದರೆ ಕೊಡಬಾರದೆಂದೂ, ಸತ್ಯಾಗ್ರಹವು ಬಿಡದೆ ಸಾಗಬೇಕೆಂದೂ ಗಾಂಧಿಜಿ ವಾದಿಸುತ್ತಾರೆ. ಪ್ರಾಂತಿಕ ಅಧಿಕಾರಗಳನ್ನುಬಿಟ್ಟುಏಳು ಪ್ರಾಂತಗಳ ಕಾಂಗ್ರೆಸ್ ಮಂತ್ರಿಗಳೂ ಹೊರಗೆ ಬಂದಿದ್ದಾರೆ; ಕೆಲವರು ಇನ್ನೂ ಸೆರೆಮನೆಯೊಳಗಿರುವರು. ಕೆಲವರು ಬಿಡುಗಡೆ ಹೊಂದಿರುವರು; ಇನ್ನು ಕೆಲವರು ಕಿಂಕರ್ತವ್ಯತಾ ಮೂಢರಾಗಿರುವರು ಹಾಗೂ ಭಾರತದ ರಾಜಕೀಯದಲ್ಲಿ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯೊಂದು ಎಲ್ಲರ ಮುಂದೂ ಬಂದು ನಿಂತಿದೆ ಸರಕಾರವು ತನ್ನ ಹೃದಯ ಪರಿವರ್ತನೆ ಮಾಡಿದ ಲಕ್ಷಣಗಳಾವುವೂ ಇದುವರೆಗೆ ಕಂಡು ಬರುವುದಿಲ್ಲ

ರಾಜಾಜಿ ಹೇಳುವುದೇನು?

ಇದೀಗ ರಾಜಾಜಿ ತ್ರಿಚುನಾಪಳ್ಳಿ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದಿರುವರು ರಾಜಾಜಿ ಬಹಳ ದೊಡ್ಡ ರಾಜತಂತ್ರನಿಪುಣರು. ಕಾಂಗ್ರೆಸಿನ ಕಾನೂನು ಪಂಡಿತರು, ಪ್ರಭಾವ ಶಾಲಿಗಳಾದ ಚತುರರು; ಮಹಾತ್ಮಜಿಯವರ ಆಪ್ತ ವರ್ಗದಲ್ಲೊಬ್ಬರು ಅವರ ಬಿಡುಗಡೆಯಾದ ಮೇಲೆ, ಕಾಂಗ್ರೆಸಿನ ಕಾರ್ಯಧೋರಣೆಯಲ್ಲಿ ಪರಿವರ್ತನೆಯುಂಟಾಗಬಹುದೆಂದು ಹಲವರು ನಿರೀಕ್ಷಿಸಿದ್ದಾರೆ. ಕೆಲವೇ ದಿನಗಳ ಹಿಂದೆ ತ್ರಿಚುನಾಪಳ್ಳಿ ಸೆರೆಮನೆಯಿಂದ ಮುಕ್ತರಾಗಿ ಬಂದ ಡಾ। ರಾಜನ್‌ರವರೂ ಕೂಡಾ ಅದೇ ರೀತಿ ಅರ್ಥವಾಗುವ ಒಂದು ಹೇಳಿಕೆಯಿತ್ತಿದ್ದಾರೆ. ರಾಜಾಜಿ ಬೇಗನೇ ವರ್ಧಾಕ್ಕೆ ತೆರಳಿ ಮಹಾತ್ಮರನ್ನು ಸಂದರ್ಶಿಸಲಿರುವರೆಂಬುದಿಷ್ಟು ಹಲವು ಕಾಂಗ್ರೆಸಿಗರ ಬಹು ಆಗ್ರಹಪೂರ್ವಕವಾದ ನಿರೀಕ್ಷೆಯಾಗಿದೆ.

ಸತ್ಯಮೂರ್ತಿಗಳ ಪ್ರಚಾರ

ಇತ್ತ ಸತ್ಯಮೂರ್ತಿಯವರು ಬಿಡುಗಡೆ ಹೊಂದಿ ಬಂದವರು ಹಲವು ವಿಷಯಗಳನ್ನು ತರ್ಕಿಸತೊಡಗಿದ್ದಾರೆ. ಕೇಂದ್ರ ಶಾಸನಸಭೆಗೆ ಕಾಂಗ್ರೆಸ್ ಸದಸ್ಯರು ಹಾಜರಾಗಬೇಕೆಂಬುದು ಅವರ ಒಂದು ವಾದ; ಕಾಂಗ್ರೆಸಿನವರು ಸತ್ಯಾಗ್ರಹವನ್ನು ಒಂದು ಕಡೆ ಹೂಡುತ್ತಿದ್ದಂತೆ, ಪಾರ್ಲಿಮೆಂಟರಿ ಕಾರ್ಯಕ್ರಮವನ್ನೂ ಕೈಕೊಂಡು ಸ್ವಾತಂತ್ರ್ಯದ ಹೋರಾಟ ಬಲಪಡಿಸಬೇಕೆಂದು ಅವರ ಇನ್ನೊಂದು ವಿಚಾರ. ಈ ವಿಚಾರದಲ್ಲಿ ಈಗಾಗಲೇ ವರ್ಧಾಕ್ಕೆ ತೆರಳಿ ಗಾಂಧಿಜಿಯವರೊಡನೆ ಮಾತನಾಡಿ, ದೇಶವಿಡೀ ಈ ರೀತಿ ಪ್ರಚಾರ ಮಾಡಲು ಅವರ ಸಮ್ಮತಿ ಪಡೆಕೊಂಡು ಬಂದಿದ್ದಾರೆ. ಮತ್ತೆ ಅಸಫ್ ಅಲಿಯವರೂ ಕಾಂಗ್ರೆಸ್ ನೀತಿಯಲ್ಲಿ ಬದಲಾವಣೆ ಬೇಕೆನ್ನುತ್ತಾರೆ. ಪ್ರಕಾಶಂರವರು ಅಧಿಕಾರ-ಬಿಟ್ಟುಕೊಟ್ಟದ್ದು ಸರಿಯಾಗಿಲ್ಲವೆಂದು ಅಭಿಪ್ರಾಯ ಹೇಳಿದ್ದಾರೆ. ಹೀಗೆ ಕಾಂಗ್ರೆಸು ಕಾರ್ಯಕ್ರಮವನ್ನು ಪರಿವರ್ತಿಸಬೇಕೆಂದು ಬೇರೆ ಕಾರ್ಯಕ್ರಮ ಯಾವುದೆಂಬುದು ಸ್ಪಷ್ಟವಿಲ್ಲದಿದ್ದರೂ—ಹಲವರು ವಾದಿಸುತ್ತಿದ್ದಾರೆ.

ಕೃಪಾಲನಿ ಮತ್ತು ಸರ್ದಾರ್

ಮತ್ತೊಂದು ಕಡೆಯಿಂದ ಆಚಾರ್ಯ ಕೃಪಾಲನಿ, ಸರ್ದಾರ್ ವಲ್ಲಭಭಾಯಿ ಪಟೇಲರಂತಹವರು ಇಂದಿನ ಸತ್ಯಾಗ್ರಹ ರೀತಿಯಲ್ಲಿ ಬದಲಾವಣೆಯು ಅವಶ್ಯವಿಲ್ಲವೆನ್ನತೊಡಗಿರುವರು; ಗಾಂಧಿಜಿಯವರ ದಾರಿ ಯೋಗ್ಯವಾದುದೆಂದು ವಾದಿಸುವರು. ಇಂತಹ ಅಭಿಪ್ರಾಯದವರೂ ಹಲವರಿದ್ದಾರೆ. ರಾಜಾಜಿಯವರು ಮಾತ್ರ ತನ್ನ ಅಭಿಪ್ರಾಯವನ್ನು ಇದುವರೆಗೆ ಪ್ರಕಟಪಡಿಸಿರುವುದಿಲ್ಲ. ಹಲವರಂತೂ, ಗಾಂಧಿಜಿಯು ಹೇಳಿದ ಆಜ್ಞೆಯನ್ನು ಯೋಧರಾಗಿ, ಭಕ್ತರಾಗಿ, ಸ್ವಾತಂತ್ರ್ಯಪ್ರೇಮಿಗಳಾಗಿ ಶಿರಸಾವಹಿಸಿಕೊಂಡು ಎರಡು ಮೂರು ಸಲವೂ ಸತ್ಯಾಗ್ರಹ ಮಾಡಿ ಶಿಕ್ಷೆಗಳನ್ನೂ ಜುಲ್ಮಾನೆಗಳನ್ನೂ ಅನುಭವಿಸುತ್ತಿದ್ದಾರೆ. ಹೀಗೆ ಕಾಂಗ್ರೆಸಿನ ಕಾರ್ಯನೀತಿ ಪರಿವರ್ತನೆಯಾಗಬೇಕೆಂದೂ, ಪರಿವರ್ತನೆ ಬೇಡವೆಂದೂ ವಾದಿಸುವ ಎರಡು ಪಕ್ಷಗಳೂ ಪ್ರಬಲವೇ ಆಗಿವೆ.

ಮಶ್ರೂವಾಲರ ಸ್ಪಷ್ಟೀಕರಣ

ಈ ವಿಷಯದಲ್ಲಿ ಗಾಂಧಿಜಿಯ ಭಕ್ತಾವಳಿಯಲ್ಲೊಬ್ಬರಾದ ಶ್ರೀ. ಕಿಶೋರಲಾಲ ಮಶ್ರುವಾಲರು ಒಂದು ಲೇಖನ ಬರೆದು ಗಾಂಧಿಜಿಯವರ ಮನೋಗತವನ್ನು ಹೊರಗೆಡವಲು ಸಹಾಯ ಮಾಡಿರುವರು ಸತ್ಯಾಗ್ರಹದ ವಿಷಯದಲ್ಲಿ ಪರಿವರ್ತನೆಯಾಗಬೇಕೆಂಬ ವಾದವು ಈ ಸಲ ಮಾತ್ರ ಹುಟ್ಟಿದ್ದಲ್ಲವೆಂದೂ ಕಳೆದ ೧೯೩೦-೩೨ರ ಸತ್ಯಾಗ್ರಹ ಕಾಲದಲ್ಲಿಯೂ ಇಂತಹ ದ್ವಿವಿಧಾಭಿಪ್ರಾಯವು ಉಂಟಾಗಿತ್ತೆಂದೂ ವಿವರಿಸುತ್ತಾ ಹೀಗೆ ಪರಿವರ್ತನೆಯಾಗಬೇಕೆಂದು ವಾದಿಸಲು ಕಾರಣವೇನೆಂಬುದನ್ನು ತೋರಿಸಿ ಹೇಳಿರುವರು. ಕೊನೆಯಲ್ಲಿ ಇಂದಿನ ಸತ್ಯಾಗ್ರಹವು ಮುಂದಿನ ಘೋರ ಸ್ವಾತಂತ್ರ್ಯ ಸಮರದ ಸಿದ್ಧತೆಯೆಂದೂ, ಯೂರೋಪಿನ ಸಮರಕ್ಕಿಂತಲೂ ದೀರ್ಘವಾಗಿ ನಮ್ಮ ಸಮರವು ನಡೆಯುವುದೆಂದೂ ಸೂಚಿತಪಡಿಸಿರುವರು.

ಪರಿವರ್ತನೆ ಹೇಗೆ?

ಸತ್ಯಾಗ್ರಹವು ಆರಂಭವಾದ ಕಾಲದಲ್ಲಿ ಕಾಂಗ್ರೆಸ್ಸಿನ ಮುಂದೆ ಯಾವ ಯಾವ ಸಮಸ್ಯೆಗಳು ನಿಂತಿದ್ದವೋ ಆ ಸಮಸ್ಯೆಗಳು ಇಂದೂ ಹಾಗೆಯೇ ಉಳಿದಿವೆ. ಯಾವ ತತ್ವದ ಸಲುವಾಗಿ ಕಾಂಗ್ರೆಸ್ ಮಹಾತ್ಮರ ಮುಂದಾಳುತನದಿಂದ ಸತ್ಯಾಗ್ರಹವನ್ನು ಕೈಕೊಂಡಿತೋ ಆ ತತ್ವವು ಇನ್ನೂ ಹಾಗೆಯೇ ಬಾಕಿಯಿದೆ. ಸರಕಾರದ ಮನೋವೃತ್ತಿಯಲ್ಲಿ ಏನೇನೂ ಬದಲಾವಣೆಯಾದದು ಕಂಡು ಬರುವುದಿಲ್ಲ. ಚರ್ಚಿಲರ ಪ್ರೊನ್ನಿಯ ಅಟ್ಲಾಂಟಿಕ ಘೋಷಣೆಯ ವ್ಯಾಖ್ಯಾನದಿಂದಂತೂ ಹಲವು ಆಶಾವಾದಿಗಳಾಗಿದ್ದವರ ಕೆಪ್ಪೆಗೂ ಏರಿಸಿಬಿಟ್ಟಂತಾಗಿದೆ. ಅಮೆರಿ ಲಿನ್‌ಲಿತ್‌ಗೋರವರು ಏಕನಾದದಿಂದ ಹಾಡುತ್ತಿದ್ದಾರೆ. ಚುನಾವಣೆಗಳೂ ಮುಂದುವರಿಸಲ್ಪಟ್ಟಿವೆ. ಏಕತಂತ್ರಾಧಿಕಾರಕ್ಕೆ ಸಾಕಷ್ಟು ಅನುಕೂಲಗಳನ್ನೇ ಮಾಡಿಕೊಂಡು ಸರಕಾರವು ಸಾಗುವ ಏರ್ಪಾಡು ಮಾಡಿದೆ. ಹೀಗಿರುವಾಗ, ಕಾಂಗ್ರೆಸು ಯಾವ ಬೇರೆ ದಾರಿ ಹಿಡಿದು ಸ್ವಾತಂತ್ರ್ಯದ ಬೇಡಿಕೆಯನ್ನು ಬಲಪಡಿಸುವುದೋ ತಿಳಿಯಲಿಕ್ಕಿಲ್ಲದು. ಅಂತೂ ಕಾಂಗ್ರೆಸಿನ ಕಾರ್ಯನೀತಿಯಲ್ಲಿ ಪರಿವರ್ತನೆಯಾಗಬೇಕೆನ್ನುವವರೂ ಈಗ ಹಲವು ಜನರಿದ್ದಾರೆ. ಇದುವರೆಗೂ ಗಾಂಧಿಜಿ ತನ್ನ ಹಿಂದಿನ ನಿರ್ಣಯದಲ್ಲಿ ಯಾವ ಬದಲಾವಣೆಯನ್ನು ಮಾಡಲೂ ಮನಮಾಡಿಲ್ಲವೆಂಬುದು ಅವರ ಇತ್ತೀಚಿಯ ಲೇಖನಗಳಿಂದ ಸ್ಪಷ್ಟವಾಗಿದೆ.

ನೋಟಗಳು....

ಡಫ್ ಕೂಪರರು ಒಳ್ಳೆಯ ಸಂಭಾವಿತ ಆಂಗ್ಲೇಯ ಗೃಹಸ್ಥರು. ಬ್ರಿಟಿಷ್ ಸರಕಾರದ ಮಂತ್ರಿವರ್ಯರೊಬ್ಬರು ಅವರು ಇತೀಚೆಗೆ ಹಲವು ರಾಷ್ಟ್ರಗಳನ್ನು ಸುತ್ತಾಡುತ್ತಾ, ಈಗ ನಮ್ಮ ದೇಶಕ್ಕೂ ಬಂದಿದ್ದಾರೆ

● ● ●

'ಭಾರತಕ್ಕೆ ಬಂದುದು ಯಾವುದೇ ರಾಜಕೀಯ ಉದ್ದೇಶದಿಂದಲ್ಲ' ಎಂದು ಡಫ್ ಕೂಪರರು ತಮ್ಮ ಭಾರತ ಸಂದರ್ಶನದ ವಿಷಯವಾಗಿ ಹೇಳಿದರು.

● ● ●

ಯೂರೋಪಿಯನರು ಈಗ ಭಾರತೀಯರ ವಿಚಾರ ತೆಕ್ಕೊಂಡು ಮಾಡುವುದೇನು? ಹಿಟ್ಲರನೆದುರು ಹೋರಾಡುವುದು ಅವರ ದೊಡ್ಡ ಸಮಸ್ಯೆಯಾಗಿರುವಾಗ ಭಾರತದ ವಿಷಯ ವಿಚಾರ ಮಾಡಲು ಅವರಿಗೆ ಅವಕಾಶವೆಲ್ಲಿದೆ?

● ● ●

ಅಮೆರಿಕದಲ್ಲಿ ಡಫ್ ಕೂಪರರು ಕೆಲ ದಿನಗಳ ಹಿಂದೆ ಸಂಚಾರ ಪ್ರಚಾರಮಾಡುತ್ತಿದ್ದಾಗ, ಚಿಕಾಗೋವಿನಲ್ಲಿ ಅವರ ಭಾಷಣವೊಂದೇರ್ಪಟ್ಟಿತು. ಅಂದರಲ್ಲಿ ಅಮೆರಿಕನರು ಅವರೊಡನೆ ಕೆಲವು ಪ್ರಶ್ನೆಗಳನ್ನು ಹಾಕಿದ ವಿಷಯವಾಗಿ ಡಫ್ ಕೂಪರರೇ ಇಂಗ್ಲೆಂಡಿಗೆ ತೆರಳಿದನಂತರ ಇಂದಿನೀ ಯುದ್ಧಕಾಲದಲ್ಲಿ ಅಮೆರಿಕನರು ಭಾರತದ ವಿಚಾರವಾಗಿ ಪ್ರಶ್ನೆ ಮಾಡಿದ್ದು ನ್ಯಾಯವಾಗಲಿಲ್ಲವೆಂದರು.

● ● ●

ಶ್ರೀಮತಿ ಕಮಲಾ ದೇವಿಯರು 'ಬೊಂಬೇ ಕ್ರಾನಿಕಲ್' ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟಿಸಿ ಡಫ್ ಕೂಪರರು ಅಮೆರಿಕದಲ್ಲಿ ಅಪಹಾಸ್ಯಕ್ಕೆ ಗುರಿಯಾದ ಆ ಸಂದರ್ಭವನ್ನು ಬಹಿರಂಗಪಡಿಸಿದ್ದಾರೆ

● ● ●

ಅಮೇರಿಕದ ಸಭೆಯೊಂದರಲ್ಲಿ ಡಫ್ ಕೂಪರರು ಮಾತನಾಡುತ್ತಾ, ಭಾರತೀಯರ ಸ್ವಾತಂತ್ರ್ಯ ಬೇಳಿಕೆಯ ಕುರಿತು ಕಾಂಗ್ರೆಸಿನ ಕುರಿತು, ಗಾಂಧಿಜಿಯ ಕುರಿತು ಕೆಲವು ಅಲ್ಪಸಲ್ಪದ ಮಾತುಗಳನ್ನು ಒದರಿ ಬಿಟ್ಟರು.

● ● ●

ಆ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರೂ ಇದ್ದರು. ಸಭಿಕರು ಕೆಲವರು ಡಫ್ ಕೂಪರರಿಗೆ ಹಲವು ಪ್ರಶ್ನೆಗಳನ್ನು ಹಾಕಿ ಅವರು ಹೇಳಿದ ಆರೋಪಗಳನ್ನು ರುಜುಪಡಿಸಬೇಕೆಂದು ಕೇಳಲು ಆ ಪ್ರಶ್ನೆಗಳಿಗೆ ಉತ್ತರ ಕೊಡದೆಯೇ ಸಭೆ ಕೊನೆಗಾಣುವುದರಲ್ಲಿದ್ದಾಗ, ಶ್ರೀಮತಿ ಕಮಲಾದೇವಿಯವರು ವೇದಿಕೆಯನ್ನೇರಿ ನಿಂತರು.

● ● ●

ಸಭಾಧ್ಯಕ್ಷರು ಇದರಿಂದ ಒಮ್ಮೆಲೇ ಬೆಚ್ಚಿಬಿದ್ದು ಸಭೆ ಕೊನೆಗಾಣಿಸುವುದರಲ್ಲಿದ್ದರೂ ಸಭಿಕರು ಶ್ರೀಮತಿಯವರ ಮಾತು ಕೇಳಲು ಇಷ್ಟಪಟ್ಟಂತೆ ಸಭೆ ಮುಂದುವರಿಯಿತು.

[೬ನೇ ಕಲಮನ್ನು ನೋಡಿರಿ]

'ನೆಹರು ವಿನೋಬಾಜಿಗಳಿಬ್ಬರು ಸತ್ಯಾಗ್ರಹ ಮಾಡಿದರು ಸಾಕು'

ಸತ್ಯಾಗ್ರಹ ಸಮರವು ಯೂರೋಪಿನ ಯುದ್ಧಕ್ಕಿಂತ ದೀರ್ಘವಾದುದು

ನಮ್ಮ ಸತ್ವ ಪರೀಕ್ಷೆ ಇಂದಲ್ಲ; ಭವಿಷ್ಯದಲ್ಲಿದೆ!

ಶ್ರೀ ಮಶ್ರೂವಾಲರ ಲೇಖನ

'ಇಂದಿನೀ ಸತ್ಯಾಗ್ರಹವು ತೃಪ್ತಿಕರವಾಗಿಲ್ಲವೆಂದೂ, ಹಾಗಾಗಿ ಸೆರೆಮನೆಯೊಳಗಿದ್ದವರಿಗೂ, ಹೊರಗಿದ್ದವರಿಗೂ ಹಲವರಿಗೆ ಈ ವಿಷಯ ಆಲಸ್ಯ ಬಂದಿದೆಯೆಂದೂ ಕೆಲವರ ಹೇಳಿಕೆಯಾಗಿದೆ ನಿಜವಾಗಿ ನೋಡಿದರೆ ಇದೊಂದು ಹೊಸ್ಸ ಸಂಗತಿಯೇ ಅಲ್ಲ. ೧೯೩೦, ೩೨ರ ಆಂದೋಲನ ಕಾಲದಲ್ಲಿಯೂ ಹೀಗೆಯೇ ಅಭಿಪ್ರಾಯವಿತ್ತು. ಒಂದು ಪಂಗಡದವರು ಅಂದು ಸತ್ಯಾಗ್ರಹವು ಯಶಸ್ವಿಯಲ್ಲವೆಂದೂ ಭವಿಷ್ಯವು ಕರಾಳವಾಗಿದೆಯೆಂದೂ ನಿರಾಶಮಯರಾಗಿದ್ದಾರೆ, ಇನ್ನೊಂದು ಪಕ್ಷದವರು ಸತ್ಯಾಗ್ರಹವು ಯಶಸ್ವಿಯಾಯಿತೆಂದೂ ಸ್ವಾತಂತ್ರ್ಯದ ಕೇಳಿಕೆಗೆ ಬಲ ಬಂದಿತೆಂದೂ ಭವಿಷ್ಯವು ಶುಭಕರವೆಂದೂ ವಾದಿಸಿದರು. ಹಾಗಾಗಿ ಇಂದಿನೀ ಪರಿಸ್ಥಿತಿಯ ವಿಷಯ ಅಚ್ಚರಿಪಡಬೇಕಾದುದು ಏನೂ ಇರುವುದಿಲ್ಲ.'

—ಹೀಗೆಂದು 'ಸರ್ವೋದಯ' ಪತ್ರಿಕೆಯಲ್ಲಿ 'ಗಾಂಧಿ ಸೇವಾ ಸಂಘ'ದ ಶ್ರೀ ಮಶ್ರೂವಾಲರು ಒಂದು ಲೇಖನ ಬರೆದು ವಿವರಿಸುತ್ತಾರೆ. ಅವರು ಆ ಲೇಖನದಲ್ಲಿ ವಿವರಿಸಿದ ಇತರ ಸಂಗತಿಗಳು ಹೀಗಿವೆ.

ಪ್ರತಿಜ್ಞಾ ದೌರ್ಬಲ್ಯ

'ಹಲವು ಸತ್ಯಾಗ್ರಹಿಗಳು ಸೆರೆಮನೆಯೊಳಗಿದ್ದು ಕೆಲ ತಿಂಗಳಲ್ಲಿಯೇ ತಮ್ಮ ಪ್ರತಿಜ್ಞಾ ದೌರ್ಬಲ್ಯ ಹೊಂದುತ್ತಾರೆ. ಕೆಲವರು ಅವರಲ್ಲಿ, ಹಲವು ಮಂದಿ ಸತ್ಯಾಗ್ರಹಿಗಳು ಗುಂಪು ಗುಂಪಾಗಿ ಸೆರೆಮನೆಗಳಿಗೆ ಬಂದು ಸರಕಾರವನ್ನು ಹದಗೊಳಿಸಿ ಅದು ರಾಜಿಗೆ ಬರುವಂತೆ ಮಾಡಬೇಕೆಂದೂ ಹಾಗಾದರೆ ತಮ್ಮ ಬಿಡುಗಡೆಯಾಗುವುದೆಂದೂ ಆಲೋಚಿಸುತ್ತಾರೆ. ಹೀಗಾಗದೆ ಹೋದರೆ ಅಂಥವರಿಗೆ ನಿರಾಶೆಯಾಗುತ್ತದೆ. ಸೆರೆಮನೆಯ ಹಲವು ಸತ್ಯಾಗ್ರಹಿಗಳು ಜ್ಯೋತಿಷ್ಯದಲ್ಲಿ ಬಹಳ ನಂಬಿಗೆಯುಳ್ಳವರಾಗಿ, ಬೇಗನೇ ತೀರ್ಮಾನವಾಗುವುದೆಂಬ ಆಶೆಯಿಂದಿರುವರೆಂದು ಕೇಳಿಬರುತ್ತಿರುವುದು ಬಹಳ ಕರುಣಾಜನಕವಾದುದು.' ಕೆಲವರು ಆಲೋಚಿಸುವುದೆಂದರೆ, ಯಾರಾದರೂ ದೊಡ್ಡ ಮನುಷ್ಯರು ಸರಕಾರದೊಡನೆ ರಾಜಿಮಾಡಿಸಿ ತಮ್ಮ ಬಿಡುಗಡೆಯಾಗುವಂತೆ ಪ್ರಯತ್ನಿಸಬೇಕೆಂದು, ಅದು ಆಗದಿದ್ದರೆ ಅವರಿಗೆ ನಿರಾಶೆಯಾಗುತ್ತದೆ. ಚರ್ಚಿಲರ ಮೊನ್ನೆಯ ಭಾಷಣದಿಂದ ಹಲವರು ನಿರಾಶೆಗೊಂಡ ಕಾರಣವಿದು. ಯೋಚಿಸಿದರೆ ನಿಜವಾದ ಕಾಂಗ್ರೆಸಿನವನಾವನೂ ಚರ್ಚಿಲರ ಮಾತಿನಿಂದ ಧೃತಿಗೆಡಬೇಕಾದ ಅವಶ್ಯಕತೆಯಿಲ್ಲ ಸರಕಾರಕ್ಕೆ ಸಾಮ್ರಾಜ್ಯಶಾಹೀ ಧೋರಣೆಯನ್ನು ಬದಲಾಯಿಸುವ ಅಪೇಕ್ಷೆಯಿದ್ದರೆ ಅದು ನಮಗೆ ಬಹಳ ಹಿಂದೆಯೇ ತಿಳಿಯಬಹುದಾಗಿತ್ತು.

ಮೂಲ ಕಾರಣಗಳು

ಇಂದಿನ ಸತ್ಯಾಗ್ರಹ ಚಳವಳದಲ್ಲಿ ನಿರಾಶೆ ಹುಟ್ಟಲು ಕಾರಣಗಳಿವೆ ನಿರಾಶೆ ಹುಟ್ಟುವ ಕಾರಣವೆಂದರೆ, ಜನರು ಸ್ವಾತಂತ್ರ್ಯದ ಸಲುವಾಗಿ ತಮ್ಮದೆಲ್ಲವನ್ನೂ ಬಲಿದಾನ ಮಾಡಲು ತಯಾರಿಲ್ಲದಿರುವುದರಿಂದ. ಯಾವುದೇ ತರಗತಿಯಲ್ಲಿ ಹಾಕಲಿ, ಸೆರೆಮನೆಯೆಂದರೆ ಸೆರೆಮನೆಯೇ ಸೆರೆಮನೆಗೆ ಹೋಗುವುದೆಂದರೆ ಆರೋಗ್ಯ ಕೆಡುತ್ತದೆ, ಬಂಧು ಬಾಂಧವರ ಅಗಲುವಿಕೆಯೊದಗುತ್ತದೆ. ಆದಾಯ ಹೋಗುತ್ತದೆ, ಹೀಗಿರುವ ಅನೇಕ ಸಂಕಟಗಳೊದಗುತ್ತವೆ. ನಮಗೆ ಕೆಲವರಿಗೆ ಇಂತಹವುಗಳು ಕೆಲವು ಸಹಿಸಲಸದಳಾಗುವವು. ಹಾಗಾಗಿ ಹಲವರು ಆಲೋಚಿಸುವರು: ಪಾರ್ಲಿಮೆಂಟರಿ ಕಾರ್ಯಕ್ರಮ ಮತ್ತು ರಾಜ್ಯಘಟನಾತ್ಮಕ ಆಂದೋಲನವು ಹಿತವಾದುದೆಂದು ಅದಾಗಿ, ಆಗಾಗ ಸತ್ಯಾಗ್ರಹ ನಿಲ್ಲಿಸಬೇಕೆಂಬ ಆಯಾಸದ ಕೂಗು ಕೇಳುತ್ತದೆ. ಈ ಕೂಗು ಹರಡುತ್ತಿದ್ದಂತೆ ಅಂತಹ ಜನರು ಹೆಚ್ಚು ಹೆಚ್ಚು ನಿರಾಶರಾಗುವರು.

ಇನ್ನೊಂದು ಹಾದಿಯವರು

ಇನ್ನೊಂದು ಹಾದಿಯವರಿಗೆ ಘಟನಾತ್ಮಕ ಆಂದೋಲನ ಒಪ್ಪುವುದಿಲ್ಲ ಸತ್ಯಾಗ್ರಹದ ಮಂದಗತಿಯೂ ಸಹಿಸುವುದಿಲ್ಲ. ಇಂತಹ ಹಲವು ಜನರು ತೀವ್ರ ಪರಿಣಾಮಕಾರೀ ಆಂದೋಲನವನ್ನು ಅಪೇಕ್ಷಿಸುತ್ತಾರೆ. ಅವರು ಜನತಾ ಆಂದೋಲನವಾಗಬೇಕೆಂದು ಹೇಳುತ್ತಾರೆ. ಆದರೆ ಅಂತಹವರಿಗೆ ಆಂದೋಲನವನ್ನು ಯಶಸ್ವಿಯಾಗಿ ಕೊನೆಗಾಣಿಸುವೆವೆಂಬ ಧೈರ್ಯವಿಲ್ಲ ಅಂಥವರು ಮುಂದುವರಿದ ಇಂದಿನ ವಿದ್ಯಾಭ್ಯಾಸದಲ್ಲಿ ವಿಶೇಷ ಅನುಭವಶಾಲಿಯಾಗಿರುವೆನೆಂದು ಭಾವಿಸುವ ಒಬ್ಬ ಶಿಕ್ಷಣ ತಜ್ಞನು ಪ್ರಾಥಮಿಕ ಶಿಕ್ಷಕನೊಬ್ಬನನ್ನು ದೂರುವಂತೆ ಇರುತ್ತಾರೆ. ಬಹುಶಃ ಅಂಥವರಿಗೆ ವಿಷಯ ಗೊತ್ತಿರಬಹುದು. ಆದರೆ ಜನತಾ ಆಂದೋಲನಕ್ಕೆ ಜನತೆ ಅಷ್ಟರ ಮಟ್ಟಿಗೆ ತಯಾರಾಗಿ ಅಂಥ ಮಟ್ಟಕ್ಕೆ ಬಂದಿರಬೇಕೆಂಬ ವಿಚಾರವು ಅವರಿಗೆ ತಿಳಿಯುವುದಿಲ್ಲ. ಜನತಾ ಆಂದೋಲನವಾದರೆ ಮತ್ತೆ ಅದರ ಎದುರು ಎಂಥಾ ಶಕ್ತಿಯಾದರೂ ನಿಲ್ಲಲು ಸಾಧ್ಯವಿಲ್ಲದಂತಹ ಮಟ್ಟವಿರಬೇಕೆಂಬುದು ಅವರಿಗೆ ಅರ್ಥವಾಗುವುದಿಲ್ಲ.

ಹೊಸ ಬಾಂಧವ್ಯ

ಇದು ಯಾವಾಗ ಸಾಧ್ಯವೆಂದರೆ ಇಡೀ ಜನತೆ ಬೇರೆ ಬೇರೆ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತವಾದಾಗ. ಸುಖ ವಿವಾಹವೊಂದರಿಂದ ಎರಡು ಕುಟುಂಬಗಳು ಒಂದು ಸುಂದರವಾದ ಹೊಸ ಬಾಂಧವ್ಯ ಬೆಳೆಸುವಂತೆ, ಕೆಲವು ಸ್ವರಗಳು ಒಂದು ಮೇಳವಾಗಿ ಕೂಡಿ ಸಂಗೀತ ಹುಟ್ಟುವಂತೆ, ಹಲವು ರಚನಾತ್ಮಕ ಕಾರ್ಯಗಳಿಂದ ಭಿನ್ನ ಭಿನ್ನ ಮತಜಾತಿಗಳು ಒಂದಾಗಿ ಜನಾಂಗವು ಬಲಶಾಲಿಯಾಗುವುದು. ಇದೇ ಐಕ್ಯ ಮತ್ತು ಸಂಘಟನೆಯಾಗಿದೆ. ಈ ತತ್ವವೇ ಜನರಿಗೆ ಎಂತಹ ಕಷ್ಟಗಳನ್ನೆದುರಿಸಲೂ, ಎಷ್ಟೊ ಬಲಿದಾನ ಮಾಡಲೂ ಶಕ್ತಿ ಪೌರುಷಗಳನ್ನು ಕೊಡುತ್ತದೆ. ಜನತೆಯೆಂದರೆ, ಒಂದು ಬೆಂಕಿ ಕಡ್ಡಿಯಿಂದ, ಸ್ವಲ್ಪ ಎಣ್ಣೆಯೆರೆದು ಸುಡುವ ಕಟ್ಟಿಗೆಯ ರಾಶಿಯಲ್ಲ. ಕ್ರಾಂತಿಯೆಂಬುದರಿಂದ ಹಿಂಸೆಯುಗೊಂಡವು ಹುಟ್ಟುವುದು ಮಾತ್ರ ಇಂಗಿತವಾಗಿದ್ದರೆ ಈ ಹೋಲಿಕೆ ಸರಿಯಾದುದು.

ರಚನಾತ್ಮಕ ಕಾರ್ಯ

ಸೆರೆಮನೆಗೆ ಹೋಗುವುದರಿಂದ ಪ್ರತ್ಯೇಕ ಸಿದ್ಧಿಯಿದೆ. ಆದರೆ ಸ್ವಾತಂತ್ರ್ಯ ಸಾಧನೆಗೆ ಅದು ಮಾತ್ರ ಸಾಲದೆಂಬುದನ್ನು ನಾವು ನೆನಸಿನಲ್ಲಿಡಬೇಕಾಗಿದೆ. ಇಂದಿನ ನಮ್ಮ ಅಗತ್ಯವು ಜನತೆಯಲ್ಲಿ ಅಂತಹ ಶಕ್ತಿಯನ್ನು ರಚನಾತ್ಮಕ ಕಾರ್ಯಗಳ ಮೂಲಕ ಹುಟ್ಟಿಸುವುದಾಗಿದೆ. ಹಾಗಾದರೆ ಸರಕಾರವು ನಮ್ಮನ್ನು ಸೆರೆಮನೆಗಳಿಗೆ ಸ್ವತಃ ಕಳುಹಿಸಬೇಕಾಗುವುದು! ಇಂದಿನೀ ಸತ್ಯಾಗ್ರಹದ ಯಶಸ್ವಿತೆಯು ಕೆಲವು ಪ್ರತಿನಿಧಿಗಳ ಆರಿಸುವಿಕೆಯಿಂದ ವ್ಯಕ್ತವಾಗಿದೆ ಪಂಡಿತ ಜವಾಹಿರಲಾಲ ನೆಹರು ಮತ್ತು ವಿನೋಬಾಜಿ ಇಬ್ಬರನ್ನು ಸೆರೆಮನೆಗೆ ಕಳುಹಿಸಿದರೂ ತಾನು ತೃಪ್ತನೆಂದು ಗಾಂಧಿಜಿ ಹೇಳುತ್ತಿದ್ದುದುಂಟು. ಆದರೆ ಹೊರಗಡೆಯಿರುವ ಕೆಲಸಗಾರರು ಜನತೆಯೊಡನೆ ಸೇರಿಕೊಂಡು ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿರಬೇಕು. ಅಂತಹ ರಚನಾತ್ಮಕ ಕಾರ್ಯಗಳಿಂದ ಸರಕಾರವು ಒಂದೋ ನಮ್ಮ ಕೇಳಿಕೆಗಳನ್ನು ಒದಗಿಸಬೇಕು; ಇಲ್ಲವಾದರೆ ನಮ್ಮನ್ನು ಸೆರೆಮನೆಗಳಿಗೆ ಸೇರಿಸಬೇಕು. ಆಗ ಜನತೆಯು ಆ ಕಾರ್ಯವನ್ನು ದ್ವಿಪ್ರತಿ ಶಕ್ತಿಯಿಂದ ಮುಂದೆ ಸಾಗಿಸುವುದು.

ಗಾಂಧಿಜಿಯ ಇಂಗಿತ

ಇಂದಿನ ಸತ್ಯಾಗ್ರಹ ಪರಿಸ್ಥಿತಿಯಿಂದ ಗಾಂಧಿಜಿ ಪೂರ್ಣ ಅತೃಪ್ತರಾಗಿಲ್ಲ. ಇಂದಿನ ಆಂದೋಲನದಿಂದ ಹೆಚ್ಚಾಗಿ ಎಲ್ಲರೂ ದೂರ ಸರಿದು ಕೆಲವೇ ಮಂದಿ ಉಳಿದರೂ ಅವರು ತೃಪ್ತರು ಮಾತ್ರ ಸೆರೆಮನೆಗೆ ಯಾವುದೇ ಕಾರಣದಿಂದ ಹೋಗಲಾರದವರು ರಚನಾತ್ಮಕ ಕಾರ್ಯಗಳಲ್ಲಿ ತಲ್ಲೀನರಾಗಬೇಕು. ಆದರೆ ನಮಗೆ ವಿಷಾದವೆಂದರೆ, ಸೆರೆಮನೆಗಳಿಗೆ ಹೋಗಲು ಅಶಕ್ತರಾದವರು ರಚನಾತ್ಮಕ ಕಾರ್ಯ ಮಾಡುವುದು ಬಿಟ್ಟು ಅಧಿಕಾರ ರಾಜತಂತ್ರದಲ್ಲಿ ತಲ್ಲೀನರಾಗಿ ಹಾನಿಯುಂಟು ಮಾಡುತ್ತಾರೆ

ಇಂದಿನೀ ಸತ್ಯಾಗ್ರಹವು ಮಂದಗತಿಯುಳ್ಳದ್ದಾಗಿ ಈಗ ಕಾಣಬಹುದು. ಇದರಿಂದ ನಿರಾಶೆಗೊಳ್ಳಬೇಕಾಗಿಲ್ಲ. ನಮ್ಮ ಯುದ್ಧವು ಯೂರೋಪಿಯನ್ ಯುದ್ಧಕ್ಕಿಂತ ದೀರ್ಘವಾಗುವುದು, ಮುಂದಕ್ಕೆ ನಾವು ಶಕ್ತಿ ಪೌರುಷಗಳನ್ನು ಗಳಿಸಿಕೊಳ್ಳಬೇಕಾಗಿದೆ ಆಗಾಗ ಎಲ್ಲಾ ತರದ ಸೈನಿಕರೂ ಸಾರ್ವಜನಿಕರೂ ಸಿದ್ಧರಿರಬೇಕು. ಯೂರೋಪಿನ ಯುದ್ಧವು ಯಾವುದೇ ಮಾರ್ಗ ಹಿಡಿಯಲಿ, ನಾವು ರಚನಾತ್ಮಕ ಕಾರ್ಯಗಳಲ್ಲಿ ತಲ್ಲೀನರಾಗಿ ಅಹಿಂಸೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ ನಮ್ಮ ಪರೀಕ್ಷೆ ಇಂದಲ್ಲ, ಭವಿಷ್ಯದಲ್ಲಿದೆ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O-P No 200/1941

1 H. N. ಗಾಂ ಯೂನೆ ಲಕ್ಷ್ಮಿ ಬ್ಯಾ. 2 S ಭವಾನಿ 3. S. ಜಯರಾಜ 4. S. ಹರಿದಾಸ 5 ಹೆಸರು ಬಾಕದ ಬೆಣ್ಣುಮಗು ಬಲ್ಲ ಗಾಮದಲ್ಲಿರುವವರು,

ಮ್ಯಾನರು ಗಾರ್ಡಿಯನ್ 1ನೇ ಅರ್ಜಿದಾರಳು

—ಅರ್ಜಿದಾರರು

ಸದ್ರಿ ಅರ್ಜಿದಾರರು ತಿಳಿಸುವದೇನಂದರೆ—

1ನೇ ಅರ್ಜಿದಾರಳ ಗಂಡ ಮ ಬಾಕಿ ಅರ್ಜಿದಾರರ ತಂದೆ ಮೃತ ಪಟ್ಟ H. G. ಸಂತೆಟ್ಟು ಎಂಬವಗೆ ಸಿಕ್ಕತಕ್ಕ ಬಾಬ್ತು ಆತನ ಲೆಕ್ಕಕ್ಕೆ ಅರ್ಜಿಯಲ್ಲಿ ಕಾಣ್ಸಿದ ಬೇಂಕುಗಳಲ್ಲಿರುವ ಐವೇಜು ವಸೂಲು ಮಾಡುವದಕ್ಕೆ ಮೃತನ ವಾರಿಸುದಾರರೆಂಬಲ್ಲಿ ತಮಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾರೀಕು 7-11-1941ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ತಾರೀಕಿಗೆ ಹಾಜ್ರಾಗಿ ಅವರ ಆಕ್ಷೇಪ ಜ್ಯಾಹೀರು ಮಾಡಿಕೊಳ್ಳಬಹುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುವುದು.

Kasaragod 14-10-1941 } M. K. Nambiar Advocate for Petrs

ಈ ವಾರದ ಕತೆ:

ಯಾವುದು ನಿಜ?

'ಶ್ರೀ' ಕತೆಗಾರ

ದಸರೆಯ ರಜೆ. ಆದ್ದರಿಂದ ಬೇಗನೆ ಕೆಲಸವನ್ನು ಮುಗಿಸಿ ಮನೆಯ ಕಡೆಗೆ ಹೊರಟಿದ್ದೆ. ನಡುದಾರಿಯಲ್ಲಿ ನನ್ನ ಮಿತ್ರರು ಎದುರಾದರು. ಪರಸ್ಪರ ಅಭಿವಂದನೆ ಮತ್ತು ಕುಶಲ ಪ್ರಶ್ನೆಗಳಾದ ಮೇಲೆ ಅವರು ಹೇಳಿದರು. 'ಮೋಹನ! ಬಹಳ ಒಳ್ಳೆಯ ಚಿತ್ರಪಟ ಬಂದಿದೆ. ನಾನು ಅಲ್ಲಿಗೇ ಹೊರಟಿದ್ದೇನೆ ನೀನೂ ಬಾ!'

ಸಿನೆಮ ಚಲಚಿತ್ರಗಳನ್ನು ಕೆಲವರು ದ್ವೇಷಿಸಿ ದೂಷಿಸುವಂತೆ ನಾನು ದೂಷಿಸುವುದಿಲ್ಲ. ಹಾಗೆಂದು ಅವುಗಳ ಮೇಲೆ ನನಗೆ ಪ್ರೇಮವಾಗಲಿ ಮೋಹವಾಗಲಿ ಇಲ್ಲ. ಮಿತ್ರನ ಮಾತನ್ನು ತೆಗೆದು ಹಾಕಲಿಕ್ಕಾಗದೆ ನಾನೂ ಅವನೊಟ್ಟಿಗೆ ನಡೆದೆ. ಚಿತ್ರದ ಕತೆಯು ಬಹು ಮನೋರಮವಾಗಿತ್ತು!

❦

ಒಬ್ಬ ಬಹು ಬಡವ ಜೀವನಕ್ಕೆ ಉಪಾಯವನ್ನು ಹುಡುಕಿಕೊಂಡು ಪರಊರಿಗೆ ಹೊರಟಿದ್ದ. ಆತನ ಕೈಹಿಡಿದ ಅವಳು ಭಾಗ್ಯಶಾಲಿನಿ ಅಲ್ಲ. ಭಾಗ್ಯಶಾಲಿನಿ ಆಗಿದ್ದರೆ ಅವಳು ಅವನ ಕೈಹಿಡಿಯುತ್ತಿರಲಿಲ್ಲ; ಆದರೆ ಅವಳು ಸೌಂದರ್ಯದ ಗನಿ, ಗುಣದ ಮಣಿ, ನವಯುವತಿ, ಇನ್ನೂ ಮಾತೃತ್ವವನ್ನು ಹೊಂದಲಿಕ್ಕೆ ಕೆಲವು ದಿನಗಳಿದ್ದುವು. ಅವಳು ಅಗಲುವಿಕೆಯ ವೇದನೆಯನ್ನು ಸಹಿಸದಾದಳು. ಕಣ್ಣುಗಳಲ್ಲಿ ನೀರು ತುಂಬಿಸಿಕೊಂಡು ಆಕುಲಮನಸ್ಸಿನಿಂದ ಅವಳು ಹೇಳಿದಳು—

'ಪ್ರಿಯತಮ, ನನ್ನೊಡೆಯ!'.

ಅವನು ಅಪ್ರತಿಭನಾಗಿ ನಿಂತುಕೊಂಡಿದ್ದ.

'ಹೃದಯೇಶ! ನೌಕರಿಗಾಗಿ ಪರದೇಶಕ್ಕೆ ಹೋಗಬೇಡ ನಾವು ಬಡವರು ಆದರೆ ಏನಾಯಿತು! ಶ್ರೀಮಂತರಿಗೆ ಜನ್ಮಕೊಟ್ಟ ಆ ಪರಮ ದಯಾಳು ಪರಮಾತ್ಮನು ನಮಗೂ ತಂದೆಯಾಗಿದ್ದಾನೆ ನನ್ನ ಕೈಯಲ್ಲಿ ಹಣವಿಲ್ಲ. ಆದರೆ ನೀನು ನನ್ನ ಹಣವಾಗಿದ್ದ ನಾನು ನೌಕರಿ ಚಾಕರಿ ಮಾಡುವೆನು ಹೇಗಾದರೂ ಮಾಡಿ ಸೇರು ಅರ್ಧಸೇರು ದುಡಿಯುವೆನು ನಮ್ಮ ಒಪ್ಪೊತ್ತು ಊಟಕ್ಕೆ ಅಷ್ಟು ಸಾಕು

ಅವನು ಆಗಲೂ ಮಾತನಾಡಲಿಲ್ಲ. ಅವಳು ಮತ್ತೂ ಹೇಳಿದಳು—

'ಪ್ರಾಣಪ್ರಿಯ, ನೀನೇ ನನ್ನ ಪಾಲಿನ ದೇವತೆ, ನೀನೇ ನನ್ನ ಪಾಲಿನ ಭಾಗ್ಯ! ದೇವರೇ! ಬೇರೆ ಏನೂ ಆಗದಿದ್ದರೆ ಬೆಳಗ್ಗೆ ಸಾಯಂಕಾಲ ನಾನು ನಿನ್ನ ಕಾಲುತೊಳೆಯುವೆನು, ಆ ನೀರನ್ನು ಕುಡಿದು ಧನ್ಯಳಾಗುವೆನು. ನನ್ನ ಜೀವನಾಧಾರ! ನೀನು ಹೋದರೆ ನಾನು ಬಹುಕಾಲವಿರೆ! ನನ್ನನ್ನು ಬದುಕಿಸುವುದು, ಉಳಿಸುವುದು ನಿನ್ನ ಕೈಯಲ್ಲೇ ಇದೆ.'

❦

ಇದನ್ನೆಲ್ಲ ಕೇಳಿ ಆ ಬಡವನಿಗೆ ಹೇಗಾಗಿರಬಹುದೋ ಅದು ನನಗೆ ಗೊತ್ತಾಗಲಿಲ್ಲ. ನನಗೆ ಮಾತ್ರ ಸ್ವಪ್ನಲೋಕದ ಸುಖಸಾಮ್ರಾಜ್ಯವನ್ನು ಚಿರಕಾಲ ಅನುಭವಿಸಿದ ಹಾಗೆ ಕಂಡಿತು. ಸಿನೆಮ ಮುಗಿಯುವಾಗ ನಾನು ಯಥಾರ್ಥವಾಗಿ ಸ್ವಪ್ನಲೋಕದಲ್ಲಿಯೇ ಇದ್ದೆ. ಮಿತ್ರರು ಎಚ್ಚರಿಸಿ ನನ್ನನ್ನು ಮನೆಗೆ ಕರಕೊಂಡು ಬಂದರು.

ಬರುವಾಗ ಸಾಧಾರಣ ಒಂಭತ್ತು ಅಥವಾ ಹತ್ತು ಗಂಟೆಯ ಸಮಯವಾಗಿರಬಹುದು. ಮನೆ ಬಾಗಿಲು ಒಳಗಿಂದ ಮುಚ್ಚಿತ್ತು. ನಾನು ಕರೆದೆ—'ಲೀಲಾ! ಲೀಲಾ!' ಆದರೆ ನನ್ನಾಕೆ ಬಂದು ಬಾಗಿಲು ತೆರೆಯಲಿಲ್ಲ. ಇಷ್ಟು ಬೇಗ ನಿದ್ದೆಯೇ ಎಂದು ನನಗೆ ಸ್ವಲ್ಪ ತಾತ್ಸಾರವಾಯಿತು. ಬಲವಾಗಿ ಬಾಗಿಲು ಬಡಿದು ಅವಳನ್ನು ಕರೆದೆ. ಬಹಳ ಸಮಯ ಕಳೆದ ಬಳಿಕ 'ಯಾರದು?' ಎಂದು ಕೇಳುತ್ತ ನನ್ನ ಶ್ರೀಮತಿ ಬಾಗಿಲು ತೆರೆದರು. ಎದುರಿಗೆ ಉರಿಯುವ ಎರಡು ಕೆಂಡಗಳಂತೆ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡ ಮಹಾಕಾಳಿಯ ಎರಡನೆಯ ಅವತಾರ ನಿಂತಿತ್ತು. ನೋಡಿ, ನನ್ನ ಅಂಗಾಂಗಗಳು ತತ್ತರಿಸಿದುವು. ಬಾಗಿಲು ಮುಚ್ಚಿಕೊಂಡು ಒಳಗೆ ಹೋದೆ. ಅವಳು ಹೋಗಿ ಪುನಃ ಹಾಸಿಗೆ ಮೇಲೆ ಬಿದ್ದುಕೊಂಡಳು. ನಾನು ನೊಂದಿ ಹೋದ ದೀಪವನ್ನು ಬಹಳ ಕಷ್ಟಪಟ್ಟು ಪುನಃ ಹಚ್ಚಿದೆ—ನೋಡಿದೆ, ಕಾಲು ತೊಳೆಯಲಿಕ್ಕೆ ನೀರಿಲ್ಲ, ಊಟಮಾಡಲಿಕ್ಕೆ ಬಟ್ಟಲು ಮಣೆ ಇಟ್ಟಿಲ್ಲ. ಅವಳು ನನ್ನನ್ನು ದುರುಗುಟ್ಟಿ ನೋಡುತ್ತಿದ್ದಳು.

❦

'ಏನು ನೋಡುವುದು, ಮನಸ್ಸಿಗೆ ಬಂದ ಹಾಗೆ ಮನೆಗೆ ಬರುವುದಾದರೆ ಕೆಲಸ ಮಾಡಲಿಕ್ಕೆ ಸೇವಕರನ್ನು ಇಟ್ಟುಕೊಳ್ಳಿ. ನನ್ನಿಂದಾಗದು, ಈ ಮನೆ ಕೆಲಸ ನಿಮಗೆ ಊರು ಕೇರಿ, ಓಣಿಗಲ್ಲಿ ತಿರುಗಾಡಿ ಬರಲಿಕ್ಕೆ ಸಮಯವಾಗುವುದಿಲ್ಲವಾದರೆ ನನಗೆ ಮಾತ್ರ ಬಟ್ಟಲು ಮಣೆ ಇಡಲಿಕ್ಕೆ ಎಲ್ಲಿಯ ಸಮಯ? ನೀವು ಹೀಗೆಯೇ ಮಾಡುವುದಾದರೆ ನಾನು ನಾಳೆಗೇ ಹೊರಟು ತಾಯಿಮನೆಗೆ ಹೋಗುತ್ತೇನೆ'

'ಅಡಿಗೆಯನ್ನು ಮಾಡಿಲ್ಲವೆ?' ಎಂದು ನಾನು ಸ್ವಲ್ಪ ಅಂಜಿದವನಾಗಿಯೇ ಕೇಳಿದೆ. 'ಮಾಡದೆ ಏನು? ಅದು ಆರು ಗಂಟೆ ಸಮಯಕ್ಕೇ ಮುಗಿದುಬಿಟ್ಟಿದೆ ಒಲೆಯಲ್ಲಿ ಇಟ್ಟಿದ್ದೇನೆ' ನೋಡಿ, ಬಳಸಿಕೊಂಡು ಊಟಮಾಡಿ.

ಪ್ರತಿದಿನವೂ ಇದೇ ನನ್ನವಳ ವ್ಯವಹಾರವಾಗಿತ್ತು ಅನುಭವಿಸಿ ಅನುಭವಿಸಿ ನನಗೆ ಜೀವನವೇ ಬೇಡವೆನ್ನಿಸಿತ್ತು. ಆದರೂ ತಾಳಿದವನು ಬಾಳಿಯಾನು ಎಂದು ಎಲ್ಲರೂ ಹೇಳುತ್ತಾರೆ. ನಾನು ಅದನ್ನೇ ಗ್ರಹಿಸಿಕೊಂಡು 'ಲೀಲಾ' ಎಂದೆ.

ಅವಳದು ಮಾತ್ರ ಕಲ್ಲಿನಂತೆ ಗಟ್ಟಿಯಾದ, ಪಾಷಾಣದಂತೆ ಮನಸ್ಸು! ಕ್ರೂರವಾದ ಅವಳು ಅಂದಳು—'ಇಲ್ಲಿ ಲೀಲೆಯೂ ಇಲ್ಲ. ಸೂಳೆಯೂ ಇಲ್ಲ. ನೀವು ಹೇಳಿದ ಹಾಗೆ ಕೇಳಲಿಕ್ಕೆ ನಾನು ನಿಮ್ಮ ದಾಸಿಯೆ? ನನ್ನಿಂದೊಂದೂ ಆಗದು ಹಸಿವಾಗಿದ್ದರೆ ಬಳಸಿ ಊಟಮಾಡಿ. ಇಲ್ಲವಾದರೆ ಹಾಗೇ ಮಲಗಿಕೊಳ್ಳಿ. ನಾಳೆ ಆಫೀಸಿಗೆ ಹೋಗುವಾಗ, ಅದೇ ತಂಗಳು ಬಳಸುತ್ತೇನೆ.'

ಅವಳು ಮುಖದ ತನಕ ಸೆರಗು ಎಳೆಕೊಂಡು ಗೊರಕೆ ಹೊಡೆಯಲಿಕ್ಕೆ ಆರಂಭಿಸಿದಳು. ನಾನು ದಿಙ್ಮೂಢನಾಗಿ ಆಲೋಚಿಸುತ್ತ ನಿಂತೆ—'ಪ್ರಪಂಚದಲ್ಲಿ ಯಾವುದು ನಿಜ? ಸಿನೆಮದ ಆ ಬಡವರ ಜೀವನವೆ? ಅಥವಾ ನಮ್ಮ ಈ ಜೀವನದ ಕತೆಯೆ?' ಆಗಲೇ ನನಗೆ ಭಾಸವಾಯಿತು—ನಾನು ಆ ಲೋಕದಿಂದ ಈ ಲೋಕಕ್ಕೆ ಬಂದಿದ್ದೇನೆಂದು

HALFTONE & LINE BLOCK MAKING UNDERTAKEN

Sharada Press, MANGALORE

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು. ಬೆಲೆ. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ. ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪಟೇಲ್ ರೋಡ್, ಮುಂಬಾಯಿ 4.

Sole Manufacturer. **Dr. D. N JASANI,** Vithalbhai Patel Road, BOMBAY 4.

Madras Agent **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಜಿಲ್ಲಾ ಸಮಾಚಾರಗಳು

ನಗರ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯು ಛ್ಯಾರ್‌ಮೇನ್ ಶ್ರೀ ಬಿ. ವೆಂಕಟ್ರಾಯ ಬಾಳಿಗ್ಯ ಎಂ ಎಲ್. ಎ ಇವರ ಅಧ್ಯಕ್ಷತೆಯಿಂದ ಜರಗಿ ೫ ನಿಮಿಷಗಳ ವರೆಗೆ ಸಭಾ ಕಾರ್ಯವನ್ನು ಮುಂದುವರಿಸಬೇಕೆಂಬ ಸೂಚನೆ ಬಂದು ಮೌನ್ಯವಾಗಿ ಹಲವು ಜಿ. ಓ ಗಳು ಓದಲ್ಪಟ್ಟವು. ರಸ್ತೆಗಳಿಗೆ ಡಾಮರು ಹಾಕುವ ವಿಚಾರದಲ್ಲಿ ೧೯೪೧ನೆಯ ಸಪ್ಟಂಬರ ತಾ. ೪ರಲ್ಲಿ ಕೌನ್ಸಿಲ್ ಮಾಡಿದ ೫೯೯ನೆಯ ಠರಾವು ಹಾಗೂ ಪತ್ರದಲ್ಲಿ ನಮೂದಿಸಲಾದ ಕಾರಣಗಳ ಮೇರೆಗೆ ಮೆಸರ್ಸ್ ಗೇನನ್ ಡಂಕರ್ಲೆಯವರ ಟೆಂಡರನ್ನು ಸ್ವೀಕರಿಸಬಹುದೆಂದು ಸೂಚಿಸಿ, ಕೊಯಂಬುತ್ತೂರು ಸರ್ಕಲಿನ ಸುಪರಿಂಟೆಂಡೆಂಟರ ಇಂಜಿನಿಯರರು ಬರೆದ ಪತ್ರದ ವಿಷಯ ಗೋಪ್ಯವಾಗಿ ಚರ್ಚಿಸಲಾಯಿತು.

ರೇಡಿಯೋದಲ್ಲಿ ಕನ್ನಡ ಸುದ್ದಿ

ಪ್ರತಿ ಸೋಮವಾರ ಸಂಜೆ ೬ಗೆ ಮದ್ರಾಸಿನಿಂದ ಕನ್ನಡವಾರ್ತೆಗಳೂ ವಾರದ ಮಿಕ್ಕ ದಿನಗಳಲ್ಲಿ ಪ್ರತಿನಿತ್ಯ ಸಂಜೆ ೬॥ಕ್ಕೆ ಮೈಸೂರು ಆಕಾಶವಾಣಿಯ ಕನ್ನಡ ವಾರ್ತೆಗಳೂ ಮಂಗಳೂರು ಮೈದಾನಿನಲ್ಲಿ ಕೇಳಿಸುವಂತೆ ಏರ್ಪಾಡಾಗಿದೆ.

ಶ್ರೀ. ತಿಮ್ಮಪ್ಪಯ್ಯನವರ ಭಾಷಣ

ಸ್ಥಳೀಯ ಗ॥ ಟ್ರೈ। ಸ್ಕೂಲಿನಲ್ಲಿ ಶ್ರೀ ಮುಳಿಯ ತಿಮ್ಮಪ್ಪಯ್ಯನವರು 'ಕನ್ನಡ ಕೌರವ' ಎಂಬ ವಿಷಯ ಭಾಷಣವಿತ್ತರು

ರಕ್ಷ್ಯಕ್ಕೆ ಸಹಾಯ

ರಕ್ಷಕ್ಕೆ ಸಹಾಯ ಕೊಡುವ ವಿಷಯದಲ್ಲಿ ಮಂಗಳೂರು ವಿದ್ಯಾರ್ಥಿಸಂಘದವರು ತಾ ೯ರಂದು ಮೈದಾನಿನಲ್ಲಿ ಶ್ರೀ ಶಂಕರನ್ ಇವರ ಅಧ್ಯಕ್ಷತೆಯಿಂದ ಸಭೆ ಕೂಡಿಸಿದರು. ಅದರಲ್ಲಿ ಶ್ರೀಗಳಾದ ಬಿ. ವಿ ಕಕ್ಕಿಲ್ಲಾಯ, ಎಂ ಸಿ ಅಹಮ್ಮದ್ ಎಸ್ ಆರ್ ಭಟ್ಟ, ಸುಬ್ಬಯ್ಯ ಶೆಟ್ಟಿ ಪದ್ಮನಾಭನ್ ಇವರು ಭಾಷಣಮಾಡಿದರು ಮರುದಿನ ಒಂದಾಣೆಯ ಧ್ವಜಮಾರಾಟಮಾಡಲಾಯಿತು

ಕದ್ರಿ ಮ್ಯುನಿಸಿಪಲ್ ಶಾಲಾ ಮಕ್ಕಳ ಹೆತ್ತವರ ಸಂಘ ಸ್ಥಾಪನೆ

ಕದ್ರಿ ಮ್ಯುನಿಸಿಪಲ್ ಪ್ರಾಥಮಿಕ ಬಾಲಿಕಾ ಪಾಠ ಶಾಲೆಯಲ್ಲಿ ತಾ ೧೩ ರಂದು ಕದ್ರಿ ಗ್ರಾಮಸ್ಥರ ಸಭೆಯೊಂದು ಶ್ರೀ। ಕೆ ಕೃಷ್ಣ ರಾವ್ ಬಿ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು

ಶಾಲೆಯ ಮುಖ್ಯೋಪಾಧ್ಯಾಯಿನಿ ಮಿಸೆಸ್ ಟಿ. ನೊರೊನ್ಹ, ಹೆತ್ತವರ ಸಂಘವನ್ನು ಸ್ಥಾಪಿಸುವ ಉದ್ದೇಶವನ್ನು ವಿವರಿಸಿದರು. ಮಕ್ಕಳ ತಂದೆ ತಾಯಿಗಳೂ, ರಕ್ಷಕರೂ, ನಮ್ಮೊಡನೆ ಸಹಕರಿಸಿ, ನಗರದ ಮಕ್ಕಳ ಹಿತಕ್ಕಾಗಿ ಏನ್ನು ಋಣವ್ಯಯ ಮಾಡುವುದಕ್ಕೂ ಸಿದ್ಧರಾದ ನಗರ ಸಭೆಯವರ ಉದ್ದೇಶವನ್ನು ನೆರವೇರಿಸುವ ಜತೆಯಲ್ಲಿ ಮಕ್ಕಳ ವಿದ್ಯಾಭ್ಯಾಸದ ಪ್ರಗತಿಗೆ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ ಎಂದರು

ಅಧ್ಯಕ್ಷರು ಮುಖ್ಯೋಪಾಧ್ಯಾಯಿನಿಯವರ ಭಾಷಣವನ್ನು ಸಮರ್ಥಿಸಿ ಭಾಷಣ ಮಾಡುತ್ತಾ, ಮಕ್ಕಳ ವಿದ್ಯಾಭ್ಯಾಸವು ಚೆನ್ನಾಗಿ ನಡೆಯಬೇಕಾದರೆ ಉಪಾಧ್ಯಾಯರೂ, ಮಕ್ಕಳ ಹೆತ್ತವರೂ ರಕ್ಷಕರೂ ಪರಸ್ಪರ ಸಹಕರಿಸದೆ ವಿನಾಸಾಧ್ಯವಾಗುವುದಿಲ್ಲವೆಂದರು

ಹೆತ್ತವರ ಸಂಘಕ್ಕೆ ಅಧಿಕಾರಿಗಳ ಚುನಾವಣೆ ನಡೆದು ಶ್ರೀ। ಕೆ. ಕೃಷ್ಣರಾಯರು ಅಧ್ಯಕ್ಷರಾಗಿಯೂ, ಶ್ರೀ। ವೆಂಕಪ್ಪ ನಾಯ್ಕರು ಉಪಾಧ್ಯಕ್ಷರಾಗಿಯೂ, ಮಿಸೆಸ್ ಟಿ. ನೊರೋನ್ಹರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಮಕ್ಕಳ ವಿವಿಧ ವಿನೋದಾವಳಿ, ಮಂಗಳ ಗೀತೆ ವಂದನಾರ್ಪಣೆಗಳೊಂದಿಗೆ ಸಭಾಂತ್ಯವಾಯಿತು.

ಕಾಂಗ್ರೆಸ್ ಕೆಲಸದ ಸಹಾಯಾರ್ಥವಾಗಿ

ಜಿಲ್ಲಾ ಕಾಂಗ್ರೆಸ್ ಕಮಿಟಿಯ ರಚನಾತ್ಮಕ ಕಾರ್ಯದ ಸಹಾಯಾರ್ಥವಾಗಿ ಇದೇ ತಾ. ೨೬ ನೇ ಆದಿತ್ಯವಾರ ಸಾಯಂಕಾಲ ಶ್ರೀ ಮಂಗೇಶ್ ಕುಮಾರ್, ಇವರ ಚಿತ್ರ ಭಯಾನಕ ಆಶ್ಚ

ದ್ಭುತ ವಿವಿಧ ಪ್ರದರ್ಶನಗಳು ನೆರವೇರಲ್ಪಡುವುವು ಬರೇ ಹಗ್ಗವನ್ನು ಯಾವ ಆಧಾರವಿಲ್ಲದೆ ಸ್ತಂಬದಂತೆ ನಿಲ್ಲಿಸಿ ಒಬ್ಬ ಹುಡುಗನು ಹಗ್ಗವನ್ನು ಏರಿ ಇಳಿಯುವ ದೃಶ್ಯವೂ ಇದೆ ಇದು ಲಂಡನಿನಲ್ಲಿಯೂ ಪ್ರಸಿದ್ಧಿ ಪಡೆದಿದೆ.

ಬಂಟ್ವಾಳದಿಂದ ಗಾಂಧಿಜಿಯವರಿಗೆ ಕಾಣಿಕೆ

ಬಂಟ್ವಾಳ ಕೇಂದ್ರದಿಂದ ಗಾಂಧಿಜಿಯವರಿಗೆ ೩,೫೩,೦೦೦ ಗಜ ಕೈಯಿಂದ ಮಾಡಿದ ನೂಲನ್ನು ಮಹಾತ್ಮರ ೭೩ನೆಯ ಜಯಂತಿ ಸ್ಮಾರಕ ಸಮರ್ಪಿಸಲಾಗಿದೆ. ಇದು ೬೩ ಚಚ್ಚೌಕ ಗಜ ಖಾದಿ ನೇಯಲು ಸಾಕಾಗುವುದಂತೆ

ಕಾಸರಗೋಡು

ಸುವರ್ಣನದಿಯಲ್ಲಿ ನೆರೆ ಬಂದ ವಿವರಗಳು

ಕಾಸರಗೋಡು ತಾಲೂಕು ಮಂಜೇಶ್ವರ ಮಾಗಣೆ ಕುಡಾಲುಮೇರ್ಕಳ ಗ್ರಾಮದಲ್ಲಿರುವ ಪೊಸಡಿಗುಂಪೆಯೆಂಬ ಬೆಟ್ಟದಿಂದ ಹುಟ್ಟಿ, ಕುಡಾಲಮೇರ್ಕಳ, ಕಯ್ಯಾರು, ಕುಬಣೂರು ಮಂಗಲ್ಪಾಡಿ ಗ್ರಾಮಗಳಲ್ಲಿ ಹರಿದು ಪರೆಂಕಿಲ್ ಎಂಬಲ್ಲಿ ಸಮುದ್ರ ಸಂಗಮವಾಗುವ ಸುಮಾರು ಹತ್ತು ಮೈಲು ವಿಸ್ತೀರ್ಣದ ನದಿಯಲ್ಲಿ, ಕಳೆದ ತಾ ೨ರಂದು ಆಕಸ್ಮಾತ್ತಾಗಿ ನೆರೆ ಬಂದು ಹಲವು ಹಾನಿಗಳುಂಟಾಗಿವೆ.

ಇದು ಏಣೆಲು ಬೆಳೆ ಕಟಾವಿನ ಸಮಯವಾಗಿದ್ದು ರೈತರು ಹೆಚ್ಚು ಮಂದಿ ಬೆಳೆ ಕಟಾವು ಮಾಡಿ ಸೂಡಿಗಳನ್ನು ಗದ್ದೆಗಳಲ್ಲಿ ಕೊಯ್ದು ಇಟ್ಟಿದ್ದರು. ರಾತ್ರಿ ಕಾಲದಲ್ಲಿ ಈ ನೆರೆ ಒಂದುದರಿಂದ ಬೆಳೆಯ ಸೂಡಿಗಳು ನೆರೆಯ ಪ್ರವಾಹಕ್ಕೆ ಕೊಚ್ಚಿಹೋದವು. ಸಾಧಾರಣ ಕಳೆದ ೫೦, ೬೦ ವರ್ಷಗಳಿಂದ ಈ ನದಿಯಲ್ಲಿ ಇಷ್ಟು ಎತ್ತರಕ್ಕೆ ನೆರೆಯೇರಿದುದು ಈ ಊರವರ ಅನುಭವದಲ್ಲಿಲ್ಲ. ರಾತ್ರಿ ಕಾಲದಲ್ಲಿ ಹೀಗೆ ಒಮ್ಮೆಯೇ ನೀರು ಉಕ್ಕಿ ಬಂದುದರಿಂದ ಅವರು ತಮ್ಮ ಬೆಳೆ ಸೂಡಿಗಳನ್ನು ಏನೂ ಉಳಿಸಿಕೊಳ್ಳಲಾಗಲಿಲ್ಲ ಬೆಳೆ ಕಟಾವು ಮಾಡದ ಗದ್ದೆಗಳ ಬೆಳೆಗೂ ತುಂಬಾ ಹಾನಿಯುಂಟಾಗಿದೆ. ಅನೇಕ ಕಡೆ ಕಟ್ಟಪುಣಿಗಳು ಕಡಿದು ಗದ್ದೆಗಳಲ್ಲಿ ಮಣ್ಣು ತುಂಬಿರುತ್ತದೆ ತೋಟಗಳಿಗೂ ಕೆಲವು ಕಡೆ ಹಾನಿಯಿದೆ, ಕೆಲವು ಮನೆಗಳೂ ಇದರಿಂದ ಮುರಿದು ಬಿದ್ದಿರುತ್ತವೆ. ಈ ನೆರೆಯಿಂದ ಬೇಸಾಯಗಾರರು ಅದರಲ್ಲೂ ವಿಶೇಷವಾಗಿ ಬಡಗೇಣಿ ಒಕ್ಕಲಿನ ರೈತರು ತುಂಬಾ ಕಷ್ಟನಷ್ಟಗಳಿಗೆ ತುತ್ತಾಗಿದ್ದಾರೆ ಒಟ್ಟಿನಲ್ಲಿ ಈ ಮೂರು ನಾಲ್ಕು ಗ್ರಾಮಗಳಲ್ಲಿ ಸುಮಾರು ಆರೇಳು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ.

ಎರಡನೆಯಬಾರಿ ಸತ್ಯಾಗ್ರಹ

ಈ ಮೊದಲು ಸತ್ಯಾಗ್ರಹ ಆಚರಿಸಿ ೬ ತಿಂಗಳ ಶಿಕ್ಷೆಯನ್ನನುಭವಿಸಿ ಬಂದ ನೀಲೇಶ್ವರದ ಶ್ರೀ. ಎಂ ಕುಂಞಂಬು ನಾಯರರು ತಾ ೮ರಂದು ತಿರುಗಿ ಸತ್ಯಾಗ್ರಹ ಮಾಡಿದರು. ಕೂಡಲೇ ಅವರನ್ನು ಬಂಧಿಸಲಾಗಿದೆ.

ಸತ್ಯಾಗ್ರಹಿಯ ಮೇಲೆ ನಿರ್ಬಂಧ

ಹೊಸದುರ್ಗದಲ್ಲಿ ಜನವರಿ ತಾ ೩೦ರಂದು ಸತ್ಯಾಗ್ರಹವನ್ನು ಮಾಡಿ 'ಬಿ' ತರಗತಿ ಕೈದಿಯಾಗಿ ೬ ತಿಂಗಳ ಶಿಕ್ಷೆಗೆ ಗುರಿಯಾದ ಶ್ರೀ ಎ ಸಿ ಕಣ್ಣನ್ ನಾಯರರ ಶಿಕ್ಷೆಯ ಅವಧಿ ಮುಗಿದಿರುವುದಾದರೂ, ಮದ್ರಾಸು ಸರಕಾರವು ಅವರನ್ನು ಬಿಡುಗಡೆ ಮಾಡದೆ ತಿರುಗಿ ನಿರ್ಬಂಧ ಹೊರಿಸ ತ್ರಿಚನಾಪಳ್ಳಿ ಸೆರೆಮನೆಯಿಂದ ನೆಲ್ಲೂರು ಸೆರೆಮನೆಗೊಯ್ದುದಾಗಿ ತಿಳಿದಿದೆ

ಕಾರ್ಕಳ

ಶ್ರೀ ಎ ಬಿ ಶೆಟ್ರ ಭಾಷಣ

ತಾ. ೭ರ ದಿನ ಶ್ರೀ ವಕೀಲ ಕೆ ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಎ. ಬಿ. ಶೆಟ್ಟಿ, ಎಂ ಎಲ್ ಎ ರವರ ಸದ್ಯದ ಭಾರತೀಯ ರಾಜಕೀಯ ಪರಿಸ್ಥಿತಿಯ ಕುರಿತು ಮಾತನಾಡುತ್ತ ಎಲ್ಲರೂ ಕಾಂಗ್ರೆಸನ್ನು ಸೇರಿ ಅದರ ಕಾರ್ಯಕ್ರಮವನ್ನು ಮುಂದೊತ್ತಬೇಕೆಂದು ಭಾಷಣವಿತ್ತರು.

ಗಾಯತ್ರಿ ಪುರಶ್ಚರಣ

ಶ್ರೀ. ಪಂಡಿತ ಹರಿರಾಮ ಜೋಯಿಸರವರು ಕಳೆದ ಎಂಟು ತಿಂಗಳು ಮಾಡಿಕೊಂಡಿದ್ದ ಗಾಯತ್ರಿ ಜಪಾರಾಧನೆಯ ಪುರಶ್ಚರಣೆಯು ತಾ. ೧೧ರ ದಿನ ಶ್ರೀ ಶ್ರೀನಿವಾಸ ಆಶ್ರಮದಲ್ಲಿ ಶ್ರೀ ವಕೀಲ ಕೆ ವೆಂಕಟೇಶ ಪೈ ಮೊದಲಾದವರ ಸಹಕಾರದಿಂದ ನಡೆಯಿತು

ದೇವಸ್ಥಾನಕ್ಕೆ ವಿದ್ಯುದ್ದೀಪಗಳು

ಶ್ರೀ ವೆಂಕಟ್ರಮಣ ದೇವಾಲಯಕ್ಕೆ ಶ್ರೀ. ವಿಟ್ಠಲ ರಾಂತಾರಾಮ ಕುಲಕರ್ಣಿ ಮತ್ತು ಈಪೂರು ಅನೇಕರು ಕೊಟ್ಟ ವಿದ್ಯುದ್ದೀಪಗಳನ್ನು ಬೆಳಗಿಸುವ ಹಾಗೂ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಿವಂಗತ ಶ್ರೀ ಶಾಂತಾರಾಮ ಮಂಗೇಶ ಕುಲಕರ್ಣಿಯವರ ಭಾವಚಿತ್ರದ ಅನಾವರಣ ಮಾಡುವ ಸಮಾರಂಭಗಳು ತಾ. ೧೧ರ ದಿನ ಶ್ರೀ ಬಿ ವೆಂಕಟ್ರಾಯ್ ಬಾಳಿಗಾ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ನಡೆದಿದೆ

A TIP FROM LAND OF "GOOD EARTH"!

Paper currency was in vogue in China even as early as 2000 B. C Curiously enough it was similar in appearance to the Bank notes of to day For instance the notes were dated, then values were indicated both in words and in figures and on each appeared the signature of a Government Officer. There was however one difference The Chinese Government never let slip an opportunity of advising and educating the people. The following maxim was therefore inscribed on the border of the notes "However much you possess strive to be thrifty." True four thousand years ago it is also very true to-day

CANARA BANK LIMITED
Estd. 1906.

ಕರ್ನಾಟಕ ಸಾಹಿತ್ಯ ಸಭೆ

ಕನ್ನಡ ಮತ್ತು ಇತರ ಭಾಷೆಗಳ ಸಾಹಿತ್ಯಾಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಶ್ರೀ. ಲಲಿತಕೀರ್ತಿ ಭಟ್ಟಾರಕಸ್ವಾಮಿಯವರ ಅಧ್ಯಕ್ಷತೆಯಲ್ಲಿ ಇಲ್ಲಿ ಕರ್ನಾಟಕ ಸಾಹಿತ್ಯ ಸಭೆಯೆಂಬ ಹೆಸರಿನದೊಂದು ಸಂಸ್ಥೆಯು ಸ್ಥಾಪಿತವಾಗಿ ಕಾರ್ಯಕಾರಿ ಮಂಡಲಿಯ ರಚನೆಯಾಗಿರುತ್ತದೆ.

ಉಡುಪಿ

ಅನಾವರಣೋತ್ಸವ

ಉಡುಪಿ ಕ್ಲಬ್ಬಿನಲ್ಲಿ ಗತಿಸಿದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ್ ಬಹದ್ದೂರರ ಭಾವಚಿತ್ರವನ್ನು ಶ್ರೀ. ಎ ಬಿ ಶೆಟ್ಟಿ ಎಂ ಎಲ್ ಎ ಇವರು ಅನಾವರಣ ಮಾಡಿದರು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ದಾಸೂರರ ಭಾವಚಿತ್ರ ಅನಾವರಣೋತ್ಸವವನ್ನು ಶ್ರೀ ಶೆಟ್ಟರು ನೆರವೇರಿಸಿದರು

ಕುಂದಾಪುರ

ಶ್ರೀ ಎ ಬಿ. ಶೆಟ್ರ ಭಾಷಣ

ತಾ ೬-೧೦ ೪೧ರಂದು ಶ್ರೀ ಎ. ಬಿ ಶೆಟ್ರು ಶ್ರೀ. ಕೆ. ನರಸಿಂಹ ಕಾಮತರ ಅಧ್ಯಕ್ಷತೆಯಿಂದ ಗಾಂಧಿಜಯಂತಿಯ ವಿಷಯವಾಗಿ ಸಾರ್ವಜನಿಕ ಭಾಷಣ ಮಾಡಿದರು ಶ್ರೀ ಶೆಟ್ರು ಅಂತರ್ರಾಷ್ಟ್ರೀಯ ರಾಜಕೀಯ ಹಾಗೂ ಗಾಂಧಿಜಿ ಜೀವನ ತತ್ವಗಳನ್ನು ವಿವರಿಸಿ ಸರ್ವರೂ ಕಾಂಗ್ರೆಸಿಗೆ ಬೆಂಬಲಕೊಡಬೇಕೆಂದು ಹೇಳಿದರು ನೂಲುವ ಸ್ಪರ್ಧೆ ನಡೆಯಿತು ಇಬ್ಬರಿಗೆ ಬಹುಮಾನ ಹಂಚಲಾಯಿತು. ಶ್ರೀ ಸುಬ್ಬಣ್ಣ ಶೆಟ್ರು ವಂದನಾಸಮರ್ಪಣೆ ಮಾಡಿದರು

ಮಹಾಜನ ಫ್ಲಡ್ ರಿಲೀಫ್ ಕಮಿಟಿಗೆ ಬಂದ ಧನ ಸಹಾಯ

ಪಾಣೆಮಂಗಳೂರು ಕಾಂಗ್ರೆಸ್ ಕಮಿಟಿಯವರಿಂದ ರೂಪಾಯಿ ೩೩-೬-೦, ಕೆನರಾ ಪಬ್ಲಿಕ್ ಸರ್ವಿಸ ಬೆಳ್ಳಾರೆ ರೂ ೧೦-೦-೦, ಇಂಡಿಯನ್ ಸ್ಟೇಟ್ ಒಫ್ ಪಿಯುನ್ಸ್ ಲೆಸ್ಲಿ ಮಂಗಳೂರು ೮-೧-೮ ಪೆಟ್ರೋಲ್ ಎಂಡ್ ಇಂಡಸ್ಟ್ರಿಯಲ್ ಒಯಿಲ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ ಬೊಂಬಾಯಿ ೧೦-೦-೦, ಅವರಾಡಿ ಕೋಆಪರೇಟಿವ್ ಸೊಸೈಟಿ ೧೦-೦-೦, ಪಡಿಕ್ಕಾಪ್ಸ ಬೇಂಕ್ ರೂ. ೫-೦-೦, ಎನ್. ಜಿ ಶೆಟ್ಟಿ ನಿಪ್ಪಾನ್ ೪-೦-೦, ಕೆನರಾ ವಿದ್ಯಾದಾಯಿನಿ ಸಭಾ ಮುಂಬಯಿ ೨೧-೮-೦, ಬೊಂಬೆ ಮೇಯರ್ ಫಂಡ್ ೪೦೦೦-೦-೦.

(ಮುಂದುವರಿಯುವುದು)

ಕಾಂಗ್ರೆಸ್ ಸದಸ್ಯರನ್ನು ಮಾಡಿರಿ

ಸದ್ಯಕ್ಕೆ ಎಲ್ಲ ಕಡೆಗಳಲ್ಲಿಯೂ, ಕಾಂಗ್ರೆಸ ಸಭಾ ಸದಸ್ಯರನ್ನು ಸೇರಿಸುವ ಕಾರ್ಯವು ನಡೆದಿದೆ. ಪ್ರತಿವರುಷಕ್ಕಿಂತಲೂ, ಈ ವರ್ಷ ಹೆಚ್ಚು ಕಾಂಗ್ರೆಸ ಸಭಾ ಸದಸ್ಯರನ್ನು ಸೇರಿಸುವದು ಪ್ರತಿಯೊಬ್ಬ ಕಾಂಗ್ರೆಸ ಕಾರ್ಯಕರ್ತರ ಕರ್ತವ್ಯವಾಗಿದೆ ಇಡೀ ಜಗತ್ತಿನಂತೆ ಹಿಂದುಸ್ಥಾನವೂ, ಒಂದು ಹೋರಾಟದಲ್ಲಿದೆ ಈ ಸಮಯಕ್ಕೆ ಕಾಂಗ್ರೆಸಿಗೆ ಹೆಚ್ಚು ಸಭಾಸದರನ್ನು ಕೂಡಿಸಿ ಕಾಂಗ್ರೆಸಿಗೆ ಬೆಂಬಲಕೊಡುವದರಿಂದ ನಮ್ಮ ರಾಷ್ಟ್ರೀಯ ಆಂದೋಲನಕ್ಕೆ ಒಳ್ಳೇ ರೀತಿಯಲ್ಲಿ ನೆರವಾದಂತಾಗುತ್ತದೆ ಸದ್ಯದ ಕಾಂಗ್ರೆಸಿನ ಕಾರ್ಯದಲ್ಲಿ ಹಿಂದೀ ಜನತೆಯ ಪೂರ್ಣ ಬೆಂಬಲವಿದೆಯೆಂದು ತೋರಿಸಲು ಕಾಂಗ್ರೆಸ ಸಭಾಸದರ ಸಂಖ್ಯೆಯು ಒಂದು ದೊಡ್ಡ ಸಾಧನವಾಗಿದೆ ಆದ್ದರಿಂದ ಕಾಂಗ್ರೆಸ ಸಂಸ್ಥೆಗಳೂ, ಕಾಂಗ್ರೆಸ ಹಿತೈಷಿಗಳೂ, ಈ ಕಾರ್ಯವನ್ನು ಉತ್ಸಾಹದಿಂದ ಕೈಕೊಂಡು ವರುಷಕ್ಕಿಂತಲೂ, ಈ ಸಲ ಸಭಾಸದರ ಸಂಖ್ಯೆಯು ಬೆಳೆಯುವಂತೆ ಪ್ರಯತ್ನಿಸುವೆಂದು ಈ ಮೂಲಕ ಆಗ್ರಹದಿಂದ ಬಿನ್ನವಿಸುತ್ತೇನೆ ಎಂದು ಕ. ಪ್ರಾಂ. ಕಾಂ. ಕಮಿಟಿ ಅಧ್ಯಕ್ಷ ಶ್ರೀ ದತ್ತಾತ್ರೇಯ ಕರಮರಕರರು ಬರೆಯುತ್ತಾರೆ.

ಮೋಸ್ಕೋವನ್ನು ಜರ್ಮನರು ಸಮೀಪಿಸುತ್ತಿರುವರು

—ಮಲಿನೋಪಲ್ ನಗರದ ಪತನ—

ರಶ್ಯ ಯುದ್ಧ ವಿಚಾರ ಚರ್ಚಿಲರು ಹೇಳಿಕೆ ಕೊಡಲಿಲ್ಲ

ಪರಿಸ್ಥಿತಿ ಬಹಳ ಗಂಭೀರವಿದೆ

ಮೋಸ್ಕೋದ ಮೇಲೆ ಜರ್ಮನರು ಪ್ರಚಂಡ ಧಾಳಿ ಮಾಡುತ್ತಿರುವರು. ಅಝೋವ ಸಮುದ್ರಕರಾವಳಿಯಲ್ಲಿರುವ ಮಲಿನೋಪಲ್ ಎಂಬ ಊರನ್ನು ರಶ್ಯನರು ಬಿಟ್ಟುಕೊಟ್ಟರಂತೆ. ವ್ಯಾಝುಮಾ, ಬ್ರಿಯಾನಸ್ಕ್, ಕಾಲಿನನ್ ಪ್ರದೇಶಗಳಲ್ಲಿ ಕಾಳಗ ನಡೆಯುತ್ತಲಿದೆ. ಜರ್ಮನರು ಮೊಸ್ಕೋವಿಗಿಂತ ಸುಮಾರು ನೂರು ಮೈಲು ದೂರವಿರುವರೆಂದು ತಿಳಿದಿದೆ. ವ್ಯಾಝುಮಾ ರಣಭೂಮಿಯಲ್ಲಿ ಸಿಕ್ಕಿಬಿದ್ದ ರಶ್ಯನ್ ಸೈನ್ಯಗಳನ್ನೆಲ್ಲಾ ನಿರ್ನಾಮ ಮಾಡಿದುದಾಗಿಯೂ, ರಶ್ಯನ್ ಯುದ್ಧವನ್ನು ಕೊನೆಗೊಳಿಸಿಬಿಟ್ಟಿರುವುದಾಗಿಯೂ ಹಿಟ್ಲರನ ಕಚೇರಿಯಿಂದ ಪ್ರಕಟಣೆ ಹೊರಟಿದೆ. ಜರ್ಮನರ ಹೊಸ ಹೊಸ ಸೈನ್ಯಗಳು ರಶ್ಯದಲ್ಲಿ ದುಮುಕುತ್ತಿವೆ.

ಬ್ರಿಟನು ಫ್ರಾನ್ಸಿನ ಮೇಲೆ ಧಾಳಿಮಾಡಿ ಜರ್ಮನಿಯ ಲಕ್ಷ್ಯವನ್ನೆಳೆಯಬೇಕು

ರಶ್ಯನ್ ಪತ್ರಿಕೆಯ ಸಲಹೆ

ಜರ್ಮನಿಯು ಈಗ ಹಲವು ದಿನಗಳಿಂದ ರಶ್ಯದ ಮೇಲೆ ಮಹೋಗ್ರವಾಗಿ ಧಾಳಿಮಾಡುತ್ತಿರುವುದರಿಂದ, ರಶ್ಯದ ಗಂಡಾಂತರವನ್ನು ಹಗುರ ಮಾಡಲು ಬ್ರಿಟನು ಈಗ ಫ್ರಾನ್ಸಿನ ಮೇಲೆ ಧಾಳಿ ಮಾಡಿ ಜರ್ಮನಿಯ ಲಕ್ಷ್ಯವನ್ನು ಆ ಕಡೆ ಸೆಳೆಯಬೇಕೆಂದು ರಶ್ಯನ್ ಪತ್ರಿಕೆಯು ಬರೆಯುತ್ತದೆ.

ಹಿಟ್ಲರ ಪುಸ್ತಕ ಬರೆಯುತ್ತಾನೆ

ಹಿಟ್ಲರ ಹೊಸ ಗ್ರಂಥವೊಂದನ್ನು ಬರೆಯುತ್ತಿದ್ದಾನೆಂದು ವಾರ್ತೆ. ಅದು ರಶ್ಯದ ಯುದ್ಧದ ಕುರಿತಾಗಿದೆಯಂತೆ. ಹಿಟ್ಲರನು ಹಿಂದೆ 'ಮೈನ್‌ಕಾಂಪ್' ಎಂಬ ಗ್ರಂಥವನ್ನು ಬರೆದಿರುವನು.

ರಶ್ಯದ ರಣರಂಗ

ರಶ್ಯದ ಸ್ಥಿತಿ ತೀರಾ ವಿಷಮವಾಗಿದೆಯೆಂದು ಸುದ್ದಿ ಹರಡಿತ್ತು. ಹಿಟ್ಲರನು ರಣಕ್ಷೇತ್ರದಲ್ಲಿದ್ದು ಸೈನಿಕರನ್ನು ಹುರಿದುಂಬಿಸುತ್ತಿದ್ದಾನಂತೆ. ಮೋಸ್ಕೋದ ಆಕ್ರಮಣ ಕಾರ್ಯವೂ ಭರದಿಂದ ಸಾಗುತ್ತಿದೆ. ಕತ್ತರಿಯ ರೂಪದಲ್ಲಿ ನಾಜಿಗಳು ರಶ್ಯವನ್ನು ಆಕ್ರಮಿಸಿದ್ದಾರೆ. ಎಜೋವದ ಕೆಲವು ಬಂದರುಗಳು ಜರ್ಮನರ ಕೈಗೆ ಸಿಕ್ಕಿವೆಯಂತೆ. ಪ್ರಪಂಚದಲ್ಲೆಲ್ಲಾ ರಶ್ಯ ಯುದ್ಧದ ವಿಷಯ ಬಹಳ ಗಡಿಬಿಡಿಯ ಸುದ್ದಿಯೇ ಹರಡುತ್ತಿದೆ.

ಚೀನೀಯರ ಯುದ್ಧ

ಯಾಂಗಟೀ ನದೀ ತೀರದ ಕರಾವಳಿ ಬಂದರವಾದ ಇಚಂಗನ್ನು ಚೀನೀಯರು

ಸ್ವಾಧೀನ ಪಡಿಸಿಕೊಂಡರಂತೆ. ಜಪಾನರು ಹಿಂದೆ ಸರಿದರು.

ಜಪಾನಿಗೆ ಎಣ್ಣೆ ಕಳುಹಿಸುವುದಿಲ್ಲ.

ಅಮೇರಿಕದಿಂದ ಇನ್ನು ಮುಂದೆ ಜಪಾನಿಗೆ ಎಣ್ಣೆ ಸರಬರಾಯಿ ಮಾಡುವುದಿಲ್ಲವೆಂದು ತಿಳಿದಿದೆ. ಮಿತ್ರ ರಾಷ್ಟ್ರಗಳೂ ಡಚ್ ಇಂಡೀಸ್ ಹಾಗೆಯೇ ಮಾಡುವವಂತೆ.

ರಿಸಲು ನೇಮಕವಾದ ಬ್ರೂಮ್ ಕಮಿಟಿಯ ಮೇಲಿನ ಆರೋಪವು ನಿರಾಧಾರವಾದುದೆಂದು ಪ್ರಕಟಿಸಿದೆ. ಈ ತಪ್ಪು ಟ್ರಾನ್ಸ್‌ವಾಲ್ ಸರಕಾರದ್ದೆಂದು ಅಲ್ಲಿನ ಇಂಗ್ಲಿಷ್ ಪತ್ರಿಕೆಗಳೇ ಬರೆದಿವೆ. ತಮ್ಮ ಹಣವನ್ನು ಯೋಗ್ಯ ರೀತಿ ಉಪಯೋಗಿಸಲು ಮತ್ತು ವಾಸಕ್ಕೆ ಮನೆ ಸಿಗಲು ಅವಕಾಶವಿಲ್ಲವೆ ಹಿಂದೀಯರು ಹೀಗೆ ಮಾಡುತ್ತಿರುವರಾಗಿ ಪತ್ರಿಕೆಗಳು ಅಭಿಪ್ರಾಯಪಿಟ್ಟಿವೆ

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಇತ್ತೀಚೆಗೆ ಅಮೆರಿಕಾ ಮೊದಲಾದ ಕಡೆಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಷಯ ಪ್ರಚಾರಮಾಡಿ ಭಾರತಕ್ಕೆ ಮರಳಿದವರು ತಾ. ೧೫ರಂದು ಮಂಗಳೂರಿಗೆ ಬಂದಿರುವರು

'ತಪ್ಪು ಭಾರತೀಯರದಲ್ಲ ಟ್ರಾನ್ಸ್‌ವಾಲ್ ಸರಕಾರದ್ದು' ಬ್ರೂಮ್ ಕಮಿಟಿ ವರದಿ

ನೆಟಾಲ್ ಟ್ರಾನ್ಸ್‌ವಾಲ್ ಪ್ರಾಂತ್ಯಗಳಲ್ಲಿಯ ಭಾರತೀಯರು ಯೂರೋಪಿಯನರಿಗೆ ಸೇರಿದ್ದ ಪ್ರದೇಶಗಳನ್ನು ಆಕ್ರಮಿಸಿಕೊಂಡು ತಮಗೆ ತೊಂದರೆ ಕೊಡುತ್ತಿರುವುದಾಗಿ ಹಲವು ಯೂರೋಪಿಯನರು ಗುಲ್ಲೆಬ್ಬಿಸಿದ್ದರು. ಆ ಬಗ್ಗೆ ವಿಚಾ

ರಶ್ಯದ ಪರಿಸ್ಥಿತಿ ಬಗ್ಗೆ ರೂಸ್‌ವೆಲ್ಟರು ನಿರಾಶರಾಗಿಲ್ಲ

ಎಂದು ರೂಸ್‌ವೆಲ್ಟರು ಒಂದು ಹೇಳಿಕೆಯಿಂದ ತಿಳಿದಿದೆ. ಆಕ್ಸಿಸ್ ರಾಷ್ಟ್ರಗಳನ್ನು ಎದುರಿಸುವವರಿಗೆ ಸಂಪೂರ್ಣ ಸಹಾಯ ಮಾಡುವುದು ಅವರ ನಿರ್ಧಾರವೆಂದು ಅದರಲ್ಲಿ ಹೇಳಲಾಗಿದೆ

ಜರ್ಮನರು ಮುನ್ನಡೆಪರು ಮಾಸ್ಕೋದಿಂದ ೬೫ ಮೈಲು

ರಶ್ಯ ರಣಭೂಮಿಯಲ್ಲಿ ಜರ್ಮನರು ಆಶ್ಚರ್ಯಕರವೆನಿಸಿ ಮುನ್ನಡೆದು ಮೋಸ್ಕೋದಿಂದ ೬೫ ಮೈಲು ದೂರದಲ್ಲಿ ಬಂದು ತಂಗಿರುವರೆಂದು ತಿಳಿದಿದೆ.

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS
AGAINST APPROVED SECURITIES
GRANTED AT EASY RATES OF
INTEREST & ATTRACTIVE TERMS.

Banking business of every description transacted.

Full particulars can be had from any of our Branches.

ಬ್ರಿಟಿಷ್ ಸರಕಾರಕ್ಕೆ ಸಿಕಂದರರ ಸೂಚನೆ

ಅತ್ಲಾಂತಿಕ ಘೋಷಣೆಯನ್ನು ಹಿಂದೂಸ್ಥಾನಕ್ಕೆ ಸಂಬಂಧಿಸಿದ್ದಲ್ಲವೆಂದುದು ಸರಿಯಲ್ಲವೆಂಬ ಚರ್ಚಿಲರ ಘೋಷಣೆಯನ್ನು ಟೀಕಿಸಿ ಪಂಜಾಬಿನ ಪ್ರಧಾನ ಸರ್ ಸಿಕಂದರ್ ಹಯಾತ್ ಖಾನರು ಒಂದು ಹೇಳಿಕೆಯಿತ್ತಿರುವರು

ಚುನಾವಣೆ ಮುಂದೆ ಹಾಕಿದ ಮಸೂದೆಗೆ ಅರಸರ ಒಪ್ಪಿಗೆ

ಹಿಂದುಸ್ಥಾನದ ಹೊಸ ಮಸೂದೆಯನ್ನು— ಚುನಾವಣೆಯನ್ನು ಮುಂದೆ ಹಾಕಿದ್ದು— ಮುಂದುವರಿಸಿದ್ದಕ್ಕೆ ಅರಸರ ಒಪ್ಪಿಗೆಯ ಮುದ್ರೆಯನ್ನು ರಾಯಲ್ ಕಮಿಶನ್ನಿನವರು ಲಾರ್ಡ್ಸ್ ಸಭೆಯಲ್ಲಿ ಒತ್ತಿದರು

ರಶ್ಯದ ಕುರಿತು ಚರ್ಚೆ ಬೇಡವೆಂದರು ಚರ್ಚಿಲರು

ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಬ್ರಿಟಿಷ್ ಪ್ರಧಾನಿ ಚರ್ಚಿಲರು ರಶ್ಯದ ಪರಿಸ್ಥಿತಿಯು ಕುರಿತು ಯುದ್ಧ ಪ್ರಕಟಣೆಗಳು ತಿಳಿಸುತ್ತವೆಯೆಂದೂ ಆ ಕುರಿತ ಚರ್ಚೆ ಮಾಡುವುದು ಬೇಡವೆಂದು ಹೇಳಿದರು.

ವಾಜಪೇಯರು ಅಮೆರಿಕಕ್ಕೆ ಹೊರಟರು

ಅಮೆರಿಕದಲ್ಲಿ ಭಾರತದ ಪ್ರತಿನಿಧಿಗಳಾಗಿ ನೇಮಕ ಹೊಂದಿದ ಸರ್ ಗಿರಿಜಾ ಶಂಕರ ವಾಜಪೇಯರು ಅಮೆರಿಕಕ್ಕೆ ತೆರಳಿದರು. ಹಿಂದುಸ್ಥಾನ ಸರಕಾರವು ಅಮೆರಿಕದಲ್ಲಿ ವ್ಯಾಪಾರೀ ಕಮಿಶನರ್ ಮತ್ತು ಸಾಮಾನು ಕೊಳ್ಳುವ ಮಂಡಳಿಗಳನ್ನು ನಿಯಮಿಸಿದ್ದಾರೆ. ಅವರೆಲ್ಲರ ಕಾರ್ಯಗಳನ್ನು ಕೇಂದ್ರೀಕರಿಸುವುದೇ ತಮ್ಮ ಕೆಲಸವೆಂದು ಅವರೆಂದರು. ಭಾರತದ ವಿಷಯ ಅಮೆರಿಕದಲ್ಲಿ ಪ್ರಚಾರ ಮಾಡುವೆನೆಂದರು. ಭಾರತದ ಪ್ರತಿನಿಧಿಯೊಬ್ಬನು ಅಮೆರಿಕಕ್ಕೆ ನೇಮಕವಾಗಿ ಹೋಗುವುದು ಇದೇ ಮೊದಲ ಸಲ.

ಮಂಗಳೂರು

ಭಾಷಣಗಳು

ಗ್ರಾಮ ಕೈಗಾರಿಕೆ ತಾ ೧೫ರಂದು ಗ. ಟ್ರೈ. ಶಾಲೆಯಲ್ಲಿ ಶ್ರೀ ಜನರಾಜ ಹೆಗ್ಡೆ, ಎಂ. ಎಲ್. ಎ (ಸೆಂಟ್ರಲ್) ಇವರು ಗ್ರಾಮ ಕೈಗಾರಿಕೆಯ ವಿಷಯ ಭಾಷಣವಿತ್ತರು.

"ಭಾರತದ ಋಣ"—ಕೆನರಾ ಹೈಸ್ಕೂಲಿನಲ್ಲಿ ತಾ. ೧೬ರಂದು ಶ್ರೀ. ನಾರಾಯಣ ಕಿಣ್ಣಿಯವರು ಭಾರತದ ಋಣ ಎಂಬ ವಿಷಯ ಭಾಷಣವಿತ್ತರು.

ಭಾರತೀಯರು ೩೮ ಕೋಟಿ ೮೮ ಲಕ್ಷ ಮಂದಿ ಆಗಿದ್ದಾರೆ

೧೦ ವರ್ಷಗಳಲ್ಲಿ ೫ ಕೋಟಿ ಹೆಚ್ಚಿದ್ದಾರೆ

ಕಾಂಗ್ರೆಸು ಧೋರಣೆಯಲ್ಲಿ ಬದಲಾವಣೆಯುಂಟೆ?

ಕಾಂಗ್ರೆಸು ತನ್ನ ಸದ್ಯದ ಧೋರಣೆಯನ್ನು ಬದಲಾಯಿಸಬೇಕೇ? ಪುನಃ ಮಂತ್ರಿಮಂಡಲಗಳನ್ನು ಕಾಂಗ್ರೆಸು ಸ್ವೀಕರಿಸಬೇಕೇ? ಎಂಬೀ ಪ್ರಶ್ನೆಗಳು ಇತ್ತೀಚೆಗೆ ಹಲವು ಕಾಂಗ್ರೆಸಿನವರ ವಿಚಾರಗಳಲ್ಲಿ ಗೊಂದಲ ಹುಟ್ಟಿಸಿದೆ. ಯುದ್ಧ ಮುಗಿವ ವರೆಗೆ ಕಾಂಗ್ರೆಸ್ ಧೋರಣೆ ಬದಲಾಗುವುದು ಶಕ್ಯವಿಲ್ಲವೆಂದು ಮಹಾತ್ಮರ ಹೇಳಿಕೆ. ರಾಜಾಜಿ ಮುಂದಿನ ವಾರ ವಾರ್ಧಾಕ್ಕೆ ತೆರಳುವರು. ಆಗ ಸರ್ದಾರ್, ಕೃಪಾಲನಿ ರಾಜೇಂದ್ರ ಪ್ರಸಾದರೂ ಅಲ್ಲಿಗೆ ಹೋಗುವರಂತೆ. ಬೊಂಬಯಿಯಲ್ಲಿ ಭೂಲಾಭಾಯಿ ಆಸಫ್ ಆಲಿಯರೊಡನೆ ಸತ್ಯಮೂರ್ತಿಯವರು ಕೇಂದ್ರ ಶಾಸನ ಸಭೆಗೆ ಕಾಂಗ್ರೆಸ್ ಸದಸ್ಯರು ಹಾಜರಾಗುವ ವಿಚಾರವಾಗಿ ಚರ್ಚೆಮಾಡುತ್ತಿದ್ದಾರೆ.

ಹಿಂದುಸ್ಥಾನದ ಜನಸಂಖ್ಯೆ

೩೮ ಕೋಟಿ ೮೮ ಲಕ್ಷ ಆಗಿದೆ

೧೯೪೧ರ ಜನಗಣತಿಯಂತೆ ಹಿಂದುಸ್ಥಾನದ ಜನ ಸಂಖ್ಯೆ ೩೮ ಕೋಟಿ ೮೮ ಲಕ್ಷಕ್ಕೆ ಏರಿರುವುದೆಂದು ತಿಳಿದಿದೆ. ಅದರಲ್ಲಿ ಬ್ರಿಟಿಷ್ ಹಿಂದುಸ್ಥಾನದ ಸಂಖ್ಯೆ ೨೯ ಕೋಟಿ ೬೦ ಲಕ್ಷ ಇದೆಯಂತೆ. ೧೯೩೧ನೇ ಜನಗಣತಿಯಲ್ಲಿ ೧೦ ವರ್ಷದಲ್ಲಿ ೧೦೦ಕ್ಕೆ ೧೦॥ಯಷ್ಟು ಜನಸಂಖ್ಯೆ ಹೆಚ್ಚಿತ್ತು, ಈಗ ೧೦೦ಕ್ಕೆ ೧೫ರಷ್ಟು ಜನ ಸಂಖ್ಯೆ ಹೆಚ್ಚಿದೆ.

ಸತ್ಯಮೂರ್ತಿಗಳ ಪ್ರಯಾಣ

ಗಾಂಧಿಜಿ ಭೇಟಿ

ವಾರ್ಧಾಕ್ಕೆ ತೆರಳಿ ಗಾಂಧಿಜಿಯವರ ಭೇಟಿಮಾಡಿ ಶ್ರೀ ಸತ್ಯಮೂರ್ತಿಯವರು ಸತ್ಯಾಗ್ರಹದ ವಿಚಾರ ಹಾಗೂ ಕೇಂದ್ರ ಅಸೆಂಬ್ಲಿಗೆ ಕಾಂಗ್ರೆಸು ಸದಸ್ಯರು ಹಾಜರಾಗುವ ವಿಚಾರ ಮಹಾತ್ಮರೊಡನೆ ಚರ್ಚಿಸಿ ಅಲ್ಲಿಂದ ಬೊಂಬಯಿಗೆ ತೆರಳಿ ಭೂಲಾಭಾಯಿಯವರನ್ನು ಕಂಡು ಮಾತನಾಡಿದರು.

ಕಮಲಾದೇವಿ

ಶ್ರೀಮತಿ ಕಮಲಾದೇವಿಯರೂ ವಾರ್ಧಾಕ್ಕೆ ಬಂದಿದ್ದು ಅಲ್ಲಿ ಗಾಂಧಿಜಿಯವರನ್ನು ಕಂಡು ಮಾತನಾಡಿ, ಗಾಂಧಿಜಿಯವರಿಗೆ ಅಮೆರಿಕನರು ಕಾಣಿಕೆಯಿತ್ತ 'ಕೈನೂಲಿನ ಬಟ್ಟೆಯನ್ನು ಸಮರ್ಪಿಸಿದರು. ಅಲ್ಲಿ ಶ್ರೀಮತಿಯರು ಸತ್ಯಮೂರ್ತಿಗಳನ್ನು ಕಂಡು ನಿವಸ್ಸಂಧವರು ಅಮೆರಿಕಕ್ಕೆ ತೆರಳಿ ಅಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯ ಮಾಡಬೇಕೆಂದು ಹೇಳಿದರು.

ಬಿಡುಗಡೆಗಳು

ಮಧ್ಯಪ್ರಾಂತದ ಮಾಜಿ ಪ್ರಧಾನಿ ಪಂಡಿತ ರವಿಶಂಕರ ಶುಕ್ಲರ ಬಿಡುಗಡೆಯಾಗಿದೆ. ಮದ್ರಾಸು ಅಸೆಂಬ್ಲಿ ಡೆಪ್ಯುಟಿಸ್ಪೀಕರರಾದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರ ಬಿಡುಗಡೆಯಾಗಿದೆ.

ಭಾರತದ ಕೇಳಿಕೆ ಪೂರೈಸಬೇಕು

ಮಿ। ಮೆಲ್ಲರರ ಹೇಳಿಕೆ

ಭಾರತದ ಕೇಳಿಕೆಯನ್ನು ಪೂರೈಸಬೇಕೆಂದೂ, ಇಲ್ಲವಾದಲ್ಲಿ ದೊಡ್ಡ ಕ್ರಾಂತಿಯನ್ನು ನಾವು ಇದಿರಿಸಬೇಕಾಗುವುದೆಂದೂ, ಯುದ್ಧಾವಸಾನದ ವರೆಗೆ ತಾತ್ಕಾಲಿಕವಾಗಿ ಒಂದು ಒಪ್ಪಂದ ಮಾಡಬೇಕೆಂದೂ ಪಂಡಿತ ನೆಹರುಗಳನ್ನು ಸಮಾಧಾನಪಡಿಸಬೇಕೆಂದೂ ಲಂಡನಿನ ಡೈಲಿ ಹೆರಾಲ್ಡ್ ಪತ್ರಿಕಾ ಸಂಪಾದಕರಾದ ಶ್ರೀ. ಮೆಲ್ಲರು ಹೇಳಿರುವರು.

ಸ್ವತಂತ್ರ ರಾಷ್ಟ್ರವೆಂದು ಹೋರಾಡಲು ಭಾರತವು ಸಿದ್ಧವಿದೆ

ಕಾಂಗ್ರೆಸ್ ಧೋರಣವನ್ನು ತಪ್ಪು ಅರ್ಥಮಾಡಬಾರದು

ಅಸಫ್ ಆಲಿಯವರ ಹೇಳಿಕೆ

ಚರ್ಚಿಲರ ಅಟ್ಲಾಂಟಿಕ ಘೋಷಣೆಯ ವ್ಯಾಖ್ಯಾನವನ್ನು ಟೀಕಿಸುತ್ತಾ ಶ್ರೀ. ಅಸಫ್ ಆಲಿಯವರು ಕಾಂಗ್ರೆಸಿನ ಯುದ್ಧನೀತಿಯ ವಿಚಾರವೆತ್ತಿ ಭಾರತವು ಸ್ವತಂತ್ರ ರಾಷ್ಟ್ರವೆಂದು ಹೋರಾಡಲು ಸಿದ್ಧವಿದೆಯೆಂದು ಹೇಳಿ, ಕಾಂಗ್ರೆಸಿನ ಇಂದಿನ ನೀತಿ ಬದಲಾಗುವುದು ಅವಶ್ಯವಿದೆಯೆಂದೂ ಅಭಿಪ್ರಾಯಪಿತ್ತರು.

ಡಫ್ ಕೂಪರರು ಬೆಚ್ಚಿಬಿದ್ದರು

ಡಫ್ ಕೂಪರರು ಅಮೆರಿಕದಲ್ಲಿ ಭಾರತದ ವಿಷಯ ಅಪಪ್ರಚಾರಮಾಡುತ್ತಿದ್ದಾಗ ಶ್ರೀಮತಿ ಕಮಲಾದೇವಿಯರು ಅವರಿಗೆ ತಕ್ಕ ಉತ್ತರವಿತ್ತರಂತೆ. ಅದರಿಂದ ಡಫ್ ಕೂಪರರು ರೇಗಿಕೊಂಡರಂತೆ.

ಕಾಂಗ್ರೆಸು ಅಧಿಕಾರ ಸ್ವೀಕರಿಸಬೇಕು

ಅಲ್ಲಾಭಕ್ಷರ ಹೇಳಿಕೆ

ಸಿಂಧದ ಪ್ರಧಾನಿಗಳಾದ ಅಲ್ಲಾಭಕ್ಷರು ಒಂದು ಹೇಳಿಕೆಯಲ್ಲಿ ಕಾಂಗ್ರೆಸು ಅಧಿಕಾರ ವಹಿಸಿ ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸಬೇಕೆಂದು ವಿನಂತಿಸಿಕೊಂಡಿರುವರು.

'ವೀರ ಜವಾಹರ'

ವೀರ ಜವಾಹರ್ ಎಂಬ ಗುಜರಾಥೀ ಗ್ರಂಥವನ್ನು ಸರಕಾರವು ಬಹಿಷ್ಕಾರ ಹಾಕಿ ಅದನ್ನು ಅಚ್ಚುಹಾಕಿದ 'ವೀರ ವಿಜಯ' ಮುದ್ರಾಲಯದಿಂದ ಒಂದು ಸಾವಿರ ರೂಪಾಯಿ ಜಾಮೀನು ಕೇಳಿದೆ.

"ಅಂಗಡಿ ಶೃಂಗಾರ"ವಂತೆ

ವೈಸ್‌ರಾಯ್ ಕೌನ್ಸಿಲ್ ವಿಸ್ತರಣೆ

ಅಮೆರಿಕದ 'ನ್ಯೂಸ್ಟೇಟ್ಸ್‌ಮೆನ್ ಎಂಡ್ ನೇಶನ್' ಪತ್ರಿಕೆಯು ವೈಸರಾಯ ವಿಸ್ತರಣಾ ಕೌನ್ಸಿಲ್ ಯೋಜನೆಯ ವಿಷಯ ಬರೆಯುತ್ತಾ ಅದು ಕೇವಲ ಅಂಗಡಿ ಶೃಂಗಾರವೆಂದು ಬರೆದಿರುವುದು. ಸರಕಾರವು ಕಾಂಗ್ರೆಸಿನ ಸಹಕಾರ ಪಡೆಯಬೇಕೆಂದೂ ಆ ಪತ್ರಿಕೆ ಸೂಚನೆಯಿತ್ತಿದೆ.

ಸತ್ಯಾಗ್ರಹ ಚಳವಳ ನಿಲ್ಲಿಸಬೇಕಾಗಿಲ್ಲ

ಆದರೆ ಪಾರ್ಲಿಮೆಂಟರಿ ಕಾರ್ಯದಲ್ಲಿಯೂ ಹೋರಾಡಬೇಕು

ಸತ್ಯಮೂರ್ತಿ ಹೇಳಿದರು

"ಕಾಂಗ್ರೆಸಿನ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕೆಂದು ನಾನು ಅಭಿಪ್ರಾಯಪಟ್ಟ ಮಾತ್ರಕ್ಕೆ ಸತ್ಯಾಗ್ರಹ ಚಳವಳವನ್ನು ನಿಲ್ಲಿಸಬೇಕೆಂದರ್ಥವಲ್ಲ. ಆದರೆ ನಾವು ಪಾರ್ಲಿಮೆಂಟರಿ ಕಾರ್ಯಕ್ರಮದಿಂದಲೂ ಹೋರಾಟ ನಡೆಸಬೇಕು. ಸರಕಾರಕ್ಕೆ ಸಹಾಯ ಮಾಡಬೇಕೆಂದು ನಾನು ಹೇಳಲಾರೆ. ಏಕೆಂದರೆ ಆ ಸಹಾಯವನ್ನು ಪಡೆಯುವ ಯೋಗ್ಯತೆಯು ಅದಕ್ಕಿಲ್ಲ. ನಾವೀಗ ಎಲ್ಲಾ ಮಾರ್ಗಗಳಿಂದಲೂ ಹೋರಾಟ ನಡೆಸಬೇಕು. ಹಿಂದೆ ನಮ್ಮ ರಾಜಕೀಯ ವಿರೋಧವನ್ನು ತೋರಿಸುವ ಸಲುವಾಗಿ ಕೇಂದ್ರ ಎಸೆಂಬ್ಲಿಯಿಂದ ಹೊರಬಂದುದು ಸರಿಯಾಯಿತು; ಆದರೆ ದೊಡ್ಡ ರಾಜಕೀಯ ಪಂಗಡವೊಂದು ಹೀಗೆ ಕಡೆ ತನಕ ಹೊರಗೆ ನಿಲ್ಲುವುದು ಯೋಗ್ಯವಲ್ಲ. ಈಗ ವೈಸರಾಯರ ಹೊಸ ಕಾರ್ಯಕಾರೀ ಮಂಡಲವು ಕೆಲಸಮಾಡುವುದು; ಹಿಂದೀ ಬರ್ಮಾ, ಸಿಲೋನ್–ಹಿಂದೀ ಒಪ್ಪಂದಗಳು ಚರ್ಚೆಗೆ ಬರಲಿರುವುವು. ಬರ್ಮಾ ಒಪ್ಪಂದವನ್ನು ನಾವು ಪ್ರತಿಭಟಿಸಲೇಬೇಕು. ಕಾಂಗ್ರೆಸು ಪುನಃ ಅಧಿಕಾರಸ್ವೀಕರಿಸಬೇಕೆಂದು ನನ್ನಮತ. ಇದರ ಕುರಿತು ಜನರಮನವೊಲಿಸುವರೆ ಪ್ರಚಾರ ಮಾಡಲು ನಾನು ಗಾಂಧಿಜಿಯವರ ಅಪ್ಪಣೆ ಕೇಳಿದ್ದೇನೆ. ನನ್ನ ಪ್ರಚಾರ ಅಯಶಸ್ವಿಯಾದರೂ ನಾನು ನಿರಾಶನಾಗಲಾರೆ, ಕಾಂಗ್ರೆಸಿನ ಅಪ್ಪಣೆಯಂತೆ ನಡೆಯುವೆನು. ಕಾಂಗ್ರೆಸನ್ನು ನಾನೆಂದಿಗೂ ಬಿಟ್ಟುಹೋಗುವುದಿಲ್ಲ." ಹೀಗೆಂದು ಸತ್ಯಮೂರ್ತಿಯವರು ಬೊಂಬಾಯಿಯಲ್ಲಿ ಪತ್ರಿಕೋದ್ಯಮಿಗಳೊಡನೆ ಹೇಳಿದರು.

'ಗಾಂಧಿಜಿಯವರು ಪ್ರಕಾಶಂದಲ್ಲ'

'ಅವರದು ದೇವ ಮಾರ್ಗ'

ಪ್ರಕಾಶಂದವರ ಹೇಳಿಕೆ

ಭಾರತದ ಪ್ರಾಂತಗಳಲ್ಲಿಯ ಮಂತ್ರಿಗಳನ್ನು ಹಾಗೂ ಜನರನ್ನು ಕೇಳದೆ, ತಮ್ಮ ಮನಸ್ಸಿಗೆ ಬಂದಂತೆ ಕಾಯಿದೆಯನ್ನು ಮಾಡಲು, ಬ್ರಿಟಿಷರಿಗಿದ್ದ ಅಧಿಕಾರವನ್ನು ರದ್ದುಗೊಳಿಸಿ, ಕಾಂಗ್ರೆಸಿಗೆ ಯೋಗ್ಯಸ್ಥಾನಮಾನವನ್ನು ಕಲ್ಪಿಸಿಕೊಡದ ಹೊರತು ನಾವು ಅಧಿಕಾರ ಸ್ವೀಕಾರದ ಮಾತು ಎತ್ತುವ ಹಾಗಿಲ್ಲ. ಪ್ರಾಂತಿಕ ಮಂತ್ರಿಗಳನ್ನು ಹಾಗು ಜನರನ್ನು ಕೇಳದೆ ತಮ್ಮ ಮನಸ್ಸಿಗೆ ಬರದಂತೆ ಮಾಡಲು ಅಧಿಕಾರ ಹೊಂದುವ ನಿರ್ಣಯವನ್ನು ಬ್ರಿಟಿಷರು ಪಾರ್ಲಿಮೆಂಟಿನಲ್ಲಿ ಯುದ್ಧ ಪ್ರಾರಂಭವಾದ ಕೂಡಲೇ ಮಂಜೂರು ಮಾಡಿಕೊಂಡರು. ಕಾಂಗ್ರೆಸ್ ಮಂತ್ರಿಮಂಡಳಗಳು ಅಧಿಕಾರದಲ್ಲಿದ್ದಾಗ ಈ ವಿಷಯದ ಬಗ್ಗೆ ಅವರು ಮಂತ್ರಿಗಳನ್ನು ವಿಚಾರಿಸಿದ್ದರು. ಬ್ರಿಟಿಷರಿಗೆ ಹಾಗೆ ಮಾಡಲು ಅಧಿಕಾರವಿಲ್ಲವೆಂದು ಕಾಂಗ್ರೆಸ್ ಮಂತ್ರಿಗಳು ತಿಳಿಸಿದ್ದರು. ಆದರೂ ನಮ್ಮ ಅಭಿಪ್ರಾಯವನ್ನು ಲಕ್ಷಿಸದೆ ಅಂತಹ ನಿರ್ಣಯವನ್ನು ಅವರು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಕೊಂಡರು. ಗಾಂಧಿಜಿ ನಮ್ಮ ಧುರೀಣರಾಗಿರದೆ, ನಾನು ಸ್ವತಂತ್ರನಿದ್ದರೆ ನಾನೆಂದಿಗೂ ಅಧಿಕಾರವನ್ನು ಬಿಟ್ಟು ಕೊಡುತ್ತಿರಲಿಲ್ಲ. ಏಕೆಂದರೆ ಅಂಥಾ ಕಾಯಿದೆಯನ್ನು ಮಾಡಲು ಬ್ರಿಟಿಷರಿಗೆ ಅಧಿಕಾರವೇ ಇಲ್ಲ. ನನ್ನನ್ನು ತಳ್ಳುವ ವರೆಗೆ ನನ್ನ ಸ್ಥಾನವನ್ನು ಖಾಲಿ ಮಾಡುತ್ತಿರಲಿಲ್ಲ. ಹಾಗೆ ಮಾಡಿದರೆ ಬ್ರಿಟಿಷರು ಭಾರತದಲ್ಲಿ ಏನು ಮಾಡುವರೆಂದೂ, ಅವರ ಅಧಿಕಾರವು ಎಷ್ಟು ಪೊಳ್ಳೆಂದೂ ಜಗತ್ತಿಗೆ ತಿಳಿಯುತ್ತಿತ್ತು. ಆದರೆ ಗಾಂಧಿಜಿ ಪ್ರಕಾಶಂರಲ್ಲ. ಅವರದು ದೇವ ಮಾರ್ಗ, ನನ್ನದು ಮಾನವನದು."

ಹೀಗೆಂದು ಪ್ರಕಾಶಂರವರು ಮದ್ರಾಸಿನಲ್ಲಿ ಒಂದು ಭಾಷಣದಲ್ಲಿ ಹೇಳಿದರು.

ಸರ್ಕಾರ್ ಅಣೆಯವರು ಅಧಿಕಾರ ವಹಿಸಿಕೊಂಡರು

ವೈಸರಾಯ ವಿಸ್ತೃತ ಕೌನ್ಸಿಲಿನ ಅಧಿಕಾರದಲ್ಲಿ ಶಿಕ್ಷಣ ಖಾತೆಯ ಅಧಿಕಾರವನ್ನು ಶ್ರೀ ನಲಿನೀರಂಜನ ಸರ್ಕಾರರು ಸರ್ ಗಿರಿಜಾ ಶಂಕರಬಾಜಪೇಯರಿಂದ ತಾ. ೧೩ ರಂದು ವಹಿಸಿಕೊಂಡರು, ಶ್ರೀ ಎಂ. ಎಸ್. ಅಣೆಯವರು ಸಮುದ್ರದಾಚೆಯ ಅಧಿಕಾರವನು ತಾ. ೧೩ ರಂದು ವಹಿಸಿಕೊಂಡರು.

ಮೋಸ್ಕೋ ಕಡೆಗೆ ಮುನ್ನಡೆ

ನೇರಾಗಿ ಮೋಸ್ಕೋದ ಕಡೆಗೆ ಜರ್ಮನರು ನುಗ್ಗಿ ಬರುತ್ತಿದ್ದಾರೆಂದೂ ಅಲ್ಲಿ ಭೀಕರ ಕಾಳಗ ನಡೆಯುತ್ತಿದೆಯೆಂದೂ ಸುದ್ದಿ.

ನ್ಯೋಟಿಸು

The Canara Banking Corporation Ltd.
Car Street Mangalore

ದಿ ಕೆನರಾ ಬೆಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್
ರಥಬೀದಿ ಮಂಗಳೂರು

ಈ ಕೆಳಗೆ ಹೆಸರು ಕಾಣ್ಸಿದವರು, ಸದ್ರಿ ಬೆಂಕಿನಲ್ಲಿ ನಗದ ಈಡಿನ ಮೇಲೆ ಮೊಬಲಗನ್ನು ಪಡಕೊಂಡ ನಂತರಲ್ಲಿ ಕ್ಲಪ್ತ ವ್ಯಾದೆಗೆ ಅಸ್ಲು, ಬಡ್ಡಿ ಕೊಡದೆ, ಈ ವರೆಗೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು, ಅಸ್ಲು, ಬಡ್ಡಿ, ಬಡ್ಡಿಗೆ ಬಡ್ಡಿ ವಗೈರೆ, ಬರಮಾಡಿಕೊಳ್ಳುವರೇ, ಅವರಿಗೆ ಬಿಟ್ಟ ನೋಟೀಸು ಜ್ಯಾರಿಯಾಗದ ವ್ಯಾಪಸ್ಸಿರುವರೆಂದು, ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಾಗಿಟ್ಟ ನಗಗಳನ್ನು, ಇದೇ 1941ನೇ ಇಸವಿ, ನವಂಬರ ತಾ. 15ನೇ ಶನಿವಾರೆಯೂ ಅನಂತರ ಸಮಗ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸನಲ್ಲಿ ಮಧ್ಯಾಹ್ನ ಗಂಟೆ 2ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

ಸಾಲದ ನಂಬ್ರ	ಹೆಸರು	ಮೊಬಲಗು
J. L. 217/39	A. Anantharama S/o A. Thimmappaya Addoor, Gurpur	Rs. 40-0-0
J. L. 108/40	Channaya Maistry S/o Kantanna Maistry Contractor, Bejai	Rs. 60-0-0

Office of the Corporation Mangalore
ತಾ. 15-10-1941

K. Vittal Bhandary
Agent.

ನೋಟೀಸು

ನಂಬ್ರ 970ನೇ ಕಾಸರಗೋಡು ಕೋಓಪರೇಟಿವ್ ಟೌನ ಬೇಂಕ್ ಲಿಮಿಟೆಡ್‌ನ ಉಪನಿಬಂಧನೆಗಳ ತಿದ್ದುಪಡಿ ವಗೈರೆ ಬಗ್ಗೆ ಮೆಂಬರರ ಒಂದು ಮಹಾಸಭೆಯು ಇದೇ ಅಕ್ಟೋಬರ ತಿಂಗಳ ತಾರೀಕು 20ನೇ ರವಿವಾರ ಅಪರಾಹ್ನ 4 ಘಂಟೆಗೆ ಬೇಂಕಿನ ಕಟ್ಟಡದಲ್ಲಿ ಜರಗಲಿರುವುದೆಂದು ಈ ಮೂಲಕ ಪ್ರಕಟಿಸೋಣಾಗುತ್ತದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ಅಪೇಕ್ಷೆ.

ಕಾಸರಗೋಡು,
9 10 1941 ಕಾರ್ಯದರ್ಶಿ

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P 418/1941
(O S. 412/1938)

ಸಂಕಪ್ಪ ಸೆಟ್ಟಿ — ಅರ್ಜಿದಾರ

ಮತ್ತು

ಮಣ್ಣ ಸೆಟ್ಟಿ ಕೂಡಾ — ಎದ್ರಿರು

4ನೇ ಎದ್ರಿ ಸೇಸು ಸೆಟ್ಟಿ, ರಂಗು ಸೆಟ್ಟಿ ಮಗಳು ಉಡುಪಿ ತಾಲೂಕು ಕುಕ್ಕೆ ಹಳ್ಳಿ ಗ್ರಾಮದ ಬಳಿಯಲ್ಲಿರುವವರು—

ಸದ್ರಿ 4ನೇಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲಿನ ಅಮಲ್‌ಜ್ಯಾರಿಯಲ್ಲಿ ಅರ್ಜಿದಾರನು ಎದ್ರಿರ ಕುಟುಂಬದ ಬಾಬ್ತು ಸ್ಥಿರಾಸ್ಥಿಯನ್ನು ಏಲಂಗೆ ಅಪೇಕ್ಷಿಸಿ ಬರಕೊಂಡ ಯೇಲಂ ಯಿಸ್ತಿಹಾರದ ಶರ್ತಗಳನ್ನು ನಿರ್ಣಯಿಸುವರೆಯೂ, ಮತ್ತು ಏಲಂ ಸಮಯ ಬಿಡ್ ಮಾಡುವರೆಯೂ, ಬಿಡ್ ಮಾಡಿದ ಐವೇಜು ದಿಕ್ರಿ ಐವಜಿನಲ್ಲಿ ಮುಜ್ರೆಮಾಡಿಕೊಡುವ ಕ್ರೆಡಿಟ ಮುಂಜೂರು ಮಾಡುವರೆಯೂ ಪರ್ಮಿಶನ್ ಕೇಳಿ ಕೊಟ್ಟ ಅರ್ಜಿಯು ಕೂಡಾ ತಾ. 5-11-41 ಕ್ಕೆ ಇಟ್ಟಿರುತ್ತದೆ. ಅದ್ರಿಂದ ಈ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿನ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ನಿಮ್ಮ ಆಕ್ಷೇಪಣೆಗಳನ್ನು ಹೇಳಿ ಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರಹಾಜ್ರಿಯಿಂದ ಅದನ್ನು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ
11-10-1941

K. M. Hegde
ಅರ್ಜಿದಾರ ಪರ ವಕೀಲ್

NOTICE

In the Court of the Subordinate Judge of South Kanara

S. E. P No 139/1941.

Between
Messrs Rao & Rao—*Petitioner*
and
K. Mahamad Ali Saheb & others— *Respondents*

To

The 2nd respondent K. Jaffer Saheb son of Abdul Rahiman Saheb, Kudroli, Mangalore. 3rd respondent—K Abdul Rahiman Saheb son of Sheik Allauddin Saheb Kudroli, Mangalore.

Please take notice that the petitioner abovenamed has filed the above petition to direct respondents 2 and 3 to produce the lorry S. K. 1064 before the above Court and that the said petition stands posted to 24-10-1941 and the said respondents are directed to produce the above-said lorry before the Court on 24-10-1941 at 10 a. m.

Mangalore,
15-10-1941

M. A. Talwar,
Vakil for petitioner

ಪಡೋಶಿಗೆ ತೆರಿಗೆ ಇಲ್ಲ

ಸಿಂಧ್ ಸರಕಾರವು ಪ್ರಭಾತ ದ ಪಡೋಶಿ ಚಿತ್ರಕ್ಕೆ ತೆರಿಗೆ ಇಲ್ಲದೆ ಪ್ರದರ್ಶಿಸಲು ಅನುಮತಿ ಕೊಟ್ಟಿರುವುದಾಗಿ ತಿಳಿದಿದೆ. ಹಿಂದೂ ಮುಸ್ಲಿಂ ಐಕ್ಯ ಸಾಧ್ಯನೆಯ ಚಿತ್ರವಿದಾಗಿರುವುದರಿಂದ ಈ ರಿಯಾತಿ ಮಾಡಲಾಗಿಯದೆ.

ಎದೆನೋವು, ಕಫ ಮತ್ತು, ಕೆಮ್ಮನ್ನು ಗುಣಪಡಿಸಿರಿ.

ನೀವು ಕೆಮ್ಮು, ಶೀತ, ಮತ್ತು ಕಫ ಬಾಧೆಯಿಂದ ನರಳುವುದಿದ್ದರೆ 'ಪೆಪ್ಸ'ನ್ನು ಕೂಡಲೇ ತೆಗೆದುಕೊಳ್ಳಿಂ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ, ಒಳ್ಳೆಯ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಡಿಸುತ್ತದೆ; ಅದು ಶ್ವಾಸವನ್ನು ಎಳೆಯುವಾಗ ಶ್ವಾಸಕೋಶಕ್ಕೆ ಹೋಗುವುದು. ಹೀಗೆ ಪೆಪ್ಸ ಶೀತ, ಕಫ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುತ್ತದೆ. ಗಂಟಲನ್ನು ಶುಚಿಗೊಳಿಸುತ್ತದೆ. ಶೀತ, ಎದೆನೋವು, ಕಫ, ಕೆಮ್ಮುಗಳಿಗೆ ಇದು ಖಂಡಿತ ಗುಣಕಾರಿಯಾಗಿದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಬೆಲೆಗೆ ದೊರೆಯುವುದು.

ಏಜಂಟರು—
ಮೆಸರ್ಸ್ ದಾಧಾ ಎಂಡ್ ಕಂಪೆನಿ ಪಿ. ಬಿ. ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಕ ಗುಳಿಗೆಗಳು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶೀಘ್ರವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು:—
ಮೆಸರ್ಸ್ ವೇದಲ್ಪಪಳ್ಳಿ ಬ್ರದರ್ಸ್,
289 ಎಸ್ಪ್ಲನೇಡ—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು—
ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಗಾಂಧಿಜಿಯ ಪುಣ್ಯಾಶ್ರಮದಲ್ಲಿ ಒಂದು ದಿನ

ಮೈಸೂರು ಮಹಾರಾಜರ ಚಿತ್ರ ಮಹಾತ್ಮರ ಸನ್ನಿಧಿಯಲ್ಲಿ!

ಗಾಂಧಿಜಿಯನ್ನು ಬಿಟ್ಟರೆ ಸೇವಾಗ್ರಾಮದಲ್ಲಿ ಏನೇನೂ ಇಲ್ಲ.

ಲೇಖಕರು: ಶಿವನಾಥ

ಗಾಂಧಿಜಿಯ ಕೈಯೊಳಗಿನ ಮಣ್ಣು ಕೂಡಾ ಚಿನ್ನವಾಗುವುದೆಂಬ ಮಾತು ವಿಖ್ಯಾತವಾಗಿದೆ. ಸೇವಾಗ್ರಾಮ ಈ ಕೀರ್ತಿಗೆ ಸಾಕ್ಷಿ. ಶೇಗಾಂವ ಎಂಬುದೊಂದು ಚಿಕ್ಕ ಹಳ್ಳಿ—ಇಂದು ಸೇವಾಗ್ರಾಮ ಎಂಬ ಹೆಸರಿನಿಂದ ಜಗತ್ತಿನ ನಕಾಶದಲ್ಲೊಂದು ಸ್ಥಾನವಡೆಯುವಂತಾಗಿದೆ. ಭಾರತದಲ್ಲಿ ತಪೋಭೂಮಿ ಎನ್ನಿಸಿಕೊಳ್ಳುತ್ತಿರುವ ಸ್ಥಾನಗಳೆಲ್ಲ ಸೃಷ್ಟಿಯ ಸೊಬಗಿನಿಂದ ಕಣ್ಮನಗಳನ್ನು ತಣಿಸುತ್ತಿವೆ ಝುಳ್‌ಝುಳ್ಳೆಂದು ಹರಿಯುವ ತಿಳಿನೀರಿನ ಹಳ್ಳ, ಚಿಗಿತ ಮಾವಿನ ಮರಗಳ ತೋಪು, ಸುಗಂಧಮಯ ಹೂಗಳ ಒಳ್ಳಿಗಳು ಮುಗಿಲನ್ನು ಮುತ್ತಿಡುವ ಶಿಖರದ ನೋಟ ಇತ್ಯಾದಿಇತ್ಯಾದಿ ಇರುತ್ತವೆ. ಆದರೆ ಸೇವಾಗ್ರಾಮ ಅವೆಲ್ಲಕ್ಕೂ ಎರವಾಗಿದೆ. ಸೇವಾಗ್ರಾಮದಲ್ಲಿ ಗಾಂಧಿಜಿಯನ್ನು ಬಿಟ್ಟರೆ, ಏನೇನೂ ಇಲ್ಲ ಹುಡಿ, ಹಂಟೆಗಳ ಭೂಮಿ, ಬೆಲೆಯುಳ್ಳದ್ದೂ ಅಲ್ಲ. ಲಕ್ಷಣವಾದ ಒಂದು ಗಿಡ ಕೂಡಾ ಇಲ್ಲ. ವರ್ಧಾದಿಂದ ಸೇವಾಗ್ರಾಮಕ್ಕೆ ಹೋಗುವಾಗ ಬರುವಾಗ ಕ್ಷಣಹೊತ್ತು ಗಿಡದ ನೆರಳಿಗೆ ನಿಲ್ಲಬೇಕೆಂದರೆ ಒಂದು ಗಿಡ ಸಿಗುವುದಿಲ್ಲ.

✽ ✽ ✽

ವರ್ಧಾದಿಂದ ೫ ಮೈಲುಗಳ ಮೇಲಿರುವ ಈ ಸೇವಾಗ್ರಾಮಕ್ಕೆ ಟೆಲಿಫೋನ್ ತಂತಿಯೊಂದಿರಲಿಲ್ಲವಾದರೆ ಹಳ್ಳಿಯು ಜಗತ್ತಿಗೆ ಹೊಂದಿಕೊಂಡಿರುತ್ತಿರಲಿಲ್ಲ. ಸೇವಾಗ್ರಾಮವನ್ನು ನಾನು ಮುಟ್ಟಿದಾಗ "ಜಗತ್ತಿನಲ್ಲಿ ಇನ್ನಾವ ಸ್ಥಳವೂ ಸಿಕ್ಕಲಿಲ್ಲವೇನೋ ಈ ಮಹಾತ್ಮನಿಗೆ'' ಅಂದುಕೊಂಡೆ ಗಾಂಧಿಜಿ ಈ ಹಳ್ಳಿಯನ್ನಾರಿಸಿಕೊಳ್ಳಲು ಎರಡು ಕಾರಣಗಳಿರಬೇಕು. ಹಿಂದೂಸ್ಥಾನದ ಮಧ್ಯಭಾಗದಲ್ಲಿದೆ ಎಂಬುದೊಂದು. ಹಿಂದೂಸ್ಥಾನದ ಹಳ್ಳಿಗಳಲ್ಲೆಲ್ಲಾ ಈ ಹಳ್ಳಿಯ ಜನರು ಅತಿ ಬಡವರೆಂಬ ಕಾರಣವು ಇನ್ನೊಂದು

ಗಾಂಧಿ ಬಿದಿರು, ಚಾಪೆ, ಕೆಸರಿನಿಂದ ತಯಾರಿಸಿದ ಗುಡಿಸಲಲ್ಲಿರುತ್ತಾರೆ. ಒಳಗೆಲ್ಲ ಹಸುರು ಛಾಯೆ ಕಾಣಿಸುತ್ತದೆ. ಸುತ್ತಲೂ ಬಾಳೆ ಮತ್ತು ಪಪ್ಪಾಯಿಗಿಡಗಳು. ಅಧರಂತೆ ಕಿತ್ತಳೆಯ ಗಿಡಗಳು

ಈ ಭಾಗದಲ್ಲಿ ಕಿತ್ತಳೆ ಗಿಡಗಳು ವಿಶೇಷವೆಂದು ತೋರುತ್ತದೆ ನಾಗಪುರ ನಿಲ್ದಾಣದಲ್ಲಿ ಓರ್ವ ಪ್ರವಾಸಿಯು ಸುಮಾರು ೨೦೦ ಕಿತ್ತಳೆಹಣ್ಣಿನ ಒಂದು ಬುಟ್ಟಿಯನ್ನು ಕೇವಲ ಎಂಟಾಣೆಗೆಕೊಂಡನು

✽ ✽ ✽

ಗಾಂಧಿಜಿಯನ್ನು ಕಾಣಲು ಬಂದ ಜನಗಳು ಸರ್ತಿ ಕಾದುಕೊಂಡು ಗುಡಿಸಲಿನ ಸುತ್ತಲೂ ಹರಿದಾಡುತ್ತಿದ್ದರು. ನಾನು ಪದ್ಧತಿಯಂತೆ ನನ್ನ ಆಗಮನ, ಉದ್ದೇಶ, ಭೇಟಿಯ ಬಗ್ಗೆ ಬರೆದು ತಿಳಿಸಿ ಮಹದೇವ ದೇಸಾಯಿಯವರ ಗುಡಿಸಲಿನ ವರಾಂಡದಲ್ಲಿ ಕಾಯುತ್ತ ಕುಳಿತುಕೊಂಡೆ.

ನಾನು ಕೊಂಚ ಧೈರ್ಯಗುಂದಿದವನಾಗಿದ್ದೆನೆಂಬ ಮಾತನ್ನು ಒಪ್ಪಿಕೊಳ್ಳುತ್ತೇನೆ ಗಾಂಧಿಜಿಯನ್ನು ನಾನು ಅದೆಷ್ಟೋ ಸಲ ಕಂಡಿದ್ದೆನಾದರೂ ರಾಜಕೀಯದಲ್ಲಿನ ಕೆಲವೊಂದು ವಿಚಾರಗಳ ಕುರಿತು ಇದುವರೆಗೂ ಮಾತನಾಡಿರಲಿಲ್ಲ.

ಗಾಂಧಿಜಿಯನ್ನು ಕಾಣುವ ನನ್ನ ಸರ್ತಿ ಬಂದಿತೆಂಬ ಸೂಚನೆಯಾಯಿತು. ಎದ್ದು ಹೊರಟೆ. ಎದೆ ಕೊಂಚ ಜೋರಾಗಿ ಬಡಿದುಕೊಳ್ಳುತ್ತಿತ್ತು ಕಾಲು ತಡವರಿಸುತ್ತಿದ್ದವು. ಅಂತೂ ಧೈರ್ಯದಿಂದ 'ಗಾಂಧಿಜಿಯ ಕಚೇರಿ' ಎಂದು ಕರೆಯುವ ಗುಡಿಸಲಿನ ಭಾಗದಲ್ಲಿ ಕಾಲಿಟ್ಟೆ

ಗಾಂಧಿಜಿ ನೆಲದ ಮೇಲೆ ಪದ್ಧತಿಯಂತೆ ಮೊಳಕಾಲ ಮೇಲೆ ಮೊಳಕಾಲು ಹೇರಿಕೊಂಡು ಕುಳಿತಿದ್ದರು ತನ್ನ ಪತ್ರವ್ಯವಹಾರದ ಕೆಲಸದಲ್ಲಿ ತೊಡಗಿದ್ದರು. ಗಾಂಧಿಜಿಯ ಎದುರಿನಲ್ಲಿ ಮಹದೇವ ದೇಸಾಯಿ ಅವರು 'ಪೆನ್' ಹಾಗೂ ಪತ್ರ ಬರೆಯುವ ಪ್ಯಾಡ್ ಹಿಡಿದುಕೊಂಡು ಕುಳಿತಿದ್ದರು ಅದರಂತೆಯೇ ಅವರ ಎಡಭಾಗದಲ್ಲಿ ಶ್ರೀಮತಿ ಅಮೃತಕೌರ್ ಕುಳಿತುಕೊಂಡಿದ್ದರು.

ಇಷ್ಟರಲ್ಲಿ ನಾನು ಬೆವರೊಡೆದಿದ್ದೆ ಗಾಂಧಿಜಿ ಮೊದಲು ಒಂದೆರಡು ಪ್ರಶ್ನೆಗಳನ್ನು ನನ್ನ ಹಾಗೂ ಮನೆತನದ ಕ್ಷೇಮ ಸಮಾಚಾರದ ಬಗ್ಗೆ ಕೇಳಿ ನನ್ನ ಪ್ರಶ್ನೆಯಾದ ಜಪಾನ್ ಇಂಡಿಯಾ ವ್ಯಾಪಾರಿ ಬಾಂಧವ್ಯದ ವಿಷಯಕ್ಕೆ, ಒಂದು ಆ ಬಗ್ಗೆ ಉತ್ತರ ಹೇಳಿದರು. ಅನಂತರ ಮತ್ತೆ ನಾನು ಗಾಂಧಿಜಿಯನ್ನು ಕೇಳಬೇಕೆಂದು ಮನಸ್ಸಿನಲ್ಲಿ ಮಾಡಿಟ್ಟುಕೊಂಡವುಗಳಲ್ಲಿ ಅರ್ಧಮರ್ಧ ಕೇಳಿದೆ. ಅವೆಲ್ಲವುಗಳಿಗೂ ಸಮರ್ಪಕ ಉತ್ತರಗಳು ದೊರೆತವು ಇದೆಲ್ಲವೂ ಐದು ನಿಮಿಷದಲ್ಲಿ ಮುಗಿಯಿತು. ಗಾಂಧಿಜಿ ನನ್ನ ಕೈಬಿಟ್ಟು ಬೇರೆ ಸಂಗತಿಗಳ ಕಡೆಗೆ ಹೊರಟರು.

✽ ✽ ✽

ಆಯಿತು, ಇನ್ನೇನು ಕೇವಲ ನೋಡುವುದೇ ನನ್ನ ಕೆಲಸ ಸುತ್ತಲೂ ನೋಡಿದೆ ಅಂದಾಜು ೧೦ ಫೂಟು ಉದ್ದ, ೮ ಫೂಟು ಅಗಲವಾದ ಕಛೇರಿ ಇದು ಬಿದಿರು ಚಾಪೆಯ ಗೋಡೆಗಳು. ಅದರ ಮೇಲೆ ಮಣ್ಣಿನ ಮೆತ್ತಿಗೆ. ಒಳಬದಿಯಲ್ಲಿ ಬಣ್ಣ ಬಳಿಯಲಾಗಿದೆ ಅದರ ಮೇಲೆ ಶಾಂತಿನಿಕೇತನ ಪದ್ಧತಿಯ ಚಿತ್ರಗಳು. ಆ ಚಿತ್ರಗಳ ಅಭ್ಯಾಸಮಾಡಿ ವಿವರಿಸುವಷ್ಟು ಸಮಯ ನನಗೆ ಅಲ್ಲಿರಲಿಲ್ಲ.

ಗಾಂಧಿಜಿ ಒಂದು ಕಿಟಕಿಯ ಬಳಿ ಕುಳಿತುಕೊಂಡಿರುತ್ತಾರೆ. ಆದರೊಳಗಿಂದ ಗುಡಿಸಲಿನ ವರಾಂಡ ಕಾಣುತ್ತಿರುತ್ತದೆ. ಗಾಂಧಿಜಿಯ ತಲೆಯ ಮೇಲೆ ಅಂದರೆ ಎದುರಿನಲ್ಲಿ ಗೋಡೆಯ ಮಣ್ಣಿನಲ್ಲಿ ಓಂ ಬರೆಯಲ್ಪಟ್ಟಿದೆ. ನನ್ನ ಎದುರಿನಲ್ಲಿ ಗೋಡೆಯ ಮೇಲೆ ಕ್ಯಾಲೆಂಡರ್ ಒಂದು ಶೋಭಿಸುತ್ತಿದೆ ಆ ಗೋಡೆಯನ್ನು ಪುನಃ ನೋಡಿದೆ. ನನಗೆ ಆಶ್ಚರ್ಯ ಮೈಸೂರಿನ ಆಳುವ ಮಹಾಸ್ವಾಮಿಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರು ಆ ಕ್ಯಾಲೆಂಡರ್‌ನಲ್ಲಿ' ಮಹಾತ್ಮಗಾಂಧಿಜಿಯ ಗುಡಿಸಲಿನಲ್ಲಿ ಜಗತ್ತಿನ ರಾಜಕಾರಣವನ್ನೇ ತುಂಬಿಕೊಂಡಿರುವ ಆ ಕಚೇರಿಯ ಗೋಡೆಯ ಮೇಲೆ ತನ್ನ ಚಿತ್ರ ಇದೆಯೆಂಬುದು ಸ್ವತಃ ಮಹಾರಾಜರಿಗೆ ಗೊತ್ತಿದೆಯೋ ಇಲ್ಲವೋ' ಗಾಂಧಿಜಿಯ ಕಚೇರಿಯಲ್ಲಿರುವ ಭಾವಚಿತ್ರದ ಕ್ಯಾಲೆಂಡರು ಇದೊಂದೇ

ಇಷ್ಟಾಗುವುದರೊಳಗಾಗಿ ನನಗೊಂದು ರಟ್ಟು ಕಣ್ಣಿಗೆ ಬಿದ್ದಿತು ಅದರಲ್ಲಿ 'ಶೀಘ್ರ ಸಂಕ್ಷಿಪ್ತ ಸಾಗು' ಎಂಬ ಅಕ್ಷರಗಳು ಇದು ಇಲ್ಲಿಗೆ ಗಾಂಧಿಜಿಯ ಭೇಟಿಗಾಗಿಬರುವ ಹೊರಗಿನಜನರ ಸಲುವಾಗಿಯೇ ಬರೆದುದು ನಾನು ಗಾಂಧಿಜಿಗೆ ನಮಸ್ಕರಿಸಿ ಹೊರಗೆ ಬಂದೆ

✽ ✽ ✽

ಗಾಂಧಿಜಿ ಗುಡಿಸಲಿನಿಂದ ಮಹಾದೇವ ದೇಸಾಯಿಯವರ ಗುಡಿಸಲಿಗೆ ಬಂದೆ ಅಲ್ಲಿ ಇದ್ದ ನಾಕ್ಸ್‌ಮ ಬ್ಲರ್ ಅವರು ಕೇಂಬ್ರಿಜ್‌ನಲ್ಲಿ ಮಾಡಿದ ಭಾಷಣಗಳ ಸಂಗ್ರಹದ ಪುಸ್ತಕವನ್ನು ತೆಗೆದುಕೊಂಡು ಕುಳಿತೆ.

೫ ಬಾರಿಸಲಿಕ್ಕೆ ೧೫ ನಿಮಿಷಗಳಿದ್ದಾಗ ಮಹದೇವ ದೇಸಾಯಿಗಳು ಬಂದರು ನನ್ನ ಮುಖ್ಯ ಪ್ರಶ್ನೆಯ ಮೇಲೆ ಗಾಂಧಿಜಿಯ ವಿಚಾರ ವಿವರಗಳನ್ನು ಹೇಳಿದರು.

ಅಷ್ಟರಲ್ಲಿ ಶಂಕರಲಾಲಜಿ ಎಂಬವರು ಬಂದು ಊಟಮಾಡಲು ೫ ಗಂಟೆಗೆ ತಮ್ಮೊಂದಿಗೆ ಆಶ್ರಮದಲ್ಲಿ ಬರುವಿರೋ? ಎಂಬುದಾಗಿ ಗಾಂಧಿಜಿ ಕೇಳಬರಲು ಕಳಿಸಿರುವುದಾಗಿ ಹೇಳಿದರು

ಗಾಂಧಿಜಿಯೊಂದಿಗೆ ಕುಳಿತು ಊಟ ಮಾಡುವ ಸಂಧಿಯನ್ನು ಯಾರು ತಾನೆ ಕಳೆದುಕೊಂಡಾರು? ಅದರಂತೆ ಹೇಳಿ ಕಳಿಸಿದ್ದೂ ಆಯಿತು.

✽ ✽ ✽

ಊಟ ಮಾಡುವ ಗುಡಿಸಲು ಬೇರೆ. ೫ ಗಂಟೆಗೆ ಸರಿಯಾಗಿ ಸಂಜೆ ಊಟಕ್ಕಾಗಿ ಎಲ್ಲರೂ ಇಲ್ಲಿ ಕಲೆಯುತ್ತಾರೆ. ವರಾಂಡದಲ್ಲಿ ಕುಳಿತುಕೊಳ್ಳುತ್ತಾರೆ. ಗಾಂಧಿಜಿ ಒಂದು ಕುರ್ಚಿಯಲ್ಲಿ ಎರಡೂ ಸಾಲುಗಳ ಮಧ್ಯೆ ಕುಳಿತುಕೊಳ್ಳುತ್ತಾರೆ.

ನನಗೆ ಅಂದರೆ ಗಾಂಧಿಜಿಯ ಹೊರತು ಉಳಿದವರಿಗೆ ಹಾಕಿದ ಊಟವೆಂದರೆ ಚಪಾತಿ, ಬೇಯಿಸಿದ ಪಲ್ಯೆ, ಹಸೀ ಉಳ್ಳೀ ಕಡ್ಡಿ. ಒಂದು ಬಟ್ಟಲು ಮೊಸರು, ಉಪ್ಪು.

ಗಾಂಧಿಜಿಯ ಊಟ ಉಳಿದವರಿಗಿಂತ ಭಿನ್ನವಾಗಿರುತ್ತದೆ. ಏನೇನು ಎಂಬುದನ್ನು ನೋಡಲು ನನಗೆ ನಾಲ್ಕು ಕಣ್ಣುಗಳಿರಲಿಲ್ಲ ಯಾಕಂದರೆ ಇದ್ದ ನನ್ನ ಎರಡು ಕಣ್ಣುಗಳಿಂದ ತುಂಬ ಗಾಂಧಿಜಿಯ ಮೂರ್ತಿಯೇ ಮೂರ್ತಿ. ಗಾಂಧಿಜಿಯನ್ನು ನೋಡುವುದೇ ನನ್ನ ಊಟದ ಉದ್ದೇಶ ಅಂತೆಯೇ ಊಟದ ಕಡೆಗೆ ನನ್ನ ಲಕ್ಷ್ಯವಿರಲಿಲ್ಲ

ಎಲ್ಲರೂ ಊಟ ಪ್ರಾರಂಭಿಸುವ ಮೊದಲು ಆಶ್ರಮವಾಸಿ ಒಂದು ಶ್ಲೋಕವನ್ನು ಹೇಳಿದ:

'ಆಯುಃ ಸತ್ವ ಬಲಾರೋಗ್ಯ ಸುಖ ಪ್ರೀತಿ ವಿವರ್ಧನಾಃ ॥

ರಸ್ಯಾಃ ಸ್ನಿಗ್ಧಾಸ್ಥಿರಾ ಹೃದ್ಯಾ ಆಹಾರಾಃ ಸಾತ್ವಿಕ ಪ್ರಿಯಾಃ'

['ಯಾವ ಆಹಾರ ಆಯುಷ್ಯವನು ಮೆದುಳಿನ ಶಾಂತತೆಯನ್ನು, ಶಕ್ತಿಯನ್ನು ಆರೋಗ್ಯವನ್ನು, ಆನಂದವನ್ನು, ವಿಚಾರ ಶಕ್ತಿಯನ್ನು ಬೆಳೆಸುತ್ತದೆಯೋ ಮತ್ತು ರಸಮಯವಾಗಿ ಎಣ್ಣೆಮಯವಾಗಿಇದ್ದು ಬಹುದಿನ ಬಾಳುವ ಗುಣವುಳ್ಳದ್ದಿರುತ್ತದೆಯೋ ಅಂದ ಆಹಾರವು ಸಾತ್ವಿಕರಿಗೆ ಪ್ರಿಯವಾದುದ ']

ಊಟಮಾಡುತ್ತ ಶ್ರೀಮತಿ ಅಮೃತಕೌರರೊಂದಿಗೆ ಕೊಂಚ ವಿನೋದ ಮಾಡಿದೆ ಕೆಲವು ಹಣ್ಣುಗಳ ಸೇವನೆಯ ನಂತರ ಊಟ ಮುಗಿಯುತ್ತದೆ. ಊಟದ ನಂತರ ಒಂದೆರಡು ನಿಮಿಷ ದೇಸಾಯಿಗಳೊಡನೆ 'ಮಾತಾಡಿ ವರ್ಧಾ ದಾರಿ ಹಿಡಿದೆ

NOTICE

is hereby given (under the Indian Partnership Act) that the firm composed of (1) Sri Sujir Rayappa Nayak (2) Sri Sujir Narayan Nayak and (3) Sri Vag Venkatesh Shenoy, carrying on business under the name and style of "Sujir Rayappa Nayak & Co" Mangalore, stands dissolved with effect from 31-8-1941.

(Sd) **Sujir Narayan Nayak**

Note—A new firm composed of two partners, namely, Sri Sujir Narayana Nayak, and Sri Vag Venkatesh Shenoy, has been newly constituted to carry on business under the name and style of "Sujir Rayappa Nayak & Co," with effect from 1-9-1941. All constituents are requested to take note of this.

'ಬ್ರಿಟನಿಗೆ ತೊಂದರೆಕೊಡುವುದು ಅಹಿಂಸೆಯಲ್ಲ'

ಸತ್ಯಾಗ್ರಹವಿಂದು ಸೂಕ್ಷ್ಮವಾಗಿರಬೇಕು
ಖಾದಿಗಾಗಿ ಹೆಚ್ಚು ಗಮನ ಕೊಡಿರಿ

ಗಾಂಧಿಜಿ ಹೇಳುತ್ತಾರೆ

ಖಾದಿಯು ಬಡವರಿಗೆ ಕೆಲಸ ಮತ್ತು ಆಹಾರಗಳನ್ನು ಕೊಟ್ಟು ನಿರುದ್ಯೋಗವನ್ನು ಹೋಗಲಾಡಿಸುವುದು. ಹಾಗಾಗಿ ಖಾದಿಗೆ ದ್ವಿಪ್ರತಿ ಸಮಯವನ್ನು ಉಪಯೋಗಿಸಿರಿ, ಒಳ್ಳೆಯ ಪರಿಣಾಮ ಪಡೆಯಿರಿ, ಬರುವ ವರ್ಷ ಉತ್ತಮ ಫಲಿತಾಂಶ ತೋರಿಸಿರಿ.

—ಹೀಗೆಂದು ಗಾಂಧಿಜಿಯು ನಾಗಪುರ ಬೀಹಾರ್, ಮಹಾಕೋಸಲ ಕಾಂಗ್ರೆಸ್ ಕಮಿಟಿಯವರು ಗಾಂಧಿ ಜಯಂತಿ ಸಮಯದಲ್ಲಿ ಅರ್ಪಿಸಿದ ೧೧,೨೦೦ ರೂಪಾಯಿ ಮತ್ತು ಮೂಹತ್ತು ಖಿಲಿಯ ಗಜ ಕೈನೂಲಿನ ಬಟ್ಟೆಗಳನ್ನು ಸಮರ್ಪಿಸಿದಾಗ ಹೇಳಿದರು.

ಗಾಂಧಿಜಿಯವರು ಅವರು ಮಾಡಿದ ಪ್ರಯತ್ನದ ಬಗ್ಗೆ ಸಂತೃಪ್ತಿ ತೋರಿಸಿದರು. ಖಾದಿ ಮತ್ತು ನೂಲುವುದಕ್ಕಾಗಿ ಹೆಚ್ಚು ಸಮಯವನ್ನು ಉಪಯೋಗಿಸಿರಿ. ಪ್ರತಿಯೊಂದು ಮನೆಯಲ್ಲಿಯೂ ಚರಕಾ ತಿರುಗುವುದನ್ನು ನಾನು ನೋಡಬಯಸುತ್ತೇನೆ. ಅದೇ ಸ್ವರಾಜ್ಯವನ್ನು ನಮಗೆ ದೊರಕಿಸಬಲ್ಲದು' ಎಂದರು ಗಾಂಧಿಜಿ.

ತಿರುಗಿಯೂ ಸತ್ಯಾಗ್ರಹ

ಸತ್ಯಾಗ್ರಹದ ವಿಷಯ ಗಾಂಧಿಜಿ ಹೇಳುತ್ತಾ, ಒಮ್ಮೆ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದವರು ಸತ್ಯಾಗ್ರಹವು ಮುಗಿವನಕ ತಿರುಗಿಯೂ ತಿರುಗಿಯೂ ಸತ್ಯಾಗ್ರಹ ಹೂಡಬೇಕೆಂದೂ ಆದರೆ ಶರೀರದಲ್ಲಿ ಅಶಕ್ತರಾದವರು ಮಾತ್ರ ತಿರುಗಿ ಸತ್ಯಾಗ್ರಹ ಮಾಡಬೇಕಾಗಿಲ್ಲವೆಂದೂ ಹೇಳಿದರು.

ಜನತೆಗಾಗಿ ಸ್ವರಾಜ್ಯ

ಗಾಂಧಿಜಿ ಮುಂದುವರಿಸುತ್ತಾ ಹೇಳಿದರು.

"ನಾನು ಸ್ವರಾಜ್ಯವನ್ನು ಬಯಸುವುದೆಂದರೆ ಜನತೆಗೆ ಸ್ವರಾಜ್ಯದಿಂದ ಸುಖವಾಗಬೇಕೆಂದು. ಸ್ವರಾಜ್ಯವೆಂದರೆ ಬಿಳಿಯರ ನಿರಂಕುಶಾಧಿಕಾರದೆದುರು ಭಾರತೀಯರ ನಿರಂಕುಶಾಧಿಕಾರವಲ್ಲ. ನನ್ನ ಸ್ವರಾಜ್ಯದ ಲಕ್ಷಣದ ಪ್ರಕಾರ, ಬಡ ಭಾರತೀಯನೂ ಸಾಕಷ್ಟು ಹಾಲು, ತುಪ್ಪ, ತರಕಾರಿ ಹಣ್ಣುಗಳನ್ನು ಹೊಂದುವಂತೆ ಆಗಬೇಕು. ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷನು ಸಾಕಷ್ಟು ಉಚಿತ ಆಹಾರ ಮತ್ತು ಯೋಗ್ಯ ಮನೆಗಳನ್ನು ಪಡೆಯಬೇಕು.

ಸತ್ಯಾಗ್ರಹದಲ್ಲಿ ತೃಪ್ತಿ

ಇಂದಿನೀ ಸತ್ಯಾಗ್ರಹವು ಸರಕಾರಕ್ಕೆ ಯಾವುದೇ ಪರಿಣಾಮ ಹುಟ್ಟಿಸುವಂತಾಗಲಿಲ್ಲವೆಂಬ ವಿಮರ್ಶೆಯ ಕುರಿತು ಮಾತನಾಡುತ್ತಾ ಗಾಂಧಿಜಿ ಹೇಳಿದರು.

'ನನಗೆ ಇಂದಿನ ಸತ್ಯಾಗ್ರಹದ ಪರಿಸ್ಥಿತಿ ತೃಪ್ತಿಕೊಟ್ಟಿದೆ. ಇಂಥಗೆ ಇದಕ್ಕಿಂತ ಬಲಶಾಲಿಯಾಗಿ ಸತ್ಯಾಗ್ರಹ ಹೂಡಬೇಕೆಂದು ನನಗಿಚ್ಛೆಯಿಲ್ಲ. ಆದರೆ ಇದು ವಿಸ್ತಾರವಾಗಬಾರದೆಂದು ಅರ್ಥವಲ್ಲ; ಅಹಿಂಸಾ ಶಾಸ್ತ್ರದ ನಿಯಮದಂತೆ ಆ ದಾರಿಯಲ್ಲಿ ಸತ್ಯಾಗ್ರಹವು ವಿಸ್ತಾರವಾಗಬಹುದು.

ಬ್ರಿಟನಿಗೆ ಸಂಕಷ್ಟ ಬಂದಾಗ

ಬ್ರಿಟನಿಗೆ ಸಂಕಷ್ಟ ಬಂದ ಈ ಕಾಲದಲ್ಲಿ ತನ್ನ ಪ್ರಯೋಜನವನ್ನು ಪಡೆದುಕೊಳ್ಳಲು ಕಾಂಗ್ರೆಸು ನಮಗೆ ಒಳ್ಳೆಯ ಸಂದರ್ಭವೊದಗಿದೆ— ಎಂದು ಕೆಲವರು ಹೇಳುವುದಿದೆ— ಗಾಂಧಿಜಿ ಈ ಕುರಿತು ಹೀಗೆಂದು ಹೇಳಿದರು.

"ಆದರೆ ಬೊಂಬಯಿಯ ಅಖಿಲ ಭಾರತ ಕಾಂಗ್ರೆಸಿ ಕಮಿಟಿಯ ನಿರ್ಣಯವು ಅಂತಹ ತತ್ವದಿಂದಿಲ್ಲ. ಅಹಿಂಸೆಯ ಪ್ರತಿಜ್ಞಾ ಬದ್ಧರಾದ ನಾವು ಇಂಗ್ಲೆಂಡಿನ ಸಂಕಷ್ಟ ಕಾಲದಲ್ಲಿ ಪ್ರಯೋಜನ ಪಡೆಯುವಂತೆ ಹೇಗೆ ವರ್ತಿಸಬಲ್ಲೆವು? ಕಾಂಗ್ರೆಸು ನಿರ್ಣಯಗಳು ಬಂದು ಸಂಸ್ಥೆಯ ಜವಾಬ್ದಾರೀ ನಿರ್ಣಯಗಳಾಗಿವೆ; ಪ್ರಪಂಚವನ್ನು ಅವು ಮೋಸಗೊಳಿಸಲಾರವು."

ಗಾಂಧಿಜಿ ಖಾದೀ ಚಳವಳದ ವಿಷಯ ಹೀಗೆಂದರು:

"ನಾನು ಮೊದಲಿಂದಲೇ ಯೋಚಿಸುತ್ತಿದೆ. ಜನರಿಗೆ ಅನುಭವ ಹೆಚ್ಚಿದಂತೆ ಖಾದೀ ಪ್ರಚಾರ ಹೆಚ್ಚುವುದೆಂದು, ನಾನು ಬಹಳ ಆಶಾವಾದಿಯಾಗಿದ್ದರೂ, ಈ ವರ್ಷ ದೇಶದಿಂದ ಹಾಗೂ ಸೆರೆಮನೆಗಳಿಂದ ಸಿಕ್ಕಿದ ಪ್ರೋತ್ಸಾಹವು ನನಗೆ ಅಷ್ಟು ಆಶೆ ಹುಟ್ಟಿಸಲಿಲ್ಲ."

ಮಹಾತ್ಮರ ವಿಚಾರಗಳು

ಸ್ಪಷ್ಟೀಕರಣ

ಸೋಲಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ತಾತಾಸಾಹೇಬ ಗುರ್ಜರ ಇವರು ನಾಲ್ಕು ತಿಂಗಳು ಹಿಂದಲ್ಲಿ ಸೆರೆಮನೆಯಲ್ಲಿದ್ದು ಬಿಡುಗಡೆ ಹೊಂದಿದ ತರುವಾಯ ಮಹಾತ್ಮಾ ಗಾಂಧಿಯವರಿಗೆ ಪತ್ರ ಬರೆದು ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಅವುಗಳಿಗೆ ಮಹಾತ್ಮರು ಈ ರೀತಿಯಾಗಿ ಉತ್ತರ ಬರೆದಿದ್ದಾರೆ.

ಪ್ರಶ್ನೆ: ಜರ್ಮನಿಯು ರಶ್ಯದ ಮೇಲೆ ಧಾಳಿಮಾಡಿದಂದಿನಿಂದ ಯುದ್ಧ ಸ್ವರೂಪವು ಅಂಶತಃ ಬದಲಾಗಿರುವುದೆಂದು ನೀವು ಭಾವಿಸುವುದಿಲ್ಲವೋ?

ಉತ್ತರ: ಬಹಳ ವಿಚಾರ ಮಾಡುವಷ್ಟು ಸ್ವರೂಪವು ಬದಲಾಗಿಲ್ಲ.

ಪ್ರಶ್ನೆ: ರಶಿಯದ ಮೇಲಿನ ಧಾಳಿಯು ಪ್ರಜಾಪ್ರಭುತ್ವದ ಮೇಲೆ ಧಾಳಿಯೆಂದು ತಿಳಿದುಕೊಳ್ಳಬಹುದೋ?

ಉತ್ತರ. ನಾನು ಹಾಗೆ ತಿಳಿಯುವುದಿಲ್ಲ.

ಪ್ರಶ್ನೆ: ಶ್ರೀ. ವಿನೋಬಾಭಾವೆ ಮತ್ತು ಪಂಡಿತ ಜವಾಹರಲಾಲ ನೆಹರು ಇವರು ಸೆರೆಮನೆಯೊಳಗಿದ್ದರೆ ಸಾಕು; ನನಗೆ ಸಮಾಧಾನವಿದೆಯೆಂದು ನೀವು ಹೇಳುವಿರೆಂದು ನಾನು ಕೇಳಿದ್ದೇನೆ. ಇದು ದಿಟವಿದ್ದರೆ ಪ್ರಾಂತಾಧ್ಯಕ್ಷರು ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳು ಎಂಟು ದಿವಸಗಳಲ್ಲಿ ಪುನಃ ಹೋಗಬೇಕೆಂದು ಯಾಕೆ ಹೇಳುತ್ತಾರೆ?

ಉತ್ತರ: ನನ್ನಾ ಸಮಾಧಾನವು ಅಸಹಾಯಃ ಮನುಷ್ಯನ ಸಮಾಧಾನವೆಂದೇ ತಿಳಿಯಬೇಕು. ನಾನು ಯಾರಿಗೆ ಹೊರಗಿರಬೇಕೆಂದು ಹೇಳಿರುವೆನೋ ಅವರನ್ನುಳಿದು ಮಿಕ್ಕ ಎಲ್ಲಾ ವೀರ ಮತ್ತು ಪ್ರಾಮಾಣಿಕ ಕಾಂಗ್ರೆಸ್ ವಾದಿಗಳು ಸೆರೆಮನೆಯಲ್ಲಿರುವುದೇ ನನ್ನ ಸಮ್ಮತಿಯ ವಿಷಯ.

ಪ್ರಶ್ನೆ: ಮುಂಬಯಿ ನಿರ್ಣಯಕ್ಕೆ ಅನುಕೂಲ ಮತ ಕೊಟ್ಟವರು ಸತ್ಯಾಗ್ರಹವು ವೈಯುಕ್ತಿಕವಿದ್ದರೂ ಮುಂದೆ ಸಾರ್ವತ್ರಿಕವಾಗುವುದೆಂದು ನಂಬಿದ್ದರು; ಈಗ ಸತ್ಯಾಗ್ರಹಿಗಳ ಪಟ್ಟಿಯನ್ನು ಸಮಗ್ರ ಮಂಜೂರ ಮಾಡದೆ ಹೊಸ ಶರತಗಳನ್ನು ಹಾಕಿದಿರಿ, ಇದರಿಂದ ಸತ್ಯಾಗ್ರಹಿಗಳ ಸಂಖ್ಯೆ ಕುಗ್ಗಿತೆಂದು ಸೆರೆಮನೆಯಲ್ಲಿದ್ದವರಿಗೆ ಅನಿಸುತ್ತದೆ. ತಮಗೆ ಏನು ಅನಿಸುತ್ತದೆ?

ಉತ್ತರ. ನನಗೆ ಹಾಗೆ ಅನಿಸುವದಿಲ್ಲ.

ಪ್ರ. ಸತ್ಯಾಗ್ರಹ ಪ್ರತಿಜ್ಞಾ ಪತ್ರಕ್ಕೆ ಸಹಿಮಾಡಿ ಸೆರೆಮನೆಗೆ ಹೋದವರಲ್ಲಿಯ ಅನೇಕರಿಗೆ ಅಹಿಂಸೆಯಲ್ಲಿಯ ವಿಶ್ವಾಸವು ಹೋಗಹತ್ತಿದೆಯೆಂಬದು ತಮಗೆ ತಿಳಿದಿರುವದೋ? ತಿಳಿದಿದ್ದರೆ ಕಾಂಗ್ರೆಸ್ಸಿನ ಧೋರಣೆಯಲ್ಲಿ ಬದಲಾವಣೆ ಮಾಡಬೇಕೆಂದು ತಮಗೆ ಅನಿಸುವದಿಲ್ಲವೋ?

ಉತ್ತರ ಅಹಿಂಸೆಯಲ್ಲಿ ಯಾರ ಶ್ರದ್ಧೆಯು ಹೊರಟ್ಹೋಗಹತ್ತಿದೆಯೋ ಅವರು ಸೆರೆಮನೆಯಿಂದ ಹೊರಗೆ ಬರಬೇಕು. ಅವರಿಗೆ ಬಹುಮತವಿದ್ದರೆ ನನ್ನನ್ನು ಕಾಂಗ್ರೆಸ್ಸಿನಿಂದ ಹೊರಗೆ ಹಾಕಬೇಕು.

ಪ್ರ: ಅಪ್ರೇಷ್ಟರು ರೋಗಪೀಡಿತರಾಗಿರುವರೆಂದು ಹೇಳಿ ತಮ್ಮ ಬಿಡುಗಡೆಯ ಬಗ್ಗೆ ಅರ್ಜಿ ಮಾಡಿಕೊಳ್ಳುವುದು ಸತ್ಯಾಗ್ರಹ ತತ್ವಜ್ಞಾನಕ್ಕೆ ಸುಸಂಗತವಿರುವದೋ?

ಉ: ಸುಸಂಗತವಿರುವುದಿಲ್ಲ.


ತೆಗೆದುಕೊಳ್ಳಿರಿ
ಎಂದು ನಂಬಿಗೆಯಿಂದ ಹೇಳಬರುವ
ದಮ್ಮಿಗೆ ಒಂದೇಒಂದು ಉಪಾಯ
ದಮ್ಮು ಒಮ್ಮೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟಶಾಸ್ತ್ರೀಯ ಉಪಾಯವು, ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.
ದಮ್ಮು, ತೇಕು, ಕೇಕರಿಗೆ, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. ೨-೨; ರೂ. ೬-೮ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ.—
ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.
ಇಲ್ಲವೇ ಮೆ॥ ವನಮಾಳೀ ಭೀಖಾ ಮತ್ತು ಕಂ., ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1೦ದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ.	6.50 ಸಾಯಂ.
ಕಣ್ಣಾನೂರು ವರೆಗೆ	5.52 ಸಾಯಂ.	9.40 ಪೂರ್ವಾಹ್ನ

ಸಿನೆಮಾ ಸುದ್ದಿ

ಬಹು ಕಾಲದಿಂದ ನಿರೀಕ್ಷಿಸುವ ‘ಬಂಧನ್’ ಚಿತ್ರ ಬಂದಿದೆ.

ಬಾಲಾಜಿ ಟಾಕೀಸಿನಲ್ಲಿ

ಮಂಗಳೂರಿನ ಮಹಾ ಜನರು ಬಹು ಕಾಲದಿಂದ ನಿರೀಕ್ಷಿಸುತ್ತಿದ್ದ, ಬೊಂಬಯಿ ಟಾಕೀಸಿನ ಸುಪ್ರಸಿದ್ಧ ಚಿತ್ರ ‘ಬಂಧನ್’, ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ. ೧೫ ರಿಂದ ಪ್ರದರ್ಶಿಸಲ್ಪಡುತ್ತದೆ. ಕಲ್ಕತ್ತಾ, ಮದ್ರಾಸು, ಬೊಂಬಯಿ ಮೊದಲಾದ ಕಡೆಗಳಲ್ಲಿ, ೨೦, ೩೦, ೪೦ ವಾರಗಳನ್ನು ಮಿಕ್ಕಿ ಪ್ರದರ್ಶಿತವಾದೀ ಚಿತ್ರದ ಉತ್ಕೃಷ್ಟತೆಯನ್ನು ಪ್ರತ್ಯೇಕ ಹೇಳಬೇಕಾದಿಲ್ಲ. ಲೀಲಾ ಚಿಟ್ನಿಸ್ ಅಶೋಕ ಕುಮಾರರ ಉಜ್ವಲನಟನೆ ಸಂಗೀತಗಳು ಹೃದಯ ಹಾರಿಗಳಾಗಿವೆ.

ಬಾಲಾಜಿ ಟಾಕೀಸಿನವರು ತಾ. ೧೫ ರಂದು ಅಪರಾಹ್ನ ೯-೩೦ ಕ್ಕೆ ಸ್ಥಳೀಯ ಪತ್ರಿಕಾ ಸಂಪಾದಕರನ್ನು ಆಮಂತ್ರಿಸಿ ಅವರಿಗಾಗಿ ಪ್ರಾರಂಭ ಪ್ರದರ್ಶನವನ್ನು ಏರ್ಪಡಿಸಿದ್ದರು. ಇಂತಹ ಪ್ರಯತ್ನವು ಪ್ರಶಂಸನೀಯವಿದೆ.

ರಾಜನರ್ತಕಿ ಸಂತಸಖು, ಸಿಕಂದರ್, ಅಂಜನ್

ವಾಡಿಯಾದವರ ಆಂಗ್ಲಭಾಷಾ ಚಿತ್ರ ರಾಜನರ್ತಕಿಯು ಕಳೆದ ವಾರ ಪ್ರದರ್ಶಿತವಾಗಿದೆ. ಸಾಧನಾ ಬೋಸಳ ಉಜ್ವಲ ನರ್ತನಮಯವಾದ ಚಿತ್ರವಿದು.

ಪ್ರಭಾತದವರ ‘ಸಂತ ಸಖು’ ಕಳೆದ ವಾರ ಬೊಂಬಾಯಿನಲ್ಲಿ ಪ್ರದರ್ಶಿತವಾಯಿತು. ಹಂಸಾ ವಾಡ್‌ಕರ್ ಇದರಲ್ಲಿ ಪ್ರಮುಖ ನಟಿಯಾಗಿರುವಳು.

ಮಿನೆರ್ವಾದವರ ಪ್ರಸಿದ್ಧ ಐತಿಹಾಸಿಕ ಚಿತ್ರ ಸಿಕಂದರ್ ಕಳೆದ ವಾರ ಬೊಂಬಾಯಿಯ ಮೂರು ಥಿಯೇಟರುಗಳಲ್ಲಿ ಪ್ರದರ್ಶಿತವಾಗಿದೆ.

ಬೊಂಬೇ ಟಾಕೀಸಿನವರ ‘ಅಂಜನ್’ ಪ್ರದರ್ಶಿತವಾಗಿದೆ. ಇದರಲ್ಲಿ ಕಳೆದ ಎರಡು ವರ್ಷಗಳ ಬಳಿಕ ದೇವಿಕಾರಾಣಿಯ ನಟನೆಯನ್ನು ನಾವು ಕಾಣಬಹುದು ಪತಿ ಹಿಮಾಂಶುರೈ ಗತಿಸಿದ ಬಳಿಕ ಇದೇ ಮೊದಲಾಗಿ ದೇವಿಕಾ ನಟಿಸುವಳು.

ವಸಂತಸೇನಾದಲ್ಲಿ ವನಮಾಲಾ

ಅತ್ರೆ ಪಿಕ್ಚರ್ಸಿನವರ ವಸಂತಸೇನಾ ಎಂಬ ಚಿತ್ರದ ತಯಾರಿಯಾಗುತ್ತಿದೆ. ಸಿಕಂದರ್‌ನಲ್ಲಿ ಅಭಿನಯಿಸಿ ಜಯಶೀಲಳಾದ ವನಮಾಲಾ ಇದರಲ್ಲಿ ನಟಿಸುವಳು.

ಭಕ್ತ ರೋಹಿಲ್‌ದಾಸ್

ನೇಶನಲ್ ಚಿತ್ರ ಕಂಪೆನಿಯವರು ಭಕ್ತ ರೋಹಿಲ್‌ದಾಸ ಚಿತ್ರ ತಯಾರಿಸುವರು. ‘ಧ್ಯಾನೇಶ್ವರ’ದ ಶಾಹು ಮೋಡಕ್ ಮತ್ತು ‘ಸಂತಸಖು’ವಿನ ಹಂಸಾ ವಾಡ್ಕರ್ ಇದರಲ್ಲಿ ನಟಿಸುವರು.

ಭಕ್ತ ವಿದುರ

ವಿಷ್ಣುಪಂತ ಪಗ್ನೀಸರ ನಟನೆಯಿಂದ ಕೂಡಿದ ಭಕ್ತ ವಿದುರ ಚಿತ್ರವನ್ನು ಸಿರ್ಕೋದವರು ತಯಾರಿಸುತ್ತಿದ್ದಾರೆ.

ರೈಮಂಡ್ ಮೇಸ್ಸಿ ಮತ್ತು ಮಿಸ್ ಮಿರ್ಜಾ

ಪಾಶ್ಚಾತ್ಯ ಪೌರ್ವಾತ್ಯ ನಟನಟಿಯರು ಜತೆಯಾಗಿ ಅಭಿನಯಿಸುವಂತಹ ಒಂದು ಸುದ್ದಿ ಬಂದಿದೆ. ಲಂಡನಿನ ಮೆಟ್ರೊಪೊಲಿಟನ್ ಪಿಲ್ಮ್ಸಿನವರು ಭಾರತಕ್ಕೆ ಬಂದು ಇಲ್ಲಿ ಮೈಸೂರಿನ ಮಾಜಿ ದಿವಾನ್ ಆಲ್ಬಿಯೋನ್ ಬೆನರ್ಜಿ ಇವರಿಂದ ಬರೆಯಲ್ಪಟ್ಟ ‘ಸೋಂಗ್ ಓಫ್ ಇಂಡಿಯಾ’ ಎಂಬ ಸಿನೆಮಾ ತಯಾರಿಸುವರೆಂದೂ ಅದರಲ್ಲಿ ರೈಮಾಂಡ್ ಮೇಸ್ಸಿ ಮತ್ತು ಮಿಸ್ ಸಾಹಿಲ್ ಮಿರ್ಜಾ ಬಿ. ಎ; ವಕೀಲ್ ಮಹಮ್ಮದ್ ಮೊದಲಾದವರು ಅಭಿನಯಿಸುವರೆಂದು ಸುದ್ದಿ. ಶೇಕ್ ಇಫ್ತಿಕರ್ ನಿರ್ದೇಶಕ, ನಟ, ಮತ್ತೆ ಲೇಖಕನಾಗಿ ಇದರಲ್ಲಿ ಕೆಲಸಮಾಡುವನಂತೆ.

ನ್ಯೂಥಿಯೇಟರ್ಸಿನಿಂದ ನಬಾಬನು

ಬಿಟ್ಟು ಕಲ್ಕತ್ತದ ಪಾಂಚ್ನಿ ಬ್ರದರ್ಸ್ ಕಂಪನಿಗೆ ಸೇರಿರುವನು

ಗಜಾನನ ಜಾಗೀರ್ದಾರ್

ಗಜಾನನ ಜಾಗೀರ್ದಾರ್ ಬರುವ ವರ್ಷಕ್ಕೆ ಪಿಲ್ಮ್ ಆರ್ಟಿಸ್ಟ್ ಎಸೋಸಿಯೇಶನ್ ಓಫ್ ಇಂಡಿಯಾದ ಅಧ್ಯಕ್ಷರಾಗಿಯೂ, ದುರ್ಗಾ ಖೋಟೆ ಮತ್ತು ಮುಬಾರಕ್ ಮರ್ಚೆಂಟ್ ಇವರು ಅದರ ಉಪಾಧ್ಯಕ್ಷರಾಗಿಯೂ ಚುನಾಯಿತರಾಗಿರುವರು.

ಶಾಂತಆಪ್ಟೆಯ ‘ಸಾವಿತ್ರಿ’ ದುರಂತವು

ತಮಿಳು ಸಾವಿತ್ರಿ ಚಿತ್ರ ತಯಾರಿಯ ಸಮಯದಲ್ಲಿ ನಿರ್ದೇಶ ವೈ. ವಿ ರಾವ್ ಮತ್ತೆ ಶಾಂತಾಆಪ್ಟೆ ಇವರಿಗೆ ಜಗಳವಾಯಿತೆಂದು ಕೆಲಕಾಲ ಹಿಂದೆ ಒಂದು ಸುದ್ದಿ ಹರಡಲಾಗಿತ್ತಷ್ಟೆ? ಇದೆಲ್ಲಾ ತಮಿಳು ಭಾಷೆಯ ಅಜ್ಞಾನದಿಂದ ಪತ್ರಿಕಾ ವ್ಯವಸಾಯದವರು ಮಾಡಿದ ಪ್ರಮಾದವೆಂದು ಈಗ ತಿಳಿದಿದೆ.

ಕಲ್ಕತ್ತದಲ್ಲಿ ಈ ಚಿತ್ರ ತೆಗೆಯಲಾಗಿತ್ತು. ನಿರ್ದೇಶಕ ವೈ ವಿ. ರಾವ್ ಶಾಂತಾ ಆಪ್ಟೆಯೊಡನೆ ಕೆಲವು ವಿಷಯ ಹೇಳಿದನು ಆಗ ಪತ್ರಿಕಾ ಪ್ರತಿನಿಧಿಗಳೂ ಇದ್ದರು ಆ ದಿನದ ಶೂಟಿಂಗ್ ಮುಗಿಸಿ ಮರುದಿನಕ್ಕಿಡುವ ವಿಷಯ ನಿರ್ದೇಶಕನ ಮಾತಾಗಿತ್ತು ಶಾಂತಾ ಆಪ್ಟೆ ಅದಕ್ಕೆ ತಮಿಳಿನಲ್ಲೇ ಉತ್ತರವಿತ್ತಳು. ಈ ಮಾತುಗಳ ಸ್ವರದಿಂದ ಅದು ಬೈದುಕೊಂಡಂತೆ ಕೇಳಿಸಿತು. ಅದು ತಮಿಳು ಭಾಷೆಯ ಉಚ್ಚಾರದಿಂದಾಗಿ ಹಾಗೆ ಕೇಳಿತ್ತಲ್ಲದೆ ಅವರು ಬೈದುಕೊಂಡುದಾಗಿರಲಿಲ್ಲ. ಆದರೆ ತಮಿಳು ಭಾಷೆ ತಿಳಿಯದ ಪತ್ರಿಕೋದ್ಯಮಿಗಳು ಕೂಡಲೆ ಶಾಂತಾಳ ಹೆಸರಲ್ಲಿ ಒಂದು ದೊಡ್ಡ ಕತೆಯನ್ನೇ ಕಟ್ಟಿ ಪ್ರಕಟಿಸಿದರು.



ನಿಮ್ಮ ಮಗುವಿನ ಸ್ಕಿನ್ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮತ್ತು ನೀರಕ್ತವನ್ನು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು ಮಗುವಿನ ಕೋಮಲವಾದ ಸ್ಕಿನ್ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ಸುಖವಾಗಿಯೂ ಇರಿಸುತ್ತದೆ ಸ್ನಾನದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳು ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ ದೊಡ್ಡವರೂ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ ಇದು ಬೆವರನ್ನು ಎಳೆಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

7 o'clock

7 ಒ'ಕ್ಲೋಕ್ ಸ್ಲೋಟೆಡ್ ಬ್ಲೇಡುಗಳು

ಹಳೆಯ ಮೂರು ತೂತಿನ ಬ್ಲೇಡ್‌ಗಳಿಗಿಂತ ಸಿಗಿಯಲ್ಪಟ್ಟ ಬ್ಲೇಡ್‌ಗಳಿಗಿರುವ ಹೆಚ್ಚಿನ ಪ್ರಯೋಜನವೆಂದರೆ, ಹೆಚ್ಚು ಹರಿತ, ಸುಖ ಮತ್ತು ಬಾಳ್ತಾರ ಇವು ಮೂರು. ಈ ಎಲ್ಲಾ ಸಿಗಿಯಲ್ಪಟ್ಟ ಬ್ಲೇಡುಗಳಿಗಿಂತಲೂ 7 ಒ'ಕ್ಲೋಕ್ ಬ್ಲೇಡುಗಳು ಉಚಿತ ದರದಲ್ಲಿ ಈ ಮೂರು ಪ್ರಯೋಜನಗಳನ್ನು ಕೊಡುವುವು

ವಿಚಿತ್ರ ಪ್ರಪಂಚ

೭೮ ವರ್ಷ ಪ್ರಾಯದ ವಿದ್ಯಾರ್ಥಿನಿ

ಮಿಸೆಸ್ ಇಸೆಬಿಲ್ ಹಗೆಟ್ ಎಂಬ ೭೮ ವರ್ಷದ ವಿಧವಾ ವಿದ್ಯಾರ್ಥಿನಿಯು ತನ್ನ ಡಿಪ್ಲೊಮಾವನ್ನು ಈಗ ಪಡಕೊಂಡಿರುವಳು. ಇವಳು ಜಾರ್ಜ್ ವಾಶಿಂಗ್‌ಟನ್ ಯುನಿವರ್ಸಿಟಿಯಲ್ಲಿ ಕಲಿಯುತ್ತಿದ್ದಳು.

ಆಕೆ ಎಂಟು ವರ್ಷಗಳ ಹಿಂದೆ ಕೊಲಂಬಿಯ ಜಿಲ್ಲೆಯಲ್ಲಿ ತಂಗಿದ್ದವಳು ಮಾಡಲು ಏನಾದರೂ ಒಂದು ಉದ್ಯೋಗ ಬೇಕೆಂಬುದಾಗಿ ವಿಚಾರಿಸುತ್ತಿದ್ದು ಕಡೆಗೆ ಕಾಲೇಜಿಗೆ ಹೋಗಿ ಕಲಿಯುವ ನಿರ್ಧಾರ ಮಾಡಿದಳು. ಮೊದಮೊದಲು ಎಳೆ ಪ್ರಾಯದ ಸಹಪಾಠಿಗಳೊಡನೆ ಅವಳಿಗೆ ಕಷ್ಟವಾದರೂ ಕಡೆಗೆ ತರಗತಿಯಲ್ಲಿ ಎಲ್ಲರಂತೆ ಆಕೆಯೂ ಇದ್ದಳು ಯೂರೋಪಿಯನ್ ಹಿಸ್ಟ್ರಿ ಪರೀಕ್ಷೆಯಲ್ಲಿ ಎಂ. ಎ. ಡಿಗ್ರಿಯನ್ನು ಆಕೆ ಕಳೆದ ವಾರ ಪಡೆದಳೆಂದು ತಿಳಿದಿದೆ

❀ ❀ ❀

ಪ್ರೇಮ ಮಾರಣವಾಯಿತು.

ಮೆಕ್ಸಿಕೋದಲ್ಲಿ ಸಾಂತಾನಾ ಎಂಬೊಂದು ಹಳ್ಳಿಯಲ್ಲಿ ಒಂದು ಚೆಲುವೊಗದ ಬಾಲೆಯಲ್ಲಿ ಇಬ್ಬರು ಯುವಕರು ಮೋಹಿತರಾಗಿದ್ದರು, ಒಂದು ದಿನ ಆ ಪ್ರೇಮಿಗಳಾದ ಯುವಕರೊಳಗೆ ಜಗಳ ಹತ್ತಿತು!

ಈ ಜಗಳದಲ್ಲಿ ಅವರವರ ಮನೆಯವರು ಬಂದು ಕೂಡಿದರು, ಮತ್ತೆ ಅವರವರ ನೆಂಟರಿಷ್ಟರೂ ಬಂದರು, ಕೊನೆಗೆ ಇಡೀ ಗ್ರಾಮವೇ ಕೈಕೋವಿ ಕತ್ತಿ ಹಿಡಿದು ಮಾರಾಮಾರಿ ಮುಸಗುವಂತೆ ಆಯಿತು. ಅಷ್ಟರಲ್ಲಿ ಸೈನಿಕರು ಬಂದು ಜಗಳ ಶಾಂತಿ ಮಾಡಿದರು.

ಇಷ್ಟರಲ್ಲಿ 7 ಮಂದಿ ಮಡಿದು ಬಿದ್ದಿದ್ದರಂತೆ! ಅವರಲ್ಲಿ ಇಬ್ಬರು ಆ ಪ್ರೇಮಿಯಾ ಯುವಕರು, ಇಬ್ಬರು ಪ್ರೇಮಿಗಳ ಸಹೋದರರು, ಉಳಿದವರು ಇಬ್ಬರು ಆ ಹುಡುಗಿಯರ ಸಹೋದರರು ಪ್ರೇಮವು ಮಾರಣ ಕತೆಯಾಯಿತು!

❀ ❀ ❀

ಮೌಲ್ವಿ ಹಿಂದುವಾದನು

ಅಸಾಮ್ ಪ್ರಾಂತಿಕ ಮುಸ್ಲಿಂ ಲೀಗ್ ಪ್ರಚಾರಕರಾಗಿದ್ದ ಮೌಲ್ವಿ ಮುಹಮ್ಮದ್ ವಿಲಾಯತ್ ಹೆಸನ್ ಎಂಬವರು ಶಿಲೋಂಗ್ ಸೆಂಟ್ರಲ್ ಆರ್ಯ ಸಮಾಜ ಮಂದಿರದಲ್ಲಿ ಹಿಂದೂ ಧರ್ಮವನ್ನು ಅಂಗೀಕರಿಸಿದರು. ಅವರು ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ನನ್ನ ಹಿರಿಯರು ಟರ್ಕಿಯಿಂದಾಗಲಿ, ಅರೇಬಿಯದಿಂದಾಗಲಿ ಬಂದವರಲ್ಲ; ಅವರು ಶುದ್ಧ ಆರ್ಯ ವಂಶಸ್ಥರು; ನನ್ನ ಮಾತೆ ಭರತ ಮಾತೆ ಭಾರತ ಭೂಮಿಯ ಧರ್ಮವು ಆರ್ಯ ವೈದಿಕ ಧರ್ಮ; ಆದ ಕಾರಣ ನಾನು ತಿರುಗಿ ನನ್ನ ಪೂರ್ವಜರ ವಂಶವನ್ನು ಸೇರಿ ನನ್ನ ಜೀವನವನ್ನು ಮಾನವ ಸಮಾಜದ ಸೇವೆಯಲ್ಲಿ ಕಳೆಯುವೆನು ಎಂದು ಹೇಳಿರುವರು.

ವಿಜ್ಞಾನಯುಗ

ಹಿಟ್ಲರನ ತಲೆನೋವು

ಹಿಟ್ಲರನ ತಲೆನೋವು ಎಂಬ ಹೆಸರಿನ ದೊಡ್ಡ ಯುದ್ಧ ವಿಮಾನವೊಂದನ್ನು ಅಮೇರಿಕವು ರಚಿಸಿದೆ ಇದರ ಪ್ರಥಮ ಪ್ರಯೋಗ ಹಾರಾಟವು ನಡೆಯಿತು.

ಅದರಲ್ಲಿ ೧೯,೦೦೦ ಗಾಲನ್ ಸಾಗಿಸಬಹುದು. ಅದರ ಬಾಂಬುಲೋಡು ೧೮ ಟನ್ನುಗಳು, ಅದರ ಚುಕ್ಕಾಣಿಯು ಸಾಮಾನ್ಯವಾದ ಒಂದು ಮೂರು ಮಾಳಿಗೆಯ ಮನೆಗಿಂತಲೂ ಫೀಟು ಎತ್ತರವಿರುವುದಾಗಿ ತಿಳಿದಿದೆ ೨೮ ಸ್ಟೇಶನುಗಳಿಗೆ ಟೆಲಿಫೋನು ಕೊಡುವ ಅನುಕೂಲಗಳತೆಗಳಿವೆ ಇದನ್ನು ೨೫೦,೦೦೦ ಪವನುಗಳಿಗೆ ಇನ್ಸೂರ್ ಮಾಡಲಾಗಿದೆಯೆಂದೂ ತಿಳಿಯುತ್ತಿದೆ

◆ ◆

ಪ್ರಾಣಿಗಳನ್ನು ಮರಕಟ್ಟಿಸುವುದು

ಶರೀರವನ್ನು ಮರಕಟ್ಟಿಸಿ ಶಾರೀರಿಕ ಶಕ್ತಿಗಳನ್ನು ನಿಲ್ಲಿಸುವ ಪ್ರಯೋಗವು ಇದುವರೆಗೆ ಕೇವಲ ಬೆಕ್ಟೀರಿಯಾ ಈಸ್ಟ್ ಪ್ಲೆಂಟ್ ಮೊದಲಾದವುಗಳ ಮೇಲೆ ಮಾತ್ರ ನಡೆಯುತ್ತಿತ್ತು.

ಅಮೆರಿಕದ ಸ್ಯೆಂಟ್ ಲುಯಿಸ್ ಯುನಿವರ್ಸಿಟಿಯ ಬೇಸಿಲ್ ಲುಯಿಟ್ ಮತ್ತು ಎಂ ಸಿ ಹರ್ಟಿಂಗ್ ಎಂಬವರು ಈಗ ಹುಳಗಳ ಮೇಲೂ ಈ ಪ್ರಯೋಗವನ್ನು ನಡೆಸಿ ಜಯಶಾಲಿಗಳಾಗಿರುವರು. ಹೀಗೆ ಒಮ್ಮೆ ಮರಕಟ್ಟಿಸಿದವುಗಳನ್ನು ಸಾಧಾರಣ ಅರ್ಧ ಗಂಟೆಯ ಮೇಲೆ ಯಥಾಸ್ಥಿತಿಗೆ ತರಲಾಗುವುದು. ಮನುಷ್ಯನ ಮೇಲೆ ಇದುವರೆಗೆ ಈ ಪ್ರಯೋಗವು ಆಗಿಲ್ಲ. ಶರೀರಕ್ಕೆ ಹೆಚ್ಚಿನ ಅಪಾಯಕಾರಿಯಾಗಿದೆಯೆಂಬುದು ಈಗ ತಿಳಿದಿದೆ

◆ ◆

ಹೊಸ ಜಲಾಂತರ್ಗಾಮಿ ನಾವೆಗಳು

೧,೫೭೦ ಟನ್ನುಗಳ ಭಾರದ ಹೊಸತರದ ಜಲಾಂತರ್ಗಾಮಿ ನಾವೆಗಳನ್ನು ಈಗ ಅಮೇರಿಕವು ಸೃಷ್ಟಿಸುತ್ತದೆ. ೧೫,೦೦೦ ಮೈಲುಗಳಷ್ಟು ಧಾವಿಸಬಲ್ಲದಂತೆ

◆ ◆

ಚಾದ ಹೊಗೆಬತ್ತಿ

ಚಾವನ್ನು ಕುಡಿಯುವಂತೆ, ಈಗ ಹೊಗೆಬತ್ತಿ ಮಾಡಿ ಸೇದುವರೆ ಸಿದ್ಧ

ಅವಳೇ ಕೂಡಿಡಲು ಆಕೆಗೆ ನೆರವಾಗಿರಿ!

ಪ್ರತಿಯೊಬ್ಬ ತಾಯಿಯೂ ತನ್ನ ಮಗಳು ಹಣ ಕೂಡಿಡಲು ನೆರವಾಗಬೇಕು; ಇದರಿಂದ ಅವಳ ಮದುವೆಗೂ ಭವಿಷ್ಯತ್ ಹಿತಕ್ಕೂ ಹಣ ಒದಗಿಸಿಟ್ಟಂತಾಗುತ್ತೆ. ಪೋಸ್ಟ್ ಆಫೀಸ್‌ನಲ್ಲಿ ಉಚಿತವಾಗಿ ದೊರೆಯುವ ಸೇವಿಂಗ್ಸ್ ಕಾರ್ಡ್‌ನ ಮೇಲೆ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಂಡು ಅಂಟಿಸುವ ಸುಲಭವಾದ ಮತ್ತು ಮನರಂಜಕವಾದ ವಿಧಾನ ಬೇರೊಂದಿಲ್ಲ. ಮಕ್ಕಳು ಸ್ಟಾಂಪ್‌ಗಳನ್ನು ಶೇಖರಿಸಲು ಇಷ್ಟಪಡುತ್ತಾರೆ ಮತ್ತು ಈ ರೀತಿಯಲ್ಲಿ ರೂ ೧೦|-ನ್ನು ಬಹು ಜಾಗ್ರತೆ ಕೂಡಿಸುವುದು ಆಶ್ಚರ್ಯಕರವಾಗಿದೆ.





ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು ನಿಮ್ಮ ಹತ್ತಿರದ ಪೋಸ್ಟ್ ಆಫೀಸ್‌ನಲ್ಲಿ ಮಾರಲ್ಪಡುತ್ತವೆ. ಅವುಗಳ ಬೆಲೆ ರೂ ೧೦|- ಮತ್ತು ಅವು ವರ್ಷ ವರ್ಷವೂ ೧೦ ವರ್ಷಗಳವರೆಗೆ ಬಡ್ಡಿಯನ್ನು ಗಳಿಸುತ್ತವೆ. ಆಗ ರೂ ೧೫|- ಮೌಲ್ಯವುಳ್ಳದ್ದಾಗುತ್ತವೆ. ಕೂಡಿಟ್ಟ ಹಣ ಮತ್ತು ಅದು ಗಳಿಸಿದ ಲಾಭವನ್ನು ಬೇಕಾದಾಗ ತೆಗೆದುಕೊಳ್ಳಬಹುದು

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್

ಲಾಭಕ್ಕೆ ಮತ್ತು ರಕ್ಷಣೆಗೆ

ಮಾಡತೊಡಗಿದ್ದಾರೆ. ಡೆನ್ಮಾರ್ಕಿನಲ್ಲಿ ಈಗ ಈ ವ್ಯಾಪಾರವು ವಿಶೇಷವಿದೆ; ಹೊಗೆಸೊಪ್ಪಿನ ಬತ್ತಿಗಳಿಗಿಂತಲೂ, ಇದು ಹೆಚ್ಚು ಮಾರಾಟವಾಗುತ್ತದೆ.

ಸ್ವದೇಶಾಭಿಮಾನಿಯಲ್ಲಿ, ನಿಮ್ಮ ಜಾಹೀರಾತುಗಳನ್ನು ಕೊಡಿರಿ.

BHUVANENDRA PRODUCTS LTD.,

Head Office and Factory:
KATAPADI S Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ, ವ-ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಯು ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ಕಂಗ ಷೈ, ಮರ್ಚಂಟ್, ರಥಬೀದಿ.
ಡಾ| ಎಮ್. ಎಸ್. ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್.

THE PIE-MONEY BANK, LTD.

Maidan Road, MANGALORE.

Undertakes all kinds of Banking Business Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

The Bank of Mangalore Limited.

Branches—MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3% to 5%

INTEREST PAYABLE QUARTERLY

Interest on Savings Bank Deposits allowed at 2½%

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price 0-2-6 per Copy

Your next advertisement in the South Kanara Travellers' Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

Regd. No. M. 3460

ಸ್ವದೇಶಾಭಿಮಾನಿ

[ಸಂಪುಟ: 85] ತಾರೀಖು 17—10—1941 [ಸಂಚಿಕೆ 41]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ದಮ್ಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

(ಲ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದಿನ ದಿನಗಳಲ್ಲಿ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

MISSING
24 OCTOBER 1941

Regd. No. M. 3460

ಸ್ವದೇಶಾಭಿಮಾನಿ

[ಸಂಪುಟ: ೫೮] ತಾರೀಖು 17—10—1941 [ಸಂಚಿಕೆ 41]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಛಾಯುಗಳು, ವಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇದು ಪುಲಿಯಾಗಳ್ಳಲಿ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುಗಳು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. [redacted]

MISSING
24 OCTOBER 1941

MISSING

24 OCTOBER 1941

ESTD. 1906

ಸ್ವದೇಶಾಭಿಮಾನಿ

SWADESHABHIMANI



ವೆಸ್ಟ್‌ಮಿನ್‌ಸ್ಟರ್ ಅಬೆ

ಲಂಡನ್ನಿನ ವೆಸ್ಟ್‌ಮಿನ್‌ಸ್ಟರ್ ಅಬೆ [illegible]

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 *Regd. No. M 3460*

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 17-10-1941 [ಸಂಚಿಕೆ 41]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೇಗವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಗಳಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City, and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ವೆಸ್ಟ್‌ಮಿನ್‌ಸ್ಟರ್ ಅಬೆ

ಲಂಡನಿನ ವೆಸ್ಟ್‌ಮಿನಿಸ್ಟರ್ ಅಬೆ ಜರ್ಮನ್ ದಾಳಿಯಿಂದ ಭಗ್ನವಾಗಿದೆ. ಇಲ್ಲಿಯೇ ಚಕ್ರವರ್ತಿಗಳಿಗೆ ಕಿರೀಟ ಧಾರಣೆಯಾಗಿತ್ತು.

KANNADA ILLUSTRATED WEEKLY

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ದೂಷಕಪ್ಪು ಕಲೆ, ಮಚ್ಚೆ ಛಿದ್ರ ಮುಂತಾದುದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು —
ಮೆಸರ್ಸ್ ವೆದಲ್ಪಪಳ್ಳಿ ಬ್ರದರ್ಸ್,
289 ಎಸ್ಪ್ಲಾನಡೆ—ಮದರಾಸು
ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು — ಕೊರನೇಷನ್ ಟ್ರೇಡಿಂಗ್ ಕೊ
ಮಹಮ್ಮದಾಲಿ ರೋಡ್, ಮಂಗಳೂರು

ಶಕ್ತಿ ಮತ್ತು ಆರೋಗ್ಯ

ಬಲ ಸಂವರ್ಧನೆಯ ರಹಸ್ಯ

ಮನುಷ್ಯನ ಜೀವನದಲ್ಲಿ ಶಕ್ತಿ ಆರೋಗ್ಯ ಮತ್ತು ರೋಗವನ್ನು ತಡೆವ ಚೈತನ್ಯಗಳು ಇದ್ದು ಇರಬೇಕಾದುದು ಅವಶ್ಯ. ಅನೇಕ ವರ್ಷಗಳ ಅನುಭವದಿಂದ ಪಂಡಿತ ಡಿ ಗೋಪಾಲಾಚಾರ್ಯರವರ 'ಜೀವಾಮೃತ'ವು ಶಕ್ತಿ ಆರೋಗ್ಯಗಳನ್ನುಂಟುಮಾಡುವ ಸತ್ವಗಳಿಂದ ಕೂಡಿರುವುದೆಂದು ಜಗದ್ವಿಖ್ಯಾತಿ ಪಡೆದಿದೆ. ಇದು ನರಗಳ ಶಕ್ತಿ ಹೆಚ್ಚಿಸುತ್ತದೆ. ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಇದು ಹೆಚ್ಚಿಸುತ್ತದೆ. ಹೀಗಾಗಿ ಇದು ಆರೋಗ್ಯವನ್ನುಂಟು ಮಾಡಿ ಇಡೀ ಶರೀರದಲ್ಲಿ ನವಚೈತನ್ಯವನ್ನು ತುಂಬುತ್ತದೆ. ಜೀವಾಮೃತವು ಅತ್ಯುಚ್ಚ ವನೌಷಧಿಗಳಿಂದ ಅನೇಕ ವರ್ಷಗಳ ಸಂಶೋಧನೆಯ ಬಳಿಕ ತಯಾರಿಸಿದ ಉತ್ತಮ ಔಷಧಿಯಾಗಿದೆ.

ಚೈತನ್ಯ ಶಕ್ತಿ ಮತ್ತು ಆರೋಗ್ಯಗಳಿಗೆ

ಜೀವಾಮೃತ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುವುದು.

ತಯಾರಿಸುವವರು ಆಯುರ್ವೇದಾಶ್ರಮಂ, ಮದರಾಸು.

ಸ್ಟೋಕಿಸ್ಟ್: ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ನೈಸರ್ಗಿಕ ಆಹಾರವನ್ನು ಕೊಟ್ಟಲ್ಲಿ ನಿಮ್ಮ ಮಗುವು ಆರೋಗ್ಯವಾಗಿಯೂ ಬಲಶಾಲಿಯಾಗಿಯೂ ಬೆಳೆಯುವುದು. ಉತ್ತಮ ಪಾನೀಯವಾದ "ಓವಲ್ಟಿನ್"ನ್ನು ದಿನನಿತ್ಯವೂ ಸೇವಿಸುವುದರಿಂದ ಮಗುವಿಗೆ ಧಾರಾಳ ತಾಯಿಯ ಮೊಲೆಹಾಲನ್ನು
— ಕೊಟ್ಟಂತೆ ಆಗುತ್ತದೆ —

ಓವಲ್ಟಿನ್ನು ಸಂಪೂರ್ಣ ಮತ್ತು ಯೋಗ್ಯವಾದ ನೈಸರ್ಗಿಕ ಆಹಾರ. ಇದು ಉತ್ತಮ ಬಾರ್ಲಿಯಿಂದಲೂ ಹೊಸ ಹಾಲಿನಿಂದಲೂ ತಯಾರಾದುದು. ಮಾತ್ರವಲ್ಲದೆ ಇತರ ಅನೇಕ ವಿಟಮಿನುಗಳು ಶರೀರ ಪೋಷಕ ವಸ್ತುಗಳೂ ಇದರಲ್ಲಿ ಇವೆ. ಇದನ್ನು ಕುಡಿಯುವುದರಿಂದ ತಾಯಿಯ ಆರೋಗ್ಯವೂ ಪೂರ್ಣ ಯೋಗ್ಯ ರೀತಿಯಿಂದಿದ್ದು ಉತ್ತಮ ಶಕ್ತಿ ಬಲಗಳನ್ನು ಕೊಡುತ್ತದೆ. ಇದರಂತೆ ಕೃತ್ರಿಮ ರೀತಿಯಲ್ಲಿ ತಯಾರಾದ ಬೇರೆ ಪಾನೀಯಗಳನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

'ಓವಲ್ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುತ್ತದೆ.
ಡಿಸ್ಟ್ರಿಬ್ಯೂಟರ್ಸ್ ಗ್ರಹಮ್ಸ್ ಟ್ರೇಡಿಂಗ್ ಕಂಪೆನಿ, (ಇಂಡಿಯಾ) ಬೊಂಬಾಯಿ, ಕಲ್ಕತ್ತಾ, ಮದ್ರಾಸ್, ಕರಾಚಿ, ರಂಗೂನ್ ಲಿಮಿಟೆಡ್

OV/2/40

ಮೌಲಾನ ಆಜಾದರ ಜೀವನ ಚರಿತ್ರೆ

ದೇಸಾಯಿ ಬರೆದರು

ರಾಷ್ಟ್ರಪತಿ ಮೌಲಾನಾ ಅಬ್ದುಲ್ ಕಲಮ್ ಆಜಾದರ ಜೀವನ ಚರಿತ್ರೆಯನ್ನು ಗಾಂಧಿ ಕಾರ್ಯದರ್ಶಿ ಮಹಾದೇವ ದೇಸಾಯಿಯವರು ಬರೆದಿರುವರು. ಇದು ಇಂಗ್ಲೆಂಡಿನಲ್ಲಿ ಪ್ರಿಂಟಾಗಿ ಪ್ರಕಟವಾಗಿದೆ. ಮೌಲಾನರ ಹಲವು ಜೀವನ ಘಟನೆಗಳು ಬಹಳ ಮನೋರಂಜಕವಾಗಿ ಇದರಲ್ಲಿ ವರ್ಣಿತವಾಗಿವೆ.

ತಕ್ಲಿ ಸ್ಪರ್ಧೆಗೆ ೮೦೦೦ ವಿದ್ಯಾರ್ಥಿಗಳು

ಲಕ್ನೋದಲ್ಲಿ ನೆರವೇರಿಸಿದ ಒಂದು ತಕ್ಲಿ ಸ್ಪರ್ಧೆಯಲ್ಲಿ ಸುಮಾರು ೮೦೦೦ ವಿದ್ಯಾರ್ಥಿಗಳು ಭಾಗವಹಿಸಿದರೆಂದು ತಿಳಿದಿದೆ. ಈ ಉತ್ಸಾಹ ಸ್ತುತ್ಯವಾದುದು.

[illegible]

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

31-10-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩೧—೧೦—೧೯೪೧]

ಸಮರಭೂಮಿಯ ಸಂಚಾರ

"ಸೈನಿಕರೇ! ಕಾಲಾಳುಗಳೇ ಮುನ್ನಡೆಯಿರಿ! ಶತ್ರು ಸೇನೆಯನ್ನು ಮುರಿದಿಕ್ಕಲು ಮುನ್ನುಗ್ಗಿರಿ! ಒಂದೇ ಒಂದು ಹೆಜ್ಜೆಯಾದರೂ ಹಿಂಜರಿಯಬೇಡಿರಿ! ನಮಗೀಗ ಘೋರ ಗಂಡಾಂತರದ ಪ್ರಸಂಗ ಬಂದಿದೆ! ಬಂಧುಗಳೇ ಮುನ್ನುಗ್ಗಿರಿ! ಮಾತೃಭೂಮಿಯನ್ನು ರಕ್ಷಿಸಲು ರಣಭೂಮಿಗೆ ಮುನ್ನಡೆಯಿರಿ!" ಹೀಗೆಂದು ಸಮುದ್ರದ ಅಲೆಗಳಂತೆ ಮೋಸ್ಕೋವನ್ನು ಮುತ್ತುತ್ತಾ ಬರುವ ಜರ್ಮನ್ ಸೈನ್ಯದೆದುರು ಹೋರಾಡಲು, ರಶ್ಯನ್ ಸೇನಾಪತಿ ಜನರಲ್ ಝುಕೋವನು ತನ್ನ ಸೈನಿಕರನ್ನು ಹುರಿದುಂಬಿಸುವಂತಹ ಒಂದು ವೀರಾವೇಶದ ಕರುಣಾಜನಕವಾದ ಹೇಳಿಕೆಯೊಂದನ್ನು ಹೊರಡಿಸಿದ್ದಾನೆ.

ಮೋಸ್ಕೋ ರಣಾಂಗಣ

ಕಳೆದ ಕೆಲವು ದಿನಗಳಿಂದ ಪ್ರಪಂಚವೇ ಬೆರಗುಗೊಳ್ಳುವಂತಹ ಘೋರ ಸಂಗ್ರಾಮವು ಇಲ್ಲಿ ನಡೆಯುತ್ತಿದೆ. ರಾಮ ರಾವಣರ ಯುದ್ಧದ ಭೀಷಣತೆಯನ್ನೂ ಮೀರಿಸುವ ಭಯಾನಕ ಕಾಳಗವಾಗುತ್ತಿದೆ. ಮೊಜಾಯಿಸ್ಕ್ ಮತ್ತು ಮಲಯರೋಸ್ಲಾವೆಟ್ಜ್ ಭಾಗಗಳಲ್ಲಿ ಜರ್ಮನರು ಮೋಸ್ಕೋ ಕಡೆಗೆ ತೀವ್ರವಾಗಿ ಮುಂದಡಿಯಿಟ್ಟು ಮುನ್ನುಗ್ಗುತ್ತಿರುವರೆಂದು ತಿಳಿದು ಬಂದಿದೆ. ಜರ್ಮನರು ಮೋಸ್ಕೋವನ್ನು ಕೈವಶ ಪಡಿಸಿಕೊಳ್ಳುವ ಸಲುವಾಗಿ ಅರ್ಧಚಂದ್ರಾಕೃತಿಯಿಂದ ಸೈನ್ಯವ್ಯೂಹವನ್ನು ರಚಿಸಿ ಆ ಕಡೆ ಭೀಷಣ ರಭಸದಿಂದ ಧಾವಿಸಿ ಹೋಗುತ್ತಿದ್ದಾರೆ.

ಸ್ಟಾಲಿನೋವ್ ಪತನ

ರಶ್ಯನ್ ಸೇನೆಗಳು ಸ್ಟಾಲಿನೋವನ್ನು ಖಾಲಿ ಮಾಡಿದವು. ಜರ್ಮನರು ಈ ವ್ಯೂಹದ ಎಲ್ಲಾ ಭಾಗಗಳಲ್ಲಿ ಬಹಳ ಜೋರಾಗಿ ಕಾದುತ್ತಿರುವರು. ಡೋನಜ್ ತಪ್ಪಲನ್ನು ಆಕ್ರಮಿಸುವ ಕೆಲಸವೂ ನಡೆದಿದೆ. ಮೋಸ್ಕೋದ ಮೇಲೆ ಧಾಳಿಯಾದಾಗ ಕ್ರೆಮ್ಲಿನ್ ಮೇಲೆ ನೇರವಾಗಿ ಬಾಂಬುಗಳು ಬಿದ್ದುವೆಂದು ಜರ್ಮನ್ ಸುದ್ದಿ ಹೇಳುತ್ತದೆ. ಜರ್ಮನರು ಖಾರ್ಕೋವನ್ನು ವಶಪಡಿಸಿಕೊಂಡಿರುವುದಾಗಿ ಹೇಳುತ್ತಾರೆ. ಅತ್ತ ವಾಯುಸ್ಕದಲ್ಲಿ ಕಾಲಿನಿನ ಹತ್ತಿರವೂ ಯುದ್ಧವಾಗುತ್ತಲೇ ಇದೆ. ಈ ಪಟ್ಟಣದ ಅರ್ಧಭಾಗ ಜರ್ಮನರ ಕೈಗೆ ಬಂದಿದೆ.

ರೋಸ್ಟೋವ್ ಸಮೀಪ

ದಕ್ಷಿಣದಲ್ಲಿ ಕ್ರಿಮಿಯಾ ಮತ್ತು ರೋಸ್ಟೋವ್‌ಗಳ ಹತ್ತಿರ ಜರ್ಮನರು ಬಂದಿರುವರೆಂದು ಸುದ್ದಿ. ಜರ್ಮನರು ಈ ಕಡೆ ಬಹಳ ರಭಸದಿಂದ ಮುನ್ನುಗ್ಗುವುದನ್ನು ನೋಡಿದರೆ ಎದೆಯಲ್ಲಿ ನಡುಕವುಂಟಾಗುವಷ್ಟು ಭೀಷಣವಿದೆಯೆಂದು ಹೇಳಲಾಗುತ್ತದೆ. ರೋಸ್ಟೋವ್ ಕಾಕಸಿಸಿಂದ ಮೋಸ್ಕೋಗೆ ಹೋಗುವ ದಾರಿಯಲ್ಲಿದ್ದು ಈ ಹಾದಿಯು ಎಣ್ಣೆಯ ಸಿಧಿಯೆಂದು ಪ್ರಸಿದ್ಧವಾಗಿದೆ. ಇರಾಣಿನಿಂದ ರಶ್ಯಕ್ಕೆ ಸಾಧನಸಾಮಗ್ರಿಗಳನ್ನು ಈ ಮಾರ್ಗದಿಂದಲೇ ಕಳುಹಿಸಬೇಕಾಗಿರುವುದರಿಂದಲೂ ರೋಸ್ಟೋವ್ ಬಹಳ ಮಹತ್ವದ ಕ್ಷೇತ್ರವಾಗಿದೆ. ಅದರ ಸಲುವಾಗಿಯೇ ಹೀಗೆ ಜರ್ಮನರು ಆ ಕಡೆ ರಭಸದಿಂದ ಧಾಳಿಯಿಡುತ್ತಿದ್ದಾರೆ.

ರಶ್ಯ ಜಪಾನು ಘರ್ಷಣೆ

ರಾಸಕೀನೋ ಎಂಬ ಹಳ್ಳಿಯ ಹತ್ತಿರ ರಶ್ಯ ಜಪಾನು ಸೈನ್ಯಗಳಿಗೆ ಹಸ್ತಕ್ರಿಯಾಯಿತೆಂದು ವಾರ್ತೆ ಬಂದಿದೆ. ಕೆಲವು ಜಪಾನು ಸೈನಿಕರು ರಶ್ಯದ ಗಡಿಯನ್ನು ದಾಟಿ ರಶ್ಯನ್ ಕಾವಲುಗಾರರ ಮೇಲೆ ಆಕ್ರಮಣ ಮಾಡಿದರು. ಎರಡು ಕಡೆಗಳವರಿಗೂ ಗಾಯಗಳಾದುವೆಂದೂ ಸುದ್ದಿ. ಜಪಾನ್ ಪಾರ್ಲಿಮೆಂಟಿನ ವಿಶೇಷ ಸಭೆಯೂ ಕರೆಯಲಾಗಿದೆ.

ಕೊನೊಯಿ ಮಂತ್ರಿಮಂಡಳವು ರಾಜಿನಾಮೆಯಿತ್ತು ಟೋಜೋ ಮಂತ್ರಿಮಂಡಳ ರಚಿಸಿದ ಮೇಲೆ ಜಪಾನಿನ ರಾಜಕಾರಣದಲ್ಲಿ ವಿಶೇಷ ಬದಲಾವಣೆಯುಂಟಾಗಲಿದೆಯೆಂದು ಎಲ್ಲೆಡೆಗಳಲ್ಲಿಯೂ ಹೇಳಲಾಗುತ್ತಿದೆ. ಕೊನೊಯಿ ಮಂತ್ರಿಮಂಡಳವು ಅಮೇರಿಕದೊಡನೆ ಸಂಧಾನ ಮಾಡಲು ಮನಸ್ಸು ಮಾಡಿ ಅದರಲ್ಲಿ ವಿಫಲವಾದುದಲ್ಲದೆ ಜಪಾನಿನ ವಿದೇಶ ಧೋರಣೆಯಲ್ಲಿ ಕೃತಾರ್ಥವಾಗಲಿಲ್ಲ. ಟೋಜೋ ಜರ್ಮನ್ ಪಕ್ಷಪಾತಿಯಾಗಿರುವುದಾಗಿ ತಿಳಿದಿದೆ. ಹಾಗೆಂದೇ ಇಂದು ರಶ್ಯದ ಮೇಲೆ ಪ್ರಬಲವಾದ ಧಾಳಿಯಿಟ್ಟು ಪ್ರಚಂಡ ಕಾಳಗ ನಡೆಸುತ್ತಿರುವ ಜರ್ಮನರಿಗೆ ಸಹಾಯವಾಗುವಂತೆ, ಜಪಾನು ಈ ಕಾರ್ಯಕ್ರಮ ಕೈಗೊಂಡಿರುವುದೇ ಎಂದು ಊಹಿಸಲಾಗಿದೆ.

HALFTONE & LINE BLOCK MAKING UNDERTAKEN

Sharada Press
MANGALORE

ಡೋಂಗರೆ ಬಾಲಾಮೃತವು ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ANNOUNCEMENT

The following rates of interest will be paid on Fixed Deposits received on and after First November, 1941.

3, 4 or 5 months	2% p. a.
6, 7 or 8 months	2¼% p. a.
9, 10 or 11 months	2½% p. a.
One year	2¾% p. a.
Two years	3¼% p. a.
Short Notice Deposits	1½% p. a.

CANARA BANK LIMITED.
Estd 1906.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ ತಯಾರಿಸಿದ ಸ್ನೋ

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ— ಮುಖದ ಮೇಲಿನ ಬಾನಕಪ್ಪು ಕಲೆ, ಮುಚ್ಚ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು:—

ಮೆಸರ್ಸ್ ವೆದಲ್ಪಪಳ್ಳಿ ಬ್ರದರ್ಸ್,

289 ಎಸ್ಪ್ಲಾನಡ್—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ. ಮಹಮ್ಮದಾಲಿ ರೋಡ್, ಮಂಗಳೂರು.

ನೈಸರ್ಗಿಕ ಆಹಾರವನ್ನು ಕೊಟ್ಟಲ್ಲಿ ನಿಮ್ಮ ಮಗುವು ಆರೋಗ್ಯವಾಗಿಯೂ ಬಲಶಾಲಿಯಾಗಿಯೂ ಬೆಳೆಯುವುದು. ಉತ್ತಮ ಪಾನೀಯವಾದ "ಓವಲ್ಟಿನ್"ನ್ನು ದಿನನಿತ್ಯವೂ ಸೇವಿಸುವುದರಿಂದ ಮಗುವಿಗೆ ಧಾರಾಳ ತಾಯಿಯ ಮೊಲೆಹಾಲೇ — ಕೊಟ್ಟಂತೆ ಆಗುತ್ತದೆ

ಓವಲ್ಟಿನ್ನು ಸಂಪೂರ್ಣ ಮತ್ತು ಯೋಗ್ಯವಾದ ನೈಸರ್ಗಿಕ ಆಹಾರ. ಇದು ಉತ್ತಮ ಬಾರ್ಲಿಯಿಂದಲೂ ಹೊಸ ಹಾಲಿನಿಂದಲೂ ತಯಾರಾದುದು. ವಾತವಲ್ಲದೆ ಇತರ ಅನೇಕ ವಿಟಮಿನುಗಳು ಶರೀರ ಪೋಷಕ ವಸ್ತುಗಳೂ ಇದರಲ್ಲಿ ಇವೆ. ಇದನ್ನು ಕುಡಿಯುವುದರಿಂದ ತಾಯಿಯ ಆರೋಗ್ಯವೂ ಪೂರ್ಣ ಯೋಗ್ಯ ರೀತಿಯಿಂದಿದ್ದು ಉತ್ತಮ ಶಕ್ತಿ ಬಲಗಳನ್ನು ಕೊಡುತ್ತದೆ. ಇದರಂತೆ ಕೃತ್ರಿಮ ರೀತಿಯಲ್ಲಿ ತಯಾರಾದ ಬೇರೆ ಪಾನೀಯಗಳನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

'ಓವಲ್‌ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುತ್ತದೆ.

ಡಿಸ್ಟ್ರಿಬ್ಯೂಟರ್ಸ್: ಗ್ರೆಹಮ್ಸ್ ಟ್ರೇಡಿಂಗ್ ಕಂಪೆನಿ, (ಇಂಡಿಯಾ) ಬೊಂಬೆ, ಕಲ್ಕತ್ತಾ, ಮದ್ರಾಸ್, ಕರಾಚಿ, ರಂಗೂನ್ ಲಿಮಿಟೆಡ್.

OV

ಶಕ್ತಿ ಮತ್ತು ಆರೋಗ್ಯ

ಬಲ ಸಂವರ್ಧನೆಯ ರಹಸ್ಯ

ಮನುಷ್ಯನ ಜೀವನದಲ್ಲಿ ಶಕ್ತಿ ಆರೋಗ್ಯ ಮತ್ತು ರೋಗವನ್ನು ತಡೆವ ಚೈತನ್ಯಗಳು ಇವು ಇರಬೇಕಾದುದು ಅವಶ್ಯ. ಅನೇಕ ವರ್ಷಗಳ ಅನುಭವದಿಂದ ಪಂಡಿತ ಡಿ. ಗೋಪಾಲಾಚಾರ್ಯರವರ 'ಜೀವಾಮೃತ'ವು ಶಕ್ತಿ ಆರೋಗ್ಯಗಳನ್ನುಂಟುಮಾಡುವ ಸತ್ವಗಳಿಂದ ಕೂಡಿರುವುದೆಂದು ಜಗದ್ವಿಖ್ಯಾತಿ ಪಡೆದಿದೆ. ಇದು ನರಗಳ ಶಕ್ತಿ ಹೆಚ್ಚಿಸುತ್ತದೆ. ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಇದು ಹೆಚ್ಚಿಸುತ್ತದೆ. ಹೀಗಾಗಿ ಇದು ಆರೋಗ್ಯವನ್ನುಂಟು ಮಾಡಿ ಇಡೀ ಶರೀರದಲ್ಲಿ ನವಚೈತನ್ಯವನ್ನು ತುಂಬುತ್ತದೆ. ಜೀವಾಮೃತವು ಉತ್ಕೃಷ್ಟ ವನೌಷಧಿಗಳಿಂದ ಅನೇಕ ವರ್ಷಗಳ ಸಂಶೋಧನೆಯ ಬಳಿಕ ತಯಾರಿಸಿದ ಉತ್ತಮ ಔಷಧಿಯಾಗಿದೆ.

ಚೈತನ್ಯ ಶಕ್ತಿ ಮತ್ತು ಆರೋಗ್ಯಗಳಿಗೆ

ಜೀವಾಮೃತ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುವುದು.

ತಯಾರಿಸುವವರು: ಆಯುರ್ವೇದಾಶ್ರಮಂ, ಮದರಾಸು.

ಸ್ಟೋಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಮೌಲಾನ ಆಜಾದರ ಜೀವನ ಚರಿತ್ರೆ

ದೇಸಾಯಿ ಬರೆದರು

ರಾಷ್ಟ್ರಪತಿ ಮೌಲಾನಾ ಅಬ್ದುಲ್ ಕಲಮ್ ಆಜಾದರ ಜೀವನ ಚರಿತ್ರೆಯನ್ನು ಗಾಂಧಿ ಕಾರ್ಯದರ್ಶಿ ಮಹಾದೇವ ದೇಸಾಯಿಯವರು ಬರೆದಿರುವರು. ಇದು ಇಂಗ್ಲೆಂಡಿನಲ್ಲಿ ಪ್ರಿಂಟಾಗಿ ಪ್ರಕಟವಾಗಿದೆ. ಮೌಲಾನರ ಹಲವು ಜೀವನ ಘಟನೆಗಳು ಬಹಳ ಮನೋರಂಜಕವಾಗಿ ಇದರಲ್ಲಿ ವರ್ಣಿತವಾಗಿವೆ.

ತರ್ಕ ಸ್ಪರ್ಧೆಗೆ ೮೦೦೦ ವಿದ್ಯಾರ್ಥಿಗಳು

ಲಕ್ನೋದಲ್ಲಿ ನೆರವೇರಿಸಿದ ಬಂದು ತರ್ಕ ಸ್ಪರ್ಧೆಯಲ್ಲಿ ಸುಮಾರು ೮೦೦೦ ವಿದ್ಯಾರ್ಥಿಗಳು ಭಾಗವಹಿಸಿದರೆಂದು ತಿಳಿದಿದೆ. ಈ ಉತ್ಸಾಹ ಸ್ತುತ್ಯವಾದುದು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

31.—10—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩೧—೧೦—೧೯೪೧]

ಸಮರಭೂಮಿಯ ಸಂಚಾರ

"ಸೈನಿಕರೆ! ಕಾಲಾಳುಗಳೇ ಮುನ್ನಡೆಯಿರಿ! ಶತ್ರುಸೇನೆಯನ್ನು ಮುರಿದಿಕ್ಕಲು ಮುನ್ನುಗ್ಗಿರಿ! ಒಂದೇ ಒಂದು ಹೆಜ್ಜೆಯಾದರೂ ಹಿಂದಿಡಬೇಡಿರಿ! ನಮಗೀಗ ಘೋರ ಗಂಡಾಂತರದ ಪ್ರಸಂಗ ಬಂದಿದೆ! ಬಂಧುಗಳೇ ಮುನ್ನುಗ್ಗಿರಿ! ಮಾತೃಭೂಮಿಯನ್ನು ರಕ್ಷಿಸಲು ರಣಭೂಮಿಗೆ ಮುನ್ನಡೆಯಿರಿ!" ಹೀಗೆಂದು ಸಮುದ್ರದ ಅಲೆಗಳಂತೆ ಮೋಸ್ಕೋವನ್ನು ಮುತ್ತುತ್ತಾ ಬರುವ ಜರ್ಮನ್ ಸೈನ್ಯದೆದುರು ಹೋರಾಡಲು, ರಶ್ಯನ್ ಸೇನಾಪತಿ ಜನರಲ್ ಝುಕೋವನು ತನ್ನ ಸೈನಿಕರನ್ನು ಹುರಿದುಂಬಿಸುವಂತಹ ಒಂದು ವೀರಾವೇಶದ ಕರುಣಾಜನಕವಾದ ಹೇಳಿಕೆಯೊಂದನ್ನು ಹೊರಡಿಸಿದ್ದಾನೆ.

ಮೋಸ್ಕೋ ರಣಾಂಗಣ

ಕಳೆದ ಕೆಲವು ದಿನಗಳಿಂದ ಪ್ರಪಂಚವೇ ಬೆರಗುಗೊಳ್ಳುವಂತಹ ಘೋರ ಸಂಗ್ರಾಮವು ಇಲ್ಲಿ ನಡೆಯುತ್ತಿದೆ. ರಾಮರಾವಣರ ಯುದ್ಧದ ಭೀಷಣತೆಯನ್ನೂ ವಿಾರಿಸುವ ಭಯಾನಕ ಕಾಳಗವಾಗುತ್ತಿದೆ. ಮೊಜಾಯಿಸ್ಕಾ ಮತ್ತು ಮಾಲೊಯರೋಸ್ಲಾವೇಟ್ಜ್ ಭಾಗಗಳಲ್ಲಿ ಜರ್ಮನರು ಮೋಸ್ಕೋ ಕಡೆಗೆ ತೀವ್ರವಾಗಿ ಮುಂದಡಿಯಿಟ್ಟು ಮುನ್ನುಗ್ಗುತ್ತಿರುವರೆಂದು ತಿಳಿದು ಬಂದಿದೆ. ಜರ್ಮನರು ಮೋಸ್ಕೋವನ್ನು ಕೈವಶ ಪಡಿಸಿಕೊಳ್ಳುವ ಸಲುವಾಗಿ ಅರ್ಧ ಚಂದ್ರಾಕೃತಿಯಿಂದ ಸೈನ್ಯವ್ಯೂಹವನ್ನು ರಚಿಸಿ ಆ ಕಡೆ ಭೀಷಣ ರಭಸದಿಂದ ಧಾವಿಸಿ ಹೋಗುತ್ತಿದ್ದಾರೆ.

ಸ್ಟಾಲಿನೋವ್ ಪತನ

ರಶ್ಯನ್ ಸೇನೆಗಳು ಸ್ಟಾಲಿನೋವನ್ನು ಖಾಲಿ ಮಾಡಿದವು. ಜರ್ಮನರು ಈ ವ್ಯೂಹದ ಎಲ್ಲಾ ಭಾಗಗಳಲ್ಲಿ ಬಹಳ ಜೋರಾಗಿ ಕಾದುತ್ತಿರುವರು. ಡೋನಜ್ ತಪ್ಪಲನ್ನು ಆಕ್ರಮಿಸುವ ಕೆಲಸವು ನಡೆದಿದೆ. ಮೋಸ್ಕೋದ ಮೇಲೆ ಧಾಳಿಯಾದಾಗ ಕ್ರೆಮಲಿನ್ ಮೇಲೆ ನೇರಾಗಿ ಬಾಂಬುಗಳು ಬಿದ್ದುವೆಂದು ಜರ್ಮನ್ ಸುದ್ದಿ ಹೇಳುತ್ತದೆ. ಜರ್ಮನರು ಕಾರ್‌ಕೋವನ್ನು ವಶ ಪಡಿಸಿಕೊಂಡಿರುವುದಾಗಿ ಹೇಳುತ್ತಾರೆ. ಅತ್ತ ವಾಯುವ್ಯದಲ್ಲಿ ಕಾಲಿನಿನ ಹತ್ತಿರವೂ ಯುದ್ಧವಾಗುತ್ತಲೇ ಇದೆ. ಈ ಪಟ್ಟಣದ ಅರ್ಧಭಾಗ ಜರ್ಮನರ ಕೈಗೆ ಬಂದಿದೆ.

ರೋಸ್ಟೋವ್ ಸಮಿಾಪ

ದಕ್ಷಿಣದಲ್ಲಿ ಕ್ರಿಮಿಯಾ ಮತ್ತು ರೋಸ್ಟೋವ್‌ಗಳ ಹತ್ತಿರ ಜರ್ಮನರು ಬಂದಿರುವರೆಂದು ಸುದ್ದಿ. ಜರ್ಮನರು ಈ ಕಡೆ ಬಹಳ ರಭಸದಿಂದ ಮುನ್ನುಗ್ಗುವುದನ್ನು ನೋಡಿದರೆ ಎದೆಯಲ್ಲಿ ನಡುಕವುಂಟಾಗುವಷ್ಟು ಭೀಷಣವಿದೆಯೆಂದು ಹೇಳಲಾಗುತ್ತದೆ. ರೋಸ್ಟೋವ್ ಕಾಕಸಸಿನಿಂದ ಮೋಸ್ಕೋಗೆ ಹೋಗುವ ದಾರಿಯಲ್ಲಿದ್ದು ಈ ಹಾದಿಯು ಎಣ್ಣೆಯ ನಿಧಿಯೆಂದು ಪ್ರಸಿದ್ಧವಾಗಿದೆ. ಇರಾಣಿನಿಂದ ರಶ್ಯಕ್ಕೆ ಸಾಧನಸಾಮಗ್ರಿಗಳನ್ನು ಈ ಮಾರ್ಗದಿಂದಲೇ ಕಳುಹಿಸಬೇಕಾಗಿರುವುದರಿಂದಲೂ ರೋಸ್ಟೋವ್ ಬಹಳ ಮಹತ್ವದ ಕ್ಷೇತ್ರವಾಗಿದೆ. ಆದರ ಸಲುವಾಗಿಯೇ ಹೀಗೆ ಜರ್ಮನರು ಆ ಕಡೆ ರಭಸದಿಂದ ಧಾಳಿಯಿಡುತ್ತಿದ್ದಾರೆ.

ರಶ್ಯ ಜಪಾನು ಘರ್ಷಣೆ

ರಾಸಕೀನೋ ಎಂಬ ಹಳ್ಳಿಯ ಹತ್ತಿರ ರಶ್ಯ ಜಪಾನು ಸೈನ್ಯಗಳಿಗೆ ಹೊಯ್‌ಕೈಯಾಯಿತೆಂದು ವಾರ್ತೆ ಬಂದಿದೆ. ಕೆಲವು ಜಪಾನು ಸೈನಿಕರು ರಶ್ಯದ ಗಡಿಯನ್ನು ದಾಟಿ ರಶ್ಯನ್ ಕಾವಲುಗಾರರ ಮೇಲೆ ಆಕ್ರಮಣ ಮಾಡಿದರು. ಎರಡು ಕಡೆಗಳವರಿಗೂ ಗಾಯಗಳಾದುವೆಂದೂ ಸುದ್ದಿ. ಜಪಾನ್ ಪಾರ್ಲಿಮೆಂಟಿನ ವಿಶೇಷ ಸಭೆಯೂ ಕರೆಯಲಾಗಿದೆ.

ಕೊನೊಯಿ ಮಂತ್ರಿಮಂಡಳವು ರಾಜಿನಾಮೆಯಿತ್ತು ಟೋಝೋ ಮಂತ್ರಿಮಂಡಳ ರಚಿಸಿದ ಮೇಲೆ ಜಪಾನಿನ ರಾಜಕಾರಣದಲ್ಲಿ ವಿಶೇಷ ಬದಲಾವಣೆಯುಂಟಾಗಲಿದೆಯೆಂದು ಎಲ್ಲೆಡೆಗಳಲ್ಲಿಯೂ ಹೇಳಲಾಗುತ್ತಿದೆ. ಕೊನೊಯಿ ಮಂತ್ರಿಮಂಡಳವು ಅಮೇರಿಕದೊಡನೆ ಸಂಧಾನ ಮಾಡಲು ಮನಸ್ಸು ಮಾಡಿ ಅದರಲ್ಲಿ ವಿಫಲವಾದುದಲ್ಲದೆ ಜಪಾನಿನ ವಿದೇಶಿ ಧೋರಣೆಯಲ್ಲಿ ಕೃತಾರ್ಥವಾಗಲಿಲ್ಲ. ಟೋಝೋ ಜರ್ಮನ್ ಪಕ್ಷಪಾತಿಯಿರುವುದಾಗಿ ತಿಳಿದಿದೆ. ಹಾಗೆಂದೇ ಇಂದು ರಶ್ಯದ ಮೇಲೆ ಪ್ರಬಲವಾದ ಧಾಳಿಯಿಟ್ಟು, ಪ್ರಚಂಡ ಕಾಳಗ ನಡೆಸುತ್ತಿರುವ ಜರ್ಮನರಿಗೆ ಸಹಾಯವಾಗುವಂತೆ ಜಪಾನು ಈ ಕಾರ್ಯಕ್ರಮ ಕೈಗೊಂಡಿರುವುದೇ ಎಂದು ಊಹಿಸಲಾಗಿದೆ

HALFTONE & L
BLOCK MAKING
UNDERTAKEN

Sharada Press,
MANGALORE

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ANNOUNCEMENT

The following rates of interest will be paid on Fixed Deposits received on and after First November, 1941.

3, 4 or 5 months	2% p. a
6, 7 or 8 months	2¼% p. a.
9, 10 or 11 months	2½% p. a.
One year	2¾% p. a.
Two years	3¼% p. a.
Short Notice Deposits	1½% p. a.

CANARA BANK LIMITED.
Estd: 1906.

ಸ್ವದೇಶಾಭಿಮಾನಿ

ತಾರೀಕು 31—10—1941

ಮೋಸ್ಕೋ ಮುತ್ತಿಗೆ

ರಶ್ಯದ ರಾಜಧಾನಿಯಾದ ಮೋಸ್ಕೋವನ್ನು ಜರ್ಮನರು ಕಳೆದ ಕೆಲವು ವಾರಗಳಿಂದ ಮುತ್ತಿಗೆ ಹಾಕಿ ಸ್ವಾಧೀನಪಡಿಸಲು ಮಾಡುವ ಸಾಹಸವು ವರ್ಣನಾತೀತವಾದುದು. ದ್ವಿತೀಯ ಮಹಾಯುದ್ಧದಲ್ಲಿ ಮೋಸ್ಕೋ ಮುತ್ತಿಗೆಯಷ್ಟು ಭೀಷಣ ಸಂಗ್ರಾಮವು ಬೇರೆ ನಡೆದಿಲ್ಲವೆಂಬಷ್ಟು ಭೀಕರವಾಗಿ ಇದು ನಡೆದಿದೆ. ರಶ್ಯವು, ಇತರ ಜನಾಂಗಗಳ ಹೆಚ್ಚಿನ ಸಹಾಯವಿಲ್ಲದಿದ್ದರೂ, ಯಂತ್ರಸಾಮಗ್ರಿಗಳಲ್ಲಿ, ಕುಟಿಲ ಯುದ್ಧನೀತಿಯಲ್ಲಿ ನಿಷ್ಣಾತವಾದ ಜರ್ಮನ್ ಸೈನ್ಯವೆದುರು ಇದುವರೆಗೆ ಮಾಡಿದ ಹೋರಾಟವು ಪ್ರಪಂಚವನ್ನೇ ಬೆರಗುಗೊಳಿಸಿದೆ. ಜರ್ಮನರಾದರೂ ರಶ್ಯದ ರಾಜಧಾನಿಯ ಮುತ್ತಿಗೆಯ ಈ ಕಾಳಗದಲಿ ಪಟ್ಟಷ್ಟು ನಷ್ಟ ಕಷ್ಟಗಳನ್ನು ಬೇರೆ ಕಡೆಗಳಲ್ಲಿ ಹೊಂದಿಲ್ಲವೆಂಬುದಾಗಿ ಹೇಳಬಹುದು. ರಕ್ತದ ಹೊಳೆಯನ್ನೇ ಹರಿಸಿ ಜರ್ಮನರು ರಶ್ಯದ ನೆಲವನ್ನು ನುಂಗಲು ಈಗ ಮುಂದೊತ್ತಿ ಹೋಗುತ್ತಿದ್ದಾರೆ!

ಹಿಟ್ಲರನು ಮೋಸ್ಕೋವನ್ನು ಕೈವಶಪಡಿಸಿಕೊಳ್ಳುವ ಸಲುವಾಗಿ ಅಕ್ಟೋಬರ್ ಐದರಂದು ಹೊಸ ಧಾಳಿಯನ್ನು ಆರಂಭಿಸಿ ಇದುವರೆಗೆ ಎಡೆಬಿಡದೆ ಮುಂದುವರಿಸುತ್ತಿದ್ದಾನೆ. ಮೋಸ್ಕೋವನ್ನು ಸ್ವಾಧೀನ ಮಾಡುವ ಪ್ರಯತ್ನದಲ್ಲಿ ಜರ್ಮನರು ಪೂರ್ಣ ಯಶಸ್ವಿಗಳಾಗಿಲ್ಲವೆಂದರೂ, ಆ ದಾರಿಯಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸು ದೊರಕಿದೆಯೆಂಬುದಕ್ಕೆ ಸಂಶಯವಿಲ್ಲ. ಸ್ಟಾಲಿನ್‌ಸ್ಕಿಯಿಂದ ಅರ್ಧಚಂದ್ರಾಕೃತಿಯಲ್ಲಿ ಹೊರಟ ಜರ್ಮನ್ ಸೇನೆಯು ವ್ಯಾಜ್ಮಾ ಮತ್ತು ಬ್ರಿಯಾನ್‌ಸ್ಕ್‌ಗಳಲ್ಲಿ ರಶ್ಯನರನ್ನು ಸೋಲಿಸಿ ಮೋಸ್ಕೋ ನಗರದ ಸಮ್ಮುಖಕ್ಕೆ ಬಂದು ನಿಂತಿವೆ. ಲೆನಿನ್‌ಗ್ರಾಡಿನ ಕಡೆಯಲ್ಲಿಯೂ ಕೆಲವು ಜರ್ಮನ್ ಪದಾತಿದಳಗಳು ವಾಯುವ್ಯ ದಿಕ್ಕಿನಿಂದ ಮೋಸ್ಕೋವನ್ನು ಪ್ರವೇಶಿಸಲು ಪ್ರಯತ್ನಿಸುತ್ತವೆ. ಮೊಜೈಸ್ಕ್ ಎಂಬಲ್ಲಿ ಜರ್ಮನರು ರಶ್ಯನ್ ಸೈನ್ಯವನ್ನು ಮುರಿದು ಮುಂದುವರಿದರೆಂದು ಸುದ್ದಿಯಿದೆ. ಈಗಾಗಲೇ ಮೋಸ್ಕೋ ನಗರದ ೩೦ ಮೈಲುಗಳಷ್ಟು ಸಮೀಪ ಜರ್ಮನ್ ಸೈನ್ಯ ಬಂದಿದೆಯೆಂದು ವಾರ್ತೆಯಿದೆ. ಇಷ್ಟು ಭೀಕರವಾಗಿ ಜರ್ಮನರು ಮುಂದೊತ್ತುತ್ತಿರುವುದನ್ನು ನೋಡಿದರೆ ಬೇಗನೆ ಮೋಸ್ಕೋದ ಕತೆ ಮುಗಿಯುವುದೇ ಎಂಬ ಸಂದೇಹ ಹಲವರಿಗೆ ಹುಟ್ಟುತ್ತಿದೆ.

ಮೋಸ್ಕೋ ಯುದ್ಧವು ಮುಗಿದರೆ ರಶ್ಯದ ಸಂಗತಿ ಇತ್ಯರ್ಥವಾದಂತೆಯೇ ಸರಿ. ಮೋಸ್ಕೋ ಜರ್ಮನ್ ಕೈವಶವಾಗಬೇಕಾದರೆ ಅಪರಿಮಿತ ಸಾಹಸಬೇಕು; ಅದರಲ್ಲಿ ಇಕ್ಕಡೆಯ ಅಸಂಖ್ಯ ಬಲಗಳೂ ನಶಿಸುವವು. ಅಷ್ಟಾಗಿಯೂ ಮೋಸ್ಕೋ ರಶ್ಯನರ ಕೈಬಿಟ್ಟರೆ ಮುಂದೆ ಜರ್ಮನರೊಡನೆ ಕಾದಾಡುವುದು ನಿಲ್ಲಲಾರದಾದರೂ ಇಂದಿನ ಆವೇಶ ಮತ್ತೆ ಉಳಿಯಲಾರದು. ಇಂತಹ ಸಂದರ್ಭದಲ್ಲಿಯೇ ಜರ್ಮನ್ ರಾಕ್ಷಸ ಸೈನ್ಯದೊಡನೆ ಹೋರಾಡುವ ರಶ್ಯಕ್ಕೆ ಬ್ರಿಟನು ಅಮೆರಿಕಗಳು ಬಹಳ ಪರಿಣಾಮಕಾರಿಯಾದ ಸಹಾಯವನ್ನು ಕೊಡುವುದು ಅವಶ್ಯವಿದೆ. ರಶ್ಯವು ಇಂದು ಕಂಗಾಲಾಗಿರುವಾಗ ಬ್ರಿಟನು ಅಮೆರಿಕಗಳ ಬೆಂಬಲ ಸಿಕ್ಕಿದರೆ ಜರ್ಮನರ ಧಾಳಿಯನ್ನು ತಡೆಗಟ್ಟುವಲ್ಲಿ ಅವರಿಗೆ ಹೆಚ್ಚಿನ ಸಹಾಯವಾಗುವುದು. ಬಣ ಸಹಾನುಭೂತಿಯ ಮಾತುಗಳಿಂದ ಏನೂ ಪ್ರಯೋಜನವಿಲ್ಲ. ಸಂಪೂರ್ಣ ಸಹಾಯ ಈಗಲೇ ಕಳುಹಿಸಿಕೊಡುವುದು ಜಾಣತನವಿರುವುದು. ಇಂದಿನ ರಶ್ಯ ಜರ್ಮನ್ ಯುದ್ಧದಲ್ಲಿ ರಶ್ಯವು ಸೋಲಬಾರದೆಂದು ಬ್ರಿಟನು ಅಮೆರಿಕಗಳು ಅಪೇಕ್ಷಿಸುವುದು ಸಹಜವಾದರೆ ರಶ್ಯಕ್ಕೆ ಸಂಪೂರ್ಣ ಸಹಾಯ ಕೊಡಲು ಇಂದಿಗಿಂತ ಉಚಿತ ಸಂದರ್ಭವು ಬೇರಿಲ್ಲ. ಹೀಗೆ ಈಗ ಸಹಾಯವೀಯುವುದರಿಂದಲೇ ಜಗತ್ತನ್ನು ಆಕ್ರಮಿಸಿ ಬರುತ್ತಿರುವ ಹಿಟ್ಲರ್ ಶಾಹಿಯನ್ನು ಮುರಿದಿಕ್ಕಲು ಸಹಜವಾಗಿ ಯತ್ನಿಸಿದಂತೆ ಆಗುತ್ತದೆ.

ಜಪಾನ್ ಧೋರಣೆ

ಜಪಾನಿನಲ್ಲಿ ಕೊನೋಯಿ ಮಂತ್ರಿಮಂಡಳವು ಉರುಳಿ ಟೋಜೋ ಮಂತ್ರಿಮಂಡಳವು ಸ್ಥಾಪಿತವಾದ ಬಳಿಕ, ಜಪಾನಿನ ರಾಜಕೀಯ ಧೋರಣೆಯಲ್ಲಿ ಹೆಚ್ಚಿನ ಬದಲಾವಣೆಯುಂಟಾಗಿದೆಯೆಂದು ಎಲ್ಲೆಡೆಗಳಲ್ಲಿಯೂ ಹೇಳತೊಡಗಿರುವರು. ಜಪಾನು, ಜರ್ಮನಿಯ ಸಹಾನುಭೂತಿಯುಳ್ಳದ್ದಾಗಿ ಜರ್ಮನಿಗೆ ಈಗ ಸಹಾಯ ಮಾಡಲು ಮುಂದೆ ಬರುವುದರೊಡನೆ, ಏಶ್ಯದಲ್ಲಿ ಸಾಮ್ರಾಜ್ಯ ಕಟ್ಟುವ ತನ್ನ ಮಹತ್ವಾಕಾಂಕ್ಷೆಯನ್ನೂ ಈಡೇರಿಸಲು ಹೊರಡುವುದೇ ಎಂದು ಹಲವರ ಅಭಿಪ್ರಾಯವಿದೆ. ಜಪಾನಿನಲ್ಲಿ ಈಗ ನಡೆಯುತ್ತಿರುವ ಸೈನ್ಯ ಸಂಗ್ರಹ ಮೊದಲಾದುವನ್ನು ನೋಡಿದರೆ ಮಹತ್ವವಾದ ಒಂದು ಯೋಜನೆಯನ್ನು ಜಪಾನು ಬೇಗನೇ ಕೈಗೊಳ್ಳಲಿದೆಯೆಂಬುದು ಸ್ಪಷ್ಟವಾಗುತ್ತದೆ.

ಜರ್ಮನಿಯು ರಶ್ಯವನ್ನು ಮುತ್ತಿದ ಕೂಡಲೇ ಜಪಾನು ಪೆಸಿಫಿಕಿನಲಿ ಅಡಿಯಿಡುವುದೆಂದು ಊಹಿಸಲಾಗಿತ್ತು. ಆದರೆ ಜಪಾನಿನ ಹಲವು ರಾಜತಂತ್ರಜ್ಞರು ರಶ್ಯಾ ಜರ್ಮನ್ ಯುದ್ಧದ ಪರಿಣಾಮವನ್ನು ನಿರೀಕ್ಷಿಸಿ ಮುಂದಡಿಯಿಡುವುದು ಉಚಿತವೆಂದು ಸೂಚಿಸಿದಂತೆ ಇದುವರೆಗೆ ಯಾವುದೇ ಕಾರ್ಯಕ್ರಮವನ್ನೂ ಮುಂದೊತ್ತದೆ ಜಪಾನು ತಟಸ್ಥವಿತ್ತು. ಆದರೆ ಈಗ ರಶ್ಯದ ಯುದ್ಧವು ಸಾಧಾರಣ ಕೊನೆಗಾಣುವಂತೆ ಕಂಡುಬರುತ್ತಿರಲು ಜಪಾನು ಎದ್ದು ನಿಲ್ಲಲು ತವಣಿಕೆ ಮಾಡುತ್ತದೆ. ಈಗಿನ ಮುಖ್ಯ ಮಂತ್ರಿ ಟೋಜೋ ಜರ್ಮನ್ ಪಕ್ಷಪಾತಿಯೆಂದು ತಿಳಿದುಬಂದಿದೆ! ಜರ್ಮನಿಯಲ್ಲಿ ಕೆಲವು ಕಾಲ ಟೋಜೋ ಜಪಾನ್ ರಾಯಭಾರಿಯಾಗಿದ್ದನೆಂದೂ, ಆತನ ಮಿಲಿಟರಿ ಶಿಕ್ಷಣವು ಜರ್ಮನಿಯಲ್ಲಿಯೇ ಆಗಿತ್ತೆಂದೂ ಹಾಗಾಗಿ ಜಪಾನು ಬೇಗನೇ ಜರ್ಮನ್ ಹಿತಾಸಕ್ತಿಯ ಕಾರ್ಯ ಕೈಕೊಳ್ಳದೆ ಬಿಡುವುದಿಲ್ಲವೆಂದೂ ಹೇಳಬಹುದು. ಆದರೆ ಟೋಜೋ ಮಂತ್ರಿಮಂಡಳವು ಯಾವ ರೀತಿಯಿಂದ ಯಾವ ದಾರಿಯಲ್ಲಿ ಮುಂದುವರಿಯುವುದೆಂಬ ವಿಚಾರವಾಗಿ ಸ್ಪಷ್ಟ ಹೇಳಿಕೆ ಕೊಟ್ಟಿಲ್ಲ. ಅಮೆರಿಕದಿಂದ ರಶ್ಯಕ್ಕೆ ಸಹಾಯ ಸಿಗದಂತೆ ತಡೆಯಲು ಪ್ರಯತ್ನಿಸಬಹುದೇ? ಅಥವಾ ಸಯ್ಯಾಂ ಡಚ್ ಇಂಡೀಸುಗಳನ್ನು ಆಕ್ರಮಿಸಿ ಅಮೆರಿಕವನ್ನು ಯುದ್ಧಕ್ಕೆ ಕರೆಯಬಹುದೇ ಎಂಬೀ ವಿಚಾರಗಳು ಈಗ ಹಲವರ ವಾದ ವಿಷಯಗಳಾಗಿವೆ.

(೪ನೆಯ ಕಲಮಿನಿಂದ)

“ಅಟ್ಲಾಂಟಿಕ್ ಘೋಷಣೆಯು ಹಿಂದುಸ್ಥಾನಕ್ಕೆ ಅನ್ವಯಿಸುವುದಾದರೆ ಅದು ಹಿಂದುಸ್ಥಾನದ ಯಾವ ಭಾಗಕ್ಕೆ?” ಎಂದು ಸರ್ ಗಿಡ್ನಿಯವರು ಸಂಶಯವೆತ್ತಲು “ಅದು ಆಂಗ್ಲೋ ಇಂಡಿಯನ್ ಭಾಗಕ್ಕೆ” ಎಂದು ಹೇಳಿ ಸಂತ ಸಿಂಗರು ಅವರ ಸಂದೇಹವನ್ನು ಪರಿಹರಿಸಿದರು! ಸಭೆಯಲ್ಲಿ ಮತ್ತೊಮ್ಮೆ ನಗೆಯ ಅಲೆ ಕೇಳಿಬಂತು!

❀ ❀ ❀

ಸದಸ್ಯರು ಹೀಗೆ ಕೆಣಕುವ ಪ್ರಶ್ನೆಗಳನ್ನೇ ಕೇಳುತ್ತಿದ್ದರೂ “ಮುಖ್ಯ ಮಂತ್ರಿಗಳು ಹೇಳಿದ್ದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ” ಎಂದು ಆಣೆಯವರು ಆಣೆಯಿಟ್ಟು ಕುಳಿತಿದ್ದರು!

❀ ❀ ❀

“ಖಾಲಿ ಕುರ್ಚಿಗಳ” ಸ್ವಾಗತದ ಬಳಿಕ ಹಿಂದುಸ್ಥಾನದ ಹೊಸ ಮಂತ್ರಿಗಳೊಡನೆ ಇಂತಹ ಕೆಲವು ಪ್ರಶ್ನೆಗಳನ್ನು ಕೇಳಿದ್ದೆಂದರೆ ಇದು ಸಹಿಸಲಾರದ ಅಪಮಾನ!

❀ ❀ ❀

ಸಹಿಸಲಾರದ ಅಪಮಾನವಾದರೂ ಹಿಂದುಸ್ಥಾನದ ಹೊಸ ಮಂತ್ರಿಗಳಿಗೆ “ಪ್ರಧಾನ ಮಂತ್ರಿಗಳು (ಚರ್ಚಿಲರು) ಹೇಳಿದ್ದಕ್ಕಿಂತ ಹೆಚ್ಚೇನೂ ಹೇಳಲು” ಉಪಾಯವಿಲ್ಲವಷ್ಟೆ?

ನೋಟಗಳು....

ಕೇಂದ್ರ ಎಸೆಂಬ್ಲಿಯ ಅಧಿವೇಶನವು ಡಿಲ್ಲಿಯಲ್ಲಿ ಈ ವಾರ ಕೂಡಿತು. ಹಿಂದುಸ್ಥಾನದ ಹೊಸ ಮಂತ್ರಿಗಳನ್ನು ಎಸೆಂಬ್ಲಿಯ “ಖಾಲಿ ಕುರ್ಚಿಗಳು” ಬಹಳ ಸಂಭ್ರಮದಿಂದ ಸ್ವಾಗತ ಮಾಡಿದವು!

❀ ❀ ❀

ಕಾಂಗ್ರೆಸು ಮತ್ತು ಮುಸ್ಲಿಂಲೀಗುಗಳ ಸದಸ್ಯರು ಈ ಸಲದ ಎಸೆಂಬ್ಲಿ ಅಧಿವೇಶನಕ್ಕೆ ಬಹಿಷ್ಕಾರ ಹಾಕಿದ ಕಾರಣ, ಹೊಸ ಮಂತ್ರಿಗಳಿಗೆ, ಹೀಗೆ “ಖಾಲಿ ಕುರ್ಚಿಗಳಿಂದ” ಸ್ವಾಗತ ಪಡೆವ ದುರ್ದೆಸೆಯೊದಗಿತು.

❀ ❀ ❀

ಎಸೆಂಬ್ಲಿಯಲ್ಲಿ ‘ನೇಶನಲಿಸ್ಟ್’ ಮತ್ತು ‘ಇಂಡಿಪೆಂಡೆಂಟ್’ ಪಕ್ಷದ ಕೆಲವು ಸದಸ್ಯರು ಮೂಲೆಮೂಲೆಗಳಲ್ಲಿ ಕುಳಿತು ತೂಕಡಿಸುತ್ತಿದ್ದರು! ಅವರಲ್ಲಿಯೂ ಎಚ್ಚರವಿದ್ದವರು ಕೆಲವರು ಹೊಸ ಮಂತ್ರಿಗಳಿಗೆ ಬಹಳ ಗೊಂದಲವನ್ನೇ ತಂದೊಡ್ಡಿದರು!

❀ ❀ ❀

ಅಟ್ಲಾಂಟಿಕ್ ಘೋಷಣೆಯು ಹಿಂದುಸ್ಥಾನಕ್ಕೆ ಅನ್ವಯಿಸುವ ವಿಷಯವಾಗಿ ಒಂದು ಸೂಚನೆಯನ್ನು ಎಸೆಂಬ್ಲಿಯಲ್ಲಿ ಮಂಡಿಸಲಾಗಿದ್ದು ಆ ವಿಚಾರ ಸದಸ್ಯರು ಕೆಲವರು ಪ್ರಶ್ನೆಗಳನ್ನು ಕೇಳಲು, ಅವುಗಳಿಗೆ ಉತ್ತರ ಕೊಡುವ ದೌರ್ಭಾಗ್ಯ ಆಣೆಯವರ ಪಾಲಿಗೆ ಬಂದಿತ್ತು!

❀ ❀ ❀

‘ಅಟ್ಲಾಂಟಿಕ್ ಘೋಷಣೆಯು ಹಿಂದುಸ್ಥಾನಕ್ಕೆ ಅನ್ವಯಿಸುವುದೇ ಇಲ್ಲವೇ’ ಎಂದು ಸದಸ್ಯರು ಕೇಳಿದ್ದಕ್ಕೆ, ‘ಪ್ರಧಾನ ಮಂತ್ರಿಗಳು (ಚರ್ಚಿಲರು) ಹೇಳಿದ್ದಕ್ಕಿಂತ ಹೆಚ್ಚಿಗೆ ನನಗೇನೂ ಹೇಳಲಿಕ್ಕಿಲ್ಲ’ ಎಂದು ಹೇಳಿ ಆಣೆಯವರು ಉತ್ತರಿಸಿಬಿಟ್ಟರು.

❀ ❀ ❀

ನಮ್ಮ ಪ್ರಶ್ನೆಗೆ ಹೌದು ಅಥವಾ ಅಲ್ಲ ಎಂಬ ಉತ್ತರ ಬೇಕಾಗಿದೆ ಎಂದು ಶ್ರೀ ಜೋಶಿ ಮೊದಲಾದವರು ವಾದಿಸಿದರು

❀ ❀ ❀

“ಮುಖ್ಯ ಮಂತ್ರಿಗಳು ಹೇಳಿದ್ದಕ್ಕಿಂತ ಹೆಚ್ಚು ನಾನೇನೂ ಹೇಳಲಾರೆ” ಎಂದು ಆಣೆಯವರು ಮತ್ತೊಮ್ಮೆ ಆಣೆಯಿಟ್ಟು ಹೇಳಿದರು!

❀ ❀ ❀

“ಹಿಟ್ಲರನು ಧಾಳಿಮಾಡಿದ ರಾಷ್ಟ್ರಗಳಿಗೆ ಅಟ್ಲಾಂಟಿಕ್ ಘೋಷಣೆಯು ಅನ್ವಯಿಸುವುದೆಂದು ಚರ್ಚಿಲರು ಹೇಳಿದ್ದು ಹಿಟ್ಲರನು ಹಿಂದುಸ್ಥಾನಕ್ಕೆ ಧಾಳಿ ಮಾಡಿದರೆ ಅಟ್ಲಾಂಟಿಕ್ ಘೋಷಣೆಯು ಈ ದೇಶಕ್ಕೂ ಅನ್ವಯಿಸುವುದೇ” ಎಂದು ಸಂತ ಸಿಂಗರು ಪ್ರಶ್ನೆ ಕೇಳಿದಾಗ ಸಭೆಯಲ್ಲಿ ನಗೆಯ ಕೋಲಾಹಲವೇ ಎದ್ದಿತು!

❀ ❀ ❀

[೩ನೆಯ ಕಲಮನ್ನು ನೋಡಿ]

ಅನ್ನಪೂರ್ಣಾ

ಕತೆಗಾರರು ಶ್ರೀ ಕುಳುಕುಂದ

"ಢಣ್‌ಢಣ್" ಎಂದು ದೇಗುಲದ ಘಂಟೆಯು ಸ್ವರ ಕೇಳಿಸಿತು.

ಅರ್ಚಕರು ಗರ್ಭಗುಡಿಯು ಹೊರ ದ್ವಾರದಲ್ಲಿ ನಿಂತು ಕೂಗಿ ಹೇಳಿದರು. "ಉಣ್ಣಲಿಕ್ಕಿದ್ದಾರೆಯೇ? ಇನ್ನು ಉಣ್ಣಲಿಕ್ಕಿದ್ದಾರೆಯೇ?"—

ಪ್ರಾತಃಕಾಲದ ಶಾಂತತೆಯ ಆ ವಾತಾವರಣದಲ್ಲಿ ಅರ್ಚಕರ ಮಧುರ ಕಂಠ ಮಾರ್ದನಿಗೊಂಡಿತು.

ನಡುಹಗಲಲ್ಲಿಯೂ ಅದೇ ಕರೆ,
ಸಂಜೆ ಪುನಃ ಅದೇ ಕರೆ.
ನಡುವಿರುಳಲ್ಲಿಯೂ ಅ ಕರೆಯೇ.

* * *

ಹಿಂದಿನ ಕಾಲದಲ್ಲಿ ದೇವರುಗಳಿಗೆ ದಾರಿದ್ರ್ಯವಿರಲಿಲ್ಲ ಜನರು ಸಂಪತ್ಸಮೃದ್ಧಿಯಲ್ಲಿ ಸುಖಿಸುತ್ತಿದ್ದರೆಂದೇ ದೇವರುಗಳ ಭಂಡಾರಗಳು ಪೂರ್ಣವಾಗಿಯೇ ಇರುತ್ತಿದ್ದುವು.

ಅನ್ನಪೂರ್ಣ 'ಎಕ್ಸ್' ನಾಡಿನ ದೇವಿ. ಆಕೆವಾಸ್ತವಿಕವಾಗಿಯೂ ಅನ್ನ ಪೂರ್ಣೆ—ತನ್ನ ನಾಡಿನ ನಿವಾಸಿಗಳಲ್ಲಿ ಯಾರೂ ಬರಿಯ ಹೊಟ್ಟೆಯಲ್ಲಿ ರಬಾರದೆಂದು ದೇವಿಯ ಆಶಯ ಅದಕ್ಕಾಗಿಯೇ "ಉಣ್ಣಲಿಕ್ಕಿದ್ದಾರೆಯೇ? ಇನ್ನು ಉಣ್ಣಲಿಕ್ಕಿದ್ದಾರೆಯೇ? ಎಂದು ಅರ್ಚಕರು ಮೂರು ಹೊತ್ತೂ ಕರೆಕೊಡುತ್ತಿದ್ದುದು. ದೊಡ್ಡ ಘಂಟೆ ದೇಗುಲದಲ್ಲಿ ಬಾರಿಸಲ್ಪಟ್ಟೊಡನೆಯೇ ಜನರಿಗೆ ಗೊತ್ತು—ಹಸಿದವರನ್ನು ಅನ್ನಪೂರ್ಣೆ ಕರೆಯುತ್ತಿದ್ದಾಳೆ—ಎಂದು

* * *

"ಹಸಿದವರಿಲ್ಲ ದೇವಿ'' ಎನ್ನುವುದು ಹಿಂದಿನ ರೂಢಿಯಾಗಿತ್ತು. ತಾವೆಲ್ಲರೂ ಉಂಡು ಸುಖವಾಗಿದ್ದರೆ ದೇವಿಗೆ ಸಂತೋಷವೆಂದು ಊರಜನರು. ಬಗೆದಿದ್ದರು ಹಾಗಾಗಿ ಯಾರೂ ಒಪ್ಪೊತ್ತೂ ಊಟಮಾಡದೆ ಕುಳಿತುಕೊಳ್ಳಲೂ ಇಲ್ಲ. ದಿನಕೂಳನ್ನು ಸಂಪಾದಿಸುವುದು ಸುಲಭದ ಕೆಲಸವಾಗಿತ್ತು ಆಗ ವ್ರತ ಉಪವಾಸಗಳಿದ್ದರೂ ಸರಿಯೆ, ಯಾರಿಗೂ ಹಸಿವಾಗುತ್ತಿರಲಿಲ್ಲ ಅನ್ನಪೂರ್ಣೆಗೆ ತೃಪ್ತಿಯಾಗಬೇಕು,—ಅದಕ್ಕಾಗಿ ಬರಿಹೊಟ್ಟೆಯವರ್ಯಾರೂ ಇರಲಿಲ್ಲ.

ಕರೆ ಕೊಟ್ಟ ಸ್ವಲ್ಪ ಹೊತ್ತಿನ ತನಕ ಅರ್ಚಕರು ಕಾದು ಕುಳಿತುಕೊಳ್ಳುವರು. ಯಾರೂ ಬಾರದೆ ಇರುವುದರಿಂದ ದೇವಿಗೆ ಸಮರ್ಪಿಸಿದ ನೈವೇದ್ಯವನ್ನೆತ್ತಿ ಹೊತ್ತುಕೊಂಡು ದೇವಿಯ ಗುಡಿಗೆ,— ಗೃಹಾಭಿಮುಖವಾಗಿ ತೆರಳಿದರು.

ಊರ ಮುಖಂಡರಿಗೆ ಸಂತೋಷವಾಯಿತು. ಅನ್ನದಾನಕ್ಕಾಗಿ ದೇವಿಯ ಭಂಡಾರದಿಂದ ಏನೇನೂ ವೆಚ್ಚವಾಗುವುದಿಲ್ಲವಲ್ಲಾ ಎಂದು.

* * *

ಮೊದಲು ಬಂದುದು ಪರದೇಶೀಯರ ಆಕ್ರಮಣ—ಕೊಳ್ಳೆ. ಅದರ ಹಿಂದಿನಿಂದ ಬಂದುದು ಕ್ಷಾಮ—ಬರಗಾಲ. ದಾರಿದ್ರ್ಯ ದೇವಿ ಅಲ್ಲಿ ತೋರಿಕೊಂಡು ಕೆಲ ಕಾಲ ನರ್ತಿಸಿ ಹೊರಟು ಹೋಗಿದ್ದಾಳು.

ಆಗ ಹಸಿದವರಿಗಾಗಿ ಅನ್ನಪೂರ್ಣೆಯು ಕರೆ ಬಂದಾಗ ಜನರು ತಡಕಂದವರಾಗಿ, ಇಳಿಮೊಗದವರಾಗಿ, ಅವನತ ಶಿರರಾಗಿ ದೇಗುಲದ ಮುಂದೆ ಬಂದು ನಿಂತರು. ಅನ್ನ ದಾನದ ಕಾರ್ಯ ಉತ್ಸಾಹದಿಂದ ನಡೆಯತೊಡಗಿತು.

ಅಂದಿನಿಂದ ಹಸಿದವರ ಹೊಟ್ಟೆ ತಣಿಯಲಿಲ್ಲ ನಿರುದ್ಯೋಗಿಗಳು, ದಿನಗೂಲಿ ದೊರಕದವರು, ಅರೆಹೊಟ್ಟೆಯವರು ಭಿಕ್ಷುಕರು ಬಡವರು—ಇವರ ಸ್ತೋಮಗಳಿಗೆ ಕಡಿಮೆ ಇರಲಿಲ್ಲ

ಈ ವ್ಯವಹಾರ ಹೀಗೆಯೇ ಮುಂದೆ ಸಾಗಿತು ಊರ ಮುಖಂಡರು ಮಿಕಿ ಮಿಕಿ ಪರಸ್ಪರ ನೋಡಿಕೊಂಡರು. ಅರ್ಚಕರು ಬೇಸತ್ತು ಗೊಣಗುಟ್ಟತೊಡಗಿದರು. ಹಸಿದು ಬಂದವರು ಅರೆಹೊಟ್ಟೆಯಲ್ಲೇ ಹಿಂದಿರುಗಿದರು ಮನೆಗೆ ನೈವೇದ್ಯ ಕೊಂಡೊಯ್ಯುವುದಕ್ಕೆ ತಡವಾಗುವುದೆಂದು ಅರ್ಚಕರು ಚಡಪಡಿಸಿದರು

* * *

ಆಗ ಒಮ್ಮಿಂದೊಮ್ಮೆಲೆ ಜನರು ಮಾತನಾಡಿಕೊಳ್ಳ ತೊಡಗಿದರ "ಹೀಗೆ ಅನುದಿನವೂ ಉಪದ್ರವವಿತ್ತರೆ ಹೇಗೆ?'' "ಅನ್ನಪೂರ್ಣಾ ದೇವಿಗೆ ಅತೃಪ್ತಿಯಾಗಿದೆ''—ಒಂದು ತೆರನಾದ ಭಯಭೀತಿ ಜನರಲ್ಲಿ ಸಂಚಾರಮಾಡುವುದಕ್ಕೆ ಮೊದಲಾಯಿತು. ಹೀಗೆ ಸುದ್ದಿಗಳನ್ನು ಯಾರು ಹಬ್ಬಿದರೆಂದು ವಿಚಾರಿಸುವ ಗೋಜಿಗೆ ಒಬ್ಬನೂ ಹೋಗಲಿಲ್ಲ

ದಿನೇ ದಿನೇ ಅರ್ಚಕರ ಕರೆಗೆ ಮರುನುಡಿ ಕೊಡುತ್ತಿದ್ದ ಪಾಪಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂತು ಕ್ರಮಶಃ ಹಾಗೆ ಜನರು ಬರುವುದು ನಿಂತೇ ಹೋಯಿತು

ಆದರೂ ಅನ್ನಪೂರ್ಣೆ ಕರೆಯುತ್ತಿದ್ದಳು—"ಉಣ್ಣಲಿಕ್ಕಿದ್ದಾರೆಯೇ? ಇನ್ನು ಉಣ್ಣಲಿಕ್ಕಿದ್ದಾರೆಯೇ?'' ಎಂದು.

* * *

ಎಷ್ಟೋ ವರ್ಷಗಳು ಸಂದುವು ಒಂದು ದಿನ ಪರವೂರಿನ ಕೆಲವು ಬೈರಾಗಿಗಳು ಅನ್ನಪೂರ್ಣಮ್ಮನ ನಾಡಿಗೆ ಬಂದರು

ರಾತ್ರಿಯ ಮಹಾಪೂಜೆಯಾಗಿ ಆರತಿ ಬೆಳಗಿದ್ದ ಹೊತ್ತು ಬೈರಾಗಿಗಳು ದೇಗುಲದ ಬಳಿಯಿಂದ ಬರುತ್ತಿದ್ದರು ಅನ್ನಪೂರ್ಣೆಯ ಮಹತ್ವವನ್ನು ಅವರು ಕೇಳಿಯರಿಯದ ಮಂದಿಯಾಗಿರಲಿಲ್ಲ

ಅರ್ಚಕರು ಘಂಟೆ ಬಾರಿಸಿ, "ಉಣ್ಣಲಿಕ್ಕಿದ್ದಾರೆಯೇ? ಇನ್ನು ಉಣ್ಣಲಿಕ್ಕಿದ್ದಾರೆಯೇ?'' ಎಂದರು

ಬೈರಾಗಿಗಳು ತಮ್ಮ ಆಗಮನ ಸೂಚಕ ಧ್ವನಿಯಿಂದ "ಜೈ ಶಂಕರ್'' ಎಂದರು

ಅರ್ಚಕ ಹುಬ್ಬು ಗಂಟಿಕ್ಕಿದ ಊರವರೇನೂ ಕಾಟ ಕೊಡುತ್ತಿರಲಿಲ್ಲ ಎಂದಾದರೂ ಬರುತ್ತಿದ್ದರೆ ಪರದೇಶಿಗಳು, ಬೈರಾಗಿಗಳು ಎಷ್ಟೋ ಬಾರಿ ಆ ಹೊಸ ಅರ್ಚಕ ಅವರನ್ನು ಗದರಿಸಿ ಕಳುಹಿಸಿದ್ದ "ಪಾಪಿಗಳು'' ಎಂದು ಗೊಣಗುಟ್ಟಿದ ತನ್ನ ಮನೆಯವರಿಗೆ ಬೇಕಾಗುವಷ್ಟೇ ನೈವೇದ್ಯ ದೇವಿಗೆ ಸಮರ್ಪಿತವಾಗಿತ್ತು ಅರ್ಚಕ ಅತ್ತಿತ್ತ ನೋಡದೆ ನೈವೇದ್ಯದ ಪಾತ್ರೆಯನ್ನೆತ್ತಿ ಗರ್ಭಗುಡಿಗೆ ಬೀಗವನ್ನಿಕ್ಕಿ ಹೊರನಡೆದು ಹೆಬ್ಬಾಗಿಲನ್ನು ಎಳೆದುಕೊಂಡ ಎದುರುಗಡೆಯ ಗೋಪುರದಲ್ಲಿ ಗಂಟೆಗಳನ್ನೆಣಿಸುತ್ತಿದ್ದ ಬೈರಾಗಿಗಳಲ್ಲೊಬ್ಬ ಅರ್ಚಕ ಹೊರಡುತ್ತಿದ್ದುದನ್ನು ಕಂಡು "ಪ್ರಸಾದವಿಲ್ಲವೆ? ಭಕ್ತರಿದ್ದಾರೆ'' ಎಂದ.

ಉತ್ತರ ಬರಲಿಲ್ಲ ಈ ಪ್ರಶ್ನೆಗೆ

* * *

ಮರುದಿನ ಮುಂಜಾನೆ ಪೂಜೆಯ ಹೊತ್ತಿಗೂ ಬೈರಾಗಿಗಳು ಅಲ್ಲೇ ಇದ್ದರು. ಮುಂಜಾನೆಯ ಕರೆ ಬಂದಾಗ ಬೈರಾಗಿಗಳ ಹಿರಿಯ ಮುಂದೆ ಹೋಗಿ ನಿಂತ.

ಅರ್ಚಕ ಸಿಟ್ಟುಗೊಂಡು "ಏನು?'' ಎಂದ.

"ಕರೆದಿರಿ. ಬಂದಿದ್ದೇವೆ.''

"ಹುಂ, ಈಗ ಆ ಪದ್ಧತಿ ಇಲ್ಲವೆಂದು ಗೊತ್ತಿಲ್ಲವೆ?''

ಬೈರಾಗಿಗೆ ಆಶ್ಚರ್ಯವಾಯಿತು.

"ಏನು? ಅನ್ನಪೂರ್ಣೆ ಈಗ ಅನ್ನದಾನ ಮಾಡುವುದಿಲ್ಲವೆ?''

ಅರ್ಚಕನು ಬಿರುಗಣ್ಣಿದ, ಅಷ್ಟೆ'

ಬೈರಾಗಿ ಸ್ವರವೇರಿಸಿ ನುಡಿದ "ಏಕೆ ಮತ್ತೆ ಈ ಸೋಗು?''

ಅನ್ನಪೂರ್ಣೆ ಒಳಗಣಿಂದ ತನ್ನ ಆ ಮಕ್ಕಳಿಬ್ಬರನ್ನೂ ನೋಡಿ ನಗುತ್ತಿದ್ದಳು

ಅರ್ಚಕ ಅರಚಿಕೊಂಡ,

"ಷಂಡ! ನಾಸ್ತಿಕ! ದೇವಿಯನ್ನು ಅವಮಾನಿಸಿ ನರಕಕ್ಕೆ ಹೋಗುತ್ತಿದ್ದೀಯ!''

* * *

'ಢಣ್‌ಢಣ್'' ಎಂದು ದೇಗುಲದ ಘಂಟೆಯ ಸ್ವರ ಕೇಳಿಸಿತು.

ಅರ್ಚಕ ಮಹಾಶಯನು ಗರ್ಭಗುಡಿಯ ಹೊರದ್ವಾರದಲ್ಲಿ ನಿಂತು ಕೂಗಿ ಹೇಳಿದ. "ಉಣ್ಣಲಿಕ್ಕಿದ್ದಾರೆಯೇ? ಇನ್ನು ಉಣ್ಣಲಿಕ್ಕಿದ್ದಾರೆಯೇ?''

ಪ್ರಾತಃಕಾಲದ ಅಶಾಂತತೆಯ ಆ ವಾತಾವರಣದಲ್ಲಿ ಅರ್ಚಕನ ಕರ್ಣ ಕಠೋರ ಕರೆ ಕೇಳಿಸಿತು.

ನಡು ಹಗಲಲ್ಲಿಯೂ ಅದೇ ಕರೆ.
ಸಂಜೆ ಪುನಃ ಅದೇ ಕರ್ಕಶ ಕರೆ.
ನಡುವಿರುಳಲ್ಲಿಯೂ ಆ ಕರೆಯೇ



S.B.I.

ರಶ್ಯನ್ ರಣಭೂಮಿಯಲ್ಲಿ ರಕ್ತದ ಪ್ರವಾಹ ಹರಿಯುತ್ತಿದೆ!

ಈ ವಾರ ರಶ್ಯನ್ ರಣಭೂಮಿಯಲ್ಲಿ ರಕ್ತದ ಪ್ರವಾಹವೇ ಹರಿಯಿತು. ಮೋಸ್ಕೋ ಮುತ್ತಿಗೆಯು ಸಲುವಾಗಿ ಜರ್ಮನರು ಬಹಳ ಉಗ್ರರಾಗಿ ಮುಂದೊತ್ತಲು ಸಾಹಸಪಟ್ಟರು. ರಶ್ಯನರು ವೀರಾವೇಶದಿಂದ ಕಾದಾಡಿ ಪ್ರತಿಭಟಿಸಿದರು. ಲೆನಿನ್‌ಗ್ರಾಡ್ ಭಾಗದಲ್ಲಿಯೂ ಜರ್ಮನರು ಮುಂದೊತ್ತಲು ಮಾಡಿದ ಸಾಹಸವನ್ನು ರಶ್ಯನರು ತಡೆಯುತ್ತಿದ್ದಾರೆ. ಜರ್ಮನರಿಗೆ ಈ ಯುದ್ಧದಲ್ಲಿ ಅಗಣಿತ ಜನ ಧನ ನಷ್ಟವಾಗಿದೆ. ಜರ್ಮನಿಯು ಅಮೆರಿಕನ್ ಹಡಗಗಳನ್ನು ಮುಳುಗಿಸಿದ ವಿಷಯ ರೂಸ್‌ವೆಲ್ಟರು ಒಂದು ಭಾಷಣ ಮಾಡುತ್ತಾ ಬಹಳ ಪ್ರಕೋಪದ ಮಾತುಗಳನ್ನಾಡಿ ಹಿಟ್ಲರ್‌ಶಾಹಿಯನ್ನು ಕೊನೆಗೊಳಿಸುವ ನಿರ್ಧಾರವು ಅಮೆರಿಕದ್ದೆಂದು ಹೇಳಿದರು.

ಹಿಟ್ಲರ್‌ಶಾಹಿಯನ್ನು ಕೊನೆಗಾಣಿಸಲು ನಿರ್ಧಾರ

ರೂಸ್‌ವೆಲ್ಟರ ಭಾಷಣ

"ಹಿಟ್ಲರನು ನಮ್ಮ ಹಡಗಗಳನ್ನು ಗುಂಡಿಟ್ಟು ಮುಳುಗಿಸುತ್ತಾನೆ. ಈ ಗುಂಡು ಪ್ರತಿಯೊಬ್ಬ ಅಮೆರಿಕನ ಮೇಲೆ ಬಿದ್ದಂತೆ. ಅಮೆರಿಕನರನ್ನು ಸಮುದ್ರದಲ್ಲಿ ಅಂಜಿಸುವ ಸಲುವಾಗಿ ಹಿಟ್ಲರನು ಹೀಗೆ ಮಾಡುತ್ತಿದ್ದಾನೆ. ಹಿಟ್ಲರ್ ಸರಕಾರವು ತಯಾರಿಸಿದ ಗುಪ್ತ ನಕಾಶೆ ನನ್ನ ಹಸ್ತವಿದೆ. ಅದರಲ್ಲಿ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನು ತನ್ನ ವಶಪಡಿಸಬೇಕೆಂಬ ಆತನ ಉದ್ದೇಶ ಸ್ಪಷ್ಟವಾಗುತ್ತಿದೆ. ಹಿಟ್ಲರಶಾಹಿಯನ್ನು ಕಡೆಗಟ್ಟುವುದೇ ಅಮೆರಿಕದ ನಿರ್ಧಾರ. ರಶ್ಯ ಮತ್ತು ಬ್ರಿಟನಿಗೆ ಎಂದಿನಂತೆ ಅಮೆರಿಕದ ಸಹಾಯ ಸಾಗುವುದು" ಹೀಗೆಂದು ರೂಸ್‌ವೆಲ್ಟರು ಮೊನ್ನೆ ಆಕಾಶ ಭಾಷಣವೊಂದರಲ್ಲಿ ಹೇಳಿದರು.

ಜರ್ಮನರು ಫ್ರೆಂಚರ ಕೊಲೆ ಮಾಡುತ್ತಿರುವರು

ಜರ್ಮನರು ಫ್ರೆಂಚ್ ಜನರನ್ನು ಕೊಲೆ ಮಾಡುತ್ತಿರುವರೆಂದು ಪ್ರಕಟವಾಗಿದೆ.

ನ್ಯೂಯಾರ್ಕಿನಲ್ಲಿ ಅಂತರ್‌ರಾಷ್ಟ್ರೀಯ ಕೂಲಿಗಾರರ ಸಂಸತ್ತು

ತಾ. ೨೭ರಂದು ಆರಂಭವಾಗಿರುವುದಾಗಿ ತಿಳಿದಿದೆ. ೩೩ ರಾಷ್ಟ್ರಗಳಿಂದ ೧೬೦ ಪ್ರತಿನಿಧಿಗಳು ಬಂದಿರುವರು. ಮೇಯರ್ ಲಾಗಿರೀಡಾ ಇವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಫ್ರಾನ್ಸಿಸ್ ಪೆರಿನ್ನರನ್ನು ಅಧ್ಯಕ್ಷರಾಗಿ ಆರಿಸಲಾಯಿತು.

ಅಮೆರಿಕಕ್ಕೆ ಯುದ್ಧದಲ್ಲಿ ಸೇರುವ ಇಚ್ಛೆಯಿಲ್ಲ

ಏನಾದರೊಂದು ಗಡಿಬಿಡಿ ಮಾಡಿ ಅಮೆರಿಕಕ್ಕೆ ಯುದ್ಧದಲ್ಲಿ ಸೇರಬೇಕೆಂಬ ಇಚ್ಛೆಯಿಲ್ಲ ಎಂದು ಕಾರ್ಡೆಲ್ ಹಲ್ಲರು ಹೇಳಿದರು.

ಮೋಸ್ಕೋವನ್ನು ಆಕ್ರಮಿಸಲು ಪ್ರಬಲ ಸಂಗ್ರಾಮ!

ಹಿಟ್ಲರ್‌ಶಾಹಿಯನ್ನು ಕೊನೆಗಾಣಿಸಲು ಅಮೆರಿಕದ ನಿರ್ಧಾರ?

ಜಪಾನು ವಿಷಗಾಳಿ ಬಿಟ್ಟಿದೆ!

ಹೊಸ ಕಡ ಒತ್ತಿ ಕಾಯಿದೆ

ಅಮೆರಿಕದ ಹೊಸ ಕಡ ಒತ್ತಿ ಕಾಯಿದೆಯು ಪ್ರಜಾಪ್ರತಿನಿಧಿ ಸಭೆ ಮತ್ತು ಸೆನೆಟುಗಳಲ್ಲಿ ತಾನಾಗಿ ರೂಸ್‌ವೆಲ್ಟರ ಸಹಿಗೆ ಹೋಗಿಬರುವುದು. ೬೦೬೦೦ ಲಕ್ಷ ಡಾಲರುಗಳಷ್ಟು ಇದರಿಂದ ಸಹಾಯ ಹೋಗುವುದು.

ವಿಷಗಾಳಿ ಪ್ರಯೋಗ

ಇಚಾಂಗ್‌ನಲ್ಲಿ ಜಪಾನೀ ಸೈನಿಕರು ವಿಷಗಾಳಿ ಪ್ರಯೋಗಿಸಿ ಸುಮಾರು ೬೦೦ ಚೀನೀ ಸೈನಿಕರನ್ನು ಕೊಂದರೆಂದು ಸುದ್ದಿ. ಜಪಾನೀ ಬಾಂಬರುಗಳು ನಾಲ್ಕೈದು ತಾಸುಗಳ ವರೆಗೆ ವಿಷಗಾಳಿಗಳಿಂದ ಕೂಡಿದ ಬಾಂಬುಗಳನ್ನು ಎಸೆದುವಂತೆ.

ಬ್ರಿಟನಿನ ಪ್ರತಿ ದಿನದ ಯುದ್ಧ ವೆಚ್ಚ ೧೩,೦೦೦೦೦೦ ಪವನು

ಡೊನಾಲ್ಡ್ ಟಾಯರಮೇನರ ಹೇಳಿಕೆ

ಇತ್ತೀಚೆಗೆ ಬಿ. ಬಿ. ಸಿ. ಯಲ್ಲಿ ಭಾಷಣ ಮಾಡುತ್ತಾ ಬ್ರಿಟನಿನ ಯುದ್ಧ ವೆಚ್ಚದ ಕುರಿತು ಡೊನಾಲ್ಡ್ ಟಾಯರ್ ಮೇನರು ಈಗ ಪ್ರತಿ ದಿನ ೧೩,೦೦೦೦೦೦ ಪವನು ವೆಚ್ಚವಿದೆಯೆಂದರು. ೧೯೪೦ನೆಯ ಇಸವಿ ಎಪ್ರಿಲಿನಿಂದ ಜೂನ್ ವರೆಗೆ ಮೂರು ತಿಂಗಳಲ್ಲಿ ೭೫೦೦,೦೦೦ ಪವನು ಇತ್ತು. ಮುಂದೆ ಒಂದು ವರ್ಷದ ನಂತರ ಆ ವೆಚ್ಚವು ಇನ್ನೂ ಹೆಚ್ಚುತ್ತಿದೆ ಎಂದು ಅದರಲ್ಲಿ ಹೇಳಿದರು.

ಅಮೆರಿಕದಲ್ಲಿ ಕೆಲಸಗಾರರ ಮುಷ್ಕರ

೫೩,೦೦೦ ಕೆಲಸಗಾರರು

ಅಮೆರಿಕದ ಏಳು ಉಕ್ಕಿನ ಕಾರ್ಖಾನೆಗಳ ೫೩,೦೦೦ ಕೆಲಸಗಾರರು ಮುಷ್ಕರ ಹೂಡಿರುವರು. ಕೆಲಸ ಮುಂದೆ ಸಾಗಿಸಿದರೆ ತಾವು ಸಂಧಾನ ನಡೆಸುವುದಾಗಿ ರೂಸ್‌ವೆಲ್ಟರು ಮಾಡಿದ ಸೂಚನೆಯನ್ನು ಕೂಲಿಗಾರ ಮುಖಂಡ ಲೆವಿಸರು ನಿರಾಕರಿಸಿದ್ದಾರೆ.

ಭಾರತೀಯರು ಹುಚ್ಚರಲ್ಲ ತಮಗೆ ಬೇಕಾದುದನ್ನು ನಿರ್ಧರಿಸಬಲ್ಲರು. ಯಂಗ್ ಹಸ್ಬೆಂಡರ ಹೇಳಿಕೆ

ಯಂಗ್ ಹಸ್ಬೆಂಡರು ಇತ್ತೀಚೆಗೆ ಭಾರತದ ವಿಷಯ ಸಹಾನುಭೂತಿ ತೋರಿಸಬೇಕೆಂಬ ವಿಚಾರ ಲೇಖನ ಬರೆದು ಪ್ರಕಟಿಸಿದಕ್ಕೆ ಅವರನ್ನು ಹಲವರು ಟೀಕಿಸಿದರು. ಅದಕ್ಕೆ ಉತ್ತರಕೊಡುತ್ತಾ ಈಗ ಅವರು, ಹಿಂದೀಯರು ಹುಚ್ಚರಲ್ಲ; ಅವರಿಗೆ ಏನು ಬೇಕೆಂಬುದನ್ನು ಅವರು ನಿರ್ಧರಿಸಬಲ್ಲರು- ಅವರಿಯವರು ಆ ಸಂದರ್ಭವನ್ನು ಒದಗಿಸಿಕೊಡಲಿ ಎಂದು ಬರೆದಿರುವರು.

ವೈಸರಾಯ್ ಕೌನ್ಸಿಲ್ ವಿಸ್ತರಣೆಯ ಕುರಿತು ಫೀಲ್ಡನರ ಟೀಕೆ

ಲಿನಲ್ ಫಿಲ್ಡನರು ನ್ಯೂಸ್ಟೇಟ್ಸ್‌ಮೇನ್ ಎಂಡ್ ನೇಶನ್ ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ ವೈಸರಾಯರ ಹೊಸ ಕೌನ್ಸಿಲ್ ವಿಸ್ತರಣೆಯಲ್ಲಿ ಸೇರಿಸಲಾದ ಅಣೆ ಪ್ರಭೃತಿ ಆರು ಮೆಂಬರರು ಹೇಗೆ ಅಪಹಾಸ್ಯ ಕಾರಣರಾಗಿರುವರೆಂದೂ, ಅವರು ನಿಜವಾದ ಜನತೆಯ ಪ್ರತಿನಿಧಿಗಳಲ್ಲವೆಂದೂ, ಭಾರತದ ಸಮಸ್ಯೆ ಬಗೆ ಹರಿಸಲು ನೆಹರು ಮತ್ತು ಗಾಂಧಿಜಿ ಇಬ್ಬರೇ ಸಮರ್ಥರೆಂದೂ, ಚರ್ಚಿಲರು ಸ್ವಾತಂತ್ರ್ಯ ಬಯಸುವಂತೆ ಪ್ರತಿಯೊಬ್ಬ ಭಾರತೀಯನೂ ಸ್ವತಂತ್ರ ಬಯಸುವನೆಂದೂ ವಿವರಿಸಿದ್ದಾರೆ.

[ಆನೆಯ ಪುಟದಿಂದ ಮುಂದುವರಿದುದು]

ಕ್ಷರ ಭಾಷಣಗಳಾಗಿ ಎಡ್ವೊಕೇಟ್ ಶ್ರೀ. ಬಿ. ಎಸ್. ಕಕ್ಕಿಲ್ಲಾಯರ ಕೃತಜ್ಞತಾರ್ಪಣೆಯೊಡನೆ ಸಭಾಂತ್ಯವಾಯಿತು.

ಅಜೆಕಾರು

ಇಲ್ಲಿ ತೆರೆಯಲ್ಪಟ್ಟ ವಾಚನಾಲಯಕ್ಕೆ, ಜಿಲ್ಲಾ ವಾರ್ ಕಮಿಟಿಯವರು, ಇದೇ ಅಕ್ಟೋಬರದಿಂದ, ಒಂದು ದೈನಿಕ ಪತ್ರಿಕೆಯನ್ನೂ, ಯುದ್ಧದ ಹಲವಾರು ಚಿತ್ರಪಟ ಮತ್ತು ಕರಪತ್ರಗಳನ್ನೂ ಒದಗಿಸಿ ಕೊಟ್ಟಿದ್ದು ಸ್ತುತ್ಯಕರವಾಗಿದೆ.

ಕಾರ್ಕಳ

ಭಾಷಣ

ಶ್ರೀ. ಯಂ. ಡಿ. ಅಧಿಕಾರಿಯವರು ಪುನಃ ಸತ್ಯಾಗ್ರಹ ಮಾಡಲಿಚ್ಛಿಸಿದರಿಂದ ಅವರಿಗೆ ವಿಧಾಯವನ್ನೀಯುವದಕ್ಕೋಸ್ಕರ ತಾ. ೨೫ರ ದಿನ ಕಾರ್ಕಳ ಸಾರ್ವಜನಿಕ ಸಭೆಯು ಶ್ರೀ. ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ. ಅಧಿಕಾರಿಯವರು ಭಾಷಣವನ್ನಿತ್ತ ಮೇಲೆ ಶ್ರೀ. ದಾಮೋದರ ಬಾಳಿಗರು ಮತ್ತು ಇತರರೂ ಶ್ರೀ. ಅಧಿಕಾರಿಯವರಿಗೆ ಶುಭವನ್ನು ಕೋರಿ ಭಾಷಣವಿತ್ತರು.

ಸ್ಪರ್ಧೆಯಲ್ಲಿ ವಿಜಯ

ಉಡುಪಿಯಲ್ಲಿ ನಡೆದ ಕುಂದಾಪುರ ಉಡುಪಿ ಕಾರ್ಕಳ ತಾಲೂಕುಗಳ ಇಂಟರ್ ಸ್ಕೂಲ್ ಸೀನಿಯರ ಕ್ರಿಕೆಟ್ ಪಂದ್ಯಾಟದಲ್ಲಿ ಕಾರ್ಕಳ ಬೋರ್ಡ ಹೈಸ್ಕೂಲಿನ ವಿದ್ಯಾರ್ಥಿಗಳು ವಿಜಯಿಗಳಾಗಿ ಬಹುಮಾನದ ಬಟ್ಟಲನ್ನು ಸಂಪಾದಿಸಿದ್ದಾರೆ.

ಉಡುಪಿ

ಭಾಷಣ

ಬ್ಯಾಸಿಯುಮಿನಲ್ಲಿ ಶ್ರೀ. ಶ್ರೀನಿವಾಸ ಮೂರ್ತಿಗಳು ದಾನ ಸಾಹಿತ್ಯದ ವಿಷಯ ಭಾಷಣವಿತ್ತರು.

ಉಪಾಧ್ಯಕ್ಷರ ಚುನಾವಣೆ

ಉಡುಪಿ ಮುನ್ಸಿಪಾಲಿಟಿಗೆ ಉಪಾಧ್ಯಕ್ಷರಾಗಿ ಶ್ರೀಮತಿ ಲೀಲಾ ಬಾಯಿ ಕಾಮತರು ಚುನಾಯಿತರಾಗಿರುವರು.

ಮಹಾಜನ ಫ್ಲಡ್‌ರಿಲೀಫ್ ಕಮಿಟಿ

ಇದರ ಎಕ್ಸಿಕ್ಯೂಟೀವ್ ಕಮಿಟಿಯ ಸಭೆ ಸೇರಿ ನೆರೆಯಿಂದ ನೊಂದ ಬೇಸಾಯಗಾರರಿಗೆ ೬೦೦೦ ಹಾರೆಗಳನ್ನು ಕೊಡುವುದೆಂತಲೂ, ಇದಕ್ಕೆ ೩೦೦೦ ರೂಪಾಯಿಗಳೂ ಮತ್ತು ಇದುವರೆಗೆ ಸಹಾಯ ಸಿಗದವರಿಗೆ ರೂ. ೫೦೦ ಸಹಾಯ ಕೊಡುವುದೆಂತಲೂ ನಿರ್ಣಯವಾಗಿದೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 264/1941.

ರಾಮಕೃಷ್ಣ ಚಡಗ— ವಾದಿ.

ಗೋಪಾಲಕೃಷ್ಣ ಚಡಗ ಸಹಾ— ಪ್ರತಿವಾದಿರು.

9ನೇ ಪ್ರತಿವಾದಿ—ಲಕ್ಷ್ಮಿ, ಸುಬ್ರಾಯ ಚಡಗರ ವಿಧವೆ, ನೆಕ್ರಾಜೆ ಗ್ರಾಮದ ಪುಂಡೂರು ದೊಡ್ಡ ಮನೆ ಈಶ್ವರ ಪುಣಿಚಿತ್ತಾಯರಲ್ಲಿ.

11ನೇ ಪ್ರತಿವಾದಿ—ಲಕ್ಷ್ಮಿ, ನಾರಾಯಣ ಕಲ್ಲುರಾಯ-ಶೇಷಪ್ಪ ಕಲ್ಲುರಾಯರ ಮಗ—ಕುಟುಂಬದ ಯಜಮಾನ ವ ಆಡಳಿತದಾರ ಅಡೂರು ಗ್ರಾಮದ ಪಡಪೆ ಎಂಬಲ್ಲಿರುವವ,

ಇವರಿಬ್ಬರಿಗೆ

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು ತನ್ನ ಕುಟುಂಬದ ಮನೆ ದೇವರಾದ ಗಣಪತಿ ದೇವರ ಪರವಾಗಿ ದೇವತಾ ವಿನಿಯೋಗದ ಆಸ್ತಿ ಮತ್ತು ದೇವತಾ ಸೊತ್ತುಗಳನ್ನು ಯಾವತ್ತು ಪ್ರತಿವಾದಿರ ಆಕ್ಷೇಪಣೆಗಳ ಉಪದ್ರ ವಿನಾ ತನ್ನ ಸ್ವಾಧೀನ ಬಿಡಿಸಿಕೊಡಬೇಕೆಂತ ವಗೈರೆ ಮಾಡಿದ ದಾವೆಯು ತಾ. 12-11-1941ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆ ವ್ಯಾದೆ ಇಟ್ಟಿರುವುದರಿಂದ ಆ ಬಾಬ್ತಿನಲ್ಲಿ ಆಕ್ಷೇಪಣೆ ಇದ್ದಲ್ಲಿ ಸದ್ರಿ ವ್ಯಾದೆ ದಿವಸ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ಉದಹರಿಸಲು ತಪ್ಪಿದ್ದಲ್ಲಿ ಕೋರ್ಟು ಮುನಾಸಬು ಪ್ರಕಾರ ತೀರ್ಮಾನ ಮಾಡೋಣಾಗುವದೆಂತ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸೋಣಾಗಿಯದೆ.

ಮುಕ್ಕಾಂ ಪುತ್ತೂರು } N. V. Kaladhaya
ತಾ. 23-10-41. } Vakil for Plaintiff.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 1095/41.

O. S. 607/39.

ಅರ್ಜಿದಾರ— ರಾಮಯ್ಯ ಶೇರೆಗಾರ,

ಎದ್ರಿರು— ಹನುಮಂತ ಶೇರೆಗಾರ ಸಹಾ

ಇವರೊಳಗೆ,

2. ಮಂಜಯ್ಯ ಶೇರೆಗಾರ, 3. ನಾಗಪ್ಪ ಶೇರೆಗಾರ, ದುಗ್ಗಯ್ಯ ಶೇರೆಗಾರರ ಮಕ್ಕಳು. 11. ಮೈನರ್ ಸೀತಾರಾಮ, 2ನೇ ಎದ್ರಿ ಮಗ, 12. ಮೈನರ್ ಸುಬ್ರಾಯ, 3ನೇ ಎದ್ರಿ ಮಗ, ಶಿವಮೊಗ್ಗ ಡಿಸ್ಟ್ರಿಕ್ಟ್ ಹೊಸನಗರದಲ್ಲಿರುವವರು.

ಸದ್ರಿ 2, 3, 11, 12ನೇ ಎದ್ರಿರಿಗೆ ಅರ್ಜಿದಾರನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ನಂಬ್ರದಲ್ಲಿ ಫೈನಲ್ ಡಿಕ್ರಿ ಆಗಬೇಕೆಂತ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು ತಾ. 14-11-41ನೇ ದಿವಸ 11 ಗಂಟೆಗೆ ಈ ಕೋರ್ಟು ಮುಂದೆ ಖುದ್ದು ಯಾ ವಕೀಲರ ದ್ವಾರ ನೀವು ಹಾಜರಾಗಿ ತಿಳಿಸತಕ್ಕದ್ದು. ಇಲ್ಲವಾದರೆ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ.

Kundapur } G. Sanjiva Rao.
25-10-41 } ಅರ್ಜಿದಾರನ ಕಡೆ ವಕೀಲ್.

ಮಂತ್ರಿ ಪದವಿಗಳನ್ನು ಸ್ವೀಕರಿಸಲು ಗಾಂಧೀಜಿ ಸಮ್ಮತಿಸುವುದಿಲ್ಲ?

ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ—

ಕಾಂಗ್ರೆಸು ಮತ್ತು ಮುಸ್ಲಿಂ ಲೀಗು ಸದಸ್ಯರ ಬಹಿಷ್ಕಾರ

ಯುದ್ಧ ಕಮಿಟಿಗೆ ರಾಜಿಕೊಟ್ಟು ಕಾಂಗ್ರೆಸಿಗೆ ಸೇರಿದರು

ಕೇಂದ್ರ ಅಸೆಂಬ್ಲಿ ಅಧಿವೇಶನವು ಆರಂಭವಾಗಿದೆ. ಹೊಸ ಮಂತ್ರಿಗಳು ಪ್ರಮಾಣ ವಚನವನ್ನು ಕೆಗೆದುಕೊಂಡರು ಹೊಸ ಮಂತ್ರಿಗಳಿಗೆ ಪ್ರಥಮ ಸಲದ ಸ್ವಾಗತವೆಂದರೆ "ಖಾಲಿ ಕುರ್ಚಿಗಳು" ಕಾಂಗ್ರೆಸು ಮತ್ತು ಮುಸ್ಲಿಂ ಲೀಗು ಸದಸ್ಯರು ಎಸೆಂಬ್ಲಿಯನ್ನು ಬಹಿಷ್ಕರಿಸಿದುದರಿಂದ ಈ ಅವಸ್ಥೆಯಾಯಿತು. ಅಟ್ಲಾಂಟಿಕ್ ಘೋಷಣೆಯನ್ನು ಭಾರತಕ್ಕೆ ಅನ್ವಯಿಸುವಂತೆ ಮಾಡಬೇಕೆಂದು ಎಸೆಂಬ್ಲಿಯಲ್ಲಿ ತಂದ ಸೂಚನೆಯನ್ನು, ಆಳೆಯುವವರು ವಿರೋಧಿಸಿದರು ವರ್ಧಾದಲ್ಲಿ ಕಾಂಗ್ರೆಸು ಮುಖಂಡರು ಗಾಂಧಿಜಿಯವರೊಡನೆ ಮಾತನಾಡಿದರು ಮಾತುಕತೆಯ ಫಲಿತಾಂಶ ತಿಳಿದಿಲ್ಲ. ರಾಜಾಜಿ ಇನ್ನೊಮ್ಮೆ ನವಂಬರದಲ್ಲಿ ಮಹಾತ್ಮರ ಭೇಟಿಗೆ ಹೋಗುವರೆಂದು ತಿಳಿದಿದೆ ಆದರೆ ಗಾಂಧಿಜಿ ಕಾಂಗ್ರೆಸಿನವರು ಮಂತ್ರಿ ಮಂಡಳ ಸ್ವೀಕರಿಸುವದಕ್ಕೆ ಸಮ್ಮತಿ ಕೊಡಲಾರರೆಂದು ತಿಳಿದು ಬಂದಿದೆ

ದೇವಲಿ ಶಿಬಿರದಲ್ಲಿ ಅನ್ನ ಸತ್ಯಾಗ್ರಹ

ಶ್ರೀ ಜಯ ಪ್ರಕಾಶರನ್ನು ಬಂಧಿಸಿಟ್ಟಿರುವ ದೇವಲೀ ಶಿಬಿರದಲ್ಲಿ ೧೫೦ ಕ್ರಾಂತಿಕಾರರ ಕೈದಿಗಳನ್ನೊಳಗೊಂಡ ೨೦೫ ಸಂರಕ್ಷಕ ಕೈದಿಗಳು ಅನ್ನ ಸತ್ಯಾಗ್ರಹವನ್ನು ಆಚರಿಸಿರುವರು. ಶ್ರೀ ಎಂ. ಎನ್ ಜೋಶಿಯವರು ಮಾಡಿದ ಸೂಚನೆಯಲ್ಲಿ, ಅವರು ಸರಕಾರಕ್ಕೆ ಮಾಡಿದ ಬೇಡಿಕೆಯನ್ನು ಮಾನ್ಯ ಮಾಡದ ಕಾರಣ ಅನ್ನ ಸತ್ಯಾಗ್ರಹವನ್ನು ಕೈಕೊಂಡಿರುವುದಾಗಿ ತಿಳಿದಿದೆ. ಅನ್ನ ಸತ್ಯಾಗ್ರಹ ನಿಲ್ಲಿಸುವ ವರೆಗೆ ಅವರ ಬೇಡಿಕೆಯ ಕುರಿತು ವಿಚಾರ ಮಾಡುವುದಿಲ್ಲವೆಂದು ಸರಕಾರದ ಹೇಳಿಕೆಯಾಗಿದೆ.

ನೆಲ್ಲೂರಲ್ಲಿ ಜಾತಿ ಗಲಭೆ

ಕೆಲವು ದಿನಗಳಿಂದ ನೆಲ್ಲೂರಲ್ಲಿ ಹಿಂದು ಮುಸ್ಲಿಂ ಜಾತಿ ಜಗಳವಾಗುತ್ತಿದ್ದು ಇನ್ನು ಅದರ ಶಾಂತವಾಗಿಲ್ಲ. ೭೦ ಜನರನ್ನು ಕೈದು ಮಾಡಲಾಗಿದೆ. ಡಾಕ್ಕಾದಲ್ಲಿಯೂ ದೊಂಬಿಯಾಗಿ ೮ ಜನರು ಮರಣ ಹೊಂದಿ ೧೧೬ ಜನರು ಗಾಯಗೊಂಡಿರುವರು.

ಮುಸ್ಲಿಂ ಲೀಗ್ ಸಭೆ

ಹೊಸ ದಿಲ್ಲಿಯಲ್ಲಿ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯು ಜಿನ್ನರ ಅಧ್ಯಕ್ಷತೆಯಿಂದ ಜರಗಿತು ಬಂಗಾಲ ಪಂಜಾಬುಗಳಿಂದ ಹೆಚ್ಚು ಕಡಿಮೆ ಪ್ರಮುಖರೆಲ್ಲಾ ಬಂದಿದ್ದರು. ಅಗಸ್ಟ್ ತಿಂಗಳಲ್ಲಿ ಮುಂಬಯಿ ವರ್ಕಿಂಗ್ ಕಮಿಟಿಯಲ್ಲಿ ಪಾಸಾದ ಠರಾವು ಸ್ವೀಕೃತವಾಯಿತು.

ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ ಲೀಗ್ ಬಹಿಷ್ಕಾರ

ಹಾಕಬೇಕೆಂದು ಒಮ್ಮತದ ನಿರ್ಣಯವಾಗಿದೆ ಲೀಗ್ ಪಕ್ಷದವರು ಅಧಿವೇಶನಕ್ಕೆ ಹೋಗುವುದಿಲ್ಲ. ಈ ಬಗ್ಗೆ ಜಿನ್ನರು ಹೇಳಿಕೆ ಕೊಟ್ಟಿರುವರು.

ಜಿನ್ನರ ಪತ್ರಿಕೆ

ಜಿನ್ನರು 'ದಿ ಡಾನ್' ಎಂಬ ಆಂಗ್ಲ ಭಾಷೆಯ ಹೊಸತಾದ ಪತ್ರಿಕೆಯೊಂದನ್ನು ಪ್ರಾರಂಭಿಸುವರೆಂದು ತಿಳಿದಿದೆ

ಭಾರತಕ್ಕೂ ನಾಗರಿಕ ಸ್ವಾತಂತ್ರ್ಯ ವಿರಬೇಕು

ವೆಲ್ಸರ ಅಭಿಪ್ರಾಯ

ಲಂಡನಿನಲ್ಲಿ ಒಂದು ಸಭೆ ಗೂಡಿ ಅದರಲ್ಲಿ ಅಟ್ಲಾಂಟಿಕ್ ಘೋಷಣೆ ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಚರ್ಚಿಲ್ ಹೇಳಿದ ವಿಷಯ ಚರ್ಚೆ ನಡೆಯಿತು. ಎಚ್. ಜಿ ವೆಲ್ಸ್, ಸೊರೆನ್ಸನ್, ಸಾಮುವೆಲ್ ಸಿಲ್ವರ್ ಮೇನ್ ಪ್ರೊ. ಹಾಲ್ಡೇನ್, ಎಡ್ವರ್ಡ್ ಥಾಮ್ಸನ್ ಮೊದಲಾದವರು ಸಭೆಗೆ ನೆರೆದಿದ್ದರು. ನೆಹರು ಮೊದಲಾದ ರಾಜಕೀಯ ಮುಂದಾಳುಗಳ ಬಿಡುಗಡೆಯಾಗುವಂತೆಯೂ ಭಾರತದ ಬಿಕ್ಕಟ್ಟು ಬಗೆ ಹರಿಸುವಂತೆಯೂ ಚರ್ಚಿಲರಲ್ಲಿ ಶಿಷ್ಟ ಮಂಡಳ ಕಳುಹಿಸುವ ನಿರ್ಣಯವಾಯಿತು. ಎಚ್ ಜಿ. ವೆಲ್ಸರು ಆ ಸಭೆಯಲ್ಲಿ ಮಾತನಾಡುತ್ತಾ ತಾನು ರಾಜಕೀಯದಲ್ಲಿ ಹೆಚ್ಚು ಆಸಕ್ತಿಯುಳ್ಳವನಲ್ಲವಾದರೂ ಭಾರತೀಯರಿಗೆ ನಾಗರಿಕ ಸ್ವಾತಂತ್ರ್ಯ ಕೊಡಬೇಕೆಂದು ವಾದಿಸುವವನಿದ್ದೇನೆ ಎಂದರು.

ಸುಭಾಸ ಬೋಸರ ಸ್ಥಾನಕ್ಕೆ ಚುನಾವಣೆ

ಕಲ್ಕತ್ತಾ ಕೋರ್ಪೊರೇಶನಿನ ಆಲ್ಡರ್ ಮೇನರಾದ ಶ್ರೀ ಸುಭಾಸ ಬೋಸರು ಕಳೆದ ಆರು ಸಭೆಗಳಿಗೆ ಗೈರುಹಾಜರಾದ ನಿಮಿತ್ತ, ಕೋರ್ಪೊರೇಶನಿನ ಮುಖ್ಯ ಎಕ್ಸಿಕುಟಿವ್ ಆಫೀಸರರು ಬೋಸರ ಸ್ಥಾನದಲ್ಲಿ ಇನ್ನೊಬ್ಬರನ್ನು ಚುನಾಯಿಸುವರೆ ಸಭೆಯೊಂದನ್ನು ಕರೆದಿರುವರು.

ಯುದ್ಧ ಮುಗಿವ ವರೆಗೆ ಕಾಂಗ್ರೆಸ್ ಅಧಿಕಾರ ವಹಿಸಲಾರದು

-ಗಾಂಧಿಜಿಯವರ ಅಭಿಪ್ರಾಯದ ಕುರಿತು ಹೇಳಿಕೆ

ಯುದ್ಧ ನಡೆಯುವಷ್ಟು ಕಾಲ ಕಾಂಗ್ರೆಸು ಬಹುಮತವುಳ್ಳ ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಬಾರದೆಂದು ಗಾಂಧಿಜಿಯವರ ಸ್ಪಷ್ಟ ಆಶಯ ವಿರುವುದಾಗಿ ಬಂಗಾಳದ ಶ್ರೀ ಕಿರಣ ಶಂಕರರಾಯರ ಹೇಳಿಕೆಯಾಗಿದೆ.

ಪ್ರೊ। ಇಂದ್ರರು ತಿರುಗಿ ಕಾಂಗ್ರೆಸಿಗೆ

ಶ್ರೀ। ಮುನ್ಶಿಯವರ ರಾಜಿನಾಮೆಯೊಡನೆ ಪ್ರೊ। ಇಂದ್ರರೆಂಬವರು ಹಿಂಸೆ ಅಹಿಂಸೆಯ ವಿಷಯ ಸಂದಿಗ್ಧರಾಗಿ ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜಿನಾಮೆಯಿತ್ತವರು ಈಗ ತಿರುಗಿ ಕಾಂಗ್ರೆಸ್ ಸದಸ್ಯರಾಗಿ ಸೇರಲಿಚ್ಛಿಸಿದ್ದಾರೆ.

ಪಟ್ಟಾಭಿ ಸಾಂಬ ಮೂರ್ತಿ, ಖೇರ್, ಮುರಾರ್ಜಿಗಳ ಬಿಡುಗಡೆ

ಸಂರಕ್ಷಣೆ ಕಾಯಿದೆ ಪ್ರಕಾರ ಸ್ಥಾನಬದ್ಧರಾಗಿ ವೆಲ್ಲೂರು ಸೆರೆಮನೆಯಲ್ಲಿ ತಳ್ಳಲ್ಪಟ್ಟಿದ್ದ ಡಾ। ಪಟ್ಟಾಭಿಯವರನ್ನು, ಮದ್ರಾಸು ಅಸೆಂಬ್ಲಿ ಅಧ್ಯಕ್ಷ ಶ್ರೀ. ಬುಲುಸು ಸಾಂಬಮೂರ್ತಿಯವರನ್ನು ಬಿಡುಗಡೆ ಮಾಡಲಾಯಿತೆಂದೂ, ಮುಂಬಯಿಯ ಮಾಜಿ ಪ್ರಧಾನ ಮಂತ್ರಿ ಬಿ ಜಿ. ಖೇರರನ್ನು, ಮಾಜಿ ಮಂತ್ರಿ ಮುರಾರ್ಜಿ ದೇಸಾಯಿಯರನ್ನು ಪುಣೆ ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತೆಂದೂ ತಿಳಿದಿದೆ.

ಸರಕಾರದ ಧೋರಣವನ್ನು ಖಂಡಿಸಿ ಯುದ್ಧ ಕಮಿಟಿಗೆ ರಾಜಿ ಕೊಟ್ಟರು

ಕಾಂಗ್ರೆಸಿಗೆ ಸೇರಿ ಸೇವೆ ಸಲ್ಲಿಸುವ ನಿರ್ಧಾರ

ಚಿತ್ತೂರಿನ ರೆಡ್ಡಿ ಜಾತಿಯ ಪ್ರಮುಖ ವ್ಯಾಪಾರಿಗಳೂ ಶ್ರೀಮಂತರೂ ಆದ ಶ್ರೀ ಪೊಲಕಾಲ ರಾಮಚಂದ್ರ ರೆಡ್ಡಿ ಎಂಬವರು ಯುದ್ಧ ಕಮಿಟಿಯ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟು, ಬ್ರಿಟಿಷ್ ಧೋರಣವನ್ನು ಖಂಡಿಸಿ, ಕಾಂಗ್ರೆಸಿಗೆ ಸೇರಿರುವೆನೆಂಬ ಪತ್ರವೊಂದನ್ನು ಜಿಲ್ಲಾ ಕಲೆಕ್ಟರರಿಗೆ ಬರೆದಿರುವರು. ಇವರು ಹಿಂದೆ ಯುದ್ಧ ಯತ್ನದಲ್ಲಿ ಸರಕಾರಕ್ಕೆ ಸಹಾಯ ಮಾಡಿದ್ದಲ್ಲದೆ, ಸ್ವತಃ ಒಂದು ಲಕ್ಷ ರೂಪಾಯಿ ಯುದ್ಧ ಬೋಂಡಿನಲ್ಲಿ ಕೊಟ್ಟಿರುವರು. ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಚರ್ಚಿಲರು ಹೇಳಿದ ವಿಷಯವನ್ನೋದಿ ಅವರಿಗೆ ಮನಸ್ಸು ನೊಂದಿತು. ವರ್ಧಾಕ್ಕೆ ತೆರಳಿ ಗಾಂಧಿಜಿಯವರ ದರ್ಶನ ಪಡೆದರು ಗಾಂಧಿಜಿ ಅವರಿಗೆ ಹೀಗೆಂದು ಉಪದೇಶಿಸಿದರು. "ಯುದ್ಧಕ್ಕೆ ಜನಧನ ಪ್ರಯತ್ನಗಳ ಸಹಾಯ ಕೊಟ್ಟಂತೆ ಕಾಂಗ್ರೆಸಿಗೂ ನಿಮ್ಮ ಸಹಾಯ ಸಲ್ಲಿಸಿರಿ." ಗಾಂಧಿಜಿ ಆಜ್ಞೆ ಶಿರಸಾ ವಹಿಸಿ ತಾನು ಕಾಂಗ್ರೆಸಿಗೆ ಸೇರಿ ರಾಷ್ಟ್ರದ ಸೇವೆ ಸಲ್ಲಿಸುವುದಾಗಿ ಅವರು ಆ ಪತ್ರದಲ್ಲಿ ವಿವರಿಸಿದ್ದಾರೆ.

ರಾಜಕೀಯ ಸ್ವಾತಂತ್ರ್ಯ ಸಿಗದೆ ಭಾರತವು ಅಭಿವೃದ್ಧಿ ಹೊಂದದು

ಎಚ್. ವಿ. ಕಾಮತರ ಹೇಳಿಕೆ

"ಸಾಮಾಜಿಕ ಆರ್ಥಿಕ ಅಭಿವೃದ್ಧಿಯಾಗಿ ಭರತ ದೇಶವು ಒಂದು ಶಕ್ತಿವಂತ ರಾಷ್ಟ್ರವಾಗಬೇಕಾದರೆ ರಾಜಕೀಯ ಸ್ವಾತಂತ್ರ್ಯವು ಸಿಗಬೇಕು; ಅದು ಸಿಗದೆ ವಿನಾ ನಮಗೆ ಸಾಮಾಜಿಕ ಆರ್ಥಿಕ ಅಭಿವೃದ್ಧಿಯಾಗಿ ರಾಷ್ಟ್ರೋದ್ಧಾರವಾಗುವುದು ಸಾಧ್ಯವಿಲ್ಲ" ಹೀಗೆಂದು ಬರಾಂಪುರದಲ್ಲಿ ನೆರೆದ ಫಾರ್ವರ್ಡ್ ಬ್ಲಾಕ್ ಸಭೆಯಲ್ಲಿ ಶ್ರೀ ಎಚ್. ವಿ. ಕಾಮತರು ಒಂದು ಭಾಷಣವೀಯುತ್ತಾ ಹೇಳಿದರು.

ನಾನಿತಾಲ್ ಚೇರ್‌ಮೇನನಾಗಿ ಪ್ರಥಮ ಭಾರತೀಯನು

ನಾನಿತಾಲ್ ಮುನ್ಸಿಪಲ್ ಬೋರ್ಡಿನ ಚೇರ್‌ಮೇನರಾಗಿ ಶ್ರೀ ಜೋಸಾಧ ಸಿಂಗರು ಪ್ರಥಮ ಸಲ ಭಾರತೀಯರೊಬ್ಬರು ಆರಿಸಲ್ಪಟ್ಟಿರುವರು.

ಮಗಳಿಗೆ ತಾಯಿಯ ಪತ್ರಗಳು

ನೆಹರು ಸೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು 'ನಾಳೆ ನಿನ್ನದು' ಎಂಬ ಪುಸ್ತಕವು ಪ್ರಕಟವಾಗಿದೆ ಅದರಲ್ಲಿ ಅವರು ಇತ್ತೀಚೆಗೆ ಸೆರೆಮನೆಯಿಂದ ತನ್ನ ಮಗಳಿಗೆ ಬರೆದ ಪತ್ರಗಳ ಸಂಗ್ರಹವಿದೆ ಆರೋಗ್ಯ, ವಿವಾಹ ಮೊದಲಾದ ವಿಷಯಗಳಲ್ಲಿ ಆ ಪತ್ರಗಳು ಬರೆಯಲ್ಪಟ್ಟಿವೆ

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಶ್ರೀ. ಶಾಂತಪ್ಪ ಕರ್ಕಡರ ಹೆಸರಿನಲ್ಲಿರುವ ನಂ. 440671 ಜೀವವಿಮಾ ಪೋಲಿಸಿಯು ಕಳೆದು ಹೋಗಿದೆ. ಈ ತಾರೀಕಿನಿಂದ ಒಂದು ತಿಂಗಳ ಒಳಗೆ ನಮಗೆ ಆಕ್ಷೇಪ ತಿಳಿಸದಿದ್ದಲ್ಲಿ, ಜೀವ ವಿಮಾದಾರನಿಗೆ ಪೋಲಿಸಿಯ ಸಂಪೂರ್ಣ ಸರೆಂಡರ್ ವೆಲ್ಯುವನ್ನು ಕೊಡಲಾಗುವುದು. ಮೇಲೆ ಹೇಳಿದ ಒಂದು ತಿಂಗಳ ಮೇಲೆ ಒಂದ ಯಾವತ್ತೂ ಅರ್ಜಿಗಳು ವಿಚಾರಮಾಡಲಾಗುವುದಿಲ್ಲ.

(ಸಹಿ) ಎಚ್ ಇ. ಜೋನ್

ಮುಂಬಯಿ ಮೆನೇಜರ್.

31-10-1941.

ಸಾದರ—ಸ್ವೀಕಾರ

ಸ್ಕೌಟರ ಚಿಕ್ಕ ಕೈಪಿಡಿ:—(1941)— ಬೇಡನ್ ಪವೇಲರ ಜೀವನ ಚರಿತ್ರೆ ಈಗಿನ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಸ್ಕೌಟರು, ಮಂಗಳ ಶಿಕ್ಷಣ—ಸ್ಕೌಟರ ಶಿಕ್ಷಣ ಇತ್ಯಾದಿ ವಿಷಯ (ಇಂಗ್ಲಿಷು ಮತ್ತು ಕನ್ನಡಗಳಲ್ಲಿ)ಗಳುಳ್ಳ ಕ್ರೌನ್ ⅛ ಆಕಾರದ ೬೮ ಪುಟಗಳುಳ್ಳ ಈ ಪುಸ್ತಕವು ಸ್ಕೌಟ್ ವಿದ್ಯಾರ್ಥಿಗಳಿಗೆ ಅವಶ್ಯವಾಗಿದೆ. ಪ್ರತಿಯೊಂದಕ್ಕೆ ೩ಆ. ಕ್ರಯ. ಮಂಗಳೂರು ಮುಲ್ಲಾಗ್ರಿಸ್ ಕೆಂಪತಿ ಸ್ಟೋರಿನಲ್ಲಿ ಇದು ಸಿಗುವುದು.

ಜಿಲ್ಲಾ ಸಮಾಚಾರಗಳು

ಶ್ರೀ. ಶೀನ ಶೆಟ್ಟರು ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಸತ್ಯಾಗ್ರಹಿಗಳಾದ ಶ್ರೀ. ಕೆ. ಶೀನ ಶೆಟ್ಟರು ಕಳೆದ ಶುಕ್ರವಾರ ಸಂಜೆ ೫ ಗಂಟೆಗೆ ಮೈದಾನಿನಲ್ಲಿ ನೆರೆದ ಜನಸಮೂಹದ ಮುಂದೆ ಯುದ್ಧ ವಿರುದ್ಧ ಘೋಷಿಸಿ ಎರಡನೆಯ ಸಲ ಸತ್ಯಾಗ್ರಹ ಮಾಡಿದರು. ಜಿ. ಕಾಂ. ಕಮಿಟಿಯ ಸಂಚಾಲಕರು ಮತ್ತು ಇತರರು ಸತ್ಯಾಗ್ರಹಿಗಳಿಗೆ ಹೂಮಾಲೆ ಹಾಕಿದರು. ಶ್ರೀಯುತರು ಬಂಧಿತರಾಗದ ಕಾರಣ ಯುದ್ಧ ವಿರುದ್ಧ ಘೋಷಿಸುತ್ತಾ ಮುಂದುವರಿದಿರುವರು. ಶ್ರೀಯುತರು ಮೊದಲನೆಯ ಸಲ ಸತ್ಯಾಗ್ರಹಮಾಡಿ ಹಿಂದಲ್ಲಿ ಮತ್ತು ಯರವಾಡ ಸೆರೆಮನೆಗಳಲ್ಲಿ ೩ ಕ್ಲಾಸಿನ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿ ಬಂದವರು.

ಶ್ರೀ. ಎಂ. ಡಿ. ಅಧಿಕಾರಿಗಳು ಎರಡನೆಯ ಸಲ ಸತ್ಯಾಗ್ರಹ ಮಾಡಿದ್ದಾರೆ

ಶ್ರೀ. ಎಂ. ಡಿ. ಅಧಿಕಾರಿಯವರು ತಾ. ೨೯ರ ದಿನ ಬೆಳಗ್ಗೆ ೯ ಗಂಟೆಗೆ ಸರಿಯಾಗಿ ವಿಶೇಷವಾಗಿ ನೆರೆದ ಜನಸ್ತೋಮದ ಮುಂದೆ ಕಾರ್ಕಳದಲ್ಲಿ ಯುದ್ಧವಿರುದ್ಧ ಘೋಷಣೆಗಳನ್ನು ಮಾಡಿ ಎರಡನೆಯ ಬಾರಿಗೆ ಸತ್ಯಾಗ್ರಹ ಮಾಡಿದರು. ಪೋಲೀಸರು ಅವರನ್ನು ಕೈದುಮಾಡಿ ಪ್ರಕೃತ ರಿಮಾಂಡಿನಲ್ಲಿ ಇಟ್ಟಿರುತ್ತಾರೆ.

ಹರಿಜನ ಸೇವಕ ಸಂಘ

ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಶ್ರೀ. ಎಸ್. ಮುಕುಂದ ರಾಯರ ಅಧ್ಯಕ್ಷತೆಯಿಂದ ಕೋರ್ಟ್ ಹಿಲ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಸಭೆ ಜರಗಿತು. ಜಿಲ್ಲಾ ಹರಿಜನ ಸೇವಕರಾದ ಶ್ರೀ. ಎನ್. ಎಸ್. ಕಿಲ್ಲೆಯವರು ಮಿಶ್ರ ಆಟದ ವಿಷಯವಾಗಿ ಮಾತನಾಡಿದರು. ಅಧ್ಯಕ್ಷರು ಹರಿಜನ ವಾರದಲ್ಲಿ ಜರಗಿಸಿದ ಮಿಶ್ರ ಆಟದಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆ ಮಾಡಿದರು.

ಮಹಾಸಭೆ

ಜಿಲ್ಲಾ ಹರಿಜನ ಸೇವಕ ಸಂಘದ ಮಹಾಸಭೆಯು ಕಳೆದ ಆದಿತ್ಯವಾರ ಸಂಜೆ ಡಿ. ಸಿ. ಎಂ ನಲ್ಲಿ ಡಾ। ಎಚ್ ವಿ ಆಡಪ್ಪರ ಅಧ್ಯಕ್ಷತೆಯಿಂದ ಕೂಡಿತು ಗತವರ್ಷದ ವರದಿ ಮತ್ತು ಲೆಕ್ಕಗಳು ಓದಿ ಮಂಜೂರುಗೊಳಿಸಲ್ಪಟ್ಟ ಮೇಲೆ ಮುಂದಿನ ವರ್ಷದ ಅಂದಾಜು ಪಟ್ಟಿ ಮಂಜೂರಾಯಿತು ಸಂಘವನ್ನು ರಿಜಿಸ್ಟ್ರೇಶನ್ ಮಾಡುವ ವಿಚಾರ ಅಂಗೀಕೃತವಾಯಿತು ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆಯಿತು. ಶ್ರೀಗಳಾದ ಡಾ। ಎಚ್. ವಿ ಆಡಪ್ಪ, ಎಂ ಎಸ್ ಪಿತಾಂಬರ ರಾವ್, ಡಾ। ಯು ಪಿ. ಮಲ್ಯ ಎಂ ಅಣ್ಣಪ್ಪ, ಎ ಬಿ. ಶೆಟ್ಟಿ, (ಎಂ ಎಲ್ ಎ) ಕೆ. ಈಶ್ವರ, (ಎಂ ಎಲ್ ಎ) ಉಡುಪಿ ಗೋವಿಂದರಾವ್. ಎಸ್. ಮುಕುಂದ ರಾವ್, ಎಸ್. ಜೆ ಸಾಲೆನ್ಸ ಮತ್ತು ಶ್ರೀಮತಿ ಶಾಂಭವಿ, ಆರ್ ಪೂಂಜ ಇವರು ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿರುವರು

ಸ್ವಾಗತ ಕೂಟ

ಯೂರೋಪು ಯಾತ್ರೆಯಿಂದ ಮರಳಿದ ಶ್ರೀಮತಿ ಕಮಲಾದೇವಿಯರಿಗೆ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಒಂದು ಸ್ವಾಗತಕೂಟವು ಕಳೆದ ಶನಿವಾರ ಸಂಜೆ ೬.೩೦ಕ್ಕೆ ಕಾಂಗ್ರೆಸ್ ಆಫೀಸಿನ ಬಳಿ ಪೆಲಿಕ್ಸ್ ಪೈ ಬಜಾರಿನಲ್ಲಿ ಜರಗಿತು. ಕಾಂಗ್ರೆಸ್ ಕೆಲಸಗಾರರೂ ಮಹನೀಯರೂ ಮಹಿಳೆಯರೂ ಪತ್ರಿಕೋದ್ಯಮಿಗಳೂ ಆಮಂತ್ರಿತರಾಗಿ ಬಂದಿದ್ದರು ಪ್ರಾರಂಭದಲ್ಲಿ ಕಾಫಿ ತಿಂಡಿ ಉಪಚಾರದ ಮೇಲೆ ಶ್ರೀಮತಿ ಕಮಲಾದೇವಿಯರೊಡನೆ ಯೂರೋಪಿನ ಪಂಸ್ಥಿತಿ ವಿಚಾರ ಕೆಲವರು ಪ್ರಶ್ನೆಗಳನ್ನು ಹಾಕಿದರು. ಅವರು ಅವುಗಳಿಗೆ ಉತ್ತರವಿತ್ತರು. ಜಿ. ಕಾಂ. ಕಮಿಟಿ ಸಂಚಾಲಕರಾದ ಶ್ರೀ. ದಾಮೋದರ ಬಾಳಿಗರು ಶ್ರೀಮತಿ ಕಮಲಾದೇವಿಯವರಿಗೂ ಆಮಂತ್ರಿತರಾಗಿ ಬಂದವರಿಗೂ ಕೃತಜ್ಞತೆ ಹೇಳಿದರು.

ಹಿಂಸೆ ಅಹಿಂಸೆಯ ಕುರಿತು ಚರ್ಚೆ

ಇದೇ ಕಳೆದ ತಾ. ೨೩ನೇ ಸಾಯಂಕಾಲ ಗಂಟೆ ೬.೩೦ಕ್ಕೆ ಕೆನರಾ ಹ್ಯಾಸ್ಕೂಲ್ ವಿದ್ಯಾರ್ಥಿನಿಯರ ತರ್ಕ ಸಂಘದ ಆಶ್ರಯದಲ್ಲಿ 'ಹಿಂಸೆ' ಮತ್ತು 'ಅಹಿಂಸೆ'ಯೆಂಬ ವಿಷಯದಲ್ಲಿ ಚರ್ಚೆಯ ಸಭೆಯು ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು.

ವಾರ್ಷಿಕೋತ್ಸವ

ಕದ್ರಿ ವಿದ್ಯಾ ಬೋಧಿನಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಶ್ರೀ. ಎಚ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ತಾಯಂದಿರ ದಿನಾಚರಣೆ ಶ್ರೀಮತಿ ಶಾಂಭವಿ, ಆರ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು.

ವರ್ಗ

ದಕ್ಷಿಣ ಕನ್ನಡದ ಮಂಗಳೂರು ಸಬ್ ಡಿವಿಜನಿನ ಹಂಗಾಮಿ ಪೋಲೀಸ್ ಡೆಪ್ಟಿ ಸುಪರಿಂಟೆಂಡೆಂಟರಾದ ಶ್ರೀ. ಆರ್. ಅನಂತರಾಮಯ್ಯ ಅವರಿಗೆ ತಂಜಾವೂರು ಸಬ್ ಡಿವಿಜನ್, ತಂಜಾವೂರಿಗೆ ವರ್ಗವಾಗಿ ಅವರ ಬದಲಿಗೆ ಇಲ್ಲಿಗೆ ರಜೆ ಮುಗಿದ ಬಳಿಕ ಹಂಗಾಮಿ ಪೋಲೀಸ್ ಡೆಪ್ಟಿ ಸುಪರಿಂಟೆಂಡೆಂಟ್ ರಾವ್ ಸಹೇಬ್ ಡಿ. ಎನ್ ಗೋಪಾಲ ಅಯ್ಯರರು ನೇಮಿಸಲ್ಪಟ್ಟಿದ್ದಾರೆ.

ಯುದ್ಧ ಚಿತ್ರಗಳು

ಮಂಗಳೂರು ನ್ಯೂ ಚಿತ್ರಾ ಟಾಕೀಸಿನಲ್ಲಿ ನವಂಬರ ತಾ. ೨೫ 'ದಿ ಹೇಂಡಿಮೇನ್' ಚಿತ್ರವೂ ೩೧ರಿಂದ ನವಂಬರ ೩ರ ವರೆಗೆ 'ಯಂಗ್ ವೆಟರನ್' ಎಂಬ ಚಿತ್ರವೂ, ದಶಂಬರ ತಾ. ೫ ರಿಂದ ೮ರ ವರೆಗೆ 'ಆಸ್ಟ್ರೇಲಿಯಾ ಹೇಸ್ ವಿಂಗ್ಸ್' ಚಿತ್ರವೂ, ದಶಂಬರ ತಾ. ೧೦ರಿಂದ ೧೫ರ ವರೆಗೆ 'ಮೊಬೈಲ್ ಕೇಂಟೀನ್' ಚಿತ್ರವೂ ಪ್ರದರ್ಶಿತವಾಗುವುದು.

ಹರಿಜನ ಲೇಬರ್ ಲೀಗ್

ಇದೇ ತಿಂಗಳ ತಾ ೨೬ನೇ ಆದಿತ್ಯವಾರ ಸಂಜೆ ಗಂಟೆ ೪ಕ್ಕೆ ಸರಿಯಾಗಿ ಲೀಗಿನ ಒಂದು ಮಹಾ ಸಭೆಯು ಬೋಳೂರು ಸಂಗಮ ಹರಿಜನ ಕೊಲನಿಯಲ್ಲಿ ಶ್ರೀ. ಕಂಕನಾಡಿ ಕುಕ್ರನವರ ಅಧ್ಯಕ್ಷತೆಯಲ್ಲಿ ಜರಗಿತು.

ನಗರ ಸಭೆ

ಬರುವ ಸೋಮವಾರ ಸಂಜೆ ೩-೩೦ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಮುನ್ಸಿಪಾಲಿಟಿ ಮೀಟಿಂಗು ಇದೆ

ಸಂಕ ದುರಸ್ತಿ

ಸೋಮೇಶ್ವರ ಕೋಟೇಶ್ವರ ಮಾರ್ಗದಲ್ಲಿ 17/5ರ ಮೈಲು ಕಲ್ಲಿನಲ್ಲಿರುವ ಹಾಲಾಡಿ ಸಂಕವು ವಾಹನ ಸಂಚಾರಕ್ಕೆ ಅನುಕೂಲವಾಗಿ ದುರಸ್ತಿಯಾಗಿದೆ ಎಂದು ಡಿ. ಬೋ. ಪ್ರೆಸಿಡೆಂಟರಾದ ಡಾ. ವಿಟ್ಠಲ ಶೆಟ್ಟರು ತಿಳಿಸುತ್ತಾರೆ.

ವಾರ್ಷಿಕ ಮಹಾಸಭೆಗೆ ನೋಟೀಸು

ಅಮ್ಮೆಂಬಳ ಸುಬ್ರಾಯ ಪೈ ಮೆಮೋರಿಯಲ್ ಫಂಡಿನ ವಾರ್ಷಿಕ ಮಹಾ ಸಭೆಯು ಕೆನರಾ ಹೈ ಸ್ಕೂಲಲ್ಲಿ ೧೬ನೇ ನವಂಬರ ೧೯೪೧ರಲ್ಲಿ ಪ್ರಾತ. ಗಂಟೆ ೧೦ಕ್ಕೆ ಜರಗಲಿರುವುದು.

ಶ್ರೀ ವಿವೇಕಾನಂದ ಸಭೆ

ಕೆನರಾ ಹ್ಯಾಸ್ಕೂಲಿನ ಶ್ರೀ. ಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಪೂರ್ವಾಹ್ನ ಗಂಟೆ ೮ರಿಂದ ೧೦ರ ವರೆಗೆ 2-10-1941 ಶ್ರೀ. ಮುಲ್ಕಿ ನರಸಿಂಹ ರಾವ್—ಅಭ್ಯಾಸಯೋಗ. 9-11-1941 ಬ್ರಹ್ಮಶ್ರೀ. ನಿಡ್ಲೋಡಿ ಅನಂತ ಉಪಾಧ್ಯಾಯರು—ಗೀತೆಯಲ್ಲಿ ಹೇಳಿದ ಯೋಗ 16-11-1941 [ಹಿಂದಿನಿಂದ ಜಾಹೀರು ಮಾಡಲಾಗುವದು] 23-11-1941 ಬ್ರಹ್ಮಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರು—ಗೀತೆಯಲ್ಲಿಯ ಕರ್ಮ ಯೋಗ ನಿರ್ವಚನ. 30 11 1941 ಶ್ರೀ. ಕೆ ವೆಂಕಟ್ರಾವ್ ಶ್ರೀ ರಾಮಕೃಷ್ಣ ಪರಮ ಹಂಸರ ಚರಿತ್ರೆಯೂ ವಚನಾಮೃತವೂ. ಸರ್ವರಿಗೂ ಸ್ವಾಗತವಿದೆ

ಭಾಷಣ

ತಾ. ೩೦ ರಂದು ಸಂಜೆಗೆ ಮಂಗಳೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕೇರಳ ಕ್ಲಬ್ಬಿನಲ್ಲಿ ಬೊಂಬಾಯಿಯಲ್ಲಿ ಪತ್ರಿಕೋದ್ಯಮಿಯಾಗಿರುವ ದಕ್ಷಿಣ ಕನ್ನಡಿಗರಾದ ಶ್ರೀ ಯು. ಬಿ. ರಾಯರು 'ಪತ್ರಿಕೋದ್ಯಮ'ದ ವಿಷಯ ಸಾರ್ವಜನಿಕ ಭಾಷಣವೀಯುತ್ತಾ, ಬಹಳ ಹಾಸ್ಯಸ್ವಾರಸ್ಯ ಪೂರ್ಣವಾಗಿ ಪತ್ರಿಕೋದ್ಯಮದಲ್ಲಿ ತನ್ನ ಅನುಭವಗಳನ್ನು ವಿವರಿಸಿ ಹೇಳಿದರು. ಶ್ರೀ ಸೀತಾರಾಮರಾಯರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಪದ್ಮನಾಭನ್ ಕೃತಜ್ಞತಾ ಸಮರ್ಪಣೆ ಮಾಡಿದರು.

ಸ್ವಾಗತ

ಸ್ಥಳೀಯ ಪತ್ರಿಕೋದ್ಯಮಿ ಸಂಘದವರು ಶ್ರೀಮತಿ ಕಮಲಾ ದೇವಿಯವರನ್ನು ಸ್ವಾಗತಿಸಲು ತಾ. ೩೦ ರಂದು ಸಂಜೆ ಥಿಯೊಸಫಿಕಲ್ ಲಾಜಿನಲ್ಲಿ ಒಂದು ಕೂಟವನ್ನೇರ್ಪಡಿಸಿದ್ದರು. ಪ್ರಾರಂಭದಲ್ಲಿ ಫಲಹಾರವಾದ ಮೇಲೆ ಶ್ರೀಮತಿಯವರೊಡನೆ ವಿದೇಶ ಪ್ರವಾಸದ ವಿಚಾರವಾಗಿ ಅನೇಕ ಪ್ರಶ್ನೆಗಳು ಕೇಳಲಾದವು ಅವುಗಳಿಗೆ ಅವರು ಉತ್ತರವಿತ್ತರು ಸಂಘದ ಅಧ್ಯಕ್ಷರಾದ ಶ್ರೀ ಕುದುಳ ಭೀಮರಾಯರು ಸಕಲರಿಗೂ ಕೃತಜ್ಞತೆ ಹೇಳಿದರು

ಕಾಸರಗೋಡು

ಹಿಂದುಸ್ಥಾನ ಸ್ಕೌಟ್

ಇಲ್ಲಿಯ ಎಲಿಮೆಂಟರಿ ಶಾಲಾ ಮೈದಾನಿನಲ್ಲಿ ಹಿಂದೂಸ್ಥಾನ ಸ್ಕೌಟ್ ಸಂಸ್ಥೆಯ ಪರವಾಗಿ, ಇಲ್ಲಿ ಒಂದು ಮಹಾಸಭೆಯು ಜರಗಿತು. ಶ್ರೀ. ನಾಗರೆಡ್ಡಿ ಇವರು ಅಧ್ಯಕ್ಷರಾಗಿದ್ದರು ಶ್ರೀ. ಯಂ ಎಸ್. ಮಾಧವರಾಯರೂ ಮತ್ತೆ ಶ್ರೀ ಭವಾನಿ ಶಂಕರರಾವ್ ಶ್ರೀ. ತಿಮ್ಮಪ್ಪ ಶೆಟ್ಟಿ, ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಶ್ರೀ. ರಾಜನ್, ಮತ್ತು ಅಧ್ಯ

[೬ನೆಯ ಪುಟವನ್ನು ನೋಡಿ]

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಗೊನೊಕಿಲರ್ (ರಿಜಿಸ್ಟರ್ಡ್)

ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೊದಲು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಪದೇಪದೇಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ. 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4.

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಸಿನಿಮಾ ಸುದ್ದಿ

ಸುಲೋಚನಾ ತಿರುಗಿ ತಮಿಳು ಚಿತ್ರದಲ್ಲಿ

ಒಮ್ಮೆ ಚಲಚ್ಚಿತ್ರ ರಾಣಿಯೆನಿಸಿದ ಸುಲೋಚನಾ ತಿರುಗಿ ಈಗ ತಮಿಳು ಚಿತ್ರದಲ್ಲಿ ಅಭಿನಯಿಸುವಳೆಂಬ ಸುದ್ದಿ. ಮದ್ರಾಸಿನಲ್ಲಿ ಎರಡು ಕಂಪೆನಿಗಳು ಅವಳನ್ನು ಕರೆದಿವೆಯೆಂದು ತಿಳಿದಿದೆ.

ನೇಶನಲ್ ಸ್ಟುಡಿಯೋ

ಈ ಕಂಪನಿಯವರ 'ನಿರ್ದೋಷ' ಚಿತ್ರ ಪೂರ್ಣವಾಯಿತು. (ನಲಿನೀ ಜಯವಂತ ಮುಖ್ಯಪಾತ್ರ) 'ಮ್ಯು ಜೀಶ್' 'ಗರೀಬ್' ಮತ್ತು 'ಸಯಿರೋಗ್ನಿ' ಚಿತ್ರಗಳು ಸಿದ್ಧವಾಗುತ್ತಿವೆ.

'ಸಂತ್ ರಾಯಿ ದಾಸ್' ಎಂಬ ಭಕ್ತಿ ಚಿತ್ರದಲ್ಲಿ ಹಂಸಾ ವಾಡ್ಕರ್ ಮತ್ತು ಶಾಹು ಮೋಡಕ್ ಅಭಿನಯಿಸುವರು. ಲಾಲ್ ಜಿ ಚಿತ್ರದಲ್ಲಿ ಯಶೋಧರಾ ಖಟ್ಟು ಮತ್ತು ಕೃಷ್ಣಕಾಂತರು ಅಭಿನಯಿಸುವರು. ದುರ್ಗಾ ಖೋಟೆ 'ವಿಜಯ'ದಲ್ಲಿ ಅಭಿನಯಿಸುವಳು.

ಮೀನಾಕ್ಷಿ

'ಮೀನಾಕ್ಷಿ' ಚಿತ್ರವನ್ನು ಮಾಧು ಬೋಸರು ನಿರ್ದೇಶಿಸುವರು ಸಾಧನಾ ಬೋಸಳ ನಟನೆ. ಅಹೀಂದ್ರ ಚೌಧರಿ, ಮತ್ತು ನಿರ್ದೇಶ ಮಿತ್ರರೆಂಬ ಬಂಗಾಳದ ನಾಟಕ ನಟರು ಇದರಲ್ಲಿ ಪಾತ್ರ ವಹಿಸುತ್ತಾರೆ.

'ಬಂಧನ್' ಚಿತ್ರದ ಸ್ವರ್ಣೋತ್ಸವ

'ಬಂಧನ್' ಚಿತ್ರವು ಕಲ್ಕತ್ತದಲ್ಲಿ ಐವತ್ತನೆಯ ವಾರವನ್ನು ದಾಟಿದೆ. ಭಾರತೀಯ ಚಿತ್ರಗಳಲ್ಲಿ ಈ ಕೀರ್ತಿ ಹಿಂದೆ 'ಸಂತ ತುಕಾರಾಮ್' ಚಿತ್ರಕ್ಕೆ ಮಾತ್ರ ಒದಗಿತ್ತು.

ಸೀದಾರಾಸ್ತಾ

ಓರಿಯಂಟ್ ಪಿಕ್ಚರ್ಸಿನವರ ಸೀದಾ ರಾಸ್ತಾ ಈ ಚಿತ್ರವು ಬೊಂಬಾಯಿಯಲ್ಲಿ ಪ್ರದರ್ಶಿತವಾಗುವುದು.

ಸಿನೆಮಾ ಪ್ರಿಯನಿಗೆ ತಲೆ ಕೆಟ್ಟಿತು

ಲೀಲಾ ದೇಸಾಯಿಯ ಆರಾಧಕ ಹಿಂದುಸ್ಥಾನದ ಪ್ರವಾಸಕ್ಕೆ ಹೊರಟಾಗ ಆತನೂ ಹಿಂದೆ ಹೊರಟ! ಹೋದ ಹೋದಲ್ಲಿ ಅವಳ ನರ್ತನ ನೋಡಿದ. ಇತ್ತೀಚೆಗೆ ನಾಲ್ಕು ತಿಂಗಳಿಂದ ಆಕೆಯಿಲ್ಲಿರುವಳೆಂಬ ವಿಷಯ ಆತನಿಗೆ ತಿಳಿದಿಲ್ಲವಂತೆ. ಹಾಗಾಗಿ ಆತನು ತನ್ನ ಹಲವು ಮಿತ್ರರನ್ನು ಕರೆದು ಒಂದು ಕೂಟ ಏರ್ಪಡಿಸಿ, ಅವರಿಗೆ ಭೋಜನ ಮಾಡಿಸಿ, ತನ್ನನ್ನು ಇನ್ನು ಮುಂದೆ ಲೀಲಾ ದೇಸಾಯಿಯೆಂದು ಕರೆಯಬೇಕೆಂದು ಕೇಳಿಕೊಂಡಿದ್ದಾನೆ! ಸಿನೆಮಾ ಪ್ರಿಯನಿಗೆ ತಲೆ ಕೆಟ್ಟು ಹೋಗಿದೆ!

ಶಾರವರ ಸ್ಥಾನದಲ್ಲಿ ಶಾಂತಾರಾಮ್

ಫಿಲ್ಮ್ ಎಡ್ವೈಸರಿ ಬೋರ್ಡಿನ ಪ್ರೊಡ್ಯೂಸರ್ ಆಗಿದ್ದ ಅಲೆಕ್ಸಾಂಡರ್ ಶಾ ನಿವೃತ್ತರಾದ ಮೇಲೆ ಪ್ರಭಾತದ ನಿರ್ದೇಶಕ ಶಾಂತಾರಾಮರು ಆ ಉದ್ಯೋಗದಲ್ಲಿ ನೇಮಕ ಹೊಂದಿದರೆಂದು ಬೊಂಬೇಯ ಮಿರರ್ ಪತ್ರಿಕೆ ಬರೆಯುತ್ತದೆ.

ಪ್ರಭಾತದಲ್ಲಿ ಶಾಂತಾರಾಮರು ಇನ್ನು ಪಾಲುದಾರರಾಗಿರಬಹುದಾಗಿದ್ದರೂ, ಮುಂದೆ ಪ್ರಭಾತ ಚಿತ್ರಗಳ ನಿರ್ದೇಶನ ಮಾಡಕೂಡದಾಗಿ ತಿಳಿಯುತ್ತದೆ.

ಸತ್ಯಮೂರ್ತಿಯವರಿಗೆ ಸತ್ಕಾರ

ಫಿಲ್ಮ್ ಇಂಡಿಯಾ ಪತ್ರಿಕೆಯ ಸಂಪಾದಕರಾದ ಬಾಬುರಾವ್ ಪಟೇಲರು ಶ್ರೀ. ಸತ್ಯಮೂರ್ತಿಯವರಿಗೆ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಅನೇಕ ಮಂದಿ ನಟನಟಿಯರು ಅದಕ್ಕೆ ಆಮಂತ್ರಿತರಾಗಿದ್ದರು. ಭಾರತದ ಕೀರ್ತಿ ಬೆಳಗಿಸುವಂತಹ ಚಿತ್ರಗಳನ್ನು ತಯಾರಿಸಬೇಕೆಂದು ಸತ್ಯಮೂರ್ತಿ ಹೇಳಿದರು.

ಹಾಲಿವುಡ್ಡಿಗೆ ರಾಜನರ್ತಕಿ

ರಾಜನರ್ತಕಿ (Court Dancer) ಎಂಬ ವಾಡಿಯಾ ಮುವಿಟೋನಿನವರ ಆಂಗ್ಲ ಭಾಷಾ ಚಿತ್ರವು ಹಾಲಿವುಡ್, ನ್ಯೂಯಾರ್ಕ್, ಲಂಡನ್, ಸಿನ್ಸಿನಾಟಿ, ಟೊರಾಂಟೊಗಳಲ್ಲಿ ಪ್ರದರ್ಶನವಾಗಲು ಏರ್ಪಾಡಾಗಿದೆ. ಹಿಂದೀ ಆವೃತ್ತಿಯಲ್ಲಿರುವಂತಹ ಅನಾವಶ್ಯಕ ಹಾಡುಗಳನ್ನೂ ವಿನೋದಗಳನ್ನೂ ಇದರಲ್ಲಿ ತೆಗೆದುಹಾಕಲಾಗಿದೆ.

ಅಲೆಕ್ಸಾಂಡರ್ ಶಾರ ಪ್ರಯಾಣ

ಭಾರತ ಸರಕಾರದವರು ಫಿಲ್ಮ್ ಅಡ್ವೈಸರಿ ಬೋರ್ಡ್ ಪ್ರೊಡ್ಯೂಸರರಾದ ಅಲೆಕ್ಸಾಂಡರ್ ಶಾರವರನ್ನು ಅಕ್ಟೋಬರ ತಾ. ...ರಂದು ಅವರ ಕೆಲಸದಿಂದ ನಿವೃತ್ತಿ ಮಾಡಿ ಇಂಗ್ಲೆಂಡಿಗೆ ಕಳುಹಿಸಿರುವರೆಂದು ತಿಳಿದಿದೆ.

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು.

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯೂ ಭಯಂಕರವಾದ. ಗಾಯ—ಎರಡೂ ಒಂದೇ ಸಮಾನ ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೊರೆಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment). ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದ ಕಲೆಗಳು ಮಾಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ ದಮ್ಮಿಗೆ ಒಂದೇ ಒಂದು ಉಪಾಯ

ದಮ್ಮು ಒಮ್ಮೆಲೇ ನಿಲ್ಲಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರಿಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಪಡಿಸುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಇದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ಕಫ ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ಚುರುಕಾಗುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ಕೆಮ್ಮು, ಕಫ, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ, ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. ...; ರೂ. ... ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ:—

ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಇಲ್ಲವೇ ಮೆ॥ ವನಮಾಳೀ ಭೀಖಾ ಮತ್ತು ಕಂ., ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

The Canara Banking Corporation Ltd.

(Incorporated in British India)

Estd. 1906.

LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS.

Banking business of every description transacted.

Full particulars can be had from any of our Branches.

ವಿಜ್ಞಾನಯುಗ

ಚಿಂತೆಯಿಂದ ಅಜೀರ್ಣ

ಹಣದ ತೊಂದರೆ ಮತ್ತು ಇತರ ಚಿಂತೆಗಳಿಂದ ಮನುಷ್ಯನಿಗೆ ಅಜೀರ್ಣ ಸುರುವಾಗುವುದೆಂದು ಇತ್ತೀಚೆಗೆ ವಿಜ್ಞಾನಿಗಳು ಕಂಡು ಹಿಡಿದಿರುವರು.

ಚಿಂತೆಯಲ್ಲಿದ್ದಾಗ, ಹೊಟ್ಟೆಗೆ ಬಾಯಿಯಿಂದ ಹೋಗುವ ನಾಳವು ಉದ್ರೇಕಗೊಳ್ಳುವುದು. ಇದರಿಂದಾಗುವ ತೊಂದರೆಯಿಂದರೆ ಹಲವು ಸಲ ಅಪಾಯವೂ ಆಗುವುದು.

ಒಮ್ಮೆ ತನ್ನ ಗಂಡನು ಸತ್ತನೆಂಬ ವಿಷಯವನ್ನು ಊಹಿಸಲು ಒಬ್ಬ ಹೆಂಗುಸಿಗೆ ಹೇಳಿದಾಗ ಆಕೆಯ ಇಡೀ ಜೀರ್ಣಾಂಗವೇ ನಿಂತು ಹೋಯಿತಂತೆ!

ಮಾಂಸ ಖಂಡಗಳು ಕೆಲಸ ಮಾಡದಿರುವ ಮನುಷ್ಯನೊಬ್ಬನು, ಇಡೀ ದಿನ ಬೇಕಾದಷ್ಟು ವೆಚ್ಚಮಾಡಿ ಒಮ್ಮೆ ಆನಂದಪಡುವುದನ್ನು ಊಹಿಸಲು ಹೇಳಿದಾಗ ಆತನ ಮಾಂಸ ಖಂಡಗಳು ಯಥಾಸ್ಥಿತಿಗೆ ಬಂದುವಂತೆ.

ತರಕಾರಿಗಳಲ್ಲಿರುವ ವಿಟೆಮಿನ್‌ಗಳು

ತರಕಾರಿಗಳಲ್ಲಿರುವ ವಿಟೆಮಿನ್ (ಜೀವಾತು) ಗಳು ಉಳಿಯಬೇಕಾದರೆ ಅವುಗಳನ್ನು ಪಾಕ ಮಾಡುವುದರಲ್ಲಿ ವಿಶೇಷ ಜಾಗ್ರತೆ ಬೇಕು; ಇಲ್ಲವಾದರೆ ಅವುಗಳು ಲೋಪವಾಗುವವೆಂದು ಬ್ರಿಟಿಷ್ ವೈದ್ಯ ಪತ್ರಿಕೆಯೊಂದು ಬರೆಯುತ್ತದೆ

ಅನೇಕ ವಿಟೆಮಿನ್‌ಗಳು ಸರಿ ಅಡಿಗೆ ಮಾಡದಿರುವುದರಿಂದ ಮಾತ್ರವಲ್ಲ, ಸರಿಯಾಗಿ ತರಕಾರಿಗಳನ್ನು ತುಂಡು ಮಾಡದಿದ್ದರೂ ನಾಶವಾಗುವವೆಂದು ಅದರಲ್ಲಿ ಬರೆದಿದೆ.

ವಿಟೆಮಿನ್ 'ಎ' ಯು ಕುದಿವ ವರೆಗೆ ನಿಲ್ಲುವುದು. ತರಕಾರಿಗಳನ್ನು ತುಂಡು ಮಾಡಿದರೆ ಅದರಿಂದ ಹೊರಡುವ ರಸದೊಡನೆ ಅದೂ ಹೋಗಿ ಬಿಡುವುದು. ಮತ್ತೆ ತರಕಾರಿಗಳನ್ನು ತೊಳೆಯುವಾಗ, ತುಂಬಾ ಸಮಯ ಕುದಿಸುವಾಗ ಹಲವು ವಿಟೆಮಿನ್‌ಗಳು ಸಂಪೂರ್ಣ ನಾಶವಾಗುವವು.

ಬಳಸುವುದರ ಸ್ವಲ್ಪ ಮೊದಲು ಬೇಗನೇ ತರಕಾರಿಗಳನ್ನು ಅಡಿಗೆ ಮಾಡಬೇಕೆಂದು ಆ ಪತ್ರಿಕೆಯಲ್ಲಿ ಸೂಚನೆಯಿದೆ. ಅಡಿಗೆ ಮಾಡುವಾಗಲೂ ನೀರು ಕಡಿಮೆ ಉಪಯೋಗಿಸುವುದು ಒಳ್ಳೆಯದು. ಉಪ್ಪು, ವಿನೆಗಾರ್‌ಗಳು ವಿಟಮಿನ್ ಉಳಿಸುವವು. ಸೋಡಾ ಉಪಯೋಗಿಸ ಕೂಡದು.

ಹೆನ್ರಿಫೋರ್ಡರ ಹೊಸ ತರದ ಕಾರು

ಹೆನ್ರಿಫೋರ್ಡರು ಹೊಸ ತರದ ಕಾರನ್ನು ತಯಾರಿಸಿರುವರು. ಇದನ್ನು ಡೀರ್ ಬೋರ್ನಿನಲ್ಲಿ ಪ್ರದರ್ಶಿಸಲಾಯಿತು. ಫೋರ್ಡರ ಹಲವು ಕಾಲದ ಕನಸು ಇಂದು ಕಾರ್ಯರೂಪಕ್ಕಿಳಿದಿದೆ.

ವಿಚಿತ್ರ ಪ್ರಪಂಚ

ರೋಪ್‌ಟ್ರಿಕ್ ಸತ್ಯವಲ್ಲವಂತೆ

ಭಾರತದಲ್ಲಿ ಹಲವರು ಇಂದ್ರ ಜಾಲಿಕರೂ ಹಗ್ಗವನ್ನು ಆಧಾರವಿಲ್ಲದೆ ನಿಲ್ಲಿಸುವ ಒಂದು ತಂತ್ರ (ಇಂಡಿಯನ್ ರೋಪ್‌ಟ್ರಿಕ್) ಮಾಡುತ್ತಾರೆಂದು ಜಗತ್ಪ್ರಸಿದ್ಧವಾಗಿದೆ. ಈ ತಂತ್ರದ ವಿಷಯವು ಸತ್ಯವಾದುದಲ್ಲವೆಂದು 'ಲೈಫ್' ಎಂಬ ಅಮೇರಿಕನ್ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ

ಈ ವಿಷಯ ಪಾಶ್ಚಾತ್ಯವೈಜ್ಞಾನಿಕರು, ಪ್ರೊಫೆಸರರು ಹಲವರು ಬಹಳವಾದ ವಿಚಾರ ಮಾಡಿದರು. ಯಾರಿಗೂ ಅದರ ಅರ್ಥವಾಗಲಿಲ್ಲವೆಂಬುದರಿಂದ ಅದು ಸತ್ಯವಾದುದಲ್ಲವೆಂದು ಅದರಲ್ಲಿ ಹೇಳಲಾಗಿದೆ. ಆದರೆ ಭಾರತದಲ್ಲಿ ರೋಪ್‌ಟ್ರಿಕ ಮಾಡುವವರು ಕೆಲವರಿದ್ದಾರೆಂದು ನಮಗೆ ತಿಳಿದಿದೆ.

ಅದೃಶ್ಯವಾಗುವ ಕೆರೆ

ಟರ್ಕಿಯ ಸೋಗಾಲ್ಲಾ ಎಂಬ ಕೆರೆಯು ಪ್ರತಿ ವಸಂತ ಕಾಲದಲ್ಲಿ ಅದೃಶ್ಯವಾಗುವುದೆಂದು ತಿಳಿಯುತ್ತದೆ.

ಆ ಕೆರೆಯು ಆರಿದಾಗ ಅದರ ತಳದಲ್ಲಿ ಬೀಜ ಹಾಕಿ ಬೆಳೆ ಮಾಡುವರು. ಅದರ ಸಲುವಾಗಿ ಬೇಸಾಯಗಾರರು ಹರದಾರಿ ದೂರದಿಂದ ಅಲ್ಲಿಗೆ ಬರುತ್ತಾರೆ. ಕೆರೆಯ ತಳವನ್ನು ಉಳುವುದು ಬೇಡ ಅವರು ಅದರ ಸುತ್ತು ಡೇರೆ ಕಟ್ಟಿ ವಾಸಿಸುವರು ಬೇಸಾಯ ಮುಗಿದು ಬೆಳೆ ಬಂದ ಮೇಲೆ ಅಲ್ಲಿಂದ ಹೋಗುವರು.

ಕಾರುಗಳಿಗೆ ನೀಲಗಿರಿ ಎಣ್ಣೆ

ನೀಲಗಿರಿ ಎಣ್ಣೆಯನ್ನು ಮೋಟರು ಕಾರುಗಳಿಗೆ ಉಪಯೋಗಿಸಲು ಆಗುತ್ತದೆಂದು ತಿಳಿದಿದೆ. ಪೆಟ್ರೋಲ್ ಮತ್ತು ನೀಲಗಿರಿ ಎಣ್ಣೆ ಮಿಶ್ರಣವನ್ನು ಸ್ವಲ್ಪ ಕಾಲದ ಹಿಂದೆಯೇ ಕೆಲವರು ಉಪಯೋಗಿಸಿರುವರೆಂದೂ ಗೊತ್ತಾಗಿದೆ. ಆಸ್ಟ್ರೇಲಿಯದಲ್ಲಿ ಈ ಪ್ರಯೋಗವು ಹೆಚ್ಚು ಪಸರಿಸಿತ್ತು.

ನೀಲಗಿರಿ ಎಣ್ಣೆಯನ್ನು ಇದಕ್ಕೆ ಹೊಸ ರೀತಿಯಿಂದ ತಯಾರಿಸುವರು. ಇದನ್ನು ಉಪಯೋಗಿಸುವ ವಿಷಯ ಬ್ರಿಟನಿನ ಮೋಟರಿನವರು ಸರಕಾರಕ್ಕೆ ಬರೆದಿರುವರು. ಅದರಲ್ಲಿ ಪ್ರಯೋಗ ಸಂಶೋಧನೆಗಳು ನಡೆಯುತ್ತಾ ಇವೆ.

ಇದು ಸೋಯಾಬೀನ್, ಗೋಧಿ, ಹತ್ತಿ, ಚರ್ಮ ಮತ್ತು ಎಣ್ಣೆ ರಬ್ಬರ್ ಗಳ ಮಿಶ್ರಣದಿಂದ ಮಾಡಲಾಗಿದೆ. ಇದು ಇತರ ಗಳಾ ಮೋಟರುಗಳಂತೆಯೇ ಇದೆ. ಈ ಬೋಡಿಯು ಮೊದಲಿನ ೩,೦೦೦ ರಾತಲು ಭಾರದಿಂದ ೨,೦೦೦ ರಾತಲು ಭಾರಕ್ಕೆ ಇಳಿದಿದೆ.

ಇದರ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ಪ್ರಗತಿಗಳು ಇನ್ನೂ ಆಗಲಿರುವುದರಿಂದ ಇದನ್ನು ವಿಶೇಷವಾಗಿ ಈಗ ತಯಾರಿಸಿರುವುದಿಲ್ಲ.

ನಿಮ್ಮ ಗಂಟಲು ಮತ್ತು ಶ್ವಾಸಕೋಶವನ್ನು ರಕ್ಷಿಸಿರಿ

ಪೆಪ್ಸ್ ಉಪಯೋಗಿಸಿರಿ

ನೀವು ಕಫ, ಶೀತ, ಗಂಟಲು ನೋವು ಮೊದಲಾದ ಅನಾರೋಗ್ಯಗಳಿಂದ ನರಳುತ್ತಿರುವದರೆ ಕೂಡಲೇ ವಿಷಹಾರೀ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ನೀವು ಬೇಗನೇ ಗುಣಹೊಂದುತ್ತೀರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ್ ಕರಗಿ, ಔಷಧಿಮಯವಾದ ರಸವನ್ನು ಹೊರಡಿಸುತ್ತದೆ. ಅದು ಶ್ವಾಸದೊಡನೆ ಸೇರಿ ಶ್ವಾಸಕೋಶಕ್ಕೆ ಹೋಗುತ್ತದೆ ಪೆಪ್ಸ್ ಹೀಗೆ ಸಾಂಕ್ರಾಮಿಕ ವಿಷಾಣುಗಳನ್ನು ಕೊಲ್ಲುವುದು. ಪೆಪ್ಸ್ ಗಂಟಲು ನೋವನ್ನು ಗುಣಪಡಿಸುತ್ತದೆ. ಎದೆಗೂ ಶ್ವಾಸಕೋಶಕ್ಕೂ ಇದು ಎಲ್ಲಾ ಸಮಯವೂ ಅತ್ಯುಪಯುಕ್ತ ಔಷಧಿಯು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ್ ಒಂದು ರೂಪಾಯಿ ಬೆಲೆಗೆ ದೊರಕುತ್ತದೆ.

ಏಜಂಟರು—

ಮೆಸರ್ಸ್ ಡಾಧಾ ಎಂಡ್ ಕೊ.,

ಪಾರ್ಕ್ ಟೌನ್ ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ' ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

BHUVANENDRA PRODUCTS LTD.,

Head Office and Factory: KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ
ಡಾ। ಎಮ್. ಎಸ್. ಪ್ರಭು, M. B B S ಪಿ ಪಿ ಸಿ ಬಿಲ್ಡಿಂಗ್.

THE PIE-MONEY BANK, LTD.
Maidan Road, MANGALORE.

Undertakes all kinds of Banking Business. Current Account at 3½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars—
K R. GURU, *Managing Director*

The Bank of Mangalore Limited.

Branches —MOODABIDRI & PADUBIDRI
HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3% to 5%.

INTEREST PAYABLE QUARTERLY

Interest on Savings Bank Deposits allowed at 2½%

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ಜೊಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕುಳಗುಂದ ಜಾನುವಾರ ಸಂತೆ
4-11-1941ರಿಂದ 17-11-1941

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ.
18-11-1941

ಶ್ರೀ ಸುಬ್ರಹ್ಮಣ್ಯ ಷಷ್ಠಿ ಮಹೋತ್ಸವ.
24-11-1941

ಪ್ರಯಾಣಿಕರ ಮತ್ತು ಯಾತ್ರಾ ಸ್ಥಳಗಳಿಗೆ ಹೋಗಲಿಚ್ಛಿಸುವ ಯಾತ್ರಾರ್ಥಿಗಳ ಅನುಕೂಲತೆಗಾಗಿ ಇದೇ ಬರುವ 1-11-1941ರಿಂದ 30-11-1941ರ ವರೆಗೆ ಮೇಲ್ಕಂಡ ಸ್ಥಳಗಳಿಗೆ ಅಗತ್ಯವಿದ್ದಲ್ಲಿ

ಸ್ಪೆಶಲು ಸರ್ವಿಸುಗಳನ್ನು ಚಾಲುಮಾಡುವ ಏರ್ಪಾಟನ್ನು ಮಾಡಲಾಗುವುದು

ಹೆಚ್ಚಿನ ವಿವರವನ್ನು ಕೆಳಗಿನ ವಿಲಾಸಕ್ಕೆ ಬರೆದು ಅಥವಾ ಸ್ವತಃ ಕೇಳಿ ತಿಳಕೊಳ್ಳಬಹುದು

THE JOINT MANAGERS,
The Combined Booking Agency, Mangalore.

ವಿಜ್ಞಾನಯುಗ

ಚಿಂತೆಯಿಂದ ಅಜೀರ್ಣ

ಹಣದ ತೊಂದರೆ ಮತ್ತು ಇತರ ಚಿಂತೆಗಳಿಂದ ಮನುಷ್ಯನಿಗೆ ಅಜೀರ್ಣ ಸುರುವಾಗುವುದೆಂದು ಇತ್ತೀಚೆಗೆ ವಿಜ್ಞಾನಿಗಳು ಕಂಡು ಹಿಡಿದಿರುವರು

ಚಿಂತೆಯಲ್ಲಿದ್ದಾಗ, ಹೊಟ್ಟೆಗೆ ಬಾಯಿಯಿಂದ ಹೋಗುವ ನಾಳವು ಉದ್ರೇಕಗೊಳ್ಳುವುದು. ಇದರಿಂದಾಗುವ ತೊಂದರೆಯಿಂದರೆ ಹಲವು ಸಲ ಅಪಾಯವೂ ಆಗುವುದು.

ಒಮ್ಮೆ ತನ್ನ ಗಂಡನು ಸತ್ತನೆಂಬ ವಿಷಯವನ್ನು ಊಹಿಸಲು ಒಬ್ಬ ಹೆಂಗುಸಿಗೆ ಹೇಳಿದಾಗ ಆಕೆಯ ಇಡೀ ಜೀರ್ಣಾಂಗವೇ ನಿಂತು ಹೋಯಿತಂತೆ!

ಮಾಂಸ ಖಂಡಗಳು ಕೆಲಸ ಮಾಡದಿರುವ ಮನುಷ್ಯನೊಬ್ಬನು, ಇಡೀ ದಿನ ಬೇಕಾದಷ್ಟು ವೆಚ್ಚಮಾಡಿ ಒಮ್ಮೆ ಆನಂದ ಪಡುವುದನ್ನು ಊಹಿಸಲು ಹೇಳಿದಾಗ ಆತನ ಮಾಂಸ ಖಂಡಗಳು ಯಥಾಸ್ಥಿತಿಗೆ ಬಂದುವಂತೆ.

ತರಕಾರಿಗಳಲ್ಲಿರುವ ವಿಟೆಮಿನ್‌ಗಳು

ತರಕಾರಿಗಳಲ್ಲಿರುವ ವಿಟಮಿನ್ (ಜೀವಾತು) ಗಳು ಉಳಿಯಬೇಕಾದರೆ ಅವುಗಳನ್ನು ಪಾಕ ಮಾಡುವುದರಲ್ಲಿ ವಿಶೇಷ ಜಾಗ್ರತೆ ಬೇಕು, ಇಲ್ಲವಾದರೆ ಅವುಗಳು ಲೋಪವಾಗುವವೆಂದು ಬ್ರಿಟಿಷ್ ವೈದ್ಯ ಪತ್ರಿಕೆಯೊಂದು ಬರೆಯುತ್ತದೆ

ಅನೇಕ ವಿಟಮಿನ್‌ಗಳು ಸರಿ ಅಡಿಗೆ ಮಾಡದಿರುವುದರಿಂದ ಮಾತ್ರವಲ್ಲ, ಸರಿಯಾಗಿ ತರಕಾರಿಗಳನ್ನು ತುಂಡು ಮಾಡದಿದ್ದರೂ ನಾಶವಾಗುವವೆಂದು ಅದರಲ್ಲಿ ಬರೆದಿದೆ.

ವಿಟಮಿನ್ 'ಎ' ಯು ಕುದಿವ ವರೆಗೆ ನಿಲ್ಲುವುದು. ತರಕಾರಿಗಳನ್ನು ತುಂಡು ಮಾಡಿದರೆ ಅದರಿಂದ ಹೊರಡುವ ರಸದೊಡನೆ ಅದೂ ಹೋಗಿ ಬಿಡುವುದು. ಮತ್ತೆ ತರಕಾರಿಗಳನ್ನು ತೊಳೆಯುವಾಗ, ತುಂಬಾ ಸಮಯ ಕುದಿಸುವಾಗ ಹಲವು ವಿಟಮಿನ್‌ಗಳು ಸಂಪೂರ್ಣ ನಾಶವಾಗುವವು.

ಬಳಸುವುದರ ಸ್ವಲ್ಪ ಮೊದಲು ಬೇಗನೇ ತರಕಾರಿಗಳನ್ನು ಅಡಿಗೆ ಮಾಡಬೇಕೆಂದು ಆ ಪತ್ರಿಕೆಯಲ್ಲಿ ಸೂಚನೆಯಿದೆ ಅಡಿಗೆ ಮಾಡುವಾಗಲೂ ನೀರು ಕಡಿಮೆ ಉಪಯೋಗಿಸುವುದು ಒಳ್ಳೆಯದು. ಉಪ್ಪು, ವಿನೆಗಾರ್‌ಗಳು ವಿಟಮಿನ್ ಉಳಿಸುವವು ಸೋಡಾ ಉಪಯೋಗಿಸ ಕೂಡದು.

ಹೆನ್ರಿಫೋರ್ಡ್ಡರ ಹೊಸ ತರದ ಕಾರು

ಹೆನ್ರಿ ಫೋರ್ಡರು ಹೊಸ ತರದ ಕಾರನ್ನು ತಯಾರಿಸಿರುವರು. ಇದನ್ನು ಡೀರ್ ಬೋರ್ನಿನಲ್ಲಿ ಪ್ರದರ್ಶಿಸಲಾಯಿತು. ಫೋರ್ಡರ ಹಲವು ಕಾಲದ ಕನಸು ಇಂದು ಕಾರ್ಯರೂಪವೆತ್ತಿದೆ.

ವಿಚಿತ್ರ ಪ್ರಪಂಚ

ರೋಪ್‌ಟ್ರಿಕ್ ಸತ್ಯವಲ್ಲವಂತೆ

ಭಾರತದಲ್ಲಿ ಹಲವರು ಇಂದ್ರಜಾಲಿಕರೂ ಹಗ್ಗವನ್ನು ಆಧಾರವಿಲ್ಲದೆ ನಿಲ್ಲಿಸುವ ಒಂದು ತಂತ್ರ (ಇಂಡಿಯನ್ ರೋಪ್‌ಟ್ರಿಕ್) ಮಾಡುತ್ತಾರೆಂದು ಜಗತ್ಪ್ರಸಿದ್ಧವಾಗಿದೆ ಈ ತಂತ್ರದ ವಿಷಯವು ಸತ್ಯವಾದುದಲ್ಲವೆಂದು 'ಲೈಫ್' ಎಂಬ ಅಮೇರಿಕನ್ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ

ಈ ವಿಷಯ ಪಾಶ್ಚಾತ್ಯ ವೈಜ್ಞಾನಿಕರು, ಪ್ರೊಫೆಸರರು ಹಲವರು ಬಹಳವಾದ ವಿಚಾರ ಮಾಡಿದರು ಯಾರಿಗೂ ಅದರ ಅರ್ಥವಾಗಲಿಲ್ಲವೆಂಬುದರಿಂದ ಅದು ಸತ್ಯವಾದುದಲ್ಲವೆಂದು ಅದರಲ್ಲಿ ಹೇಳಲಾಗಿದೆ ಆದರೆ ಭಾರತದಲ್ಲಿ ರೋಪ್‌ಟ್ರಿಕ ಮಾಡುವವರು ಕೆಲವರಿದ್ದಾರೆಂದು ನಮಗೆ ತಿಳಿದಿದೆ

ಅದೃಶ್ಯವಾಗುವ ಕೆರೆ

ಟರ್ಕಿಯ ಸೋಗ್ಲಾ ಎಂಬ ಕೆರೆಯು ಪ್ರತಿ ವಸಂತ ಕಾಲದಲ್ಲಿ ಅದೃಶ್ಯವಾಗುವುದೆಂದು ತಿಳಿಯುತ್ತದೆ.

ಆ ಕೆರೆಯು ಆರಿದಾಗ ಆರಿದ ತಳದಲ್ಲಿ ಬೀಜ ಹಾಕಿ ಬೆಳೆ ಮಾಡುವರು. ಅದರ ಸಲುವಾಗಿ ಬೇಸಾಯಗಾರರು ಹರದಾರಿ ದೂರದಿಂದ ಅಲ್ಲಿಗೆ ಬರುತ್ತಾರೆ. ಕೆರೆಯ ತಳವನ್ನು ಉಳುವುದು ಬೇಡ, ಅವರು ಅದರ ಸುತ್ತು ಡೇರೆ ಕಟ್ಟಿ ವಾಸಿಸುವರು. ಬೇಸಾಯ ಮುಗಿದು ಬೆಳೆ ಬಂದ ಮೇಲೆ ಅಲ್ಲಿಂದ ಹೋಗುವರು

ಕಾರುಗಳಿಗೆ ನೀಲಗಿರಿ ಎಣ್ಣೆ

ನೀಲಗಿರಿ ಎಣ್ಣೆಯನ್ನು ಮೋಟರು ಕಾರುಗಳಿಗೆ ಉಪಯೋಗಿಸಲು ಆಗುತ್ತದೆಂದು ತಿಳಿದಿದೆ. ಪೆಟ್ರೋಲ್ ಮತ್ತು ನೀಲಗಿರಿ ಎಣ್ಣೆ ಮಿಶ್ರಣವನ್ನು ಸ್ವಲ್ಪ ಕಾಲದ ಹಿಂದೆಯೇ ಕೆಲವರು ಉಪಯೋಗಿಸಿರುವರೆಂದೂ ಗೊತ್ತಾಗಿದೆ ಆಸ್ಟ್ರೇಲಿಯದಲ್ಲಿ ಈ ಪ್ರಯೋಗವು ಹೆಚ್ಚು ಪಸರಿಸಿತ್ತು.

ನೀಲಗಿರಿ ಎಣ್ಣೆಯನ್ನು ಇದಕ್ಕೆ ಹೊಸ ರೀತಿಯಿಂದ ತಯಾರಿಸುವರು. ಇದನ್ನು ಉಪಯೋಗಿಸುವ ವಿಷಯ ಬ್ರಿಟನಿನ ಮೋಟರಿನವರು ಸರಕಾರಕ್ಕೆ ಬರೆದಿರುವರು ಅದರಲ್ಲಿ ಪ್ರಯೋಗ ಸಂಶೋಧನಗಳು ನಡೆಯುತ್ತಾ ಇವೆ.

ಇದು ಸೋಯಾಬೀನ್, ಗೋಧಿ, ಹತ್ತಿ, ಚರ್ಮ ಮತ್ತು ಎಣ್ಣೆ ರಬ್ಬರ್‌ಗಳ ಮಿಶ್ರಣದಿಂದ ಮಾಡಲಾಗಿದೆ. ಇದು ಇತರ ಗಳಿತ ಮೋಟರು ಗಳಂತೆಯೇ ಇದೆ. ಈ ಜೋಡಿಯು ಮೊದಲಿನ ೩,೦೦೦ ರಾತಲು ಭಾರದಿಂದ ೨,೦೦೦ ರಾತಲು ಭಾರಕ್ಕೆ ಇಳಿದಿದೆ.

ಇದರ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ಪ್ರಗತಿಗಳು ಇನ್ನೂ ಆಗಲಿರುವುದರಿಂದ ಇದನ್ನು ವಿಶೇಷವಾಗಿ ಈಗ ತಯಾರಿಸಿರುವುದಿಲ್ಲ.

ನಿಮ್ಮ ಗಂಟಲು ಮತ್ತು ಶ್ವಾಸಕೋಶವನ್ನು ರಕ್ಷಿಸಿರಿ

ಪೆಪ್ಸ ಉಪಯೋಗಿಸಿರಿ

ನೀವು ಕಫ, ಶೀತ, ಗಂಟಲು ನೋವು ಮೊದಲಾದ ಅನಾರೋಗ್ಯಗಳಿಂದ ನರಳುತ್ತಿದ್ದರೆ ಕೂಡಲೇ ವಿಷಹಾರೀ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ನೀವು ಬೇಗನೇ ಗುಣಹೊಂದುತ್ತೀರಿ

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ ಔಷಧಿಮಯವಾದ ರಸವನ್ನು ಹೊರಡಿಸುತ್ತದೆ, ಅದು ಶ್ವಾಸದೊಡನೆ ಸೇರಿ ಶ್ವಾಸಕೋಶಕ್ಕೆ ಹೋಗುತ್ತದೆ ಪೆಪ್ಸ, ಹೀಗೆ ಸಾಂಕ್ರಾಮಿಕ ವಿಷಾಣುಗಳನ್ನು ಕೊಲ್ಲುವುದು. ಪೆಪ್ಸ ಗಂಟಲು ನೋವನ್ನು ಗುಣಪಡಿಸುತ್ತದೆ ಎದೆಗೂ ಶ್ವಾಸಕೋಶಕ್ಕೂ ಇದು ಎಲ್ಲಾ ಸಮಯವೂ ಅತ್ಯುಪಯುಕ್ತ ಔಷಧಿಯು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರಕುತ್ತದೆ

ಏಜಂಟರು –

ಮೆಸರ್ಸ್ ಡಾಧಾ ಎಂಡ್ ಕೊ., ಪಾರ್ಕ್ ಟೌನ್ ಮದ್ರಾಸು

'ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಕರಾಗಿರುತ್ತಾರೆ, ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಒದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಬೇಕೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜಂಟ್ ಸಾ ಕಂಪನಿ, ಹಂಪನಕಟ್ಟಾ ಮಂಗಳೂರು

BHUVANENDRA PRODUCTS LTD.,

Head Office and Factory: KATAPADI S Kanara.

Depots: 1 Maharatha Galli, Hubli. 2 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಯು ಪಾಂಡುರಂಗ ನಾಯಕ್, ರಥಬೀದಿ
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ
ಡಾ। ಎಮ್. ಎಸ್. ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್

THE PIE-MONEY BANK, LTD.
Maidan Road, MANGALORE.

Undertakes all kinds of Banking Business Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public

Apply for particulars:-

K R. GURU, *Managing Director.*

The Bank of Mangalore Limited.

Branches —MOODABIDRI & PADUBIDRI
HEAD OFFICE MANGALORE • ESTD 1931

All kinds of Banking Business transacted.

Fixed Deposits received at rates ranging from 3% to 5%

INTEREST PAYABLE QUARTERLY

Interest on Savings Bank Deposits allowed at at 2½%

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ಜೋಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕುಳಗುಂದ ಜಾನುವಾರ ಸಂತೆ
4-11-1941ರಿಂದ 17-11-1941

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ. 18--11—1941

ಶ್ರೀ ಸುಬ್ರಹ್ಮಣ್ಯ ಷಷ್ಠಿ ಮಹೋತ್ಸವ. 24—11—1941

ಪ್ರಯಾಣಿಕರ ಮತ್ತು ಯಾತ್ರಾ ಸ್ಥಳಗಳಿಗೆ ಹೋಗಲಿಚ್ಛಿಸುವ ಯಾತ್ರಾರ್ಥಿಗ
ಅನುಕೂಲತೆಗಾಗಿ ಇದೇ ಬರುವ 1-11-1941ರಿಂದ 30-11-1941ರ ವರಗೆ ಮೇಲ್ಕಂಡ ಸ್ಥಳಗಳಿಗೆ
ಅಗತ್ಯವಿದ್ದಲ್ಲಿ
ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡುವ ಏರ್ಪಾಡನ್ನು ಮಾಡಲಾಗುವುದು

ಹೆಚ್ಚಿನ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಃ ಕೇಳಿ ತಿಳಿಕೊಳ್ಳಬಹುದು

THE JOINT MANAGERS,
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—13—0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 31—10—1941 [ಸಂಚಿಕೆ 43]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City, and BOMBAY 4

ಇಂದು ಹಿರಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.